START

START

MICRO FILMED
BY

KARNATAKA STATE
ARCHIVES
1991

MICRO FILMED
BY
KARNATAKA STATE
ARCHIVES
1991

START

START

MICRO FILMED
BY

KARNATAKA STATE
ARCHIVES
1991

MICRO FILMED
BY

KARNATAKA STATE
ARCHIVES
1991

ಶರಣ ಸಂದೇಶ ಪತ್ರ

ಶ್ರೀ ಡಾ॥ ಹರ್ಡೇಕರ್ ಮಂಜಪ್ಪನವರ
ಸಂಗ್ರಹ

ಕೊಡುಗೆ :- ಡಾ॥ ಎಂ. ಎಂ. ಕಲ್ಬುರ್ಗಿ

ಕನ್ನಡ ಅಧ್ಯಯನ ಪೀಠ

ಕ.ವಿ.ವಿ. ಧಾರವಾಡ

ಶರಣ ಸಂದೇಶ ಪತ್ರ

ಶ್ರೀ ಡಾ॥ ಉದಿನಾಕ್ಕರ್ ಮಂಜಣ್ಣನವರ
ಸಂಗ್ರಹ

ಹೊಣೆ :- ಡಾ॥ ಎಂ.ಎಂ. ಕಲ್ಬುರ್ಗಿ

ಕನ್ನಡ ಅಧ್ಯಯನ ಪೀಠ
ಕ.ವಿ.ವಿ. ಧಾರವಾಡ

ಪ್ರಧಾನ ಸಂಪಾದಕ
ಡಾ। ಎಂ. ಎಂ. ಕಲಬುರ್ಗಿ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩.

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನಯೋಜನೆ

ನೆರವು .
ಕರ್ನಾಟಕ ಸರಕಾರ

[illegible]

[illegible]

— ಎಂ. ಎಂ. ಕಲಬುರ್ಗಿ
[illegible]

ಕರ್ನಾಟಕ ರಾಜ್ಯ ಪತ್ರ... ದಿನಾಂಕ 14/...
ಒಳಬಂದ ಸಂಖ್ಯೆ 4312

ಪ್ರಧಾನ ಸಂಪಾದಕ
ಡಾ॥ ಎಂ. ಎಂ. ಕಲಬುರ್ಗಿ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩.

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನಯೋಜನೆ

ನೆರವು :
ಕರ್ನಾಟಕ ಸರಕಾರ

ಶ್ರೀ ಕೆ. ಬಿ. ಪ್ರಭುಪ್ರಸಾದ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ [illegible]

[illegible] ಅವರ
[illegible] ೭೩
[illegible]
[illegible]
[illegible]. [illegible]
[illegible].

— ಎಂ. ಎಂ. ಕಲಬುರ್ಗಿ
೮/೨/೯೧

[illegible]
14/2

[illegible] 14/2

ಕರ್ನಾಟಕ ರಾಜ್ಯ ಪತ್ರಾಗಾರ,
ದಿನಾಂಕ 14/2
ಒಳಬಂದ ಸಂಖ್ಯೆ 4312

ದೂರವಾಣಿ : 264465

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ
ಕರ್ನಾಟಕ ರಾಜ್ಯ ಪತ್ರಾಗಾರ
ಕೊಠಡಿ ಸಂಖ್ಯೆ ೧೧, ನೆಲ ಮಹಡಿ
ವಿಧಾನ ಸೌಧ, ಬೆಂಗಳೂರು-೫೬೦ ೦೦೧

ಸಂಖ್ಯೆ ಎ.ಆರ್.ಎಸ್.

ದಿನಾಂಕ 14.2.1991.

''ಶರಣ ಸಂದೇಶ'' ಹರ್ಡೇಕರ ಮಂಜಪ್ಪನವರ ಸಂಗ್ರಹ

ಶ್ರೀ. ಹರ್ಡೇಕರ ಮಂಜಪ್ಪನವರು ಹುಟ್ಟಿದ್ದು ಬನವಾಸಿಯಲ್ಲಿ. ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿ ದಾವಣಗೆರೆಯಲ್ಲಿ ಸಮಾಜ ಕಾರ್ಯ ಆರಂಭಿಸಿದರು ಹಾಗೂ ಹರಿಹರದಲ್ಲಿ ಸತ್ಯಾಗ್ರಹ ದೀಕ್ಷೆ ಧರಿಸಿದರು. ಮಂಜಪ್ಪನವರ ವೈಶಿಷ್ಟ್ಯವೆಂದರೆ ಆತ್ಮ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣಕ್ಕಾಗಿಯೂ ದುಡಿಯುವುದು ಹೀಗಾಗಿ ಜೀವನದ ಅನೇಕ ಜ್ವಲಂತ ಸಮಸ್ಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆ ವಿಚಾರಗಳನ್ನು ಆಚಾರದಲ್ಲಿ ಅನುಷ್ಠಾನಗೊಳಿಸಿದರು. ಆಧುನಿಕ ಭಾರತವನ್ನು ಕಟ್ಟುವ ಚಟುವಟಿಕೆಗಳಿಂದಾಗಿ ಮಂಜಪ್ಪನವರು ಕರ್ನಾಟಕದ ಗಾಂಧೀ ಎಂದೇ ಪ್ರಸಿದ್ಧರಾದರು. ಇವರು ಅನೇಕ ಕೃತಿಗಳನ್ನು ಬರೆದು ಪ್ರಕಟಿಸಿರುತ್ತಾರೆ. ಇವರ ಶರಣ ಸಂದೇಶ ಒಂದು ಹಸರಾಂತ ಪತ್ರಿಕೆ. ಈ ಪತ್ರಿಕೆಯ ಪ್ರತಿಗಳು 1932 ರಿಂದ 1936ರವರೆಗೆ ಲಭ್ಯವಿದ್ದು, ಇವುಗಳನ್ನು ಪ್ರೊ.ಎಂ.ಎಂ.ಕಲುಬುರ್ಗಿ, [illegible], ಕನ್ನಡ ಅಧ್ಯಯನ ಪೀಠ ಇವರು ಖಾಸಗಿ ಸಂಗ್ರಹಿಸಿದ್ದು, ಇವುಗಳ ಸೂಕ್ಷ್ಮ ಚಿತ್ರೀಕರಣಕ್ಕಾಗಿ ಇಲಾಖೆಗೆ ನೀಡಿರುತ್ತಾರೆ. ಭಾರತದ ಸ್ವಾತಂತ್ರ್ಯ ಸಮರ ಗಾಥೆಯನ್ನು ಹೇಳುವ ಈ ಪತ್ರಿಕೆಗಳಲ್ಲಿ ಗಾಂಧೀಜಿಯವರ ವಿಚಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗಿದೆ. ಈ ಪತ್ರಿಕೆಯನ್ನು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣ ಮಂದಿರದಲ್ಲಿ ಶ್ರೀ. ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

(ಡಾ. ಆರ್. ಮುನಿಸ್ವಾಮಿ)
ನಿರ್ದೇಶಕರು.

ಎಲವಿ: 14291

ದೂರವಾಣಿ : 264465

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ
ಕರ್ನಾಟಕ ರಾಜ್ಯ ಪತ್ರಾಗಾರ
ಕೊಠಡಿ ಸಂಖ್ಯೆ ೧೧, ನೆಲ ಮಹಡಿ
ವಿಧಾನ ಸೌಧ, ಬೆಂಗಳೂರು-೫೬೦ ೦೦೧

ಸಂಖ್ಯೆ ಎ.ಆರ್.ಎಸ್.

ದಿನಾಂಕ 14.2.1991.

"ಶರಣ ಸಂದೇಶ" ಹರ್ಡೇಕರ ಮಂಜಪ್ಪನವರ ಸಂಗ್ರಹ

ಶ್ರೀ. ಹರ್ಡೇಕರ ಮಂಜಪ್ಪನವರು ಹುಟ್ಟಿದ್ದು ಬನವಾಸಿಯಲ್ಲಿ. ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿ ದಾವಣಗೆರೆಯಲ್ಲಿ ಸಮಾಜ ಕಾರ್ಯ ಆರಂಭಿಸಿದರು ಹಾಗೂ ಹರಿಹರದಲ್ಲಿ ಸತ್ಯಾಗ್ರಹ ದೀಕ್ಷೆ ಧರಿಸಿದರು. ಮಂಜಪ್ಪನವರ ವೈಶಿಷ್ಟ್ಯವೆಂದರೆ ಆತ್ಮ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣಕ್ಕಾಗಿಯೂ ದುಡಿಯುವುದು ಹೀಗಾಗಿ ಜೀವನದ ಅನೇಕ ಜ್ವಲಂತ ಸಮಸ್ಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆ ವಿಚಾರಗಳನ್ನು ಆಚಾರದಲ್ಲಿ ಅನುಷ್ಠಾನಗೊಳಿಸಿದರು. ಆಧುನಿಕ ಭಾರತವನ್ನು ಕಟ್ಟುವ ಚಟುವಟಿಕೆಗಳಿಂದಾಗಿ ಮಂಜಪ್ಪನವರು ಕರ್ನಾಟಕದ ಗಾಂಧೀ ಎಂದೇ ಪ್ರಸಿದ್ಧರಾದರು. ಇವರು ಅನೇಕ ಕೃತಿಗಳನ್ನು ಬರೆದು ಪ್ರಕಟಿಸಿರುತ್ತಾರೆ. ಇವರ ಶರಣ ಸಂದೇಶ ಒಂದು ಹೆಸರಾಂತ ಪತ್ರಿಕೆ. ಈ ಪತ್ರಿಕೆಯ ಪ್ರತಿಗಳು 1932 ರಿಂದ 1936ರವರೆವಿಗೆ ಲಭ್ಯವಿದ್ದು, ಇವುಗಳನ್ನು ಪ್ರೊ.ಎಂ.ಎಂ.ಕಲಬುರ್ಗಿ, [redacted], ಕನ್ನಡ ಅಧ್ಯಯನ ಪೀಠ ಇವರು ಖಾಸಗಿ ಸಂಗ್ರಹಿಸಿದ್ದು, ಇವುಗಳ ಸೂಕ್ಷ್ಮ ಚಿತ್ರೀಕರಣಕ್ಕಾಗಿ ಇಲಾಖೆಗೆ ನೀಡಿರುತ್ತಾರೆ. ಭಾರತದ ಸ್ವಾತಂತ್ರ್ಯ ಸಮರ ಗಾಥೆಯನ್ನು ಹೇಳುವ ಈ ಪತ್ರಿಕೆಗಳಲ್ಲಿ ಗಾಂಧೀಜಿಯವರ ವಿಚಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗಿದೆ. ಈ ಪತ್ರಿಕೆಯನ್ನು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣ ಮಂದಿರದಲ್ಲಿ ಶ್ರೀ. ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

14/2/91
(ಡಾ. ಆರ್. ಮುನಿಸ್ವಾಮಿ)
ನಿರ್ದೇಶಕರು.

14/2/91

ಎಲವಿ: 14291

ಶರಣ ಸಂದೇಶ ಪತ್ರಿಕೆಯ ಪಟ್ಟಿ

ಕ್ರಮ ಸಂಖ್ಯೆ	ಸಂಪುಟ	ಸಂಚಿಕೆ	ವರ್ಷ	ಕಳೆದು ಹೋದ ಪುಟಗಳು
1.	2	18	19.12.1932	–
2.	3	18	11.12.1933	
3.	2	24	30.1.1933	14ರ ನಂತರದವು
4.	2	20	2.1.1933	–
5.	2	21	9.1.1933	–
6.	2	30	13.3.1933	–
7.	2	30	13.3.1933	14ರ ನಂತರದವು
8.	2	31	20.3.1933	1, 2, 10ರ ನಂತರ
9.	2	–	1.5.1933	14ರ ಮುಂದಿನವು
10.	2	43	19.6.1933	–
11.	2	47	17.7.1933	
12.	3	2	14.8.1933	7, 8, 9, 10
13.	3	4	28.8.1933	7, 8, 9, 10
14.	3	5	4.9.1933	7, 8, 9, 10
15.	3	8	25.9.1933	–
16.	3	10	9.10.1933	–
17.	3	11	19.10.1933	–
18.	3	12	30.10.1933	–
19.	3	13	6.11.1933	–
20.	3	14	13.11.1933	–
21.	3	13	4.12.1933	–
22.	3	21	1.1.1934	–
23.	3	22	8.1.1933	–
24.	3	23	22.1.1934	1, 2, 13ರ ನಂತರದವು
25.	3	24	29.1.1934	–
26.	3	25	11.2.1934	1, 2, 14ರ ನಂತರದವು
27.	3	26	12.2.1934	14ರ ನಂತರದವು
28.	3	30	12.3.1934	–
29.	3	25	23.4.1934	3, 4, 13, 14
30.	3	36	30.4.1934	–
31.	3	39	28.5.1934	–
32.	3	41	11.6.1934	–
33.	3	42	18.6.1934	–
34.	3	42	18.6.1934	3, 4, 10ರ ನಂತರ
35.	3	42	18.6.1934	3, 4, 10ರ ನಂತರ
36.	3	42	25.6.1934	–
37.	3	45	9.2.1934	–
38.	3	42	23.7. 1934	–
39.	3	48	30.7.1934	–
40.	3	49	6.8.1934	–
41.	4	1	20.8.1934	–
42.	4	14	26.9.1934	
43.	4	2[illegible]	27.8.1934	–
44.	4	7	1.10.1934	–
45.	4	9	15.10.1934	–

ಮುಂದುವರಿದಿದೆ......

ಶರಣ ಸಂದೇಶ ಪತ್ರಿಕೆಯ ಪಟ್ಟಿ

ಕ್ರಮ ಸಂಖ್ಯೆ	ಸಂಪುಟ	ಸಂಚಿಕೆ	ವರ್ಷ	ಕಳೆದು ಹೋದ ಪುಟಗಳು
1.	2	18	19.12.1932	—
2.	3	18	11.12.1933	14ರ ನಂತರದವು
3.	2	24	30.1.1933	
4.	2	20	2.1.1933	—
5.	2	21	9.1.1933	—
6.	2	30	13.3.1933	—
7.	2	30	13.3.1933	14ರ ನಂತರದವು
8.	2	31	20.3.1933	1, 2, 10ರ ನಂತರ
9.	2	—	1.5.1933	14ರ ಮುಂದಿನವು
10.	2	43	19.6.1933	=
11.	2	47	17.7.1933	
12.	3	2	14.8.1933	7, 8, 9, 10
13.	3	4	28.8.1933	7, 8, 9, 10
14.	3	5	4.9.1933	7, 8, 9, 10
15.	3	8	25.9.1933	—
16.	3	10	9.10.1933	—
17.	3	11	19.10.1933	—
18.	3	12	30.10.1933	—
19.	3	13	6.11.1933	—
20.	3	14	13.11.1933	—
21.	3	13	4.12.1933	—
22.	3	21	1.1.1934	—
23.	3	22	8.1.1933	—
24.	3	23	22.1.1934	1, 2, 13ರ ನಂತರದವು
25.	3	24	29.1.1934	—
26.	3	25	11.2.1934	1, 2, 14ರ ನಂತರದವು
27.	3	26	12.2.1934	14ರ ನಂತರದವು
28.	3	30	12.3.1934	—
29.	3	25	23.4.1934	3, 4, 13, 14
30.	3	36	30.4.1934	—
31.	3	39	28.5.1934	—
32.	3	41	11.6.1934	—
33.	3	42	18.6.1934	—
34.	3	42	18.6.1934	3, 4, 10ರ ನಂತರ
35.	3	42	18.6.1934	3, 4, 10ರ ನಂತರ
36.	3	42	25.6.1934	—
37.	3	45	9.2.1934	—
38.	3	42	23.7. 1934	—
39.	3	48	30.7.1934	—
40.	3	49	6.8.1934	—
41.	4	1	20.8.1934	—
42.	4	14	26.9.1934	
43.	4	25	27.8.1934	—
44.	4	7	1.10.1934	—
45.	4	9	15.10.1934	—

ಮುಂದುವರೆದಿದೆ......

ಕ್ರಮ ಸಂಖ್ಯೆ	ಸಂಪುಟ	ಸಂಚಿಕೆ	ವರ್ಷ	ಕಳೆದು ಹೋದ ಪುಟಗಳು
46.	4	10	22.10.1934	-
47.	4	14	26.11.1934	1, 2
48.?	4	15	3.12.1934	-
49.	4	16	10.12.1934	-
50.	4	19	31.12.1934	ಕಳೆದು ಹೋದ ಪುಟಗಳು7,8,13,14
51.	4	20	7.1.1935	-
52.	4	24	4.2.1935	-
53.	4	26	25.2.1935	-
54.	4	28	11.3.1935	-
55.	4	30	25.3.1935	-
56.	4	34	22.4.1935	-
57.	4	38	27.5.1935	-
58.	4	40	10.6.1935	-
59.	4	43	1.7.1935	-
60.	4	44	8.7.1935	-
61.	4	45	15.7.1935	-
62.	4	48	5.8.1935	-
63.	5	1	19.8.1935	-
64.	5	21	20.1.1936	-
65.	5	22	27.1.1936	-
66.	5	23	3.2.1936	-
67.	5	25	17.2.1936	1, 2, 19, 20
68.	5	38	1.6.1936	-
69.	6	5	21.9.1936	-
70.	6	30	29.3.1937	-
71.	6	40	14.6.1937	-

ಕ್ರಮ ಸಂಖ್ಯೆ	ಸಂಪುಟ	ಸಂಚಿಕೆ	ವರ್ಷ	ಕಳೆದು ಹೋಗಿದ ಪುಟಗಳು
46.	4	10	22.10.1934	–
47.	4	14	26.11.1934	1, 2
48.?	4	15	3.12.1934	–
49.	4	16	10.12.1934	–
50.	4	19	31.12.1934	ಕಳೆದು ಹೋಗಿದ ಪುಟಗಳು 7, 8, 13, 14
51.	4	20	7.1.1935	–
52.	4	24	4.2.1935	–
53.	4	26	25.2.1935	–
54.	4	28	11.3.1935	–
55.	4	30	25.3.1935	–
56.	4	34	22.4.1935	–
57.	4	38	27.5.1935	–
58.	4	40	10.6.1935	–
59.	4	43	1.7.1935	–
60.	4	44	8.7.1935	–
61.	4	45	15.7.1935	–
62.	4	48	5.8.1935	–
63.	5	1	19.8.1935	–
64.	5	21	20.1.1936	–
65.	5	22	27.1.1936	–
66.	5	23	3.2.1936	–
67.	5	25	17.2.1936	1, 2, 19, 20
68.	5	38	1.6.1936	–
69.	6	5	21.9.1936	–
70.	6	30	29.3.1937	–
71.	6	40	14.6.1937	–

REGISTERED No. B 2591

ಶರಣ ಸಂದೇಶ

The

Sharana Sandesh.

[illegible]

ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ‖ ಮ. ೨೨೮ ‖ ಮಹಾನುಭಾವ ಬಸವಣ್ಣನವರು.

ಸಂಪಾದಕರು:- ಶ್ರೀ ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.

ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨. | ಆಲಮಟ್ಟಿ- ಸೋಮವಾರ ತಾರೀಖು ೧೯ ನೆಯ ಡಿಶೆಂಬರ್ ೧೯೩೨. | ಸಂಚಿಕೆ ೧೮

ಜನಸೇವೆಯೇ ದೇವರ ಸೇವೆ

ಉಪವಾಸ ವ್ರತವು ಹೇಗಾದರೆ ನಿಲ್ಲುವದು?

ಮಹಾತ್ಮರ ಅಭಿಪ್ರಾಯ.



ಬಹುಮತವು
ಗುರುವಾಯೂರು ದೇವಾಲಯ ಪ್ರವೇಶಕ್ಕೆ
ವಿರೋಧವಾದರೆ

ಇಲ್ಲವೆ ಸರಕಾರಿ ಶಾಸನವು ಪ್ರತಿಕೂಲವಾದರೆ
ಅಥವಾ
ವ್ಹಾಯಿಸ್‌ರಾಯರ ಅಪ್ಪಣೆಯಿಂದ ಈ ವಿಷಯವು
ನಿಯಮ ನಿರ್ಮಾಣ ಸಭೆಯಲ್ಲಿ ಬಂದು ಜನವರಿ ೨ ನೆಯ
ತಾರೀಖಿನೊಳಗಾಗಿ ತೀರ್ಮಾನವಾಗದಿದ್ದರೆ ಉಪವಾಸ
ವ್ರತವನ್ನು ಕೈಕೊಳ್ಳಲಾಗುವುದಿಲ್ಲ.

ತಾ. ೧೫-೧೨-೩೨.

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt Bijapur. (Karnataka)

REGISTERED No. B 289

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನ [illegible] ಶರಣನಾರಿಗಂಜುವನಲ್ಲ
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ‖ ಮ ೨೨೮ ‖ ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ.- ಅಂಚೆಯ ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨.	ಆಲಮಟ್ಟಿ- ಸೋಮವಾರ ತಾರೀಖು ೧೯ ನೆಯ ಡಿಶೆಂಬರ್ ೧೯೩೨.	ಸಂಚಿಕೆ ೧೮

ಜನಸೇವೆಯೇ ದೇವರ ಸೇವೆ

ಉಪವಾಸ ವ್ರತವು ಹೇಗಾದರೆ ನಿಲ್ಲುವದು?

ಮಹಾತ್ಮರ ಅಭಿಪ್ರಾಯ.

ಬಹುಮತವು
ಗುರುವಾಯೂರು ದೇವಾಲಯ ಪ್ರವೇಶಕ್ಕೆ
ವಿರೋಧವಾದರೆ

ಇಲ್ಲವೆ ಸರಕಾರಿ ಶಾಸನವು ಪ್ರತಿಕೂಲವಾದರೆ
ಅಥವಾ
ವ್ಹಾಯಿಸ್‌ರಾಯರ ಅಪ್ಪಣೆಯಿಂದ ಈ ವಿಷಯವು
ನಿಯಮ ನಿರ್ಮಾಣ ಸಭೆಯಲ್ಲಿ ಬಂದು ಜನವರಿ ೨ ನೆಯ
ತಾರೀಖಿನೊಳಗಾಗಿ ತೀರ್ಮಾನವಾಗದಿದ್ದರೆ ಉಪವಾಸ
ವ್ರತವನ್ನು ಕೈಕೊಳ್ಳಲಾಗುವುದಿಲ್ಲ.

ತಾ. ೧೫-೧೨-೩೨.

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur (Karnataka)

ಕಳ್ಳರ ಭಯವಿಲ್ಲ ! ಬೆಂಕಿಯ ಕಾಟವಿಲ್ಲ!!

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ

ಆ್ಯಂಡ್ ಸನ್ಸ್

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ

ಗದಗ.

(೧) ತ್ರಿಜೂರಿಯಲ್ಲಿ ನೋಟು ವ ಡಾಗೀನೆ ಮತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವಿ. ಕೆ ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಸತ್ವ ಪರೀಕ್ಷಯು ತಾ. ೨೪ನೇ ಡಿಶೆಂಬರ ೧೯೩೧ನೇ ಇಸವಿ ದಿವಸ ಸದರ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ವಂಕಿ ಒಂದು ಸರ ಪಳಿ ಜತಿ ಒಂದು ಹತ್ತು ರೂಪಾಯದ ನೋಟು ಒಂದು ನಂ. K. 11, 570153 ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಸಿದ್ಧರಾಮಪ್ಪ ಪಾವಟೇ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧|| ಖಂಡೆ—

—ಕಟ್ಟಿಗೆಯಲ್ಲಿ ೧|| ತಾಸಿನ ವರೆಗೆ ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ಯತೆ ಮತ್ತು ಬದತೆಗಳನ್ನು ತೋರಿಸಿದರು ಅ ಭಾ. ಪ್ರದರ್ಶನದವರು ಪುರ ನಿವಾಸಿಗಳು ವಿ ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ದನ್ಯವಾದಗಳನ್ನು ಅರ್ಪಿಸಿದರು ಇದಲ್ಲದೆ ಧಾರವಾಡದ ೬೩ ಪುರಾತನರ ಪೂಜಾದಲ್ಲಿ ಸಹ ಮತ್ತೊಂದು ತ್ರಿಜೂರಿಯನ್ನು ಸುಟ್ಟು ತೋರಿಸಿರುತ್ತಾರೆ

(೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಬರತಖಂಡದಲ್ಲಿಯ ಅನೇಕ ಪಟ್ಟಣಗಳ ಪ್ರಮುಖರು ಕೊಂಡಾಡಿದ ಕರ್ನಾಟಕದಲ್ಲಿ ಹೆಸರು ಹೊಂದಿದ ಮುಂಬೈಯಲ್ಲಿ ಸರ್ಟಿಫಿಕೇಟು ಪಡೆದು ಬಂದ ವಿ ಕೆ. ಶೆಟ್ಟರ ಎಂಡ್ ಸನ್ಸ ಇವರ ತ್ರಿಜೂರಿಗಳನ್ನೇ ಸಕಲರು ಉಪಯೋಗಿಸಿರಿ

ಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಹರ್ದೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ದೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಡಿಶೆಂಬರ್ ತಾರೀಖು ೧೯ ನೆಯ ಸೋಮವಾರ | ಸಂಚಿಕೆ ೧೮

ಅಲಾಹಾಬಾದಿನ ಐಕ್ಯ ಪರಿಷತ್ತು.

ಗುಡಿ ಮುಗಿಯಿತು. ಕಲಶ ಹಚ್ಚುವುದುಳಿಯಿತು.

ಹಿಂದು ಮುಸಲ್ಮಾನರು ಭುಜಕ್ಕೆ ಭುಜ ಹಚ್ಚಿ ಐಕಮತ್ಯದಿಂದ ವಿರೋಧ ಪಂಗಡದೊಂದಿಗೆ ಹೋರಾಡಬೇಕಾಗಿದೆಯೆಂದು ಡಾ. ಮುಂಜೆಯವರು ಹೇಳಿದರು.

ಪಂ. ಮಾಲವೀಜಿ

ಮಂಡಲಾಕಾರ ಪರಿಷತ್ತು ಹೇಗಾದರೂ ಆಗಲಿ, ಅಲಾಹಾಬಾದಿನ ಈ ಪರಿಷತ್ತೇ ಭರತಖಂಡದ ಭವಿಷ್ಯವನ್ನು ಗೊತ್ತುಪಡಿಸುವುದೆಂದು ಪಂಡಿತ ಮಾಲವೀಜಿಯವರು ಹೇಳಿದರು.



ಡಾ ಮುಂಜೆಯವರು

ಮಂಡಲಾಕಾರ ಪರಿಷತ್ತಿನ ಕಾರ್ಯಕಲಾಪ

ಸರ್ ಸಪ್ರು.

ಸಪ್ರೂಜಿಯವರು ಗಂಟುಮೂಟೆ ಕಟ್ಟುವರೇ?

ಸರ್. ತೇಜಬಹದ್ದೂರ್ ಸಪ್ರು ಮೊದಲಾದ ಹಿಂದಿ ಪ್ರತಿನಿಧಿಗಳು ಮಂಡಲಾಕಾರ ಪರಿಷತ್ತಿನ ಚೇರಮನ್ನರಾದ ಲಾರ್ಡ ಸಾಂಕಿಯವರಿಗೆ ಒಂದು ಮಹತ್ವದ ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಈ ಕೆಳಗಿನ ಸಂಗತಿಗಳಿವೆ.



ಲಾರ್ಡ. ಸಾಂಕಿ.

ಪ್ರಾಂತಿಕ ಪ್ರಭುತ್ವವು ಮಾತ್ರ ಜನರ ಕೈಸೇರಿದರೆ ಸಾಲದು. ಇದರ ಸಂಗಡ ಮಧ್ಯವರ್ತಿ ಸರಕಾರದ ಪ್ರಭುತ್ವವೂ ಜನರ ಅಧೀನವಾಗಬೇಕು.

ಮಧ್ಯವರ್ತಿ ಸರಕಾರವು ಯಾವ ತಾರೀಖಿನ ದಿವಸ ಜನರ ಕೈ ಸೇರುವದೆಂಬುದನ್ನು ಈಗಲೇ ನಿರ್ಧಾರವಾಗಿ ತಿಳಿಸಬೇಕು.

ಹೀಗಾಗದೆ ಕೇವಲ ಪ್ರಾಂತಿಕ ಪ್ರಭುತ್ವವನ್ನೇ ಒಪ್ಪಿಕೊಂಡು ನಾವು ಇಲ್ಲಿಂದ ಹೋಗುವದಕ್ಕಿಂತಲೂ ಬರಿಗೈಯಿಂದ ಹೋಗುವುದೇ ನಮಗೆ ಯೋಗ್ಯವಾಗಿದೆ.

ಭಾರತಮಂತ್ರಿಗಳ ಘೋಷಣವು ಅತ್ಯಂತ ಅಸಮಾಧಾನಕರವಾದುದಾಗಿದೆ. ಇದರಿಂದ ಮಂಡಲಾಕಾರ ಪರಿಷತ್ತಿನ ಕಾರ್ಯವು ಜಯಪ್ರದವಾಗುವಂತೆ ಕಾಣುವದಿಲ್ಲ. ಡಾ. ಸಪ್ರು ಮೊದಲಾದವರು ಪರಿಷತ್ತನ್ನು ಬಿಟ್ಟು ಹಿಂದುಸ್ಥಾನಕ್ಕೆ ಹೊರಡುವರೆಂತಲೂ ಸುದ್ದಿಯಿದೆ.

ಬಿಲ್ವದ ಉಪಯೋಗ.

ಬಿಲ್ವ ಮತ್ತು ತುಳಸಿಯ ಉಪಯೋಗವನ್ನು ಕುರಿತು ವೈದ್ಯ ಗರ್ಜರ ಎಂಬುವವರು ಮುಂಬೈಯ ಒಂದು ವ್ಯಾಖ್ಯಾನದಲ್ಲಿ ಈ ಪ್ರಕಾರ ಹೇಳಿದರು.

ಬಿಲ್ವದ ಎಲೆ, ತೊಗಟೆ, ಕಾಯಿ, ಬೇರುಗಳು ಕೂಡಾ ಬಹು ಉಪಯುಕ್ತವಾದವುಗಳಾಗಿವೆ.

೧. ಒಂದು ತೊಲೆ ಬಿಲ್ವದ ಎಲೆ ೧ ತೊಲೆ ಕಲ್ಲುಸಕ್ಕರೆ ಕಾಲು ತೊಲೆ ಜೀರಿಗೆಗಳನ್ನು ಕೂಡಿಸಿ ಸೇವಿಸಿದರೆ ಜೀರ್ಣಜ್ವರ ನಿವಾರಣೆ.

೨. ಮೂತ್ರ ಪ್ರತಿಬಂಧ ಅಥವಾ ಮೂತ್ರ ಉಷ್ಣಯೂ ಗಿದ್ದರೆ ಒಂದು ಮುಷ್ಟಿ ಬಿಲ್ವ ಎಲೆಗಳನ್ನು ಅರ್ಧ ಶೇರು ನೀರಿನಲ್ಲ ಕುದಿಸಿ ಕಷಾಯಮಾಡಿ ಅದನ್ನು ಸೋಸಿ ಸಕ್ಕರೆ ಹಾಕಿ ತೆಗೆದುಕೊಂಡರೆ ಮೂತ್ರ ಸ್ವಚ್ಛವಾಗಿ ನಿರಾಯಾಸದಿಂದ ಬರುತ್ತದೆ.

೩. ದುರ್ಗಂಧವಾದ ಗಾಯಕ್ಕೆ ಬಿಲ್ವಎಲೆಗಳನ್ನು ಕುಟ್ಟಿಕಟ್ಟಿದರೆ ಗಾಯದಲ್ಲಿಯ ಕ್ರಿಮಿಗಳು ನಾಶವಾಗಿ ಗಾಯವೂ ಮಾಯುತ್ತದೆ.

೪. ಬಿಲ್ವ ಬೇರಿನ ಕಷಾಯ ತೆಗೆದುಕೊಂಡರೆ ಬೆವರು ಬರುತ್ತದೆ. ಆ ಕಷಾಯದಲ್ಲಿ ಜೇನುತುಪ್ಪವನ್ನು ಹಾಕಿತೆಗೆದುಕೊಂಡರೆ ವಾಂತಿನಿಲ್ಲುತ್ತದೆ.

ತುಳಸಿಯ ಉಪಯೋಗ.

ತುಳಸಿಯು ಬಹು ಉಪಯೋಗವುಳ್ಳದ್ದಾಗಿದೆ. ಇದನ್ನು ಮನೆಯ ಹತ್ತಿರ ಬೆಳೆಸುವುದು ಹಿತಕರವು. ಇದರಿಂದ ಹವೆ ಶುದ್ಧವಾಗುತ್ತದೆ.

೧. ಚಳಿಜ್ವರವು ಬರಬಾರದೆಂದಿದ್ದರೆ ತುಳಸಿಯ ೫-೬ ಎಲೆಗಳನ್ನು ಆಗಾಗ್ಗೆ ಸೇವಿಸುತ್ತಿರುವ ರೂಢಿಯನ್ನಿಟ್ಟುಕೊಳ್ಳಬೇಕು.

೨. ಶೀತವಾಗಿದ್ದರೆ ಮತ್ತು ಶೀತದಿಂದ ಮೈ ಬೆಚ್ಚಗಾಗಿದ್ದರೆ ಹತ್ತು ತುಳಸಿ ಎಲೆಗಳನ್ನು ಗವತಿಹುಲ್ಲು, ಅಲ್ಲ, ೫-೬ ಮೆಣಸಿನಕಾಳುಗಳನ್ನು ಹಾಕಿ ಕಷಾಯವನ್ನು ಮಾಡಿ ತೆಗೆದುಕೊಂಡರೆ ನೈಬಿವತು ಶೀತನಿವಾರಣೆಯಾಗುತ್ತದೆ.

೩. ತುಳಸಿರಸ ಮತ್ತು ಆ ಗಿಡದ ಕೆಳಗಿನ ಮಣ್ಣನ್ನು ಕೂಡಿಸಿ ತದ್ದಿಗೆ ೩-೪ ದಿನ ಹಚ್ಚಿದರೆ ಗುಣವಾಗುತ್ತದೆ.

೪. ಯಾವ ವಿಧವಾದ ವಾಂತಿಯಾಗುತ್ತಿದ್ದರೂ ಕರಿತುಳಸಿಯ ೨|| ತೊಲೆ ರಸದಲ್ಲಿ || ತೊಲೆ ಜೇನುತುಪ್ಪವನ್ನು ಹಾಕಿ ತೆಗೆದುಕೊಂಡರೆ ವಾಂತಿಯು ನಿಲ್ಲುತ್ತದೆ.

೫. ಚೇಳುಕಡಿದಲ್ಲಿ ತುಳಸಿಯ ಎಲೆಗಳನ್ನು ತಿಕ್ಕಿದರೆ ೧೫ ೨೦ ನಿಮಿಷಗಳಲ್ಲಿ ವಿಷವು ಇಳಿಯುತ್ತದೆ.

೬ ಉಷ್ಣತೆಯಾಗಿದ್ದರೆ ಒಂದು ತೊಲೆ ತುಳಸಿ ಬೀಜವನ್ನು ೫ ತೊಲೆ ಹಾಲಿನಲ್ಲಿ ನೆನೆಯಿಟ್ಟು ಆ ಮೇಲೆ ಅದರಲ್ಲಿ ಸ್ವಲ್ಪ ಸಕ್ಕರೆ ಹಾಕಿ ತೆಗೆದುಕೊಂಡರೆ ಉಷ್ಣತೆಯು ಕಡಿಮೆಯಾಗುತ್ತದೆ.

ಮಹಾತ್ಮರ ೧೧ನೆಯ ಪತ್ರಿಕೆಯು.

ತಾ. ೨೪ನೆಯ ದಿವಸ ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಯ ೧೧ನೆಯ ಪತ್ರಿಕೆಯನ್ನು ಪ್ರಕಟಿಸಿದರು. ಅದರಲ್ಲಿ ಈ ಪ್ರಕಾರ ಸೂಚಿಸಿದ್ದಾರೆ.

''ಗುರುವಾಯೂರ ವಿಷಯವಾಗಿ ಜನಮತವನ್ನು ತೆಗೆದುಕೊಳ್ಳುತ್ತಿರುವುದರಲ್ಲಿ ಕುಟಿಲತನವನ್ನೇನಾದರೂ ಮಾಡಿದರೆ ಅದು ನನ್ನ ಪ್ರಾಣಕ್ಕೆ ಅಪಾಯವನ್ನು ಮಾಡುವುದು.

ಯಾರೂ ತಮ್ಮ ಸದಸದ್ವಿವೇಕ ಬುದ್ಧಿಗೆ ವಿರೋಧವಾ ನಡೆಯಬಾರದು. ನನ್ನ ಉಪವಾಸದ ಕಾರಣವನ್ನು ನಾನು ಇಷ ರಲ್ಲೇ ವಿವರವಾಗಿ ತಿಳಿಸುವೆನು. ಈಗ ಶ್ರೀ ಕೇಲಪ್ಪನ್‌ರಾಗ ನಾನಾಗಲಿ ನಿರ್ಧರಿಸಿರುವ ಉಪವಾಸ ವ್ರತದಲ್ಲಿ ತಿಲಾಂಶವಾದರ ಹಿಂಜರಿಯುವಂತಿಲ್ಲ.

ಜನಾಭಿಪ್ರಾಯವನ್ನು ತಿಳಿದುಕೊಳ್ಳಬೇಕಾದರೆ ಯಾವ ಪಕ್ಷ ದವರೂ ಅನ್ಯಾಯವಾದ ರೀತಿಯಲ್ಲಿ ನಡೆಯಕೂಡದು. ಕೇವ ಸತ್ಯವನ್ನರಿಯಲಿಕ್ಕಾಗಿಯೇ ಪ್ರಯತ್ನಿಸಬೇಕು.

ಅಖಿಲ ಕರ್ನಾಟಕ ಸ್ವದೇಶಿ ವಸ್ತುಪ್ರದರ್ಶನ ಬಾಗಲಕೋಟೆ.

ಹಿಂದುಸ್ಥಾನದ ಅನೇಕ ಸ್ಥಳಗಳಲ್ಲಿ ಸ್ವದೇಶಿ ವಸ್ತುಗಳ ಪ್ರ ರ್ಶನವು ಜರುಗಿಸಲ್ಪಟ್ಟು ಅವುಗಳ ಮೂಲಕ ಜನರಲ್ಲಿ ಜಾಗೃ ಯುಂಟಾಗಿ ಕಲಾಭಿವೃದ್ಧಿಗೆ ಬಹುವಂಶದಿಂದ ಪ್ರೋತ್ಸಾಹ ದೊರೆತಿದೆ. ನಮ್ಮ ವಿಜಾಪುರ ಜಿಲ್ಲೆಯಲ್ಲಿ ಇಂಥ ಪ್ರದರ್ಶನ ಯೋಜನೆಯು ಈ ವರೆಗೂ ಆಗದ್ದರಿಂದ ಇದೇ ಮಾಘ ಶು. ೧ (ತಾ. ೧೦-೨-೩೩ನೆಯ) ದಿವಸ ಸ್ವದೇಶಿ ವಸ್ತುಗಳ ಪ್ರದರ್ಶ ಸಮಾರಂಭವನ್ನು ನೆರವೇರಿಸುವದಾಗಿ ನಿರ್ಣಯವಾಗಿದೆ.

ರಾಷ್ಟ್ರದ ಸಾಂಪತ್ತಿಕ ಸ್ಥಿತಿಯ ಬೆಳವಣಿಗೆಗೆ ಕಲಾಕೌಶಲ್ಯ ಅಭಿವೃದ್ಧಿ ಮತ್ತು ಸ್ವದೇಶಿ ವಸ್ತುಗಳ ಉತ್ಪಾದನೆಯೇ ತಳಹ ಯಾಗಿದೆ. ಅಲ್ಲಲ್ಲಿಯ ಸ್ವದೇಶಿ ವಸ್ತುಗಳ ಕಲಾಕೌಶಲ್ಯ ಮತ್ತು ಅನೇಕ ಸ್ವದೇಶಿ ಮಾಲುಗಳ ಸಂಗ್ರಹ ಇವುಗಳ ಪ್ರದರ್ಶನದಿಂ ಜನಜಾಗೃತಿಯಾಗಿ, ಇವುಗಳ ಊರ್ಜಿತಾವಸ್ಥೆಯನ್ನು ಹೊಂದುವದರಲ್ಲಿ ಏನೂ ಸಂಶಯವಿಲ್ಲ.

ಅಲ್ಲಲ್ಲಿಯ ಸ್ವದೇಶಿ ಮಾಲಿನ ಉತ್ಪಾದಕರು ಇಂಥ ಸುಸಂ ಯನ್ನು ಹೋಗಗೊಡದೆ, ತಮ್ಮತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿ, ಅವುಗಳ ಪ್ರಸಾರಕ್ಕೆ ಉತ್ತೇಜನ ಹೊಂದಬೇಕಾಗಿ ಇಚ್ಛಿ ಸುತ್ತೇವೆ.

ಮಾಲುಗಳನ್ನು ಇಡುವ ಬಗ್ಗೆ ಸ್ಟಾಲುಗಳ ಯೋಜನೆಯಾಗ ವದಿದ್ದು ಅವುಗಳನ್ನು ಕಳುಹುವವರು ೧೯೩೩ನೇ ಜನವರಿ ೨೫ನೆ ತಾರೀಖಿನ ಒಳಗಾಗಿ ನಮಗೆ ತಲ್ಪುವಂತೆ ಕಳುಹಿಸಲು ಪ್ರಾರ್ಥ ಇದೆ. ಹೆಚ್ಚಿನ ಮಾಹಿತಿಯ ಬಗ್ಗೆ ಬರೆದು ಕೇಳಬೇಕು.

೧೦-೧೨-೩೨.
ಬಾಗಲಕೋಟೆ

ಮುರಿಗೆಯ್ಯ ಸೋಮಯ್ಯ ಜಂಗಿನ
ಅ. ಕ. ಸ್ವ. ವ. ಪ್ರ. ಕ.

ಗುರುವಾಯೂರ ದೇವಾಲಯದ ೩೫ ಜನ ಟ್ರಸ್ಟಿಗಳಲ್ಲಿ ೩ ಜನರು ಆದಿಜನರ ಪ್ರವೇಶಕ್ಕೆ ವಿರೋಧವಾಗಿದ್ದಾರೆಂದು ಜಾಮೋ ನ್‌ರು ತಿಳಿಸಿದ್ದಾರೆ.

ಅಮದಾಬಾದಿನಲ್ಲಿ ೧೪ ವರ್ಷದ ಜೈನ ಕನ್ಯೆಯನ್ನು ೫ ವರ್ಷಗಳ ವೃದ್ಧ ಪುರುಷನು ಲಗ್ನವಾಗುತ್ತಿದ್ದನೆಂಬುದನ್ನು ಅಲ್ಲಿಯ ಮ್ಯಾಜಿಸ್ಟ್ರೇಟರಿಗೆ ತಿಳಿಸಲು ಈ ವೃದ್ಧ ವಿವಾಹವನ್ನು ನಿ ಸಿದರು.

ಮುಂಬೈಯಲ್ಲಿ ತಾ. ೧೫ನೆಯ ದಿವಸ ವ್ಹಾಯಿಸ್‌ರಾಯರ ಅನೇಕ ಪ್ರಮುಖ ನಾಗರಿಕರಿಗು ಮತ್ತು ಅಧಿಕಾರಿಗಳಿಗು ಸಂದರ್ಶ ಕೊಟ್ಟರು. ನಾ. ಕಂಬಳಿಯವರೂ ವ್ಹಾಯಿಸ್‌ರಾಯರನ್ನು ಂಡರು.

ಮಹಾರಾಷ್ಟ್ರ ಹಿಂದುಧರ್ಮ ಪರಿಷತ್ತು.

ಪುಣೆಯಲ್ಲಿ ತಾ. ೧೧-೧೨-೩೨ ನೆಯ ದಿವಸ ಬ್ಯಾರಿಸ್ಟರ್ ಜಮುನಾದಾಸ ಮೇಥಾರವರ ಅಧ್ಯಕ್ಷತೆಯಲ್ಲಿ ಮಹಾರಾಷ್ಟ್ರ ಹಿಂದುಧರ್ಮ ಪರಿಷತ್ತಿನ ಆರನೆಯ ಅಧಿವೇಶನವು ಬಹು ಸಂಭ್ರಮದಿಂದ ಜರುಗಿತು. ಈ ಪರಿಷತ್ತಿನಲ್ಲಿ ಅಸ್ಪೃಶ್ಯತಾ ನಿವಾರಣೆಯೇ ಮುಖ್ಯವಿಷಯವಾಗಿದ್ದಿತು. ಅಸ್ಪೃಶ್ಯತಾ ನಿವಾರಣೆಗೆ ವಿರೋಧ ಮಾಡುವ ಸನಾತನಿಗಳೇ ನೇರಿ ಮೊನ್ನೆ ತಾನೆ ಮಹಾತ್ಮಾ ಗಾಂಧಿಯವರ ಚಟುವಟಿಕೆಯನ್ನು ನಿಷೇಧಿಸಿದ್ದರಿಂದ ಈ ಹಿಂದು ಧರ್ಮ ಪರಿಷತ್ತಿಗೆ ವಿಶೇಷವಾದ ಉತ್ಸಾಹ ಪ್ರಾಮುಖ್ಯತೆಗಳುಂಟಾಗಿದ್ದವು.

ಈ ಧರ್ಮ ಪರಿಷತ್ತಿಗೆ ಅಸ್ಪೃಶ್ಯತೆಗೆ ವಿರೋಧಿಸುತ್ತಿದ್ದ ಸನಾತನಿಗಳು ಬರಲು ಅವಕಾಶವಿದ್ದಿತು. ಆದುದರಿಂದ ಹಿಂದುಗಳಲ್ಲಿಯ ಎಲ್ಲ ಪಂಗಡದವರೂ ಸಭೆಗೆ ನೇರಿದ್ದರು. ಮಹಾರಾಷ್ಟ್ರದ ಎಲ್ಲ ಭಾಗಗಳಿಂದಲೂ ಪ್ರಮುಖರು ಬಂದಿದ್ದರು. ಸಭೆಗೆ ಸಾಧಾರಣ ಮೂರು ಸಾವಿರ ಜನರು ಕೂಡಿದ್ದರು.

ಸ್ವಾಗತಾಧ್ಯಕ್ಷರ ಭಾಷಣ.

ಈ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ವಿದ್ಯಾನಿಧಿ ಶ್ರೀ ಸಿದ್ಧೇಶ್ವರ ಶಾಸ್ತ್ರಿ ಚಿತ್ರಾವ ಎಂಬುವವರು ಅಸ್ಪೃಶ್ಯತಾ ನಿವಾರಣೆ ಮತ್ತು ಶುದ್ಧಿ ಸಂಘಟನೆಗಳ ಅವಶ್ಯಕತೆಯನ್ನು ತಮ್ಮ ಭಾಷಣದಲ್ಲಿ ಬಹು ಯುಕ್ತಿಯುಕ್ತವಾಗಿ ವಿವರಿಸಿದರು. ಆದಿಜನರು ಹಿಂದುಗಳೇ ಆಗಿರುವುದರಿಂದ ಬೇರೆ ಸ್ಪೃಶ್ಯ ಹಿಂದುಗಳು ಎಲ್ಲಿಯವರೆಗೆ ದೇವಾಲಯಗಳಲ್ಲಿ ಪ್ರವೇಶಿಸುತ್ತಾರೋ ಅಲ್ಲಿಯವರೆಗೆ ಇವರೂ ಪ್ರವೇಶಿಸಲು ಅಡ್ಡಿಯಿಲ್ಲವೆಂತಲೂ ಅಸ್ಪೃಶ್ಯತಾನಿವಾರಣೆಯು ಹಿಂದು ಧರ್ಮ ರಕ್ಷಣೆಗೆ ಈಗ ಅತ್ಯವಶ್ಯಕವಾಗಿದೆಯೆಂತಲೂ ಹೇಳಿದರು.

ಮುಸಲ್ಮಾನರು ಹಿಂದುಗಳ ಮೇಲೆ ಏರಿಹೋಗುತ್ತಿರುವುದರಿಂದ ಹಿಂದುಗಳಲ್ಲಿ ಸಂಘಟನೆಯಾಗುವುದು ಅಗತ್ಯವಾಗಿದೆ. ಮುಸಲ್ಮಾನರು ಕಾಶ್ಮೀರದಲ್ಲಿ ಕ್ರಮಬದ್ಧವಾದ ದೊಂಬಿಯನ್ನು ಮಾಡಿ ಹಿಂದುರಾಜರನ್ನು ಹಣ್ಣಿಗೆ ತಂದರು! ಅಲವಾರನರೇಶರಿಗೂ ಈಗ ಈ ಸ್ಥಿತಿಯೇ ಬರುವಂತೆ ಕಾಣುತ್ತದೆ. ಭೋಪಾಳ ಮತ್ತು ನಿಜಾಮ ರಾಜ್ಯಗಳಲ್ಲಿ ಈ ಹಿಂದುಗಳು ಬಹು ಸಂಖ್ಯಾಕರಿದ್ದರೂ ಅವರ ಭಾಷೆ, ಸಂಸ್ಕೃತಿಗಳ ಕಡೆಗೆ ಹೇಗೆ ಉಪೇಕ್ಷಿಸಲ್ಪಡುತ್ತದೆಂಬುದು ಗೊತ್ತಾಗುವುದಿಲ್ಲವೇ?

ಈ ಎಲ್ಲ ಹಿಂದುಗಳ ವಿಪತ್ತುಗಳು ದೂರಾಗಲು ಅಸ್ಪೃಶ್ಯತಾ ನಿವಾರಣೆ ಮತ್ತು ಶುದ್ಧಿ ಸಂಘಟನೆಗಳು ಅವಶ್ಯಕವಾಗಿವೆಯೆಂಬುದಾಗಿ ಸ್ವಾಗತಾಧ್ಯಕ್ಷರು ಹೇಳಿದರು.

ಮೊದಲನೆಯ ಗೊತ್ತುವಳಿ.

ಅಣ್ಣಾಸಾಹೇಬ ಭೋಪಟಕರ್‌ರವರು ಅಸ್ಪೃಶ್ಯತಾ ನಿವಾರಣೆಯ ಮೊದಲನೆಯ ಗೊತ್ತುವಳಿಯನ್ನು ಪರಿಷತ್ತಿನ ಮುಂದಿಟ್ಟು ಆದಿಜನರಿಗೆ ಸಮಾನತೆಯ ಮತ್ತು ಸಾಮಾಜಿಕ ನ್ಯಾಯದ ಅಧಿಕಾರವಿರಬೇಕಾದುದು ಯುಕ್ತವಾಗಿದೆ. ದೇವರು ಕಲ್ಲಿನ ಮೂರ್ತಿಯಲ್ಲಿಲ್ಲ, ಭಕ್ತನ ಭಾವನೆಯಲ್ಲಿದ್ದಾನೆ. ಆದಿಜನರು ದೇವಾಲಯದಲ್ಲಿ ಬಂದ ಮಾತ್ರದಿಂದ ದೇವರಿಗೆ ಅಪವಿತ್ರತೆ ಬರ್ರುವುದೇ? ಕ್ರೈಸ್ತರು ಮುಸಲ್ಮಾನರು ಬಂದರೆ ಮಾತ್ರ ಆಗಬಹುದೇ? ಸನಾತನಿಗಳು ಈ ತಪ್ಪು ತಿಳುವಳಿಕೆಯನ್ನು ತೆಗೆದುಹಾಕಿ ಅಸ್ಪೃಶ್ಯತಾ ನಿವಾರಣೆಗೆ ಸಹಾಯಮಾಡಬೇಕಾಗಿ ಶ್ರೀ ಭೋಪಟಕರರು ಹೇಳಿದರು.

ಈ ಗೊತ್ತುವಳಿಗೆ ಸನಾತನಿ ಕರ್ಮಠರ ಪರವಾಗಿ ಶ್ರೀ ಶಂಕರರಾವ ಲವಾಟೆಯವರು ವಿರೋಧಿಸಿದರು. ಅಸ್ಪೃಶ್ಯತೆಯು ಹಿಂದುಧರ್ಮಕ್ಕೆ ಭೂಷಣಪ್ರದವಾದುದೆಂತಲೂ ಇದು ಇರಲೇಬೇಕೆಂತಲೂ ಮಹಾತ್ಮಾಜಿಯವರು ಈ ಧಾರ್ಮಿಕ ವಿಷಯದಲ್ಲಿ ಅಭಿಪ್ರಾಯ ಕೊಡಲು ಅಯೋಗ್ಯರೆಂತಲೂ ಸ್ವರಾಜ್ಯ ದೊರೆಯದಿದ್ದರೂ ಚಿಂತೆಯಿಲ್ಲ. ಈ ಅಸ್ಪೃಶ್ಯತೆಯು ಇರಲೇಬೇಕೆಂತಲೂ ಈ ಕರ್ಮಠರ ಮುಖ್ಯಾಭಿಪ್ರಾಯವಾಗಿದ್ದಿತು.

ವಿದ್ವಾನ್ ಪಂಡಿತ ಶ್ರೀಧರಶಾಸ್ತ್ರಿ ಪಾಟಕ ಎಂಬುವವರು ಶ್ರೀ ಲವಾಟೆಯವರ ಅಭಿಪ್ರಾಯಗಳನ್ನು ಶಾಸ್ತ್ರಾಧಾರಗಳಿಂದ ಖಂಡಿಸಿದರು, ಮತ್ತು ಅಸ್ಪೃಶ್ಯತಾ ನಿವಾರಣೆಯು ಅತ್ಯಾವಶ್ಯಕವೆಂದು ಈ ಪ್ರಕಾರ ಹೇಳಿದರು.

“ಬ್ರಾಹ್ಮಣ್ಯಾಂ ಶೂದ್ರಾಜ್ಜಾತಃ” ಎಂದು ಯಾಜ್ಞವಲ್ಕ್ಯದಲ್ಲಿ ಹೇಳಿದೆ. ಬ್ರಾಹ್ಮಣ ಸ್ತ್ರೀಯಳಲ್ಲಿ ಶೂದ್ರ ಪುರುಷನಿಂದುಂಟಾದವನು ಚಾಂಡಾಲನೆಂದು ಹೇಳಿದೆ. ಹೀಗೆ ಚಾಂಡಾಲರುಂಟಾಗಿರುವುದು ಬ್ರಾಹ್ಮಣರಿಗೆ ಭೂಷಣಪ್ರದವಾದುದೇ? ಇದು ಹಿಂದುಧರ್ಮಕ್ಕೆ ಕಲಂಕವಲ್ಲವೇ? ಚಾಂಡಾಲನನ್ನು ಮುಟ್ಟಬಾರದಾಗಿ ಹೇಳಿದೆಯೇ ವಿನಾ ಚಾಂಡಾಲ ಜಾತಿಯನ್ನು ಮುಟ್ಟಬಾರದಾಗಿ ಎಲ್ಲಿ ಹೇಳಿದೆ?

ಈ ಪ್ರತಿಲೋಮವಿವಾಹದಿಂದ ಸಂತಾನವಾದಾಗ ಚಂಡಾಲನುಂಟಾದನು. ಆದರೆ ಆತನೇ ಸಜಾತೀಯ ವಿವಾಹವಾಗಲು ಆತನು ಹೇಗೆ ಚಾಂಡಾಲನಾಗುತ್ತಾನೆ? ಚಾಂಡಾಲತ್ವಕ್ಕೆ ಪ್ರತಿಲೋಮ ವಿವಾಹವೇ ಕಾರಣವೆಂದು ಶಾಸ್ತ್ರದಲ್ಲಿ ಸ್ಪಷ್ಟ ಹೇಳಿಲ್ಲವೇ? ಪುರುಷ ಬೀಜದಿಂದ ಏಳುತಲೆ ಮತ್ತು ಸ್ತ್ರೀ ಬೀಜದಿಂದ ಐದು ತಲೆಯವರೆಗೆ ಅಪವಿತ್ರತೆಯಿರುತ್ತದೆಂದು ಮಾತ್ರ ಹೇಳಿದೆ. ಎಂದೋ ಚಾಂಡಾಲರಾದವರು ಸಾವಿರಾರು ವರ್ಷಗಳಿಂದಲೂ ಚಾಂಡಾಲರಾಗಿಯೇ ಇರುತ್ತಾರೆಯೇ? ಆದುದರಿಂದ ಅಸ್ಪೃಶ್ಯತಾ ನಿವಾರಣೆಯು ಶಾಸ್ತ್ರ ಸಮ್ಮತವಾಗಿಯೂ ಇದೆ.

ಈ ಪ್ರಕಾರ ಎರಡೂ ಪಂಗಡಗಳ ಪರವಾಗಿ ೨೧ ಜನರು ಭಾಷಣ ಮಾಡಿದ ಮೇಲೆ ಅಧ್ಯಕ್ಷರು ಪ್ರತಿನಿಧಿಗಳ ಮತವನ್ನು ಎಣಿಸಿ ೨೩೩ ಜನಗಳ ಒಪ್ಪಿಗೆ ೧೨೬ ಜನಗಳ ವಿರೋಧವನ್ನು ಸೂಚಿಸಲು ತುಂಬಾ ಬಹು ಮತದಿಂದ ಅಸ್ಪೃಶ್ಯತಾ ನಿವಾರಣೆಯ ಗೊತ್ತುವಳಿಯು ತೀರ್ಮಾನವಾಯಿತು.

ಪುಣೆಯಂತಹ ಸನಾತನಿ ಕರ್ಮಠರ ಮೂಲ ಸ್ಥಾನದಲ್ಲಿಯೇ ಈ ಪ್ರಕಾರ ಅಸ್ಪೃಶ್ಯತಾ ನಿವಾರಣೆಗೆ ಇಷ್ಟು ಬಹುಮತ ದೊರೆತುದು ಹಿಂದುಗಳ ಸುದೈವವೆಂದೇ ತಿಳಿಯಬೇಕು.

ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಜನಾಭಿಪ್ರಾಯವನ್ನು ತಿಳಿದುಕೊಳ್ಳಲು ಹೈದರಾಬಾದಿನಲ್ಲಿ ಪ್ರಯತ್ನ ನಡೆದಿದೆ. ನೈಜಾಮ ರಾಜ್ಯದಲ್ಲಿ ಅಸ್ಪೃಶ್ಯತಾನಿವಾರಣೆಗಾಗಿ ಸರಕಾರದ ಸಂಗಡ ಮಹಾತ್ಮಾಜಿಯವರು ಪತ್ರವ್ಯವಹಾರ ಪ್ರಾರಂಭಿಸಿದ್ದಾರೆಂದೂ ಸುದ್ದಿಯಿದೆ.

ಶರಣಸಂದೇಶ.

ಶಾ. ಶ. ೧೮೫೪ ನೆಯ ಮಾರ್ಗಶೀರ್ಷ ಬ. ೬ ಸೋಮವಾರ.

ಕರ್ನಾಟಕದ ಕರ್ತವ್ಯ.

ಮಹಾತ್ಮಾಗಾಂಧಿಯವರು ಭರತಖಂಡದ ರಾಜಕಾರಣದಲ್ಲಿ ಪ್ರಾಮುಖ್ಯವಾಗಿ ಸೇರಿದ ನಂತರ ಕಳೆದ ೧೨ ವರ್ಷಗಳಲ್ಲಿ ಹಿಂದಿ ಜನಾಂಗದ ಆಚಾರ ವಿಚಾರ ಕ್ರಾಂತಿಯ ಅನೇಕ ಅದ್ಭುತ ಪ್ರಸಂಗಗಳು ಜರುಗಿವೆಯಷ್ಟೆ. ಈ ಮಹಾತ್ಮರ ಅನುಗ್ರಹದಿಂದಲೇ ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತವಾಗಿ ಪರಿಣಮಿಸಿದ್ದರಿಂದ ಕಳೆದ ೧೨ ವರ್ಷಗಳಿಂದಲೂ ಆ ರಾಷ್ಟ್ರೀಯ ಪ್ರಸಂಗಗಳಲ್ಲಿ ತನ್ನ ಶಕ್ತ್ಯನುಸಾರವಾಗಿ ಕರ್ನಾಟಕವೂ ಪ್ರವೇಶಿಸುತ್ತಲೇ ಬಂದಿದೆ.

ಮಹಾತ್ಮಾಜಿಯವರು ಈ ವರೆಗೆ ಪ್ರಾರಂಭಿಸಿರುವ ಅದ್ಭುತ ಕಾರ್ಯಗಳಲ್ಲ ಖಾದಿಪ್ರಸಾರ, ಶಾಸನೋಲ್ಲಂಘನೆ ಮತ್ತು ಅಸ್ಪೃಶ್ಯತಾನಿವಾರಣೆ ಇವೇ ಮೂರು ಮುಖ್ಯವಾದವುಗಳಾಗಿವೆ. ಖಾದಿಪ್ರಸಾರ ಮತ್ತು ಶಾಸನೋಲ್ಲಂಘನೆ ಈ ಉಭಯ ವಿಷಯಗಳಲ್ಲಿ ಕರ್ನಾಟಕವು ಮಾಡಿದ ಪ್ರಯತ್ನಗಳು ಸರ್ವಶ್ರುತವಷ್ಟೆ. ಆತ್ಮಶುದ್ಧಿಯ ವಿಷಯದಲ್ಲಿ ಅವೆರಡಕ್ಕಿಂತಲೂ ಅತ್ಯಂತ ಪ್ರಾಮುಖ್ಯವಾದುದು, ರಾಷ್ಟ್ರೀಯೈಕ್ಯತೆಗೆ ಮೂಲವಾದುದು, ಸ್ವಾತಂತ್ರ್ಯಸಮಾನತ್ವಗಳು ಜನಾಂಗದಲ್ಲಿ ಸ್ಥಿರವಾಗಿ ನೆಲೆಸಲು ಬಹುಸಹಾಯಕವಾದುದು, ಆಗಿರತಕ್ಕ ಈಗಿನ ಅಸ್ಪೃಶ್ಯತಾ ನಿವಾರಣೆಯ ಅದ್ಭುತ ಕಾರ್ಯದಲ್ಲಿ ಕರ್ನಾಟಕವು ಮುಂಮುವರಿಯಬೇಕಾದುದು ಇದರ ಕರ್ತವ್ಯವಾಗಿಲ್ಲವೇ?

ಕರ್ನಾಟಕವು ಶೈವ ವೈಷ್ಣವಾದಿ ನಾನಾ ಮತಗಳ ಹೋರಾಟದ ರಂಗಸ್ಥಳವಾಗಿರುವುದರಿಂದಲೂ ಧಾರ್ಮಿಕ ಮತವೈಷಮ್ಯವು ನರ್ಮದೆಯಿಂದ ದಕ್ಷಿಣಕ್ಕೆ ಬಂದಂತೆ ಹೆಚ್ಚಾಗಿರುವುದರಿಂದಲೂ ಈಗಿನ ಅಸ್ಪೃಶ್ಯತಾನಿವಾರಣೆಯ ಈ ಧಾರ್ಮಿಕ ವಿಷಯದಲ್ಲಿ ಕರ್ನಾಟಕವು ಬೇರೆ ಉತ್ತರ ಪ್ರಾಂತಗಳಿಗಿಂತ ಹಿಂದುಳಿಯುವುದು ಸ್ವಾಭಾವಿಕವೆಂದು ಕೆಲವರು ಯೋಚಿಸಿರಬಹುದು. ಇದರಲ್ಲಿ ಸತ್ಯಾಂಶವೂ ಇದೆ. ಆದರೆ ದಕ್ಷಿಣದ ಎಲ್ಲ ದೇಶಗಳಿಗಿಂತ ಕರ್ನಾಟಕವು ಈ ವಿಷಯದಲ್ಲಿ ಮುಂದರಿಯುವಂತಹ ಸಿದ್ಧತೆಯನ್ನು ಪ್ರಾಚೀನ ಶಿವಶರಣರು ಹರಿದಾಸರು ಮಾಡಿಟ್ಟಿದ್ದಾರೆಂಬುದನ್ನು ಮಾತ್ರ ಮರೆಯಬಾರದು.

ಕಳೆದ ೮೦೦ ವರ್ಷಗಳಿಂದಲೂ ಬಸವಾದಿ ಪ್ರಮಥರ ಉದಾತ್ತತತ್ವಗಳಂತೆ ಸಹಸ್ರಾವಧಿ ಶಿವಶರಣರು ಗಣೈಕ್ಯಪಕ್ಷಪಾತಿಗಳಾಗಿ ಜನ್ಮವಿಶಿಷ್ಟವಾದ ಶ್ರೇಷ್ಠಕನಿಷ್ಠತೆಗಳ ಕೊಳೆಯನ್ನು ಕರ್ನಾಟಕದಲ್ಲಿ ಎಷ್ಟೋ ತೊಳೆದಿದ್ದಾರೆ. ಆದುದರಿಂದ ಕರ್ನಾಟಕದಲ್ಲ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಯು ಬಹು ಪರಿಣಾಮಕಾರಿಯಾಗುವಂತಹ ಪೂರ್ವಸಿದ್ಧತೆಯು ಇದ್ದೇ ಇದೆ. ಆದರೆ ಕಾಲವರಿತು ಕಾರ್ಯಮಾಡುವ ಸಾಹಸಿಗಳು ಮಾತ್ರ ಆವಶ್ಯಕವಾಗಿ ಬೇಕಾಗಿದ್ದಾರೆ.

ರಾಜಕೀಯ ಉಗ್ರಚಟುವಟಿಕೆಯಲ್ಲಿ ಕರ್ನಾಟಕದ ಉತ್ಸಾಹಿ ಕಾರ್ಯಕರ್ತರು ಶಿಲ್ಕಿಕೊಂಡು ಕಾರಾಗೃಹದಲ್ಲಿರುವುದರಿಂದ ಈಗ ಹೊರಗಡೆಯಲ್ಲಿ ಈ ಪವಿತ್ರಕಾರ್ಯ ಮಾಡುವವರು ಬಹು ಕಡಿಮೆಯಾಗಿದ್ದಾರೆ. ಮುನಸಿಪಾಲಿಟಿ, ಲೋಕಲ್‌ಬೋರ್ಡುಗಳ ಜಾಲದಲ್ಲಿ ಬಹುಜನ ಸುಶಿಕ್ಷಿತರು ಶಿಲ್ಕಿಕೊಂಡಿರುವುದರಿಂದ ಈ ಜನಸೇವೆಯ ಕಾರ್ಯವನ್ನು ಮಾಡುವವರು ಇಲ್ಲದಂತಾಗಿದೆ

ಈ ಅಸ್ಪೃಶ್ಯತಾ ನಿವಾರಣೆಯ ಮಹತ್ಕಾರ್ಯಕ್ಕೆ ರಾಜಕೀಯ ಗಾಳಿಯು ಸಹ ಸೋಂಕುವಂತಿಲ್ಲವಾದ್ದರಿಂದ ಕರ್ನಾಟಕದ ಘನತೆಯನ್ನು ಕಾಯಲು ಮತ್ತು ಕರ್ನಾಟಕಾಂಬೆಯ ಸೇವೆ ಮಾಡಲು ಸ್ಥಾನಿಕ ಸಂಸ್ಥೆಗಳ ಹೋರಾಟದ ಕಾರ್ಯಗಳಲ್ಲ ತೊಡಗಿದ ಸುಶಿಕ್ಷಿತರು ಈಗಲಾದರೂ ಮುಂದರಿಯಬಾರದೇ?

ಕರ್ನಾಟಕದ ಮುಖ್ಯ ಜನಾಂಗವಾದ ವೀರಶೈವ ಸಮಾಜವು ತನ್ನ ಮುಖ್ಯ ಜಗದ್ಗುರುವಾಗಿರತಕ್ಕ ಚಿತ್ರದುರ್ಗದ ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರು ಅಸ್ಪೃಶ್ಯತಾ ನಿವಾರಣೆಗೆ ಅಪ್ಪಣೆ ಕೊಟ್ಟಿರುವುದನ್ನು ಈ ಸಮಯದಲ್ಲಿ ಯೋಗ್ಯ ಉಪಯೋಗ ಮಾಡಿಕೊಂಡು ಕರ್ನಾಟಕಕ್ಕೆ ಭೂಷಣವನ್ನುಂಟುಮಾಡುವುದು ಯುಕ್ತವಾಗಿಲ್ಲವೇ?

ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ವಿಶೇಷಕಾರ್ಯ ಮಾಡುವುದು ವೀರಶೈವ ಸಮಾಜಕ್ಕೆ ಹೆಚ್ಚು ಸಂಬಂಧಪಟ್ಟದ್ದಾಗಿದೆ. ಕರ್ನಾಟಕವು ಈ ವಿಷಯದಲ್ಲಿ ಹಿಂದುಬಿದ್ದರೆ ಇದಕ್ಕೆ ಈ ಸಮಾಜವೇ ಹೆಚ್ಚು ಹೊಣೆಗಾರಿಕೆಯಾದುದೆಂದೇ ಹೇಳಬಹುದು. ಆದುದರಿಂದ ವೀರಶೈವ ಸಮಾಜದ ಸುಶಿಕ್ಷಿತ ಪ್ರಮುಖರು ಈ ವಿಷಯದಲ್ಲಿ ಮುಂದರಿದು ಎಲ್ಲ ಸಮಾಜಗಳ ಪ್ರಮುಖರನ್ನು ಕೂಡಿಕೊಂಡು ಕರ್ನಾಟಕವು ತನ್ನ ಕರ್ತವ್ಯವನ್ನು ತೃಪ್ತಿಕರವಾಗಿ ಮಾಡಿತೆಂಬಂತೆ ರಾಷ್ಟ್ರಕ್ಕೆ ತೋರಿಸುವ ಹಾಗೆ ಪ್ರಯತ್ನಿಸಬೇಕಾಗಿ ಪ್ರಾರ್ಥನೆ.

ಕರ್ನಾಟಕದ ಲೋಕಮತವನ್ನು ಪ್ರದರ್ಶಿಸಲಿಕ್ಕೂ ಎಲ್ಲಕಡೆಗಳಲ್ಲಿಯೂ ಕ್ರಮಬದ್ಧವಾಗಿ ಕಾರ್ಯಮಾಡಲಿಕ್ಕೂ ಅನುಕೂಲವಾಗುವಂತೆ ಕರ್ನಾಟಕ ಅಸ್ಪೃಶ್ಯತಾನಿವಾರಣೆಯ ಒಂದು ಪರಿಷತ್ತನ್ನು ಈ ತಿಂಗಳಾಂತ್ಯದಲ್ಲಿ ಕೂಡಿಸುವುದು ಕರ್ನಾಟಕದ ಕರ್ತವ್ಯವಾಗಿಲ್ಲವೇ? ಈ ಮಹತ್ಕಾರ್ಯಕ್ಕೆ ಯಾವ ಸ್ಥಳದ ಮಹಾಜನರು ಮುಂದರಿಯುವರೋ ಅವರು ಕರ್ನಾಟಕದ ಘನತೆಯನ್ನು ಹೆಚ್ಚಿಸಿದಂತಾಗುವುದಿಲ್ಲವೇ?

ಸ್ಫುಟ ಸೂಚನೆ

ಶರಣಬಸವೇಶ್ವರನ ದೇವಾಲಯ ಪ್ರವೇಶ.

ಕಲಬುರ್ಗಿಯ ಶ್ರೀ ಶರಣಬಸವೇಶ್ವರ ದೇವಾಲಯದಲ್ಲಿ ಆದಿಜನರಿಗೆ ಪ್ರವೇಶಿಸಲು ಅವಕಾಶ ದೊರೆಯಿತೆಂಬ ಅತ್ಯಂತ ಸಂತೋಷಕರವಾದ ಸಮಾಚಾರವು ತಾ. ೧೭ನೆಯ ಜ್ಞಾನಪ್ರಕಾಶ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಪ್ರಕಾರ ಆದಿಜನರಿಗೆ ಅವಕಾಶ ಕೊಟ್ಟುದರಿಂದ ಪೂಜ್ಯರಾದ ಆ ಸಂಸ್ಥಾನದ ಈಗಿನ ಯಜಮಾನರಿಗೂ ಅಲ್ಲಿನ ವೀರಶೈವ ಮತ್ತು ಇತರ ಸ್ಪೃಶ್ಯ ಸಮಾಜಗಳ ಪ್ರಮುಖರಿಗೂ ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಸೊಲ್ಲಾಪುರದ ಶ್ರೀ. ಸಿದ್ಧರಾಮೇಶನು ಈ ಮುಂಚೆಯೇ ಆದಿಜನಗಳಿಗೆ ದರ್ಶನಕೊಟ್ಟಿದ್ದಾನೆ. ಈಗ ಕಲ್ಲಬುರ್ಗಿಯ ಶ್ರೀ ಶರಣಬಸವೇಶನೂ ದರ್ಶನ ಕೊಟ್ಟನು. ಈ ಪ್ರಕಾರ ಆದಿಜನರ

ಉದ್ಧಾರವನ್ನು ವಿಶೇಷವಾಗಿ ಮಾಡಿರುವ ಎಲ್ಲ ಶಿವಶರಣರ ದೇವಾಲಯ, ಗದ್ದುಗೆ, ಮಠಗಳು ಅಸ್ಪೃಶ್ಯ ಹಿಂದುಗಳಂತೆಯೇ ಆದಿಜನರ ಪ್ರವೇಶಕ್ಕೂ ಅವಕಾಶವನ್ನು ಕೊಟ್ಟು ವೀರಶೈವ ಸಮಾಜಕ್ಕೂ ಆ ಮೂಲಕ ಕರ್ನಾಟಕಕ್ಕೂ ಭೂಷಣವನ್ನುಂಟು ಮಾಡಬಾರದೇ?

ಉಪವಾಸಕ್ಕೆ ಅಂಜುವರೇ?

ಅಸ್ಪೃಶ್ಯತಾ ನಿವಾರಣೆಯ ವಿಷಯವಲ್ಲಿ ಮಹಾತ್ಮಾಜಿಯ ವರು ಕೈಕೊಳ್ಳುವ ಉಪವಾಸವು ಅನ್ಯರನ್ನು ಅಂಜಿಸುವುದಕ್ಕಲ್ಲ. ಆದರೆ ಆದಿಜನರ ವಿಷಯದಲ್ಲಿದ್ದ ತನ್ನ ಪ್ರೇಮದ ತಾಪವನ್ನು ನೀಗುವುದಕ್ಕೇನೇ ಸರಿ. ಅವರು ಉಪವಾಸ ಮಾಡಿ ಅನ್ಯರನ್ನು ಅಂಜಿಸಿ ತಮ್ಮ ಕಾರ್ಯ ಸಾಧಿಸಿಕೊಳ್ಳುತ್ತಾರೆಂದು ಯಾರಾದರೂ ತಿಳಿದು ತಾವೂ ಉಪವಾಸ ಮಾಡಿ ಅವರನ್ನು ಅಂಜಿಸಬೇಕೆಂದು ಯೋಚಿಸಿದರೆ ಅದು ವ್ಯರ್ಥವೇ ಸರಿ.

ಈ ವಿಷಯವಾಗಿ ಗಾಂಧೀಜಿಯವರು ತಾ. ೧೬ನೆಯ ದಿವಸ ಈ ಪ್ರಕಾರ ಪ್ರಕಟಿಸಿದ್ದಾರೆ. ನಾನು ಈ ಅಸ್ಪೃಶ್ಯತಾ ನಿವಾರಣೆಯ ಕಾರ್ಯವನ್ನು ಬಿಡುವುದಕ್ಕಾಗಿ ಒಬ್ಬ ಅವಧೂತ ಸ್ವಾಮಿಗಳು ಉಪವಾಸ ವ್ರತವನ್ನು ಕೈಕೊಂಡಿದ್ದಾರೆಂದು ಕೇಳಿದ್ದೇನೆ. ಈ ಪ್ರಕಾರ ಲಕ್ಷಾಂತರ ಜನರು ಉಪವಾಸ ಮಾಡಿದರೂ ನಾನು ಮಾತ್ರ ಈ ನನ್ನ ಕಾರ್ಯವನ್ನು ನಿಲ್ಲಿಸುವದಿಲ್ಲ.

ಆದುದರಿಂದ ಹುಲಿಯಾಗಬೇಕೆಂದು ನರಿಯು ಮೈಸುಟ್ಟುಕೊಂಡಂತೆ ಯಾರೂ ಪ್ರಯತ್ನಿಸಬಾರದು.

ಇದೇನು ವಿಚಿತ್ರರೂಪ ಮಹಾಧ್ವನಿ?

ದೀನ್‌ದಾರ ಬಸವ ಸಮಾಜದ ಆಶ್ರಯದಲ್ಲಿ ಸರ್ವಧರ್ಮ ಪರಿಷತ್ತು ಕೂಡುವುದಾಗಿ ಅದರ ಕಾರ್ಯದರ್ಶಿಗಳು ತಿಳಿಸುತ್ತಾರೆ. ದೀನದಾರ ಬಸವಸಮಾಜವೆಂದರೇನು? ಇದರ ಉದ್ದೇಶವೇನು? ಈ ಸಂಗತಿಗಳನ್ನು ಇದರ ಕಾರ್ಯದರ್ಶಿಗಳು ತಿಳಿಸಬೇಕಾಗಿ ಅವರಿಗೆ ಪ್ರೇಮದ ಸೂಚನೆ.

ಹಿಂದು ಧರ್ಮದವರನ್ನು ಮುಸಲ್ಮಾನ್ ಧರ್ಮಕ್ಕೆ ಸೆಳೆದುಕೊಳ್ಳುವ ಕೆಲವು ಜನರ ಗುಂಪಿಗೆ ಈ ಹೆಸರಿದೆಯೇ? ದೀನದಾರ್ ಎಂಬುವುದಕ್ಕೂ ಬಸವ ಎಂಬುವುದಕ್ಕೂ ಸಂಬಂಧವೇನು? ಮಸೀದಿಯಲ್ಲಿ ಬಿಲ್ವವೃಕ್ಷ ಪೂಜೆಯು ಫರ್ನಾಂಡೀಜ ಸಾಹೇಬರಿಂದ ಸಂಭ್ರಮವಾಗಿ ಜರುಗುವ ಕಾರಣ ಸಕಲರೂ ಬರಬೇಕೆಂದು ಆಮಂತ್ರಣ ಪತ್ರಿಕೆ ಬಂದರೆ ಅದೊಂದು ವಿನೋದ ಪತ್ರಿಕೆಯಾಗಿ ಪರಿಣಮಿಸಲಿಕ್ಕಿಲ್ಲವೇ?

ಹೈದರಾಬಾದಿನಲ್ಲಿ ಕೂಡುವ ಈ ಸಭೆಯ ವಿಚಿತ್ರಸ್ವರೂಪ ಮಹಾಧ್ವನಿಗಳನ್ನು ನೋಡಿ ಜನರು ಪರಿಹಾಸ್ಯಮಾಡದಿರಲಾರರು.

ಐಕ್ಯ ಪರಿಷತ್ತು.

ಅಲಾಹಾಬಾದ ಐಕ್ಯ ಪರಿಷತ್ತು ಪೂರೈಸಿ ಸರ್ವಪಕ್ಷೀಯ ಪರಿಷತ್ತು ಈ ವಾರದಲ್ಲಿ ಜರುಗಬೇಕಾಗಿತ್ತು. ಆದರೆ ಬಂಗಾಲ ಪ್ರಾಂತದ ವಿಷಯವಾಗಿ ಪುನಃ ತೊಂದರೆಯುಂಟಾದುದರಿಂದ ಐಕ್ಯ ಪರಿಷತ್ತಿನ ಕಾರ್ಯವೇ ಇನ್ನೂ ಪೂರೈಸದೆ ಮುಂದರಿದಿದೆ.

ಇಷ್ಟರಿಂದ ಯಾರೂ ನಿರಾಶರಾಗಬಾರದಾಗಿ ಪ್ರಮುಖರು ಸೂಚಿಸಿದ್ದಾರೆ. ಮುಂದಿನವಾರದಲ್ಲಿ ತೃಪ್ತಿಕರವಾಗಿಯೇ ಈ ಪರಿಷತ್ತಿನ ಕಾರ್ಯ ಜರುಗುವುದೆಂದು ನಾವು ನಂಬಿದ್ದೇವೆ.

ಕೈ. ಬಂಡಪ್ಪ ನಾಗಪ್ಪ ಕಾಡಾದಿ

ಸೊಲ್ಲಾಪುರದ ವೀರಶೈವರ ಜಾಗೃತಿ.

ವೀರಶೈವ ಸಮಾಜಕ್ಕೆ ಮಹಾರಾಷ್ಟ್ರದಲ್ಲಿ ಸೊಲ್ಲಾಪುರ ಪಟ್ಟಣವು ಒಂದು ಪ್ರಮುಖ ಸ್ಥಾನವಾಗಿದೆ. ಅಲ್ಲಿಯ ವೀರಶೈವ ಜಾಗೃತಿಯು ಮಹಾರಾಷ್ಟ್ರ ದೇಶದ ವೀರಶೈವರ ಜಾಗೃತಿಗೆ ಬಹು ಸಹಾಯವಾಗುತ್ತದೆ.

ವೀರಶೈವ ಸಮಾಜಕ್ಕೇನೇ ಭೂಷಣಪ್ರದರಾಗಿದ್ದ ಕೈ. ವಾರದ ಅಪ್ಪಾಸಾಹೇಬರಿರುವವರೆಗೂ ಸೊಲ್ಲಾಪುರವು ವೀರಶೈವರಿಗೆ ಬಹು ಪ್ರಾಮುಖ್ಯ ಸ್ಥಳವಾಗಿದ್ದಿತು. ಈಗ ಕಾಡಾದಿ ಬಂಧುಗಳು ತಮ್ಮ ತಂದೆಯವರಾದ ಕೈ. ಬಂಡಪ್ಪನವರ ಸ್ಮರಣಾರ್ಥ ೬೦ ಸಾವಿರ ರೂ. ಗಳನ್ನು ವೀರಶೈವ ಬಡವಿದ್ಯಾರ್ಥಿಗಳ ಸಹಾಯಾರ್ಥವಾಗಿ ದಾನ ಮಾಡಿ ಮತ್ತೆ ಸೊಲ್ಲಾಪುರದ ಕಡೆಗೆ ವೀರಶೈವ ಸಮಾಜವು ನೋಡುವಂತೆ ಮಾಡಿದರು.

ಕಾಡಾದಿ ವೀರಶೈವ ವಸತಿಗೃಹದ ತಳಹದಿ ಶಿಲಾಸ್ಥಾಪನೆಯ ಕಾಲಕ್ಕೆ ಮುಂಬೈ ಗವ್ಹರ್ನರ್ ಸಾಹೇಬರು ಸೊಲ್ಲಾಪುರ ವೀರಶೈವರ ಜಾಗೃತಿಯನ್ನು ಕುರಿತು ಈ ಪ್ರಕಾರ ಹೇಳಿದುದು ಬಹು ಸಮಂಜಸವಾಗಿದೆ.

“ಸೊಲ್ಲಾಪುರದಂತಹ ಪ್ರಮುಖ ವ್ಯಾಪಾರದ ಪಟ್ಟಣದಲ್ಲಿ ಲಿಂಗಾಯತ ಸಮಾಜವು ಮುಖ್ಯವಾದುದಾಗಿಯೇ ಇದೆ. ಆದರೆ ಶಿಕ್ಷಣದ ವಿಷಯದಲ್ಲಿ ಈ ಸಮಾಜದವರು ಬೇರೆ ಸಮಾಜದವರಂತೆ ಮುಂದರಿಯದಿದ್ದುದರಿಂದ ಅವರಿಗೆ ತಮ್ಮ ಘನತೆಯನ್ನು ಸ್ಥಾಪಿಸುವುದು ಅಶಕ್ಯವಾಗಿದೆ.”

ಗವ್ಹರ್ನರ್ ಸಾಹೇಬರ ಈ ಸತ್ಯೋಕ್ತಿಯನ್ನು ಅಲ್ಲಿನ ನಮ್ಮ ಸಮಾಜ ಬಾಂಧವರು ಯಾವಾಗಲೂ ನೆನಪಿನಲ್ಲಿಟ್ಟುಕೊಂಡು ವಿದ್ಯಾಭಿವೃದ್ಧಿಯ ಕಡೆಗೆ ಹೆಚ್ಚು ಪ್ರಯತ್ನಿಸಬೇಕಾಗಿಯೂ ಈಗ ಶ್ರೀಮಂತ ನಾಗಪ್ಪನವರು ಮತ್ತು ಮಡಿವಾಳಪ್ಪನವರು ತಮ್ಮ ತಂದೆಯ ಸ್ಮರಣಾರ್ಥವಾಗಿ ವಿದ್ಯಾನಿಧಿಗೆ ಕೊಟ್ಟರತಕ್ಕ ೩೦ ಸಾವಿರ ರೂ. ಗಳನ್ನು ಹೆಚ್ಚಿಸಿ ಶಿಕ್ಷಣ ಪ್ರಸಾರಗೊಳಿಸಬೇಕಾಗಿಯೂ ಸೊಲ್ಲಾಪುರದ ವೀರಶೈವ ಮಹಾಜನರಿಗೆ ನಮ್ಮ ಪ್ರೇಮದ ಸೂಚನೆ,

ಸಮಾಚಾರ ಸಂಗ್ರಹ.

ಬಂಗಾಲದಲ್ಲಿ ಮೊದಲು ೮೦೦ ರಾಜಕೀಯ ಕೈದಿಗಳಿದ್ದರು. ಇತ್ತೀಚೆಗೆ ೧೨೦೦ ಜನರಾಗಿದ್ದಾರೆ. ಪ್ರತಿತಿಂಗಳಿಗೆ ೫೦-೬೦ ರಾಜಕೀಯ ಕೈದಿಗಳು ಹೆಚ್ಚುತ್ತಿದ್ದಾರೆ. ಆದುದರಿಂದ ಇವರ ಮತ್ತು ಹೆಚ್ಚಿನ ಪೋಲಿಸ ಶಿಬಂದಿಯ ವೆಚ್ಚಕ್ಕಾಗಿ ೨ ಲಕ್ಷ ೧೦ಸಾವಿರ ರೂಗಳನ್ನು ಹೆಚ್ಚಾಗಿ ಬಂಗಾಲ ಸರಕಾರದವರು ಉಪಯೋಗಿಸಿಕೊಳ್ಳಲು ನಿಯಮನಿರ್ಮಾಣ ಸಭೆಯಲ್ಲಿ ತೀರ್ಮಾನವಾಯಿತು. ಕೆಲವರು ಇದನ್ನು ವಿರೋಧಿಸಿದರು. ಆದರೆ ಬಹುಮತದಿಂದ ಇದು ತೀರ್ಮಾನವಾಗಿದೆ.

ಬೆಳಗಾಂವ ಜಿಲ್ಲೆಯ ಕಲೆಕ್ಟರ್ ಮಿ. ಮಾಂಟಗೊಮೇರಿಯವರು ೧೮ ತಿಂಗಳ ರಜೆಯನ್ನು ತೆಗೆದುಕೊಂಡದ್ದರಿಂದ ಇವರ ಸ್ಥಳಕ್ಕೆ ಎಕ್ಸಾಯಿಜ್ ಕಮಿಶನರಾಗಿದ್ದ ಮಿ. ಮ್ಯಾಕ್‌ಮಿಲನ್‌ರವರು ಕಲೆಕ್ಟರರಾಗಿ ನಿಯಮಿಸಲ್ಪಟ್ಟದ್ದಾರೆ.

ತುರಂಗಗಳ ನಿಯಮಗಳಲ್ಲಿ ಈ ಪ್ರಕಾರ ತಿದ್ದುಪಾಟು ಮಾಡಲು ತಮ್ಮ ಒಪ್ಪಿಗೆಯನ್ನು ಕೊಡ ಬೇಕಾಗಿ ಭಾರತ ಮಂತ್ರಿಗಳಿಗೆ ಹಿಂದುಸ್ಥಾನ ಸರಕಾರದವರು ಕೇಳಿಕೊಂಡಿದ್ದಾರೆ. ಆ ತಿದ್ದುಪಾಟು ಈ ಪ್ರಕಾರ ಇದೆ. ಜೈಲುಗಳಲ್ಲಿಯ ಕೈದಿಗಳಿಗೆ ನಿಮಗೆ ಯಾವ ಕೆಲಸಮಾಡಲು ಇಷ್ಟವಿದೆಯೆಂದು ಕೇಳಬೇಕು. ಮತ್ತು ಜೈಲಿನ ಅಧಿಕಾರಿಗಳು ಹೇಳುವ ಕೆಲಸಗಳಲ್ಲಿ ಯಾವುದು ಕೈದಿಗೆ ಇಷ್ಟವಾಗಿದೆಯೋ ಆದನ್ನೇ ಆತನಿಗೆ ಕೊಡಲು ಜೈಲಿನ ಮುಖ್ಯಾಧಿಕಾರಿಗಳಿಗೆ ಅಧಿಕಾರವಿರಬೇಕು.”

ಮುಂಬೈ ಸ್ತ್ರೀ ಸಮಾಜದ ಶ್ರೀಮತಿ ಕೃಷ್ಣಾಗೌರಿ ಶಟಲವಾಡ, ಅವಂತಿಕಾಬಾಯಿ ಗೋಖಲೆ, ಹಂಸಾಮೆಹತಾ ಮೊದಲಾದ ಪ್ರಮುಖ ಸ್ತ್ರೀಯರು ಝಾಮೋರಿಯನರವರಿಗೂ ತ್ರಾವಣಕೋರ ಕೋಚಿನ ಸಂಸ್ಥಾನಗಳ ಮಹಾರಾಜರಿಗೂ ಗುರುವಾಯೂರು ದೇವಾಲಯದಲ್ಲಿ ಆದಿಜನರ ಪ್ರವೇಶಕ್ಕೆ ಅವಕಾಶ ಕೊಟ್ಟು ಹಿಂದುಧರ್ಮವನ್ನು ರಕ್ಷಿಸಬೇಕೆಂತಲೂ ಈ ವಿಷಯದಲ್ಲಿ ಶ್ರೀ ಬಡೋದಾ ಗಾಯ್ಕವಾಡ ಮಹಾರಾಜರ ಅನುಕರಣವನ್ನು ತಾವು ಮಾಡಬೇಕೆಂತಲೂ ವಿಜ್ಞಾಪಿಸಿಕೊಂಡಿದ್ದಾರೆ.

ಪುಣೆಯ ಜಿಲ್ಲಾ ಮುಸಲೀಮ್ ಶಿಕ್ಷಣ ಪರಿಷತ್ತು ಡಾ, ರ್ಫಿಯುಉದ್ದೀನ ಮಹಮ್ಮದ ಇವರ ಅಧ್ಯಕ್ಷತೆಯಲ್ಲಿ ತಾ. ೨೩-೨೪ನೆಯ ದಿವಸಗಳಲ್ಲಿ ಜರುಗುವುದು. ಈ ಪರಿಷತ್ತಿನ ಉಪಕ್ರಮ ಸಮಾರಂಭವು ನಾ. ಕಂಬಳಿಯವರ ಹಸ್ತದಿಂದ ಜರುಗುವುದು.

ಇದೇ ೨೩ನೆಯ ತಾರೀಖಿನ ದಿವಸ ಪುಣೆಯಲ್ಲಿ ಸನಾತನಿ ಕರ್ಮಠ ಶಾಸ್ತ್ರಿಗಳ ಒಂದು ಸಭೆ ಸೇರಿ ಅಸ್ಪೃಶ್ಯತಾ ನಿವಾರಣೆಯ ವಿಷಯವು ಚರ್ಚೆಯಾಗುವುದಿದೆ. ಮಹಾತ್ಮಾಜಿಯವರು ತಮ್ಮ, ಪಕ್ಷವನ್ನು ತಿಳಿಸಲು ನಾಗಪುರ ವಿದ್ವಾನ್ ಸಂಸ್ಕೃತಜ್ಞ ಪಂಡಿತ ಕೇಶವ ಲಕ್ಷ್ಮಣ ದಪ್ತರಿ ಎಂಬುವವರನ್ನು ಈ ಸಭೆಗೆ ಕಳುಹಿಸುವವರಿದ್ದಾರೆ.

ಅಲವಾರ ಸಂಸ್ಥಾನದ ಅನೇಕ ಮುಸಲ್ಮಾನ ಕುಟುಂಬಗಳು ಆ ಸಂಸ್ಥಾನವನ್ನೇ ತ್ಯಾಗ ಮಾಡಿ ಡಿಲ್ಲಿಗೆ ಹೋಗಿದ್ದವು. ಈಗ ಅಲವಾರ ಸಂಸ್ಥಾನದ ಕಲಹ ತೀರ್ಮಾನವಾದುದರಿಂದ ಆ ಮನೆತನದವರು ಪುನಃ ತಮ್ಮ ಸಂಸ್ಥಾನಕ್ಕೆ ಬರಲಾರಂಭಿಸಿದ್ದಾರೆ.

ಮುಂಬೈ ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ. ಕನ್ಹೈಲಾಲ ಮುನಶಿ ಇವರನ್ನು ಜೈಲಿನಿಂದ ೧೫ ದಿವಸಗಳವರೆಗೆ ಪೆರೋಲದ ಮೇಲೆ ಬಿಟ್ಟದ್ದಾರೆ. ಏಕೆಂದರೆ ಇವರ ತಾಯಿಯವರು ಸಂಧಿ ವಾತದಿಂದ ಪೀಡಿತರಾಗಿದ್ದಾರೆ.

ರಾವಳಪಿಂಡಿಯ ಸಂಸ್ಥಾನಾಧಿಪತಿಗಳು ಕಳೆದ ೧೦ನೆಯ ತಾರೀಖಿನ ದಿವಸ ತಮ್ಮ ಸಂಸ್ಥಾನದಲ್ಲಿ ಲೋಕಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಈ ಅಸೆಂಬ್ಲಿಯಲ್ಲಿ ೧೪ ಜನರು ಜನಗಳಿಂದ ಆರಿಸಲ್ಪಟ್ಟವರೂ ೮ ಜನರು ಸರಕಾರದಿಂದ ಆರಿಸಲ್ಪಟ್ಟವರೂ ೧೧ ಜನರು ಅಧಿಕಾರಿಗಳೂ ಈ ಪ್ರಕಾರ ಒಟ್ಟು ೩೩ ಜನರಿದ್ದರೆ.

ಅಮೇರಿಕೆಗೆ ಇಂಗ್ಲೆಂಡ್ ಸರಕಾರವು ಕೊಡಬೇಕಾಗಿರುವ ಸಾಲಕ್ಕೋಸ್ಕರ ಬಂಗಾರವನ್ನೇ ಕೊಡುವುದಾಗಿ ಇಂಗ್ಲೆಂಡ್ ಸರಕಾರವು ಅಮೇರಿಕೆಗೆ ತಿಳಿಸಿದೆ.

ಹಿಂದುಸ್ಥಾನದ ಸುಪ್ರಸಿದ್ಧ ಮುತ್ತು ರತ್ನಗಳ ವ್ಯಾಪಾರಿಗಳಾದ ಶೇಟ ಸುರಜಮಲ್ಲ ಲಲ್ಲುಭಾಯಿ ಇವರು ಮದ್ರಾಸಿನಲ್ಲಿ ಹೃದಯವಿಕಾರದಿಂದ ಮೃತಪಟ್ಟರೆಂದು ತಿಳಿಸಲು ವಿಷಾದವಾಗುತ್ತದೆ. ಮರಣಕಾಲಕ್ಕೆ ಇವರಿಗೆ ೫೬ ವರ್ಷಗಳಾಗಿದ್ದವು.

ಮಧ್ಯವರ್ತಿ ಮಂತ್ರಿಮಂಡಲದಲ್ಲಿ ಮೂರನೆಯ ಒಂದು ಭಾಗ ಮತ್ತು ಮಧ್ಯವರ್ತಿ ಕಾಯದೆ ಮಂಡಲದಲ್ಲಿ ೧೦೦ಕ್ಕೆ ೩೦ ರಂತೆ ಮುಸಲ್ಮಾನ್ ಪ್ರತಿನಿಧಿಗಳಿರಬೇಕೆಂದು ಲಖನೌದಲ್ಲಿ ಕೂಡಿದ ಮುಸಲ್ಮಾನ್ ಪರಿಷತ್ತಿನಲ್ಲಿ ತೀರ್ಮಾನವಾಯಿತು.

ಕ್ಷತ್ರಿಯ ಸಾವಜಿ ಸಮಾಜದ ೫ನೆಯ ಅಧಿವೇಶನವು ಪುಣೆಯಲ್ಲಿ ಇದೇ ೨೮-೨೯-೩೦ನೆಯ ತಾರೀಖುಗಳಲ್ಲಿ ಯವತಮಾಳದ ಡಾ. ಅಂಬಾದಾಸ ನಾರಾಯಣಸಾ ದಾಣೇಜ ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಡೇರಾಡೂನ್ ಎಂಬಲ್ಲಿ ಸೈನ ಶಿಕ್ಷಣಾಲಯವು ಕಳೆದ ೧೦ನೆಯ ತಾರೀಖಿನ ದಿವಸ ಹಿಂದುಸ್ಥಾನದ ಮುಖ್ಯ ಸೇನಾಧಿಪತಿಗಳಿಂದ ಉಪಕ್ರಮ ಮಾಡಲ್ಪಟ್ಟಿತು. ಈ ಶಿಕ್ಷಣಾಲಯದಲ್ಲಿ ಯುದ್ಧವಿದ್ಯೆಗಳನ್ನು ಕಲಿಯಲು ೨೦೦ ವಿದ್ಯಾರ್ಥಿಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ವಿದ್ಯಾರ್ಥಿಗಳು ಈಗಿನ ರಾಜಕಾರಣದಿಂದ ಬೇರೆಯಾಗಿರಬೇಕೆಂತಲೂ ಇವರಮೇಲೆಯೇ ಹಿಂದುಸ್ಥಾನದ ಮುಂದಣ ಸ್ಥಿತಿಯು ಅವಲಂಬಿಸಿದೆಯೆಂತಲೂ ಸೇನಾಧಿಪತಿಗಳು ಹೇಳಿದರು.

ಆದಿಜನರು ಗೋಮಾಂಸವನ್ನು ಸೇವಿಸದಿದ್ದರೆ ಮಾತ್ರ ದೇವಾಲಯ ಪ್ರವೇಶಕ್ಕೆ ಅವಕಾಶಕೊಡುತ್ತೇವೆಂದು ಒಂದು ಕಟ್ಟನ್ನು ಮಾಡಬಾರದೆಂತಲೂ ಗೋಮಾಂಸ ಭಕ್ಷಣೆಯು ಹಿಂದು ಧರ್ಮದಲ್ಲಿ ನಿಷೇಧಿಸಲ್ಪಟ್ಟಿರುವುದರಿಂದ ಆದಿಜನರು ಕೂಡಲೇ ಅದನ್ನು ಬಿಟ್ಟುಬಿಡಬೇಕೆಂತಲೂ ಗಾಂಧೀಜಿಯವರು ಆದಿ ಜನರಿಗೆ ಉಪದೇಶ ಮಾಡಿದ್ದಾರೆ.

ಶ್ರೀ ಬಾಬು ಸುಭಾಷಚಂದ್ರ ಬೋಸರವರ ದೇಹಸ್ಥಿತಿಯನ್ನು ಪರೀಕ್ಷಿಸಲು ಸರಕಾರದವರು ಅವರನ್ನು ಲಖನೌ ಪಟ್ಟಣಕ್ಕೆ ತೆಗೆದುಕೊಂಡು ಹೋಗುವವರಿದ್ದಾರೆ. ಇವರಿಗಾದ ಕ್ಷಯರೋಗದ ಪರೀಕ್ಷೆಯು ಈ ದೇಶದವರಿಗಾಗುವಂತಿಲ್ಲವೆಂತಲೂ ಆಸ್ಟ್ರಿಯಾ ಅಥವಾ ಡೆನ್ಮಾರ್ಕ ದೇಶಕ್ಕೆ ಕರೆದುಕೊಂಡು ಹೋಗಬೇಕೆಂತಲೂ ಮಿ. ಮಿತ್ರ ಎಂಬುವವರು ಸೂಚಿಸಿದ್ದಾರೆ.

ಭೋರ ಸಂಸ್ಥಾನದ ಪ್ರಜೆಗಳಲ್ಲಿ ಪ್ರಜಾಪಕ್ಷ ಮತ್ತು ದೇಶಮುಖ ಪಕ್ಷ ಎಂಬೆರಡು ಪಕ್ಷಗಳುಂಟಾಗಿ ಪ್ರಜಾ ಪರಿಷತ್ತಿಗೆ ಎರಡೂ ಪಕ್ಷಗಳ ಇಬ್ಬರು ಅಧ್ಯಕ್ಷರನ್ನು ಗೊತ್ತುಮಾಡಿದರು!

ಸರ್ವ್ಹಂಟ್ಸ್ ಆಫ್ ಇಂಡಿಯಾ ಸೊಸೈಟಿ ಅಧ್ಯಕ್ಷರಾದ ಶ್ರೀ. ಗೋಪಾಳರಾವ ದೇವಧರರವರು ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಜನಜಾಗೃತಿ ಮಾಡಲು ಮಲಬಾರ ಪ್ರಾಂತಕ್ಕೆ ಹೋಗಿದ್ದಾರೆ.

ಸರ್ವಪಕ್ಷೀಯ ಮುಸಲ್ಮಾನ್ ಪರಿಷತ್ತು ಲಖನೌಪಟ್ಟಣದಲ್ಲಿ ಕೂಡಿ ಅಲಾಹಾಬಾದ ಐಕ್ಯಪರಿಷತ್ತಿನ ನಿರ್ಣಯಗಳನ್ನೇ ಅನುಮೋದಿಸಿದ್ದಾಯಿತು ದಿಲ್ಲಿಯಲ್ಲಿ ಸಭೆ ಕೂಡಿಸಿದ ಕೆಲವು ವಿರೋಧಿ ಮುಸಲ್ಮಾನರು ಈ ಸಭೆಗೆ ಬಂದಿರಲಿಲ್ಲ.

ಹುಬ್ಬಳ್ಳಿಯಲ್ಲಿ ನಡೆದಿರುವ ಎಂ. ಎಸ್. ಎಂ. ರೇಲ್ವೆ ಕೆಲಸಗಾರರ ಮುಷ್ಕರವು ಜಾಗ್ರುತೆ ನಿವಾರಣೆಯಾಗಬೇಕೆಂದು ಹುಬ್ಬಳ್ಳಿ ನಾಗರಿಕರ ಅಭಿಪ್ರಾಯವನ್ನು ಪ್ರದರ್ಶಿಸಲು ಅಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಪಾವಟೆ ಸಿದ್ಧರಾಮಪ್ಪನವರ ಅಧ್ಯಕ್ಷತೆಯಲ್ಲಿ ತಾ. ೧೧ನೆಯ ದಿವಸ ಸಭೆಸೇರಿದ್ದಿತು.

ಅಲವಾರ ಸಂಸ್ಥಾನದ ಹೊರಗೆ ಹೋಗಿದ್ದ ಮುಸಲ್ಮಾನರು ಪುನಃ ಸಂಸ್ಥಾನದಲ್ಲಿ ಬಂದ ನಂತರ ಮತ್ತೆ ದೊಂಬಿಯಾಯಿತೆಂತಲೂ ರೆವಿನ್ಯೂ ಅಧಿಕಾರಿಗಳ ಕೊಲೆಮಾಡಲು ಹೋಗಿ ನಾಲ್ಕು ಜನ ಶಿಪಾಯಿಗಳನ್ನು ಕೊಂದರೆಂತಲೂ ಪ್ರಕಟವಾಗಿದೆ.

ಬಡೋದೆಗೆ ವ್ಹಾಯಿಸ್‌ರಾಯರು ಹೋದಾಗ ಬಹು ಸಂಭ್ರಮದಿಂದ ಅವರನ್ನು ಬರಮಾಡಿಕೊಂಡರು. ಮತ್ತು ವ್ಹಾಯಿಸ್‌ರಾಯರಿಗೆ ಜಗಪ್ರಸಿದ್ಧ ಮಲ್ಲಗಾಮಾನು ತನ್ನ ಅಚಾಟ ದೇಹಶಕ್ತಿಯನ್ನು ತೋರಿಸಿದನು.

ಶ್ರೀ. ಸೌ. ಕಸ್ತೂರಿದೇವಿ ಗಾಂಧಿ ಮತ್ತು ಶ್ರೀ. ಉರ್ಮಿಳಾದೇವಿ ಇವರಿಗೆ ಕಾಲಿಕತ್ ಪಟ್ಟಣದ ಮುನಸಿಪಾಲ್ಟಿಯವರು ಮಾನಪತ್ರವನ್ನು ಆರ್ಪಿಸಿದರು. ಅಲ್ಲಿಯ ಮುನಸಿಪಾಲಿಟಿ ಅಧ್ಯಕ್ಷರು ಆದಿಜನ ಸಮಾಜದವರಿದ್ದುದರಿಂದ ಶ್ರೀ. ಕಸ್ತೂರಿದೇವಿ ಗಾಂಧಿಯವರು ಸಂತೋಷಪಟ್ಟರು.

ಹಿಂದಕ್ಕೆ ಯುರೋಪದ ಮಹಾಯುದ್ಧವನ್ನು ಪ್ರಾರಂಭಿಸಿ ಜಗತ್ತನ್ನೇ ನಡುಗಿಸಿದ್ದ ಜರ್ಮನಿಯ ಕೈಸರ್‌ರವರನ್ನು ಕೊಲೆಮಾಡಲು ಒಬ್ಬ ಜರ್ಮನ್ ಮನುಷ್ಯನು ಅವರ ಅರಮನೆಯಲ್ಲಿ ಅಡಗಿಕೊಂಡಿದ್ದುದು ಗೊತ್ತಾಗಿ ಆತನನ್ನು ಹಿಡಿದರು. ಆತನಲ್ಲಿ ಒಂದು ಪಿಸ್ತೂಲು ಇದ್ದಿತು.

ಮಸೂರು ಎಂಬಲ್ಲಿ ಆಶ್ರಮದ ಜಪ್ತಿಮಾಡಿದ ಸಾಮಾನುಗಳನ್ನು ಇದೇ ೧೬ನೆಯ ತಾರೀಖಿನ ದಿವಸ ಹರಾಜ ಮಾಡುವವರಿದ್ದರು. ಇದನ್ನು ನಿಲ್ಲಿಸಬೇಕಾಗಿ ಮುಂಬೈ ಸರಕಾರಕ್ಕೆ ಶ್ರೀ. ತಾತ್ಯಾ ಸಾಹೇಬ ಗೋಖಲೆ ಮೊದಲಾದವರು ಪ್ರಾರ್ಥಿಸಿಕೊಂಡಿದ್ದಾರೆ.

ಶ್ರೀ. ರಾಜಗೋಪಾಲಾಚಾರ್ಯರು ದಕ್ಷಿಣ ದೇಶದಲ್ಲಿ ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಜನಜಾಗೃತಿಯನ್ನುಂಟುಮಾಡುತ್ತಿರುವುದರಿಂದ ಅಲಹಾಬಾದಿನ ಸರ್ವಪಕ್ಷೀಯ ಪರಿಷತ್ತಿಗೆ ಹೋಗಲಿಲ್ಲ. ಐಕ್ಯಪರಿಷತ್ತಿನಲ್ಲಾದ ಠರಾವನ್ನೇ ಈ ಸರ್ವಪಕ್ಷೀಯ ಪರಿಷತ್ತು ಒಪ್ಪಬೇಕೆಂತಲೂ ಅದರಲ್ಲಿ ವ್ಯತ್ಯಾಸ ಮಾಡುವುದು ಅನರ್ಥಕರವೆಂತಲೂ ಶ್ರೀ. ಆಚಾರ್ಯರು ತಿಳಿಸಿದ್ದಾರೆ.

ಲಾಹೋರ ಗುಪ್ತಸಂಘದ ಕೈದಿಗಳಾದ ಮೂವರು ರಾಜಮಹೇಂದ್ರಿ ಜೇಲಿನಲ್ಲಿ ಅನ್ನತ್ಯಾಗದ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ತಾ. ೧೩ನೆಯ ದಿವಸದ ವರೆಗೆ ೩೮ ದಿವಸಗಳಿಂದ ಅವರು ಅನ್ನವನ್ನು ಸೇವಿಸಿಲ್ಲವೆಂದು ಪ್ರಕಟವಾಗಿದೆ.

ಮುಂಬೈಯಲ್ಲಿ “ಬಾಬುಗೇನು” ದಿನವನ್ನಾಚರಿಸಲು ತಾ. ೧೨ನೆಯ ದಿವಸ ಪ್ರಯತ್ನಿಸಿದ ಅಪರಾಧಕ್ಕಾಗಿ ೩೮ ಜನರನ್ನು ಪೋಲೀಸರು ಹಿಡಿದಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆದ ರೇಲ್ವೆ ಕೆಲಸಗಾರರ ಮುಷ್ಕರವು ಹುಬ್ಬಳ್ಳಿ ವ್ಯಾಪಾರಕ್ಕೆ ಪ್ರತಿಬಂಧವನ್ನುಂಟುಮಾಡಿರುವುದರಿಂದ ರೇಲ್ವೆ ಕಂಪನಿಯವರು ಜಾಗ್ರತೆ ಈ ಮುಷ್ಕರವನ್ನು ನಿಲ್ಲಿಸುವಂತೆ ಪ್ರಯತ್ನಿಸಬೇಕಾಗಿ ಹುಬ್ಬಳ್ಳಿ ಮುನಸಿಪಾಲಿಟಿಯು ರೇಲ್ವೆ ಕಂಪನಿಗೆ ತಿಳಿಸಬೇಕೆಂದು ಮುನಸಿಪಾಲಿಟಿಯ ಕೆಲವು ಮೆಂಬರರು ಮುನಸಿಪಾಲಿಟಿಯ ಸಭೆ ಕೂಡಿಸಲು ಅಧ್ಯಕ್ಷರಿಗೆ ತಿಳಿಸಿದ್ದಾರೆ.

ಮಹಾತ್ಮಾಜಿಯವರ ಅಪೇಕ್ಷೆಯ ಪ್ರಕಾರ ಪಂಡಿತ ಮಾಲವೀಜಿಯವರು ಹಿಂದು ವಿಶ್ವವಿದ್ಯಾಲಯದ ಪ್ರಿನ್ಸಿಪಾಲ ಧೃವ ಎಂಬುವವರನ್ನು ಗುರುವಾಯೂರ ಕಡೆಗೆ ಅಸ್ಪೃಶ್ಯತಾನಿವಾರಣೆಯ ಪ್ರಯತ್ನಕ್ಕಾಗಿ ಕಳುಹಿಸುವವರಿದ್ದಾರೆ. ಪ್ರಿ. ಧೃವ ಇವರೊಂದಿಗೆ ಶ್ರೀ. ಭಗವಾನದಾಸರು ಮಹಾಮಹೋಪಾಧ್ಯಾಯ ಪ್ರಮಥನಾಥ ಭಟ್ಟಾಚಾರ್ಯರವರೂ ಹೊರಡುತ್ತಾರೆ. ಇವರೆಲ್ಲರೂ ತಾ. ೨೩ನೆಯ ದಿವಸ ಗಾಂಧೀಜಿಯವರನ್ನು ಕಂಡು ಗುರುವಾಯೂರಿಗೆ ಹೊರಡುವರು.

ಪಂಡಿತ ಮಾಲವೀಜಿಯವರು ಸರ್ವಪಕ್ಷೀಯ ಪರಿಷತ್ತು ಮುಗಿದ ಮೇಲೆ ಗಾಂಧೀಜಿಯವರನ್ನು ಕಂಡು ಗುರುವಾಯೂರ ಕಡೆ ಹೊರಡುವರು.

ಸಣಸರ ಎಂಬ ಗ್ರಾಮದಲ್ಲಿ ೧೫ ವರ್ಷಗಳ ಬಾಪು ಎಂಬ ಹುಡುಗನು ೧೦-೧೨ ವರ್ಷಗಳ ಗಂಗೂ ಎಂಬ ಹುಡುಗಿಯ ಮೇಲೆ ಬಲಾತ್ಕಾರ ಮಾಡಿದನೆಂಬ ಅಪರಾಧಕ್ಕೋಸ್ಕರ ವ್ಯಾಜ್ಯ ನಡೆದು ಶೆಶೆನ್ಸ್ ಕಮಿಟಾಗಿ ಅಲ್ಲಿ ಪಂಚರು ಭಿನ್ನಾಭಿಪ್ರಾಯಪಟ್ಟದ್ದರಿಂದ ಹೈಕೋರ್ಟಿಗೆ ಹೋಗಿದೆ.

ಅಫಗಾಣಿಸ್ಥಾನ ಸರಕಾರದ ವಿರುದ್ಧವಾಗಿ ಚಟುವಟಿಕೆಗಳನ್ನು ನಡೆಸಿದ ಅಪರಾಧಕ್ಕಾಗಿ ಇಬ್ಬರು ಶೀಖರನ್ನು ಕಾಬೂಲದಲ್ಲಿ ಹಿಡಿದಿದ್ದಾರೆ.

ಬನಾರಸ ಹಿಂದು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅಧ್ಯಾಪಕರು ಮತ್ತು ಇತರರು ಸೇರಿ ೨೩೫೪ ಜನಗಳು ರುಜುಹಾಕಿ ಗುರುವಾಯೂರ ದೇವಾಲಯದಲ್ಲಿ ಆದಿಜನರು ಪ್ರವೇಶಿಸಲು ಅವಕಾಶ ಕೊಡಬೇಕೆಂದು ಝಾಮೊರಿನ್‌ರವರಿಗೆ ತಿಳಿಸಿದ್ದಾರೆ.

ಶ್ರಿ. ವಾಸುದೇವರಾವ ಪಾಕ್ಷೆ ಮುಂಬೈ ಇವರು ಬಹು ಶ್ರಮವಹಿಸಿ ಸ್ವದೇಶೀ ಕ್ಯಾಮರಾ (ಫೋಟೋ ತೆಗೆಯುವದು) ಸಿದ್ಧಗೊಳಿಸಿದ್ದಾರೆ.

ಅಮೇರಿಕೆಯಲ್ಲಿ ಒಂದು ಜೇಡ ಹುಳವು ತನ್ನ ಬಲೆಯಲ್ಲಿ ಸಿಕ್ಕ ಸಾಧಾರಣ ಒಂದು ಫೂಟು ಉದ್ದವಾಗಿದ್ದ ಹಾವನ್ನು ಹೊರಗೆ ಬಿಡದೆ ಆಗಾಗ್ಗೆ ತನ್ನ ಬಲೆಯಿಂದ ಅದರ ಕುತ್ತಿಗೆಯನ್ನು ಸುತ್ತಿ ಕೊನೆಗೆ ಆ ಹಾವು ಆಹಾರವಿಲ್ಲದೆ ಸಾಯುವಂತೆ ಮಾಡಿತು. ಇದನ್ನು ನೋಡಲಿಕ್ಕೆ ಬಹುಜನರು ಹೋಗಿದ್ದರು. ಆ ಜೇಡವು ಹಾವನ್ನು ಕೊಂದ ಈ ವಿಚಿತ್ರ ಸಾಹಸದ ಚಿತ್ರವು ಕೂಡಾ ಆ ದೇಶದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಚಿಕ್ಕೋಡಿಯಲ್ಲಿ ಬರುವ ಜನವರಿ ಕೊನೆಗೆ ಒಕ್ಕಲತನದ ಪ್ರದರ್ಶನ ಕೂಡುವುದು. ಅದರ ಉಪಯೋಗವನ್ನು ಸಕಲರೂ ಅಗತ್ಯವಾಗಿ ಹೊಂದಬೇಕು.

ಚೀನದೇಶದಲ್ಲಿಯೇ ಮೊದಲು ಮುದ್ರಣ ಕಲೆಯುಂಟಾಯಿತು. ಕ್ರಿ. ಶ. ೮೬೮ ನೆಯ ಸಂವತ್ಸರದಲ್ಲಿ ಚೀನಿ ಭಾಷೆಯಲ್ಲಿ ಅಚ್ಚಾದ ಮೊದಲನೆಯ ಗ್ರಂಥವೆಂದರೆ ಹೀರಕಸೂತ್ರ ಎಂಬುವುದು.

ಜಾತಿಯ ವಾದ ವಿಮರ್ಶೆ.

—(೧೬ ನೆಯ ಸಂಚಿಕೆಯಿಂದ ಮುಂದುವರಿದುದು.)—

ಪ್ರಶ್ನೆ—ಈ ದೇಶದಲ್ಲಿರುವ ಕ್ರೈಸ್ತರಲ್ಲಿಯೂ ಮುಸಲ್ಮಾನರಲ್ಲಿಯೂ ಬೇರೆಬೇರೆ ಜಾತಿಗಳಿಲ್ಲವೇ? ಬ್ರಾಹ್ಮಣಕ್ಷತ್ರಿಯನ್ನರೆಂದು ಅವರಲ್ಲಿಯೇ ಬೇರೆ ಒಂದು ವರ್ಣವಿಲ್ಲವೇ?

ಉತ್ತರ— ಹಿಂದುಗಳಲ್ಲಿಯ ಯಾವಯಾವ ವರ್ಣದವರು ಕ್ರಿಸ್ತರಾಗಿದ್ದಾರೆಯೋ ಅವರಲ್ಲನೇಕರು ತಮ್ಮ ಮೊದಲಿನ ವರ್ಣವನ್ನೇ ಹೇಳುವುದುಂಟು. ಹೀಗೆ ವರ್ಣಗಳನ್ನು ಆ ಧರ್ಮದಲ್ಲೇನೂ ನಿರ್ಮಿಸಿಲ್ಲ, ಹಿಂದುಸ್ಥಾನದ ಹೊರಗೆ ಇನ್ನಾವ ದೇಶದಲ್ಲ ಈ ಪ್ರಕಾರ ವರ್ಣಗಳನ್ನು ಯಾವ ಧರ್ಮದವರೂ ಹೇಳುವುದಿಲ್ಲ. ಹಿಂದು ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಬೆಳೆದು ಬೇರೂರಿದ ಈ ವರ್ಣಗಳ ದುಷ್ಟ ಕಲ್ಪನೆಯು ಬೇರೆ ಧರ್ಮದಲ್ಲಿ ಸೇರಿದರೂ ಅವರ ಬುದ್ಧಿಯಿಂದ ಬಿಡುಗಡೆಯಾಗಿಲ್ಲ,

ಪ್ರಶ್ನೆ—ಈ ಜಾತಿಯ ಕೊಳೆಯನ್ನು ತೊಳೆಯಲು ಹಿಂದುಸ್ಥಾನದಲ್ಲಿ ಯಾವಯಾವ ಮಹಾತ್ಮರು ಪ್ರಯತ್ನಿಸಿದರು?

ಉತ್ತರ—ಬುದ್ಧ ಭಗವಾನನೇ ಮೊದಲನೆಯ ಮಹಾತ್ಮನು. ಆತನ ನಂತರ ಮತ್ತೆ ವರ್ಣಾಶ್ರಮಗಳ ವಿಷಬೀಜಗಳನ್ನು ಬಿತ್ತಿ ಅನಂತ ಮತಗಳನ್ನುಂಟುಮಾಡಿದರು. ಆ ಮೇಲೆ ಶ್ರೀರಾಮಾನುಜಾಚಾರ್ಯರು ಜಾತಿಯ ಘಾತಕಪದ್ಧತಿಯನ್ನು ನಿವಾರಣೆ ಮಾಡಲು ಪ್ರಯತ್ನಿಸಿದರು.

ಗುಣಕರ್ಮಗಳಿಂದ ಯಾರು ಶ್ರೇಷ್ಠರೋ ಅವರೇ ಶ್ರೇಷ್ಠವರ್ಣದವರೆಂಬ ಪ್ರಾಚೀನ ವೈದಿಕ ಪದ್ಧತಿಯನ್ನು ಪ್ರಾರಂಭಿಸಿ ...ದುವಲ್ಲಿ ಎಂಬಲ್ಲಿ ಒಬ್ಬ ಚಾಂಡಾಳ ಸ್ತ್ರೀಯಳು ಮಹಾಭಗವದ್ಭಕ್ತೆ ಇದ್ದುದನ್ನು ನೋಡಿ ನೀನು ನನಗಿಂತ ಪವಿತ್ರಳಿರುವಿಯೆಂದು ಹೇಳಿ ಅವಳಿಗೆ ತಮ್ಮ ಮತ ದೀಕ್ಷೆಯನ್ನು ಮಾಡಿದರು. ಇಷ್ಟೇ ಅಲ್ಲ ಅವಳ ಮೂರ್ತಿಯನ್ನು ಮಾಡಿ ಅಲ್ಲಿಯ ದೇವಾಲಯದಲ್ಲಿ ಸ್ಥಾಪಿಸಿದರು.

ಆ ಮೂರ್ತಿಯ ಪೂಜೆಯು ಈಗಲೂ ನಡೆಯುತ್ತಲಿದೆ. ಉರಯೂರು ಎಂಬಲ್ಲಿ ಧನುರ್ದಾಸನೆಂಬ ಶೂದ್ರನನ್ನು ಆತನ ಸ್ತ್ರೀ ಸಮೇತ ದೀಕ್ಷೆ ಮಾಡಿ ಆಚಾರ್ಯರು ತಮ್ಮ ಶ್ರೀ ವೈಷ್ಣವ ಮತದಲ್ಲಿ ತೆಗೆದುಕೊಂಡರು. ಆಚಾರ್ಯರು ಸ್ನಾನಕ್ಕೆ ಹೋಗುವಾಗ ದಾಶರಥಿ ಎಂಬ ಬ್ರಾಹ್ಮಣ ಶಿಷ್ಯನ ಹೆಗಲಮೇಲೆ ಕೈಹಾಕಿಕೊಂಡು ಹೋಗುತ್ತಿದ್ದರು. ಸ್ನಾನಮಾಡಿ ಬರುವಾಗ ಧನುರ್ದಾಸನ ಹೆಗಲಮೇಲೆ ಕೈಹಾಕಿಕೊಂಡುಬರುತ್ತಿದ್ದರು.

ಇದನ್ನು ನೋಡಿ ಬ್ರಾಹ್ಮಣರು ಆಚಾರ್ಯರಿಗೆ ನೀವು ಶೂದ್ರನನ್ನು ಮುಟ್ಟುವಿರಾ? ಎಂದು ಕೇಳಲು ವಿದ್ಯೆಜಾತಿ ಧನಗಳ ಮದದ್ದವರು ಮೂರ್ಖರು. ಸುಜ್ಞರು ಇವುಗಳ ಅಹಂಕಾರವುಳ್ಳವರಿರುವುದಿಲ್ಲ. ಈ ಧನುರ್ದಾಸನು ಬ್ರಾಹ್ಮಣರಾದ ನಿಮಗಿಂತ ಶ್ರೇಷ್ಠನಾಗಿರುವದರಿಂದ ಸ್ನಾನಮಾಡಿದಮೇಲೆಯೂ ಆತನನ್ನು ನಾನು ಮುಟ್ಟುತ್ತೇನೆಂದು ಹೇಳಿದರು.

ಈ ಪ್ರಕಾರ ರಾಮಾನುಜಾಚಾರ್ಯರು ಜನ್ಮವಿಶಿಷ್ಟವಾದ ಜಾತಿಯ ಮದವನ್ನು ಕಳೆಯಲು ಎಷ್ಟೋ ಪ್ರಯತ್ನಿಸಿದರು.

ಪ್ರಶ್ನೆ— ಇವರ ತರುವಾಯ ಜಾತಿಯ ವಿಷಬೀಜವನ್ನು ತೆಗೆಯಲು ಪ್ರಯತ್ನಿಸಿದವರಾರು?

ಉತ್ತರ—ಮಹಾನುಭಾವನಾದ ಬಸವೇಶನು. ಈ ಮಹಾತ್ಮನು ರಾಮಾನುಜಾಚಾರ್ಯರಿಗಿಂತಲೂ ಹೆಚ್ಚಾಗಿ ಜಾತಿಯ ಘಾತಕ ಪದ್ಧತಿಯನ್ನು ನಿವಾರಣೆ ಮಾಡಿದನು. ಶಿವಭಕ್ತಿ ಸದಾಚಾರಗಳುಳ್ಳ ಲಕ್ಷಾಂತರ ಪವಿತ್ರಾತ್ಮರು ಬಸವ ಮಹಾತ್ಮನ ಅದ್ಭುತ ಧರ್ಮಕ್ರಾಂತಿಯಿಂದ ಕರ್ನಾಟಕದಲ್ಲಿ ಪ್ರಕಾಶಿಸಿದರು. ಶಿವನಾಗಮಯ್ಯ, ಹರಳಯ್ಯ, ಕಕ್ಕಯ್ಯ, ಚಿಕ್ಕಯ್ಯ, ಚನ್ನಯ್ಯ ಕಿನ್ನರಿಯ ಬ್ರಹ್ಮಯ್ಯ ಮೊದಲಾದ ಪರಮಪೂಜ್ಯ ವಿಭೂತಿಗಳು ಆ ಬಸವಮಹಾನುಭಾವನ ಕಾಲದಲ್ಲಿಯೇ ಪ್ರಸಿದ್ಧಿಗೆ ಬಂದರು,

ವರ್ಣಗಳು ಅನಾವಶ್ಯಕವೆಂತಲೂ ಜಾತಿಯ ಭ್ರಮೆಯನ್ನು ಬಿಟ್ಟವಿನಾ ಶಿವಭಕ್ತಿಯ ಬೆಳಕು ತೋರುವುದಿಲ್ಲವೆಂತಲೂ ಆ ಬಸವ ಮಹಾನುಭಾವನು ಸಾರಿಸಾರಿ ಹೇಳಿ ಅದರಂತೆಯೇ ತಾನು ಆಚರಿಸಿ ಲೋಕಕ್ಕೆ ದಿವ್ಯಮಾರ್ಗವನ್ನು ತೋರಿಸಿದನು.

ಪ್ರಶ್ನೆ—ಅನಂತರ ಪ್ರಯತ್ನಿಸಿದವರಾರು ?

ಉತ್ತರ—ರಾಮಾನಂದ, ಕಬೀರ, ಚೈತನ್ಯ ಗುರುನಾನಕ ಮೊದಲಾದ ಅನೇಕ ಮಹಾತ್ಮರು ಜಾತಿಯ ದುರಭಿಮಾನವನ್ನು ಕಳೆಯಲು ಪ್ರಯತ್ನಿಸಿದರು.

ಪ್ರಶ್ನೆ—ಹೀಗೆ ಈ ವರೆಗೆ ಅನೇಕರು ಪ್ರಯತ್ನಿಸಿದ್ದರೂ ಇನ್ನೂ ಜನ್ಮದಿಂದಲೇ ಜಾತಿಯನ್ನು ಹೇಳುವುದುಂಟಲ್ಲವೇ? ಎಂದಮೇಲೆ ಇದು ಹಿಂದು ಧರ್ಮದಿಂದ ಅಳಿದು ಹೋಗುವುದಿಲ್ಲವೆಂದು ಸಿದ್ಧವಾಗುವುದಿಲ್ಲವೇ ?

ಉತ್ತರ—ಈಗಲೂ ಜನ್ಮದಿಂದಲೇ ಜಾತಿಯನ್ನು ಎಣಿಸುವವರು ಬಹು ಜನರಿರುವುದೇನೋ ನಿಜ. ಆದರೆ ಮೊದಲಿನಷ್ಟು ಜಾತಿಯ ಕಲ್ಪನೆಯು ಈಗ ಜನಾಂಗದಲ್ಲುಳಿದಿಲ್ಲ. ದಿನೇ ದಿನೇ ಲೋಪವಾಗುತ್ತಾ ನಡೆದಿದೆ. ಗುಣಕರ್ಮಗಳಿಗೇನೇ ಪ್ರಾಮುಖ್ಯತೆಯನ್ನು ಕೊಡುವ ಸತ್ಯಯುಗದ ಸೂರ್ಯೋದಯವಾಗಹತ್ತಿದೆ.

(ಸಶೇಷ.)

ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು ೨. ಕನ್ಯೆಯ ವಯಸ್ಸು ೧೪ ಅಥವಾ ೧೫ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ವಿಶೇಷ ಶಿಕ್ಷಣ ಪಡೆಯದಿದ್ದರೂ ಚಿಂತೆಯಿಲ್ಲ. ಶರಣರ ವಚನಗಳನ್ನು ಸ್ವಲ್ಪವಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೮ ವಿದ್ಯಾವಂತನು, ನಿರಭ್ಯಸನು, ದಿಕ್ಸಾಬಳಿಕೆ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ಪಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು. ಶಕ್ಯವಿದ್ದರೆ ಕನ್ಯೆಯ ಫೋಟೊ ಕಳಿಸಬೇಕು.

ಪತ್ತೆ—**ಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲಸ್ಕೂಲ್**
ಪೋ. ನಾರಾಯಣಪೇಟ· ನಿಜಾಂ ಸಂಸ್ಥಾನ

ವ್ಯಾಪಾರ ಶಿಕ್ಷಕ.

ಈ ಪುಸ್ತಕವು ಅಚ್ಚಾಗುತ್ತಲಿದೆ. ಸಂಪೂರ್ಣವಾದನಂತರ ಶರಣ ಸಂದೇಶ ಪತ್ರಿಕೆಗೆ ಈ ವರುಷ ಚಂದಾದಾರರಾಗಿರುವವರಿಗೆಲ್ಲರಿಗೂ ತಪ್ಪದೇ ಕಳುಹಿಸಲಾಗುವುದು. ಬೇರೆಯವರಿಗೆ ಈ ಪುಸ್ತಕವನ್ನು ವಿಕ್ರಯಿಸುವುದಿಲ್ಲ, ಆದಕಾರಣ ಬೇರೆಯವರಾಗಲಿ ಅಥವಾ ಚಂದಾದಾರರಾಗಲಿ ಪುಸ್ತಕವನ್ನು ಕಳುಹಿಸಲು ವೃಥಾ ಪತ್ರಗಳನ್ನು ಬರೆಯಬಾರದಾಗಿ ಪ್ರಾರ್ಥನೆ.

ಮ್ಯಾನೇಜರ್,
ಶರಣ ಸಂದೇ

ಹರಿಜನ ಶಬ್ದ ನಿಷೇಧ ಸಭೆಯು.

ಅಧ್ಯಕ್ಷ ಪಂಡಿತ ಗುರುಬಸವ ಶಿವಾಚಾರ್ಯ ಸ್ವಾಮಿಗಳವರ ಭಾಷಣ— ನಿಮ್ಮ ಅಸ್ಪೃಶ್ಯ ಪ್ರಭೇದಗಳ ಪ್ರವರ ಪುರುಷರಾದ ಭಲದಂಕ, ಚನ್ನಯ್ಯ, ಹರಳಯ್ಯ, ಕಕ್ಕಯ್ಯ, ಸ್ವಪಚಯ್ಯ, ವೀರಮುಷ್ಟಿ ಮೊದಲಾದವರು ಪರಶಿವ ಭಕ್ತರಾಗಿಯೂ, ಭಸ್ಮರುದ್ರಾಕ್ಷಿ ಶಿವಲಿಂಗಧಾರಿಗಳಾಗಿಯೂ, ಗುರುಜಂಗಮ ಕಿಂಕರರಾಗಿಯೂ, ವೀರವ್ರತನಿಷ್ಠರಾಗಿಯೂ ಇದ್ದರೆಂಬುದು ಸಂಸ್ಕೃತ, ಆಂಧ್ರ, ಕರ್ಣಾಟಕ, ಮಹಾರಾಷ್ಟ್ರ ಪುರಾಣಗಳಲ್ಲಿ ಹೇಳುವ ಅವರ ಚರಿತ್ರೆಗಳ ಮೇಲಿಂದಲೂ ಮತ್ತು ಆಧುನಿಕರಾದ ನೀವಾದರೂ ಅದರಂತೆ ಬುನಾದಿಯಿಂದಲೂ ವೀರಶೈವ ಮಠಗಳಿಗೆ ಶಿಷ್ಯರಾಗಿಯೂ ನಿಮ್ಮ ಹವ್ಯ, ಕವ್ಯ, ಆಚಾರ, ವಿಚಾರ, ಪ್ರಾಯಶ್ಚಿತ್ತಾದಿಗಳಲ್ಲಿ ವೀರಮಾಹೇಶ್ವರರ ಪ್ರಸಾದಿಗಳಿಂದಲೇ ಪುನೀತರಾಗುತ್ತಿರುವದು ಲೋಕ ಪ್ರಸಿದ್ಧವಾಗಿರುತ್ತದೆ. ಹೀಗಿದ್ದು ಈಗಿನ ಕೆಲ ಜನರು ಕಾಂಗ್ರೆಸ್ಸಿನ ನೆವದಿಂದ ತಮ್ಮುದ್ದೇಶವನ್ನು ಸಾಧಿಸಿಕೊಳ್ಳುವುದಕ್ಕೋಸ್ಕರ ನಿಮ್ಮನ್ನು ಗುಡಿಯಲ್ಲಿ ಹೊಗಿಸುತ್ತೇವೆ. ಗುಡ್ಡವನ್ನು ಹತ್ತಿಸುತ್ತೇವೆ. ನಿಮ್ಮ ಕೂಡ ಉಣ್ಣುತ್ತೇವೆ. ಕುಲದೊಳಗೆ ಕೂಡುತ್ತೇವೆಂದು ಬಣ್ಣದಮಾತುಗಳನ್ನಾಡಿ ಗದ್ದಲದಲ್ಲಿ ಗಾಣ ಮಣಿಯನ್ನುವಂತೆ ತಮ್ಮ ಬಯಕೆಯನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಕೆಲವು ವಾರಗಳಿಂದೀಚೆಗೆ ನಿಮಗೆ ಹರಿಜನರೆಂದು ವೃತ್ತಪತ್ರಿಕೆಗಳಲ್ಲಿ ಬರಿಯಹತ್ತಿರುವರು. ಇದರಿಂದ ನಿಮಗೆ ಕಳವಳವುಂಟಾಗಿದ್ದೇನೋ ನ್ಯಾಯವಾದದ್ದೇ ಸರಿ. ಈಗ ಮುಂದರಿದವರು ಹಿಂದುಳಿದವರನ್ನು ಮೇಲಕ್ಕೆತ್ತುವರೆಂಬುವದಕ್ಕೆ ರಾ. ಬ. ಒಡೆಯರವರ ಮೇಲೆ ತಂದಿರುವ ಬನವಾಸೀ ಗುಡಿಯ ಅಭಿಯೋಗವೇ ಸಾಕ್ಷಿಯಾಗಿರುವದು. ಹಡೆದ ತಾಯಿಗೆ ಇಲ್ಲದ ಮರುಕವು ಮಲತಾಯಿಗೆ ಬರುವುದೇ? ಅಶಾಸ್ತ್ರೀಯವಾದ ಹರಿಜನ ಶಬ್ದಪ್ರಯೋಗವನ್ನು ಈ ಸಭೆಯ ಮೂಲಕ ನಿಷೇಧಿಸತಕ್ಕದ್ದು ಯುಕ್ತವಾಗಿದೆ. ಮಹಾತ್ಮಾ ಗಾಂಧಿಯವರ ಅಭಿಪ್ರಾಯವಾದರೂ ಹೀಗಿರಲಾರದು. ಆದರೂ ಅವರನ್ನು ಕೂಡಾ ಈ ಸಭೆಯ ಮೂಲಕ ಕೇಳತಕ್ಕದ್ದೆಂದು ಗಂಭೀರವಾಗಿ ಭಾಷಣವನ್ನು ಮಾಡಿದರು.

ಸರ್ವಾನು ಮತದಿಂದ ಪಾಸಾದ ಠರಾವುಗಳು—

೧. ಅಸ್ಪೃಶ್ಯರು ಹರಿಜನರೆಂಬುದನ್ನು ಈ ಸಭೆಯು ನಿಷೇಧಿಸುತ್ತದೆ.

೨. ಅಸ್ಪೃಶ್ಯರಿಗೆ ಹರಿಜನ ಶಬ್ದವನ್ನು ಪ್ರಯೋಗಿಸಿದ್ದಕ್ಕಾಗಿ ಮಹಾತ್ಮಾ ಗಾಂಧಿಯವರಿಗೆ ಪತ್ರವನ್ನು ಬರೆಯಬೇಕು.

೩. ಇನ್ನೊಂದು ತಿಂಗಳೊಳಗಾಗಿ ಚನ್ನ ಪಂಚಮರ ದೊಡ್ಡ ಸಭೆಯನ್ನು ಇದೇ ಸಂಸ್ಥಾನದಲ್ಲಿ ನಡಿಸತಕ್ಕದ್ದು.

ಶ್ರೀಯುತ ಮಹಾತ್ಮಾ ಗಾಂಧಿಯವರಿಗೆ.

ತಾವು ಕೆಲವು ದಿನಗಳಿಂದೀಚೆಗೆ ವೃತ್ತಪತ್ರಿಕೆಗಳಲ್ಲಿ ಕಟ್ಟಾಶೈವರಾಗಿಯೂ ನಮ್ಮ ವೀರಶೈವ ಮತದಶಿಷ್ಯಕೋಟಿಗೆ ಸೇರಿದವರಾಗಿಯೂ ಇರುವ ಅಸ್ಪೃಶ್ಯರಿಗೆ ಹರಿಜನರೆಂಬ ಶಬ್ದವನ್ನು ನೂತನವಾಗಿ ಪ್ರಯೋಗಿಸುವುದರಿಂದ ಅವರಿಗು ಮತ್ತು ನಮಗು ಮನಃಖೇದವುಂಟಾಗಿರುತ್ತದೆ. ಈ ಬಗ್ಗೆ ತಾ. ೨೭ ರಲ್ಲಿ ನಮ್ಮ ಮಠದಲ್ಲಿ ಎಲ್ಲಾ ಶಾಖೆಯ ಅಸ್ಪೃಶ್ಯರು ಸೇರಿ ಸಭಾ ಮೂಲಕ ನಿಷೇಧವನ್ನು ಪ್ರದರ್ಶಿಸಿರುತ್ತಾರೆ. ಈ ರೀತಿ ಮತಗಳನ್ನು ವಿನಿಮಯ ಮಾಡಲಿಕ್ಕೆ ಕಾರಣವೇನೆಂಬುದನ್ನು ತಿಳಿಸಲಿಕ್ಕೆ ಅಪೇಕ್ಷಿಸುತ್ತೇವೆ.

ಪಂಡಿತ ಗುರುಬಸವ ಭಿಕ್ಷಾವರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಅಸ್ಪೃಶ್ಯರ ಸಭಾಧ್ಯಕ್ಷರು ಮತ್ತು ಗುರುಗಳು,

ಸಂಸ್ಥಾನ ಕ್ಯಾಸನೂರು,.

ಸೊರಬ ತಾ. ಶಿವಮೊಗ್ಗಾ ಡಿ.

ಮೈಸೂರುಸ್ಟೇಟ್.

ಕರ್ನಾಟಕ ವಿಭಾಗ ಸಹಕಾರಿಪರಿಷತ್ತು.

೧೯೩೩ನೇ ಇಸವಿ ಜಾನೇವಾರಿ ತಿಂಗಳ ತಾ. ೬-೭ ರಲ್ಲಿ ಕರ್ನಾಟಕ ವಿಭಾಗ ಸಹಕಾರಿ ಪರಿಷತ್ತು ರಾ. ಬ. ಕೆ. ಬಿ. ಭದ್ರಾಪೂರ, ಕಲೈಕರ ಅಹಮ್ಮದ ನಗರ ಇವರ ಅಧ್ಯಕ್ಷತೆಯ ಕೆಳಗೆ ಜರುಗುವುದು. ಅಧಿವೇಶನದಾರಂಭ ಸಮಾರಂಭವು, ವಿದ್ಯಾಶೇತಕಿ, ಸಹಕಾರ ಮೊದಲಾದ ಖಾತೆಗಳ ಮಂತ್ರಿಗಳಾದ ನಾ. ದಿವಾನಬಹದ್ದೂರ ಕಂಬಳಿಯವರಿಂದ ನೆರವೇರುವದು. ಈ ಪರಿಷತ್ತಿನಲ್ಲಿ ಸಂಪಾದಿಸಬೇಕಾದ ಸಂಪೂರ್ಣ ಯಶಸ್ಸು ಸರ್ವಸಹಕಾರಿಗಳ ಸಹಾಯವನ್ನವಲಂಬಿಸಿದೆಯಾದ್ದರಿಂದ, ದೊಡ್ಡದೊಡ್ಡ ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು ಪರಿಷತ್ತಿಗೆ ತಗಲತಕ್ಕ ಖರ್ಚಿನ ಸಲುವಾಗಿ ತಮಗೆ ಇಷ್ಟವೆನಿಸುವ ಧನಸಹಾಯವನ್ನು ಮಾಡಬೇಕಾಗಿ ವಿನಂತಿ. ಪರಿಷತ್ತಿನಲ್ಲಿ ಚರ್ಚಿಸಲಿರುವ ಉಪಯುಕ್ತವಾದ ಸೂಚನೆಗಳೇನಾದರೂ ಇದ್ದರೆ ತಿಳುಹಿಸಬೇಕಾಗಿಯೂ, ಕರ್ನಾಟಕದೊಳಗಿನ ಪ್ರತಿಯೊಂದು ಸಂಘದಿಂದ ಓರ್ವ ಪ್ರತಿನಿಧಿಯು ಹಾಜರಿದ್ದು, ಪರಿಷತ್ತಿಗೆ ಶೋಭೆಯನ್ನೂ ನಮಗೆ ಸುಯಶವನ್ನೂ ಉಂಟುಮಾಡಬೇಕೆಂದೂ ಕೋರುವ.

ತಮ್ಮ ವಿಧೇಯ,

Sd/. **ಎಮ್. ಪಿ. ನಾಡಗೌಡಾ.**

ಬಿ. ಎ. ಎಲ್. ಎಲ್. ಬಿ.

ಇನ್‌ಸ್ಟಿಟ್ಯೂಟ, ಬಾಗಲಕೋಟ

—ಹುನಗುಂದದಲ್ಲಿ ಶ್ರೀ ಸಂಗಪ್ಪ ಪಾಟೀಲ ಮುದ್ದೇಬಿಹಾಳ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಗುರುವಾಯೂರ ದೇವಾಲಯದಲ್ಲಿ ಆದಿಜನರ ಪ್ರವೇಶಕ್ಕೆ ಅವಕಾಶ ದೊರೆಯಬೇಕೆಂದು ತೀರ್ಮಾನವಾಗಿ ಝಾಮೊರಿನ್‌ರವರ ಕಡೆಗೆ ತಿಳಿಸಿದ್ದಾಯಿತು.

—ಮೈಸೂರು ಸೀಮೆಯ ನಂಜನಗೂಡದಲ್ಲಿ ಆದಿಜನರು ಶ್ರೀ ಕಂಠೇಶ್ವರ ದೇವಾಲಯದ ಬಾಗಿಲಲ್ಲಿ ದೇವರ ಪೂಜೆಯನ್ನು ಮಾಡಬೇಕೆಂದು ಹೊರಟರು ಕೂಡಾ ಸನಾತನಿ ಕರ್ಮಠರು ಅವರಿಗೆ ಕಲ್ಲುಗಳಿಂದಲೂ ಶಗಣೆಯಿಂದಲೂ ಹೊಡೆದು ತಮ್ಮ ಪರಾಕ್ರಮವನ್ನು ತೋರಿಸಿದರೆಂತಲೂ ಕೊನೆಗೆ ಪೋಲೀಸರ ಸಹಾಯದಿಂದ ಆದಿಜನರು ಪಾರಾಗಿ ಬರಬೇಕಾಯಿತೆಂತಲೂ ಪ್ರಕಟವಾಗಿದೆ.

—ರಾ. ರುದ್ರಪ್ಪ ಬಸಪ್ಪ ಚಲವಾದಿ ವಿಜಾಪುರ ಸಾಕೀನ ನಿಡಗುಂದಿ ಡಿ. ಎಲ್. ಬಿ. ಮೆಂಬರ್ ಇವರು ನಮ್ಮ ಅಸ್ಪೃಶ್ಯ ಜನರ ಹಿತಕ್ಕಾಗಿ ಕರ್ನಾಟಕದಲ್ಲಿ ಬಹಳ ಶ್ರಮ ಪಡುತ್ತಾರೆ. ಈ ವರ್ಷವೂ ಇವರನ್ನೇ ಆರಿಸಿಕೊಟ್ಟು ಅಸ್ಪೃಶ್ಯ ಜನರ ಉದ್ಧಾರ ಮಾಡಬೇಕಾಗಿ ಅಪೇಕ್ಷಿಸುತ್ತೇನೆ. **ಅಸ್ಪೃಶ್ಯ ಬಂಧು.**

ಶಿವಶರಣರ ದಿವ್ಯವಾಣಿ.

ಮಹಾನುಭಾವರಾದ ಬಸವಣ್ಣನವರು ಈ ಭರತಖಂಡದಲ್ಲಿ ಈ ವರೆಗೆ ಅವತರಿಸಿರುವ ಸಮಾಜಸಂಸ್ಕರಣೆಯ ಮಹಾಪುರುಷರಲ್ಲಿ ಅಗ್ರಗಣ್ಯರು. ಮನುಷ್ಯನು ಪ್ರಾಣಿಕೋಟಿಯಲ್ಲಿ ಶ್ರೇಷ್ಠನೆಂಬುದನ್ನು ಅನೇಕರಂತೆ ಕೇವಲ ಇವರು ನುಡಿದವರಲ್ಲ. ತಾವು ಅದರಂತೆಯೇ ನಡೆದು ಅನ್ಯರೂ ನಡೆದು ಕೃತಾರ್ಥರಾಗುವಂತಹ ದಿವ್ಯತರವಾದ ವೀರಶೈವ ಮಾರ್ಗವನ್ನು ಉದ್ಧಾರ ಮಾಡಿದರು.

ಈಗ ಜಗದ್ವಂದ್ಯರಾದ ಮಹಾತ್ಮಾ ಗಾಂಧೀಜಿಯರು ಆದಿಜನರನ್ನು ಮುಟ್ಟಿಸಿಕೊಳ್ಳಲು ಹಿಂದುಗಳನ್ನು ಕರೆಯುತ್ತಿದ್ದಾರೆ. ಆದರೆ ಈಗ ೮೦೦ ವರ್ಷಗಳ ಹಿಂದೆ ಆ ಬಸವ ಮಹಾತ್ಮನು ಶಿವಭಕ್ತಿಯುತರಾದ ಆದಿಜನರನ್ನು ಗುರುವೆಂದು ತಿಳಿದು ಪೂಜಿಸಲು ಕರೆದನು! ಏಕೆಂದರೆ ಶಿವಭಕ್ತಿ ಶಿವಜ್ಞಾನ ಶಿವಾಚಾರಗಳು ಆ ಶಿವಶರಣರಲ್ಲಿ ಅಂತಹ ಶ್ರೇಷ್ಠ ಸ್ಥಿತಿಯಲ್ಲಿದ್ದವು. ಯಾರು ಅಂತಹ ಪರಮಪವಿತ್ರರೋ ಅವರು ಯಾವ ಕುಲಜಾತಿಯವರಾಗಿದ್ದರೂ ಪರಮಶ್ರೇಷ್ಠರೇ ಸರಿಯೆಂಬ ಗುಣೈಕಪಕ್ಷಪಾತದ ಸತ್ಯಮಾರ್ಗವನ್ನು ಜನಾಂಗಕ್ಕೆ ತನ್ನ ನಡೆನುಡಿಗಳಿಂದ ತೋರಿಸಿಕೊಟ್ಟನು. ಆದುದರಿಂದಲೇ ಅನೇಕ ಮಹಾಮಹಾ ಶಿವಶರಣರು ಕೆಸರಿನಲ್ಲುಂಟಾದ ಕಮಲದಂತೆ ಶಿಂಪಿಯಲ್ಲುಂಟಾದ ಮುತ್ತಿನಂತೆ ಶೋಭಿಸಲಾರಂಭಿಸಿದರು.

ಅಸ್ಪೃಶ್ಯತಾ ನಿವಾರಣೆಗಾಗಿ ಇಂತಹ ಮಹಾತ್ಮರು ಈ ನವನಾಗರಿಕ ಕಾಲದಲ್ಲಿ ಪ್ರಾಣವನ್ನೇ ಪಣಕಟ್ಟಬೇಕಾಗಿದೆಯಷ್ಟೆ? ಈಗ ಬ್ರಾಹ್ಮಣಾದಿ ವರ್ಣಗಳು ನಾಮಮಾತ್ರದಲ್ಲುಳಿದಿವೆಯೇ ವಿನಾ ಕ್ರಿಯೆಯಲ್ಲಿ ಅಳಿದುಹೋಗಿ ಎಷ್ಟೋ ಕಾಲವಾಗಿದೆ. ಹೆಚ್ಚಿನ ಕುಲಜಾತಿಗಳೆಂಬುವುಗಳೆಲ್ಲಾ ಬಹುಮಟ್ಟಿಗೆ ಜಹಾಕಾಶಿಗಳಲ್ಲಿ ತೇಲಿಹೋಗಿವೆ. ಇಂತಹ ಕಾಲದಲ್ಲಿಯೇ ಆದಿಜನರನ್ನು ಮುಟ್ಟಿದರೆ ಧರ್ಮಹೋಯಿತೆಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿರುವಾಗ ೮೦೦ ವರ್ಷಗಳ ಹಿಂದೆ ಮತಾಚಾರಗಳು ತುಂಬಾ ಬಳಕೆಯಲ್ಲಿರುವಾಗ, ಮುಸಲ್ಮಾನ್ ಮೊದಲಾದ ಅನ್ಯ ಧರ್ಮಗಳು ಸೋಂಕದಿರುವಾಗ ಆ ಬಸವ ಮಹಾತ್ಮನು ಆದಿಜನಗಳಲ್ಲಿ ಶಿವಭಕ್ತಿ ಸದಾಚಾರಶೀಲರಾಗಿದ್ದವರನ್ನು ಗುರುವೆಂದು ತಿಳಿದಾಚರಿಸಿ ಲಕ್ಷಾಂತರ ಜನರು ಅದರಂತೆಯೇ ಆಚರಿಸುವಂತೆ ಮಾಡಿದುದು ಎಷ್ಟು ಹೆಚ್ಚಿನದಾದುದೆಂಬುದನ್ನು ವಾಚಕರೇ ಊಹಿಸಬೇಕು.

ಆದುದರಿಂದಲೇ ಕಳೆದ ೮೦೦ ವರ್ಷಗಳಿಂದಲೂ ಆ ಬಸವ ಮಹಾತ್ಮನು ಶಿವನ ಅವತಾರವೆಂದೇ ಲಕ್ಷಾಂತರ ಜನರು ಭಾವಿಸಿ ಕೃತಾರ್ಥರಾಗುತ್ತಾ ಬಂದಿದ್ದಾರೆ. ಇನ್ನು ಮುಂದಾದರೂ ಆ ಮಹಾತ್ಮನ ದಿವ್ಯ ಶಕ್ತಿಯು ವಿಚಾರಪರರೂ ಸತ್ಯಪ್ರಿಯರೂ ಆದ ಜನಗಳಿಗೆ ತೋರದಿರಲಾರದು.

ಬಸವ ಮಹಾತ್ಮನು ಈ ಪ್ರಕಾರ ಹೇಳಿದ್ದಾನೆ. ಅಪ್ಪನು ನಮ್ಮ ಮಾದಾರ ಚೆನ್ನಯ್ಯ| ಬೊಪ್ಪನು ನಮ್ಮ ಡೋಹರ ಕಕ್ಕಯ್ಯ| ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯ| ಅಣ್ಣನು ನಮ್ಮ ಕಿನ್ನರಿಯ ಬೊಮ್ಮಯ್ಯ ಎನ್ನನೇತಕ್ಕರಿಯಿರಿ ಕೂಡಲ ಸಂಗಮದೇವ?

ಬಸವ ಮಹಾತ್ಮನು ತಾನು ವರ್ಣಗಳಲ್ಲಿ ಶ್ರೇಷ್ಠವಾದ ಬ್ರಾಹ್ಮಣ ವರ್ಣದಲ್ಲಿ ಜನ್ಮವೆತ್ತಿ, ಅದರಲ್ಲಿಯೂ ಮಾದರಸನೆಂಬ ಶ್ರೇಷ್ಠ ಸ್ಥಿತಿಯಲ್ಲಿರತಕ್ಕ ಕುಟುಂಬದವನಲ್ಲಿ ಜನ್ಮವೆತ್ತಿ ಮಹಾಪರಾಕ್ರಮಿಯಾದ ಬಿಜ್ಜಳ ರಾಜನಲ್ಲಿ ಮುಖ್ಯ ಮಂತ್ರಿತ್ವದ ಪರಮ ಶ್ರೇಷ್ಠ ಸ್ಥಾನದಲ್ಲಿದ್ದು ಈ ಪ್ರಕಾರ ಮಾದಾರ ಚೆನ್ನಯ್ಯ ಡೋಹರ ಕಕ್ಕಯ್ಯ ಚಿಕ್ಕಯ್ಯ ಕಿನ್ನರಿಯ ಬ್ರಹ್ಮಯ್ಯಗಳಿಗೆ ತಂದೆತಾತ ಅಣ್ಣಗಳೆಂದು ಹೇಳಿಕೊಂಡಿರಬೇಕಾದರೆ ಆ ಮಹಾನುಭಾವನ ಹೃದಯವು ಎಷ್ಟು ಪರಿಶುದ್ಧವಾದುದೂ ವಿಶಾಲವಾದುದೂ ನಿಷ್ಪಕ್ಷಪಾತವಾದುದೂ ಇದ್ದಿತೆಂಬುದು ವಾಚಕರೇ ಊಹಿಸಲಿ.

ಇಂತಹ ಶ್ರೇಷ್ಠತ್ವವನ್ನು ಬಸವ ಮಹಾತ್ಮನು ಆ ಶಿವಶರಣರಲ್ಲಿ ಕಂಡಿರಬೇಕಲ್ಲವೇ? ಆದುದರಿಂದಲೇ ಆ ಶಿವಶರಣಶ್ರೇಣ್ಯರ ಕೆಲವು ವಚನಗಳನ್ನು ಇಲ್ಲಿ ಉದಾಹರಿಸಿದೆ. ಅವುಗಳಿಂದ ಆ ಶರಣರ ಶ್ರೇಷ್ಠತ್ವವು ಸಕಲರಿಗೂ ಸ್ಪಷ್ಟವಾಗುವುದು. ಮತ್ತು ಆ ಬಸವ ಮಹಾತ್ಮನು ಬೋಧಿಸಿರುವಂತೆ ನಾವು ಶಿವಭಕ್ತಿ ಶಿವಾಚಾರಗಳುಳ್ಳವರನ್ನು ಸಮಾನರಂತೆಯಾದರೂ ಕಂಡರೆ ಯಾವ ಕುಲದವರಾಗಿದ್ದರು ಮುಂದೆ ಬರಲು ಹೇಗೆ ಅನುಕೂಲವಾಗುವುದೆಂಬುದು ಗೊತ್ತಾಗುವುದು.

ಶ್ರೀ. ಮಾದಾರ ಚೆನ್ನಯ್ಯನವರ ದಿವ್ಯ ವಾಣಿ.

೧. ನಡೆನುಡಿ ಸಿದ್ಧಾಂತವಾದಲ್ಲಿ ಕುಲಹೊಲೆಯಿಲ್ಲ. ನುಡಿಲೇಸು, ನಡೆಯಧಮವಾದಲ್ಲಿ ಅದೇ ಬಿಡುಗಡೆ. ಇಲ್ಲದ ಹೊಲೆ, ಕಳವು, ಪರದಾರಂಗಳಲ್ಲಿ ಹೊಲಬನರಿಯದೆ ಕೆಟ್ಟು ನಡೆಯುತ್ತ ಮತ್ತೆ ಕುಲಜರೆಂಬ ಒಡಲುಂಟೆ? ಆಚಾರವೇ ಕುಲ, ಅನಾಚಾರವೇ ಹೊಲೆ, ಇಂತೀ ಉಭಯವ ತಿಳಿದು ಅರಿಯಬೇಕು. ಕೈಯುಳಿಗತ್ತಿ ಅಡಿಗುಂಟೆ ಕೆಡೆಯಾಗಬೇಡ. ಅರಿನಿಜಾತ್ಮರಾಮರಾಮನಾ.

೨. ಶುಕ್ರಶೋಣಿತ, ಮಜ್ಜೆ, ಮಾಂಸ, ಹಸಿವು ತೃಷೆ, ವ್ಯಸನ ವಿಷಯಾದಿಗಳೊಂದೇ ಭೇದ. ಮಾಡುವ ಕೃಷಿ, ವ್ಯವಸಾಯ ಹಲವಲ್ಲದೆ ತೋರುವ ತೋರಿಕೆ ಅರಿವಾತ್ಮನೊಂದೇ ಭೇದ. ಆವಕುಲವಾದಡೂ ಅರಿದಲ್ಲಿಯೇ ಪರತತ್ವಭಾವಿ. ಮರೆದಲ್ಲಿಯೇ ಮಲಮಾಯಾ ಸಂಬಂಧಿ. ಇಂತೀ ಉಭಯವನರಿದು ಮರೆಯಲಿಲ್ಲ. ಕೈಯುಳಿಗತ್ತಿ ಅಡಿಗುಂಟೆ ಕೆಡೆಯಾಗಬೇಡ. ಅರಿನಿಜಾತ್ಮರಾಮರಾಮನಾ.

ಶ್ರೀ. ಡೋಹರ ಕಕ್ಕಯ್ಯನವರ ದಿವ್ಯ ವಾಣಿ.

೧. ನೆನೆಯಲರಿಯೆ ನಿರ್ಧರಿಸಲರಿಯೆ, ಮನವಿಲ್ಲಾಗಿ. ಭಾವಿಸಲರಿಯೆ. ಬೆರಸಲರಿಯೆ ಭಾವನಿರ್ಭಾವವಾಗಿತ್ತಾಗಿ. ಧ್ಯಾನ ಮೌನವನರಿಯೆ, ಧ್ಯಾನಮೌನಾತೀತ ತಾನೇಯಾಯಿತ್ತಾಗಿ. ಜ್ಞಾತೃ, ಜ್ಞಾನ, ಜ್ಞೇಯಂಗಳೆಲ್ಲವ ಮೀರಿ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಗಿರ್ದೆ.

ಶ್ರೀ. ಚಿಕ್ಕಯ್ಯನವರ ದಿವ್ಯ ವಾಣಿ.

೧. ಅಸ್ಥಿ, ಚರ್ಮ, ಮಾಂಸ, ರಕ್ತ, ಖಂಡದ ಚೀಲ ಲೆಕ್ಕಕ್ಕೆ ಬರುವುದೇ? ಹುರುಳಿಲ್ಲ ಸಂಸಾರ, ಎಂದಿಗೆ ನಾನೀ ಹೊತ್ತು ಹೂರೆಯನಿಳುಹುವೆನು? ಎಡಹಿಕೊಡನುದಕವನಡುನೀರಲ್ಲೊಡೆವಂತೆ ಎನ್ನೊಡಲೊಡೆದು ನಿಮ್ಮನೆಂದಿಗೆ ಬೆರೆಸುವೆನು ಉಳಿಯುಮೇಶ್ವರಾ?

ಶ್ರೀ ಕಿನ್ನರಿಯ ಬೊಮ್ಮಯ್ಯಗಳ ದಿವ್ಯ ವಾಣಿ.

೧. ನಿನ್ನ ಹರೆಯದ ರೂಹಿನ ಚಲುವಿನ ನುಡಿಯ ಜಾಣಿನ ಸಿರಿಯ ಸಂತೋಷದ, ಕರಿತುರಗರಥಪದಾತಿಯ, ನೆರವಿಯ ಸತಿಸುತರ ಬಂಧುಗಳ ಸಮೂಹದ, ನಿನ್ನ ಕುಲದಭಿಮಾನದ ಗರ್ವವ ಬಿಡು. ಮರುಳಾಗದಿರು. ಅಕಟಕಟಾ! ರೋಮಜನಿಂದ ಹಿರಿಯನೇ? ಮದನನಿಂಚಲುವನೆ? ಸುರಪತಿಯಿಂದ ಸಂಪನ್ನನೇ? ವಾಮದೇವ ವಶಿಷ್ಠರಿಂದ ಕುಲಜನೇ? ಅಂತಕನ ದೂತರು ಬಂದು ಕೈವಿಡಿದೊಡೆದೊಯ್ವಾಗ ನುಡಿತಡವಿಲ್ಲಕೇಳೋ ನರನೇ ಎನ್ನ ಮಹಾಲಿಂಗ ತ್ರಿಪುರಾಂತಕ ದೇವರ ಪೂಜಿಸಿದೆಯಾದೊಡೆ ಕೇಡಿಲ್ಲದ ಪದ ದೊರಕೊಂಬುದು ಮರುಳೆ.

ಸಂಪಾದಕ.

೫॥ ರೂಪಾಯಿಗೆ ಐಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ಹೆಚ್ಚಾಗಿ ಗಳಿಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಅತಿಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

ತಿರುವಾಂಕೂರು ಅಲೈಯನ್ಸ್ ಬ್ಯಾಂಕಿನ

ರೂ. ೫॥ **ಬೋನಸ್ ಬಾಂಡ್.** ರೂ. ೫॥

ಈ ಒಂದು ಬಾಂಡಿನಿಂದ ರೂ. ೩೦೦೦, ೨೦೦೦, ೧೦೦೦, ಇತ್ಯಾದಿ ಇನಾಮುಗಳನ್ನು ಪಡೆಯಲು

೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧। ಆಣೆಯ ಸ್ಟ್ಯಾಂಪು ಇಟ್ಟು ಬರೆಯಿರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ. ಎಸ್. ಕುರುವತ್ತಿ, ದಾವಣಗೆರೆ.

ಭಾಸ್ಕರ ಪ್ರಕಾಶ—ಬಟ್ಟೆ ಸ್ವಚ್ಛವಾಗುವ ೧೨ ಚೀಟು ೮ ಆಣೆ.

ಮಾಸ್ಕಿಟೋರಿಯಲ್—ಗುಂಗಾಡ ನಾಶ ೧೨ ಚೀಟು ೮ ಆಣೆ

ಚೇಳಿನ ನಾಶ—೧೨ ಚೀಟು ೬ ಆಣೆ.

ತಗಣಿಯ ಶತ್ರು—ಒಂದು ಬಾಟ್ಲಿ ೮ ಆಣೆ.

ಎಲ್ಲ ಮಾಲಿನ ನಮೂನೆ ೧ ರೂಪಾಯಿ ವ್ಹಿ. ಪಿ ಯಿಂದಾ ೧೯೩೩ ಕ್ಯಾಲೆಂಡರ್ ಸಹ ಮನೆ ಸೇರುವದು.

ಭಾಸ್ಕರ ಪ್ರಕಾಶ ವರ್ಕ್ಸ್,
ಪ್ರೋ. **ಹಂಚಲಿ.**
ಜಿ. ವಿಜಾಪೂರ.

ಶ್ರೀ ಸಂಗಮೇಶ್ವರ ಪ್ರಸನ್ನ.

ಶುದ್ಧ ಖಾದಿ! ಶುದ್ಧ ಖಾದಿ!!

ಶ್ರೀ ಕುಪ್ಪಸದ ಶಿವಸಂಗಪ್ಪನವರ ನೇತೃತ್ವದಲ್ಲಿ ತಯಾರಿಸಲ್ಪಟ್ಟ ಅತ್ಯುತ್ತಮವಾದ ಎಲ್ಲ ತರಹದ ಶುದ್ಧ ಖಾದಿ ಬಟ್ಟೆಗಳು ಈ ಕೆಳಗಿನ ಕಾರ್ಯಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ಖಾದಿ ಭಕ್ತರು ಜಾಗ್ರುತೆ ತರಿಸಿಕೊಳ್ಳಬೇಕು.

— ಶ್ರೀ ಸಂಗಮೇಶ್ವರ ಖಾದಿ ಕಾರ್ಯಾಲಯ
ಬಾಗಲಕೋಟೆ.

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪-೦-೦
೨೫ ,, ಯುರೋಪ ,, ,, ೫-೦-೦
೫೦ ,, ಹೂವಿನ ಬೀಜಗಳು ೫-೦-೦

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦-೦-೦

ನಿಂಬೆ, ಕೊಡಗು ಕಿತ್ತಳೆ, ಚಿಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಸೀತಾ, ಪಿಚ್ಚೀಸ್, ಅಂಜೂರ, ದ್ರಾಕ್ಷೆ ಗಿಡಗಳು ಡಜನ್ ೧ಕ್ಕೆ ೯-೦-೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾಶಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರ ಸಿಟಿ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ **ಶಹಾಪೂರ** ಬೆಳಗಾಂವ
೨ ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ **ಬೆಳಗಾಂವ.**

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾಡಾಕ ಹತ್ತಿ ಸಿಕ್ಕ್ಯಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ. ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ,

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತು ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶರಣಸಂದೇಶ ಪತ್ರಿಕೆಯ ಚಂದಾದಾರರಿಗೆ ಮಾತ್ರ

ಬಹು ಅನುಕೂಲ ! **ಬಹು ಪ್ರಯೋಜನ!!**

ಕನ್ನಡ ಭಾಷೆಯಲ್ಲಿ ಅಪೂರ್ವವಾದ

"ವ್ಯಾಪಾರ ಶಿಕ್ಷಕ."

ಈ ಪುಸ್ತಕವು ಶರಣ ಸಂದೇಶ ಪತ್ರಿಕೆಯ ಎರಡನೆಯ ವರ್ಷದ ಚಂದಾದಾರರಿಗೆ ಮಾತ್ರ ಉಚಿತವಾಗಿ ಕೊಡಲ್ಪಡುವುದು.

ಬೇರೆಯವರಿಗೆ ಈ ಪುಸ್ತಕವು ಕ್ರಯಕ್ಕು ಕೂಡಾ ದೊರೆಯುವುದಿಲ್ಲ.

ಆದುದರಿಂದ ಈ ಪತ್ರಿಕೆಗೆ ಎರಡನೆಯ ವರುಷ ತಪ್ಪದೇ ಚಂದಾದಾರರಾಗಿರಿ.
ಈ ಪುಸ್ತಕದಲ್ಲಿ ವ್ಯಾಪಾರಿಗಳಿಗೆ ಅತ್ಯವಶ್ಯಕವಾಗಿರತಕ್ಕ ಹಿಂದುಸ್ಥಾನದ ಎಲ್ಲ ಮಹತ್ವದ ಸಂಗತಿಗಳನ್ನೂ ವಿವರಿಸಿದೆ.
ವ್ಯಾಪಾರಿಗಳಿಗೆ ಇದು ಬಹು ಪ್ರಯೋಜನವನ್ನುಂಟುಮಾಡಿಕೊಡುವುದು.
ಈ ಪುಸ್ತಕವು ವ್ಯಾಪಾರಿಗಳಿಗೆ ಹೊಸ ದೃಷ್ಟಿಯನ್ನೇ ಉಂಟುಮಾಡಿ ಕೊಡುವುದು.

ಮ್ಯಾನೇಜರ್— **"ಶರಣ ಸಂದೇಶ" ಪೋ. ಆಲಮಟ್ಟಿ.**
(ಜಿ. ವಿಜಾಪುರ.)

REGISTERED No. B. 2891.

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರ! ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ!

ಕೂಡಲಸಂಗಮದೇವರ [illegible] ಮಹಾನುಭಾವಿ ಬಸವಣ್ಣನವರು.

SANGAM CLOTH STORES
Prop: M. S Hunaekar & Sons,
P.O: TERDAL - 587 315
Dt. Bijapur (Karnataka)

ಸಂಪಾದಕರು:- ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩.	ಆಲಮಟ್ಟಿ- ಸೋಮವಾರ ತಾರೀಖು ೧೧ ನೆಯ ಡಿಶಂಬರ ೧೯೩೩.	ಸಂಚಿಕೆ೧೮.

ಜನಸೇವೆಯೇ ದೇವರಸೇವೆ.

ಮುಂಬೈಯಲ್ಲಿ

ಸರ್ವಪಕ್ಷೀಯ ಪರಿಷತ್ತು.

ಕಳೆದ ೬ ನೆಯ ತಾರೀಖಿನ ದಿವಸ

'ಬಾಂಬೆ ಪ್ರೆಸಿಡೆನ್ಸಿ ಅಸೋಸಿಯೇಶನ್'ದ ಸಭೆಯು

ಸರ್. ಚಿಮಣಾಲಾಲ ಶೆಟಲ್‌ವಾಡ್

ಇವರ ಅಧ್ಯಕ್ಷತೆಯಲ್ಲಿ ಸೇರಿ ಕೂಡಲೇ ಸರ್ವ ಪಕ್ಷೀಯ ಪರಿಷತ್ತನ್ನು ಕೂಡಿಸಬೇಕೆಂದು ನಿರ್ಧರಿಸಿದರು.

ಇದೇ ತಿಂಗಳ ೨೦ ನೆಯ ತಾರೀಖಿನ ದಿವಸ ಮುಂಬೈಯಲ್ಲಿ

ಮುಂಬಯಿ ಪ್ರಾಂತದ

ಸರ್ವ ಪಕ್ಷಗಳ ಪ್ರಾಥಮಿಕ ಪರಿಷತ್ತನ್ನು

ಕೂಡಿಸಿ ವಿಚಾರ ವಿನಿಮಯ ಮಾಡತಕ್ಕವರಿದ್ದಾರೆ.

ದೇಹವೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚಿನಬಸವಪ್ಪಾ
ಶ್ರೀಶೈಲಪ್ಪಾ ಗ್ಲೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೊದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡಿ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುನಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! **ಜಾಗ್ರತೆ ತರಿಸಿಕೊಳ್ಳಿರಿ!!**

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦ ೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಡಿಶೆಂಬರ್ ತಾರೀಖು ೧೧ನೆಯ ಸೋಮವಾರ | ಸಂಚಿಕೆ ೧೮.

ಮಹಾತ್ಮಾಜಿಯವರ ಮಹಾಯಾತ್ರೆ.

ರಾಯಪುರದಲ್ಲಿ ರಾಜಕುಮಾರರಿಗೆ ಉಪದೇಶ.

ಮಹಾತ್ಮಾ ಗಾಂಧಿಯವರು ರಾಯಪುರದಲ್ಲಿ ರಾಜಕುಮಾರ ಕಾಲೇಜದ ವಿದ್ಯಾರ್ಥಿಗಳ ಸಭೆಯಲ್ಲಿ ಈ ಪ್ರಕಾರ ಭಾಷಣ ಮಾಡಿದರು—

“ರಾಜಕುಮಾರರೆ, ಸದ್ಯದ ವಿದ್ಯಾಭಿವೃದ್ಧಿಯ ಮತ್ತು ಶೀಘ್ರಗತಿಯ ವಾರ್ತಾಪ್ರಪಂಚದ ಈ ಕಾಲದಲ್ಲಿ ನೀವು ಕೇವಲ ನಿಮ್ಮ ಸಂಸ್ಥಾನಗಳ ಮಟ್ಟಿಗಷ್ಟೇ ದೃಷ್ಟಿಯುಳ್ಳವರಾಗಿರಲಾಗದು. ಆದರೆ ನಿಮ್ಮ ದೃಷ್ಟಿ ಸೀಮೆಯನ್ನು ವಿಸ್ತರಿಸಬೇಕು. ಹಿಂದಿಯು ನಿಮ್ಮಲ್ಲಿ ಕೆಲವರಿಗೆ ತಿಳಿಯುವದಿಲ್ಲೆಂದೂ ಆದುದರಿಂದಲೇ ಇಂಗ್ಲೀಷಿನಲ್ಲಿಯೇ ಭಾಷಣ ಮಾಡಬೇಕೆಂದೂ ನಿಮ್ಮ ಮುಖ್ಯೋಪಾಧ್ಯಾಯರು ನನಗೆ ತಿಳಿಸಿದರು. ಆದರೆ ಹಿಂದಿಯು ೨೨ ಕೋಟಿ ಜನ ಹಿಂದೀಯರಿಗೆ ಅವಗತವಿರುವಂಥ ಭಾಷೆಯೆಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ. ಇಂಥ ವ್ಯಾಪಕ ಭಾಷೆಯನ್ನು ಯಾವ ಹಿಂದೀಯನೂ ಮರೆಯಲಾರನು. ನಾನು ಇಂಗ್ಲೀಷು ಚೆನ್ನಾಗಿ ಮಾತಾಡಬಲ್ಲೆನಾದರೂ, ನಾನು ಇಂಗ್ಲೀಷ ಭಾಷಣದಲ್ಲಿ ಬೇಕಾದ ಯುರೋಪಿಯನ್ನನ ಸಂಗಡ ಸ್ಪರ್ಧೆ ಮಾಡಬಲ್ಲೆನಾದರೂ, ಹಿಂದಿ ಭಾಷೆಯನ್ನು ಮೋಹಿಸುವದಕ್ಕೆ ಒಂದು ಸಿದ್ಧತಿಯುಂಟು.

ನನಗೆ ಇಂಗ್ಲೀಷ ರಾಜ್ಯಕರ್ತರ ಧೋರಣೆಯನ್ನು ಟೀಕಿಸುವ ಪ್ರಸಂಗವು ಮೇಲಿಂದ ಮೇಲೆ ಉಂಟಾಗುತ್ತಿದ್ದರೂ ನೂರಾರು ಜನ ಇಂಗ್ಲೀಷರು ನನ್ನ ಮಿತ್ರರಿರುವರು. ಅವರ ಅಮೌಲ್ಯ ಸದ್ಗುಣಗಳನ್ನು ನಾನು ಮರೆಯಲಾರೆನು. ಆ ಗುಣಗಳಲ್ಲಿ ಒಂದನ್ನು ಹೇಳಬೇಕೆಂದರೆ ಅವರ ಸ್ವಾಮಿ ಸೇವಕ ಸಂಬಂಧವು. ಯಜಮಾನನು ತನ್ನ ಸೇವಕನನ್ನು ಇಂಗ್ಲಂಡದಲ್ಲಿ ಎಂದೂ ಕಡಿಮೆಯೆಂದು ಎಣಿಸಲಾರನು. ಈ ಅವರ ಸದ್ಗುಣವನ್ನು ತಾವು ಕಲಿತುಕೊಳ್ಳಬೇಕು.

ರಾಜಪುತ್ರರು ಸಾಧಾರಣ ಜನತೆಯ ಕೂಡ ಏಕ ಧ್ಯೇಯವುಳ್ಳವರಾಗಲೊಲ್ಲರೆಂಬ ಭಾವನೆಯು ನಮ್ಮಲ್ಲಿದ್ದುದಕ್ಕಾಗಿ ವಿಷಾದಿಸಬೇಕಾಗಿದೆ. ಹಾಗೆಯೇ ನೀವು ನಿಮ್ಮ ಸಲುವಾಗಿ ಪ್ರತ್ಯೇಕ ಶಾಲೆಕಾಲೇಜುಗಳನ್ನು ಮಾಡಿಕೊಂಡಿದ್ದೀರಿ. ನೀವು ಸರ್ವಸಾಧಾರಣ ಶಾಲೆಕಾಲೇಜುಗಳಲ್ಲಿ ಅಭ್ಯಾಸ ಮಾಡಲು ಒಲ್ಲಿರಿ. ಎಡ್ವರ್ಡ ಬಾದಶಹರು ಮತ್ತು ಸದ್ಯದ ಬಾದಶಹರು ಸಾಧಾರಣ ನಾವಿಕರಂತೆ ಅನೇಕ ಕಷ್ಟಗಳನ್ನು ಸಹಿಸುತ್ತ ಹಡಗುಪಡೆಯಲ್ಲಿ ಕೆಲಸ ಮಾಡಿರುವರೆಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ. ನೀವೂ ಹಾಗೆ ಮಾಡಬಲ್ಲಿರಾ? ರಾಜ್ಯವೆಂಬುದು ದೇವದತ್ತವಾದ ವರವೆಂದು ನೀವು ಕಲಿಸಲ್ಪಟ್ಟಿರುವುದರಿಂದ ಸಂಕುಚಿತ ದೃಷ್ಟಿಯುಳ್ಳವರಾಗಿರುವಿರಿ. ಸಾಧಾರಣ ಜನತೆಗೂ ನಿಮಗೂ ಏನೂ ಅಂತರವಿಲ್ಲೆಂಬುದನ್ನು ನಂಬಿರಿ. ಇಷ್ಟೇ; ಅವರಿಗೆ ದೊರೆಯದಂಥ ಪ್ರಸಂಗಗಳು ನಿಮ್ಮ ಸ್ವಾಧೀನದಲ್ಲಿರುತ್ತವೆ. ಆದರೆ ದೇವರು ಕೊಟ್ಟ ಆ ಸುಸಮಯಗಳನ್ನು ಉಪಯೋಗಿಸದಿದ್ದರೆ ದೇವರಿಗೆ ನೀವು ವಿರೋಧಿಸಿದಂತಾಗುವದೆಂಬುದನ್ನು ತಿಳಿಯಿರಿ. ನೀವು ನಿಮ್ಮಲ್ಲಿಯ ಸರ್ವೋತ್ತಮತ್ವವನ್ನು ಪ್ರಕಟಪಡಿಸುವದೇ ಶಿಕ್ಷಣದ ಸಾರವಾಗಿದೆ.

ಹಿಂದುಸ್ಥಾನದಲ್ಲಿಯ ಹಿಂದು ಧರ್ಮದ ಹೊರತಾಗಿ ಜಗತ್ತಿನ ಯಾವ ಧರ್ಮದಲ್ಲಿಯೂ ಅಸ್ಪೃಶ್ಯತೆಯಿಲ್ಲ. ಹಿಂದುಗಳು ಅಸ್ಪೃಶ್ಯತೆಯನ್ನೇ ಅವಲಂಬಿಸಿದರೆ ಹಿಂದು ಧರ್ಮವೂ ಹಿಂದುಗಳೂ ನಾಮಶೇಷವಾಗುವರು. ಹಿಂದು ಧರ್ಮವೇ ನನಗೆ ಸಂಪೂರ್ಣ ಶಾಂತಿಯನ್ನು ಕೊಡುತ್ತಿದೆ. ಮತ್ತು ಅದರಲ್ಲಿ ಅಸ್ಪೃಶ್ಯತೆಯೆಂಬುದಿಲ್ಲವೆಂಬುದು ನನಗೆ ಮನವರಿಕೆಯಾಗಿದೆ.

ಎಮ್ಮೆಗಳ ಭಯಂಕರ ಸಂಹಾರ.

ಪೂರ್ವಕಾಲದಲ್ಲಿ ಎಮ್ಮೆ ಕೋಣಗಳನ್ನು ದೇವಿಗೆ ಬಲಿಯೆಂದು ಭಯಂಕರ ಸಂಹಾರ ಮಾಡುತ್ತಿದ್ದರೂ ಸದ್ಯಕ್ಕೆ ಆ ಪ್ರಕಾರದ ಕೊಲೆಯು ಕಡಿಮೆಯಾಗುತ್ತ ಬಂದಿದೆ. ಆದರೆ ಈ ಸುಧಾರಣೆಯ ಯುಗದಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿರುವ ಕೊಲೆಮನೆಗಳೇ ಆಗಿನ ದೇವಿಯ ಮಂದಿರಗಳಂತಾಗಿರುವವು.

ಇಲ್ಲಿ ಹಿಂಡುವ ದನಗಳ ಭಯಂಕರ ಸಂಹಾರವನ್ನು ಕೇಳಿದರೆ ಎಂಥ ಕಲ್ಲೆದೆಯವನಿಗು ಕೂಡಾ ವ್ಯಸನವಾಗದಿರದು.

ಕೇವಲ ಹಿಂದುಸ್ಥಾನದ ಒಂದೇ ಒಂದು ಮುಂಬಯಿ ಪಟ್ಟಣದ ಕುರ್ಲಾ ಮತ್ತು ವಾಂದ್ರೆದಲ್ಲಿಯ ಕೊಲೆಮನೆಗಳಲ್ಲಿ ೧೯೨೭-೨೮ ನೆಯ ಇಶ್ವಿಯ ಒಂದೇ ವರುಷದಲ್ಲಿ ೨೬,೦೦೦ ಹಿಂಡುವ ಎಮ್ಮೆಗಳು ಸಂಹರಿಸಲ್ಪಟ್ಟವು. ಮುಂಬಯಿಯಲ್ಲಿ ಒಂದು ಎಮ್ಮೆಗೆ ದಿವಸಕ್ಕೆ ೩ ರೂ. ೯ ಆಣೆ ವೆಚ್ಚವಾಗುತ್ತಿವೆ. ಆದುದರಿಂದ ಯಾವದಾದರೊಂದು ಎಮ್ಮೆಯು ೭ ಸೇರಿಗಿಂತ ಕಡಿಮೆ ಹಾಲನ್ನು ಕೊಡುತ್ತಿದ್ದ ಕೂಡಲೆ ಗವಳಿಗನಿಗೆ ಅದು ತಲೆಭಾರವಾಗಿ ಬಂದಷ್ಟು ಬೆಲೆಗೆ ಕಟುಕರಿಗೆ ಅದನ್ನು ಮಾರಿಬಿಡುತ್ತಾನೆ. ಯಾವುದೊಂದು ಎಮ್ಮೆಯು ಒಂದು ದಿನ ೫ ಶೇರು ಹಾಲು ಕೊಟ್ಟರೆ ತೀರಿತು. ಮಧ್ಯಾಹ್ನದಲ್ಲಿಯೇ ಅದು ಕೊಲೆಮನೆಗೆ ಕಳುಹಿಸಲ್ಪಟ್ಟು ಅಲ್ಲಿ ಅದರ ಕುತ್ತಿಗೆಯನ್ನು ಕೊಯ್ದು ಬಿಡುತ್ತಾರೆಂದೇ ತಿಳಿಯಬೇಕು. ಮುಂಬಯಿಯಲ್ಲಿ "ಪ್ರಾಪರ್ಟಿ ಮಾರ್ಕೆಟ" ಎಂಬ ಹೆಸರಿನ ಇಂಗ್ಲೀಷ ಸಾಪ್ತಾಹಿಕ ಪತ್ರಿಕೆಯಲ್ಲಿ ಅದರ ಯುರೋಪಿಯನ್ ಸಂಪಾದಕರು ಈ ಪ್ರಕಾರವಾಗಿ ಬರೆದಿರುತ್ತಾರೆ— "There is the astounding fact to be faced that thousands of buffaloes actually producing 5 seers of milk in the morning are slaughtered the same afternoon."

ಮುಂಬಯಿಯಿಂದ ೨೦ ಮೈಲು ದೂರದಲ್ಲಿರುವ ಸಾಷ್ಟಿ ತಾಲೂಕಿನಲ್ಲಿ ೧೦೦ ಚೌರಸ ಮೈಲುಳ್ಳ ಹುಲ್ಲು ಗಾವಲಿನ ಕ್ಷೇತ್ರವಿದೆ. ಕಡಿಮೆ ಹಾಲುಕೊಡುವ ಇಲ್ಲವೆ ಗರ್ಭಿಣಿಯಾದ ಹಿಂಡುವ ದನಗಳನ್ನು ಅಲ್ಲಿಗೆ ಕಳುಹಿಸುವದು ಕಟುಕರಿಗೆ ಕೊಡುವದಕ್ಕಿಂತಲೂ ಶ್ರೇಯಸ್ಕರವಾಗಿದೆ. ಜನರು ಸಾಷ್ಟಿಯಿಂದ ಮುಂಬಯಿಗೆ ಹಾಲು ತಂದು ಮಾರಾಟ ಮಾಡಲು ಬಹಳ ವೆಚ್ಚ ಬರುವುದೆಂದು ಉತ್ತರ ಕೊಡುವರು. ಆದರೆ ಆ ನಡುಗಡ್ಡೆಯಲ್ಲಿ ದನಗಳನ್ನು ಸಂರಕ್ಷಿಸಲು ವೆಚ್ಚವು ಬಹು ಸ್ವಲ್ಪ ಬರುವದೆಂಬುದು ಅವರಿಗೆ ತಿಳಿಯುವದಿಲ್ಲ. ಪುನಃ ಆ ಇಂಗ್ರೇಜೀ ಪತ್ರಿಕೆಯಲ್ಲಿ ಸಂಪಾದಕರು ಬರೆಯುವದೇನಂದರೆ—"ದನಗಳ ಹುಲ್ಲುಗಾವಲೆಂದು ಸರಕಾರದವರು ಕೆಲವೊಂದು ಭೂಮಿಯನ್ನು ಏಕೆ ಕಾಯ್ದಿಡಬಾರದು? ಹುಲ್ಲುಗದ್ದೆಗಳಿಗೆ ಸ್ವಲ್ಪೇ ಫೀಯನ್ನು ತೆಗೆದುಕೊಂಡು ಆಕಳು ಎಮ್ಮೆಗಳು ಈಯುವವರೆಗೆ ಸಂರಕ್ಷಣೆ ಮಾಡಿದರೆ ಎಷ್ಟು ಉಪಯೋಗವಾಗುವದ? ಈ ಭಯಂಕರ ಪಶುಸಂಹಾರದ ಕಡೆಗೆ ಸರಕಾರದವರು ತೀವ್ರವೇ ಲಕ್ಷ್ಯ ಕೊಡಬೇಕೆಂದು" ಅವರು ಕನಿಕರದಿಂದ ಹೇಳಿರುವರು. ಆದರೆ ಜನರೇ ಲಕ್ಷ್ಯ ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಹನ್ನೆರಡು ಚಿಂತೆಯಲ್ಲಿದ್ದ ಸರಕಾರಕ್ಕೆ ಇದು ಬೇಕಾದೀತೆ?

ಮೊದಲು ಮುಂಬಯಿಯಲ್ಲಿಯೇ ವನಗಾವಲಿನ ಸೌಕರ್ಯವಿದ್ದದರಿಂದ ಪಶುಗಳ ಸಂಹಾರವಾಗುತ್ತಿರಲಿಲ್ಲ. ಮತ್ತು ದನಗಳು ಹಾಲು ಕೊಡುವದನ್ನು ನಿಲ್ಲಿಸಿದ ಕೂಡಲೆ ಅವುಗಳನು ಬೇರೂರಿಗೆ ಕಳಿಸುತ್ತಿದ್ದರು. ಆವಾಗ್ಗೆ ರೈಲಿನ ಬಾಡಿಗೆಯು ಬಹಳವಿದ್ದಿಲ್ಲ. ಬರಬರುತ್ತ ರೇಲ್ವೆಯ ದರವೂ ಹೆಚ್ಚಿತು. ಇಲ್ಲದೆ ಹಿಂಡುವ ಮತ್ತು ಹಿಂಡದ ದನಗಳಿಗೆಲ್ಲ ಒಂದೇ ತರದ ದರವಿರುವದು. ಹಿಂಡುವದನ್ನು ನಿಲ್ಲಿಸಿದ ದನಗಳನ್ನು ಹೊರಗೆ ಕಳಿಸುವದು ಕಟ್ಟಾಯಿತು. ೧೯೨೮ನೆಯ ಇಶ್ವಿಯಲ್ಲಿ ೫೧೭೭ ಡಬ್ಬಿಗಳಿಂದ ಒಟ್ಟಿಗೆ ೨೮೬೦೦ ಕರುವಿದ್ದ ಎಮ್ಮೆಗಳು ಮುಂಬಯಿಗೆ ತರಲ್ಪಟ್ಟವು ಮತ್ತು ಅವುಗಳಲ್ಲಿ ೨೬೯೮ ಎಮ್ಮೆಗಳು ವಾಂದ್ರೆ ಮತ್ತು ಕುರ್ಲೆದಲ್ಲಿಯ ಕೊಲೆಮನೆಗಳಲ್ಲಿ ಕೊಲೆ ಮಾಡಲ್ಪಟ್ಟವು ೨೬,೦೦೦ ಎಮ್ಮೆಗಳ ಮೂಲ ಬೆಲೆಯು ೭೯ ಲಕ್ಷ ರೂ. ಇದ್ದಿತು. ಇದರ ಮೇಲಿಂದ ಚಿಕ್ಕವಾಗಿರುವ ಇನ್ನೂ ಎಳೆಯ ಎಮ್ಮೆಗಳು ಎಷ್ಟು ಕೊಲೆಗೀಡಾಗುತ್ತಿರುವವೆಂಬುದು ಓದುಗರ ಕಲ್ಪನೆ ಬರಬಹುದು.

"ಪ್ರಾಪರ್ಟಿ ಮಾರ್ಕೆಟ್", ಸಾಪ್ತಾಹಿಕದ ಸಂಪಾದಕರು ಹೇಳುತ್ತಾರೆ—"The practice of slaughtering bes breeds of milch cattle absolutely necessary an required for milk after further calving withi n short period has never existed and does not exis anywhere in the world. It is a suicidal polic to kill a goose that lays the golden eggs."

ಹಿಂಡುವ ದನಗಳಲ್ಲಿ ಎಮ್ಮೆಯ ಸಂಹಾರವು ಒಂದೇ ಒಂದು ವರುಷದಲ್ಲಿ ಇಷ್ಟಾದರೆ ಈ ೨೦ ವರುಷಗಳಲ್ಲಿ ಎಷ್ಟಾಗಿರಬಹುದು

ಇದರಂತೆಯೇ ಆಕಳು, ಎತ್ತು ಮೊದಲಾದ ಉಪಯುಕ್ತ ಪ್ರಾಣಿಗಳು ಮುಂಬಯಿಯೊಂದೇ ಅಲ್ಲದೆ ಕಲಕತ್ತಾ, ದಿಲ್ಲಿ, ಅಹಮದಾಬಾದ, ಕರಾಚಿ, ಮದ್ರಾಸ, ಲಾಹೋರ, ಲಖನೌ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಎಷ್ಟು ಕೊಲೆಯಾಗುತ್ತಿರುವುದೆಂಬುದನ್ನು ಕೇವಲ ಕಲ್ಪನೆ ಮಾಡಿದರೇ ರೋಮಾಂಚನಗಳೇಳುವವು.

ಶೋಚನೀಯ ಮೃತ್ಯು.

ಕನ್ನಡ ಭಾಷಾಭಿಮಾನಿಗಳಲ್ಲಿ ಅಗ್ರಗಣ್ಯರೂ ಸಾಹಿತ್ಯ ಸೇವಾ ಪ್ರೇಮಿಗಳೂ ಆದ ಶ್ರೀ. ಚಿಕ್ಕೋಡಿ ತಮ್ಮಣ್ಣಪ್ಪನವರು ಕಳೆದ ೫ನೆಯ ತಾರೀಖಿನ ಪ್ರಾತಃಕಾಲ ೬॥ ಗಂಟೆಗೆ ಬನಹಟ್ಟಿಯಲ್ಲಿ ಶಿವೈಕ್ಯರಾದರೆಂದು ತಿಳಿಸಲು ಅತ್ಯಂತ ಖೇದವಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಕನ್ನಡ ಭಾಷೆಯ ಪ್ರಸಾರದ ಕಾರ್ಯಕ್ಕೆ ಇವರು ತುಂಬಾ ಪ್ರಯತ್ನಿಸಿದರು. ಜಮಖಂಡಿ ಸಂಸ್ಥಾನದಲ್ಲಿ ಕನ್ನಡ ಪ್ರಸಾರವಾಗಲು ಈ ಮಹನೀಯರೇ ಮುಖ್ಯ ಕಾರಣರು. ಇವರಲ್ಲಿದ್ದ ಜಾಜ್ವಲ್ಯವಾದ ಮಾತೃಭಾಷೆಯ ಅಭಿಮಾನವು ಇವರ ಸಿಂಹನಾದದಿಂದ ಆ ಭಾಗದಲ್ಲೆಲ್ಲಾ ಮಹತ್ತರವಾದ ಕಾರ್ಯವನ್ನು ಮಾಡಿದ್ದಿತು. ಇವರ ಆತ್ಮಕ್ಕೆ ಶಿವನು ಶಾಂತಿಯನ್ನೀಯಲಿ.

ಕೊಪ್ಪಳ ಜಿಲ್ಲೆಯ ಪ್ರವಾಸ.

ನಿಜಾಮ ಕರ್ನಾಟಕದಲ್ಲಿ ಪ್ರವಾಸ ಮಾಡುತ್ತಿರುವ ಶ್ರೀ. **ಹರ್ಡೇಕರ ಮಂಜಪ್ಪನವರು** ಕಳೆದ ತಾ. ೨-೧೨-೩೩ನೆಯ ದಿವಸ ಅಡೂರ ತರುಣ ಸಂಘದವರ ಆಮಂತ್ರಣದ ಮೇರೆಗೆ ಬನ್ನಿಕೊಪ್ಪ ಸ್ಟೇಶನಕ್ಕೆ ಆಗಮಿಸಿ, ಕುಕನೂರಿನ ಮೇಲಿಂದ ಅಡೂರ ಗ್ರಾಮಕ್ಕೆ ಆಗಮಿಸಿದರು. ಅಲ್ಲಿಯ ಉತ್ಸಾಹೀ ತರುಣರು ಅವರ ಸ್ವಾಗತವನ್ನು ಕೋರಿದ ನಂತರ ಅಲ್ಲಿಕೂಡಿದ ಜನಗಳಿಗೆ ವಿದ್ಯಾಭಿವೃದ್ಧಿಯ ಅವಶ್ಯಕತೆಯ ವಿಷಯವಾಗಿ ೧ ತಾಸಿನವರೆಗೆ ಭಾಷಣ ಮಾಡಿದರು.

ಮರುದಿವಸ ಅಡೂರಿನ ಮಹಾಜನಗಳಿಂದ ನಡೆಯಿಸಲ್ಪಡುತ್ತಿರುವ ಕನ್ನಡ ಶಾಲೆಯ ಎಲ್ಲ ವರ್ಗದವರ ಪರೀಕ್ಷೆಯನ್ನು ತೆಗೆದುಕೊಂಡು ಅಲ್ಲಿಯ ವಿದ್ಯಾಭ್ಯಾಸದ ಬಗ್ಗೆ ಸಮಾಧಾನ ಪಟ್ಟು ಯೋಗ್ಯ ವಿದ್ಯಾರ್ಥಿಗಳಿಗೆ ತರುಣ ಸಂಘದವರು ಬಹುಮಾನ ಕೊಡಿಸಿದರು. ಈ ಶಾಲೆಯಲ್ಲಿ ೫೦ ಜನ ವಿದ್ಯಾರ್ಥಿಗಳಿದ್ದು ಕನ್ನಡ ೫ನೆಯ ವರ್ಗದವರೆಗೂ ಅಭ್ಯಸಿಸುತ್ತಿದ್ದಾರೆ. ಕೆಲವರು ೪೦-೫೦ ಶ್ರೀ. ಭಗವಾನ್ ಬಸವಣ್ಣನವರ ವಚನವನ್ನು ಕಲಿತಿದ್ದಾರೆ.

ರಾತ್ರಿ ಶ್ರೀ. ವೀರಭದ್ರ ದೇವಾಲಯದಲ್ಲಿ ಧಾರ್ಮಿಕ ವಿಷಯಕವಾಗಿ ಒಂದು ಒಂದುವರೆ ತಾಸಿನವರೆಗೆ ಜನಗಳ ಮನಸ್ಸಿನ ಮೇಲೆ ವಿಶೇಷ ಪರಿಣಾಮವಾಗುವಂತೆ ನಿಜಧರ್ಮದ ತಿಳುವಳಿಕೆಯನ್ನುಂಟುಮಾಡಿಕೊಟ್ಟರು.

ಮರು ದಿವಸ ಎಂದರೆ ಸೋಮವಾರ ತಾ. ೪-೧೨-೩೩ ನೆಯ ದಿವಸ ಕುಕನೂರಿನ ಸಮೀಪದಲ್ಲಿ ನೆರೆಯುವ ಶ್ರೀ. ಗುದ್ನೇಶನ ರಥೋತ್ಸವದಲ್ಲಿ ವ್ಯಾಖ್ಯಾನ ಮಾಡುವದಕ್ಕಾಗಿ ಹೊರಟು ಮೊದಲು ನಿಜಾಮ ಕರ್ನಾಟಕದಲ್ಲಿ ಅತ್ಯಂತ ಮಾದರಿಯಾದ "ನಿಜಾಮ ಕರ್ನಾಟಕ ನೂತನ ಪಾಠಶಾಲೆ"ಯನ್ನು ಸಂದರ್ಶಿಸಿ ಅಲ್ಲಿ ನೆರೆದ ವಿದ್ಯಾರ್ಥಿಗಳಿಗೆ ಬೋಧಿಸಿದರು. ಅನಂತರ ವಿದ್ಯಾರ್ಥಿಗಳು ಲಾಠಿ ತಿರುಗಿಸುವುದು, ಸೂರ್ಯ ನಮಸ್ಕಾರ ಹಾಕುವುದು ಮೊದಲಾದ ವ್ಯಾಯಾಮಗಳನ್ನು ಮಾಡಿ ತೋರಿಸಿದರು. ವಿದ್ಯಾರ್ಥಿಗಳಿಗೆ ಅಡೂರಿನ ಶ್ರೀ ಬಸವೇಶ್ವರ ಭಜನಾ ಸಂಘದ 'ಬಸವ ಸಂದೇಶ'ಗಳನ್ನು ಕಾಣಿಕೆಯಾಗಿ ಕೊಟ್ಟರು. ಈ ರಾಷ್ಟ್ರೀಯ ಶಾಲೆಯು ಅಲ್ಲಿಯ ಶ್ರೀ. ರಾಘವೇಂದ್ರರಾವ ದೇಸಾಯಿ ಇವರಿಂದ ನಡೆಯಿಸಲ್ಪಡುತ್ತಾ ಇದ್ದು ೧೦೦-೧೫೦ರವರೆಗೆ ವಿದ್ಯಾರ್ಥಿಗಳು ಮಿಡಲ್ ಪರೀಕ್ಷೆಯವರೆಗೆ ಅಭ್ಯಾಸ ಮಾಡುತ್ತಿರುವರು. ಇಲ್ಲಿಯ ಅಧ್ಯಾಪಕರ ಜೀವನವು ಅತ್ಯಂತ ಸಾದಾತನದ್ದಿದ್ದು ಅಲ್ಪ ವೇತನದಲ್ಲಿಯೇ ಸಂತುಷ್ಟರಾಗಿ ಓದಿಸುತ್ತಿರುವುದು ಅತ್ಯಂತ ಅಭಿನಂದನೀಯವಾಗಿದೆ. ಈ ಶಾಲೆಯ ಎಲ್ಲ ವಿದ್ಯಾರ್ಥಿಗಳೂ ಖಾದಿಯನ್ನೇ ತೊಟ್ಟುಕೊಳ್ಳುವಂತೆ ಕಾಣುತ್ತವೆ. ಅಂತು ನಿಜಾಮ ಭಾಗದಲ್ಲಿ ಇದೊಂದು ರಾಷ್ಟ್ರಪೋಷಕ ಸಂಸ್ಥೆಯಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಇಂಥ ಸಂಸ್ಥೆಗಳ ಆವಶ್ಯಕತೆಯು ನಿಜಾಮ ಭಾಗದಲ್ಲಿ ವಿಶೇಷವಾಗಿದೆ.

ಸಾಯಂಕಾಲ ೪॥ ಗಂಟೆ ಸುಮಾರಕ್ಕೆ ಶ್ರೀ. ಗುದ್ನೇಶ ಮಠದ ಆವರಣದ ಮುಂಭಾಗದಲ್ಲಿ ಸಭೆಯು ಸೇರಿದ್ದಿತು. ಮೊದಲು ಕುಕನೂರಿನ ರಾಷ್ಟ್ರೀಯ ಶಾಲೆಯ ಅಧ್ಯಾಪಕರ ವ್ಯಾಖ್ಯಾನವಾದ ನಂತರ ಶ್ರೀ. ಹರ್ಡೇಕರರು ಮಾನವ ಧರ್ಮದ ವಿಷಯವಾಗಿ ಭಾಷಣ ಮಾಡಿದರು.

ಮರುದಿವಸ ಕಲ್ಲೂರಿನ ಶ್ರೀ. ಕಲ್ಲೇಶ್ವರನ ಪುರಾತನ ದೇವಾಲಯವನ್ನು ನೋಡಿದ ನಂತರ ಯಲಬುರ್ಗಿ ಸಾಹಿತ್ಯವರ್ಧಕ ವಾಚನಾಲಯಕ್ಕೆ ಹೋದರು. ಅಲ್ಲಿ ಪ್ರಮುಖ ಮುಂದಾಳುಗಳ ಮುಂದೆ ಶಿಕ್ಷಣ ವಿಷಯಕವಾಗಿ ಸ್ವಲ್ಪ ಹೊತ್ತು ಭಾಷಣ ಮಾಡಿ ಆ ಮೇಲೆ ಮುಧೋಳಕ್ಕೆ ಹೋದರು. ಅಲ್ಲಿಯ ದೇಸಾಯರ ಮನೆಯಲ್ಲಿ ರಾತ್ರಿ ಸಭೆ ಸೇರಲು ವಿದ್ಯಾವಿಷಯಕವಾಗಿ ಭಾಷಣ ಮಾಡಿದರು.

ತಾ. ೬-೧೨-೩೩ನೆಯ ದಿವಸ ಸಾಯಂಕಾಲ ೫ ಘಂಟೆಗೆ ಕುಕನೂರಿನ ಜಿಸುಂಡಿ ಕಂಪನಿಯವರ ಥಿಯೇಟರಿನಲ್ಲಿ ಸಭೆಸೇರಿ ಧರ್ಮ, ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಅತ್ಯಂತ ಸ್ಫೂರ್ತಿದಾಯಕ ಭಾಷಣ ಮಾಡಿದರು. ಇವರ ಭಾಷಣದ ನಂತರ ಶ್ರೀ. ದೇಸಾಯಿ ರಾಘವೇಂದ್ರರಾಯರು ಅದನ್ನೇ ಪುಷ್ಟೀಕರಿಸಿದರು.

ತಾ. ೭-೧೨-೩೩ನೆಯ ದಿವಸ ಮೌಜೆ ಇಟಗಿಯಲ್ಲಿ ಶ್ರೀ ಬಸವಲಿಂಗನಗೌಡ ಪಾಟೀಲ ಇವರ ಪ್ರಯತ್ನದಿಂದ ಬೆಳಗಿನ ೮ ಗಂಟೆಗೆ ಸಭೆಸೇರಿದ್ದಿತು. ಮೊದಲು ಇಲ್ಲಿಯ ಶಿಕ್ಷಕರು ಮಾಡಿದ ಸ್ವಾಗತಪರ ಪದ್ಯ, ಕರ್ನಾಟಕಾಂಬೆ, ವಂದೇ ಮಾತರಂ ಪದ್ಯಗಳನ್ನು ವಿದ್ಯಾರ್ಥಿಗಳು ಸುಸ್ವರದಲ್ಲಿ ಹೇಳಿದ ನಂತರ ಶ್ರೀ. ಹರ್ಡೇಕರರವರು ಧರ್ಮದ ರಹಸ್ಯದ ವಿಷಯವಾಗಿ ಹೇಳಿದರು; ಕುಕನೂರಿನಿಂದ ಬೆಳಗ್ಗೆ ಸಭೆಗಾಗಿ ಆಗಮಿಸಿದ ಶ್ರೀ. ರಾಘವೇಂದ್ರರಾವ ದೇಸಾಯರು ಜಾತಿಜಾತಿಗಳಲ್ಲಿ ಪ್ರೇಮದ ಆವಶ್ಯಕತೆಯ ವಿಷಯವಾಗಿ ಸ್ವಲ್ಪ ಹೊತ್ತು ಮಾತನಾಡಿದರು. ಈ ದಿವಸವೇ ಮಧ್ಯಾಹ್ನ ಇಲ್ಲಿಂದ ಹೊರಟು ಕೊಪ್ಪಳಕ್ಕೆ ಹೊರಟರು. ಸ್ಟೇಶನ್ನಿನಮೇಲೆ ಶ್ರೀ. ತಿಮ್ಮನಗೌಡರು ವಕೀಲ ಮತ್ತು ಬಸವಲಿಂಗನಗೌಡರು ಅಡೂರು ಮೊದಲಾದ ಇನ್ನು ಅನೇಕ ಮಹನೀಯರು ಸ್ವಾಗತ ಮಾಡಿದರು. ಅಲ್ಲಿಯ ಕೆರೆ, ಕೋಟೆ ಮತ್ತು ಮಠಗಳನ್ನು ನೋಡಿ ಮರುದಿವಸ ಬೆಳಗಿನ ೮ ಗಂಟೆಗೆ ಅಲ್ಲಿಯ ಶಾರದಾ ಥಿಯೇಟರಿನಲ್ಲಿ ಸೇರಿದ ಸಭೆಯಲ್ಲಿ ಶಿಕ್ಷಣ ಮತ್ತು ಧರ್ಮದ ವಿಷಯವಾಗಿಭಾಷಣ ಮಾಡಿದರು.

ಹೋದ ಹೋದ ಸ್ಥಳಗಳಲ್ಲೆಲ್ಲಾ ವೀರಶೈವ ಮಹಾಸಭೆಯ ಸದಸ್ಯರಾಗಲು ವೀರಶೈವ ಮಹಾಜನರಿಗೆ ತಿಳಿಸಿ ವೀರಶೈವ ಮಹಾಸಭೆಯ ಯಲಬುರ್ಗಿ ತಾಲೂಕ ಕಮಿಟಿ ಮತ್ತು ಕೊಪ್ಪಳ ಜಿಲ್ಲಾ ಕಮಿಟಿಗಳನ್ನು ಕೂಡಿಸಲು ವ್ಯವಸ್ಥೆ ಮಾಡಿದ್ದಾರೆ.

ವೀರಭದ್ರಪ್ಪ ಕೊಪ್ಪಳ ಸಾ. ಅಡೂರು.

—ಬೆಂಗಳೂರಿನಲ್ಲಿ ಕಳೆದ ೨೭ನೆಯ ತಾರೀಖಿನ ದಿವಸ ಗೀತಾ ಜಯಂತಿಯು ಮಾಡಲ್ಪಟ್ಟಿತು. ಆ ಸಮಯದಲ್ಲಿ ಬೇರೆಬೇರೆ ಕಾಲದಲ್ಲಿ ಬೇರೆಬೇರೆ ಭಾಷೆಗಳಲ್ಲಿ ಮುದ್ರಿಸಲ್ಪಟ್ಟ ೧೫೮ ಗೀತಾ ಗ್ರಂಥಗಳನ್ನು ಇಟ್ಟಿದ್ದರು. ಒಂದು ಗ್ರಂಥವು ವಾರನ್ ಹೇಸ್ಟಿಂಗ್ಸನ ಕಾಲದ್ದು ಇದ್ದಿತು.

—ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯ ಇವರು ತಮ್ಮ ಪತಿ ಸೆರೆಕುಡಿಯುತ್ತಿರುವನೆಂದೂ, ತಮ್ಮನ್ನು ಹೊಡೆಯುತ್ತಿರುವನೆಂದೂ ಹೇಳಿ ಕೋರ್ಟಿನ ಮುಖಾಂತರ ಪತಿಯ ಪರಿತ್ಯಾಗ ಮಾಡಿದರು.

—ಶ್ರೀ. ಕಮಲಾಬಾಯಿಯವರಿಗೆ ಭಾಷಣ ಮಾಡಿದುದಕ್ಕಾಗಿ ೧ ವರುಷದ ಸಾದಾ ಶಿಕ್ಷೆಯಾಗಿದೆ. 'ಅ' ವರ್ಗವು ಕೊಡಲ್ಪಟ್ಟಿತು.

ಶಕ್ತಿಯೇ ಜೀವನವು.

ಈ ಜಗತ್ತಿನಲ್ಲಿ ಪರಮಾತ್ಮನು ಅಸಂಖ್ಯ ಪ್ರಾಣಿಗಳನ್ನು ಹುಟ್ಟಿಸಿದ್ದಾನೆ. ಅವು ತಮ್ಮ ಶಕ್ತಿಗನುಸಾರವಾಗಿ ತಮ್ಮ ಜೀವನವನ್ನು ಸಾಗಿಸುತ್ತಿರುವವು. ಜೀವಿಗಳೆಲ್ಲ ಒಂದನ್ನೊಂದವಲಂಬಿಸಿ ಜೀವಿಸುತ್ತಿರುವುದರಿಂದ ಜೀವನ ಕಲಹವೇ ಉಂಟಾಗಿರುವದು. ಜೀವಿ ಜೀವಿಯ ತಿಂದು ಜೀವಿಸಿ ಪುನಃ ತಾನು ಮತ್ತೊಂದು ಜೀವಿಯ ಜೀವನಕ್ಕಾಗಿ ಆಹುತಿಯಾಗುತ್ತಿರುವದು. ಹೀಗೆ ಅಸಂಖ್ಯ ಜೀವಿಗಳೆಲ್ಲ ತಮ್ಮ ಜೀವನವನ್ನರ್ಪಿಸಿ ಅನಾದ್ಯನಂತವಾದ ಒಂದು ಮಹಾ ಜೀವದಲ್ಲಿ ಲಯವಾಗುತ್ತಿರುವವು.

ಆದುದರಿಂದಲೇ ಜೀವನದ ನಿಯಮಗಳು ಮಹಾ ಜೀವಿಯಿಂದ ಒಂದು ಕ್ಷುಲ್ಲಕ ಜೀವಿಯವರೆಗೆ ಒಂದೇ ತರವಾಗಿರುವವು. ಜೀವನದ ಘಟಕಗಳು ನೈಸರ್ಗಿಕ ನಿಯಮವನ್ನವಲಂಬಿಸಿ ಜೀವನಕ್ಕೆ ಸಹಕಾರಿಯಾದರೇನೇ ಆ ಜೀವನವು ಸುಸೂತ್ರವಾಗಿ ಸಾಗುವದು. ಆದರೆ ಅವುದೊಂದು ಜೀವಿಯು ತನ್ನ ಜೀವನವನ್ನು ಪ್ರಕೃತಿ ನಿಯಮಕ್ಕೆ ವಿರೋಧವಾಗಿ ನಡೆಸಿಕೊಂಡು ಹೋದಲ್ಲಿ ಅದರ ಘಟಕಗಳು ತೀವ್ರವೇ ಮತ್ತೊಂದು ಜೀವಿಯಲ್ಲಿ ಬೆರೆಯುವವು.

ಜೀವನವು ಅವ್ಯಾಹತವಾಗಿ ನಡೆಯಬೇಕಾದರೆ ಜೀವನಶಕ್ತಿಯು ನಿಸರ್ಗ ನಿಯಮಬದ್ಧವಾಗಿರಬೇಕು. ಶಕ್ತಿ ಮತ್ತು ಜೀವನಗಳಲ್ಲಿ ಕಾರ್ಯಕಾರಣ ಸಂಬಂಧವಿರುತ್ತದೆ. ಶಕ್ತಿಯುಳ್ಳ ಪ್ರಾಣಿಯೇ ಈ ಜೀವನ ರಂಗಭೂಮಿಯಾದ ಜಗತ್ತಿನಲ್ಲಿ ಇರಲು ಬಲ್ಲದು. ಅಶಕ್ತ ಜೀವಿಗಳು ಅದರಲ್ಲಿ ಲಯವಾಗಿ ಹೋಗುವವು. ಮಹರ್ಷಿಯಾದ ಮನುವು ಕೂಡಾ— "ಹಲ್ಲಿದ್ದ ಪ್ರಾಣಿಗಳು ಹಲ್ಲಿಲ್ಲದ ಪ್ರಾಣಿಗಳನ್ನು ತಿನ್ನುತ್ತವೆ. ಕೈಯಿದ್ದ ಪ್ರಾಣಿಗಳು ಕೈಯಿಲ್ಲದ ಪ್ರಾಣಿಗಳನ್ನು ತಿನ್ನುತ್ತವೆ." ಎಂದು ಹೇಳಿದ್ದಾನೆ. ಇದೇ ಪ್ರಕಾರ ಶಕ್ತಿಯುತ ಜೀವಿಯು ಅಶಕ್ತ ಜೀವಿಯನ್ನು ತನ್ನ ಆಹಾರವನ್ನಾಗಿ ಮಾಡಿಕೊಳ್ಳುತ್ತದೆ.

ಆದುದರಿಂದ ನೈಸರ್ಗಿಕ ತತ್ವವನ್ನವಲಂಬಿಸಿದ್ದ ಪ್ರಾಣಿಗಳು ಒಟ್ಟಾರೆ ಜೀವಿಸಬಲ್ಲವು. ಅವುಗಳ ಜೀವನದಲ್ಲೆಲ್ಲ ಒಂದೇ ಒಂದು ನಿಯಮವು ಅಧಿಕೃತವಾಗಿರುವದರಿಂದ ತೋರಿಕೆಗೆ ಅವು ಭಿನ್ನವೆಂದು ಕಂಡರೂ ಅವುಗಳ ಸಂಘ ಶಕ್ತಿಯು ಅಗಾಧವಾಗಿದೆ. ಅನ್ಯ ಶಕ್ತಿಯೊಂದು ಅವುಗಳ ಜೀವನ ಗತಿಯನ್ನು ಮಾರ್ಪಡಿಸ ಹೋದರೆ ಸಂಘಶಕ್ತಿಯಿಂದ ಅವು ಆ ಶಕ್ತಿಯನ್ನು ಎದುರಿಸಬಲ್ಲವು. ಈ ಪ್ರಕಾರ ಯೋಗ್ಯ ಶಕ್ತಿ ಸಮುಚ್ಚಯವಾದರೇನೇ ಜೀವಿಗಳಿರಬಲ್ಲವು. ಡಾರ್ವಿನ್ನನು ಸಹ (Survival of the fittest) ಎಂಬ ಇದೇ ತತ್ವವನ್ನೇ ಸಮರ್ಥಿಸಿರುವನು.

ಈ ಪ್ರಕಾರದ ಶಕ್ತಿ ಸಮುಚ್ಚಯದಿಂದ ನೈಸರ್ಗಿಕ ತತ್ವಕ್ಕೆ ಅವಿರೋಧವಾಗಿ ವರ್ತಿಸದಂತೆ ಮನುಷ್ಯರು ತಮ್ಮ ಜೀವನವನ್ನು ಸಾಗಿಸಿಕೊಂಡು ಹೋಗಲೆಂದೇ ಧರ್ಮವುಂಟಾಯಿತು. ಧರ್ಮಶಕ್ತಿಯ ಪ್ರಭಾವದಿಂದಲೇ ಮನುಷ್ಯನು ಉಳಿದ ಪ್ರಾಣಿಗಳಿಗಿಂತ ಶ್ರೇಷ್ಠನಾಗಿದ್ದಾನೆ. ಧರ್ಮವು ನೈಸರ್ಗಿಕ ತತ್ವಗಳನ್ನು ಅರುಹಿಕೊಟ್ಟು ಮನುಷ್ಯನನ್ನು ಪರಮಾತ್ಮನ ಸನ್ನಿಧಿಗೆ ಮುಟ್ಟಿಸುವದರಿಂದ ಜಗತ್ತಿನಲ್ಲಿ ಧರ್ಮಕ್ಕೆ ಬಹು ಬೆಲೆಯುಂಟು. ಧರ್ಮದಿಂದ ಜೀವಿಸುವ ಪ್ರಾಣಿಯು ನಾಶವಾಗುವದಿಲ್ಲವೆಂಬ ನಂಬುಗೆಯು ಪ್ರತಿಯೊಬ್ಬ ಧಾರ್ಮಿಕನಲ್ಲಿಯೂ ನೆಲೆಗೊಂಡಿದೆ.

ಆದರೆ ಧರ್ಮತತ್ವಗಳಿಗೂ ನೈಸರ್ಗಿಕ ತತ್ವಗಳಿಗೂ ಭಿನ್ನತ್ವವುಂಟಾದರೆ ಶಕ್ತಿಯು ಹ್ರಾಸವಾಗಹತ್ತುತ್ತದೆ. ಆ ಕಾಲಕ್ಕೆ ಆ ಧರ್ಮವು ಕೊರಗುತ್ತ ಸೊರಗುತ್ತ ಕೊನೆಗೆ ಮತ್ತೊಂದು ಧರ್ಮದಲ್ಲಿ ಲಯವನ್ನು ಹೊಂದುತ್ತದೆ. ಆದುದರಿಂದ ಧರ್ಮವನ್ನವಲಂಬಿಸುವವರು ಧರ್ಮತತ್ವಕ್ಕೂ ನೈಸರ್ಗಿಕ ತತ್ವಕ್ಕೂ ಇರುವ ಸಂಬಂಧವನ್ನು ಅರಿತುಕೊಂಡೇ ಅದರಂತೆ ಆಚರಿಸಬೇಕು.

ಸದ್ಯಕ್ಕೆ ಬೌದ್ಧ, ಕ್ರೈಸ್ತ, ಮಹಮ್ಮದೀಯ, ಹಿಂದು ಎಂಬ ನಾಲ್ಕು ಮುಖ್ಯ ಧರ್ಮಗಳುಂಟು. ಜನಸಂಖ್ಯೆಯ ಪರಿಮಾಣದಿಂದ ನೋಡಿದರೆ ಹಿಂದುಧರ್ಮವು ಸಣ್ಣದಾಗಿದ್ದರೂ ಅದು ವಿಶ್ವ ವ್ಯಾಪಕ ಧರ್ಮವಾಗಿರುವದರಿಂದ ಧರ್ಮಗಳ ಜನನಿಯೆಂದೆನ್ನಿಸಿಕೊಳ್ಳುತ್ತಿದೆ. ಉಳಿದ ಮೂರು ಧರ್ಮಗಳು ಈ ವಿಶಾಲವಾದ ಹಿಂದು ಧರ್ಮದ ಒಂದೊಂದು ಅಂಗಮಾತ್ರವೇ ಆಗಿವೆಯೆಂದು ಬಲ್ಲವರು ಹೇಳುತ್ತಾರೆ. ನೈಸರ್ಗಿಕ ಧರ್ಮಕ್ಕೂ ಈ ಹಿಂದು ಧರ್ಮಕ್ಕೂ ಏನೂ ವ್ಯತ್ಯಾಸವಿಲ್ಲ. ಪರಮಾತ್ಮನಿಂದ ಸರ್ವಾಂಗಸುಂದರವಾಗಿ ನಿರ್ಮಿಸಲ್ಪಟ್ಟ ಅವುದೊಂದು ಧರ್ಮವಿದ್ದರೆ ಅದು ಹಿಂದು ಧರ್ಮವೆಂದೇ ಹೇಳಬಹುದು. ಉಳಿದ ಧರ್ಮಗಳು ಈ ಮಹಾಧರ್ಮದ ಶಾಖೋಪಶಾಖೆಗಳು ಮಾತ್ರ.

ವಸ್ತುಸ್ಥಿತಿಯು ಹೀಗಿದ್ದರೂ ವಿಶ್ವ ವ್ಯಾಪಕವಾದ ಈ ಹಿಂದು ಧರ್ಮದನುಯಾಯಿಗಳು ಮಾತ್ರ ದಿನೇದಿನೇ ಶರೀರದಿಂದ ಕ್ಷೀಣರೂ, ಮನದಿಂದ ದುರ್ಬಲರೂ, ಆತ್ಮದಿಂದ ಅಧೋಗತಿಯನ್ನು ಹೊಂದಿದವರೂ ಆಗುತ್ತಿರಲು ಕಾರಣವೇನಿರಬಹುದು? ಇವರ ಧರ್ಮವು ಬೋಧಿಸುವ ವಿಶ್ವವ್ಯಾಪಿತ್ವ, ಸರ್ವಾತ್ಮ ಸಮತಾಭಾವನೆ, ಮೊದಲಾದ ಮೋಕ್ಷೋಪಾಯಗಳೆತ್ತ! ಮತ್ತು ಇವರು ಹೊಂದಿರುವ ಸಂಕುಚಿತ ಸ್ವಾರ್ಥತ್ವ, ಮೇಲುಕೀಳುಗಳೆಂಬ ಬಂಧನಸಾಧನಗಳೆತ್ತ! ಹೇಳುವದೆಲ್ಲಿ? ಹೋಗುವದೆಲ್ಲಿ? ಭೂತನಾಥನಲ್ಲಿಗೋ? ಭೂತನಲ್ಲಿಗೋ?

ಸದ್ಯದ ಹಿಂದು ಜನಾಂಗವು ಆತ್ಮೀಯತ್ವವನ್ನೇ ಮರೆತಂತೆ ಕಾಣುತ್ತದೆ. ಆದುದರಿಂದಲೇ ಅದರ ಶಕ್ತಿಯು ಪರಿಪರಿಯಿಂದ ಹ್ರಾಸವಾಗುತ್ತಲಿದೆ. ನೈಸರ್ಗಿಕ ತತ್ವಗಳೊಂದು ಕಡೆಗುಳಿದು ಮೂಢ ರೂಢಿಗಳ ಪ್ರೌಢಿಮೆಯಾಗಿದೆ. ಆದುದರಿಂದಲೇ ಈ ಧರ್ಮವು ಉಳಿದ ಧರ್ಮಗಳ ತುತ್ತಾಗಹತ್ತಿದೆ. ಹಿಂದು ಧರ್ಮವು ದಿನವೊಂದಕ್ಕೆ ಭಯಂಕರವಾಗಿ ಸಣ್ಣಾಗುತ್ತ ನಡೆದಿರುವುದನ್ನೂ ಮತ್ತು ಪರಧರ್ಮೀಯರು ರಚಿಸಿರುವ ಅಗಾಧವಾದ ಜಾಲವನ್ನೂ ನೋಡಿದರೆ ಹಿಂದು ಧರ್ಮದಲ್ಲಿ ಒಂದು ಕೂದಲೆಳೆಯಷ್ಟು ಅಭಿಮಾನವುಳ್ಳವನಿಗು ಕೂಡಾ ಎದೆಯು ಧಸ್ಸೆನ್ನದೆ ಇರಲಾರದು.

ಇಷ್ಟೆಲ್ಲ ಅನರ್ಥಕ್ಕೆ ಅನ್ಯರಾರೂ ಕಾರಣರಲ್ಲ. ನಮಗೆ ನಾವೇ ಕಾರಣರು. ಅನ್ಯರನ್ನು ದೂಷಿಸುತ್ತ ಕೂಡ್ರುವದೂ ಒಂದು ನಿಸರ್ಗ ನಿಯಮಕ್ಕೆ ವಿರೋಧವಾದುದಾಗಿದೆ. ನಿಸರ್ಗ ಧರ್ಮದಿಂದ ನಾವು ಎಷ್ಟು ವಕ್ರಗತಿಯಿಂದ ಸಾಗಿರುವೆವೆಂಬುದನ್ನು ಅವಲೋಕಿಸಬೇಕು. ನಮ್ಮೊಳಗೇ ತಿಕ್ಕಾಟವಾಡುತ್ತ ನಮ್ಮ ಶಕ್ತಿಗಳನ್ನೆಲ್ಲ ಅನೇಕ ಮುಖವಾಗಿ ಮಾಡಿ ಹೇಗೆ ಕ್ಷೀಣವಾಗುತ್ತಿರುವೆವೆಂಬುದನ್ನು ಕಂಡುಕೊಳ್ಳಬೇಕು. ನಾವು ಸಜೀವಿಗಳಾಗಿ ನಮ್ಮ ಜೀವನವನ್ನು ಚೆನ್ನಾಗಿ ಸಾಗಿಸಬೇಕೆಂದಿದ್ದರೆ ಈಗಲಾದರೂ ನಮ್ಮ ಶಕ್ತಿಗಳನ್ನು ನಿಸರ್ಗ ಸಿದ್ಧ ನಿಯಮದಂತೆ ಏಕಮುಖವಾಗಿ ಕೂಡಿಸಬೇಕು. ಇಲ್ಲದಿದ್ದರೆ ಅನ್ಯರ ಶಕ್ತಿ ವರ್ಧನೆಗೆ ನಾವೊಂದು ಸುಗ್ರಾಸ ಮಾಂಸದ ಮುದ್ದೆಯಾಗುವೆವೆಂಬುದು ಜ್ಞಾಪಕದಲ್ಲಿರಲಿ.

ಪಾಟೀಲ ಲಿಂಗನಗೌಡ.

ರವೀಂದ್ರನಾಥರ ಸ್ವಾತಂತ್ರ್ಯ ಮೀಮಾಂಸೆ.

"ಪ್ರಾಚೀನ ಕಾಲದಲ್ಲಿ ಜ್ಞಾನ ಧರ್ಮಾದಿಗಳು ಬಹು ಉಚ್ಚ ಸ್ಥಿತಿಯಲ್ಲಿದ್ದುದರಿಂದ ಬಹು ಮನ್ನಿಸಲ್ಪಡುತ್ತಿದ್ದವು. ಆದರೆ ಸದ್ಯದ ಕಾಲದಲ್ಲಿ ಧನದ ಪ್ರವಾಹವು ಇವುಗಳನ್ನು ತೇಲಿಸಿಕೊಂಡು ಹೋದುದರಿಂದ ನಮ್ಮ ಮನಸ್ಸಿಗೂ ಮತ್ತು ಹೃದಯಕ್ಕೂ ಕೂಡಿಯೇ ಧಕ್ಕೆ ತಗಲಿತು. ಈ ಧನದ ಸಹಾಯಕ್ಕೆ ಶಾಸ್ತ್ರೀಯ ಶೋಧವೂ ಒಂದು ಸಹಕಾರಿಯೇ ಆಯಿತಲ್ಲದೆ ರಾಷ್ಟ್ರ ಪೂಜ್ಯತೆಯೂ ಮತ್ತು ಸುಸಂಘಟಿತ ಸ್ವಾರ್ಥತೆಯೂ ಇದಕ್ಕೆ ಅನುಕೂಲವಾದವು. ಈ ಧನದ ಸೆಳವಿಗೆ ಸಿಕ್ಕ ಸದ್ಯದ ಮನುಷ್ಯ ಜನಾಂಗವು ಕಾಡು ಸ್ಥಿತಿಗೆ ಬಂದುಬಿಟ್ಟಿದೆ.

ಆಧುನಿಕ ಸಭ್ಯತೆಯಲ್ಲಿ ಐಕ್ಯ ತತ್ವಕ್ಕೆ ಬಲವಿಲ್ಲ. ಸದ್ಯದ ಶಿಕ್ಷಣವು ಕೂಡಾ ಸತ್ಯಕ್ಕೆ ಅಂಜದಂಥ ಮನೋವೃತ್ತಿಯನ್ನುಂಟುಮಾಡಹತ್ತಿದೆ. ಸತ್ಯವೆಂದರೆ ತನ್ನ ಅತ್ಯಂತಿಕ ಗುರಿಯೆಂಬುದನ್ನು ಮನುಷ್ಯನು ತಿಳಿಯನು. ಈ ಸತ್ಯದ ಅಭಾವವಾದುದರಿಂದಲೇ ಯಂತ್ರಯುಗದ ಆಳಿಕೆಯು ಪ್ರಾರಂಭವಾಯಿತು. ಮನುಷ್ಯನು ಯಂತ್ರಕ್ಕಾಧೀನನಾಗಿ ಪರದೇಶಿಯಾದನು. ಪಾಶ್ಚಿಮಾತ್ಯರು ಕೇವಲ ಶಕ್ತಿ ಲಾಭಗಳಿಗಾಗಿ ಪೌರ್ವಾತ್ಯರ ಮನುಷ್ಯತ್ವವನ್ನು ಹರಣ ಮಾಡಿದರು. ಆದುದರಿಂದಲೇ ಈಗಿನ ಜನಾಂಗವು ಈಶ್ವರನ ಆಶೀರ್ವಾದವನ್ನು ಹೊಂದಿರುವುದಿಲ್ಲ. ರೇಲ್ವೆ ಬಂಡಿಗಳು ಉಗಿ ಹಡಗಗಳು ಅನೆಷ್ಟೋ ದೇಶದಿಂದ ದೇಶಕ್ಕೆ ಓಡಾಡುತ್ತಿದ್ದರೂ ಮನುಷ್ಯನ ಹೃದಯಗಳು ಬಿನ್ನಬಿನ್ನವಾಗಿ ಒಂದಕ್ಕೊಂದು ಬಹು ದೂರದಲ್ಲಿರುವುದಿಲ್ಲವೇ? ವ್ಯಕ್ತಿಯ ಮತ್ತು ಜನಾಂಗದ ಮನುಷ್ಯತ್ವವನ್ನು ದಮನ ಮಾಡುವಂಥ ಭಯಂಕರವಾದ ಯೋಜನೆಗಳು ಜಗತ್ತಿನಲ್ಲೆಲ್ಲ ಉಂಟಾದುದರಿಂದ ಜಗತ್ತೇ ಪಾತಾಳಕ್ಕಿಳಿಯುವಂಥ ಸ್ಥಿತಿಯು ಬಂದಿತು. ತಮಗುಂಟಾದ ಈ ಆಕಸ್ಮಿಕ ಗಂಡಾಂತರವನ್ನು ಕಂಡು ಪಾಶ್ಚಾತ್ಯ ರಾಷ್ಟ್ರಗಳು ಶಾಂತತೆಯ ಜಪವನ್ನು ಮಾಡತೊಡಗಿವೆ. ಆದರೆ ತಾವು ಅನ್ಯಾಯದಿಂದ ಹರಣ ಮಾಡಿರುವ ಅಧಿಕಾರವನ್ನೂ ಲಾಭವನ್ನೂ ಬಿಟ್ಟುಕೊಡದೆ ಆತ್ಮ ಸಂರಕ್ಷಣೆಗಾಗಿ ಪರಸ್ಪರ ಸಂಘಟನೆಯನ್ನು ಮಾಡತೊಡಗಿವೆ. ಆದರೆ ಈ ಉಪಾಯದಿಂದ ಅವುಗಳ ಸಂರಕ್ಷಣೆಯಾದೀತೆ? ಯಾವ ಪ್ರಕಾರ ಒಂದು ರಾಷ್ಟ್ರವು ಮತ್ತೊಂದು ಬಲಿಷ್ಠ ರಾಷ್ಟ್ರದೊಡನೆ ಯಾವಾಗಲೂ ಎಚ್ಚರದಿಂದಿರಬೇಕಾಗುವದೋ ಅದೇ ಪ್ರಕಾರ ಒಂದು ಅಶಕ್ತ ರಾಷ್ಟ್ರದೊಡನೆಯೂ ಇರಬೇಕಾಗುವದು. ಅಶಕ್ತ ರಾಷ್ಟ್ರವು ಬಲಿಷ್ಠ ರಾಷ್ಟ್ರ ಶಕ್ತಿಯನ್ನು ತಡೆಯುವುದಿಲ್ಲವಾದುದರಿಂದ ಆನೆಯು ಹೊಳು ಉಸುಕಿನಲ್ಲಿ ಸಿಗಬೀಳುವಂತೆ ಬಲಿಷ್ಠ ರಾಷ್ಟ್ರಗಳೂ ಅಧಃಪತಿತವಾಗುವವು.

ತಾವು ಸ್ವತಂತ್ರರೆಂಬ ಹುಚ್ಚು ಪಾಶ್ಚಾತ್ಯರಲ್ಲಿ ಬೇರೂರಿದೆ. ಆದರೆ ಆ ಸ್ವಾತಂತ್ರ್ಯವೆಂಬುದು ಕೆಲವೊಂದು ಜನರ ವಶದಲ್ಲಿರುವದೆಂಬುದನ್ನು ಅವರು ಅರಿಯರು. ಅವರ ಸ್ವಾತಂತ್ರ್ಯವು ಮನುಷ್ಯಕೃತವಾದುದರಿಂದ ಅವರ ವಿಚಾರಸರಣಿಯು ಬಂಧನಕ್ಕೊಳಗಾಗಿದೆ. ಸದ್ಯದ ಸ್ವಾತಂತ್ರ್ಯ ಕಲ್ಪನೆಯಿಂದ ಅವರು ವಿಶಿಷ್ಟ ರೀತಿಯಿಂದಲೇ ವಿಚಾರ ಮಾಡಬೇಕಾಗಿದೆ ವ್ಯತ್ಯಸ್ತ ವಿಚಾರವುಳ್ಳವರನ್ನು ದಮನ ಮಾಡುವುದಕ್ಕೆ ಹಿಂದು ಮುಂದು ನೋಡರು. ಹೀಗಾಗಿ ಅವರು ಪರರ ಸ್ವಾತಂತ್ರ್ಯವನ್ನು ಹರಣ ಮಾಡುವದರಲ್ಲಿ ತಮ್ಮ ಸ್ವಾತಂತ್ರ್ಯವನ್ನು ಸಹ ಕಳೆದುಕೊಳ್ಳಲು ಸಿದ್ಧರಾಗಿದ್ದಾರೆ.

ನಿಜವಾದ ಸ್ವಾತಂತ್ರ್ಯವು ಆತ್ಮ ಮತ್ತು ಮನಸ್ಸಿನದಾಗಿದೆ. ಅದು ನಮಗೆ ಹೊರಗಿನಿಂದ ಬಂದುದಲ್ಲ. ಯಾವನು ನಿಜವಾಗಿ ಸ್ವಾತಂತ್ರ್ಯವನ್ನು ಪ್ರೀತಿಸುವನೋ ಮತ್ತು ಆನಂದಪೂರ್ವಕವಾಗಿ ಅನ್ಯರಿಗೂ ಅದನ್ನು ಉಂಟುಮಾಡಿಕೊಡುವನೋ ಅವನೇ ನಿಜವಾಗಿ ಸ್ವತಂತ್ರನು. ಯಾವನು ಅನ್ಯರನ್ನು ಬಂಧನದಲ್ಲಿಡಲಪೇಕ್ಷಿಸುತ್ತಾನೆಯೋ ಅವನು ಅವರ ಸಂಗಡವೇ ಇರಬೇಕಾದುದರಿಂದ ತಾನು ಕೂಡಾ ಬಂಧನಕ್ಕೊಳಗಾಗುವನು. ಆದುದರಿಂದ ನನ್ನ ದೇಶಬಾಂಧವರು ತಮಗೆ ಯಾವ ತರದ ಸ್ವಾತಂತ್ರ್ಯಬೇಕೆಂಬುದನ್ನು ತಾವೇ ವಿಚಾರಿಸಲಿ ಮನುಷ್ಯ ಜೀವನವನ್ನು ಒತ್ತಿ ಒಂದು ಕಡೆ ಇರಿಸುವದರಿಂದ ನಾವು ಜೀವನದ ಬೆಳವಣಿಗೆಯನ್ನು ಕುಂದಿಸಿ ಬಿಟ್ಟಿದ್ದೇವೆ. ಅವ್ರದೊಂದು ಪಕ್ಷಿಯ ಪಕ್ಕಗಳನ್ನೆಲ್ಲ ಕಿತ್ತು ಒಂದು ಪಂಜರದಲ್ಲಿ ಹಾಕಿ ಪಂಜರವನ್ನೇ ಪೂಜಿಸುವಂತೆ ನಾವು ಜೀವಿಗಳನ್ನು ಪಂಜರವಿಲ್ಲರಿಸಿ ನಮ್ಮ ಸಾಮಾಜಿಕ ಬಂಧನೆಗಳನ್ನು ನಾವೇ ಹೊಗಳಿಕೊಳ್ಳುತ್ತಿದ್ದೇವೆ. ಯಾವ ಜನಾಂಗವು ತನ್ನ ಬಂಧುಗಳನ್ನೇ ಬಂಧನವಿಲ್ಲರಿಸಿ ತನ್ನ ಕುಕಾರ್ಯದಿಂದ ಅವರನ್ನು ಅನೀತಿ ಮಾರ್ಗಕ್ಕೆ ಎಳೆಯುವದೋ ಅದು ಸ್ವಾತಂತ್ರ್ಯವನ್ನು ದೊರಕಿಸಲು ಎಂದೂ ಅರ್ಹವಾಗದು.

ಹಿಂದುಸ್ಥಾನದ ಸದ್ಯದ ಸಭ್ಯತೆಯು ವೈಯಕ್ತಿಕ ಸ್ವಾತಂತ್ರ್ಯವನ್ನು ದಮನ ಮಾಡಿ ಪ್ರತಿಯೊಂದು ವ್ಯಕ್ತಿಯು ಉಚ್ಚವಿರಲಿ, ನೀಚವಿರಲಿ, ಶರಣು ಬರುವಂತೆ ಮಾಡುತ್ತದೆ. ಆದುದರಿಂದ ಸದ್ಯದ ಜೀವನವು ಆಹುತಿಯಾಗುತ್ತಿದ್ದರೂ ಅವುದೊಂದು ಧ್ಯೇಯ ಸಾಧನೆಗಾಗಿಯಾಗುವುದಿಲ್ಲ. ಇದೊಂದು ಯಜ್ಞವೇ ಸರಿ. ಆದರೆ ಈ ಯಜ್ಞಕ್ಕೆ ಆರಾಧನೆಗಾಗಿ ದೇವರೇ ಇಲ್ಲ. ಆದುದರಿಂದಲೇ ಇದು ಸಂಪೂರ್ಣವಾಗಿ ನಿರುಪಯೋಗವಾಗಿದೆ. ಪಾಶ್ಚಾತ್ಯರು ಧರ್ಮದ ಕಡೆಗೆ ನೋಡದೆ ತಮ್ಮ ಯಾಂತ್ರಿಕ ಶಕ್ತಿಯನ್ನೇ ಹೆಚ್ಚಿಸುತ್ತಿದ್ದಾರೆ. ಮತ್ತು ಹಿಂದುಸ್ಥಾನವು ಈ ಯಾಂತ್ರಿಕ ಶಕ್ತಿಗಾಧೀನವಾಗಿ ತನ್ನ ವೈಶಿಷ್ಟ್ಯವನ್ನೇ ಮರೆಯಹತ್ತಿದೆ."

ಅನಂತರ ಅಧ್ಯಕ್ಷ ಸ್ಥಾನವನ್ನಲಂಕರಿಸಿದ **ಶ್ರೀ. ಸರೋಜಿನಿ ದೇವಿ ನಾಯಿಡು** ಇವರು ಹೇಳಿದುದೇನೆಂದರೆ 'ಜನಾಂಗವು ಅಶಕ್ತವಾಗುವುದರಿಂದ ಜಗತ್ತಿಗೇ ಹಾನಿಯಾಗುವುದಲ್ಲದೆ ಮನುಷ್ಯಜನಾಂಗಕ್ಕೂ ಒಂದು ಕೊರತೆಯಾಗುವುದು. ಆದುದರಿಂದ ಶಕ್ತಿವಂತರಾಗಿ ಸ್ವತಂತ್ರರಾಗುವುದು ತಮ್ಮ ಹಿತಕ್ಕಾಗಿಯೇ ಅಲ್ಲದೆ ಮನುಷ್ಯ ಜಾತಿಯ ಹಿತಕ್ಕಾಗಿಯೂ ಅವರ ಕರ್ತವ್ಯವಾಗಿದೆ. ಎಲ್ಲಿಯವರೆಗೆ ಹಿಂದೀಯರು ತಮ್ಮ ದೇಶದೊಳಗಿನ ಪ್ರತಿಯೊಂದು ಭಾಗದ ಮತ್ತು ಸಂಗಡದ ಜನರಿಗೆ ಸ್ವಾತಂತ್ರ್ಯವನ್ನು ಕೊಡುವದಿಲ್ಲವೋ ಅಲ್ಲಿಯವರೆಗೆ ಎಂದೂ ಸ್ವತಂತ್ರರಾಗರು.'

—ನೀಲ ನಾಗಿಣಿಯು ದಿಲ್ಲಿಯಿಂದ ತಿಕೀಟು ಇಲ್ಲದೆ ಗನೆಯ ವರ್ಗದ ಡಬ್ಬಿಯಲ್ಲಿ ಕುಳಿತು ಕಲಕತ್ತೆಯವರೆಗೆ ಹೋಗಲು ಅಲ್ಲಿ ಅವಳು ಬಂಧಿಸಲ್ಪಟ್ಟಳು.

ಶರಣಸಂದೇಶ.

ಶಾ. ಶ. ೧೮೫೫ ನೆಯ ಮಾರ್ಗಶಿರ ಬ. ೯ ಸೋಮವಾರ.

ಮಹಾಸಭೆಯು ಯಾರ ಕೈಯಲ್ಲಿ?

ಶ್ರೀಮದ್ವೀರಶೈವ ಮಹಾಸಭೆಯು ವೀರಶೈವ ಜನಾಂಗದ ಮುಖ್ಯ ಸಂಸ್ಥೆಯಾಗಿದೆಯಷ್ಟೆ. ಈ ಸಂಸ್ಥೆಯ ಮೂಲಕ ಸರ್ವ ಸಂಗತಿಗಳಲ್ಲಿಯೂ ವೀರಶೈವ ಸಮಾಜವನ್ನು ಸುಧಾರಿಸಬಹುದು. ಕರ್ನಾಟಕ, ಆಂಧ್ರ, ತಮಿಳು ಮತ್ತು ಮಹಾರಾಷ್ಟ್ರ ಈ ನಾಲ್ಕು ದೇಶಗಳಲ್ಲಿಯೂ ಇರುವ ವೀರಶೈವ ಮತಬಾಂಧವರಲ್ಲಿ ಪರಸ್ಪರ ಸಹಾಯ ಸಹಾನುಭೂತಿಗಳನ್ನುಂಟುಮಾಡಿ ರಾಷ್ಟ್ರದಲ್ಲಿ ಒಂದು ಪ್ರಬಲವಾದ ಶಕ್ತಿಯನ್ನು ಕೂಡಾ ಈ ಮಹಾಸಭೆಯು ಉಂಟು ಮಾಡಬಹುದು.

ಈ ವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರ ದೇಶಗಳಲ್ಲಿಯ ವೀರಶೈವರು ಮಾತ್ರ ಈ ಮಹಾಸಭೆಯಲ್ಲಿ ಹೆಚ್ಚಾಗಿ ಸೇರುತ್ತ ಬಂದಿದ್ದಾರೆಯೇ ವಿನಾ ಆಂಧ್ರ ಮತ್ತು ತಮಿಳು ನಾಡುಗಳಲ್ಲಿ ಇದರ ಒಂದಾದರೂ ಅಧಿವೇಶನವು ನೆರೆದಿಲ್ಲ. ಆ ಉಭಯ ಸುಧಾರಿಸಿದ ನಾಡುಗಳ ವೀರಶೈವ ಬಾಂಧವರೂ ಇದರಲ್ಲಿ ಸೇರಿದ್ದಾದರೆ ಎಷ್ಟೋ ಪ್ರಯೋಜನವಾಗುವದು. ಈ ನಾಲ್ಕು ದೇಶಗಳಲ್ಲಿರುವ ನಾಲ್ವತ್ತು ಲಕ್ಷ ವೀರಶೈವರು ಏಕಮುಖವಾಗಿ ಶಿಕ್ಷಣ ಪ್ರಸಾರ, ಸಮಾಜ ಸುಧಾರಣೆ, ಧಾರ್ಮಿಕ ಜಾಗೃತಿ ಮೊದಲಾದ ರಾಷ್ಟ್ರ ಪೋಷಕವಾದ ಅನೇಕ ಕಾರ್ಯಗಳನ್ನು ಮಾಡಿದ್ದಾದರೆ ಭರತ ಖಂಡದಲ್ಲಿ ಇದೊಂದು ಪ್ರತ್ಯೇಕವಾದ ಸಂಸ್ಕೃತಿ, ತತ್ವಜ್ಞಾನ, ಆಚಾರವಿಚಾರಗಳಿಂದಿದ್ದುದು ಈ ರಾಷ್ಟ್ರಕ್ಕೆ ಭೂಷಣಪ್ರದವಾದುದಾಗಿಯೇ ಪರಿಣಮಿಸಲಿಕ್ಕಿಲ್ಲವೆ?

ಇಂತಹ ಮಹತ್ಕಾರ್ಯವಾಗಬೇಕಾದರೆ ಈ ಮಹಾಸಭೆಯು ಯಾರ ಕೈಯಲ್ಲಿರಬೇಕು? ಯಾರು ಈ ಪ್ರಕಾರ ಸಮಾಜಸೇವೆ ಮಾಡಲು ಸಿದ್ಧರಾಗಿದ್ದಾರೆಯೋ ಅವರ ಕೈಯಲ್ಲಿರಬೇಕಾದುದೇ ಯುಕ್ತವಲ್ಲವೆ? ಶಕ್ತಿಯೊಬ್ಬರ ಕೈಯಲ್ಲಿದ್ದು ಕಲಿತನ ಮತ್ತೊಬ್ಬರಲ್ಲಿದ್ದರೆ ಯುದ್ಧದಲ್ಲಿ ಜಯವಾಗುವದು ಹೇಗೆ ಶಕ್ಯವಿಲ್ಲವೋ ಹಾಗೆಯೇ ಮಹಾಸಭೆಯ ವಿಷಯದಲ್ಲಿ ಪ್ರೇಮವಾದರಗಳೇ ಇಲ್ಲದ ಮತ್ತು ಅದರ ಮೂಲಕ ಸಮಾಜಸೇವೆಗೆ ಸಿದ್ಧರಿಲ್ಲದವರ ಕೈಯಲ್ಲಿ ಮಹಾಸಭೆಯ ಸೂತ್ರವಿದ್ದು ಸಮಾಜಸೇವೆ ಮಾಡಬೇಕೆಂದು ಹಂಬಲಿಸುವವರು ಬರಿಗೈಯವರಿದ್ದರೆ ಮಹಾಸಭೆಯಿಂದ ಮಹತ್ಕಾರ್ಯವಾಗುವದು ಸಾಧ್ಯವೇ ಇಲ್ಲ.

ಈ ವರೆಗೂ ಮಹಾಸಭೆಯಿಂದ ವಿಶೇಷ ಕಾರ್ಯವಾಗದಿದ್ದುದಕ್ಕೆ ಇದೂ ಒಂದು ಮುಖ್ಯ ಕಾರಣವಾಗಿದ್ದಿತೆಂದೇ ಹೇಳಬಹುದು. ಪದವಿಗಳಿಂದಲೋ ಅಥವಾ ಅಧಿಕಾರದಿಂದಲೋ ಇಲ್ಲವೆ ಸಂಪತ್ತಿನಿಂದಲೋ ಸಮಾಜದಲ್ಲಿ ಪ್ರಮುಖರಾಗಿದ್ದವರ ಕೈಯಲ್ಲಿಯೇ ಮಹಾಸಭೆಯಿದ್ದಿತು. ಅವರು ಸಮಾಜಕ್ಕೆ ಭೂಷಣಪ್ರದರಿದ್ದರು. ಅವರಿಗೆ ಮಹಾಸಭೆಯ ಕಾರ್ಯ ಮಾಡುವ ಇಷ್ಟ ಸಾಹಸೋತ್ಸಾಹಗಳಿರಬೇಕಾಗಿದ್ದಿತಷ್ಟೆ. ಅವರು ತಮ್ಮ ಆಯುಷ್ಯದಲ್ಲಿ ಇದು ಒಂದು ಪವಿತ್ರವಾದ ಮುಖ್ಯ ಕಾರ್ಯವೆಂದೇ ಭಾವಿಸಿ ತಾವು ಸ್ವಸಂತೋಷದಿಂದ ಇದರಲ್ಲಿ ಸೇರಿರಬೇಕಲ್ಲವೆ?

ಯಾರಿಗೆ ಯಾವ ಕಾರ್ಯದ ವಿಷಯದಲ್ಲಿ ಪ್ರೇಮಾದರಗಳೆ ಇಲ್ಲವೋ ಅವರಿಗೆ ಆ ಕೆಲಸವನ್ನು ನಾವಾಗಿಯೇ ವಹಿಸಿ ಆ ಮೇಲೆ ಅವರು ಅದಕ್ಕಾಗಿ ಪ್ರಯತ್ನಿಸುವದಿಲ್ಲವೆಂದು ಅವರನ್ನು ಆಕ್ಷೇಪಿಸುವದರಲ್ಲಿ ಅರ್ಥವೇನಿದೆ? ಮಹಾಸಭೆಯ ಕಾರ್ಯವು ಸಮಾಜಕ್ಕೆ ಪರಿಣಾಮಕಾರಿಯಾಗಿ ಜರುಗದಿದ್ದುದಕ್ಕೆ ಈ ಪ್ರಕಾರ ಇಷ್ಟವಿಲ್ಲದವರ ಕಡೆಗೆ ವಹಿಸುತ್ತ ಬಂದಿರುವದೂ ಒಂದು ಕಾರಣವಾಗಿದೆ

ಈ ಸಾರಿಯ ಮಹಾಸಭೆಯಿಂದ ಈ ಮುಖ್ಯ ದೋಷದ ನಿವಾರಣೆಯಾಯಿತು. ಇದಕ್ಕೊಂದು ನಿಬಂಧನೆಯುಂಟಾಯಿತು. ಇದೇ ಈ ಸಾರಿಯ ಮಹಾಸಭೆಯಲ್ಲಾದ ಮಹತ್ಕಾರ್ಯವು. ಆ ನಿಬಂಧನೆಗನುಗುಣವಾಗಿ ಮಧ್ಯವರ್ತಿ ಮಂಡಲವು ಧಾರವಾಡದಲ್ಲಿ ಕೂಡಿ ಪ್ರಾಂತಿಕ ಮತ್ತು ಜಿಲ್ಲಾ ಮಂಡಲಗಳನ್ನೇರ್ಪಡಿಸಿಕೊಳ್ಳಲು ಅವಕಾಶಕೊಟ್ಟಿತು. ಮಹಾಸಭೆಯ ಸದಸ್ಯರನ್ನು ಮಾಡುವ ಒಪ್ಪಿಗೆ ಪತ್ರಿಕೆಗಳನ್ನು ಸಿದ್ಧಗೊಳಿಸಿ ಎಲ್ಲ ಭಾಗಗಳ ಮಧ್ಯವರ್ತಿ ಮಂಡಲದ ಸದಸ್ಯರ ಕಡೆಗೆ ಕಳಿಸಿದ್ದಾಗಿದೆ.

ಈ ಒಪ್ಪಿಗೆ ಪತ್ರಿಕೆಯ ಪ್ರಕಾರ ವರುಷಕ್ಕೆ ಒಂದು ರೂಪಾಯಿಯನ್ನು ಕೊಟ್ಟು ಮಹಾಸಭೆಗೆ ಸದಸ್ಯರಾಗಿ ಮಹಾಸಭೆಯ ಮೂಲಕ ಸಮಾಜಸೇವೆಯನ್ನು ಮಾಡಲಿಚ್ಛಿಸುವ ಸಕಲ ಸ್ತ್ರೀ ಪುರುಷರೂ ಈಗ ಮುಂದೆ ಬರಲು ಅವಕಾಶವಾಗಿದೆ. ಅವರೇ ಮಹಾಸಭೆಯ ಸೂತ್ರಧಾರಕರಾಗುವರು. ಇವರು ಆರಿಸಿ ಕಳುಹಿಸುವ ಪ್ರತಿನಿಧಿಗಳ ಕೈಯಲ್ಲಿಯೇ ಇನ್ನು ಮುಂದೆ ಮಹಾಸಭೆಯಿರುವದು.

ಆದುದರಿಂದ ಸಮಾಜ ಸೇವಕರು ಈಗ ಮುಂದೆ ಬರಲಿ. ತಮ್ಮ ತಮ್ಮ ಜಿಲ್ಲೆ ತಾಲೂಕುಗಳಲ್ಲಿ ಸದಸ್ಯರನ್ನು ಹೆಚ್ಚು ಮಾಡಲಿ. ಆ ಸದಸ್ಯರು ಆರಿಸಿಕೊಟ್ಟ ಪ್ರತಿನಿಧಿಗಳೇ ಮಹಾಸಭೆಯ ಪ್ರತಿನಿಧಿಗಳಾಗುವರು. ಅವರು ಮಹಾಸಭೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಬೇಕಾದ ರೀತಿಯಲ್ಲಿ ಸಮಾಜೋನ್ನತಿಯನ್ನು ಮಾಡಲಿ.

ಮಧ್ಯವರ್ತಿ ಮಂಡಲದವರೇ ಸದಸ್ಯರನ್ನು ಮಾಡಬೇಕೆಂದು ನಿಯಮವಿಲ್ಲ. ಯಾವ ವೀರಶೈವ ಸಮಾಜಾಭಿಮಾನಿಗಳಾದರೂ ಸದಸ್ಯರನ್ನು ಮಾಡಬಹುದು. ಆದುದರಿಂದ ಅನ್ಯರನ್ನು ಆಕ್ಷೇಪಿಸಲು ಈಗ ಅವಕಾಶವಿಲ್ಲ. ಸಮಾಜಸೇವಾಪೇಕ್ಷಿಗಳು ಈಗ ಮುಂದೆ ಬಂದು ಸದಸ್ಯರನ್ನು ಮಾಡಿ ಅವರ ಮೂಲಕ ಮಹಾಸಭೆಯನ್ನು ತಮ್ಮ ಕೈಯಲ್ಲಿ ಏಕೆ ತೆಗೆದುಕೊಳ್ಳಬಾರದು?

ಮಹಾಸಭೆಯಿಂದೇನೂ ಆಗಿಲ್ಲ, ಮಹಾಸಭೆಯವರೇನೂ ಮಾಡುವದಿಲ್ಲ, ಎಂದು ನಾನಾ ರೀತಿ ಆಕ್ಷೇಪಿಸುವವರು ಈಗ ಮುಂದೆ ಬಂದು ತಮ್ಮ ಕೈಯಲ್ಲಿ ಮಹಾಸಭೆಯನ್ನು ತೆಗೆದುಕೊಂಡು ಸಮಾಜಸೇವೆಯನ್ನು ತಾವು ಮಾಡಿ ತೋರಿಸಲು ಇದು ಸುಸಮಯವಲ್ಲವೆ? ರಾಷ್ಟ್ರೀಯ ಸಭೆಯಾದರೂ ಜನ ಜಾಗೃತಿಯಾಗಿ ರಾಷ್ಟ್ರದ ಸೇವಕರ ಅಧೀನವಾದಾಗಲೇ ಪರಿಣಾಮಕಾರಿಯಾದ ಕಾರ್ಯ ಮಾಡಲಿಲ್ಲವೆ? ವೀರಶೈವ ಸಮಾಜ ಸೇವಾಪ್ರಿಯರು ಸಮಾಜದಲ್ಲಿ ಜಾಗೃತಿಯನ್ನುಂಟುಮಾಡಿ ಈಗೇಕೆ ತಮ್ಮ ಕೈಯಲ್ಲಿ ಮಹಾಸಭೆಯನ್ನು ತೆಗೆದುಕೊಳ್ಳಬಾರದು?

ನಿಮ್ಮ ಶರಣಂಗಲ್ಲದೆ ಮತ್ತೊಂದನರಿಯೆ!

ಹೊನ್ನಿನೊಳಗೊಂದೊರೆಯ | ಸೀರೆಯೊಳಗೊಂದೆಳೆಯ | ಅನ್ನದೊಳಗೊಂದಗುಳ | ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ| ನಿಮ್ಮಾಣೆ ನಿಮ್ಮ ಪುರಾತನರಾಣೆ | ನಿಮ್ಮ ಶರಣಂಗಲ್ಲದೆ ಮತ್ತೊಂದನರಿಯೆ ಕೂಡಲ ಸಂಗಮದೇವ||

ಪರಮಾತ್ಮನು ತಾನು ಹುಟ್ಟಿಸಿದಂಥ ಸಕಲ ಪ್ರಾಣಿಗಳಿಗೆ ಅನ್ನ ನೀರುಗಳನ್ನು ಕೊಟ್ಟು ಸಲಹುತ್ತಿರುತ್ತಾನೆ. ಇದಕ್ಕಾಗಿ ಅವನು ಅಹರ್ನಿಶ ಕಾಯಕದಲ್ಲಿಯೇ ತೊಡಗಿರುವನು. ಸಕಲ ಜೀವರಾಶಿಗಳು ಅವನ ಕಾಯಕದ ಫಲವನ್ನುಂಡು ನಿಶ್ಚಿಂತೆಯಿಂದ ನಲಿದಾಡುತ್ತವೆ. ಗಿಡದ ಮೇಲಿರುವ ಒಂದು ಪಕ್ಷಿಯನ್ನೇ ನೋಡಿರಿ. ಅದು ಎಂದಾದರೂ ಅನ್ನ ನೀರುಗಳ ಚಿಂತೆಯಲ್ಲಿರುವದೇ? ಹೊತ್ತಿಗೆ ಸರಿಯಾಗಿ ಪರಮಾತ್ಮನು ತನಗ ನಿತ್ಯದ ಬೇಡಿಕೆಯನ್ನು ಪೂರೈಸುವನೆಂಬ ವಿಶ್ವಾಸದಿಂದಲೇ ಅದು ನಿಶ್ಚಿಂತವಾಗಿದೆ. ಅದಕ್ಕೆ ಅನ್ನ ನೀರುಗಳ ಚಿಂತೆಯೇ ಇಲ್ಲ.

ಆದರೆ ಮನುಷ್ಯನಾದರೋ ದೇವರು ದಯಪಾಲಿಸಿದ ಶಕ್ತಿಯನ್ನು ತನ್ನ ಸುಖಕ್ಕಾಗಿಯೇ ವೆಚ್ಚ ಮಾಡುತ್ತಿರುತ್ತಾನೆ. "ಮುಂದೆ ನನ್ನ ಚಿಂತೆ ಹೇಗಾದೀತು? ನಾಳಿಗೆ ಕಡಿಮೆಯಾದರೆ ನನ್ನ ಹೆಂಡರು ಮಕ್ಕಳು ಎಷ್ಟು ಗೋಳಾಡಬಹುದು?" ಎಂಬ ಚಿಂತೆಯಿಂದ ಬೆಂದು ಬೆಂಡಾಗುತ್ತಿರುತ್ತಾನೆ. ಅವನು ಯಾವ ಯಾವ ವಸ್ತುಗಳಲ್ಲಿ ತನ್ನ ಮತ್ತು ತನ್ನ ಕುಟುಂಬದವರ ಸುಖವುಂಟೆಂದು ಕಲ್ಪಿಸುವನೋ ಅವುಗಳನ್ನು ಶೇಖರಿಸಲು ಬಹು ವಿಧವಾಗಿ ಪ್ರಯತ್ನಿಸುತ್ತಾನೆ,

ಹಾಗಾದರೆ ಹೊಟ್ಟೆಯ ಪಾಡಿಗಾಗಿ ದುಡಿಯದೆ ಪರಮಾತ್ಮನನ್ನೇ ಅವಲಂಬಿಸಿ ಕೂಡ್ರಬೇಕೆಂದಲ್ಲ. ದುಡಿಯಿರೆಂದೇ ಕಾಯಕವು ಹೇಳುತ್ತಿದೆ. ದುಡಿಯಿರಿ, ಮನಮುಟ್ಟಿ ದುಡಿಯಿರಿ. ಆದರೆ ಆ ದುಡಿತದ ಫಲಾಫಲಗಳಿಗಾಗಿ ಕೊರಗಬೇಡಿರೆಂದೇ ಕಾಯಕದರ್ಥವು. ಕಾಯಕ ಮಾಡುವವನಲ್ಲಿ ಚಿಂತೆಯ ಲೇಶವೂ ಇರುವುದಿಲ್ಲ. ಕಾಯಕ ಮಾಡುವವನು 'ಇಂದಿಗೆಂತು ನಾಳಿಗೆಂತು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೇ ರಾಮನಾಥ, ಎಂಬ ಭಾವನೆಯುಳ್ಳವನಿರುತ್ತಾನೆ.

ಸಂಗ್ರಹಿಸಿಡುವದೊಂದು ಪರಮಾತ್ಮನ ಅರಿವನ್ನು ಮರೆತಂತೆಯೇ ಸರಿ. ಆಸ್ತಿಕರಾದವರು ಪರಮಾತ್ಮನೇ ಸಲಹುವನೆಂಬರಿವನ್ನು ಮರೆಯಬಹುದೇ? ಪರಮಾತ್ಮನ ಅಸ್ತಿತ್ವವನ್ನು ನಂಬಿಯೂ, ನಮಗೆ ಸುಖವನ್ನು ಕೊಡುವವನಾತನೇ ಎಂದು ತಿಳಿದೂ ನಾವು ಪದಾರ್ಥಗಳನ್ನು ಸಂಗ್ರಹಿಸಿದರೆ ಅವನ ಸರ್ವಪಾಲಕತ್ವವನ್ನು ನಿರಾಕರಿಸಿದಂತಾಗಲಿಲ್ಲವೇ? ಇನ್ನು ಪದಾರ್ಥಗಳನ್ನು ಸಂಗ್ರಹಿಸಿ ತನ್ಮೂಲಕ ಸುಖವನ್ನುಂಟುಮಾಡಿಕೊಳ್ಳುವದೇ ಧ್ಯೇಯವಾಗಿದ್ದಲ್ಲಿ ಆ ಪರಮಾತ್ಮನಿಂದೇನು ಉಪಯೋಗ? ದಯಾ ಧರ್ಮಗಳ ಅರಿವು ಯಾತಕ್ಕೆ ಬೇಕಾದೀತು? ಆವ ಮಾರ್ಗದಿಂದಲಾದರೂ ಸುಖ ವಸ್ತುಗಳು ದೊರೆತರೆ ತೀರಿತು. ಎಂಬರ್ಥವಾದೀತು. ಆದುದರಿಂದ ಧಾರ್ಮಿಕರಾದವರು ಎಂದಿಗೂ ಸಂಗ್ರಹ ಮಾಡರು. ಯಾಕೆಂದರೆ ಸಂಗ್ರಹಿಸಿಟ್ಟ ಪದಾರ್ಥವು ಅವರ ಮನಸ್ಸನ್ನು ಸೆಳೆದುಕೊಂಡು ಬಿಡುತ್ತದೆ. ಆದುದರಿಂದಲೇ ಅವರು ಅದನ್ನು ಸತ್ಕಾರ್ಯಕ್ಕಾಗಿ ಆಗಿಂದಾಗ್ಗೆ ವಿನಿಯೋಗಿಸುತ್ತಿರುವರು.

ಸಂಗ್ರಹಿಸಿಡುವದರಿಂದ ಧಾರ್ಮಿಕ ಅಧೋಗತಿಯೇ ಆಗುತ್ತದೆಂತಲ್ಲ. ಇದರಿಂದ ನೀತಿಯೂ ಕೆಡುತ್ತದೆ. ಸಂಗ್ರಹಿಸಿಡುವದರಿಂದ ಬಳ್ಳಿಗೆ ಸಲ್ಲತಕ್ಕದ್ದನ್ನು ಕಾರಣವಿಲ್ಲದೆ ನಾವು ಇಟ್ಟುಕೊಂಡಂತಾಗುವದರಿಂದ ಸೂಕ್ಷ್ಮ ರೀತಿಯಿಂದ ಕಳ್ಳತನದ ಪಾಪವು ನಮಗೆ ಲಭಿಸುತ್ತದೆ. ಆದಕ್ಕಂತೆಯೇ ಬಸವಣ್ಣನವರು ಒಂದು ಸಂದರ್ಭದಲ್ಲಿ ಹೀಗೆ ಉದ್ಗಾರ ತೆಗೆದರು—"ಒಡನಿರ್ದ ಸತಿಯೆಂದು ನೆಚ್ಚಿರ್ದೆನಯ್ಯ | ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯ| ಅಯ್ಯೋ ನಮ್ಮಯ್ಯನ ಕೈ ನೊಂದಿತು| ತೆಗೆದುಕೊಡಾ ಎಲಾ ಚಾಂಡಾಲಗಿತ್ತಿ| ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲ ಸಂಗಮದೇವನಲ್ಲದೆ ಆರೂ ಅಲ್ಲ||

ಧರ್ಮನೀತಿಗಳಿಗೇ ಅಲ್ಲದೆ ಸಂಗ್ರಹಿಸಿಡುವ ಬುದ್ಧಿಯು ಜಗತ್ತಿನ ಜೀವನಕ್ಕೇ ತಡೆಯನ್ನುಂಟುಮಾಡುವುದು. ಜಗತ್ತಿನಲ್ಲೆಲ್ಲ ದಿನವೊಂದಕ್ಕೆ ಜ್ವಾಲಾಮುಖಿಯಂತೆ ಏಳುವ ದೊಂಬೆಗಳೂ, ಕೊಲೆಗಳೂ ಸಂಪಿನ ಮೆರವಣಿಗೆಗಳೂ ಯಾತರ ಪರಿಣಾಮ? ಶೇಖರಿಸಿಡುವವರ ಕ್ಷುದ್ರ ಬುದ್ಧಿಯ ಅನಾಹುತವಲ್ಲದೆ ಮತ್ತೇನು? ಮನುಷ್ಯನ ಕೃತ್ರಿಮ ಯೋಜನೆಗಳ ಮೂಲಕ ಕೆಲವು ಜನರಲ್ಲಿಯೇ ಧನಸಂಚಯವಾಗಿ ಉಳಿದ ಕೋಟ್ಯಾವಧಿ ಜನರು ಹೊಟ್ಟೆಗಿಲ್ಲದೆ ಬಳಲುತ್ತಿರುವರಲ್ಲವೆ? ಎಲ್ಲವೂ ತನ್ನವೇ ಇರಬೇಕೆಂಬ ಈ ಕಳ್ಳತನದ ವೃತ್ತಿಯೇ ಜಗತ್ತಿನ ಅಶಾಂತಿಗೆಲ್ಲ ಕಾರಣವಾಗಿದೆ. ಇಷ್ಟಾದರೂ ಆ ಶೇಖರಿಸಿಟ್ಟುಕೊಂಡವರಿಗೆ ಸುಖವಿದೆಯೋ? ಶಾಂತಿಯಿದೆಯೇ? ಎಂದೂ ಇಲ್ಲ. ಒಂದು ದೇಶದಲ್ಲಿ ಇಂಥವರನ್ನು ಕೊಲೆ ಮಾಡಬೇಕೆಂದು ಪ್ರಯತ್ನಗಳು ನಡೆದಿದ್ದರೆ ಮತ್ತೊಂದು ದೇಶದಲ್ಲಿ ಇವರನ್ನು ಸುಲಿದು ಸೂರೆಮಾಡಬೇಕೆಂಬ ಪ್ರಯತ್ನಗಳಾಗಹತ್ತಿವೆ. ಇಂಥ ಪ್ರಸಂಗದಲ್ಲಿ ಅವರು ಇನ್ನುಮೇಲೆ ಅಪರಿಗ್ರಹ ವೃತ್ತಿಯನ್ನು ಕೈಕೊಂಡರೆ ತಮಗೂ ಸುಖಶಾಂತಿಗಳು ಸಿಗುವವಲ್ಲದೆ ಅನ್ಯರಿಗೂ ಸುಖಶಾಂತಿಗಳನ್ನು ಒದಗಿಸಿ ಕೊಡುವ ಪುಣ್ಯ ಲಭಿಸುವದಿಲ್ಲವೇ?

ಅಪರಿಗ್ರಹ ವ್ರತಕ್ಕೆ ಇಷ್ಟು ಪ್ರಾಶಸ್ತ್ಯವಿರುವುದರಿಂದಲೇ ಮಹಾನುಭಾವರು ಸರ್ವರ ಹಿತಕ್ಕಾಗಿ ಈ ಮಹತ್ವದ ವಚನವನ್ನು ಉಪದೇಶಿಸಿದ್ದಾರೆ. ಸದ್ಯಕ್ಕೆ ಮಹಾತ್ಮಾ ಗಾಂಧಿಯವರು ಹೇಳುವುದಾದರೂ ಏನು? ಇದೇ ಅಪರಿಗ್ರಹ ವ್ರತವಲ್ಲವೇ? ಈ ವ್ರತಕ್ಕಿಷ್ಟು ಮಹತ್ವವಿರುವುದರಿಂದಲೇ ನಿಮ್ಮಾಣೆ ನಿಮ್ಮ ಪುರಾತನರಾಣೆ ಎಂದು ಶಪಥಮಾಡಿ ಹೇಳುವಂಥ ಪ್ರಸಂಗವುಂಟಾಯಿತು ಮಹಾತ್ಮರ ಈ ದಿವ್ಯ ವಾಣಿಯು ನಮ್ಮನ್ನು ಅಪರಿಗ್ರಹ ವೃತ್ತಿಯನ್ನವಲಂಬಿಸುವಂತೆ ಮಾಡಿ ಸುಖಶಾಂತಿಗಳಿಂದ ಜೀವಿಸಿರುವ ಮಾರ್ಗವನ್ನು ತೋರಿಸಿಕೊಡುವುದಿಲ್ಲವೇ?

ಪಾಟೀಲ ಲಿಂಗನಗೌಡ.

ವಿ ವಿ ಧ ವಿ ಷ ಯ .

ಪಲ್ಲಂಗವೇ ವೈದ್ಯ!

ಅಮೇರಿಕೆಯ ಜೇರ್ಸಿ ಎಂಬವನೊಬ್ಬನು ಒಂದು ಪಲ್ಲಂಗವನ್ನು ಸಿದ್ಧಮಾಡಿದ್ದಾನೆ. ಅದರ ಮೇಲೆ ಮಲಗಿಕೊಂಡರೆ ಸುಖವಾಗಿ ನಿದ್ರೆ ಬಂದು ಅನೇಕ ರೋಗಗಳು ಗುಣವಾಗುತ್ತವಂತೆ. ಅನೇಕ ರೋಗಿಗಳು ಸರಿಯಾದ ನಿದ್ರೆ ಇಲ್ಲದಿದ್ದುದರಿಂದ ಚಡಪಡಿಸುತ್ತಿರುತ್ತಾರೆ. ಅವರು ಸುಖವಾಗಿ ನಿದ್ರೆ ಬರುವ ಔಷಧವನ್ನು ಕೊಡುವಂಥ ವೈದ್ಯನನ್ನು ಬಹಳವಾಗಿ ಹೊಗಳುತ್ತಾರೆ. ಅಂದಮೇಲೆ ಅವರು ಈ ಪಲ್ಲಂಗವೆಂಬ ವೈದ್ಯನನ್ನು ಎಷ್ಟು ಹೊಗಳಬಹುದು? ಇದರಲ್ಲಿ ವಿದ್ಯುಚ್ಛಕ್ತಿಯ ಯಂತ್ರವನ್ನಿಟ್ಟಿರುವುದರಿಂದ ರೋಗಿಯು ಮಲಗಿದ ಕೂಡಲೆ ವಿದ್ಯುಚ್ಛಕ್ತಿಯ ತೆರೆಗಳುಂಟಾಗಿ ಮನುಷ್ಯನ ಶರೀರದಲ್ಲಿಯ ರಕ್ತಸಂಚಲನಕ್ಕೆ ಸಹಾಯಮಾಡುತ್ತವೆ. ಮನುಷ್ಯನಲ್ಲಿರುವ ಸೆಗಡಿ ಕೆಮ್ಮು ದಮ್ಮು ಮೊದಲಾದ ರೋಗಗಳು ಗುಣ ಹೊಂದುತ್ತವೆ. ಇದಲ್ಲದೆ ದೃಷ್ಟಿಮಾಂದ್ಯವುಳ್ಳವರ ಕಣ್ಣುಗಳು ಕೂಡಾ ನಿಚ್ಚಳವಾಗಿ ಕಾಣಿಸಹತ್ತುತ್ತವೆ.

ಇಷ್ಟು ಸುಲಭ ಸೌಕರ್ಯವು ದೊರೆತಮೇಲೆ ರೋಗಿಯಾಗಿರುವದೇ ಒಳ್ಳೆಯದೆಂದು ನೆನಿಸಲಿಕ್ಕಿಲ್ಲವೇ?

ಶಿಕ್ಷಕರು ಲಕ್ಷ್ಯದಲ್ಲಿಡಲಿ.

ಸಿಂಧ ಪ್ರಾಂತದ ಶಿಕಾರಪುರ ಎಂಬಲ್ಲಿ ಒಂದು ಗಲಭೆಯುಂಟಾಗಿದೆ. ಅಲ್ಲಿಯ ಒಂದು ಶಾಲೆಯಲ್ಲಿ ಒಬ್ಬ ಶಿಕ್ಷಕಿಯು ತಮ್ಮ ವರ್ಗದ ಒಬ್ಬ ಬಾಲಿಕೆಗೆ ಪಾಠ ಬರಲಿಲ್ಲವಾದುದರಿಂದ ಅವಳನ್ನು ಒಂದು ಕೋಣೆಯೊಳಗೆ ಹಾಕಿದಳು. ಸ್ವಲ್ಪ ಹೊತ್ತಿನಲ್ಲಿಯೇ ಆ ಕೋಣೆಯೊಳಗೆ ಒಂದು ಹಾವು ಬಂದಿತು. ಅದನ್ನು ನೋಡಿ ಆ ಹುಡುಗಿಯು ಹೆದರಿ ಅಳಹತ್ತಿದಳು. ಹಾವು ಸಮೀಪಕ್ಕೆ ಬಂದಂತೆ ಅವಳು ಅಮ್ಮಾ ಬಾಗಿಲ ತೆರೆಯಿರಿ; ಹಾವು ಕಚ್ಚುತ್ತದೆ. ಎಂದು ಚೀರಾಡಹತ್ತಿದಳು. ಅದನ್ನು ಕಂಡು ಶಿಕ್ಷಕಿಯು ಹುಡುಗಿಯು ತಕ್ಕಿಸುವದಕ್ಕಾಗಿ ನೆವಹೇಳುತ್ತಿರುವಳೆಂದು ತಿಳಿದು ಸುಮ್ಮನೆ ಇದ್ದಳು. ಶಾಲೆ ಬಿಟ್ಟು ಎಷ್ಟೋ ಹೊತ್ತಾದರೂ ಹುಡುಗಿಯು ಬರಲಿಲ್ಲವಾದುದರಿಂದ ಮನೆಯವರು ಹುಡುಕುತ್ತ ಶಾಲೆಗೆ ಬಂದರು. ಕೋಣೆಯೊಳಗೆ ಅವರು ಹೋಗಿ ನೋಡಲು ಬಾಲಿಕೆಯು ಸತ್ತು ಬಿದ್ದಿದ್ದಳು. ಬದಿಯಲ್ಲಿಯೇ ಹಾವು ಇದ್ದಿತು. ಶಿಕ್ಷಕಿಯ ಕ್ರೌರ್ಯದಿಂದ ಆ ಹುಡಿಗಿಯ ಪ್ರಾಣವೇ ಹೋಯಿತು.

ಆಕಸ್ಮಾತ್ ಇಂಥ ಪ್ರಸಂಗಗಳುಂಟಾಗುತ್ತಿದ್ದರೂ ಶಿಕ್ಷಕರಿಗೆ ಇಂಥ ವಿಷಯದಲ್ಲಿ ಹಟಮಾರಿತನವು ತರವಲ್ಲ.

ಪಾಪದ ಪ್ರಾಯಶ್ಚಿತ್ತ.

ಚಿಂತಾಮಣಿಯ ಮಹಾಲಕ್ಷ್ಮಮ್ಮನನ್ನು ಅಪಹಾರ ಮಾಡಿ ಧರ್ಮಾಂತರಗೊಳಿಸಿ ಒಬ್ಬ ಮುಸಲ್ಮಾನನಿಗೆ ಲಗ್ನಮಾಡಿಕೊಟ್ಟ ಅಪರಾಧಕ್ಕಾಗಿ ೪ ಜನ ಮುಸಲ್ಮಾನರ ಮೇಲೆ ವ್ಯಾಜ್ಯ ಮಾಡಲ್ಪಟ್ಟದ್ದಿತಷ್ಟೆ. ಆ ವ್ಯಾಜ್ಯ ನಿರ್ಣಯವನ್ನು ಕೋಲಾರದ ಶೆಸನ್ಸ ಜಡ್ಜರು ಈ ಪ್ರಕಾರ ಹೇಳಿದರು. ೧ನೇ ಅಪರಾಧಿ ಲೇಸಬಾಬಾ ಸೇಟನಿಗೆ ೫ ವರುಷಗಳ ಕಠಿಣ ಶಿಕ್ಷೆ ಮತ್ತು ೫೦೦ ರೂ ದಂಡ. ದಂಡ ಕೊಡದಿದ್ದರೆ ಪುನಃ ೧ ವರುಷ ಶಿಕ್ಷೆ. ೨ನೇ ಅಪರಾಧಿಗೆ (ಮಹಾಲಕ್ಷ್ಮಮ್ಮನ ಗಂಡನೆಂದು ಹೇಳಿದವನು) ೪ ವರುಷ ಕಠಿಣ ಶಿಕ್ಷೆ ಮತ್ತು ೪೦೦ ರೂ. ದಂಡ, ದಂಡ ಕೊಡದಿದ್ದರೆ ೬ ತಿಂಗಳ ಶಿಕ್ಷೆ. ೩ನೆಯ ಮತ್ತು ೪ನೆಯ ಅಪರಾಧಿಗಳು ಮಹಮ್ಮದ ಹುಸೇನ ಮೌಲ್ವಿ ಮತ್ತು ಅಬ್ದುಲ ಖಾದರ ಇವರಿಗೆ ೩ ವರುಷ ಕಠಿಣ ಶಿಕ್ಷೆ. ೩೦೦ ರೂ. ದಂಡ ಇಲ್ಲದಿದ್ದರೆ ಪುನಃ ೩ ತಿಂಗಳ ಶಿಕ್ಷೆ. ಇವರ ದಂಡದ ಹಣದೊಳಗಿಂದ ೫೦೦ ರೂ. ಗಳನ್ನು ಮಹಾಲಕ್ಷ್ಮಮ್ಮನಿಗೆ ಕೊಡಬೇಕೆಂದು ತೀರ್ಪು ಕೊಟ್ಟರು. ಕೊನೆಗೆ ಈ ಜನರ ದುಷ್ಟತನದಿಂದ ಆಕೆಯ ಮುಂದಿನ ಜೀವನವೇ ನಷ್ಟವಾಯಿತೆಂದೂ ಪೋಲೀಸ ಇನ್ಸಪೆಕ್ಟರ ಜಹಿರುದ್ದೀನರು ಮೊದಲೇ ಎಚ್ಚರಿಕೆ ತೆಗೆದುಕೊಂಡಿದ್ದರೆ ಈ ಅನಾಹುತವು ಸಂಭವಿಸುತ್ತಿದ್ದಿಲ್ಲವೆಂದೂ ಕೆಳಗಿನ ಕೋರ್ಟಿನಲ್ಲಿ ಬಿಡುಗಡೆ ಹೊಂದಿದ ಇಬ್ಬರು ಅಪರಾಧಿಗಳನ್ನು ಪುನಃ ವಿಚಾರಣೆಗೆ ತರಬೇಕೆಂದೂ ಹೇಳಿದರು. ಈ ವ್ಯಾಜ್ಯವು ಹಾಯಕೋರ್ಟಿಗೆ ಹೋಗುವದಂತೆ. ಅಂತೂ ಪಾಪದ ಪ್ರಾಯಶ್ಚಿತ್ತವು ತಪ್ಪಿದ್ದಲ್ಲ.

ಶ್ರೀ ವಿಠ್ಠಲಭಾಯಿಯವರ ಮೃತ್ಯುಪತ್ರ.

ದಿವಂಗತ ಶ್ರೀ. ವಿಠ್ಠಲಭಾಯಿ ಪಟೇಲರವರು ತಮ್ಮ ಮೃತ್ಯುಪತ್ರದಲ್ಲಿ ಒಂದು ಲಕ್ಷ ರೂ. ಗಳಿಗಿಂತ ಹೆಚ್ಚು ಧನವನ್ನು ಹಿಂದೀ ರಾಷ್ಟ್ರೀಯ ಚಟುವಟಿಕೆಯನ್ನು ಪರರಾಷ್ಟ್ರದಲ್ಲಿ ಪ್ರಸಾರ ಮಾಡುವದಕ್ಕಾಗಿ ಕೊಟ್ಟಿದ್ದು ಆ ಧನದ ಆಡಳಿತೆಗಾಗಿ ಶ್ರೀ. ಗೋವರ್ಧನದಾಸ ಪಟೇಲರನ್ನು ನಿಯಮಿಸಿದ್ದಾರೆ.

ಇದಲ್ಲದೆ ಇನ್ನೊಂದು ಲಕ್ಷ ರೂಪಾಯಿಗಳನ್ನು ಅಂದರೆ ಮಧ್ಯವರ್ತಿ ಶಾಸನ ಸಭೆಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಅಧ್ಯಕ್ಷ ವೇತನದ ಅರ್ಧ ಭಾಗವನ್ನು ಮಹಾತ್ಮಾಜಿಯವರಿಗೆ ಒಪ್ಪಿಸಿದ್ದಾರಂತೆ.

ಶ್ರೀ ವಿಠ್ಠಲಭಾಯಿಯವರು ಅಸ್ವಸ್ಥರಿರುವಾಗ ಉಂಟಾದ ಮತ್ತು ಅವರ ಶವವನ್ನು ಹಿಂದುಸ್ಥಾನಕ್ಕೆ ತಂದ ವೆಚ್ಚವು ಅವರ ಆಸ್ತಿಯೊಳಗಿಂದ ಕೊಡಲ್ಪಟ್ಟಿತು. ಆದರೆ ವಿಯೆನ್ನಾದಲ್ಲಿ ಅವರ ಪ್ರಕೃತಿ ಚಿಕಿತ್ಸೆ ಮಾಡಿದ ಡಾಕ್ಟರರು ತಮ್ಮ ಫೀ ತೆಗೆದುಕೊಳ್ಳಲಿಲ್ಲ. ದೊಡ್ಡವರ ಕೆಲಸವು ದೊಡ್ಡದೇ.

ಲಗ್ನ ಮಾಡುವವರು ಯಾರು?

ಜರ್ಮನಿಯಲ್ಲಿ ಅನೇಕ ಹೊಸ ಹೊಸ ಸುಧಾರಣೆಗಳುಂಟಾಗಹತ್ತಿವೆ. ಈಗ ಅಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಕಡಿಮೆಯಾಗಹತ್ತಿರುವುದರಿಂದ ಸರಕಾರದವರು ಪ್ರಜಾವೃದ್ಧಿಯ ಕಡೆಗೆ ಲಕ್ಷ ಪೂರೈಸಹತ್ತಿದ್ದಾರೆ. ಹಿಟ್ಲರ ಸರಕಾರದವರು ಲಗ್ನವಾಗಬೇಕನ್ನುವ ತರುಣರಿಗೆ ಪ್ರೋತ್ಸಾಹ ಕೊಡುವದಕ್ಕಾಗಿ ಲಗ್ನವಾದ ಕೂಡಲೆ ಕುಟುಂಬದ ಸೌಖ್ಯ ವ್ಯವಸ್ಥೆಗೆಂದು ಧನಸಹಾಯ ಮಾಡುತ್ತಾರೆ. ಸದ್ಯಕ್ಕೆ ೧೦ ಸಾವಿರ ತರುಣರು ವಿವಾಹಕ್ಕೆ ಸಿದ್ಧರಾಗಿದ್ದು ೫ ಸಾವಿರ ತರುಣರಿಗೆ ಧನ ಸಹಾಯವು ಮಾಡಲ್ಪಟ್ಟಿದೆ. ಮತ್ತು ೮೪೭ ತರುಣರ ಸಹಾಯಬೇಡುವ ಅರ್ಜಿಗಳು ಅಮಾನ್ಯ ಮಾಡಲ್ಪಟ್ಟಿವೆ. ಉಳಿದವರ ಅರ್ಜಿಗಳ ಪರೀಕ್ಷೆಯಿನ್ನೂ ನಡೆದಿದೆ. ನಾಶ್ ನಿಶ್ಚಯವಾದ ತರುಣತರುಣಿಯರಿಬ್ಬರಿಗೂ ಕೂಡಿ ೬೦೦ ಮಾರ್ಕ ನಾಣ್ಯಗಳು ಕೊಡಲ್ಪಡುತ್ತಿವೆ.

ಪೌರ್ವಾತ್ಯ ತರುಣರಿಗೆ ಸಂತತಿ ನಿಯಮನದ ಬೋಧವು ಮಾಡಲ್ಪಡುತ್ತಿದೆ. ಪಾಶ್ಚಾತ್ಯರಿಗಾದರೂ ಪ್ರಜಾವೃದ್ಧಿಯಾಗಬೇಕಾಗಿದೆ. 'ಭಿನ್ನರುಚಿರ್ಹಿ ಲೋಕಃ'

ಅನುಕರಣ ಮಾಡಬೇಡಿರಿ

ಮಿ. ಎ. ಎಚ್. ವ್ಯಾಕೆಂಝಿಯವರು ಸ್ತ್ರೀ ಶಿಕ್ಷಣದ ವಿಷಯವಾಗಿ ಭಾಷಣ ಮಾಡುವಾಗ್ಗೆ—“ಹಿಂದೀ ಸ್ತ್ರೀಯರ ಸೀರೆ ಉಟ್ಟುಕೊಳ್ಳುವ ಪದ್ಧತಿಯು ಅಪೂರ್ವವಾದುದಾಗಿದೆ. ರಾಜ್ಯ ಭವನದ ಸ್ತ್ರೀಯರೇ ಉಟ್ಟುಕೊಂಡಿರಲಿ ಅಥವಾ ಹೊಲದೊಳಗಿನ ಒಕ್ಕಲಗಿತ್ತಿಯೇ ಉಟ್ಟುಕೊಂಡಿರಲಿ ಅವರ ಉಡುವ ಪದ್ಧತಿಯು ಸ್ತ್ರೀಯರ ಸೌಂದರ್ಯ ಮತ್ತು ವಿನಯಗಳ ದ್ಯೋತಕವಾಗಿದೆ. ಹಿಂದೀ ಬಾಲಿಕೆಯರಿಗೆ ಪಾಶ್ಚಾತ್ಯ ಶಿಕ್ಷಣ ಕೊಡುವದೊಳ್ಳೆಯದು. ಆದರಿಂದ ಮನಸ್ಸಿಗೆ ಶಿಸ್ತು ಉಂಟಾಗುತ್ತದೆ; ದೃಷ್ಟಿಯು ವಿಶಾಲವಾಗುತ್ತದೆ. ಮತ್ತು ಅವರ ಮನದ ಮುಂದೆ ಹೊಸಹೊಸ ಧ್ಯೇಯಗಳು ಸಂಚಾರವಾಗುತ್ತವೆ. ಆದರೆ ಹಿಂದೀ ಬಾಲಿಕೆಯರು ಪಾಶ್ಚಾತ್ಯ ಬಾಲಿಕೆಯರ ಅನುಕರಣ ಮಾಡಬಾರದು. ಪ್ರತಿಯೊಂದು ರಾಷ್ಟ್ರಕ್ಕೆ ಸ್ವಂತ ವಿಶಿಷ್ಟ ಗುಣ ಸಮುಚ್ಚಯವು ಇದ್ದೇ ಇರುತ್ತದೆ. ನಿಷ್ಠೆ ಮತ್ತು ಧೈರ್ಯಗಳ ಸಲುವಾಗಿ ಅನೇಕ ಹಿಂದೀ ಸ್ತ್ರೀಯರ ಕಥೆಗಳು ಪ್ರಸಿದ್ಧವಿರುತ್ತವೆ. ಪಾಶ್ಚಾತ್ಯ ಶಿಕ್ಷಣದಿಂದ ಸ್ತ್ರೀಯರಲ್ಲಿ ಕರ್ತೃತ್ವ ಶಕ್ತಿಯುಂಟಾದರೂ ಅದರಿಂದ ತಮ್ಮ ಉಳಿದ ಗುಣಗಳು ಲೋಪವಾಗದಂತೆ ಅವರು ಎಚ್ಚರ ಪಡಬೇಕು.”

ನೋಡಿರಿ ಪಾಶ್ಚಾತ್ಯರ ಅಭಿಪ್ರಾಯವನ್ನು. ಅಕ್ಕಸಾಲಿಗರೇ ಕಿವಿಚುಚ್ಚಿದರೆ ನೆಟ್ಟಗಲ್ಲವೇ?

ನೇತ್ರ ಸೌಂದರ್ಯ.

ಪಾಶ್ಚಾತ್ಯ ಸ್ತ್ರೀಯರ ಕಣ್ಣಿನ ಸೌಂದರ್ಯವು ಜಪಾನಿ ಸ್ತ್ರೀಯರಿಗೊಳ್ಳೇ ಮೋಹವನ್ನುಂಟುಮಾಡಿದಂತೆ ಕಾಣುತ್ತದೆ. ಅವರು ಯುರೋಪಿಯನ್ ಸ್ತ್ರೀಯರ ಕಣ್ಣುಗಳ ಆಕಾರದಂತೆ ತಮ್ಮ ಕಣ್ಣುಗಳೂ ಇರಬೇಕೆಂದು ಅಹರ್ನಿಶ ಪ್ರಯತ್ನ ಮಾಡುತ್ತಿರುತ್ತಾರೆ. ಎಷ್ಟೋ ಜಪಾನಿ ಸ್ತ್ರೀಯರು ಈ ನೇತ್ರ ಸೌಂದರ್ಯವನ್ನು ದೊರಕಿಸಲಿಕ್ಕೆ ತಮ್ಮ ಕಣ್ಣುಗಳಿಗೆ ಶಸ್ತ್ರಕ್ರಿಯೆಯನ್ನು ಸಹ ಮಾಡಿಸಿಕೊಳ್ಳುತ್ತಾರೆ. ಈ ಶಸ್ತ್ರಕ್ರಿಯೆಗೆ (Eyelid operation) ಹೀಗೆ ಹೆಸರು ಕೊಡಲ್ಪಟ್ಟಿದೆ. ಇದರಿಂದ ಕಣ್ಣಿನ ಮೇಲಿನ ರೆಪ್ಪೆಯನ್ನು ಕೊಯ್ದು ಅಗಲಮಾಡುತ್ತಾರೆ. ಇದರಿಂದ ಗುಡ್ಡಿಗಳು ಹಿಂದಕ್ಕೆ ಸರಿದು ನೇತ್ರಗಳು ವಿಸ್ತಾರವಾಗಿ ಚಂದ ಕಾಣುತ್ತವಂತೆ.

ಅನುಕರಣ ಪದ್ಧತಿಯು ಹುಲಿಯ ಬಣ್ಣಕ್ಕೆ ನರಿಯು ಮೈ ಸುಟ್ಟುಕೊಂಡಂತೆ ಅಪಾಯಕರವೆಂಬುದು ಹೊಸ ಸುಧಾರಕರಿಗೆ ತಿಳಿಯದೆ?

ಸಂಪಾದಕರಿಗೆ ೫ ಪೈಗಳ ದಂಡ.

ಖಿಲಾಫತ ಕಮಿಟಿಯ ಮುಖಪತ್ರವಾದ ‘ಖಿಲಾಫತ’ ಎಂಬ ದಿನಪತ್ರಿಕೆಯು ಕಳೆದ ೪ ನೆಯ ತಾರೀಖಿನ ದಿವಸ ನಿಲ್ಲಿಸಲ್ಪಟ್ಟಿತು. ಯಾಕೆಂದರೆ ಅದರ ಸಂಪಾದಕ ವರ್ಗವು ಸಂಪುಮಾಡಿದೆ. ಸದ್ಯದ ಪತ್ರದ ತಾತ್ಕಾಲಿಕ ಸಂಪಾದಕರಾದ ಮಿ. ಅಶನ್ ಇವರಿಗೂ ಮತ್ತು ಆಡಳಿತೆಗಾರರಾದ ಮಿ ಗಝಿ ಮೋಹಿಯೋದ್ದೀನ ಇವರಿಗೂ ಒಂದು ಪತ್ರವನ್ನು ಪತ್ರಿಕೆಯಲ್ಲಿ ಪ್ರಸಿದ್ಧ ಮಾಡುವದರ ಸಲುವಾಗಿ ಮತಭೇದವುಂಟಾಯಿತು. ಇದಕ್ಕಾಗಿ ಆಡಳಿತೆಗಾರರು ಸಂಪಾದಕರಿಗೆ ೫ ಪೈ ದಂಡ ವಿಧಿಸಿದರು.

ಇದನ್ನು ಕಂಡು ಅಚ್ಚಿನ ಮನೆಯ ಸಂಪಾದಕ ವರ್ಗವೂ ಕೆಲಸಗಾರ ವರ್ಗವೂ ತಮ್ಮ ಮುಖ್ಯಸ್ಥನ ಸಲುವಾಗಿ ಸಂಪು ಮಾಡಿದ್ದಾರೆ. ಅವರೆಲ್ಲ ಕೂಡಿ ಆಡಳಿತೆಗಾರನಿಗೆ ಒಂದು ನೋಟೀಸು ಕೊಟ್ಟಿದ್ದು ಅದರಲ್ಲಿ ಅವನು ಸಂಪಾದಕನ ಕ್ಷಮೆ ಬೇಡಬೇಕೆಂದೂ ಮತ್ತು ತಮ್ಮ ನಿಂತ ವೇತನವನ್ನೆಲ್ಲ ಕೊಡಬೇಕೆಂದೂ ತಿಳಿಸಿರುವರು. ಆದರೆ ಆಡಳಿತಗಾರನು ಕ್ಷಮೆ ಬೇಡಲು ಒಪ್ಪಲಿಲ್ಲ. ಇದರಿಂದ ಶೌಕತ ಅಲ್ಲಿಯವರು ಪತ್ರಿಕಾ ಪ್ರಕಟನವನ್ನು ನಿಲ್ಲಿಸಿರುವರು.

ಖಿಲಾಫತ ಸಮಿತಿಯು ಕೂಡ ಆ ಪತ್ರಿಕೆಯ ಆಡಳಿತವನ್ನು ಒಂದು ಉಪಸಮಿತಿಯ ಕೈಯಲ್ಲಿ ಕೊಡಬೇಕೆಂದು ನಿರ್ಣಯವಾಯಿತು.

ಗಂಡಸರಿಗೆ ಅಡಿಗೆಯ ಮನೆಯೋ?

ಸಿಂಧ ಸ್ತ್ರೀಯರ ೭ನೆಯ ಸಭೆಯು ಲಾರಖಾನಾ ಪಟ್ಟಣದಲ್ಲಿ ಬೇಗಮ ಹಮೀದ ಅಲ್ಲಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಆ ಕಾಲಕ್ಕೆ ಕಾರ್ಯದರ್ಶಿನಿಯರಾದ ಮಿಸ್. ಠಾಕುರಿ ಲೀಲಾರಾಮ ಇವರು ತಮ್ಮ ಗೊತ್ತುವಳಿಯನ್ನು ಮಂಡಿಸುತ್ತ ಹೇಳಿದುದೇನಂದರೆ- “ಸ್ತ್ರೀಯರಿಗೆ ಪುರುಷರಷ್ಟೇ ಅಧಿಕಾರವಿರತಕ್ಕದ್ದು. ಪ್ರಜಾಸತ್ತೆಯ ರಾಜ್ಯವೆಂದರೆ ಪ್ರಜೆಗಳಿಗಾಗಿಯೇ ಇದ್ದ ಪ್ರಜೆಗಳ ರಾಜ್ಯವು. ಸ್ತ್ರೀಯರು ಪುರುಷರಂತೆಯೇ ಪ್ರಜೆಗಳ ಒಂದು ಭಾಗವಾಗಿರುವರು. ಸ್ತ್ರೀಯರು ಸಾರ್ವಜನಿಕ ಕಾರ್ಯಗಳನ್ನು ಅಲಕ್ಷಿಸಿ ಅಡಿಗೆಯ ಮನೆಯನ್ನೇ ಸೇರಬೇಕಾಗಿಲ್ಲ. ಸ್ತ್ರೀಯರೂ ಸಹ ಯುದ್ಧಭೂಮಿಯನ್ನು ಪ್ರವೇಶಿಸ ಬೇಕಾಗುವುದರಿಂದ ಗಂಡಸರೂ ಅಡಿಗೆ ಮಾಡಲಿಕ್ಕೇ ಬೇಕು. ನಿಮ್ಮ ಸೊತ್ತಿಗಾಗಿ ನೀವು ಹೋರಾಡಿರಿ. ಸ್ತ್ರೀಯರಿಗೆ ಜಾತಿಭೇದವಿಲ್ಲದ ಮತಕೊಡುವ ಅಧಿಕಾರವಿರಬೇಕು.” ಇತ್ಯಾದಿ.

ಅರ್ಧಾಂಗಿನಿಯರೆಂದಮೇಲೆ ಅರ್ಧ ಅಧಿಕಾರವೂ ಇರಬೇಡವೆ?

ಜವಾಹರಲಾಲರ ಉತ್ಪನ್ನವೆಷ್ಟು?

ಪಂ. ಜವಾಹರಲಾಲ ನೆಹರು ಇವರು ತಮ್ಮ ಉತ್ಪನ್ನದ ಮೇಲಿನ ತೆರಿಗೆಯ ಹಣವನ್ನು ಕೊಡಲಿಲ್ಲವಾದುದರಿಂದ ಸರಕಾರದವರು ಅವರ ಕಲಕತ್ತೆಯಲ್ಲಿ ರೇಲ್ವೆ ಮತ್ತು ಬೇರೆ ಕಂಪನಿಗಳಲ್ಲಿದ್ದ ೨೦ ಸಾವಿರ ರೂ. ಗಳ ಪಾಲುಗಳನ್ನು ಸರಕಾರದವರು ಸ್ವಾಧೀನಪಡಿಸಿಕೊಂಡಿದ್ದಾರೆ. ಈ ಉತ್ಪನ್ನದ ತೆರಿಗೆಯ ಹಣವನ್ನು ಸರಕಾರದವರು ಶ್ರೀ. ಮೋತಿಲಾಲರಿನ್ನೂ ಜೀವದಿಂದಿರುವಾಗ್ಗೇ ಬೇಡಿದ್ದರು.

ಅವರ ತರುವಾಯ ಪಂ. ಜವಾಹರಲಾಲರನ್ನು ಬೇಡಿದರು. ಅವರು ಕಂತಿನಂತೆ ಕೊಡುವ ಮಾತಿಗೆ ಒಪ್ಪಿ ಅದರಂತೆ ಒಂದು ಕಂತಿನ ಹಣವನ್ನೂ ಕೊಟ್ಟರು ಅವರು ತುರಂಗಕ್ಕೆ ಹೋದಮೇಲೆ ಸದ್ಯದ ರಾಜಕೀಯ ಯುದ್ಧವು ಕೊನೆಗಂಡ ಮೇಲೆ ಯಾವ ಸರಕಾರವು ಅಸ್ತಿತ್ವದಲ್ಲಿರುವದೋ ಆ ಸರಕಾರಕ್ಕೆ ಕೊಡುವೆನೆಂದು ಹೇಳಿದರು. ಇನ್ನೂ ವರೆಗೂ ಅವರ ಹಣವು ಬರಲಿಲ್ಲವಾದುದರಿಂದ ಅವರ ಕಂಪನಿಯ ಪಾಲುಗಳನ್ನು ಹಿಡಿದಿದ್ದಾರೆ.

—ಸ್ಪೇನದಲ್ಲಿ ನಿರುದ್ಯೋಗಿಗಳು ಗೊಂದಲವೆಬ್ಬಿಸಿ ರೇಲ್ವೆ ತಂತಿಯನ್ನು ಮುರಿದು ಹಾಕಿರುವರು.

ಸಮಾಚಾರ ಸಂಗ್ರಹ.

—ಕಲಕತ್ತೆಯ ಸಿನೇಮಾ ಕಂಪನಿಯವರು ಕನ್ನಡ ಮಾತ ನಾಡುವ ಸಿನೇಮಾ ಪಟವನ್ನು ಸಿದ್ಧಪಡಿಸುವವರಿದ್ದುದರಿಂದ ಶ್ರೀ ವಾಮನರಾಯರ ನಾಟಕ ಮಂಡಲಿಗೆ ಬರಲಿಕ್ಕೆ ತಿಳಿಸಿರುವರು.

—ಬೆಳಗಾಂವಿಯ ಶ್ರೀ. ವ್ಹಿ. ಬಿ. ಪಾಟೀಲರು ಬಡೋದೆಗೆ ಹೋಗಿ ಅಲ್ಲಿಂದ ದಿಲ್ಲಿಯ ಅಸ್ಪೃಶ್ಯ ಸಭೆಗೆ ಹೋಗುವರಂತೆ.

—ಕುಂಭಕೋಣದ ಹತ್ತರ ಅಸೂರ ಗ್ರಾಮದಲ್ಲಿ ತಾಮ್ರದ ಎರಡು ಸುಂದರ ದೇವಿಯ ಮೂರ್ತಿಗಳು ಸಿಕ್ಕಿವೆಯಂತೆ. ಅವು ಬಹಳ ಪ್ರಾಚೀನ ಕಾಲದವಾದುದರಿಂದ ಯಾವ ದೇವಿಯ ಮೂರ್ತಿಗಳೆಂಬುದು ತಿಳಿದಿಲ್ಲ.

—ಬೆಂಗಳೂರಿನ ವೀರಬಸಯ್ಯನವರು ಶಿವಮೊಗ್ಗಾ ಭಾಗದ ಜಿಲ್ಲಾ ಮತ್ತು ಶೆಶನ್ಸ ಜಜ್ಜರಾಗಿ ನೇಮಕ ಮಾಡಲ್ಪಟ್ಟಿರುವರು.

—ಜಮಖಂಡಿಯಲ್ಲಿ ತುಂಡು ತುಂಡಾದ ವೀರಶೈವ ಸಮಾಜವು ಹೇಗೆ ಏಕೀಕರಿಸಬೇಕೆಂಬುವ ಬಗ್ಗೆ ಶ್ರೀ ಉಪ್ಪಿನ ಮಠದ ಶ್ರೀಗಳೂ ರಾ. ಸಾ. ಬಂಗೀ ವಕೀಲರೂ ವೀರಶೈವರದೊಂದು ಸಭೆ ನೆರೆಯಿಸಬೇಕೆಂದು ಪ್ರಯತ್ನಿಸುತ್ತಿರುವರು.

—ಲಿಂಗರಾಜ ಕಾಲೇಜಿನಲ್ಲಿ ದಿ. ಬ. ಲಕ್ಕಪ್ಪಯವರು ಭಾಷಣ ಮಾಡಿದರು. ವಿದ್ಯಾರ್ಥಿಗಳು ತಮ್ಮ ಅಭ್ಯಾಸ ಮುಗಿದ ಮೇಲೆ ಗ್ರಾಮ ಸಂಘಟನೆ ಮಾಡಬೇಕೆಂದು ಹೇಳಿದರು.

—ಲಿಂಗರಾಜ ಕಾಲೇಜಿನಲ್ಲಿ ಡಾ. ನಂದೀಮಠ ಇವರ ಅಧ್ಯಕ್ಷತೆಯಲ್ಲಿ ಪ್ರೊ, ನಾಯಿಕ ವೆಂಕಟರಾಯರು 'ಕನ್ನಡ ಸಾಹಿತ್ಯದ ಸಂದೇಶ' ಎಂಬ ವಿಷಯವಾಗಿ ಭಾಷಣ ಮಾಡಿದರು.

—ಬೆಂಗಳೂರ ಸಿಟಿಯ ಬೆಂಚ ಕೋರ್ಟಿಗೆ ಶ್ರೀ. ಆನಂದಿ ಬಾಯಿ ಎಂಬುವವರನ್ನು ಸ್ಪೇಶಲ ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿದ್ದಾರೆ.

—ಕಲಕತ್ತೆಯ ಹತ್ತರ ಸಿಲ್ಹಟ್ ಎಂಬ ಗ್ರಾಮದಲ್ಲಿ ಅಂಚೇ ಕಚೇರಿಯ ಮನುಷ್ಯನು ೮೦೦೦ ರೂ. ತೆಗೆದುಕೊಂಡು ಹೋಗುತ್ತಿರುವಾಗ ೫ ಜನರು ಅವನ ಮೇಲೆ ಏರಿಹೋಗಿ ಆ ರೂಪಾಯಿಗಳನ್ನು ತೆಗೆದುಕೊಂಡು ಪಾರಾದರು.

—ಜಬಲಪೂರ ನಗರಸಭೆಯವರು ಅರ್ಪಿಸಿದ ಮಾನಪತ್ರಕ್ಕೆ ಉತ್ತರವಾಗಿ ಪಂ. ಜವಾಹರಲಾಲರು— ನಮ್ಮ ಜನರ ಹೊಟ್ಟೆಬಟ್ಟೆಗೆ ಪೂರ್ಣ ಸಿಗುವವರೆಗೆ ನಮ್ಮ ರಾಷ್ಟ್ರೀಯ ಯುದ್ಧವು ಸಿದ್ಧವಾಗಿಯೇ ಇರುತ್ತದೆಂದು ಹೇಳಿದರು.

—ಡಾ. ಅನ್ಸಾರಿಯವರು ಮಹಾತ್ಮಾಜಿಯವರ ಪ್ರಕೃತಿಯನ್ನು ಪರೀಕ್ಷಿಸಿ ಅವರಿಗೆ ಶೀತ ಬಾಧೆಯಾಗಿರುವುದೆಂದೂ ಪ್ರವಾಸದಲ್ಲಿ ವಿಶೇಷ ನೋವಾಗುವದರಿಂದ ರಾತ್ರಿ ಪ್ರವಾಸ ಮಾಡಕೂಡದೆಂದೂ ಹೇಳಿದ್ದಾರೆ.

—ಜರ್ಮನಿಯ ರಸಾಯನಿಕ ಶಾಸ್ತ್ರಜ್ಞರಾದ ಡಾ. ಬರ್ಗಸ್ ಇವರು ಕಟ್ಟಿಗೆಯಿಂದ ಸಕ್ಕರೆಯನ್ನು ಮಾಡುವ ಪ್ರಯೋಗವನ್ನು ಲಂಡನ್ನಿನಲ್ಲಿ ತೋರಿಸಿದರು.

—ತುಂಗಭದ್ರಾ ಸ್ಟೇಶನದ ಮೇಲೆ ಒಬ್ಬ ಮುಸಲ್ಮಾನನು ವ್ಹಾಯಿಸರಾಯರು ಹೋಗುವ ಪೂರ್ವದಲ್ಲಿ ಒಂದು ಪಿಸ್ತೂಲ ಇಟ್ಟುಕೊಂಡದ್ದರಿಂದ ಬಂಧಿಸಲ್ಪಟ್ಟು ಅವನ ಕಿಸೆಯಲ್ಲಿ ಒಂದು "ತಾರಾನಾಥ" ಎಂಬ ಒಂದು ಚೀಟಿಯು ಸಹ ದೊರೆತದ್ದರಿಂದ ಪಂ. ತಾರಾನಾಥರನ್ನು ಸಹ ಬಂಧಿಸಿದ್ದಾರೆ.

—ಇಂಗ್ಲಂಡ, ಫ್ರಾನ್ಸ, ಪೋರ್ತುಗಾಲ ದೇಶಗಳೊಡನೆ ಅಮೇರಿಕೆಯು ವ್ಯಾಪಾರಿ ಸಂಬಂಧವನ್ನು ಸ್ಥಾಪಿಸಲು ಕನ್ನ ಬೆಣ್ಣೆ, ಮಾಂಸ ಮೊದಲಾದವುಗಳನ್ನು ಕೊಟ್ಟು ಅವುಗಳಿಂದ ಸರಾಯಿ ತೆಗೆದುಕೊಳ್ಳುವ ಯೋಜನೆ ಮಾಡಿರುತ್ತದೆ. ಈ ಎರಡು ತಿಂಗಳುಗಳಲ್ಲಿ ಅಮೇರಿಕೆಗೆ ೪೦ ಲಕ್ಷ ಗ್ಯಾಲನ್ ಸರಾಯಿ ಬೇಕಂತೆ.

—"ಡಾ. ಪಟ್ಟಾಭಿಯವರು ಏಕೆ ಶಾಸನ ಭಂಗಮಾಡಿದರು?" ಎಂಬ ತಲೆಕಟ್ಟಿನ ಒಂದು ಆಕ್ಷೇಪಾರ್ಹ ಲೇಖನವನ್ನು ಬಾಂಬೆ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಸಿದ್ಧ ಮಾಡಿದುದಕ್ಕಾಗಿ ಪ್ರಕಾಶಕ ಶ್ರೀ. ಗದ್ರೆಯವರನ್ನು ಬಂಧಿಸಿದ್ದಾರೆ.

—ರಾಷ್ಟ್ರೀಯ ಸಭೆಯನ್ನು ಕರೆಯಬೇಕೋ ಹೇಗೆ ಮತ್ತು ವೈಯಕ್ತಿಕ ಶಾಸನೋಲ್ಲಂಘನೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೋ ಅಥವಾ ಸಾಮುದಾಯಿಕ ಚಟುವಟಿಕೆಯನ್ನು ಪುನ ಪ್ರಾರಂಭಿಸಬೇಕೋ ಎಂಬ ಬಗ್ಗೆ ಜಬಲಪುರದಲ್ಲಿ ರಾಷ್ಟ್ರೀಯ ಮುಂದಾಳುಗಳು ಗಾಂಧೀಜಿಯವರೊಡನೆ ವಿಚಾರ ಮಾಡಿದರು.

—ಚೀನ ಮತ್ತು ತಿಬೇಟಗಳಲ್ಲಿ ಯುದ್ಧವು ಪ್ರಾರಂಭವಾಗುವದಿದೆ. ತಿಬೇಟದ ೧೦ ಸಾವಿರ ಜನರು ಚೀನವ ಸೀಮೆಯನ್ನು ಆಕ್ರಮಿಸಿರುವ ಸುದ್ದಿಯಿದೆ.

—ಪಾಸಿಫಿಕ ಮಹಾಸಾಗರದಲ್ಲಿ ಮಾನಾ ಲೋಆ ಎಂಬ ಜಗತ್ತಿನಲ್ಲೆಲ್ಲ ಅತಿ ಪ್ರಚಂಡವಾದ ಜ್ವಾಲಾಮುಖಿಯು ಈಗ ಜಾಗ್ರತವಾಗಿದ್ದು ಒಂದು ಚೌರಸ ಮೈಲಿನ ವರೆಗೆ ತಪ್ತಲಾವಾ ರಸ ಬೀಳಹತ್ತಿದೆ.

—ಅಮೇರಿಕೆಯಲ್ಲಿ ಮದ್ಯನಿರೋಧ ಶಾಸನದ ಅವಧಿಯು ಮುಗಿದುದರಿಂದ ಎಲ್ಲಿ ನೋಡಿದಲ್ಲಿ ಸರಾಯಿಯೇ ಸುಳಿಯುತ್ತಿದೆ. ನ್ಯೂಯಾರ್ಕ ಪಟ್ಟಣದಲ್ಲಿಯೇ ೨೦೦೦ ಜನರಿಗೆ ಸರಾಯಿ ಮಾರಲು ಅಪ್ಪಣೆ ಕೊಟ್ಟಿದ್ದಾಗಿದೆ.

—ಧಾರವಾಡದಲ್ಲಿ ಸನಾತನಿಗಳು ಸಭೆ ಸೇರಿ ಮಂದಿರ ಪ್ರವೇಶ, ಘಟಸ್ಫೋಟ ಮೊದಲಾದ ಗೊತ್ತುವಳಿಗಳನ್ನು ನಿಷೇಧಿಸಿದರು. ಕರ್ನಾಟಕದಲ್ಲಿ ಜನರ ಮನಸ್ಸನ್ನು ಒಲಿಸಲು ಒಂದು ಸಮಿತಿಯನ್ನುಂಟುಮಾಡಿದರು.

—ಕರಾಚಿಯಲ್ಲಿ ಒಬ್ಬ ಅಂಗಡಿಯವನು ಒಬ್ಬ ಫಕೀರನಿಗೆ ಭಿಕ್ಷೆ ಕೊಡಲಿಲ್ಲವಾದುದರಿಂದ ಫಕೀರನು ಸಿಟ್ಟಿಗೆದ್ದು ಅವನನ್ನು ಗಾಯಪಡಿಸಿದನು. ಈ ಹುಚ್ಚಿನಲ್ಲಿಯೇ ಅವನು ಪುನಃ ೬ ಜನರನ್ನು ಗಾಯಪಡಿಸಲು ಪೋಲೀಸರು ಅವನನ್ನು ಬಂಧಿಸಿದರು.

—ರಾಮೇಶ್ವರದಲ್ಲಿ ಎರಡು ಪಕ್ಷದ ಮುಸಲ್ಮಾನರಲ್ಲಿ ಮಸೀದೆಯಲ್ಲಿಯೇ ಹೊಡೆದಾಟವಾಗಿ ಒಬ್ಬನು ಸತ್ತನು. ೧೦-೧೨ ಜನರು ಗಾಯಪಟ್ಟರು. ಒಂದು ಪಕ್ಷದ ಕಾಜಿಯು ಪ್ರಾರ್ಥನೆ ನಡೆಸಿದುದನ್ನು ತಡೆದುದೇ ಕಾರಣವಂತೆ.

—ಅದವಾನಿ ಕೋರ್ಟಿನಲ್ಲಿ ಪಂ. ತಾರಾನಾಥರ ವಿಚಾರಣೆಯಾಯಿತು. ಅಲ್ಲಿ ಅವರು ಇದೆಲ್ಲವೂ ನನಗೆ ಏನೋ ಮಾಯೆಯಾಗಿಯೇ ಕಾಣುತ್ತದೆಂದು ಹೇಳಿದರು. ಈಗ ಅವರ ಬಿಡುಗಡೆಯಾಗಿದೆ.

ಸಾದರ ಸ್ವೀಕಾರ.

ಮಕ್ಕಳ ಶಿಕ್ಷಣ ಪಟವು—ಪ್ರೊ. ಫಷರ ಬೀರಿಯವರಿಂದ ಇಂಗ್ಲೀಷಿನಲ್ಲಿ ರಚಿತವಾಗಿ ಅಮೇರಿಕದ ಪೇರೆಂಟ್ಸ ಅಸೋಶಿಯೇಶನ್ನಿನವರಿಂದ ಪ್ರಕಟಿಸಲ್ಪಟ್ಟ ಶಿಕ್ಷಣ ಪಟವನ್ನು ಶ್ರೀ ಉತ್ತಂಗಿ ಚನ್ನಪ್ಪನವರು ಕನ್ನಡದಲ್ಲಿ ಭಾಷಾಂತರ ಮಾಡಿರುವರು. ಈ ಪಟದಲ್ಲಿ ಒಂದು ವರ್ಷದ ಕೂಸಿನಿಂದ ೨೧ ವರುಷಗಳ ವಯಸ್ಸಿನ ಬಾಲಬಾಲಿಕೆಯರಿಗೆ ಶಾರೀರಿಕ, ಮಾನಸಿಕ, ನೈತಿಕ, ಔದ್ಯೋಗಿಕ ಮತ್ತು ಸಾಮಾಜಿಕ ವಿಷಯವಾಗಿ ೫ ಭಾಗಗಳನ್ನು ಮಾಡಿ ಆಯಾ ವಯಸ್ಸಿನ ಬಾಲಬಾಲಕಿಯರಿಗೆ ಆಯಾ ವಿಷಯದಲ್ಲಿ ಹೇಗೆ ಕಲಿಸಬೇಕೆಂಬುದನ್ನು ವಿಶದವಾಗಿ ತಿಳಿಸಿರುವರು. ೨ ವರುಷದ ವಯಸ್ಸಿನ ಕೂಸಿಗೆ ಮಾನಸಿಕವಾಗಲಿ, ಔದ್ಯೋಗಿಕವಾಗಲಿ ಸಾಮಾಜಿಕವಾಗಲಿ ಏನು ಕಲಿಸಬಹುದೆಂದು ಕೆಲವರು ಆಶ್ಚರ್ಯಪಡಬಹುದು. ಆದರೆ ದೊಡ್ಡವರಾದ ಮೇಲೆ ತೋರಬಹುದಾದ ಪ್ರತಿಯೊಂದು ವಿಷಯದ ಅಂಕುರವು ಸಣ್ಣ ಕೂಸಿನಲ್ಲಿಯೇ ಹೇಗೆ ಒಡಮೂಡಿರುತ್ತದೆಂಬುದೂ ಮತ್ತು ಅದನ್ನು ಕಂಡುಕೊಂಡು ಆಯಾ ಭಾವನೆಯನ್ನು ಸಂವರ್ಧನೆ ಮಾಡಲು ನಾವು ಅಂದರೆ ಶಿಕ್ಷಕರು ಮತ್ತು ಮಾತಾಪಿತರುಗಳು ಹೇಗೆ ವರ್ತಿಸಬೇಕೆಂಬುದನ್ನೂ ಸಂಕ್ಷಿಪ್ತವಾಗಿಯಾದರೂ ನಮ್ಮ ದೇಶಕ್ಕನುಗುಣವಾಗಿ ಮಾರ್ಮಿಕವಾಗಿ ಬೋಧಿಸಿರುವರು. ಭಾವೀ ಜನಾಂಗದ ಉತ್ಕರ್ಷಾಪಕರ್ಷಗಳು ಮಕ್ಕಳ ಮೇಲೆಯೇ ಅವಲಂಬಿಸಿರುವುದರಿಂದ ಸುಶಿಕ್ಷಿತ ತಾಯಿತಂದೆಗಳೂ, ಶಾಲಾ ಶಿಕ್ಷಕ, ಶಿಕ್ಷಕಿಯರೂ ಮಕ್ಕಳ ಸಂರಕ್ಷಕ ಸಂಸ್ಥೆಯವರೂ ಇದನ್ನು ಸಂಗ್ರಹಿಸಲಿಕ್ಕೆಬೇಕು. ಈ ಪಟವನ್ನು ನೋಡಿದರೆ ಮಕ್ಕಳ ನಿಜವಾದ ಯೋಗ್ಯತೆಯು ಹೊಳೆಯದಿರಲಾರದು. ಈ ಪಟವನ್ನು ಸಿದ್ಧಮಾಡಿದ ಶ್ರೀ. ಉತ್ತಂಗಿಯವರು ಕನ್ನಡಿಗರ ಗೌರವಕ್ಕೆ ಪಾತ್ರರಿರುವರು. ಇದರ ಬೆಲೆ ಆರು ಆಣೆ.

ದೊರೆಯುವ ಸ್ಥಳ

೧. ಎಚ್. ಸಿ. ಉತ್ತಂಗಿ ಬಾಸೆಲ ಮಿಶನ್ ಹುಬ್ಬಳ್ಳಿ.

೨. ಕರ್ನಾಟಕ ಸಾಹಿತ್ಯ ಮಂದಿರ ಧಾರವಾಡ.

ವಿಜಾಪುರ ಜಿಲ್ಲೆಯ ವರ್ಣನೆ.

೩ನೆಯ ಇಯತ್ತೆಗಾಗಿ ಈ ಪುಸ್ತಕವನ್ನು ಕೊಲ್ಹಾರ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಶಿ. ಗು ಮಠ ಇವರು ಬರೆದಿರುವರು. ಇದರಲ್ಲಿ ಮುಂಬಯಿ ಕರ್ನಾಟಕದ ಸಂಕ್ಷಿಪ್ತ ಸಂಗತಿಯು ಸಹ ಕೂಡಿದೆ. ವಿದ್ಯಾರ್ಥಿಗಳಿಗೆ ಕೇವಲ ಓದುವದಕ್ಕಿಂತಲೂ ಚಿತ್ರ, ನಕಾಶೆ ಮೊದಲಾದವುಗಳನ್ನು ನೋಡಿ ಅವುಗಳಿಂದ ವಿಷಯ ಸಂಗ್ರಹ ಮಾಡಿಕೊಳ್ಳುವದು ಬಹಳ ಸೇರುತ್ತದೆ. ಆದರಂತೆ ಶ್ರೀ ಮಠ ಇವರು ಈ ಪುಸ್ತಕದಲ್ಲಿ ಚಿತ್ರ ನಕಾಶೆಗಳನ್ನು ಹೆಚ್ಚಾಗಿ ಸಂಗ್ರಹಿಸಿ, ಭೂಮಿಯ ಪ್ರಾಕೃತಿಕ ಸ್ವರೂಪ, ಭೂಮಿಯ ಗುಣ ವಿಜಾಪುರದಲ್ಲಿ ಮಳೆ ಏಕೆ ಕಡಿಮೆ, ಹುಟ್ಟುವಳಿ ಮೊದಲಾದ ವಿಷಯಗಳನ್ನು ಹೋಲಿಕೆಯಿಂದ ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿಯುವಂತೆ ಸುಲಭವಾದ ಭಾಷೆಯಲ್ಲಿ ಬರೆದಿದ್ದಾರೆ. ಆದರೆ ಇಷ್ಟು ವಿಷಯಗಳು ಮೂರನೆಯ ಇಯತ್ತೆಯ ಬಾಲಕರಿಗೆ ಹೆಚ್ಚಾಗಬಹುದೆಂದೆನಿಸುತ್ತದೆ. ಶಾಲಾ ಶಿಕ್ಷಕರು ತಮಗೆ ಹೆಚ್ಚಾಗಿ ಕಂಡ ವಿಷಯಗಳನ್ನಷ್ಟು ಬಿಟ್ಟು ಕಲಿಸಲು ಒಳ್ಳೇ ಉಪಯುಕ್ತವಾಗಿರುವದು. ಬೆಲೆ ೦-೫-೬.

'ಉದಯ':— ವಿಜಾಪುರದಲ್ಲಿ 'ಉದಯ'ವೆಂಬ ಪತ್ರಿಕೆಯು ಪುನಃ ಹೊರಡಹತ್ತಿದೆ. ಇದರ ೯ನೆಯ ಸಂಚಿಕೆಯು ನಮ್ಮ ಕೈಸೇರಿದೆ. ಇದು ಯಾವ ಪಕ್ಷಕ್ಕೂ ಅಂಟದ ನಿಜ ಸಂಗತಿಗಳನ್ನು ಹೊರಗೆಡಹುವ ಪತ್ರಿಕೆಯು. ಶ್ರೀ ಅಡಿವೆಪ್ಪ ಜಗದೇವಪ್ಪ ಅಂಬಲಿ ಇವರು ತಾತ್ಕಾಲಿಕ ಸಂಪಾದಕರಿರುವರು. ಸಮಾಚಾರ ಸಂಗ್ರಹವೂ ನೆಟ್ಟಗಿರುತ್ತದೆ. ಇದು ಕನ್ನಡ ನಾಡಿನ ಸೇವೆಗೆ ನೆರವಾಗಲೆಂದೇ ನಾವು ಇಚ್ಛಿಸುತ್ತೇವೆ

ಮುಗಿಲು:—ಬರೆದವರು ಸ. ಪ ಗಾಂವಕಾರ ಬಿ. ಎ. ಇವರು. ಇದೊಂದು ಪದ್ಯ ಸಂಗ್ರಹ ಪುಸ್ತಕವಿದ್ದು ಹುಬ್ಬಳ್ಳಿ ಕನ್ನಡ ಸಾಹಿತ್ಯ ಸಂಘದ ಪರವಾಗಿ ಪ್ರಕಟವಾಗಿದೆ. ಇದು ಆ ಸಂಘದ ಪ್ರಥಮ ಪುಷ್ಪವಾಗಿದೆ. ಶ್ರೀ. ಗಾಂವಕಾರರು ಆಧುನಿಕ ಇಂಗ್ಲೀಷ ಪದ್ಧತಿಯಂತೆ ತಮ್ಮ ಕವಿತ್ವಕ್ಕಾಗಿ ಹಿಂದಿನ ಕವಿಗಳು ಎಂದೂ ಹೆಸರು ಸಹ ತೆಗೆದುಕೊಳ್ಳದಂಥ ಮನೆಮುಂದಿನ 'ಮಲೆನಾಡಿನ ಬೆಳವ, ಬಡವರ ಕಾಮಧೇನು, ನೊಣ, ಅಣಬೆ, ಜೇಡನ ಬಲೆ' ಮೊದಲ ವವುಗಳಲ್ಲಿ ತಮ್ಮ ಕವಿತ್ವ ಶಕ್ತಿಯಿಂದ ಜೀವವನ್ನು ತುಂಬಿದ್ದಾರೆ. ಕವಿತ್ವವು ಸುಲಭವೂ ಸೌಮ್ಯವೂ ಆಗಿರುವದು. ಕವಿತ ಭಾವವು ಕೆಲಕೆಲವು ವಾಕ್ಯಗಳಲ್ಲಿ ಒಡೆದು ಕಾಣುತ್ತಿದೆ. ಇಂಥ ಎಷ್ಟೋ ಸರಸವಾದ ಪದ್ಯಗಳಿವೆ.

ಕಾವನನ್ನು ಕಾಂಬಬಗೆಯು| ಕಾಣೆ ಬೇರೆ ಕದದಲಿ|
ನಾಡಸೇವೆಗಾಗಿ ತನುವ| ನೀಡೆ ದೇವ ಕಾಂಬನು||
ದೇವರಿಂದ ಬಂದ ನಾವು | ದೇವರಾಗಿ ಮೆರೆಯುವ|
ಜೀವಕಂಜಿ ಹೆದರಿಹೆದರಿ| ಸಾವನಂ ಕರೆಯುವ||
ನಾಡಧರ್ಮ ರೂಢಿಯಲ್ಲ | ನಾಡೆತಾನೆ ನಡಿಸುವ|
ನಾಡದೇವಿ ಬೀಡಿನಲ್ಲಿ| ಕೂಡಿಯಾಡಿ ಮೆರೆಯುವ||

ಇದಲ್ಲದೆ 'ನಾಕಂಡ ಜೀವಿಯನು ಭೂಖಂಡವೆಲ್ಲ | ನೂಕೆಂದು ನುಡಿಯುತಿದೆ ಯಾಕೆಂದು ಕಾಣೆ|| ಎಂಬ ಪದ್ಯವು ಸರಸವಾಗಿದೆ.

ಲಿ. ಎ. ಅ ವರದಿ— ಲಿಂಗಾಯತ ಎಜ್ಯುಕೇಶನ ಅಸೋಸಿಯೇಶನ್ ಧಾರವಾಡ ಈ ಸಂಸ್ಥೆಯ ೧೯೩೨-೩೩ನೆಯ ವರುಷದ ವರದಿಯಲ್ಲಿಯಂತೆ ಈ ಫಂಡಿನ ಮೂಲಧನವು ೨೫೦೦೦ ರೂಪಾಯಿಗಳಿದ್ದು ಅದರಿಂದ ವರುಷಕ್ಕೆ ೬೯೨೫ ರೂ. ಬಡ್ಡಿಯು ಸರಕಾರದಿಂದ ದೊರೆಯುತ್ತದೆ. ಈ ಧನವನ್ನು ವಿದ್ಯಾರ್ಥಿ ವೇತನಕ್ಕಾಗಿ ಉಪಯೋಗಿಸುತ್ತಾರೆ. ಸಂಘದವರು ಆರ್ಟ್ಸ ಭಾಗಕ್ಕಿಂತ ಔದ್ಯೋಗಿಕ ಶಿಕ್ಷಣದ ಕಡೆಗೆ ಹೆಚ್ಚು ಲಕ್ಷ ಕೊಡುತ್ತಿರುವದು ಸ್ತುತ್ಯವು. ಈ ವರುಷ ಒಟ್ಟು ೧೩೦ ವಿದ್ಯಾರ್ಥಿಗಳಿಗೆ ೮೦೪೨ ರೂ. ವಿದ್ಯಾರ್ಥಿ ವೇತನ ಕೊಟ್ಟಿದ್ದಾರೆ. ಇದಲ್ಲದೆ ಈ ಸಂಘದವರಿಂದ ಭಿನ್ನ ಭಿನ್ನ ವಿಷಯಗಳಲ್ಲ ಒಂದನೆಯ ನಂಬರು ಪಡೆದ ವಿದ್ಯಾರ್ಥಿಗಳಿಗೆ ಇನಾಮುಗಳೂ ಕೊಡಲ್ಪಡುತ್ತವೆ. ಈ ಸಂಸ್ಥೆಯವರು ಇಷ್ಟು ಉಪಯುಕ್ತ ಕೆಲಸ ಮಾಡುತ್ತಿದ್ದರೂ ಇದರ ಸಮಿತಿಯವರು ಸರಕಾರಿ ನೌಕರಿಯ ಸ್ಥಳಗಳಿಗಾಗಿ ಶಿಫಾರಸು ಮಾಡಿದ ೧೬ ಸ್ಥಳಗಳನ್ನು ಸರಕಾರದವರು ವಿಚಾರ ಮಾಡಿರುವೆವೆಂದು ಹೇಳಿದ್ದರೂ ಇನ್ನೂವರೆಗೆ ಒಂದಾದರೂ ನೌಕರಿ ಕೊಡದಿದ್ದುದು ವಿಷಾದಕರವಾಗಿದೆ.

—ಕಳೆದ ೮ನೆಯ ತಾರೀಖಿನ ದಿವಸ ಮುಂಬಯಿ ಇಲಾಖೆಯ ಹೊಸ ಗವ್ಹರ್ನರರಾದ ಲಾರ್ಡ ಬ್ರೋಬರ್ನ ಇವರು ಮುಂಬಯಿಗೆ ಬಂದರು. ಮೊದಲು ಶೃಂಗರಿಸಿದ ಸ್ಪೆಶಲ್ ಸ್ಟೀಮ್ ಲಾಂಚಿನಿಂದ ಹಿಂದುಸ್ಥಾನದ ಪ್ರವೇಶ ದ್ವಾರದ ಹತ್ತಿರ ಬಂದ ಕೂಡಲೆ ಅಲ್ಲಿ ನೆರೆದ ಸರದಾರ್, ಸಂಸ್ಥಾನಿಕ ಮತ್ತು ಪ್ರಮುಖ ಜನಗಳು ಸ್ವಾಗತವನ್ನಿತ್ತರು. ಅನಂತರ ಮುಂಬಯಿ ಕಾರ್ಪೋರೇಶನ್ನಿನ ಪರವಾಗಿ ಕಾರ್ಪೋರೇಶನ್ನಿನ ಅಧ್ಯಕ್ಷರಾದ ಡಾ. ಎಂ. ಸಿ. ಜಾವಳೆಯವರು ಮಾನಪತ್ರವನ್ನರ್ಪಿಸಿದರು.

ಸುಖದ ಹಾದಿಯ ತೋರಿಸುವ

ಹೊಸ ಪುಸ್ತಕ! **ಮಹತ್ವದ ಪುಸ್ತಕ!!**

ಖಾದೀ ಶಾಸ್ತ್ರ.

ಲೇಖಕರು:—ಶ್ರೀ. ಹರ್ಡೇಕರ ಮಂಜಪ್ಪನವರು,

ಪ್ರಕಾಶಕರು ಮತ್ತು ಸಂಪಾದಕರು:— ಶ್ರೀ ಆಲೂರು ವೆಂಕಟರಾಯರು.

ಕ್ರಯ ೧ ರೂ. ೨ ಆಣೆ.

ಖಾದಿಯು ಬಡವರ ಭಾಗ್ಯವು. ಖಾದಿಯು ದೇಶದ ಸಂಪತ್ತನ್ನು ಕೂಡಿಸುವ ಹಾದಿಯು. ವೇದ ಕಾಲದಿಂದಲೂ ಖಾದಿಯೇ ಜನಾಂಗದ ಸುಖ ಸಂಪತ್ತುಗಳನ್ನು ಕಾಯ್ದುಕೊಳ್ಳುತ್ತಾ ಹೇಗೆ ಬಂದಿದೆಯೆಂಬುದನ್ನೂ ಅದನ್ನು ಬಿಟ್ಟದ್ದರಿಂದಲೇ ನಾವು ಹೇಗೆ ಬಡತನ ಪರಾಧೀನತೆಗಳಿಗೊಳಗಾದೆವೆಂಬುದನ್ನೂ ಈ ಪುಸ್ತಕದಲ್ಲಿ ಪ್ರಬಲ ಪ್ರಮಾಣದಿಂದಲೂ, ಸಂಖ್ಯಾ ಶಾಸ್ತ್ರದಿಂದಲೂ, ಐತಿಹಾಸಿಕ ಆಧಾರಗಳಿಂದಲೂ ಖಾದಿಯ ಆಕ್ಷೇಪಕರ ಎಲ್ಲ ಆಕ್ಷೇಪಣೆಗಳನ್ನು ನಿವಾರಿಸಿದ್ದಾಗಿದೆ. ಈ ಪ್ರಕಾರ ಖಾದಿಯ ವಿಷಯದಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ದೇಶವಿದೇಶಗಳ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳ ಪ್ರಮಾಣದಿಂದ ಬರೆದುದು ಕನ್ನಡದಲ್ಲಿ ಇದೊಂದೇ ಗ್ರಂಥವು. ಇಂತಹ ಮಹತ್ವದ ಪುಸ್ತಕವನ್ನು ಸಕಲರೂ ಜಾಗ್ರತೆ ತರಿಸಿಕೊಂಡು ಖಾದಿಯ ವಿಷಯವನ್ನು ಚೆನ್ನಾಗಿ ಅರಿತುಕೊಂಡು ಖಾದಿಯ ನಿಜಭಕ್ತರಾಗಬೇಕು.

ಪುಸ್ತಕ ದೊರೆಯುವ ವಿಳಾಸ:— ಮ್ಯಾನೇಜರ,

ಶ್ರೀ. ಆಲೂರು ವೆಂಕಟರಾಯರು ಸಾಧನಕೇರಿ, ಧಾರವಾಡ. | **ಜ್ಞಾನೋದಯ ಗ್ರಂಥಮಾಲಾ, ಆಲಮಟ್ಟಿ.**

ಪ್ಲೇಗ ಸಂಜೀವಿನಿ ಮಾತ್ರಾ.

ಅತ್ಯಾಶ್ಚರ್ಯಕರವಾದ ಗುಣ! **ಬರೇ ೬ ತಾಸುಗಳಲ್ಲಿಯೇ ಗುಣ!!**

ಈಗ ದೇಶದಲ್ಲಿ ನಡೆದಿರುವ ಪ್ಲೇಗ ಹಾವಳಿಯಿಂದ ಪ್ರತಿ ದಿವಸ ಸಾವಿರಗಟ್ಟಲೆ ಜನರು ಸಾಯುತ್ತಿರುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಯಾವ ತರಹದ ಖಾತ್ರಿಯಾದ ಔಷಧವನ್ನು ಕಂಡುಹಿಡಿದಿಲ್ಲವಷ್ಟೆ. ಆದರೆ ಮನುಷ್ಯಜಾತಿಯ ಸುದೈವದಿಂದ ನಮಗೆ ಒಬ್ಬ ಪರಮ ಯೋಗಿಗಳ ಕೃಪೆಯಿಂದ ಈ ಪ್ಲೇಗ ಸಂಜೀವಿನಿಯು ದೊರಕಿರುವದು. ಈ ಔಷಧದ ಚಮತ್ಕಾರಿಕ ಗುಣವನ್ನು ಇಲ್ಲಿ ವರ್ಣಿಸುವದಕ್ಕೆ ಬರುವಂತಿಲ್ಲ. ಔಷಧ ಕೊಟ್ಟ ಆರೇ ತಾಸುಗಳಲ್ಲಿಯೇ ಪೂರ್ಣ ಗುಣವಾಗುವದು. ಈ ಔಷಧವು ಹೊಟ್ಟೆಯಲ್ಲಿ ಹೋದಮೇಲೆ ಸಾಯುವದೇ ಇಲ್ಲವಾದ್ದರಿಂದ ಇದಕ್ಕೆ "ಪ್ಲೇಗ ಸಂಜೀವಿನಿ" ಎಂಬ ಹೆಸರು ಇಡಲಾಗಿದೆ. ಪ್ಲೇಗು ಬಂದಕೂಡಲೆ ಈ ಔಷಧದ ಪ್ರಯೋಗ ಮಾಡಿದರೆ ರೋಗಿಗಳು ಹಾಸಿಗೆಯನ್ನು ಹಿಡಿಯದೆ ತಿರುಗಾಡುತ್ತಲೇ ಗುಣ ಹೊಂದುವರು. ಇದೇ ವಿಚಿತ್ರ ಚಮತ್ಕಾರವು. ಅನುಪಾನ ಪತ್ರಿಕೆಯಲ್ಲಿ ಬರೆದ ಪ್ರಕಾರ ಪ್ಲೇಗು ಇದ್ದ ಊರ ಜನರೆಲ್ಲರೂ ಈ ಔಷಧ ತಕ್ಕೊಳ್ಳುತ್ತ ಹೋದರೆ ಅವರಿಗೆ ಪ್ಲೇಗ ಬೇನೆಯೇ ಬರುವದಿಲ್ಲ.

ಈ ಸಂಜೀವಿನಿಯ ಅದ್ಭುತ ಶಕ್ತಿಯನ್ನು ತಿಳಿದುಕೊಳ್ಳಲು ಸಾಯಿನ್ಸ ವಿದ್ವಾಂಸರು ಪ್ರಯತ್ನಿಸುತ್ತಿರುವರು. ಡಾಕ್ಟರ್ ಮತ್ತು ಆಯುರ್ವೇದದ ಯುನಾನಿ ಪಂಡಿತರಿಗಂತೂ ಸಂಜೀವಿನಿಯು ಮರುಳುಮಾಡಿ ಬಿಟ್ಟಿದೆ. ಇದು ಮಹಾತ್ಮರ ಕೇವಲ ಯೋಗಬಲದಿಂದ ಶೋಧಿಸಿದ್ದುದರಿಂದ ಇತರರಿಗೆ ತಿಳಿಯದಂತಾಗಿದೆ. ಇದರಿಂದ ಮಾನವ ಜಾತಿಯೇ ಈ ಪ್ಲೇಗಿನ ಮೃತ್ಯುವಿನಿಂದ ಪಾರಾಗುವದೆಂದು ದೃಢ ನಂಬಿಗೆಯಿಂದ ಹೇಳುತ್ತೇವೆ. ಅದಕ್ಕಾಗಿ ಪ್ರತಿಯೊಂದು ದೇಶದಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಇಲಿ ಬೀಳುವ ಊರವರಂತೂ ಪ್ರತಿಯೊಂದು ಮನೆಯಲ್ಲಿ ಒಬ್ಬೊಬ್ಬರಿಗೆ ಸಾಲುವಷ್ಟು ಔಷಧವನ್ನು ಮುಂಚಿತವಾಗಿಯೇ ತರಿಸಿಕೊಂಡು ಇಟ್ಟುಕೊಳ್ಳಬೇಕು. ಹಣದ ಅಡಚಣೆಯ ಈ ಕಷ್ಟಕಾಲದಲ್ಲಿ ಬಡಬಗ್ಗರಿಗೂ ಕೂಡ ದೊರಕಬೇಕಾದ್ದರಿಂದ ಕಿಮ್ಮತ್ತು ಕಡಿಮೆ ಇಡಲು ಕೆಲವು ಪುಢಾರಿಗಳ ಆಗ್ರಹದಿಂದ ಒಬ್ಬ ಮನುಷ್ಯನಿಗೆ ಸಾಲುವಷ್ಟು ಔಷಧಕ್ಕೆ ರೂ. ೧-೫-೦ ಮಾತ್ರ ಇಡಲಾಗಿದೆ. ವ್ಹೀ. ಪಿ. ಚಾರ್ಜ ಬೇರೆ.

ಅನುಪಾನ ಪತ್ರಿಕೆಯು ಸಂಜೀವಿನಿಯ ಸಂಗಡಲೇ ಇರುವದು. ಶೀಘ್ರ ತರಿಸಿಕೊಂಡು ಸಂಕಟದೊಳಗಿಂದ ಪಾರಾಗಿರಿ.

ವಿಳಾಸ:— ಪ್ಲೇಗ ಸಂಜೀವಿನಿ ಆಫೀಸ ಗುಲ್ಬರ್ಗಾ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಢಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ	೩೦-೦-೦ ತಿಂಗಳೊಂದಕ್ಕೆ	ಎರಡೂಹೊತ್ತು ಭೋಜನ	೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ	೧-೮-೦ ದಿನ ಒಂದಕ್ಕೆ	ಊಟ ಒಂದಕ್ಕೆ	೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ.	೩೨-೮-೦
೬೦ ,, ,, ,,	೧೬-೮-೦
೩೦ ,, ,, ,,	೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಯೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ವಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್
ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ದಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ ಗುಲಬರ್ಗಾ

ಎಲ್ಲ ಸಮೂನೆಗಳು **ಬರೇ ೧ ರೂಪಾಯಿ!**

--೧೦೦೦--

ನೀಲೀ ಮಶಿಚೀಟು—	೪ ರೂಪಾಯಿ
ಭಾಸ್ಕರ ಪ್ರಕಾಶ—	೧೧ ,,
ಗುಂಗಾಡ ನಾಶಕ—	೧೧ ,,
ಚೇಳಿನ ನಾಶ—	೧೧ ,,
೧೨ ತಗಣಿ ಚತುರ ಬಾಟ್ಲ—	೭ ,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ.
ಪೋ. ಹಂಚಲಿ.
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No B 2891

ಶರಣ ಸಂದೇಶ

The Sharana Sandesh.

[illegible] ರನಲ್ಲ। [illegible] ಎಲ್ಲರಿಗೂ ಅಂಜುವವನಲ್ಲ।
ಕೂಡಲಸಂಗಮದೇವನ ರಾಜತೇಜದಲ್ಲಿಪ್ಪನಾಗಿ ॥ ಮ ೨೩೮ ॥ ಮಹಾನುಭಾವ ಬಸವಣ್ಣನವರು

ಸಂಪಾದಕರು:- ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨. | ಆಂಗೀರಸ- ಸೋಮವಾರ ತಾರೀಖು ೩೦ ನೆಯ ಜನವರಿ ೧೯೩೩. | ಸಂಚಿಕೆ ೨೬

ಜನಸೇವೆಯೇ — ದೇವರ ಸೇವೆ

ಹಿಂದುಸ್ಥಾನ ಸರಕಾರದ ತೀರ್ಮಾನ!

ಮಹಾತ್ಮಾ ಗಾಂಧಿಯವರ

ಪರಮಾತ್ಮನಲ್ಲಿ ಪ್ರಾರ್ಥನೆ.

ಹಿಂದುಸ್ಥಾನ ಸರಕಾರದ ನಿರ್ಣಯವು ಪರಮಾತ್ಮನ ಪ್ರೇರಣೆಯಿಂದಲೇ ಮಾಡಲ್ಪಟ್ಟಿದೆ ಯೆಂದು ನಾನು ತಿಳಿಯುತ್ತೇನೆ.

ನನ್ನ ಕೊನೆಯ ಪರೀಕ್ಷೆಯನ್ನು ಮಾಡುವುದು ಪರಮಾತ್ಮನ ಇಚ್ಛೆಯಿದ್ದಂತೆ ಕಾಣುತ್ತದೆ.

ಹಾಗಾಗಿದ್ದರೆ ಪರಮಾತ್ಮನೇ ಈ ಮಹಾಪ್ರಸಂಗದಿಂದ ನನ್ನನ್ನು ಪಾರುಮಾಡಬೇಕು. ಪರಮಾತ್ಮನು ಶರಣಾಗತರನ್ನು ರಕ್ಷಿಸುವದರಿಂದ ನನ್ನನ್ನೂ ರಕ್ಷಿಸುವನೆಂದೇ ನಂಬಿದ್ದೇನೆ.

ಈ ಪ್ರಕಾರ ಪರಮಾತ್ಮನಲ್ಲಿ ನನ್ನ ಮೊರೆಯನ್ನಿಟ್ಟಿದ್ದೇನಲ್ಲದೆ ಜನಗಳಿಗೆ ನಾನೇನೂ ಅಂಜಿಕೆ ಹಾಕಿಲ್ಲವೆಂಬುದು ಮುಂದೆಗೊತ್ತಾಗಬಹುದು.

ಯರವಡಾ. ತಾರೀಖು ೨೮-೧-೩೩.

ದೇಹವೇ — ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 313

ಕಳ್ಳರ ಭಯವಿಲ್ಲ ! ಬೆಂಕಿಯ ಕಾಟವಿಲ್ಲ!!

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ ಆ್ಯಂಡ ಸನ್ಸ

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ.

ಬ್ರ್ಯಾಂಚ್ ಆಫಿಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ದಾಗೀನೆ ಮತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಸತ್ವ ಪರೀಕ್ಷೆಯು ತಾ. ೨೪ನೇ ಡಿಶೆಂಬರ ೧೯೩೨ನೇ ಇಸವಿ ದಿವಸ ಸದರ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ವಂಕಿ ಒಂದು ಸರ ಪಳಿ ಜತಿ ಒಂದು ಹತ್ತು ರೂಪಾಯದ ನೋಟು ಒಂದು ನಂ. K. 11, 570153 ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಶಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧|| ಖಂಡೆ—

—ಕಟ್ಟಿಗೆಯಲ್ಲಿ ೧|| ತಾಸಿನ ವರೆಗೆ ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ಯತೆ ಮತ್ತು ಭದ್ರತೆಗಳನ್ನು ತೋರಿಸಿದರು. ಅ. ಭಾ. ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

(೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಇದಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮತರಗತಿಯ ತ್ರಿಜೋರಿಯ ಕಾರ್ಖಾನೆಯವರೆಂದೆನಿಸಿಕೊಂಡು ಬಂಗಾರದ ಮೆಡಿಲು ಮತ್ತು ಸರ್ಟಿಫಿಕೇಟ ಹೊಂದಿದೆ. ಮತ್ತು ತಿಜೋರಿಗೆ ಹಾಕುವ ಯಾವತ್ತು ಕೀಲಿಗಳನ್ನು ವ ನಂಬರ್‌ಲಾಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮುಟ್ಟ ಜನವರಿ ತಾರೀಖು ೩೦ ನೆಯ ಸೋಮವಾರ | ಸಂಚಿಕೆ ೨೪.

ಸನಾತನ ಹಿಂದುಧರ್ಮ ಮಹಾಸಭಾ.

ಪ್ರಯಾಗ ಕ್ಷೇತ್ರದ ಪ್ರತ್ಯೇಕ ಅಧಿವೇಶನ.

ಧರ್ಮಾತ್ಮಾ ಮಾಲವೀಜಿಯವರ ಮಹತ್ವದ ಭಾಷಣ.

ಗಂಗಾತೀರದ ತ್ರಿವೇಣಿ ಸಂಗ[illegible]
ಧರ್ಮಾತ್ಮಾ ಪಂ. ಮ[illegible]

“ನಾನು ಈಗ ನಾಲ್ವತ್ತು ವರ್ಷಗಳಿಂದ ಧರ್ಮಶಾಸ್ತ್ರದ ಅಧ್ಯ
[illegible] ದುತ್ತಿರುವ

ಸಮಾಜಸೇವಾ ಸಂಘ ಗೋಕಾಕ.

ಗೋಕಾವಿಯಲ್ಲಿ ಮಿ. ಕೇ. ಜಿ. ವರ್ಟೆ ಇವರ ಅಧ್ಯಕ್ಷತೆಯ ಕೆಳಗೆ ಸಭೆಕೂಡಿ ತಾ, ೧೬-೧೨-೩೨ ದಿವಸ ಸಮಾಜ ಸೇವಾ ಸಂಘ ಗೋಕಾಕ ಎಂಬ ಸಂಸ್ಥೆಯು ಜನ್ಮವಾಯಿತು. ಆ ಕಾಲಕ್ಕೆ ಊರೊಳಗಿನ ಉತ್ಸಾಹಿ ಪ್ರಮುಖ ತರುಣರೆಲ್ಲರು ಕೂಡಿದ್ದರು. ಆಮೇಲೆ ಈ ಸಂಘದ ಉದ್ದೇಶ ಮತ್ತು ನಿಯಮಗಳನ್ನು ಮುಂಬೈ ಸೋಸಿಯಲ್ ಸರ್ವಿಸ ಲೀಗದ ನಿಯಮಗಳ ಪ್ರಕಾರ ತಯಾರಿಸಲಿಕ್ಕೆ ಕಮಿಟಿಯನ್ನು ನಿಯಮಿಸಿ ಆ ತಯಾರುಮಾಡಿದ ನಿಯಮಗಳು ಡಾ. ದೇಶಪಾಂಡೆಯವರ ಅಧ್ಯಕ್ಷತೆಯೊಳಗೆ ಕೂಡಿದ ಸಭೆಯಲ್ಲಿ ಸರ್ವಾನುಮತದಿಂದ ಪಾಸಾದವು

ಆ ಮೇಲೆ ಅಧ್ಯಕ್ಷರನ್ನು ಮತ್ತು ಕಾರ್ಯಕಾರಿ ಮಂಡಲಿಯನ್ನು ಮತ್ತು ಕಾರ್ಯ ನಿರ್ವಾಹಕರನ್ನು ನಿಯೋಜಿಸುವದರ ಸಲುವಾಗಿ ತಾ. ೭-೧-೧೯೩೩ ದಿವಸ ಸಾಯಂಕಾಲ ಮಿ. ದೇವೇಂದ್ರಪ್ಪಾ ಅಣ್ಣಾ ಮುರುಗೋಡ ಇವರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿತ್ತು.

ಸಭೆಯಲ್ಲಿ ವಚನಕೊಟ್ಟ ಪ್ರಕಾರ ಸಭಾಸದರನ್ನಾಗಿ ನೊಂದಿಸಿದರು

ಸಹಾಯಕರು.

೧.	ಶ್ರೀ ದೇವೇಂದ್ರಪ್ಪ ಅಣ್ಣಾ ಮುರುಗೋಡ	ರೂ ೧೦
೨,	,, ಮಾರತಂಡಪ್ಪಾ ಬಾಳಪ್ಪಾ ಬಾಗ	,, ೧೦
೩.	ಡಾ ಜಿ ಆರ್. ಕಡಲಗಿಕರ	,, ೧೦
೪	ಶ್ರೀ. ಎಮ್. ಜಿ. ಕಲ್ಯಾಣಶೆಟ್ಟಿ ವಕೀಲ	,, ೧೦
೫	,, ಕೇ. ಜಿ. ವರ್ಟೆ ಎಮ್. ಎ.	,, ೧೦
೬.	,, ಸಿದ್ಧಪ್ಪಾ ಆ ನೆಗಿನಹಾಳ	,, ೧೦
೭.	,, ಶಿವನಾಥಜಿ ಮಾರವಾಡಿ	,, ೧೦
೮.	ಶ್ರೀ ನಿಜಗುಣೆಪ್ಪ ಕಡಿಮನಿ. ವಾರ್ಷಿಕ ವರ್ಗಣಿ	ರೂ. ೧
೯.	,, ಬಾಳಯಾ ಸಿದ್ಧಯ್ಯಾ ಗಣಾಚಾರಿ	
೧೦.	,, [illegible]	

೫ ,, ತಮ್ಮಣ್ಣಾ ಹೊಳಿಯಪ್ಪಾ ತಾಳಿಕೋಟಿ (ಮಚಿಗಾರ)

೬ ,, ಮಾರತಂಡಪ್ಪಾ ಬಾಗಿ (ಜೈನ)

೭ ,, ಸಿದ್ಧಪ್ಪಾ ನೇಗಿನಹಾಳ (ಲಿಂಗಾಯತ)

ಈ ಸಂಘದ ಶಿಕ್ರೆಟರಿ ಮಿ. ತಮ್ಮಣ್ಣಾ ತಾಳಿಕೋಟಿ ಇವರನ್ನು ನಿಯಮಿಸಿದೆ.

ಬೆಳಗಾಂವ)
ತಾ. ೨೩-೧-೧೯೩೩.) **ಎಸ್. ಬಿ. ಬಾಗಿ**

ಶೋಚನೀಯ ಮೃತ್ಯು.

ಗದಗ ತಾ ೧೯-೧-೩೩ ಇಸವಿ ಗುರುವಾರ ವೇ. ವೀರಯ್ಯನವರು ಕಂಬಿ ಮಠದ ಇವರು ಅರ್ಧಾಂಗ ವಾಯುವಿನಿಂದ ಶಿವಾಧೀನರಾದರೆಂದು ತಿಳಿಸಲು ತುಂಬಾ ವಿಷಾದವೆನಿಸತ್ತದೆ. ಇವರು ಗದಗಿನ ವಯೋವೃದ್ಧ ಅನುಭವಿಕ ಸರಾಫಿ ವ್ಯಾಪಾರಸ್ಥರಿದ್ದು ಸದಾಚಾರಿಗಳೂ, ಪರೋಪಕಾರಿಗಳೂ, ಧರ್ಮಶಿಷ್ಟರೂ ಇದ್ದು ಸಮಾಜ ನೇತೃಗಳಾಗಿ ಅನೇಕಾನೇಕ ಧರ್ಮಸಂಸ್ಥೆಗಳಿಗೆ ತನುಮನಧನವನ್ನು ಅರ್ಪಿಸಿ ಕೀರ್ತಿಶಾಲಿಗಳಾದರು. ಇವರ ಅಗಲುವಿಕೆಯಿಂದ ಸಮಾಜಕ್ಕೆ ಪರಮ ದುಃಖವಾಗಿದೆ. ಈ ಪುಣ್ಯಾತ್ಮರ ದಿವ್ಯ ಆತ್ಮಕ್ಕೆ ಬಸವೇಶ್ವರನು ಶಾಂತಿಯನ್ನೀಯಲಿ.

ವೇ. ವೀರಯ್ಯಾ ಪ್ರಭಯ್ಯಾ ಕಂಬಿಮಠದ ಇವರು ತಮ್ಮ ತಂದೆಯವರಾದ ವೀರಯ್ಯನವರು ಕಂಬಿ ಮಠದ ಇವರ ಪುಣ್ಯಸ್ಮಾರಕೋತ್ಸವಕ್ಕೆ ೨೫ ರೂಪಾಯಿಗಳನ್ನು ಮತ್ತು ವೀರಭದ್ರಪ್ಪಾ ಮರಿಬಸಪ್ಪ ಖಾನಾಪುರದ ಇವರು ತಮ್ಮ ಸಹೋದರಿಯರಾದ ವೀರವ್ವಾ ಕೋಂ ಬಸಪ್ಪಾ ಬಕ್ಕಾನವರ ಮುಂಡರಗಿ ಇವರ ಪುಣ್ಯಸ್ಮಾರಕೋತ್ಸವಕ್ಕೆ ೧೦ ರೂಪಾಯಿಗಳನ್ನೂ ಬಸವರಾಜ ವಾಚನಾಲಯಕ್ಕೆ ಬಕ್ಷೀಸವಾಗಿ ಕೊಟ್ಟು ತರುಣರಿಗೆ ಆದರ್ಶಪ್ರಾಯರಾಗಿದ್ದಾರೆ ಇವರಿಗೆ ಶರಣಪುಂಗ ಬಸವೇಶನು ಚಿರಾಯುರಾರೋಗ್ಯವನು ಕೊಡಲೆಂದು ಕೋರುತ್ತೇನೆ.

—[illegible] ಕಹಪುರಪೇಟೆ

ಸಮಾಚಾರ ಸಂಗ್ರಹ.

—ಮಧ್ಯಪ್ರಾಂತ ಸರಕಾರದವರು ಕೇಸರಿ, ಮಹಾರಾಷ್ಟ್ರ, ಉದಯ, ನವಾಕಾಳ, ಮತ್ತು ಚಿತ್ರಮಯಜಗತ ಈ ಪತ್ರಿಕೆಗಳನ್ನು ವಿದ್ಯಾಶಾಖೆಯವರು ತರಿಸಬಾರದಾಗಿ ಅಪ್ಪಣೆ ಮಾಡಿದ್ದಾರೆ.

—ತಾ. ೨೨ನೆಯ ದಿವಸ ಅಮೃತಸರದಲ್ಲಿ ಪೋಲೀಸರು ೧೨ ಸ್ಥಳಗಳನ್ನು ಒಮ್ಮೆಲೆ ಆಕ್ರಮಿಸಿ ಶೋಧಿಸಿದರು. ಅವರಿಗೆ ಒಂದು ಸಾಯಕ್ಲೋ ಸ್ಟಾಯಿಲ್ ಯಂತ್ರ ದೊರೆತಿತು. ಅದನ್ನು ಅವರು ಸ್ವಾಧೀನಪಡಿಸಿಕೊಂಡರು.

—ಶ್ರೀ. ಜಯಕರ ಇವರು ಪುಣೆಯಲ್ಲಿ ಭಾಷಣ ಮಾಡುವಾಗ ಸಂಪೂರ್ಣ ಸ್ವರಾಜ್ಯ ಬೇಡುವವರು ಮಂಡಲಾಕಾರ ಪರಿಷತ್ತಿನ ಫಲಶ್ರುತಿಯ ಕಡೆಗೆ ಲಕ್ಷಕೊಡಬಾರದು. ಸಂಪೂರ್ಣ ಸ್ವರಾಜ್ಯ ದೊರೆಯುವ ಸ್ಥಾನವು ಮಂಡಲಾಕಾರ ಪರಿಷತ್ತು ಅಲ್ಲವೆಂದು ಹೇಳಿದರು.

—ಡಾ. ಸುಬ್ಬರಾಯನ್ನರವರ ಗೊತ್ತುವಳಿಯನ್ನು ಕೌನ್ಸಿಲ್ಲಿನಲ್ಲಿ ತರಲು ವ್ಹಾಯಿಸ್‌ರಾಯರು ಮಾನ್ಯಮಾಡಲಿಲ್ಲ. ಅಸ್ಪೃಶ್ಯತೆ ನಿವಾರಣೆಯು ಅಖಿಲಭಾರತೀಯ ಪ್ರಶ್ನೆಯಾಗಿರುವದೆಂದೂ ಮತ್ತು ದಕ್ಷಿಣ ಹಿಂದುಸ್ಥಾನದ ರಾಮೇಶ್ವರ, ಮಧುರೆ, ತಿರುಪತಿ ಮೊದಲಾದ ದೇವಸ್ಥಾನಗಳಿಗೆ ಹಿಂದುಸ್ಥಾನದ ಎಲ್ಲಾ ಭಾಗಗಳಿಂದ ಜನರು ಬರುವುದರಿಂದ ಮಂದಿರ ಪ್ರವೇಶವು ಅಖಿಲಭಾರತೀಯ ಪ್ರಶ್ನೆಯಾಗಿರುವುದರಿಂದಲೂ ಪ್ರಾಂತಿಕ ಕೌನ್ಸಿಲಿನಲ್ಲಿ ಇಂಥ ಗೊತ್ತುವಳಿ ನಿರ್ಣಯವಾಗಲಾರದೆಂಬ ಕಾರಣ ತೋರಿಸಿದ್ದಾರೆ. ಮತ್ತು ಆದಿಜನರ ಅಡಚಣೆಗಳನ್ನು ದೂರಮಾಡುವುದಕ್ಕಾಗಿ ಅಸೆಂಬ್ಲಿಯಲ್ಲಿ ಶ್ರೀ. ರಂಗ ಅಯ್ಯರರು ತಂದ ಗೊತ್ತುವಳಿಗೆ ವ್ಹಾಯಿಸ್‌ರಾಯರು ಒಪ್ಪಿಗೆಯಿತ್ತರು.

—ತಾ. ೨೩ನೆಯ ದಿವಸ ಹುಬ್ಬಳ್ಳಿಯಲ್ಲಿ ಜಂಗೀ ಕುಸ್ತಿಗಳಾದವು. ಅದರಲ್ಲಿ ಬಾಬು ಕೆಂಪವಾಡ ಈತನಿಗೆ ಒಂದು ಬೆಳ್ಳಿಯ ಗದೆಯು ಇನಾಮು ಸಿಕ್ಕಿತು. ಮತ್ತು ಶಿವರುದ್ರ ಬೈಲವಾಡ ಎಂಬವನನ್ನು ಆನೆಯಮೇಲೆ ಕೂಡ್ರಿಸಿ ಮೆರವಣಿಗೆ ತೆಗೆದರು. ಇವರಿಬ್ಬರ ಕುಸ್ತಿಯು ಉತ್ತಮವಾಗಿದ್ದು ಜಯದ ವಿಷಯದಲ್ಲಿ ವಾದವು ನಡೆದಿದೆ.

—ಕಲಕತ್ತೆಯ ಸನಾತನ ಧರ್ಮಸಂಸ್ಥೆಯ ಕಾರ್ಯದರ್ಶಿಗಳು ಮ. ಗಾಂಧಿಯವರಿಗೆ ಹಿಂದೂ ಧರ್ಮಶಾಸ್ತ್ರದಲ್ಲಿ ಅಸ್ಪೃಶ್ಯತೆಗೆ ಆಧಾರವಿಲ್ಲವೆಂದು ಹೇಳುವ ಪಂಡಿತರು ನಿಮ್ಮನ್ನು ವಿರುದ್ಧ ದೆಸೆಗೆ ಒಯ್ಯುತ್ತಿರುವರೆಂದು ಬರೆದಿರುವರು. ಅದನ್ನು ಮಹಾತ್ಮಾ ಗಾಂಧಿಯವರು ತೀವ್ರವಾಗಿ ನಿಷೇಧಿಸಿ ನೀವು ಕಾರ್ಯದರ್ಶಿಗೆ ಸಲ್ಲದಂಥ ಅವಮಾನಕಾರಕವಾದ ಪತ್ರ ಬರೆದಿದ್ದು ಕೂಡಲೆ ಆ ಪಂಡಿತರ ಕ್ಷಮಾಪಣೆ ಬೇಡಿಕೊಳ್ಳಬೇಕು. ಹಾಗಾಗದ ವಿನಾ ನಿಮ್ಮ ಪತ್ರವನ್ನು ಓದಲಾಗುವುದಿಲ್ಲ. ಅವುಗಳಿಗೆ ಉತ್ತರ ಬರೆಯಲಾಗುವುದಿಲ್ಲವೆಂದು ತಿಳಿಸಿದ್ದಾರೆ.

—ಸೋವ್ಹಿಯಟ್ ರಶಿಯಾದಲ್ಲಿ ಆಹಾರವನ್ನೊದಗಿಸಿಕೊಡುವ ಅಧಿಕಾರಿಗಳು ತಮ್ಮ ಕೆಲಸವನ್ನು ಚೆನ್ನಾಗಿ ಮಾಡಲಿಲ್ಲವೆಂದು ಆ ಶಾಖೆಯ ೬ ಜನ ಅಧಿಕಾರಿಗಳಿಗೆ ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಿದ್ದಾರೆ.

—ಡಾ. ಬಾಬಾಸಾಹೇಬ ಅಂಬೇಡಕರ ಇವರಿಗೆ ಮಹಾತ್ಮಾಜಿಯವರ ಕಡೆಯಿಂದ ಅವರನ್ನು ಕಾಣಲು ತಾರು ಬಂದಿರುತ್ತದೆ. ಶ್ರೀ. ಅಂಬೇಡಕರರು ತಾ. ೩ನೇ ದಿವಸ ವ್ಹಾಯಿಸರಾಯರನ್ನು ಕಂಡುಕೊಂಡು ಆ ಮೇಲೆ ಮಹಾತ್ಮಾಜಿಯವರ ದರ್ಶನಕ್ಕೆ ಹೋಗುವವರಿದ್ದಾರೆ.

—ಹೊಸದಿಲ್ಲಿಯಲ್ಲಿ ಮೂರು ಜನರು ಒಬ್ಬ ಪೋಲೀಸನನ್ನು ಅವನ ರಿವ್ಹಾಲ್ವರ ತೆಗೆದುಕೊಂಡುದರ ಸಲುವಾಗಿ ಒಬ್ಬನಿಗೆ ಶ್ರೀ

—ವ್ಹಾಯಿಸರಾಯರು ಒಪ್ಪಿಗೆಯನ್ನಿತ್ತ ಶ್ರೀರಂಗ ಅಯ್ಯರರ ಅಸ್ಪೃಶ್ಯತಾ ನಿವಾರಣೆಯ ಗೊತ್ತುವಳಿಯು ಹಿಂದು ಧರ್ಮದಲ್ಲಿ ಏನೂ ಚಲನವಲನ ಮಾಡಲಾರದೇದು ಮಹಾತ್ಮಾಜಿಯವರು ಅಭಿಪ್ರಾಯಪಟ್ಟಿದ್ದಾರೆ.

—ಸೊಲ್ಲಾಪುರದಲ್ಲಿ ಡಾ. ವೈಶಂಪಾಯನ್ ಮೊದಲಾದ ಕೆಲವು ಡಾಕ್ಟರರು ಆದಿಜನರಿಗೆ ಸ್ವಂತ ವೆಚ್ಚದಿಂದ ಒಂದು ವೈದ್ಯಾಲಯವನ್ನು ಇದೇ ತಿಂಗಳ ೨೮ನೆಯ ತಾರೀಖಿಗೆ ತೆಗೆದು ಅದರಲ್ಲಿ ತಾವು ಸ್ವತಃ ಉಚಿತವಾಗಿ ಕೆಲಸಮಾಡುವವರಿದ್ದಾರೆ.

—ಘೋರಪಡಿಯಲ್ಲಿ ನಡೆದ ಜಂಗಸಿಂಗನ ವ್ಯಾಜ್ಯ ಕಾಲಕ್ಕೆ ಶೀಖ ಗುರುವಿನ ಸಾಕ್ಷಿಯಾಯಿತು. ಅವರು ಶೀಖ ಧರ್ಮ ಪುಸ್ತಕದಲ್ಲಿ ಜಾತಿಭೇದ ಪಾಲಿಸಬೇಕೆಂದು ಬರೆದಿರುವದಿಲ್ಲವೆಂದೂ ಆದರೆ ಆಯಾಯ ದೇಶದ ರೀತಿನಿಯಮಗಳಿಗನುಸಾರವಾಗಿ ನಡೆಯಬೇಕೆಂದು ಬರೆದಿದೆಯೆಂದು ಹೇಳಿದರು.

—ಅಲವಾರದ ಮಹಾರಾಜರು ತಮ್ಮ ರಾಜ್ಯದಲ್ಲಿ ಮುಲ್ಕಿ ಪೋಲೀಸ ಖಾತೆಗಳ ಮೇಲೆ ಬ್ರಿಟಿಶ್ ಅಧಿಕಾರಿಗಳನ್ನು ನೇಮಿಸಬೇಕೆಂದು ವ್ಹಾಯಿಸ್‌ರಾಯರಿಗೆ ವಿನಂತಿಮಾಡಿಕೊಂಡಿದ್ದಾರೆ.

—ಲಾಯಸನ್ಸ ಇಲ್ಲದೆ ಶಸ್ತ್ರಗಳನ್ನೂ ಮತ್ತು ಸ್ಫೋಟಕ ದ್ರವ್ಯಗಳನ್ನೂ ಇಟ್ಟುಕೊಂಡ ಆರೋಪದ ಮೇಲೆ ಕಲಕತ್ತಾ ಪೋಲೀಸರು ಕೆಲವು ತಿಂಗಳುಗಳಿಂದ ತಪಾಸುಮಾಡಿ ೨೫ ಬಂಗಾಲಿ ಕ್ರಾಂತಿಕಾರರನ್ನು ಹಿಡಿದಿದ್ದಾರೆ. ಭಯಂಕರ ಕ್ರಾಂತಿಯನ್ನೆಬ್ಬಿಸುವ ಒಳಸಂಚಿನ ಅವರ ಅಂಗವಿರುವದೆಂದು ಖಟ್ಲೆ ನಡಿಸಲಾಗುವದು.

—ಮುಂಬಯಿ ರಾಮಕೃಷ್ಣ ಮಿಶನ್‌ದ ಸ್ವಾಮಿ ಗುಣಾತೀತಾನಂದ ಎಂಬುವವರು ಕೊಲ್ಲಾಪುರದಲ್ಲಿ ಅಂಬಾಬಾಯಿ ದೇವಾಲಯದಲ್ಲಿ ಭಾಷಣಮಾಡುವಾಗ ಅಸ್ಪೃಶ್ಯತೆಯು ಧಾರ್ಮಿಕ ಮತ್ತು ರಾಜಕೀಯ ಧ್ಯೇಯಗಳಿಗೆ ಲೋಪತರುತ್ತದೆ. ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಮಾನವೀ ಸಂಘಟನಾ ತತ್ವವನ್ನು ಆಚರಣೆಯಲ್ಲಿ ತರಲು ಒಂದಾನೊಂದು ಕಾಲಕ್ಕೆ ಒಂದು ನೆರೆಮನೆಯ ಶೌಚಕೂಪವನ್ನು ಸ್ವತಃ ಸ್ವಚ್ಛ ಮಾಡುತ್ತಿದ್ದರೆಂದು ಹೇಳಿದರು.

—ಶ್ರೀ. ಸುಭಾಸಚಂದ್ರ ಬೋಸರವರು ಪ್ರಕೃತಿಯ ಸ್ವಾಸ್ಥ್ಯದ ಸಲುವಾಗಿ ಯುರೋಪಕ್ಕೆ ಹೋಗುವ ಮೊದಲು ತಮ್ಮ ವೃದ್ಧ ಮಾತಾಪಿತರನ್ನು ಕಾಣುವುದಕ್ಕೆ ಸರಕಾರದವರಿಗೆ ಬರೆದುಕೊಂಡಿದ್ದಾರೆ.

—ಚೀನಜಪಾನ ಯುದ್ಧವನ್ನು ನಿಲ್ಲಿಸುವದಕ್ಕಾಗಿ ರಾಷ್ಟ್ರಸಂಘದವರು ಜಪಾನಿಗೆ ಕೆಲವು ಕರಾರುಗಳನ್ನು ಹಾಕಿದ್ದಾರೆ. ಆದುದರಿಂದ ಜಪಾನವು ರಾಷ್ಟ್ರಸಂಘವನ್ನೇ ಬಿಟ್ಟುಬಿಡಬೇಕೆಂದು ಮಾಡಿದೆ.

—ನಂದಗಡ ತಾ. ೧೬-೧-೩೩ ನೆಯ ದಿವಸ ಶ್ರೀ ಕಟ್ಟೀಶ್ವರ ಉತ್ಸವದ ನಿಮಿತ್ಯವಾಗಿ ಊರೊಳಗಿನ ಎಲ್ಲ ಜನರು ಅಲ್ಲಿ ಕೂಡಿದ್ದರು. ಆ ಕಾಲಕ್ಕೆ ಶ್ರೀ ಮಹಾಂತ ಸ್ವಾಮಿಗಳವರು 'ವೀರಶೈವ ಸಮಾಜ ಸುಧಾರಣಾ, ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಅದರಲ್ಲಿ ವೀರಶೈವರಲ್ಲಿ ಈಗ ಪ್ರಚಲಿತವಿದ್ದ ಒಳಪಂಗಡ ನಿವಾರಣೆ, ಶುದ್ಧೀಕರಣ ಇವೇ ಪ್ರಾಮುಖ್ಯವಾಗಿದ್ದವು.

ಶರಣ ಸಂದೇಶ.

ಶಾ. ಶ. ೧೮೫೪ ನೆಯ ಮಾಘ ಶು. ೫ ಸೋಮವಾರ.

ವೀರಶೈವ ಸಮಾಜಕ್ಕೊದಗುವ ವಿಪತ್ತಿನ ನಿವಾರಣೋಪಾಯ.

ಈಗ ಭರತಖಂಡದಲ್ಲಿ ಧಾರ್ಮಿಕ ಮಹಾ ಕ್ರಾಂತಿಯು ಬಹು ತೀವ್ರತರವಾಗಿ ನಡೆದಿದೆ. ಪ್ರತಿಯೊಂದು ಧರ್ಮಮತಪಂಥದವರೂ ಜಾಗ್ರತರಾಗಿ ತಮ್ಮತಮ್ಮ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಯಾವ ಸಮಾಜದವರು ಅಥವಾ ಮತದವರು ಈಗಿನ ಕ್ರಾಂತಿಯ ಪ್ರವಾಹದ ಕಡೆಗೆ ಉಪೇಕ್ಷಿಸುವರೋ ಅವರ ಮತವೈಶಿಷ್ಟ್ಯಗಳು ತೇಲಿಹೋಗಿ ಆ ಸಮಾಜವು ನಾಮಶೇಷವಾಗುವುದರಲ್ಲಿ ಸಂದೇಹವೇ ಇಲ್ಲ.

ಈ ಧಾರ್ಮಿಕ ಕ್ರಾಂತಿಯ ಪ್ರವಾಹದಲ್ಲಿ ಈ ನಮ್ಮ ವೀರಶೈವ ಸಮಾಜವು ಸಿಲ್ಕಿದೆ. ಈ ಸಮಯದಲ್ಲಿ ಈ ಸಮಾಜದ ಪ್ರಮುಖರೂ ಗುರುಗಳೂ ತಮ್ಮ ಮತವೈಶಿಷ್ಟ್ಯವನ್ನು ಕಾಯ್ದುಕೊಳ್ಳಲು ಪ್ರಯತ್ನಿಸದಿದ್ದರೆ ವೀರಶೈವ ಮತಕ್ಕೇನೇ ಒಂದು ಮಹಾಲೋಪವನ್ನುಂಟುಮಾಡಿದ ಅಪರಾಧವು ಪ್ರಾಪ್ತವಾಗುವುದಲ್ಲದೆ ಕರ್ನಾಟಕದಲ್ಲಿ ಈಗ ಈ ಸಮಾಜಕ್ಕಿರುವ ಘನತೆಯು ಲೋಪವಾಗುವುದರಲ್ಲಿ ಸಂಶಯವೇ ಇಲ್ಲ.

ಹೊಲಿಯರು, ಮಾದಿಗರು, ಚಮಗಾರರು ಡೋಹರರು ಮೊದಲಾದ ಅಸ್ಪೃಶ್ಯರೆಂದು ಹೇಳಿಸಿಕೊಳ್ಳುವ ಜನಗಳು ವೀರಶೈವ ಸಮಾಜದ ಆಧೀನದಲ್ಲಿದ್ದು ನಡೆದುಕೊಳ್ಳುವವರಾಗಿದ್ದಾರೆ. ವೀರಶೈವ ಗುರುಗಳೇ ಈ ಎಲ್ಲ ಲಕ್ಷಾಂತರ ಜನಗಳಿಗೆ ಗುರುಗಳಾಗಿದ್ದಾರೆ. ಆ ಜನರ ಲಗ್ನ ಮೊದಲಾದ ಶುಭಕಾರ್ಯಗಳನ್ನು ಇವರೇ ನಡೆಯಿಸತಕ್ಕವರಾಗಿದ್ದಾರೆ. ಆ ಜನರ ಮೇಲೆ ತಮ್ಮ ಗುರುತ್ವವಿದೆಯೇ ವಿನಾ ಬ್ರಾಹ್ಮಣಾದಿ ಬೇರೆ ವರ್ಣದವರ ಗುರುತ್ವವಿಲ್ಲವೆಂಬುದನ್ನು ನ್ಯಾಯ ಸ್ಥಾನಗಳಲ್ಲಿ ಕೂಡಾ ನಿರ್ಧರಿಸಿಕೊಳ್ಳಲು ಅನೇಕ ಸ್ಥಳಗಳಲ್ಲಿ ವ್ಯಾಜ್ಯಗಳು ಜರುಗಿ ಪೂರ್ವದ ವೀರಶೈವ ಮಹಾಜನರು ತಮ್ಮ ಗುರುತ್ವವನ್ನು ಆ ಜನರಮೇಲೆ ಸ್ಥಾಪಿಸಿ ಈ ವರೆಗೂ ಅದನ್ನು ಕಾಯ್ದುಕೊಂಡು ಬಂದಿದ್ದಾರೆ. ಇದು ವೀರಶೈವ ಮತಕ್ಕೆ ಭೂಷಣಪ್ರದವಾಗಿಯೂ ವೀರಶೈವ ಸಮಾಜಕ್ಕೆ ಬಲಪ್ರದವಾಗಿಯೂ ಇದೆಯೆಂಬುದನ್ನು ಬೇರೆ ಹೇಳಬೇಕಾದುದಿಲ್ಲ.

ಆ ಬಸವಾದಿ ಮಹಾಪ್ರಮಥರ ಅಭೂತಪೂರ್ವವಾದ ಧಾರ್ಮಿಕ ಸುಧಾರಣೆಯ ಕಾಲದಲ್ಲಿ ಶ್ರೀ. ಶಿವನಾಗಮಯ್ಯ, ಶ್ರೀ. ಚೆನ್ನಯ್ಯ ಶ್ರೀ. ಹರಳಯ್ಯ, ಶ್ರೀ. ಕಕ್ಕಯ್ಯ ಮೊದಲಾದ ಪರಮ ಪೂಜ್ಯ ಶಿವಶರಣರ ದಿವ್ಯತರವಾದ ಶಿವಭಕ್ತಿ ಪವಿತ್ರ ಶೀಲಾಚಾರಗಳಿಂದುಂಟಾದ ಶಕ್ತಿಯೇ ಕಳೆದ ೮೦೦ ವರ್ಷಗಳಿಂದಲೂ ಮೇಲಣ ಎಲ್ಲ ಕುಲದವರೂ ವೀರಶೈವರಿಗೆ ಆಧೀನವಾಗಿರುವಂತೆ ಮಾಡಿದೆ. ಇನ್ನುಮುಂದೆಯೂ ಅವರು ನಮ್ಮವರಾಗಿಯೇ ಇರುವಂತೆ ಮಾಡಿಕೊಳ್ಳುವುದು ಈಗಿನ ವೀರಶೈವರ ಬುದ್ಧಿವಂತಿಕೆಯನ್ನೇ ಅವಲಂಬಿಸಿದೆ ಈ ಲಕ್ಷಾಂತರ ಜನಗಳು ಈಗಿನ ಧಾರ್ಮಿಕ ಕ್ರಾಂತಿಯ ಪ್ರವಾಹದಲ್ಲಿ ತೇಲಿ ಹೋದರೆ ವೀರಶೈವ ಸಮಾಜಕ್ಕೆ ಅದೊಂದು ವಿಪತ್ತೆಂದೇ ಖಂಡಿತವಾಗಿ ತಿಳಿಯಬೇಕು.

ವೀರಶೈವ ಸಮಾಜದ ಸಕಲ ಶ್ರೇಯಸ್ಸುಗಳಿಗಾಗಿ ಹಗಲಿರುಳೂ ವಿಶೇಷ ಪರಿಶ್ರಮಪಡುತ್ತಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಆಜ್ಞಾನುಸಾರ ಪ್ರತಿಯೊಂದು ಸ್ಥಳದ ವೀರಶೈವ ಮಹಾಜನಗಳು ಮೇಲಿನ ಎಲ್ಲ ಕುಲಗಳ ಜನಗಳಿಗೂ ಭಸ್ಮರುದ್ರಾಕ್ಷಿಗಳನ್ನು ಗುರುಗಳಿಂದ ಕೊಡಿಸಿ ಶುದ್ಧಾಹಾರಗಳಲ್ಲಿರುವಂತೆ ಅಪ್ಪಣೆಮಾಡಿಸಿ ಅವರ ಅಸ್ಪೃಶ್ಯತೆಯನ್ನು ಕೂಡಲೆ ತೆಗೆದುಹಾಕಬೇಕು. ಮುಸಲ್ಮಾನ್, ಕ್ರೈಸ್ತ ಮೊದಲಾದ ಅನ್ಯ ಧರ್ಮದವರಿಗೆ ಎಲ್ಲಿಯವರೆಗೆ ಪ್ರವೇಶಕ್ಕೆ ಅವಕಾಶ ಕೊಡುವಿರೋ ಅಲ್ಲಿಯವರೆಗಾದರೂ ಈ ನಮ್ಮ ಶಿವ ಭಕ್ತಿಯುಳ್ಳಿರುವ ಜನಗಳಿಗೂ ಅವಕಾಶವನ್ನು ಕೊಡಲೇಬೇಕು.

ವೀರಶೈವರು ಈ ಕಾಲದಲ್ಲಿ ಜಾಗೃತರಾಗಿ ಈ ಪ್ರಕಾರ ಮಾಡದಿದ್ದರೆ ಇನ್ನು ಸ್ವಲ್ಪ ದಿವಸಗಳಲ್ಲಿಯೇ ಅವರು ಧರ್ಮಾತ್ಮಾ ಮಾಲವೀಜಿಯವರ ಅಭಿಪ್ರಾಯದಂತೆ ಮಂತ್ರೋಪದೇಶ ಹೊಂದಿ ಹರಿಜನರಾಗಿ ನಿಮ್ಮ ಗುರುತ್ವವನ್ನು ನಿರಾಕರಣೆ ಮಾಡುವರು. ಆಗ ನೀವು ಅವರಿಗೆ ಸಾಮಾಜಿಕ ಸ್ವಾತಂತ್ರ್ಯ ಕೊಡಲೇಬೇಕಾಗುವದು. ಶ್ರೀ. ರಂಗ ಅಯ್ಯರರ ಗೊತ್ತುವಳಿಯಂತೂ ಅವರ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಿಯೇ ಮಾಡುತ್ತದೆ.

ರಾಷ್ಟ್ರದಲ್ಲುಂಟಾಗಿರುವ ಈ ಅದ್ಭುತ ಕ್ರಾಂತಿಯ ಕಡೆಗೆ ಲಕ್ಷಿಸಿ ವೀರಶೈವ ಸಮಾಜದ ಪ್ರಮುಖರು ಈಗಲೇ ಜಾಗೃತರಾಗುವುದು ಯುಕ್ತವಾಗಲ್ಲವೇ? ವೀರಶೈವ ಸಮಾಜಕ್ಕೊದಗುವ ಮುಂದಣ ವಿಪತ್ತನ್ನು ನಿವಾರಣೆ ಮಾಡಲು ಆ ಜಗದ್ಗುರು ಶ್ರೀ. ಜಯದೇವ ಮುರಘಾ ರಾಜೇಂದ್ರ ಮಹಾಸ್ವಾಮಿಗಳವರು ಆಜ್ಞಾಪಿಸಿರುವಂತೆ ಎಲ್ಲ ಕಡೆಯ ವೀರಶೈವರೂ ಆದಿಜನಗಳ ಅಸ್ಪೃಶ್ಯತೆಯನ್ನು ಜಾಗ್ರತೆ ನಿವಾರಣೆ ಮಾಡುವುದು ಶ್ರೇಯಸ್ಕರವಾದುದಲ್ಲವೇ?

ಶರಣಸಂದೇಶ ಪತ್ರಿಕೆಗೆ
ಮುಂದಣವಾರ ವಿಶ್ರಾಂತಿ.

ವೀರಶೈವ ವಿದ್ಯಾಲಯಕ್ಕೆ ಪದ್ಧತಿಯ ಪ್ರಕಾರ ಮುಂದಣವಾರ ಪ್ರವಾಸಕ್ಕೋಸ್ಕರ ವಿಶ್ರಾಂತಿ ದೊರೆಯುವುದರಿಂದ ಕಳೆದ ವರ್ಷದಂತೆಯೇ ಶರಣಸಂದೇಶ ಪತ್ರಿಕೆಯು ಮುಂದಣವಾರ ಪ್ರಕಟವಾಗುವುದಿಲ್ಲ.

ಮ್ಯಾನೇಜರ.

—ಕ್ರಾಂತಿಕಾರಕ ಒಂದು ಗುಪ್ತ ಸಂಘವು ಬಂಗಾಲದಲ್ಲಿ ವ್ಯಾಪಿಸಿದೆಯೆಂದು ಕಲಕತ್ತಾ ಪೋಲೀಸರಿಗೆ ತಿಳಿದಿದೆ. ಶಸ್ತ್ರ ಮದ್ದು ಗುಂಡುಗಳ ಕಳ್ಳತನವೂ ಅಲ್ಲಿ ಹೆಚ್ಚಾಗಿದೆ. ಈ ಸಂಬಂಧವಾದ ಸಂಶಯದಿಂದ ಕಳೆದ ತಿಂಗಳಲ್ಲಿ ೫೫ ಜನರನ್ನು ಹಿಡಿದಿದ್ದಾರೆ.

ಸ್ಫುಟ ಸೂಚನೆ.

ಮುಂದಣ ಕಠಿಣ ಪ್ರಸಂಗ.

ಡಾ. ಸುಬ್ಬರಾಯರ್‌ರವರ ಗೊತ್ತುವಳಿಗೆ ವ್ಹಾಯಿಸ್‌ರಾಯರು ಒಪ್ಪಿಗೆಯನ್ನು ಕೊಟ್ಟಿದ್ದರೆ ಮಹಾತ್ಮಾಗಾಂಧಿಯವರ ಉಪವಾಸ ವ್ರತವು ಪುನಃ ಪ್ರಾರಂಭವಾಗುತ್ತಿರಲಿಲ್ಲ. ಈ ವಿಷಯದಲ್ಲಿ ವ್ಹಾಯಿಸರಾಯರು ತಪ್ಪು ಮಾಡಿದರೆಂದೇ ಪ್ರಮುಖರು ಹೇಳುತ್ತಿದ್ದಾರೆ. ಇದರಿಂದ ರಾಷ್ಟ್ರಕ್ಕೆ ಕಠಿಣ ಪ್ರಸಂಗ ಬರುವಂತೆ ಕಾಣುತ್ತದೆ.

ಶ್ರೀ ರಂಗ ಅಯ್ಯರ್‌ರ ಗೊತ್ತುವಳಿಗಾದರೂ ವ್ಹಾಯಿಸ್‌ರಾಯರು ಒಪ್ಪಿಗೆಯನ್ನು ಕೊಟ್ಟದು ಎಷ್ಟೋ ಸಂತೋಷದ ಸಂಗತಿಯೆಂದೇ ಹೇಳಬೇಕಾಗಿದೆ. ಆ ಗೊತ್ತುವಳಿಯು ಸಾರ್ವಜನಿಕ ರೀತಿಯಲ್ಲಿ ಯಾವ ವ್ಯಕ್ತಿಯೂ ಅಸ್ಪೃಶ್ಯನಲ್ಲವೆಂದೇ ರಾಜಶಾಸನದಿಂದ ಸಿದ್ಧಗೊಳಿಸುವುದಾಗಿದೆ. ಅದು ಬಹು ಮತದಿಂದ ಅಸೆಂಬ್ಲಿಯಲ್ಲಿ ತೀರ್ಮಾನವಾದರೆ ಅಸ್ಪೃಶ್ಯತೆಯ ಈಗಿನ ಅನ್ಯಾಯವು ಎಷ್ಟೋ ಮಟ್ಟಿಗೆ ನಿವಾರಣೆಯಾಗುವುದು.

ಆದರೆ ಆ ಅಸ್ಪೃಶ್ಯತಾ ನಿವಾರಣೆಯು ಧಾರ್ಮಿಕ ದೃಷ್ಟಿಯಿಂದಾದುದಲ್ಲ. ಮತ್ತು ಧಾರ್ಮಿಕ ರೀತಿಯಿಂದ ಜನಜಾಗೃತೆಗೂ ಅದರಲ್ಲಿ ಅವಕಾಶವಿಲ್ಲ. ಡಾ. ಸುಬ್ಬರಾಯರ್‌ರವರ ಗೊತ್ತುವಳಿಯು ಹಾಗಿರಲಿಲ್ಲ. ಅದು ಧಾರ್ಮಿಕ ರೀತಿಯಿಂದಲೇ ಜನಜಾಗೃತಿಗೂ ಅವಕಾಶವಿದ್ದಿತು. ಮತ್ತು ಆದಿಜನರಿಗೆ ತಾವು ಅಸ್ಪೃಶ್ಯರಲ್ಲವೆಂಬುದನ್ನು ಧಾರ್ಮಿಕ ಭಾವನೆಯಿಂದಲೇ ಮನವರಿಕೆ ಮಾಡಿಕೊಡಲು ದೇವಾಲಯ ಪ್ರವೇಶವು ಸಾಧನವಾಗಿದ್ದಿತು.

ಗಾಂಧೀಜಿಯವರು ರಂಗ ಅಯ್ಯರ್‌ರವರ ಗೊತ್ತುವಳಿಯ ಪರಿಣಾಮವನ್ನು ನೋಡಿಯೇ ತಮ್ಮ ಉಪವಾಸ ವ್ರತದ ಯೋಜನೆಮಾಡುವುದು ರಾಷ್ಟ್ರಕ್ಕೆ ಕ್ಷೇಮಕರವಾಗಿದೆ. ಮುಂದಣ ಕಠಿಣ ಪ್ರಸಂಗ ಬಾರದಂತೆ ಅಸೆಂಬ್ಲಿಯ ಸಭಾಸದರು ಆ ಗೊತ್ತುವಳಿಯನ್ನು ಒಪ್ಪಿ ಆದಿಜನರ ಉನ್ನತಿಗೆ ಸಹಾಯ ಮಾಡುವರೆಂದು ನಾವು ನಂಬಿದ್ದೇವೆ.

ಅಲವಾರ ಸಂಸ್ಥಾನದ ಸ್ಥಿತಿ

ಅಲವಾರ ಸಂಸ್ಥಾನದಲ್ಲಿ ಮುಸಲ್ಮಾನ್ ರೈತರು ಪ್ರಾರಂಭಿಸಿದ ದೊಂಬಿಯು, ಈಗ ಶಾಂತವಾಗಿದೆ. ಮಹಾರಾಜರು ಎಲ್ಲ ಪ್ರಜೆಗಳಿಗೂ ಸಮಾಧಾನವಾಗುವಂತಹ ಸುಧಾರಣೆಗಳನ್ನು ಇಷ್ಟರಲ್ಲೇ ಪ್ರಕಟಿಸುವವರಿದ್ದಾರೆ. ಈ ವಿಷಯವಾಗಿ ಹಿಂದುಸ್ಥಾನ ಸರಕಾರದ ಸಂಗಡ ಮಹಾರಾಜರು ವಿಚಾರ ವಿನಿಮಯವನ್ನು ಮಾಡಲುಪಕ್ರಮಿಸಿದ್ದಾರೆ.

ಅಲವಾರ ಸಂಸ್ಥಾನದ ರೈತರ ಕಂದಾಯದಲ್ಲಿ ಈ ಸಾರೆ ೭ ಲಕ್ಷ ರೂಗಳನ್ನು ಈ ಮುಂಚೆ ಬಿಟ್ಟಿದ್ದರಷ್ಟೆ. ಇನ್ನು ಮುಂದೆ ಮತ್ತೆ ೮ ಲಕ್ಷ ರೂ. ಗಳನ್ನು ಬಡ ರೈತರ ಕಡೆಗೆ ಲಕ್ಷಿಸಿ ಮಹಾರಾಜರು ಬಿಟ್ಟುಬಿಡಬೇಕಾಗಿ ಒಕ್ಕಲತನ ಶಾಖೆಯ ವಿಚಾರಣಾ ಕಮಿಟಿಯವರು ಸೂಚಿಸಿದ್ದಾರೆ.

ಈ ಪ್ರಕಾರ ಅಲವಾರ ದೊಂಬಿಯು ಕೊನೆಗೆ ಸಂತೋಷಕರವಾದ ರೀತಿಯಲ್ಲಿ ಪರಿಸಮಾಪ್ತಿಯಾದುದು ಕ್ಷೇಮಕರವೇ ಸರಿ.

ಸನಾತನ ಹಿಂದು ಮಹಾಸಭೆಯ ನಿರ್ಣಯ.

ಲಯದ ಗರ್ಭಗುಡಿಯವರೆಗೆ ಬರಲು ಅಡ್ಡಿಯಿಲ್ಲವೆಂದು ಏಕಾಭಿಪ್ರಾಯದಿಂದ ತೀರ್ಮಾನವಾಯಿತು. ಆದಿಜನರು ಗರ್ಭಗುಡಿಯಲ್ಲಿ ಸೇರಿ ದೇವರನ್ನು ಮಾತ್ರ ಸ್ಪರ್ಶಮಾಡಬಾರದೆಂದು ನಿರ್ಣಯಿಸಿದರು.

ಈ ನಿರ್ಣಯವೇ ತಾ.೨೭ನೆಯ ರಾತ್ರಿ ಸೇರಿದ ಸನಾತನ ಹಿಂದು ಮಹಾಸಭೆಯ ಪ್ರತ್ಯೇಕ ಅಧಿವೇಶನದಲ್ಲಿಯೂ ತೀರ್ಮಾನವಾಯಿತು. ಈ ಮಹತ್ವದ ತೀರ್ಮಾನವನ್ನು ಧರ್ಮಾತ್ಮಾ ಮಾಲವೀಜಿಯವರು ಪ್ರಕಟಿಸಿದರು. ಈ ಸಂಬಂಧವಾಗಿ ಧರ್ಮಾತ್ಮರು ಭಾಷಣ ಮಾಡುವಾಗ ನಾನು ಯಾವ ಪಕ್ಷದವನೂ ಅಲ್ಲ; ಪರಮಾತ್ಮನೇ ನನ್ನ ಸತ್ಯ ಪಕ್ಷದವನೆಂದು ಬಹು ಆವೇಶದಿಂದ ಅಪ್ಪಣೆ ಕೊಡಿಸಿದರು.

ಈ ಪ್ರಕಾರ ದೇವಾಲಯ ಪ್ರವೇಶದ ಅತ್ಯಂತ ಮಹತ್ವವಾದ ವಿಷಯದಲ್ಲಿ ಸನಾತನ ಹಿಂದು ಮಹಾ ಸಭೆಯು ನ್ಯಾಯವಾದ ತೀರ್ಮಾನವನ್ನು ಮಾಡಿ ಹಿಂದು ಧರ್ಮದ ಮಾನಪ್ರಾಣಗಳನ್ನು ರಕ್ಷಿಸಿದ್ದಕ್ಕಾಗಿ ನಾವು ಈ ಮಹಾಸಭೆಯನ್ನು ವಿಶೇಷವಾಗಿ ಧರ್ಮಾತ್ಮಾ ಮಾಲವೀಜಿಯವರನ್ನು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಸೂಚನೆ.

ಧಾರವಾಡ ಹಾವೇರಿಪೇಟೆಯಲ್ಲಿರುವ ಶ್ರೀ ಜಗದ್ಗುರು ಮುರಘಾರಾಜೇಂದ್ರ ಫ್ರೀ ಬೋರ್ಡಿಂಗಿನ ಈ ವರುಷದ ವರದಿಯು ಲೆಕ್ಕದ ಅನಾನುಕೂಲದಿಂದ ಮಾಘ ಶು. ಪಂಚಮಿ ಮಿತಿಗೆ ಅಚ್ಚಾಗಲಿಲ್ಲ. ಆದಕಾರಣ ಇನ್ನೊಂದು ತಿಂಗಳಲ್ಲಿ ಅಚ್ಚು ಮಾಡಿಸಿ ಪ್ರಕಟಿಸಲಾಗುವುದು.

ಶ್ರೀ ವೀರಶೈವ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನ ಪ್ರಥಮ ವರುಷದ ವರದಿಯು ಕೂಡ ಇನ್ನೊಂದು ತಿಂಗಳಲ್ಲಿ ಪ್ರಕಟವಾಗುವುದು.

ಶೆಕ್ರೆಟರಿ.

ವಿಚಿತ್ರ ಕೂಸುಗಳು.

ಜಬಲಪುರದಲ್ಲಿ ತಾ. ೨೫ ನೆಯ ದಿವಸ ಒಬ್ಬ ಹೆಣ್ಣುಮಗಳಿಗೆ ಮೊದಲು ಒಂದು ಕೂಸು ಹುಟ್ಟಿತು. ಅದು ಹುಟ್ಟಿದ ಒಂದು ತಾಸಿನಲ್ಲಿಯೇ ಮೃತಪಟ್ಟಿತು. ಅನಂತರ ಮತ್ತೊಂದು ಕೂಸು ಹುಟ್ಟಿತು. ಅದಕ್ಕೆ ಕೈ ಮತ್ತು ತಲೆಗಳಿಲ್ಲ. ಒಂದು ದಿನ ಬದುಕಿದೆಯಂತೆ. ಆ ಮೇಲೆ ಮತ್ತೊಂದು ಕೂಸನ್ನು ಆ ಸ್ತ್ರೀಯಳೇ ಹೆತ್ತಳು! ಅದು ಆಗಲೇ ಸತ್ತಿತು.

—ಕಲಕತ್ತಾ ಪಟ್ಟಣದಲ್ಲಿ ಸ್ವಾತಂತ್ರ್ಯ ದಿನೋತ್ಸವವನ್ನು ತಾ. ೨೬ರಲ್ಲಿ ನಡೆಸಿದ ಅಪರಾಧಕ್ಕಾಗಿ ೩೦೦ ಜನಗಳಿಗೆ ಪೋಲೀಸರು ಕೈಸೆರೆ ಮಾಡಿದ್ದಾರೆ.

—ಕ್ರಾಂತಿಕಾರಕರ ಹಾವಳಿಯನ್ನು ನಿಲ್ಲಿಸಲು ಬಂಗಾಲ ಪ್ರಾಂತದ ಶಾಸನಕ್ಕನುಗುಣವಾದ ನೂತನ ಶಾಸನವು ಅಖಿಲ ಬ್ರಿಟಿಶ್ ಹಿಂದುಸ್ಥಾನಕ್ಕೆ ಸಂಬಂಧಿಸುವ ರೀತಿಯಲ್ಲಿ ಏರ್ಪಡುವುದಿದೆ.

ಮುಂಬೈ ಇಲಾಖೆಯ ಮಂತ್ರಿಗಳಾದ

ರಾ. ದಿ. ಬಹದ್ದೂರ ಎಸ್. ಟಿ. ಕಂಬಳಿಯವರ ಆಗಮನ.

ಧಾರವಾಡದ ಶ್ರೀ. ಮ. ನಿ. ಜ. ಮುರಘರಾಜೇಂದ್ರ ಫ್ರೀ ಬೋರ್ಡಿಂಗಿಗೆ ತಾ. ೨೨-೧-೩೩ನೇ ರವಿವಾರ ಸಾಯಂಕಾಲ ೬ ಗಂಟೆಗೆ ಆಗಮಿಸಿದರು. ಆಗ ಸದರೀ ಸಂಸ್ಥೆಯ ಪ್ರೆಸಿಡೆಂಟರೂ, ಚೇರಮನ್ನರೂ, ಸೆಕ್ರೆಟರಿಯವರೂ, ಮೆಂಬರರೂ, ಧಾರವಾಡದ ಪ್ರಮುಖ ವರ್ತಕರೂ ಮತ್ತು ಪಂಡಿತ ವರ್ಗವೂ ಅವರ ಸ್ವಾಗತಕ್ಕೆ ಬಂದಿದ್ದರಲ್ಲದೆ ಧಾರವಾಡದ ಮುನಸಿಪಾಲಿಟಿ ವ್ಹಾಯಿಸ್ ಪ್ರೆಸಿಡೆಂಟರಾದ ಗಿರಿಯಪ್ಪನವರು ವಕೀಲರೂ ಲೋಕಲ್ ಬೋರ್ಡ ವ್ಹಾ. ಪ್ರೆಸಿಡೆಂಟರಾದ ಶಿರೋಳ ವಕೀಲರೂ ವೀ. ಶಿ. ಸಂ. ಕಾಲೇಜದ ಚೇರಮನ್ನರಾದ ಮಟ್ಟಿ ವಕೀಲರೂ ಮ.ರಾ. ಮೂಗಪ್ಪಣ್ಣ ಸವದತ್ತಿ ಮ. ರಾ. ಬಸಪ್ಪಾ ಮಿಣಜಿಗಿ ಇವರೇ ಮೊದಲಾದ ಮುಖ್ಯ ಜನರು ಆಗಮಿಸಿದ್ದರು. ದಿ. ಬ. ರವರು ಬಂದ ನಂತರ ಶಿದ್ಧಗೊಳಿಸಿದ ಆಸನದಲ್ಲಿ ಮಂಡಿಸಿದನಂತರ ಸಂಸ್ಕೃತ ಕಾಲೇಜದ ವಿದ್ಯಾರ್ಥಿಗಳು ಈಶ ಪ್ರಾರ್ಥನೆಯನ್ನು ಮಾಡಿದರು. ಆ ಮೇಲೆ ಸದರೀ ಸಂಸ್ಥೆಯ ಪ್ರೆಸಿಡೆಂಟರು ಮತ್ತು ಧಾರವಾಡದ ಮುನಸಿಪಾಲಿಟಿ ಪ್ರೆಸಿಡೆಂಟರೂ ಆದ ಮಿ. ಕರವೀರಪ್ಪ ಕುಲಕರ್ಣಿ ವಕೀಲರವರು ಸಂಸ್ಥೆಯ ಅಭಿವೃದ್ಧಿಯನ್ನು ಸಂಕ್ಷಿಪ್ತವಾಗಿ ಹೇಳಿದರು. ತದನಂತರ ದಿ. ಬ. ರವರು ಸಂಸ್ಥೆಯ ಸ್ಥಾಪನಾಚಾರ್ಯರಾದ ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳವರು ಸಮಾಜದ ಏಳಿಗೆಗಾಗಿ ಅವಿಶ್ರಾಂತ ಶ್ರಮವಹಿಸಿ ಮಾಡುತ್ತಿರುವ ಕಾರ್ಯಪದ್ಧತಿಯು ಎರಡನೇದವರಿಗೆ ಅನುಕರಣೀಯವಾಗಿದೆ ಅಂತಾ ಹೇಳಿದರು. ಈ ಸಂಸ್ಥೆಯ ಕಾರ್ಯಕ್ಕೆ ಸಹಾಯ ಮಾಡಿರುವ ಮತ್ತು ಮಾಡುತ್ತಿರುವ ಮಹಾಜನಗಳ ಉದಾರ ಬುದ್ಧಿಯನ್ನು ನೆರೆದ ಜನರಿಗೆ ಸರಿಯಾಗಿ ಹೇಳಿದರಲ್ಲದೆ ಯಾವತ್ತೂ ವಿದ್ಯಾರ್ಥಿಗಳಿಗೆ ಸಂಸ್ಥೆಯ ನಿಯಮಗಳಿಗನುಸರಿಸಿ ನಡೆದು ವಿದ್ಯಾಭ್ಯಾಸ ಮಾಡಿ ವಿದ್ಯಾವಂತ ವ "ಸುಶೀಲರಾದರೆ ಅವರಿಗೂ ಸಮಾಜಕ್ಕೂ ಶ್ರೇಯಸ್ಸುಂಟಾಗುವದೆಂದು ತಮ್ಮ ಅನುಭವಿಕ ವ ಸ್ಫೂರ್ತಿದಾಯಕವಾದ ಭಾಷಣದಿಂದ ವಿದ್ಯಾರ್ಥಿಗಳಿಗೆ ಉತ್ತೇಜನವಾಗುವಂತೆಯೂ ಪರಿಣಾಮವಾಗುವಂತೆಯೂ ಉಪದೇಶ ಮಾಡಿದರು.

ಆಭಾರ ಮನ್ನಣೆ ಹಾರತುರಾಯಿಗಳಾದ ನಂತರ ಸಂಸ್ಥೆಯ ಆಯಾಯ ಭಾಗಗಳನ್ನು ನೋಡಿ ಸ್ವಸ್ಥಾನಕ್ಕೆ ತೆರಳಿದರು.

ಚೇರಮನ್.

ವೀರಶೈವ ಸಮಾಜಸುಧಾರಣಾ ಮುಖಂಡರಲ್ಲಿ ಪ್ರಾರ್ಥನೆ.

ಈಗ ಪ್ರಪಂಚದಲ್ಲಿ ಎಲ್ಲಿ ನೋಡಿದರೂ ಎಲ್ಲ ಸಮಾಜದವರೂ ತಮ್ಮತಮ್ಮ ಸಮಾಜವು ಐಕ್ಯತೆಯಿಂದೊಡಗೂಡಿ ಮುಂದುವರಿಯುವುದಕ್ಕಾಗಿ ಸಕಲ ಸನ್ನಾಹಗಳೂ ನಡೆಯುತ್ತಿರುವಲ್ಲಿ ನಮ್ಮ ವೀರಶೈವ ಸಮಾಜವಾದರೋ ಎಲ್ಲಿ ನೋಡಿದರೂ ಗುರುವಿರಕ್ತ ವರ್ಗದವರ ಸಮಾಜ ನಾಶಕರವಾದ ದ್ವೇಷಾಗ್ನಿಯು ಎಲ್ಲೆಲ್ಲಿಯೂ ಪಸರಿಸಿ ಸಮಾಜವನ್ನು ಅಲ್ಲೋಲಕಲ್ಲೋಲ ಮಾಡಿದೆ. ಯಾವ ಪಟ್ಟಣ, ಊರು, ಸಣ್ಣ ಸಣ್ಣ ಗ್ರಾಮಗಳಲ್ಲಿ ನೋಡಿದರೂ ಪಕ್ಷವಹಿಸಿರುವುದಲ್ಲದೆ ಕೆಲವು ಕುಟುಂಬಗಳಲ್ಲಿಯೂ ತಂದೆ ಮಕ್ಕಳಲ್ಲಿಯೂ ಒಡಕುಂಟಾಗಿ ಸಮಾಜವು ದುಸ್ಥಿತಿಗೀಡಾಗಿದೆ. ಇದಲ್ಲದೆ ಪಂಚ ಕಲಶ ಷಟ್ಕಲಶಗಳ ವಾದ ಬೇರೆ ಉತ್ಪನ್ನವಾಗಿ ಎಷ್ಟೋ ಕಡೆ ವರನ ಕಡೆಯವರು ಒಂದು ಪಕ್ಷ ವಧುವಿನ ಕಡೆಯವರು ಬೇರೊಂದು ಪಕ್ಷವಾಗಿ ಎಷ್ಟೋ ವಿವಾಹಗಳೇ ನಿಂತುಹೋಗಿವೆ. ಮತ್ತು ಇನ್ನೂ ಎಷ್ಟೋ ಕೋರ್ಟಿನ ವರೆಗೂ ಹೋಗಿ ಬಹಿರಂಗದಲ್ಲಿ ಸಮಾಜದ ಸೂಕ್ಷ್ಮ ವಿಷಯಗಳು ಬಯಲಾಗುತ್ತಿವೆ. ಇದರ ಮೇಲೆ ಶಿಖೆಬಿಡುವ ಮತ್ತು ತಗಿಸುವ ಚಳವಳಿ ಬೇರೆ. ಶಿಖೆ ಬಿಟ್ಟರೆ ಗುರುವರ್ಗದವರೆಂದೂ ಶಿಖೆಯನ್ನು ತಗಿಸಿದರೆ ವಿರಕ್ತ ವರ್ಗದವರೆಂದೂ ಈ ಮಧ್ಯೆ ಕ್ರಾಪು ಅರ್ಧಕ್ರಾಪು ಬಿಟ್ಟವರನ್ನು ಕೇಳುವವರೇ ದಿಕ್ಕಿಲ್ಲ. ಇದೆಲ್ಲಾ ಸಾಲದೆ ವೀರಶೈವರಲ್ಲಿ ವರ್ಣಾಶ್ರಮ ಧರ್ಮ ಭೇದ ಕೀಳುಮೇಲು ಎಂಬ ವಿಷಬೀಜವು ಬೇರೆ ಅಂಕುರಿಸಿ ಹರಡುತ್ತಿದೆ. ಓ ಸಮಾಜಬಾಂಧವರೇ ಜಾಗ್ರತೆಯಾಗಿ ಕಣ್ಣು ತೆರೆದು ಸಮಾಜದಲ್ಲಾಗುತ್ತಿರುವ ಅನ್ಯಾಯಗಳನ್ನು ನೋಡಿರಿ; ಸಮಾಜಸುಧಾರಣಾ ಸೇವೆಗಾಗಿ ಟೊಂಕಕಟ್ಟಿ ಸಿದ್ಧರಾಗಿರಿ. ಇಲ್ಲದಿದ್ದರೆ ಮೇಲ್ಕಂಡ ವಿಷಬೀಜಗಳು ಮೊಳೆತು ಸಮಾಜವನ್ನು ನಾಶ ಮಾಡದೆ ಬಿಡವು, ಈಗಾಗಲೇ ಮೈಸೂರು ದೇಶದ ನಾನಾ ಭಾಗಗಳಲ್ಲಿ ಬಹಳ ಅನೈಕ್ಯಮತವುಂಟಾಗಿದೆ. ಆದ್ದರಿಂದ ಸುಧಾರಣಾ ಮುಖಂಡರುಗಳಲ್ಲ ಪ್ರಾರ್ಥಿಸುವುದೇನೆಂದರೆ ವೀರಶೈವ ಕೇಂದ್ರವಾದೊಂದು ಸ್ಥಳದಲ್ಲಿ ಒಂದು ಮಹಾಸಭೆಯನ್ನು ಕೂಡಿಸಿ ಅಲ್ಲಿ ಒಂದು ಸಮಾಜಸುಧಾರಣಾ ಕಮಿಟಿಯನ್ನು ನೇಮಕ ಮಾಡಿ ಆ ಕಮಿಟಿಗೆ ಗುರುವರ್ಗದವರಾದ ಶ್ರೀ. ಪಂಚಪೀಠದ ಪರವಾಗಿ ಐದು ಜನ ಪಂಚರನ್ನು, ವಿರಕ್ತ ವರ್ಗದವರಾದ ಶ್ರೀ. ನಿರಂಜನ ಪೀಠದ ಪರವಾಗಿ ಐದು ಜನ ಪಂಚರನ್ನು ಈ ಕಮಿಟಿಗೆ ಸಮಾಜ ಪ್ರಮುಖರಲ್ಲೊಬ್ಬರಾದ ಶ್ರೀಯುತ ರಾವಸಾಹೇಬ ಪಿ. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ವಿಜಾಪುರ ಇವರನ್ನಾಗಲಿ ಇಲ್ಲದಿದ್ದರೆ ಶ್ರೀ. ಜಗದಾಚಾರ್ಯ ಸ್ವಾಮಿ ವಿರೂಪಾಕ್ಷ ಒಡೆಯರನ್ನಾಗಲೀ ಅದೂ ಮನಸ್ಸಿಗೆ ಬಾರದಿದ್ದರೆ ಶ್ರೀ.ಪಂಡಿತ ಮದನಮೋಹನ ಮಾಲವೀಯವರನ್ನಾಗಲೀ ಕಮಿಟಿಯ ಅಧ್ಯಕ್ಷರಾಗಲಿಕ್ಕೆ ಪ್ರಾರ್ಥಿಸಿ ಇಂತಹ ಒಂದು ಕಮಿಟಿಯನ್ನು ರಚಿಸಿ ಈ ಕಮಿಟಿಯ ಮುಖಾಂತರ ಮೇಲ್ಕಂಡ ಗುರುವಿರಕ್ತ ವರ್ಗದವರ ಚಳವಳಿ ಮತ್ತು ಪಂಚಕಲಶ ಷಟ್ಕಲಶಗಳ ವ್ಯಾಜ್ಯ, ಹಾಗೂ ಶಿಖೆ ಮತ್ತು ಶಿಖೆಯಿಲ್ಲದಿರುವಿಕೆಯು ಅವಾಂತರ ಇನ್ನೂ ವೀರಶೈವರ ವರ್ಣಾಶ್ರಮ ಭೇದ ಕೀಳುಮೇಲು ಎಂಬ ಕಲಹಮುಂತಾದವುಗಳನ್ನು ಸಾಕಾದಷ್ಟು ಆಯಾಯ ಪಕ್ಷದ ಪ್ರತಿನಿಧಿಗಳನ್ನು ಬರಮಾಡಿಕೊಂಡು ಶಾಸ್ತ್ರಾರ್ಥಗಳಿಂದ ವಿಚಾರಿಸಿ ಕಮಿಟಿಯಲ್ಲಾದ ಸರ್ವಸಮ್ಮತದ ಒಪ್ಪಂದದಂತೆ ಸರ್ವ ಪೀಠದವರೂ ಮತ್ತು ಭಕ್ತರುಗಳೂ ನಡೆದುಕೊಳ್ಳುವಂತೆಯೇ ಇತ್ಯರ್ಥಪಡಿಸಿ ಅನೈಕ್ಯಮತ್ಯದಿಂದ ಹೋಗುತ್ತಿರುವ ವೀರಶೈವ ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡಿ ನಿರ್ದಿಷ್ಟವಾದ ಒಂದು ಮಾರ್ಗದಲ್ಲಿ ಸರ್ವ ವೀರಶೈವರೂ ಹೋಗುವಂತೆ ಒಂದು ನೂತನ ಸಮಾಜ ರಚನೆಯನ್ನು ರಚಿಸಬೇಕೇ ಹೊರತು ಅಲ್ಲಿಯವರೆಗೂ ಐಕ್ಯಮತ್ಯವಿಲ್ಲದೆ ಸುಮ್ಮನೆ ಅಖಿಲಭಾರತ ವೀರಶೈವ ಮಹಾಸಭೆಗಳನ್ನು ಎಷ್ಟು ಮಾಡಿದರೂ ಸಮಾಜದಲ್ಲಿ ಸರಿಯಾದ ಸುಧಾರಣೆಯಾಗಲಾರದು. ಆದುದರಿಂದ ಮೊದಲು ಸಮಾಜದೊಳಗಿನ ತೊಡರುಗಳನ್ನು ಹೋಗಲಾಡಿಸಿ ಐಕ್ಯತೆಯನ್ನುಂಟುಮಾಡಬೇಕಾಗಿ ಸರ್ವವೀರಶೈವ ಸಮಾಜ ಸುಧಾರಕರಲ್ಲಿ ನನ್ನ ಅತ್ಯಂತ ಆಗ್ರಹದ ಸವಿನಯ ಪ್ರಾರ್ಥನೆ.

ಎಂ. ಎನ್. ಸಿದ್ಧಪ್ಪ ಬೆಂಗಳೂರು ನಗರ.

ತಾ. ೧೫ನೆಯ ದಿವಸ ದಿಲ್ಲಿಯಲ್ಲಿ ಸ್ವದೇಶಿ ವಸ್ತು ಪ್ರದರ್ಶನವು ಸೌ. ಕಸ್ತೂರಿದೇವಿ ಗಾಂಧಿಯವರಿಂದ ತೆರೆಯಲ್ಪಟ್ಟಿತು.

ಜಾತಿಭೇದದ ಅಳಿಗಾಲ.

(ಲೇಖಕರು:- ಪಾಟೀಲ ಲಿಂಗನಗೌಡರು ಅಧ್ಯಾಪಕ ವೀ. ವಿ ಆಲಮಟ್ಟಿ)

ಮನುಷ್ಯರು ತಮ್ಮತಮ್ಮ ಕೈಗಾರಿಕೆಗಳ ಅನುಕೂಲತೆ [illegible] ಯಿಂದಲೂ ವಿಷಮತೆಯ ಬೀಜರೂಪವಾದ ಜಾತಿಭೇದವನ್ನುಂಟು ಮಾಡಿದರಷ್ಟೇ? ಆದರೆ ಸೃಷ್ಟಿಯ ನಿಯಮಗಳು ಈ ಸ್ವಾರ್ಥ ಪದ್ಧತಿಯನ್ನನುಸರಿಸುತ್ತಿದ್ದರಲ್ಲವೇ ಅವರಿಗೆ ಸುಖವು? ಬ್ರಾಹ್ಮಣರೆಂಡೆನಿಸಿಕೊಂಬುವವರಲ್ಲಿ ಅತಿ ನೀಚರೂ ಅಲ್ಪಮತಿಗಳೂ ಹುಟ್ಟುವದುಂಟು. ಮತ್ತು ಶೂದ್ರರಲ್ಲಿ ಒಳ್ಳೇ ಮೇಧಾವಿಗಳೂ, ಸುಶೀಲರೂ ಹುಟ್ಟುವದುಂಟು. ಪರಮಾತ್ಮನಿಗೆ ವರ್ಣಭೇದವೆಂಬುದಿಲ್ಲ. ಅವನ ಜ್ಞಾನವು ಯಾರೊಬ್ಬರ ಪಿತ್ರಾರ್ಜಿತ ಸ್ವತ್ತಲ್ಲ [illegible]ದಮೇಲೆ ಪರಮಾತ್ಮನಿಂದುಂಟಾದ ಧರ್ಮದಲ್ಲಿ ಈ ವರ್ಣಭೇದವು ಏಕೆ?

ವರ್ಣಕಾರರು ತಮ್ಮ ಮೇಲ್ಮೆಗಾಗಿ ತಮಗಿಂತಲೂ ಕಡಿಮೆ ಜಾತಿಯವರ ಬುದ್ಧಿಯನ್ನು ಕುಂಠಿತಮಾಡಲು ಪ್ರಯತ್ನಿಸುತ್ತಾರೆ. ದುರಾಶ ಪ್ರವೃತ್ತರಾದ ಅವರಿಗೆ ಇದು ಸಹಜವಾದ ಕೆಲಸವು. ಆದರೆ ಎಷ್ಟೆಷ್ಟು ಅವರು ಹೆರವರ ಆತ್ಮೋನ್ನತಿಯನ್ನು ಕಂದಿಸಲು ಪ್ರಯತ್ನಿಸುತ್ತಾರೆಯೋ ಅಷ್ಟಷ್ಟು ಅವರೇ ಅಧೋಗತಿಯನ್ನು ಹೊಂದುತ್ತಾರೆ. ಆದುದರಿಂದಲೇ ಸ್ವಾಮಿ ರಾಮತೀರ್ಥರು— "ಸ್ವಾಧೀನವೆಂದೊಡನೆಯೇ ಆಧೀನತೆಯು ಪ್ರಾಪ್ತವಾಗುತ್ತದೆ. ಸಮತ್ವವೇ ಸುಖವು. ಈ ತ್ರಿಕಾಲಾಬಾಧಿತವಾದ ಸಿದ್ಧಾಂತವು ಪ್ರತಿಯೊಬ್ಬನ ಹೃದಯದಲ್ಲಿಯೂ ಚನ್ನಾಗಿ ನೆಲೆಗೊಳ್ಳಬೇಕಾಗಿದೆ." ಎಂದು ಹೇಳಿದ್ದಾರೆ. ಆದುದರಿಂದ ಪ್ರಗತಿ ಪ್ರವಾಹವನ್ನು ತಡೆಯುವದು ಮಹಾಪಾಪವು.

ಒಂದು ಜನಾಂಗ ಸುಧಾರಣೆಯಾಗಬೇಕಾದರೆ ಅದರ ಸರ್ವಾಂಗಗಳೂ ವಿಕಸಿತವಾಗಬೇಕಾದರೆ ಆ ಜನಾಂಗದಲ್ಲಿಯ ಪ್ರತಿಯೊಂದು ವ್ಯಕ್ತಿಯ ಪ್ರಗತಿಯು ಅಪ್ರತಿಹತವಾಗಿ ಬೆಳೆಯಬೇಕು. ಅಮೇರಿಕೆಯ ಜಗದ್ವಿಖ್ಯಾತ ಪಂಡಿತನಾದ ಕ್ರೋರ್ಬು ಅರನು ಹೀಗೆ ಹೇಳಿರುವನು— "ಯಾವ ಸಮಾಜದಲ್ಲಿ ವ್ಯಕ್ತಿಯ ಪೂರ್ಣೋತ್ಕರ್ಷಕ್ಕಾಗಿ ಆಶ್ರಯ ಸಿಗುತ್ತದೆಯೋ ಆ ಸಮಾಜವು ಸರ್ವಶ್ರೇಷ್ಠವೂ ಮತ್ತು ಪೂರ್ಣ ಸುಧಾರಣೆಯುಳ್ಳದ್ದೆಂದು ತಿಳಿಯಬೇಕು. ಅಂಥ ಸಮಾಜದಲ್ಲಿ ಕೃತ್ರಿಮವಾಗಲಿ ಅಥವಾ ದೃಢಬದ್ಧವಾಗಲಿ ಜಾತಿಭೇದವಿರಲು ಎಂದೂ ಶಕ್ಯವಿಲ್ಲ. ಧರ್ಮಸ್ಥಾನದಲ್ಲಿ ಶ್ರೇಷ್ಠಸ್ಥಾನವು ಬರಬೇಕಾದರೆ ಪ್ರತಿಯೊಂದು ವ್ಯಕ್ತಿಗೆ ಧರ್ಮ [illegible] ಬೇಕು."

ನವರ ಅಮೃತಮಯ ವಚನದಿಂದ ಚೇತರಿಸಿಕೊಳ್ಳುವರೆ? "ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರವೊಂದೇ. ಆಶೆ, ಆಮಿಷ, ರೋಷ, ಹರುಷ, ವಿಷಯಾದಿಗಳೆಲ್ಲ ಒಂದೇ। ಏನನೋದಿ ಏನು ಕೇಳಿದಡೇನು ಫಲ? [illegible] ವರ್ಣಾನಾಂ ಕಿಂಪ್ರಯೋಜನಂ॥ ಎಂಬುದಾಗಿ ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದನೋದಿ ಹಾರುವನಾದ ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ? ಇದು ಕಾರಣ ಕೂಡಲಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು."

ಜಾತಿಭೇದವು ಇಷ್ಟು ಜಾಜ್ವಲ್ಯಮಾನವೆಂಬುದನ್ನು ಅರಿತೂ ಅರಿತೂ ಮತ್ತೂ ಅವರ ಬಲೆಯೊಳಗೇ ಜನಸಮೂಹವು ಇರಲಪೇಕ್ಷಿಸುತ್ತದೆ. ಇದಕ್ಕೆ ಸಮಾಜದಲ್ಲಿರುವ ಪೋಪರೇ ಕಾರಣರಾಗಿರುವರು. ಈ ಪೋಪರ ಲೀಲೆಯನ್ನು ಆಷ್ಟಿಷ್ಟೆಂದು ವರ್ಣಿಸಲಾಗವಲ್ಲ. ಇವರು ಹುಡುಕಿ ತೆಗೆದಿರುವ ದೇವದತ್ತ (ಕುಯುಕ್ತಿ)ಕ್ಕೆ ಧನ್ಯವಾದ! ಯಾಕಂದರೆ ಈ ಪೋಪರು ಬೇಕಾದಷ್ಟು ಅಜ್ಞಾನಿಗಳಿರಲಿ, ಅಧರ್ಮಿಗಳಿರಲಿ, ಅನಾಚಾರಿಗಳಿರಲಿ ಎಲ್ಲಿ ನೋಡಿದರೂ ತೆಂಗಿನಕಾಯಿ ಇವರ ಪಾದಕ್ಕೆ ತಯಾರ! ಬಿಸಿಬಿಸಿ ಸುಗ್ರಾಸ ಭೋಜನ, ಸುಖಶಯ್ಯೆ! ದಿನದ ಕೆಲಸವೆಂದರೆ ಒಡಕು ಹುಟ್ಟಿಸುವುದು, ವಾಹವ್ವಾ! ಜಾತಿಭೇದವೇ? ಈ ೨೦ ನೆಯ ಶತಮಾನದಲ್ಲಿಯೂ ನಿನ್ನಲೀಲೆಯನ್ನು ತೋರಿಸುವೆ. ನೀನು ಮಣ್ಣುಮುಕ್ಕುವ ಕಾಲವು ಬಹಳ ದೂರವಿಲ್ಲ.

ಇನ್ನು ನಮ್ಮ ತರುಣ ವೀರಶೈವರಿಗೊಂದು ವಿನಂತಿಯು. ಪ್ರಿಯ ಬಂಧುಗಳೇ ಈ ಜಾತ್ಯಾಂಧರ ಪೋಪಲೀಲೆಯನ್ನು ನೋಡುತ್ತಿರುವಿರಲ್ಲವೇ? ಈ ಜಾತಿಯ ಕಲ್ಪನೆಯು ಜನರಲ್ಲಿ ಎಲ್ಲಿಯವರೆಗಿರುವದೋ ಅಲ್ಲಿಯವರೆಗೆ ನಮ್ಮ ಸಮಾಜವು ಎಂದೂ ಉದ್ಧಾರವಾಗಲಾರದೆಂದು ಅರಿಯುವಿರಾ? ಈ ಜಾತಿಕಲ್ಪನೆಯನ್ನು ಸಮಾಜದಿಂದ ಬೇರುಸಹಿತ ಕಿತ್ತೊಗೆಯುವುದೇ ಈ ಪೋಪರಿಗೆ ನಿಜವಾದ ಬಾಯ್ತುಡಿಯು. ಅಂದೇ ವೀರಶೈವ ಸಂಘಟನ ಸುಸಮಯವು. [illegible]

ಕರ್ನಾಟಕದ ಏಳ್ಗೆಯ ಪಾ[illegible]

ಜಾತಿಯ ಮುಳ್ಳುಕಳ್ಳಿಯ

ವೀರಶೈವ ತರುಣರ

ತಾ

ನರಸಿ

ವೀರಶೈವ ಜಾತಿವಾದ ವಿಮರ್ಶೆ.

ಧಾರ್ಮಿಕ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾಪನೆ.

ಶಾಸ್ತ್ರಿಗಳ ಅಭಿಪ್ರಾಯದ ಆವಶ್ಯಕತೆ.

ವೀರಶೈವ ತತ್ವ ಪ್ರಚಾರಕ ಸಂಘವು ಸ್ಥಾಪನೆಯಾದ ನಂತರ ಕಳೆದ ೯ ತಿಂಗಳುಗಳಿಂದಲೂ ಅಷ್ಟಾವರಣ ಪಂಚಾಚಾರ ಯುಕ್ತರಾದ ವೀರಶೈವರಲ್ಲಿ ಜಾತಿಭೇದಗಳಿವೆಯೋ? ಇಲ್ಲವೋ? ಎಂಬ ವಾದವು ವಿಶೇಷವಾಗಿ ಜರುಗುತ್ತಲೇ ಬಂದು ಜನಜಾಗೃತಿಯಾಗಿದೆಯಷ್ಟೆ. ಈ ವಿಷಯದಲ್ಲಿ ಒಂದು ತೀರ್ಮಾನವಾಗುವುದು ಅವಶ್ಯವೆಂದು ಯೋಚಿಸಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ರಾಯಚೂರ ಕರಾರು ಏರ್ಪಟ್ಟಿತು, ಆ ಕರಾರಿನಂತೆ ಶ್ರೀ ರಂಭಾಪುರಿ ಜಗದ್ಗುರು ಪೀಠದ ಈಗಿನ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಈ ಜಾತಿವಾದವು ಜರುಗಬೇಕೆಂತಲೂ ಗೊತ್ತಾಯಿತು. ವಾದ ಪದ್ಧತಿಯು ಆ ರಾಯಚೂರು ಕರಾರಿನಲ್ಲಿ ಆಗ ಗೊತ್ತುಮಾಡಿರಲಿಲ್ಲವಾದುದರಿಂದ ಆ ಸಂಬಂಧವಾಗಿ ಭಿನ್ನಾಭಿಪ್ರಾಯವಾಗಲು ಕೊನೆಗೆ ಆ ಕರಾರಿನ ಪ್ರವರ್ತಕರಲ್ಲಿ ಪ್ರಮುಖರಾದ ಶ್ರೀಯುತ ಪಾವಟೆ ಸಿದ್ಧರಾಮಪ್ಪನವರ ಅಭಿಪ್ರಾಯದಂತೆ ಶ್ರೀ. ಪಗಡದಿನ್ನಿ ಚಂದ್ರಶೇಖರ ಶಾಸ್ತ್ರಿಗಳಿಗೆ ವಾದ ಪದ್ಧತಿಯನ್ನು ತಿಳುಹಿಸಿ ಎರಡು ತಿಂಗಳುಗಳಾಗುತ್ತಾ ಬಂದಿತು. ಇನ್ನೂ ಅವರಿಂದ ಯಾವ ಏರ್ಪಾಟು ಆಗದಿದ್ದುದಕ್ಕೆ ಅನೇಕರು ಬರೆಯುತ್ತಿದ್ದಾರೆ. ಈ ಮಧ್ಯೆ ಶಾಸ್ತ್ರಿಗಳಿಗೆ ಎರಡಾವರ್ತಿ ಬರೆದಿದ್ದಾಗಿದೆ. ಈಗಲಾದರೂ ಶಾಸ್ತ್ರಿಗಳು ವಾದವು ಎಲ್ಲಿ ಎಂದು ಪ್ರಾರಂಭವಾಗುವುದೆಂಬುದನ್ನು ಅಧ್ಯಕ್ಷರಿಂದ ಜಾಗ್ರತೆ ಪ್ರಕಟಗೊಳಿಸುವಂತೆ ಮಾಡುವರೆಂದು

ಕ್ಷಣವನ್ನು ಕೊಡುವ
ಆ ಸಂಸ್ಥೆಯ
ವರಾಗಿದ್ದಾ
ಗತ್ಯ

ಕೆಲವು ಜನಗಳಿಗಾದರೊ ಶ್ರೀ ಬಸವಾದಿ ಪ್ರಮಥರ ನಡೆನುಡಿಗಳೆಲ್ಲವೂ ಪರಮಪವಿತ್ರವಾಗಿಯೇ ತೋರುತ್ತವೆ. ಅಷ್ಟಾವರಣ ಪಂಚಾಚಾರ ಯುಕ್ತರಾದ ವೀರಶೈವರಲ್ಲಿ ಜಾತಿಭೇದವಿಲ್ಲವೆಂದೇ ತಿಳಿದಿದ್ದಾರೆ.

ಈ ಪ್ರಕಾರ ತ್ರಿವಿಧಾಭಿಪ್ರಾಯಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡುವುದಾಗಿ ಪ್ರಕಟಿಸಿರುವ ಶ್ರೀಮದ್ವೀರಶೈವ ಶಿವಯೋಗಮಂದಿರ ಶ್ರೀ ವೀರಶೈವ ಶಿವಯೋಗೀಶ್ವರ ಸಂಸ್ಕೃತ ಕಾಲೇಜ ಧಾರವಾಡ, ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಕಾಲೇಜ, ಹುಬ್ಬಳ್ಳಿ. ಈ ವೀರಶೈವ ಸಾರ್ವಜನಿಕ ಸಂಸ್ಥೆಯವರು ಯಾವ ಅಭಿಪ್ರಾಯವುಳ್ಳವರಾಗಿದ್ದಾರೆಂಬುದನ್ನು ತಿಳಿದುಕೊಳ್ಳಲು ಸಮಾಜದ ಅನೇಕ ಜಿಜ್ಞಾಸುಗಳು ಅಪೇಕ್ಷಿಸುತ್ತಿರುವುದು ವಿಹಿತವಾಗಿಲ್ಲವೇ? ಆದುದರಿಂದ ದಯವಿಟ್ಟು ಈ ಸಂಸ್ಥೆಯವರು ಜಾತಿಯ ವಿಷಯದಲ್ಲಿ ತಾವು ಯಾವ ಅಭಿಪ್ರಾಯವುಳ್ಳವರಾಗಿದ್ದಾರೆಂಬುದನ್ನು ಪ್ರಕಟಿಸಿ ಅನೇಕರಿಗಿರುವ ಸಂಶಯವನ್ನು ನಿವಾರಣೆಮಾಡಬೇಕಾಗಿ ಪ್ರಾರ್ಥನೆ.

ಈ ವಿಷಯವು ಧಾರ್ಮಿಕವಾದುದಾಗಿದೆ. ಆದುದರಿಂದ ಧಾರ್ಮಿಕ ಶಿಕ್ಷಣ ಹೊಂದಿದ ಪಂಡಿತರ ಅಭಿಪ್ರಾಯವೇ ಮಾನ್ಯವಾದುದು. ನಮ್ಮ ಸಮಾಜದಲ್ಲಿ ಅನೇಕ ಪಂಡಿತರು ಕಾಶಿಯಲ್ಲಿದ್ದು ಹೆಚ್ಚಾದ ಸಂಸ್ಕೃತ ವಿದ್ಯೆಯನ್ನು ಅಧ್ಯಯನ ಮಾಡಿ ಇಲ್ಲಿ ಅನೇಕ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾರಷ್ಟೆ

ಇಂತಹ ಪಂಡಿತರಲ್ಲಿ ಹತ್ತು ಜನ ಶಾಸ್ತ್ರಿಗಳವರಿಗೆ ಈ ಜಾತಿಯ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂಬುದನ್ನು ದಯವಿಟ್ಟು ತಿಳುಹಿಸಬೇಕಾಗಿ ತಾ. ೧೬-೧೨-೩೨ನೆಯ ದಿವಸ ವಿಜ್ಞಾಪಿಸಿಕೊಂಡಿದ್ದೇನೆ. ಒಂದುವರೆ ತಿಂಗಳಾಗುತ್ತಾ ಬಂದರೂ ಒಬ್ಬ ಮಹಾಶಯರಿಂದಲೂ ಉತ್ತರ ಬಾರದಿರುವುದು ತುಂಬಾ ವಿಷಾದದ ಸಂಗತಿಯಲ್ಲವೇ? ತಾವು ಪಂಡಿತರಾಗಿರುವುದರಿಂದ ತಮಗೆ

ಂಧಪಟ, ವಿಷಯದಲ್ಲಿ ತಮ್ಮ ಅಭಿಪ್ರಾ...

ಪಂಚಾಚಾರ್ಯ ಪ್ರಭಾಪತ್ರಿಕೆಯ ಸಂಪಾದಕರಲ್ಲಿ ವಿಜ್ಞಾಪನೆ.

ಪ್ರಿಯ ಮಹಾಶಯರೇ,

[illegible]

ಧರ್ಮಾಭಿಮಾನಿಗಳ "ಗಾಂಧಿಯವರ ವಕ್ರಮಾರ್ಗ" ಎಂಬ ಶಿರೋನಾಮದಿಂದ ಪ್ರಕಟವಾಗಿದ್ದ ಲೇಖನವನ್ನು ಓದಿ ನೋಡಿದೆವು. ಅದಕ್ಕೆ ಖಂಡನೆಯು ಈಗಾಗಲೇ ಶರಣ ಸಂದೇಶ (೨೬-೧೨-೩೨) ದಲ್ಲಿ ಬಂದಿದ್ದು ಆ ಲೇಖನದ ಮೇಲೆ ಟೀಕೆ ಮಾಡುವುದು ಅನಾವಶ್ಯಕ. ಆದರೆ ವೀರಶೈವ ಧರ್ಮಪ್ರತಿಪಾದನೆಯೇ ಮುಖ್ಯೋದ್ದೇಶವಾಗಿಟ್ಟು ಈ ಪತ್ರಿಕೆಯನ್ನು ಹೊರಡಿಸುತ್ತಾ ಬಂದಿರುವ ತಮಗೆ ಕೆಲವು ಸಂಗತಿಗಳನ್ನು ಸೂಚಿಸುವುದು ನಮ್ಮ ಆದಿ ಕರ್ತವ್ಯವೆಂದು ತಿಳಿದು ಬಂದದ್ದರಿಂದ ಈ ಲೇಖನವನ್ನು ಬರೆಯ ತೊಡಗಿದ್ದೇವೆ.

ಯಾವ ಪತ್ರಿಕಾಕರ್ತರಾದರೂ ಪತ್ರಿಕೆಯನ್ನು ಹೊರಡಿಸುವುದರಲ್ಲಿ ಕೆಲವು ಉದ್ದೇಶಗಳನ್ನೂ ಸಂಕಲ್ಪಗಳನ್ನೂ ಇಟ್ಟುಕೊಂಡಿರುವರೆಂಬುದು ತಮಗೆ ತಿಳಿಯದ ವಿಷಯವಲ್ಲ. ಅವರು ತಮಗೆ ಬರುವ ಪ್ರತಿಯೊಂದು ಲೇಖನವನ್ನೂ ವಿಮರ್ಶಿಸಿ ಒರೆಗಲ್ಲಿಗೆ ಹಚ್ಚಿ ಆ ಲೇಖನದ ಉದ್ದೇಶವು ತಮ್ಮ ಉದ್ದೇಶದೊಡನೆ ಸರಿ ಬಂದರೆ ಅದನ್ನು ಪ್ರಕಟಿಸುವರು. ಒಂದು ವೇಳೆ ತಮಗೆ ಬಂದ ಲೇಖನವು ಚರ್ಚಾಸ್ಪದವಾಗಿದ್ದರೆ ತಮ್ಮ ಸಂಕಲ್ಪಕ್ಕೆ ಅನ್ವಯಿಸಬಾರದಾಗಿದ್ದರೂ, ಅದನ್ನು ಪ್ರಕಟಿಸಿ ಅದರ ಬಗ್ಗೆ ಅಲ್ಲೇ ತಮ್ಮ ಭಿನ್ನಾಭಿಪ್ರಾಯವನ್ನು ಸೂಚಿಸುವರು. ನೀವು ಪತ್ರಿಕೆಯನ್ನು ಹೊರಡಿಸುವುದರಲ್ಲಿ ಕೆಲವೊಂದು ಉದ್ದೇಶಗಳನ್ನಿಟ್ಟುಕೊಂಡಿರುವಿರಿ. ಸದ್ಯಃ ನೀವು.

೧. ಈ ಲೇಖನಕ್ಕೆ ತಮ್ಮ ಪತ್ರಿಕೆಯಲ್ಲಿ ಎಡೆಕೊಟ್ಟುದು.

೨. ಇದರ ಅಭಿಪ್ರಾಯದ ಬಗ್ಗೆ ತಮ್ಮ ಅಸಮ್ಮತಿಯನ್ನು ಸೂಚಿಸದೆ ಇರುವುದು.

೩. ಎಷ್ಟೋ ಲೇಖನಗಳು ಅಲ್ಲಿ ಇಲ್ಲಿ ಸಣ್ಣ ಅಕ್ಷರಗಳಿಂದ ಕಂಡೂ ಕಾಣದಂತೆ ಇರುವಾಗ ಇದಕ್ಕೆ ಮಾತ್ರ ಪ್ರಥಮ ಪುಟದಲ್ಲೇ ಆಶ್ರಯ ಕೊಟ್ಟು ದೊಡ್ಡ ಅಕ್ಷರಗಳಿಂದ ಪ್ರಕಟಿಸಿರುವುದು.

ಈ ಎಲ್ಲಾ ಕಾರಣಗಳಿಂದ ನಿಮ್ಮ ಉದ್ದೇಶವೂ ಸದರಿ ಲೇಖನದ ಉದ್ದೇಶವೂ ಒಂದೆ ಆಗಿರುವುದೆಂದು ಗೊತ್ತಾಗಿರುವುದು ಮಾತ್ರವಲ್ಲ, ಇದನ್ನು ಎತ್ತಿ ಹಿಡಿಯುವುದು ಆಗಿರುತ್ತದೆಂದು ಗೊತ್ತಾಗುವಂತಿದೆ.

ಈ ಭಾವನೆಯು ನಿಜವಾಗಿದ್ದಲ್ಲಿ ನೀವು ಇದರಿಂದ ವೀರಶೈವ ಸಮಾಜವನ್ನು ಉದ್ಧಾರಮಾಡುವುದಕ್ಕೆ ಬದಲಾಗಿ ನಿರ್ನಾಮಗೊಳಿಸಲು ಅವಕಾಶಕೊಟ್ಟಂತಾಗುತ್ತದೆ. ಏಕೆಂದರೆ, ಇದರಿಂದ ಹಿಂದೂ ಮುಸಲ್ಮಾನರಲ್ಲಿ ಭಾರತೀಯರಿಂದ ಮಾತ್ರವಲ್ಲ. ಇಡೀ ಜಗತ್ತಿನ ಎಲ್ಲಾ ಧರ್ಮದವರಿಂದಲೂ ಏಕಕಂಠದಿಂದ ಯಾವನು ಮಹಾನುಭಾವನೆಂದು, ಧರ್ಮಾವತಾರನೆಂದು ನಂಬಲ್ಪಟ್ಟಿರುವನೋ ಆ ಮಹಾನುಭಾವನು ಭಾರತದೇಶದ ೩೩ ಕೋಟಿ ಮಾನವರ ಕಲ್ಯಾಣಕ್ಕಾಗಿ ಪ್ರಾರಂಭಿಸಿದ ಈ ನಿಸ್ವಾರ್ಥತೆಯ ಕೃತಿಗೆ ಭಾರತ ಮಾತೆಯ ಮುಖ್ಯಾಂಗದಂತಿರುವ ಈ ವೀರಶೈವ ಸಮಾಜವು ಸಹಾನುಭೂತಿಯನ್ನು ತೋರಿಸಲಿಲ್ಲವೆಂಬ ಅಪವಾದ ಬರಲು ಅವಕಾಶವಾಗುತ್ತದೆ. ಜಗತ್ಪೂಜ್ಯನಾದ ಆ ಮಹಾತ್ಮನನ್ನು ಕಣ್ಮುಚ್ಚಿ ನಿಂದಿಸುವ ವ್ಯಕ್ತಿಗಳಿಗೆ ಪ್ರೋತ್ಸಾಹಕೊಟ್ಟಂತೆ ಹೇಳಲೆಡೆಕೊಟ್ಟಂತಾಗುತ್ತದೆ. ಅಲ್ಲದೆ ಭಾರತ ಜನಾಂಗದ ಎಲ್ಲ ಧರ್ಮಗಳ ಮೂಲ ತತ್ವಗಳಿಗೆ ಆಗರವಾದ ವೀರಶೈವವು ಇಂದು ಈ ವಿಚಾರದಲ್ಲಿ ಅಸಮ್ಮತಿಯನ್ನು ತೋರಿಸಿದರೆ ಈಗಲೇ ಒಳಧರ್ಮಗಳ ಕ್ರೌರ್ಯದಿಂದ ಪರಮತೀಯರ ಹಾವಳಿಯಿಂದ ಇಷ್ಟು ಅಧೋಗತಿಯನ್ನು ಹೊಂದಿರುವ ಈ ಮತವು ಮುಂದೆ ಇನ್ನುಳಿದ ಭಾರತ ಜನಾಂಗದವರಿಂದಲ್ಲೂ [illegible] ವರಿಯುತ್ತಾ ಧರ್ಮವು ಪ್ರಗತಿಯುಳ್ಳದ್ದೆಂದು ತೋರ್ಪಡಿಸಿರುವಾಗ, ನಾವು ಹೀಗೆ ಸಂಕುಚಿತಭಾವದಿಂದ ಸುಮ್ಮನೆ ಕುಳಿತರೆ ನಮಗೆಂದಿಗೂ ಶ್ರೇಯಸ್ಸಾಗಲಿಕ್ಕಿಲ್ಲ. ನಮ್ಮಂಥವರು ಎಷ್ಟು ಕೋಟಿಗಳನ್ನು ಹಾಕಿದರೆ ತಾನೇ ಒಬ್ಬ ಮಹಾತ್ಮನ ಸರಿಯಾದೀತೆ? ನಮಗೆ ಸಹಸ್ರವಾಲು ಮಿಗಿಲಾದ ಧರ್ಮಾತ್ಮ ಮಾಲವೀಯವರಂಥವರೂ ಮಹಾತ್ಮರ ಧರ್ಮವೇ ಸತ್ಯವೆಂದು ನಿಜವೆಂದು ಕಂಡು ಅದಕ್ಕೆ ಸ್ವಾಗತ ಕೊಟ್ಟಿರುವುದನ್ನು ನೋಡಿಯಾದರೂ ತಿಳಿಯಬಾರದೆ? ಆದ್ದರಿಂದ ನಾವು ಭಾವಿಸಿರುವಂತೆ ನಿಜವಾಗಿಯೂ ನಿಮಗೆ ಆ ನಿಂದೆಯ ಲೇಖನದ ಅಭಿಪ್ರಾಯದಲ್ಲಿ ಅಸಮ್ಮತಿಯಿದ್ದರೆ ದಯವಿಟ್ಟು ನಮಗಾಗಿ, ನೀವು ಹುಟ್ಟಿ ಬೆಳೆದ ವೀರಶೈವದ ಶ್ರೇಯಸ್ಸಿಗಾಗಿ, ಇಡೀ ಭಾರತ ಜನಾಂಗದ ಸುಖಕ್ಕಾಗಿ ಅದನ್ನು ಬಿಟ್ಟುಬಿಡಿ; ಮಹಾತ್ಮರು ಕೈಕೊಂಡಿರುವ ಧರ್ಮಸಂಗ್ರಾಮದ ಬಗ್ಗೆ ತಮ್ಮ ಸಹಾನುಭೂತಿಯನ್ನು ತೋರಿಸುವ ಲೇಖನವೊಂದನ್ನು ಮುಂದಿನ ಸಂಚಿಕೆಯಲ್ಲಿಯೇ ಬರೆದು ಇದರ ಪರಿಹಾರಮಾಡಿಕೊಳ್ಳಿರಿ. ಮತ್ತು ಮುಂದೆ ಇಂಥಾ ನಿಂದೆಯ ಲೇಖನಗಳಿಗೆ ಅವಕಾಶ ಸಿಗುವುದಿಲ್ಲವೆಂಬುದನ್ನು ಪ್ರಕಟಿಸಿ ಪುಣ್ಯಭಾಗಿಗಳಾಗಿರಿ. ಬಸವಾದಿಗಳ ನಿಂದೆಯಿಂದ ಮತ್ತು ಅಂಥದಕ್ಕೆ ಆಶ್ರಯಕೊಡುವದರಿಂದ ಸಮಾಜದ ಒಂದು ಭಾಗ ನಾಶವಾದರೆ ಇಂಥಾ ವಿಚಾರಗಳಿಂದ ಇಡೀ ಸಮಾಜವೇ ಹಾಳಾಗುತ್ತದೆ. ಈ ಕಾರಣದಿಂದ ನಾವಿಷ್ಟು ಬೇಡಬೇಕಾಯಿತು. ಆದ್ದರಿಂದ ನಾವು ಪೂರ್ಣವಾದ ಆಸೆ ನಂಬಿಕೆಗಳಿಂದ ತಮ್ಮ ಮುಂದಿನ ಪತ್ರಿಕೆಗಳನ್ನೇ ಇದಿರು ನೋಡುತ್ತಿರುವೆವು. ಅದರಲ್ಲಿ ಆ ಸನಾತನ ಧರ್ಮಾಭಿಮಾನಿಯ ಲೇಖನದ ಬಗ್ಗೆ ತಮ್ಮ ಸಹಾನುಭೂತಿ ಇಲ್ಲವೆಂಬ ಅಂಶವನ್ನು ತಾವು ಸ್ಪಷ್ಟವಾಗಿ ಸೂಚಿಸದಿದ್ದಲ್ಲಿ ಈ ಪತ್ರವನ್ನು ಪ್ರಕಟಿಸುವುದಲ್ಲದೆ, ತಮ್ಮ ಪತ್ರಿಕೆಯನ್ನು, ಸಮಾಜನಾಶಕ್ಕೆ ಹೇತುವಾದುದೆಂದು ಬಹಿಷ್ಕರಿಸುವ ಪತ್ರಿಕೆಗಳಲ್ಲೊಂದಾಗಿ ಪರಿಗಣಿಸಿ ಜನಜಾಗೃತಿಯನ್ನುಂಟುಮಾಡುವುದು ಸಮಾಜೋತ್ಕರ್ಷ ಸಾಧಕ ಸಂಘದವರಾದ ನಮ್ಮ ಕರ್ತವ್ಯವಾಗುತ್ತದೆ, ತಿಳಿಯುವದು. ನಿಮ್ಮಂಥವರಿಂದ ಸಮಾಜೋದ್ಧಾರವಾಗಬೇಕೆಂದು ಪೂರ್ಣ ನಂಬಿರುವ ನಮ್ಮಗಳ ಆಶೆಯು ನಿರಾಶೆಯಾಗದಂತೆ ವರ್ತಿಸುವಿರೆಂದು ನಂಬಿದ್ದೇವೆ.

ಬೆಂಗಳೂರು. ತಾ. ೧-೧-೩೩. | ವೀರಶೈವ ಸಮಾಜೋತ್ಕರ್ಷ ಸಾಧಕ ಸಂ. ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರು.

ಸೂಚನೆ—ಈ ಲೇಖನವು ಪಂಚಾಚಾರ್ಯಪ್ರಭಾಪತ್ರಿಕೆಯಲ್ಲಿಯೇ ಪ್ರಕಟವಾಗಿ ಈ ವಿಷಯದಲ್ಲಿ ಆ ಪತ್ರಿಕಾಕರ್ತರು ತಮ್ಮ ಅಭಿಪ್ರಾಯವನ್ನು ಸೂಚಿಸಬೇಕಾಗಿದ್ದುದೇ ನ್ಯಾಯವಾಗಿದ್ದಿತು. ಆದುದರಿಂದ ಆ ಪತ್ರಿಕಾಕರ್ತರ ಕಡೆಗೇನೇ ಈ ಲೇಖನ ಕಳುಹಿಸಿರೆಂದು ಮೊದಲು ಆ ಸಂಘದವರಿಗೆ ನಾವು ತಿಳುಹಿಸಿದ್ದೆವು.

ತಾವು ಕಳುಹಿಸಿದ ಈ ಲೇಖನವನ್ನು ಆ ಪತ್ರಿಕಾಕರ್ತರು ಪ್ರಕಟಿಸಿಲ್ಲವೆಂದು ಆ ಸಂಘದವರು ತಿಳಿಸಿದ್ದರಿಂದಲೂ ಇದು ಸಾರ್ವಜನಿಕ ವಿಷಯವಾಗಿರುವುದರಿಂದಲೂ ವಿಚಾರ ಸ್ವಾತಂತ್ರ್ಯಕ್ಕೆ ನ್ಯಾಯವಾದ ಅವಕಾಶವಿರುವುದು ವಿಹಿತವಾಗಿರುವುದರಿಂದಲೂ ಈ ಲೇಖನವನ್ನು ಪ್ರಕಟಿಸಲಾಗಿದೆ.

ಸಂಪಾದಕ.

ವೀರಶೈವ ಜಾತಿವಾದ ವಿಮರ್ಶೆ.

ಧಾರ್ಮಿಕ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾಪನೆ.

ಶಾಸ್ತ್ರಿಗಳ ಅಭಿಪ್ರಾಯದ ಆವಶ್ಯಕತೆ.

ವೀರಶೈವ ತತ್ವ ಪ್ರಚಾರಕ ಸಂಘವು ಸ್ಥಾಪನೆಯಾದ ನಂತರ ಕಳೆದ ೯ ತಿಂಗಳುಗಳಿಂದಲೂ ಅಷ್ಟಾವರಣ ಪಂಚಾಚಾರ ಯುಕ್ತರಾದ ವೀರಶೈವರಲ್ಲಿ ಜಾತಿಭೇದಗಳಿವೆಯೇ? ಇಲ್ಲವೇ? ಎಂಬ ವಾದವು ವಿಶೇಷವಾಗಿ ಜರುಗುತ್ತಲೇ ಬಂದು ಜನಜಾಗೃತಿಯಾಗಿದೆಯಷ್ಟೆ. ಈ ವಿಷಯದಲ್ಲಿ ಒಂದು ತೀರ್ಮಾನವಾಗುವುದು ಅವಶ್ಯವೆಂದು ಯೋಚಿಸಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ರಾಯಚೂರ ಕರಾರು ಏರ್ಪಟ್ಟಿತು, ಆ ಕರಾರಿನಂತೆ ಶ್ರೀ ರಂಭಾಪುರಿ ಜಗದ್ಗುರು ಪೀಠದ ಈಗಿನ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಈ ಜಾತಿವಾದವು ಜರುಗಬೇಕೆಂತಲೂ ಗೊತ್ತಾಯಿತು. ವಾದ ಪದ್ಧತಿಯು ಆ ರಾಯಚೂರು ಕರಾರಿನಲ್ಲಿ ಆಗ ಗೊತ್ತುಮಾಡಿರಲಿಲ್ಲವಾದುದರಿಂದ ಆ ಸಂಬಂಧವಾಗಿ ಭಿನ್ನಾಭಿಪ್ರಾಯವಾಗಲು ಕೊನೆಗೆ ಆ ಕರಾರಿನ ಪ್ರವರ್ತಕರಲ್ಲಿ ಪ್ರಮುಖರಾದ ಶ್ರೀಯುತ ಪಾವಟೆ ಸಿದ್ಧರಾಮಪ್ಪನವರ ಅಭಿಪ್ರಾಯದಂತೆ ಶ್ರೀ. ಪಗಡದಿನ್ನಿ ಚಂದ್ರಶೇಖರ ಶಾಸ್ತ್ರಿಗಳಿಗೆ ವಾದ ಪದ್ಧತಿಯನ್ನು ತಿಳುಹಿಸಿ ಎರಡು ತಿಂಗಳುಗಳಾಗುತ್ತಾ ಬಂದಿತು. ಇನ್ನೂ ಅವರಿಂದ ಯಾವ ಏರ್ಪಾಟು ಆಗದಿದ್ದುದಕ್ಕೆ ಅನೇಕರು ಬರೆಯುತ್ತಿದ್ದಾರೆ, ಈ ಮಧ್ಯೆ ಶಾಸ್ತ್ರಿಗಳಿಗೆ ಎರಡಾವರ್ತಿ ಬರೆದಿದ್ದಾಗಿದೆ. ಈಗಲಾದರೂ ಶಾಸ್ತ್ರಿಗಳು ವಾದವು ಎಲ್ಲಿ ಎಂದು ಪ್ರಾರಂಭವಾಗುವುದೆಂಬುದನ್ನು ಅಧ್ಯಕ್ಷರಿಂದ ಜಾಗ್ರತೆ ಪ್ರಕಟಗೊಳಿಸುವಂತೆ ಮಾಡುವರೆಂದು

...ಕ್ಷಣವನ್ನು ಕೊಡುವ
... ಆ ಸಂಸ್ಥೆಯ
...ವರಾಗಿದ್ದಾ
...ಗತ್ಯ
...

ಕೆಲವು ಜನಗಳಿಗಾದರೂ ಶ್ರೀ ಬಸವಾದಿ ಪ್ರಮಥರ ನಡೆನುಡಿಗಳೆಲ್ಲವೂ ಪರಮಪವಿತ್ರವಾಗಿಯೇ ತೋರುತ್ತವೆ. ಅಷ್ಟಾವರಣ ಪಂಚಾಚಾರ ಯುಕ್ತರಾದ ವೀರಶೈವರಲ್ಲಿ ಜಾತಿಭೇದವಿಲ್ಲವೆಂದೇ ತಿಳಿದಿದ್ದಾರೆ.

ಈ ಪ್ರಕಾರ ತ್ರಿವಿಧಾಭಿಪ್ರಾಯಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡುವುದಾಗಿ ಪ್ರಕಟಿಸಿರುವ ಶ್ರೀಮದ್ವೀರಶೈವ ಶಿವಯೋಗಮಂದಿರ, ಶ್ರೀ ವೀರಶೈವ ಶಿವಯೋಗೀಶ್ವರ ಸಂಸ್ಕೃತ ಕಾಲೇಜ ಧಾರವಾಡ, ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಕಾಲೇಜ, ಹುಬ್ಬಳ್ಳಿ. ಈ ವೀರಶೈವ ಸಾರ್ವಜನಿಕ ಸಂಸ್ಥೆಯವರು ಯಾವ ಅಭಿಪ್ರಾಯವುಳ್ಳವರಾಗಿದ್ದಾರೆಂಬುದನ್ನು ತಿಳಿದುಕೊಳ್ಳಲು ಸಮಾಜದ ಅನೇಕ ಜಿಜ್ಞಾಸುಗಳು ಅಪೇಕ್ಷಿಸುತ್ತಿರುವುದು ವಿಹಿತವಾಗಿಲ್ಲವೇ? ಆದುದರಿಂದ ದಯವಿಟ್ಟು ಈ ಸಂಸ್ಥೆಯವರು ಜಾತಿಯ ವಿಷಯದಲ್ಲಿ ತಾವು ಯಾವ ಅಭಿಪ್ರಾಯವುಳ್ಳವರಾಗಿದ್ದಾರೆಂಬುದನ್ನು ಪ್ರಕಟಿಸಿ ಅನೇಕರಿಗಿರುವ ಸಂಶಯವನ್ನು ನಿವಾರಣೆಮಾಡಬೇಕಾಗಿ ಪ್ರಾರ್ಥನೆ.

ಈ ವಿಷಯವು ಧಾರ್ಮಿಕವಾದುದಾಗಿದೆ. ಆದುದರಿಂದ ಧಾರ್ಮಿಕ ಶಿಕ್ಷಣ ಹೊಂದಿದ ಪಂಡಿತರ ಅಭಿಪ್ರಾಯವೇ ಮಾನ್ಯವಾದುದು. ನಮ್ಮ ಸಮಾಜದಲ್ಲಿ ಅನೇಕ ಪಂಡಿತರು ಕಾಶಿಯಲ್ಲಿದ್ದು ಹೆಚ್ಚಾದ ಸಂಸ್ಕೃತ ವಿದ್ಯೆಯನ್ನು ಅಧ್ಯಯನ ಮಾಡಿ ಇಲ್ಲಿ ಅನೇಕ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾರಷ್ಟೆ

ಇಂತಹ ಪಂಡಿತರಲ್ಲಿ ಹತ್ತು ಜನ ಶಾಸ್ತ್ರಿಗಳವರಿಗೆ ಈ ಜಾತಿಯ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂಬುದನ್ನು ದಯವಿಟ್ಟು ತಿಳುಹಿಸಬೇಕಾಗಿ ತಾ. ೧೬-೧೨-೩೨ನೆಯ ದಿವಸ ವಿಜ್ಞಾಪಿಸಿಕೊಂಡಿದ್ದೇನೆ. ಒಂದುವರೆ ತಿಂಗಳಾಗುತ್ತಾ ಬಂದರೂ ಒಬ್ಬ ಮಹಾಶಯರಿಂದಲೂ ಉತ್ತರ ಬಾರದಿರುವುದು ತುಂಬಾ ವಿಷಾದದ ಸಂಗತಿಯಲ್ಲವೇ? ತಾವು ಪಂಡಿತರಾಗಿರುವುದರಿಂದ ತಮಗೆ

...ಂಧಪಟ, ವಿಷಯದಲಿ ತಮ್ಮ ಅಭಿಪ್ರಾಯವ...

ಪಂಚಾಚಾರ್ಯ ಪ್ರಭಾಪತ್ರಿಕೆಯ ಸಂಪಾದಕರಲ್ಲಿ ವಿಜ್ಞಾಪನೆ.

ಪ್ರಿಯ ಮಹಾಶಯರೇ,

[illegible]

ಧರ್ಮಾಭಿಮಾನಿಗಳ "ಗಾಂಧಿಯವರ ವಕ್ರಮಾರ್ಗ" ಎಂಬ ಶಿರೋನಾಮದಿಂದ ಪ್ರಕಟವಾಗಿದ್ದ ಲೇಖನವನ್ನು ಓದಿ ನೋಡಿದೆವು. ಅದಕ್ಕೆ ಖಂಡನೆಯು ಈಗಾಗಲೇ ಶರಣ ಸಂದೇಶ (೨೬-೧೨-೩೨) ದಲ್ಲಿ ಬಂದಿದ್ದು ಆ ಲೇಖನದ ಮೇಲೆ ಟೀಕೆ ಮಾಡುವುದು ಅನಾವಶ್ಯಕ. ಆದರೆ ವೀರಶೈವ ಧರ್ಮಪ್ರತಿಪಾದನೆಯೇ ಮುಖ್ಯೋದ್ದೇಶವಾಗಿಟ್ಟು ಈ ಪತ್ರಿಕೆಯನ್ನು ಹೊರಡಿಸುತ್ತಾ ಬಂದಿರುವ ತಮಗೆ ಕೆಲವು ಸಂಗತಿಗಳನ್ನು ಸೂಚಿಸುವುದು ನಮ್ಮ ಆದಿ ಕರ್ತವ್ಯವೆಂದು ತಿಳಿದು ಬಂದದ್ದರಿಂದ ಈ ಲೇಖನವನ್ನು ಬರೆಯ ತೊಡಗಿದ್ದೇವೆ.

ಯಾವ ಪತ್ರಿಕಾಕರ್ತರಾದರೂ ಪತ್ರಿಕೆಯನ್ನು ಹೊರಡಿಸುವುದರಲ್ಲಿ ಕೆಲವು ಉದ್ದೇಶಗಳನ್ನೂ ಸಂಕಲ್ಪಗಳನ್ನೂ ಇಟ್ಟುಕೊಂಡಿರುವರೆಂಬುದು ತಮಗೆ ತಿಳಿಯದ ವಿಷಯವಲ್ಲ. ಅವರು ತಮಗೆ ಬರುವ ಪ್ರತಿಯೊಂದು ಲೇಖನವನ್ನೂ ವಿಮರ್ಶಿಸಿ ಒರೆಗಲ್ಲಿಗೆ ಹಚ್ಚಿ ಆ ಲೇಖನದ ಉದ್ದೇಶವು ತಮ್ಮ ಉದ್ದೇಶದೊಡನೆ ಸರಿ ಬಂದರೆ ಅದನ್ನು ಪ್ರಕಟಿಸುವರು. ಒಂದು ವೇಳೆ ತಮಗೆ ಬಂದ ಲೇಖನವು ಚರ್ಚಾಸ್ಪದವಾಗಿದ್ದರೆ ತಮ್ಮ ಸಂಕಲ್ಪಕ್ಕೆ ಅನ್ವಯಿಸಬಾರದಾಗಿದ್ದರೂ, ಅದನ್ನು ಪ್ರಕಟಿಸಿ ಅದರ ಬಗ್ಗೆ ಅಲ್ಲೇ ತಮ್ಮ ಭಿನ್ನಾಭಿಪ್ರಾಯವನ್ನು ಸೂಚಿಸುವರು. ನೀವು ಪತ್ರಿಕೆಯನ್ನು ಹೊರಡಿಸುವುದರಲ್ಲಿ ಕೆಲವೊಂದು ಉದ್ದೇಶಗಳನ್ನಿಟ್ಟುಕೊಂಡಿರುವಿರಿ. ಸದ್ಯಃ ನೀವು.

೧. ಈ ಲೇಖನಕ್ಕೆ ತಮ್ಮ ಪತ್ರಿಕೆಯಲ್ಲಿ ಎಡೆಕೊಟ್ಟುದು.

೨. ಇದರ ಅಭಿಪ್ರಾಯದ ಬಗ್ಗೆ ತಮ್ಮ ಅಸಮ್ಮತಿಯನ್ನು ಸೂಚಿಸದೆ ಇರುವುದು.

೩. ಎಷ್ಟೋ ಲೇಖನಗಳು ಅಲ್ಲಿ ಇಲ್ಲಿ ಸಣ್ಣ ಅಕ್ಷರಗಳಿಂದ ಕಂಡೂ ಕಾಣದಂತೆ ಇರುವಾಗ ಇದಕ್ಕೆ ಮಾತ್ರ ಪ್ರಥಮ ಪುಟದಲ್ಲೇ ಆಶ್ರಯ ಕೊಟ್ಟು ದೊಡ್ಡ ಅಕ್ಷರಗಳಿಂದ ಪ್ರಕಟಿಸಿರುವುದು.

ಈ ಎಲ್ಲಾ ಕಾರಣಗಳಿಂದ ನಿಮ್ಮ ಉದ್ದೇಶವೂ ಸದರಿ ಲೇಖನದ ಉದ್ದೇಶವೂ ಒಂದೆ ಆಗಿರುವುದೆಂದು ಗೊತ್ತಾಗಿರುವುದು ಮಾತ್ರವಲ್ಲ, ಇದನ್ನು ಎತ್ತಿ ಹಿಡಿಯುವುದು ಆಗಿರುತ್ತದೆಂದು ಗೊತ್ತಾಗುವಂತಿದೆ.

ಈ ಭಾವನೆಯು ನಿಜವಾಗಿದ್ದಲ್ಲಿ ನೀವು ಇದರಿಂದ ವೀರಶೈವ ಸಮಾಜವನ್ನು ಉದ್ಧಾರಮಾಡುವುದಕ್ಕೆ ಬದಲಾಗಿ ನಿರ್ನಾಮಗೊಳಿಸಲು ಅವಕಾಶಕೊಟ್ಟಂತಾಗುತ್ತದೆ. ಏಕೆಂದರೆ, ಇದರಿಂದ ಹಿಂದೂ ಮುಸಲ್ಮಾನರಲ್ಲಿ ಭಾರತೀಯರಿಂದ ಮಾತ್ರವಲ್ಲ. ಇಡೀ ಜಗತ್ತಿನ ಎಲ್ಲಾ ಧರ್ಮದವರಿಂದಲೂ ಏಕಕಂಠದಿಂದ ಯಾವನು ಮಹಾನುಭಾವನೆಂದು, ಧರ್ಮಾವತಾರನೆಂದು ನಂಬಲ್ಪಟ್ಟಿರುವನೋ ಆ ಮಹಾನುಭಾವನು ಭಾರತದೇಶದ ೩೩ ಕೋಟಿ ಮಾನವರ ಕಲ್ಯಾಣಕ್ಕಾಗಿ ಪ್ರಾರಂಭಿಸಿದ ಈ ನಿಸ್ವಾರ್ಥತೆಯ ಕೃತಿಗೆ ಭಾರತ ಮಾತೆಯ ಮುಖ್ಯಾಂಗದಂತಿರುವ ಈ ವೀರಶೈವ ಸಮಾಜವು ಸಹಾನುಭೂತಿಯನ್ನು ತೋರಿಸಲಿಲ್ಲವೆಂಬ ಅಪವಾದ ಬರಲು ಅವಕಾಶವಾಗುತ್ತದೆ. ಜಗತ್ಪೂಜ್ಯನಾದ ಆ ಮಹಾತ್ಮನನ್ನು ಕಣ್ಮುಚ್ಚಿ ನಿಂದಿಸುವ ವ್ಯಕ್ತಿಗಳಿಗೆ ಪ್ರೋತ್ಸಾಹಕೊಟ್ಟಂತೆ ಹೇಳಲೆಡೆಗೊಟ್ಟಂತಾಗುತ್ತದೆ. ಅಲ್ಲದೆ ಭಾರತ ಜನಾಂಗದ ಎಲ್ಲ ಧರ್ಮಗಳ ಮೂಲತತ್ವಗಳಿಗೆ ಆಗರವಾದ ವೀರಶೈವವು ಇಂದು ಈ ವಿಚಾರದಲ್ಲಿ ಅಸಮ್ಮತಿಯನ್ನು ತೋರಿಸಿದರೆ ಈಗಲೇ ಒಳಧರ್ಮಗಳ ಕ್ರೌರ್ಯದಿಂದ ಪರಮತೀಯರ ಹಾವಳಿಯಿಂದ ಇಷ್ಟು ಅಧೋಗತಿಯನ್ನು ಹೊಂದಿರುವ ಈ ಮತವು ಮುಂದೆ ಇನ್ನಳಿದ ಭಾರತ ಜನಾಂಗದವರಿಂದಲೂ, [illegible] ವರಿಯುತ್ತಾ ಧರ್ಮವು ಪ್ರಗತಿಯು[illegible] ತೋರ್ಪಡಿಸಿರುವಾಗ, ನಾವು ಹೀಗೆ ಸಂಕುಚಿತಭಾವರಾಗಿ ಸುಮ್ಮನೆ ಕುಳಿತರೆ ನಮಗೆಂದಿಗೂ ಶ್ರೇಯಸ್ಸಾಗಲಿಕ್ಕಿಲ್ಲ. ನಮ್ಮಂಥವರು ಎಷ್ಟು ಕೋಟಿಗಳನ್ನು ಹಾಕಿದರೆ ತಾನೇ ಒಬ್ಬ ಮಹಾತ್ಮನ ಸರಿಯಾದೀತೆ? ನಮಗೆ ಸಹಸ್ರಪಾಲು ಮಿಗಿಲಾದ ಧರ್ಮಾತ್ಮ ಮಾಲವೀಯರಂಥವರೂ ಮಹಾತ್ಮರ ಧರ್ಮವೇ ಸತ್ಯವೆಂದು ನಿಜವೆಂದು ಕಂಡು ಅದಕ್ಕೆ ಸ್ವಾಗತ ಕೊಟ್ಟಿರುವುದನ್ನು ನೋಡಿಯಾದರೂ ತಿಳಿಯಬಾರದೆ? ಆದ್ದರಿಂದ ನಾವು ಭಾವಿಸಿರುವಂತೆ ನಿಜವಾಗಿಯೂ ನಿಮಗೆ ಆ ನಿಂದೆಯ ಲೇಖನದ ಅಭಿಪ್ರಾಯದಲ್ಲಿ ಅಸಮ್ಮತಿಯಿದ್ದರೆ ದಯವಿಟ್ಟು ನಮಗಾಗಿ, ನೀವು ಹುಟ್ಟಿ ಬೆಳೆದ ವೀರಶೈವದ ಶ್ರೇಯಸ್ಸಿಗಾಗಿ, ಇಡೀ ಭಾರತ ಜನಾಂಗದ ಸುಖಕ್ಕಾಗಿ ಅದನ್ನು ಬಿಟ್ಟುಬಿಡಿ; ಮಹಾತ್ಮರು ಕೈಕೊಂಡಿರುವ ಧರ್ಮಸಂಗ್ರಾಮದ ಬಗ್ಗೆ ತಮ್ಮ ಸಹಾನುಭೂತಿಯನ್ನು ತೋರಿಸುವ ಲೇಖನವೊಂದನ್ನು ಮುಂದಿನ ಸಂಚಿಕೆಯಲ್ಲಿಯೇ ಬರೆದು ಇದರ ಪರಿಹಾರಮಾಡಿಕೊಳ್ಳಿರಿ, ಮತ್ತು ಮುಂದೆ ಇಂಥಾ ನಿಂದೆಯ ಲೇಖನಗಳಿಗೆ ಅವಕಾಶ ಸಿಗುವುದಿಲ್ಲವೆಂಬುದನ್ನು ಪ್ರಕಟಿಸಿ ಪುಣ್ಯಭಾಗಿಗಳಾಗಿರಿ. ಬಸವಾದಿಗಳ ನಿಂದೆಯಿಂದ ಮತ್ತು ಅಂಥದಕ್ಕೆ ಆಶ್ರಯಕೊಡುವುದರಿಂದ ಸಮಾಜದ ಒಂದು ಭಾಗ ನಾಶವಾದರೆ ಇಂಥಾ ವಿಚಾರಗಳಿಂದ ಇಡೀ ಸಮಾಜವೇ ಹಾಳಾಗುತ್ತದೆ. ಈ ಕಾರಣದಿಂದ ನಾವಿಷ್ಟು ಬೇಡಬೇಕಾಯಿತು. ಆದ್ದರಿಂದ ನಾವು ಪೂರ್ಣವಾದ ಆಸೆ ನಂಬಿಕೆಗಳಿಂದ ತಮ್ಮ ಮುಂದಿನ ಪತ್ರಿಕೆಗಳನ್ನೇ ಇದಿರು ನೋಡುತ್ತಿರುವೆವು. ಅದರಲ್ಲಿ ಆ ಸನಾತನ ಧರ್ಮಾಭಿಮಾನಿಯ ಲೇಖನದ ಬಗ್ಗೆ ತಮ್ಮ ಸಹಾನುಭೂತಿ ಇಲ್ಲವೆಂಬ ಅಂಶವನ್ನು ತಾವು ಸ್ಪಷ್ಟವಾಗಿ ಸೂಚಿಸಿದಿದ್ದಲ್ಲಿ ಈ ಪತ್ರವನ್ನು ಪ್ರಕಟಿಸುವುದಲ್ಲದೆ, ತಮ್ಮ ಪತ್ರಿಕೆಯನ್ನು, ಸಮಾಜನಾಶಕ್ಕೆ ಹೇತುವಾದುದೆಂದು ಬಹಿಷ್ಕರಿಸುವ ಪತ್ರಿಕೆಗಳಲ್ಲೊಂದಾಗಿ ಪರಿಗಣಿಸಿ ಜನಜಾಗೃತಿಯನ್ನುಂಟುಮಾಡುವುದು ಸಮಾಜೋತ್ಕರ್ಷ ಸಾಧಕ ಸಂಘದವರಾದ ನಮ್ಮ ಕರ್ತವ್ಯವಾಗುತ್ತದೆ, ತಿಳಿಯುವದು. ನಿಮ್ಮಂಥವರಿಂದ ಸಮಾಜೋದ್ಧಾರವಾಗಬೇಕೆಂದು ಪೂರ್ಣ ನಂಬಿರುವ ನಮ್ಮಗಳ ಆಶೆಯು ನಿರಾಶೆಯಾಗದಂತೆ ವರ್ತಿಸುವಿರೆಂದು ನಂಬಿದ್ದೇವೆ.

ಬೆಂಗಳೂರು. | ವೀರಶೈವ ಸಮಾಜೋತ್ಕರ್ಷ ಸಾಧಕ ಸಂ.
ತಾ. ೧-೧-೩೩. | ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರು.

ಸೂಚನೆ—ಈ ಲೇಖನವು ಪಂಚಾಚಾರ್ಯಪ್ರಭಾಪತ್ರಿಕೆಯಲ್ಲಿಯೇ ಪ್ರಕಟವಾಗಿ ಈ ವಿಷಯದಲ್ಲಿ ಆ ಪತ್ರಿಕಾಕರ್ತರು ತಮ್ಮ ಅಭಿಪ್ರಾಯವನ್ನು ಸೂಚಿಸಬೇಕಾಗಿದ್ದುದೇ ನ್ಯಾಯವಾಗಿದ್ದಿತು. ಆದುದರಿಂದ ಆ ಪತ್ರಿಕಾಕರ್ತರ ಕಡೆಗೇನೇ ಈ ಲೇಖನ ಕಳುಹಿಸಿರೆಂದು ಮೊದಲು ಆ ಸಂಘದವರಿಗೆ ನಾವು ತಿಳುಹಿಸಿದ್ದೆವು.

ತಾವು ಕಳುಹಿಸಿದ ಈ ಲೇಖನವನ್ನು ಆ ಪತ್ರಿಕಾಕರ್ತರು ಪ್ರಕಟಿಸಿಲ್ಲವೆಂದು ಆ ಸಂಘದವರು ತಿಳಿಸಿದ್ದರಿಂದಲೂ ಇದು ಸಾರ್ವಜನಿಕ ವಿಷಯವಾಗಿರುವುದರಿಂದಲೂ ವಿಚಾರ ಸ್ವಾತಂತ್ರ್ಯಕ್ಕೆ ನ್ಯಾಯವಾದ ಅವಕಾಶವಿರುವುದು ವಿಹಿತವಾಗಿರುವುದರಿಂದಲೂ ಈ ಲೇಖನವನ್ನು ಪ್ರಕಟಿಸಿದ್ದಾಗಿದೆ.

ಸಂಪಾದಕ.

ಪ್ರಕಟಣೆ.

ದಿ ಗಾಯಿಡ ರೇಲ ರೋಡ ಫೀಡರ್ ಲಾಯನ್ಸ ಕಂಪನಿ ಲಿಮಿಟೆಡ್ ಆಲಮಟ್ಟಿ,

(ಜಿ. ವಿಜಾಪುರ)

ಅಧಿಕೃತ ಭಾಂಡವಲ ೮,೦೦,೦೦೦ (ಎಂಟು ಲಕ್ಷ) ರೂಪಾಯಿ ೧೯೧೩ನೇ ಇಸವಿಯ ಇಂಡಿಯನ್ ಕಂಪನಿ ಆಕ್ಟ ನಂಬರ ೧೩ನೇಪ್ರಕಾರ ರಜಿಸ್ಟರ ಆಗಿರುತ್ತದೆ.

ಸದರ್ನ ಮರಾಠಾ ರೇಲ್ವೆಯ

(೧) ಆಲಮಟ್ಟಿ ಸ್ಟೇಶನದಿಂದ ಮುದ್ದೇಬಿಹಾಳ ಮೇಲಿಂದ ಹಾಯ್ದು ತಾಳೀಕೋಟೆ ವರೆಗೆ ಸುಮಾರು ೩೩ ಮೈಲು ಮತ್ತು (೨) ಬಾಗಲಕೋಟೆ ಸ್ಟೇಶನ್ನಿನಿಂದ ಕಮತಗಿ ಅಮೀನಗಡ ಮತ್ತು ಹುನಗುಂದ ವ್ಯಾಪಾರೀ ಸ್ಥಳಗಳ ಮೇಲಿಂದ ಹಾಯ್ದು ಇಲಕಲ್ಲದ ವರೆಗೆ ಸುಮಾರು ೪೦ ಮೈಲು.

ಈ ಪ್ರಕಾರ ೨ ಶಾಖೆಗಳನ್ನು ಸುಲಭ ಮತ್ತು ಅಲ್ಪ ಖರ್ಚಿನಿಂದ ಗಾಯಿಡ್‌ರೇಲ್ ರೋಡುಗಳನ್ನು ಹಾಕಿ, ಇಂಥ ವ್ಯಾಪಾರ ಸ್ಥಳಗಳ ಮತ್ತು ರೇಲ್ವೆ ಸ್ಟೇಶನುಗಳಿಂದ ದೂರ ಇರುವ ದೊಡ್ಡ ಮತ್ತು ಮಹತ್ವವಾದ ಊರುಗಳಿಗೆ ಮತ್ತು ಆಯಾಯ ಊರುಗಳಿಂದ ತಿರುಗಿ ಪ್ರವಾಸಿಕರನ್ನೂ, ಮಾಲುಗಳನ್ನೂ ಅಲ್ಪ ಖರ್ಚಿನಲ್ಲಿ ಹಾಗೂ ಅಲ್ಪವೇಳೆಯಲ್ಲಿ ಒಯ್ಯುವ ಮತ್ತು ತರುವುದಕ್ಕಾಗಿ ಈ ಕಂಪನಿಯು (ಸಂಘವು) ಸ್ಥಾಪಿಸಲ್ಪಟ್ಟಿದೆ.

ಈ ರೀತಿಯಿಂದ ಗಾಯಿಡ ರೇಲ ರೋಡದಿಂದ ಪ್ರವಾಸಿಕರನ್ನೂ ಮತ್ತು ಸರಕುಗಳನ್ನೂ ರೇಲ್ವೆಯಿಂದ ಇಷ್ಟುದೂರ ಇರುವ ವ್ಯಾಪಾರೀ ಸ್ಥಳಗಳಿಗೆ ಒಯ್ಯುವದು ಮತ್ತು ತರುವದು ಆದಲ್ಲಿ ಆತ್ತಕಡೆಗೆ ವ್ಯಾಪಾರವು ಹೆಚ್ಚಾಗಿ ಹಿಂದುಳಿದ ಆ ಭಾಗಗಳಿಗೆ ದಿನೇದಿನೇ ಅಭ್ಯುದಯವು ಉಂಟಾಗುವದು.

ಈ ಕಂಪನಿಯ ಶೇರುಗಳನ್ನು ತಕ್ಕೊಂಡರೆ ಅವುಗಳಮೇಲಿನ ಲಾಭವು ದರ ಒಂದುನೂರಕ್ಕೆ ದರ ಒಂದು ವರ್ಷಕ್ಕೆ ೮ ರೂಪಾಯಿಕ್ಕಿಂತ ಕಡಿಮೆ ಬೀಳಲಿಕ್ಕಿಲ್ಲವೆಂದು ಅಂದಾಜ ಅದೆ. ಮಾತ್ರ ಈ ಗಾಯಿಡ ರೇಲ ರೋಡದ ಮೇಲೆ ಸಾರ್ವಜನಿಕ ಉಪಯೋಗದ ದೆಶೆಯಿಂದ ಗಾಡಿಗಳು ಸುರು ಆದ ತಾರೀಖಿನಿಂದ ಫಾಯಿದೆಯು ಆಕರಿಸುವದರಲ್ಲಿ ಬರುವದು.

ಒಂದು ನೂರು ರೂಪಾಯಿಯ ಶೇರುಗಳು ೬ (ಆರು) ಸಾವಿರ ತೆಗೆಯಲ್ಪಟ್ಟಿವೆ. ಮತ್ತು ಹತ್ತು ರೂಪಾಯಿಯ ೨೦ (ಇಪ್ಪತ್ತು) ಸಾವಿರ ಶೇರುಗಳು ತೆಗೆಯಲ್ಪಟ್ಟಿವೆ,

ಪ್ರತಿಯೊಂದು ನೂರು ರೂಪಾಯಿ ಶೇರಿನ ಬಗ್ಗೆ ಅರ್ಜಿ ಕೂಡ ೪೦ ರೂಪಾಯಿ, ಮುಂದೆ ೨ ತಿಂಗಳ ನಂತರ ೩೦ ರೂಪಾಯಿ, ಆ ಮೇಲೆ ಮತ್ತೂ ೨ ತಿಂಗಳ ನಂತರ ೨೦ ರೂಪಾಯಿ ಅನಂತರ ೨ ತಿಂಗಳಾದ ಮೇಲೆ ಉಳಿದ ೧೦ ರೂಪಾಯಿ ಕೊಡತಕ್ಕದ್ದು.

ಈಗಿನ ಕಾಲದಲ್ಲಿ ಎಲ್ಲತರದ ಹಳೇ ಧಂದೆಗಳೂ (ಗಿರಣಿಗಳೂ ಮೋಟರ ನಡೆಯಿಸುವದೂ, ವಗೈರೆ) ಬಹಳಾದ್ದರಿಂದ ಮತ್ತು ಒಬ್ಬರ ಮೇಲೊಬ್ಬರ ಮೇಲಾಟದಿಂದ ಲುಕ್ಸಾನದ ಮಾರ್ಗಕ್ಕೆ ಹತ್ತಿರುತ್ತವೆ. ಇಂಥ ವೇಳೆಯಲ್ಲಿ ಇಡೀ ಹಿಂದುಸ್ಥಾನಕ್ಕೆ ಉದಾಹರಣೆಯಾಗುವಂತೆ ದೊಡ್ಡದೊಡ್ಡ ರೇಲ್ವೆಗಳಿಗೆ ಈ ಗಾಯಿಡ ರೇಲ ರೋಡದ ಶಾಖೆಗಳನ್ನು ತಯಾರಮಾಡಿ ಅಗದಿ ಹೊಸದಾದಂಥ ಒಂದು ಧಂದೆಯನ್ನು ಜನರ ಮುಂದೆ ಇಡಬೇಕೆಂದು ಈ ಕಂಪನಿಯ ಉದ್ದೇಶವಿರುತ್ತದೆ. ಇಂಥ ರೇಲ್ವೆಗಳಲ್ಲಿ ಮಿತವ್ಯಯೀ ಜನರಿಗೆ ಮತ್ತು ಭಾಂಡವಲವಿದ್ದವರಿಗೆ ತಮ್ಮ ಭಾಂಡವಲವನ್ನು ಫಾಯಿದೇಶೀರ ರೀತಿಯಿಂದ ತೊಡಗಿಸಲಿಕ್ಕೆ ಸಾಕಷ್ಟು ಅವಸರವಿರುತ್ತದೆ. ಮತ್ತು ಅನುದ್ಯೋಗಿ ಜನರಿಗೆ ಬೇಕಾದಷ್ಟು ಕೆಲಸ ಸಿಗಲಿಕ್ಕೆ ಸಮಯವಿರುತ್ತದೆ.

ಮೇಲಾಗಿ ಈ ಪ್ರಕಾರ ತಯಾರ ಮಾಡಿದ ಗಾಯಿಡ ರೇಲ ರೋಡದ ಎಲ್ಲ ಹಕ್ಕುಗಳು ರೇಲ್ವೆಗಳಂತೆ ಸಾರ್ವಜನಿಕವಾಗುವವು. ಹೊಸತರದ ಮತ್ತು ಅಲ್ಪ ಖರ್ಚಿನಿಂದ ಆಗುವ ಈ ಗಾಯಿಡ ರೇಲ ರೋಡುಗಳ ಶಾಖೆಗಳನ್ನು ತಯಾರ ಮಾಡುವದೂ ಅವುಗಳನ್ನು ನಡಿಸುವುದೂ ಮುಂತಾದ ಎಲ್ಲತರದ ವ್ಯವಸ್ಥೆಗಳು ಶೇರ ಹೋಲ್ಡರರ ಕೈಯಲ್ಲಿಯೇ ಇರುವವು.

ಆದ್ದರಿಂದ ಎಲ್ಲಜನರಿಗೆ ಈ ಕಂಪನಿಯ ಡಾಯರೆಕ್ಟರರ ಅಗ್ರಹದ ವಿನಂತಿ ಏನಂದರೆ—

ಎಲ್ಲರೂ ಏಕಮನಸ್ಸಿನಿಂದ ಈ ಲೋಕೋಪಯೋಗದ ಕೆಲಸಕ್ಕೆ ಶೇರುಗಳನ್ನು ಯಥಾಶಕ್ತಿ ತಕ್ಕೊಂಡು ಸಹಾಯಮಾಡಬೇಕು.

ಕಂಪನಿ 'ಪ್ರಾಸ್ಪೆಕ್ಟಸದ' ಶೇರುಗಳನ್ನು ತಕ್ಕೊಳ್ಳಬೇಕಾಗುವ ಅರ್ಜಿ ನಮೂನೆಗಳ ದೆಶೆಯಿಂದ ದಿ. ಮ್ಯಾನೇಜಿಂಗ ಡಾಯರೆಕ್ಟರ ಆಲಮಟ್ಟಿ ಜಿಲ್ಹಾ ವಿಜಾಪೂರ ಇವರಿಗೆ ಬರೆದು ತರಿಸಿಕೊಳ್ಳಬೇಕು.

ಆಲಮಟ್ಟಿ. (ಸಿ. ಸ್ಕೆಲ್ಟನ್
ತಾ, ೧೨-೧-೧೯೩೩. (ಮ್ಯಾನೇಜಿಂಗ್ ಡಾಯರೆಕ್ಟರ್.

ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು. ೨. ಕನ್ಯೆಯ ವಯಸ್ಸು ೧೫ ಅಥವಾ ೧೬ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ವಿಶೇಷ ಶಿಕ್ಷಣ ಪಡೆಯದಿದ್ದರೂ ಚಿಂತೆಯಿಲ್ಲ. ಶರಣರ ವ ಚ ನ ಗ ಳ ನ್ನು ಸ್ವಲ್ಪರಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೮ ವಿದ್ಯಾವಂತನು, ವೀರಶೈವನು, ದಿಕ್ಷಾಬಳಿಕೆ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ಪಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು. ಶಕ್ಯವಿದ್ದರೆ ಕನ್ಯೆಯ ಫೋಟೊ ಕಳಿಸಬೇಕು,

ಪತ್ತೆ—ಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲಸ್ಕೂಲ್
ಪೋ. ನಾರಾಯಣಪೇಟ. ನಿಜಾಂ ಸಂಸ್ಥಾನ

ವ್ಯಾಪಾರ ಶಿಕ್ಷಕ.

ಈ ಪುಸ್ತಕವು ಅಚ್ಚಾಗುತ್ತಲಿದೆ. ಸಂಪೂರ್ಣವಾದನಂತರ ಶರಣ ಸಂದೇಶ ಪತ್ರಿಕೆಗೆ ಈ ವರುಷ ಚಂದಾದಾರರಾಗಿರುವವರಿಗೆಲ್ಲರಿಗೂ ತಪ್ಪದೇ ಕಳುಹಿಸಲಾಗುವುದು, ಬೇರೆಯವರಿಗೆ ಈ ಪುಸ್ತಕವನ್ನು ವಿಕ್ರಯಿಸುವುದಿಲ್ಲ, ಆದಕಾರಣ ಬೇರೆಯವರಾಗಲಿ ಅಥವಾ ಚಂದಾದಾರರಾಗಲಿ ಪುಸ್ತಕವನ್ನು ಕಳುಹಿಸಲು ವೃಥಾ ಪತ್ರಗಳನ್ನು ಬರೆಯಬಾರದಾಗಿ ಪ್ರಾರ್ಥನೆ.

ಮ್ಯಾನೇಜರ್,

೫॥ ರೂಪಾಯಿಗೆ ಐಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ಹಚ್ಚಾಗಿ ಗಳಿಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಅತಿಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

ತ್ರಿರುವಾಂಕೂರು ಅಲೈಯನ್ಸ್ ಬ್ಯಾಂಕಿನ

ರೂ. ೫॥ **ಬೋನಸ್ ಬಾಂಡ್.** ರೂ. ೫॥

ಈ ಒಂದು ಬಾಂಡಿನಿಂದ ರೂ. ೩೦೦೦, ೨೦೦೦, ೧೦೦೦, ಇತ್ಯಾದಿ ಇನಾಮುಗಳನ್ನು ಪಡೆಯಲು

೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧। ಆಣೆಯ ಸ್ಟಾಂಪು ಇಟ್ಟು ಬರೆಯಿರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ. ಎಸ್. ಕುರುವತ್ತಿ, ದಾವಣಗೆರೆ.

ಭಾಸ್ಕರ ಪ್ರಕಾಶ—ಬಟ್ಟೆ ಸ್ವಚ್ಛವಾಗುವ ೧೨ ಚೀಟು ೮ ಆಣೆ.

ಮಾಸ್ಕಿಟೋರಿಯಲ್—ಗುಂಗಾಡ ನಾಶ ೧೨ ಚೀಟು ೮ ಆಣೆ.

ಚೇಳಿನ ನಾಶ—೧೨ ಚೀಟು ೬ ಆಣೆ.

ತಗಣಿಯ ಶತ್ರು—ಒಂದು ಬಾಟ್ಲಿ ೮ ಆಣೆ.

ಎಲ್ಲ ಮಾಲಿನ ನಮೂನೆ ೧ ರೂಪಾಯಿ ವ್ಹಿ. ಪಿ. ಯಿಂದಾ ೧೯೩೩ ಕ್ಯಾಲೆಂಡರ್ ಸಹ ಮನೆ ಸೇರುವದು.

ಭಾಸ್ಕರ ಪ್ರಕಾಶ ವರ್ಕ್ಸ್,
ಪೋ. **ಹಂಚಲಿ.**
ಜಿ. ವಿಜಾಪುರ

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪-೦-೦
೨೫ ,, ಯುರೋಪ ,,
೨೫ ,, ಹೂವಿನ ಬೀಜಗಳು

೧ ಪಿ. ಎಂ. ಏವಾಳಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರಪತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಕಳಕುಸ್ವತ ಮಾದಲು.

ಎಚ್ಚರಾಗಿರಿ!

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಜವಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿದ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜೂರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟೆರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟೆರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ —ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟೆರು—ಏನು ಹೇಳಲಪ್ಪಾ ರಾಮುಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ. ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂವಾ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡು ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ,** ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತಃ ಜನರ ಅನ್ರಿ ನಾಲ್ಕು ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟೆರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶರಣಸಂದೇಶ ಪತ್ರಿಕೆಯು ಚಂದಾದಾರರಿಗೆ ಮಾತ್ರ

ಬಹು ಪ್ರಯೋಜನ!!

“ಒಂದು ಅಪೂರ್ವವಾದ

‘ಶಿಕ್ಷಕ.’’

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
೨ ಬಿ. ಎನ್. ಕುರಪತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.



ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಜವಳ್ಯಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಅಫೀಸ್:-
ಅಬಿಡ್ಡ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಯಾಗಿ ತಿಜೋರಿ ಕೊಳ್ಳುವವಲ್ಲವೇ?

ರಾಮುಜಿ —ಹಾಗಾದರೆ ಹೀಂಗ್ಯಾಕಾಯಿತು?

ಶೆಟ್ಟರು—ಏನು ಹೇಳಲಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಜೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರು, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲವರನ್ನ ಕೇಳಬೇಕನ್ನೊ್ರದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ,** **ಹುಬ್ಬಳ್ಳ್ಯಾಗ** ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಪಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ **ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುನಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶರಣಸಂದೇಶ ಪತ್ರಿಕೆಯ ಚಂದಾದಾರರಿಗೆ ಮಾತ್ರ

ಬಹು ಪ್ರಯೋಜನ!!

"ಒಂದು ಅಪೂರ್ವವಾದ

'ಶಿಕ್ಷಕ."

REGISTERED No. B 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ। ಲೋಕವಿರೋಧಿ। ಶರಣನಾರಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೮ ॥ ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨.	ಆಲಮಟ್ಟಿ- ಸೋಮವಾರ ತಾರೀಖು ೨ ನೆಯ ಜನವರಿ ೧೯೩೩.	ಸಂಚಿಕೆ ೨೦

ಜನಸೇವೆಯೇ ದೇವರ ಸೇವೆ

ಗಾಂಧೀಜಿಯವರು ಉಪವಾಸವನ್ನು ನಿಲ್ಲಿಸಿದರು.

ಶ್ರೀ. ರಾಜಗೋಪಾಲಾಚಾರ್ಯರ ಪ್ರಕಟನೆ.

ಡಾಕ್ಟರ ಸುಬ್ಬರಾಯನ್‌ರವರು ಕೌನ್ಸಿಲ್ಲಿನಲ್ಲಿ ತರುವ ದೇವಾಲಯ ಪ್ರವೇಶ ಸಂಬಂಧವಾದ ಗೊತ್ತುವಳಿಗೆ ಸರಕಾರದ ಒಪ್ಪಿಗೆ ದೊರೆಯುತ್ತದೆಯೋ ಇಲ್ಲವೋ ಎಂಬುದನ್ನು ಗಾಂಧೀಜಿಯವರು ನಿರೀಕ್ಷಿಸುತ್ತಿದ್ದಾರೆ. ಆದುದರಿಂದ ಗಾಂಧೀಜಿಯವರ ಉಪವಾಸವು ಅನಿಶ್ಚಿತ ಕಾಲದವರೆಗೆ ನಿಲ್ಲಿಸಿದ್ದಾಗಿದೆ.

ತಾ. ೨೮-೧೨-೩೨.

ದೇಹ... ದೇವಾಲಯ

SANGAM CLOTH STORES
Prop: M. S. Hundekar & Sons.
P.O: TERDAL - 587 315
Dt. Bijapur, (Karnataka)

ಕಳ್ಳರ ಭಯವಿಲ್ಲ ! ಬೆಂಕಿಯ ಕಾಟವಿಲ್ಲ!!

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ ಆ್ಯಂಡ್ ಸನ್ಸ್

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ್, ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ.

ಬ್ರ್ಯಾಂಚ್ ಆಫಿಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ದಾಗೀನೆ ಮುತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಸತ್ವ ಪರೀಕ್ಷೆಯು ತಾ. ೨೪ನೇ ಡಿಶೆಂಬರ ೧೯೩೨ನೇ ಇಸವಿ ದಿವಸ ಸದರ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ವಂಕಿ ಒಂದು ಸರಪಳಿ ಜತ್ತಿ ಒಂದು ಹತ್ತು ರೂಪಾಯದ ನೋಟು ಒಂದು ನಂ. K. 11, 570153 ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಶಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧|| ಖಂಡೀ—

—ಕಟ್ಟಿಗೆಯಲ್ಲಿ ೧|| ತಾಸಿನ ವರೆಗೆ ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ಯತೆ ಮತ್ತು ಭದ್ರತೆಗಳನ್ನು ತೋರಿಸಿದರು. ಅ. ಭಾ. ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಇದಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮತರಗತಿಯ ತ್ರಿಜೋರಿಯ ಕಾರ್ಖಾನೆಯವರೆಂದೆನಿಸಿಕೊಂಡು ಬಂಗಾರದ ಮೆಡಿಲು ಮತ್ತು ಸರ್ಟಿಫಿಕೇಟ ಹೊಂದಿದೆ. ಮತ್ತು ತಿಜೋರಿಗೆ ಹಾಕುವ ಯಾವತ್ತು ಕೀಲಿಗಳನ್ನು ವ ನಂಬರ್‌ಲಾಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

(೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಜನವರಿ ತಾರೀಖು ೨ ನೆಯ ಸೋಮವಾರ | ಸಂಚಿಕೆ ೨೦.

ಕರ್ಮವೀರ ಕೆಲಪ್ಪನ್‌ರವರ ಅಭಿಪ್ರಾಯ.

ಮಹಾತ್ಮಾಜಿ ಮತ್ತು ಕೆಲಪ್ಪನ್‌ರು.

ಗುರುವಾಯೂರ ಮಂದಿರ ಪ್ರವೇಶದ ಸತ್ಯಾಗ್ರಹದಿಂದ ಸಾರ್ವತ್ರಿಕವಾಗಿ ವಿಖ್ಯಾತರಾದ ಕರ್ಮವೀರ ಕೆಲಪ್ಪನ್‌ರವರು ಶ್ರೀ. ಮಾಧವನ್ ಮತ್ತು ರಾಜಗೋಪಾಲಾಚಾರ್ಯರೊಡನೆ ೨೮ನೇ ತಾರೀಖಿನ ಬೆಳಿಗ್ಗೆ ಮಹಾತ್ಮಾಜಿಯವರನ್ನು ಕಾಣಲು ಪುಣೆಗೆ ಹೋಗಿದ್ದರು. ಇವರ ಸ್ವಾಗತಾರ್ಥವಾಗಿ ಸ್ಟೇಶನ್ನಿಗೆ ಮಹಾತ್ಮಾಜಿಯವರ ಪುತ್ರರಾದ ಶ್ರೀ. ದೇವಿದಾಸ ಗಾಂಧಿ, ಶ್ರೀ. ಪ್ಯಾರೇಲಾಲ, ಅಸ್ಪೃಶ್ಯರ ಮುಂದಾಳುಗಳಾದ ರಾಜಭೋಜ ಮೊದಲಾದವರು ಬಂದಿದ್ದರು. ಎಲ್ಲರೂ ಮೋಟಾರಿನಿಂದ ಯರವಡಾ ಮಂದಿರದ ಹತ್ತಿರದಲ್ಲಿರುವ ಲೇಡಿ ಠಾಕರಸಿಯವರ ವರ್ಣಕುಟೀರಕ್ಕೆ ಹೋಗಿ ಅಲ್ಲಿ ವಾಸವಾಗಿದ್ದರು.

ಪತ್ರಿಕೆಯ ಪ್ರತಿನಿಧಿಗಳು ತಾ ೨೯ನೆಯ ದಿವಸ ಶ್ರೀ. ಕೇಲಪ್ಪರವರಿಗೆ ಗುರುವಾಯೂರು ಮಂದಿರದ ವಿಷಯವಾಗಿ ವಿಚಾರಿಸಲಾಗಿ ಅವರು ಈ ಪ್ರಕಾರ ಹೇಳಿದರು.—

“ನಾವು ಉಪವಾಸವನ್ನು ನಿಲ್ಲಿಸಿದ್ದೇವೆ. ಮದ್ರಾಸ್ ಕೌನ್ಸಿಲ್ಲಿನಲ್ಲಿ ಡಾ. ಸುಬ್ಬರಾಯನ್‌ರವರು ತಂದ ಬಿಲ್ಲಿನ ನಿರ್ಣಯವು ಹೇಗಾಗುವದೆಂಬುದನ್ನು ನಾವು ಮೊದಲು ನೋಡುವವರಿದ್ದೇವೆ. ವ್ಹಾಯಿಸ್‌ರಾಯ ಸಾಹೇಬರು ಜಾನೇವರಿಯ ಎರಡನೆಯ ತಾರೀಖಿನೊಳಗಾಗಿ ಆ ಬಿಲ್ಲನ್ನು ಮದ್ರಾಸ ನಿಯಮನಿರ್ಮಾಣ ಸಭೆಯಲ್ಲಿಡಲು ಅಪ್ಪಣೆ ಕೊಟ್ಟರು. ಚೆನ್ನಾಗಿಯೇ ಆಗುವುದು. ಒಂದು ವೇಳೆ ಸನಾತನವಾದಿಗಳು ದೇವಾಲಯದ ಟ್ರಸ್ಟಿಗಳ ಮೇಲೆ ಆ ದೇವಾಲಯವನ್ನು ಅಸ್ಪೃಶ್ಯರಿಗೆ ತೆರೆಯದಂತೆ ಕೋರ್ಟಿನಿಂದಲೂ ಮಾಡಬಹುದು. ಮದ್ರಾಸ ನಿಯಮನಿರ್ಮಾಣ ಸಭೆಯಲ್ಲಿ ಡಾ. ಸುಬ್ಬರಾಯನ್‌ರವರ ಬಿಲ್ಲು ನಿಶ್ಚಯವಾಗಿಯೂ ತೀರ್ಮಾನವಾಗುವುದೆಂದು ನನಗೆ ತೋರುತ್ತದೆ. ಏಕೆಂದರೆ ಕೆಲವು ದಿವಸಗಳ ಹಿಂದೆ ಡಾ. ಸುಬ್ಬರಾಯನ್‌ರವರು ಸನಾತನವಾದಿಗಳ ನಡಾವಳಿಕೆಯಲ್ಲಿ ವ್ಯತ್ಯಸ್ತಗೊಳಿಸುವ ಒಂದು ಸಾಮಾನ್ಯ ಗೊತ್ತುವಳಿಯನ್ನು ತಂದಿದ್ದರು. ಆಗ ಅವಕ್ಕೆ ಅನೇಕ ಸಭಾಸದರ ಬೆಂಬಲವಿದ್ದಿತು. ಡಾ. ಸುಬ್ಬರಾಯನ್‌ರವರ ಬಿಲ್ ಮದ್ರಾಸ್ ನಿಯಮನಿರ್ಮಾಣ ಸಭೆಯಲ್ಲಿ ತೀರ್ಮಾನವಾದ ನಂತರ ಶ್ರೀ. ಜಮೋರಿನ್‌ರು ಪಂಚರ ಜವಾಬದಾರಿಯಂತೆ ವರ್ತಿಸುವುದಾದರೆ ಅವರು ಗುರುವಾಯೂರು ದೇವಾಲಯವನ್ನು ಅಸ್ಪೃಶ್ಯರಿಗೆ ತೆರೆದಿಡಲೇಬೇಕಾಗುತ್ತದೆ. ಈ ಪ್ರಕಾರ ಮಾಡುವುದಕ್ಕಿಂತ ಮೊದಲು ನಾವು ಈ ದೇವಾಲಯವನ್ನು ಅಸ್ಪೃಶ್ಯರಿಗೆ ತೆರೆಯಲಿಕ್ಕೆ ಮಾಡುವೆವೆಂದು ಒಂದು ತಿಂಗಳು ಮೊದಲೇ ಸರ್ವಜನರಿಗೂ ತಿಳುಹಿಸುವೆವು. ಇದಕ್ಕೆ ಸನಾತನವಾದಿಗಳು ಪ್ರತಿಬಂಧವನ್ನುಂಟುಮಾಡಿ ಜನಗಳ ಬಹುಮತವನ್ನು ಪರೀಕ್ಷಿಸುವುದಾದರೆ ಶ್ರೀ. ಜಾಮೋರಿನ್‌ರ ಮತವನ್ನು ತೆಗೆದುಕೊಳ್ಳಬೇಕಾಗುತ್ತದೆ. ಪಂಚರಿಗೆ ಜನಗಳ ಇಚ್ಛೆಯಂತೆಯೇ ನಡೆಯಬೇಕಾದುದರಿಂದ ಗುರುವಾಯೂರು ದೇವಾಲಯವು ತೆರೆದಿಡಲೇಬೇಕಾಗುತ್ತದೆ. ಏಕೆಂದರೆ ಆ ಕಡೆಗೆ ಜನಗಳ ಮತಾಧಿಕ್ಯವಿದೆ.

ಮದ್ರಾಸ ಇಲಾಖೆಯಲ್ಲಿ ‘ರಿಲಿಜಿಯಸ್ ಎಂಡೋಮೆಂಟ್ ಆ್ಯಕ್ಟ’ ತೀರ್ಮಾನವಾಗುವುದಕ್ಕಿಂತ ಮೊದಲು ಪಂಚರು ದೇವಾಲಯವು ತಮ್ಮ ಸ್ವಂತದ್ದೆಂದು ತಿಳಿದು ಅದರ ಉತ್ಪನ್ನವನ್ನೆಲ್ಲ ತಾವೇ ತೆಗೆದುಕೊಳ್ಳುತ್ತಿದ್ದರು. ಜನಗಳು ಕೂಡಾ ಆ ಬಗ್ಗೆ ವಿಚಾರಿಸುತ್ತಿರಲಿಲ್ಲ. ಆದರೆ ಈಗ ಶಾಸನದಂತೆ ಒಂದು ಬೋರ್ಡಿನ ಕೈಕೆಳಗೆ ಎಲ್ಲ ಸಾರ್ವಜನಿಕ ದೇವಾಲಯಗಳ ವ್ಯವಸ್ಥೆಯು ನಡೆಯುತ್ತಿದೆ. ಆ ಶಾಸನದಂತೆ ದೇವಾಲಯದ ಉತ್ಪನ್ನದಲ್ಲಿ ೧೦೦ಕ್ಕೆ ೧||ಯಷ್ಟು ಹಣವನ್ನು ಈ ಮಂಡಳದಿಂದ ಬೋರ್ಡಿನವರಿಗೆ ಕೊಡಬೇಕಾಗುತ್ತದೆ. ಯಾವ ಯಾವ ದೇವಾಲಯದಿಂದ ಇದನ್ನು ತೆಗೆದುಕೊಳ್ಳಲಾಗುವುದೋ ಅವೆಲ್ಲ ಸಾರ್ವಜನಿಕ ದೇವಾಲಯವೆಂದು ತಿಳಿಯಲ್ಪಡುತ್ತಾ ಇದೆ. ಗುರುವಾಯೂರ ದೇವಾಲಯದ ಪಂಚರು ಇದನ್ನು ಕೊಡುತ್ತಿದ್ದುದರಿಂದ ಅದು ಕೂಡಾ ಸಾರ್ವಜನಿಕ ದೇವಾಲಯವಾಗಿರುತ್ತದೆ. ಅದರ ವಾರ್ಷಿಕ ಉತ್ಪನ್ನವು ಒಂದು ಲಕ್ಷ ರೂ. ಇದೆ. ಆ ದೇವಾಲಯಕ್ಕೆ ಎರಡು ಜನ ಟ್ರಸ್ಟಿಗಳು ಮಾತ್ರ ಇದ್ದಾರೆ. ಶ್ರೀ. ಜಾಮೋರಿನ್‌ರವರು ಎಲ್ಲ ತರದ ವ್ಯವಸ್ಥೆಯನ್ನು ನೋಡುತ್ತಿದ್ದಾರೆ. ಎರಡನೆಯ ಟ್ರಸ್ಟಿಯು ತರುಣರಾಗಿದ್ದಾರೆ. ಆದರೆ ಅವರು ಕೂಡಾ ಶ್ರೀ. ಜಾಮೋರಿನರ ಮಾತಿಗೇನೇ ತಲೆದೂಗುತ್ತಿದ್ದಾರೆ.

ರೇಣುಕ ವಿಜಯವೆಂಬ ಕಾಶೀನಾಥ ಗ್ರಂಥಮಾಲೆಯ ಹೊಸಗ್ರಂಥದ ವಿಶೇಷ ವಿಚಾರ.

(ಲೇಖಕ:- ಮಲ್ಲಭದ್ರ ಶ್ರೀ. ಬಸವತತ್ವ ಸಮಾಜ ದಾವಣಗೆರೆ.)

ಶ್ರೀ ರೇಣುಕರೆಂಬುವವರು ಬಸವಾದಿ ಪ್ರಮಥರ ಕಾಲದಲ್ಲಿ ಬಸವಮಾರ್ಗಾನುವರ್ತಿಗಳಾಗಿ ವ್ಯವಹರಿಸಿದಂಥ ಒಬ್ಬ ಮಹಾ ಪ್ರಮಥರಾಗಿರುತ್ತಾರೆ. ಈ ರೇಣುಕರು ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ, ಇವರ ಜೊತೆಗೆ ಶ್ರೀ ಬಸವೇಶ್ವರನು ಕಲ್ಯಾಣ ಪಟ್ಟಣದಲ್ಲಿ ನಿರ್ಮಾಣಮಾಡಿದಂಥ ಶಿವಾನುಭವ ಮಂಟಪಕ್ಕೆ ಬಂದು ಬಸವಾಲ್ಲಮ ಪ್ರಭುವರ್ಯರಿಂದ ಪಂಚಮಸ್ಥಾನದಲ್ಲಿ ಜಂಗಮಸ್ಥಾನವನ್ನು ಹೊಂದಿಹೋದರು. ಈ ವಿಚಾರ ಸಂಗನ ಬಸವೇಶ್ವರನ ವಚನದಿಂದಲೂ, ಚತುರಾಚಾರ್ಯರ ಪುರಾಣದಿಂದಲೂ ತಿಳಿದುಬರುತ್ತದೆ.

ಇವಲ್ಲದೆ ಈ ರೇಣುಕಾಚಾರ್ಯರು ಬಸವೇಶನ ಕಾಲದಲ್ಲಿ ವರ್ತಿಸಿದರೆಂಬುದು ೧೯೩೨ನೇ ಜೂನ್ ತಿಂಗಳ ಶಿವಾನುಭವ ಪತ್ರಿಕೆಯಲ್ಲಿ ಶ್ರೀಯುತ ಜೀರಿಗೆ ಬಸವಲಿಂಗಪ್ಪನವರು ಶಾಸನ ವಿಮರ್ಶನ ಪೂರ್ವಕ ಬರೆದಿರುವ ಲೇಖನದಿಂದ ಸ್ಥಾಪಿತವಾಗಿರುತ್ತದೆ. ಆ ಶಾಸನದಲ್ಲಿ ಸಂಕ್ಷಿಪ್ತವಾಗಿ ಸೂಚಿಸಿರುವ ಶ್ರೀ ರೇಣುಕರ ಮಹಿಮಾ ಪ್ರದರ್ಶನಗಳು ಆದಿಕವಿ ಹರಿಹರ ಶಿವಾಚಾರ್ಯರೂ ರಾಘವಾಂಕರೂ, ಈಶಾನ್ಯ ಶಿವಗುರುಗಳೂ ಬೊಮ್ಮರಸರೂ ಚಿನ್ನ ಬಸವಕವಿಯೂ ಇವರೆಲ್ಲರೂ ರಚಿಸಿರುವ ಶ್ರೀ ರೇಣುಕ ವಿಜಯ ಗ್ರಂಥಗಳಲ್ಲಿನ ಮಹಾತ್ಮೆಗಳಿಗೆ ಸಂಪೂರ್ಣ ಸರಿಹೋಲುತ್ತವೆ.

ಈ ಮೇಲ್ಕಂಡ ೫ ಜನ ಕವೀಶ್ವರರು ಸುಮಾರು ಹನ್ನೆರಡನೇ ಶತಮಾನದಿಂದಲೂ ಪರಸ್ಪರ ವ್ಯತಿರಿಕ್ತವಿಲ್ಲದಂತೆ ಬರೆದಿರುವ ವಿಷಯಗಳಿಗೂ ಕಾಶಿನಾಥ ಗ್ರಂಥಮಾಲೆಯ ಈ ನೂತನ ರೇಣುಕ ವಿಜಯದಲ್ಲಿ ಬರೆದಿರುವ ವಿಷಯಗಳಿಗೂ ಅನೇಕಾನೇಕ ವ್ಯತ್ಯಾಸಗಳು ಕಂಡುಬರುತ್ತವೆ. ಈ ನೂತನ ಗ್ರಂಥದಲ್ಲಿ ಮೇಲ್ಕಂಡ ೫ ಜನ ಕವೀಶ್ವರರ ಗ್ರಂಥಗಳಲ್ಲಿನ ಶ್ರೀ. ರೇಣುಕರ ಕೆಲವು ವಿಷಯಗಳು ತೆಗೆದುಹಾಕಲ್ಪಟ್ಟು ಅವಕ್ಕೆ ಪ್ರತಿಯಾಗಿ ಕೆಲವು ನೂತನ ವಿಷಯಗಳನ್ನು ಜೋಡಿಸಿರುವದಾಗಿ ಕಂಡುಬರುತ್ತದೆ.

ಹಿಂದಿನ ಗ್ರಂಥಗಳಲ್ಲಿ ಶ್ರೀ ರೇಣುಕರು ಆದಿಶಂಕರಾಚಾರ್ಯರಿಗೆ- ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟ ಸಂಗತಿಯು ಬರೆದಿರುವದಿಲ್ಲ. ಈ ನೂತನ ಗ್ರಂಥದಲ್ಲಿ ಈ ವಿಷಯವು ಸೇರಿಸಲ್ಪಟ್ಟಿರುತ್ತದೆ. ಆದಿ ಶಂಕರಾಚಾರ್ಯರಿಗೆ ಶ್ರೀ ರೇಣುಕರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟಿದ್ದು ಚಾರಿತ್ರವಿರುದ್ಧವಾಗಿರುತ್ತದೆ.

ಬಸವೇಶನಿಂದ ಇನ್ನೂರು ವರ್ಷಗಳ ಈಚೆಗೆ ವಿಜಯ ನಗರ ರಾಜ್ಯ ಸ್ಥಾಪನೆ ಕಾಲದಲ್ಲಿ ರೇವಣಸಿದ್ಧನೆಂಬ ಒಬ್ಬ ಗಣವರನು ವಿದ್ಯಾರಣ್ಯರೆಂಬ ಶ್ರೀ ಶಂಕರಾಚಾರ್ಯರವರ ಪೀಠಸ್ಥರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸಿದುದಾಗಿರುತ್ತದೆ. ಇದನ್ನು ಬಿಟ್ಟು ಆದಿ ಶಂಕರಾಚಾರ್ಯರವರಿಗೆ ಶ್ರೀ. ರೇಣುಕರು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟರೆಂಬುದನ್ನು ಇತಿಹಾಸದೃಷ್ಟಿಯಿಂದಲೂ ಶಾಸ್ತ್ರಾಧಾರದಿಂದಲೂ, ಶಾಸನಗಳ ಪ್ರಮಾಣದಿಂದಲೂ ವಿಮರ್ಶಿಸುವಲ್ಲಿ ಚಿಗರೆಯ ಕೊಂಬನ್ನು ತೆಗೆದು ಮೊಲದ ನೆತ್ತಿಗೆ ಅಂಟಿಸಿದಂತಿರುತ್ತದೆ. ಮೇಲ್ಕಂಡ ನೂತನ ರೇಣುಕ ವಿಜಯದಲ್ಲಿ ಹಿಂದಿನ ಕವೀಶ್ವರರುಗಳು ಬರೆದಿರುವ ರೇಣುಕ ಮೊರಡಿಯ ಮುದ್ದುಗೌಡ ಸುಗ್ಗಾಯಿಗಳ ಸಂದರ್ಶನವೂ ಶ್ರೀ. ರೇಣುಕರು ಸುಗ್ಗಲಾದೇವಿಯ ಗರ್ಭವನ್ನು ಪೂಜೆ ಮಾಡಿದ್ದು ಮತ್ತು ಶ್ರೀ ಸಿದ್ಧರಾಮ ಶಿವಯೋಗಿಗಳ ಜನನದ ಭವಿಷದ್ವಾಕ್ಯವೂ ಲೋಪವಾಗಿರುತ್ತವೆ. ಈ ವಿಷಯವಂತೂ ಬಹಳ ಆಶ್ಚರ್ಯಕರವಾಗಿರುತ್ತದೆ. ಹಿಂದಿನ ಗ್ರಂಥಗಳಲ್ಲಿನ ವಿಷಯಗಳನ್ನು ಇಲ್ಲ ಮಾಡುವದೂ ಇಲ್ಲದವುಗಳನ್ನು ಉಂಟುಮಾಡುವದೂ ಇಂದ್ರಜಾಲ ಮಹೇಂದ್ರಜಾಲವಂತೆ ಚಿತ್ತವಿಭ್ರಮಕಾರವಾಗಿರುತ್ತದೆ.

ಈ ರೇಣುಕವಿಜಯವೆಂಬ ಗ್ರಂಥವನ್ನು ಒಬ್ಬ ಸಿದ್ಧನಾಥ ಶಿವಾಚಾರ್ಯರು ಬರೆದಿರುವಂತೆ ಹೇಳಿಕೊಂಡಿರುತ್ತಾರೆ. ಇದೂ ಕೂಡ ಚಿತ್ತವಿಭ್ರಮಕಾರಕವೇ ಸರಿ. ಈ ಸಿದ್ಧನಾಥರೆಂಬುವವರು ಬಸವೇಶನಿಂದೀಚಿನ ಕರ್ನಾಟಕ ಮತ್ತು ಆಂಧ್ರದೇಶದ ಯಾವ ಕವಿಪುಂಗವರಿಂದಲೂ ಸ್ತುತಿಸಲ್ಪಟ್ಟಿರುವದಿಲ್ಲ. ಬಸವೇಶ್ವರನಿಗಿಂತ ಮೊದಲು ಯಾವ ವೀರಶೈವ ಕವಿಯೂ ಇರುವದಿಲ್ಲ. ಈ ಕವಿಯ ವಿಮರ್ಶೆಯನ್ನು ಮುಂದಿನ ಲೇಖನದಲ್ಲಿ ಸವಿಸ್ತಾರವಾಗಿ ತಿಳಿಸುತ್ತೇನೆ. ಹೀಗಿರುತ್ತ ಈ ಗ್ರಂಥವನ್ನು ವಿಕ್ರಮ ಶಕೆ. ೧೦೬೭ರಲ್ಲಿ ಬರೆದರೆನ್ನುವದು ಗಗನಕುಸುಮದಂತೆ ಭ್ರಾಮಕವಾಗಿರುತ್ತದೆ. ಈ ಗ್ರಂಥವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಓದುವ ಪ್ರಿಯಪ್ರಾಜ್ಞರಿಗಂತೂ ಇದು ಕೇವಲ ನಿನ್ನೆಮೊನ್ನಿನ ನೂತನ ಗ್ರಂಥವಾಗಿರುತ್ತದೆಂದು ಸ್ಪಷ್ಟವಾಗಿ ಹೊಳೆಯದೆ ಇರಲಾರದೆಂದು ಭಾವಿಸುತ್ತೇನೆ.

ಈ ವಿಚಾರದಲ್ಲಿ ಮತ್ತೊಂದು ವಿಷಯವನ್ನು ಪ್ರಸ್ತಾಪಿಸಬೇಕಾಗುತ್ತದೆ. ಸೊನ್ನಲಾಪುರದ ಮಾರಡಿಯ ಮುದ್ದುಗೌಡ ಸುಗ್ಗಾಯಿಗಳ ಮಗ ಗುರುಪೀಠಸ್ಥರಾದ ಶ್ರೀ ಸಿದ್ಧರಾಮೇಶ್ವರ ಸಾಂಪ್ರದಾಯಸ್ಥರಾದ ಶ್ರೀ ಶಿವಯೋಗಾಚಾರ್ಯರು ಸಿದ್ಧಾಂತ ಶಿಖಾಮಣಿಯನ್ನು ಬರೆದಿರುವುದು ಲೋಕವಿದಿತವಾದ ಸಂಗತಿಯಾಗಿದೆಯಷ್ಟೆ. ಈ ಸಿದ್ಧರಾಮೇಶ್ವರರ ಶಿವಯೋಗಾಚಾರ್ಯರ ಮಧ್ಯೆ ಸಿದ್ಧರಾಮೇಶ್ವರರ ಮೂರನೆಯ ತಲೆಯವರಾದ ಸಿದ್ಧನಾಥರೆಂಬುವವರಿರುತ್ತಾರೆ. ಈ ಸಿದ್ಧನಾಥರು ಬಸವೇಶನಿಂದೀಚಿನವರಾಗಿರುತ್ತಾರಾಗಿ ಇವರನ್ನು ಬಸವೇಶನಿಗಿಂತ ಮೊದಲು ವಿಕ್ರಮಶಕ ೧೦೬೭ರಲ್ಲಿ ಎಂದು ಬಲಾತ್ಕಾರದಿಂದ ಹಿಂದೆ ತಳ್ಳುವದು ಕೇವಲ ಮುಗ್ಗಟ್ಟಿನ ಕೆಲಸವಾಗಿರುತ್ತದೆ. ಇವರಿಂದ ಮತ್ತು ಈಚಿನವರಾದ ಸಿದ್ಧಾಂತಶಿಖಾಮಣಿ ಕರ್ತೃ ಶಿವಯೋಗಾಚಾರ್ಯರು ಸಾವಿರಾರು ವರ್ಷಗಳ ಹಿಂದೆ ಇದ್ದರೆಂದು ಹೇಳುವದು ಆಳವಿಲ್ಲದ ಕೆರೆಯ ನೀರು ಪಾತಾಳದವರೆಗೂ ಹೋಗಿದೆಯೆಂಧು ಹೇಳಿದಂತಿರುತ್ತದೆ.

ಹಿಂದಿನ ರೇಣುಕ ವಿಷಯದ ಗ್ರಂಥಗಳಲ್ಲಿ ಶ್ರೀ ರೇಣುಕರು ಬಿಜ್ಜಳನ ಮಗಳು ಲಕ್ಷ್ಮಣಾದೇವಿಯನ್ನು ಮದುವೆಯಾದ ಸಂಗತಿಯನ್ನೂ, ರಾಜೇಂದ್ರಚೋಳನಮಗಳು ಸೌಂದರಾದೇವಿಯನ್ನು ಮದುವೆಯಾಗಿ ಈ ಸೌಂದರಾದೇವಿಯ ಹೊಟ್ಟೆಯಲ್ಲಿ ಶ್ರೀರುದ್ರಮುನಿಶಿವಾಚಾರ್ಯರು ಹುಟ್ಟಿದ ಸಂಗತಿಯನ್ನು ಮತ್ತು ಮೂರುನೂರು ಜನ ರಾಜಕನ್ಯೆಯರನ್ನು ಮದುವೆಯಾದದ್ದು ಸಹ ಬರೆದಿರುತ್ತದೆ. ಮೇಲ್ಕಂಡ ಕಾಶೀನಾಥ ಗ್ರಂಥಮಾಲೆಯ ರೇಣುಕವಿಜಯದಲ್ಲಿ ತದ್ವಿಷಯಗಳೆಲ್ಲವೂ ಹಾರಿಸಲ್ಪಟ್ಟಿರುತ್ತವೆ. ಈ ವಿಧವಾದ ಸೇರಿಸುವಿಕೆ ಮತ್ತು ಹಾರಿಸುವಿಕೆಯಿಂದ ಮಹಿಮರಾದ ಶ್ರೀ ರೇಣುಕಾಚಾರ್ಯರ ಚರಿತ್ರೆಯೇ ಪಲ್ಲಟ ಮಾಡಲ್ಪಟ್ಟಿರುತ್ತದೆ.

ಈ ಗ್ರಂಥದ ವಿಷಯ ಕೋರ್ಟಿನಲ್ಲಿ ವಿವಾದಕ್ಕೆ ಇಡಲ್ಪಟ್ಟದೆಯೆಂದು ತಿಳಿದುಬರುತ್ತದೆ. ಇದು ಹೇಗೆ ಇರಲಿ. ಈ ನೂತನ ಗ್ರಂಥವು ಬಹುಕಾಲದಿಂದ ಬರೆದ ನಾಲ್ಕು ಐದು ಜನ ಪ್ರಸಿದ್ಧ ಗ್ರಂಥಕಾರರುಗಳ ಉಕ್ತಿಗೆ ಕೇವಲ ವ್ಯತಿರಿಕ್ತವಾದುದರಿಂದ ಈ ಗ್ರಂಥದ ಕಾಲ ಈ ಗ್ರಂಥದ ಕರ್ತೃ ಈ ಗ್ರಂಥದ ನಿಜವಾದ ವಿಷಯದಲ್ಲಿ ಸಮಸ್ತ ವೀರಶೈವರೂ ತುಲನಾತ್ಮಕ ದೃಷ್ಟಿಯಿಂದ ವಿಚಾರಪರರಾಗಿ ಗ್ರಹಿಕೆಮಾಡಬೇಕೆಂದು ಕೈಜೋಡಿಸಿ ಬೇಡಿಕೊಳ್ಳುತ್ತೇನೆ.

ಜನಸೇವೆಯೇ ಜನಾರ್ದನನ ಸೇವೆಯು.

ಅಸ್ಪೃಶ್ಯತೆಯು ಅಳಿಯಲೇಬೇಕು.

(ಲೇಖಕ;— ವೀರಪ್ಪಾ ಬಳ್ಳೊಳ್ಳಿ ಇಲಕಲ್ಲ.)

ಬಾಂಧವರೇ, ಹೀನಸ್ಥಿತಿಯಲ್ಲಿದ್ದ ಸಮಾಜವನ್ನು ಊರ್ಜಿತ ಸ್ಥಿತಿಗೆ ತರಬೇಕಾಗಿದ್ದ ಬಾಂಧವರೇ, ಆತ್ಮವಂಚನೆಯನ್ನು ಮಾಡದೆ ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕಾಗಿದ್ದ ಬಾಂಧವರೇ, ಹಿಂದೂಸಮಾಜದಲ್ಲಿಯೇ ಸ್ಪೃಶ್ಯಾಸ್ಪೃಶ್ಯವೆಂಬ ಭಾವನೆಯಿಂದ ಸ್ವಸಮಾಜವನ್ನು ದಿನದಿನಕ್ಕೆ ನಷ್ಟಮಾಡಿಕೊಳ್ಳುತ್ತಿರುವ ಬಾಂಧವರೇ, ಪುರಾಣಕಾಲದಿಂದ ಇತ್ತೀಚಿಗೆ ರೂಢಿಯಲ್ಲಿ ಬಂದ ಪದ್ಧತಿಗೇನೋ ವೇದಸಮ್ಮತವಾದುದೆಂದೂ ತಿಳಿದುಕೊಂಡಿರುವ ಬಾಂಧವರೇ ಇತ್ತ ಲಕ್ಷ್ಯಕೊಡಿರಿ. ಮಹಾತ್ಮಾಗಾಂಧಿಯವರ ಸಂದೇಶ.

ಜಗತ್ತಿನಲ್ಲಿ ಯಾವ ರಾಷ್ಟ್ರವು ಆಧ್ಯಾತ್ಮಿಕ ವಿಚಾರದಲ್ಲಿ ಎಂದಿನಿಂದಲೋ ಮೇಲ್ಪಂಕ್ತಿಯಾಗಿರುವುದೋ ಯಾವ ರಾಷ್ಟ್ರವು ಧಾರ್ಮಿಕ ಭಾವನೆಯಲ್ಲಿ ಅತಿ ಉಚ್ಚತರಗತಿಯನ್ನು ಹೊಂದಿರುವದೋ ಯಾವ ರಾಷ್ಟ್ರದಲ್ಲಿ ಮನುಮುನಿಗಳೂ ಋಷಿಪುಂಗವರೂ ಹೇರಳವಾಗಿ ಆಗಿಹೋದರೋ, ಯಾವ ರಾಷ್ಟ್ರದಲ್ಲ ಧರ್ಮ ಸಂರಕ್ಷಣೆಗಾಗಿ ಅನೇಕರು ಆತ್ಮಾರ್ಪಣೆಯನ್ನು ಮಾಡಿಬಿಟ್ಟರೋ ಅಂಥ ರಾಷ್ಟ್ರವಾವುದೆಂದರೆ ಒಂದೇ ಒಂದು ಹಿಂದುಸ್ಥಾನವು. ಒಂದಾನೊಂದು ಕಾಲದಲ್ಲಿ ಜಗತ್ತಿನೊಳಗಿನ ಅನೇಕ ರಾಷ್ಟ್ರಗಳನ್ನು ಧಾರ್ಮಿಕ ಭಾವನೆಯ ನೆಳಲಿನಲ್ಲಿ ಳೆಯುವದಕ್ಕಾಗಿ ಮಾಡಿದ ಪ್ರಯತ್ನಗಳ ಕುರುಹುಗಳು ಇವತ್ತಿಗೂ ಪರದೇಶದ ಅನೇಕ ರಾಷ್ಟ್ರಗಳಲ್ಲಿ ಕಾಣುತ್ತಿರುವವು, ಧಾರ್ಮಿಕ ಭಾವನೆಯಲ್ಲ ಈ ದೇಶದೊಳಗಿದ್ದ ಶಕ್ತಿಯು ಇನ್ನೊಂದು ಯಾವ ರಾಷ್ಟ್ರದಲ್ಲಿಯೂ ಇರುವದಿಲ್ಲವೆಂದು ಇತಿಹಾಸವು ಈ ವರೆಗೂ ತಾನೇ ಒಪ್ಪಿಕೊಳ್ಳುತ್ತಿರುವುದು.

ಇಂಥ ಅದ್ವಿತೀಯ ಶಕ್ತಿಯುಳ್ಳ ಈ ರಾಷ್ಟ್ರದಲ್ಲಿ ಒಳಜಾತಿಗಳಿರುವವಲ್ಲದೆ ಸ್ಪೃಶ್ಯಾಸ್ಪೃಶ್ಯವೆಂಬ ರಾಷ್ಟ್ರದ ಒಂದು ಭಾಗವನ್ನೇ ಕುಗ್ಗಿಸತಕ್ಕ ನಷ್ಟಕಾರಕ ಭಾವನೆಯಿರುವದೆಂದರೆ ನಮ್ಮ ದೇಶದ ದುರ್ದೈವವೇ ಸರಿ. ಇದರಿಂದಲೇ ದೇಶವು ದಿನದಿನಕ್ಕೆ ಬಲಹೀನವಾಗುತ್ತ ನಡೆದಿರುವದು. ಕಾರಣ ಸ್ಪೃಶ್ಯ ಹಿಂದುಗಳು ಇನ್ನಾದರೂ ಆದಿಜನರ ಕಡೆಗೆ ಅಥವಾ ಅಸ್ಪೃಶ್ಯರ ಕಡೆಗೆಪ್ರೇಮ ದೃಷ್ಟಿಯನ್ನು ಹೊರಳಿಸಿ ಹತ್ತಿರಕರೆಯುವರೋ?

ಇನ್ನು ಅಸ್ಪೃಶ್ಯತೆಯು ಸನಾತನವೆಂದೂ ವೇದಸಮ್ಮತವೆಂದೂ ತಿಳಿದುಕೊಂಡಿರುವ ಕೆಲವರು ಕೇಳಿರಿ.

ವ್ಯಾಸ ಬೋಯಿತಿಯ ಮಗ. ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು, ಕುಲವನರಸದಿರಿಭೋ, ಕುಲದಿಂದ ಮುನ್ನೇನಾದಿರಿ ಭೋ. ಸಾಕ್ಷಾತ್ ಆಗಸ್ತ್ಯ ಕಬ್ಬಲಿಗ, ದೂರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ ಮೂರು ಲೋಕವರಿಯಲು ನಾಯಿದ ಕಾಣಿರೋ ಶ್ವಪಚನಾದರೇನು ಶಿವಭಕ್ತನೇ ಕುಲಜ ಭೋ.

ಹಿಂದಕ್ಕೆ ಆಗಿಹೋದ ಇಂತಿಂಥವರು ಬ್ರಹ್ಮರ್ಷಿಗಳೂ ಇಂತಿಂಥವರು ಬ್ರಾಹ್ಮಣರೂ ಎಂದೆಣಿಸಲ್ಪಟ್ಟಿರುವರು. ಇಷ್ಟಿದ್ದರೂ ಜನಾಂಗದ ಒಂದು ಭಾಗವನ್ನು ಅಸ್ಪೃಶ್ಯವೆಂದು ದೂರ ಇಟ್ಟು ಪಾಪಕೃತಿಗಳಿಗಾಗಿ ಪ್ರವರ್ತಿಸಿದ ಪಾಪಕ್ಕೆ ಗುರಿಯಾಗಬೇಡಿರಿ. ಪಾಪಪುಣ್ಯಗಳ ಪರಿಚಯವಿಲ್ಲದ ದುರ್ಗವ್ವ ದ್ಯಾಮವ್ವನ ಜಾತ್ರೆಯನ್ನು ಮಾಡುವಾಗ್ಗೆ ಹೋಗಿ ನೀವು ಪ್ರಾಣಿಗಳ ಹಿಂಸೆಮಾಡಬೇಡಿರಿ, ಸೆರೆಸಿಂದಿ ಕುಡಿಯಬೇಡಿರಿ ಎಂದು ಹೇಳಿದರೆ ಅವರು ಕೇಳುವ ಬಗೆ ಹ್ಯಾಗೆ? ಹಿಂಸಿಸುವದರಿಂದ, ಸೆರೆಸಿಂದಿಯ ಕುಡಿತದಿಂದ ಏನು ಅಪಾಯವಿರುವದು, ಮತ್ತು ಈ ಕೃತಿಗಳನ್ನು ಯಾಕೆ ಮಾಡಬಾರದು, ಎಂಬ ವಿಷಯವು ಯಾವತರದ ಉಪದೇಶವಿಲ್ಲದೆ ಹೇಗೆ ತಿಳಿಯಬೇಕು? ಸಭೆಯಲ್ಲಿ, ಕೀರ್ತನದಲ್ಲಿ, ಪುರಾಣದಲ್ಲ ದೂರ ನಿಲ್ಲಿಸುವದೂ ಭಜನೆಯ ಪದಗಳೂ ತತ್ವಪದಗಳೂ ಶೂದ್ರರ ಕಿವಿಗೆ ಬೀಳಬಾರದೆಂದು ಅವರಿಗೆ ತಟ್ಟದಂತೆ ಅನ್ನುವದೂ ಮಾಡಿದರೆ ಅವರ ಕಾಡುಪದ್ಧತಿಗಳು ಹೇಗೆ ದೂರಾಗುವವು? ಅಸ್ಪೃಶ್ಯರೊಳಗಿನ ಕೆಲವರು ತಮ್ಮ ಸಮಾಜದ ದುರವಸ್ಥೆಯನ್ನು ಕಂಡು ಮತಾಂತರ ಆಗುತ್ತಾಗುತ್ತಾ ಆರೇಳುಕೋಟಿ ಜನರು ಮತಭ್ರಷ್ಟರಾಗಿದ್ದಾರೆ. ಕಾರಣ ಇನ್ನಾದರೂ ಸ್ಪೃಶ್ಯರು ಆದಿಜನರನ್ನು ಸಾರ್ವಜನಿಕ ಸಭೆ ಸಮ್ಮೇಳನಗಳಲ್ಲಿಯೂ, ಕೀರ್ತನಪುರಾಣಗಳಲ್ಲಿಯೂ ಗುಡಿಗುಂಡಾರಗಳಲ್ಲಿಯೂ, ಕೆರೆಭಾವಿಗಳಲ್ಲಿಯೂ, ಸಾರ್ವಜನಿಕ ಹಕ್ಕುಗಳನ್ನು ಅವರಿಗೂ ಕೊಟ್ಟು ಮೇಲಿಂದಮೇಲೆ ಹಿತೋಪದೇಶವನ್ನು ಮಾಡಿ ಅವರ ಸುಧಾರಣೆಯನ್ನು ಮಾಡುವುದು ಅತ್ಯಗತ್ಯವಿದೆ. ಆದುದರಿಂದ ಮೊದಲಿನ ಅಂಧ ಶ್ರದ್ಧೆಯನ್ನು ಬಿಟ್ಟು ದೇಶಹಿತದ ಕಡೆಗೆ ಲಕ್ಷ್ಯಗೊಟ್ಟು, ಅಸ್ಪೃಶ್ಯತೆಯನ್ನು ನಿವಾರಿಸುವದಕ್ಕಾಗಿ ಆಗ್ರಹದ ವಿನಂತಿಯನ್ನು ಮಾಡಿಕೊಳ್ಳುವೆನು.

ವ್ಯಾಪಾರ ಶಿಕ್ಷಕ.

ಈ ಪುಸ್ತಕವು ಅಚ್ಚಾಗುತ್ತಲಿದೆ. ಸಂಪೂರ್ಣವಾದನಂತರ ಶರಣ ಸಂದೇಶ ಪತ್ರಿಕೆಗೆ ಈ ವರುಷ ಚಂದಾದಾರರಾಗಿರುವವರಿಗೆಲ್ಲರಿಗೂ ತಪ್ಪದೇ ಕಳುಹಿಸಲಾಗುವುದು, ಬೇರೆಯವರಿಗೆ ಈ ಪುಸ್ತಕವನ್ನು ವಿಕ್ರಯಿಸುವುದಿಲ್ಲ. ಆದಕಾರಣ ಬೇರೆಯವರಾಗಲಿ ಅಥವಾ ಚಂದಾದಾರರಾಗಲಿ ಪುಸ್ತಕವನ್ನು ಕಳುಹಿಸಲು ವೃಥಾ ಪತ್ರಗಳನ್ನು ಬರೆಯಬಾರದಾಗಿ ಪ್ರಾರ್ಥನೆ.

ಮ್ಯಾನೇಜರ್,

ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು. ೨. ಕನ್ಯೆಯ ವಯಸ್ಸು ೧೪ ಅಥವಾ ೧೫ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ವಿಶೇಷ ಶಿಕ್ಷಣ ಪಡೆಯದಿದ್ದರೂ ಚಿಂತೆಯಿಲ್ಲ. ಶರಣರ ವ ಚ ನ ಗ ಳ ನ್ನು ಸ್ವಲ್ಪಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೮ ವಿದ್ಯಾವಂತನು, ವೀರಶೈವನು, ದಿಕ್ಷಾಬಳಿಕೆ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ಪಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು. ಶಕ್ಯವಿದ್ದರೆ ಕನ್ಯೆಯ ಫೋಟೊ ಕಳಿಸಬೇಕು.

ಪತ್ತೆ—**ಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲಸ್ಕೂಲ್**
ಪೋ. ನಾರಾಯಣಪೇಟ. ನಿಜಾಂ ಸಂಸ್ಥಾನ

ಮುಂಬೈಯ ಗಿರಗಾಂವ ರೋಡಿನಲ್ಲಿ ಕಳೆದ ರವಿವಾರ ಮೋಟಾರ ಅಪಘಾತವಾಗಿ ನಾಲ್ಕು ವರ್ಷದ ಹುಡುಗಿಗೆ ಭಯಂಕರ ಗಾಯವಾಯಿತ

ಶರಣ ಸಂದೇಶ

ತಾ. ೨. ೧೯೩೩ ನೆಯ ಪುಷ್ಯ ಶು. ೬ ಸೋಮವಾರ.

ಜಯ ಧರ್ಮಾತ್ಮಾ ಮಾಲವೀಜಿ.

ಈ ನಮ್ಮ ಮಾತೃಭೂಮಿಯ ಉದ್ಧಾರಾರ್ಥವಾಗಿ ತಮ್ಮ ದೇಹವನ್ನು ಹಗಲಿರುಳೂ ಸವೆಸುತ್ತಿರುವ ಅನೇಕ ವಿಭೂತಿಗಳಲ್ಲಿ ಪಂಡಿತ ಮದನ ಮೋಹನ ಮಾಲವೀಜಿಯವರು ಅಗ್ರಗಣ್ಯರಾಗಿದ್ದಾರೆ.



ಈಗ ಭರತಖಂಡದಲ್ಲಿ ಮಹಾತ್ಮಾಗಾಂಧಿಯವರ ತರುವಾಯ ಸಕಲ ಭಾರತೀಯರ ಪ್ರೇಮಾದರಗಳಿಗೆ ಪಾತ್ರರಾದವರಲ್ಲಿ ಪಂಡಿತ ಮಾಲವೀಜಿಯವರೇ ಮೊದಲನೆಯವರಾಗಿದ್ದಾರೆಂದು ಧಾರಾಳವಾಗಿ ಹೇಳಬಹುದು.

ಈ ಮಹಾನ್ ದೇಶಭಕ್ತರ ೭೨ನೆಯ ವರ್ಷದ ವರ್ಧಂತಿಯ ಮಹೋತ್ಸವವು ಕಳೆದ ಡಿಸೆಂಬರ್ ತಿಂಗಳ ೨೫ನೆಯ ತಾರೀಖಿನ ದಿವಸ ಪ್ರಯಾಗದಲ್ಲಿ ಬಹು ಸಂಭ್ರಮದಿಂದ ಜರುಗಿತು. ಭರತ ಖಂಡದ ಪರಮಪೂಜ್ಯರೂ ವಯೋವೃದ್ಧರೂ ಆದ ಈ ಪುಣ್ಯಾತ್ಮರಿಗೆ ಆ ದಿನ ಧರ್ಮಾತ್ಮರೆಂದು ಭಾರತೀಯ ಪ್ರಮುಖರು ಸಂಬೋಧಿಸಿದುದು ತುಂಬಾ ಯುಕ್ತವಾದುದಾಗಿದೆ.

ಈ ಧರ್ಮಾತ್ಮರ ಈ ವರೆಗಿನ ದಿವ್ಯ ಚಾರಿತ್ರ್ಯ ಶಿಖರಕ್ಕೆ ಹಿಂದು, ಮುಸಲ್ಮಾನ್, ಕ್ರಿಶ್ಚಿಯನ್ ಮುಂತಾದ ಭಿನ್ನಭಿನ್ನ ಧರ್ಮಮತಪಂಥಗಳ ಐಕ್ಯಕ್ಕೋಸ್ಕರ ಕಳೆದ ವರ್ಷ ಮಾಡಿದ ಮಾಲವೀಜಿಯವರ ಅಭೂತಪೂರ್ವ ಕಾರ್ಯವು ಕಲಶಪ್ರಾಯವಾಗಿದೆ.

ಆದುದರಿಂದ ಅಲಾಹಾಬಾದಿನ ಲೀಡರ್ ಪತ್ರಿಕಾಕರ್ತರು ಈ ಪ್ರಕಾರ ಹೇಳಿದ್ದಾರೆ.

"Today Dharmatma Malviyaji and Mahatma Gandhi are the highest living embodiments of the character and the patriotism of India."

ಭಾರತೀಯ ದೇಶಭಕ್ತಿ ಮತ್ತು ಸದ್ಗುಣಗಳ ದಿವ್ಯ ಮೂರ್ತಿಗಳಲ್ಲಿ ಈಗ ಧರ್ಮಾತ್ಮಾ ಮಾಲವೀಜಿ ಮತ್ತು ಮಹಾತ್ಮಾ ಗಾಂಧೀಜಿಯವರೇ ಅಗ್ರಗಣ್ಯರಾಗಿದ್ದಾರೆಂಬ ಶ್ರೀ. ಚಿಂತಾಮಣಿಯವರ ಅಭಿಪ್ರಾಯವು ಯಥಾರ್ಥವಾಗಿಲ್ಲವೇ? ಇಂಥ ದಿವ್ಯ ವಿಭೂತಿಗಳನ್ನು ಪರಮಾತ್ಮನು ಈ ಪುಣ್ಯಭೂಮಿಗೆ ಕಳುಹಿಸಿದುದು ನಮ್ಮ ಸುದೈವವಲ್ಲವೇ?

ಈ ಪರಮಶ್ರೇಷ್ಠರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಿ ಇವರಿಂದ ಭಾರತಾಂಬೆಯ ಸಕಲ ದುಃಖಗಳನ್ನು ನಿವಾರಣೆಗೊಳಿಸಲೆಂದು ನಾವು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಜನವರಿ ೧ನೇ ತಾರೀಖಿನ ದಿವಸ ಮಹಾತ್ಮರ ಬಿಡುಗಡೆಯೋ?

"ಡೇಲಿ ಹೆರಾಲ್ಡ್ ಪತ್ರದ ತರ್ಕ."

ಲಾರ್ಡ ಲೋಥಿಯನ್ ವ್ಹಾಯಿಸರಾಯರಾಗುವರು.

ಮಹಾತ್ಮಾ ಗಾಂಧಿಯವರನ್ನೂ ಮತ್ತು ಶಾಸನೋಲ್ಲಂಘನೆಯ ಚಳವಳಿಯಲ್ಲಿ ಶಿಕ್ಷಿಸಲ್ಪಟ್ಟ ಇತರ ಸತ್ಯಾಗ್ರಹಿಗಳನ್ನೂ ಇದೇ ಜಾನೇವಾರಿ ೧ನೆಯ ತಾರೀಖಿನ ದಿವಸ ಬಿಡುಗಡೆ ಮಾಡುವರೆಂದು ಕಂಡುಬರುತ್ತದೆ. ತಾ. ೨೯ನೆಯ ಡೇಲಿ ಹೆರಾಲ್ಡ ಪತ್ರಿಕೆಯಲ್ಲಿ ಆ ಪತ್ರಿಕೆಯ ರಾಜಕೀಯ ಪ್ರತಿನಿಧಿಗಳು ಈ ಪ್ರಕಾರ ಪ್ರಕಟಿಸಿದ್ದಾರೆ. ಹಿಂದುಸ್ಥಾನಕ್ಕೆ ಕೊಡಲಿರುವ ಹೊಸ ರಾಜ್ಯಘಟನೆಯು ಯಶಸ್ವಿಯಾಗಿ ಪರಿಣಮಿಸಿ ಮಹಾತ್ಮಾಜಿಯವರನ್ನೂ ಮತ್ತು ಇತರ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡುವದು ಅತ್ಯವಶ್ಯಕವೆಂದು ಸರ್. ಸಾಮ್ಯುಅಲ್ ಹೋರ್‌ರವರಿಗೆ ಸ್ಪಷ್ಟವಾಗಿ ತೋರಿದೆ. ಇವರಂತೆ ಸರಕಾರದ ಸುಧಾರಣ ವಿಷಯಕವಾದ ಸೂಚನೆಯ ವಿಚಾರವನ್ನು ಮಾಡುವದಕ್ಕಾಗಿ ನಿಯಮಿಸಲ್ಪಡುವ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯಲ್ಲಿ ಕಾಂಗ್ರೆಸ್ಸಿನ ಎರಡು ಜನ ಪ್ರತಿನಿಧಿಗಳನ್ನು ಮನಃಪೂರ್ವಕವಾಗಿ ತೆಗೆದುಕೊಳ್ಳಬೇಕೆಂಬ ಇಚ್ಛೆಯು ಸರ್. ಸಮ್ಯುಅಲ್ ಹೋವರ್‌ರವರಿಗೆ ಇದೆಯೆಂಬ ಸುದ್ದಿಯಿದೆ. ಹಿಂದುಸ್ಥಾನದ ಅಧಿಕಾರಿ ವರ್ಗವು ವ್ಹಾಯಿಸ್‌ರಾಯರಿಗೆ ಮಹಾತ್ಮಾ ಗಾಂಧಿಯವರು ಶಾಸನೋಲ್ಲಂಘನೆಯ ಚಳವಳಿಯನ್ನು ತಿರುಗಿ ತೆಗೆದುಕೊಳ್ಳದ ವಿನಾ ಅವರನ್ನು ಬಿಡುಗಡೆ ಮಾಡಬಾರದೆಂಬ ಸಲಹೆಯನ್ನು ಕೊಟ್ಟಿದ್ದರೂ ಭಾರತಮಂತ್ರಿಗಳು ಮಹಾತ್ಮಾಗಾಂಧಿ ಮೊದಲಾದವರನ್ನು ಬಿಡುಗಡೆ ಮಾಡುವದನ್ನು ನಿಶ್ಚಯಿಸಿದ್ದಾರೆ.

ಸದ್ಯದ ವ್ಹಾಯಿಸರಾಯ ಲಾರ್ಡ ವ್ಹಿಲಿಂಗ್‌ಡನ್‌ರವರು ಮುಂದಿನ ವರುಷ ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಡುವರೆಂದೂ ಆ ಸ್ಥಳಕ್ಕೆ ಲಾರ್ಡ್ ಲೋಥಿಯನ್ ವ್ಹಾಯಿಸ್‌ರಾಯರಾಗುವ ಸಂಭವವಿದೆಯೆಂತಲೂ ಕಂಡುಬರುತ್ತದೆ. ಆದರೆ ಇಂಗ್ಲಂಡದ ಮಾರ್ನಿಂಗ್‌ಪೋಷ್ಟ ಪತ್ರಿಕೆಯಲ್ಲಿ ಬರುವ ವಸಂತಮಾಸದಲ್ಲಿ ಭಾರತಮಂತ್ರಿ ಸರ್. ಸಾಮ್ಯುಅಲ್ ಹೋರ್‌ರೊಡನೆ ನವೀನ ರಾಜಕೀಯ ಸುಧಾರಣೆಯ ಬಗ್ಗೆ ವಿಚಾರ ವಿನಿಮಯ ಮಾಡಲು ಲಾರ್ಡ ವಿಲಿಂಗ್‌ಡನ್‌ರು ಲಂಡನಕ್ಕೆ ತೆರಳುವರೆಂತಲೂ ಸರ್. ಮಾಲ್ಕಮ್ ಹೇಲಿ ಇವರು ತಾತ್ಕಾಲಿಕ ವ್ಹಾಯಿಸ್‌ರಾಯರಾಗುವರೆಂದೂ ಪ್ರಕಟವಾಗಿದೆ.

ಶಾಸನೋಲ್ಲಂಘನೆಯ ಚಳವಳಿಯನ್ನು ನಿಲ್ಲಿಸಲು ವಚನವನ್ನು ತೆಗೆದುಕೊಳ್ಳದೆ ಮಹಾತ್ಮಾ ಗಾಂಧಿಯವರನ್ನು ಬಿಡುಗಡೆ ಮಾಡುವರೆಂದು ಇಂಗ್ಲಂಡದಲ್ಲಿ ಹಬ್ಬಿರುವ ಸುದ್ದಿಯನ್ನು ಕೇಳಿ ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆಯು ಸಖೇದಾಶ್ಚರ್ಯವನ್ನು ಪ್ರಕಟ ಮಾಡಿದೆ.

ಹಿಂದುಸ್ಥಾನದಲ್ಲಿ ಸರ್ವತ್ರ ಶಾಂತತೆಯನ್ನು ಸ್ಥಾಪಿಸುವದಕ್ಕಾಗಿ ಮತ್ತು ಸರಕಾರದವರ ಮೇಲೆ ಜನಗಳ ವಿಶ್ವಾಸವು ದೃಢಗೊಳಿಸುವದಕ್ಕಾಗಿ ಭಾರತಮಂತ್ರಿಗಳು ಮಹಾತ್ಮಾಗಾಂಧಿಯವರನ್ನು ಬಿಡುವ ತಮ್ಮ ನಿರ್ಣಯವನ್ನು ಸ್ಥಿರವಾಗಿಡಲೆಂದು ಡೇಲಿ ಹೆರಾಲ್ಡ ಪತ್ರವು ಇಚ್ಛಿಸಿದೆ.

ಮಾರ್ನಿಂಗ್ ಪೋಸ್ಟಿನ ರಾಜಕೀಯ ಪ್ರತಿನಿಧಿಗಳು ಈ ಪ್ರಕಾರ ಬರೆಯುತ್ತಾರೆ. ಇದಿನ್ನೂ ನಿಜವಾಗಿಲ್ಲ.

ಮಹಾತ್ಮಾ ಗಾಂಧಿಯವರ ೧೦ ಪ್ರಶ್ನೆಗಳು. ಪುರಾಣ ಮತವಾದಿಗಳ ಉತ್ತರ.

ಮಹಾತ್ಮಾಜಿ— ಅಸ್ಪೃಶ್ಯರೆಂದು ಯಾರಿಗೆ ಅನ್ನುತ್ತಾರೆ?

ಧಾರೂರಕರ ಶಾಸ್ತ್ರಿ— ಯಾವನು ಸ್ಪೃಶ್ಯನಲ್ಲವೋ ಅವನು (ನಗೆ)

ಮಹಾತ್ಮಾಜಿ—ಶಬ್ದದ ಅರ್ಥವು ನನಗೆ ತಿಳಿಯುತ್ತದೆಂದು ತಿಳಿದುಕೊಂಡೇ ಮುಂದೆ ಹೇಳಿರಿ.

ಶಾಸ್ತ್ರಿ—ಮಂದಿರ ಪ್ರವೇಶ ದೊರೆಯಬೇಕೆಂದು ಯಾರ ವಿಷಯವಾಗಿ ನೀವು ಪ್ರಯತ್ನಮಾಡುತ್ತಲಿರುವಿರೋ ಅವರು (ನಗೆ)

ಮಹಾತ್ಮಾಜಿ—ಈ ಮಾತು ನನಗೆ ಗೊತ್ತಿಲ್ಲವೆಂದು ತಿಳಿದು ತಾವು ಹೀಗೆ ಉತ್ತರ ಕೊಡುತ್ತಿರುವಿರೇನು ? ನಾನೊಬ್ಬ ವಿದ್ಯಾರ್ಥಿಯೆಂದು ತಿಳಿದು ನನಗೆ ಉತ್ತರ ಕೊಡಿರಿ. ನಾನೊಬ್ಬ ಗಾವಠಿ ವಿದ್ಯಾರ್ಥಿಯೆಂದು ತಿಳಿದು ಉತ್ತರ ಕೊಡಿರಿ.

ಶಾಸ್ತ್ರಿ—ಅಸ್ಪೃಶ್ಯತೆಯು ನೈಮಿತ್ತಿಕವೆಂದೂ ಜನ್ಮಸಿದ್ಧವೆಂದೂ ಎರಡು ಪ್ರಕಾರದ್ದಿರುತ್ತದೆ. ಸೂತಕ ರಜೋದರ್ಶನ, ಪ್ರಸೂತ ಮುಂತಾದವುಗಳಿಂದ ಬಂದುದು ನೈಮಿತ್ತಿಕ ಅಸ್ಪೃಶ್ಯತೆಯು ಮತ್ತು ಬ್ರಾಹ್ಮಣ ಸ್ತ್ರೀಯಳಲ್ಲಿ ಶೂದ್ರನ ವ್ಯಭಿಚಾರ ಮೂಲಕ ಉತ್ಪನ್ನವಾದ ಸಂತತಿಗೂ ಮತ್ತು ಈ ಸಂತತಿಯಲ್ಲಿ ಪುನಃ ಉಚ್ಚವರ್ಣೀಯರ ವ್ಯಭಿಚಾರದಿಂದುತ್ಪನ್ನವಾದ ಸಂತತಿಗೂ ಜನ್ಮ ಸಿದ್ಧ ಅಸ್ಪೃಶ್ಯತೆಯಿರುತ್ತದೆ.

ಮಹಾತ್ಮಾಜಿ—ಸದ್ಯದ ಅಸ್ಪೃಶ್ಯರಿಗೆ ಈ ವ್ಯಾಖ್ಯೆಯು ಅನ್ವಯಿಸುತ್ತದೇನು ?

ಶಾಸ್ತ್ರಿ—ಹೌದು.

ಮಹಾತ್ಮಾಜಿ—ತಾವು ಸರಕಾರೀ ದಪ್ತರುಗಳ ಅಭ್ಯಾಸ ಮಾಡಿ ಹಿಂದುಗಳಲ್ಲಿ ಎಷ್ಟು ಜಾತಿಗಳನ್ನು ಅಸ್ಪೃಶ್ಯರೆಂದು ಸರಕಾರದವರು ತಿಳಿಯುತ್ತಾರೆಂಬುದನ್ನು ನೋಡಿರುವಿರೇನು ? ಯಾಕೆಂದರೆ ಇಲ್ಲಿಯವರೆಗೆ ಅಸ್ಪೃಶ್ಯರಲ್ಲದಂಥ ಎಷ್ಟೋ ಜಾತಿಗಳನ್ನು ಸರಕಾರದವರು ಅಸ್ಪೃಶ್ಯರೆಂದು ತಿಳಿಯುತ್ತಾರೆ. ಮತ್ತು ಅದೇ ಜಾತಿಯವರು ಕೌನ್ಸಿಲ್ ಚುನಾವಣೆಯ ಕಾಲದಲ್ಲಿ ಮತಕೊಡುವರು.

ಶಾಸ್ತ್ರಿ—ನಾವು ಸರಕಾರಿ ದಪ್ತರವನ್ನು ಅಭ್ಯಾಸ ಮಾಡಿಲ್ಲ. ಮತ್ತು ಅದನ್ನು ನಾವು ಒಪ್ಪುವದಿಲ್ಲ. ನಾವು ಅನಾದಿಯಿಂದ ಬಂದ ಶಿಷ್ಟಾಚಾರವನ್ನು ಒಪ್ಪುತ್ತೇವೆ. ಅಂದರೆ ಪರಂಪರಾಗತ ಲೋಕರೂಢಿಯನ್ನು ಪ್ರಮಾಣವೆಂದು ತಿಳಿಯುತ್ತೇವೆ.

ಸಪ್ರು ಜಯಕರ್ ಮೊದಲಾದ ಪ್ರಮುಖರು ಹೊಸ ರಾಜಕೀಯ ಸುಧಾರಣೆಯು ಯಶಸ್ವಿಯಾಗಲು ಸಹಾಯವಾಗಲೆಂದು ಮ. ಗಾಂಧಿ ಮತ್ತು ಇತರ ರಾಜಕೀಯ ಬಿಡುಗಡೆಯಾಗಬೇಕೆಂದು ವಿಜ್ಞಾಪಿಸಿಕೊಂಡಿದ್ದರು. ಆದುದರಿಂದ ಸರಕಾರದವರು ಇವರ ವಿಚಾರವಮಾಡುತ್ತಿರುವುದರಿಂದ ಮ. ಗಾಂಧಿಯವರನ್ನು ಇಷ್ಟರಲ್ಲಿಯೇ ಬಿಡುವ ಸಂಭವವಿದೆ. ಶಾಸನೋಲ್ಲಂಘನೆಯ ಚಳವಳಿಯನ್ನು ಎದುರಿಸಲು ಸರಕಾರದವರಿಗೆ ಹೊಸ ಅಧಿಕಾರವನ್ನುಂಟುಮಾಡಿ ಕೊಡುವ ಶಾಸನಗಳು ಶಾಸನಮಂಡಳಗಳಲ್ಲಿ ತೀರ್ಮಾನವಾದುದರಿಂದ ರಾಜಕೀಯ ಸೆರೆಯಾಳುಗಳನ್ನು ಬಿಡುಗಡೆ ಮಾಡುವ ವಿಷಯದಲ್ಲಿ ವಿಶೇಷ ವಿಚಾರಿಸುವ ಕಾರಣ ಉಳಿಯಲಿಲ್ಲ.

ಮಹಾತ್ಮಾಜಿ—ನೀವು ಹೇಳಿದ ವ್ಯಾಖ್ಯಾನುಸಾರ ಸದ್ಯದ ಅಸ್ಪೃಶ್ಯರು ವ್ಯಭಿಚಾರದಿಂದುತ್ಪನ್ನವಾದ ಸಂತತಿಯೋ ?

ಶಾಸ್ತ್ರಿ— ಹೌದು.

ಮಹಾತ್ಮಾಜಿ—ಅಸ್ಪೃಶ್ಯರ ಸಲುವಾಗಿ ಪ್ರತಿಬಂಧವೇನಿದೆ ? ಮತ್ತು ಅಸ್ಪೃಶ್ಯರ ಸಂಗಡ ಹೇಗೆ ನಡೆದು ಕೊಳ್ಳಬೇಕು?

ಶಾಸ್ತ್ರಿ—ಅಸ್ಪೃಶ್ಯರು ಊರೊಳಗೆ ಬರಕೂಡದು. ಅವರ ಸಂಗಡ ಸ್ಪೃಶ್ಯರು ವ್ಯವಹಾರ ಮಾಡಕೂಡದು. ಮೊದಲಾದ ನಿರ್ಬಂಧಗಳಿರುತ್ತವೆ.

ಮಹಾತ್ಮಾಜಿ—ಮನುಷ್ಯ ಜಾತಿಯ ಅಧಿಕಾರಗಳು ಅವನಿಗೆ ಇರುತ್ತವೆಯೇನು?

ಶಾಸ್ತ್ರಿ—ಹೌದು ಇರುತ್ತವೆ. ಆದರೆ ವರ್ಣ ಮತ್ತು ಆಶ್ರಮಗಳ ಅಧಿಕಾರಗಳು ಅವನಿಗಿಲ್ಲ.

ಮಹಾತ್ಮಾಜಿ— ಈ ಜನ್ಮದಲ್ಲಿ ಅಸ್ಪೃಶ್ಯತೆಯು ನಿವಾರಣೆಯಾಗುವುದೇ ಇಲ್ಲವೇ?

ಶಾಸ್ತ್ರಿ— ಇಲ್ಲ. ಸತ್ತ ನಂತರವೇ ಅದು ಶಕ್ಯವದೆ.

ಮಹಾತ್ಮಾಜಿ—ಅಸ್ಪೃಶ್ಯರಿಗೆ ಮಂದಿರಪ್ರವೇಶವು ಯಾವ ರೀತಿಯಿಂದಾಗುವದು?

ಶಾಸ್ತ್ರಿ— ಅಸ್ಪೃಶ್ಯರು ತಮ್ಮ ಸ್ವಂತ ಮಂದಿರಗಳಲ್ಲಿ ಹೋಗಲಿಕ್ಕೆ ಬರುವದು. ಆದರೆ ಸ್ಪೃಶ್ಯರ ದೇವಾಲಯದಲ್ಲಿ ಅವರು ಎಂದೂ ಪ್ರವೇಶಿಸಲು ಶಕ್ಯವಿಲ್ಲ.

ಮಹಾತ್ಮಾಜಿ—ಶಾಸ್ತ್ರವೆಂದು ಯಾತಕ್ಕೆ ಅನ್ನಬೇಕು? ಈ ಕಾಲಕ್ಕೆ ಈ ಪ್ರಶ್ನೆಯ ಉತ್ತರ ಕೊಡುವಾಗ್ಗೆ ಶ್ರೀ. ಧಾರೂರಕರ ಶಾಸ್ತ್ರಿಗಳು ಅನೇಕ ಸಂಸ್ಕೃತ ಶ್ಲೋಕಗಳನ್ನು ಓದಿ ತೋರಿಸಿದರು. ಮತ್ತು ಮಹಾತ್ಮಾಗಾಂಧಿಯವರಿಗೆ ಆಜ್ಞಾ ಮತ್ತು ನಿಷೇಧ ಈ ಶಬ್ದಗಳ ಅರ್ಥಗಳನ್ನು ತಿಳಿಸಿ ಹೇಳಲಿಕ್ಕೆ ಸುಮಾರು ಮುಕ್ಕಾಲುತಾಸು ಕಳೆದರು. ಆವಾಗ್ಗೆ ಮಹಾತ್ಮಾಜಿಯವರು ನನ್ನ ಪ್ರಶ್ನೆಗೆ ತಾವು ಸ್ವಲ್ಪದರಲ್ಲಿಯೇ ಉತ್ತರಕೊಟ್ಟರೆ ಒಳ್ಳೇದಾಗುವದು. ಎಂದರು.

ಶಾಸ್ತ್ರಿ—ವೇದಗಳು ಸ್ವತಃ ಸಿದ್ಧಪ್ರಮಾಣಗಳಿರುತ್ತವೆ. ಅವುಗಳಿಗೆ ಅವಿರೋಧವಾಗಿರುವ ಶ್ರುತಿಗಳು ಮತ್ತು ಸ್ಮೃತಿಗಳು ಮತ್ತು ಅವುಗಳಿಗೆ ಅವಿರೋಧವಾಗಿರುವ ಶಿಷ್ಟಾಚಾರವು ಇವೇ ರೂಢಿ ಪ್ರಮಾಣಗಳು,

ಮಹಾತ್ಮಾಜಿ—ಶಾಸ್ತ್ರದಲ್ಲಿ ಪ್ರಾಮಾಣಿಕತೆಯಿದೆಯೆಂದು ಹೇಗೆ ಸಿದ್ಧವಾಗುವದು ?

ಶಾಸ್ತ್ರಿ—ವೇದಪ್ರಾಮಾಣ್ಯವು ಶಂಕಾತೀತವದೆ. ಸ್ಮೃತಿಯು ಶಿಷ್ಟಾಚಾರಗಳೂ ವೇದಕ್ಕೆ ಅವಿರೋಧವಾಗಿದ್ದರೆ ಸ್ವತಃ ಸಿದ್ಧ ಪ್ರಮಾಣಗಳಾಗುತ್ತವೆ. ಅಲ್ಲಿ ಮನುಷ್ಯನ ತರ್ಕ ಅಥವಾ ಅನುಭವಗಳನ್ನು ಅನ್ವಯಿಸಬೇಕಾಗಿಲ್ಲ.

ಮಹಾತ್ಮಾಜಿ— ಶಾಸ್ತ್ರದ ವ್ಯಾಖ್ಯೆ ಮತ್ತು ಅರ್ಥಗಳ ವಿಷಯದಲ್ಲಿ ಮತಭೇದವಾದರೆ ಯಾವುದನ್ನು ಮಾನ್ಯಮಾಡಬೇಕು?

ಶಾಸ್ತ್ರಿ—ಈ ಸಂಬಂಧದಲ್ಲಿ ಪೂರ್ವಗ್ರಂಥಗಳನ್ನು ಪ್ರಮಾಣವೆಂದು ತಿಳಿಯಬೇಕು.

ಮಹಾತ್ಮಾಜಿ—ಸತ್ಯ ಮತ್ತು ನೀತಿಗಳಿಗೆ ವಿರುದ್ಧವಿದ್ದ ವಚನ ಅಥವಾ ಅರ್ಥವು ಧರ್ಮವಾಗಬಲ್ಲುದೇನು?

ಶಾಸ್ತ್ರಿ—ವೇದಗಳಲ್ಲಿ ಏನು ಹೇಳಿದೆಯೋ ಅದೇ ನೀತಿ ಮತ್ತು ಅದೇ ಸತ್ಯ ಅವುಗಳಿಗೆ ವಿರುದ್ಧವಾದ ಯಾವದೇ ಮಾತು ಸತ್ಯವಲ್ಲ ಮತ್ತು ನೀತಿಯೂ ಅಲ್ಲ.

ಪೂರ್ವಕಾಲದ ಭಾರತವರ್ಷ.

ಈ ನಮ್ಮ ಭಾರತವರ್ಷವು ದೇವರ ದಯೆಯಿಂದ ನೈಸರ್ಗಿಕವಾಗಿಯೇ ಸುಖ ಮತ್ತು ಸಂಪತ್ತುಗಳುಳ್ಳ ದೇಶವಾಗಿದೆ. ಇಲ್ಲಿಯೇ ಸರ್ವಪ್ರಕಾರದ ಸಾಧನಸಾಮಗ್ರಿಗಳು ದೊರೆಯಲನುಕೂಲವಾಗಿದೆ. ಆದುದರಿಂದಲೇ ನಮ್ಮ ಪೂರ್ವಜರು ಅಭಿಮಾನದಿಂದ ಜಗತ್ತಿನ ಎಲ್ಲ ದೇಶಗಳಿಗೂ ಗುರುಪ್ರಾಯವಾಗಿರಲು ಈ ನಮ್ಮ ಆರ್ಯಾವರ್ತವೇ ಯೋಗ್ಯವೆಂದು ಸಾರಿ ಸಾರಿ ಹೇಳುತ್ತಿದ್ದರು.

ಆಂಗ್ಲ ಪಂಡಿತರಾದ ಮಿ. ಮ್ಯಾಕ್ಸಮುಲ್ಲರ್‌ರವರು ತಮ್ಮ "India what it can teach us" ಎಂಬ ಪುಸ್ತಕದ ೧೫ನೆಯ ಪುಟದಲ್ಲಿ "ಭಾಷಾ, ಧರ್ಮ, ಗಣಿತ, ವಿಜ್ಞಾನ ಮೊದಲಾದ ಯಾವದೇ ವಿಷಯದಲ್ಲಿ ವಿಶೇಷವಾದ ವ್ಯಾಸಂಗವನ್ನು ಮಾಡುವದಾದರೆ ನಮಗೆ ಆರ್ಯಾವರ್ತದ ಕಡೆಗೆ ಹೋಗಲೇಬೇಕಾಗುತ್ತದೆ, ಅದು ಸರಿಬೀಳಲಿ ಅಥವಾ ಸರಿಬೀಳದೆ ಇರಲಿ." ಎಂದು ಸ್ಪಷ್ಟವಾಗಿ ಬರೆದಿದ್ದಾರೆ ಇವರ ಮೇಲಿಂದ ನಮ್ಮ ಭಾರತವರ್ಷವು ಒಂದಾನೊಂದು ಕಾಲದಲ್ಲಿ ಅತ್ಯುನ್ನತವಾದ ಸ್ಥಿತಿಯಲ್ಲಿದ್ದಿತೆಂಬುದನ್ನು ಸಹಜವಾಗಿ ಊಹಿಸಬಹುದಲ್ಲವೇ?

ಪುರಾಣ ವಸ್ತು ಸಂಶೋಧಕರಿಂದಾದ ಇತ್ತೀಚಿಗಿನ ಅನೇಕ ಶೋಧಗಳ ಮೇಲಿಂದ ಮ್ಯಾಕ್ಸಮುಲ್ಲರವರ ವಿಧಾನ ಪ್ರಸಿದ್ಧವಾಗುತ್ತಾ ನಡೆದಿದೆ. ಪ್ರಾಚೀನ ಭಾರತೀಯರ ಸಭ್ಯತೆಯ ಅವಶೇಷಗಳು ಇನ್ನು ಅನೇಕ ದೇಶಗಳಲ್ಲಿ ಕಂಡುಬರುತ್ತಾ ಇವೆ. ಭೂಮಿಯೊಳಗಿಂದ ಅಗೆದುತೆಗೆದ ಅನೇಕ ಪುರಾತನ ಪಟ್ಟಣಗಳು ನಮ್ಮ ಸಂಸ್ಕೃತಿಯ ಜೀವಂತ ಉದಾಹರಣೆಗಳಾಗಿವೆ. ಕ್ರಿ. ಶ. ೧೯೨೧ನೆಯ ಇಸ್ವಿಯಲ್ಲಿ ಪಂಜಾಬದಲ್ಲಿಯ **ದರ** ಮತ್ತು ಸಿಂಧದಲ್ಲಿಯ **ಮೋಹನ** ದಂಡೇರಿ ಎಂಬ ಸ್ಥಳಗಳಲ್ಲಿ ದೊರೆತ ಪುರಾತನ ಪಾತ್ರೆಗಳ ಚೂರುಗಳೂ, ಪ್ರೊಫೆಸರ್ ಲಿಡಸ್‌ರವರಿಗೆ ಮಧ್ಯ ಏಶಿಯಾದಲ್ಲಿಯ **ರೋಗಿಸ್ಥಾನ** ಎಂಬಲ್ಲಿ ದೊರೆತ ಚೂರುಗಳೂ ಒಂದೇ ವಿಧವಾಗಿದ್ದುದರಿಂದ ನಮ್ಮ ಸಂಸ್ಕೃತಿಯು ಅಲ್ಲಿಯವರೆಗೂ ವ್ಯಾಪಿಸಿದ್ದಿತೆಂಬುದಕ್ಕೆ ಸಾಕ್ಷಿಯಾಗಿವೆ ಅದೇ ಪ್ರಕಾರ ಅಫಗಾಣಿಸ್ಥಾನ ಮತ್ತು ಬಲೂಚಿಸ್ಥಾನ ದೇಶಗಳಲ್ಲಿಯ **ಕ್ವಾಥ** ಮತ್ತು **ಮಸ್ತುಂಗ** ಈ ಎರಡು ಸ್ಥಳಗಳಲ್ಲಿ ಇನ್ನೂ ಶಂಕರನ ಮತ್ತು ಕಾಳಿಯ ದೇವಾಲಯಗಳ ಅವಶೇಷವು ದೃಷ್ಟಿಗೆ ಬೀಳುತ್ತಲಿವೆ. ಬಲೂಚಿ ಜನರ **ಕೆಲವು** ಪಂಗಡದವರಲ್ಲಿ ವಿವಾಹವೇ ಮೊದಲಾದ ಕಾರ್ಯಗಳಲ್ಲಿದ್ದ ಸಂಸ್ಕಾರವು ಇನ್ನೂ ನಮ್ಮಂತೆಯೇ ಇದೆ. **ಖಾನಕ್ಲಾಥ್**‌ದಲ್ಲಿಯ **ಮಕ**ರಾನ್ ಎಂಬಲ್ಲಿ ವಾಸಿಸುವ ಗಿಚಕಿ ಜನಗಳು ತಮ್ಮ ಪೂರ್ವಜರ ಹೆಸರುಗಳು ಜಸವಂತಸಿಂಹ, ಮಾನಸಿಂಹ ಎಂಬುದಾಗಿದ್ದವೆಂದು ಈಗಲೂ ಹೇಳುತ್ತಿದ್ದಾರೆ.

ಕ್ರಿ. ಶ. ೧೯೧೨ನೆಯ ಇಸವಿಯಲ್ಲಿ ಪ್ರೊ. ವಿಕಲರ್ಸ್‌ರವರಿಗೆ **ಮೆಸೋಪೋಟೆಮಿಯಾ**ದಲ್ಲಿ ದೊರೆತ ಎರಡು ಶಿಲಾಲೇಖನಗಳಿಂದ ೩೫೦೦ ವರ್ಷಗಳ ಪೂರ್ವದಲ್ಲಿ ಅಲ್ಲಿ ಇಂದ್ರ, ವರುಣ ಮೊದಲಾದ ವೈದಿಕ ದೇವತೆಗಳ ಪೂಜೆಯನ್ನು ಮಾಡುತ್ತಿದ್ದರೆಂದೂ ಮತ್ತು ಅಲ್ಲಿಯ ರಾಜರ ಹೆಸರು ಸುಬಂಧು, ಸರ್ವದತ್ತ, ದಶರಥ ಮೊದಲಾಗಿ ಇದ್ದವೆಂದೂ ಕಂಡುಬರುತ್ತವೆ.

ಉತ್ತರ ಅಮೇರಿಕೆಯಲ್ಲಿಯ, ಮೆಕ್ಸಿಕೊ ಎಂಬಲ್ಲಿ ರಾಮಸೀತಳ ಉತ್ಸವವನ್ನು ನೆರವೇರಿಸುದುದೂ **ಜಾಣಿ** ಮತ್ತು ದಕ್ಷಿಣ ಅಮೇರಿಕೆಯಲ್ಲಿಯ **ಪೇರೂ** ದೇಶದಲ್ಲಿಯ ಸೂರ್ಯಮಂದಿರಗಳ ಗುರುತು ಇನ್ನೂ ದೊರೆಯುತ್ತಿರುವುದೂ ಆರ್ಯಜನಗಳು ಅಲ್ಲಿ ವಾಸವಾಗಿದ್ದರೆಂದು ಸ್ಪಷ್ಟವಾಗುತ್ತದೆ.

ಇನ್ನು ಪೂರ್ವದಿಕ್ಕಿನ ಕಡೆಗೆ ನೋಡೋಣ. ಸೀಯಾಮ ದೇಶದ ಸದ್ಯದ ರಾಜ, ಮಂತ್ರಿ ಮತ್ತು ಸೇನಾಪತಿ ಇವರ ಹೆಸರುಗಳು ಅನುಕ್ರಮವಾಗಿ ರಾಮಪಂಚಮ, ಧರ್ಮರಾಜ ಮತ್ತು ಯಮರಾಜ ಎಂಬುದಾಗಿ ಇವೆ. **ಅನಾಥ** ಎಂಬಲ್ಲಿಯ ಅರಣ್ಯದಲ್ಲಿ ಶಿವಮಂದಿರದ ಗುರುತುಗಳೂ, ಸುಮಂತ್ರಾ, ಜಾವಾ, ಬಾಲಿ, ಮೊದಲಾದ ದ್ವೀಪಗಳಲ್ಲಿ ಮಹಾಭಾರತ ಮತ್ತು ಗೀತಾಗ್ರಂಥಗಳೂ ದೊರೆಯುತ್ತಿವೆ

ಕೇವಲ ಆರ್ಯ ಸಂಸ್ಕೃತಿಯು ಮಾತ್ರ ಈ ಪ್ರಕಾರ ಹಬ್ಬಿತೆಂತಲ್ಲ. ಆರ್ಯಜನರ ಸಾಮ್ರಾಜ್ಯವು ಕೂಡಾ ಪಸರಿಸಿದ್ದಿತೆಂದು ಮಹಾಭಾರತದಿಂದ ಕಂಡುಬರುತ್ತದೆ. ಚೀನದ ಭಗದತ್ತ, ಇರಾಣದ ಶಲ್ಯ, ಯುರೋಪದಲ್ಲಿಯ ಬಿಡಾಲಾಕ್ಷ ಮತ್ತು ಅಮೇರಿಕೆಯ ಬಭ್ರುವಾಹನ ಇವರು ಮಾಂಡಲೀಕರಾಗಿ ಭಾರತೀಯ ಯುದ್ಧದಲ್ಲಿ ಭಾಗತೆಗೆದುಕೊಂಡಿದ್ದರು.

ಇತರ ದೇಶದವರಿಗೆ ಬಟ್ಟೆಯ ಉಪಯೋಗವೇ ಗೊತ್ತಿಲ್ಲದಿದ್ದಾಗ ನಮ್ಮ ಪೂರ್ವಜರು ಅನೇಕ ಕಲೆಗಳಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದರು. ಗಣಿತ ವಿಜ್ಞಾನ ಮತ್ತು ಜ್ಯೋತಿಷ್ಯಗಳ ರಚನೆಯು ಮೊದಲು ಭರತಖಂಡದಲ್ಲಿಯೇ ಆಯಿತೆಂದು ಕೋಲಬ್ರುಕ್ರ ಮತವಾಗಿದೆ. ಕ್ರಿ. ಶ. ೮೦೦ ವರ್ಷಗಳ ಪೂರ್ವದಲ್ಲಿಯೇ **ಯುನಾನಿ** ಜನಗಳು ದಶಾಂಶ ಮತ್ತು ಭೂಮಿತಿಯನ್ನು ಭಾರತೀಯರಿಂದ ಕಲಿತುಕೊಂಡು ಹೋದ ನಂತರ ಅವರ ಸಹಾಯದಿಂದ ಯುರೋಪಿಯನ್ನರು ಕಲಿತರು ಹಾರೂನ್ ರಶೀದನು ಮನಕಾ ಮತ್ತು ಸಲೋಹ ಎಂಬ ಭಾರತೀಯ ವೈದ್ಯರನ್ನು ತನ್ನ ಓಲಗಕ್ಕೆ ಕರೆಯಿಸಿ ಸನ್ಮಾನಗೊಳಿಸಿದನು ಜಗದ್ವಿಖ್ಯಾತನಾದ ಶಿಕಂದರ ಬಾದಶಹನು ಮಹಾತ್ಮಾ ಕಲ್ಯಾಣ ಮುನಿಯ ತತ್ವಜ್ಞಾನಕ್ಕೆ ಬೆರಗಾಗಿ ಹೋದನು. ಏಸು ಕ್ರೈಸ್ತನು ಕೂಡಾ ಭರತಖಂಡಕ್ಕೆ ಬಂದು ವಿದ್ಯೆಯನ್ನು ಸಂಪಾದಿಸಿದನೆಂದು ರೋಮದ ಪಾದ್ರಿಗಳಾಗಿದ್ದ ನಿಕೋಲಸ್‌ರವರು ನಮ್ಮ "Life of Christ" ಎಂಬ ಪುಸ್ತಕದಲ್ಲಿ ಬರೆದಿದ್ದಾರೆ,

ಇದರಂತೆ ಕಲಾಕೌಶಲ್ಯಗಳಲ್ಲಿಯೂ ಭಾರತೀಯರು ಜಗತ್ತಿನಲ್ಲಿಯೇ ಪ್ರಸಿದ್ಧರಾಗಿದ್ದರು. ಇಲ್ಲಿಯ ಡಾಕಾ ಮಲಮಲಿನ ಬಟ್ಟೆಯು ಪರದೇಶದ ಪೇಟೆಗಳನ್ನು ಆಶ್ಚರ್ಯಗೊಳಿಸಿದ್ದಿತು. ಇಲ್ಲಿಯ ವರೆಗೂ ನಮ್ಮ ಪೂರ್ವದ ವೈಭವದ ವಿಷಯವಾಗಿ ವಿವರಿಸಿದ್ದಾಯಿತು. ಈಗಿನ ನಮ್ಮ ಸ್ಥಿತಿಯನ್ನು ನೋಡೋಣ.

ಆ ಕಾಲದಲ್ಲಿ ನಾವು ಜಗತ್ತಿನ ಗುರುಗಳೆಂದು ಅನ್ನಿಸಿಕೊಳ್ಳುತ್ತಿದ್ದೆವು. ಆದರೆ ಈಗ ನಮ್ಮನ್ನು ಶಿಷ್ಯರನ್ನಾಗಿಯು ಕೂಡ ಯಾರೂ ತಮ್ಮ ಹತ್ತಿರ ಕರೆದುಕೊಳ್ಳಲು ಸಿದ್ಧರಿಲ್ಲ. ಪಂ. ಭವಾನಿ ದಯಾಳರವರು ದಕ್ಷಿಣ ಆಫ್ರಿಕೆಯಲ್ಲಿ ಕ್ರಿ. ಶ. ೧೯೧೭ರಲ್ಲಿ ಹಿಂದೀ ಹುಡುಗರಿಗೋಸ್ಕರ ಒಂದು ಶಾಲೆಯನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿ ಅದಕ್ಕಾಗಿ ಒಬ್ಬ ಯುರೋಪಿಯನ್ ಶಿಕ್ಷಕರಿಗಾಗಿ ಪ್ರಕಟನೆ ಹೊರಡಿಸಿದರು. ಆದರೆ ಒಬ್ಬ ಪಾದ್ರಿ ಮಹಾಶಯರು ಈ ಪ್ರಕಾರ ಇವರಿಗೆ ಪತ್ರಬರೆದು ತಿಳಿಸಿದರು. "ಶಾಸನವನ್ನು ನಿರ್ಮಾಣಮಾಡುವ ನಾವು ಗೋರಾಜನಗಳು ಹಿಂದುಸ್ಥಾನದ ಕೂಲಿಯನ್ನು ಮಾಡುವ ಜನಗಳ ಮಕ್ಕಳಿಗೆ ಕಲಿಸಲು ಇಚ್ಛಿಸುವುದಿಲ್ಲ."

ಹಾಯ! ಹಾಯ!! ಜಗತ್ತಿಗೇನೇ ಗುರುಪ್ರಾಯರಾಗಿ ಮೆರೆದ ಭಾರತೀಯ ಸಂತತಿಯವರು ಈಗ ಕೂಲಿಕಾರರಲ್ಲಿ ಎಣಿಸಲ್ಪಡಬೇಕಾಯಿತಲ್ಲವೇ? ಒಂದು ಕಾಲದಲ್ಲಿ ಚಕ್ರವರ್ತಿ ರಾಜ್ಯವನ್ನು ಉಪಭೋಗಿಸುತ್ತಿದ್ದ ಭಾರತೀಯರು ಇಂದು ದಾಸತ್ವದ ಬೇಡಿಗಳಲ್ಲಿ ಹೊರಳಾಡಬೇಕಾಯಿತಲ್ಲವೇ? ಒಂದು ಕಾಲದಲ್ಲಿ ಜಗತ್ತಿಗೇನೇ ಸರ್ವಸಾಮಾನುಗಳನ್ನು ಪೂರೈಸಿಕೊಡುತ್ತಿದ್ದ ಭಾರತೀಯರು ಇಂದು ಒಂದು ಚಿಲ್ಲರೆ ಸಾಮಾನಿಗಾದರೂ ಅನ್ಯರ ಮುಖವನ್ನು ನೋಡಬೇಕಾಯಿತಲ್ಲವೇ? ಒಂದು ಕಾಲದಲ್ಲಿ ಜಗತ್ತಿನಲ್ಲಿಯೇ ತಮ್ಮ ಸಂಸ್ಕೃತಿಯನ್ನು ಸ್ಥಾಪಿಸಿದ ಭಾರತೀಯರು ಇಂದು ತಮ್ಮ ದೇಶದಲ್ಲಿಯೇ ತಮ್ಮ ಸಂಸ್ಕೃತಿಯನ್ನು ಕಳೆದುಕೊಳ್ಳುವ ಪ್ರಸಂಗ ಬಂದಿತಲ್ಲವೇ?

ತರುಣ ಸುಧಾರಕ.

ವೀರಶೈವ ತತ್ವಪ್ರಚಾರಕ ಸಂಘದ ಸದಸ್ಯರು.

—※—

(೧೨ ನೆಯ ಸಂಚಿಕೆಯಿಂದ ಮುಂದುವರಿದುದು.)

೧೧೦೭ ಶ್ರೀ ಲಿಂಗನಗೌಡ ಬಸನಗೌಡ ಗೋಣಿ ಬಂಡಿಹಾಳ

೧೧೦೮ ,, ತೋಟಪ್ಪ ಸಿದ್ರಾಮಪ್ಪ ಕೊಣಗೊರ್ತಿ ಸದಾಶಿವಪೇಟಿ

೧೧೦೯ ,, ನಿಂಗಪ್ಪ ಮಲ್ಲಪ್ಪ ಕಟ್ಟೀಮನಿ ರಾಣೆಬೆನ್ನೂರ

೧೧೧೦ ,, ವೀರಪ್ಪ ಕರಿಯಪ್ಪ ಮುತ್ತಾಳ ಆಡೂರ

೧೧೧೧ ,, ಫಾಲಾಕ್ಷ ವೀರಪ್ಪ ಹೊಟ್ಟಿ ಹಾವೇರಿ

೧೧೧೨ ,, ಈಶ್ವರಪ್ಪ ಫಕೀರಪ್ಪ ಗಡದ ರಾಣೆಬೆನ್ನೂರ

೧೧೧೩ ವೇ ಚನವೀರಯ್ಯ ಗುರುಸಿದ್ಧಯ್ಯ ಅಜ್ಜವಡೇರಮಠ ,,

೧೧೧೪ ,, ಶಾಂತವೀರಯ್ಯ ವೀರಪ್ಪಯ್ಯ ಕುಲಕರ್ಣಿ ,,

೧೧೧೫ ಶ್ರೀ ಮಹಾದೇವಪ್ಪ ಚನಬಸಪ್ಪ ಬದಾಮಿ ,,

೧೧೧೬ ,, ಮುಪ್ಪಣ್ಣ ಮುರಿಗೆಪ್ಪ ಜಂಬಿಗಿ ,,

೧೧೧೭ ,, ಪುಟ್ಟಪ್ಪ ಚನ್ನವೀರಪ್ಪ ಬದಾಮಿ ,,

೧೧೧೮ ವೇ ರುದ್ರಪ್ಪಯ್ಯ ಮಡಿವಾಳಪ್ಪಯ್ಯ ಅಂದೇಲಿಮಠ ,,

೧೧೧೯ ಶ್ರೀ ಫಕೀರಪ್ಪ ಬಸವಣ್ಣೆಪ್ಪ ಸ್ವಕನೋತ್ರ ,,

೧೧೨೦ ವೇ ಸದಾಶಿವ ಬಸವಣ್ಣೆಪ್ಪಯ್ಯ ಷಡಕ್ಷರಿಮಠ ,,

೧೧೨೧ ಶ್ರೀ ಶಂಕರಗೌಡ ನೀಲನಗೌಡ ಪಾಟೀಲ ,,

೧೧೨೨ ,, ಚನಮಲ್ಲಪ್ಪ ಬೆನಕಪ್ಪ ಯಡಿಯಾಪೂರ ,,

೧೧೨೩ ,, ಕೊಟ್ರಬಸಪ್ಪ ಶಿವಪ್ಪ ಪಟ್ಟಣಶೆಟ್ಟಿ ,,

೧೧೨೪ ,, ಈರನಗೌಡ ಮಲ್ಲನಗೌಡ ಗುಡ್ಡದ ಹೊಸಹಳ್ಳಿ

೧೧೨೫ ,, ಬಸವಲಿಂಗಪ್ಪ ಕುರುವತ್ತಿ ರಾಣೆಬೆನ್ನೂರ

೧೧೨೬ ,, ಬಸಪ್ಪ ಕುರುವತ್ತೆಪ್ಪ ಕುರುವತ್ತಿ ,,

೧೧೨೭ ,, ಶಿವಶಂಕರಪ್ಪ ಚನ್ನಪ್ಪ ಯಡಿಯಾಪೂರ ,,

೧೧೨೮ ,, ಮಲ್ಲಪ್ಪ ಸಿದ್ಧಪ್ಪ ನಿಡಗುಂದಿ ,,

೧೧೨೯ ವೇ ಬಸಪ್ಪಯ್ಯ ರುದ್ರಪ್ಪಯ್ಯ ಹಿರೇಮಠ ,,

೧೧೩೦ ,, ಅಡಿವೆಪ್ಪ ಬಸಪ್ಪ ಕೋಡೆಮಗ್ಗಿ ,,

೧೧೩೧ ,, ಮಲ್ಲಯ್ಯ ಗುರುಬಸಪ್ಪಯ್ಯ ಹಿರೇಮಠ ,,

೧೧೩೨ ,, ವೀರಸಂಗಪ್ಪ ಮಲ್ಲಪ್ಪ ಪಾಟೀಲ ,,

೧೧೩೩ ,, ನಿಂಗಪ್ಪ ಭರಮಪ್ಪ ಹಿರೇಕೆರೂರು ,,

೧೧೩೪ ,, ಸಂಗಪ್ಪ ಚನ್ನಪ್ಪ ಕುರುವತ್ತಿ ,,

೧೧೩೫ ,, ಶಿವಲಿಂಗಪ್ಪ ರುದ್ರಪ್ಪ ಹರಪನಹಳ್ಳಿ ,,

೧೧೩೬ ,, ರಾಮಪ್ಪ ಸಂಕಪ್ಪ ಹುಂಚಿನಮನಿ ,,

೧೧೩೭ ,, ಮುರಿಗೆಪ್ಪಯ್ಯ ದೊಡ್ಡಚಿನ್ನಬಸಪ್ಪಯ್ಯ ಷಡಾಕ್ಷರಿಮಠ ,,

೧೧೩೮ ,, ನೀಲಪ್ಪ ನಿಂಬಪ್ಪ ಯಲಿಗಾರ ,,

೧೧೩೯ ,, ಮಳ್ಳಪ್ಪ ಸಂಗಪ್ಪ ಮುಜ್ಜಿ ,,

೧೧೪೦ ,, ಗುರುಲಿಂಗಯ್ಯನವರು ಮಹಲಿಂಗಯ್ಯನವರು ಗುರುಪಾದ ದೇವರ ಮಠ.

೧೧೪೧ ,, ಬಸಪ್ಪ ಮಲ್ಲಪ್ಪ ಯಡಿಯಾಪೂರ ,,

೧೧೪೨ ,, ಶಂಕರಗೌಡ ಬಸನಗೌಡ ಪಾಟೀಲ ,,

೧೧೪೩ ,, ಚೆನ್ನಬಸಪ್ಪ ವೀರಬಸವಪ್ಪ ಆನಿಶೆಟ್ರ ,,

೧೧೪೪ ,, ತೋಟಪ್ಪ ಬಸಪ್ಪ ಕಂಠಿ ಇಂಗಳಗಿ

ಪಬನಹಿತೈಷಿ ಎಂಬ ಬಂಗಾಲಿ ಸಾಪ್ತಾಹಿಕ ಪತ್ರದ ಸಂಪಾದಕರಾದ ಪಂ. ವಸಂತಕುಮಾರ ವಿದ್ಯಾವಿನೋದಿನಿಯವರ ಮನೆಯನ್ನು ಕಳೆದ ತಿಂಗಳು ೨೨ನೆಯ ತಾರೀಖಿನ ದಿವಸ ಪೋಲಿಸರು ಶೋಧಿಸಿದರು.

ಶ್ರೀ. ವೀರಶೈವ ಸಮಾಜೋತ್ಕರ್ಷ ಸಾಧಕ ಸಂಘ ಬೆಂಗಳೂರು.

ಇತ್ತೀಚೆಗೆ ವೀರಶೈವ ಧರ್ಮವು ಗುರುಜಂಗಮರ ಅನೈಕಮತ್ಯದಿಂದಲೂ, ಶಾಸ್ತ್ರಿಗಳ ಪೌರ್ಯಾತ್ಮದಿಂದಲೂ, ಒಳಭೇದಗಳ ಹೋರಾಟದಿಂದಲೂ, ಧರ್ಮಾಧಿಕಾರಿಗಳ ಸೂತ್ರ ದುರುಪಯೋಗದಿಂದಲೂ, ಶಿಷ್ಯರ ಮೂಢತನದಿಂದಲೂ, ಧನಿಕರ ಸ್ವಾರ್ಥದಿಂದಲೂ, ಮತ್ತು ಬಡವರ ನಿಶ್ಶಕ್ತಿಯಿಂದಲೂ ಕಳೆಗುಂದುತ್ತ ಬಂದಿರುವದನ್ನು ನೋಡಿದರೆ ಮನನೊಂದಿದ ವೀರಶೈವ ಉತ್ಸಾಹಿ ತರುಣರು ಕೆಲವರು ತಾ. ೨೩-೧೨-೧೯೩೨ನೇ ಶುಕ್ರವಾರ ಸಭೆ ಸೇರಿ ಮೇಲ್ಕಂಡ ಹೆಸರಿನ ಸಂಘವೊಂದನ್ನು ಸ್ಥಾಪಿಸಿದರು. ಈ ಸಂಘದ ಉದ್ದೇಶವು ಧರ್ಮಾಧಿಕಾರಿಗಳ ಸೂತ್ರ ದುರುಪಯೋಗ ನಿವಾರಣೆ, ಪಂಡಿತರ ಅವ್ಯವಹಾರಿಕತನ ಖಂಡನೆ, ಮೊದಲಾದ ಧಾರ್ಮಿಕ ವಿಚಾರಗಳೂ ಸಮಾಜದ ಮೌಢ್ಯ ನಿವಾರಣೆ, ಅಸ್ಪೃಶ್ಯತಾ ನಿವಾರಣೆ ಮೊದಲಾದ ಸಾಮಾಜಿಕ ಸುಧಾರಣೆಗಳೂ, ವಿವಾಹ ಮಠಾಧಿಕಾರ ಮೊದಲಾದ ಸಮಾರಂಭಗಳಲ್ಲಿ ನಡೆಯುವ ದುಂದುಗಾರಿಕೆಗಳನ್ನು ನಿವಾರಿಸುವ ಆರ್ಥಿಕ ಸುಧಾರಣೆಗಳೂ ಇವುಗಳಾಗಿದ್ದು ಇದನ್ನು ನೆರವೇರಿಸಲು ಸಲಹೆಗಾರ ಮಂಡಲಿ, ಕಾರ್ಯನಿರ್ವಾಹಕ ಮಂಡಲಿ, ಮತ್ತು ಸದಸ್ಯರ ಮಂಡಲಿ ಎಂದು ೩ ಮೂರು ಮಂಡಲಿಗಳು ಏರ್ಪಡಿಸಲ್ಪಟ್ಟವು. ಈ ಉದ್ದೇಶಗಳನ್ನು ಪ್ರಥಮತಃ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸುವ ನಿರ್ಧಾರಮಾಡಿ ಹೊಸ ವರ್ಷದಾರಂಭದಿಂದ ೧೯೩೩ ಕ್ಕೆ ಆರಂಭಿಸುವ ವ್ಯವಸ್ಥೆಯಾಗಿದೆ. ಸಮಾಜೋತ್ಕರ್ಷೆಯು ಒಂದೇ ಒಂದು ಪೂರ್ಣಾಭಿಮಾನದಿಂದ ನಿಷ್ಪಕ್ಷಪಾತ ದೃಷ್ಟಿಯಲ್ಲಿ ಬರೆಯುವ ಲೇಖನಗಳನ್ನು ಪೂಜ್ಯರೂ, ಜಂಗಮರೂ, ಸಮಾಜಬಾಂಧವರೂ ಶಾಂತಭಕ್ತಿಯಿಂದ ಓದಿ ಸಮಾಜದ ಏಳಿಗೆಗೆ ಸಹಾಯರಾಗಬೇಕೆಂದೂ ಅತಿ ವಿನಯದಿಂದ ಸಂಘದಪರವಾಗಿ ಪ್ರಾರ್ಥಿಸುತ್ತೇನೆ.

ಟಿ. ಯಸ್. ಮಹಾದೇವಯ್ಯ.
ಸೆಕ್ರೆಟರಿ
ಶ್ರೀ ವೀರಶೈವ ಸಮಾಜೋತ್ಕರ್ಷ ಸಂಘ.

ಯರವಡಾ ಕಾರಾಗೃಹದಲ್ಲಿ ಶಿಕ್ಷೆಯನ್ನನುಭವಿಸುತ್ತಿದ್ದ ಶ್ರೀ. ನಾರಾಯಣ ವಾಂಡು ಎಂಬ ೨೩ ವಯಸ್ಸಿನ ಸತ್ಯಾಗ್ರಹಿಯು ಕಳೆದ ಶುಕ್ರವಾರ ಆಕಸ್ಮಾತ್ತಾಗಿ ತಲೆಯಮೇಲೆ ಕಲ್ಲುಬಿದ್ದುದರಿಂದ ಮರಣಹೊಂದಿದನು. ಡಿಶಂಬರ ತಿಂಗಳ ೨೮ನೆಯ ತಾರೀಖಿನ ದಿವಸ ಶಿಕ್ಷೆಯ ಅವಧಿಯು ಪೂರೈಸಿ ಬಿಡುಗಡೆಯಾಗುವದಿದ್ದಿತು.

ಹೈದರಾಬಾದಿನ ನಿಜಾಮು ಸಾಹೇಬರು ಇಷ್ಟರಲ್ಲಿಯೇ ಬಡೋದೆಗೆ ಹೋಗುವವರಿಧ್ದಾರೆ.

೧೯೩೩ನೇ ಜಾನೇವಾರಿ ೧ನೆಯ ತಾರೀಖಿನ ದಿವಸ ತ್ರಿವೇಂದ್ರಮ್ ಎಂಬಲ್ಲಿ ಮದ್ರಾಸದ ಅಡ್ವೋಕೇಟ್ ದಿ. ಬ. ಟಿ. ಆರ್. ರಾಮಚಂದ್ರ ಅಯ್ಯರ್ ಅಧ್ಯಕ್ಷತೆಯಲ್ಲಿ ಸನಾತನ ಹಿಂದೂ ಪರಿಷತ್ ಕೂಡುವದಿದೆ. ಅದರಲ್ಲಿ ಆದಿಜನರ ಮಂದಿರ ಪ್ರವೇಶದ ಬಗ್ಗೆ ಠರಾವ ಮಾಡುವವರಿದ್ದಾರೆ.

ಸ್ಪೇನದಲ್ಲಿಯ ಬರ್ಸಿಲೋನಾ ಎಂಬಲ್ಲಿ ಒಂದು ದೊಡ್ಡ ಅಂಗಡಿಗೆ ಬೆಂಕಿ ಹತ್ತಿ ಸಾಧಾರಣ ೫ ಲಕ್ಷ ಪೌಂಡುಗಳ ನಷ್ಟವಾಗಿದೆ.

ಚಿತಗಾಂಗ ಕಾಲೇಜಿನಲ್ಲಿಯ ವಿದ್ಯಾರ್ಥಿನಿಯರಾದ ಕು. ಕಲ್ಪಲಿತಾ ದತ್ತ ಎಂಬವಳ ಮೇಲೆ ಕ್ರಿ. ಪ್ರೊ. ಕೋಡಿನ ೧೦೯ ನೇ ಕಲಮಿನ ಪ್ರಕಾರ ಕಟ್ಲೆ ನಡೆದುದರಿಂದ ಕಾಲೇಜನಿಂದ ಅವರ ಹೆಸರನ್ನು ಕಡಿಮೆಮಾಡಿದ್ದಾರೆ.

ವೀರಶೈವರಲ್ಲಿ ಯಾರು ಯಾವ ವರ್ಣದವರು?

ವೀರಶೈವರಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣಗಳಿವೆಯೆಂದು ಇತ್ತೀಚಿಗೆ ಕೆಲವರು ಹೇಳುತ್ತಿದ್ದಾರಷ್ಟೆ. ಇವರು ವೀರಶೈವರಲ್ಲಿ ಯಾರಿಗೆ ಯಾವ ವರ್ಣದವರೆಂದು ಹೇಳುತ್ತಿದ್ದಾರೆಯೋ ಅದು ಶಾಸ್ತ್ರಸಮ್ಮತವಿಲ್ಲದಿದ್ದರೂ ಯುಕ್ತಿಯುಕ್ತವಾಗಿಯಾದರೂ ಇದೆಯೋ? ಇಲ್ಲವೇ? ಸ್ವಲ್ಪ ಯೋಚಿಸೋಣ. ಈ ವರ್ಣ ಕಲ್ಪನೆಯಿಂದ ವೀರಶೈವರಲ್ಲಿ ಆಚಾರಾದಿಗಳಿಂದುಂಟಾಗತಕ್ಕ ಶ್ರೇಷ್ಠತೆಯ ತಾರತಮ್ಯ ಭಾವಗಳಿಗು ಕೂಡಾ ಹೇಗೆ ಲೋಪವುಂಟಾಗುತ್ತದೆಂಬುದನ್ನು ಸ್ವಲ್ಪ ನೋಡೋಣ.

ಈ ವರ್ಣವಾದಿಗಳು ಮಾಹೇಶ್ವರರಿಗೆ ಬ್ರಾಹ್ಮಣರೆಂದು ಹೇಳುತ್ತಾರಷ್ಟೆ. ಈ ವೀರಶೈವಬ್ರಾಹ್ಮಣರು ವೀರಶೈವರಲ್ಲಿರುವ ಕ್ಷತ್ರಿಯ ವೈಶ್ಯ ಮತ್ತು ಶೂದ್ರ ಎಂಬ ಉಳಿದ ಮೂರು ವರ್ಣದವರಿಗೆ ತಾವು ಗುರುಗಳೆಂದೂ ತಿಳಿದುಕೊಂಡಿದ್ದಾರೆ. ಎಂದ ಮೇಲೆ ಈ ನಾಲ್ಕು ವರ್ಣಗಳು ಪ್ರಾಕೃತರ ಬ್ರಾಹ್ಮಣಾದಿ ನಾಲ್ಕು ವರ್ಣಗಳಂತೆಯೇ ಒಂದಕ್ಕಿಂತ ಒಂದು ಶ್ರೇಷ್ಠವಾಗಿಯೂ ಇವೆಯೆಂದೇ ಇವರು ಗ್ರಹಿಸಿರುವುದು ಸ್ಪಷ್ಟವಾಗುತ್ತದೆ.

ಗೌಡರು ದೇಸಾಯಿ ದೇಶಪಾಂಡೆ ಮೊದಲಾದವರು ವೀರಶೈವ ಕ್ಷತ್ರಿಯರೆಂದು ಬರೆಯುತ್ತಿದ್ದಾರೆ. ಇದು ನ್ಯಾಯವಾಗಿದ್ದರೆ ವೀರಶೈವರಲ್ಲಿಯ ಅನೇಕ ಒಳಪಂಗಡದವರು ಗೌಡರು ದೇಸಾಯಿಗಳು ಇದ್ದಾರೆ. ವೀರಶೈವ ಬ್ರಾಹ್ಮಣರೆಂದು ಹೇಳಿಸಿಕೊಳ್ಳುವ ಮಾಹೇಶ್ವರರೂ ಅನೇಕ ಕಡೆ ಗೌಡರಿದ್ದಾರೆ, ಅವರು ಗೌಡರಾದ್ದರಿಂದ ಕ್ಷತ್ರಿಯರಾದರೇ? ಮಾಹೇಶ್ವರರಿದ್ದುದರಿಂದ ಬ್ರಾಹ್ಮಣರಾಗಿದ್ದಾರೆಯೇ? ಅಥವಾ ಅವರಿಗೆ ಈ ಎರಡೂ ವರ್ಣಗಳಿವೆಯೇ? ಗೌಡುಕೆಯಿರುವವರಿಗೆ ಅವರು ಕ್ಷತ್ರಿಯರೇ? ಯಾವ ಕಾರಣದಿಂದ ಗೌಡುಕೆ ಹೋದರೂ ಅವರು ಕ್ಷತ್ರಿಯರಾಗಿಯೇ ಇರುತ್ತಾರೆಯೇ?

ವೀರಶೈವರಲ್ಲಿಯ ಪಂಚಮಸಾಲಿಯವರು ಅಥವಾ ಅವರ ಮಾತಿನಲ್ಲಿ ಪಂಚಾಚಾರದವರು ಹೆಚ್ಚಾಗಿ ಗೌಡರು ದೇಸಾಯಿಗಳು ಇರುವುದರಿಂದ ಅವರಿಗೆ ಕ್ಷತ್ರಿಯರೆಂದು ಹೇಳಿದ್ದಾಗಿದೆಯೇ ವಿನಾ ಗೌಡರಿಗೂ ಕ್ಷತ್ರಿಯರಿಗೂ ಸಂಬಂಧವೇನೂ ಇಲ್ಲ. ಪಂಚಮಸಾಲಿಯವರಿಗೇನೇ ವೀರಶೈವ ಕ್ಷತ್ರಿಯರೆಂದು ಹೇಳಬೇಕಾಗಿ ಇವರು ತಿಳಿದುಕೊಂಡಿದ್ದಾರೆ. ಅದು ಸರಿಯೇ?

ಪಂಚಮಸಾಲಿಯವರು ವೀರಶೈವ ಕ್ಷತ್ರಿಯರೆಂದರೆ ವೀರಶೈವ ವೈಶ್ಯರಾರು? ಈಗ ಯಾರಿಗೆ ಬಣಜಗರೆಂದು ಹೇಳುತ್ತಿದ್ದಾರೆಯೋ ಅವರೇ ವೀರಶೈವ ವೈಶ್ಯರಂತೆ. ದೀಕ್ಷಾಬಳಿಕೆಯವರು, ಶೀಲಾಬಳಿಕೆಯವರು, ಲೋಕಬಳಿಕೆಯವರು, ಮೇಲುಪಾವಡದವರು, ಇವರೆಲ್ಲರೂ ವೈಶ್ಯರಾದರಲ್ಲವೇ? ಎಂದರೆ ಪಂಚಮಸಾಲಿಯವರಿಗಿಂತ ಇವರು ಕಡಿಮೆಯವರೆಂದು ತಿಳಿದಂತಾಗಲಿಲ್ಲವೇ? ಈ ಎರಡು ಪಂಗಡದವರಲ್ಲಿ ಮೇಲು ಕೀಳುಗಳ ಹೋರಾಟವು ವರ್ಣ ಕಲ್ಪನೆಯಿಂದುಂಟಾಗುವುದಿಲ್ಲವೇ ? ಪಂಚಮಸಾಲಿಯವರು ಹೆಚ್ಚಿನವರೆಂದರೆ ಬಣಜಿಗರು ಕಡಿಮೆಯವರಾಗಲು ಒಪ್ಪುವರೇ? ಶೀಲಾಚಾರಗಳಲ್ಲಿ ಇವರು ಎಷ್ಟೋ ಮುಂದರಿದಿಲ್ಲವೇ? ಇವರ ಶೀಲಾಚಾರದ ಮೇಲಿಂದ ಇವರೇ ಹೆಚ್ಚಿನವರಾದರೆ ಕ್ಷತ್ರಿಯರಿಗಿಂತ ವೈಶ್ಯರೇ ಹೆಚ್ಚಿನವರೆಂದು ಹೇಳಿದಂತಾಗಲಿಲ್ಲವೇ?

ಪಂಚಮಸಾಲಿಯವರಲ್ಲಿ ಗೌಡರು ದೇಸಾಯಿಗಳು ಮಾತ್ರ ಇರದೆ ಹೆಚ್ಚಾಗಿ ಒಕ್ಕಲತನವನ್ನೇ ಮಾಡುವವರೂ ಇದ್ದಾರಷ್ಟೆ ಒಕ್ಕಲತನ ವ್ಯಾಪಾರಗಳು ವೈಶ್ಯ ವೃತ್ತಿಗಳಾದುದರಿಂದ ಅವರೂ ವೈಶ್ಯರೇ ಸರಿಯೆಂದು ಬಣಜಿಗರು ಸಾಧಿಸಲಿಕ್ಕಿಲ್ಲವೇ?

ಇಷ್ಟೇ ಅಲ್ಲ; ವೀರಶೈವ ಬ್ರಾಹ್ಮಣರೆಂದು ಹೇಳಿಕೊಳ್ಳುವ ಮಾಹೇಶ್ವರರಲ್ಲಿಯೂ ಬಹುಜನರು ಒಕ್ಕಲತನ ವ್ಯಾಪಾರಗಳನ್ನು ಮಾಡುತ್ತಿರುವುದರಿಂದ ಅವರೂ ವೈಶ್ಯರೇ ಸರಿಯೆಂದು ಬಣಜಿಗರು ಹೇಳಿದರೆ ಆಗ ಅದಕ್ಕೆ ಉತ್ತರವೇನು? ಈ ವರ್ಣದ ಪಿಕಲಾಟದಿಂದ ಈ ಪ್ರಕಾರ ಈ ಮೂರು ಪಂಗಡದವರಲ್ಲಿ ವಿಹಿತವಾದ ವಿವಾದಗಳುಂಟಾಗಲಾರವೇ?

ಈ ಪ್ರಕಾರ ವೀರಶೈವ ಸಮಾಜದಲ್ಲಿ ಈ ಮೂರು ಮುಖ್ಯ ಪಂಗಡಗಳ ವಿನಾ ಇನ್ನುಳಿದ ಅನೇಕ ಒಳಪಂಗಡಗಳೆಲ್ಲಾ ಶೂದ್ರ ವರ್ಣದವುಗಳೆಂದು ಈ ವರ್ಣವಾದಿಗಳು ಹೇಳಬೇಕಾಗುವುದಷ್ಟೆ. ಮೇಲಿನ ಮೂರು ಪಂಗಡದವರ ಸೇವೆಯೇ ಈ ಎಲ್ಲ ಒಳಪಂಗಡದವರ ಕಾರ್ಯವೆಂತಲೂ ಗ್ರಹಿಸಬೇಕಾಗುವುದಿಲ್ಲವೇ? ಇದು ಯುಕ್ತವೂ ಶಕ್ಯವೂ ಇದೆಯೇ?

ವೇದಕಾಲದ ವರ್ಣಕಲ್ಪನೆಯಂತೆ ಈ ವೀರಶೈವ ವರ್ಣಕಲ್ಪನೆಯಾಗಿದ್ದರೆ ಮಾಹೇಶ್ವರರಾದ ಬ್ರಾಹ್ಮಣಾದಿಯಾಗಿ ಇನ್ನುಳಿದ ಶೂದ್ರರವರೆಗೆ ಸಕಲ ವೀರಶೈವರೂ ಪರಸ್ಪರ ಊಟೋಪಚಾರಗಳನ್ನು ಮಾಡಬೇಕಾಗುವದು. ಏಕೆಂದರೆ ವೇದಕಾಲದಲ್ಲಿಯ ಚಾತುರ್ವರ್ಣಗಳಾದರೂ ಪರಸ್ಪರ ಊಟೋಪಚಾರಗಳನ್ನು ಮಾಡುತ್ತಿದ್ದರು. ದ್ವಿಜರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಂತೂ ಪರಸ್ಪರ ಊಟೋಪಚಾರಗಳನ್ನು ಮಾಡುತ್ತಲೇ ಇದ್ದರಷ್ಟೆ. ಇವರಿಗೆ ಆಹಾರವನ್ನು ಸಿದ್ಧಪಡಿಸುವ ಸೇವೆಯೇ ಶೂದ್ರರಿಗೆ ಸಂಬಂಧಪಟ್ಟದ್ದಾಗಿದ್ದಿತು. ಎಂದಮೇಲೆ ಶೂದ್ರರು ತಾವು ಮುಟ್ಟದೆ ಮೂರುವರ್ಣದವರ ಊಟೋಪಚಾರಾದಿ ಸೇವೆಗಳನ್ನು ಮಾಡುತ್ತಿರುವುದು ಶಕ್ಯವೇ? ಎಂದಮೇಲೆ ಆಗಿನ ವರ್ಣಕಲ್ಪನೆಯಂತೆ ಈಗ ನಡೆಯುವರೇ?

ಆ ವೇದಕಾಲದ ವರ್ಣಕಲ್ಪನೆಯಿಲ್ಲದೆ ಇತ್ತೀಚಿನ ಪುರಾಣ ಕಾಲದ ಅಥವಾ ಗಣನೆಯ ಶತಮಾನದ ವರ್ಣಕಲ್ಪನೆಯ ಎತೆ ಈ ವೀರಶೈವ ಮತದ ವರ್ಣಕಲ್ಪನೆಯಾಗಿದ್ದರೆ ಮಾತ್ರ ಬ್ರಾಹ್ಮಣರಾದ ಮಾಹೇಶ್ವರರು ಅಥವಾ ಗುರುಗಳು ಬೇರೆಯವರಲ್ಲಿ ಎಂದರೆ ಪಂಚಮಸಾಲಿಯವರಾದ ಕ್ಷತ್ರಿಯರಲ್ಲಿಯೂ ಬಣಜಿಗರಾದ ವೈಶ್ಯರಲ್ಲಿಯೂ ಊಟೋಪಚಾರಗಳನ್ನು ಮಾಡಬಾರದಾಗುತ್ತದೆ. ಏಕೆಂದರೆ ಈಗ ಬ್ರಾಹ್ಮಣರು ಕ್ಷತ್ರಿಯರಲ್ಲಾಗಲಿ ವೈಶ್ಯರಲ್ಲಾಗಲಿ ಊಟಮಾಡುತ್ತಿದ್ದಾರಯೇ? ಇಲ್ಲವೇ ಇಲ್ಲ.

ಎಂದಮೇಲೆ ಬಣಜಿಗರು ಮತ್ತು ಪಂಚಮಸಾಲಿಯವರು ಕೂಡಾ ಪಾದೋದಕ ಪ್ರಸಾದಗಳ ವಿನಾ ಆರು ವರ್ಣದವರಾಗಿ ಆಚರಿಸಬೇಕಾಗಬಹುದಲ್ಲವೇ?

ಈ ಪ್ರಕಾರ ವೀರಶೈವ ವರ್ಣಗಳನ್ನು ಕಲ್ಪಿಸುವುದು ಯುಕ್ತಿಗು ಕೂಡಾ ಸಮಂಜಸವಾಗಿರದೆ ಕಲಹ ದ್ವೇಷಾಸೂಯೆಗಳಿಗೇನೇ ಕಾರಣವೆಂದು ತೋರುವುದಿಲ್ಲವೇ?

ಶ್ರೀ ವಿರಕ್ತ ಸಿಂಹಾಸನಾಧೀಶರ ವಿಷಯದಲ್ಲಿ ಶ್ರೀ ಪಂಚಾಚಾರ್ಯ ಪೀಠಾಧಿಕಾರಿಗಳಿಗೆ

ಆದರಬುದ್ಧಿಯಿದೆಯೇ?

ಸೊಲ್ಲಾಪುರದ ವಿಜಯಮಾಸ ಪತ್ರಿಕೆಯಲ್ಲಿ "ವಿರಕ್ತ ಮತ್ತು ಪಂಚಾಚಾರ್ಯ ಇವರಲ್ಲಿಯ ದ್ವೇಷಾಗ್ನಿ" ಎಂಬ ಈ ಲೇಖನವು ಪ್ರಸಿದ್ಧವಾದಂದಿನಿಂದ ಸಮಾಜದಲ್ಲಿ ಬಹಳೇ ಚರ್ಚೆಯು ನಡೆದಿರುತ್ತದೆ. ಈಗ ಬಹಳ ದಿವಸಗಳಿಂದ ಉಭಯ ಶ್ರೇಷ್ಠತರ ಧರ್ಮಾಧಿಕಾರಿಗಳಲ್ಲಿ ಅನೈಕ್ಯ ಉತ್ಪನ್ನವಾಗಿ ಅದರಿಂದ ಸಮಾಜದಲ್ಲಿ ಇಬ್ಬಣವು ಬೆಳೆದಿದ್ದು ಅದರ ಅನಿಷ್ಟ ಪರಿಣಾಮವು ಕರ್ನಾಟಕದಲ್ಲಿ ಆದದ್ದು ಕೇಳಬರುತ್ತಿತ್ತು. ಈಗ ಅದರ ಕಿಡಿಗಳು ಮಹಾರಾಷ್ಟ್ರದಲ್ಲಿ ಹಾರಿಬಂದು ಅಧಿಕ ದುಷ್ಪರಿಣಾಮವನ್ನುಂಟುಮಾಡುವ ಭೀತಿಯನ್ನು "ವೀರಶೈವ ಧರ್ಮಾಭಿಮಾನಿ" ಎಂಬ ಲೇಖಕರು ವ್ಯಕ್ತಪಡಿಸಿದ್ದು ಅದಕ್ಕೆ ಪುಷ್ಟೀಕಾರಕ ಉದಾಹರಣೆಗಳನ್ನು ಕೊಟ್ಟು ಸಿದ್ಧಮಾಡಿದ್ದಾರೆ. ಈ ವಿಧಾನಗಳು ಸತ್ಯ ಸ್ವರೂಪವುಳ್ಳವಿರುತ್ತವೋ ಅಥವಾ ಪಂಚಾಚಾರ್ಯರ ವಿಷಯವಾಗಿ ಮತ್ತು ಉಜ್ಜಯಿನೀ ಸಿಂಹಾಸನಾಧೀಶ್ವರರ ವಿಷಯವಾಗಿ ದುರ್ಬುದ್ಧಿ ಪ್ರೇರಿತರಾಗಿ ಅಸತ್ಯ ಮತ್ತು ನಿರಾಧಾರಗಳಾದ ಆರೋಪಗಳನ್ನು ಮಾಡಿರುವರೋ ಎಂಬುವನ್ನು ನೋಡುವ ಕೆಲಸವು ನಿಜವಾದ ಸಮಾಜ ಹಿತಚಿಂತಕರದಾಗಿದೆ. ಈ ರೀತಿಯಿಂದ ಮನಸ್ಸಿಗೆ ಪೂರ್ಣ ನಿಶ್ಚಯಮಾಡಿಕೊಳ್ಳದೆ ತಮ್ಮ ಅಭಿಪ್ರಾಯವನ್ನು ಮಾಡಿಕೊಳ್ಳಬಾರದೆಂದು ವಿನಂತಿ ಅದೆ. ವಿಜಯದೊಳಗಿನ ಧರ್ಮಾಭಿಮಾನಿಯ ಲೇಖವು ಅಸತ್ಯವೂ ಮತ್ತು ನಿರಾಧಾರವೂ ಇರುವದನ್ನು ಸಿದ್ಧಮಾಡುವ ಜವಾಬ್ದಾರಿಯು ಪಂಚಾಚಾರ್ಯ ಮತ್ತು ಅವರ ಅನುಯಾಯಿಗಳ ಕಡೆಗೆ ಇರುತ್ತದೆ. ಮತ್ತು ಉಜ್ಜಯಿನಿ ಸ್ವಾಮಿಗಳು ವಿರಕ್ತರ ನಿಂದೆಯನ್ನು ಕೇಳಿಯೂ ಕೂಡ ತಿರಸ್ಕಾರವನ್ನು ತೋರಿಸಲಿಲ್ಲ ಮತ್ತು ತೋರಿಸುವದಿಲ್ಲ. ಹೀಗೆಯೂ ಆ ಲೇಖದಲ್ಲಿ ಉಲ್ಲೇಖಿಸಲ್ಪಟ್ಟದ್ದರಿಂದ ಅವರ ಕಡೆಗೂ ಸಹ ಜವಾಬ್ದಾರಿ ಇದ್ದೇ ಇರುತ್ತದೆ. ಪ್ರಸಿದ್ಧವಾದಂಥ ಲೇಖವೂ ಅವರ ಅವಲೋಕನದಲ್ಲಿ ಬಂದಿದೆ. ಅದಕ್ಕೆ ಉತ್ತರವೆಂದು ಶ್ರೀ. ವಿರಕ್ತ ಸ್ವಾಮಿಗಳ ಶ್ರೀ ಬಸವೇಶ್ವರಾದಿ ಪೂಜ್ಯವಂದ್ಯ ಶಿವಶರಣರ ವಿಷಯದಲ್ಲಿರತಕ್ಕ ತಮ್ಮ ತಮ್ಮ ಪೂಜ್ಯ ಆದರಬುದ್ಧಿಯನ್ನು ಜನತೆಯ ನಿದರ್ಶನಕ್ಕೆ ತಂದು ಅವರ ತಪ್ಪು ತಿಳುವಳಿಕೆಯನ್ನು ದೂರಮಾಡಲು ಈ ಸುವರ್ಣ ಸಂಧಿಯನ್ನು ಯಾಕೆ ಕಳೆದುಕೊಳ್ಳಬೇಕು? ಇನ್ನಾದರೂ ಅವರು ಸ್ವತಃ ತಮ್ಮ ನಿರ್ಣಯವನ್ನು ಜಾಹೀರಪಡಿಸಬೇಕೆಂದು ನಮ್ರತಾಪೂರ್ವಕ ಆಗ್ರಹದ ವಿನಂತಿ ಇರುತ್ತದೆ.

ಪಂಚ ಪೀಠದವರ ಜಾಹೀರ ಪತ್ರ.

೧. ವಿರಕ್ತರ ವಿಷಯಕ್ಕೆ ತೀವ್ರ ಅನಾದರ ವೃತ್ತಿಯನ್ನು ಸ್ವತಃ ಪಂಚಾಚಾರ್ಯ ಸಿಂಹಾಸನಾಧೀಶ್ವರರ ಆಜ್ಞೆಯಿಂದ ಪ್ರೇರಿತರಾಗಿ ಅವರ ಮಂತ್ರಿಗಳ ಸಹಿ, ಶಿಕ್ಕಾ, ಮುದ್ರಾ ಸಹಿತ ಜಾಹೀರಾತುಗಳು ಪ್ರಸಿದ್ಧವಾಗಿವೆ. ಆ ಹಸ್ತಪತ್ರಿಕೆಗಳ ಮೇಲಿಂದಲೇ ಜಾಹೀರ ಸಭೆ ಕರೆದು ತಾ. ೨೮ನೇ ಜೂನ ೧೯೩೭ ನೆಯ ದಿವಸ ನಿಷೇಧ ವ್ಯಕ್ತಪಡಿಸಿ ಪಂಚ ಪೀಠಾಧಿಕಾರಿಗಳ ಕಡೆಗೆ ರಜಿಸ್ಟರ ಪತ್ರದ್ವಾರದಿಂದ ಆಹ್ವಾನ ಮಾಡಿದೆ. ಪಂಚಾಚಾರ್ಯರಿಂದ ಪ್ರಸಿದ್ಧವಾದ ಜಾಹೀರಾತಿನ ಒಂದು ಪ್ರತಿಯು ನಮ್ಮ ಕಡೆಗಿದೆ. ಇಚ್ಛಾ ಉಳ್ಳವರು ನೋಡಿ ಖಾತ್ರಿಮಾಡಿಕೊಳ್ಳಬಹುದು. ಆ ಪ್ರತಿಯನ್ನು ವಿಜಯಮಾಸಿಕ ಸಂಪಾದಕರ ಕಡೆಗೆ ಇಟ್ಟಿದೆ. ಆ ಜಾಹೀರ ಪತ್ರಿಕೆಯ ಮುಖ್ಯಾಂಶವು—

(ಅ) ಚಿತ್ರದುರ್ಗ, ಹಾನಗಲ್ಲು, ಕಲ್ಯಾಣ, ಬೀಳೂರು, ಸೊಲ್ಲಾಪೂರ, ಗದಗ, ಕೊಪ್ಪಳ, ಉರುವಕೊಂಡೆ, ಹುಬ್ಬಳ್ಳಿ, ಚಿಕಯತುಗೂರು, ನಿರಡಗುಂಬ, ಚಿತ್ರಗಿ, ಇಲಕಲ್ಲ, ಆಲಬಿ, ಬಳ್ಳಾರಿ ಇತ್ಯಾದಿ ಭಕ್ತಪ್ರಮುಖರಿರುವ ಮಠಗಳನ್ನು ಉಲ್ಲೇಖಿಸಿ ಈ ಗ್ರಾಮದೊಳಗಿನ ಸನ್ಯಾಸಿಗಳು ವಿರಕ್ತರು ಗುರುವರ್ಗದ ಅಧಿಕಾರವನ್ನು ಆಕ್ರಮಣ ಮಾಡಿಕೊಳ್ಳುವ ಪ್ರಯತ್ನವನ್ನು ನಡೆಸಿದ್ದಾರೆ. ಈ ಸನ್ಯಾಸಿಗಳು ಗುರುವರ್ಗದವರ ಶಿಷ್ಯರಾಗಿದ್ದು ಅವರ ಆಜ್ಞೆಯ ಮೇರೆಗೆ ನಡೆಯುವವರಾಗಿದ್ದು ಇತ್ತೀಚಿಗೆ ಡಾಂಭಿಕತನದಿಂದ ಸ್ವೈರವಾಗಿ ನಡೆಯುತ್ತಾರೆ. ಇದಕ್ಕಾಗಿ ಎಲ್ಲಾ ಮಠಾಧಿಕಾರಿಗಳು ಅವರ ಕಡೆಯಿಂದ ಆಜ್ಞೋಲಂಘನೆಯಾಗಬಾರದು. ತಮ್ಮ ಸಂಗಡ ಅವರು ಶಿಷ್ಯಭಾವನೆಯಿಂದ ನಡೆಯುವಂತೆ ಹೋಗುವಾಗ ಬರುವಾಗ ಸನ್ಮಾನಪೂರ್ವಕ ವಂದನೆಮಾಡುವಂತೆ ವ್ಯವಸ್ಥೆಯನ್ನಿಡಬೇಕು, ಇತ್ಯಾದಿ ವೃತ್ತಾಂತವು ಅದರಲ್ಲಿ ಬರೆದಿದೆ. ಇದೇ ಜಾಹೀರಾತಿಯಲ್ಲಿ ಪ್ರತಿಯೊಬ್ಬ ಪಂಚಾಚಾರ್ಯರ ನಂಬರು ಮತ್ತು ತಾರೀಖಿನ್ನು ಹಾಗೆ ಸಂಸ್ಥಾನ ಮುದ್ರೆ ಸಹಿತ ಅವರ ಕಾರಭಾರಿಗಳ ಸಹಿಗಳು ಮಾಡಲ್ಪಟ್ಟಿರುತ್ತವೆ. ಬಾಳೆಹಳ್ಳಿ ನಂ. ೭೩ ಉಜ್ಜನಿ, ನಂ. ೫೬ ಹಿಮವತ್ಕೇದಾರ ನಂ. ೧೯೪ ಶ್ರೀಶೈಲ ನಂ. ೨೩೩ ಕಾಶೀ ನಂ. ೬ ಈ ಪ್ರಕಾರ ಇರುತ್ತದೆ. ಈ ಜಾಹೀರ ಪತ್ರಿಕೆಯನ್ನು ಎಲ್ಲ ಮಠಾಧಿಕಾರಿಗಳ ಮತ್ತು ವೀರಶೈವ ಭಕ್ತಮಂಡಳಿಯ ಮಾಹಿತಿಗೋಸ್ಕರ ಸಲುವಾಗಿ ಪ್ರಸಿದ್ಧಮಾಡಿದೆಯೆಂದು ಬರೆದಿದ್ದಾರೆ. ಇರಲಿ, ಈ ಜಾಹೀರಪತ್ರಿಕೆಯು ಪಂಚಾಚಾರ್ಯ ಪೀಠಾಧಿಕಾರಿಗಳಿಗೆ ಮಾನ್ಯವಿದೆಯೋ ಇಲ್ಲವೇ? ಇಲ್ಲದಿದ್ದರೆ ಅದನ್ನು ಯಾರು ತೆಗೆದರು? ಅಂದಮೇಲೆ ಅವರ ಸಹಿಗಳು ಹೇಗಾದವು? ಸುಳ್ಳು ಇದ್ದದ್ದಾದರೆ ಜಾಹೀರ ರೀತಿಯಿಂದ ಮಾಡಿದ ಆಹ್ವಾನಕ್ಕೆ ಉತ್ತರವನ್ನೇಕೆ ಕೊಡಲಿಲ್ಲ?

(೨) ಮೊನ್ನೆ ಬಾರ್ಶಿ ಮುಕ್ಕಾಮಿನಲ್ಲಿ ಶ್ರೀ ಉಜ್ಜನಿ ಸ್ವಾಮಿಗಳು ಬಂದಾಗ್ಗೆ ಕಾಶೀನಾಥ ಶಾಸ್ತ್ರಿಯು ತುಂಬಿದ ಸಭೆಯಲ್ಲಿ ಉತ್ತರೇಶ್ವರ ದೇವಾಲಯದಲ್ಲಿ ನೂರಾರು ಜನರ ಸಮಕ್ಷಮ ವಿರಕ್ತರ ವಿಷಯವಾಗಿ ವಿಶೇಷವಾಗಿ ಚಿತ್ರದುರ್ಗ ಜಗದ್ಗುರುಗಳ ವಿಷಯವಾಗಿ ಏಕವಚನದಿಂದಲೇ ಹೆಸರನ್ನು ತಕ್ಕೊಂಡು ತಿರಸ್ಕಾರವುತ್ಪನ್ನವಾಗುವಂತೆ ಭಾಷಣಮಾಡಿದ್ದು ಬಾರ್ಶಿ ಜನರಿಗಾದರೋ ಗೊತ್ತಿದ್ದದ್ದೇ ಅದೆ. ಮತ್ತು ಇಲ್ಲಿಯ ಎಷ್ಟೋ ಗೃಹಸ್ಥರೂ ಕೂಡಾ ಇದನ್ನು ಪ್ರತ್ಯಕ್ಷ ಕೇಳಿದ್ದಾರೆ. ಇದೆಲ್ಲ ಸುಳ್ಳು ಎಂದೆನ್ನಲಿಕ್ಕೆ ಉಜ್ಜನೀ ಸ್ವಾಮಿಗಳು ಸಿದ್ಧರಿರುವರೇನು? ಇದಲ್ಲದೆ ವಿರಕ್ತ ದ್ವೇಷ ಮತ್ತು ಶಿವಶರಣರ ನಿಂದೆಯ ಅನೇಕ ಕಡೆಯ ಅನೇಕ ಉದಾಹರಣೆಗಳನ್ನು ಕೊಡಲಿಕ್ಕೆ ಬರುತ್ತದೆ. ಆದರೆ ಉದಾಹರಣಾರ್ಥವಾಗಿ ಇವೆರಡನ್ನೇ ಕೊಟ್ಟು ಉಳಿದವುಗಳ ಸಲುವಾಗಿ ಸ್ಥಲಕಾಲದ ವ್ಯಯಮಾಡಲಿಚ್ಛಿಸುವದಿಲ್ಲ.

ವಿಜಯಮಾಸಿಕ. ೧೧-೧-೧೯೩೩. | ಒಬ್ಬ ವೀರಶೈವ ನಾಗರಿಕ; ಸೊಲ್ಲಾಪುರ.

ಅಮರಾವತಿಯ ಹನುಮಾನ ವ್ಯಾಯಾಮ ಶಾಲೆಯ ಶ್ರೀ ಖಾನಿವಾಲೆ ಎಂಬುವವರು ಧನುರ್ವಿದ್ಯೆಯಲ್ಲಿ ಬಹು ಪ್ರವೀಣರಾಗಿದ್ದಾರೆ. ಇವರು ತಮ್ಮ ಬಾಣ ವಿದ್ಯೆಯನ್ನು ಪ್ರದರ್ಶಿಸಲು ಜಪಾನ ದೇಶಕ್ಕೆ ಹೋಗಿ ಅಲ್ಲಿ ಮನ್ನಣೆಯನ್ನು ಹೊಂದಿದ್ದಾರೆ. ಇವರು ಇಂಗ್ಲೆಂಡ್, ಜರ್ಮನಿ, ಅಮೇರಿಕೆಗಳಿಗೆ ಹೋಗಿ ತಮ್ಮ ಧನುರ್ವಿದ್ಯೆಯನ್ನು ತೋರಿಸುವವರಿದ್ದಾರೆ.

ವೀರಶೈವರಲ್ಲಿ ಯಾರು ಯಾವ ವರ್ಣದವರು?

ವೀರಶೈವರಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣಗಳವೆಯೆಂದು ಇತ್ತೀಚಿಗೆ ಕೆಲವರು ಹೇಳುತ್ತಿದ್ದಾರಷ್ಟೆ. ಇವರು ವೀರಶೈವರಲ್ಲಿ ಯಾರಿಗೆ ಯಾವ ವರ್ಣದವರೆಂದು ಹೇಳುತ್ತಿದ್ದಾರೆಯೋ ಅದು ಶಾಸ್ತ್ರಸಮ್ಮತವಿಲ್ಲದಿದ್ದರೂ ಯುಕ್ತಿಯುಕ್ತವಾಗಿಯಾದರೂ ಇದೆಯೇ? ಇಲ್ಲವೇ? ಸ್ವಲ್ಪ ಯೋಚಿಸೋಣ. ಈ ವರ್ಣ ಕಲ್ಪನೆಯಿಂದ ವೀರಶೈವರಲ್ಲಿ ಆಚಾರಾದಿಗಳಿಂದುಂಟಾಗತಕ್ಕ ಶ್ರೇಷ್ಠತೆಯ ತಾರತಮ್ಯ ಭಾವಗಳಿಗು ಕೂಡಾ ಹೇಗೆ ಲೋಪವುಂಟಾಗುತ್ತದೆಂಬುದನ್ನು ಸ್ವಲ್ಪ ನೋಡೋಣ.

ಈ ವರ್ಣವಾದಿಗಳು ಮಾಹೇಶ್ವರರಿಗೆ ಬ್ರಾಹ್ಮಣರೆಂದು ಹೇಳುತ್ತಾರಷ್ಟೆ. ಈ ವೀರಶೈವಬ್ರಾಹ್ಮಣರು ವೀರಶೈವರಲ್ಲಿರುವ ಕ್ಷತ್ರಿಯ ವೈಶ್ಯ ಮತ್ತು ಶೂದ್ರ ಎಂಬ ಉಳಿದ ಮೂರು ವರ್ಣದವರಿಗೆ ತಾವು ಗುರುಗಳೆಂದೂ ತಿಳಿದುಕೊಂಡಿದ್ದಾರೆ. ಎಂದ ಮೇಲೆ ಈ ನಾಲ್ಕು ವರ್ಣಗಳು ಪ್ರಾಕೃತರ ಬ್ರಾಹ್ಮಣಾದಿ ನಾಲ್ಕು ವರ್ಣಗಳಂತೆಯೇ ಒಂದಕ್ಕಿಂತ ಒಂದು ಶ್ರೇಷ್ಠವಾಗಿಯೂ ಇವೆಯೆಂದೇ ಇವರು ಗ್ರಹಿಸಿರುವುದು ಸ್ಪಷ್ಟವಾಗುತ್ತದೆ.

ಗೌಡರು ದೇಸಾಯಿ ದೇಶಪಾಂಡೆ ಮೊದಲಾದವರು ವೀರಶೈವ ಕ್ಷತ್ರಿಯರೆಂದು ಬರೆಯುತ್ತಿದ್ದಾರೆ. ಇದು ನ್ಯಾಯವಾಗಿದ್ದರೆ ವೀರಶೈವರಲ್ಲಿಯ ಅನೇಕ ಒಳಪಂಗಡದವರು ಗೌಡರು ದೇಸಾಯಿಗಳು ಇದ್ದಾರೆ. ವೀರಶೈವ ಬ್ರಾಹ್ಮಣರೆಂದು ಹೇಳಿಸಿಕೊಳ್ಳುವ ಮಾಹೇಶ್ವರರೂ ಅನೇಕ ಕಡೆ ಗೌಡರಿದ್ದಾರೆ, ಅವರು ಗೌಡರಾದ್ದರಿಂದ ಕ್ಷತ್ರಿಯರಾದರೇ? ಮಾಹೇಶ್ವರರಿದ್ದುದರಿಂದ ಬ್ರಾಹ್ಮಣರಾಗಿದ್ದಾರೆಯೇ? ಅಥವಾ ಅವರಿಗೆ ಈ ಎರಡೂ ವರ್ಣಗಳಿವೆಯೇ? ಗೌಡುಕೆಯಿರುವವರಿಗೆ ಅವರು ಕ್ಷತ್ರಿಯರೇ? ಯಾವ ಕಾರಣದಿಂದ ಗೌಡುಕೆ ಹೋದರೂ ಅವರು ಕ್ಷತ್ರಿಯರಾಗಿಯೇ ಇರುತ್ತಾರೆಯೇ?

ವೀರಶೈವರಲ್ಲಿಯ ಪಂಚಮಸಾಲಿಯವರು ಅಥವಾ ಅವರ ಮಾತಿನಲ್ಲಿ ಪಂಚಾಚಾರದವರು ಹೆಚ್ಚಾಗಿ ಗೌಡರು ದೇಸಾಯಿಗಳು ಇರುವುದರಿಂದ ಅವರಿಗೆ ಕ್ಷತ್ರಿಯರೆಂದು ಹೇಳಿದ್ದಾಗಿದೆಯೇ ವಿನಾ ಗೌಡರಿಗೂ ಕ್ಷತ್ರಿಯರಿಗೂ ಸಂಬಂಧವೇನೂ ಇಲ್ಲ. ಪಂಚಮಸಾಲಿಯವರಿಗೇನೇ ವೀರಶೈವ ಕ್ಷತ್ರಿಯರೆಂದು ಹೇಳಬೇಕಾಗಿ ಇವರು ತಿಳಿದುಕೊಂಡಿದ್ದಾರೆ. ಅದು ಸರಿಯೇ?

ಪಂಚಮಸಾಲಿಯವರು ವೀರಶೈವ ಕ್ಷತ್ರಿಯರೆಂದರೆ ವೀರಶೈವ ವೈಶ್ಯರಾರು? ಈಗ ಯಾರಿಗೆ ಬಣಜಿಗರೆಂದು ಹೇಳುತ್ತಿದ್ದಾರೆಯೋ ಅವರೇ ವೀರಶೈವ ವೈಶ್ಯರಂತೆ. ದೀಕ್ಷಾಬಳಿಕೆಯವರು, ಶೀಲಾಬಳಿಕೆಯವರು, ಲೋಕಬಳಿಕೆಯವರು, ಮೇಲುಪಾವಡದವರು, ಇವರೆಲ್ಲರೂ ವೈಶ್ಯರಾದರಲ್ಲವೇ? ಎಂದರೆ ಪಂಚಮಸಾಲಿಯವರಿಗಿಂತ ಇವರು ಕಡಿಮೆಯವರೆಂದು ತಿಳಿದಂತಾಗಲಿಲ್ಲವೇ? ಈ ಎರಡು ಪಂಗಡದವರಲ್ಲಿ ಮೇಲು ಕೀಳುಗಳ ಹೋರಾಟವು ವರ್ಣ ಕಲ್ಪನೆಯಿಂದುಂಟಾಗುವುದಿಲ್ಲವೇ? ಪಂಚಮಸಾಲಿಯವರು ಹೆಚ್ಚಿನವರೆಂದರೆ ಬಣಜಿಗರು ಕಡಿಮೆಯವರಾಗಲು ಒಪ್ಪುವರೇ? ಶೀಲಾಚಾರಗಳಲ್ಲಿ ಇವರು ಎಷ್ಟೋ ಮುಂದರಿದಿಲ್ಲವೇ? ಇವರ ಶೀಲಾಚಾರದ ಮೇಲಿಂದ ಇವರೇ ಹೆಚ್ಚಿನವರಾದರೆ ಕ್ಷತ್ರಿಯರಿಗಿಂತ ವೈಶ್ಯರೇ ಹೆಚ್ಚಿನವರೆಂದು ಹೇಳಿದಂತಾಗಲಿಲ್ಲವೇ?

ಪಂಚಮಸಾಲಿಯವರಲ್ಲಿ ಗೌಡರು ದೇಸಾಯಿಗಳು ಮಾತ್ರ ಇರದೆ ಹೆಚ್ಚಾಗಿ ಒಕ್ಕಲತನವನ್ನೇ ಮಾಡುವವರೂ ಇದ್ದಾರಷ್ಟೆ. ಒಕ್ಕಲತನ ವ್ಯಾಪಾರಗಳು ವೈಶ್ಯ ವೃತ್ತಿಗಳಾದುದರಿಂದ ಅವರೂ ವೈಶ್ಯರೇ ಸರಿಯೆಂದು ಬಣಜಿಗರು ಸಾಧಿಸಲಿಕ್ಕಿಲ್ಲವೇ?

ಇಷ್ಟೇ ಅಲ್ಲ; ವೀರಶೈವ ಬ್ರಾಹ್ಮಣರೆಂದು ಹೇಳಿಕೊಳ್ಳುವ ಮಾಹೇಶ್ವರರಲ್ಲಿಯೂ ಬಹುಜನರು ಒಕ್ಕಲತನ ವ್ಯಾಪಾರಗಳನ್ನು ಮಾಡುತ್ತಿರುವುದರಿಂದ ಅವರೂ ವೈಶ್ಯರೇ ಸರಿಯೆಂದು ಬಣಜಿಗರು ಹೇಳಿದರೆ ಆಗ ಅದಕ್ಕೆ ಉತ್ತರವೇನು? ಈ ವರ್ಣದ ಪಿಕಲಾಟದಿಂದ ಈ ಪ್ರಕಾರ ಈ ಮೂರು ಪಂಗಡದವರಲ್ಲಿ ವಿಹಿತವಾದ ವಿವಾದಗಳುಂಟಾಗಲಾರವೇ?

ಈ ಪ್ರಕಾರ ವೀರಶೈವ ಸಮಾಜದಲ್ಲಿ ಈ ಮೂರು ಮುಖ್ಯ ಪಂಗಡಗಳ ವಿನಾ ಇನ್ನುಳಿದ ಅನೇಕ ಒಳಪಂಗಡಗಳೆಲ್ಲಾ ಶೂದ್ರ ವರ್ಣದವುಗಳೆಂದು ಈ ವರ್ಣವಾದಿಗಳು ಹೇಳಬೇಕಾಗುವುದಷ್ಟೆ. ಮೇಲಿನ ಮೂರು ಪಂಗಡದವರ ಸೇವೆಯೇ ಈ ಎಲ್ಲ ಒಳಪಂಗಡದವರ ಕಾರ್ಯವೆಂತಲೂ ಗ್ರಹಿಸಬೇಕಾಗುವುದಿಲ್ಲವೇ? ಇದು ಯುಕ್ತವೂ ಶಕ್ಯವೂ ಇದೆಯೇ?

ವೇದಕಾಲದ ವರ್ಣಕಲ್ಪನೆಯಂತೆ ಈ ವೀರಶೈವ ವರ್ಣಕಲ್ಪನೆಯಾಗಿದ್ದರೆ ಮಾಹೇಶ್ವರರಾದ ಬ್ರಾಹ್ಮಣಾದಿಯಾಗಿ ಇನ್ನುಳಿದ ಶೂದ್ರರವರೆಗೆ ಸಕಲ ವೀರಶೈವರೂ ಪರಸ್ಪರ ಊಟೋಪಚಾರಗಳನ್ನು ಮಾಡಬೇಕಾಗುವದು. ಏಕೆಂದರೆ ವೇದಕಾಲದಲ್ಲಿಯ ಚಾತುರ್ವರ್ಣಗಳಾದರೂ ಪರಸ್ಪರ ಊಟೋಪಚಾರಗಳನ್ನು ಮಾಡುತ್ತಿದ್ದರು. ದ್ವಿಜರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಂತೂ ಪರಸ್ಪರ ಊಟೋಪಚಾರಗಳನ್ನು ಮಾಡುತ್ತಲೇ ಇದ್ದರಷ್ಟೆ. ಇವರಿಗೆ ಆಹಾರವನ್ನು ಸಿದ್ಧಪಡಿಸುವ ಸೇವೆಯೇ ಶೂದ್ರರಿಗೆ ಸಂಬಂಧಪಟ್ಟದ್ದಾಗಿದ್ದಿತು. ಎಂದಮೇಲೆ ಶೂದ್ರರು ತಾವು ಮುಟ್ಟದೆ ಮೂರುವರ್ಣದವರ ಊಟೋಪಚಾರಾದಿ ಸೇವೆಗಳನ್ನು ಮಾಡುತ್ತಿರುವುದು ಶಕ್ಯವೇ? ಎಂದಮೇಲೆ ಆಗಿನ ವರ್ಣಕಲ್ಪನೆಯಂತೆ ಈಗ ನಡೆಯುವರೇ?

ಆ ವೇದಕಾಲದ ವರ್ಣಕಲ್ಪನೆಯಿಲ್ಲದೆ ಇತ್ತೀಚಿಗಿನ ಪುರಾಣಕಾಲದ ಅಥವಾ ೧೯ನೆಯ ಶತಮಾನದ ವರ್ಣಕಲ್ಪನೆಯ ರೀತಿ ಈ ವೀರಶೈವ ಮತದ ವರ್ಣಕಲ್ಪನೆಯಾಗಿದ್ದರೆ ಮಾತ್ರ ಬ್ರಾಹ್ಮಣರಾದ ಮಾಹೇಶ್ವರರು ಅಥವಾ ಗುರುಗಳು ಬೇರೆಯವರಲ್ಲಿ ಎಂದರೆ ಪಂಚಮಸಾಲಿಯವರಾದ ಕ್ಷತ್ರಿಯರಲ್ಲಿಯೂ ಬಣಜಿಗರಾದ ವೈಶ್ಯರಲ್ಲಿಯೂ ಊಟೋಪಚಾರಗಳನ್ನು ಮಾಡಬಾರದಾಗುತ್ತದೆ. ಏಕೆಂದರೆ ಈಗ ಬ್ರಾಹ್ಮಣರು ಕ್ಷತ್ರಿಯರಲ್ಲಾಗಲಿ ವೈಶ್ಯರಲ್ಲಾಗಲಿ ಊಟಮಾಡುತ್ತಿದ್ದಾರಯೇ? ಇಲ್ಲವೇ ಇಲ್ಲ.

ಎಂದಮೇಲೆ ಬಣಜಿಗರು ಮತ್ತು ಪಂಚಮಸಾಲಿಯವರು ಕೂಡಾ ಪಾದೋದಕ ಪ್ರಸಾದಗಳ ವಿನಾ ಆರು ವರ್ಣದವರಾಗಿ ಆಚರಿಸಬೇಕಾಗಬಹುದಲ್ಲವೇ?

ಈ ಪ್ರಕಾರ ವೀರಶೈವ ವರ್ಣಗಳನ್ನು ಕಲ್ಪಿಸುವುದು ಯುಕ್ತಿಗು ಕೂಡಾ ಸಮಂಜಸವಾಗಿರದೆ ಕಲಹ ದ್ವೇಷಾಸೂಯೆಗಳಿಗೇನೇ ಕಾರಣವೆಂದು ತೋರುವುದಿಲ್ಲವೇ?

ಸಂಪಾದಕ.

ಶ್ರೀ ವಿರಕ್ತ ಸಿಂಹಾಸನಾಧೀಶರ ವಿಷಯದಲ್ಲಿ ಶ್ರೀ ಪಂಚಾಚಾರ್ಯ ಪೀಠಾಧಿಕಾರಿಗಳಿಗೆ

ಆದರಬುದ್ಧಿಯಿದೆಯೇ?

ಸೊಲ್ಲಾಪುರದ ವಿಜಯಮಾಸ ಪತ್ರಿಕೆಯಲ್ಲಿ "ವಿರಕ್ತ ಮತ್ತು ಪಂಚಾಚಾರ್ಯ ಇವರಲ್ಲಿಯ ದ್ವೇಷಾಗ್ನಿ" ಎಂಬ ಈ ಲೇಖನವು ಪ್ರಸಿದ್ಧವಾದಂದಿನಿಂದ ಸಮಾಜದಲ್ಲಿ ಬಹಳೇ ಚರ್ಚೆಯು ನಡೆದಿರುತ್ತದೆ. ಈಗ ಬಹಳ ದಿವಸಗಳಿಂದ ಉಭಯ ಶ್ರೀಸ್ಮೃತರ ಧರ್ಮಾಧಿಕಾರಿಗಳಲ್ಲಿ ಅನೈಕ್ಯ ಉತ್ಪನ್ನವಾಗಿ ಅದರಿಂದ ಸಮಾಜದಲ್ಲಿ ಇಬ್ಬಣವು ಬೆಳೆದಿದ್ದು ಅದರ ಅನಿಷ್ಟ ಪರಿಣಾಮವು ಕರ್ನಾಟಕದಲ್ಲಿ ಆದದ್ದು ಕೇಳಬರುತ್ತಿತ್ತು. ಈಗ ಅದರ ಕಿಡಿಗಳು ಮಹಾರಾಷ್ಟ್ರದಲ್ಲಿ ಹಾರಿಬಂದು ಅಧಿಕ ದುಷ್ಪರಿಣಾಮವನ್ನುಂಟುಮಾಡುವ ಭೀತಿಯನ್ನು "ವೀರಶೈವ ಧರ್ಮಾಭಿಮಾನಿ" ಎಂಬ ಲೇಖಕರು ವ್ಯಕ್ತಪಡಿಸಿದ್ದು ಅದಕ್ಕೆ ಪುಷ್ಟೀಕಾರಕ ಉದಾಹರಣೆಗಳನ್ನು ಕೊಟ್ಟು ಸಿದ್ಧಮಾಡಿದ್ದಾರೆ. ಈ ವಿಧಾನಗಳು ಸತ್ಯ ಸ್ವರೂಪವುಳ್ಳವಿರುತ್ತವೋ ಅಥವಾ ಪಂಚಾಚಾರ್ಯರ ವಿಷಯವಾಗಿ ಮತ್ತು ಉಜ್ಜಯಿನೀ ಸಿಂಹಾಸನಾಧೀಶ್ವರರ ವಿಷಯವಾಗಿ ದುರ್ಬುದ್ಧಿ ಪ್ರೇರಿತರಾಗಿ ಅಸತ್ಯ ಮತ್ತು ನಿರಾಧಾರಗಳಾದ ಆರೋಪಗಳನ್ನು ಮಾಡಿರುವರೋ ಎಂಬುದನ್ನು ನೋಡುವ ಕೆಲಸವು ನಿಜವಾದ ಸಮಾಜ ಹಿತಚಿಂತಕನದಾಗಿದೆ. ಈ ರೀತಿಯಿಂದ ಮನಸ್ಸಿಗೆ ಪೂರ್ಣ ನಿಶ್ಚಯಮಾಡಿಕೊಳ್ಳದೆ ತಮ್ಮ ಅಭಿಪ್ರಾಯವನ್ನು ಮಾಡಿಕೊಳ್ಳಬಾರದೆಂದು ವಿನಂತಿ ಇದೆ. ವಿಜಯದೊಳಗಿನ ಧರ್ಮಾಭಿಮಾನಿಯ ಲೇಖವು ಅಸತ್ಯವೂ ಮತ್ತು ನಿರಾಧಾರವೂ ಇರುವದನ್ನು ಸಿದ್ಧಮಾಡುವ ಜವಾಬ್ದಾರಿಯು ಪಂಚಾಚಾರ್ಯ ಮತ್ತು ಅವರ ಅನುಯಾಯಿಗಳ ಕಡೆಗೆ ಇರುತ್ತದೆ. ಮತ್ತು ಉಜ್ಜಯಿನಿ ಸ್ವಾಮಿಗಳು ವಿರಕ್ತರ ನಿಂದೆಯನ್ನು ಕೇಳಿಯೂ ಕೂಡ ತಿರಸ್ಕಾರವನ್ನು ತೋರಿಸಲಿಲ್ಲ ಮತ್ತು ತೋರಿಸುವದಿಲ್ಲ. ಹೀಗೆಯೂ ಆ ಲೇಖದಲ್ಲಿ ಉಲ್ಲೇಖಿಸಲ್ಪಟ್ಟದ್ದರಿಂದ ಅವರ ಕಡೆಗೂ ಸಹ ಜವಾಬ್ದಾರಿ ಇದ್ದೇ ಇರುತ್ತದೆ. ಪ್ರಸಿದ್ಧವಾದಂಥ ಲೇಖವೂ ಅವರ ಅವಲೋಕನದಲ್ಲಿ ಬಂದಿದೆ. ಅದಕ್ಕೆ ಉತ್ತರವೆಂದು ಶ್ರೀ. ವಿರಕ್ತ ಸ್ವಾಮಿಗಳ ಶ್ರೀ ಬಸವೇಶ್ವರಾದಿ ಪೂಜ್ಯವಂದ್ಯ ಶಿವಶರಣರ ವಿಷಯದಲ್ಲಿರತಕ್ಕ ತಮ್ಮ ತಮ್ಮ ಪೂಜ್ಯ ಆದರಬುದ್ಧಿಯನ್ನು ಜನತೆಯ ನಿದರ್ಶನಕ್ಕೆ ತಂದು ಅವರ ತಪ್ಪು ತಿಳುವಳಿಕೆಯನ್ನು ದೂರಮಾಡಲು ಈ ಸುವರ್ಣ ಸಂಧಿಯನ್ನು ಯಾಕೆ ಕಳೆದುಕೊಳ್ಳಬೇಕು? ಇನ್ನಾದರೂ ಅವರು ಸ್ವತಃ ತಮ್ಮ ನಿರ್ಣಯವನ್ನು ಜಾಹೀರಪಡಿಸಬೇಕೆಂದು ನಮ್ರತಾಪೂರ್ವಕ ಆಗ್ರಹದ ವಿನಂತಿ ಇರುತ್ತದೆ.

ಪಂಚ ಪೀಠದವರ ಜಾಹೀರ ಪತ್ರ.

೧. ವಿರಕ್ತರ ವಿಷಯಕ್ಕೆ ತೀವ್ರ ಅನಾದರ ವೃತ್ತಿಯನ್ನು ಸ್ವತಃ ಪಂಚಾಚಾರ್ಯ ಸಿಂಹಾಸನಾಧೀಶ್ವರರ ಆಜ್ಞೆಯಿಂದ ಪ್ರೇರಿತರಾಗಿ ಅವರ ಮಂತ್ರಿಗಳ ಸಹಿ, ಶಿಕ್ಕಾ, ಮುದ್ರಾ ಸಹಿತ ಜಾಹೀರಾತುಗಳು ಪ್ರಸಿದ್ಧವಾಗಿವೆ. ಆ ಹಸ್ತಪತ್ರಿಕೆಗಳ ಮೇಲಿಂದಲೇ ಜಾಹೀರ ಸಭೆ ಕರೆದು ತಾ. ೨೬ನೇ ಜೂನ ೧೯೩೭ ನೇಯ ದಿವಸ ನಿಷೇಧ ವ್ಯಕ್ತಪಡಿಸಿ ಪಂಚ ಪೀಠಾಧಿಕಾರಿಗಳ ಕಡೆಗೆ ರಜಿಸ್ಟರ ಪತ್ರದ್ವಾರದಿಂದ ಆಹ್ವಾನ ಮಾಡಿದೆ. ಪಂಚಾಚಾರ್ಯರಿಂದ ಪ್ರಸಿದ್ಧವಾದ ಜಾಹೀರಾತಿನ ಒಂದು ಪ್ರತಿಯು ನಮ್ಮ ಕಡೆಗಿದೆ. ಇಚ್ಛಾ ಇದ್ದರೆ ನೋಡಿ ಖಾತ್ರಿಮಾಡಿಕೊಳ್ಳಬಹುದು. ಆ ಪ್ರತಿಯನ್ನು ವಿಜಯಮಾಸಿಕ ಸಂಪಾದಕರ ಕಡೆಗೆ ಇಟ್ಟಿದೆ. ಆ ಜಾಹೀರ ಪತ್ರಿಕೆಯ ಮುಖ್ಯಾಂಶವು—

(ಅ) ಚಿತ್ರದುರ್ಗ, ಹಾನಗಲ್ಲು, ಕಲ್ಯಾಣ, ಬೀಳೂರು, ಸೋಲಾಪೂರ, ಗದಗ, ಕೊಪ್ಪಳ, ಉರುವಕೊಂಡೆ, ಹುಬ್ಬಳ್ಳಿ, ಚಿಕಯಿ, ತುಗೂರು, ನಿರಡಗುಂಬ, ಚಿತ್ರಗಿ, ಇಲಕಲ್ಲ, ಆಲಬಿ, ಬಳ್ಳಾರಿ, ಇತ್ಯಾದಿ ಭಕ್ತಪ್ರಮುಖರಿರುವ ಮಠಗಳನ್ನು ಉಲ್ಲೇಖಿಸಿ ಈ ಗ್ರಾಮದೊಳಗಿನ ಸನ್ಯಾಸಿಗಳು ವಿರಕ್ತರು ಗುರುವರ್ಗದ ಅಧಿಕಾರವನ್ನು ಆಕ್ರಮಣ ಮಾಡಿಕೊಳ್ಳುವ ಪ್ರಯತ್ನವನ್ನು ನಡೆಸಿದ್ದಾರೆ. ಈ ಸನ್ಯಾಸಿಗಳು ಗುರುವರ್ಗದವರ ಶಿಷ್ಯರಾಗಿದ್ದು ಅವರ ಆಜ್ಞೆಯ ಮೇರೆಗೆ ನಡೆಯುವವರಾಗಿದ್ದು ಇತ್ತೀಚೆಗೆ ಡಾಂಭಿಕತನದಿಂದ ಸ್ವೈರವಾಗಿ ನಡೆಯುತ್ತಾರೆ. ಇದಕ್ಕಾಗಿ ಎಲ್ಲಾ ಮಠಾಧಿಕಾರಿಗಳು ಅವರ ಕಡೆಯಿಂದ ಆಜ್ಞೋಲ್ಲಂಘನೆಯಾಗಬಾರದು. ತಮ್ಮ ಸಂಗಡ ಅವರು ಶಿಷ್ಯಭಾವನೆಯಿಂದ ನಡೆಯುವಂತೆ ಹೋಗುವಾಗ ಬರುವಾಗ ಸನ್ಮಾನಪೂರ್ವಕ ವಂದನೆಮಾಡುವಂತೆ ವ್ಯವಸ್ಥೆಯನ್ನಿಡಬೇಕು, ಇತ್ಯಾದಿ ವೃತ್ತಾಂತವು ಅದರಲ್ಲಿ ಒರೆದಿದೆ. ಇದೇ ಜಾಹೀರಾತಿಯಲ್ಲಿ ಪ್ರತಿಯೊಬ್ಬ ಪಂಚಾಚಾರ್ಯರ ನಂಬರು ಮತ್ತು ತಾರೀಖನ್ನು ಹಾಕಿ ಸಂಸ್ಥಾನ ಮುದ್ರೆ ಸಹಿತ ಅವರ ಕಾರಭಾರಿಗಳ ಸಹಿಗಳು ಮಾಡಲ್ಪಟ್ಟಿರುತ್ತವೆ. ಬಾಳೆಹಳ್ಳಿ ನಂ. ೭೩ ಉಜ್ಜನಿ, ನಂ. ೫೬ ಹಿಮವತ್ಕೇದಾರ ನಂ. ೧೯೪ ಶ್ರೀಶೈಲ ನಂ. ೨೨೩ ಕಾಶೀ ನಂ. ೬ ಈ ಪ್ರಕಾರ ಇರುತ್ತದೆ. ಈ ಜಾಹೀರ ಪತ್ರಿಕೆಯನ್ನು ಎಲ್ಲ ಮಠಾಧಿಕಾರಿಗಳ ಮತ್ತು ವೀರಶೈವ ಭಕ್ತಮಂಡಳಿಯ ಮಾ ತಿ ಸಲುವಾಗಿ ಪ್ರಸಿದ್ಧಮಾಡಿದೆಯೆಂದು ಬರೆದಿದ್ದಾರೆ. ಇರಲಿ, ಈ ಜಾಹೀರಪತ್ರಿಕೆಯು ಪಂಚಾಚಾರ್ಯ ಪೀಠಾಧಿಕಾರಿಗಳಿಗೆ ಮಾನ್ಯವಿದೆಯೋ ಇಲ್ಲವೇ? ಇಲ್ಲದಿದ್ದರೆ ಅದನ್ನು ಯಾರು ತೆಗೆದರು? ಅಂದ ಮೇಲೆ ಅವರ ಸಹಿಗಳು ಹೇಗಾದವು? ಸುಳ್ಳು ಇದ್ದದ್ದಾದರೆ ಜಾಹೀರ ರೀತಿಯಿಂದ ಮಾಡಿದ ಆಹ್ವಾನಕ್ಕೆ ಉತ್ತರವನ್ನೇಕೆ ಕೊಡಲಿಲ್ಲ?

(೨) ಮೊನ್ನೆ ಬಾರ್ಶಿ ಮುಕ್ಕಾಮಿನಲ್ಲಿ ಶ್ರೀ ಉಜ್ಜನಿ ಸ್ವಾಮಿಗಳು ಬಂದಾಗ್ಗೆ ಕಾಶೀನಾಥ ಶಾಸ್ತ್ರಿಯು ತುಂಬಿದ ಸಭೆಯಲ್ಲಿ ಉತ್ತರೇಶ್ವರ ದೇವಾಲಯದಲ್ಲಿ ನೂರಾರು ಜನರ ಸಮಕ್ಷಮ ವಿರಕ್ತರ ವಿಷಯವಾಗಿ ವಿಶೇಷವಾಗಿ ಚಿತ್ರದುರ್ಗ ಜಗದ್ಗುರುಗಳ ವಿಷಯವಾಗಿ ಏಕವಚನದಿಂದಲೇ ಹೆಸರನ್ನು ತಕ್ಕೊಂಡು ತಿರಸ್ಕಾರವುತ್ಪನ್ನವಾಗುವಂತೆ ಭಾಷಣಮಾಡಿದ್ದು ಬಾರ್ಶಿ ಜನರಿಗಾದರೋ ಗೊತ್ತಿದ್ದದ್ದೇ ಇದೆ. ಮತ್ತು ಇಲ್ಲಿಯ ಎಷ್ಟೋ ಗೃಹಸ್ಥರೂ ಕೂಡಾ ಇದನ್ನು ಪ್ರತ್ಯಕ್ಷ ಕೇಳಿದ್ದಾರೆ. ಇದೆಲ್ಲ ಸುಳ್ಳು ಎಂದೆನ್ನಲಿಕ್ಕೆ ಉಜ್ಜನೀ ಸ್ವಾಮಿಗಳು ಸಿದ್ಧರಿರುವರೇನು? ಇದಲ್ಲದೆ ವಿರಕ್ತ ದ್ವೇಷ ಮತ್ತು ಶಿವಶರಣರ ನಿಂದೆಯ ಅನೇಕ ಕಡೆಯ ಅನೇಕ ಉದಾಹರಣೆಗಳನ್ನು ಕೊಡಲಿಕ್ಕೆ ಬರುತ್ತದೆ. ಆದರೆ ಉದಾಹರಣಾರ್ಥವಾಗಿ ಇವೆರಡನ್ನೇ ಕೊಟ್ಟು ಉಳಿದವುಗಳ ಸಲುವಾಗಿ ಸ್ಥಲಕಾಲದ ವ್ಯಯಮಾಡಲಿಚ್ಛಿಸುವದಿಲ್ಲ.

ವಿಜಯಮಾಸಿಕ. ೧೧-೧-೧೯೩೩. } ಒಬ್ಬ ವೀರಶೈವ ನಾಗರಿಕ; ಸೊಲ್ಲಾಪುರ.

ಅಮರಾವತಿಯ ಹನುಮಾನ ವ್ಯಾಯಾಮ ಶಾಲೆಯ ಶ್ರೀ. ಖಾನಿವಾಲೆ ಎಂಬುವವರು ಧನುರ್ವಿದ್ಯೆಯಲ್ಲಿ ಬಹು ಪ್ರವೀಣರಾಗಿದ್ದಾರೆ. ಇವರು ತಮ್ಮ ಬಾಣ ವಿದ್ಯೆಯನ್ನು ಪ್ರದರ್ಶಿಸಲು ಜಪಾನ ದೇಶಕ್ಕೆ ಹೋಗಿ ಅಲ್ಲಿ ಮನ್ನಣೆಯನ್ನು ಹೊಂದಿದ್ದಾರೆ. ಇವರು ಇಂಗ್ಲೆಂಡ್, ಜರ್ಮನಿ, ಅಮೇರಿಕೆಗಳಿಗೆ ಹೋಗಿ ತಮ್ಮ ಧನುರ್ವಿದ್ಯೆಯನ್ನು ತೋರಿಸುವವರಿದ್ದಾರೆ.

ಶ್ರೀ ೧೦೮ ಜಗದ್ಗುರು ಶ್ರೀಮದಾದಿರೇಣುಕಾಚಾರ್ಯ ಶ್ರೀಮದ್ರಂಭಾಪುರಿ ವೀರಸಿಂಹಾಸನಾರೋಹಣಗೈದಿರುವ

ಶ್ರೀ ಶಿವಾನಂದ ರಾಜೇಂದ್ರ ಮಹಾಸ್ವಾಮಿಗಳವರ ದಿವ್ಯ ಚರಣ ಸನ್ನಿಧಿಯಲ್ಲಿ

ತುಮಕೂರಿನ ಪೇಟೆ ವೀರಶೈವ ಮಹಾಜನರು ಸಾಷ್ಟಾಂಗ ಪ್ರಣಾಮಪೂರ್ವಕ ಬಿನ್ನೈಸಿಕೊಳ್ಳುವುದೇನೆಂದರೆ;

ಮಹಾಸನ್ನಿಧಾನದಿಂದ ತುಮಕೂರು ಮೊಕ್ಕಾಮಿಗೆ ಸನ್ನಿಧಿಯ ಸವಾರಿಯು ದಯಮಾಡಿಸುವುದಾಗಿ ಶ್ರೀಮುಖವು ಅಪ್ಪಣೆಯಾಗಿರುವದನ್ನು ಕೇಳಿ ಆನಂದಭರಿತರಾಗಿರುತ್ತೇವೆ. ಈ ಬಗ್ಗೆ ಈವರೆಗೆ ಕೋಟೆ ಪೇಟೆಗಳಲ್ಲಿ ವೀರಶೈವ ಮಹಾಜನರ ಮೀಟಿಂಗುಗಳು ಸೇರಿಯೂ ಸೇರುವುದಾಗಿಯೂ ಇರುತ್ತವೆ. ಆದರೆ ಈ ಮಧ್ಯೆ ದೇಶಮಧ್ಯದಲ್ಲಿ ಈಗ ಕೆಲವು ಕಾಲದಿಂದ 'ಕಾಳ್ಗಿಚ್ಚಿನಂತೆ ಹಬ್ಬಿ ಹರಡಿರುವ ಅನುಚಿತ ಚಳವಳಿಯು ಸೋಂಕು ನಮ್ಮೂರಿಗೂ ವ್ಯಾಪಿಸಿರುತ್ತದೆ. ಮುಖ್ಯವಾಗಿ ಜಗತ್ಪೂಜ್ಯರೂ ವೀರಶೈವ ಮತೋದ್ಧಾರಕರೂ ಆದ ಕಲ್ಯಾಣದ ಶ್ರೀಮದ್ಬಸವಾದಿ ಪ್ರಮಥರ ಮತ್ತು ಜಗತ್ಪೂಜ್ಯರಾದ ಶ್ರೀ ವಿರಕ್ತಮೂರ್ತಿಗಳ ನಿಂದಾರೂಪವಾದ ಈ ಚಳವಳಿಗೆ ಮಹಾಸನ್ನಿಧಿಯೇ ಕಾರಣರೆಂಬ ಆಪಾದನೆಯನ್ನು ಹುಟ್ಟಿಸಿಬಿಟ್ಟಿರುವರೆಂದು ಸನ್ನಿಧಾನದಲ್ಲಿ ಬಿನ್ನೈಸಲು ತುಂಬಾ ಸಂಕೋಚಪಡುತ್ತೇವೆ. ಮಹಾಸ್ವಾಮಿ ಈ ತೆರನಾದ ಅಪವಾದವು ಆಧಾರಯುಕ್ತವಾದುದೇ ನಿರಾಧಾರಯುಕ್ತವಾದುದೇ ಮಥನಮಾಡುವಷ್ಟು ಶಾಂತಿಯೂ ತಾಳ್ಮೆಯೂ ಜನಸಾಮಾನ್ಯರಲ್ಲಿರುವುದಿಲ್ಲ. ಈ ಊರಿನಲ್ಲಿ ಈಗಾಗಲೇ ಇರುವ ನಿರ್ದಿಷ್ಟವಾದ ಕೋಟೆ ಪೇಟೆಗಳೆಂಬ ಎರಡು ಪಾರ್ಟಿಗಳಲ್ಲಿ ಪುನಹ ೨ ಪಾರ್ಟಿಗಳು ಆಗುವ ಸಂಭವವು ತೋರುತ್ತಿರುವುದಲ್ಲದೆ ಕೆಲವು ಕುಟುಂಬಗಳಲ್ಲಿ ಸಹ ಅನೈಕಮತ್ಯವುಂಟಾಗಿ ಅತ್ಯಂತ ದುಷ್ಪರಿಣಾಮವುಂಟಾಗುವ ಸಂಭವವು ತೋರುತ್ತಾ ತುಮಕೂರಿನ ವೀರಶೈವ ಜನಾಂಗವು ಅಲ್ಲೋಲಕಲ್ಲೋಲವಾಗಹತ್ತಿದೆ. ಈ ರೀತಿಯಾದ ಆಪಾದನೆಯ ಉಚ್ಛ್ರಾಯಾವಸ್ಥೆಯ ದೆಶೆಯಿಂದಲೇ ನಾವುಗಳು ಮಹಾಸನ್ನಿಧಾನದಲ್ಲಿ ಈ ವಿಷಯವನ್ನು ಬಿನ್ನೈಸಿಕೊಳ್ಳುವ ಸಾಹಸವನ್ನು ಮಾಡಬೇಕಾಯಿತು. ಮಹಾಸ್ವಾಮಿ

ಈಗ ಕೆಲವು ದಿವಸಗಳ ಹಿಂದೆ ಮಹಾಸಂಸ್ಥಾನದ ಅಪ್ಪಣೇಪ್ರಕಾರ ಗುಬ್ಬಿ ಮೊಕ್ಕಾಮಿನಲ್ಲಿ ಸನ್ನಿಧಿಯ ದರ್ಶನಕ್ಕೆ ನಮ್ಮಲ್ಲಿ ಕೆಲವರು ಹೋಗಿದ್ದಾಗ ಪ್ರಸಂಗತ್ವೇನ ಈ ವಿಚಾರವು ಬಂದು ಮಹಾಸ್ವಾಮಿಯವರ ಅಮೃತಮಯ ವಾಣಿಯಿಂದ ಅಪ್ಪಣೆಯಾದುದೇನಂದರೆ- ವಿರಕ್ತಮೂರ್ತಿಗಳನ್ನು ನಾವು ನಿಂದಿಸುವುದಿಲ್ಲ. ಅವರು ಮಹಾಪೂಜ್ಯರು. ಕಲ್ಯಾಣದ ಶ್ರೀ ಬಸವೇಶ್ವರರು ವೀರಶೈವ ಸಮಾಜೋದ್ಧಾರದ ಕಾರ್ಯವನ್ನು ಮಾಡಿ ಪೂಜ್ಯರೂ ವಂದ್ಯರೂ ಆಗಿರುತ್ತಾರೆ. "ಮೈಸೂರಿನ ಪಂಚಾಚಾರ್ಯ ಪ್ರಭಾಪತ್ರಿಕೆಯು" ಆ ಹೆಸರನ್ನು ಇಟ್ಟುಕೊಳ್ಳುವ ಬಗ್ಗೆ ನಮ್ಮ ಅಪ್ಪಣೆಯನ್ನೇನೂ ಪಡೆದಿಲ್ಲ. ಈ ಪತ್ರಿಕೆಗೆ ನಾವು ಪ್ರಾರಂಭದಲ್ಲಿ ಮೂಲಧನಕ್ಕಾಗಿ ಸ್ವಲ್ಪ ದ್ರವ್ಯ ಸಹಾಯ ಮಾಡಿದ್ದು ನಿಶ್ಚಯ, ಆದರ ಚಾಲಕರು ಸದುದ್ದೇಶಪೂರ್ವಕವಾದ ಆ ಧನವನ್ನು ದುರುಪಯೋಗಮಾಡುತ್ತಿದ್ದಾರೆ. ಇತ್ತೀಚೆಗೆ ನಾವು ಯಾವ ಸಹಾಯವನ್ನು ಮಾಡುತ್ತಿಲ್ಲ. ಈ ಪತ್ರಿಕೆಯಲ್ಲಿ ಪ್ರಕಟವಾದ ಶ್ರೀಮದ್ಬಸವೇಶ್ವರ ಮತ್ತು ಪೂಜ್ಯ ವಿರಕ್ತ ಮೂರ್ತಿಗಳ ನಿಂದಾಸ್ಪದವಾದ ಕ್ಷುಲ್ಲಕ ಲೇಖನಗಳಿಗೆ ನಮ್ಮ ಸಹಾನುಭೂತಿಯು ಲೇಶಾಂಶವೂ ಇರುವುದಿಲ್ಲ. ಎಂದು ಮುಂತಾಗಿ ದಿವ್ಯಾಮೃತ ವಾಕ್ಯಗಳು ಹೊರಬೀಳುತ್ತಲೇ ಅಲ್ಲಿ ನೆರೆದಿದ್ದ ಭಕ್ತರು ಆನಂದ ತುಂದಿಲ ಹೃದಯರಾಗಿ ಮಹಾಸ್ವಾಮಿ ಇದೇ ವಿಷಯವನ್ನು ಒಂದು ಸಂದೇಶ (ಸರ್ಕ್ಯುಲರ್) ಮೂಲಕ ಹೊರಡಿಸಿ ಅನೇಕ ಭಕ್ತರ ಮನಸ್ಸಿನಲ್ಲಿ ನೆಲೆಸಿರುವ ಈ ನಿರಾಧಾರವಾದ ಸಂಶಯವನ್ನೂ, ಅಜ್ಞಾನವನ್ನೂ ತೊಲಗಿಸಬೇಕೆಂದು ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡರು, ಆಗ ದಿವ್ಯ ಸನ್ನಿಧಿಯು ಈ ವಿಷಯವನ್ನು ಚಿತ್ತಕ್ಕೆ ತಂದುಕೊಂಡು ಈ ರೀತಿ ಸಂದೇಶವನ್ನು ಕಾರಣವೇನೂ ಇಲ್ಲದೆ ಪ್ರಕಟಿಸುವುದು ಸೂಕ್ತವಲ್ಲ. ಭಕ್ತರಾದ ನೀವುಗಳು ಈ ವಿಷಯವಾಗಿ ಬಿನ್ನೈಸಿಕೊಂಡರೆ ನಾವು ಪತ್ರವನ್ನು ಆಶೀರ್ವದಿಸುತ್ತೇವೆ. ಅದನ್ನೇ ನೀವುಗಳು ಪ್ರಕಟಿಸಬಹುದು ಎಂದು ಮುಂತಾಗಿ ಅಪ್ಪಣೆ ಕೊಡಿಸೋಣವಾದಾಗ ನಾವುಗಳು ಅಪ್ಪಣೆಯನ್ನು ಶಿರಸಾವಹಿಸಿಕೊಂಡದ್ದೇ ಮೊದಲಾದ ಅಂದು ನಡೆದ ಎಲ್ಲಾ ಸಂಗತಿಗಳನ್ನು ಇಂದು ದಿವ್ಯ ಸನ್ನಿಧಿಯ ಸ್ಮೃತಿಪಥಕ್ಕೆ ತರಲು ಆಶಿಸುತ್ತೇವೆ. ಮಹಾಸ್ವಾಮಿ.

ನಮ್ಮ ಊರಿಗೆ ಸಂಸ್ಥಾನದ ಶ್ರೀಮುಖವು ಅಪ್ಪಣೆಯಾಗಿ ಶ್ರೀ ಮಹಾಪಾದವು ಭಕ್ತಾದಿಗಳ ಉದ್ಧಾರದ ಸಲುವಾಗಿ ಇಲ್ಲಿಗೆ ಬಿಜಯಂಗಯ್ಯುವ ತತ್ಪೂರ್ವವೇ ಇಲ್ಲಿಗೆ ಭಕ್ತರು ಗುಬ್ಬಿಯಲ್ಲಿ ಒಪ್ಪಿಕೊಂಡುಬಂದಂತೆ ಈ ಬಿನ್ನಹಪತ್ರವನ್ನು ಅರಿಕೆಮಾಡಿಕೊಂಡಿರುವುದಾಗಿದೆ. ಗುಬ್ಬಿಯಲ್ಲಿ ದಿವ್ಯ ಸನ್ನಿಧಿಯು ಭಕ್ತಾದಿಗಳಿಗೆ ಅಪ್ಪಣೆಮಾಡಿದಂತೆ ಈ ಕೆಳಗೆ ಕಾಣಿಸಿರುವ ಈ ಎರಡು ವಿಷಯಗಳನ್ನು ಕುರಿತು ಸನ್ನಿಧಿಯು ಸಾಭಿಪ್ರಾಯವನ್ನು ದಯಪಾಲಿಸಿ ಸಮಾಜದಲ್ಲಿರುವ ಭಿನ್ನಾಭಿಪ್ರಾಯವನ್ನು ನಿರ್ಮೂಲಗೊಳಿಸಿ ಇಡೀ ಸಮಾಜದ ಐಕಮತ್ಯ ಮತ್ತು ಜನರಲ್ಲಿ ಪರಸ್ಪರ ವಾತ್ಸಲ್ಯಕ್ಕೆ ಕಾರಣೀಭೂತರಾಗಬೇಕೆಂದು ಈ ಮೂಲಕ ಬಿನ್ನೈಸಿಕೊಳ್ಳುತ್ತೇವೆ. ಮಹಾಸ್ವಾಮಿ,

ತುಮಕೂರಿನ ಕೋಟೆಯಲ್ಲಿ ಸೇರಿದ ವೀರಶೈವ ಸಾರ್ವಜನಿಕ ಸಭೆಯಲ್ಲಿ ಈ ಪ್ರಾರ್ಥನೆಯ ಸಂಬಂಧವಾಗಿ ಠರಾವು ಅನುಮೋದಿತವಾಗಿರುವುದರಿಂದಲೂ ಇಲ್ಲಿನ ಸರ್ವ ವೀರಶೈವರು ಏಕೀಭವಿಸಿ ಒಮ್ಮನಸ್ಸಿನಿಂದ ಉತ್ಸಾಹಭರಿತರಾಗಿ ಮಹಾಸನ್ನಿಧಿಯನ್ನು ನಮ್ಮ ಪುರಕ್ಕೆ ಸ್ವಾಗತಿಸಬೇಕೆಂಬ ಮುಖ್ಯವಾದ ಸದುದ್ದೇಶದಿಂದಲೂ ಈ ಬಿನ್ನವತ್ತಳೆಯನ್ನು ನಯವಿನಯಭಕ್ತಿಪೂರ್ವಕ ಸನ್ನಿಧಾನದಲ್ಲಿ ಅರ್ಪಿಸುತ್ತೇವೆ. ಮಹಾಸ್ವಾಮಿ.

ಶಿವಾಂಶೀಭೂತನಾದ ಕಲ್ಯಾಣಬಸವೇಶ್ವರನು ವೀರಶೈವ ಮತೋದ್ಧಾರಕನಾಗಿದ್ದಾನೆ. ಕಲ್ಯಾಣದ ಶ್ರೀಮದ್ ಬಸವಾದಿ ಪ್ರಮಥರು ಸರ್ವಮಾನ್ಯರೂ ಜಗತ್ಪೂಜ್ಯರೂ ಆಗಿರುತ್ತಾರೆಂದು ವಿರಕ್ತಮೂರ್ತಿಗಳು ಜಗತ್ಪೂಜ್ಯರಾಗಿರುತ್ತಾರೆಂಬುದನ್ನು ನಾವು ಒಪ್ಪುತ್ತೇವೆ. ಬಸವಾದಿ ಪ್ರಮಥರ ಮತ್ತು ಪೂಜ್ಯ ವಿರಕ್ತ ಮೂರ್ತಿಗಳ ವಿಷಯದಲ್ಲಿ ಪಂಚಾಚಾರ್ಯ ಪ್ರಭೆಯಲ್ಲಿ ಬರತಕ್ಕ ಲೇಖನಗಳು ತಮಗೆ ಅಸಮ್ಮತವಾದವುಗಳು. ಈ ಪತ್ರಿಕೆಗೂ ನಮ್ಮ ಸಂಸ್ಥಾನಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ನಾವು ಈ ಪತ್ರಿಕೆಗೆ ಯಾವ ಸಹಾಯವನ್ನೂ ಮಾಡುತ್ತಿಲ್ಲ. ಮತ್ತು ಸಹಾನುಭೂತಿಯನ್ನೂ ತೋರಿಸುತ್ತಿಲ್ಲವೆಂದು ಶ್ರೀ ಪೂಜ್ಯಪಾದರು ಗುಬ್ಬಿಯಲ್ಲಿ ಸುಪ್ರಸನ್ನಚಿತ್ತದಿಂದ ಅಪ್ಪಣೆ ಕೊಡಿಸಿರುವಂತೆಯೇ ಇವೇ ವಿಷಯಗಳನ್ನು ಸಾಂಗವಾಗಿ ಒಳಗೊಂಡ ಆಶೀರ್ವಾದ ಪತ್ರವನ್ನು ನಮಗೆ ಅಪ್ಪಣೆ ಕೊಡಿಸಿ ನಮ್ಮನ್ನು ಕೃತಕೃತ್ಯರನ್ನಾಗಿಮಾಡಿಸಿ ನಮ್ಮ ಸದುದ್ದೇಶವನ್ನು ಸಾರ್ಥಕಪಡಿಸಬೇಕಾಗಿ ಭಯಭಕ್ತಿಪೂರ್ವಕ ವಿಜ್ಞಾಪನೆಮಾಡಿಕೊಳ್ಳುತ್ತೇನೆ. ಮಹಾಸ್ವಾಮಿ.

೪೪ ಜನರ ರುಜುಇದೆ. ಇದರಲ್ಲಿ ೧೧ ಜನರು ತಾವು ಅಂಜಿಕೆಗೆ ರುಜುಹಾಕಿದ್ದೇವೆಂದು ಶ್ರೀಗಳು ತುಮಕೂರಿಗೆ ಬಂದನಂತರ ಪ್ರಕಟಿಸಿದ್ದಾರೆ.

೫॥ ರೂಪಾಯಿಗೆ ಐಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ಹೆಚ್ಚಾಗಿ ಗಳಿಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಅತಿಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

ತಿರುವಾಂಕೂರು ಅಲೈಯನ್ಸ್ ಬ್ಯಾಂಕಿನ

ರೂ. ೫॥ **ಬೋನಸ್ ಬಾಂಡ್.** ರೂ. ೫॥

ಈ ಒಂದು ಬಾಂಡಿನಿಂದ ರೂ. ೪೦೦೦, ೨೦೦೦, ೧೦೦೦, ಇತ್ಯಾದಿ ಇನಾಮುಗಳನ್ನು ಪಡೆಯಲು

೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧। ಆಣೆಯ ಸ್ಟಾಂಪು ಇಟ್ಟು ಬರೆಯಿರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ. ಎಸ್. ಕುರುವತ್ತಿ ದಾವಣಗೆರೆ.

ಭಾಸ್ಕರ ಪ್ರಕಾಶ—ಬಟ್ಟೆ ಸ್ವಚ್ಛವಾಗುವ ೧೨ ಚೀಟು ೮ ಆಣೆ.

ಮಾಸ್ಕಿಟೋರಿಯಲ್—ಗುಂಗಾಡ ನಾಶ ೧೨ ಚೀಟು ೮ ಆಣೆ.

ಬೇಳಿನ ನಾಶ—೧೨ ಚೀಟು ೬ ಆಣೆ.

ತಗಣಿಯ ಶತ್ರು—ಒಂದು ಬಾಟ್ಲಿ ೮ ಆಣೆ.

ಎಲ್ಲ ಮಾಲಿನ ನಮೂನೆ ೧ ರೂಪಾಯಿ ವ್ಹಿ. ಪಿ. ಯಿಂದಾ ೧೯೩೩ ಕ್ಯಾಲೆಂಡರ್ ಸಹ ಮನೆ ತೇರುವದು.

ಭಾಸ್ಕರ ಪ್ರಕಾಶ ವರ್ಕ್ಸ್,
ಪೋ. **ಹಂಪಲಿ.**
ಜಿ. ವಿಜಾಪೂರ.

ಶ್ರೀ ಸಂಗಮೇಶ್ವರ ಪ್ರಸನ್ನ.

ಶುದ್ಧ ಖಾದಿ! ಶುದ್ಧ ಖಾದಿ!!

ಶ್ರೀ ಕುಪ್ಪಸದ ಶಿವಸಂಗಪ್ಪನವರ ನೇತೃತ್ವದಲ್ಲಿ ತಯಾರಿಸಲ್ಪಟ್ಟ ಅತ್ಯತ್ತಮವಾದ ಎಲ್ಲ ತರಹದ ಶುದ್ಧ ಖಾದಿ ಬಟ್ಟೆಗಳು ಈ ಕೆಳಗಿನ ಕಾರ್ಯಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ಖಾದಿ ಭಕ್ತರು ಜಾಗ್ರತೆ ತರಿಸಿಕೊಳ್ಳಬೇಕು.

ಶ್ರೀ ಸಂಗಮೇಶ್ವರ ಖಾದಿ ಕಾರ್ಯಾಲಯ
ಬಾಗಲಕೋಟೆ.

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪-೦-೦
೨೫ ,, ಯುರೋಪ ,, ,, ೫-೦-೦
೨೫ ,, ಹೂವಿನ ಬೀಜಗಳು ೫-೦-೦

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦-೦-೦

ನಿಂಬೆ, ಕೊಡಗು ಕಿತ್ತಳಿ, ಚೀಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೀಪ್ರ, ಪಿಚ್ಚೀಸ್, ಅಂಜೂರ, ದ್ರಾಕ್ಷೆ ಗಿಡಗಳು ಡಜನ್ ೧ಕ್ಕೆ ೯-೦-೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾಶಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರ ಸಿಟಿ.

ಕಳಚುಸ್ಟುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ. ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಜವಳಿ ಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ.?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕನ್ನ ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತ.?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾಡುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ. ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರು, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕು ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ **ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶರಣಸಂದೇಶ ಪತ್ರಿಕೆಯ ಚಂದಾದಾರರಿಗೆ ಮಾತ್ರ

ಬಹು ಅನುಕೂಲ ! ಬಹು ಪ್ರಯೋಜನ!!

ಕನ್ನಡ ಭಾಷೆಯಲ್ಲಿ ಅಪೂರ್ವವಾದ

"ವ್ಯಾಪಾರ ಶಿಕ್ಷಕ."

ಈ ಪುಸ್ತಕವು ಶರಣ ಸಂದೇಶ ಪತ್ರಿಕೆಯ ಎರಡನೆಯ ವರ್ಷದ ಚಂದಾದಾರರಿಗೆ ಮಾತ್ರ ಉಚಿತವಾಗಿ ಕೊಡಲ್ಪಡುವುದು.

ಬೇರೆಯವರಿಗೆ ಈ ಪುಸ್ತಕವು ಕ್ರಯಕ್ಕು ಕೂಡಾ ದೊರೆಯುವುದಿಲ್ಲ.

ಆದುದರಿಂದ ಈ ಪತ್ರಿಕೆಗೆ ಎರಡನೆಯ ವರುಷ ತಪ್ಪದೇ ಚಂದಾದಾರರಾಗಿರಿ.

ಈ ಪುಸ್ತಕದಲ್ಲಿ ವ್ಯಾಪಾರಿಗಳಿಗೆ ಅತ್ಯವಶ್ಯಕವಾಗಿರತಕ್ಕ ಹಿಂದುಸ್ಥಾನದ ಎಲ್ಲ ಮಹತ್ವದ ಸಂಗತಿಗಳನ್ನೂ ವಿವರಿಸಿದೆ.

ವ್ಯಾಪಾರಿಗಳಿಗೆ ಇದು ಬಹು ಪ್ರಯೋಜನವನ್ನುಂಟುಮಾಡಿಕೊಡುವುದು.

ಈ ಪುಸ್ತಕವು ವ್ಯಾಪಾರಿಗಳಿಗೆ ಹೊಸ ದೃಷ್ಟಿಯನ್ನೇ ಉಂಟುಮಾಡಿ ಕೊಡುವುದು.

ಮ್ಯಾನೇಜರ್— **"ಶರಣ ಸಂದೇಶ" ಪೋ. ಆಲಮಟ್ಟಿ.**
(ಜಿ. ವಿಜಾಪುರ.)

REGISTERED No. B 283

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರ! ದಾಕ್ಷಿಣ್ಯಪರ ನಾನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ . . . ಮ. ಶ್ರೀ, ಮಹಾಪ್ರಭು ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆ ೧ ಆಣೆ.
ವಾರ್ಷಿಕ ಚಂದಾ:- ಅಂ . ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದ.

ಸಂಪುಟ ೨. | ಆಲಮಟ್ಟಿ- ಸೋಮವಾರ ತಾರೀಖು ೯ ನೆಯ ಜನವರಿ ೧೯೩೩. | ಸಂಚಿಕೆ ೨೧

ಜನಸೇವೆಯೇ — ದೇವರ ಸೇವೆ

ಸನಾತನವಾದಿಗಳಿಗೆ

ಗಾಂಧೀಜಿಯವರ ವಿಜ್ಞಾಪನೆ.

ಹಿಂದುಗಳು ಧರ್ಮದ ಹೆಸರಿನಿಂದ ಆದಿಜನರಿಗೆ ಕೊಡುತ್ತಿರುವಷ್ಟು ಕಷ್ಟವನ್ನು ಪ್ರಪಂಚದ ಇನ್ನಾವ ಧರ್ಮದವರು ಯಾರಿಗೂ ಕೊಡುತ್ತಾ ಇಲ್ಲ.

ಈ ಜನರಿಗಾಗುತ್ತಿರುವ ದುಃಖವನ್ನು ನೋಡಿ ನನ್ನ ಮನಸ್ಸು ಕರಗಿದ್ದರಿಂದ ನಿಮಗೆ ವಿಜ್ಞಾಪಿಸಿಕೊಳ್ಳುವುದೇನೆಂದರೆ- ನೀವೂ ನನ್ನ ದುಃಖದ ಭಾಗಿಗಳಾಗಿರಿ. ನನ್ನ ಸಂಗಡ ತಂಟೆ ಮಾಡುವುದನ್ನು ಬಿಟ್ಟು ಸಹಕಾರ ಮಾಡಿರಿ. ಹೀಗೆ ಮಾಡಿದರೆ ಸನಾತನ ಧರ್ಮ ರಕ್ಷಣೆಗಾಗಿ ಲಕ್ಷಾಂತರ ಪ್ರಾಣಗಳು ಆಹುತಿಯಾಗುತ್ತಿರುವುದನ್ನು ತಪ್ಪಿಸಲು ನಾನು ಸೂಚಿಸುವಮಾರ್ಗದ ವಿನಾ ಬೇರೊಂದುಪಾಯವಿಲ್ಲವೆಂಬುದು ನಿಮಗೆ ತಿಳಿಯುವುದು.

ತಾ. ೪-೧-೩೩.

ದೇಹವೇ — ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur (Karnataka)

ಕಳ್ಳರ ಭಯವಿಲ್ಲ ! ಬೆಂಕಿಯ ಕಾಟವಿಲ್ಲ!!

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ ಆ್ಯಂಡ್ ಸನ್ಸ್

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ್ ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ.

ಬ್ರ್ಯಾಂಚ್ ಆಫೀಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ದಾಗೀನೆ ಮತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ [illegible] ನಂಥ ಸನ್ಸ [illegible] ಮಾ[illegible] ಈ ಕಂಪನಿಯ [illegible] ಪರೀಕ್ಷೆಯು [illegible] ಸದರ [illegible] ಹೊಂದಿದ ದಾಯ [illegible] ರಿಯಲ್ಲಿ ಒಂದು [illegible] ಒಂದು ಪತ್ರ [illegible] ನಂ K. 11, 57015.3 ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಶಿದ್ದರಾಮಪ್ಪ [illegible] ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧॥ ಬಂದೆ—

—ಕಟ್ಟಿಗೆಯಲ್ಲಿ ೧॥ ತಾಸಿನ ವರೆಗೆ (೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ಯತೆ ಮತ್ತು ಭದ್ರತೆಗಳನ್ನು ತೋರಿಸಿದರು ಆ ಭಾ. ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ಧನ್ಯವಾದಗಳನ್ನು ಅರ್ಪಿಸಿದರು

ಇವಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮತರಗತಿಯ ತ್ರಿಜೋರಿಯ ಕಾರ್ಖಾನೆಯುವರೆಂದೆನಿಸಿಕೊಂಡು ಬಂಗಾರದ ಮೆಡಲು ಮತ್ತು ಸರ್ಟಿಫಿಕೇಟ ಹೊಂದಿದೆ ಮತ್ತು ತಿಜೋರಿಗೆ ಹಾಕುವ ಯಾವತ್ತು ಕೀಲಿಗಳನ್ನು ವ ನಂಬರ್ ಲಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನನ್ನ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಹರೇಕಳ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರೇಕಳ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಜನವರಿ ತಾರೀಖು ೯ ನೆಯ ಸೋಮವಾರ | ಸಂಚಿಕೆ ೨೧.

ಅಲವಾರ ಸಂಸ್ಥಾನದಲ್ಲಿ ಭಯಂಕರ ದೊಂಬಿ!

ಹಿಂದುಗಳ ಮನೆ ಅಂಗಡಿ ದೇವಾಲಯಗಳ ಲೂಟಿ!

ಅಲವಾರ ಎಂಬ ಹಿಂದುರಾಜರ ಸಂಸ್ಥಾನವು ಪಂಜಾಬ ಪ್ರಾಂತಕ್ಕೆ ಹೊಂದಿದೆ. ಈ ಚಿಕ್ಕ ಸಂಸ್ಥಾನದ ಜನಸಂಖ್ಯೆ ೭|| ಲಕ್ಷ ಮಾತ್ರ ಇದೆ. ಈ ಸಂಸ್ಥಾನದ ವಾರ್ಷಿಕಾದಾಯವು ೩೬ ಲಕ್ಷ ರೂ. ಗಳವೆ. ಇಲ್ಲಿಯ ಪ್ರಜೆಗಳಲ್ಲಿ ಸಾಧಾರಣ ಎರಡು ಲಕ್ಷ ಜನರು ಮುಸಲ್ಮಾನರಿದ್ದಾರೆ ಇವರೆಲ್ಲಾ ಹೆಚ್ಚಾಗಿ ಒಕ್ಕಲುತನವನ್ನೇ ಮಾಡುವವರಾಗಿದ್ದಾರೆ.

ಈ ಮುಸಲ್ಮಾನರು ಈಗ ಭಯಂಕರವಾದ ದೊಂಬಿಯನ್ನು ಮಾಡಿದ್ದಾರೆ. ಈ ದೊಂಬಿಗಾರರಿಗೆ ಮಖ್ತಾರಖಾನ ಎಂಬುವಾತನೇ ಪ್ರಮುಖನಾಗಿದ್ದಾನೆ. ಸಾಧಾರಣ ೪೦ ಸಾವಿರ ಜನರು ಈ ದೊಂಬಿಯಲ್ಲಿ ಸೇರಿದ್ದಾರೆಂದು ತಿಳಿದಿದೆ. ಇವರು ಶಸ್ತ್ರಾಸ್ತ್ರಗಳುಳ್ಳವರಾಗಿದ್ದಾರೆ. ಕಾಶ್ಮೀರ ಸಂಸ್ಥಾನದಲ್ಲಿ ಮುಸಲ್ಮಾನರು ಹಿಂದು ರಾಜರ ವಿರುದ್ಧವಾಗಿ ದೊಂಬಿ ಮಾಡಿದಂತೆಯೇ ಈ ಈ ದೊಂಬಿಯೂ ಕೂಡಾ ಹಿಂದು ರಾಜರ ವಿರುದ್ಧವಾಗಿ ಪ್ರಾರಂಭಿಸಿದೆಯೆಂಬುದಾಗಿಯೂ ಇದರ ಚಾಲಕರು ಬ್ರಿಟಿಶ್ ಹಿಂದುಸ್ಥಾನದಲ್ಲಿದ್ದಾರೆಂದೂ ಜನಗಳ ಊಹೆಯಾಗಿದೆ.

ಅಲವಾರ ಸಂಸ್ಥಾನಾಧಿಪತಿಗಳ ಸೈನ್ಯಕ್ಕೂ ದೊಂಬಿಗಾರರಿಗೂ ಅನೇಕ ಕಡೆ ಯುದ್ಧವಾದಂತೆಯೇ ಆಗಿದೆ. ಇಂಗ್ಲಿಷ್ ಸರಕಾರದ ಸೈನ್ಯವು ಅಲವಾರ ಸಂಸ್ಥಾನ ರಕ್ಷಣೆಗಾಗಿ ಹೋಗುವುದಿದೆ. ಅಲವಾರ ಸಂಸ್ಥಾನದ ಹಿಂದುಗಳು ಬಹು ಭೀತರಾಗಿದ್ದಾರೆ. ಇವರ ರಕ್ಷಣೆಗಾಗಿ ಸಹಾಯಮಾಡಲು ತಮಗೆ ಅವಕಾಶ ಕೊಡಬೇಕೆಂದು ಹಿಂದು ಮಹಾಸಭೆಯವರು ಅಲವಾರ ಸಂಸ್ಥಾನಾಧಿಪತಿಗಳನ್ನು ಕೇಳಿಕೊಂಡಿದ್ದಾರೆ.

ತಿರ್ಗುರಾ ಎಂಬಲ್ಲಿಯ ಶಿವಾಲಯದಲ್ಲಿಯ ಶಿವಲಿಂಗವನ್ನು ದೊಂಬಿಗಾರರು ಕಿತ್ತುಹಾಕಿದುದಾಗಿ ತಿಳಿದಿದೆ. ಮುಸಲ್ಮಾನರ ಈ ದೊಂಬಿಯು ಜಾಗ್ರತೆ ಶಾಂತವಾಗಿ ಅಲ್ಲಿಯ ಹಿಂದುಗಳ ಧನಮಾನ ಪ್ರಾಣ ರಕ್ಷಣೆಯಾಗಲೆಂದು ಶಾಂತತಾಪ್ರಿಯರು ಹಾರೈಸುತ್ತಿದ್ದಾರೆ!

ಗಾಂಧೀಜಿಯವರು ಒಪ್ಪಲಿಲ್ಲ.

ಮುಖ್ಯ ಮಂತ್ರಿಗಳಾದ ಮೆಕಡೊನೆಲ್ಡರ ಮತ್ತು ಲಾರ್ಡ ಸಾಂಕಿಯವರ ಅಪೇಕ್ಷೆಯ ಪ್ರಕಾರ ಹಿಂದುಸ್ಥಾನ ಸರಕಾರದವರು ಗಾಂಧೀಜಿಯವರನ್ನು ಬಿಡುವ ವಿಷಯದಲ್ಲಿ ಆಲೋಚಿಸಿದರೆಂತಲೂ ಗಾಂಧೀಜಿಯವರ ಸಂಗಡ ಸರಕಾರದವರು ಮಾಡಿದ ಪತ್ರವ್ಯವಹಾರಗಳಿಗೆ ಗಾಂಧೀಜಿಯವರು ಈ ಪ್ರಕಾರ ಉತ್ತರವನ್ನು ಕೊಟ್ಟರೆಂತಲೂ ಫ್ರೀಪ್ರೆಸ್ ಪತ್ರಿಕೆಯ ರಾಜಕೀಯ ವಾರ್ತಾದಾಯಕರು ತಿಳಿಸಿದ್ದಾರೆ.

"ಸರಕಾರದವರ ದೃಷ್ಟಿಕೋನವು ಬೇರೆಯಾದ ವಿನಾ ಸ್ವಾತಂತ್ರ್ಯದಲ್ಲಿರುವ ರಾಷ್ಟ್ರಕ್ಕೆ ಶಾಸನೋಲ್ಲಂಘನೆಯೊಂದೇ ಪರಿಣಾಮಕಾರಿಯಾದ ಶಸ್ತ್ರವಾಗಿದೆ." ಎಂದು ಗಾಂಧೀಜಿಯವರು ತಿಳಿಸಿರುವುದರಿಂದ ಸರಕಾರದವರು ಗಾಂಧೀಜಿಯವರನ್ನು ಈಗಲೇ ಬಿಡುವಂತಿಲ್ಲ.

ಡಾ. ಸಪ್ರು ಮೊದಲಾದ ಪ್ರಮುಖರು ಗಾಂಧೀಜಿಯವರ ಸಂಗಡ ಮಂಡಲಾಕಾರ ಪರಿಷತ್ತಿನ ವಿಷಯವಾಗಿ ಸಂಭಾಷಣೆ ಮಾಡಲು ಸರಕಾರದವರು ಒಪ್ಪಿಗೆಯನ್ನು ಕೊಡಬಹುದಾಗಿ ಪ್ರಕಟವಾಗಿದೆ.

ಮಹಾತ್ಮಾ ಗಾಂಧಿಯವರಿಗೆ ಕ್ರೈಸ್ತರ ಜನ್ಮದ ದಿವಸ ಎಂದರೆ ಡಿಸೆಂಬರ ೨೫ ನೆಯ ತಾರೀಖಿನ ದಿವಸ ರೆವರೆಂಡ್ ಸ್ಟಿ. ಎ. ಕುಲಕರ್ಣಿ ಎಂಬುವವರು ಬೈಬಲ್ಲಿನ ಒಂದು ಪ್ರತಿಯನ್ನು ಕಾಣಿಕೆಯಾಗಿ ಅರ್ಪಿಸಿದ್ದಾರೆ.

ಕಳ್ಳರ ಭಯವಿಲ್ಲ ! **ಬೆಂಕಿಯು ಕಾಟವಿಲ್ಲ!!**

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ ಆ್ಯಂಡ ಸನ್ಸ

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ

ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ.

ಬ್ರ್ಯಾಂಚ್ ಆಫೀಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ವಾಗೀನೆ ಮತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು



ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಬೆಂಕಿ ಪರೀಕ್ಷೆಯು ತಾ. ...ನೇ ಡಿಶೆಂಬರ ೧೯೩೨ನೇ ಇಸ್ವಿ ... ಸದರ ಕಂಪನಿಯವರು ನಮ್ಮ ವಶಕ್ಕೆ ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ಪಂಕಿ ಒಂದು ಸರಪಳಿ ಜತಿ ಒಂದು ಹತ್ತು ರೂಪಾಯದ ನೋಟು ಒಂದು ನಂ. K. 115 570153 ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಸಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧|| ಖಂಡಿ—ಕಟ್ಟಿಗೆಯಲ್ಲಿ ೧|| ತಾಸಿನ ವರೆಗೆ

(೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ಯತೆ ಮತ್ತು ಭದ್ರತೆಗಳನ್ನು ತೋರಿಸಿದರು. ಅ. ಭಾ. ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಇವಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮೋತ್ತಮತರಗತಿಯ ತ್ರಿಜೋರಿಯ ಕಾರ್ಖಾನೆಯವರೆಂದೆನಿಸಿಕೊಂಡು ಬಂಗಾರದ ಮೆಡಲು ಮತ್ತು ಸರ್ಟಿಫಿಕೇಟ ಹೊಂದಿದೆ. ಮತ್ತು ತಿಜೋರಿಗೆ ಹಾಕುವ ಯಾವತ್ತು ಕೀಲಿಗಳನ್ನು ವ ನಂಬರ್‌ಲಾಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಜನವರಿ ತಾರೀಖು ೯ ನೆಯ ಸೋಮವಾರ | ಸಂಚಿಕೆ ೨೧.

ಅಲವಾರ ಸಂಸ್ಥಾನದಲ್ಲಿ ಭಯಂಕರ ದೊಂಬಿ!

ಹಿಂದುಗಳ ಮನೆ ಅಂಗಡಿ ದೇವಾಲಯಗಳ ಲೂಟಿ !

ಅಲವಾರ ಎಂಬ ಹಿಂದುರಾಜರ ಸಂಸ್ಥಾನವು ಪಂಜಾಬ ಪ್ರಾಂತಕ್ಕೆ ಹೊಂದಿದೆ. ಈ ಚಿಕ್ಕ ಸಂಸ್ಥಾನದ ಜನಸಂಖ್ಯೆ ೭,, ಲಕ್ಷ ಮಾತ್ರ ಇದೆ. ಈ ಸಂಸ್ಥಾನದ ವಾರ್ಷಿಕಾದಾಯವು ೩೭ ಲಕ್ಷ ರೂ. ಗಳಿವೆ. ಇಲ್ಲಿಯ ಪ್ರಜೆಗಳಲ್ಲಿ ಸಾಧಾರಣ ಎರಡು ಲಕ್ಷ ಜನರು ಮುಸಲ್ಮಾನರಿದ್ದಾರೆ ಇವರೆಲ್ಲಾ ಹೆಚ್ಚಾಗಿ ಒಕ್ಕಲತನವನ್ನೇ ಮಾಡುವವರಾಗಿದ್ದಾರೆ.

ಈ ಮುಸಲ್ಮಾನರು ಈಗ ಭಯಂಕರವಾದ ದೊಂಬಿಯನ್ನು ಮಾಡಿದ್ದಾರೆ. ಈ ದೊಂಬಿಗಾರರಿಗೆ ಮಹ್ಮದಖಾನ ಎಂಬುವಾತನೇ ಪ್ರಮುಖನಾಗಿದ್ದಾನೆ. ಸಾಧಾರಣ ೪೦ ಸಾವಿರ ಜನರು ಈ ದೊಂಬಿಯಲ್ಲಿ ಸೇರಿದ್ದಾರೆಂದು ತಿಳಿದಿದೆ. ಇವರು ಶಸ್ತ್ರಾಸ್ತ್ರಗಳುಳ್ಳವರಾಗಿದ್ದಾರೆ. ಕಾಶ್ಮೀರ ಸಂಸ್ಥಾನದಲ್ಲಿ ಮುಸಲ್ಮಾನರು ಹಿಂದು ರಾಜರ ವಿರುದ್ಧವಾಗಿ ದೊಂಬಿ ಮಾಡಿದಂತೆಯೇ ಈ ಈ ದೊಂಬಿಯು ಕೂಡಾ ಹಿಂದು ರಾಜರ ವಿರುದ್ಧವಾಗಿ ಪ್ರಾರಂಭಿಸಿದೆಯೆಂದೂ ಇದರ ಚಾಲಕರು ಬ್ರಿಟಿಶ್ ಹಿಂದುಸ್ಥಾನದಲ್ಲಿದ್ದಾರೆಂದೂ ಜನಗಳ ಊಹೆಯಾಗಿದೆ.

ಅಲವಾರ ಸಂಸ್ಥಾನಾಧಿಪತಿಗಳ ಸೈನ್ಯಕ್ಕೂ ದೊಂಬಿಗಾರರಿಗೂ ಅನೇಕ ಕಡೆ ಯುದ್ಧವಾದಂತೆಯೇ ಆಗಿದೆ. ಇಂಗ್ಲಿಷ್ ಸರಕಾರದ ಸೈನ್ಯವು ಅಲವಾರ ಸಂಸ್ಥಾನ ರಕ್ಷಣೆಗಾಗಿ ಹೋಗುವುದಿದೆ. ಅಲವಾರ ಸಂಸ್ಥಾನದ ಹಿಂದುಗಳು ಬಹು ಭೀತರಾಗಿದ್ದಾರೆ. ಇವರ ರಕ್ಷಣೆಗಾಗಿ ಸಹಾಯಮಾಡಲು ತಮಗೆ ಅವಕಾಶ ಕೊಡಬೇಕೆಂದು ಹಿಂದು ಮಹಾಸಭೆಯವರು ಅಲವಾರ ಸಂಸ್ಥಾನಾಧಿಪತಿಗಳನ್ನು ಕೇಳಿಕೊಂಡಿದ್ದಾರೆ.

ತಿಝಾರಾ ಎಂಬಲ್ಲಿಯ ಶಿವಾಲಯದಲ್ಲಿಯ ಶಿವಲಿಂಗವನ್ನು ದೊಂಬಿಗಾರರು ಕಿತ್ತುಹಾಕಿದುದಾಗಿ ತಿಳಿದಿದೆ. ಮುಸಲ್ಮಾನರ ಈ ದೊಂಬಿಯು ಜಾಗ್ರತೆ ಶಾಂತವಾಗಿ ಅಲ್ಲಿಯ ಹಿಂದುಗಳ ಧನಮಾನ ಪ್ರಾಣ ರಕ್ಷಣೆಯಾಗಲೆಂದು ಶಾಂತತಾಪ್ರಿಯರು ಹಾರೈಸುತ್ತಿದ್ದಾರೆ!

ಗಾಂಧೀಜಿಯವರು ಒಪ್ಪಲಿಲ್ಲ.

ಮುಖ್ಯ ಮಂತ್ರಿಗಳಾದ ಮೆಕಡೊನೆಲ್ಡ್‌ರ ಮತ್ತು ಲಾರ್ಡ ಸಾಂಕಿಯವರ ಅಪೇಕ್ಷೆಯ ಪ್ರಕಾರ ಹಿಂದುಸ್ಥಾನ ಸರಕಾರದವರು ಗಾಂಧೀಜಿಯವರನ್ನು ಬಿಡುವ ವಿಷಯದಲ್ಲಿ ಆಲೋಚಿಸಿದರೆಂತಲೂ ಗಾಂಧೀಜಿಯವರ ಸಂಗಡ ಸರಕಾರದವರು ಮಾಡಿದ ಪತ್ರವ್ಯವಹಾರಗಳಿಗೆ ಗಾಂಧೀಜಿಯವರು ಈ ಪ್ರಕಾರ ಉತ್ತರವನ್ನು ಕೊಟ್ಟರೆಂತಲೂ ಫ್ರೀಪ್ರೆಸ್ ಪತ್ರಿಕೆಯ ರಾಜಕೀಯ ವಾರ್ತಾದಾಯಕರು ತಿಳಿಸಿದ್ದಾರೆ.

“ಸರಕಾರದವರ ದೃಷ್ಟಿಕೋನವು ಬೇರೆಯಾದ ವಿನಾ ಸ್ವಾತಂತ್ರ್ಯದಲ್ಲಿರುವ ರಾಷ್ಟ್ರಕ್ಕೆ ಸಾನಸೋಲ್ಲಂಘನೆಯೊಂದೇ ಸರಿಣಾಮಕಾರಿಯಾದ ಶಸ್ತ್ರವಾಗಿದೆ.” ಎಂದು ಗಾಂಧೀಜಿಯವರು ತಿಳಿಸಿರುವುದರಿಂದ ಸರಕಾರದವರು ಗಾಂಧೀಜಿಯವರನ್ನು ಈಗಲೇ ಬಿಡುವಂತಿಲ್ಲ.

ಡಾ. ಸಪ್ರು ಮೊದಲಾದ ಪ್ರಮುಖರು ಗಾಂಧೀಜಿಯವರ ಸಂಗಡ ಮಂಡಲಾಕಾರ ಪರಿಷತ್ತಿನ ವಿಷಯವಾಗಿ ಸಂಭಾಷಣೆ ಮಾಡಲು ಸರಕಾರದವರು ಒಪ್ಪಿಗೆಯನ್ನು ಕೊಡಬಹುದಾಗಿ ಪ್ರಕಟವಾಗಿದೆ.

ಮಹಾತ್ಮಾ ಗಾಂಧಿಯವರಿಗೆ ಕ್ರೈಸ್ತನ ಜನ್ಮದ ದಿವಸ ಎಂದರೆ ಡಿಸೆಂಬರ್ ೨೫ ನೆಯ ತಾರೀಖಿನ ದಿವಸ ರೆವರೆಂಡ್ ಸ್ಟಿ. ಎ. ಕುಲಕರ್ಣಿ ಎಂಬುವವರು ಬೈಬಲ್ಲಿನ ಒಂದು ಪ್ರತಿಯನ್ನು ಕಾಣಿಕೆಯಾಗಿ ಅರ್ಪಿಸಿದ್ದಾರೆ.

ಶಾಸ್ತ್ರಿ ಪರಿಷತ್ತಿನ ಫಲಶ್ರುತಿ.

ಮಹಾತ್ಮಾ ಗಾಂಧಿಯವರ ಹತ್ತಿರ ಕಳೆದ ವಾರದಲ್ಲಿ ಸನಾತನಿ ಕರ್ಮಠರು ಮತ್ತು ಸುಧಾರಕರು ಅಸ್ಪೃಶ್ಯತೆಯ ವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಶಾಸ್ತ್ರಾಧಾರಗಳ ಮೂಲಕ ನಿವೇದನ ಮಾಡಿದರಷ್ಟೆ. ಆ ವಾದವಿವಾದಗಳಿಂದ ಮಹಾತ್ಮಾಜಿಯವರು ನಿರ್ಧರಿಸಿದ ಸಂಗತಿಯನ್ನು ತಾ. ೩-೧-೩೩ ನೆಯ ದಿವಸ ಒಂದು ಪ್ರಕಟನೆಯ ಮೂಲಕ ಈ ಪ್ರಕಾರ ತಿಳಿಸಿದ್ದಾರೆ

“ಅಸ್ಪೃಶ್ಯತೆಯು ಹಿಂದು ಧರ್ಮದಲ್ಲಿದೆಯೇ, ಇಲ್ಲವೇ, ಎಂಬುದನ್ನು ಕುರಿತು ಕಳೆದ ವಾರ ನನ್ನ ಹತ್ತಿರ ಜರುಗಿದ ವಾದವನ್ನು ನಾನು ಶಾಂತರೀತಿಯಿಂದ ಕೇಳಿದೆನು. ಅದರಿಂದ ಕಳೆದ ೫೦ ವರ್ಷಗಳಲ್ಲಿ ನಾನು ಯಾವ ಅಭಿಪ್ರಾಯವುಳ್ಳವನಾಗಿದ್ದೆನೋ ಅದೇ ಅಭಿಪ್ರಾಯವು ಮತ್ತಿಷ್ಟು ದೃಢವಾಯಿತು.

ಹಿಂದು ಸಮಾಜದಲ್ಲಿರುವ ಈಗಿನ ಅಸ್ಪೃಶ್ಯತೆಗೆ ಹಿಂದು ಧರ್ಮ ಶಾಸ್ತ್ರದಲ್ಲಿ ಆಧಾರವಿಲ್ಲವೆಂದೇ ನನಗೆ ಈಗಲೂ ಮನವರಿಕೆಯಾಯಿತು. ನಾನು ಸತ್ಯವನ್ನು ಶೋಧಿಸುವ ಜಿಜ್ಞಾಸುವಾಗಿದ್ದೇನೆ. ನಾನೂ ಮನುಷ್ಯನೇ ಆಗಿರುವುದರಿಂದ ನನ್ನಿಂದಲೂ ತಪ್ಪಾಗುವ ಸಂಭವವಿದ್ದೇ ಇದೆ. ನನ್ನಿಂದ ತಪ್ಪಾದುದು ನನಗೆ ತಿಳಿದೊಡನೆ ಅದನ್ನು ತಿದ್ದಿಕೊಳ್ಳಲು ನಾನು ಯಾವಾಗಲೂ ಸಿದ್ಧನಾಗಿಯೇ ಇರುತ್ತೇನೆ.

ಯಾವ ಶಾಸ್ತ್ರಿಗಳು ಮತ್ತು ಪಂಡಿತರು ನನ್ನ ಅಭಿಪ್ರಾಯವನ್ನು ಅನುಮೋದಿಸಿದ್ದಾರೆಯೋ ಆ ಮಹಾಶಯರು ಈ ಪ್ರಕಾರ ತಿಳಿಸಿದ್ದಾರೆ. ಹಿಂದು ಧರ್ಮ ಶಾಸ್ತ್ರದಲ್ಲಿ ಮೂರು ವಿಧವಾದ ಅಸ್ಪೃಶ್ಯತೆಯು ಹೇಳಲ್ಪಟ್ಟಿದೆ. ಅವುಗಳ ವಿವರ—

೧. ಬ್ರಾಹ್ಮಣ ಸ್ತ್ರೀಯಳಲ್ಲಿ ಶೂದ್ರ ಪುರುಷನಿಂದುಂಟಾದ ಸಂತತಿ.

೨. ಮಹಾ ಪಾಪಗಳನ್ನು ಮಾಡಿದವರು ಅಥವಾ ಮಹಾ ದುರಾಚಾರಿಗಳು.

೩. ಅಶುಚಿ ಸ್ಥಿತಿಯಲ್ಲಿರುವ ವ್ಯಕ್ತಿ. ಅಥವಾ ಮರಣಾದಿ ಸೂತಕಗಳಿಗೆ ಪಾತ್ರನಾದ ವ್ಯಕ್ತಿ.

ಈ ಪ್ರಕಾರ ಮೂರು ವಿಧದ ಜನಗಳು ಅಸ್ಪೃಶ್ಯರೆಂದು ಹಿಂದುಧರ್ಮದಲ್ಲಿ ಹೇಳಿದೆ. ಈಗ ನಾವು ಯಾರಿಗೆ ಅಸ್ಪೃಶ್ಯರೆಂದು ಹೇಳುತ್ತೇವೆಯೋ ಆ ಜಾತಿಯವರೆಲ್ಲಾ ಮೊದಲನೆಯ ನಿಯಮದಂತೆ ಬ್ರಾಹ್ಮಣ ಸ್ತ್ರೀಯರಲ್ಲಿ ಜನ್ಮವೆತ್ತಿದವರ ಸಂತತಿಯವರೆಂದು ಹೇಳಲು ಯಾವ ಆಧಾರವೂ ಇಲ್ಲ. ಶೈವ, ವೈಷ್ಣವಾದಿ ಭಕ್ತಿಮಾರ್ಗದಲ್ಲಿ ಈ ಜನರು ಸೇರಿ ಸರಿಯಾದ ರೀತಿಯಲ್ಲಿ ವರ್ತಿಸುತ್ತಿರುವುದರಿಂದ ಚಾತುರ್ವರ್ಣಗಳ ಸರ್ವ ಸಾಮಾನ್ಯವಾದ ಅಧಿಕಾರಗಳು ಇವರಿಗೂ ಇದ್ದೇ ಇವೆ.

ಪಂಚ ಮಹಾಪಾಪಗಳಾದರೋ ಒಂದೇ ಜಾತಿಯವರಿಗೆ ಸಂಬಂಧಪಟ್ಟವುಗಳಲ್ಲ. ಎಲ್ಲ ಜಾತಿಗಳಲ್ಲಿಯೂ ಈ ಪಾಪಗಳುಳ್ಳವರಿದ್ದಾರೆ. ಆದುದರಿಂದ ಈ ಅಪರಾಧಕ್ಕಾಗಿ ಕೆಲವು ಜಾತಿಯವರನ್ನೆಲ್ಲಾ ಮುಟ್ಟದಿರುವುದು ನ್ಯಾಯವಲ್ಲ. ಇದು ವ್ಯಕ್ತಿಗತವಾದ ಅಸ್ಪೃಶ್ಯತೆಯೇ ವಿನಾ ಜನ್ಮವಿಶಿಷ್ಟವಾದುದಲ್ಲ. ಇನ್ನು ಮೂರನೆಯ ಅಸ್ಪೃಶ್ಯತೆಯು ಪ್ರಾಯಶ್ಚಿತ್ತದಿಂದ ಹೋಗತಕ್ಕ ತಾತ್ಕಾಲಿಕವಾದುದೇ ವಿನಾ ಜನ್ಮವಿಶಿಷ್ಟವಾದುದಲ್ಲ.

ಪಾದರಕ್ಷೆಗಳನ್ನು ಮಾಡುವ ಶೌಚಕೂಪಗಳನ್ನು ತೊಳೆಯುವ ಮೊದಲಾದ ಅಶುಚಿಯ ಕಾರ್ಯಗಳನ್ನು ಮಾಡುವವರು ಕೂಡಾ ಸಮಾಜರಕ್ಷಣೆಯ ಬೇರೆ ಬೇರೆ ಕಾರ್ಯಗಳನ್ನು ಮಾಡುತ್ತಿರುವುದರಿಂದ ಅವರು ಅಸ್ಪೃಶ್ಯರೆಂದೇ ತಿಳಿಯುವುದು ವಿಹಿತವಲ್ಲ. ಆ ಕೆಲಸದಲ್ಲಿದ್ದಾಗ ಅವರು ಅಶುಚಿಗಳಿರುತ್ತಾರೆ. ಆ ಕೆಲಸ ಮುಗಿದನಂತರ ಶುಚಿಯಾಗಿದ್ದಾಗ ಮುಟ್ಟದಿರುವುದು ಅನ್ಯಾಯವಲ್ಲವೇ?

ಆದಕಾರಣ ಬ್ರಾಹ್ಮಣಾದಿ ಚಾತುರ್ವರ್ಣದವರಿಗೆ ಸಮಾಜದಲ್ಲಿರುವ ಸಾಮಾನ್ಯವಾದ ಎಲ್ಲ ಅಧಿಕಾರಗಳೂ ಇವರಿಗೂ ಇರಬೇಕಾದುದು ಯುಕ್ತವಾಗಿದೆ. ದೇವಾಲಯ ಪ್ರವೇಶ ಬಾವಿ ಮೊದಲಾದ ಜಲಾಶಯ ಪ್ರವೇಶ, ಪಾಠಶಾಲೆ, ಧರ್ಮಶಾಲೆ, ಸಾರ್ವಜನಿಕ ಸಭೆ ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿಯ ಪ್ರವೇಶಗಳು ಈ ಜನರಿಗೆ ಇರಬೇಕಾದುದು ಅಗತ್ಯವಾಗಿದೆ.

ಅಸ್ಪೃಶ್ಯರಲ್ಲಿ ಕೆಲವರು ಗೋಮಾಂಸ ಮತ್ತು ಮೃತ ಪ್ರಾಣಿಗಳ ಮಾಂಸ ಸೇವಿಸುವುದುಂಟು. ಸ್ಪೃಶ್ಯ ಹಿಂದುಗಳು ಅವರ ಸಂಗಡ ಉದಾರಬುದ್ಧಿಯಿಂದ ನಡೆದುಕೊಂಡಿದ್ದಾದರೆ ಈ ನಡತೆಗಳನ್ನು ಬಿಡುವರು.

ಹಿಂದು ಧರ್ಮದಲ್ಲಿ ಅಸ್ಪೃಶ್ಯತೆಗೆ ಅವಕಾಶವಿಲ್ಲವೆಂಬ ಆ ವಾದದಲ್ಲಿ ಈ ಕೆಳಗಿನ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ.

(೧) ಸ್ವಾಮಿ ಕೇವಲಾನಂದ (ವೇ. ಶಾ. ನಾರಾಯಣಶಾಸ್ತ್ರಿ ಮರಾಠೆ) (೨) ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ (೩) ಬಾಬು ಭಗವಾನದಾಸ (೪) ಪ್ರಿನ್ಸಿಪಾಲ ಆನಂದ ಶಂಕರಧ್ರುವ (೫) ಪಂಡಿತ ಕೇಶವಶಾಸ್ತ್ರಿ (೬) ಪಂ. ಇಂದಿರಾರಮಣಶಾಸ್ತ್ರಿ (೭) ಪ್ರೊ. ಎಸ್. ಎಚ್. ಪುರಂದರೆ (೮) ಮಹಾಮಹೋಪಾಧ್ಯಾಯ ಪ್ರಮಥನಾಥ ತರ್ಕಭೂಷಣ (೯) ಮಹಾಮಹೋಪಾಧ್ಯಾಯ ಪಂಡಿತ ಶ್ರೀಧರಶಾಸ್ತ್ರಿ ಪಾಠಕ (೧೦) ಪಂಡಿತ ಶ್ರೀಕೃಷ್ಣ ಪನಸುಖಮಿಶ್ರ (೧೧) ಚಿಂತಾಮಣರಾವ ವೈದ್ಯ.

ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು ೨. ಕನ್ಯೆಯ ವಯಸ್ಸು ೧೪ ಅಥವಾ ೧೫ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ವಿಶೇಷ ಶಿಕ್ಷಣ ಪಡೆಯದಿದ್ದರೂ ಚಿಂತೆಯಿಲ್ಲ. ಶರಣರ ವಚನಗಳನ್ನು ಸ್ವಲ್ಪರಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೪ ವಿದ್ಯಾವಂತನು, ವೀರಶೈವನು, ದಿಕ್ಕಾಬಳಿಕೆ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ಪಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು. ಶಕ್ಯವಿದ್ದರೆ ಕನ್ಯೆಯ ಫೋಟೊ ಕಳಿಸಬೇಕು.

ಪತ್ತಿಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲ್‌ಸ್ಕೂಲ್
ಪೋ. ನಾರಾಯಣಪೇಟ. ನಿಜಾಂ ಸಂಸ್ಥಾನ

ಬೆಳಗಾವಿಯ ವೈಶ್ಯ ಸಮಾಜದಲ್ಲಿಯ ಪ್ರಸಿದ್ಧ ಡಾಕ್ಟರರಾದ ಶ್ರೀ. ಹರಿಭಾವು ಬೈಲೂರ ಇವರ ಮಕ್ಕಳಾದ ಶ್ರೀ. ವಾಮನರಾವ. ಬೈಲೂರವರು ಕ್ರಿ. ಶ. ೧೯೩೭ ರಲ್ಲಿ ಹೆಚ್ಚಿನ ವೈದ್ಯಕಿ ಅಭ್ಯಾಸಕ್ಕಾಗಿ ಜರ್ಮನ ದೇಶಕ್ಕೆ ಹೋಗಿದ್ದರು. ಅಲ್ಲಿಯ ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದ ತಂತಿ ಮೂಲಕ ಬೆಳಗಾವಿಗೆ ತಿಳಿಸಿದ್ದಾರೆ.

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ. ಬಾಗಲಕೋಟ.

ಹಿಂದುಸ್ಥಾನದ ಅನೇಕ ಸ್ವದೇಶಿ ವಸ್ತುಗಳ ಪ್ರದರ್ಶನವು ಜರುಗಿಸಲ್ಪಟ್ಟು ಅವುಗಳ ಮೂಲಕ ಜನರಲ್ಲಿ ಜಾಗೃತೆಯಾಗಿ ಕಲಾಭಿವೃದ್ಧಿಗೆ ಬಹು ಅಂಶದಿಂದ ಪ್ರೋತ್ಸಾಹವು ದೊರೆತಿದೆ. ನಮ್ಮ ವಿಜಾಪುರ ಜಿಲ್ಲೆಯಲ್ಲಿ ಇಂಥ ಪ್ರದರ್ಶನದ ಯೋಜನೆಯು ಈವರೆಗೂ ಆಗದ್ದರಿಂದ ಇದೇ ಮಾಘ ವಧ ೧ ತಾ. ೧೧-೨-೩೩ ನೆಯ ದಿವಸ ಸ್ವದೇಶಿ ವಸ್ತು ಪ್ರದರ್ಶನ ಸಮಾರಂಭವನ್ನು ನೆರವೇರಿಸುವದಾಗಿ ನಿರ್ಣಯವಾಗಿದೆ.

ರಾಷ್ಟ್ರದ ಸಾಂಪತ್ತಿಕ ಸ್ಥಿತಿಯು ಬೆಳವಣಿಗೆಗೆ ಕಲಾಕೌಶಲ್ಯದ ಅಭಿವೃದ್ಧಿ ಮತ್ತು ಸ್ವದೇಶಿ ವಸ್ತುಗಳ ಉತ್ಪಾದನೆಯೇ ಮೂಲವಾಗಿದೆ. ಅಲ್ಲಲ್ಲಿಯ ಸ್ವದೇಶಿ ವಸ್ತುಗಳ ಕಲಾಕೌಶಲ್ಯ ಮತ್ತು ಅನೇಕ ಸ್ವದೇಶಿ ಮಾಲುಗಳ ಸಂಗ್ರಹ ಇವುಗಳ ಪ್ರದರ್ಶನದಿಂದ ಜನ ಜಾಗೃತೆಯಾಗಿ ಅವುಗಳ ಊರ್ಜಿತಾವಸ್ಥೆಯನ್ನು ಹೊಂದುವವರಲ್ಲೇನೂ ಸಂಶಯವಿಲ್ಲ.

ಅಲ್ಲಲ್ಲಿಯ ಸ್ವದೇಶಿ ಮಾಲಿನ ಉತ್ಪಾದಕರು ಇಂಥ ಸುಸಂಧಿಯನ್ನು ಹೋಗಗೊಡದೆ ತಮ್ಮ ತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿ ಅವುಗಳ ಪ್ರಸಾರಕ್ಕೆ ಉತ್ತೇಜನ ಹೊಂದಬೇಕಾಗಿ ಇಚ್ಛಿಸುತ್ತೇವೆ.

ಮಾಲುಗಳನ್ನು ಇಡುವದರ ಬಗ್ಗೆ ಅಂಗಡಿ (ಸ್ಟಾಲು)ಗಳ ಯೋಜನೆಯಾಗಿದ್ದು ಅವುಗಳನ್ನು ಕಳುಹುವವರು ೧೯೩೩ ನೆಯ ಜಾನೆವಾರಿ ೨೫ ನೆಯ ತಾರೀಖಿನೊಳಗಾಗಿ ನಮಗೆ ತಲ್ಪುವಂತೆ ಕಳುಹಿಸಲು ಪ್ರಾರ್ಥನೆ. ಹೆಚ್ಚಿನ ಮಾಹಿತಿಯ ಬಗ್ಗೆ ಬರೆದು ಕೇಳಿಕೊಳ್ಳಬಹುದು.

ಕಾರ್ಯದರ್ಶಿಗಳು,
ಅ. ಕ. ಸ್ವ. ವ. ಪ್ರ. ಕ.
ಬಾಗಲಕೋಟ.

ಸೊಲ್ಲಾಪುರದ ಟಿಳಕ ಚೌಕಿನಲ್ಲಿ ತಾ. ೩೦ ನೆಯ ದಿವಸ ಮದ್ರಾಸ್ ಕೌನ್ಸಿಲಿನಲ್ಲಿ ಬರುವ ದೇವಾಲಯ ಪ್ರವೇಶದ ಗೊತ್ತುವಳಿಗೆ ಲೋಕಮತವನ್ನು ಪ್ರದರ್ಶಿಸಲು ಶ್ರೀ. ಕೌಲಗಿಕರ್ ವಕೀಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಡಾ. ಆಪಟೆ, ಶ್ರೀ. ಕನಾಳೆ ಮೊದಲಾದವರು ಅನುಕೂಲ ಪರವಾಗಿ ಭಾಷಣಮಾಡಿದರು. ಶ್ರೀ. ಲವ್ಹಳಕರಶಾಸ್ತ್ರಿ ಮೊದಲಾದವರು ಪ್ರತಿಕೂಲ ಭಾಷಣಮಾಡಿದರು. ಸಭೆಯಲ್ಲಿ ೨೫-೩೦ ಜನಗಳು ವಿರೋಧಾಭಿಪ್ರಾಯ ಕೊಟ್ಟರು. ಪ್ರಚಂಡ ಬಹು ಮತದಿಂದ ದೇವಾಲಯ ಪ್ರವೇಶದ ನಿರ್ಣಯವಾಯಿತು.

ಪುಣೆ ಹತ್ತಿರ ಖಡಕಿ ಎಂಬಲ್ಲಿ ಕ್ಯಾಪ್ಟನ್ ಥಾಮಸ್ ಎಂಬುವವರಿಗೆ ಕಳೆದ ೩೦ ನೆಯ ತಾರೀಖಿನ ದಿವಸ ಜಂಗಸಿಂಗ್ ಎಂಬ ಶೀಖ ನಾಯಕನು ಗುಂಡಿನಿಂದ ಹೊಡೆದು ಓಡಿ ಹೋಗಿದಾನೆ. ಕ್ಯಾಪ್ಟನರು ವೈದ್ಯಾಲಯದಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದಾರೆ.

ಸೊಲ್ಲಾಪುರದಲ್ಲಿ ಪದ್ಧತಿಯ ಪ್ರಕಾರ ಸಂಕ್ರಾಂತಿಯಲ್ಲಿ ಶ್ರೀ. ಸಿದ್ಧರಾಮೇಶ್ವರ ಜಾತ್ರೆಯು ಜರುಗುವುದು. ಈ ಸಾರೆ ಜಾತ್ರೆಯ ಕಾಲದಲ್ಲಿ ಒಂದು ಕಲಾಕೌಶಲ್ಯದ ಪ್ರದರ್ಶನವು ಏರ್ಪಡುವದಿದೆ.

|| ಶ್ರೀ ಬಸವೇಶ್ವರ ಪ್ರಸನ್ನ ||

ಶ್ರೀ ಪಂಚಾಚಾರ್ಯರಿಗೆ ಸೂಚನೆ.

ಜಿಲ್ಲಾ ರಾಯಚೂರ ಮಾನ್ವಿ ತಾಲೂಕಿನಲ್ಲಿ ಒಂದು ರಥವನ್ನು ಬ್ರಾಹ್ಮಣರು ಏರ್ಪಡಿಸಿ ಅದರಲ್ಲಿ ಪಂಚಮುಖ ಪರಮೇಶ್ವರನನ್ನು ಸಾರಥಿಯನ್ನಾಗಿ ಮಾಡಿಸಿ ಕೂಡ್ರಿಸಿದ್ದಾರೆ. ಈ ವಿಷಯವಾಗಿ ಲಿಂಗಾಯತ ಮತ್ತು ಬ್ರಾಹ್ಮಣರಲ್ಲಿ ವಾದವಿವಾದ ನಡೆದಿದೆ. ಈ ಖಟ್ಲೆಯು ಈಗ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ್ ರಾಯಚೂರ ಇವರ ಕೋರ್ಟಿನಲ್ಲಿ ನಡೆದಿದೆ. ಇದಕ್ಕೆ ನಮ್ಮ ವೀರಶೈವ ಧರ್ಮಾಭಿಮಾನಿಗಳಾದ ಸಿದ್ಧರಾಮಪ್ಪ ಪಾವಟೆ ಹೈಕೋರ್ಟ ವಕೀಲ ಹುಬ್ಬಳ್ಳಿ ಇವರು ಬಹಳ ಶ್ರಮಪಡಹತ್ತಿದ್ದಾರೆ.

ಈ ಪ್ರಶ್ನೆಯು ನಮ್ಮ ವೀರಶೈವ ಧರ್ಮದ ಪ್ರಶ್ನೆಯಾಗಿರುವದರಿಂದ ಜಗದ್ಗುರುಗಳೆನಿಸಿಕೊಂಬುವ ವೀರಶೈವ ಪಂಚಾಚಾರ್ಯರು ಈ ವಿಷಯದ ಕಡೆಗೆ ಲಕ್ಷಕೊಟ್ಟು ಆದಷ್ಟು ಮಟ್ಟಿಗೆ ಸಹಾಯಮಾಡಿ, ಶಾಸ್ತ್ರಾರ್ಥದಿಂದ ಕೋರ್ಟಿನಲ್ಲಿ ಬ್ರಾಹ್ಮಣರ ಈ ಕಾರ್ಯವು ನಮ್ಮ ಧರ್ಮ ವಿರುದ್ಧವೆಂದು ಸಿದ್ಧಾಂತ ಮಾಡಿಸುವರೆಂದು ನಂಬಿದ್ದೇವೆ. ಒಂದು ಪಕ್ಷ ಪಂಚಾಚಾರ್ಯರು ಈ ವಿಷಯದ ಕಡೆಗೆ ಲಕ್ಷಕೊಡದಿದ್ದರೆ ಈ ವಿಷಯವು ತೀರ್ಮಾನವಾಗುವದು ಕಠಿಣವೆಂದು ಕಂಡು ಬರುತ್ತದೆ. ಯಾಕೆಂದರೆ ಜಗದ್ಗುರುಗಳೆನಿಸಿಕೊಂಬುವವರು ಧರ್ಮ ಕಾರ್ಯದಲ್ಲಿ ಹಿಂಜರಿದರೆ ನಮ್ಮಂಥ ಅಲ್ಪ ಮತಿಗಳ ಪಾಡೇನು ?

ಸಮಾಜ ಸೇವಕ
ವಿ. ಬಿ. ಬೀದರಕರ್.

ವ್ಹಿಯೆನ್ನಾ ಎಂಬಲ್ಲಿ ಒಬ್ಬ ಒಕ್ಕಲಿಗಿತ್ತಿ ಸಾಯಲು ಅವಳನ್ನು ಪೆಟ್ಟಿಗೆಯಲ್ಲಿ ಹಾಕಿ ಹುಗಿದರು. ಅವಳ ಮೈಮೇಲಿನ ಆಭರಣಗಳನ್ನು ತೆಗೆದುಕೊಂಡಿರಲಿಲ್ಲ. ಹುಗಿದು ಬಂದಮೇಲೆ ಮೂವರು ಅವಳ ಆಭರಣ ತೆಗೆದುಕೊಂಡು ಬರಬೇಕೆಂದು ಹೋಗಿ ಗುದ್ದಿನಿಂದ ಆ ಪೆಟ್ಟಿಗೆಯನ್ನು ತೆಗೆಯಲು ಆ ಹೆಣ್ಣುಮಗಳು ನಿಮಗೇನು ಬೇಕೆಂದು ಕೇಳಿದಳು ! ಇದು ಭೂತವೆಂದು ಒಬ್ಬನಿಗೆ ಕೂಡಲೆ ಹುಚ್ಚುಹಿಡಿಯಿತು. ಇಬ್ಬರು ಓಡುತ್ತಲೇ ಹೋದರು. ಸುಡಗಾಡಕಾಯುವವರು ಆ ಹೆಣ್ಣುಮಗಳನ್ನು ವೈದ್ಯಾಲಯಕ್ಕೆ ತೆಗೆದುಕೊಂಡು ಹೋದರು, ಅಲ್ಲಿ ಅವಳು ಈಗ ಚೆನ್ನಾಗಿದ್ದಾಳಂತೆ !

ಬಾರ್ಶಿಯ ಬಹು ಜನ ಪ್ರಿಯ ತರುಣ ಡಾಕ್ಟರರಾದ ಪಾಂಡೆ ಎಂಬುವವರು ಆಗಾಗ್ಗೆ ಹಾವುಗಳನ್ನು ಹಿಡಿಯುತ್ತಿದ್ದರು. ಈ ತಮ್ಮ ರೂಢಿಯಂತೆ ಕಳೆದವಾರ ಒಂದು ಹಾವನ್ನು ಹಿಡಿದಾಗ ಅದು ಕಚ್ಚಿದ್ದರಿಂದ ಕೂಡಲೇ ಇವರು ವಿಷವೇರಿ ಮೃತಪಟ್ಟರು. ಹಾವು ಹಿಡಿಯುವವರು ಇನ್ನಾದರೂ ಬುದ್ಧಿಕಲಿಯಲಿ.

ಮಹಾತ್ಮಾ ಗಾಂಧಿಯವರನ್ನು ಬಿಡದಿದ್ದುದರಿಂದ ಲಂಡನ್ನಿನ ಡೇಲಿ ಹೆರಲ್ಡ ಪತ್ರಿಕೆಯು ಹಿಂದುಸ್ಥಾನ ಸರಕಾರವನ್ನು ಆಕ್ಷೇಪಿಸಿದೆ.

ವರಂಗಲ್ ಎಂಬಲ್ಲಿ ಕಳೆದ ಸೋಮವಾರ ಒಂದು ಆಡು ಮರಿಯನ್ನು ಹಾಕಿತು. ಆದರ ಮುಖವು ಮನುಷ್ಯನಂತಿದ್ದಿತು! ಆ ಮರಿಯು ಸ್ವಲ್ಪಹೊತ್ತಿನಲ್ಲಿಯೇ ಮೃತಪಟ್ಟಿತು.

ಶರಣಸಂದೇಶ.

ಶಾ. ಶ. ೧೮೫೫ ನೆಯ ಪುಷ್ಯ ಶು. ೧೩ ಸೋಮವಾರ.

ಪ್ರಮಥರು ಪಂಚಾಚಾರ್ಯರಿಗೆ ಪೂಜ್ಯರಲ್ಲವೇ?

ವೀರಶೈವರಲ್ಲಿ ಇತ್ತೀಚಿಗೆ ಕೆಲವರು ಶ್ರೀಮದ್ಬಸವಾದಿ ಪ್ರಮಥರನ್ನೂ ಶ್ರೀ. ಜಗದ್ಗುರು ಪ್ರಭುಸ್ವಾಮಿಯ ಸಂಪ್ರದಾಯಾನುವರ್ತಿಗಳಾದ ಪೂಜ್ಯ ಜಂಗಮಮೂರ್ತಿಗಳನ್ನೂ ಮನಸ್ಸಿಗೆ ಬಂದಂತೆ ನಿಂದಿಸುತ್ತ ಇವರು ವೀರಶೈವರೇ ಅಲ್ಲವೆಂತಲೂ ಹೇಳುತ್ತಿದ್ದಾರಷ್ಟೆ.

ವೀರಶೈವ ಮತಕ್ಕೆ ಮೂಲವಾಗಿರತಕ್ಕ ಈ ಪೂಜ್ಯ ವಿಭೂತಿಗಳನ್ನೇ ನಿಂದಿಸುತ್ತ ವೀರಶೈವ ವಾತಾವರಣವನ್ನು ದೂಷಿತಗೊಳಿಸುವವರಿಗೆ ವೀರಶೈವ ಗುರುಪೀಠಗಳನ್ನಾರೋಹಣ ಮಾಡಿರುವ ಈಗಿನಪಂಚಾಚಾರ್ಯರು ಪ್ರೋತ್ಸಾಹಿಸುತ್ತಿದ್ದಾರೆಂದು ಬಹುಜನ ವೀರಶೈವರು ತಿಳಿದುಕೊಂಡಿದ್ದಾರೆ. ಆದಕಾರಣ ಈ ಪೀಠಾಚಾರ್ಯರನ್ನು ಕುರಿತು ತುಮಕೂರು ಮತ್ತು ಸೊಲ್ಲಾಪುರಗಳ ವೀರಶೈವರು ಕೇಳಿಕೊಂಡ ಸಂಗತಿಗಳ ಮುಖ್ಯಾಂಶವನ್ನು ಇದೇ ಪತ್ರಿಕೆಯ ಬೇರೆ ಕಡೆಗೆ ಪ್ರಕಟಿಸಿದ್ದೇವೆ.

ಪರಮಪೂಜ್ಯ ಪ್ರಮಥರೂ ಶ್ರೀ ವಿರಕ್ತ ಸ್ವಾಮಿಗಳೂ ತಮಗೆ ಪೂಜ್ಯರಾಗಿದ್ದಾರೆಯೋ? ಇಲ್ಲವೇ? ತಮಗೆ ಅವರು ಪೂಜ್ಯರಾಗಿದ್ದರೆ ನಮಗೆ ತಾವೂ ಪೂಜ್ಯರು. ತಮಗೆ ಅವರು ಪೂಜ್ಯರಲ್ಲದಿದ್ದರೆ ನಮಗೆ ತಾವೂ ಪೂಜ್ಯರಲ್ಲ. ಎಂಬುದಾಗಿ ಪೀಠಾಚಾರ್ಯರನ್ನು ಸಮಾಜದವರು ಕೇಳುವಂತಹ ಸ್ಥಿತಿ ಬಂದುದು ತುಂಬಾ ವಿಷಾದಕರವಾದುದಾಗಿದೆ.

ಶ್ರೀಬಸವಾದಿ ಪ್ರಮಥರೂ ಶ್ರೀ ರೇಣುಕಾದ್ಯಾಚಾರ್ಯರೂ ಶ್ರೀ ಪ್ರಭುಸ್ವಾಮಿ ಮೊದಲಾದ ಜಂಗಮಪುಂಗವರೂ ವೀರಶೈವರಿಗೆ ಪರಮಪೂಜ್ಯರಾಗಿದ್ದಾರೆ. ಮಹಮ್ಮದ ಪೈಗಂಬರರನ್ನೂ ಅವರ ಆಚಾರವಿಚಾರಗಳನ್ನೂ ದೂಷಿಸಿದವರು ಹೇಗೆ ಮಹಮ್ಮದೀಯರಲ್ಲವೋ ಏಸುಕ್ರಿಸ್ತನನ್ನೂ ಆತನ ನಡೆನುಡಿಗಳನ್ನೂ ನಿಂದಿಸುವವರು ಹೇಗೆ ಕ್ರೈಸ್ತರಲ್ಲವೋ, ಹಾಗೆಯೇ ಶ್ರೀ ಬಸವಾದಿ ಪ್ರಮಥರೇ ಮೊದಲಾದ ವೀರಶೈವ ಮತೋದ್ಧಾರಕರನ್ನು ದೂಷಿಸುವವರಾಗಲಿ ಅಥವಾ ಅವರ ಆಚಾರ ವಿಚಾರಗಳನ್ನು ಅಲ್ಲಗಳೆಯುವವರೇ ಆಗಲಿ ವೀರಶೈವರೇ ಅಲ್ಲವೆಂದು ಧಾರಾಳವಾಗಿ ಹೇಳಬಹುದು.

ಆದುದರಿಂದ ಪ್ರಮಥನಿಂದಕರು ತಾವು ವೀರಶೈವರೆಂದು ಹೇಳಿಕೊಂಡರೆ ಅವರು ಸಿದ್ದೀಕ ಸಾಹೇಬರ ಪಂಗಡಕ್ಕೆ ಸೇರಿದ ವೀರಶೈವರೆಂದೇ ಜನರು ತಿಳಿಯುವುದು ಸ್ವಾಭಾವಿಕವಾಗಿದೆ. ಸಿದ್ದೀಕ ಸಾಹೇಬರು ತಾವು ವೀರಶೈವರ ಜಗದ್ಗುರು ಚೆನ್ನಬಸವೇಶ್ವರನ ಅವತಾರವೆಂದು ಹೇಳಿಕೊಳ್ಳುವುದು ಎಷ್ಟು ಹಾಸ್ಯಾಸ್ಪದವಾಗಿದೆಯೋ ಹಾಗೆಯೇ ಶ್ರೀಬಸವಾದಿ ಪ್ರಮಥರ ನಿಂದಕರು ತಾವು ವೀರಶೈವರ ಜಗದ್ಗುರುವೆಂದು ಹೇಳಿಕೊಳ್ಳುವುದೂ ಹಾಸ್ಯಾಸ್ಪದವಾಗಿದೆ.

ಆದುದರಿಂದಲೇ ಶ್ರೀ ಜಗದ್ಗುರು ರಂಭಾಪುರಿ ಪೀಠದ ಶ್ರೀಗಳವರು ತುಮಕೂರ ವೀರಶೈವ ಮಹಾಜನರಿಗೆ ಗುಬ್ಬಿ ಗ್ರಾಮದಲ್ಲಿ ಶ್ರೀ ವಿರಕ್ತಮೂರ್ತಿಗಳೂ ಶ್ರೀ ಬಸವಾದಿ ಪ್ರಮಥರೂ ಪರಮಪೂಜ್ಯರೆಂದು ಅಪ್ಪಣೆ ಕೊಡಿಸಿದ್ದರು. ಆ ಜನರ ಪ್ರಾರ್ಥನೆಯ ಪ್ರಕಾರ ತಾವು ಆಗ ಅಪ್ಪಣೆ ಕೊಡಿಸಿದಂತೆ ಪ್ರಕಟನಾ ಪತ್ರಿಕೆಯ ಮೂಲಕ ತುಮಕೂರಿಗೆ ಆಗಮಿಸುವ ಮುಂಚೆಯೇ ಪ್ರಕಟಿಸಿದ್ದರೆ ಈಗ ತುಮಕೂರಿನಲ್ಲಿ ತುಂಬಾ ಅನೈಕಮತ್ಯವುಂಟಾಗಿರುವ ಶೋಚನೀಯ ಸ್ಥಿತಿಯೇ ಪ್ರಾಪ್ತವಾಗುತ್ತಿರಲಿಲ್ಲ.

ಶ್ರೀ. ರಂಭಾಪುರಿ ಶ್ರೀಗಳವರ ಭಾಷಣ.

ತುಮಕೂರಲ್ಲಿ ತಾ. ೩೦-೧೨-೩೨ನೆಯ ಸಾಯಂಕಾಲ ೩|| ಗಂಟೆ ಸಮಯದಲ್ಲಿ ಶ್ರೀ ರಂಭಾಪುರಿ ಪೀಠಾಚಾರ್ಯರು ಸಭೆಯಲ್ಲಿ ಈ ಪ್ರಕಾರ ಭಾಷಣಮಾಡಿದರೆಂದು ಒಬ್ಬರು ತಿಳಿಸಿದ್ದಾರೆ.

ಸನ್ನಿಧಿಯು ಬಸವಾದಿಗಳನ್ನು ದೂಷಿಸುವುದೆಂದು ಅನೇಕರು ಇಲ್ಲದ ದೋಷಾರೋಪಣೆಯನ್ನು ಮಾಡಿರುವರು. ಈಗ್ಗೆ ೮೦೦ ವರ್ಷಗಳ ಹಿಂದೆ ವೀರಶೈವ ಮತವನ್ನು ಉದ್ಧಾರ ಮಾಡಿದ ಶ್ರೀಮದ್ಬಸವನು ಪರಮಭಕ್ತನು. ಆತನು ವೀರಶೈವ ಮತವನ್ನು ವಿಸ್ತರಿಸಿ ಜನರಲ್ಲಿ ಭಕ್ತಿಯನ್ನು ಬಿತ್ತಿದನು. ವಿರಕ್ತರಿಂದ ಸಮಾಜಕ್ಕೆ ಬಹಳ ಮೇಲ್ಮೆಯಾಗಿದೆ. ಮರಿತೋಂಟದಾರ್ಯ ಮುಂತಾದ ವಿರಕ್ತರು ವೀರಶೈವ ಜನಾಂಗಕ್ಕೆ ಬಹಳ ಸೇವೆ ಮಾಡಿರುತ್ತಾರೆ. ನಾವು ಇವರನ್ನು ಗೌರವಿಸುವೆವು.

ಇದನ್ನು ಪ್ರತಿಗ್ರಾಮದಲ್ಲಿಯೂ ಒತ್ತಿಒತ್ತಿ ಹೇಳುತ್ತಿರುವೆವು. ಆದರೂ ಅನೇಕರು ನಮ್ಮನ್ನೇ ಕಾಡುತ್ತಿದ್ದಾರೆ. ಈಗಲೂ ಬರೆದುಕೊಡಲಿಲ್ಲವೆಂದು ಕಾಗದಗಳನ್ನು ಹಂಚಿರುವರು. ನಾವು ಲಿಖಿತ ಮೂಲಕವೇ ಪ್ರಕಟಿಸುತ್ತಿದ್ದೆವು. ಆದರೆ ಕೆಲವರು ಬೇಡವೆಂದು ಅರಿಕೆಮಾಡಿಕೊಂಡಿರುವರು.

ಸಾಯಂಕಾಲದ ಸಂಭಾಷಣೆ.

ಶ್ರೀಗಳು ಅದೇ ದಿನ ಸಾಯಂಕಾಲ ೬|| ಇಂದ ೭||| ರವರೆಗೆ ತಮ್ಮ ವಿಶ್ರಾಂತಿ ಮಂದಿರದಲ್ಲಿ ಡಿ. ಜಜ್ಜುರಾದ ಶ್ರೀಮಾನ್ ವೀರಬಸವಯ್ಯನವರ ಹತ್ತಿರ ಕೂಡಾ ಸಂಭಾಷಣೆ ಮಾಡುವಾಗ ಬಸವೇಶನನ್ನು ನಾವು ದೂಷಿಸುವುದಿಲ್ಲವೆಂತಲೂ ಆ ಮಹಾಭಕ್ತನನ್ನು ದೂಷಿಸುವವರು ಮೂರ್ಖರೆಂತಲೂ ವಿರಕ್ತರನ್ನು ನಾವೇಕೆ ದೂಷಿಸೋಣವೆಂತಲೂ ಅಪ್ಪಣೆಕೊಡಿಸಿದುದಾಗಿಯೂ ನಮಗೆ ತಿಳಿದು ಬಂದಿದೆ,

ಈ ಪ್ರಕಾರ ಸಭೆ ಮತ್ತು ಸಂಭಾಷಣೆಗಳಲ್ಲಿ ಶ್ರೀಗಳವರು ಅಪ್ಪಣೆ ಕೊಡಿಸಿದ್ದುದು ನಿಜವೇ? ಹಾಗಿದ್ದರೆ ತುಮಕೂರು ಮಹಾಜನಗಳಿಗೆ ಗುಬ್ಬಿ ಗ್ರಾಮದಲ್ಲಿ ಅಪ್ಪಣೆ ಕೊಡಿಸಿದ್ದೂ ನಿಜವೆಂದೇ ಸಿದ್ಧವಾಗುತ್ತದೆ. ಅದು ನಿಜವಾಗಿರುವ ಪಕ್ಷದಲ್ಲಿ ಜನಗಳ ಸಂದೇಹ ನಿವಾರಣಾರ್ಥ ಶ್ರೀ. ಬಸವಾದಿ ಪ್ರಮಥರ ಮತ್ತು ಪೂಜ್ಯ ವಿರಕ್ತ ಸ್ವಾಮಿಗಳ ವಿಷಯವಾಗಿ ತಮ್ಮ ಪೂಜ್ಯ ಬುದ್ಧಿಯನ್ನೂ ಪಂಚಾಚಾರ್ಯ ಪ್ರಭಾ ಪತ್ರಿಕೆಯ ವಿಷಯದಲ್ಲಿರತಕ್ಕ ತಮ್ಮ ತಿರಸ್ಕಾರವನ್ನೂ ಸಂಸ್ಥಾನದಿಂದಲೇ ತುಮಕೂರ ವೀರಶೈವ ಮಹಾಜನಗಳ ಅಪೇಕ್ಷೆಯಂತೆ ಆದೇಕೆ ಪ್ರಕಟಿಸಬಾರದಾಗಿದ್ದಿತು? ಈಗಲಾದರೂ ಏಕೆ ಪ್ರಕಟಿಸಬಾರದು?

ಸೊಲ್ಲಾಪುರದ ಲೇಖಕರು ಬಾಳೆಹಳ್ಳಿ ಪೀಠದವರ ನಂ. ೭೩ ನೆಯ ಪತ್ರದಲ್ಲಿ ವಿರಕ್ತ ಮೂರ್ತಿಗಳ ನಿಂದೆಯು ಪ್ರಕಟವಾಗಿದೆಯೆಂದು ಪ್ರಕಟಿಸಿರುವುದನ್ನು ಇದೇ ಪತ್ರಿಕೆಯಲ್ಲಿ ಕೊಟ್ಟಿದೆಯಷ್ಟೆ? ಅದು ನಿಜವೇ? ಈ ವಿಷಯವನ್ನಾದರೂ ತುಮಕೂರ ವೀರಶೈವ ಮಹಾಜನರು ಈಗ ಶ್ರೀಗಳವರಲ್ಲಿ ಸಮಕ್ಷಮ ವಿಜ್ಞಾಪಿಸಿಕೊಂಡು ನಿಜಾಂಶವನ್ನು ತಿಳಿದುಕೊಳ್ಳಬಹುದಲ್ಲವೇ?

ಶ್ರೀ ಉಜ್ಜಯನಿ ಪೀಠದ ಶ್ರೀಗಳವರು.

ಬಾರ್ಶಿಯಲ್ಲಿ ಶ್ರೀ. ಜಗದ್ಗುರು ಉಜ್ಜಯನಿ ಪೀಠದ ಸ್ವಾಮಿಗಳ ಹತ್ತಿರವೇ ನಡೆದ ಸಂಗತಿಯನ್ನು ಸೊಲ್ಲಾಪುರದ ಲೇಖಕರು ಪ್ರಕಟಿಸಿದ್ದಾರಷ್ಟೆ. ಈ ವಿಷಯದ ಕಡೆಗೆ ಶ್ರೀ ಉಜ್ಜಯನಿ ಪೀಠಾಚಾರ್ಯರು ಈಗಲಾದರೂ ಗಮನಿಸಿ ತಮ್ಮಲ್ಲಿ ಪ್ರಮಥ ಮತ್ತು ವಿರಕ್ತ ಮೂರ್ತಿಗಳ ವಿಷಯದಲ್ಲಿ ಪೂಜ್ಯ ಬುದ್ಧಿಯಿದೆಯೆಂದೇಕೆ ಪ್ರಕಟಿಸಬಾರದು ?

ಒಂದು ವೇಳೆ ತಮಗೆ ಪ್ರಮಥರಲ್ಲಿಯೂ ಶ್ರೀ ವಿರಕ್ತ ಮೂರ್ತಿಗಳಲ್ಲಿಯೂ ಭಕ್ತಿವಿಶ್ವಾಸಗಳಿಲ್ಲದಿದ್ದರೆ ಆ ಪ್ರಕಾರ ಸ್ಪಷ್ಟ ವ್ಯಕ್ತಗೊಳಿಸುವುದೇ ಯುಕ್ತವಲ್ಲವೇ? ಶ್ರೀಗಳು ಸಮಯಬಂದಂತೆ ವರ್ತಿಸುತ್ತಾರೆಂದು ಜನಗಳಿಗೆ ಕಲ್ಪನೆಯಾಗುವಂತೇಕೆ ವರ್ತಿಸಬೇಕು ? ಪೀಠಾಚಾರ್ಯರು ಬಂದಲ್ಲಿ ಎರಡು ಪಂಗಡಗಳಿದ್ದರೆ ಒಂದಾಗುವುದಕ್ಕೆ ಪ್ರತಿಯಾಗಿ ನಾಲ್ಕಾಗುತ್ತವೆಂಬ ಆಕ್ಷೇಪಣೆಗೆ ಶ್ರೀಗಳವರೇಕೆ ಒಳಗಾಗಬೇಕು ? ಮಹಾರಾಷ್ಟ್ರ ದೇಶದಲ್ಲಿ ಪ್ರಮಥ ನಿಂದೆಯ ಬೆಂಕಿಯನ್ನು ಉಜ್ಜಯನಿ ಪೀಠದ ಶ್ರೀಗಳವರೇ ಹಬ್ಬಿಸಲು ಬಂದಿದ್ದಾರೆಂದು ಜನಗಳು ಆಡಿಕೊಳ್ಳಲವಕಾಶವಾಗುವಂತೇಕೆ ಶ್ರೀಗಳು ಈ ವಿಷಯದಲ್ಲಿ ಮೌನರಾಗಿರಬೇಕು?

ಇದು ವ್ಯಕ್ತಿ ಸ್ವಾತಂತ್ರ್ಯದ ಯುಗ. ಎಂತಹ ಪ್ರಬಲ ಸರಕಾರವನ್ನು ಕೂಡಾ ತಡೆದು ನಿಜಾಂಶವನ್ನು ಕೇಳುವ ಕಾಲ. ಮೂಗು ಹಿಡಿದ ವಿನಾ ಬಾಯಿತೆಗೆಯುವುದಿಲ್ಲವೆಂಬುದನ್ನು ಜನಸಾಮಾನ್ಯರು ಕೂಡಾ ತಿಳಿದುಕೊಂಡು ಸಂಘಶಕ್ತಿಯಿಂದ ಎಂತಹ ಪ್ರಬಲರನ್ನೂ ನಿರ್ಬಲರನ್ನಾಗಿ ಮಾಡುವ ಸಮಯವಿದು. ಆದುದರಿಂದ ಜಾಗೃತವಾದ ಜನಾಂಗಕ್ಕೆ ತಕ್ಕಂತೆಯೇ ಪೀಠಾಚಾರ್ಯರು ವರ್ತಿಸಿ ತಮ್ಮ ವಿಷಯದಲ್ಲಿರುವ ಸಮಾಜದವರ ಭಕ್ತಿ ವಿಶ್ವಾಸಗಳನ್ನು ಕಾಯ್ದುಕೊಳ್ಳುವುದು ವಿಹಿತವಲ್ಲವೇ ? ಆದುದರಿಂದ ದಕ್ಷಿಣೋತ್ತರಭಾಗಗಳಲ್ಲಿ ಈ ಉಭಯಪೀಠಾಚಾರ್ಯರ ಸಂಬಂಧವಾಗಿ ಸಮಾಜದ ಬಹುಭಾಗದವರಲ್ಲುಂಟಾಗಿರತಕ್ಕ ಸಂದೇಹವನ್ನು ಉಭಯ ಶ್ರೀಗಳವರೂ ಪ್ರತ್ಯೇಕ ಪ್ರಕಟನೆಗಳನ್ನು ಪ್ರಕಟಿಸಿ ಕೂಡಲೆ ನಿವಾರಣೆಮಾಡಬೇಕೆಂದು ನಾವು ಪುನಃ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇವೆ. ಹಾಗೆ ಮಾಡದಿದ್ದರೆ ಸಮಾಜದಲ್ಲುಂಟಾಗುವ ಅನೇಕ ಅನರ್ಥಗಳಿಗೆ ಈ ಗುರುಪೀಠದವರೇ ಕಾರಣರೆಂದು ಜನಗಳು ಹೇಳಬಾರರೇ?

ಪೀಠಾಚಾರ್ಯರಿಗೆ ಈ ಪ್ರಸಂಗವೇಕೆ ಬಂದಿತು?

ಪೀಠಾಚಾರ್ಯರು ಪ್ರಮಥರ ಮತ್ತು ವಿರಕ್ತ ಸ್ವಾಮಿಗಳ ನಿಂದೆಯನ್ನು ಮಾಡದಿದ್ದರೂ ಇವರನ್ನೇಕೆ ಬಹುಜನಗಳು ಈ ಪ್ರಕಾರ ಕಾಡುತ್ತಿರುವರು? ಪ್ರತ್ಯಕ್ಷವಿಲ್ಲದಿದ್ದರೂ ಪರೋಕ್ಷವಾಗಿಯಾದರೂ ಶ್ರೀಗಳವರಿಗೂ ನಿಂದಕರಿಗೂ ಸಂಬಂಧವಿದೆಯೇ? ಈಗಿಲ್ಲದಿದ್ದರೂ ಹಿಂದೆಯಾದರೂ ಇದ್ದಿತೇ? ಒಮ್ಮೆ ಹಾವನ್ನು ನೋಡಿದ ಸ್ಥಳದಲ್ಲಿ ಹಗ್ಗವಿದ್ದಿದ್ದರೂ ಹಾವೆಂದೇ ಜನರು ಮೊದಲು ತಿಳಿಯುವುದು ಸ್ವಾಭಾವಿಕವಲ್ಲವೇ ? ಹಾಲಹರಿವೆಯಾದರೂ ಈಚಲಗಿಡದಡಿಯಲ್ಲಿದ್ದರೆ ಮದ್ಯವೆಂದೇ ಜನರು ತಿಳಿಯುವ ಸಂಭವವಿದೆಯಲ್ಲವೇ?

ಹಾಗೆಯೇ ಪ್ರಮಥ ನಿಂದಕರು ಪೀಠಾಚಾರ್ಯರ ನೆರೆಯಲ್ಲಿರುವುದರಿಂದ ಇವರಿಗೆ ಈ ಆಕ್ಷೇಪಣೆ ಬಂದಿರಬಹುದೇ ? ಪಂಚಾಚಾರ್ಯ ಪ್ರಭೆ ಎಂಬ ಹೆಸರಿನ ಪತ್ರಿಕೆಯು ಪಂಚಾಚಾರ್ಯರಿಗೆ ಪ್ರಭೆಯನ್ನುಂಟು ಮಾಡದೆ ಹೋದಹೋದಲ್ಲೆಲ್ಲಾ ಕತ್ತಲನ್ನೇ ಉಂಟುಮಾಡುತ್ತಿದೆಯಲ್ಲಾ ! ಈ ಪತ್ರಿಕೆಯೇ ಪೀಠಾಚಾರ್ಯರಿಗೆ ಈ ಶೋಚನೀಯ ಪ್ರಸಂಗವನ್ನುಂಟುಮಾಡಿತಲ್ಲವೇ ? ಆದುದರಿಂದ ಪ್ರಮಥ ನಿಂದೆಯ ಆ ಪತ್ರಿಕೆಯ ವಿಷಯದಲ್ಲಿಯೂ ಪೀಠಾಚಾರ್ಯರು ನಿಷೇಧವನ್ನು ಪ್ರದರ್ಶಿಸಿ ಅಶೇಷ ವೀರಶೈವ ಜನಗಳ ಭಕ್ತಿವಿಶ್ವಾಸಗಳಿಗೆ ಪಾತ್ರರಾಗಬೇಕೆಂತಲೂ ನಾವು ವಿನಯಪೂರ್ವಕ ಪ್ರಾರ್ಥಿಸಿಕೊಳ್ಳುತ್ತೇವೆ.

ಇರಾಣ ಸರಕಾರದ ಪ್ರಮುಖ್ಯಾಧಿಕಾರಿಗಳ [illegible] ಯರ ಹೆಣ್ಣುಮಗಳ ಸಂಗಡ ಇಂಬಾರದಂತ [illegible] ಯರು ಕೊಡುವ ವೇತಣವನ್ನು ಸ್ವೀಕರಿಸಬಾರದೆಂದು ಇರಾಣದ ಬಾದಶಹರು ಅಪ್ಪಣೆಮಾಡಿದ್ದಾರೆ. ಆಂಗ್ಲೊ [illegible] ಆಯಿಲ್ ಕಂಪನಿಯ ಸೌಭಾಗ್ಯವನ್ನು ತೆಗೆದುಹಾಕಿ ತೈಮೂರ ಪಪ ಎಂಬುವರನ್ನು ತೆಗೆದದ್ದರಿಂದ ಅಸಂತೋಷವುಂಟಾಗಿದೆ.

ಬ್ಯಾರಿಸ್ಟರ್ ಸಾವರಕರರ ಪ್ರತಿಬಂಧದ ಅವಧಿಯು ಕಳೆದ ತಿಂಗಳಿಗೆ ಪೂರೈಸಿದ್ದಿತು. ಈಗ ಪುನಃ ೨ ವರುಷಗಳ ಪ್ರತಿಬಂಧದ ಅವಧಿಯನ್ನು ಹೆಚ್ಚಿಸಿದ್ದಾರೆ.

ಅಮೇರಿಕೆಯಲ್ಲಿ ಒಬ್ಬ ವಿದ್ಯುತ್ ಶಾಸ್ತ್ರಜ್ಞರು ಒಂದು ಹೊಸ ಯಂತ್ರವನ್ನು ಸಿದ್ಧಗೊಳಿಸಿದ್ದಾರೆ. ಅದನ್ನು ಮನೆಯಲ್ಲಿಟ್ಟರೆ ತಾನಿಲ್ಲದಿದ್ದಾಗ ತನ್ನ ಹೆಂಡತಿಯು ಯಾರ ಸಂಗಡ ಮಾತನಾಡಿದಳು, ಮತ್ತು ಯಾರು ಹಾಸ್ಯವಿನೋದಗಳನ್ನು ಮಾಡಿದಳು ಎಂಬುದೆಲ್ಲಾ ಆ ಯಂತ್ರದಿಂದ ಗೊತ್ತಾಗುತ್ತದೆ. ಅದರಮೇಲಿಂದ ಅವಳ ನಡತೆ ಸರಿಯಾಗಿಲ್ಲವೆಂದು ತೋರಿದರೆ ಅವಳನ್ನು ಬಿಟ್ಟು ಬಿಡುತ್ತಾರೆ !

ಮಾಯಾನೂರ ಎಂಬಲ್ಲಿ ಪುಣೆಯ ಭಾರತ ಸೇವಾ ಸಂಘದವರು ಗ್ರಾಮೋದ್ಧಾರದ ಒಂದು ಕೇಂದ್ರವನ್ನು ಸ್ಥಾಪಿಸಿದರು. ಈ ಕಾರ್ಯವು ಶ್ರೀಯುತ ಟಿ. ಆರ್.ವೆಂಕಟರಾಮ ಶಾಸ್ತ್ರಿಗಳ ಹಸ್ತದಿಂದ ಪ್ರಾರಂಭವಾಯಿತು.

ಇಂದೂರದಲ್ಲಿ ಅಖಿಲ ಭಾರತೀಯ ಸ್ವದೇಶಿ ಪ್ರದರ್ಶನವು ಬಹು ದೊಡ್ಡ ಪ್ರಮಾಣದಲ್ಲಿ ಸೇರುವುದಿದೆ. ಅಲ್ಲಿಗೆ ಹೋಗುವ ಪದಾರ್ಥಗಳ ದೆಸೆಯಿಂದ ಜಿ. ಐ. ಪಿ. ಮತ್ತು ಎಂ. ಎಸ್. ಎಂ ಆರ್. ರೇಲ್ವೆಯವರು ಸೌಲಭ್ಯವನ್ನುಂಟು ಮಾಡಿಕೊಟ್ಟಿದ್ದಾರೆ.

ಕಳೆದ ೩ ನೆಯ ತಾರೀಖಿನ ದಿವಸ ಮುಂಬೈಯಿಂದ ಪುಣೆಗೆ ಬರುವ ಗಾಡಿಯಲ್ಲಿ ಕಲ್ಯಾಣದ ಹತ್ತಿರ ಒಬ್ಬ ಮರಾಠಾ ಹೆಣ್ಣುಮಗಳು ಗಾಡಿಯಲ್ಲಿಯೇ ಗಂಡು ಕೂಸನ್ನು ಹೆತ್ತಳು. ಆಗ ಗಾಡಿಯನ್ನು ನಿಲ್ಲಿಸಿ ಆ ಬಾಣತಿಯನ್ನು ವೈದ್ಯಾಲಯಕ್ಕೆ ಕಳುಹಿಸಿ ಆ ಡಬ್ಬಿಯನ್ನು ತೊಳೆದು ಆ ಮೇಲೆ ಗಾಡಿಯನ್ನ ಬಿಟ್ಟರು.

ನಾಮದಾರ ದಿವಾಣಬಹದ್ದೂರ ಕಂಬಳಿಯವರು ಮಂತ್ರಿಗಳಾದ ನಂತರ ವಿಜಾಪುರ ಜಿಲ್ಲೆಗೆ ಆಗಮಿಸಿದುದು ಇದೇ ಮೊದಲು. ಈ ವಾರ ವಿಜಾಪುರ, ಬಾಗಲಕೋಟೆ, ಹುನುಗುಂದ ಮೊದಲಾದ ಸ್ಥಳಗಳಿಗೆ ಆಗಮಿಸಲು ಮುನಸಿಪಾಲಿಟಿ, ಲೋಕಲಬೋರ್ಡ ಮೊದಲಾದ ಅನೇಕ ಸಂಸ್ಥೆಗಳಿಂದ ಮಾನಪತ್ರಗಳನ್ನರ್ಪಿಸಿ ದಿವಾಣ ಬಹದ್ದೂರರನ್ನು ಆಯಾ ಸ್ಥಳಗಳ ಮಹಾಜನರು ತುಂಬಾ ಗೌರವಿಸಿದರು.

ಮಡಿ ಮೈಲಿಗೆಗಳ ಮರ್ಮ.

ಹಿಂದುಗಳಲ್ಲಿ ಮಡಿಮೈಲಿಗೆಗಳ ಕಲ್ಪನೆಯು ಅತ್ಯಧಿಕವಾಗಿದೆಯಷ್ಟೆ. ಈ ವಿಚಿತ್ರ ಸ್ಥಿತಿಯು ಪ್ರಪಂಚದ ಇನ್ನಾವ ಧರ್ಮದಲ್ಲಿಯೂ ಇಲ್ಲ. ಒಂದು ವ್ಯಕ್ತಿಯು ಒಂದು ಸಮಯದಲ್ಲಿ ಮಡಿಯುಳ್ಳವನು ಇನ್ನೊಂದು ಸಮಯದಲ್ಲಿ ಮೈಲಿಗೆಯವನು ಆಗಬಹುದು. ಅದರಿಂದ ಅಷ್ಟೇನೂ ಬಾಧಕವಿಲ್ಲ. ಪೂಜೆ, ಊಟ, ಮೊದಲಾದ ಪವಿತ್ರ ಕಾರ್ಯಗಳನ್ನು ಮಾಡುವಾಗ ಮಡಿಯುಳ್ಳವನಾಗಿದ್ದೇನೆಂದು ಹೇಳಿದರೆ ಒಪ್ಪಲೂ ಬಹುದು. ಆದರೆ ಯಾವನಾಗಲೂ ಮೈಲಿಗೆಯುಳ್ಳವನೇ ಇದ್ದಾನೆಂದು ತಿಳಿದು ಪರಸ್ಪರ ಮುಟ್ಟಬಾರದೆಂದು ಹೇಳುವುದು ವಿಚಿತ್ರವಲ್ಲವೇ ?

ಇಷ್ಟೇ ಅಲ್ಲ; ಸಾವಿರಾರು ವರ್ಷಗಳ ಹಿಂದೆ ಒಬ್ಬನು ಮೈಲಿಗೆಯುಳ್ಳವನಾಗಿದ್ದನೆಂದು ಆತನ ವಂಶಜರೆಲ್ಲಾ ಈಗಲೂ ಮೈಲಿಗೆಯುಳ್ಳವರಾಗಿಯೇ ಇದ್ದಾರೆಂದು ತಿಳಿದು ಅವರನ್ನು ಮುಟ್ಟಬಾರದೆಂದು ಹೇಳುವುದು ಎಷ್ಟು ಅನ್ಯಾಯವಾದುದೂ ಅಪಹಾಸ್ಯಕರವಾದುದೂ ಆಗಿದೆಯೆಂಬುದನ್ನು ಹೇಳಬೇಕಾದುದೇ ಇಲ್ಲ. ಹಿಂದುಗಳಲ್ಲಿಯ ನಾಲ್ಕೈದು ಕೋಟಿ ಜನಗಳನ್ನು ಯಾವಾಗಲೂ ಯಾರೂ ಮುಟ್ಟಲೇಬಾರದೆಂಬ ಬೇರೆ ಸ್ಪೃಶ್ಯ ಹಿಂದುಗಳ ವಿಚಿತ್ರ ವಿಚಾರಗಳನ್ನು ನೋಡಿ ಪ್ರಪಂಚವೇ ನಗುತ್ತಿದ್ದರೂ ನಮ್ಮಲ್ಲಿ ಇನ್ನೂ ಅಸಂಖ್ಯರಿಗೆ ತಮ್ಮ ದಡ್ಡತನವೇ ತಿಳಿಯದಿದ್ದುದು ಇದೆಷ್ಟು ವಿಚಿತ್ರವೋ ?

ಈ ವಿಚಿತ್ರ ವಿಚಾರಿಗಳು ಪುಸ್ತಕಗಳಲ್ಲಿ ತಮ್ಮ ವಿಚಾರಗಳಿಗೆ ಆಧಾರಗಳನ್ನು ಹುಡುಕುತ್ತಿದ್ದಾರೆ ! ಮತ್ತು ಅನೇಕರು ಅನೇಕ ಶ್ಲೋಕಗಳನ್ನು ಹೇಳುತ್ತಿದ್ದಾರೆ ! ಈ ತಮ್ಮ ನಡತೆಯು ಅಪಹಾಸ್ಯಕರವಾದುದೆಂಬ ಕಲ್ಪನೆಯೇ ಇನ್ನೂ ಇವರಿಗೆ ಬಾರದಿರಲು ಕಾರಣವೇನು ? ಲೋಕವೇ ಅಲ್ಲಗಳೆಯುವಂತಹ ಹಿಮಾಲಯಪ್ರಾಯವಾದ ಒಂದು ತಪ್ಪನ್ನಾದರೂ ಮನುಷ್ಯನು ಬಹುಕಾಲ ಆಚರಿಸುತ್ತಾ ಬಂದನೆಂದರೆ ಅದನ್ನು ಬಿಡಲು ಮಹಾಮಹೋಪಾಧ್ಯಾಯ ಬಿರುದು ಹೊಂದುವಷ್ಟು ವಿದ್ಯೆಯನ್ನು ಕಲಿತರೂ ಅನೇಕರಿಗೆ ಅಸಾಧ್ಯವಾಗುತ್ತದೆಂದು ಈಗ ದೇಶದಲ್ಲಿ ನಡೆದಿರುವ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಯಿಂದ ಗೊತ್ತಾಗುವುದಿಲ್ಲವೇ ?

ಹಿಂದುಗಳಲ್ಲಿಯ ಯಾವ ಜಾತಿಯವರನ್ನೇ ಆಗಲಿ ಯಾವಾಗಲೂ ಮುಟ್ಟಬಾರದೆಂದು ವೇದಾದಿ ಯಾವ ಹಿಂದು ಧರ್ಮಗ್ರಂಥಗಳಲ್ಲಿಯೂ ಇಲ್ಲವೇ ಇಲ್ಲವೆಂಬುದು ಈ ವರೆಗೆ ನಡೆದ ಅನೇಕ ಪಂಡಿತರ ವಾದದಿಂದ ಸಿದ್ಧವಾಗಿದೆಯಷ್ಟೆ. ಆರ್ಯ ಸಮಾಜದವರಂತೂ ಸಕಲ ಪಂಡಿತರಿಗೂ ಅಸ್ಪೃಶ್ಯತೆಯು ವೇದದಲ್ಲಿ ಎಲ್ಲಿ ಹೇಳಿದೆಯೆಂಬುದನ್ನು ತೋರಿಸಿಕೊಡಿರೆಂದು ಆಹ್ವಾನಮಾಡಿದ್ದಾರೆ

ಶ್ರೀ ಗೋಕುಲನಾಥಜಿ ಮಹಾರಾಜರವರು ಧಾರವಾಡದ ತಮ್ಮ ಸಂಭಾಷಣೆಯಲ್ಲಿ ಈ ಪ್ರಕಾರ ಹೇಳಿದರಂತೆ—

“ ಈಗಿರತಕ್ಕ ವೇದಗಳಲ್ಲೇನೂ ಅಸ್ಪೃಶ್ಯತೆಯ ವಿಷಯವಿಲ್ಲ. ಆದರೆ ಮನ್ವಾದಿ ಋಷಿಗಳ ದಿವ್ಯ ದೃಷ್ಟಿಗೆ ಈಗಿಲ್ಲದಿರುವ ವೇದಗಳಲ್ಲಿದ್ದ ಅಸ್ಪೃಶ್ಯತೆಯು ತೋರಿರಬೇಕು. ”

ಇದರ ಮೇಲಿಂದ ಈಗಿದ್ದ ವೇದಗಳಲ್ಲಂತೂ ಅಸ್ಪೃಶ್ಯತೆಯು ಇಲ್ಲವೇ ಇಲ್ಲವೆಂದು ಗೊತ್ತಾದಂತಾಯಿತಷ್ಟೆ. ಇಲ್ಲದ ವೇದ ಉಂಟಾದಾಗ ಅದರಲ್ಲಿ ಇನ್ನೇನಿದೆಯೋ ಆಗ ನೋಡೋಣ. ವೇದಗಳಲ್ಲಿರದ ಅಸ್ಪೃಶ್ಯತೆಯು ವೈದಿಕರೆಂದು ಹೇಳಿಕೊಳ್ಳುವವರಲ್ಲಿ ಎಲ್ಲಿಂದ ಬಂದಿತು ? ಇದುಂಟಾಗಲು ಕಾರಣವೇನು ? ಇವರ ಮಡಿಮೈಲಿಗೆಗಳು ಇಷ್ಟು ಬೆಳೆಯಲು ಕಾರಣವೇನು ? ಇವುಗಳ ಆಗಾಲ ಬಂದುದು ಇನ್ನೂ ಅನೇಕರಿಗೆ ತಿಳಿದಿಲ್ಲವೇ ?

ಹಿಂದುಗಳ ಈ ವರೆಗಿನ ವಿಚಾರ ಸರಣಿಯಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳನ್ನು ಮಾಡಬಹುದು ಮೊದಲನೆಯ ಯಜ್ಞಯುಗ. ಇದೇ ವೇದಕಾಲ. ಆಗ ಯಜ್ಞಯಾಗಾದಿಗಳಿಗೇನೇ ಪ್ರಾಮುಖ್ಯವಿದ್ದಿತು, ಆಗ ಬ್ರಾಹ್ಮಣಾದಿ ಚಾತುರ್ವರ್ಣಗಳೇ ಇದ್ದವು. ಪರಸ್ಪರ ಊಟೋಪಚಾರಾದಿ ವ್ಯವಹಾರಗಳೂ ಈ ನಾಲ್ಕು ವರ್ಣದವರಲ್ಲಿ ಆಗ ನಡೆಯುತ್ತಿದ್ದವು.

ಈ ಯಜ್ಞಯುಗವು ಕಳೆದ ನಂತರ ಜ್ಞಾನ ಯುಗವು ಪ್ರಾಪ್ತವಾಯಿತು. ಅದೇ ಉಪನಿಷತ್ ಕಾಲವು. ಆಗಲೂ ಕೂಡಾ ಈಗಿನ ಮಡಿಮೈಲಿಗೆಗಳ ಮೂಢಾಚಾರಗಳಿರಲಿಲ್ಲ. ಅಂತೆಯೇ ಆ ಕಾಲದಲ್ಲಿ ಭಾರತೀಯರು ಪ್ರಪಂಚಕ್ಕೇನೇ ಗುರುಸ್ಥಾನದಲ್ಲಿದ್ದರು.

ಅನಂತರ ಯೋಗಯುಗ ಪ್ರಾರಂಭವಾಯಿತು. ಕಪಿಲಾದಿ ದರ್ಶನಕಾರರುಂಟಾದರು. ಇದೇ ದರ್ಶನ ಕಾಲ. ಮನಸ್ಸನ್ನು ಶುದ್ಧಗೊಳಿಸುವ ನಾನಾ ಪದ್ಧತಿಗಳುಂಟಾದವು. ಜಪ, ತಪಗಳ ಅನೇಕ ಶೋಧಗಳುಂಟಾದವು.

ಮನುಷ್ಯನ ಮನೋಭೂಮಿಕೆಯಂತೆ ಆತನ ಸುತ್ತಲೂ ಪ್ರಭೆಯು ಆವರಿಸುತ್ತದೆಂಬುದನ್ನು ಆಗ ಕಂಡು ಹಿಡಿದರು. ಆದುದರಿಂದ ಏಕಾಂತವಾಸ, ಶುದ್ಧಾಹಾರಗಳ ಅವಶ್ಯಕತೆ, ಮೊದಲಾದವುಗಳ ಮಹತ್ವವು ಜನರಿಗೆ ತೋರಿ ಕೇವಲ ಆತ್ಮ ಚಿಂತನೆಯಲ್ಲಿರತಕ್ಕವರು ಅನ್ಯರ ಸಹವಾಸವನ್ನು ದೂರ ಮಾಡಿದರು. ಆಗಲೇ ಮಡಿಮೈಲಿಗೆಗಳು ಹುಟ್ಟಿದವು.

ಇವು ಅಂಥ ವ್ಯಕ್ತಿಗಳಿಗೆ ಆ ಸಮಯದಲ್ಲಿ ಅಗತ್ಯವೂ, ಹಿತಕರವೂ ಇದ್ದವು. ಈಗಲಾದರೂ ಆ ಪ್ರಕಾರ ಜನಗಳಿಂದ ಬೇರೆಯಾಗಿರತಕ್ಕ ಆತ್ಮಾನುಭವಿಗಳಿಗೆ ಹಿತವೇ ಆಗಿದೆ. ಸಾವಿರಾರು ವರ್ಷಗಳ ಹಿಂದೆ ಯಾರೋ ಒಬ್ಬರು ತಪಸ್ಸು ಮಾಡಿದ್ದರೆಂದು ಅವರ ವಂಶಜರೆಲ್ಲಾ ಈಗಲೂ ಮಡಿಯುಳ್ಳವರೇ ಆಗಿದ್ದಾರೆಂದೂ ಅವರು ಎಂತಹ ನೀಚವೃತ್ತಿಯಲ್ಲಿದ್ದರೂ ಹೆಚ್ಚಿನವರೇ ಸರಿಯೆಂದೂ ತಿಳಿಯುವುದು ಮೂರ್ಖತನವಲ್ಲವೇ ? ಆಗಿನ ಮಡಿಮೈಲಿಗೆಗಳ ಉದ್ದೇಶವು ಎಲ್ಲಿಯೋ ಹೋಯಿತು. ಮೇಲಿನ ಮಡಿಮೈಲಿಗೆಗಳ ನಟನೆ ಮಾತ್ರ ಬೆಳೆಯುತ್ತಾ ಬಂತು.

ನಾಲ್ಕನೆಯ ಯುಗವೇ ಮಡಿಮೈಲಿಗೆಯ ಯುಗವು. ಆಗಲೇ ಪುರಾಣಗಳುಂಟಾದವು. ಅನೇಕ ಸ್ಮೃತಿಗಳುದಯವಾದವು. ಯಾರು ಎಷ್ಟು ದೂರ ಹಾರಿ ಯಾರನ್ನೂ ಮುಟ್ಟುವುದಿಲ್ಲವೋ ಅವರೇ ಹೆಚ್ಚಿನ ಕುಲದವರೆಂದೂ, ಪವಿತ್ರರೆಂದೂ, ಮಹಾ ಆಚಾರ ಶೀಲರೆಂದೂ ಜನರು ತಿಳಿಯಲಾರಂಭಿಸಿದರು. ಆದುದರಿಂದ ಎಲ್ಲ ಮತಪಂಥದವರೂ ಈ ಮಡಿಮೈಲಿಗೆಗಳ ಡಂಭವನ್ನು ಬೆಳೆಸಿ ತಮ್ಮ ಕುಲ ಹೆಚ್ಚು ಅನ್ಯರು ಕಡಿಮೆಯೆಂದು ಹೇಳಲಾರಂಭಿಸಿದರು. ನೀವು ನಮ್ಮನ್ನು ಮುಟ್ಟಿದರೆ ನಿಮಗೆ ಮೈಲಿಗೆಯಾಗುವುದಾದರೆ ನೀವು ನೋಡಿದರೆ ನಮಗೆ ಮೈಲಿಗೆಯಾಗುತ್ತದೆಂದು ಬೇರೆಯವರು ಹೇಳಲಾರಂಭಿಸಿದರು. ಈ ಪ್ರಕಾರ ಮಡಿಮೈಲಿಗೆಗಳ ಸ್ಪರ್ಧೆಯೇ ಹೆಚ್ಚಿ ಕೊನೆಗೆ ಎಲ್ಲರೂ ಪಾಶ್ಚಾತ್ಯರಿಗೆ ಮೈಲಿಗೆಯವರು ಎಂದರೆ ಅಸ್ಪೃಶ್ಯರಾಗಿ ಪರಿಣಮಿಸಿದರು.

ವೀರಶೈವ ಕುಲಗೆಡಿಸುವ ವಿಚಿತ್ರ ಲೀಲೆ!

ಇಲ್ಲಿ ತಾ ೨೫, ೨೬, ೨೭, ೨೮ನೇ ಡಿಸೆಂಬರ ೧೯೩೨ನೇ ಇಸವಿ ಆದಿತ್ಯವಾರ, ಸೋಮವಾರ ಮಂಗಳವಾರ ಬುಧವಾರ ಮೇಲಿನ ಸಮ್ಮೇಳನದ ಸಭೆಯು ಜರಗಿಸಲ್ಪಟ್ಟಿತು. ಇದು ದೀನದಾರ ಶಿದ್ದೀಖಸಾಹೇಬರ ಕಾರ್ಯವು. ಈ ಸಮ್ಮೇಳದ ಮುಖ್ಯೋದ್ದೇಶವು ಈಗಿನ ಧರ್ಮಗಳಲ್ಲಿ ಅವರು ವಾದವಿವಾದಕ್ಕೆ ಇಟ್ಟ ಧರ್ಮಗಳೆಂದರೆ ನಾಲ್ಕೇ ೧. ಆರ್ಯಸಮಾಜ, ೨. ಕ್ರೈಸ್ತ ೩, ಮಹಮ್ಮದಿ ೪. ವೀರಶೈವ. ಯಾವದು ಸಾರ್ವಭೌಮ ಧರ್ಮವೆಂದು ನಿರ್ಣಯಿಸುವದಾಗಿತ್ತು. ಆರ್ಯಸಮಾಜದವರ ವತಿಯಿಂದ ದೆಹಲಿಯ ಆರ್ಯಸಮಾಜ ಸುಪ್ರಸಿದ್ಧ ವ್ಯಾಖ್ಯಾತರಾದ ಪಂಡಿತ ರಾಮಚಂದ್ರಜೀಯವರು ಆಗಮಿಸಿದ್ದರು. ಆದರೆ ಟಿಕೀಟಿನ ವಿನಃ ಸಭೆಯಲ್ಲಿ ಪ್ರವೇಶವು ಇಲ್ಲದ್ದರಿಂದ ಈ ಪಂಡಿತರು ಈತರಹದ್ದೇನು ಪ್ರತಿಬಂಧಕವಿಲ್ಲದೇ ಹೋದಲ್ಲಿ ಮಾತ್ರ ತಾವು ಸಭೆಗೆ ಬರಲು ಸಿದ್ಧರಾಗುವೆವೆಂದು ಸೂಚಿಸಲು, ಸಮ್ಮೇಳನದ ಅಧ್ಯಕ್ಷರು ಅನುಮತಿಸಲಿಲ್ಲ.

ಪ್ರಸಿದ್ಧ ಪತ್ರಿಕಾನುಸಾರವಾಗಿ ರವಿವಾರ ಆರ್ಯ ಸಮಾಜದವರಿಗೂ, ಸೋಮವಾರ ಕ್ರೈಸ್ತರಿಗೂ ಮಂಗಳವಾರ ಮಹಮ್ಮದೀಯರಿಗೂ, ಬುಧವಾರ ವೀರಶೈವರಿಗೂ ಹೀಗೆ ನಿಯಮಿಸಲ್ಪಟ್ಟಿದ್ದವು. ಮತ್ತು ಇದೇ ಪತ್ರದಲ್ಲಿ ವೀರಶೈವ ಮತವನ್ನು ಸಾರ್ವಭೌಮ ಮತವೆಂದು ಸಿದ್ಧಮಾಡಲು ಪಂಡಿತ ವೀರಪ್ಪ ಧಾರವಾಡ ಮತ್ತು ಬಸವಯ್ಯ ಚೌಕಿಮಠ ಧಾರವಾಡ ಬಂದಿರುವರೆಂದು ಸೂಚಿತವಿದ್ದಿತು. ಇವರ ಸಂಬಂಧವಾಗಿ ನಾವು ಇದುವರೆಗೂ ಯಾರಿಂದಲೂ ಕೇಳಿದ್ದಿಲ್ಲಾದ್ದರಿಂದಲೂ ಮತ್ತು ಪತ್ರಿಕೆಯಲ್ಲಿ ಇವರ ಲೇಖಗಳನ್ನೋದಿದಿಲ್ಲಾದ್ದರಿಂದಲೂ ಇವರನ್ನು ಭೇಟಿಯಾಗುವ ಉತ್ಸುಕತೆಯಿಂದ ನಾವು ಎರಡು ದಿವಸ ತಪ್ಪದೇ ಇವರಲ್ಲಿಗೆ ಹೋದರೂ ಇವರು ಭೆಟ್ಟಿಯಾಗಲಿಲ್ಲ. ತಮಗೆ ನಮ್ಮನ್ನು ಕಾಣಲವಕಾಶವಿಲ್ಲವೆಂದು ಉತ್ತರವನ್ನು ಒರೆದರು. ಈ ತರದ ಇವರ ಆಚರಣೆಯಿಂದ ಇವರು ವೀರಶೈವರಲ್ಲೆಂದೂ ಮತ್ತು ದೀನದಾರರು ತಮ್ಮ ಶಿಷ್ಯರ ಪೈಕಿ ಯಾರನ್ನೋ, ಎಲ್ಲಿಂದೋ ಹಿಡಿದು ತಂದು ವೀರಶೈವ ಮತವೆಂಬ ಕಟ್ಟಡವನ್ನು ಅಭದ್ರವಾಗಿ ಮಾಡಲು ಎಷ್ಟು ಮಾತುಗಳು ಬೇಕೋ ಅಷ್ಟು ಮಾತುಗಳು ಮಾತ್ರ ಚೆನ್ನಾಗಿ ಗಿಳಿಪಾಠ ಮಾಡಿಸಿರುವರೆಂದೂ ನಮಗೆ ನಿಶ್ಚಯವಾಗಿದ್ದರಿಂದ ಈ ಸಮ್ಮೇಳನದ ಕಾರ್ಯದರ್ಶಿಗಳನ್ನು ನಾವು ನಮ್ಮ ಜನರ ಪೈಕಿ ಯಾರನ್ನಾದರೂ ಕರೆಯಿಸಬಹುದೆಂದು ಕೇಳಿದೆವು. ಅದಕ್ಕಾಗಿ ಅವರು ನಮ್ಮ ಮುಂವೇನೋ ಕರಿಯಿಸಿದರೆ ಮತ್ತಿಷ್ಟು ಒಳ್ಳೇದೇ ಆಗುವದು. ಸಂತೋಷದಿಂದ ಯಾರನ್ನಾದರು ಕರೆಯಿಸಬಹುದು. ನಾವು ಇದಕ್ಕೆ ತಕ್ಕ ಯೋಗ್ಯಮೂರ್ತಿಗಳನ್ನು ಕರೆಯಿಸುವ ವ್ಯವಸ್ಥೆ ಮಾಡಬೇಕೆನ್ನುವಷ್ಟರಲ್ಲಿ, ನಾವು ಹೀಗೆ ಮಾಡುವುದರಿಂದ ತಮ್ಮುದ್ದೇಶವು ಭಂಗವಾಗುವದೆಂದು ಭಯಪಟ್ಟು ನಮ್ಮ ಜನರ ವ್ಯಾಖ್ಯಾನವನ್ನು ಒಂದು ದಿವಸ ಮೊದಲೇ ಇಟ್ಟರು. ಸಂಕ್ಷಿಪ್ತವಾಗಿ ಹೇಳುವದೇನಂದರೆ ತಾವು ಕೃತಕೃತ್ಯರಾಗುವುದಕ್ಕೆಷ್ಟನುಕೂಲತೆಗಳು ಬೇಕಾಗಿದ್ದವೋ, ಮತ್ತು ನಾವು ಈ ಸಂಗ್ರಾಮದಲ್ಲಿ ಪರಾಜಿತರಾದಂತೆ ಇತರರಿಗೆ ತೋರಿಸುವದಕ್ಕೆಷ್ಟು ಅನುಕೂಲಗಳು ಬೇಕಾಗಿದ್ದವೋ ಅವೆಲ್ಲವುಗಳನ್ನೂ ದೀನದಾರ ಶಿದ್ದೀಖರೊದಗಿಸಿದ್ದರು. ಇವರ ಈ ಆಚರಣೆಯನ್ನು ನೋಡಿದರೆ ವೀರಶೈವ ಮತದ ಸದ್ಯದ ನಿಜವಾದ ಶೋಚನೀಯ ಮತ್ತು ದೀನದಾರ ಶಿದ್ದೀಕ ಕುಬುದ್ಧಿಯೂ ತೋರುತ್ತದೆ. ವ್ಯಾಖ್ಯಾತರು ಏನೇನು ಹೇಳುವರೋ ಕೇಳಬೇಕು. ಮತ್ತು ಅದೆಲ್ಲವನ್ನು ಬರೆದುಕೊಂಡು ಬರಬೇಕೆಂದು ನಾವು ಅಲ್ಲಿಗೆ ಹೋಗಿದ್ದೆವು. ವ್ಯಾಖ್ಯಾತರು ನೋಡಿದರೆ ಅವರ ಬಾಹ್ಯ ತೋರಿಕೆಯಲ್ಲಿ ವೀರಶೈವರ ಯಾವ ಚಿಹ್ನವೇ ಇರಲಿಲ್ಲ. ಅವರ ಉಡಿಗೆ ತೊಡಿಗೆಗಳಿಂದ ಮಾತ್ರ ಇವರು ಆ ಕುಬುದ್ಧಿಮೂರ್ತಿಯ ಶಿಷ್ಯರಾಗಿರುತ್ತಾರೆಂದು ನಿಶ್ಚಯವಾಗಿ ಕಂಡುಬಂದಿತು. ಆದರೂ ಆಗಲಿ, ಅವರ ವ್ಯಾಖ್ಯಾನವು ಏನನ್ನೊಳಗೊಂಡಿರುವದೋ ನೋಡೋಣವೆಂದರೆ ವ್ಯಾಖ್ಯಾನಗಳು ನಮ್ಮ ಊಹಾನುಸಾರವಾದ ವಿಷಯಗಳೇ ಹೊರತು ಬೇರೆಯಾಗಿದ್ದಿಲ್ಲ. ಈ ವ್ಯಾಖ್ಯಾತರು ಹೇಳುತ್ತಿದ್ದುದನ್ನು ಕೇಳುವದು ನಮಗೆ ಸಹಿಸಲಸಾಧ್ಯವಾದ್ದರಿಂದ ನಮ್ಮೊಳಗಿನವರು ಮೊದಲು ಅಧ್ಯಕ್ಷರನ್ನು ಕುರಿತು ತಮಗೂ ಮಾತಾಡಲು ಅವಕಾಶ ಕೊಡಬೇಕೆಂದು ಅಪ್ಪಣೆಯನ್ನು ಕೇಳಿಕೊಂಡರು. ಆದರೆ, ವೀರಶೈವರ ಸಲುವಾಗಿ ನಿಯಮಿತವಾದ ಆರು ತಾಸುಗಳಲ್ಲಿನ್ನೂ ೫| ತಾಸುಗಳುಳಿದಿದ್ದರೂ ಅಧ್ಯಕ್ಷರು ನಮಗೆ ಮಾತಾಡಲು ಅಪ್ಪಣೆಯನ್ನೀಯಲಿಲ್ಲ. ಈ ಎಲ್ಲ ಕಾರಣಗಳಿಂದ ನಾವು ಅಲ್ಲಿ ಕೂಡುವದು ಸಹ ಒಂದು ವಿಧವಾದ ನಮಗೆ ಅಪಮಾನವೆಂದು ಭಾವಿಸಿ ಅಲ್ಲಿ ನೆರೆದ ಜನರಿಗಾದರೂ ದೀನದಾರರು ಬರಮಾಡಿದ ವ್ಯಾಖ್ಯಾತರು ವೀರಶೈವರಲ್ಲೆಂತಲೂ ಇವರು ಅವರ ಶಿಷ್ಯರೆಂತಲೂ ಮತ್ತು ಇವರು ಹೇಳುವದು ವೀರಶೈವ ತತ್ವಗಳಿಗೆ ವಿರೋಧವಾಗುವದೆಂತಲೂ ನಮ್ಮಲ್ಲೊಬ್ಬರು ಸಭೆಯ ಮಧ್ಯದಲ್ಲಿ ಎದ್ದು ನಿಂತು ಜನರಿಗೆ ತಿಳಿಸಿ ನಾವು ಹೊರಟು ಬಂದೆವು.

ಕೆಳಗೆ ಬರೆದ ಅವರ ವ್ಯಾಖ್ಯಾನವನ್ನು ಓರ್ವ ಮಹಮ್ಮದೀಯರು ಭಾಷಾಂತರವನ್ನು ಮಾಡಿ ಉರ್ದು ಭಾಷೆಯಲ್ಲಿ ಹೇಳುತ್ತಿದ್ದರು. ಯಾಕಂದರೆ ಅಲ್ಲಿ ಕನ್ನಡ ಬಲ್ಲವರಾರೂ ಇದ್ದಿಲ್ಲ. ಭಾಷಾಂತರ ಕರ್ತರು ವ್ಯಾಖ್ಯಾತರು ಹೇಳುವ ದರವೊಂದು ಮಾತಿನಿಂದಲೂ ವೀರಶೈವ ಮತವು ಮಹಮ್ಮದೀಯ ಮತಕ್ಕೆ ಸಮಾನತ್ವವುಳ್ಳದೆಂದೂ ಮತ್ತು ವೀರಶೈವ ಧರ್ಮಗ್ರಂಥಗಳಲ್ಲಿ "ಅಲ್ಲಾ" ಮತ್ತು ಇಮಾಮ ಶಬ್ದಗಳು ಬಂದಿರುವವೆಂತಲೂ ಹೇಳುತ್ತ ಹೋದರು.

ವ್ಯಾಖ್ಯಾತರ ವ್ಯಾಖ್ಯಾನಗಳನ್ನು ಅವರ ಶಬ್ದಗಳಲ್ಲಿಯೇ ಕೆಳಗೆ ಬರೆದಿರುತ್ತೇವೆ. ೧. ವೀರಪ್ಪನವರು ಪಂಡಿತ ಧಾರವಾಡ— "ನಾನು ಹೇಳೊದೆಲ್ಲಾ ಲಿಂಗಾಯತರು ಒಪ್ಪುವ ೬೩ ಮಂದಿ ಪುರಾತನರ ಹೇಳುವಿಕೆಯೇ ಆಗಿರುತ್ತದೆ. ಈ ಪುರಾತನರ ಅಭಿಪ್ರಾಯಾನುಸಾರವಾಗಿ ಲಿಂಗಾಯತರಲ್ಲಿ ಜಾತಿಭೇದವಿಲ್ಲೆಂತಲೂ, ಆದುಧರಿಂದ ಯಾವಜಾತಿಯವರ ಸಂಗಡಲೇ ಆದರು ಲಿಂಗಾಯತನು ಊಟಪಾಟಗಳನ್ನು ಮಾಡಬೇಕೆಂತಲೂ ಮತ್ತು ಇಷ್ಟೇ ಅಲ್ಲ ಶರೀರ ಸಂಬಂಧವನ್ನು ಮಾಡುವಾಗ ಜಾತಿಕುಲ ಮುಂತಾದವುಗಳನ್ನು ದೂರಬೇಕೆಂತಲೂ ಮಾದಿಗನೇ ಆಗಲಿ ಅವರ ಎಂಜಲ ಉಣ್ಣಲಿಕ್ಕೆ ಪ್ರತಿಯೊಬ್ಬ ಲಿಂಗಾಯತನು ಹಿಂಜರಿಯಬಾರದು. ಲಿಂಗವೆಂದರೆ ಫಿತ್ರತ್ ಮತ್ತು ಇಸ್ಲಾಂ ಮತ್ತು ಲಾ ಇಲಾಹಿಲಿಲ್ಲಾ ಎನ್ನುವ ತುರಕರ ವಚನಕ್ಕೆ ಹೋಲುತ್ತದೆ. ಲಿಂಗಾಯತ ಮತಾನುಸಾರವಾಗಿ ಲಿಂಗವನ್ನು ಕೊರಳಲ್ಲಿ ಧರಿಸಿಕೊಂಡು ಪೂಜಿಸಬೇಕೆಂದು ಹೇಳಿಲ್ಲ. ಲಿಂಗಾಯತ ಮತಸ್ಥಾಪಕನಾದ

ಆದುದರಿಂದ ಈಗಲಾದರೂ ಮಹಾತ್ಮಾಜಿಯವರ ಬೋಧವನ್ನು ಕೇಳಿ ಅನೇಕರು ಜಾಗ್ರತೆ ಕಣ್ಣು ತೆರೆಯಲಿ. ಇದು ಸ್ವಾತಂತ್ರ್ಯ ಯುಗವು. ಪ್ರಬಲ ಸರಕಾರಕ್ಕೂ ಕೂಡಾ ಗುಲಾಮರಾಗದಿದ್ದಾಗ ಯಾವುದಾದರೊಂದು ಪುಸ್ತಕ ಅಥವಾ ಶ್ಲೋಕಕ್ಕೆ ಜನರು ಗುಲಾಮರಾಗುವರೇ ? ರಾಜಕೀಯ ಸ್ವಾತಂತ್ರ್ಯದಂತೆಯೇ ಧಾರ್ಮಿಕ ಸಾಮಾಜಿಕ ಸ್ವಾತಂತ್ರ್ಯಗಳೂ ಉದಯವಾಗುತ್ತಲಿವೆ ಗಾಂಧಿಯವರ ಬೆಳಕನ್ನು ನೋಡಿ ನಲಿದಾಡಿ ಸುಖಿಸಿರಿ. **ಸಂಪಾದಕ.**

ಮತ್ತು ಪ್ರಥಮಾಚಾರ್ಯರಾದ ಬಸವಣ್ಣನು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ಲಿಂಗಾಯತ ತತ್ವವನ್ನು ಹೇಳ್ಯಾನಂದ ಬಳಿಕ ಚೆನ್ನಬಸವಣ್ಣನವರು ಹೊಲೆಯರಲ್ಲಿ ಹುಟ್ಟುವದೇನಾದದ ಮಾತು? ಪರಂತು ವೀರಶೈವರು ನಂಬುವದಿಲ್ಲ. ಇದು ಅವರ ತಪ್ಪು.

ವೀರಶೈವರ ಶಿಷ್ಯರು ಬರೆದ ಲಿಂಗಾಯತರ ಕಾಲಜ್ಞಾನದಲ್ಲಿ ಚನ್ನಬಸವಣ್ಣನವರ ಸಂಬಂಧವಾಗಿ ಹೇಳುತ್ತಿರುವ ಎಲ್ಲ ಚಿನ್ಹಗಳು ಇರುವದರಿಂದ ಇವರನ್ನೇ ಚನ್ನಬಸವಣ್ಣನವರೆಂದು ತಿಳಿಯಬೇಕು." ಇಲ್ಲದೆ ಹೋದರೆ ನಾವು ದುರ್ಗತಿಗೆ ಹೋಗುವೆವು. ಆದ್ದರಿಂದ ಇವರನ್ನೇ ಚನ್ನಬಸವಣ್ಣನವರೆಂದು ತಿಳಿಯಬೇಕು."

೨. ಬಸಯ್ಯನವರು ಚೌಕಿ ಮಠ— ವೀರಪ್ಪನವರು ಹೇಳಿದುದೆಲ್ಲಾ ಬಹು ಉತ್ತಮವಾಗಿರುತ್ತದೆ. ಲಿಂಗಾಯತ ಮತ್ತು ಮುಸಲ್ಮಾನ ಧರ್ಮಗಳು ಒಂದೇ ಇರುತ್ತವೆ. ನನಗೆ ಈ ಚನ್ನಬಸವಣ್ಣನವರಿಂದ (ಶಿವದಾಸ ಸಿದ್ದೀಬಸಾಬನಿಂದ) ಅರ್ಧ ಮೋಕ್ಷವೇ ಸಿಗುತ್ತದೆ. ಲಿಂಗಾಯತರು ಇಂಥ ದೊಡ್ಡ ಮನುಷ್ಯನಿಗೆ ಅಲಕ್ಷ್ಯ ಮಾಡುತ್ತಾರೆ. ಮಹಾತ್ಮಾ ಗಾಂಧಿ ಮೊದಲಾದವರ ಮಾತು ಕೇಳುತ್ತಾರೆ. ಪರಂತ ಈ ಶಿವದಾಸ ಸಿದ್ದೀಬ ಚನ್ನಬಸವಣ್ಣನವರ ಮಾತು ಕೇಳುವದಿಲ್ಲ. ಇದು ತಪ್ಪು. ಮುಂದೆ ಹೇಳಲಿಕ್ಕೆ ಬಾರದೆ ಇವರು ಇಷ್ಟಕ್ಕೆ ಬಿಟ್ಟರು.

ಇವರ ಸ್ಥಿತಿಯನ್ನು ನೋಡಿ, ಅಥವಾ ಕೇಳಿ. ಇವರು ವೀರಶೈವ ಮತವು ಸಾರ್ವಭೌಮವೆಂದು ಸಿದ್ಧಮಾಡಲಿಕ್ಕೆ ಬಂದಂಥ ಸುಪ್ರಸಿದ್ಧ ಪಂಡಿತರೆಂದು ಯಾರು ತಾನೇ ಹೇಳಬಲ್ಲರು? ಆದರೆ ಇಲ್ಲಿಯ ವರ್ತಮಾನ ಪತ್ರಿಕೆಗಳಲ್ಲಿವರ ಕೀರ್ತಿಯನ್ನೂ ಮತ್ತು ವಿದ್ವತ್ತವನ್ನೂ ಒಳ್ಳೇ ಸಮಾರಂಭದಿಂದಲೂ ಕುಯುಕ್ತಿಯಿಂದಲೂ ಮತ್ತು ಧೈರ್ಯದಿಂದಲೂ ವರ್ಣಿಸಲ್ಪಟ್ಟರೂ ಮತ್ತು ನಿಜವಾದ ಸ್ಥಿತಿಯನ್ನು ಪ್ರಕಟಿಸಿದ್ದೂ ಪರಮಾಶ್ಚರ್ಯವಾಗುತ್ತವೆ.

ನೋಡಿರಿ! ಈ ಕುಬುದ್ಧಿಯಾದ ಮೂರ್ತಿಯ ವ್ಯರ್ಥವಾದ ಕರ್ತವ್ಯದ ಕುಯುಕ್ತಿಯನ್ನು ನೋಡಿರಿ!! ವೀರಶೈವ ಬಂಧುಗಳಿರಾ ಇನ್ನಾದರೂ ಒಳಜಗಳಕ್ಕೆ ಒಳಗಾಗದೆ ಸಮಾಜದ ಅಭ್ಯುದಯದ ಕಡೆಗೆ ಲಕ್ಷಕೊಡುವದಿಲ್ಲವೆ? ನಾವು ಒಂದೇನು ಮಾಡಬೇಕೆನ್ನುವ ವಿಷಯವಾಗಿ ಸರ್ವ ವೀರಶೈವರು ಶಕ್ತಿಯಿಂದಲೂ, ಯುಕ್ತಿಯಿಂದಲೂ ವಿಚಾರಸ್ಥರಾಗಬೇಕೆಂದು ನಮ್ಮಗಳ ಸವಿನಯ ಪ್ರಾರ್ಥನೆ. ಮತ್ತು ಈ ಕಾರ್ಯಕ್ಕೆ ಪ್ರಥಮಾಚಾರ್ಯರೂ ಮತ್ತು ಶಿವಾದಿ ಪ್ರಮಥರೂ ವೀರಶೈವರಿಗೆ ತಕ್ಕ ಯೋಗ್ಯವಾದ ಸುಬುದ್ಧಿಯನ್ನು ದಯಮಾಡಿಸಲೆಂದು ಹಗಲಿರಳು ಪ್ರಾರ್ಥಿಸುತ್ತೇವೆ.

ಶ್ರೈ. ಪ್ರಭಾವ
ಜೇಷ್ಠನ
೯-೧೨-೧೯೩೩. } ವೀರಶೈವ ತರುಣರು

ವ್ಯಾಪಾರ ಶಿಕ್ಷಕ.

ಈ ಪುಸ್ತಕವು ಅಚ್ಚಾಗುತ್ತಲಿದೆ. ಸಂಪೂರ್ಣವಾದನಂತರ ಶರಣ ಸಂದೇಶ ಪತ್ರಿಕೆಗೆ ಈ ವರುಷ ಚಂದಾದಾರರಾಗಿರುವವರೆಲ್ಲರಿಗೂ ತಪ್ಪದೇ ಕಳುಹಿಸಲಾಗುವುದು, ಬೇರೆಯವರಿಗೆ ಈ ಪುಸ್ತಕವನ್ನು ವಿಕ್ರಯಿಸುವುದಿಲ್ಲ, ಆದಕಾರಣ ಬೇರೆಯವರಾಗಲಿ ನಮ್ಮ ಚಂದಾದಾರರಾಗಲಿ ಪುಸ್ತಕವನ್ನು ಕಳುಹಿಸಲು ವೃಥಾ ಪತ್ರಗಳನ್ನು ಬರೆಯಬಾರದಾಗಿ ಪ್ರಾರ್ಥನೆ.

ಮ್ಯಾನೇಜರ್,

ಸಮಾಚಾರ ಸಂಗ್ರಹ.

ಗುರುವಾಯೂರ ದೇವಾಲಯದಲ್ಲಿ ಕಾರ್ತೀಕ ಏಕಾದಶಿಯ ದಿವಸ ಆದಿ ಜನರಾದಿಯಾಗಿ ಎಲ್ಲ ಹಿಂದುಗಳನ್ನೂ ಬಿಡುತ್ತಿರುವ ಪದ್ಧತಿಯು ಬಹು ದಿನಗಳಿಂದಲೂ ಇದೆ.

ರಾಜಗೋಪಾಲಾಚಾರ್ಯರ ಸಂದೇಶದ ಪ್ರಕಾರ ಗುರುವಾಯೂರ ದೇವಾಲಯ ಪ್ರವೇಶಕ್ಕೆ ಆದಿಜನರಿಗೆ ಅವಕಾಶ ಕೊಡಬೇಕೆಂದು ಝಾಮೋರಿನರವರಿಗೂ ಈ ಸಂಬಂಧವಾದ ಶಾಸನವನ್ನು ತರಲು ಅಪ್ಪಣೆಕೊಡಬೇಕಾಗಿ ವ್ಹಾಯಿಸ್‌ರಾಯರಿಗೂ ಹಿಂದುಸ್ಥಾನದ ಅನೇಕ ಸ್ಥಳಗಳಿಂದ ತಿಳಿಸಲ್ಪಟ್ಟಿತು.

ಐರ್ಲಂಡ ದೇಶದ ಮುಖ್ಯಾಧಿಕಾರಿಗಳ ವೇತನದಲ್ಲಿ ೧೦೦ ಕ್ಕೆ ೫೦ ರಂತೆ ಡಿ. ವ್ಹೆಲೇರಾ ಮೊದಲಾದ ಮಂತ್ರಿ ಮಂಡಲದವರು ಕಡಿಮೆ ಮಾಡುವುದಾಗಿ ಗೊತ್ತು ಮಾಡಿರುವುದರಿಂದ ಆ ದೇಶದಲ್ಲಿ ಅಂತೋಷವುಂಟಾಗಿದೆ.

ಅಲಾಹಾಬಾದಿನಲ್ಲಿ ನಡೆದ ಐಕ್ಯ ಪರಿಷತ್ತು ಮುಸಲ್ಮಾನರು ತಂದೊಡ್ಡಿದ ವಿಘ್ನದಿಂದ ಫೆಬ್ರುವರಿ ೪ ನೆಯ ತಾರೀಖಿನವರೆಗೆ ನಿಲ್ಲಿಸಲ್ಪಟ್ಟಿತು.

ಹುಬ್ಬಳ್ಳಿಯ ಪ್ರಸಿದ್ಧ ಅರಳೆ ವ್ಯಾಪಾರಿಗಳಾದ ಶ್ರೀ. ಶಿರಹಟ್ಟಿ ಚೆನ್ನಬಸವಪ್ಪನವರಿಗೆ ನೂತನ ವರ್ಷದ ಪದವಿದಾನ ಸಮಾರಂಭದ ಕಾಲದಲ್ಲಿ ರಾವಬಹದ್ದೂರ್ ಎಂಬ ಪದವಿಯು ಸಿದ್ದಾಪುರದ ಶ್ರೀ. ಪಾಟೀಲ ಚೆನ್ನಬಸವಪ್ಪ ಗೌಡರಿಗೆ ರಾವಸಾಹೇಬ ಎಂಬ ಪದವಿಯೂ ದೊರೆತಿವೆ.

ಮುಂಬೈಯಲ್ಲಿ ಅರಳೆ ಪಖಾರಕ್ಕೆ ತಾ. ೧ ನೆಯ ದಿವಸ ಬೆಂಕಿ ಹತ್ತಿ ಮೂರು ಲಕ್ಷ ರೂ. ಗಳ ನಷ್ಟವಾಯಿತು.

ಸಿಂಧದಲ್ಲಿ ಹೊರಡುವ ಆಬಝುರ್ವ್ಹ ಎಂಬ ಪತ್ರಿಕೆಯಲ್ಲಿ ಒಬ್ಬ ಮುಸಲ್ಮಾನನು ತನ್ನ ಕನ್ಯೆಗೆ ವರನು ಬೇಕೆಂದು ಜಾಹೀರು ಕೊಟ್ಟಿದ್ದನು. ಏಳುನೂರು ತರುಣರು ಆ ಕನ್ಯೆಗಾಗಿ ಬರೆದು ಕೊಂಡಿದ್ದಾರಂತೆ !

ಅಮೇರಿಕೆಯಲ್ಲಿ ಹತ್ತಿಯನ್ನು ಬೆಳೆಯುವ ಪ್ರಾಂತಗಳ ಸಭೆ ನೇರಿ ಮುಂದಿನ ವರ್ಷ ಹತ್ತಿ ಬೆಲೆಯನ್ನು ಹೆಚ್ಚಿಸಬೇಕೆಂದು ಈ ಸಾರೆ ಬಿತ್ತುವುದನ್ನು ೧೦೦ ಕ್ಕೆ ೫೦ ರಂತೆ ಕಡಿಮೆ ಮಾಡಬೇಕಾಗಿ ಗೊತ್ತು ಮಾಡಿದ್ದಾರೆ. ಈ ಸುದ್ದಿಯು ಮುಂಬಯಿಗೆ ತಿಳಿದೊಡನೆ ಹತ್ತಿ ಬೆಲೆಯಲ್ಲಿ ವ್ಯತ್ಯಾಸವಾಯಿತು.

ಕೊಲ್ಹಾಪುರದಲ್ಲಿ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನ ನೇರಿದಾಗ ಆ ಸಮೇಲನಕ್ಕೆ ಆಗಮಿಸಿದ ಅನೇಕ ಪ್ರಮುಖರ ಸಹಭೋಜನ ಸಮಾರಂಭ ಜರುಗಿತು. ಬ್ರಾಹ್ಮಣಾದಿ ಎಲ್ಲ ವರ್ಣದವರೂ ಆ ಸಹಭೋಜನದಲ್ಲಿದ್ದರು. ಇಷ್ಟೇ ಅಲ್ಲ; ಜೈನರಾದ ಅನ್ಯಧರ್ಮದವರೂ ಇದ್ದರು. ಪುಣೆಯ ಕೇಸರಿ ಪತ್ರಿಕೆಯ ಸಂಪಾದಕರಾದ ಶ್ರೀ. ಭಾವೆ ಎಂಬುವವರೂ ಈ ಸಹಭೋಜನದಲ್ಲಿದ್ದರಂತೆ.

ಬೆಳಗಾವಿಯ ಶ್ರೀ ಸರಾಫ ಎಂಬುವವರು ೩ ತಾಸುಗಳಲ್ಲಿ ೫೦೦೦ ಸಾಮುಗಳನ್ನು ತೆಗೆದು ಬಲಭೀಮರಾದರು.

ಸೊಲ್ಲಾಪುರ ಮುನಸಿಪಾಲಿಟಿಯವರು ಸಾರ್ವಜನಿಕ ಹಿಂದು ಉಪಹಾರ ಮತ್ತು ಖಾನಾವಳಿಗಳಲ್ಲಿ ಎಲ್ಲ ಹಿಂದುಗಳನ್ನೂ ಸಮಾನವಾಗಿಯೇ ಕಾಣಬೇಕೆಂತಲೂ ಆದಿಜನಗಳಿಗೆ ಬೇರೆ ವ್ಯವಸ್ಥೆ ಮಾಡಬಾರದಾಗಿಯೂ ನಿಯಮ ಮಾಡುವವರಿದ್ದಾರೆಂದು ಸುದ್ದಿಯಿದೆ.

ಝಾಮೋರಿನ ಕುಟುಂಬದಲ್ಲಿಯ ಒಬ್ಬ ಹೆಣ್ಣುಮಗಳು ಅಸ್ಪೃಶ್ಯತಾ ನಿವಾರಣೆಗಾಗಿಯೂ ದೇವಾಲಯ ಪ್ರವೇಶಕ್ಕೂ ಧನಸಹಾಯ ಮಾಡಿರುವುದು ಅತ್ಯಂತ ಅಭಿನಂದನೀಯವಾದುದಾಗಿದೆ.

ಗುರುವಾಯೂರ ರಣ ಕ್ಷೇತ್ರ ವಾರ್ತೆ.

ಸರ್ವ್ಹಂಟ್ಸ ಆಫ್ ಇಂಡಿಯಾ ಸೊಸಾಯಟಿಯ ಅಧ್ಯಕ್ಷರಾದ ಶ್ರೀ ಗೋಪಾಳಕೃಷ್ಣ ದೇವಧರ ಇವರು ಗುರುವಾಯೂರದಿಂದ ತಾ. ೨೩ನೆಯ ಡಿಶೆಂಬರ ದಿವಸ ಮಹಾತ್ಮಾಗಾಂಧಿಯವರಿಗೆ ಒಂದು ಪತ್ರ ಬರೆದಿದ್ದು ಅದರಲ್ಲಿ ಮದ್ರಾಸದಲ್ಲಿರುವ ಪ್ರಸಿದ್ಧ ರಾಜಶಾಸನ ಪ್ರವೀಣರ ಅಭಿಪ್ರಾಯವನ್ನೂ ಮತ್ತು ಗುರುವಾಯೂರ ಸ್ಥಿತಿಯನ್ನೂ ಈ ರೀತಿಯಾಗಿ ತಿಳಿಸಿದ್ದಾರೆ.

ಪ್ರಿಯ ಮಹಾತ್ಮಾಜಿ,

ಮದ್ರಾಸದಲ್ಲಿ ನಾನು ಸರ್. ಶಿವಸ್ವಾಮಿ ಅಯ್ಯರ, ದಿ. ಬ. ಎಲ್. ಎ. ಗೋವಿಂದ ರಾಘವ ಅಯ್ಯರ, ಶ್ರೀ. ಟಿ. ಆರ್. ವೆಂಕಟರಾಮಶಾಸ್ತ್ರಿ ಮತ್ತು ಡಾ. ಸುಬ್ಬರಾಯನ್ ಇವರ ಸಂಗಡ ಮಾತನಾಡಿದೆನು. ಸರಕಾರಿ ಶಾಸನ ತಿದ್ದುಪಾಟು ಮಾಡಿದ ವಿನಾ ಆದಿಜನರಿಗೆ ಮಂದಿರ ಪ್ರವೇಶ ಪ್ರಾಪ್ತವಾಗುವುದು ಶಕ್ಯವಿಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಡಾ, ಸುಬ್ಬರಾಯನ್‌ರವರ ಗೊತ್ತುವಳಿಯ ಸಲುವಾಗಿ ವ್ಹಾಯಿಸ್‌ರಾಯರ ಅಪ್ಪಣೆಯನ್ನು ದೊರೆಕಿಸುವುದಕ್ಕೂ ಕಾಲವಿಳಂಬವಾಗಬಹುದೆಂದು ತೋರುತ್ತದೆ. ಈ ಮಧ್ಯದಲ್ಲಿ ಸನಾತನ ಪಕ್ಷದವರು ಮಂದಿರ ಪ್ರವೇಶ ಪ್ರತಿಬಂಧ ವಿಷಯವಾಗಿ ಜನರ ಸಹಿ ತೆಗೆದುಕೊಳ್ಳುವ ಕೆಲಸವನ್ನು ಪ್ರಾರಂಭಮಾಡಿದ್ದು ಸನಾತನಿಗಳು ತಮ್ಮ ಮತವನ್ನು ವ್ಹಾಯಿಸ್‌ರಾಯರಿಗೆ ತಿಳಿಸುವವರಿರುತ್ತಾರೆ.

ಗುರುವಾಯೂರು ಒಂದು ರಣಕ್ಷೇತ್ರವೇ ಆಗಿದೆ. ಇಲ್ಲಿ ಆದಿಜನರು ಮಂದಿರಪ್ರವೇಶ ಮಾಡುವದರ ವಿಷಯವಾಗಿ ವಾದಯುದ್ಧವು ಏಕಪ್ರಕಾರ ಸಾಗಿದೆ. ಬೇರೆಬೇರೆ ಭಾಗಗಳ ಶಂಕರಾಚಾರ್ಯರೂ, ಶಾಸ್ತ್ರಿಗಳೂ, ಪಂಡಿತರೂ ಇಲ್ಲಿ ನೇರಿರುವರು. ಅವರಲ್ಲಿ ಪ್ರೊಫೆಸರರ ಮಂಡಳಿಯೂ ಇದೆ.

ನಾನು ಗುರುವಾಯೂರು ಮಂದಿರವನ್ನು ಕಂಡು ನೆಂಬುದ್ರಿ ಬ್ರಾಹ್ಮಣರ ಸಂಗಡ ವಿಚಾರವಿನಿಮಯ ಮಾಡಿದೆನು. ಮತ್ತು ಕೇಲಪ್ಪನ್‌ರವರ ಮಂದಿರಪ್ರವೇಶ ಸತ್ಯಾಗ್ರಹಾಶ್ರಮಕ್ಕೂ ಹೋಗಿದ್ದೆನು.

ಬಹಿರಂಗ ಸಭೆಯಲ್ಲಿ ಒಂದುತಾಸಿನವರೆಗೆ ನನ್ನ ಭಾಷಣವಾಯಿತು. ಅದನ್ನು ಶ್ರೀಯುತ ನಾಯನಾರ ಇವರು ಮಲೆಯಾಳೀ ಭಾಷೆಯಲ್ಲಿ ಜನರಿಗೆ ತಿಳಿಸಿಹೇಳಿದರು. ನೂರಕ್ಕೆ ೭೦ರಂತೆ ಜನರು ಮಂದಿರಪ್ರವೇಶಕ್ಕೆ ಅನುಕೂಲವಿರುತ್ತಾರೆ. ಈ ಚಟುವಟಿಕೆಯು ಹಳ್ಳಿಯ ಗುಡಿಸಲಿನವರೆಗೂ ಪಸರಿಸಿದೆ. ಸಾಮಾನ್ಯವಾಗಿ ತರುಣರು ಮಂದಿರಪ್ರವೇಶಕ್ಕೆ ಅನುಕೂಲವಿದ್ದಾರೆ. ಒಂದೇ ಮನೆಯಲ್ಲಿ ಪರಸ್ಪರ ವಿರೋಧ ಮತವುಳ್ಳ ಜನರು ಕಂಡುಬರುವರು.

ಪುರಾಣ ಮತದ ಕೆಲವು ಬಂಗಾಲಿ ಮತ್ತು ಗುಜರಾಥಿ ಪಂಡಿತರಿಗೆ ಗುರುವಾಯೂರು ಮಂದಿರ ಪ್ರವೇಶಕ್ಕೆ ಪ್ರತಿಬಂಧ ಮಾಡಲ್ಪಟ್ಟದೆಯೆಂಬುದು ಬಹು ಆಶ್ಚರ್ಯಕರವಾದ ಸಂಗತಿಯು. ಇಲ್ಲಿ ಥಿಯಾ (ಅಸ್ಪೃಶ್ಯ) ಜಾತಿಯ ಒಬ್ಬ ನ್ಯಾಯಾಧೀಶರಿರುತ್ತಾರೆ. ಅವರಿಗೆ ತಿಂಗಳಿಗೆ ೩೦೦ ರೂ. ವೇತನವಿರುತ್ತದೆ. ಅವರಿಗೂ ಕೂಡ ಮಂದಿರಪ್ರವೇಶವೊತ್ತಟ್ಟಿಗಿರಲಿ, ಊರ ಪ್ರವೇಶವೂ ಕೂಡಾ ದೊರೆಯುವುದಿಲ್ಲ.

ಆದಿಜನರಿಗೆ ದೇವಾಲಯ ಪ್ರವೇಶವೊತ್ತಟ್ಟಿಗಿರಲಿ ಅವರ ನೆರಳುಕೂಡ ಅಲ್ಲಿ ಬೀಳದಂತೆ ಜನರು ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರುತ್ತಾರೆ. ಸನಾತನಿ ಜನರ ಈ ಧೋರಣದಿಂದ ಹಿಂದೂ ಧರ್ಮಕ್ಕೆ ಗುಣ ಮತ್ತು ಸಂಖ್ಯೆ ಈ ಉಭಯ ಪ್ರಕಾರಗಳಿಂದಲೂ ಉಂಟಾಗಿರತಕ್ಕ ಅಪಾಯವನ್ನು ನಾನು ಅವರಿಗೆ ತೋರಿಸಿಕೊಟ್ಟೆನು. ಸ್ವತಃ ಗುರುವಾಯೂರು ಹತ್ತರಿರುವ ಜನಗಳು ತಮ್ಮ ಅಭಿಪ್ರಾಯವನ್ನು ಬರೆಸುವ ವಿಷಯದಲ್ಲಿ ಬಹುಭಾಗ ತಟಸ್ಥರಾಗಿರುತ್ತಾರೆಂಬುದನ್ನು ಲಕ್ಷದಲ್ಲಿಡತಕ್ಕದ್ದಾಗಿದೆ.

ಕರ್ನಾಟಕ ಸಾಹಿತ್ಯ ಸಮ್ಮೇಲನ.

೧೮ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನವು ತಾ. ೨೮-೨೯ ರಲ್ಲಿ ಮಡಿಕೇರಿಯಲ್ಲಿ ಜರುಗಿತು. ಈ ವರ್ಷದ ಸಮ್ಮೇಲನಕ್ಕೆ ಅಧ್ಯಕ್ಷರಾಗಬೇಕೆಂದು ಸ್ವಾಗತ ಸಂಘದವರು ಧಾರವಾಡದ ವಯೋವೃದ್ಧ ಪುಢಾರಿಗಳೂ, ಪ್ರಸಿದ್ಧ ಗ್ರಂಥಕರ್ತರೂ ಆದ ಶ್ರೀ. ಗದಿಗೆಯ್ಯಸ್ವಾಮಿ ಹೊನ್ನಾಪುರಮಠ ಇವರಿಗೆ ಕೇಳಿಕೊಂಡರು. ಆದರೆ ಶ್ರೀ ಗದಿಗೆಯ್ಯನವರು ಕಳೆದ ೧೫ ದಿವಸಗಳಿಂದಲೂ ಮಧುಮೇಹ ರೋಗಪೀಡಿತರಾಗಿ ಅಸ್ವಸ್ಥರಾಗಿರುವದರಿಂದ, ಅಧ್ಯಕ್ಷಪದ ಸ್ವೀಕರಿಸುವದು ಶಕ್ಯವಿಲ್ಲವೆಂಬುದಾಗಿ ತಿಳಿಸಿದ್ದರಿಂದ ಕೊನೆಗೆ ಬೆಂಗಳೂರಿನ ಪ್ರಸಿದ್ಧ ಸಾಹಿತ್ಯ ಸೇವಕರಾದ ಶ್ರೀ. ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಗುರುವಯೂರ ರೆಫರೆಂಡಮ್‌ದ ಡಾಯರೆಕ್ಟರ್ ಶ್ರೀ. ಕೆ ಮಾಧವ ನಾಯರ್ ಶ್ರೀ. ಗೋಪಾಲ ಮೆನನ ಮತ್ತು ಶ್ರೀ. ರಾಜಗೋಪಾಳಾಚಾರಿ ಇವರು ಗುರುವಯೂರ ರೆಫರೆಂಡಂದ ವಿಷಯವಾಗಿ ಒಂದು ವಿಸ್ತೃತವಾದ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಗುರುವಾಯೂರ ಮಂದಿರವನ್ನು ಅಸ್ಪೃಶ್ಯರಿಗೆ ತೆರೆದಿಡಬೇಕೆಂದು ೧೫,೫೬೮ (೧೦೦ ಕ್ಕೆ ೭೭) ಜನಗಳು ಸಮ್ಮತಿಸಿದರು. ೨,೦೧೬ (೧೦೦ ಕ್ಕೆ ೧೦) ಜನಗಳು ಸುಮ್ಮನಿದ್ದರು ಮತ್ತು ೨೫೭೯ (೧೦೦ ಕ್ಕೆ ೧೩) ಜನಗಳು ತಮ್ಮವಿರುದ್ಧವಾದ ಮತವನ್ನು ಕೊಟ್ಟರು. ಅಂತು ಮಂದಿರ ಪ್ರವೇಶಕ್ಕೆ ಗುರುವಾಯೂರ ಭಾಗದಲ್ಲಿ ಪ್ರಚಂಡವಾದ ಬಹುಮತ ದೊರೆತಿದೆ. ೮ ಸಾವಿರಕ್ಕಿಂತಲೂ ಹೆಚ್ಚಾಗಿ ಸ್ತ್ರೀಯರು ಮಂದಿರ ಪ್ರವೇಶಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟದ್ದು ಸಂತೋಷವಾದುದಾಗಿದೆ.

ಪುಣೆಯಲ್ಲಿ ೨೮ ನೆಯ ತಾರೀಖಿನ ದಿವಸ ಹಿಂದುಗಳ ಒಂದು ಪ್ರಚಂಡ ಸಭೆಸೇರಿ ಡಾ. ಸುಬ್ಬರಾಯನ್‌ರವರ ಮಂದಿರ ಪ್ರವೇಶದ ಬಿಲ್ಲಿಗೆ ಅನುಮತಿದೊರೆಯಬೇಕೆಂದು ನಾ. ವ್ಹಾಯಿಸ್‌ರಾಯರಿಗೆ ವಿಜ್ಞಾಪಿಸಿಕೊಂಡಿದ್ದಾರೆ.

ಶೇಟ್ ತುಳಸಿದಾಸ ತ್ರಿಭುವನದಾಸರೆಂಬುವವರು ಜಗತ್ತಿನಲ್ಲಿಯೇ ಧನಾಢ್ಯ ದಾನಶೂರರಾಗಿದ್ದಾರೆ. ಅವರು ಮುಂಬೈಯಲ್ಲಿ ಕಳೆದ ತಿಂಗಳ ೨೭ ನೆಯ ತಾರೀಖಿನ ದಿವಸ ಮೃತಪಟ್ಟರು.

ಮುಂಬೈ ಹಾಯ್‌ಕೋರ್ಟಿನ ಮುಖ್ಯನ್ಯಾಯಾಧೀಶರಾದ ಶ್ರೀ. ಸರ್. ಬೋಮಂಟ್‌ರವರು ಲೇಡಿ ಬೋಮಂಟ್‌ರೊಡನೆ ನಾಶಿಕಕ್ಕೆ ಹೋಗುವವರಿದ್ದಾರೆ.

ಪಂಢರಪುರದ ಸೌ. ರಾಧಾಬಾಯಿ ಕೃಷ್ಣಾಜಿ ಮತ್ತು ಸೋಲಾಪುರದ ಮಿ. ಡಬ್ಲ್ಯು. ಎಚ್. ರೇಚ್ ಇವರಲ್ಲಿ ಪ್ರತಿಯೊಬ್ಬರಿಗೆ ಸುರತ ಲಾಟರಿಯಿಂದ ೮ ಸಾವಿರ ರೂ. ಗಳು ದೊರೆತಿವೆ.

ಮತ್ತು ಪ್ರಥಮಾಚಾರ್ಯನಾದ ಬಸವಣ್ಣನು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ಲಿಂಗಾಯತ ತತ್ವವನ್ನು ಹೇಳ್ಯಾನಂದ ಬಳಿಕ ಚೆನ್ನಬಸವಣ್ಣನವರು ತುರುಕರಲ್ಲಿ ಹುಟ್ಟುವದೇನಸಗಾಧದ ಮಾತು? ಪರಂತು ವೀರಶೈವರು ನಂಬುವದಿಲ್ಲ, ಇದು ಅವರ ತಪ್ಪು.

ದೀನದಾರ ಶಿದ್ದೀಖ ಸಾಹೇಬರಲ್ಲಿ ಲಿಂಗಾಯತರ ಕಾಲಜ್ಞಾನದ ಚೆನ್ನಬಸವಣ್ಣನವರ ಸಂಬಂಧವಾಗಿ ಹೇಳುತ್ತಿರುವ ಎಲ್ಲ ಚಿನ್ಹಗಳು ಇರುವದರಿಂದ ಇವರನ್ನೇ ಚೆನ್ನಬಸವಣ್ಣನವರೆಂದು ತಿಳಿಯಬೇಕು." ಇಲ್ಲದೆ ಹೋದರೆ ನಾವು ದುರ್ಗತಿಗೆ ಹೋಗುವೆವು. ಆದ್ದರಿಂದ ಇವರನ್ನೇ ಚೆನ್ನಬಸವಣ್ಣನವರೆಂದು ತಿಳಿಯಬೇಕು."

೨. ಬಸಯ್ಯನವರು ಚೌಕಿ ಮಠ— ವೀರಪ್ಪನವರು ಹೇಳಿದುದೆಲ್ಲಾ ಬಹು ಉತ್ತಮವಾಗಿರುತ್ತದೆ. ಲಿಂಗಾಯತ ಮತ್ತು ಮುಸಲ್ಮಾನ ಧರ್ಮಗಳು ಒಂದೇ ಇರುತ್ತವೆ. ನನಗೆ ಈ ಚೆನ್ನಬಸವಣ್ಣನವರಿಂದ (ದೀನದಾರ ಶಿದ್ದೀಖಸಾಹೇಬರಿಂದ) ಅರ್ಥ ಮೋಕ್ಷವೇ ಸಿಗುತ್ತದೆ. ಲಿಂಗಾಯತರು ಇಂಥ ದೊಡ್ಡ ಮನುಷ್ಯನಿಗೆ ಅಲಕ್ಷ್ಯ ಮಾಡುತ್ತಾರೆ. ಮಹಾತ್ಮಾ ಗಾಂಧಿ ಮೊದಲಾದವರ ಮಾತು ಕೇಳುತ್ತಾರೆ. ಪರಂತ ಈ ದೀನದಾರ ಶಿದ್ದೀಖ ಚೆನ್ನಬಸವಣ್ಣನವರ ಮಾತು ಕೇಳುವದಿಲ್ಲ. ಇದು ತಪ್ಪು. ಮುಂದೆ ಹೇಳಲಿಕ್ಕೆ ಬಾರದೆ ಇವರು ಇಷ್ಟಕ್ಕೆ ಬಿಟ್ಟರು.

ಇವರೀ ಸ್ಥಿತಿಯನ್ನು ನೋಡಿ, ಅಥವಾ ಕೇಳಿ, ಇವರು ವೀರಶೈವ ಮತವು ಸಾರ್ವಭೌಮವೆಂದು ಸಿದ್ಧಮಾಡಲಿಕ್ಕೆ ಬಂದಂಥ ಸುಪ್ರಸಿದ್ಧ ಪಂಡಿತರೆಂದು ಯಾರು ತಾನೇ ಹೇಳಬಲ್ಲರು? ಆದರೆ ಇಲ್ಲಿಯ ವರ್ತಮಾನ ಪತ್ರಿಕೆಗಳಲ್ಲವರ ಕೀರ್ತಿಯನ್ನೂ ಮತ್ತು ವಿದ್ವತ್ತವನ್ನೂ ಒಳ್ಳೇ ಸಮಾರಂಭದಿಂದಲೂ ಕುಯುಕ್ತಿಯಿಂದಲೂ ಮತ್ತು ಧೈರ್ಯದಿಂದಲೂ ವರ್ಣಿಸಲ್ಪಟ್ಟರೂ ಮತ್ತು ನಿಜವಾದ ಸ್ಥಿತಿಯನ್ನು ಪ್ರಕಟಿಸಿದ್ದೂ ಪರಮಾಶ್ಚರ್ಯವಾಗುತ್ತವೆ.

ನೋಡಿರಿ! ಈ ಕುಬುದ್ಧಿಯಾದ ಮೂರ್ತಿಯ ವ್ಯರ್ಥವಾದ ಕರ್ತವ್ಯದ ಕುಯುಕ್ತಿಯನ್ನು ನೋಡಿರಿ!! ವೀರಶೈವ ಬಂಧುಗಳಿರಾ ಇನ್ನಾದರೂ ಒಳಜಗಳಕ್ಕೆ ಒಳಗಾಗದೆ ಸಮಾಜದ ಅಭ್ಯುದಯದ ಕಡೆಗೆ ಲಕ್ಷಕೊಡುತ್ತಿದ್ದೀರಿವೆ? ಮ.ಂದೇನು ಮಾಡಬೇಕೆನ್ನುವ ವಿಷಯವಾಗಿ ಸರ್ವ ವೀರಶೈವರು ಶಕ್ತಿಯಿಂದಲೂ, ಯುಕ್ತಿಯಿಂದಲೂ ವಿಚಾರಸ್ಥರಾಗಬೇಕೆಂದು ನಮ್ಮಗಳ ನವಿನಯ ಪ್ರಾರ್ಥನೆ. ಮತ್ತು ಈ ಕಾರ್ಯಕ್ಕೆ ಪ್ರಥಮಾಚಾರ್ಯರೂ ಮತ್ತು ಬಸವಾದಿ ಪ್ರಮಥರೂ ವೀರಶೈವರಿಗೆ ತಕ್ಕ ಯೋಗ್ಯವಾದ ಸುಬುದ್ಧಿಯನ್ನು ದಯಮಾಡಿಸಲೆಂದು ಹಗಲಿರಳು ಪ್ರಾರ್ಥಿಸುತ್ತೇವೆ.

ಹೈದ್ರಾಬಾದ ಡೆಕ್ಕನ ೨೯-೧೨-೧೯೩೨.	ವೀರಶೈವ ತರುಣರು

ವ್ಯಾಪಾರ ಶಿಕ್ಷಕ.

ಈ ಪುಸ್ತಕವು ಅಚ್ಚಾಗುತ್ತಲಿದೆ. ಸಂಪೂರ್ಣವಾದನಂತರ ಶರಣ ಸಂದೇಶ ಪತ್ರಿಕೆಗೆ ಈ ವರುಷ ಚಂದಾದಾರರಾಗಿರುವವರಿಗೆಲ್ಲರಿಗೂ ತಪ್ಪದೇ ಕಳುಹಿಸಲಾಗುವುದು, ಬೇರೆಯವರಿಗೆ ಈ ಪುಸ್ತಕವನ್ನು ವಿಕ್ರಯಿಸುವುದಿಲ್ಲ, ಆದಕಾರಣ ಬೇರೆಯವರಾಗಲಿ ಅಥವಾ ಚಂದಾದಾರರಾಗಲಿ ಪುಸ್ತಕವನ್ನು ಕಳುಹಿಸಲು ವೃಥಾ ಪತ್ರಗಳನ್ನು ಬರೆಯಬಾರದಾಗಿ ಪ್ರಾರ್ಥನೆ.

ಮ್ಯಾನೇಜರ್,

ಸಮಾಚಾರ ಸಂಗ್ರಹ.

ಗುರುವಾಯೂರ ದೇವಾಲಯದಲ್ಲಿ ಕಾರ್ತೀಕ ಏಕಾದಶಿಯ ದಿವಸ ಆದಿ ಜನರಾದಿಯಾಗಿ ಎಲ್ಲ ಹಿಂದುಗಳನ್ನೂ ಬಿಡುತ್ತಿರುವ ಪದ್ಧತಿಯು ಬಹು ದಿನಗಳಿಂದಲೂ ಇದೆ.

ರಾಜಗೋಪಾಲಾಚಾರ್ಯರ ಸಂದೇಶದ ಪ್ರಕಾರ ಗುರುವಾಯೂರ ದೇವಾಲಯ ಪ್ರವೇಶಕ್ಕೆ ಆದಿಜನರಿಗೆ ಅವಕಾಶ ಕೊಡಬೇಕೆಂದು ಝಾಮೋರಿನರವರಿಗೂ ಈ ಸಂಬಂಧವಾದ ಶಾಸನವನ್ನು ತರಲು ಅಪ್ಪಣೆಕೊಡಬೇಕಾಗಿ ವ್ಹಾಯಿಸ್‌ರಾಯರಿಗೂ ಹಿಂದುಸ್ಥಾನದ ಅನೇಕ ಸ್ಥಳಗಳಿಂದ ತಿಳಿಸಲ್ಪಟ್ಟಿತು.

ಐರ್ಲಂಡ ದೇಶದ ಮುಖ್ಯಾಧಿಕಾರಿಗಳ ವೇತನದಲ್ಲಿ ೧೦೦ ಕ್ಕೆ ೫೦ ರಂತೆ ಡಿ. ವ್ಹಲೇರಾ ಮೊದಲಾದ ಮಂತ್ರಿ ಮಂಡಲದವರು ಕಡಿಮೆ ಮಾಡುವುದಾಗಿ ಗೊತ್ತು ಮಾಡಿರುವುದರಿಂದ ಆ ದೇಶದಲ್ಲಿ ಆಂತೋಷವುಂಟಾಗಿದೆ.

ಅಲಾಹಾಬಾದಿನಲ್ಲಿ ನಡೆದ ಐಕ್ಯ ಪರಿಷತ್ತು ಮುಸಲ್ಮಾನರು ತಂದೊಡ್ಡಿದ ವಿಘ್ನದಿಂದ ಫೆಬ್ರುವರಿ ೪ ನೆಯ ತಾರೀಖಿನವರೆಗೆ ನಿಲ್ಲಿಸಲ್ಪಟ್ಟಿತು.

ಹುಬ್ಬಳ್ಳಿಯ ಪ್ರಸಿದ್ಧ ಅರಳೆ ವ್ಯಾಪಾರಿಗಳಾದ ಶ್ರೀ. ಶಿರಹಟ್ಟಿ ಚೆನ್ನಬಸವಪ್ಪನವರಿಗೆ ನೂತನ ವರ್ಷದ ಪದವಿದಾನ ಸಮಾರಂಭದ ಕಾಲದಲ್ಲಿ ರಾವಬಹದ್ದೂರ್ ಎಂಬ ಪದವಿಯು ಸಿದ್ದಾಪುರದ ಶ್ರೀ. ಪಾಟೀಲ ಚೆನ್ನಬಸವಪ್ಪ ಗೌಡರಿಗೆ ರಾವಸಾಹೇಬ ಎಂಬ ಪದವಿಯೂ ದೊರೆತಿವೆ.

ಮುಂಬೈಯಲ್ಲಿ ಅರಳೆ ಪಖಾರಕ್ಕೆ ತಾ. ೧ ನೆಯ ದಿವಸ ಬೆಂಕಿ ಹತ್ತಿ ಮೂರು ಲಕ್ಷ ರೂ. ಗಳ ನಷ್ಟವಾಯಿತು.

ಸಿಂಧದಲ್ಲಿ ಹೊರಡುವ ಅಬರ್ಝುವ್ಹ ಎಂಬ ಪತ್ರಿಕೆಯಲ್ಲಿ ಒಬ್ಬ ಮುಸಲ್ಮಾನನು ತನ್ನ ಕನ್ಯೆಗೆ ವರನು ಬೇಕೆಂದು ಜಾಹೀರ ಕೊಟ್ಟಿದ್ದನು. ಏಳುನೂರು ತರುಣರು ಆ ಕನ್ಯೆಗಾಗಿ ಬರೆದುಕೊಂಡಿದ್ದರಂತೆ !

ಅಮೇರಿಕೆಯಲ್ಲಿ ಹತ್ತಿಯನ್ನು ಬೆಳೆಯುವ ಪ್ರಾಂತಗಳ ಸಭೆ ಸೇರಿ ಮುಂದಿನ ವರ್ಷ ಹತ್ತಿ ಬೆಳೆಯನ್ನು ಹೆಚ್ಚಿಸಬೇಕೆಂದು ಈ ಸಾರೆ ಬಿತ್ತುವುದನ್ನು ೧೦೦ ಕ್ಕೆ ೫೦ ರಂತೆ ಕಡಿಮೆ ಮಾಡಬೇಕಾಗಿ ಗೊತ್ತು ಮಾಡಿದ್ದಾರೆ. ಈ ಸುದ್ದಿಯು ಮುಂಬಯಿಗೆ ತಿಳಿದೊಡನೆ ಹತ್ತಿ ಬೆಲೆಯಲ್ಲಿ ವ್ಯತ್ಯಾಸವಾಯಿತು.

ಕೊಲ್ಹಾಪುರದಲ್ಲಿ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನ ಸೇರಿದಾಗ ಆ ಸಮ್ಮೇಲನಕ್ಕೆ ಆಗಮಿಸಿದ ಅನೇಕ ಪ್ರಮುಖರ ಸಹಭೋಜನ ಸಮಾರಂಭ ಜರುಗಿತು. ಬ್ರಾಹ್ಮಣಾದಿ ಎಲ್ಲ ವರ್ಣದವರೂ ಆ ಸಹಭೋಜನದಲ್ಲಿದ್ದರು. ಇಷ್ಟೇ ಅಲ್ಲ; ಜೈನರಾದ ಅನ್ಯಧರ್ಮದವರೂ ಇದ್ದರು. ಪುಣೆಯ ಕೇಸರಿ ಪತ್ರಿಕೆಯ ಸಂಪಾದಕರಾದ ಶ್ರೀ. ಭಾವೆ ಎಂಬುವವರೂ ಈ ಸಹಭೋಜನದಲ್ಲಿದ್ದರಂತೆ.

ಬೆಳಗಾವಿಯ ಶ್ರೀ ಸರಾಫ ಎಂಬುವವರು ೩ ತಾಸುಗಳಲ್ಲಿ ೫೦೦೦ ಸಾಮುಗಳನ್ನು ತೆಗೆದು ಬಲಭೀಮರಾದರು.

ಸೊಲ್ಲಾಪುರ ಮುನಸಿಪಾಲಿಟಿಯವರು ಸಾರ್ವಜನಿಕ ಹಿಂದು ಉಪಹಾರ ಮತ್ತು ಖಾನಾವಳಿಗಳಲ್ಲಿ ಎಲ್ಲ ಹಿಂದುಗಳನ್ನೂ ಸಮಾನವಾಗಿಯೇ ಕಾಣಬೇಕೆಂತಲೂ ಆದಿಜನಗಳಿಗೆ ಬೇರೆ ವ್ಯವಸ್ಥೆ ಮಾಡಬಾರದಾಗಿಯೂ ನಿಯಮ ಮಾಡುವವರಿದ್ದಾರೆಂದು ಸುದ್ದಿಯಿದೆ.

ಝಾಮೋರಿನ ಕುಟುಂಬದಲ್ಲಿಯ ಒಬ್ಬ ಹೆಣ್ಣುಮಗಳು ಅಸ್ಪೃಶ್ಯತಾ ನಿವಾರಣೆಗಾಗಿಯೂ ದೇವಾಲಯ ಪ್ರವೇಶಕ್ಕೂ ಧನಸಹಾಯ ಮಾಡಿರುವುದು ಅತ್ಯಂತ ಅಭಿನಂದನೀ[illegible]

ಗುರುವಾಯೂರ ರಣಕ್ಷೇತ್ರ ವಾರ್ತೆ.

ಸರ್ವೆಂಟ್ಸ ಆಫ್ ಇಂಡಿಯಾ ಸೊಸಾಯಟಿಯ ಅಧ್ಯಕ್ಷರಾದ ಶ್ರೀ ಗೋಪಾಳಕೃಷ್ಣ ದೇವಧರ ಇವರು ಗುರುವಾಯೂರದಿಂದ ತಾ. ೨೩ನೆಯ ಡಿಶೆಂಬರ ದಿವಸ ಮಹಾತ್ಮಾಗಾಂಧಿಯವರಿಗೆ ಒಂದು ಪತ್ರ ಬರೆದಿದ್ದು ಅದರಲ್ಲಿ ಮದ್ರಾಸದಲ್ಲಿರುವ ಪ್ರಸಿದ್ಧ ರಾಜಶಾಸನ ಪ್ರವೀಣರ ಅಭಿಪ್ರಾಯವನ್ನೂ ಮತ್ತು ಗುರುವಾಯೂರ ಸ್ಥಿತಿಯನ್ನೂ ಈ ರೀತಿಯಾಗಿ ತಿಳಿಸಿದ್ದಾರೆ.

ಪ್ರಿಯ ಮಹಾತ್ಮಾಜಿ,

ಮದ್ರಾಸದಲ್ಲಿ ನಾನು ಸರ್. ಶಿವಸ್ವಾಮಿ ಅಯ್ಯರ, ದಿ. ಬ. ಎಲ್. ಎ. ಗೋವಿಂದ ರಾಘವ ಅಯ್ಯರ, ಶ್ರೀ. ಟಿ. ಆರ್. ವೆಂಕಟರಾಮಶಾಸ್ತ್ರಿ ಮತ್ತು ಡಾ. ಸುಬ್ಬರಾಯರ್ ಇವರ ಸಂಗಡ ಮಾತನಾಡಿದೆನು. ಸರಕಾರಿ ಶಾಸನ ತಿದ್ದುಪಾಟು ಮಾಡಿದ ವಿನಾ ಆದಿಜನರಿಗೆ ಮಂದಿರ ಪ್ರವೇಶ ಪ್ರಾಪ್ತವಾಗುವುದು ಶಕ್ಯವಿಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಡಾ, ಸುಬ್ಬರಾಯರ್‌ರವರ ಗೊತ್ತುವಳಿಯ ಸಲುವಾಗಿ ವ್ಹಾಯಿಸ್‌ರಾಯರ ಅಪ್ಪಣೆಯನ್ನು ದೊರೆಕಿಸುವುದಕ್ಕೂ ಕಾಲವಿಳಂಬವಾಗಬಹುದೆಂದು ತೋರುತ್ತದೆ. ಈ ಮಧ್ಯದಲ್ಲಿ ಸನಾತನ ಪಕ್ಷದವರು ಮಂದಿರ ಪ್ರವೇಶ ಪ್ರತಿಬಂಧ ವಿಷಯವಾಗಿ ಜನರ ಸಹಿ ತೆಗೆದುಕೊಳ್ಳುವ ಕೆಲಸವನ್ನು ಪ್ರಾರಂಭಮಾಡಿದ್ದು ಸನಾತನಿಗಳು ತಮ್ಮ ಮತವನ್ನು ವ್ಹಾಯಿಸ್‌ರಾಯರಿಗೆ ತಿಳಿಸುವವರಿದ್ದಾರೆ.

ಗುರುವಾಯೂರು ಒಂದು ರಣಕ್ಷೇತ್ರವೇ ಆಗಿದೆ. ಇಲ್ಲಿ ಆದಿಜನರು ಮಂದಿರಪ್ರವೇಶ ಮಾಡುವದರ ವಿಷಯವಾಗಿ ವಾದಯುದ್ಧವು ಏಕಪ್ರಕಾರ ಸಾಗಿದೆ. ಬೇರೆಬೇರೆ ಭಾಗಗಳ ಶಂಕರಾಚಾರ್ಯರೂ, ಶಾಸ್ತ್ರಿಗಳೂ, ಪಂಡಿತರೂ ಇಲ್ಲಿ ಸೇರಿರುವರು. ಅವರಲ್ಲಿ ಪ್ರೊಫೆಸರರ ಮಂಡಳಿಯೂ ಇದೆ.

ನಾನು ಗುರುವಾಯೂರು ಮಂದಿರವನ್ನು ಕಂಡು ನೆಂಬುದ್ರಿ ಬ್ರಾಹ್ಮಣರ ಸಂಗಡ ವಿಚಾರವಿನಿಮಯ ಮಾಡಿದೆನು. ಮತ್ತು ಕೇಲಪ್ಪನ್‌ರವರ ಮಂದಿರಪ್ರವೇಶ ಸತ್ಯಾಗ್ರಹಾಶ್ರಮಕ್ಕೂ ಹೋಗಿದ್ದೆನು.

ಬಹಿರಂಗ ಸಭೆಯಲ್ಲಿ ಒಂದುತಾಸಿನವರೆಗೆ ನನ್ನ ಭಾಷಣವಾಯಿತು. ಅದನ್ನು ಶ್ರೀಯುತ ನಾಯನಾರ ಇವರು ಮಲೆಯಾಳೀ ಭಾಷೆಯಲ್ಲಿ ಜನರಿಗೆ ತಿಳಿಸಿಹೇಳಿದರು. ನೂರಕ್ಕೆ ೬೦ರಂತೆ ಜನರು ಮಂದಿರಪ್ರವೇಶಕ್ಕೆ ಅನುಕೂಲವಿರುತ್ತಾರೆ. ಈ ಚಟುವಟಿಕೆಯು ಹಳ್ಳಿಯ ಗುಡಿಸಲಿನವರೆಗೂ ಪಸರಿಸಿದೆ. ಸಾಮಾನ್ಯವಾಗಿ ತರುಣರು ಮಂದಿರಪ್ರವೇಶಕ್ಕೆ ಅನುಕೂಲವಿದ್ದಾರೆ. ಒಂದೇ ಮನೆಯಲ್ಲಿ ಪರಸ್ಪರ-ವಿರೋಧ ಮತವುಳ್ಳ ಜನರು ಕಂಡುಬರುವರು.

ಪುರಾಣ ಮತದ ಕೆಲವು ಬಂಗಾಲಿ ಮತ್ತು ಗುಜರಾಥಿ ಪಂಡಿತರಿಗೆ ಗುರುವಾಯೂರು ಮಂದಿರ ಪ್ರವೇಶಕ್ಕೆ ಪ್ರತಿಬಂಧ ಮಾಡಲ್ಪಟ್ಟಿದೆಯೆಂಬುದು ಬಹು ಆಶ್ಚರ್ಯಕರವಾದ ಸಂಗತಿಯು. ಇಲ್ಲಿ ಥಿಯಾ (ಅಸ್ಪೃಶ್ಯ) ಜಾತಿಯ ಒಬ್ಬ ನ್ಯಾಯಾಧೀಶರಿರುತ್ತಾರೆ. ಅವರಿಗೆ ತಿಂಗಳಿಗೆ ೩೦೦ ರೂ. ವೇತನವಿರುತ್ತದೆ. ಅವರಿಗೂ ಕೂಡ ಮಂದಿರಪ್ರವೇಶವೊತ್ತಟ್ಟಿಗಿರಲಿ, ಊರ ಪ್ರವೇಶವೂ ಕೂಡಾ ದೊರೆಯುವುದಿಲ್ಲ.

ಆದಿಜನರಿಗೆ ದೇವಾಲಯ ಪ್ರವೇಶವೊತ್ತಟ್ಟಿಗಿರಲಿ ಅವರ ನೆರಳುಕೂಡ ಅಲ್ಲಿ ಬೀಳದಂತೆ ಜನರು ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರುತ್ತಾರೆ. ಸನಾತನಿ ಜನರ ಈ ಧೋರಣದಿಂದ ಹಿಂದೂ ಧರ್ಮಕ್ಕೆ ಗುಣ ಮತ್ತು ಸಂಖ್ಯೆ ಈ ಉಭಯ ಪ್ರಕಾರಗಳಿಂದಲೂ ಉಂಟಾಗಿರತಕ್ಕ ಅಪಾಯವನ್ನು ನಾನು ಅವರಿಗೆ ತೋರಿಸಿಕೊಟ್ಟೆನು. ಸ್ವತಃ ಗುರುವಾಯೂರು ಹತ್ತಿರಿರುವ ಜನಗಳು ತಮ್ಮ ಅಭಿಪ್ರಾಯವನ್ನು ಬರೆಸುವ ವಿಷಯದಲ್ಲಿ ಬಹುಭಾಗ ತಟಸ್ಥರಾಗಿರುತ್ತಾರೆಂಬುದನ್ನು ಲಕ್ಷದಲ್ಲಿಡತಕ್ಕದ್ದಾಗಿದೆ.

ಕರ್ನಾಟಕ ಸಾಹಿತ್ಯ ಸಮ್ಮೇಲನ.

೧೮ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನವು ತಾ. ೨೮-೨೯ ರಲ್ಲಿ ಮಡಿಕೇರಿಯಲ್ಲಿ ಜರುಗಿತು. ಈ ವರ್ಷದ ಸಮ್ಮೇಲನಕ್ಕೆ ಅಧ್ಯಕ್ಷರರಾಗಬೇಕೆಂದು ಸ್ವಾಗತ ಸಂಘದವರು ಧಾರವಾಡದ ವಯೋವೃದ್ಧ ಪುಢಾರಿಗಳೂ, ಪ್ರಸಿದ್ಧ ಗ್ರಂಥಕರ್ತರೂ ಆದ ಶ್ರೀ. ಗದಿಗೆಯ್ಯಸ್ವಾಮಿ ಹೊನ್ನಾಪುರಮಠ ಇವರಿಗೆ ಕೇಳಿಕೊಂಡರು. ಆದರೆ ಶ್ರೀ ಗದಿಗೆಯ್ಯನವರು ಕಳೆದ ೧೫ ದಿವಸಗಳಿಂದಲೂ ಮಧುಮೇಹ ರೋಗಪೀಡಿತರಾಗಿ ಅಸ್ವಸ್ಥರಾಗಿರುವದರಿಂದ, ಅಧ್ಯಕ್ಷಪದ ಸ್ವೀಕರಿಸುವದು ಶಕ್ಯವಿಲ್ಲವೆಂಬುದಾಗಿ ತಿಳಿಸಿದ್ದರಿಂದ ಕೊನೆಗೆ ಬೆಂಗಳೂರಿನ ಪ್ರಸಿದ್ಧ ಸಾಹಿತ್ಯ ಸೇವಕರಾದ ಶ್ರೀ. ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಗುರುವಯೂರ ರೆಫರೆಂಡರ್ಮದ ಡಾಯರೆಕ್ಟರ್ ಶ್ರೀ. ಕೆ ಮಾಧವ್ ನಾಯರ್ ಶ್ರೀ. ಗೋಪಾಲ ಮೆರ್ನ ಮತ್ತು ಶ್ರೀ. ರಾಜಗೋಪಾಳಾಚಾರಿ ಇವರು ಗುರುವಯೂರ ರೆಫರೆಂಡಂದ ವಿಷಯವಾಗಿ ಒಂದು ವಿಸ್ತೃತವಾದ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಗುರುವಾಯೂರ ಮಂದಿರವನ್ನು ಅಸ್ಪೃಶ್ಯರಿಗೆ ತೆರೆದಿಡಬೇಕೆಂದು ೧೫,೫,೬೮ (೧೦೦ ಕ್ಕೆ ೭೭) ಜನಗಳು ಸಮ್ಮತಿಸಿದರು. ೨,೧೯೬ (೧೦೦ ಕ್ಕೆ ೧೦) ಜನಗಳು ಸುಮ್ಮನಿದ್ದರು ಮತ್ತು ೨,೫೭೯ (೧೦೦ ಕ್ಕೆ ೧೩) ಜನಗಳು ತಮ್ಮವಿರುದ್ಧವಾದ ಮತವನ್ನು ಕೊಟ್ಟರು. ಅಂತು ಮಂದಿರ ಪ್ರವೇಶಕ್ಕೆ ಗುರುವಾಯೂರ ಭಾಗದಲ್ಲಿ ಪ್ರಚಂಡವಾದ ಬಹುಮತ ದೊರೆತಿದೆ. ೮ ಸಾವಿರಕ್ಕಿಂತಲೂ ಹೆಚ್ಚಾಗಿ ಸ್ತ್ರೀಯರು ಮಂದಿರ ಪ್ರವೇಶಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟದ್ದು ಸಂತೋಷವಾದುದಾಗಿದೆ.

ಪುಣೆಯಲ್ಲಿ ೨೮ ನೆಯ ತಾರೀಖಿನ ದಿವಸ ಹಿಂದುಗಳ ಒಂದು ಪ್ರಚಂಡ ಸಭೆಸೇರಿ ಡಾ. ಸುಬ್ಬರಾಯರ್‌ರವರ ಮಂದಿರ ಪ್ರವೇಶದ ಬಿಲ್ಲಿಗೆ ಅನುಮತಿದೊರೆಯಬೇಕೆಂದು ನಾ. ವ್ಹಾಯಿಸ್‌ರಾಯರಿಗೆ ವಿಜ್ಞಾಪಿಸಿಕೊಂಡಿದ್ದಾರೆ.

ಶೇಟ್ ತುಳಸಿದಾಸ ತ್ರಿಭುವನದಾಸರೆಂಬುವವರು ಜಗತ್ತಿನಲ್ಲಿಯೇ ಧನಾಢ್ಯ ದಾನಶೂರರಾಗಿದ್ದಾರೆ. ಅವರು ಮುಂಬೈಯಲ್ಲಿ ಕಳೆದ ತಿಂಗಳ ೨೭ ನೆಯ ತಾರೀಖಿನ ದಿವಸ ಮೃತಪಟ್ಟರು.

ಮುಂಬೈ ಹಾಯ್‌ಕೋರ್ಟಿನ ಮುಖ್ಯನ್ಯಾಯಾಧೀಶರಾದ ಶ್ರೀ, ಸರ್. ಬೋಮಂಟ್‌ರವರು ಲೇಡಿ ಬೋಮಂಟ್‌ರೊಡನೆ ನಾಶಿಕಕ್ಕೆ ಹೋಗುವವರಿದ್ದಾರೆ.

ಪಂಢರಪುರದ ಸೌ. ರಾಧಾಬಾಯಿ ಕೃಷ್ಣಾಜಿ ಮತ್ತು ಸೋಲಾಪುರದ ಮಿ ಡಬ್ಲ್ಯು. ಎಚ್. ರೇಚ್ ಇವರಲ್ಲಿ ಪ್ರತಿಯೊಬ್ಬರಿಗೆ ಸುರತ ಲಾಟರಿಯಿಂದ ೬ ಸಾವಿರ ರೂ. ಗಳು ದೊರೆತಿವೆ.

ಗ್ರಂಥಶೋಧನೆ.

ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜದ ಅಧ್ಯಾಪಕರು ಇಂಗಳಹಳ್ಳಿಗೆ ಹೋದಸಮಯದಲ್ಲಿ ತಮ್ಮ ಕಾಲೇಜದ ಸೂಟಿಯ ಕಾಲದಲ್ಲಿ ಶಿ. ವಿ. ಪಂಡಿತ ಮಂಡಲದ ೧೫ ನೆಯ ನಿಯಮಕ್ಕನುಸಾರವಾಗಿ ಇಂಗಳಹಳ್ಳಿ, ಮಣಕವಾಡ, ಬಂಡಿವಾಡ, ಮಂಟೂರ, ಮುಂತಾದ ಗ್ರಾಮಗಳಿಗೆ ಹೋಗಿ ತಾಡವಾಲಿಯ ಗ್ರಂಥಗಳನ್ನು ಹುಡುಕಿ ಸಂಗ್ರಹಿಸಿರುವರು. ಅವುಗಳಲ್ಲಿ ಕೆಲವು ಪೂರ್ಣವಿದ್ದು ಕೆಲವು ಅರ್ಧವಿರುವವು. ಈ ಗ್ರಂಥಗಳನ್ನು ಸರಿಯಾಗಿ ಪರಿಶೋಧಿಸಿ ಮಂಡಲದ ಒಪ್ಪಿಗೆಯಾದನಂತರ ಮುಂದಿನ ಕಾರ್ಯವನ್ನು ಕೈಕೊಳ್ಳುವರು. ಇದೇ ರೀತಿಯಾಗಿ ಪ್ರತಿಯೊಬ್ಬ ಪಂಡಿತರು ತಿಂಗಳಿಗೆ ಒಂದು ಸಾರೆಯಾದರೂ ತಮಗೆ ಅನುಕೂಲ ಇದ್ದ ಸ್ಥಳಗಳಿಗೆ ಹೋಗಿ ಸ್ವಾರ್ಥತ್ಯಾಗಿಗಳಾಗಿ ನಿಷ್ಪಕ್ಷಪಾತದಿಂದ ಗ್ರಂಥಶೋಧನೆ ಮಾಡಿ ಸಂಗ್ರಹಿಸಬೇಕಲ್ಲದೆ ಪುರಾಣ, ಕೀರ್ತನೆ, ವಚನ ಧರ್ಮೋಪದೇಶ ಮುಂತಾದವುಗಳಿಂದ ಸಮಾಜ ಸೇವೆಯನ್ನು ಮಾಡುತ್ತಾ ಹೋದರೆ ಮಂಡಲದ ಕಾರ್ಯಕ್ರಮವು ಸಮಾಜದಲ್ಲಿ ಪ್ರಚಾರವಾಗುವದಲ್ಲದೆ ಪಂಡಿತರು ತಮ್ಮ ಕಾರ್ಯವನ್ನು ಮಾಡಿದಂತಾಗುವದು. ಅಲ್ಲದೆ ಪಂಡಿತರು ಪಂಡಿತ ಮಂಡಲದ ನಿಯಮವನ್ನು ಪಾಲಿಸಿದಂತಾಗುವದು. ಈ ರೀತಿ ಕಾರ್ಯವನ್ನು ಒಕ್ಕಾರಿ ಪಂ. ವಿ. ನಾಗೇಶ ಶಾಸ್ತ್ರಿಗಳು ಕೈಕೊಂಡು ಪತ್ರದಲ್ಲಿ ಪ್ರಕಟಿಸಿರುವದನ್ನು ನೋಡಿ ನಾವೆಲ್ಲರೂ ಆ ರೀತಿಯಾಗಿ ಮಾಡಬೇಕೆಂದು ಕುತೂಹಲಪ್ರಪ್ರವರಾಗಿದ್ದೇವೆ. ಕಾರಣ ಸರ್ವ ಮಂಡಲಿಯ ಮೆಂಬರರು ಇತ್ತಕಡೆಗೆ ಲಕ್ಷವಿಟ್ಟು ಈ ಕಾರ್ಯವನ್ನು ಅವಶ್ಯವಾಗಿ ಕೈಕೊಳ್ಳುವರೆಂದು ನಂಬಿದ್ದೇನೆ.

ಮುದ್ರಿತವಾಗದಿರುವ ಗ್ರಂಥಗಳ ವಿವರ.

೧. ಮಹಾಮಹೋಪಾಧ್ಯಾಯ ಗೋಪಿನಾಥ ಮಿಶ್ರ ವಿರಚಿತ ತರ್ಕ ಭಾಷಾಪ್ರಕಾಶಿಕೆ.

೨. ಶಿವಯೋಗಾಂಗ ವಿಭೂಷಣ.

೩. ಜ್ಞಾನಶತಕ (ನಿರ್ವಭೂಷಣ ಸ್ವಾಮಿ ವಿರಚಿತ)

೪. ಪ್ರಭುಲೀಲಾ ಕಾವ್ಯ

ಜ್ಞಾನಶತಕಗಳ ಪ್ರತಿಗಳೆರಡು ದೊರೆತಿವೆ. ಅವನ್ನು ಶೋಧಿಸಿ ಪ್ರಕಟ ಮಾಡಬೇಕೆಂದು ಮಾಡಿದ್ದೇವೆ. ಯಾರ ಕಡಿಗಾದರೂ ಬೇರೆ ಪ್ರತಿ ಸಿಕ್ಕರೆ ಈ ಪತ್ತಕ್ಕೆ ಕಳಿಸಬೇಕಾಗಿ ವಿನಂತಿ.

ಪಂ. ಮಂ. ಚೇರಮನ್

ಧಾರವಾಡ.

ಶ್ರೀ. ಮು. ನಿ. ಮು. ಫ್ರೀ. ಬೋರ್ಡಿಂಗ.

ಶ್ರೀ. ಮು, ನಿ. ಪ್ರಣವಸ್ವರೂಪಿಗಳಾದ ಹಾಳಕೇರಿ ಅನ್ನದಾನ ಸ್ವಾಮಿಗಳು ಆಕಸ್ಮಿತವಾಗಿ ನಮ್ಮ ಶ್ರೀ. ಮು. ನಿ. ಜ. ಫ್ರೀ ಬೋರ್ಡಿಂಗಿಗೆ ದಯಮಾಡಿಸಿ ಸದರೀ ಸಂಸ್ಥೆಯ ಯಾವತ್ತು ವಿಭಾಗಗಳನ್ನು ನೋಡಿ ಪುನಃ ಶಿ. ಸಂ. ಕಾಲೇಜದಲ್ಲಿ ಕೂಡಿದ ವಿದ್ಯಾರ್ಥಿಗಳ ಸಭೆಗೆ ದಯಮಾಡಿಸಿ ಶ್ರೀಗಳ ಸನ್ನಿಧಿಯಲ್ಲಿ ಸಂಸ್ಥೆಯಲ್ಲಿ ಪ್ರೆಸಿಡೆಂಟರಾದ ಶ್ರೀ ಕರವೀರಪ್ಪನವರು ಕುಲಕರ್ಣಿ ಮು. ಪ್ರೆಸಿಡೆಂಟ್ ಧಾರವಾಡ ಇವರು ಪ್ರಸ್ತುತಕ್ಕೆ ಅನುಕರಣವಾಗುವಂತೆ ವಿದ್ಯಾರ್ಥಿ ವೃಂದಕ್ಕೆ ಉಪದೇಶಿಸಿದರು. ಆಗ ಸಮಸ್ತ ಶೈವದವರು ದರ್ಶನಾಶೀರ್ವಾದಗಳಿಗೆ ಪಾತ್ರರಿದ್ದರು,

೨೭-೧೨-೧೯೪೨ } ಸೆಕ್ರೆಟರಿ,
ಧಾರವಾಡ } ಶ್ರೀ. ಮು. ನಿ. ಮು. ಫ್ರೀ. ಬೋರ್ಡಿಂಗ

ಅಖಿಲಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ಬಾಗಲಕೋಟೆ.

ಹಿಂದುಸ್ಥಾನದ ಅನೇಕ ಸ್ಥಳಗಳಲ್ಲಿ ಸ್ವದೇಶಿ ವಸ್ತುಗಳ ಪ್ರದರ್ಶನವು ಜರುಗಿಸಲ್ಪಟ್ಟು ಅವುಗಳ ಮೂಲಕ ಜನರಲ್ಲಿ ಜಾಗೃತೆಯಾಗಿ ಕಲಾಭಿವೃದ್ಧಿಗೆ ಬಹು ಅಂಶದಿಂದ ಪ್ರೋತ್ಸಾಹ ದೊರೆತಿದೆ, ನಮ್ಮ ವಿಜಾಪುರ ಜಿಲ್ಲೆಯಲ್ಲಿ ಇಂಥ ಪ್ರದರ್ಶನದ ಯೋಜನೆಯು ಈ ವರೆಗೂ ಆಗದ್ದರಿಂದ ಇದೇ ಮಾಘ ಶುದ್ಧ ೧೫ ತಾರೀಖು ೧೦-೨-೧೯೪೩ ನೆಯ ದಿವಸ ಸ್ವದೇಶಿ ವಸ್ತುಗಳ ಪ್ರದರ್ಶನ ಸಮಾರಂಭವನ್ನು ನೆರವೇರಿಸುವದಾಗಿ ನಿರ್ಣಯವಾಗಿದೆ.

ರಾಷ್ಟ್ರದ ಸಾಂಪತ್ತಿಕ ಸ್ಥಿತಿಯ ಬೆಳವಣಿಗೆಗೆ ಕಲಾಕೌಶಲ್ಯದ ಅಭಿವೃದ್ಧಿ ಮತ್ತು ಸ್ವದೇಶಿ ವಸ್ತುಗಳ ಉತ್ಪಾದನೆಯೇ ತಳಹದಿಯಾಗಿದೆ. ಅಲ್ಲಲ್ಲಿಯ ಸ್ವದೇಶಿ ವಸ್ತುಗಳ ಕಲಾಕೌಶಲ್ಯ ಮತ್ತು ಅನೇಕ ಸ್ವದೇಶಿ ಮಾಲುಗಳ ಸಂಗ್ರಹ ಇವುಗಳ ಪ್ರದರ್ಶನದಿಂದ ಜನಜಾಗೃತಿಯಾಗಿ ಇವುಗಳು ಊರ್ಜಿತಾವಸ್ಥೆಯನ್ನು ಹೊಂದುವದರಲ್ಲಿ ಏನೂ ಸಂದೇಹವಿಲ್ಲ.

ಅಲ್ಲಲ್ಲಿಯ ಸ್ವದೇಶಿ ಮಾಲಿನ ಉತ್ಪಾದಕರು ಇಂಥ ಸುಸಂಧಿಯನ್ನು ಹೋಗಗೊಡದೆ ತಮ್ಮತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿ ಅವುಗಳ ಪ್ರಸಾರಕ್ಕೆ ಉತ್ತೇಜನಕೊಡಬೇಕಾಗಿ ಇಚ್ಛಿಸುತ್ತೇವೆ,

ಮಾಲುಗಳನ್ನು ಇಡುವದರ ಬಗ್ಗೆ ಸ್ಟಾಲುಗಳ ಯೋಜನೆಯಾಗುವದಿದ್ದು ಅವುಗಳನ್ನು ಕಳುಹುವವರು ೧೯೪೩ನೇ ಜಾನೇವಾರಿ ೨೫ನೇ ತಾರೀಖಿನ ವಳಗಾಗಿ ನಮಗೆ ತಲ್ಪುವಂತೆ ಕಳುಹಿಸಲು ಪ್ರಾರ್ಥನೆ ಇದೆ. ಹೆಚ್ಚಿನಮಾಹಿತಿಯ ಬಗ್ಗೆ ಬರೆದು ಕೇಳಿಕೊಳ್ಳಬೇಕು,

ಮುರಿಗೆಯ್ಯ ಸೋಮಯ್ಯ ಜಂಗಿನ.
ಅಖಿಲಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ
ಬಾಗಲಕೋಟೆ

ತಾ. ೨೫ನೆಯ ದಿವಸ ಟೋಕಿಯೋದಲ್ಲಿ ಭಯಂಕರವಾದ ಬೆಂಕಿ ಹತ್ತಿ ಅದರಲ್ಲಿ ೩೦ ಜನರು ಸುಟ್ಟುಕೊಂಡು ಸತ್ತರು. ಮತ್ತು ೩೦ ಜನರು ಪತ್ತೆಯೇ ಇಲ್ಲದಂತಾಗಿದೆ.

ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಪ್ರತ್ಯೇಕಿಸಬಾರದಾಗಿ ಬ್ರಾಹ್ಮೀ ಕಾಯಿದೆ ಮಂಡಳದಲ್ಲಿ ಗೊತ್ತುಮಾಡಲ್ಪಟ್ಟಿತು.

ಬಯುಲಪುರದಲ್ಲಿ ಆದಿಯೆಂಬ ಸ್ತ್ರೀಯಳು ಮೂರು ಜನ ಹೆಣ್ಣುಮಕ್ಕಳನ್ನು ಒಂದೇ ಸಾರೆ ಹೆತ್ತಳು. ಎರಡು ಅಳಿದು ಒಂದು ಉಳಿದಿದೆಯಂತೆ.

ಬನವಾಸಿಯ ಹತ್ತಿರ ವರದಾ ತೀರದಲ್ಲಿ ಎರಡು ಗಿಜಗನ ಹಕ್ಕಿಗಳು ತಮ್ಮ ಗೂಡಿನಲ್ಲಿ ಗಿಳಿಯಮರಿಯನ್ನಿಟ್ಟಿದ್ದವು. ಅದು ಅಲ್ಲಿಯೇ ಬೆಳೆದು ದೊಡ್ಡದಾಗಿ ಹಾರಿಹೋಯಿತಂತೆ.

ಡಾ. ಆನಿ ಬೆಜಂಟ್‌ರವರು ೧೯೧೪ ರಲ್ಲಿ ಪ್ರಾರಂಭಿಸಿದ "ನ್ಯೂ ಇಂಡಿಯಾ" ಎಂಬ ಪತ್ರವನ್ನು ಕಳೆದ ೨೯ನೆಯ ತಾರೀಖಿನಿಂದ ನಿಲ್ಲಿಸಿದ್ದಾರೆ.

ಸದ್ಯಃ ಶ್ರೀ. ಸುಭಾಷ ಚಂದ್ರ ಬೋಸ್‌ರವರು ಲಖನೌದಲ್ಲಿ ಸಿವ್ಹಿಲ್ ಸರ್ಜನರ ನೇತೃತ್ವದಲ್ಲಿರುವರು. ಇವರು ತಮ್ಮ ಮಿತ್ರರಿಗೆ ಬರೆದ ಒಂದು ಪತ್ರದಲ್ಲಿ ಒಟ್ಟು ೪೯ ಪೌಂಡು ತೂಕ ಕಡಿಮೆಯಾಗಿದೆಯೆಂದು ತಿಳಿಸಿದ್ದಾರೆ.

೫|| ರೂಪಾಯಿಗೆ ಐಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ಹೆಚ್ಚಾಗಿ ಗಳಿಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಅತಿಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

ತಿರುವಾಂಕೂರು ಅಲೈಯನ್ಸ್ ಬ್ಯಾಂಕಿನ

ರೂ. ೫|| **ಬೋನಸ್ ಬಾಂಡ್.** ರೂ. ೫||

ಈ ಒಂದು ಬಾಂಡಿನಿಂದ ರೂ. ೪೦೦೦, ೨೦೦೦, ೧೦೦೦, ಇತ್ಯಾದಿ ಇನಾಮುಗಳನ್ನು ಪಡೆಯಲು

೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧| ಆಣೆಯ ಸ್ಟಾಂಪು ಇಟ್ಟು ಬರೆಯಿರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ. ಎಸ್. ಕುರುವತ್ತಿ ದಾವಣಗೆರೆ.

ಭಾಸ್ಕರ ಪ್ರಕಾರ—ಬಟ್ಟೆ ಸ್ವಚ್ಛವಾಗುವ ೧೨ ಚೀಟು ೮ ಆಣೆ

ಮಾಸ್ಕಿಟೊರಿಯಲ್—ಗುಂಗಾಡ ನಾಶ ೧೨ ಚೀಟು ೮ ಆಣೆ

ಚೇಳಿನ ನಾರ—೧೨ ಚೀಟು ೬ ಆಣೆ.

ತಗಣೆಯ ಶತ್ರು—ಒಂದು ಬಾಟ್ಲಿ ೮ ಆಣೆ.

ಎಲ್ಲ ಮಾಲಿನ ನಮೂನೆ ೧ ರೂಪಾಯಿ ವ್ಹಿ. ಪಿ. ಯಿಂದಾ ೧೯೩೩ ಕ್ಯಾಲೆಂಡರ್ ಸಹ ಮನೆ ಸೇರುವದು.

ಭಾಸ್ಕರ ಪ್ರಕಾಶ ವರ್ಕ್ಸ್,
ಪೋ. ಹಂಚಲಿ.
ಜಿ. ವಿಜಾಪುರ.

ಶ್ರೀ ಸಂಗಮೇಶ್ವರ ಪ್ರಸನ್ನ.

ಶುದ್ಧ ಖಾದಿ! ಶುದ್ಧ ಖಾದಿ!!

ಶ್ರೀ ಹುಪ್ಪಳದ ಶಿವಸಂಗಪ್ಪನವರ ನೇತೃತ್ವದಲ್ಲಿ ತಯಾರಿಸಲ್ಪಟ್ಟ ಅತ್ಯುತ್ತಮವಾದ ಎಲ್ಲ ತರಹದ ಶುದ್ಧ ಖಾದಿ ಬಟ್ಟೆಗಳು ಈ ಕೆಳಗಿನ ಕಾರ್ಯಾಲಯದಲ್ಲಿ ಯೋಗ್ಯ ಬೆಲೆಗೆ ದೊರೆಯುವವು. ಖಾದಿ ಭಕ್ತರು ಜಾಗ್ರತೆ ತರಿಸಿಕೊಳ್ಳಬೇಕು.

ಶ್ರೀ ಸಂಗಮೇಶ್ವರ ಖಾದಿ ಕಾರ್ಯಾಲಯ
ಬಾಗಲಕೋಟೆ.

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪-೦-೦
೨೫ ,, ಯುರೋಪ ,, ,, ೫-೦-೦
೨೫ ,, ಹೂವಿನ ಬೀಜಗಳು ೫-೦-೦

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦-೦-೦

ನಿಂಬೆ, ಕೊಡಗು ಕಿತ್ತಳೆ, ಚೀನೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಲೇನ್ನ, ಸಿಟ್ರೇಸ್, ಅಂಜೂರ, ದ್ರಾಕ್ಷಿ ಗಿಡಗಳು ಡಜನ್ ೧ಕ್ಕೆ ೯-೦-೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾಶಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರ ಸಿಟಿ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಟ್ರ ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚ ನೀ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಹಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ. ಇಂಥಾದಕ್ಕೆ ಮೋಸ ಹೋಗಿ ಹೀಂಗಾತಪ್ಪಾ.

ರಾಮುಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಹೇಗಾದರಿವಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತು ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯು ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶರಣಸಂದೇಶ ಪತ್ರಿಕೆಯ ಚಂದಾದಾರರಿಗೆ ಮಾತ್ರ

ಬಹು ಅನುಕೂಲ ! ಬಹು ಪ್ರಯೋಜನ!!

ಕನ್ನಡ ಭಾಷೆಯಲ್ಲಿ ಅಪೂರ್ವವಾದ

“ವ್ಯಾಪಾರ ಶಿಕ್ಷಕ.”

ಈ ಪುಸ್ತಕವು ಶರಣ ಸಂದೇಶ ಪತ್ರಿಕೆಯ ಎರಡನೆಯ ವರ್ಷದ ಚಂದಾದಾರರಿಗೆ ಮಾತ್ರ ಉಚಿತವಾಗಿ ಕೊಡಲ್ಪಡುವುದು.

ಬೇರೆಯವರಿಗೆ ಈ ಪುಸ್ತಕವು ಕ್ರಯಕ್ಕು ಕೂಡಾ ದೊರೆಯುವುದಿಲ್ಲ.

ಆದುದರಿಂದ ಈ ಪತ್ರಿಕೆಗೆ ಎರಡನೆಯ ವರುಷ ತಪ್ಪದೇ ಚಂದಾದಾರರಾಗಿರಿ.

ಈ ಪುಸ್ತಕದಲ್ಲಿ ವ್ಯಾಪಾರಿಗಳಿಗೆ ಅತ್ಯವಶ್ಯಕವಾಗಿರತಕ್ಕ ಹಿಂದುಸ್ಥಾನದ ಎಲ್ಲ ಮಹತ್ವದ ಸಂಗತಿಗಳನ್ನೂ ವಿವರಿಸಿದೆ.

ವ್ಯಾಪಾರಿಗಳಿಗೆ ಇದು ಬಹು ಪ್ರಯೋಜನವನ್ನುಂಟುಮಾಡಿಕೊಡುವುದು.

ಈ ಪುಸ್ತಕವು ವ್ಯಾಪಾರಿಗಳಿಗೆ ಹೊಸ ದೃಷ್ಟಿಯನ್ನೇ ಉಂಟುಮಾಡಿ ಕೊಡುವುದು.

ಮ್ಯಾನೇಜರ್— “ಶರಣ ಸಂದೇಶ” ಪೋ. ಆಲಮಟ್ಟಿ.
(ಜಿ. ವಿಜಾಪುರ.)

REGISTERED No. B. 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರ| ದಾಕ್ಷಿಣ್ಯಪರ ನಾನಲ್ಲ| ಲೋಕವಿರೋಧಿ| ಶರಣನಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ಮ. ೨೨೮ ॥ ಮಹಾನುಭಾವ ಬಸವಣ್ಣನವರು.

ಪಾದಕರು:- ಬಿಡಿಸಂಚಿಕೆಗೆ ೧ ಆಣೆ.
ಶ್ರೀ. ಹರ್ಡೇಕರ ಮಂಜಪ್ಪನವರು, ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ ರು

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨. | ಆಲಮಟ್ಟಿ- ಸೋಮವಾರ ತಾರೀಖು ೧೩ ನೆಯ ಮಾರ್ಚ ೧೯೩೩. | ಸಂಚಿಕೆ .

ಜನಸೇವೆಯೇ ದೇವರ ಸೇವೆ

ಶುಭ್ರ ಪತ್ರಿಕೆಯ ಪ್ರಕಟನೆ.

ಹಿಂದುಸ್ಥಾನಕ್ಕೆ ಮುಂದೆ ಬರುವ ಸ್ವರಾಜ್ಯದ ಮುಖ್ಯಾಂಶವನ್ನು ಸೂಚಿಸುವ ಶುಭ್ರ ಪತ್ರಿಕೆಯು

ಈ ತಿಂಗಳ ೧೭ನೆಯ ತಾರೀಖಿನ ದಿನ ಹಿಂದುಸ್ಥಾನದಲ್ಲಿ ಪ್ರಕಟವಾಗುವುದು.

ಪಾರ್ಲಿಮೆಂಟಿನಲ್ಲಿ ತಾ. ೧೭ರಿಂದ ೪ ದಿವಸ ಈ ಶುಭ್ರ ಪತ್ರಿಕೆಯ ಚರ್ಚೆಯಾಗುವುದು.

ದೇವಾಲಯ ಪ್ರವೇಶದ ಗೊತ್ತುವಳಿಯನ್ನು

ಶ್ರೀಮಾನ್ ರಂಗ ಅಯ್ಯರವರು ಇದೇ ತಿಂಗಳು ೨೪ನೆಯ ತಾರೀಖಿನ ದಿನ ಅಸೆಂಬ್ಲಿಯಲ್ಲಿ ತರುವರು.

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315

ಕಳ್ಳರ ಭಯವಿಲ್ಲ ! ಬೆಂಕಿಯ ಕಾಟವಿಲ್ಲ!!

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ

ಎಂಡ್ ಸನ್ಸ್

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ್

ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ.

ಬ್ರ್ಯಾಂಚ್ ಆಫೀಸ್ ಬೆಳಗಾವ ಪಿಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ದಾಗಿನೆ ಮತ್ತು ಹಸ್ತಪತ್ರಿ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ನಕ್ಷ ಪರೀಕ್ಷೆಯು ತಾ. ೨೪ನೇ ಡಿಸೆಂಬರ ೧೯೩೧ನೇ ಇಸವಿ ದಿವಸ ನಡೆದ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ಸಂಕಿ ಒಂದು ಸರ ವಳಿ ಜತಿ ಒಂದು ಹತ್ತು ರೂಪಾಯದ ನೋಟು ಒಂದು ನಂ. K. 11, 57015.3 ಇನ್ನಗನ್ನು ಅಧ್ಯಕ್ಷರಾದ ಶ್ರೀಯುತ ಶಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಸೋಲ್ಕಂಡ ಸಾಮಾನುಗಳನ್ನು ಇಟ್ಟು ೧॥ ಗಂಟೆ—

—ಕಟ್ಟಿಗೆಯಲ್ಲಿ ೧॥ ತಾಸಿನ ವರೆಗೆ (೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಜಿನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟ ಬಳಿಕ ನಕ್ಷತ್ರ ಮತ್ತು ಪತ್ರ ಗಳನ್ನು ತೆಗೆಸಿದರು ... ಪ್ರದರ್ಶನದವರು ... ಕೆ. ... ಕಾರ್ಯಾಲಯ ... ಹೊಂದಿದೆ.

ಇದಕ್ಕಿಂತ ... ನಗಿಗೆ ... ಉತ್ತಮತರವಾದ ತ್ರಿಜೂರಿ ... ಮಾಡಿ ಮತ್ತು ... ಮತ್ತು ತಿಜೋರಿಗೆ ಹಾಕುವ ಯಾವತ್ತು ... ಗಳನ್ನು ... ಸಾಮಾನುಗಳನ್ನು ಉತ್ತಮ ಕಬ್ಬಿಣ ಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಪದೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಮಾರ್ಚ ತಾರೀಖು ೧೪ನೆಯ ಸೋಮವಾರ | ಸಂಚಿಕೆ ೪೦.

ಶುಭ್ರ ಪತ್ರಿಕೆಯಲ್ಲೇನಿದೆ?

ವರ್ಹಾಡದ ಗತಿಯೇನು?

ಇದೇ ಬರುವ ೧೭ನೆಯ ತಾರೀಖಿನ ದಿವಸ ಶುಭ್ರ ಪತ್ರಿಕೆಯು ಪ್ರಕಟವಾಗುವುದಷ್ಟೆ. ಅದರಲ್ಲೇನಿದೆಯೆಂಬುದನ್ನು ತಿಳಿದುಕೊಳ್ಳಬೇಕೆಂದು ಬಹುಜನರು ಆತುರಪಡುತ್ತಿರುವುದು ಸ್ವಾಭಾವಿಕವು.

ಫ್ರೀ ಪ್ರೆಸ್ ಪತ್ರಿಕೆಯ ವಾರ್ತಾದಾಯಕರಿಗೆ ತಿಳಿದ ಸಂಗತಿಗಳನ್ನು ಅವರು ಈ ಪ್ರಕಾರ ಪ್ರಕಟಿಸಿದ್ದಾರೆ.

"ದಿಲ್ಲಿಗೆ ಶುಭ್ರಪತ್ರಿಕೆಯು ಈಗಾಗಲೇ ಬಂದಿದೆ. ಪ್ರತಿಯೊಂದು ಪ್ರಾಂತದ ಮುಖ್ಯಸ್ಥಳಕ್ಕೂ ಇದು ಹೋಗಿದೆ. ಹಿಂದುಸ್ಥಾನದಲ್ಲೆಲ್ಲಾ ತಾರೀಖು ೧೭ನೆಯ ದಿವಸ ಪ್ರಕಟವಾಗುತ್ತದೆ. ಇದು ಬಹು ದೊಡ್ಡದಾಗಿದೆ. ಇದರಲ್ಲಿ ೨೦೦ ಪ್ಯಾರಿಗ್ರಾಫ್ ಇವೆ.

ಇದರಲ್ಲಿ ಪ್ರಾಂತಿಕ ಮತ್ತು ಫೆಡರಲ್ ಎಂದರೆ ಸಂಯುಕ್ತ ರಾಜ್ಯಭಾರದ ಎಲ್ಲ ಮುಖ್ಯ ಸಂಗತಿಗಳನ್ನೂ ವಿವೇಚಿಸಿದ್ದಾಗಿದೆ.

ವರ್ಹಾಡ, ಸಿಂಧ, ಓರಿಸಾ ಪ್ರಾಂತಗಳ ಸಂಬಂಧವಾಗಿಯೂ ವಿವರಿಸಿದೆ. ನವೀನ ಸಂಯುಕ್ತ ಹಿಂದುಸ್ಥಾನದಲ್ಲಿ ವರ್ಹಾಡ ಪ್ರಾಂತವನ್ನು ಪ್ರತ್ಯೇಕ ಅಂಗವಾಗಿಟ್ಟದ್ದಾಗಿದೆ. ಇದರ ಮೇಲೆ ನೈಜಾಮರ ಸಾರ್ವಭೌಮತ್ವವನ್ನೇ ಮಾನ್ಯಮಾಡಿದ್ದಾಗಿದೆ.

ನಿಜಾಮರ ರಾಜವಂಶಜರಲ್ಲಿಯೇ ಒಬ್ಬರನ್ನು ವರ್ಹಾಡದ ಗವ್ಹರ್ನರನ್ನು ಮಾಡಿ ನಿಜಾಮರ ಯುವರಾಜರನ್ನೇ ಈ ಪ್ರಾಂತದ ಯುವರಾಜರೆಂದು ತಿಳಿಯಲಾಗುವದು.

ಡಾ. ಸಪ್ರುರವರನ್ನು ವ್ಹಾಯಿಸ್‌ರಾಯರು ಕರೆಸಿದ್ದರು. ಈ ಶುಭ್ರಪತ್ರಿಕೆಯ ಸಂಬಂಧವಾಗಿ ವಿಚಾರವಿನಿಮಯವಾಗಿರಬೇಕೆಂದು ಊಹೆ. ಇದೇ ೧೪ ನೆಯ ತಾರೀಖಿನ ದಿವಸ ಭಾರತೀಯ ಸಂಸ್ಥಾನಿಕರನ್ನು ದಿಲ್ಲಿಯಲ್ಲಿ ಕೂಡಿಸಿ ಈ ಶುಭ್ರಪತ್ರಿಕೆಯ ವಿಷಯವಾಗಿ ಸರಕಾರವು ಆಲೋಚಿಸುವುದಾಗಿದೆ.

ಜಾಯಿಂಟ್ ಪಾರ್ಲಿಮೆಂಟರಿ ಕಮೀಟಿಗೆ ಡಾ. ಸಪ್ರು ಮೊದಲಾದ ಹತ್ತು ಜನ ಪ್ರಮುಖರನ್ನು ಬ್ರಿಟಿಶ್ ಹಿಂದುಸ್ಥಾನದ ಪರವಾಗಿಯೂ ೫ ಜನರನ್ನು ಸಂಸ್ಥಾನಗಳ ಪರವಾಗಿಯೂ ಆರಿಸಿದ್ದಾರೆಂದು ಸುದ್ದಿಯಿದೆ.

ಚೀನ ಜಪಾನಗಳ ಘೋರ ಯುದ್ಧ!

ಜಪಾನ ಸೈನ್ಯವು ಚೀನದೇಶದ ಜೆಹೋಲ ಪ್ರಾಂತವನ್ನು ತೆಗೆದುಕೊಂಡದ್ದರಿಂದ ಚೀನ ದೇಶಕ್ಕೆ ತುಂಬಾ ಚಿಂತೆಯುಂಟಾಗಿದೆ. ಚೀನ ದೇಶದ ಮುಖ್ಯ ಮಂತ್ರಿಗಳು ಮತ್ತು ಸೇನಾಧಿಪತಿಗಳು ಸೇರಿ ಮುಂದಿನ ಸ್ಥಿತಿಯ ವಿಷಯವಾಗಿ ಆಲೋಚಿಸಿದರು.

ಜನರಲ್ ಸುಲಿಯಾಂಗ್ ಎಂಬುವವರು ಈ ಕಠಿಣ ಕಾಲದಲ್ಲಿ ಕೆಲಸಕ್ಕೆ ರಾಜಿನಾಮೆ ಕೊಡುವುದು ಯುಕ್ತವಲ್ಲವೆಂತಲೂ ಇವರ ಈ ನಿವೃತ್ತಿ ಪತ್ರಿಕೆಯನ್ನು ಮಾನ್ಯಮಾಡಕೂಡದೆಂತಲೂ ಮಂತ್ರಿಮಂಡಲದವರು ನಿರ್ಧರಿಸಿ ಜೆಹೋಲ ಪ್ರಾಂತವನ್ನು ಪುನಃ ಸ್ವಾಧೀನಪಡಿಸಿಕೊಳ್ಳಲು ೬೦ ಸಾವಿರ ಸೈನ್ಯವನ್ನು ಕಳುಹಿಸಬೇಕೆಂದು ಗೊತ್ತು ಮಾಡಿದ್ದಾರೆ.

ಜೆಹೋಲ ಪ್ರಾಂತದಲ್ಲಿ ಮುಂದೆ ಘನಘೋರಯುದ್ಧವಾಗುವುದು. ಜಪಾನಿಗಳು ಅದನ್ನು ಬಿಡಕೂಡದೆಂದು ಬಹು ಸಿದ್ಧತೆಯಲ್ಲಿದ್ದಾರೆ. ಚೀನ ಸೈನ್ಯವಾದರೋ ಜೆಹೋಲ ಪ್ರಾಂತವನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ವಸ್ವವನ್ನು ಸೂರೆಮಾಡಲು ಸಿದ್ಧವಾಗಿದೆ. ಆದಕಾರಣ ಈ ಭಾಗದ ಜಯಾಪಜಯಗಳ ಮೇಲೆಯೇ ಚೀನ ಜಪಾನಗಳ ಯುದ್ಧದ ಪರ್ಯವಸಾನವು ಅವಲಂಬಿಸಿದೆ.

ಪ್ರಕಟನೆ.

ದಿ ಗಾಯಿಡ ರೇಲ ರೋಡ ಫೀಡರ್ ಲಾಯನ್ಸ್ ಕಂಪನಿ ಲಿಮಿಟೆಡ್ ಆಲಮಟ್ಟಿ,

(ಜಿ. ವಿಜಾಪುರ)

ಅಧಿಕೃತ ಭಾಂಡವಲ ೮,೦೦,೦೦೦ (ಎಂಟು ಲಕ್ಷ) ರೂಪಾಯಿ ೧೯೧೩ನೇ ಇಸವಿಯ ಇಂಡಿಯನ್ ಕಂಪನಿ ಆಕ್ಟ ನಂಬರ ೧೩ನೇಪ್ರಕಾರ ರಜಿಸ್ಟರ ಆಗಿರುತ್ತದೆ.

ಸದರ್ನ ಮರಾಠಾ ರೇಲ್ವೆಯ

(೧) ಆಲಮಟ್ಟಿ ಸ್ಟೇಶನದಿಂದ ಮುದ್ದೇಬಿಹಾಳ ಮೇಲಿಂದ ಹಾಯ್ದು ತಾಳೀಕೋಟಿ ವರೆಗೆ ಸುಮಾರು ೩೩ ಮೈಲು ಮತ್ತು (೨) ಬಾಗಲಕೋಟೆ ಸ್ಟೇಶನ್ನಿನಿಂದ ಕಮತಗಿ ಅಮೀನಗಡ ಮತ್ತು ಹುನಗುಂದ ವ್ಯಾಪಾರೀ ಸ್ಥಳಗಳ ಮೇಲಿಂದ ಹಾಯ್ದು ಇಲಕಲ್ಲದ ವರೆಗೆ ಸುಮಾರು ೪೦ ಮೈಲ

ಈ ಪ್ರಕಾರ ೨ ಶಾಖೆಗಳನ್ನು ಸುಲಭ ಮತ್ತು ಅಲ್ಪ ಖರ್ಚಿನಿಂದ ಗಾಯಿಡ್‌ರೇಲ್ ರೋಡುಗಳನ್ನು ಹಾಕಿ, ಇಂಥ ವ್ಯಾಪಾರ ಸ್ಥಳಗಳ ಮತ್ತು ರೇಲ್ವೆ ಸ್ಟೇಶನುಗಳಿಂದ ದೂರ ಇರುವ ದೊಡ್ಡ ಮತ್ತು ಮಹತ್ವವಾದ ಊರುಗಳಿಗೆ ಮತ್ತು ಆಯಾಯ ಊರುಗಳಿಂದ ತಿರುಗಿ ಪ್ರವಾಸಿಕರನ್ನೂ, ಮಾಲುಗಳನ್ನೂ ಅಲ್ಪ ಖರ್ಚಿನಲ್ಲಿ ಹಾಗೂ ಅಲ್ಪವೇಳೆಯಲ್ಲಿ ಒಯ್ಯುವ ಮತ್ತು ತರುವುದಕ್ಕಾಗಿ ಈ ಕಂಪನಿಯು (ಸಂಘವು) ಸ್ಥಾಪಿಸಲ್ಪಟ್ಟಿದೆ.

ಈ ರೀತಿಯಿಂದ ಗಾಯಿಡ ರೇಲ ರೋಡದಿಂದ ಪ್ರವಾಸಿಕರನ್ನೂ ಮತ್ತು ಸರಕುಗಳನ್ನೂ ರೇಲ್ವೆಯಿಂದ ಇಷ್ಟುದೂರ ಇರುವ ವ್ಯಾಪಾರೀ ಸ್ಥಳಗಳಿಗೆ ಒಯ್ಯುವದು ಮತ್ತು ತರುವದು ಆದಲ್ಲಿ ಅತ್ತಕಡೆಗೆ ವ್ಯಾಪಾರವು ಹೆಚ್ಚಾಗಿ ಹಿಂದುಳಿದ ಆ ಭಾಗಗಳಿಗೆ ದಿನೇದಿನೇ ಅಭ್ಯುದಯವು ಉಂಟಾಗುವದು.

ಈ ಕಂಪನಿಯ ಸೇರುಗಳನ್ನು ತಕ್ಕೊಂಡರೆ ಅವುಗಳಮೇಲಿನ ಲಾಭವು ದರ ಒಂದುನೂರಕ್ಕೆ ದರ ಒಂದು ವರ್ಷಕ್ಕೆ ೮ ರೂಪಾಯಿಕ್ಕಿಂತ ಕಡಿಮೆ ಬೀಳಲಿಕ್ಕಿಲ್ಲವೆಂದು ಅಂದಾಜ ಅದೆ. ಮಾತ್ರ ಈ ಗಾಯಿಡ ರೇಲ ರೋಡದ ಮೇಲೆ ಸಾರ್ವಜನಿಕ ಉಪಯೋಗದ ದೆಶೆಯಿಂದ ಗಾಡಿಗಳು ಸುರು ಆದ ತಾರೀಖಿನಿಂದ ಫಾಯಿದೆಯು ಆಕರಿಸುವದರಲ್ಲಿ ಬರುವದು.

ಒಂದು ನೂರು ರೂಪಾಯಿಯ ಸೇರುಗಳು ೬ (ಆರು) ಸಾವಿರ ತೆಗೆಯಲ್ಪಟ್ಟಿವೆ. ಮತ್ತು ಹತ್ತು ರೂಪಾಯಿಯ ೨೦ (ಇಪತ್ತು) ಸಾವಿರ ಶೇರುಗಳು ತೆಗೆಯಲಟ್ಟಿವೆ.

ಪ್ರತಿಯೊಂದು ನೂರು ರೂಪಾಯಿ ಶೇರಿನ ಬಗ್ಗೆ ಅರ್ಜಿ ಕೂಡ ೪೦ ರೂಪಾಯಿ, ಮುಂದೆ ೨ ತಿಂಗಳ ನಂತರ ೩೦ ರೂಪಾಯಿ, ಆ ಮೇಲೆ ಮತ್ತೂ ೨ ತಿಂಗಳ ನಂತರ ೨೦ ರೂಪಾಯಿ ಅನಂತರ ೨ ತಿಂಗಳಾದ ಮೇಲೆ ಉಳಿದ ೧೦ ರೂಪಾಯಿ ಕೊಡತಕ್ಕದ್ದು.

ಈಗಿನ ಕಾಲದಲ್ಲಿ ಎಲ್ಲತರದ ಹಳೇ ಧಂದೆಗಳೂ (ಗಿರಣಿಗಳೂ ಮೋಟರ ನಡೆಯಿಸುವದೂ, ವಗೈರೆ) ಬಹಳಾದ್ದರಿಂದ ಮತ್ತು ಒಬ್ಬರ ಮೇಲೊಬ್ಬರ ಮೇಲಾಟದಿಂದ ಲುಕ್ಸಾನದ ಮಾರ್ಗಕ್ಕೆ ಹತ್ತಿರುತ್ತವೆ. ಇಂಥ ವೇಳೆಯಲ್ಲಿ ಇಡೀ ಹಿಂದುಸ್ಥಾನಕ್ಕೆ ಉದಾಹರಣೆಯಾಗುವಂತೆ ದೊಡ್ಡದೊಡ್ಡ ರೇಲ್ವೆಗಳಿಗೆ ಈ ಗಾಯಿಡ ರೇಲ ರೋಡದ ಶಾಖೆಗಳನ್ನು ತಯಾರಮಾಡಿ ಆಗದಿ ಹೊಸದಾದಂಥ ಒಂದು ಧಂದೆಯನ್ನು ಜನರ ಮುಂದೆ ಇಡಬೇಕೆಂದು ಈ ಕಂಪನಿಯ ಉದ್ದೇಶವಿರುತ್ತದೆ. ಇಂಥ ರೇಲ್ವೆಗಳಲ್ಲಿ ಮಿತವ್ಯಯೀ ಜನರಿಗೆ ಮತ್ತು ಭಾಂಡವಲವಿದ್ದವರಿಗೆ ತಮ್ಮ ಭಾಂಡವಲವನ್ನು ಫಾಯಿದೇಶೀರ ರೀತಿಯಿಂದ ತೊಡಗಿಸಲಿಕ್ಕೆ ಸಾಕಷ್ಟು ಆಸ್ಪದವಿರುತ್ತದೆ. ಮತ್ತು ಅನುದ್ಯೋಗಿ ಜನರಿಗೆ ಬೇಕಾದಷ್ಟು ಕೆಲಸ ಸಿಗಲಿಕ್ಕೆ ಸಮಯವಿರುತ್ತದೆ.

ಮೇಲಾಗಿ ಈ ಪ್ರಕಾರ ತಯಾರ ಮಾಡಿದ ಗಾಯಿಡ ರೇಲ ರೋಡದ ಎಲ್ಲ ಹಕ್ಕುಗಳು ರೇಲ್ವೆಗಳಂತೆ ಸಾರ್ವಜನಿಕವಾಗುವವು. ಹೊಸತರದ ಮತ್ತು ಅಲ ಖರ್ಚಿನಿಂದ ಆಗುವ ಈ ಗಾಯಿಡ ರೇಲ ರೋಡುಗಳ ಶಾಖೆಗಳನ್ನು ತಯಾರ ಮಾಡುವುದೂ ಅವುಗಳನ್ನು ನಡಿಸುವುದೂ ಮುಂತಾದ ಎಲ್ಲತರದ ವ್ಯವಸ್ಥೆಗಳು ಶೇರ ಹೋಲ್ಡರರ ಕೈಯಲ್ಲಿಯೇ ಇರುವವು.

ಆದ್ದರಿಂದ ಎಲ್ಲಜನರಿಗೆ ಈ ಕಂಪನಿಯ ಡಾಯರೆಕ್ಟರರ ಆಗ್ರಹದ ವಿನಂತಿ ಏನಂದರೆ—

ಎಲ್ಲರೂ ಏಕಮನಸ್ಸಿನಿಂದ ಈ ಲೋಕೋಪಯೋಗದ ಕೆಲಸಕ್ಕೆ ಸೇರುಗಳನ್ನು ಯಥಾಶಕ್ತಿ ತಕ್ಕೊಂಡು ಸಹಾಯಮಾಡಬೇಕು.

ಕಂಪನಿ 'ಪ್ರಾಸ್ಪೆಕ್ಟಸದ' ಶೇರುಗಳನ್ನು ತಕ್ಕೊಳ್ಳಬೇಕಾಗುವ ಅರ್ಜಿ ನಮೂನೆಗಳ ದಶೆಯಿಂದ ದಿ. ಮ್ಯಾನೇಜಿಂಗ ಡಾಯರೆಕ್ಟರ ಆಲಮಟ್ಟಿ ಜಿಲ್ಹಾ ವಿಜಾಪೂರ ಇವರಿಗೆ ಬರೆದು ತರಿಸಿಕೊಳ್ಳಬೇಕು.

ಆಲಮಟ್ಟಿ. (**ಸಿ. ಸ್ಕೆಲ್ಟರ್**
ತಾ. ೧೨-೧-೧೯೩೩. (**ಮ್ಯಾನೇಜಿಂಗ್ ಡಾಯರೆಕ್ಟರ್.**

ಬೇಕಾಗಿದೆ.

ಇಂಗ್ಲೀಷ ಇಂಟರ ಪಾಸಾದವರು ಅಥವಾ ಬಿ. ಎ. ಫೇಲ್ ಇದ್ದ ವೀರಶೈವ ಶಿಕ್ಷಕರು ಬೇಕಾಗಿದೆ. ಇವರಿಗೆ ಕನ್ನಡ ಚನ್ನಾಗಿ ಬರಬೇಕು. ಮರಾಠಿಯೂ ತಕ್ಕಮಟ್ಟಿಗೆ ಬರುತ್ತಿರಬೇಕು. ಅವರು ಸದ್ಗುಣಿಗಳಿದ್ದು ಯಾವ ಕೆಟ್ಟ ಚಟಗಳಿಗೊಳಗಾಗದವರಿರಬೇಕು. ಮತ್ತು ಈಗಿನ ಧಾರ್ಮಿಕ ಕ್ರಾಂತಿಯಲ್ಲಿ ಸೇರದವರಿರಬೇಕು. ವೇತನವನ್ನು ಅವರ ಕರ್ತೃತ್ವ ಶಕ್ತಿಯ ಪ್ರಕಾರ ೩೫-೪೦ರ ವರೆಗೆ (ಊಟ ಕೊಟ್ಟು) ಕೊಡಲಾಗುವದು. ಪ್ರಸಂಗದಿಂದ ಹೆಚ್ಚಾದರೂ ಮಾಡಲಾಗುವದು. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಸಮಕ್ಷಮ ಬಂದಾಗಲಿ ಅಥವಾ ಪತ್ರವ್ಯವಹಾರದಿಂದಾಗಲಿ ತಿಳಿದುಕೊಳ್ಳಬೇಕು.

ವಿಳಾಸ—

ಸೆಕ್ರೆಟರಿ, ಶ್ರೇಣೀ ವೀರಶೈವ ವಿದ್ಯಾನಿಲಯ ರಂಜೇರಿ
ಪೋ.- **ಹಳಿಖೇಡ**, ಜಿಲ್ಹಾ- **ಗುಲಬರ್ಗಾ.**

ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು. ೨. ಕನ್ಯೆಯ ವಯಸ್ಸು ೧೪ ಅಥವಾ ೧೫ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ಶಿಕ್ಷಣ ಪಡೆಯದಿದ್ದರೂ ಚಿಂತೆಯಿಲ್ಲ. ಶರಣರ ವಚನಗಳನ್ನು ಸ್ವಲ್ಪಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೪ ವಿದ್ಯಾವಂತನು, ವೀರಶೈವನು, ದೀಕ್ಷಾಬಳಿಕೆ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ವೀರಶೈವರ ಆವ ಪಂಗಡದವರಾದರೂ ಪ್ರಯತ್ನಿಸಬಹುದು. ೬. ಪಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು. ಶಕ್ಯವಿದ್ದರೆ ಕನ್ಯೆಯ ಫೋಟೊ ಕಳಿಸಬೇಕು.

ಪತ್ತೆ—**ಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲ್‌ಸ್ಕೂಲ್**
ಪೋ. ನಾರಾಯಣಪೇಟ. ನಿಜಾಂ ಸಂಸ್ಥಾನ
ತಾ. ಮಕ್ತಲಿ ಜಿ. ಮಹಾಬೂಬನಗರ.

ಮೈಸೂರು ಪ್ರಜಾಪಕ್ಷದ ತೃತೀಯ ಸಮ್ಮೇಳನ.

(ಸ್ವಾಗತ ಸಮಿತಿ.)

ಅಧ್ಯಕ್ಷರು
ಡಿ. ಎಸ್. ಮಲ್ಲಪ್ಪ ಎಂ. ಎಲ್. ಸಿ.

ಉಪಾಧ್ಯಕ್ಷರು.
ಚನ್ನಪ್ಪ ಬಿ. ಎ. ಬಿ.ಎಲ್., ಎಂ.ಎಲ್. ಸಿ.
ಯಜಮಾನ್ ಸಿದ್ಧಪ್ಪ ಯಂ. ಆರ್. ಎ.
ಕೆ. ನಾರಾಯಣಶೆಟ್ಟಿ ಯಂ, ಆರ್. ಎ.

ಕೋಶಾಧ್ಯಕ್ಷರು
ಟಿ. ಎನ್. ಕೆಂಪಹೊನ್ನಯ್ಯ
ಆರ್. ವೆಂಕಟರಾವ್.

ಕಾರ್ಯದರ್ಶಿ
ಟಿ. ಗುರುನಂಜಯ್ಯ ಬಿ. ಎ. ಬಿ. ಎಲ್,

ಸಹಾಯ ಕಾರ್ಯದರ್ಶಿಗಳು.
ಟಿ. ಜಿ. ಗುಬ್ಬಿ ಪುಟ್ಟಯ್ಯ.
ಬಿ. ಮಲ್ಲಪ್ಪ

ತುಮಕೂರು,
ತಾ. ೨೬-೨-೩೩.

ಮಹಾಶಯ !

ನಮ್ಮ ಪಕ್ಷದ ೩ನೇ ಸಮ್ಮೇಳನವು ತುಮಕೂರಿನಲ್ಲಿ ೧೯-೩-೧೯೩೩ ನೇ ಭಾನುವಾರ **ಶ್ರೀ ಕೃಷ್ಣ ಸಿನೇಮಾ ಮಂದಿರ**ದಲ್ಲಿ ನೆರವೇರುವಂತೆ ನಿರ್ಧರವಾಗಿದೆ. ಸ್ವಾಗತ ಸಮಿತಿಯ ಬೇಡಿಕೆಯನ್ನು ಅಂಗೀಕರಿಸಿ ಮದ್ರಾಸ್ ಸರಕಾರದ ಮಾಜಿ ಪ್ರಧಾನ ಮಂತ್ರಿಗಳಾದ ಆನರೆಬಲ್ ದಿವಾನ್ ಬಹದ್ದೂರ್ ಬಿ. ಮುನಿಸ್ವಾಮಿ ನಾಯುಡು, ಬಿ. ಎ., ಬಿ. ಎಲ್. ಎಂ. ಎಲ್. ಸಿ. ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವರು. ಬೆಂಗಳೂರು ಪೌರ ಸಭೆಯ ಮಾಜಿ ಅಧ್ಯಕ್ಷರಾದ ಶ್ರೀಮಾನ್ ಪಿ. ಸುಬ್ಬರಾಮ ಶೆಟ್ಟಿ. ಎಂ. ಎಲ್. ಸಿ. ಯವರು ಅಧ್ಯಕ್ಷಸ್ಥಾನವನ್ನಲಂಕರಿಸುವರು. ಮೇಲಾಗಿ ಅತಿ ಮಹತ್ವದ ಪ್ರಶ್ನೆಗಳು ಚರ್ಚಿತವಾಗುವುದರಿಂದಲೂ, ಹೊರನಾಡಿನ ರಾಜಕೀಯ ರಂಗದ ನಾಯಕರು ಬರುವುದರಿಂದಲೂ ಸಮ್ಮೇಳನವು ಬಹು ಕಳಕಳಿಯಿಂದ ಜರುಗುವುದೆಂಬ ಭರವಸೆಯಿದೆ.

ನಮ್ಮ ಪಕ್ಷದ ಪ್ರಥಮ ಸಮ್ಮೇಳನವು ಚನ್ನಪಟ್ಟಣದಲ್ಲಿಯೂ ದ್ವಿತೀಯ ಸಮ್ಮೇಳನವು ಮೈಸೂರಿನಲ್ಲಿಯೂ ಯಶಸ್ವಿಯಾಗಿ ನಡೆದು ಆಗ ಕಂಡುಬಂದ ಅಭಿಮಾನ ಉತ್ಸಾಹಗಳಿಂದ ನಾವು ಧೈರ್ಯಗೊಂಡು ಈ ತೃತೀಯ ಸಮ್ಮೇಳನವನ್ನು ನಮ್ಮೂರಿನಲ್ಲಿ ನಡೆಸುವ ಸಾಹಸಕ್ಕೆ ಕೈ ಹಾಕಿರುವೆವು.

ಮಹಾಶಯ! ನಮ್ಮೀ ಪಕ್ಷವು ಸ್ಥಾಪಿತವಾಗಿ ಈಗ್ಗೆ ಸುಮಾರು ಮೂರು ವರುಷಗಳಾದರೂ ಇಷ್ಟು ಅಲ್ಪಾವಧಿಯಲ್ಲಿ ಅದು ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿಯೂ ಮತ್ತು ದೇಶಮಧ್ಯದಲ್ಲಿಯೂ ಮಾಡಿರುವ ಜನಸೇವೆಯ ಯೋಗ್ಯತೆಯು ತಮಗೆ ತಿಳಿಯದೆ ಇಲ್ಲ. ಈ ಗಣ್ಯತೆಯನ್ನು ಗಳಿಸಲು ತಮ್ಮೆಲ್ಲರ ಸಹಾಯ ಸಹಾನುಭೂತಿಗಳೇ ಮುಖ್ಯ ಕಾರಣವಾಗಿದೆ.

ನಮ್ಮ ನಾಡಿನ ಜನಜೀವನದಲ್ಲಿ ರಾಜಕೀಯ ಹಕ್ಕು ಬಾಧ್ಯತೆಗಳ ಅರಿವು ವಿಶೇಷವಾಗಿ ಅರಿಯಬೇಕಾಗಿದೆ. ಎಂದಿನವರೆಗೆ ರಾಜ್ಯಾಂಗಸೂತ್ರಗಳು ಪ್ರಜಾಭಿಮತದಂತೆ ಜರುಗುವುದಿಲ್ಲವೋ ಅಂದಿನವರೆಗೆ ನಾವು ನಮ್ಮ ನೊಂದಬಾಳಿನಿಂದ ಪಾರಾಗುವುದು ಕಷ್ಟಸಾಧ್ಯ. ಇದು ರಾಜತಂತ್ರ ವಿಶಾರದರು ಸಿದ್ಧಮಾಡಿರುವ ತತ್ವ. ನಮ್ಮ ಪ್ರಜಾಪಕ್ಷದ ಪವಿತ್ರ ಧ್ಯೇಯವೇನಂದರೆ— ದೇಶದ ರಾಜಕೀಯ ವಾತಾವರಣವನ್ನು ಚೇತನಗೊಳಿಸಿ, ಘನಪೊಂದಿದ ಶ್ರೀಮನ್ ಮಹಾರಾಜರವರ ಕೃಪಾಶ್ರಯದಲ್ಲಿ ಶಾಂತಿಯುಕ್ತವಾದ ನ್ಯಾಯಸಮ್ಮತವಾದ, ಮತ್ತು ಕಾನೂನು ಬದ್ಧವಾದ ರೀತಿಯಿಂದ ಪ್ರಜಾಭಿಪ್ರಾಯಕ್ಕನುಸಾರವಾಗಿ ನಡೆಯುವ ಜವಾಬ್ದಾರಿ ಸರಕಾರವನ್ನು ಜಾಗ್ರತೆ ದೊರಕಿಸಿಕೊಳ್ಳುವುದು. ಇಂತಹ ಪವಿತ್ರೋದ್ದೇಶಕ್ಕೆ ತಮ್ಮ ಒಲುಮೆ ಒತ್ತಾಸೆಯನ್ನು ಬೇಡಿರುವೆವು. ಇದಕ್ಕಾಗಿ ನಡೆಯುವ ಈ ಸಮ್ಮೇಳನಕ್ಕೆ ತಮ್ಮ ಆಗಮನವನ್ನು ಬಯಸುವೆವು.

ಮುಖ್ಯ ಸಮ್ಮೇಳನವು ಫಲದಾಯಕವಾಗಬೇಕೆಂಬುದೇ ನಮ್ಮ ತೀವ್ರ ಆಶೆ. ಇದಕ್ಕಾಗಿ ತಮ್ಮ ಸಹವಾಸ ಸಹಯೋಗಗಳನ್ನು ಸ್ವಾಗತ ಸಮಿತಿಯವರು ಕಡ್ಡಾಯವಾಗಿ ಅಪೇಕ್ಷಿಸುವರು. ತಮ್ಮ ಕೆಲಸಗಳ ತೊಡಕಿನಲ್ಲಿ ಇದನ್ನು ಲಕ್ಷಿಸದೆ ಸಮ್ಮೇಳನಕ್ಕೆ ತಪ್ಪದೆ ತಾವು ದಯಮಾಡಿಸುವುದಲ್ಲದೆ ತಮ್ಮ ಪ್ರಾಂತ್ಯದ ಮಹಾಜನಗಳನ್ನೂ ಅಧಿಕ ಸಂಖ್ಯೆಯಿಂದ ಕರೆದುಕೊಂಡು ಬಂದು ಸಮ್ಮೇಳನವು ಯಶಸ್ವಿಯಾಗಿಯೂ ಮಂಗಳಪ್ರದವಾಗಿಯೂ ನಡೆಯುವಂತೆ ಸಹಕರಿಸಿ, ನಮ್ಮ ಪಕ್ಷಕ್ಕೆ ಧೈರ್ಯೋತ್ಸಾಹವನ್ನು ನೀಡಬೇಕಾಗಿ ವಿನಯ ಪ್ರಾರ್ಥನೆ.

ಇತಿ ನಿರಂಜನ ತಮ್ಮ ಅಭ್ಯುದಯಾಕಾಂಕ್ಷಿಗಳಾದ,
ಡಿ. ಎಸ್. ಮಲ್ಲಪ್ಪ,
ಟಿ. ಗುರುನಂಜಯ್ಯ,
ಸ್ವಾಗತ ಸಮಿತಿಯ ಪರವಾಗಿ.

ಸೂಚನೆ—(i) ಪರಸ್ಥಳದ ಪ್ರತಿನಿಧಿಗಳಿಗೆ ಊಟದ ಮತ್ತು ನಿವಾಸದ ವ್ಯವಸ್ಥೆ ಮಾಡಲಾಗಿದೆ. ಪ್ರತಿನಿಧಿಗಳಿಗೆ ಪ್ರವೇಶಧನ (Delegate Fee) ಎಂಟು ಆಣೆ. ಪ್ರತಿನಿಧಿಗಳು ತಮ್ಮ ಬರುವಿಕೆಯನ್ನು ಕುರಿತು ಕಾರ್ಯದರ್ಶಿಗಳಿಗೆ ೧೬ನೇ ತಾರೀಖಿನೊಳಗಾಗಿ ತಿಳಿಸಬೇಕಾಗಿ ಕೋರಿದೆ.

(ii) ಸಮ್ಮೇಳನದಲ್ಲಿ ಚರ್ಚಿಸಬೇಕಾದ ವಿಷಯ ಮತ್ತು ಠರಾವುಗಳನ್ನು ೧೨-೩-೧೯೩೩ರ ರೊಳಗಾಗಿ ಕಾರ್ಯದರ್ಶಿಗಳಿಗೆ (General Secretary) ಬರೆದು ತಿಳಿಸಬೇಕಾಗಿ ಕೋರಿದೆ.

(iii) ಸಬ್ಜೆಕ್ಟ್ ಕಮಿಟಿ ಮತ್ತು ಪಕ್ಷದ ಎಗ್ಜಿಕ್ಯೂಟಿವ್ ಕಮಿಟಿ ಮೀಟಿಂಗುಗಳು ೧೮-೩-೩೩ನೇ ಸಾಯಂಕಾಲ ೮ ಗಂಟೆಗೆ ಜರುಗಬೇಕಾಗಿರುವುದರಿಂದ ಠರಾವುಗಳನ್ನು ಕಳುಹಿಸುವವರು ಮತ್ತು ಪಕ್ಷದ ಎಗ್ಜಿಕ್ಯೂಟಿವ್ ಕಮಿಟಿ ಮೆಂಬರುಗಳೂ- ಸಹಾ ೧೮ ನೇಯ ತಾರೀಖಿನ ದಿವಸವೇ ಇಲ್ಲಿಗೆ ಬರಬೇಕಾಗಿ ಕೋರಿದೆ.

ಶರಣಸಂದೇಶ

ಓಂ

विश्वबन्धुत्व

ಶಾ. ಶ. ೧೮೫೪ ನೆಯ ಫಾಲ್ಗುಣ ಬ, ೧ ಸೋಮವಾರ.

ರಾಜಕಾರಣದ ಪರಿವರ್ತನೆ.

ಜಗತ್ತಿನ ರಾಜಕಾರಣವು ಯುರೋಪದ ಮಹಾಯುದ್ಧದ ನಂತರ ವಿಶೇಷ ಪರಿವರ್ತನೆಯಾಗಿದೆ. ಆ ನಾಲ್ಕು ವರುಷಗಳ ಘೋರವಾದ ರಣಕ್ಷೇತ್ರದಲ್ಲಿ ಸಾಧಾರಣ ಒಂದೂಕಾಲು ಕೋಟಿ ಜನಗಳ ಆತ್ಮಾಹುತಿಯಾದ ನಂತರ ಪ್ರಪಂಚದ ಸ್ಥಿತಿಯೇ ಬೇರೆಯಾಗಿದೆ, ಪ್ರತಿಯೊಂದು ದೇಶದ ರಾಜಕಾರಣವೂ ಕ್ಷಣ ಕ್ಷಣಕ್ಕೆ ವಿಶೇಷ ಪರಿವರ್ತನೆಯಾಗುತ್ತಿರುವುದರಿಂದ ಜಗತ್ತಿನ ಸುಖ ಶಾಂತಿಗಳಿಗೆ ತುಂಬಾ ಬಾಧಕವಾಗಿದೆ.

ಆ ಯುರೋಪದ ಮಹಾಯುದ್ಧವೇ ಈಗ ಜಪಾನದೇಶಕ್ಕೆ ಇಂತಹ ಅವೇಶೋತ್ಸಾಹಗಳನ್ನುಂಟುಮಾಡಿದೆ. ಚೀನದೇಶವನ್ನು ನುಂಗಿ ಪುಷ್ಟವಾಗಿ ಏಶಿಯಾದಲ್ಲಿ ತನ್ನ ಸ್ವಾಮಿತ್ವವನ್ನು ಸ್ಥಾಪಿಸಲು ಹವಣಿಸುತ್ತಲಿದೆ. ಈ ಕಠಿಣ ಪ್ರಸಂಗದಲ್ಲಿ ಚೀನ ದೇಶವು ಸರ್ವಸ್ವವನ್ನು ಸೂರೆಮಾಡಿ ತನ್ನ ಘನತೆಯನ್ನು ಕಾಯ್ದುಕೊಳ್ಳಬೇಕೆಂದು ಪ್ರಯತ್ನಿಸುತ್ತಲಿದೆ. ಈ ಉಭಯ ಪ್ರಬಲ ರಾಷ್ಟ್ರಗಳ ರಾಜಕಾರಣದ ಮೇಲೆಯೇ ಮುಂದೆ ಏಶಿಯಾ ಖಂಡದ ಸುಖಶಾಂತಿಗಳು ಅವಲಂಬಿಸುವ ಪ್ರಸಂಗ ಬರುವ ಸಂಭವವಿದೆ.

ಇಂತಹ ಪ್ರಸಂಗದಲ್ಲಿ ಹಿಂದುಸ್ಥಾನವು ಜನಾಭಿಪ್ರಾಯದಂತೆ ಆಳಲ್ಪಟ್ಟು ಇದು ಸಕಲ ಸಂಗತಿಗಳಲ್ಲಿಯೂ ಜಾಗ್ರತೆ ಸುಧಾರಣೆಯಾಗುವಂತಹ ಏರ್ಪಾಡುಗಳಾಗುವುದು ಅವಶ್ಯಕವಲ್ಲವೇ? ಇಂಗ್ಲಿಷ್ ಸರಕಾರವು ಈಗಿನ ತನ್ನ ಕಠೋರ ವರ್ತನೆಯನ್ನು ಬಿಟ್ಟು ಭಾರತೀಯರ ಸಂಗಡ ಸಹಕರಿಸಿ ಯೋಗ್ಯವಾದ ರಾಜಕೀಯ ಸುಧಾರಣೆಯನ್ನು ಮಾಡಬೇಕೆಂದು ಅನೇಕರು ಸೂಚಿಸಿದ್ದಾರೆ.

ರಾಷ್ಟ್ರೀಯ ಸಭೆಯವರು ಶಾಸನೋಲ್ಲಂಘನೆಯ ಚಟುವಟಿಕೆಯನ್ನು ಪುನಃ ಪ್ರಾರಂಭಿಸುವುದಿಲ್ಲವೆಂಬುದು ನಿಶ್ಚಯವಾದ ವಿನಾ ಸರಕಾರವು ಗಾಂಧೀಜಿ ಮೊದಲಾದವರನ್ನು ಬಿಟ್ಟು ಅವರ ಸಂಗಡ ವಿಚಾರ ವಿನಿಮಯ ಮಾಡಲು ಸಿದ್ಧವಿಲ್ಲವೆಂದು ಭಾರತ ಮಂತ್ರಿಗಳು ಆಗಾಗ್ಗೆ ಹೇಳುತ್ತ ಬಂದಿದ್ದಾರೆ. ರಾಷ್ಟ್ರೀಯ ಸಭೆಯವರ ಸಲಹೆ ಸಹಾಯಗಳಿಲ್ಲದೆ ಏರ್ಪಡುವ ಹಿಂದುಸ್ಥಾನದ ರಾಜಕೀಯ ಸುಧಾರಣೆಯಾವದೋ ಅಪೂರ್ಣವೂ ಅತೃಪ್ತಿಕರವೂ ಆದುದೆಂದು ಹೇಳಬೇಕಾದುದೇ ಇಲ್ಲ.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸಭೆಯವರು ಇತರರ ಸಹಾನುಭೂತಿಯಿಂದ ಹೆಚ್ಚಾದ ರಾಜಕೀಯ ಸುಧಾರಣೆಯನ್ನು ಹೊಂದಲು ಶಾಸನೋಲ್ಲಂಘನೆಯನ್ನು ನಿಲ್ಲಿಸಬೇಕೆಂದು ಇತ್ತೀಚೆಗೆ ಅನೇಕರು ಹೇಳಲಾರಂಭಿಸಿದ್ದಾರೆ. ಇದು ಈ ದೇಶದ ರಾಜಕಾರಣದಲ್ಲಿ ಮುಂದಣ ಒಂದೆರಡು ವಾರಗಳಲ್ಲಿಯೇ ಆಗುವ ಪರಿವರ್ತನೆಯ ಲಕ್ಷಣವೆಂದು ತೋರುತ್ತದೆ.

ಅಖಿಲ ಭಾರತೀಯ ರಾಷ್ಟ್ರೀಯ ಮುಸಲ್ಮಾನ ಸಂಘದವರು ಶ್ರೀ ಜಮ್ನಾದಾಸ ಮೆಹತಾ ಶ್ರೀ. ನೇಟಲವಾಡ ಮೊದಲಾದವರು ರಾಷ್ಟ್ರೀಯ ಸಭೆಯವರು ಸದ್ಯಕ್ಕೆ ಶಾಸನೋಲ್ಲಂಘನೆಯನ್ನು ನಿಲ್ಲಿಸಬೇಕೆಂದು ಸೂಚಿಸಿದ್ದಾರೆ. ಈ ಸೂಚನೆಯು ಮಾನ್ಯವಾದರೆ ಗಾಂಧೀಜಿಯವರೇ ಮೊದಲಾದ ರಾಷ್ಟ್ರೀಯ ಸಭೆಯ ಪ್ರಮುಖರು ಬಿಡುಗಡೆ ಹೊಂದುವರು. ಆಗ ಈ ದೇಶದ ರಾಜಕಾರಣವು ಮತ್ತೆ ಪರಿವರ್ತನೆಯಾಗುವುದರಲ್ಲಿ ಸಂದೇಹವಿಲ್ಲ.

ಸ್ಫುಟ ಸೂಚನೆ.

ಹರಿಜನ ಶಬ್ದನಿಷೇಧ.

ಹಿಂದುಗಳಲ್ಲಿಯ ನಾನಾ ಪಂಥಗಳ ಆದಿಜನಗಳಿಗೆ ಹರಿಜನ ಎಂಬ ವೈಷ್ಣವ ಪಂಥದ ಹೆಸರನ್ನಿಟ್ಟಿದ್ದು ಅನುಚಿತವೆಂದು ನಾವು ಅನೇಕಸಾರೆ ಸೂಚಿಸಿದ್ದೇವಷ್ಟೆ. ಇದರಿಂದ ಮತಕಲಹಕ್ಕೆ ಮತ್ತೊಂದು ಪಂಥವುಂಟಾಗುದು ವಿಷಾದಕರವು. ಈ ದೇಶದಲ್ಲಿ ಈಗಲೇ ಮತಪಂಥಗಳು ಅತ್ಯಧಿಕವಾಗಿ ಅನೈಕಮತ್ಯವು ಹೆಚ್ಚಿರುವಾಗ ಇದೊಂದು ಪಂಥವನ್ನೇರ್ಪಡಿಸಿದುದು ಯುಕ್ತವಲ್ಲವೆಂದೇ ಸ್ಪಷ್ಟವಾಗುವುದಿಲ್ಲವೇ?

ಕಳೆದ ತಿಂಗಳು ೧೫ನೆಯ ತಾರೀಖಿನ ದಿನ ಕಾನ್ಪೂರದಲ್ಲಿ ಕೂಡಿದ ವೀರಶೈವ ಮತಾಶ್ರಿತ ಚೆನ್ನಯ್ಯ ಪಂಚಮರ ೨ನೆಯ ಮಹಾಸಭೆಯಲ್ಲಾದ ಭಾಷಣದಿಂದ ಈ ಹರಿಜನ ಶಬ್ದಕ್ಕೆ ಅವರ ವಿರೋಧವು ಎಷ್ಟಿದೆಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಮಾದಾರ ಚೆನ್ನಯನ ವಂಶಜರಾದ ಶ್ರೀ ಜಂಬೂರು ವೀರಪ್ಪ ಮೊದಲಾದವರು ತಾಪದಿಂದ ಬಹು ಕಠೋರವಾಗಿ ಭಾಷಣಮಾಡಿದರು.

'ಗಾಂಧೀಜಿಯವರು ವೈಷ್ಣವರಾದುದರಿಂದ ಸ್ವಮತವನ್ನು ಬೆಳೆಸಲು ಅಸ್ಪೃಶ್ಯರನ್ನೆಲ್ಲಾ ಒಟ್ಟಿಗೆ ಸೇರಿಸಿ ಹರಿಜನರೆಂದು ನೂತನವಾಗಿ ಕರೆಯಲಿಕ್ಕೆ ಸುರುವು ಮಾಡಿರುವರು. ನಾವು ವೀರಶೈವ ಮತದ ಶಿಷ್ಯಕೋಟಿಗೆ ಸೇರಿದವರಾಗಿರುವುದರಿಂದ ಈ ಅನ್ಯಾಯದ ಹೆಸರನ್ನು ಮಾನ್ಯ ಮಾಡುವುದಿಲ್ಲ'

ದಕ್ಷಿಣ ದೇಶದ ಸ್ಥಿತಿಯನ್ನಾದರೂ ಯೋಚಿಸಿ ಈ ಭಾಗದ ಪ್ರಮುಖರು ಹರಿಜನ ಶಬ್ದವನ್ನು ಬಿಟ್ಟು ಯಾವ ಮತಕ್ಕೂ ಸಂಬಂಧಿಸದಂತಹ ಬೇರೆ ಶಬ್ದವನ್ನುಪಯೋಗಿಸಬಾರದೇ?

ಮರಾಠಿಗರ ಅತಿಕ್ರಮಣ.

ಮರಾಠಿಗರಲ್ಲಿ ಬಹುಜನರು ಕನ್ನಡಿಗರ ಹೆಸರೇ ಇಲ್ಲದಂತೆ ಮಾಡಲು ದುಷ್ಟ ಪ್ರಯತ್ನ ಮಾಡುತ್ತಿದ್ದಾರೆ. ಹಿಂದಕ್ಕೆ ಕನ್ನಡಿಗರು ಇವರಲ್ಲಿ ಸೇರಿಕೊಂಡದ್ದರಿಂದಲೇ ಇವರಿಗೆ ಈ ದುರಾಶೆಯುಂಟಾಗಿದೆ.

ಬೆಳಗಾಂವ ಜಿಲ್ಲೆಯನ್ನು ಮರಾಠಿ ದೇಶವನ್ನಾಗಿ ಮಾಡುವ ಅಪಹಾಸ್ಯದ ಅನೇಕ ಕುಟಿಲ ಯೋಚನೆಗಳನ್ನು ಅನೇಕರು ಮಾಡಿದ್ದಾರಷ್ಟೆ. ಪುಣೆಯಲ್ಲಿ ಈಗತಾನೆ ಪ್ರಕಟವಾದ ಮಹಾರಾಷ್ಟ್ರ ಸಾಂವತ್ಸರಿಕ ಎಂಬ ಗ್ರಂಥದಲ್ಲಿ ಈ ಪ್ರಕಾರ ಬರೆದಿದ್ದಾರೆ.

"ಮಹಾರಾಷ್ಟ್ರದಲ್ಲಿ ೧೩ ಜಿಲ್ಲೆಗಳಿವೆ. ಅವುಗಳಲ್ಲಿ ಬೆಳಗಾಂವ-ವಿಜಾಪುರ ಧಾರವಾಡ ಎಂಬುವು ಸೇರಿವೆ."

ಈ ಪ್ರಕಾರ ಬರೆದವರು ಭೂಗೋಲ ಜ್ಞಾನವೇ ಇಲ್ಲದ ಮೂಢರಿರಬೇಕು. ಅಥವಾ ಮಹಾ ದುರುದ್ದೇಶದವರಾದರೂ ಇರಬೇಕು. ಕರ್ನಾಟಕ ದೇಶವೆಂಬುದೊಂದು ಇಲ್ಲವೇ ಇಲ್ಲವೆಂದು ಅನ್ಯರಿಗೆ ತೋರಿಸಲು ಇವರು ಈ ಪ್ರಕಾರ ಪ್ರಯತ್ನಿಸುವಂತೆ ಕಾಣುತ್ತದೆ.

ಹಿಂದುಸ್ಥಾನದಲ್ಲಿ ೧೪೦ ಭಾಷೆಗಳಿವೆಯೆಂದು ಈ ಪುಸ್ತಕದಲ್ಲಿ ಬರೆದಿದ್ದಾರೆ. ೫೦೦೦೦ ಜನಸಂಖ್ಯೆಗಿಂತ ಹೆಚ್ಚಾದ ಜನರು ಮಾತಾಡುವ ಭಾಷೆಗಳು ಹತ್ತಿವೆಯೆಂದು ತಿಳಿಸಿದ್ದಾರೆ. ಇವುಗಳಲ್ಲಿ ಕನ್ನಡ ಭಾಷೆಯ ಹೆಸರೇ ಇಲ್ಲ.

ಒಂದೂವರೆ ಕೋಟಿ ಜನಗಳು ಮಾತಾಡುತ್ತಿರುವ ಕನ್ನಡ ಭಾಷೆಯ ಅರುವೇ ಇವರಿಗಿಲ್ಲದಂತಾಗಿದೆಯೇ? ಈ ಪ್ರಕಾರ ಕನ್ನಡವನ್ನು ನುಂಗಬೇಕೆಂಬ ದುರಾಶೆಯ ಅನೇಕ ಮರಾಠಿಗರ ಈ ಮೇಲಣ ಕುಟಿಲ ಕೃತ್ಯಗಳನ್ನು ಶ್ರೀ. ಮಲ್ಹಾರಿಯವರು ರಾಜಹಂಸ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಇಂಥ ಮಹಾದೋಷಗಳು ಆ ಪುಸ್ತಕದಲ್ಲಿದ್ದದ್ದಾಗಿದ್ದರೆ ಅವುಗಳನ್ನು ನಿಷೇಧಿಸುವುದು ಕನ್ನಡಿಗರ ಕರ್ತವ್ಯವಲ್ಲವೇ?

ಮಹಾತ್ಮರ ದೂಷಣೆ.

ಮಹಾತ್ಮಾಗಾಂಧಿಯವರನ್ನು ಸನಾತನಿಗಳೆಂದು ಹೇಳಿಕೊಳ್ಳುವವರಲ್ಲಿ ಅನೇಕರು ವಿಪರೀತ ದೂಷಿಸುತ್ತಿದ್ದಾರೆ. ಹೀಗೆ ಅವರನ್ನು ದೂಷಿಸಿದ ಮಾತ್ರದಲ್ಲಿ ತಮ್ಮ ಮಿಥ್ಯ ಪಕ್ಷವು ಸತ್ಯಪಕ್ಷವಾಗುವದೆಂದು ಅವರು ತಿಳಿದು ಕೊಂಡಂತೆ ಕಾಣುತ್ತದೆ.

ಬೆಳಗಾವಿಯಲ್ಲಿ ಕರವೀರಪೀಠದ ಶ್ರೀ ಜಗದ್ಗುರು ಶಂಕರಾಚಾರ್ಯರು ಕಳೆದವಾರ ಪ್ರವಚನ ಮಾಡುವಾಗ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯನ್ನು ಪ್ರಸ್ತಾಪಿಸಿ ಗಾಂಧೀಜಿಯವರಿಗೆ ಸೈತಾನ, ಪಿಶಾಚಿ, ರಾಕ್ಷಸ ಮೊದಲಾದ ಶಬ್ದಗಳನ್ನುಪಯೋಗಿಸಿದರೆಂದು ರಾಜಹಂಸಪತ್ರಿಕೆಯಲ್ಲಿ ಪ್ರಕಟವಾಗಿದೆ.

ಇದು ನಿಜವೆಂದು ನಮಗೆ ಇನ್ನೂ ತೋರದು. ಇಂಥ ದೊಡ್ಡವರು ಈ ಪ್ರಕಾರ ಮಹಾತ್ಮರನ್ನು ದೂಷಿಸುವರೇ? ಹೀಗೆ ದೂಷಿಸುವವರು ದೊಡ್ಡವರೇ?

ಸಂರಕ್ಷಣೆಯ ಹೆಚ್ಚಿನ ತೆರಿಗೆ.

ಕಾರವಾರ ಜಿಲ್ಹೆಯ ಅಂಕೋಲಾ ತಾಲೂಕಿನ ೫೪ ಹಳ್ಳಿಗಳ ಮೇಲೆಯೂ ಮತ್ತು ಕುಮಟಾ ತಾಲೂಕಿನ ೮ ಹಳ್ಳಿಗಳ ಮೇಲೆಯೂ ಮುಂಬಯಿ ಸರಕಾರದವರು ೧೯೩೩ ನೆಯ ಇಸ್ವಿ ಮಾರ್ಚ ತಿಂಗಳ ಒಂದನೆಯ ತಾರೀಖಿನಿಂದ ಒಬ್ಬ ಇನ್ಸ್ಪೆಕ್ಟರ ೧೩ ಹೆಡ್ ಕಾನ್ಸ್ಟೇಬಲ್ ಮತ್ತು ೪೯ ಕಾನ್ಸ್ಟೆಬಲ್ಸ ಹೀಗೆ ಹೆಚ್ಚಿಗೆ ಪೋಲಿಸ ಅಧಿಕಾರಿಗಳನ್ನು ನಿಯಮಿಸಿದ್ದಾರೆ. ಈ ಅಧಿಕಾರಿಗಳ ವೇತನವು ಅವರ ಪೆನ್ಶನ್, ರಜೆಯ ವೇತನ, ಮೇಲ್ವಿಚಾರಣೆಯ ವೇತನ, ಬೇರೆ ಸಾದಿಲವಾರ ವೆಚ್ಚ ಸಹಿತವಾಗಿ ವರ್ಷಕ್ಕೆ ೩೩೭೯೨ ರೂ. ಆಗುತ್ತವೆ. ಈ ವೆಚ್ಚವನ್ನು ಮೇಲೆ ಕಾಣಿಸಿದ ಜಿಲ್ಹೆಗಳ ಭೂಮಿಯ ಒಡೆಯರಿಂದಲೂ ಮತ್ತು ಮನೆಯ ಯಜಮಾನರಿಂದಲೂ ತೆಗೆದುಕೊಳ್ಳಲಾಗುವದು. ಆದರೆ ಸರಕಾರೀ ನೌಕರರಿಗೂ ಮತ್ತು ಸರಕಾರೀ ಗೊತ್ತುವಳಿಯಲ್ಲಿ ನಮೂದಿಸಿದ ೩೭ ಜನ ನಿವಾಸಿಗಳಿಗೂ ಈ ತೇಗೆಯಿಲ್ಲ.

ಎರಡು ಮಹಾಸಭೆಗಳು.

ತುಮಕೂರಿನಲ್ಲಿ ಈ ತಿಂಗಳ ೧೯ನೆಯ ತಾರೀಖಿಗೆ ಮೈಸೂರು ದೇಶದ ಪ್ರಜಾಪರಿಷತ್ತು ಕೂಡುತ್ತದೆ. ಈ ತಿಂಗಳ ಅಂತ್ಯಕ್ಕಾದರೋ ಮಂಗಳೂರಲ್ಲಿ ಅಖಿಲ ಕರ್ನಾಟಕ ಹಿಂದಿ ಪರಿಷತ್ತು ಕೂಡುತ್ತದೆ. ಇವೆರಡೂ ಮಹಾಸಭೆಗಳೇ ಸರಿ, ಇವು ಜಯಪ್ರದವಾಗಲೆಂದೇ ಹಾರೈಸುತ್ತೇವೆ.

ಹಿಂದಿ ಪರಿಷತ್ತು ಬಹು ಮಹತ್ವದ್ದಾಗಿದೆ. ಈ ದೇಶದ ಎಲ್ಲ ವಿದ್ಯಾ ಸಂಸ್ಥೆಗಳಲ್ಲಿಯೂ ಹಿಂದೀ ಭಾಷೆಯನ್ನು ಅವಶ್ಯಕವಾದ ಅಭ್ಯಾಸ ಕ್ರಮದಲ್ಲಿ ಸೇರಿಸಿ ಹಿಂದೀ ಭಾಷಾಪ್ರಸಾರಣೆಗೆ ಸಹಾಯ ಮಾಡುವುದು ಅಗತ್ಯವಾಗಿದೆ.

ಎಲ್ಲರು ಎಚ್ಚತ್ತರೂ ವೀರಶೈವ ಮಹಾಸಭೆಯ ಚಾಲಕರೇಕೆ ಮಲಗಿದ್ದಾರೆಂದೇ ಕೇಳುವ ಪ್ರಸಂಗ ಬರುವಂತೆ ಕಾಣುತ್ತದೆ. ಇನ್ನೊಂದೇ ತಿಂಗಳು ಮಾತ್ರ ಮಹಾಸಭೆಗೆ ಕಾಲಾವಧಿಯಿದ್ದರೂ ಇನ್ನೂ ಕಾರ್ಯವೇ ಪ್ರಾರಂಭವಾಗಿಲ್ಲವಲ್ಲಾ!

ಮಹತ್ವದ ವಿವಾಹ.

ಮಹಾತ್ಮಾಜಿಯವರು ತಮ್ಮ ಹರಿಜನ ಪುತ್ರಿಯಾದ ಲಕ್ಷ್ಮೀಬೆನ್ ಎಂಬ ಕನ್ಯೆಯನ್ನು ಬಾರ್ಡೋಲಿ ಆಶ್ರಮದಲ್ಲಿ ಕೆಲಸಮಾಡುತ್ತಿರುವ ಮಾರುತಿದಾಸ ಕೃಷ್ಣದಾಸ ಎಂಬ ಮದ್ರಾಸಿ ಬ್ರಾಹ್ಮಣ ವರನಿಗೆ ಕೊಟ್ಟು ಮಾರ್ಚ ೧೪ ನೆಯ ತಾರೀಖಿಗೆ ವಿವಾಹ ಮಾಡುವುದು ನಿಶ್ಚಯವಾಗಿದೆ.

—ಪುಣೆಯ ಹರಿಜನ ಮುಂದಾಳುಗಳಾದ ಶ್ರೀ ರಾಜಭೋಜ ಇವರು ೭ ನೆಯ ತಾರೀಖಿನ ದಿವಸ ಮಹಾತ್ಮಾಗಾಂಧಿಯವರ ಭೆಟ್ಟಿಯಾಗಿ ೧. ಅಸ್ಪೃಶ್ಯತಾ ನಿವಾರಣೆ ೨. ಅಸ್ಪೃಶ್ಯರ ಆದರ್ಶ ಸಂಸ್ಥೆಯು ಹೇಗೆ ಇರಬೇಕು. ಮೊದಲಾದ ವಿಷಯಗಳನ್ನು ಮಹಾತ್ಮಾಜಿಯವರ ಸಂಗಡ ವಿಚಾರ ವಿನಿಮಯ ಮಾಡಿದರು. ಆ ಕಾಲಕ್ಕೆ ಶ್ರೀ ಕಾಕಾ ಕಾಲೇಲಕರ್, ಹರಿಭಾವು ಫಾಟಕ, ದೇವಿದಾಸ ಗಾಂಧಿ ಮೊದಲಾದವರಿದ್ದರು. ಸರ್ವಂಟ್ಸ ಆಫ್ ಇಂಡಿಯಾ ಸಂಸ್ಥೆಯ ಪದ್ಧತಿಯಂತೆ ಅಸ್ಪೃಶ್ಯರ ಸಲುವಾಗಿ ಒಂದು ಆದರ್ಶ ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಯನ್ನು ಶ್ರೀ ರಾಜಭೋಜರು ಮಹಾತ್ಮಾಜಿಯವರಿಗೆ ನಿವೇದಿಸಿದರು. ರಾಜಭೋಜರ ಈ ಉಚ್ಚಧ್ಯೇಯಕ್ಕಾಗಿ ಮಹಾತ್ಮಾಜಿಯವರು ಅವರನ್ನು ಅಭಿನಂದಿಸಿ ಕನಿಷ್ಟ ಪಕ್ಷಕ್ಕೆ ೩-೪ ತಿಂಗಳಾದರೂ ಸಾಬರಮತಿಯ ಆಶ್ರಮದಲ್ಲಿ ನೀವು ಇರಬೇಕೆಂದು ಹೇಳಲು ರಾಜಭೋಜರು ೩-೪ ದಿವಸಗಳಲ್ಲಿಯೇ ಹೊರಡುವದನ್ನು ಗೊತ್ತುಮಾಡಿಕೊಂಡಿರುವೆನೆಂದು ತಿಳಿಸಿದರು.

ವೀರಶೈವ ಜಾತಿವಾದ ವಿಮರ್ಶೆ ಸಭೆ.

ತಾ. ೧೦ನೆಯ ಕರ್ನಾಟಕ ಟಾಯಿಮ್ಸ ಪತ್ರಿಕೆಯಲ್ಲಿ ಯಾದಗಿರಿಯವರು ತಮ್ಮ ಹೆಸರನ್ನು ಮಾತ್ರ ತಿಳಿಸದೆ ನನ್ನಿಂದಲೇ ಸಭೆಯ ಕಾರ್ಯಕ್ಕೆ ನಿಧಾನವೆಂದು ಸುಳ್ಳುಬರೆದಿದ್ದಾರೆ. ಅದಕ್ಕಾಗಿ ನಾನು ಈ ಕೆಳಗಿನ ಸಂಗತಿಗಳನ್ನು ತಿಳಿಸಬೇಕಾಯಿತು.

ಶ್ರೀ. ಚಂದ್ರಶೇಖರ ಶಾಸ್ತ್ರಿಗಳಿಗೆ ತಾ. ೪-೧-೩೩ನೇ ಮತ್ತು ತಾ. ೧೫-೧-೩೩ನೆಯ ದಿವಸ ಅಧ್ಯಕ್ಷರಿಂದ ಸ್ಥಳಕಾಲಗಳನ್ನು ಪ್ರಸಿದ್ಧಗೊಳಿಸಿರೆಂದು ಬರೆದುದಕ್ಕೆ ಉತ್ತರವೇ ಇಲ್ಲದಿದ್ದುದರಿಂದ ತಾ. ೨-೩-೩೩ನೆಯ ದಿನ ರಜಿಸ್ಟರ್ ಮೂಲಕ ತಿಳಿಸಿದೆ.

ಹೀಗಿರುವಾಗ ಯಾದಗಿರಿಯವರು ತಿಳಿದೂತಿಳಿದು ನನ್ನಿಂದ ನಿಧಾನವೆಂದು ಸುಳ್ಳುಹೇಳಿ ತತ್ವಪ್ರಚಾರಕ ಸಂಘಕ್ಕೆ ರಾಯಚೂರ ಠರಾವನ್ನು ತಗಲು ಹಾಕಲಿಕ್ಕೆ ಹೋಗಿ ತಪ್ಪಿಸಿಕೊಂಡು ಹೋಗುವ ಪ್ರಯತ್ನವನ್ನೇಕೆ ಮಾಡಿದ್ದಾರೆಂಬುದನ್ನು ಮುಂದಣ ಸಂಚಿಕೆಯಲ್ಲಿ ವಿವರಿಸುವೆನು. **ಹರ್ಡೇಕರ್ ಮಂಜಪ್ಪ.**

ಅಖಿಲ ವೀರಶೈವರಿಗೆ ಜಗದ್ಗುರು ಯಾರು?

ಸೊಲ್ಲಾಪುರದ ವೀರಶೈವರಿರಾ,

ನಾವು ಈಗ ನಿಮಗೆ ಒಂದು ಗಂಭೀರ ಪ್ರಶ್ನೆಯನ್ನು ಕೇಳು ತ್ತಿದ್ದೇವೆ. ಸದ್ಯಕ್ಕೆ ನಮ್ಮ ಸಮಾಜದಲ್ಲಿ ಜಗದ್ಗುರುಗಳ ಸಮೂ ಹವೇ ಹೊರಟಂತೆ ಕಾಣುತ್ತದೆ. ಬಹಳ ಉತ್ಪನ್ನವಿರುವ ಮಠದ ಯಾವ ಸ್ವಾಮಿಯು ಬಂದರೂ ಅವರು ತಾವು ಜಗದ್ಗುರುವೆಂದು ಹೇಳಿಸಿಕೊಳ್ಳುತ್ತಾರೆ ಹಿಂದಕ್ಕೆ ಚಿತ್ರಕಲ್ಲದುರ್ಗದ ಸ್ವಾಮಿಗಳು ಬಂದಿದ್ದರು. ಅವರು ಶೂನ್ಯ ಸಿಂಹಾಸನಾಧೀಶ ಜಗದ್ಗುರುಗಳು ಅವರ ನಂತರ ಅನೇಕ ಜನ ಸ್ವಾಮಿಗಳು ಜಗದ್ಗುರುಗಳೆಂದೆನಿಸಿ ಕೊಳ್ಳುತ್ತಿದ್ದಾರೆ. ಮತ್ತು ಈಗ ಸೊಲ್ಲಾಪುರಕ್ಕೆ ಬರಬೇಕೆಂದಿ ಚ್ಛಿಸುವ ಉಜ್ಜಯಿನಿಯ ಆಚಾರ್ಯರೂ ತಾವು ಜಗದ್ಗುರುಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಇದೇ ಪ್ರಕಾರ ಉಳಿದ ನಾಲ್ವರು. ಶ್ರೀಶೈಲಸ್ಥಾನಪುರದ ಸ್ವಾಮಿ ವಿರೂಪಾಕ್ಷ ಒಡೆಯರಾದರೋ ತಾವು ಜಗದ್ಗುರು ಜಗದಾಚಾರ್ಯರೆಂದು ಹೇಳಿಕೊಳ್ಳುತ್ತಿದ್ದಾರೆ. ಆದು ದರಿಂದ ಅಖಿಲ ವೀರಶೈವ ಸಮಾಜಕ್ಕೆ ನಿಜವಾದ ಜಗದ್ಗುರುಗ ಳಾರೆಂಬುದೇ ನಮಗೊಂದು ಗೂಢ ಪ್ರಶ್ನೆಯಾಗಿದೆ.

ವೀರಶೈವ ಸಮಾಜ ವ್ಯವಸ್ಥೆಗಾಗಿ ಮುಖ್ಯವಾಗಿ ಪಂಚ ಪೀಠಗಳಿಗೆ ಪಂಚ ಆಚಾರ್ಯರಿರುತ್ತಾರೆ. ಅವರು ಪಂಚಾಚಾ ರ್ಯರೆಂಬ ಹೆಸರಿನಿಂದ ಪ್ರಸಿದ್ಧರಿರುತ್ತಾರೆ. ಅವರೊಳಗೆ ಉಜ್ಜಯಿನೀ ಪೀಠದ ಆಚಾರ್ಯರು ಸದ್ಯಕ್ಕೆ ಜಾಸ್ತಿ ಮುಖ್ಯರಿದ್ದಂತೆ ತೋರುತ್ತದೆ; ಅವರು ಸೊಲ್ಲಾಪುರಕ್ಕೆ ಬರಬೇಕೆಂದು ಇಚ್ಛಿಸುತ್ತಿದ್ದಾರೆ. ಈ ಆಚಾರ್ಯರು ತಮಗೆ ಜಗದ್ಗುರುಗಳೆಂದು ಹೇಳಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಜಗದ್ಗುರುವೆಂಬ ಸಂಜ್ಞೆಯು, ಜಗದ್ಗುರುವೆಂಬ ಹೆಸರು ಇವರಿಗೆ ಇಟ್ಟುಕೊಳ್ಳಲಿಕ್ಕೆ ಬರುತ್ತದೆಯೋ ಹೇಗೆಂಬುದು ವಿಚಾರಮಾಡೋಣ.

ಜಗದ್ಗುರು ಈ ಶಬ್ದದ ಶಬ್ದಶಃ ಅರ್ಥವು ಸರ್ವಜಗತ್ತಿನ ಗುರುವೆಂದು ಆಗುತ್ತದೆ, ಈ ಪ್ರಸಂಗದಲ್ಲಿ ಅಖಿಲ ಜಗವೆಂದರೆ ವೀರಶೈವ ಜಗತ್ತು ಅಥವಾ ಅಖಿಲ ವೀರಶೈವ ಸಮಾಜವೆಂದು ತಿಳಿಯೋಣ. ಅಂದಮೇಲೆ ಅಖಿಲ ವೀರಶೈವ ಜಗದ್ಗುರುಗಳು ಈ ಸ್ವಾಮಿಗಳಾಗಬಲ್ಲರೇನು?

ಅಖಿಲ ವೀರಶೈವ ಸಮಾಜದಲ್ಲಿ ಐದು ಭಾಗಗಳಿದ್ದು ಅವು ಗಳಿಗೆ ಮುಖ್ಯರಾದಂಥ ಐದು ಜನ ಆಚಾರ್ಯರಿರುವರೆಂದು ಮೇಲೆ ಹೇಳಿದೆ. ವೀರಶೈವ ಗೋತ್ರಗಳು ಐದು ಇದ್ದು ಮಹಾ ಸೂತ್ರಗಳೂ ಐದು ಇರುತ್ತವೆ. ಪ್ರತಿಯೊಬ್ಬ ಆಚಾರ್ಯರು ತಮ್ಮತಮ್ಮ ಗೋತ್ರಗಳುಳ್ಳಂಥ ಜನರಿಗೇನೇ ಗುರುಗಳಾಗುತ್ತಾರೆ ಉದಾಹ ರಣಾರ್ಥವಾಗಿ ಬಾಳೇಹಳ್ಳಿಯ ರೇವಣಾರಾಧ್ಯರು ವೀರಗೋತ್ರದ ಮತ್ತು ಪಡ್ವಿಡಿ ಸೂತ್ರದ ಮುಖ್ಯರಾಗಿದ್ದು ಅದೇ ಗೋತ್ರಸೂತ್ರ ಗಳುಳ್ಳವರಿಗೇನೇ ಅವರು ಗುರುಗಳು. ಉಜ್ಜಯಿನಿ ಆಚಾರ್ಯರು ನಂದಿಗೋತ್ರದವರಿದ್ದು ಅವರದು ವೃಷ್ಟಿಸೂತ್ರ ಮಾಳಿಗೆಯಾಗಿದೆ. ಅದೇ ಗೋತ್ರಸೂತ್ರಗಳುಳ್ಳವರಿಗೇನೇ ಅವರ ಗುರುತ್ವವು ಮತ್ತು ಗುರುತ್ವದ ಅಧಿಕಾರವು. ಈ ಪ್ರಕಾರ ಈ ಪಂಚ ಆಚಾರ್ಯರು ಐದು ಭಿನ್ನ ಭಿನ್ನ ಶಾಖೆಗಳಿಗೆ ಮುಖ್ಯರಾಗಿದ್ದಾರೆ. ಒಂದು ಶಾಖೆಯ ಗುರುವು ಪಂಚಗೋತ್ರಸೂತ್ರಗಳ ಜನರ ಮೇಲೆಯೂ ಗುರುವಾಗಲು ಬರುವುದಿಲ್ಲ. ಮತ್ತು ಅವರ ಅಧಿಕಾರವೂ ಐದು ಶಾಖೆಗಳ ಮೇಲೆ ನಡೆಯಲಾರದು. ಆದುದರಿಂದಲೇ ಒಂದು ಪೀಠದ ಆಚಾರ್ಯ ರಿಗೆ ಅಖಿಲ ವೀರಶೈವ ಸಮಾಜದ ಗುರು ಅಥವಾ ಜಗದ್ಗುರುವೆಂದು ಅನ್ನಿಸಿಕೊಳ್ಳಲು ಬಾರದೆಂದೇ ಸಿದ್ಧವಾಗುತ್ತದೆ. ಅದೇ ಪ್ರಕಾರ ಒಂದು ಶಾಖೆಯ ಶಿಷ್ಯನು ಎರಡನೇ ಶಾಖೆಯ ಗುರುವಿಗೆ ತನ್ನ ಗುರುವೆಂದು ಅನ್ನಲಿಕ್ಕೆ ಬರುವುದಿಲ್ಲ ಒಬ್ಬ ಸ್ತ್ರೀಯಳಿಗೆ ಒಬ್ಬನೇ ಪತಿಯು ಇರುತ್ತಿರಲು ಆ ಸ್ತ್ರೀಯಳು ಎರಡನೇಯವರು ತನ್ನ ಪತಿ ಯೆಂದು ತಿಳಿದುಕೊಳ್ಳೋಣವು ಯಾವ ಪ್ರಕಾರ ನಿಷಿದ್ಧವೋ ಅದೇ ಪ್ರಕಾರ ಒಂದು ಶಾಖೆಯ ಶಿಷ್ಯನು ಎರಡನೇ ಶಾಖೆಯ ಗುರು ವನ್ನು ತನ್ನ ಗುರುವೆಂದು ತಿಳಿದುಕೊಂಡರೆ ಹಾಗೆಯೇ ಆಗಲಿಕ್ಕಿ ಲ್ಲವೇ? ಆವಾಗ್ಗೆ ಅವನು ತನ್ನ ಗುರುವಿನ ಹೊರತಾಗಿ ಎರಡನೇ ಶಾಖೆಯ ಆಚಾರ್ಯರಿಗೆ ಗುರುವೆಂದು ತಿಳಿಯುವುದು ತಪ್ಪಾಗು ವುದು. ಈ ಎಲ್ಲ ಸಂಗತಿಗಳ ವಿಚಾರವನ್ನು ಇಲ್ಲಿಯ ಸೂಜ್ಞ ವೀರಶೈವರು ಅವಶ್ಯವಾಗಿ ಮಾಡತಕ್ಕದ್ದು. ಮತ್ತು ಈಗ ಬರಬೇ ಕೆಂದಿರುವ ಆಚಾರ್ಯರಿಗೆ ಜಗದ್ಗುರುವೆಂದು ಎಷ್ಟುಮಟ್ಟಿಗೆ ಅನ್ನ ಲಿಕ್ಕೆ ಬಂದೀತು ಎಂಬುದನ್ನು ನಿರ್ಣಯಿಸಬೇಕು.

ಇದಲ್ಲದೆ ಈ ಯಾವ ಐದು ಪೀಠಗಳಿರುವವೋ ಮತ್ತು ಆ ಪಂಚ ಪೀಠಗಳಿಗೆ ಯಾವ ಪಂಚ ಆಚಾರ್ಯರಿರುವರೋ ಅವರು ಪೀಠಾಧಿಕಾರಿಗಳಾಗಿದ್ದು ಆ ಪೀಠಗಳಲ್ಲಿ ಪುನಃ ಪಟ್ಟ ಮತ್ತು ಚರ ಅರ್ಥಾತ್ ಪಟ್ಟಾಧಿಕಾರಿ ಮತ್ತು ಚರಮೂರ್ತಿಯೆಂಬ ಭೇದಗಳಿ ರುತ್ತವೆ ಅವರಲ್ಲಿ ಪಟ್ಟಾಧಿಕಾರಿ ಅಥವಾ ಈ ಪಂಚಾಚಾರ್ಯರು ಸ್ಥಿರವಾಗಿದ್ದು ಆ ಪೀಠದ ಚರಂತಿ ಅಂದರೆ ಸಂಚಾರಮಾಡುವ ಸ್ವಾಮಿಗಳೇ ಸಂಚಾರ ಮಾಡಬೇಕಾಗುತ್ತದೆ. ಆದರೆ ಜಗದ್ಗುರುವಿನ ಹವ್ಯಾಸಕ್ಕಾಗಿ ಆ ಚರಂತಿ ಸ್ವಾಮಿಗಳನ್ನು ಬದಿಗಿರಿಸಿ ಈ ಪೀಠಾ ಧಿಕಾರಿಗಳು ಸ್ವತಃ ಸಂಚಾರಮಾಡುತ್ತಿದ್ದು ಜಗದ್ಗುರುವೆಂದು ಮೆರೆಯಿಸಿಕೊಳ್ಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಯೋಗ್ಯ ವಾಗಿದೆಯೆಂಬ ವಿಚಾರವನ್ನಾದರೂ ಸೂಜ್ಞ ವೀರಶೈವರು ಅವಶ್ಯ ವಾಗಿ ಮಾಡಬೇಕು.

ಇತ್ತಿತ್ತಲಾಗಿ ಈ ಪಂಚಾಚಾರ್ಯರೂ ಮತ್ತು ಅವರ ಅನುಯಾಯಿಗಳೂ ಬಸವಾದಿ ಪ್ರಮಥರ ವಿಷಯವಾಗಿಯೂ ಅತಿ ಶಯವಾದ ನಿಂದಾಯುಕ್ತ ಮತ್ತು ಹೇಯವನ್ನು ಹುಟ್ಟಿಸುವ ವಿಧಾನಗಳನ್ನು ಪ್ರಸಿದ್ಧ ಮಾಡಿದ್ದಾರೆ. ಇಂಥ ನಿಂದೆಯು ಪಂಚಾ ಚಾರ್ಯರ ಕಡೆಯಿಂದಲೂ ಮತ್ತು ಅವರ ಅನುಯಾಯಿಗಳ ಕಡೆ ಯಿಂದಲೂ ಆಗುವುದೇನೂ ಹೊಸದಲ್ಲ. ಇಷ್ಟೇ ಅಲ್ಲದೆ ಈ ನಿಂದೆ ಯನ್ನು ಅವರು ಬುದ್ಧಿಪುರಸ್ಸರವಾಗಿಯೇ ನಡೆಸಿರಬೇಕೆಂಬುದಕ್ಕೆ ಪ್ರಬಲ ಕಾರಣಗಳಿರುತ್ತವೆ. ಯಾಕಂದರೆ ಇತ್ತೀಚೆಗೆ ಜಗದ್ಗುರು ಜಗದ್ಗುರುಯೆಂದು ಪಲ್ಲಕ್ಕಿ ಮೆರೆಯಿಸುವ ಈ ಪಂಚಾಚಾರ್ಯರು ಬಸವಕಾಲದಲ್ಲಿಯೂ ತದನಂತರ ಎಷ್ಟೋ ಕಾಲದವರೆವಿಗೂ ಲುಪ್ತ ವಾಗಿದ್ದರು. ಅಂದರೆ ನಿದ್ರಾವಸ್ಥೆಯಲ್ಲಿದ್ದರು. ಯಾಕಂದರೆ ಆ ಕಾಲಕ್ಕೆ ಅವರ ಅಸ್ತಿತ್ವವೇ ಇದ್ದಿತ್ತೋ ಇಲ್ಲವೋ ಇದು ತಿಳಿಯು ವದಿಲ್ಲ. ಕಾರಣವೇನೆಂದರೆ ನಮ್ಮ ೬೩ ಪುರಾತನರ ಚರಿತ್ರೆಯ ಮೇಲಿಂದ ಬಸವ, ಚನ್ನಬಸವ, ಶ್ರೀ ಅಲ್ಲಮಪ್ರಭು ಶ್ರೀ ಸಿದ್ಧರಾಮೇ ಶ್ವರಾದಿ ಶಿವಶರಣರ ಮತ್ತು ಪ್ರಮಥ ಗಣಗಳ ನೂರಾರು ವಚನ ಗಳಲ್ಲಿ ಅಥವಾ ಅವರ ಪುರಾಣಗಳಲ್ಲಿ ಆ ಕಾಲದಲ್ಲಾಗಿ ಹೋದ ಅನೇಕ ಮಹಾಕವಿಗಳ ಕಾವ್ಯಗಳಲ್ಲಿಯೂ ಈ ಪಂಚಾಚಾರ್ಯರ ಜಗದ್ಗುರುತ್ವದ ವಿಷಯದಲ್ಲಿ ವಿಶೇಷ ಉಲ್ಲೇಖಗಳು ಕಾಣಿಸು ವದಿಲ್ಲ. ಆದುದರಿಂದ ತಮ್ಮ ಜಗದ್ಗುರುತ್ವಕ್ಕೆ ಈ ಪೂರ್ವ ಕಾಲೀನ ಪ್ರಮಥರ ಗ್ರಂಥಗಳೂ ಮತ್ತು ವಚನಗಳೂ ಬಾಧೆ ತರುವ ವೆಂದು ಒಳ್ಳೇ ಧೂರ್ತತೆಯಿಂದ ಇವರು ಆ ಶಿವಶರಣರ ನಿಂದೆ ಯನ್ನು ಮೊದಲಿನಿಂದಲೂ ಮಾಡಿ ಅವರಿಗೆ ದೂಷಣೆಯನು ಕೊಟ್ಟು ಅವರ ಮಹತ್ಕಾರ್ಯಗಳ ಕುಚೇಷ್ಟೆ ಮಾಡಿದರೆ ತವ್ಸ್

ಕಾರ್ಯಭಾಗವು ಸಾಧಿಸಬಹುದೆಂದು ತಿಳಿದು ಹಾಗೆ ಕಾರ್ಯಕ್ರಮವನ್ನು ಇವರು ಆರಂಭಿಸಿದ್ದಾರೆ. ಆದರೆ ಮುದುಕಿಯು ಕೋಳೀ ಬಚ್ಚಿಟ್ಟಳೆಂದು ಅರುಣೋದಯವಾಗುವದೇನು ನಿಲ್ಲಬಹುದೇ? ಸಾರಾಂಶ ತಮ್ಮ ಜಗದ್ಗುರುತ್ವದ ಉಲ್ಲೇಖವು ಶಿವಶರಣರ ವಚನಗಳಲ್ಲಿಯೂ, ಕಾವ್ಯಗಳಲ್ಲಿಯೂ ಪುರಾಣಗಳಲ್ಲಿಯೂ, ಗ್ರಂಥಗಳಲ್ಲಿಯೂ ಇಲ್ಲದಿರುವುದರಿಂದ ಅವರ ದೂಷಣೆಯು ಪಂಚಾಚಾರ್ಯರಿಂದಲೂ ಮತ್ತು ಅವರ ಅನುಯಾಯಿಗಳಿಂದಲೂ ಪ್ರತಿದಿನವೂ ಸಂಭವಿಸುತ್ತಿದ್ದರೆ ಆಶ್ಚರ್ಯವೇನು?

ಇತ್ತೀಚಿಗೆ ಶಿವಶರಣರ ನಿಂದೆಯನ್ನು ನಾವು ಎಲ್ಲಿ ಮಾಡಿದ್ದೇವೆ? ಮತ್ತು ಅವರ ನಿಂದೆಮಾಡುವುದರಿಂದ ನಮಗೇನು ಪ್ರಯೋಜನ? ಹೀಗೆ ಒಳ್ಳೇ ಸಂಭಾವಿತ ಮುದ್ರೆಯನ್ನು ಪಂಚಾಚಾರ್ಯರು ತರುತ್ತಿದ್ದಾರೆ. ಆದರೆ ಶಿವಶರಣರ ದೂಷಣೆಯನ್ನು ಮಾಡುವ ಚಿಕ್ಕಚಿಕ್ಕ ಪುಸ್ತಕಗಳು, ಜಾಹೀರಾತುಗಳು, ವೃತ್ತಪತ್ರಗಳು ಇಷ್ಟು ಹೊರಡಿಸಲ್ಪಟ್ಟಿರುತ್ತವಲ್ಲಾ ಎಷ್ಟೆಂದರೆ ನಿಂದಾ ಮಾಡುವವರ ಭಾರದಷ್ಟೇ ಅವುಗಳ ಭಾರವಾಗಬಹುದು. ಈ ಪೇಚಾಟಕ್ಕೆ ಉತ್ತರವೆಂದು ಅವರು ಹೇಳುತ್ತಿದ್ದಾರೆ, ನಿಂದೆಯನ್ನು ಕಾಶೀನಾಥ ಶಾಸ್ತ್ರಿ ಮಾಡುತ್ತಾನೆ. ಅವನನ್ನು ಕೇಳಿರಿ. ಅವನಲ್ಲಿ ನಮ್ಮದೇನು ಸಂಬಂಧ? ವಾಹವಾ! ಏನು ಯುಕ್ತಿವಾದವು! ಇಂತಹ ಕಣ್ಣುಕಟ್ಟಿನ ಯುಕ್ತಿಯಿಂದ ಬಾಸಿ‍ಯಂತಹ ಕನ್ನಡ ಭಾಷೆಯ ಪೂರ್ಣಜ್ಞಾನವಿಲ್ಲದ ವೀರಶೈವರಿಗೆ ಮಂಕು ಬಿದ್ದೀತು. ಹಳ್ಳಿಪಳ್ಳಿಯೊಳಗಿನ ಅಜ್ಞ ಜನರು ಮೋಸಹೋದಾರು. ಆದರೆ ಈ ಸೊಲ್ಲಾಪುರದ ಶಹರದ ಜನರಿಗೆ ಸ್ವಲ್ಪವಾದರೂ ಧರ್ಮಜ್ಞಾನವಿದೆ. ಅವರಿಗೆ ಶಿವಶರಣರ ಮಹತ್ಕಾರ್ಯಗಳ ವಿಷಯವು ಚೆನ್ನಾಗಿ ಗೊತ್ತಿದೆ. ಮತ್ತು ಅವರು ಇದೇ ಪಂಚಾಚಾರ್ಯರ ದುಷ್ಕೃತ್ಯದ ವಿಷಯವಾಗಿ ೩-೪ ವರ್ಷಗಳ ಪೂರ್ವದಲ್ಲಿ ಶ್ರೀ. ಮಲ್ಲಿಕಾರ್ಜುನ ದೇವಾಲಯದಲ್ಲಿ ಜಾಹೀರ ಸಭೆ ಕೂಡಿಸಿ ಮನಃಪೂರ್ವಕ ನಿಷೇಧವನ್ನು ವ್ಯಕ್ತಪಡಿಸಿದ್ದಾರೆ. ಇಂಥ ಜನರು ಮೋಸ ಹೋದಾರೆಂಬುದು ಅಶಕ್ಯ ಕಾಣುತ್ತದೆ. ಇರಲಿ.

ಪಂಚಾಚಾರ್ಯರು ಅನ್ನುತ್ತಾರೆ—'ನಾವು ನಿಂದಾ ಮಾಡಿಲ್ಲ. ಕಾಶೀನಾಥನು ಮಾಡುತ್ತಾನೆ.' ಆದರೆ ಕಾಶೀನಾಥನು ಯಾವ ಪತ್ರದಲ್ಲಿ ನಿಂದೆಮಾಡುತ್ತಿರುವನೋ ಆ ಪತ್ರವು ಯಾವುದು? ಆ ಪತ್ರವೆಂದರೆ 'ಪಂಚಾಚಾರ್ಯ ಪ್ರಭಾ? ಇದೇ ಅಲ್ಲವೇ? ಅಂದಮೇಲೆ ಯಾವ ಪತ್ರದಲ್ಲಿ ಸರ್ವ ಶಿವಶರಣರ ನಿಂದಾ ಮಾಡುತ್ತದೋ ಅಂಥ ಪತ್ರಕ್ಕೆ ಈ ಪಂಚಾಚಾರ್ಯರು ತಮ್ಮ ಹೆಸರನ್ನೇಕೆ ಕೊಡಬೇಕು? ಹಾಗೆಯೇ ಈ ಪತ್ರಕ್ಕೆ ಅವರು ಕೇವಲ ತಮ್ಮ ಹೆಸರನ್ನಷ್ಟೇ ಕೊಟ್ಟಿಲ್ಲ. ಆದರೆ ಅದಕ್ಕೆ ಸಾವಿರಾರು ರೂಪಾಯಿಗಳ ಸಹಾಯವನ್ನಾದರೂ ಮಾಡಿದ್ದಾರೆ. ಆದರಲ್ಲಿ ಹೆಚ್ಚಿಗೆ ಹಣ ಕೊಟ್ಟವರೆಂದರೆ ಉಜ್ಜನೀ ಸ್ವಾಮಿಗಳೇ. ಅಂದ ಮೇಲೆ ಈ ರೀತಿಯಿಂದ ಶರಣನಿಂದೆಗೆ ಪಂಚಾಚಾರ್ಯರ ಸಕ್ರಿಯ ಸಹಾನುಭೂತಿಯೂ, ಸಹಾಯವೂ ಮತ್ತು ಉತ್ತೇಜನವೂ ಇರುವದೆಂಬುದು ನಿಚ್ಚಳವಾಗಿದೆ. ಇದಲ್ಲದೆ ಯಾವ ಕಾಶೀನಾಥನು ಶರಣನಿಂದೆಯನ್ನು ಮಾಡುತ್ತಿರುವನೋ ಅವನು ಪಂಚಾಚಾರ್ಯರ ಕಟ್ಟಾ ಅನುಯಾಯಿಯು. ಇಷ್ಟೇ ಅಲ್ಲ, ಆದರೆ ಎಲ್ಲಿಎಲ್ಲಿ ಈ ಸ್ವಾಮಿಗಳು ಹೋಗುತ್ತಾರೆಯೋ ಅಲ್ಲಿಅಲ್ಲಿ ಅವನೂ ಹೋಗುತ್ತಾನೆ. ಮತ್ತು ವ್ಯಾಖ್ಯಾನ ವೊದಲಾದ ರೂಪದಿಂದ ಪಂಚಾಚಾರ್ಯರ ಸ್ತುತಿ ಹಾಡಿ ನಿರಂಜನ ಮೂರ್ತಿಗಳ ನಿಂದೆಯನ್ನು ಮಾಡುತ್ತಾನೆ. ಅವನ ಕೃತ್ಯವು ಒಂದು ವೇಳೆ ಈ ಪಂಚಾಚಾರ್ಯರಿಗೆ ಸಮ್ಮತವಿಲ್ಲದಿದ್ದರೆ ಇವರು ಆ ಕಾಶೀನಾಥನನ್ನು ಹತ್ತಿರ ಏಕೆ ಇಟ್ಟುಕೊಳ್ಳುತ್ತಾರೆ? ಪ್ರತ್ಯಕ್ಷ ತಮ್ಮ ಮುಂದೆಯೇ ಅವನ ಬಾಯಿಯಿಂದಾಗುವ ಶರಣರ ಮತ್ತು ವಿರಕ್ತರ ನಿಂದೆಯನ್ನು ಯಾಕೆ ನಿಲ್ಲಿಸುವದಿಲ್ಲ? ಇಂಥ ಪ್ರಕಾರ ದೋಷಮುಖ ವರ್ತನವು ಜಗದ್ಗುರುವೆಂದೆನಿಸಿಕೊಳ್ಳುವವರಿಗೆ ಯೋಗ್ಯವೋ?

ಒಂದುವೇಳೆ ಈ ಶಿವಶರಣರ ನಿಂದೆಯು ಪಂಚಾಚಾರ್ಯರಿಗೆ ಸ್ವಲ್ಪವೂ ಸಂಬಂಧವಿಲ್ಲವೆಂದೂ, ಶರಣನಿಂದೆಯು ಆಗಬಾರದೆಂದೂ ಒಂದು ವೇಳೆ ಈ ಪಂಚಾಚಾರ್ಯರಿಗೆ ಮನಃಪೂರ್ವಕವಾಗಿ ಅನಿಸುತ್ತಿದ್ದರೆ ನಾವು ಶರಣರ ಮತ್ತು ವಿರಕ್ತರ ನಿಂದೆಯನ್ನು ಮಾಡುತ್ತಿರುವುದಿಲ್ಲ; ಮುಂದಾದರೂ ಮಾಡುವದಿಲ್ಲ ಯಾರು ನಿಂದಾ ಮಾಡುವರೋ ಅವರು ನಿಂದ್ಯರು, ಬಹಿಷ್ಕಾರಕ್ಕೆ ಪಾತ್ರರೆಂಬರ್ಥದ ಆಜ್ಞಾ ಪತ್ರವನ್ನೂ ಈ ಉಜ್ಜನೀ ಆಚಾರ್ಯರು ಪಂಚಾಚಾರ್ಯ ಪ್ರಭೆಯಲ್ಲಿಯೂ ಮತ್ತು ಬೇರೆ ಜಾಹೀರ ಕನ್ನಡ ಮರಾಠಿ ವೃತ್ತಪತ್ರಿಕೆಗಳಲ್ಲಿಯೂ ಪ್ರಸಿದ್ಧಪಡಿಸಬೇಕೆಂದು ನಾವೂ ಬೇರೆ ಸದ್ಗೃಹಸ್ಥರೂ ಪಂಚಾಚಾರ್ಯರಿಗೆ ಅನೇಕ ಸಾರಿ ಎಷ್ಟೋ ಸ್ಥಾನಗಳಲ್ಲಿ ಜಾಹೀರ ಆಹ್ವಾನ ಮಾಡಿದ್ದೇವೆ. ಆ ಆಹ್ವಾನೆಗೆ ಎಲ್ಲಿಯವರೆಗೆ ಮೇಲೆ ಬರೆದ ಪ್ರಕಾರ ಜಾಹೀರ ಉತ್ತರವು ಸ್ವಾಮಿಗಳ ಕಡೆಯಿಂದ ದೊರೆಯುವದಿಲ್ಲವೋ ಅಲ್ಲಿಯವರೆಗೆ ಅವರು ಶರಣನಿಂದಾ ಮಾಡುತ್ತಾರೆಂಬುದೂ ಮತ್ತು ಶರಣ ನಿಂದೆಗೆ ಇವರ ಸಕ್ರಿಯ ಸಹಾನುಭೂತಿಯಿರುವದೆಂದೂ ಆಗುವದಿಲ್ಲವೇ?

ಮೇಲಿನ ಎಲ್ಲ ವಿವೇಚನೆಗಳಿಂದ ಈ ಆಚಾರ್ಯರು ಜಗದ್ಗುರುಗಳಾಗಬಲ್ಲರೋ? ಸರ್ವ ವೀರಶೈವರಿಗೆ ಯಾರು ಗುರುಗಳಾಗಲು ಶಕ್ಯವಿಲ್ಲವೋ ಮತ್ತು ವೀರಶೈವರ ಒಂದು ಭಾಗದ ಮೇಲೆಯೇ ಯಾರ ಗುರುತ್ವವು ನಡೆಯುತ್ತದೋ ಅವರು ಜಗದ್ಗುರುಗಳು ಹೇಗೆ? ಅಂದಮೇಲೆ ಈಗ ಜಗದ್ಗುರುವೆಂದು ಯಾರಿಗೆ ಅನ್ನಬೇಕು? ಈ ಪ್ರಶ್ನೆಯನ್ನು ಬಿಡಿಸಲು ನಾನು ಸೊಲ್ಲಾಪುರದ ವೀರಶೈವರಿಗೇ ಒಪ್ಪಿಸುತ್ತೇನೆ. ಇಲ್ಲಿ ಎಷ್ಟೋ ಜನ ವಿದ್ವಾಂಸರೂ, ಶಾಸ್ತ್ರಿಗಳೂ, ಪಂಡಿತರೂ ಇದ್ದಾರೆ. ಅಂದಮೇಲೆ ಅವರು ಈ ಪ್ರಶ್ನೆಯನ್ನು ಹೇಗೆ ಬಿಡಿಸುತ್ತಾರೋ ನೋಡೋಣ.

ತಮ್ಮ ಒಬ್ಬ

ವೀರಶೈವ ಧರ್ಮಾಭಿಮಾನಿ.

—ಅಸ್ಪೃಶ್ಯಸೇವಕ ಸಮಾಜದ ಪುಣೆ ಶಾಖೆಯ ಕಾರ್ಯಕರ್ತರು 'ಹರಿಜನ' ಪತ್ರಿಕೆಯನ್ನು ಮುಂಬಯಿ ಇಲಾಖೆಯ ರಾಜಕೀಯ ಸೆರೆಯಾಳುಗಳಿಗೆ ಓದಲಿಕ್ಕೆ ಅಪ್ಪಣೆ ಕೊಡಬೇಕೆಂದು ಮುಂಬಯಿ ಸರಕಾರದವರಿಗೆ ವಿಜ್ಞಾಪನೆ ಮಾಡಿಕೊಂಡಿದ್ದರು. ಆದರೆ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯು ವಾದಗ್ರಸ್ತವಿದ್ದುದರಿಂದ ಹಾಗೆ ಅಪ್ಪಣೆ ಕೊಡಲು ಬರುವುದಿಲ್ಲವೆಂದು ಸರಕಾರದವರು ತಿಳಿಸಿವರು.

—ಅಸ್ಪೃಶ್ಯತಾನಿವಾರಣಾ ಕಾರ್ಯಕ್ಕಾಗಿ ಶ್ರೀ ಅಮೃತಲಾಲ ಠಕ್ಕರ ಇವರು ಪಂಜಾಬದಲ್ಲಿ ಪ್ರವಾಸಮಾಡುತ್ತಿದ್ದು ಅಲ್ಲಲ್ಲಿ ಅವರ ಭಾಷಣಗಳಾಗುತ್ತಿರುವವು. ಪಂಜಾಬದ ಅಸ್ಪೃಶ್ಯರಿಗೆ ಅವರ ಸೊತ್ತಿನ ಒಂದು ಇಂಚುಕೂಡಾ ಭೂಮಿಯಿರುವದಿಲ್ಲವೆಂದೂ ಮತ್ತು ಜಮೀನದಾರರೂ ಅವರನ್ನು ವೇತನವಿಲ್ಲದೆ ದುಡಿಸಿಕೊಳ್ಳುತ್ತಿರುವರೆಂದೂ ಅವರಿಗೆ ಕಂಡು ಬಂದಿತು.

—ಪ್ರೊ. ರಂಗಾ ಇವರು ಒಂದು ಹರಿಜನ ಸೇವಾದಲವನ್ನೇರ್ಪಡಿಸಿ ಆ ಕಾರ್ಯಕರ್ತರೆಲ್ಲ ಗುಂಟೂರು ಜಿಲ್ಲೆಯ ೧೫ ಹಳ್ಳಿಗಳಲ್ಲಿ ಸಂಚಾರ ಮಾಡಿದರು. ಅಲ್ಲಿಯ ಉತ್ಸಾಹಿ ತರುಣರನ್ನು ಕೂಡಿಸಿ ಅವರಿಗೆ ಸ್ವಚ್ಛತೆ ಮತ್ತು ಆರೋಗ್ಯದಿಂದಿರುವಂತೆ ಬೋಧಿಸಿದುದಲ್ಲದೆ ಆ ತರುಣರು ಬೇರೆ ನೆರೆಯಲ್ಲಿಯ ೫ ಹಳ್ಳಿಗಳಿಗೆ ಹೋಗಿ ಸೇವಾ, ಸ್ವಚ್ಛತೆಯ ವಿಷಯದಲ್ಲಿ ಉಪದೇಶ ಮಾಡಿ ಪ್ರೊ. ರಂಗಾ ಇವರ ಕಡೆಗೆ ತಿಳಿಸಬೇಕೆಂದು ಅಭಿವಚನ ತೆಗೆದುಕೊಂಡರು

ಅಖಿಲ ವೀರಶೈವರಿಗೆ ಜಗದ್ಗುರು ಯಾರು?

ಸೊಲ್ಲಾಪುರದ ವೀರಶೈವರಿರಾ,

ನಾವು ಈಗ ನಿಮಗೆ ಒಂದು ಜಾಹೀರ ಪ್ರಶ್ನೆಯನ್ನು ಕೇಳುತ್ತಿದ್ದೇವೆ. ಸದ್ಯಕ್ಕೆ ನಮ್ಮ ಸಮಾಜದಲ್ಲಿ ಜಗದ್ಗುರುಗಳ ಸಮೂಹವೇ ಹೊರಟಂತೆ ಕಾಣುತ್ತದೆ. ಬಹಳ ಉತ್ಪನ್ನವಿರುವ ಮಠದ ಯಾವ ಸ್ವಾಮಿಯು ಬಂದರೂ ಅವರು ತಾವು ಜಗದ್ಗುರುವೆಂದು ಹೇಳಿಸಿಕೊಳ್ಳುತ್ತಾರೆ. ಹಿಂದಕ್ಕೆ ಚಿತ್ರಕಲ್ಲದುರ್ಗದ ಸ್ವಾಮಿಗಳು ಬಂದಿದ್ದರು. ಅವರು ಶೂನ್ಯ ಸಿಂಹಾಸನಾಧೀಶ ಜಗದ್ಗುರುಗಳು. ಅವರ ನಂತರ ಅನೇಕ ಜನ ಸ್ವಾಮಿಗಳು ಜಗದ್ಗುರುಗಳೆಂದೆನಿಸಿಕೊಳ್ಳುತ್ತಿದ್ದಾರೆ. ಮತ್ತು ಈಗ ಸೊಲ್ಲಾಪುರಕ್ಕೆ ಬರಬೇಕೆಂದಿಚ್ಛಿಸುವ ಉಜ್ಜನಿಯ ಆಚಾರ್ಯರೂ ತಾವು ಜಗದ್ಗುರುಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಅದೇ ಪ್ರಕಾರ ಉಳಿದ ನಾಲ್ವರು. ಚೌದದಾನಪುರದ ಸ್ವಾಮಿ ವಿರೂಪಾಕ್ಷ ಒಡೆಯರಾದರೋ ತಾವು ಜಗದ್ಗುರು ಜಗದಾಚಾರ್ಯರೆಂದು ಹೇಳಿಕೊಳ್ಳುತ್ತಿದ್ದಾರೆ. ಆದುದರಿಂದ ಅಖಿಲ ವೀರಶೈವ ಸಮಾಜಕ್ಕೆ ನಿಜವಾದ ಜಗದ್ಗುರುಗಳಾರೆಂಬುದೇ ನಮಗೊಂದು ಗೂಢ ಪ್ರಶ್ನೆಯಾಗಿದೆ.

ವೀರಶೈವ ಸಮಾಜ ವ್ಯವಸ್ಥೆಗಾಗಿ ಮುಖ್ಯವಾಗಿ ಪಂಚ ಪೀಠಗಳಿಗೆ ಪಂಚ ಆಚಾರ್ಯರಿರುತ್ತಾರೆ. ಅವರು ಪಂಚಾಚಾರ್ಯರೆಂಬ ಹೆಸರಿನಿಂದ ಪ್ರಸಿದ್ಧವಿರುತ್ತಾರೆ. ಅವರೊಳಗೆ ಉಜ್ಜನೀ ಪೀಠದ ಆಚಾರ್ಯರು ಸದ್ಯಕ್ಕೆ ಖಾಸ ಮುಕ್ಕಾಮಿನಲ್ಲಿದ್ದು ಅವರು ಸೊಲ್ಲಾಪುರಕ್ಕೆ ಬರಬೇಕೆಂದು ಇಚ್ಛಿಸುತ್ತಿದ್ದಾರೆ. ಈ ಆಚಾರ್ಯರು ತಮಗೆ ಜಗದ್ಗುರುಗಳೆಂದು ಹೇಳಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಜಗದ್ಗುರುವೆಂಬ ಸಂಜ್ಞೆಯು, ಜಗದ್ಗುರುವೆಂಬ ಹೆಸರು ಇವರಿಗೆ ಇಟ್ಟುಕೊಳ್ಳಲಿಕ್ಕೆ ಬರುತ್ತದೆಯೋ ಹೇಗೆಂದು ವಿಚಾರಮಾಡೋಣ.

ಜಗದ್ಗುರು ಈ ಶಬ್ದದ ಶಬ್ದಶಃ ಅರ್ಥವು ಸರ್ವಜಗತ್ತಿನ ಗುರುವೆಂದು ಆಗುತ್ತದೆ, ಈ ಪ್ರಸಂಗದಲ್ಲಿ ಅಖಿಲ ಜಗವೆಂದರೆ ವೀರಶೈವ ಜಗತ್ತು ಅಥವಾ ಅಖಿಲ ವೀರಶೈವ ಸಮಾಜವೆಂದು ತಿಳಿಯೋಣ. ಅಂದಮೇಲೆ ಅಖಿಲ ವೀರಶೈವ ಜಗದ್ಗುರುಗಳು ಈ ಸ್ವಾಮಿಗಳಾಗಬಲ್ಲರೇನು?

ಅಖಿಲ ವೀರಶೈವ ಸಮಾಜದಲ್ಲಿ ಐದು ಭಾಗಗಳಿದ್ದು ಅವುಗಳಿಗೆ ಮುಖ್ಯರಾದಂಥ ಐದು ಜನ ಆಚಾರ್ಯರಿರುವರೆಂದು ಮೇಲೆ ಹೇಳಿದೆ. ವೀರಶೈವ ಗೋತ್ರಗಳು ಐದು ಇದ್ದು ಮಹಾ ಸೂತ್ರಗಳೂ ಐದು ಇರುತ್ತವೆ. ಪ್ರತಿಯೊಬ್ಬ ಆಚಾರ್ಯರು ತಮ್ಮತಮ್ಮ ಗೋತ್ರಗಳುಳ್ಳಂಥ ಜನರಿಗೇನೇ ಗುರುಗಳಾಗುತ್ತಾರೆ. ಉದಾಹರಣಾರ್ಥವಾಗಿ ಬಾಳೇಹಳ್ಳಿಯ ರೇವಣಾರಾಧ್ಯರು ವೀರಗೋತ್ರದ ಮತ್ತು ಪಡ್ವಿಡಿ ಸೂತ್ರದ ಮುಖ್ಯರಾಗಿದ್ದು ಅದೇ ಗೋತ್ರಸೂತ್ರಗಳುಳ್ಳವರಿಗೇನೇ ಅವರು ಗುರುಗಳು. ಉಜ್ಜನಿ ಆಚಾರ್ಯರು ನಂದಿಗೋತ್ರದವರಿದ್ದು ಅವರದು ವೃಷ್ಟಿಸೂತ್ರ ಮಳಿಬಗಿಯಾಗಿದೆ. ಅದೇ ಗೋತ್ರಸೂತ್ರಗಳುಳ್ಳವರಿಗೇನೇ ಅವರ ಗುರುತ್ವವು ಮತ್ತು ಗುರುತ್ವದ ಅಧಿಕಾರವು. ಈ ಪ್ರಕಾರ ಈ ಪಂಚ ಆಚಾರ್ಯರು ಐದು ಭಿನ್ನ ಭಿನ್ನ ಶಾಖೆಗಳಿಗೆ ಮುಖ್ಯರಾಗಿದ್ದಾರೆ. ಒಂದು ಶಾಖೆಯ ಗುರುವು ಪಂಚಗೋತ್ರಸೂತ್ರಗಳ ಜನರ ಮೇಲೆಯೂ ಗುರುವಾಗಲು ಬರುವುದಿಲ್ಲ. ಮತ್ತು ಅವರ ಅಧಿಕಾರವೂ ಐದು ಶಾಖೆಗಳ ಮೇಲೆ ನಡೆಯಲಾರದು. ಆದುದರಿಂದಲೇ ಒಂದು ಪೀಠದ ಆಚಾರ್ಯರಿಗೆ ಅಖಿಲ ವೀರಶೈವ ಸಮಾಜದ ಗುರು ಅಥವಾ ಜಗದ್ಗುರುವೆಂದು ಅನ್ನಿಸಿಕೊಳ್ಳಲು ಬಾರದೆಂದೇ ಸಿದ್ಧವಾಗುತ್ತಿದೆ. ಅದೇ ಪ್ರಕಾರ ಒಂದು ಶಾಖೆಯ ಶಿಷ್ಯನು ಎರಡನೇ ಶಾಖೆಯ ಗುರುವಿಗೆ ತನ್ನ ಗುರುವೆಂದು ಅನ್ನಲಿಕ್ಕೆ ಬರುವುದಿಲ್ಲ. ಒಬ್ಬ ಸ್ತ್ರೀಯಳಿಗೆ ಒಬ್ಬನೇ ಪತಿಯು ಇರುತ್ತಿರಲು ಆ ಸ್ತ್ರೀಯಳು ಎರಡನೇಯವರು ತನ್ನ ಪತಿಯೆಂದು ತಿಳಿದುಕೊಳ್ಳೋಣವು ಯಾವ ಪ್ರಕಾರ ನಿಷಿದ್ಧವೋ ಅದೇ ಪ್ರಕಾರ ಒಂದು ಶಾಖೆಯ ಶಿಷ್ಯನು ಎರಡನೇ ಶಾಖೆಯ ಗುರುವನ್ನು ತನ್ನ ಗುರುವೆಂದು ತಿಳಿದುಕೊಂಡರೆ ಹಾಗೆಯೇ ಆಗಲಿಕ್ಕಿಲ್ಲವೇ? ಆವಾಗ್ಗೆ ಅವನು ತನ್ನ ಗುರುವಿನ ಹೊರತಾಗಿ ಎರಡನೇ ಶಾಖೆಯ ಆಚಾರ್ಯರಿಗೆ ಗುರುವೆಂದು ತಿಳಿಯುವುದು ತಪ್ಪಾಗುವುದು. ಈ ಎಲ್ಲ ಸಂಗತಿಗಳ ವಿಚಾರವನ್ನು ಇಲ್ಲಿಯ ಸೂಜ್ಞ ವೀರಶೈವರು ಅವಶ್ಯವಾಗಿ ಮಾಡತಕ್ಕದ್ದು. ಮತ್ತು ಈಗ ಬರಬೇಕೆಂದಿರುವ ಆಚಾರ್ಯರಿಗೆ ಜಗದ್ಗುರುವೆಂದು ಎಷ್ಟುಮಟ್ಟಿಗೆ ಅನ್ನಲಿಕ್ಕೆ ಬಂದೀತು ಎಂಬುದನ್ನು ನಿರ್ಣಯಿಸಬೇಕು.

ಇದಲ್ಲದೆ ಈ ಯಾವ ಐದು ಪೀಠಗಳಿರುವವೋ ಮತ್ತು ಆ ಪಂಚ ಪೀಠಗಳಿಗೆ ಯಾವ ಪಂಚ ಆಚಾರ್ಯರಿರುವರೋ ಅವರು ಪೀಠಾಧಿಕಾರಿಗಳಾಗಿದ್ದು ಆ ಪೀಠಗಳಲ್ಲಿ ಪುನಃ ಪಟ್ಟ ಮತ್ತು ಚರ ಅರ್ಥಾತ್ ಪಟ್ಟಾಧಿಕಾರಿ ಮತ್ತು ಚರಮೂರ್ತಿಯೆಂಬ ಭೇದಗಳಿರುತ್ತವೆ. ಅವರಲ್ಲಿ ಪಟ್ಟಾಧಿಕಾರಿ ಅಥವಾ ಈ ಪಂಚಾಚಾರ್ಯರು ಸ್ಥಿರವಾಗಿದ್ದು ಆ ಪೀಠದ ಚರಂತಿ ಅಂದರೆ ಸಂಚಾರಮಾಡುವ ಸ್ವಾಮಿಗಳೇ ಸಂಚಾರ ಮಾಡಬೇಕಾಗುತ್ತದೆ. ಆದರೆ ಜಗದ್ಗುರುವಿನ ಹವ್ಯಾಸಕ್ಕಾಗಿ ಆ ಚರಂತಿ ಸ್ವಾಮಿಗಳನ್ನು ಬದಿಗಿರಿಸಿ ಈ ಪೀಠಾಧಿಕಾರಿಗಳು ಸ್ವತಃ ಸಂಚಾರಮಾಡುತ್ತಿದ್ದು ಜಗದ್ಗುರುವೆಂದು ಮೆರೆಯಿಸಿಕೊಳ್ಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಯೋಗ್ಯವಾಗಿದೆಯೆಂಬ ವಿಚಾರವನ್ನಾದರೂ ಸೂಜ್ಞ ವೀರಶೈವರು ಅವಶ್ಯವಾಗಿ ಮಾಡಬೇಕು.

ಇತ್ತಿತ್ತಲಾಗಿ ಈ ಪಂಚಾಚಾರ್ಯರೂ ಮತ್ತು ಅವರ ಅನುಯಾಯಿಗಳೂ ಬಸವಾದಿ ಪ್ರಮಥರ ವಿಷಯವಾಗಿಯೂ ಅತಿಶಯವಾದ ನಿಂದಾಯುಕ್ತ ಮತ್ತು ಹೇಯವನ್ನು ಹುಟ್ಟಿಸುವ ವಿಧಾನಗಳನ್ನು ಪ್ರಸಿದ್ಧ ಮಾಡಿದ್ದಾರೆ. ಇಂಥ ನಿಂದೆಯು ಪಂಚಾಚಾರ್ಯರ ಕಡೆಯಿಂದಲೂ ಮತ್ತು ಅವರ ಅನುಯಾಯಿಗಳ ಕಡೆಯಿಂದಲೂ ಆಗುವುದೇನೂ ಹೊಸದಲ್ಲ. ಇಷ್ಟೇ ಅಲ್ಲದೆ ಈ ನಿಂದೆಯನ್ನು ಅವರು ಬುದ್ಧಿಪುರಸ್ಸರವಾಗಿಯೇ ನಡೆಸಿರಬೇಕೆಂಬುದಕ್ಕೆ ಪ್ರಬಲ ಕಾರಣಗಳಿರುತ್ತವೆ. ಯಾಕಂದರೆ ಇತ್ತೀಚೆಗೆ ಜಗದ್ಗುರು ಜಗದ್ಗುರುಯೆಂದು ಪಲ್ಲಕ್ಕಿ ಮೆರೆಯಿಸುವ ಈ ಪಂಚಾಚಾರ್ಯರು ಬಸವಕಾಲದಲ್ಲಿಯೂ ತದನಂತರ ಎಷ್ಟೋ ಕಾಲದವರೆವಿಗೂ ಲುಪ್ತವಾಗಿದ್ದರು. ಅಂದರೆ ನಿದ್ರಾವಸ್ಥೆಯಲ್ಲಿದ್ದರು. ಯಾಕಂದರೆ ಆ ಕಾಲಕ್ಕೆ ಅವರ ಅಸ್ತಿತ್ವವೇ ಇದ್ದಿತ್ತೋ ಇಲ್ಲವೋ ಇದು ತಿಳಿಯುವದಿಲ್ಲ. ಕಾರಣವೇನೆಂದರೆ ನಮ್ಮ: ೬೩ ಪುರಾತನರ ಚರಿತ್ರೆಯ ಮೇಲಿಂದ ಬಸವ, ಚನ್ನಬಸವ, ಶ್ರೀ ಅಲ್ಲಮಪ್ರಭು ಶ್ರೀ ಸಿದ್ಧರಾಮೇಶ್ವರಾದಿ ಶಿವಶರಣರ ಮತ್ತು ಪ್ರಮಥ ಗಣಗಳ ನೂರಾರು ವಚನಗಳಲ್ಲಿ ಅಥವಾ ಅವರ ಪುರಾಣಗಳಲ್ಲಿ ಆ ಕಾಲವಲ್ಲಾಗಿ ಹೋದ ಅನೇಕ ಮಹಾಕವಿಗಳ ಕಾವ್ಯಗಳಲ್ಲಿಯೂ ಈ ಪಂಚಾಚಾರ್ಯರ ಜಗದ್ಗುರುತ್ವದ ವಿಷಯದಲ್ಲಿ ವಿಶೇಷ ಉಲ್ಲೇಖಗಳು ಕಾಣಿಸುವದಿಲ್ಲ. ಆದುದರಿಂದ ತಮ್ಮ ಜಗದ್ಗುರುತ್ವಕ್ಕೆ ಈ ಪೂರ್ವಕಾಲೀನ ಪ್ರಮಥರ ಗ್ರಂಥಗಳೂ ಮತ್ತು ವಚನಗಳೂ ಬಾಧೆ ತರುವವೆಂದು ಒಳ್ಳೇ ಧೂರ್ತತೆಯಿಂದ ಇವರು ಆ ಶಿವಶರಣರ ನಿಂದೆಯನ್ನು ಮೊದಲಿನಿಂದಲೂ ಮಾಡಿ ಅವರಿಗೆ ದೂಷಣೆಯನ್ನು ಕೊಟ್ಟು, ಅವರ ಮಹತ್ಕಾರ್ಯಗಳ ಕುಚೇಷ್ಟೆ ಮಾಡಿದರೆ ತನ್ನ

ಾರ್ಯಭಾಗವು ಸಾಧಿಸಬಹುದೆಂದು ತಿಳಿದು ಹಾಗೆ ಕಾರ್ಯ
ಕ್ರಮವನ್ನು ಇವರು ಆರಂಭಿಸಿದ್ದಾರೆ. ಆದರೆ ಮುದುಕಿಯು
ಾಳೀ ಬಚ್ಚಿಟ್ಟಳೆಂದು ಅರುಣೋದಯವಾಗುವದೇನು ನಿಲ್ಲಿ
ುಹುದೇ? ಸಾರಾಂಶ ತಮ್ಮ ಜಗದ್ಗುರುತ್ವದ ಉಲ್ಲೇಖವು ಶಿವ
ರಣರ ವಚನಗಳಲ್ಲಿಯೂ, ಕಾವ್ಯಗಳಲ್ಲಿಯೂ ಪುರಾಣಗಳಲ್ಲಿಯೂ,
ಗ್ರಂಥಗಳಲ್ಲಿಯೂ ಇಲ್ಲದಿರುವುದರಿಂದ ಅವರ ದೂಷಣೆಯು ಪಂಚಾ
ಚಾರ್ಯರಿಂದಲೂ ಮತ್ತು ಅವರ ಅನುಯಾಯಿಗಳಿಂದಲೂ ಪ್ರತಿ
ದಿನವೂ ಸಂಭವಿಸುತ್ತಿದ್ದರೆ ಆಶ್ಚರ್ಯವೇನು?

ಇತ್ತೀಚೆಗೆ ಶಿವಶರಣರ ನಿಂದೆಯನ್ನು ನಾವು ಎಲ್ಲಿ ಮಾಡಿ
ದ್ದೇವೆ? ಮತ್ತು ಅವರ ನಿಂದೆಮಾಡುವುದರಿಂದ ನಮ
ಗೇನು ಪ್ರಯೋಜನ? ಹೀಗೆ ಒಳ್ಳೇ ಸಂಭಾವಿತ ಮುದ್ರೆಯನ್ನು
ಪಂಚಾಚಾರ್ಯರು ತರುತ್ತಿದ್ದಾರೆ. ಆದರೆ ಶಿವಶರಣರ ದೂಷಣೆ
ಯನ್ನು ಮಾಡುವ ಚಿಕ್ಕಚಿಕ್ಕ ಪುಸ್ತಕಗಳು, ಜಾಹೀರಾತುಗಳು,
ವೃತ್ತಪತ್ರಗಳು ಇಷ್ಟು ಹೊರಡಿಸಲ್ಪಟ್ಟಿರುತ್ತವಲ್ಲಾ ಎಷ್ಟೆಂದರೆ
ನಿಂದಾ ಮಾಡುವವರ ಭಾರದಷ್ಟೇ ಅವುಗಳ ಭಾರವಾಗಬಹುದು.
ಈ ಪೇಚಾಟಕ್ಕೆ ಉತ್ತರವೆಂದು ಅವರು ಹೇಳುತ್ತಿದ್ದಾರೆ, ನಿಂದೆ
ಯನ್ನು ಕಾಶೀನಾಥ ಶಾಸ್ತ್ರಿ ಮಾಡುತ್ತಾನೆ. ಅವನನ್ನು ಕೇಳಿರಿ.
ಅವನಲ್ಲಿ ನಮ್ಮದೇನು ಸಂಬಂಧ? ವಾಹವಾ! ಏನು ಯುಕ್ತಿವಾದವು!
ಇಂತಹ ಕಣ್ಣುಕಟ್ಟಿನ ಯುಕ್ತಿಯಿಂದ ಬಾರ್ಸಿಯಂತಹ ಕನ್ನಡ
ಭಾಷೆಯ ಪೂರ್ಣಜ್ಞಾನವಿಲ್ಲದ ವೀರಶೈವರಿಗೆ ಮಂಕು ಬಿದ್ದೀತು.
ಹಳ್ಳಿಪಳ್ಳಿಯೊಳಗಿನ ಅಜ್ಞ ಜನರು ಮೋಸಹೋದಾರು. ಆದರೆ
ಈ ಸೊಲ್ಲಾಪುರದ ಶಹರದ ಜನರಿಗೆ ಸ್ವಲ್ಪವಾದರೂ ಧರ್ಮಜ್ಞಾನ
ಇದೆ. ಅವರಿಗೆ ಶಿವಶರಣರ ಮಹತ್ಕಾರ್ಯಗಳ ವಿಷಯವು ಚೆನ್ನಾಗಿ
ಗೊತ್ತಿದೆ. ಮತ್ತು ಅವರು ಇದೇ ಪಂಚಾಚಾರ್ಯರ ದುಷ್ಕೃ
ತ್ಯದ ವಿಷಯವಾಗಿ ೩-೪ ವರ್ಷಗಳ ಪೂರ್ವದಲ್ಲಿ ಶ್ರೀ. ಮಲ್ಲಿಕಾರ್ಜುನ
ದೇವಾಲಯದಲ್ಲಿ ಜಾಹೀರ ಸಭೆ ಕೂಡಿಸಿ ಮನಃಪೂರ್ವಕ ನಿಷೇಧ
ವನ್ನು ವ್ಯಕ್ತಪಡಿಸಿದ್ದಾರೆ. ಇಂಥ ಜನರು ಮೋಸ ಹೋದಾ
ರೆಂಬುದು ಅಶಕ್ಯ ಕಾಣುತ್ತದೆ. ಇರಲಿ.

ಪಂಚಾಚಾರ್ಯರು ಅನ್ನುತ್ತಾರೆ—'ನಾವು ನಿಂದಾ ಮಾಡಿಲ್ಲ.
ಕಾಶೀನಾಥನು ಮಾಡುತ್ತಾನೆ.' ಆದರೆ ಕಾಶೀನಾಥನು ಯಾವ
ಪತ್ರದಲ್ಲಿ ನಿಂದೆಮಾಡುತ್ತಿರುವನೋ ಆ ಪತ್ರವು ಯಾವುದು?
ಆ ಪತ್ರವೆಂದರೆ 'ಪಂಚಾಚಾರ್ಯ ಪ್ರಭಾ? ಇದೇ ಅಲ್ಲವೇ?
ಅಂದಮೇಲೆ ಯಾವ ಪತ್ರದಲ್ಲಿ ಸರ್ವ ಶಿವಶರಣರ ನಿಂದಾ ಮಾಡು
ತ್ತದೋ ಅಂಥ ಪತ್ರಕ್ಕೆ ಈ ಪಂಚಾಚಾರ್ಯರು ತಮ್ಮ ಹೆಸ
ರನ್ನೇಕೆ ಕೊಡಬೇಕು? ಹಾಗೆಯೇ ಈ ಪತ್ರಕ್ಕೆ ಅವರು ಕೇವಲ
ತಮ್ಮ ಹೆಸರನ್ನಷ್ಟೇ ಕೊಟ್ಟಿಲ್ಲ. ಆದರೆ ಅದಕ್ಕೆ ಸಾವಿರಾರು
ರೂಪಾಯಿಗಳ ಸಹಾಯವನ್ನಾದರೂ ಮಾಡಿದ್ದಾರೆ. ಅದರಲ್ಲಿ
ಪಿಟ್ಟಿಗೆ ಹಣ ಕೊಟ್ಟವರೆಂದರೆ ಉಜ್ಜನೀ ಸ್ವಾಮಿಗಳೇ. ಅಂದ
ಮೇಲೆ ಈ ರೀತಿಯಿಂದ ಶರಣನಿಂದೆಗೆ ಪಂಚಾಚಾರ್ಯರ ಸಕ್ರಿಯ
ಸಹಾನುಭೂತಿಯೂ, ಸಹಾಯವೂ ಮತ್ತು ಉತ್ತೇಜನವೂ ಇರುವ
ದೆಂಬುದು ನಿಚ್ಚಳವಾಗಿದೆ. ಇದಲ್ಲವೆ ಯಾವ ಕಾಶೀನಾಥನು
ಶರಣನಿಂದೆಯನ್ನು ಮಾಡುತ್ತಿರುವನೋ ಆವನು ಪಂಚಾಚಾರ್ಯರ
ಕಟ್ಟಾ ಅನುಯಾಯಿಯು. ಇಷ್ಟೇ ಅಲ್ಲ. ಆದರೆ ಎಲ್ಲಿಎಲ್ಲಿ ಈ
ಸ್ವಾಮಿಗಳು ಹೋಗುತ್ತಾರೆಯೋ ಅಲ್ಲಿಅಲ್ಲಿ ಅವನೂ ಹೋಗುತ್ತಾನೆ.
ಮತ್ತು ವ್ಯಾಖ್ಯಾನ ಮೊದಲಾದ ರೂಪದಿಂದ ಪಂಚಾಚಾರ್ಯರ
ಸ್ತುತಿ ಹಾಡಿ ನಿರಂಜನ ಮೂರ್ತಿಗಳ ನಿಂದೆಯನ್ನು ಮಾಡುತ್ತಾನೆ.
ಅವನ ಕೃತ್ಯವು ಒಂದು ವೇಳೆ ಈ ಪಂಚಾಚಾರ್ಯರಿಗೆ ಸಮ್ಮತ
ವಿಲ್ಲದಿದ್ದರೆ ಇವರು ಆ ಕಾಶೀನಾಥನನ್ನು ಹತ್ತಿರ ಏಕೆ ಇಟ್ಟು
ಕೊಳ್ಳುತ್ತಾರೆ? ಪ್ರತ್ಯಕ್ಷ ತಮ್ಮ ಮುಂದೆಯೇ ಅವನ ಬಾಯಿ
ಯಿಂದಾಗುವ ಶರಣರ ಮತ್ತು ವಿರಕ್ತರ ನಿಂದೆಯನ್ನು ಯಾಕೆ
ನಿಲ್ಲಿಸುವದಿಲ್ಲ? ಇಂಥ ಪ್ರಕಾರ ದೋಷಮುಖ ವರ್ತನವು ಜಗದ್ಗುರು
ವೆಂದೆನಿಸಿಕೊಳ್ಳುವವರಿಗೆ ಯೋಗ್ಯವೋ?

ಒಂದುವೇಳೆ ಈ ಶಿವಶರಣರ ನಿಂದೆಯು ಪಂಚಾಚಾರ್ಯರಿಗೆ
ಸ್ವಲ್ಪವೂ ಸಂಬಂಧವಿಲ್ಲವೆಂದೂ, ಶರಣನಿಂದೆಯು ಆಗಬಾರದೆಂದೂ
ಒಂದು ವೇಳೆ ಈ ಪಂಚಾಚಾರ್ಯರಿಗೆ ಮನಃಪೂರ್ವಕವಾಗಿ ಅನಿ
ಸುತ್ತಿದ್ದರೆ ನಾವು ಶರಣರ ಮತ್ತು ವಿರಕ್ತರ ನಿಂದೆಯನ್ನು
ಮಾಡುತ್ತಿರುವುದಿಲ್ಲ; ಮುಂದಾದರೂ ಮಾಡುವದಿಲ್ಲ ಯಾರು
ನಿಂದಾ ಮಾಡುವರೋ ಅವರು ನಿಂದ್ಯರು, ಬಹಿಷ್ಕಾರಕ್ಕೆ ಪಾತ್ರ
ರೆಂಬರ್ಥದ ಆಜ್ಞಾ ಪತ್ರವನ್ನು ಈ ಉಜ್ಜನೀ ಆಚಾರ್ಯರು
ಪಂಚಾಚಾರ್ಯ ಪ್ರಭೆಯಲ್ಲಿಯೂ ಮತ್ತು ಬೇರೆ ಜಾಹೀರ ಕನ್ನಡ
ಮರಾಠಿ ವೃತ್ತಪತ್ರಿಕೆಗಳಲ್ಲಿಯೂ ಪ್ರಸಿದ್ಧಪಡಿಸಬೇಕೆಂದು ನಾವೂ
ಬೇರೆ ಸದ್ಗೃಹಸ್ಥರೂ ಪಂಚಾಚಾರ್ಯರಿಗೆ ಅನೇಕ ಸಾರೆ ಎಷ್ಟೋ
ಸ್ಥಾನಗಳಲ್ಲಿ ಜಾಹೀರ ಆಹ್ವಾನ ಮಾಡಿದ್ದೇವೆ. ಆ ಆಹ್ವಾನೆಗೆ
ಎಲ್ಲಿಯವರೆಗೆ ಮೇಲೆ ಬರೆದ ಪ್ರಕಾರ ಜಾಹೀರ ಉತ್ತರವು ಸ್ವಾಮಿ
ಗಳ ಕಡೆಯಿಂದ ದೊರೆಯುವದಿಲ್ಲವೋ ಅಲ್ಲಿಯವರೆಗೆ ಅವರು ಶರಣ
ನಿಂದಾ ಮಾಡುತ್ತಾರೆಂಬುದೂ ಮತ್ತು ಶರಣ ನಿಂದೆಗೆ ಇವರ ಸಕ್ರಿ
ಯಸಹಾನುಭೂತಿಯಿರುವದೆಂದೂ ಆಗುವದಿಲ್ಲವೇ?

ಮೇಲಿನ ಎಲ್ಲ ವಿವೇಚನೆಗಳಿಂದ ಈ ಆಚಾರ್ಯರು ಜಗ
ದ್ಗುರುಗಳಾಗಬಲ್ಲರೋ? ಸರ್ವ ವೀರಶೈವರಿಗೆ ಯಾರು ಗುರುಗಳಾ
ಗಲು ಶಕ್ಯವಿಲ್ಲವೋ ಮತ್ತು ವೀರಶೈವರ ಒಂದು ಭಾಗದ ಮೇಲೆಯೇ
ಯಾರ ಗುರುತ್ವವು ನಡೆಯುತ್ತದೋ ಅವರು ಜಗದ್ಗುರುಗಳು
ಹೇಗೆ? ಅಂದಮೇಲೆ ಈಗ ಜಗದ್ಗುರುವೆಂದು ಯಾರಿಗೆ ಅನ್ನಬೇಕು?
ಈ ಪ್ರಶ್ನೆಯನ್ನು ಬಿಡಿಸಲು ನಾನು ಸೊಲ್ಲಾಪುರದ ವೀರಶೈವರಿಗೇ
ಒಪ್ಪಿಸುತ್ತೇನೆ. ಇಲ್ಲಿ ಎಷ್ಟೋ ಜನ ವಿದ್ವಾಂಸರೂ, ಶಾಸ್ತ್ರಿಗಳೂ,
ಪಂಡಿತರೂ ಇದ್ದಾರೆ. ಅಂದಮೇಲೆ ಅವರು ಈ ಪ್ರಶ್ನೆಯನ್ನು
ಹೇಗೆ ಬಿಡಿಸುತ್ತಾರೋ ನೋಡೋಣ.

ತಮ್ಮ ಒಬ್ಬ
ವೀರಶೈವ ಧರ್ಮಾಭಿಮಾನಿ.

—ಅಸ್ಪೃಶ್ಯಸೇವಕ ಸಮಾಜದ ಪುಣೆ ಶಾಖೆಯ ಕಾರ್ಯ
ಕರ್ತರು 'ಹರಿಜನ' ಪತ್ರಿಕೆಯನ್ನು ಮುಂಬಯಿ ಇಲಾಖೆಯ ರಾಜ
ಕೀಯ ಸೆರೆಯಾಳುಗಳಿಗೆ ಓದಲಿಕ್ಕೆ ಅಪ್ಪಣೆ ಕೊಡಬೇಕೆಂದು
ಮುಂಬಯಿ ಸರಕಾರದವರಿಗೆ ವಿಜ್ಞಾಪನೆ ಮಾಡಿಕೊಂಡಿದ್ದರು.
ಆದರೆ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯು ವಾದಗ್ರಸ್ತವಿದ್ದುದ
ರಿಂದ ಹಾಗೆ ಅಪ್ಪಣೆ ಕೊಡಲು ಬರುವುದಿಲ್ಲವೆಂದು ಸರಕಾರದವರು
ತಿಳಿಸಿದರು.

—ಅಸ್ಪೃಶ್ಯತಾನಿವಾರಣಾ ಕಾರ್ಯಕ್ಕಾಗಿ ಶ್ರೀ ಅಮೃತಲಾಲ
ಠಕ್ಕರ ಇವರು ಪಂಜಾಬದಲ್ಲಿ ಪ್ರವಾಸಮಾಡುತ್ತಿದ್ದು ಅಲ್ಲಲ್ಲಿ ಅವರ
ಭಾಷಣಗಳಾಗುತ್ತಿರುವವು. ಪಂಜಾಬದ ಅಸ್ಪೃಶ್ಯರಿಗೆ ಅವರ
ಸೊತ್ತಿನ ಒಂದು ಇಂಚುಕೂಡಾ ಭೂಮಿಯಿರುವದಿಲ್ಲವೆಂದೂ
ಮತ್ತು ಜಮೀನದಾರರೂ ಅವರನ್ನು ವೇತನವಿಲ್ಲದೆ ದುಡಿಸಿಕೊಳ್ಳು
ತ್ತಿರುವರೆಂದೂ ಅವರಿಗೆ ಕಂಡು ಬಂದಿತು.

—ಪ್ರೋ. ರಂಗಾ ಇವರು ಒಂದು ಹರಿಜನ ಸೇವಾದಲ
ವನ್ನೇರ್ಪಡಿಸಿ ಆ ಕಾರ್ಯಕರ್ತರೆಲ್ಲ ಗುಂಟೂರು ಜಿಲ್ಲೆಯ ೧೫
ಹಳ್ಳಿಗಳಲ್ಲಿ ಸಂಚಾರ ಮಾಡಿದರು. ಅಲ್ಲಿಯ ಉತ್ಸಾಹಿ ತರುಣರನ್ನು
ಕೂಡಿಸಿ ಅವರಿಗೆ ಸ್ವಚ್ಛತೆ ಮತ್ತು ಆರೋಗ್ಯದಿಂದಿರುವಂತೆ ಬೋಧಿ
ಸಿದುದಲ್ಲದೆ ಆ ತರುಣರು ಬೇರೆ ನೆರೆಯಲ್ಲಿಯ ೫ ಹಳ್ಳಿಗಳಿಗೆ
ಹೋಗಿ ಸೇವಾ, ಸ್ವಚ್ಛತೆಯ ವಿಷಯದಲ್ಲಿ ಉಪದೇಶ ಮಾಡಿ ಪ್ರೋ.
ರಂಗಾ ಇವರ ಕಡೆಗೆ ತಿಳಿಸಬೇಕೆಂದು ಅಭಿವಚನ ತೆಗೆದುಕೊಂಡರು

(೧೨ನೆಯ ಪುಟದ ಮುಂದಿನ ಸಂಗತಿ.)

ಕ್ಕಾಗಿಯೇ ಉದ್ಯೋಗ ಪ್ರಾರಂಭಿಸುವ ವಿಚಾರವು ಸಾವಕಾರರಲ್ಲಿದ್ದರೆ ಅಕಸ್ಮಾತ್ ಹಾನಿಯಾದರೆ, ಆ ಹಾನಿಯನ್ನೆಲ್ಲ ತಾವೇ ಸೋಸಲಿಕ್ಕೆ ಗಟ್ಟಿಯಾಗಬೇಕು. ಇದೇ ಬಡವರ ಕಲ್ಯಾಣದ ಧ್ಯೇಯವು! ಇಂಥ ಸಾವಕಾರರ ಬೆನ್ನುಬಿದ್ದ ಬಡವನೇ ಧನ್ಯನು!! ಇಂಥ ಸಾವಕಾರನೇ ಪುಣ್ಯಾತ್ಮನು!!!

ನಮ್ಮ ದೇಶದಲ್ಲಿ ವ್ಯಾಪಾರ ಉದ್ಯೋಗಗಳನ್ನು ಮಾಡಲಿಕ್ಕೂ ಹೊಸಹೊಸ ಕೈಗಾರಿಕೆಗಳನ್ನು ಕೈಕೊಳ್ಳಲಿಕ್ಕೂ ಸಮರ್ಥರಾದವರು ಎಷ್ಟೋ ಜನರು ಇರುವರು. ಆದರೆ ಅವರಿಗೆ ಹಣದ ಸಹಾಯ ಮಾಡುವಂಥ ಸಾವಕಾರರು ಸಿಗುವದಿಲ್ಲ. ಆದ್ದರಿಂದಲೇ ನಮ್ಮಲ್ಲಿ ಯಾವ ಉದ್ಯೋಗಗಳೂ ಊರ್ಜಿತಾವಸ್ಥೆಯನ್ನು ಹೊಂದುವದಿಲ್ಲ. ಒಂದು ವೇಳೆ ಹಣಕೊಟ್ಟರೆ ನೂರಕ್ಕೆ ವರುಷಕ್ಕೆ ೧೨ರಂತೆ ಹೊಲೆಬಡ್ಡಿಯನ್ನು ಹೆಚ್ಚಾದ ಬಾಡಿಗೆಯನ್ನು ಹಾಕುವರು. ಇದರ ಮೇಲೆ ಲಾಭದಲ್ಲಿ ತಮ್ಮ ಅರ್ಧ ಪಾಲು ಇಡುವರು. ಈಗಿನ ಆರ್ಥಿಕ ಅವನತಾವಸ್ಥೆಯಲ್ಲಿ ಈ ಪ್ರಕಾರ ಬಡ್ಡಿ ಬಾಡಿಗೆಗಳನ್ನು ಕೊಟ್ಟರೆ ಎಂಥ ಉದ್ಯೋಗಗಳಲ್ಲಿ ಲಾಭಪಡೆಯಬಹುದು? ಅಕಸ್ಮಾತ್ ಒಂದು ವರುಷ ಲಾಭವಾದರೂ ಹಾನಿಯಾಗುವ ಸಂಭವವೇ ಬಹಳ ಇರುತ್ತದೆ. ಹಾನಿಯಾದ ವರ್ಷವಾದರೂ ಸಾವಕಾರರು ಬಡ್ಡಿಯನ್ನು ಸೂಟುಬಿಡುವದಿಲ್ಲ. ಹಾನಿಯಾದ ರಕಮಿಗೆ ಸಹ ಬಡ್ಡಿಯನ್ನು ಹಾಕುತ್ತಾರೆ. ಇದು ಯಾವ ನ್ಯಾಯ ನೀವೇ ವಿಚಾರಮಾಡಿರಿ. ಈ ಪ್ರಕಾರ ವರ್ಷವರ್ಷ ಚಕ್ರ ಬಡ್ಡಿಯನ್ನು ಹಾಕುತ್ತಾ ಹೋಗುವರು. ಬಡವನ ಸಾಲ ಮಾತ್ರ ಹನುಮಂತನ ಬಾಲದಂತೆ ಬೆಳೆಯುವದು. ಬಡವನಿಗಾದರೂ ಈ ಪ್ರಕಾರ ಹೆಚ್ಚಾದ ಸಾಲವನ್ನು ಕೊಡಲಿಕ್ಕೆ ಅಸಮರ್ಥವಾಗುವದು ಸ್ವಾಭಾವಿಕವು. ಮುಂದೆ ಸಾವಕಾರರು ದಾವೆ ಮುಂತಾದವುಗಳನ್ನು ಮಾಡಲಿಕ್ಕೆ ಕೋರ್ಟು ಕಚೇರಿಗಳನ್ನು ಹತ್ತಿ ನೂರಾರು ರೂಪಾಯಿಗಳನ್ನು ವ್ಯರ್ಥವಾಗಿ ಹಾಳುಮಾಡಿಕೊಳ್ಳುವರು. ಮತ್ತು ಪರಸ್ಪರರ ಪ್ರೇಮವಿಶ್ವಾಸಗಳು ಹಾರಿಹೋಗುವವು. ಆದುದರಿಂದ ಕೆಳಗೆ ಕೊಟ್ಟ ವಿಷಯಗಳ ಕಡೆಗೆ ಲಕ್ಷಕೊಟ್ಟು ಸಾವಕಾರರೂ ಬಡವರೂ ಪಾಲಿನಿಂದ ವ್ಯವಹಾರ ಮಾಡಿದರೆ ಅಷ್ಟೊಂದು ಹಾನಿಯಾಗಲಿಕ್ಕಿಲ್ಲವೆಂದು ಅನಿಸುತ್ತದೆ.

೧ ಎರಡನೆಯವರ ಕೂಡ ಪಾಲಿನಿಂದ ವ್ಯವಹಾರ ಮಾಡಬೇಕೆನ್ನುವ ಸಾವಕಾರರಿರಬೇಕು. ತಾವು ಹೊಲೆ ಬಡ್ಡಿಯಿಂದ ಸಾಲವನ್ನು ತಂದು ಎರಡನೆಯವರ ಕೈಯಲ್ಲಿ ಹಣಕೊಟ್ಟು ಯಾವದೊಂದು ಉದ್ಯೋಗವನ್ನು ಪಾಲಿನಿಂದ ನಡೆಯಿಸುವದು ಉಚಿತವಲ್ಲ. ಯಾಕಂದರೆ ಈಗಿನ ಕಾಲದಲ್ಲಿ ಕಡಿಮೆ ಬಡ್ಡಿಯ ದರದಷ್ಟು ಸಹ ಲಾಭವಾಗುವದಿಲ್ಲ.

೨ ಉದ್ಯೋಗದಲ್ಲಿಯ ಲಾಭ ಮತ್ತು ಕೊಟ್ಟ ಹಣಕ್ಕೆ ಬಡ್ಡಿ ಎರಡೂ ಸಿಗಬೇಕೆಂಬ ದುರಾಶೆಯನ್ನು ಸಾವಕಾರರು ಬಿಡಬೇಕು. ಎರಡರ ಪೈಕಿ ಒಂದನ್ನು ಮಾತ್ರ ಅವರು ಇಚ್ಛಿಸಬಹುದು. ಸಾವಕಾರರಿಗೆ ಬಡ್ಡಿಯನ್ನು ಕೊಡುವದಾದರೆ ನೂರಕ್ಕೆ ವರ್ಷಕ್ಕೆ ೬ ಮಾತ್ರ ಬಡ್ಡಿಯನ್ನು ಕೊಟ್ಟರೆ ಆ ಉದ್ಯೋಗವು ಊರ್ಜಿತಾವಸ್ಥೆಯನ್ನು ಹೊಂದಬಹುದು.

೩ ಸಾವಕಾರರ ಕೂಡ ಪಾಲಿನಿಂದ ಉದ್ಯೋಗಮಾಡಲಿಕ್ಕೆ ಇಚ್ಛಿಸುವ ಬಡವರು ಮೊದಲು ಕರಾರುಗಳನ್ನು ಸಂಪೂರ್ಣ ಮಾಡಿಕೊಳ್ಳಬೇಕು.

೪ ಸಾವಕಾರರಿಗೆ ಪಾಲು ಮತ್ತು ಬಡ್ಡಿ ಎರಡೂ ಕೊಡಲಿಕ್ಕೆ ಒಪ್ಪಿಕೊಂಡು ವ್ಯಾಪಾರ ಮಾಡಬಾರದು.

೫ ಕೇವಲ ಬಡ್ಡಿಯನ್ನು ಮಾತ್ರ ಸಾವಕಾರರಿಗೆ ಕೊಡುವವರಿದ್ದರೆ ನೂರಕ್ಕೆ ವರ್ಷಕ್ಕೆ ೬ಕ್ಕಿಂತ ಹೆಚ್ಚಿಗೆ ಬಡ್ಡಿಯನ್ನು ಕೊಡುವ ಕರಾರ ಮಾಡಿಕೊಳ್ಳಬಾರದು.

೬ ಇಷ್ಟು ಬಡ್ಡಿಯ ದರದಿಂದ ಉದ್ಯೋಗಕ್ಕೆ ಹಣಸಿಗದಿದ್ದರೆ ಎಲ್ಲಿಯಾದರೂ ನೌಕರಿಮಾಡುವದು ಯೋಗ್ಯವು.

೭ ಎಷ್ಟೇ ಸ್ವಲ್ಪ ಸ್ವಂತ ಹಣವಿದ್ದರೂ ಸಣ್ಣ ಉದ್ಯೋಗವನ್ನು ಸ್ವತಃ ಪ್ರಾರಂಭಿಸುವುದು ಯೋಗ್ಯವು.

೮ ಎಷ್ಟೇ ಅಂಗಡಿಗಳು ಬಡ್ಡಿಯನ್ನು ಕೊಟ್ಟುಕೊಟ್ಟೇ ಹಾಳಾಗಿರುತ್ತವೆಂಬುವದನ್ನು ಲಕ್ಷದಲ್ಲಿಡಬೇಕು.

೯ ಪಾಲಿನಿಂದ ವ್ಯಾಪಾರ ಮಾಡುವ ಕಾಲಕ್ಕೆ ಅಕಸ್ಮಾತ್ ಲುಕ್ಸಾನವಾದರೆ ಆ ವರ್ಷದ ಲುಕ್ಸಾನವನ್ನು ಸಹ ಸೂಟಬಿಡಲಿಕ್ಕೆ ಸಾವಕಾರರು ಸಮರ್ಥರಿರಬೇಕು.

ಶ್ರೀಮಂತರ ಸೇವಕ.

ಮಹಾ ಶಿವರಾತ್ರಿಯ ಸಮಾರಂಭ.

ಕಳೆದ ಮಾಘ ಕೃಷ್ಣ ೧೩ ಬುಧವಾರ ಪ್ರತಿವರ್ಷದ ಪದ್ಧತಿಯಂತೆ ಚಿಕ್ಕಮಗಳೂರ ಕಾಫಿ ಪ್ಲಾಂಟರ್. ಮ. ರಾ. ಬಿಚ್ಚಾಲೆ ಗುರುಸಿದ್ಧಪ್ಪ ಶೆಟ್ಟರವರು ಆ ದಿನ ಗುರುಮೂರ್ತಿಗಳನ್ನು ಬರಮಾಡಿಕೊಂಡು ತಮ್ಮ ಗೃಹದಲ್ಲಿ ಯಥಾವಿಧಿಯಾಗಿ ಶಿವಲಿಂಗಪೂಜಾ ಗುರು ಪೂಜಾದಿಗಳನ್ನು ನೇರವೇರಿಸಿ ರಾತ್ರಿ ೧೦|| ಗಂಟೆಯ ಮೇಲೆ ತಾವು ನೂತನವಾದ ೫೦೦ ರೂಪಾಯಿಗಳಿಂದ ತಯಾರುಮಾಡಿಸಿ ಮೊನ್ನೆ ಚಿಕ್ಕಮಗಳೂರಿನಲ್ಲಿ ಪ್ರದರ್ಶನಕ್ಕಿಟ್ಟಿದ್ದ ದಿವ್ಯವಾದ ಮಂಟಪವನ್ನು ಈಶ್ವರನ ಫೋಟೋಗಳಿಂದ ಅಲಂಕರಿಸಿ ಬ್ರಹ್ಮಶ್ರೀ ವೇ|| ಜಿ. ನಂಜುಂಡಾರಾಧ್ಯ ಶಾಸ್ತ್ರಿಗಳವರು ಶಿವಕಥಾ ಪಂಡಿತ ಇವರಿಂದ ಮನೋಹರವೂ ಅಮೋಘವೂ ಆದ ಶಿವಕೀರ್ತನೆಯನ್ನು ಮಾಡಿಸಿ ನಂತರ ಮಂಗಳಾರತಿ ಪ್ರಸಾದಗಳೊಂದಿಗೆ ಬಂದಿದ್ದ ಯಾವತ್ತೂ ಜನಗಳನ್ನು ಸತ್ಕರಿಸಿದರು.

ವೀರಣ್ಣಯ್ಯ ಅಯ್ಯನಹಳ್ಳಿಮಠ.

—೫ನೇ ತಾರೀಖಿನ ದಿವಸ ರಾತ್ರಿ ಧಾರವಾಡ ಕರ್ನಾಟಕ ಹಾಯಸ್ಕೂಲಿಗೆ ಯಾರೋ ಬೆಂಕಿ ಹಚ್ಚಿದರು. ಹೆಡ್‌ಮಾಸ್ತರರ ಕೋಣೆ ಕಾರಕೂನನ ಕೋಣೆಗೆ ಬೆಂಕಿ ಹತ್ತಿ ಎಲ್ಲ ಕಾಗದ ಪತ್ರಗಳು ಸುಟ್ಟು ಹೋಗಿವೆ. ಬೆಂಕಿ ಹಚ್ಚಿದ ಸಂಶಯದಿಂದ ಪ್ರಿಲಿಮ್ನರಿ ಪರೀಕ್ಷೆಗೆ ಕುಳಿತ ಕೆಲವು ವಿದ್ಯಾರ್ಥಿಗಳನ್ನು ಹಿಡಿದಿದ್ದಾರೆ. ಮ್ಯಾಟ್ರಿಕ್ ಫಾರ್ಮ ಕೊಡದಿದ್ದುದರಿಂದ ಅವರೇ ಹಚ್ಚಿರಬೇಕೆಂದು ಸಂಶಯವಿದೆ.

ಹಂಗರಿ ದೇಶದ ಇಬ್ಬರು ತರುಣಿಯರು ಒಂದು ಚಿತ್ರಪ್ರದರ್ಶನವನ್ನು ತಂದಿದ್ದಾರೆ. ಅವರು ಹಿಂದುಸ್ಥಾನದಲ್ಲಿ ಸಿಮ್ಲಾ, ಲಾಹೋರ ಮೊದಲಾದ ಕಡೆಯಲ್ಲಿ ತಮ್ಮ ಚಿತ್ರಗಳನ್ನು ತೋರಿಸಿದರು. ಅವರ ಚಿತ್ರಗಳು ಇಟಲಿ ಮತ್ತು ಹಿಂದುಸ್ಥಾನದವುಗಳಿದ್ದು ಅವುಗಳಲ್ಲಿ ಕೆಲವನ್ನು ವ್ಯಾಯಿಸ್‌ರಾಯರು ಕೊಂಡುಕೊಂಡಿದ್ದಾರೆ, ಅವರು ದಕ್ಷಿಣ ಹೈದರಾಬಾದದಲ್ಲಿ ಈಗ ಬಂದಿದ್ದು ಅವರ ಚಿತ್ರಗಳನ್ನು ನೋಡಲು ಸರಕಾರೀ ಅಧಿಕಾರಸ್ಥರೆಲ್ಲರು ಬಂದಿದ್ದರು.

—ಬೆಳಗಾವಿಯ ಹತ್ತರಿರುವ ಶಹಪೂರದಲ್ಲಿ ಹಿಂದಕ್ಕೆ ಶಾಲೆಯ ಗ್ಯಾದರಿಂಗ ನಡೆದ ಕಾಲದಲ್ಲಿ ಬಾಂಬು ಸ್ಫೋಟವಾಗಿದ್ದಿತಷ್ಟೆ. ಆ ಪ್ರಕರಣದಲ್ಲಿ ವಿ. ಕಾಮತ ಮತ್ತು ವಿ. ಹೇರೆಕರ ಎಂಬ ಇಬ್ಬರು ದೋಷಿಗಳೆಂದು ನಿರ್ಣಯಿಸಲ್ಪಟ್ಟು ಸಾಂಗಲಿಯ ನ್ಯಾಯಾಧೀಶರು ಪ್ರತಿಯೊಬ್ಬರಿಗೆ ೭ ವರುಷದಶಿಕ್ಷೆ ವಿಧಿಸಿದರು.

ಜಾತಿಯ ಭ್ರಾಂತಿ.

ಅರ್ಥವನರ್ಥವಮಾಡಿ ಕೋಳಾಹಳಂಗೈಯುತ್ತಿರಲಿ| ಹುಟ್ಟಿದ ಮಕ್ಕಳ ನವಖಂಡ ಮಾಡಿ ಕಡಿವುತ್ತಿರಲಿ | ಮುಟ್ಟಿದ ಸ್ತ್ರೀಯ ಕಣ್ಣಮುಂದೆ ಅಭಿಮಾನಂಗೊಂಡು ನೆರೆವುತ್ತಿರಲಿ | ಇಂತೀ ತ್ರಿವಿಧವು ಹೊರಗಣವು | ಇನ್ನೆನ್ನಂಗದ ಮೇಲೆ ಬರಲಿ | ಹಿಡಿಖಂಡವ ಕೊಯ್ಯಲಿ | ಇಕ್ಕುವ ಶೂಲವು ಪ್ರಾಪ್ತಿಸಲಿ | ಹಾಕೊಂಡೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ | ಮತ್ತೆಯೂ ಲಿಂಗಾರಾಧನೆಯ ಮಾಡುವೆ | ಜಂಗಮಾರಾಧನೆಯ ಮಾಡುವೆ | ಪ್ರಸಾದಕ್ಕೆ ತಪ್ಪೆನು| ಇಂತಪ್ಪ ಭಾಷೆಗೆ ಕಿಂಚಿತ್ತು ಹುಸಿಯಾದರೆ ನೀನಂದೇ ಮೂಗು ಕೊಯ್ಯಿ ಕೂಡಲ ಸಂಗಮದೇವಾ||

ಶಿವಶರಣರ ಮಾರ್ಗವು ಆನಂದಮಯವಲ್ಲ. ಕಷ್ಟಮಯವು ಅಂತೆಯೇ ಅವರ ನಡೆನುಡಿಯಲ್ಲಿ ಅದ್ಭುತ ಶಕ್ತಿ ಇರುತ್ತದೆ. ಕಷ್ಟ ಬಂದ ಕಾಲದಲ್ಲಿ ಯಾವ ರೀತಿಯಿಂದ ನಡೆಯಬೇಕೆಂಬುದನ್ನು ಆ ಮಹಾತ್ಮರು ತಮ್ಮ ನಡೆನುಡಿಯಿಂದ ಬೋಧಿಸುತ್ತಾರೆ. ಅವರಿಲ್ಲದ ಪಕ್ಷದಲ್ಲಿಯೂ ಅವರ ನಡೆನುಡಿಗಳ ನೆನಹು ಮನುಷ್ಯರಿಗೆ ಅಪಾರವಾದ ಶಕ್ತಿಯನ್ನು ಕೊಡುತ್ತದೆ.

ಮಹಾತ್ಮಾ ಏಸುಕ್ರಿಸ್ತನನ್ನು ಶಿಲುಬೆಗೆ ಹಾಕಿದ ಭಾವಚಿತ್ರವನ್ನಾಗಲಿ ಪ್ರತಿಮೆಯನ್ನಾಗಲಿ ನೋಡಿರಿ. ಜೀವಗಳ್ಳನಿಗೆ ಅದೊಂದು ಭಯಂಕರ ದೃಶ್ಯವು ಬೇಡ. ಈತನ ಗತಿಯೇ ಹೀಗಾದ ಮೇಲೆ ಈತನನ್ನು ಹಿಂಬಾಲಿಸುವವರ ಗತಿಯೇನಾದೀತೆಂದು ಆ ಪೂರ್ವೋಕ್ತ ಜೀವಗಳ್ಳನು ಹಲುಬಬಹುದು. ಆದರೆ ನಿಜವಾದ ಆತ್ಮವೀರನಲ್ಲಿ ಆ ದೃಶ್ಯವು ಬಲಿದಾನಾಗ್ನಿಯನ್ನು ಸ್ಫುರಣಗೊಳಿಸಿ ಜಾಜ್ವಲ್ಯವನ್ನಾಗಿ ಮಾಡಲು ಝಂಝಾವಾತವಾಗಿ ಪರಿಣಮಿಸಲಿಕ್ಕಿಲ್ಲವೇ? ಪಾಪಿಯಿರಲಿ, ತಾಪಿಯಿರಲಿ, ಸುಖಿಯಿರಲಿ ದುಃಖಿಯಿರಲಿ, ಆಸಕ್ತನಿರಲಿ, ನಿರ್ಮುಕ್ತನಿರಲಿ, ಪ್ರತಿಯೊಬ್ಬನಿಗೂ ಆ ದೃಶ್ಯವು ಅವರವರ ಯೋಗ್ಯತೆಯಂತೆ ಗಂಭೀರತೆಯನ್ನೂ, ಸಹನಶೀಲತೆಯನ್ನೂ, ನಿಃಸ್ವಾರ್ಥ ಬಲಿದಾನವನ್ನೂ ಬೀರುತ್ತಿದೆ.

ಆತ್ಮವೀರರು ಎಂಥ ಸಂಕಟ ಪರಂಪರೆಯೊದಗಿದರೂ ತಮ್ಮ ನಿಷ್ಠೆಯನ್ನೂ, ತಮ್ಮ ಜೀವನದ ಗುರಿಯನ್ನೂ, ತಮಗೆ ಸತ್ಯವೆಂದು ಕಂಡುದನ್ನೂ ಎಂದಿಗೂ ತ್ಯಜಿಸರು. ಕರುಣೆಯಿಲ್ಲದ ಕಟುಕರಾದ ಕೊಲೆಗಡಗರು ಕುಣಿಕುಣಿದುಕೊಲ್ಲಲುಪಕ್ರಮಿಸಿದಾಗ ಮಹಾ ಕಲಿಯಾದ ಏಸುವು ನಿಶ್ಚಲತೆಯಿಂದ "ಹೇ, ಪರಮಾತ್ಮನೇ ಈ ಜನರ ಅಜ್ಞಾನವನ್ನು ಪರಿಹರಿಸು. ಇವರಲ್ಲಿ ಜ್ಞಾನವಿದ್ದುದಾದರೆ ಹೀಗೇಕೆ ಮಾಡ್ಯಾರು ಇವರನ್ನು ಕ್ಷಮಿಸು" ಎಂದು ಮುಂತಾಗಿ ಹೇಳಲಿಲ್ಲವೇ?

ಆ ಮಹಾ ಮಹಿಮನ ಅತುಲವಾದ ನಿಶ್ಚಲತೆಯು ಕೋಟ್ಯಾವಧಿ ಜನರಿಗೆ ಅಭಯವನ್ನೂ ಶಾಂತಿಯನ್ನೂ ಈಗಲೂ ಅನುಗ್ರಹಿಸುತ್ತಿರುವದಲ್ಲವೇ?

ಇದೇ ಪ್ರಕಾರ ಮಹಾನುಭಾವರಾದ ಬಸವಣ್ಣನವರು ತಮ್ಮ ಜೀವಿತ ಧ್ಯೇಯಕ್ಕಾಗಿ ಅಪೂರ್ವ ತ್ಯಾಗವನ್ನು ಮಾಡಿರುವರು. "ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ? ಲಿಂಗಸ್ಥಲವನರಿದವನೇ ಕುಲಜನು" ಎಂದುದು ಅವರ ಪ್ರಸಾದವಾಣಿ. ಇದನ್ನು ಅವರು ನುಡಿದುದಲ್ಲದೆ ನಡೆಯಿಂದಲೂ ತೋರಿಸಬೇಕಾಗಿದ್ದಿತು. ಮಹಾನುಭಾವರು ಈ ಪ್ರಸಂಗವನ್ನು ಮಾಡಿ ತೋರಿಸದಿದ್ದರೆ ಸರ್ವಾಂಗ ಸುಂದರವಾದ ನಮ್ಮ ವೀರಶೈವ ಸಮಾಜದ ಭವನಕ್ಕೆ ಹುಳಹತ್ತಿದಂತಾಗುತ್ತಿದ್ದಿತು. ವೀರಶೈವ ಮತವೆಂಬ ದೇವಾಲಯಕ್ಕೆ ಕಳಸವೇ ಇಲ್ಲದಂತಾಗುತ್ತಿದ್ದಿತು. ಆದುದರಿಂದಲೇ ಮಹಾನುಭಾವರು ಮಧುವಯ್ಯ ಹರಳಯ್ಯಗಳೆಂಬ ಮಹಾಶಿವಶರಣರಲ್ಲಿ ಶರೀರಸಂಬಂಧವನ್ನುಂಟುಮಾಡಿದರು.

ಕಟ್ಟಿಬಿಡುವನೇ ಶರಣನು? ಬಿಟ್ಟುಹಿಡಿವನೇ ಶರಣನು? ನಡೆದು ತಪ್ಪುವನೇ ಶರಣನು? ನುಡಿದು ಹುಸಿವನೇ ಶರಣನು? ಭಕ್ತಿಯ ಬಿಡುವನೇ ಶರಣನು? ಸಹಜಸಜ್ಜನಿಕೆ ತಪ್ಪಿದರೆ ಕೂಡಲಸಂಗಯ್ಯ ಹಲ್ಲುದೋರಿ ಮೂಗು ಕೊಯ್ಯುವ||

ಎಂದು ಮಹಾನುಭಾವರು ಸತ್ಯಕ್ಕಾಗಿ ಸರ್ವಸ್ವವನ್ನು ಸೂರೆಗೈಯ್ಯಲು ಹಿಂಜರಿಯಲಿಲ್ಲ. ಈ ಪ್ರಸಂಗವುಂಟಾಗದಿದ್ದರೆ ಕಲ್ಯಾಣವು ಹಾಳಾಗುತ್ತಿರಲಿಲ್ಲವೆಂದು ಕೆಲವರ ಮತ. ಆದರೇನು ಈ ಪ್ರಸಂಗವೊಂದುಂಟಾಗದಿದ್ದರೆ, ಈ ಜಾತಿಯ ಭ್ರಾಂತಿಯು ನಿವಾರಣೆಯಾಗದಿದ್ದುದಾದರೆ ವೀರಶೈವ ಸಮಾಜಕ್ಕೆ ಕಲ್ಯಾಣವಾಗುತ್ತಿದ್ದಿತೇ? ಜಾತಿಯ ಬೇತಾಳದಿಂದ ಪೀಡಿತರಾದ ಬ್ರಾಹ್ಮಣ ಮೊದಲಾದ ಇತರ ಹಿಂದೂಗಳು ತಮ್ಮತಮ್ಮ ಒಳಪಂಗಡಗಳನ್ನು ಸಹಭೋಜನದಿಂದಲೂ ಶರೀರಸಂಬಂಧತೆಯಿಂದಲೂ ಏಕೀಕರಿಸುತ್ತಿರುವಾಗ ಮುನ್ನವೇ ಜಾತಿಯ ಬೇರನ್ನು ಕಡಿದುಹಾಕಿದ ನಮ್ಮ ವೀರಶೈವ ಸಮಾಜದಲ್ಲಿ ಜಾತಿಬೇತಾಳನಿಗೆ ಆಶ್ರಯಕೊಡುವದು ಅಧಃಪಾತದ ಪೂರ್ವಸಿದ್ಧತೆಯೇ ಸರಿ. ಮಹಾನುಭಾವನಾದ ಬಸವೇಶನೇ ಈ ಜಾತ್ಯಾಂಧರಿಗೆ ವೀರಶೈವ ಧರ್ಮವನ್ನರುಹಿ ಹಾದಿಗೆ ಹಚ್ಚುವ ಕೃಪೆಮಾಡಬಾರದೇ?

ಪಾಟೀಲ ಲಿಂಗನಗೌಡರು.

ಶ್ರೀ. ಡಿ. ಎಸ್. ಮಲ್ಲಪ್ಪನವರು
ಎಂ.ಎಲ್. ಸಿ.

ಈ ಮಹಾಶಯರು

ತುಮಕೂರಲ್ಲಿ ಇದೇ ತಿಂಗಳು ೧೯ ನೆಯ ತಾರೀಖಿನ ದಿವಸ ಸೇರುವ ಮೈಸೂರು ಪ್ರಜಾಪಕ್ಷದ ೩ ನೆಯ ಪರಿಷತ್ತಿನ ಸ್ವಾಗತಾಧ್ಯಕ್ಷರು.

ಮೈಸೂರು ದೇಶದ ಪ್ರಜಾಹಿತಚಿಂತಕರು ಈ ಮಹಾಶಯರ ಮುಂದಾಳುತನದಲ್ಲಿ ದೇಶೋನ್ನತಿಯ ಎಲ್ಲ ಕಾರ್ಯಗಳನ್ನು ತೃಪ್ತಿಕರವಾಗಿ ಮಾಡಲಿ. ಈ ತರುಣ ಉತ್ಸಾಹಿ ದೇಶ ಸೇವಕರು ತನು ಮನ ಧನಗಳನ್ನು ದೇಶ ಸೇವೆಗೆ ಹೆಚ್ಚಾಗಿ ಸವಿಸಿ ಕೀರ್ತಿಭಾಜನರಾಗಲಿ.

ಹರಿಜನ ಪತ್ರಿಕೆಯ ಸಾರಾಂಶ.

ಅಖಿಲಭಾರತ ಹರಿಜನ ಸೇವಾ ಸಂಘ.

(ತಾ. ೨೦ನೆಯ ಫೆಬ್ರುವರಿ ವರೆಗೆ ಮುಗಿಯುವ ವಾರದ ವರದಿ.)

ದೇವಾಲಯ ಪ್ರವೇಶ.

೧ ಜಿಲ್ಲಾ ಗುಂಟೂರ ತಾಲೂಕ ರಾಜೇಲಾ ಕಸಬಾ ಮಂತಿ ನಾಮಾಪಿಯಾರಲೇನ ಗ್ರಾಮದ ಒಂದು ದೇವಾಲಯ.

೨ ಮದ್ರಾಸದಲ್ಲಿಯ ಪುಲಿಯಾಮಾಲದ ಒಂದು ಜೈನ ಮಂದಿರ.

೩ ಗುಜರಾಥದ ದೋಹದ ಗ್ರಾಮದಲ್ಲಿ ಫ್ರೀ ಲ್ಯಾಂಡಗೇಜ ಕೊಲೊನಿಯಲ್ಲಿಯ ಒಂದು ದೇವಾಲಯ.

೪ ಸಂಯುಕ್ತ ಪ್ರಾಂತದ ಬಾರಾಬಂಕಿ ಜಿಲ್ಲೆಯಲ್ಲಿಯ ಮೂರು ದೇವಾಲಯಗಳು.

೫ ರತ್ನಾಗಿರಿಯಲ್ಲಿಯ ಸೇಟ ಬಾಗೋಜಿ ಕೀರ ಇವರ ಸೊತ್ತಿನ ಭಾಗ್ಯ ಮಂದಿರ ಮತ್ತು ರಾಮಜಿ ಮಂದಿರ ಹೀಗೆ ಎರಡು ದೇವಾಲಯಗಳು. ಶಿವರಾತ್ರಿಯ ದಿವಸ ಆದಿಜನರ ಸಹಿತವಾಗಿ ಎಲ್ಲ ಜನರಿಗೆ ಶ್ರೀ. ಎಮ್. ಆರ್. ಜಯಕರ್ ಇವರ ಹಸ್ತದಿಂದ ತೆರೆಯಲ್ಪಟ್ಟವು.

ಶಾಲೆಗಳು

೧ ಮದ್ರಾಸದಲ್ಲಿ ಗಣಪತಿ ಮುದಾಲಿ ಸ್ಟ್ರೀಟದಲ್ಲಿಯ ಒಂದು ರಾತ್ರಿಯ ಶಾಲೆಯು.

೨ ಸಿಂಧದಲ್ಲಿ ಸಕ್ಕರಜಿಲ್ಲೆಯ ಗರೀಬಾಬಾದ ಗ್ರಾಮದ ಒಂದು ಪ್ರಾಥಮಿಕ ಶಾಲೆಯು.

೩ ಅಹಮದಾಬಾದ ಜಿಲ್ಲೆಯ ವಿಶಾಳಪೂರ, ಭಾಟ, ಪೋರ ಮತ್ತು ಪ್ರಾಂತಿಲ ಎಂಬ ನಾಲ್ಕು ಗ್ರಾಮಗಳ ಶಾಲೆಗಳು ಅವುಗಳಿಗೆ ಪ್ರತಿ ತಿಂಗಳಿಗೆ ೩೧ ರೂ. ಯಂತೆ ಗ್ರ್ಯಾಂಟು ಕೊಡಲ್ಪಡುತ್ತದೆ.

೪ ಖೇಡಾ ಜಿಲ್ಲೆಯ ರಾಧವನಾಜ, ಬೋರಸದ ಮತ್ತು ಕದಳಾಲ ಎಂಬ ಮೂರುಗ್ರಾಮಗಳಲ್ಲಿಯ ಶಾಲೆಗಳು. ಅವುಗಳಿಗೆ ತಿಂಗಳೊಂದಕ್ಕೆ ೩೦ ರೂ. ಗ್ರ್ಯಾಂಟು ದೊರೆಯುತ್ತದೆ.

ಶಿಷ್ಯವೃತ್ತಿಗಳು.

೧ ಗುಜರಾಥ ಪ್ರಾಂತಿಕ ಬೋರ್ಡಿನವರು ಒಬ್ಬ ಆದಿಜನ ವಿದ್ಯಾರ್ಥಿಗೆ ಪ್ರತಿತಿಂಗಳ ೧೦ ರೂ. ಯಂತೆ ಮತ್ತೊಬ್ಬನಿಗೆ ಪ್ರತಿತಿಂಗಳ ೫ ರೂಪಾಯಿಯಂತೆ ಶಿಷ್ಯವೃತ್ತಿಯನ್ನು ಕೊಟ್ಟಿದ್ದಾರೆ.

೨ ಆಂಧ್ರ ಪ್ರಾಂತಿಕ ಬೋರ್ಡಿನವರು ಹಾಯಸ್ಕೂಲಿನಲ್ಲಿ ಕಲಿಯುವ ಮೂವರು ವಿದ್ಯಾರ್ಥಿನಿಯರಿಗೆ ಪ್ರತಿಯೊಬ್ಬರಿಗೆ ೮ ರೂಪಾಯಿಯಂತೆ ಕೊಡಲು ನಿರ್ಣಯಿಸಿದ್ದಾರೆ.

ಅದೇ ಪ್ರಕಾರ ವಿದ್ವಾನ ಪರೀಕ್ಷೆಗೆ ಕುಳಿತುಕೊಳ್ಳತಕ್ಕ ಮೂವರು ವಿದ್ಯಾರ್ಥಿಗಳಿಗೆ ಬೋರ್ಡು ಶಿಷ್ಯವೃತ್ತಿಯನ್ನು ಕೊಡುವರು.

೩. ನಡಿಯಾದದಲ್ಲಿ ಸಾರ್ವಜನಿಕ ವ್ಯಾಯಾಮ ಶಾಲೆಯನ್ನು ಆದಿಜನರ ಮಕ್ಕಳಿಗಾಗಿ ಮುಕ್ತಮಾಡಿದ್ದಾರೆ.

ಬಾವಿಗಳ ಉಪಯೋಗ.

೧ ಖೇಡಾ ಜಿಲ್ಲೆಯ ಲೋಕಲಬೋರ್ಡಿನವರು ನಿರ್ಮಾಣಿಸಿದ ಗೊತ್ತುವಳಿಯ ಪ್ರಕಾರ ಅಲ್ಲಿಯ ಮೂರು ತಾಲೂಕಿನವರು ತಮ್ಮ ಗಡಿಗಳಲ್ಲಿರುವ ಲೋಕಲಬೋರ್ಡಿನ ಎಲ್ಲ ಬಾವಿಗಳನ್ನು ಹರಿಜನರಿಗೂ ಉಪಯೋಗಿಸಲು ನಿರ್ಣಯಿಸಿದ್ದಾರೆ.

೨ ಬನಾರಸದಲ್ಲಿ ಪಂ ಪ್ರಮಥನಾಥ ತರ್ಕಭೂಷಣ ಇವರ ಅಧ್ಯಕ್ಷತೆಯಲ್ಲಿ ಆದಿಜನ ಸೇವಾಸಂಘದ ಶಾಖೆಯು ತೆರೆಯಲ್ಪಟ್ಟದೆ.

ಡಾ. ವಿ. ಜಿ. ವೈಶಂಪಾಯನ ಇವರು ಸೊಲ್ಲಾಪುರದಲ್ಲಿ ಒಂದು ಧರ್ಮಾರ್ಥ ವೈದ್ಯಾಲಯವನ್ನು ತೆರೆದಿದ್ದು ಅಲ್ಲಿ ಆದಿಜನರಿಗೆ ಔಷಧವನ್ನು ಉಚಿತವಾಗಿಕೊಡುವರು.

ಸಿಂಧದಲ್ಲಿ ನ್ಯೂಸಕ್ಕರದಲ್ಲಿಯ ಒಂದು ರಾತ್ರಿಶಾಲೆಯೂ ಮತ್ತು ಓಲ್ಡಸಕ್ಕರದಲ್ಲಿಯ ಒಂದು ಶಾಲೆಯೂ ಹರಿಜನರಿಗಾಗಿ ತೆರೆಯಲ್ಪಟ್ಟವು,

ಪಾಲಿನ ವ್ಯಾಪಾರೋದ್ಯೋಗ.

ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನು ಹಣ ಕೀರ್ತಿ ದೊಡ್ಡಸ್ತನ ಮುಂತಾದವುಗಳನ್ನು ದೊರಕಿಸಲಿಕ್ಕೆ ಪ್ರಯತ್ನಮಾಡುವದು ಸ್ವಾಭಾವಿಕವು. ಇವುಗಳನ್ನು ದೊರಕಿಸುವ ಸದಿಚ್ಛೆಯಿಂದ ತನಗಿಂತ ಶ್ರೀಮಂತರಾದವರ ಆಶ್ರಯವನ್ನು ದೊರಕಿಸಲಿಕ್ಕೆ ಪ್ರಯತ್ನಿಸುವದು ನಮಗೆ ಕಂಡುಬರುವದು. ಶ್ರೀಮಂತರಾದವರು ತಮ್ಮ ಆಶ್ರಯದ ಕೆಳಗೆ ಬಂದವರ ಕಲ್ಯಾಣದ ಕಡೆಗೆ ಲಕ್ಷ್ಯವಿಟ್ಟರೆ ಮಾತ್ರ ದೇವರು ತಮಗೆ ದಯಪಾಲಿಸಿದ ಶ್ರೀಮಂತತನಕ್ಕೆ ಸದುಪದೇಶವಾದಂತೆ ಆಗುವದು. ಅದನ್ನೆಲ್ಲ ಬಿಟ್ಟು ಆಶ್ರಯದ ಕೆಳಗೆ ಬಂದಂಥ ದೈನ್ಯಾವಸ್ಥೆಯಲ್ಲಿದ್ದಂಥ ಜನರನ್ನೇ ಹಿಂಡಿಹಿಪ್ಪೀಮಾಡಿ ಹೆಚ್ಚಾಗಿ ದ್ರವ್ಯವನ್ನು ಗಳಿಸುವ ಹವ್ಯಾಸಕ್ಕೆ ಬಿದ್ದರೆ ಅಂಥಾ ಶ್ರೀಮಂತರಿಗೆ ಏನು ಅನ್ನಬೇಕು? ಎಷ್ಟೋ ಜನರು ತಮ್ಮಲ್ಲಿ ಶಕ್ತಿಯಿಲ್ಲದಿದ್ದರೂ ಬಡವರಿಗೆ ಆಶ್ರಯಕೊಡಲಿಕ್ಕೆ ಮುಂದೆ ಬರುತ್ತಾರೆ. ಇದರ ಉದ್ದೇಶವಾದರೂ ಏನಿರಬಹುದು? ಬಡವರಿಗೆ ಆಶ್ರಯ ಕೊಡುವದರ ಸಲುವಾಗಿ ಈ ಉದ್ಯೋಗವನ್ನು ಕೈಕೊಂಡಿರುವೆನೆಂದು ಬಹಿರಂಗವಾಗಿ ಹೇಳುತ್ತಿದ್ದರೂ ಅಂತರಂಗದಲ್ಲಿ ಹೊಲಿಬಡ್ಡಿಯನ್ನು ಹೆಚ್ಚಾಗಿ ಬಾಡಿಗೆ ಮುಂತಾದವುಗಳನ್ನು ಹಾಕಿ ಆ ಬಡಜನರನ್ನು ಮತ್ತಿಷ್ಟು ದರಿದ್ರಾವಸ್ಥೆಯಲ್ಲಿ ತಂದು ಮುಂದೆ ಹೊಟ್ಟೆತುಂಬಿಕೊಳ್ಳಲಿಕ್ಕೆ ಸಹ ಅಸಮರ್ಥರನ್ನಾಗಿ ಮಾಡುವರು.

ಬಡವರಾದರೂ ಒಂದು ದೊಡ್ಡ ತಪ್ಪನ್ನು ಮಾಡುವರು. ಯಾವದಾದರೊಂದು ಉದ್ಯೋಗವನ್ನು ಕೈಕೊಳ್ಳುವ ಪೂರ್ವದಲ್ಲಿ ಆ ಉದ್ಯೋಗದಲ್ಲಿಯ ತಮ್ಮ ಪಾಲು, ಬಡ್ಡಿ, ಬಾಡಿಗೆ ಮುಂತಾದವುಗಳನ್ನು ಸವಿಸ್ತಾರವಾಗಿ ಮಾಡುವುದಿಲ್ಲ. ಶ್ರೀಮಂತರಂತೂ ಈ ವಿಷಯಗಳನ್ನು ಮೊದಲು ಪ್ರಸ್ತಾಪಿಸುವುದಿಲ್ಲ. ಯಾಕಂದರೆ ಮೊದಲು ಉದ್ಯೋಗವನ್ನು ಸುರುಮಾಡಿದ ನಂತರ ಹಿಂದಿನಿಂದ ತಾವು ಹಾಕಿದ ಕರಾರುಗಳಿಗೆಲ್ಲ ಆ ಬಡವನು ಒಪ್ಪಿಗೆಯನ್ನು ಕೊಡುತ್ತಾನೆಂದು ಸಾವಕಾರರಿಗೆ ಗೊತ್ತಿರುತ್ತದೆ. ಉದ್ಯೋಗವು ಪ್ರಾರಂಭವಾದ ನಂತರ ಆ ಬಡ ಪಾಲುಗಾರನಾದರೂ ಅಂತರಂಗದಲ್ಲಿ ಮನಸ್ಸಿಲ್ಲದಿದ್ದರೂ ಗತಿಗಾಣದೆ ತನ್ನ ಸಾವಕಾರನು ಹೇಳಿದ ಕರಾರುಗಳಿಗೆ ಒಪ್ಪಿಗೆಯನ್ನು ಕೊಡುತ್ತಾನೆ. ಕೆಲವರು ಸಾವಕಾರರ ಎಂಥ ಕರಾರುಗಳಿಗಾದರೂ ಒಪ್ಪಿಕೊಂಡು ಪಾಲಿನಿಂದ ಉದ್ಯೋಗ ಮಾಡುವರು. ಯಾಕಂದರೆ ಅವರಿಗೆ ಇದರ ಹೊರ್ತು ಗತ್ಯಂತರವಿರುವದಿಲ್ಲ. ಆ ಉದ್ಯೋಗದಲ್ಲಿ ಲಾಭವಾದರೆ ಹಂಚಿಕೊಳ್ಳುವರು ಹಾನಿಯಾದರೆ......? ಈ ಪ್ರಕಾರ ವ್ಯವಹಾರ ಮಾಡಿದರೆ ಶ್ರೀಮಂತರು ಮಾತ್ರ ವೃಥಾ ಗಂಡಾಂತರದಲ್ಲಿ ಬೀಳುವರು. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಯಾವದಾದರೊಂದು ಉದ್ಯೋಗವನ್ನು ಆರಂಭಿಸಬೇಕು. ಒಂದು ವೇಳೆ ಬಡವರ ಕಲ್ಯಾಣ

(೧೦ ನೆಯ ಪುಟಕ್ಕೆ ಹಿಂತಿರುಗಿದೆ.)

೫|| ರೂಪಾಯಿಗೆ ಐಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ಹೆಚ್ಚಾಗಿ ಗಳಿಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಅತಿಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

ತಿರುವಾಂಕೂರು ಅಲೈಯನ್ಸ್ ಬ್ಯಾಂಕಿನ

ರೂ. ೫|| **ಬೋನಸ್ ಬಾಂಡ್.** ರೂ. ೫||

ಈ ಒಂದು ಬಾಂಡಿನಿಂದ ರೂ. ೩೦೦೦, ೨೦೦೦, ೧೦೦೦, ಇತ್ಯಾದಿ ಇನಾಮುಗಳನ್ನು ಪಡೆಯಲು

೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧| ಆಣೆಯ ಸ್ಟ್ಯಾಂಪು ಇಟ್ಟು ಬರೆಯಿರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ. ಎಸ್. ಕುರುವತ್ತಿ ದಾವಣಗೆರೆ.

ಭಾಸ್ಕರ ಪ್ರಕಾಶ—ಬಟ್ಟೆ ಸ್ವಚ್ಛವಾಗುವ ೧೨ ಚೀಟು ೮ ಆಣೆ.

ಮಾಸ್ಕಿಟೋರಿಯಲ್—ಗುಂಗಾಡ ನಾಶ ೧೨ ಚೀಟು ೮ ಆಣೆ.

ಚೇಳಿನ ನಾಶ—೧೨ ಚೀಟು ೬ ಆಣೆ.

ತಗಣಿಯ ಶತ್ರು—ಒಂದು ಬಾಟ್ಲಿ ೮ ಆಣೆ.

ಎಲ್ಲ ಮಾಲಿನ ನಮೂನೆ ೧ ರೂಪಾಯಿ ವ್ಹಿ. ಪಿ. ಯಿಂದಾ ೧೯೩೩ ಕ್ಯಾಲೆಂಡರ್ ಸಹ ಮನೆ ಪೇರುವದು.

ಭಾಸ್ಕರ ಪ್ರಕಾಶ ವರ್ಕ್ಸ್,
ಪ್ರೋ. ಹಂಚಲಿ.
ಜಿ. ವಿಜಾಪೂರ.

ಮೋಹಿನಿ ಹೇರ್ ಆಯಿಲ್
ಮತ್ತು
ಕಮಲಾ ಹೇರ್ ಆಯಿಲ್.

ಬಹು ಶ್ರೇಷ್ಠವಾದ ಸುಲಭ ಕ್ರಯದ ಅತಿ ಸುಗಂಧದ ಕೇಶ ತೈಲಗಳು ನಮ್ಮಲ್ಲಿ ತಯಾರಾಗುತ್ತವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮಿಶನ್ ದೊರೆಯುವದು. ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಂಡು ವ್ಯಾಪಾರಿಗಳು ಹೆಚ್ಚಾದ ಲಾಭ ಹೊಂದಬಾರದೇ?

ಬಿ. ಎಚ್. ಹಾಗರಗಿಕರ್,
ಗುಲಬರ್ಗಾ.

ಬೀಜಗಳು.

೨೫	ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು		೪-೦-೦
೨೫	,, ಯುರೋಪ ,,	,,	೫-೦-೦
೨೫	,, ಹೂವಿನ ಬೀಜಗಳು		೫-೦-೦

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦-೦-೦

ನಿಂಬೆ, ಕೊಡಗು ಕಿತ್ತಳೆ, ಚೇಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೀವು, ಪಿಚ್ಚೇಸ್, ಅಂಜೂರ, ದ್ರಾಕ್ಷೆ ಗಿಡಗಳು ಡಜನ್ ೧ಕ್ಕೆ ೯-೦-೦
ಕಟ್ಟಿದ್ದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾಶಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರ ಸಿಟಿ.

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟಿ ಬೆಳಗಾಂವ.

ಕಳಕೂಸ್ಯವ ಮೊದಲು.
ಎಚ್ಚರಾಗಿರಿ!

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ. ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೋದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ**, ಹುಬ್ಬಳ್ಳ್ಯಾಗ ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ **ಕೊಂಡಾರ** ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! **ಜಾಗ್ರತೆ ತರಿಸಿಕೊಳ್ಳಿರಿ!**

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ**-ಪೋ. ಆಲಮಟ್ಟಿ ಜಿ. ವಿಜಾಪುರ

REGISTERED No. B. 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ! ಲೋಕವಿರೋಧಿ ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೮ ॥ ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨.	ಆಲಮಟ್ಟಿ- ಸೋಮವಾರ ತಾರೀಖು ೧೩ ನೆಯ ಮಾರ್ಚ ೧೯೩೩.	ಸಂಚಿಕೆ ೩.

ಜನಸೇವೆಯೇ ದೇವರ ಸೇವೆ

ಶುಭ್ರ ಪತ್ರಿಕೆಯ ಪ್ರಕಟನೆ.

ಹಿಂದುಸ್ಥಾನಕ್ಕೆ ಮುಂದೆ ಬರುವ ಸ್ವರಾಜ್ಯದ ಮುಖ್ಯಾಂಶವನ್ನು ಸೂಚಿಸುವ ಶುಭ್ರ ಪತ್ರಿಕೆಯು

ಈ ತಿಂಗಳ ೧೭ನೆಯ ತಾರೀಖಿನ ದಿನ ಹಿಂದುಸ್ಥಾನದಲ್ಲಿ ಪ್ರಕಟವಾಗುವುದು.

ಪಾರ್ಲಿಮೆಂಟಿನಲ್ಲಿ ತಾ. ೧೭ರಿಂದ ೪ ದಿವಸ ಈ ಶುಭ್ರ ಪತ್ರಿಕೆಯ ಚರ್ಚೆಯಾಗುವುದು.

ದೇವಾಲಯ ಪ್ರವೇಶದ ಗೊತ್ತುವಳಿಯನ್ನು

ಶ್ರೀಮಾನ್ ರಂಗ ಅಯ್ಯರವರು ಇದೇ ತಿಂಗಳು ೨೪ನೆಯ ತಾರೀಖಿನ ದಿನ ಅಸೆಂಬ್ಲಿಯಲ್ಲಿ ತರುವರು.

SANGAM CLOTH STORES
Prop: M. S. Hunoo[illegible]
P.O: TERDAL - 587 315

ದೇಹವೇ ದೇವಾಲಯ

ಕಳ್ಳರ ಭಯವಿಲ್ಲ ! ಬೆಂಕಿಯ ಕಾಟವಿಲ್ಲ!!

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ

ಆ್ಯಂಡ್ ಸನ್ಸ್

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ

ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ.

ಬ್ರ್ಯಾಂಚ್ ಆಫೀಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವಗೈರೆ ಮತ್ತು ಹಸ್ತಪತ್ರ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಸತ್ವ ಪರೀಕ್ಷೆಯು ತಾ. ೨೪ನೇ ಡಿಸೆಂಬರ ೧೯೩೧ನೇ ಇಸವಿ ದಿವಸ ಸದರ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ಪಂಕಿ ಒಂದು ಸರ ನಳಿ ಜತಿ ಒಂದು ಹತ್ತು ರೂಪಾಯ ದ ಕರನ್ಸಿ ನೋಟು ನಂ. K. 11, 57013 ಇವುಗಳನ್ನು ಉದ್ಘಾಷ್ಟರಾದ ಶ್ರೀಯುತ ಸಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧|| ಘಂಟೆ—ಕಟ್ಟಿಗೆಯಲ್ಲಿ ೧|| ತಾಸಿನ ವರಗೆ ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ವತ ಮತ್ತು ಭದ್ರತಗಳನ್ನು ತೋರಿಸಿದರು ಆ ಕಾಲಕ್ಕೆ ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯ ದವರಿಗೆ ಧನ್ಯವಾದಗಳನ್ನು ಅರ್ಪಿಸಿದರು

(೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಇದಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮೋತ್ತಮ ತರಗತಿಯ ತ್ರಿಜೋರಿಯ ಕಾರ್ಖಾನೆಯ ಪರಿಂದೆನಿಸಿಕೊಂಡು ಬಂಗಾರದ ಮೆಡಲು ಮತ್ತು ಸರ್ಟಿಫಿಕೇಟ ಹೊಂದಿದೆ ಮತ್ತು ತಿಜೋರಿಗೆ ಹಾಕುವ ಯಾವತ್ತು ಕೀಲಗಳನ್ನು ವ ನಂಬರ್‌ಲಾಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಪರ್ವೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಪರ್ವೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಮಾರ್ಚ ತಾರೀಖು ೧೩ನೆಯ ಸೋಮವಾರ | ಸಂಚಿಕೆ ೩೦.

ಶುಭ್ರ ಪತ್ರಿಕೆಯಲ್ಲೇನಿದೆ?

ವರ್ಹಾಡದ ಗತಿಯೇನು?

ದೇ ಬರುವ ೧೭ನೆಯ ತಾರೀಖಿನ ದಿವಸ ಶುಭ್ರ ಪತ್ರಿಕೆಯು ಪ್ರಕಟವಾಗುವುದಷ್ಟೆ. ಅದರಲ್ಲೇನಿದೆಯೆಂಬುದನ್ನು ತಿಳಿದುಕೊಳ್ಳಬೇಕೆಂದು ಬಹುಜನರು ಆತುರಪಡುತ್ತಿರುವುದು ಸ್ವಾಭಾವಿಕವು.

ಫ್ರೀ ಪ್ರೆಸ್ ಪತ್ರಿಕೆಯ ವಾರ್ತಾದಾಯಕರಿಗೆ ತಿಳಿದ ಸಂಗತಿಗಳನ್ನು ಅವರು ಈ ಪ್ರಕಾರ ಪ್ರಕಟಿಸಿದ್ದಾರೆ.

"ದಿಲ್ಲಿಗೆ ಶುಭ್ರಪತ್ರಿಕೆಯು ಈಗಾಗಲೇ ಬಂದಿದೆ. ಪ್ರತಿಯೊಂದು ಪ್ರಾಂತದ ಮುಖ್ಯಸ್ಥಳಕ್ಕೂ ಇದು ಹೋಗಿದೆ. ಹಿಂದುಸ್ಥಾನದಲ್ಲೆಲ್ಲಾ ತಾರೀಖು ೧೭ನೆಯ ದಿವಸ ಪ್ರಕಟವಾಗುತ್ತದೆ. ಇದು ಬಹು ದೊಡ್ಡದಾಗಿದೆ. ಇದರಲ್ಲಿ ೨೦೦ ಪ್ಯಾರಿಗ್ರಾಫ್ ಇವೆ.

ಇವರಲ್ಲಿ ಪ್ರಾಂತಿಕ ಮತ್ತು ಫೆಡರಲ್ ಎಂದರೆ ಸಂಯುಕ್ತ ರಾಜ್ಯಭಾರದ ಎಲ್ಲ ಮುಖ್ಯ ಸಂಗತಿಗಳನ್ನೂ ವಿವೇಚಿಸಿದ್ದಾಗಿದೆ.

ವರ್ಹಾಡ, ಸಿಂಧ, ಓರಿಸಾ ಪ್ರಾಂತಗಳ ಸಂಬಂಧವಾಗಿಯೂ ವಿವರಿಸಿದೆ. ನವೀನ ಸಂಯುಕ್ತ ಹಿಂದುಸ್ಥಾನದಲ್ಲಿ ವರ್ಹಾಡ ಪ್ರಾಂತವನ್ನು ಪ್ರತ್ಯೇಕ ಅಂಗವಾಗಿಟ್ಟದ್ದಾಗಿದೆ. ಇದರ ಮೇಲೆ ನೈಜಾಮರ ಸಾರ್ವಭೌಮತ್ವವನ್ನೇ ಮಾನ್ಯಮಾಡಿದ್ದಾಗಿದೆ.

ನಿಜಾಮದ ರಾಜವಂಶಜರಲ್ಲಿಯೇ ಒಬ್ಬರನ್ನು ವರ್ಹಾಡದ ಗವ್ಹರ್ನರನ್ನು ಮಾಡಿ ನಿಜಾಮದ ಯುವರಾಜರನ್ನೇ ಈ ಪ್ರಾಂತದ ಯುವರಾಜರೆಂದು ತಿಳಿಯಲಾಗುವದು.

ಡಾ. ಸಪ್ರುರವರನ್ನು ವ್ಹಾಯಿಸ್‌ರಾಯರು ಕರೆಸಿದ್ದರು. ಈ ಶುಭ್ರಪತ್ರಿಕೆಯ ಸಂಬಂಧವಾಗಿ ವಿಚಾರವಿನಿಮಯವಾಗಿರಬೇಕೆಂದು ಊಹೆ. ಇದೇ ೧೪ ನೆಯ ತಾರೀಖಿನ ದಿವಸ ಭಾರತೀಯ ಸಂಸ್ಥಾನಿಕರನ್ನು ದಿಲ್ಲಿಯಲ್ಲಿ ಕೂಡಿಸಿ ಈ ಶುಭ್ರಪತ್ರಿಕೆಯ ವಿಷಯವಾಗಿ ಸರಕಾರವು ಆಲೋಚಿಸುವುದಾಗಿದೆ.

ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಗೆ ಡಾ. ಸಪ್ರು ಮೊದಲಾದ ಹತ್ತುಜನ ಪ್ರಮುಖರನ್ನು ಬ್ರಿಟಿಶ್ ಹಿಂದುಸ್ಥಾನದ ಪರವಾಗಿಯೂ ೫ ಜನರನ್ನು ಸಂಸ್ಥಾನಗಳ ಪರವಾಗಿಯೂ ಆರಿಸಿದ್ದಾರೆಂದು ಸುದ್ದಿಯಿದೆ.

ಚೀನ ಜಪಾನಗಳ ಘೋರ ಯುದ್ಧ!

ಜಪಾನ ಸೈನ್ಯವು ಚೀನದೇಶದ ಜೆಹೋಲ ಪ್ರಾಂತವನ್ನು ತೆಗೆದುಕೊಂಡದ್ದರಿಂದ ಚೀನ ದೇಶಕ್ಕೆ ತುಂಬಾ ಚಿಂತೆಯುಂಟಾಗಿದೆ. ಚೀನ ದೇಶದ ಮುಖ್ಯ ಮಂತ್ರಿಗಳು ಮತ್ತು ಸೇನಾಧಿಪತಿಗಳು ಸೇರಿ ಮುಂದಿನ ಸ್ಥಿತಿಯ ವಿಷಯವಾಗಿ ಆಲೋಚಿಸಿದರು.

ಜನರಲ್ ಸುಲಿಯಾಂಗ್ ಎಂಬುವವರು ಈ ಕಠಿಣ ಕಾಲದಲ್ಲಿ ಕೆಲಸಕ್ಕೆ ರಾಜಿನಾಮೆ ಕೊಡುವುದು ಯುಕ್ತವಲ್ಲವೆಂತಲೂ ಇವರ ಈ ನಿವೃತ್ತಿ ಪತ್ರಿಕೆಯನ್ನು ಮಾನ್ಯಮಾಡಕೊಡದೆಂತಲೂ ಮಂತ್ರಿಮಂಡಲದವರು ನಿರ್ಧರಿಸಿ ಜೆಹೋಲ ಪ್ರಾಂತವನ್ನು ಪುನಃ ಸ್ವಾಧೀನಪಡಿಸಿಕೊಳ್ಳಲು ೬೦ ಸಾವಿರ ಸೈನ್ಯವನ್ನು ಕಳುಹಿಸಬೇಕೆಂದು ಗೊತ್ತು ಮಾಡಿದ್ದಾರೆ.

ಜೆಹೋಲ ಪ್ರಾಂತದಲ್ಲಿ ಮುಂದೆ ಘನಘೋರಯುದ್ಧವಾಗುವುದು. ಜಪಾನಿಗಳು ಅದನ್ನು ಬಿಡಕೊಡದೆಂದು ಬಹು ಸಿದ್ಧತೆಯಲ್ಲಿದ್ದಾರೆ. ಚೀನ ಸೈನ್ಯವಾದರೋ ಜೆಹೋಲ ಪ್ರಾಂತವನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ವಸ್ವವನ್ನು ಸೂರೆಮಾಡಲು ಸಿದ್ಧವಾಗಿದೆ. ಆದಕಾರಣ ಈ ಭಾಗದ ಜಯಾಪಜಯಗಳ ಮೇಲೆಯೆ ಚೀನ ಜಪಾನಗಳ ಯುದ್ಧದ ಪರ್ಯವಸಾನವು ಅವಲಂಬಿಸಿದೆ.

ಪ್ರಕಟನೆ.

ದಿ ಗಾಯಿಡ ರೇಲ ರೋಡ ಫೀಡರ್ ಲಾಯನ್ಸ್ ಕಂಪನಿ ಲಿಮಿಟೆಡ್ ಆಲಮಟ್ಟಿ,

(ಜಿ. ವಿಜಾಪುರ)

ಅಧಿಕೃತ ಭಾಂಡವಲ ೮,೦೦,೦೦೦ (ಎಂಟು ಲಕ್ಷ) ರೂಪಾಯಿ ೧೯೧೩ನೇ ಇಸವಿಯ ಇಂಡಿಯನ್ ಕಂಪನಿ ಆಕ್ಟ ನಂಬರ ೧೩ನೇಪ್ರಕಾರ ರಜಿಸ್ಟರ ಆಗಿರುತ್ತದೆ.

ಸದರ್ನ ಮರಾಠಾ ರೇಲ್ವೆಯ

(೧) ಆಲಮಟ್ಟಿ ಸ್ಟೇಶನದಿಂದ ಮುದ್ದೇಬಿಹಾಳ ಮೇಲಿಂದ ಹಾಯ್ದು ತಾಳೀಕೋಟಿ ವರೆಗೆ ಸುಮಾರು ೩೩ ಮೈಲು ಮತ್ತು (೨) ಬಾಗಲಕೋಟಿ ಸ್ಟೇಶನ್ನಿನಿಂದ ಕಮತಗಿ ಅಮೀನಗಡ ಮತ್ತು ಹುನಗುಂದ ವ್ಯಾಪಾರೀ ಸ್ಥಳಗಳ ಮೇಲಿಂದ ಹಾಯ್ದು ಇಲಕಲ್ಲದ ವರೆಗೆ ಸುಮಾರು ೪೦ ಮೈಲ

ಈ ಪ್ರಕಾರ ೨ ಶಾಖೆಗಳನ್ನು ಸುಲಭ ಮತ್ತು ಅಲ್ಪ ಖರ್ಚಿನಿಂದ ಗಾಯಿಡ್ ರೇಲ್ ರೋಡುಗಳನ್ನು ಹಾಕಿ, ಇಂಥ ವ್ಯಾಪಾರ ಸ್ಥಳಗಳ ಮತ್ತು ರೇಲ್ವೆ ಸ್ಟೇಶನುಗಳಿಂದ ದೂರ ಇರುವ ದೊಡ್ಡ ಮತ್ತು ಮಹತ್ವವಾದ ಊರುಗಳಿಗೆ ಮತ್ತು ಆಯಾಯ ಊರುಗಳಿಂದ ತಿರುಗಿ ಪ್ರವಾಸಿಕರನ್ನೂ, ಮಾಲುಗಳನ್ನೂ ಅಲ್ಪ ಖರ್ಚಿನಲ್ಲಿ ಹಾಗೂ ಅಲ್ಪವೇಳೆಯಲ್ಲಿ ಒಯ್ಯುವ ಮತ್ತು ತರುವುದಕ್ಕಾಗಿ ಈ ಕಂಪನಿಯು (ಸಂಘವು) ಸ್ಥಾಪಿಸಲ್ಪಟ್ಟಿದೆ.

ಈ ರೀತಿಯಿಂದ ಗಾಯಿಡ ರೇಲ ರೋಡದಿಂದ ಪ್ರವಾಸಿಕರನ್ನೂ ಮತ್ತು ಸರಕುಗಳನ್ನೂ ರೇಲ್ವೆಯಿಂದ ಇಷ್ಟುದೂರ ಇರುವ ವ್ಯಾಪಾರೀ ಸ್ಥಳಗಳಿಗೆ ಒಯ್ಯುವದು ಮತ್ತು ತರುವದು ಆದಲ್ಲಿ ಅತ್ತಕಡೆಗೆ ವ್ಯಾಪಾರವು ಹೆಚ್ಚಾಗಿ ಹಿಂದುಳಿದ ಆ ಭಾಗಗಳಿಗೆ ದಿನೇದಿನೇ ಅಭ್ಯುದಯವು ಉಂಟಾಗುವದು,

ಈ ಕಂಪನಿಯ ಸೇರುಗಳನ್ನು ತಕ್ಕೊಂಡರೆ ಅವುಗಳಮೇಲಿನ ಲಾಭವು ದರ ಒಂದುನೂರಕ್ಕೆ ದರ ಒಂದು ವರ್ಷಕ್ಕೆ ೮ ರೂಪಾಯಿಕ್ಕಿಂತ ಕಡಿಮೆ ಬೀಳಲಿಕ್ಕಿಲ್ಲವೆಂದು ಅಂದಾಜ ಆದೆ. ಮಾತ್ರ ಈ ಗಾಯಿಡ ರೇಲ ರೋಡದ ಮೇಲೆ ಸಾರ್ವಜನಿಕ ಉಪಯೋಗದ ದೆಶೆಯಿಂದ ಗಾಡಿಗಳು ಸುರು ಆದ ತಾರೀಖಿನಿಂದ ಫಾಯಿದೆಯು ಆಕರಿಸುವದರಲ್ಲಿ ಬರುವದು.

ಒಂದು ನೂರು ರೂಪಾಯಿಯ ಸೇರುಗಳು ೬ (ಆರು) ಸಾವಿರ ತೆಗೆಯಲ್ಪಟ್ಟಿವೆ. ಮತ್ತು ಹತ್ತು ರೂಪಾಯಿಯ ೨೦ (ಇಪತ್ತು) ಸಾವಿರ ಶೇರುಗಳು ತೆಗೆಯಲಟ್ಟಿವೆ,

ಪ್ರತಿಯೊಂದು ನೂರು ರೂಪಾಯಿ ಶೇರಿನ ಬಗ್ಗೆ ಅರ್ಜಿ ಕೂಡ ೪೦ ರೂಪಾಯಿ, ಮುಂದೆ ೨ ತಿಂಗಳ ನಂತರ ೩೦ ರೂಪಾಯಿ, ಆ ಮೇಲೆ ಮತ್ತೂ ೨ ತಿಂಗಳ ನಂತರ ೨೦ ರೂಪಾಯಿ ಅನಂತರ ೨ ತಿಂಗಳಾದ ಮೇಲೆ ಉಳಿದ ೧೦ ರೂಪಾಯಿ ಕೊಡತಕ್ಕದ್ದು.

ಈಗಿನ ಕಾಲದಲ್ಲಿ ಎಲ್ಲತರದ ಹಳೇ ಧಂದೆಗಳೂ (ಗಿರಣಿಗಳೂ ಮೋಟರ ನಡೆಯಿಸುವದೂ, ವಗೈರೆ) ಬಹಳಾದ್ದರಿಂದ ಮತ್ತು ಒಬ್ಬರ ಮೇಲೊಬ್ಬರ ಮೇಲಾಟದಿಂದ ಲುಕ್ಸಾನದ ಮಾರ್ಗಕ್ಕೆ ಹತ್ತಿರುತ್ತವೆ. ಇಂಥ ವೇಳೆಯಲ್ಲಿ ಇಡೀ ಹಿಂದುಸ್ಥಾನಕ್ಕೆ ಉದಾಹರಣೆಯಾಗುವಂತೆ ದೊಡ್ಡದೊಡ್ಡ ರೇಲ್ವೆಗಳಿಗೆ ಈ ಗಾಯಿಡ ರೇಲ ರೋಡದ ಶಾಖೆಗಳನ್ನು ತಯಾರಮಾಡಿ ಅಗದಿ ಹೊಸದಾದಂಥ ಒಂದು ಧಂದೆಯನ್ನು ಜನರ ಮುಂದೆ ಇಡಬೇಕೆಂದು ಈ ಕಂಪನಿಯ ಉದ್ದೇಶವಿರುತ್ತದೆ. ಇಂಥ ರೇಲ್ವೆಗಳಲ್ಲಿ ಮಿತವ್ಯಯೀ ಜನರಿಗೆ ಮತ್ತು ಭಾಂಡವಲವಿದ್ದವರಿಗೆ ತಮ್ಮ ಭಾಂಡವಲವನ್ನು ಫಾಯಿದೇಶೀರ ರೀತಿಯಿಂದ ತೊಡಗಿಸಲಿಕ್ಕೆ ಸಾಕಷ್ಟು ಆಸ್ಪದವಿರುತ್ತದೆ. ಮತ್ತು ಅನುದ್ಯೋಗಿ ಜನರಿಗೆ ಬೇಕಾದಷ್ಟು ಕೆಲಸ ಸಿಗಲಿಕ್ಕೆ ಸಮಯವಿರುತ್ತದೆ

ಮೇಲಾಗಿ ಈ ಪ್ರಕಾರ ತಯಾರ ಮಾಡಿದ ಗಾಯಿಡ ರೇಲ ರೋಡದ ಎಲ್ಲ ಹಕ್ಕುಗಳು ರೇಲ್ವೆಗಳಂತೆ ಸಾರ್ವಜನಿಕವಾಗುವವು ಹೊಸತರದ ಮತ್ತು ಅಲ ಖರ್ಚಿನಿಂದ ಆಗುವ ಈ ಗಾಯಿಡ ರೇಲ ರೋಡುಗಳ ಶಾಖೆಗಳನ್ನು ತಯಾರ ಮಾಡುವುದೂ ಅವುಗಳನ್ನು ನಡಿಸುವುದೂ ಮುಂತಾದ ಎಲ್ಲತರದ ವ್ಯವಸ್ಥೆಗಳು ಶೇರ ಹೋಲ್ಡರರ ಕೈಯಲ್ಲಿಯೇ ಇರುವವು.

ಆದ್ದರಿಂದ ಎಲ್ಲಜನರಿಗೆ ಈ ಕಂಪನಿಯ ಡಾಯರೆಕ್ಟರರ ಆಗ್ರಹದ ವಿನಂತಿ ಏನಂದರೆ—

ಎಲ್ಲರೂ ಏಕಮನಸ್ಸಿನಿಂದ ಈ ಲೋಕೋಪಯೋಗದ ಕೆಲಸಕ್ಕೆ ಶೇರುಗಳನ್ನು ಯಥಾಶಕ್ತಿ ತಕ್ಕೊಂಡು ಸಹಾಯಮಾಡಬೇಕು

ಕಂಪನಿ 'ಪ್ರಾಸ್ಪೆಕ್ಟಸದ' ಶೇರುಗಳನ್ನು ತಕ್ಕೊಳ್ಳಬೇಕಾಗುವ ಅರ್ಜಿ ನಮೂನೆಗಳ ದೆಶೆಯಿಂದ ದಿ. ಮ್ಯಾನೇಜಿಂಗ ಡಾಯರೆಕ್ಟರ ಆಲಮಟ್ಟಿ ಜಿಲ್ಲಾ ವಿಜಾಪೂರ ಇವರಿಗೆ ಬರೆದು ತರಿಸಿಕೊಳ್ಳಬೇಕು

ಆಲಮಟ್ಟಿ. (ಸಿ. ಸ್ಕೆಲ್ಟರ್
ತಾ, ೧೨-೧-೧೯೩೩. (ಮ್ಯಾನೇಜಿಂಗ್ ಡಾಯರೆಕ್ಟರ್.

ಬೇಕಾಗಿದೆ.

ಇಂಗ್ಲೀಷ ಇಂಟರ ಪಾಸಾದವರು ಅಥವಾ ಬಿ. ಎ. ಫೇಲ ಇದ್ದ ವೀರಶೈವ ಶಿಕ್ಷಕರು ಬೇಕಾಗಿದೆ. ಇವರಿಗೆ ಕನ್ನಡ ಚನ್ನಾಗಿ ಬರಬೇಕು. ಮರಾಠಿಯೂ ತಕ್ಕಮಟ್ಟಿಗೆ ಬರುತ್ತಿರಬೇಕು. ಅವರ ಸದ್ಗುಣಿಗಳಿದ್ದು ಯಾವ ಕೆಟ್ಟ ಚಟಗಳಿಗೊಳಗಾಗದವರಿರಬೇಕು ಮತ್ತು ಈಗಿನ ಧಾರ್ಮಿಕ ಕ್ರಾಂತಿಯಲ್ಲಿ ಸೇರದವರಿರಬೇಕು. ವೇತನವನ್ನು ಅವರ ಕರ್ತೃತ್ವ ಶಕ್ತಿಯ ಪ್ರಕಾರ ೩೫-೪೦ರ ವರೆಗೆ (ಊಟ ಕೊಟ್ಟು) ಕೊಡಲಾಗುವದು. ಪ್ರಸಂಗದಿಂದ ಹೆಚ್ಚಾದರೂ ಮಾಡಲಾಗುವದು. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಸಮಕ್ಷಮ ಬಂದಾಗಲಿ ಅಥವಾ ಪತ್ರವ್ಯವಹಾರದಿಂದಾಗಲಿ ತಿಳಿದುಕೊಳ್ಳಬೇಕು

ವಿಳಾಸ—

ಸೆಕ್ರೆಟರಿ, ಶ್ರೇಣೀ ವೀರಶೈವ ವಿದ್ಯಾನಿಲಯ ರಂಜೇರಿ
ಪೋ.- **ಹಳಿಖೇಡ,** ಜಿಲ್ಲಾ- **ಗುಲಬರ್ಗಾ,**

ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು ೨. ಕನ್ಯೆಯ ವಯಸ್ಸು ೧೪ ಅಥವಾ ೧೫ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ಶಿಕ್ಷಣ ಪಡೆಯದಿದ್ದರೂ ಚಿಂತೆಯಿಲ್ಲ. ಶರಣರ ವಚನಗಳನ್ನು ಸ್ವಲ್ಪಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೮ ವಿದ್ಯಾವಂತನು, ವೀರಶೈವನು ದೀಕ್ಷಾಬಳಿಕೆ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ವೀರಶೈವರ ಆವ ಪಂಗಡದವರಾದರೂ ಪ್ರಯತ್ನಿಸಬಹುದು. ೬. ಪಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು ಶಕ್ಯವಿದ್ದರೆ ಕನ್ಯೆಯ ಫೋಟೋ ಕಳಿಸಬೇಕು.

ಪತ್ತೆ—**ಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲಸ್ಕೂಲ**
ಪೋ. ನಾರಾಯಣಪೇಟ. ನಿಜಾಂ ಸಂಸ್ಥಾನ
ತಾ. ಮಕ್ತಲಿ ಜಿ. ಮಹಾಬೂಬನಗರ

ಮೈಸೂರು ಪ್ರಜಾಪಕ್ಷದ ತೃತೀಯ ಸಮ್ಮೇಳನ.

(ಸ್ವಾಗತ ಸಮಿತಿ.)

ಅಧ್ಯಕ್ಷರು
ಡಿ. ಎಸ್. ಮಲ್ಲಪ್ಪ ಎಂ. ಎಲ್. ಸಿ.
ಉಪಾಧ್ಯಕ್ಷರು.
ಯನ್. ಚನ್ನಪ್ಪ ಬಿ. ಎ. ಬಿ.ಎಲ್., ಎಂ.ಎಲ್. ಸಿ.
ಯಜಮಾನ್ ಸಿದ್ಧಪ್ಪ ಯಂ. ಆರ್. ಎ.
ಕೆ. ನಾರಾಯಣಶೆಟ್ಟಿ ಯಂ. ಆರ್. ಎ.

ಕೋಶಾಧ್ಯಕ್ಷರು
ಟಿ. ಎನ್. ಕೆಂಪಹೊನ್ನಯ್ಯ
ಆರ್. ವೆಂಕಟರಾವ್.

ಕಾರ್ಯದರ್ಶಿ
ಟಿ. ಗುರುಸಂಜಯ್ಯ ಬಿ. ಎ. ಬಿ, ಎಲ್.
ಸಹಾಯ ಕಾರ್ಯದರ್ಶಿಗಳು.
ಟಿ. ಜಿ. ಗುಬ್ಬಿ ಮುಚ್ಚಯ್ಯ.
ಬಿ. ಮಲ್ಲಪ್ಪ

ತುಮಕೂರು,
ತಾ. ೨೬-೨-೩೩

ಮಹಾಶಯ !

ನಮ್ಮ ಪಕ್ಷದ ೩ನೇ ಸಮ್ಮೇಳನವು ತುಮಕೂರಿನಲ್ಲಿ ೧೯-೩-೧೯೩೩ ನೇ ಭಾನುವಾರ **ಶ್ರೀ ಕೃಷ್ಣ ಸಿನೇಮಾ ಮಂದಿರ** ದಲ್ಲಿ ನೆರವೇರುವಂತೆ ನಿರ್ಧರವಾಗಿದೆ. ಸ್ವಾಗತ ಸಮಿತಿಯ ಬೇಡಿಕೆಯನ್ನು ಅಂಗೀಕರಿಸಿ ಮದ್ರಾಸ್ ಸರಕಾರದ ಮಾಜಿ ಪ್ರಧಾನ ಮಂತ್ರಿಗಳಾದ ಆನರಬಲ್ ದಿವಾನ್ ಬಹದ್ದೂರ್ ಬಿ. ಮುನಿಸ್ವಾಮಿ ನಾಯುಡು, ಬಿ. ಎ., ಬಿ. ಎಲ್. ಎಂ. ಎಲ್. ಸಿ. ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವರು. ಬೆಂಗಳೂರು ಪೌರ ಸಭೆಯ ಮಾಜಿ ಅಧ್ಯಕ್ಷರಾದ ಶ್ರೀಮಾನ್ ಪಿ. ಸುಬ್ಬರಾಮ ಶೆಟ್ಟಿ. ಎಂ. ಎಲ್. ಸಿ. ಯವರು ಅಧ್ಯಕ್ಷಸ್ಥಾನವನ್ನಲಂಕರಿಸುವರು. ಮೇಲಾಗಿ ಅತಿ ಮಹತ್ವದ ಪ್ರಶ್ನೆಗಳು ಚರ್ಚಿತವಾಗುವುದರಿಂದಲೂ, ಹೊರನಾಡಿನ ರಾಜಕೀಯ ರಂಗದ ನಾಯಕರು ಬರುವುದರಿಂದಲೂ ಸಮ್ಮೇಳನವು ಬಹು ಕಳಕಳಿಯಿಂದ ಜರುಗುವುದೆಂಬ ಭರವಸೆಯಿದೆ.

ನಮ್ಮ ಪಕ್ಷದ ಪ್ರಥಮ ಸಮ್ಮೇಳನವು ಚನ್ನಪಟ್ಟಣದಲ್ಲಿಯೂ ದ್ವಿತೀಯ ಸಮ್ಮೇಳನವು ಮೈಸೂರಿನಲ್ಲಿಯೂ ಯಶಸ್ವಿಯಾಗಿ ನಡೆದು ಆಗ ಕಂಡುಬಂದ ಅಭಿಮಾನ ಉತ್ಸಾಹಗಳಿಂದ ನಾವು ಧೈರ್ಯಗೊಂಡು ಈ ತೃತೀಯ ಸಮ್ಮೇಳನವನ್ನು ನಮ್ಮೂರಿನಲ್ಲಿ ನಡೆಸುವ ಸಾಹಸಕ್ಕೆ ಕೈ ಹಾಕಿರುವೆವು.

ಮಹಾಶಯ! ನಮ್ಮೀ ಪಕ್ಷವು ಸ್ಥಾಪಿತವಾಗಿ ಈಗ್ಗೆ ಸುಮಾರು ಮೂರು ವರುಷಗಳಾದರೂ ಇಷ್ಟು ಅಲ್ಪಾವಧಿಯಲ್ಲಿ ಅದು ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿಯೂ ಮತ್ತು ದೇಶಮಧ್ಯದಲ್ಲಿಯೂ ಮಾಡಿರುವ ಜನಸೇವೆಯ ಯೋಗ್ಯತೆಯು ತಮಗೆ ತಿಳಿಯದೆ ಇಲ್ಲ. ಈ ಗಣ್ಯತೆಯನ್ನು ಗಳಿಸಲು ತಮ್ಮೆಲ್ಲರ ಸಹಾಯ ಸಹಾನುಭೂತಿಗಳೇ ಮುಖ್ಯ ಕಾರಣವಾಗಿದೆ.

ನಮ್ಮ ನಾಡಿನ ಜನಜೀವನದಲ್ಲಿ ರಾಜಕೀಯ ಹಕ್ಕು ಬಾಧ್ಯತೆಗಳ ಅರಿವು ವಿಶೇಷವಾಗಿ ಅರಿಯಬೇಕಾಗಿದೆ. ಎಂದಿನವರೆಗೆ ರಾಜ್ಯಾಂಗಸೂತ್ರಗಳು ಪ್ರಜಾಭಿಮತದಂತೆ ಜರುಗುವುದಿಲ್ಲವೋ ಅಂದಿನವರೆಗೆ ನಾವು ನಮ್ಮ ನೋಂದಬಾಳಿನಿಂದ ಪಾರಾಗುವುದು ಕಷ್ಟಸಾಧ್ಯ. ಇದು ರಾಜತಂತ್ರ ವಿಶಾರದರು ಸಿದ್ಧಮಾಡಿರುವ ತತ್ವ. ನಮ್ಮ ಪ್ರಜಾಪಕ್ಷದ ಪವಿತ್ರ ಧ್ಯೇಯವೇನಂದರೆ— ದೇಶದ ರಾಜಕೀಯ ವಾತಾವರಣವನ್ನು ಚೇತನಗೊಳಿಸಿ, ಘನವೊಂದಿದ ಶ್ರೀಮನ್ ಮಹಾರಾಜರವರ ಛತ್ರಚ್ಛಾಯೆಯಲ್ಲಿ ಶಾಂತಿಯುಕ್ತವಾದ ನ್ಯಾಯಸಮ್ಮತವಾದ, ಮತ್ತು ಕಾನೂನು ಬದ್ಧವಾದ ರೀತಿಯಿಂದ ಪ್ರಜಾಭಿಪ್ರಾಯಕ್ಕನುಸಾರವಾಗಿ ನಡೆಯುವ ಜವಾಬ್ದಾರಿ ಸರಕಾರವನ್ನು ಜಾಗ್ರತೆ ದೊರಕಿಸಿಕೊಳ್ಳುವುದು. ಇಂತಹ ಪವಿತ್ರೋದ್ದೇಶಕ್ಕೆ ತಮ್ಮ ಒಲುಮೆ ಒತ್ತಾಸೆಯನ್ನು ಬೇಡಿರುವೆವು. ಇದಕ್ಕಾಗಿ ನಡೆಯುವ ಈ ಸಮ್ಮೇಳನಕ್ಕೆ ತಮ್ಮ ಆಗಮನವನ್ನು ಬಯಸುವೆವು.

ಮುಖ್ಯ ಸಮ್ಮೇಳನವು ಫಲದಾಯಕವಾಗಬೇಕೆಂಬುದೇ ನಮ್ಮ ತೀವ್ರ ಅಪೆ. ಇದಕ್ಕಾಗಿ ತಮ್ಮ ಸಹವಾಸ, ಸಹಯೋಗಗಳನ್ನು ಸ್ವಾಗತ ಸಮಿತಿಯವರು ಕಡ್ಡಾಯವಾಗಿ ಅಪೇಕ್ಷಿಸುವರು. ತಮ್ಮ ಕೆಲಸಗಳ ತೊಡಕಿನಲ್ಲಿ ಇದನ್ನು ಲಕ್ಷಿಸದೆ ಸಮ್ಮೇಳನಕ್ಕೆ ತಪ್ಪದೆ ತಾವು ದಯಮಾಡಿಸುವುದಲ್ಲದೆ ತಮ್ಮ ಪ್ರಾಂತ್ಯದ ಮಹಾಜನಗಳನ್ನೂ ಅಧಿಕ ಸಂಖ್ಯೆಯಿಂದ ಕರೆದುಕೊಂಡು ಬಂದು ಸಮ್ಮೇಳನವು ಯಶಸ್ವಿಯಾಗಿಯೂ ಮಂಗಳಪ್ರದವಾಗಿಯೂ ನಡೆಯುವಂತೆ ಸಹಕರಿಸಿ, ನಮ್ಮ ಪಕ್ಷಕ್ಕೆ ಧೈರ್ಯೋತ್ಸಾಹವನ್ನು ನೀಡಬೇಕಾಗಿ ಸವಿನಯ ಪ್ರಾರ್ಥನೆ.

ಇತಿ ನಿರಂಜನ ತಮ್ಮ ಅಭ್ಯುದಯಾಕಾಂಕ್ಷಿಗಳಾದ,
ಡಿ. ಎಸ್. ಮಲ್ಲಪ್ಪ,
ಟಿ. ಗುರುಸಂಜಯ್ಯ,
ಸ್ವಾಗತ ಸಮಿತಿಯ ಪರವಾಗಿ.

ಸೂಚನೆ—(i) ಪರಸ್ಥಳದ ಪ್ರತಿನಿಧಿಗಳಿಗೆ ಊಟದ ಮತ್ತು ನಿವಾಸದ ವ್ಯವಸ್ಥೆ ಮಾಡಲಾಗಿದೆ. ಪ್ರತಿನಿಧಿಗಳಿಗೆ ಪ್ರವೇಶಧನ (Delegate Fee) ಎಂಟು ಆಣೆ. ಪ್ರತಿನಿಧಿಗಳು ತಮ್ಮ ಬರುವಿಕೆಯನ್ನು ಕುರಿತು ಕಾರ್ಯದರ್ಶಿಗಳಿಗೆ ೧೬ನೇ ತಾರೀಖಿನೊಳಗಾಗಿ ತಿಳಿಸಬೇಕಾಗಿ ಕೋರಿದೆ.

(ii) ಸಮ್ಮೇಳನದಲ್ಲಿ ಚರ್ಚಿಸಬೇಕಾದ ವಿಷಯ ಮತ್ತು ಠರಾವುಗಳನ್ನು ೧೨-೩-೧೯೩೩ರ ರೊಳಗಾಗಿ ಕಾರ್ಯದರ್ಶಿಗಳಿಗೆ (General Secretary) ಬರೆದು ತಿಳಿಸಬೇಕಾಗಿ ಕೋರಿದೆ.

(iii) ಸಬ್ಜೆಕ್ಟ್ ಕಮಿಟಿ ಮತ್ತು ಪಕ್ಷದ ಎಗ್ಜಿಕ್ಯೂಟಿವ್ ಕಮಿಟಿ ಮೀಟಿಂಗುಗಳು ೧೮-೩-೩೩ನೇ ಸಾಯಂಕಾಲ ೮ ಗಂಟೆಗೆ ಜರುಗಬೇಕಾಗಿರುವುದರಿಂದ ಠರಾವುಗಳನ್ನು ಕಳುಹಿಸುವವರು ಮತ್ತು ಪಕ್ಷದ ಎಗ್ಜಿಕ್ಯೂಟಿವ್ ಕಮಿಟಿ ಮೆಂಬರುಗಳೂ ಸಹಾ ೧೮ ನೆಯ ತಾರೀಖಿನ ದಿವಸವೇ ಇಲ್ಲಿಗೆ ಬರಬೇಕಾಗಿ ಕೋರಿದೆ.

ಶರಣ ಸಂದೇಶ

ಶಾ. ಶ. ೧೮೫೪ ನೆಯ ಫಾಲ್ಗುಣ ಬ. ೧ ಸೋಮವಾರ.

ರಾಜಕಾರಣದ ಪರಿವರ್ತನೆ.

ಜಗತ್ತಿನ ರಾಜಕಾರಣವು ಯುರೋಪದ ಮಹಾಯುದ್ಧದ ನಂತರ ವಿಶೇಷ ಪರಿವರ್ತನೆಯಾಗಿದೆ. ಆ ನಾಲ್ಕು ವರುಷಗಳ ಘೋರವಾದ ರಣಕ್ಷೇತ್ರದಲ್ಲಿ ಸಾಧಾರಣ ಒಂದೂಕಾಲು ಕೋಟಿ ಜನಗಳ ಆತ್ಮಾಹುತಿಯಾದ ನಂತರ ಪ್ರಪಂಚದ ಸ್ಥಿತಿಯೇ ಬೇರೆಯಾಗಿದೆ. ಪ್ರತಿಯೊಂದು ದೇಶದ ರಾಜಕಾರಣವೂ ಕ್ಷಣ ಕ್ಷಣಕ್ಕೆ ವಿಶೇಷ ಪರಿವರ್ತನೆಯಾಗುತ್ತಿರುವುದರಿಂದ ಜಗತ್ತಿನ ಸುಖ ಶಾಂತಿಗಳಿಗೆ ತುಂಬಾ ಬಾಧಕವಾಗಿದೆ.

ಆ ಯುರೋಪದ ಮಹಾಯುದ್ಧವೇ ಈಗ ಜಪಾನದೇಶಕ್ಕೆ ಇಂತಹ ಆವೇಶೋತ್ಸಾಹಗಳನ್ನುಂಟುಮಾಡಿದೆ. ಚೀನದೇಶವನ್ನು ನುಂಗಿ ಪುಷ್ಟವಾಗಿ ಏಶಿಯಾದಲ್ಲಿ ತನ್ನ ಸ್ವಾಮಿತ್ವವನ್ನು ಸ್ಥಾಪಿಸಲು ಹವಣಿಸುತ್ತಲಿದೆ. ಈ ಕಠಿಣ ಪ್ರಸಂಗದಲ್ಲಿ ಚೀನದೇಶವು ಸರ್ವಸ್ವವನ್ನು ಸೂರೆಮಾಡಿ ತನ್ನ ಘನತೆಯನ್ನು ಕಾಯ್ದುಕೊಳ್ಳಬೇಕೆಂದು ಪ್ರಯತ್ನಿಸುತ್ತಲಿದೆ. ಈ ಉಭಯ ಪ್ರಬಲ ರಾಷ್ಟ್ರಗಳ ರಾಜಕಾರಣದ ಮೇಲೆಯೇ ಮುಂದೆ ಏಶಿಯಾ ಖಂಡದ ಸುಖಶಾಂತಿಗಳು ಅವಲಂಬಿಸುವ ಪ್ರಸಂಗ ಬರುವ ಸಂಭವವಿದೆ.

ಇಂತಹ ಪ್ರಸಂಗದಲ್ಲಿ ಹಿಂದುಸ್ಥಾನವು ಜನಾಭಿಪ್ರಾಯದಂತೆ ಆಳಲ್ಪಟ್ಟು ಇದು ಸಕಲ ಸಂಗತಿಗಳಲ್ಲಿಯೂ ಜಾಗ್ರತೆ ಸುಧಾರಣೆಯಾಗುವಂತಹ ಏರ್ಪಾಡುಗಳಾಗುವುದು ಆವಶ್ಯಕವಲ್ಲವೇ? ಇಂಗ್ಲಿಷ್ ಸರಕಾರವು ಈಗಿನ ತನ್ನ ಕಠೋರ ವರ್ತನೆಯನ್ನು ಬಿಟ್ಟು ಭಾರತೀಯರ ಸಂಗಡ ಸಹಕರಿಸಿ ಯೋಗ್ಯವಾದ ರಾಜಕೀಯ ಸುಧಾರಣೆಯನ್ನು ಮಾಡಬೇಕೆಂದು ಅನೇಕರು ಸೂಚಿಸಿದ್ದಾರೆ.

ರಾಷ್ಟ್ರೀಯ ಸಭೆಯವರು ಶಾಸನೋಲ್ಲಂಘನೆಯ ಚಟುವಟಿಕೆಯನ್ನು ಪುನಃ ಪ್ರಾರಂಭಿಸುವುದಿಲ್ಲವೆಂಬುದು ನಿಶ್ಚಯವಾದ ವಿನಾ ಸರಕಾರವು ಗಾಂಧೀಜಿ ಮೊದಲಾದವರನ್ನು ಬಿಟ್ಟು ಅವರ ಸಂಗಡ ವಿಚಾರ ವಿನಿಮಯ ಮಾಡಲು ಸಿದ್ಧವಿಲ್ಲವೆಂದು ಭಾರತ ಮಂತ್ರಿಗಳು ಆಗಾಗ್ಗೆ ಹೇಳುತ್ತ ಬಂದಿದ್ದಾರೆ. ರಾಷ್ಟ್ರೀಯ ಸಭೆಯವರ ಸಲಹೆ ಸಹಾಯಗಳಿಲ್ಲದೆ ಏರ್ಪಡುವ ಹಿಂದುಸ್ಥಾನದ ರಾಜಕೀಯ ಸುಧಾರಣೆಯಾದರೋ ಅಪೂರ್ಣವೂ ಅತೃಪ್ತಿಕರವೂ ಆದುದೆಂದು ಹೇಳಬೇಕಾದುದೇ ಇಲ್ಲ.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸಭೆಯವರು ಇತರರ ಸಹಾನುಭೂತಿಯಿಂದ ಹೆಚ್ಚಾದ ರಾಜಕೀಯ ಸುಧಾರಣೆಯನ್ನು ಹೊಂದಲು ಶಾಸನೋಲ್ಲಂಘನೆಯನ್ನು ನಿಲ್ಲಿಸಬೇಕೆಂದು ಇತ್ತೀಚಿಗೆ ಅನೇಕರು ಹೇಳಲಾರಂಭಿಸಿದ್ದಾರೆ. ಇದು ಈ ದೇಶದ ರಾಜಕಾರಣದಲ್ಲಿ ಮುಂದಣ ಒಂದೆರಡು ವಾರಗಳಲ್ಲಿಯೇ ಆಗುವ ಪರಿವರ್ತನೆಯ ಲಕ್ಷಣವೆಂದು ತೋರುತ್ತದೆ.

ಅಖಿಲ ಭಾರತೀಯ ರಾಷ್ಟ್ರೀಯ ಮುಸಲ್ಮಾನ ಸಂಘದವರು ಶ್ರೀ ಜವಾಹರದಾಸ ಮೆಹತಾ ಶ್ರೀ. ಸೇಟಲವಾಡ ಮೊದಲಾದವರು ರಾಷ್ಟ್ರೀಯ ಸಭೆಯವರು ಸದ್ಯಕ್ಕೆ ಶಾಸನೋಲ್ಲಂಘನೆಯನ್ನು ನಿಲ್ಲಿಸಬೇಕೆಂದು ಸೂಚಿಸಿದ್ದಾರೆ. ಈ ಸೂಚನೆಯು ಮಾನ್ಯವಾದರೆ ಗಾಂಧೀಜಿಯವರೇ ಮೊದಲಾದ ರಾಷ್ಟ್ರೀಯ ಸಭೆಯ ಪ್ರಮುಖರು ಬಿಡುಗಡೆ ಹೊಂದುವರು. ಆಗ ಈ ದೇಶದ ರಾಜಕಾರಣವು ಮತ್ತೆ ಪರಿವರ್ತನೆಯಾಗುವುದರಲ್ಲಿ ಸಂದೇಹವಿಲ್ಲ.

ಸ್ಫುಟ ಸೂಚನೆ.

ಹರಿಜನ ಶಬ್ದನಿಷೇಧ.

ಹಿಂದುಗಳಲ್ಲಿಯ ನಾನಾ ಪಂಥಗಳ ಆದಿಜನಗಳಿಗೆ ಹರಿಜನ ಎಂಬ ವೈಷ್ಣವ ಪಂಥದ ಹೆಸರನ್ನಿಟ್ಟದ್ದು ಅನುಚಿತವೆಂದು ನಾವು ಅನೇಕಸಾರೆ ಸೂಚಿಸಿದ್ದೇವಷ್ಟೆ. ಇದರಿಂದ ಮತಕಲಹಕ್ಕೆ ಮತ್ತೊಂದು ಪಂಥವುಂಟಾದುದು ವಿಷಾದಕರವು. ಈ ದೇಶದಲ್ಲಿ ಈಗಲೇ ಮತಪಂಥಗಳು ಅತ್ಯಧಿಕವಾಗಿ ಅನೈಕಮತ್ಯವು ಹೆಚ್ಚಿರುವಾಗ ಇದೊಂದು ಪಂಥವನ್ನೇರ್ಪಡಿಸಿದುದು ಯುಕ್ತವಲ್ಲವೆಂದೇ ಸ್ಪಷ್ಟವಾಗುವುದಿಲ್ಲವೇ?

ಕಳೆದ ತಿಂಗಳು ೧೫ನೆಯ ತಾರೀಖಿನ ದಿನ ಕ್ಯಾಸನೂರಲ್ಲಿ ಕೂಡಿದ ವೀರಶೈವ ಮತಾಶ್ರಿತ ಚನ್ನಯ್ಯ ಪಂಚಮರ ತನಯ ಮಹಾಸಭೆಯಲ್ಲಾದ ಭಾಷಣದಿಂದ ಈ ಹರಿಜನ ಶಬ್ದಕ್ಕೆ ಅವರ ವಿರೋಧವು ಎಷ್ಟಿದೆಯೆಂಬುದು ಚನ್ನಾಗಿ ಗೊತ್ತಾಗುತ್ತದೆ. ಮಾದಾರ ಚೆನ್ನಯ್ಯನ ವಂಶಜರಾದ ಶ್ರೀ ಜಂಬೂರು ವೀರಪ್ಪ ಮೊದಲಾದವರು ತಾಪದಿಂದ ಬಹು ಕಠೋರವಾಗಿ ಭಾಷಣಮಾಡಿದರು.

'ಗಾಂಧೀಜಿಯವರು ವೈಷ್ಣವರಾದುದರಿಂದ ಸ್ವಮತವನ್ನು ಬೆಳೆಸಲು ಅಸ್ಪೃಶ್ಯರನ್ನೆಲ್ಲಾ ಒಟ್ಟಿಗೆ ಸೇರಿಸಿ ಹರಿಜನರೆಂದು ನೂತನವಾಗಿ ಕರೆಯಲಿಕ್ಕೆ ಸುರುವು ಮಾಡಿರುವರು. ನಾವು ವೀರಶೈವ ಮತದ ಶಿಷ್ಯಕೋಟಿಗೆ ಸೇರಿದವರಾಗಿರುವುದರಿಂದ ಈ ಅನ್ಯಾಯದ ಹೆಸರನ್ನು ಮಾನ್ಯ ಮಾಡುವುದಿಲ್ಲ.'

ದಕ್ಷಿಣ ದೇಶದ ಸ್ಥಿತಿಯನ್ನಾದರೂ ಯೋಚಿಸಿ ಈ ಭಾಗದ ಪ್ರಮುಖರು ಹರಿಜನ ಶಬ್ದವನ್ನು ಬಿಟ್ಟು ಯಾವ ಮತಕ್ಕೂ ಸಂಬಂಧಿಸದಂತಹ ಬೇರೆ ಶಬ್ದವನ್ನುಪಯೋಗಿಸಬಾರದೇ?

ಮರಾಠಿಗರ ಅತಿಕ್ರಮಣ.

ಮರಾಠಿಗರಲ್ಲಿ ಬಹುಜನರು ಕನ್ನಡಿಗರ ಹೆಸರೇ ಇಲ್ಲದಂತೆ ಮಾಡಲು ದುಷ್ಟ ಪ್ರಯತ್ನ ಮಾಡುತ್ತಿದ್ದಾರೆ. ಹಿಂದಕ್ಕೆ ಕನ್ನಡಿಗರು ಇವರಲ್ಲಿ ಸೇರಿಕೊಂಡದ್ದರಿಂದಲೇ ಇವರಿಗೆ ಈ ದುರಾಶೆಯುಂಟಾಗಿದೆ.

ಬೆಳಗಾಂವ ಜಿಲ್ಲೆಯನ್ನು ಮರಾಠಿ ದೇಶವನ್ನಾಗಿ ಮಾಡುವ ಅಪಹಾಸ್ಯದ ಅನೇಕ ಕುಟಿಲ ಯೋಜನೆಗಳನ್ನು ಅನೇಕರು ಮಾಡಿದ್ದಾರಷ್ಟೆ. ಪುಣೆಯಲ್ಲಿ ಈಗತಾನೆ ಪ್ರಕಟವಾದ ಮಹಾರಾಷ್ಟ್ರ ಸಾಂವತ್ಸರಿಕ ಎಂಬ ಗ್ರಂಥದಲ್ಲಿ ಈ ಪ್ರಕಾರ ಬರೆದಿದ್ದಾರೆ.

"ಮಹಾರಾಷ್ಟ್ರದಲ್ಲಿ ೧೩ ಜಿಲ್ಲೆಗಳಿವೆ. ಅವುಗಳಲ್ಲಿ ಬೆಳಗಾಂವ ವಿಜಾಪುರ ಧಾರವಾಡ ಎಂಬುವು ಸೇರಿವೆ."

ಈ ಪ್ರಕಾರ ಬರೆದವರು ಭೂಗೋಲ ಜ್ಞಾನವೇ ಇಲ್ಲದ ಮೂಢರಿರಬೇಕು. ಅಥವಾ ಮಹಾ ದುರುದ್ದೇಶದವರಾದರೂ ಇರಬೇಕು. ಕರ್ನಾಟಕ ದೇಶವೆಂಬುದೊಂದು ಇಲ್ಲವೇ ಇಲ್ಲವೆಂದು ಅನ್ಯರಿಗೆ ತೋರಿಸಲು ಇವರು ಈ ಪ್ರಕಾರ ಪ್ರಯತ್ನಿಸುವಂತೆ ಕಾಣುತ್ತದೆ.

ಹಿಂದುಸ್ಥಾನದಲ್ಲಿ ೧೪೦ ಭಾಷೆಗಳಿವೆಯೆಂದು ಈ ಪುಸ್ತಕದಲ್ಲಿ ಬರೆದಿದ್ದಾರೆ. ೫೦೦೦ ಜನಸಂಖ್ಯೆಗಿಂತ ಹೆಚ್ಚಾದ ಜನರು ಮಾತಾಡುವ ಭಾಷೆಗಳು ಹತ್ತಿವೆಯೆಂದು ತಿಳಿಸಿದ್ದಾರೆ. ಇವುಗಳಲ್ಲಿ ಕನ್ನಡ ಭಾಷೆಯ ಹೆಸರೇ ಇಲ್ಲ.

ಒಂದೂವರೆ ಕೋಟಿ ಜನಗಳು ಮಾತಾಡುತ್ತಿರುವ ಕನ್ನಡ ಭಾಷೆಯ ಅರುವೇ ಇವರಿಗಿಲ್ಲವಂತಾಗಿದೆಯೋ? ಈ ಪ್ರಕಾರ ಕನ್ನಡವನ್ನು ನುಂಗಬೇಕೆಂಬ ದುರಾಶೆಯ ಅನೇಕ ಮರಾಠಿಗರ ಈ ಮೇಲಣ ಕುಟಿಲ ಕೃತ್ಯಗಳನ್ನು ಶ್ರೀ. ಮುಲ್ಲಾರಿಯವರು ರಾಜಹಂಸ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಇಂಥ ಮಹಾದೋಷಗಳು ಆ ಪುಸ್ತಕದಲ್ಲಿದ್ದದ್ದಾಗಿದ್ದರೆ ಅವುಗಳನ್ನು ನಿಷೇಧಿಸುವುದು ಕನ್ನಡಿಗರ ಕರ್ತವ್ಯವಲ್ಲವೇ?

ಮಹಾತ್ಮರ ದೂಷಣೆ.

ಮಹಾತ್ಮಾಗಾಂಧಿಯವರನ್ನು ಸನಾತನಿಗಳೆಂದು ಹೇಳಿಕೊಳ್ಳುವವರಲ್ಲಿ ಅನೇಕರು ವಿಪರೀತ ದೂಷಿಸುತ್ತಿದ್ದಾರೆ. ಹೀಗೆ ಅವರನ್ನು ದೂಷಿಸಿದ ಮಾತ್ರದಲ್ಲಿ ತಮ್ಮ ಮಿಥ್ಯ ಪಕ್ಷವು ಸತ್ಯಪಕ್ಷವಾಗುವದೆಂದು ಅವರು ತಿಳಿದು ಕೊಂಡಂತೆ ಕಾಣುತ್ತದೆ.

ಬೆಳಗಾವಿಯಲ್ಲಿ ಕರವೀರಪೀಠದ ಶ್ರೀ ಜಗದ್ಗುರು ಶಂಕರಾಚಾರ್ಯರು ಕಳೆದವಾರ ಪ್ರವಚನ ಮಾಡುವಾಗ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯನ್ನು ಪ್ರಸ್ತಾಪಿಸಿ ಗಾಂಧೀಜಿಯವರಿಗೆ ಸೈತಾನಿ, ಪಿಶಾಚಿ, ರಾಕ್ಷಸ ಮೊದಲಾದ ಶಬ್ದಗಳನ್ನುಪಯೋಗಿಸಿದರೆಂದು ರಾಜಹಂಸಪತ್ರಿಕೆಯಲ್ಲಿ ಪ್ರಕಟವಾಗಿದೆ.

ಇದು ನಿಜವೆಂದು ನಮಗೆ ಇನ್ನೂ ತೋರದು. ಇಂಥ ದೊಡ್ಡವರು ಈ ಪ್ರಕಾರ ಮಹಾತ್ಮರನ್ನು ದೂಷಿಸುವರೇ? ಹೀಗೆ ದೂಷಿಸುವವರು ದೊಡ್ಡವರೇ?

ಸಂರಕ್ಷಣೆಯ ಹೆಚ್ಚಿನ ತೆರಿಗೆ.

ಕಾರವಾರ ಜಿಲ್ಹೆಯ ಅಂಕೋಲಾ ತಾಲೂಕಿನ ೫೪ ಹಳ್ಳಿಗಳ ಮೇಲೆಯೂ ಮತ್ತು ಕುಮಟಾ ತಾಲೂಕಿನ ೮ ಹಳ್ಳಿಗಳ ಮೇಲೆಯೂ ಮುಂಬಯಿ ಸರಕಾರದವರು ೧೯೩೩ ನೆಯ ಇಸ್ವಿ ಮಾರ್ಚ ತಿಂಗಳ ಒಂದನೆಯ ತಾರೀಖಿನಿಂದ ಒಬ್ಬ ಇನ್ಸ್ಪೆಕ್ಟರ ೧೩ ಹೆಡ್ ಕಾನ್ಸ್ಟೇಬಲ್ ಮತ್ತು ೪೯ ಕಾನ್ಸ್ಟೇಬಲ್ಸ ಹೀಗೆ ಹೆಚ್ಚಿಗೆ ಪೋಲಿಸ ಅಧಿಕಾರಿಗಳನ್ನು ನಿಯಮಿಸಿದ್ದಾರೆ. ಈ ಅಧಿಕಾರಿಗಳ ವೇತನವು ಅವರ ಪೆನ್ಶನ್, ರಜೆಯ ವೇತನ, ಮೇಲ್ವಿಚಾರಣೆಯ ವೇತನ, ಬೇರೆ ಸಾದಿಲವಾರ ವೆಚ್ಚ ಸಹಿತವಾಗಿ ವರ್ಷಕ್ಕೆ ೩೩೭೭೨ ರೂ. ಆಗುತ್ತವೆ. ಈ ವೆಚ್ಚವನ್ನು ಮೇಲೆ ಕಾಣಿಸಿದ ಜಿಲ್ಹೆಗಳ ಭೂಮಿಯ ಒಡೆಯರಿಂದಲೂ ಮತ್ತು ಮನೆಯ ಯಜಮಾನರಿಂದಲೂ ತೆಗೆದುಕೊಳ್ಳಲಾಗುವದು. ಆದರೆ ಸರಕಾರೀ ನೌಕರರಿಗೂ ಮತ್ತು ಸರಕಾರೀ ಗೊತ್ತುವಳಿಯಲ್ಲಿ ನಮೂದಿಸಿದ ೩೭ ಜನ ನಿವಾಸಿಗಳಿಗೂ ಈ ತೆರಿಗೆಯಿಲ್ಲ.

ಎರಡು ಮಹಾಸಭೆಗಳು.

ತುಮಕೂರಿನಲ್ಲಿ ಈ ತಿಂಗಳ ೧೯ನೆಯ ತಾರೀಖಿಗೆ ಮೈಸೂರು ದೇಶದ ಪ್ರಜಾಪರಿಷತ್ತು ಕೂಡುತ್ತದೆ. ಈ ತಿಂಗಳ ಅಂತ್ಯಕ್ಕಾದರೋ ಮಂಗಳೂರಲ್ಲಿ ಅಖಿಲ ಕರ್ನಾಟಕ ಹಿಂದಿ ಪರಿಷತ್ತು ಕೂಡುತ್ತದೆ. ಇವೆರಡೂ ಮಹಾಸಭೆಗಳೇ ಸರಿ, ಇವು ಜಯಪ್ರದವಾಗಲೆಂದೇ ಹಾರೈಸುತ್ತೇವೆ.

ಹಿಂದಿ ಪರಿಷತ್ತು ಬಹು ಮಹತ್ವದ್ದಾಗಿದೆ. ಈ ದೇಶದ ಎಲ್ಲ ವಿದ್ಯಾ ಸಂಸ್ಥೆಗಳಲ್ಲಿಯೂ ಹಿಂದೀ ಭಾಷೆಯನ್ನು ಅವಶ್ಯಕವಾದ ಅಭ್ಯಾಸ ಕ್ರಮದಲ್ಲಿ ಸೇರಿಸಿ ಹಿಂದೀ ಭಾಷಾಪ್ರಸಾರಣೆಗೆ ಸಹಾಯ ಮಾಡುವುದು ಅಗತ್ಯವಾಗಿದೆ.

ಎಲ್ಲರು ಎಚ್ಚತ್ತರೂ ವೀರಶೈವ ಮಹಾಸಭೆಯ ಚಾಲಕರೇಕೆ ಮಲಗಿದ್ದಾರೆಂದೇ ಕೇಳುವ ಪ್ರಸಂಗ ಬರುವಂತೆ ಕಾಣುತ್ತದೆ. ಇನ್ನೊಂದೇ ತಿಂಗಳು ಮಾತ್ರ ಮಹಾಸಭೆಗೆ ಕಾಲಾವಧಿಯಿದ್ದರೂ ಇನ್ನೂ ಕಾರ್ಯವೇ ಪ್ರಾರಂಭವಾಗಿಲ್ಲವಲ್ಲಾ!

ಮಹತ್ವದ ವಿವಾಹ.

ಮಹಾತ್ಮಾಜಿಯವರು ತಮ್ಮ ಹರಿಜನ ಪುತ್ರಿಯಾದ ಲಕ್ಷ್ಮೀಬೇ ಎಂಬ ಕನ್ಯೆಯನ್ನು ಬಾರ್ಡೋಲಿ ಆಶ್ರಮದಲ್ಲಿ ಕೆಲಸಮಾಡುತ್ತಿರುವ ಮಾರುತಿದಾಸ ಕೃಷ್ಣದಾಸ ಎಂಬ ಮದ್ರಾಸಿ ಬ್ರಾಹ್ಮಣ ವರನಿಗೆ ಕೊಟ್ಟು ಮಾರ್ಚ ೧೪ ನೆಯ ತಾರೀಖಿಗೆ ವಿವಾಹ ಮಾಡುವುದು ನಿಶ್ಚಯವಾಗಿದೆ.

—ಪುಣೆಯ ಹರಿಜನ ಮುಂದಾಳುಗಳಾದ ಶ್ರೀ ರಾಜಭೋಜ ಇವರು ೭ ನೆಯ ತಾರೀಖಿನ ದಿವಸ ಮಹಾತ್ಮಾಗಾಂಧಿಯವರ ಭೆಟ್ಟಿಯಾಗಿ ೧. ಅಸ್ಪೃಶ್ಯತಾ ನಿವಾರಣೆ ೨. ಅಸ್ಪೃಶ್ಯರ ಆದರ್ಶ ಸಂಸ್ಥೆಯು ಹೇಗೆ ಇರಬೇಕು. ಮೊದಲಾದ ವಿಷಯಗಳನ್ನು ಮಹಾತ್ಮಾಜಿಯವರ ಸಂಗಡ ವಿಚಾರ ವಿನಿಮಯ ಮಾಡಿದರು. ಆ ಕಾಲಕ್ಕೆ ಶ್ರೀ ಕಾಕಾ ಕಾಲೇಲಕರ್, ಹರಿಭಾವು ಫಾಟಕ, ದೇವಿದಾಸ ಗಾಂಧಿ ಮೊದಲಾದವರಿದ್ದರು. ಸರ್ವ್ಹಂಟ್ಸ ಆಫ್ ಇಂಡಿಯಾ ಸಂಸ್ಥೆಯ ಪದ್ಧತಿಯಂತೆ ಅಸ್ಪೃಶ್ಯರ ಸಲುವಾಗಿ ಒಂದು ಆದರ್ಶ ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಯನ್ನು ಶ್ರೀ ರಾಜಭೋಜರು ಮಹಾತ್ಮಾಜಿಯವರಿಗೆ ನಿವೇದಿಸಿದರು. ರಾಜಭೋಜರ ಈ ಉಚ್ಚಧ್ಯೇಯಕ್ಕಾಗಿ ಮಹಾತ್ಮಾಜಿಯವರು ಅವರನ್ನು ಅಭಿನಂದಿಸಿ ಕನಿಷ್ಟ ಪಕ್ಷಕ್ಕೆ ೩-೪ ತಿಂಗಳಾದರೂ ಸಾಬರಮತಿಯ ಆಶ್ರಮದಲ್ಲಿ ನೀವು ಇರಬೇಕೆಂದು ಹೇಳಲು ರಾಜಭೋಜರು ೩-೪ ದಿವಸಗಳಲ್ಲಿಯೇ ಹೊರಡುವದನ್ನು ಗೊತ್ತುಮಾಡಿಕೊಂಡಿರುವೆನೆಂದು ತಿಳಿಸಿದರು.

ವೀರಶೈವ ಜಾತಿವಾದ ವಿಮರ್ಶೆ ಸಭೆ.

ತಾ. ೧೦ನೆಯ ಕರ್ನಾಟಕ ಟಾಯಿಮ್ಸ ಪತ್ರಿಕೆಯಲ್ಲಿ ಯಾದಗಿರಿಯವರು ತಮ್ಮ ಹೆಸರನ್ನು ಮಾತ್ರ ತಿಳಿಸದೆ ನನ್ನಿಂದಲೇ ಸಭೆಯ ಕಾರ್ಯಕ್ಕೆ ನಿಧಾನವೆಂದು ಸುಳ್ಳುಬರೆದಿದ್ದಾರೆ. ಅದಕ್ಕಾಗಿ ನಾನು ಈ ಕೆಳಗಿನ ಸಂಗತಿಗಳನ್ನು ತಿಳಿಸಬೇಕಾಯಿತು.

ಶ್ರೀ. ಚಂದ್ರಶೇಖರ ಶಾಸ್ತ್ರಿಗಳಿಗೆ ತಾ. ೪-೧-೩೩ನೇ ಮತ್ತು ತಾ. ೧೫-೧-೩೩ನೆಯ ದಿವಸ ಅಧ್ಯಕ್ಷರಿಂದ ಸ್ಥಳಕಾಲಗಳನ್ನು ಪ್ರಸಿದ್ಧಗೊಳಿಸಿರೆಂದು ಬರೆದುದಕ್ಕೆ ಉತ್ತರವೇ ಇಲ್ಲದಿದ್ದುದರಿಂದ ತಾ. ೨-೩-೩೩ನೆಯ ದಿನ ರಜಿಸ್ಟರ್ ಮೂಲಕ ತಿಳಿಸಿದೆ.

ಹೀಗಿರುವಾಗ ಯಾದಗಿರಿಯವರು ತಿಳಿದೂತಿಳಿದು ನನ್ನಿಂದ ನಿಧಾನವೆಂದು ಸುಳ್ಳುಹೇಳಿ ತತ್ವಪ್ರಚಾರಕ ಸಂಘಕ್ಕೆ ರಾಯಚೂರ ಕರಾರನ್ನು ತಗಲು ಹಾಕಲಿಕ್ಕೆ ಹೋಗಿ ತಪ್ಪಿಸಿಕೊಂಡು ಹೋಗುವ ಪ್ರಯತ್ನವನ್ನೇಕೆ ಮಾಡಿದ್ದಾರೆಂಬುದನ್ನು ಮುಂದಣ ಸಂಚಿಕೆಯಲ್ಲಿ ವಿವರಿಸುವೆನು. **ಹರ್ಡೇಕರ್ ಮಂಜಪ್ಪ.**

ಅಖಿಲ ವೀರಶೈವರಿಗೆ ಜಗದ್ಗುರು ಯಾರು?

ಸೊಲ್ಲಾಪುರದ ವೀರಶೈವರಿರಾ,

ನಾವು ಈಗ ನಿಮಗೆ ಒಂದು ಜಾಹೀರ ಪ್ರಶ್ನೆಯನ್ನು ಕೇಳು ತ್ತಿದ್ದೇವೆ. ಸದ್ಯಕ್ಕೆ ನಮ್ಮ ಸಮಾಜದಲ್ಲಿ ಜಗದ್ಗುರುಗಳ ಸಮೂಹವೇ ಹೊರಟಂತೆ ಕಾಣುತ್ತದೆ. ಬಹಳ ಉತ್ಪನ್ನವಿರುವ ಮಠದ ಯಾವ ಸ್ವಾಮಿಯು ಬಂದರೂ ಅವರು ತಾವು ಜಗದ್ಗುರುವೆಂದು ಹೇಳಿಸಿಕೊಳ್ಳುತ್ತಾರೆ ಹಿಂದಕ್ಕೆ ಚಿತ್ರಕಲ್ಲದುರ್ಗದ ಸ್ವಾಮಿಗಳು ಬಂದಿದ್ದರು. ಅವರು ಶೂನ್ಯ ಸಿಂಹಾಸನಾಧೀಶ ಜಗದ್ಗುರುಗಳು ಅವರ ನಂತರ ಅನೇಕ ಜನ ಸ್ವಾಮಿಗಳು ಜಗದ್ಗುರುಗಳೆಂದೆನಿಸಿಕೊಳ್ಳುತ್ತಿದ್ದಾರೆ. ಮತ್ತು ಈಗ ಸೊಲ್ಲಾಪುರಕ್ಕೆ ಬರಬೇಕೆಂದಿಚ್ಛಿಸುವ ಉಜ್ಜನಿಯ ಆಚಾರ್ಯರೂ ತಾವು ಜಗದ್ಗುರುಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಅದೇ ಪ್ರಕಾರ ಉಳಿದ ನಾಲ್ವರು. ಚೌಡದಾನಪುರದ ಸ್ವಾಮಿ ವಿರೂಪಾಕ್ಷ ಒಡೆಯರಾದರೋ ತಾವು ಜಗದ್ಗುರು ಜಗದಾಚಾರ್ಯರೆಂದು ಹೇಳಿಕೊಳ್ಳುತ್ತಿದ್ದಾರೆ. ಆದುದರಿಂದ ಅಖಿಲ ವೀರಶೈವ ಸಮಾಜಕ್ಕೆ ನಿಜವಾದ ಜಗದ್ಗುರುಗಳಾರೆಂಬುದೇ ನಮಗೊಂದು ಗೂಢ ಪ್ರಶ್ನೆಯಾಗಿದೆ.

ವೀರಶೈವ ಸಮಾಜ ವ್ಯವಸ್ಥೆಗಾಗಿ ಮುಖ್ಯವಾಗಿ ಪಂಚ ಪೀಠಗಳಿಗೆ ಪಂಚ ಆಚಾರ್ಯರಿರುತ್ತಾರೆ. ಅವರು ಪಂಚಾಚಾರ್ಯರೆಂಬ ಹೆಸರಿನಿಂದ ಪ್ರಸಿದ್ಧವಿರುತ್ತಾರೆ. ಅವರೊಳಗೆ ಉಜ್ಜನೀ ಪೀಠದ ಆಚಾರ್ಯರು ಸದ್ಯಕ್ಕೆ ಬಾರ್ಸಿ ಮುಕ್ಕಾಮಿನಲ್ಲಿದ್ದು ಅವರು ಸೊಲ್ಲಾಪುರಕ್ಕೆ ಬರಬೇಕೆಂದು ಇಚ್ಛಿಸುತ್ತಿದ್ದಾರೆ. ಈ ಆಚಾರ್ಯರು ತಮಗೆ ಜಗದ್ಗುರುಗಳೆಂದು ಹೇಳಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಜಗದ್ಗುರುವೆಂಬ ಸಂಜ್ಞೆಯು, ಜಗದ್ಗುರುವೆಂಬ ಹೆಸರು ಇವರಿಗೆ ಇಟ್ಟುಕೊಳ್ಳಲಿಕ್ಕೆ ಬರುತ್ತದೆಯೋ ಹೇಗೆಂದು ವಿಚಾರಮಾಡೋಣ.

ಜಗದ್ಗುರು ಈ ಶಬ್ದದ ಶಬ್ದಶಃ ಅರ್ಥವು ಸರ್ವಜಗತ್ತಿನ ಗುರುವೆಂದು ಆಗುತ್ತದೆ, ಈ ಪ್ರಸಂಗದಲ್ಲಿ ಅಖಿಲ ಜಗವೆಂದರೆ ವೀರಶೈವ ಜಗತ್ತು ಅಥವಾ ಅಖಿಲ ವೀರಶೈವ ಸಮಾಜವೆಂದು ತಿಳಿಯೋಣ. ಅಂದಮೇಲೆ ಅಖಿಲ ವೀರಶೈವ ಜಗದ್ಗುರುಗಳು ಈ ಸ್ವಾಮಿಗಳಾಗಬಲ್ಲರೇನು?

ಅಖಿಲ ವೀರಶೈವ ಸಮಾಜದಲ್ಲಿ ಐದು ಭಾಗಗಳಿದ್ದು ಅವುಗಳಿಗೆ ಮುಖ್ಯರಾದಂಥ ಐದು ಜನ ಆಚಾರ್ಯರಿರುವರೆಂದು ಮೇಲೆ ಹೇಳಿದೆ. ವೀರಶೈವ ಗೋತ್ರಗಳು ಐದು ಇದ್ದು ಮಹಾ ಸೂತ್ರಗಳೂ ಐದು ಇರುತ್ತವೆ. ಪ್ರತಿಯೊಬ್ಬ ಆಚಾರ್ಯರು ತಮ್ಮತಮ್ಮ ಗೋತ್ರಗಳುಳ್ಳಂಥ ಜನರಿಗೇನೇ ಗುರುಗಳಾಗುತ್ತಾರೆ. ಉದಾಹರಣಾರ್ಥವಾಗಿ ಬಾಳೇಹಳ್ಳಿಯ ರೇವಣಾರಾಧ್ಯರು ವೀರಗೋತ್ರದ ಮತ್ತು ಪಡ್ವಿಡಿ ಸೂತ್ರದ ಮುಖ್ಯರಾಗಿದ್ದು ಆದೇ ಗೋತ್ರಸೂತ್ರಗಳುಳ್ಳವರಿಗೇನೇ ಅವರು ಗುರುಗಳು. ಉಜ್ಜನಿ ಆಚಾರ್ಯರು ನಂದಿಗೋತ್ರದವರಿದ್ದು ಅವರದು ವೃಷ್ಟಿಸೂತ್ರ ಮಳಿಬಗಿಯಾಗಿದೆ. ಆದೇ ಗೋತ್ರಸೂತ್ರಗಳುಳ್ಳವರಿಗೇನೇ ಅವರ ಗುರುತ್ವವು ಮತ್ತು ಗುರುತ್ವದ ಅಧಿಕಾರವು. ಈ ಪ್ರಕಾರ ಈ ಪಂಚ ಆಚಾರ್ಯರು ಐದು ಭಿನ್ನ ಭಿನ್ನ ಶಾಖೆಗಳಿಗೆ ಮುಖ್ಯರಾಗಿದ್ದಾರೆ. ಒಂದು ಶಾಖೆಯ ಗುರುವು ಪಂಚಗೋತ್ರಸೂತ್ರಗಳ ಜನರ ಮೇಲೆಯೂ ಗುರುವಾಗಲು ಬರುವುದಿಲ್ಲ. ಮತ್ತು ಅವರ ಅಧಿಕಾರವೂ ಐದು ಶಾಖೆಗಳ ಮೇಲೆ ನಡೆಯಲಾರದು. ಆದುದರಿಂದಲೇ ಒಂದು ಪೀಠದ ಆಚಾರ್ಯರಿಗೆ ಅಖಿಲ ವೀರಶೈವ ಸಮಾಜದ ಗುರು ಅಥವಾ ಜಗದ್ಗುರುವೆಂದು ಅನ್ನಿಸಿಕೊಳ್ಳಲು ಬಾರದೆಂದೇ ಸಿದ್ಧವಾಗುತ್ತಿದೆ. ಆದೇ ಪ್ರಕಾರ ಒಂದು ಶಾಖೆಯ ಶಿಷ್ಯನು ಎರಡನೇ ಶಾಖೆಯ ಗುರುವಿಗೆ ತನ್ನ ಗುರುವೆಂದು ಅನ್ನಲಿಕ್ಕೆ ಬರುವದಿಲ್ಲ ಒಬ್ಬ ಸ್ತ್ರೀಯಳಿಗೆ ಒಬ್ಬನೇ ಪತಿಯು ಇರುತ್ತಿರಲು ಆ ಸ್ತ್ರೀಯಳು ಎರಡನೇಯವರು ತನ್ನ ಪತಿಯೆಂದು ತಿಳಿದುಕೊಳ್ಳೋಣವು ಯಾವ ಪ್ರಕಾರ ನಿಷಿದ್ಧವೋ ಆದೇ ಪ್ರಕಾರ ಒಂದು ಶಾಖೆಯ ಶಿಷ್ಯನು ಎರಡನೇ ಶಾಖೆಯ ಗುರುವನ್ನು ತನ್ನ ಗುರುವೆಂದು ತಿಳಿದುಕೊಂಡರೆ ಹಾಗೆಯೇ ಆಗಲಿಕ್ಕಿಲ್ಲವೇ? ಆವಾಗ್ಗೆ ಅವನು ತನ್ನ ಗುರುವಿನ ಹೊರ್ತಾಗಿ ಎರಡನೇ ಶಾಖೆಯ ಆಚಾರ್ಯರಿಗೆ ಗುರುವೆಂದು ತಿಳಿಯುವುದು ತಪ್ಪಾಗುವುದು. ಈ ಎಲ್ಲ ಸಂಗತಿಗಳ ವಿಚಾರವನ್ನು ಇಲ್ಲಿಯ ಸೂಜ್ಞ ವೀರಶೈವರು ಅವಶ್ಯವಾಗಿ ಮಾಡತಕ್ಕದ್ದು. ಮತ್ತು ಈಗ ಬರಬೇಕೆಂದಿರುವ ಆಚಾರ್ಯರಿಗೆ ಜಗದ್ಗುರುವೆಂದು ಎಷ್ಟುಮಟ್ಟಿಗೆ ಅನ್ನಲಿಕ್ಕೆ ಬಂದೀತು ಎಂಬುದನ್ನು ನಿರ್ಣಯಿಸಬೇಕು.

ಇದಲ್ಲದೆ ಈ ಯಾವ ಐದು ಪೀಠಗಳಿರುವವೋ ಮತ್ತು ಆ ಪಂಚ ಪೀಠಗಳಿಗೆ ಯಾವ ಪಂಚ ಆಚಾರ್ಯರಿರುವರೋ ಅವರು ಪೀಠಾಧಿಕಾರಿಗಳಾಗಿದ್ದು ಆ ಪೀಠಗಳಲ್ಲಿ ಪುನಃ ಪಟ್ಟ ಮತ್ತು ಚರ ಅರ್ಥಾತ್ ಪಟ್ಟಾಧಿಕಾರಿ ಮತ್ತು ಚರಮೂರ್ತಿಯೆಂಬ ಭೇದಗಳಿರುತ್ತವೆ ಅವರಲ್ಲ ಪಟ್ಟಾಧಿಕಾರಿ ಅಥವಾ ಈ ಪಂಚಾಚಾರ್ಯರು ಸ್ಥಿರವಾಗಿದ್ದು ಆ ಪೀಠದ ಚರಂತಿ ಅಂದರೆ ಸಂಚಾರಮಾಡುವ ಸ್ವಾಮಿಗಳೇ ಸಂಚಾರ ಮಾಡಬೇಕಾಗುತ್ತದೆ. ಆದರೆ ಜಗದ್ಗುರುವಿನ ಹವ್ಯಾಸಕ್ಕಾಗಿ ಆ ಚರಂತಿ ಸ್ವಾಮಿಗಳನ್ನು ಬದಿಗಿರಿಸಿ ಈ ಪೀಠಾಧಿಕಾರಿಗಳು ಸ್ವತಃ ಸಂಚಾರಮಾಡುತ್ತಿದ್ದು ಜಗದ್ಗುರುವೆಂದು ಮೆರೆಯಿಸಿಕೊಳ್ಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಯೋಗ್ಯವಾಗಿದೆಯೆಂಬ ವಿಚಾರವನ್ನಾದರೂ ಸೂಜ್ಞ ವೀರಶೈವರು ಅವಶ್ಯವಾಗಿ ಮಾಡಬೇಕು.

ಇತ್ತಿತ್ತಲಾಗಿ ಈ ಪಂಚಾಚಾರ್ಯರೂ ಮತ್ತು ಅವರ ಅನುಯಾಯಿಗಳೂ ಬಸವಾದಿ ಪ್ರಮಥರ ವಿಷಯವಾಗಿಯೂ ಅತಿಶಯವಾದ ನಿಂದಾಯುಕ್ತ ಮತ್ತು ಹೇಯವನ್ನು ಹುಟ್ಟಿಸುವ ವಿಧಾನಗಳನ್ನು ಪ್ರಸಿದ್ಧ ಮಾಡಿದ್ದಾರೆ. ಇಂಥ ನಿಂದೆಯು ಪಂಚಾಚಾರ್ಯರ ಕಡೆಯಿಂದಲೂ ಮತ್ತು ಅವರ ಅನುಯಾಯಿಗಳ ಕಡೆಯಿಂದಲೂ ಆಗುವುದೇನೂ ಹೊಸದಲ್ಲ. ಇಷ್ಟೇ ಅಲ್ಲದೆ ಈ ನಿಂದೆಯನ್ನು ಅವರು ಬುದ್ಧಿಪುರಸ್ಸರವಾಗಿಯೇ ನಡೆಸಿರಬೇಕೆಂಬುದಕ್ಕೆ ಪ್ರಬಲ ಕಾರಣಗಳಿರುತ್ತವೆ. ಯಾಕಂದರೆ ಇತ್ತೀಚೆಗೆ ಜಗದ್ಗುರು ಜಗದ್ಗುರುಯೆಂದು ಪಲ್ಲಕ್ಕಿ ಮೆರೆಯಿಸುವ ಈ ಪಂಚಾಚಾರ್ಯರು ಬಸವಕಾಲದಲ್ಲಿಯೂ ತದನಂತರ ಎಷ್ಟೋ ಕಾಲಪರ್ಯಂತವೂ ಲುಪ್ತವಾಗಿದ್ದರು. ಅಂದರೆ ನಿದ್ರಾವಸ್ಥೆಯಲ್ಲಿದ್ದರು. ಯಾಕಂದರೆ ಆ ಕಾಲಕ್ಕೆ ಅವರ ಅಸ್ತಿತ್ವವೇ ಇದ್ದಿತೋ ಇಲ್ಲವೋ ಇದು ತಿಳಿಯುವದಿಲ್ಲ. ಕಾರಣವೇನೆಂದರೆ ನಮ್ಮ ೮೩ ಪುರಾತನರ ಚರಿತ್ರೆಯ ಮೇಲಿಂದ ಬಸವ, ಚೆನ್ನಬಸವ, ಶ್ರೀ ಅಲ್ಲಮಪ್ರಭು ಶ್ರೀ ಸಿದ್ಧರಾಮೇಶ್ವರಾದಿ ಶಿವಶರಣರ ಮತ್ತು ಪ್ರಮಥ ಗಣಗಳ ನೂರಾರು ವಚನಗಳಲ್ಲಿ ಅಥವಾ ಅವರ ಪುರಾಣಗಳಲ್ಲಿ ಆ ಕಾಲದಲ್ಲಾಗಿ ಹೋದ ಅನೇಕ ಮಹಾಕವಿಗಳ ಕಾವ್ಯಗಳಲ್ಲಿಯೂ ಈ ಪಂಚಾಚಾರ್ಯರ ಜಗದ್ಗುರುತ್ವದ ವಿಷಯದಲ್ಲಿ ವಿಶೇಷ ಉಲ್ಲೇಖಗಳು ಕಾಣಿಸುವದಿಲ್ಲ. ಆದುದರಿಂದ ತಮ್ಮ ಜಗದ್ಗುರುತ್ವಕ್ಕೆ ಈ ಪೂರ್ವಕಾಲೀನ ಪ್ರಮಥರ ಗ್ರಂಥಗಳೂ ಮತ್ತು ವಚನಗಳೂ ಬಾಧೆ ತರುವವೆಂದು ಒಳ್ಳೇ ಧೂರ್ತತೆಯಿಂದ ಇವರು ಆ ಶಿವಶರಣರ ನಿಂದೆಯನ್ನು ಮೊದಲಿನಿಂದಲೂ ಮಾಡಿ ಅವರಿಗೆ ದೂಷಣೆಯನ್ನು ಕೊಟ್ಟು ಅವರ ಮಹತ್ಕಾರ್ಯಗಳ ಕುಚೇಷ್ಟೆ ಮಾಡಿದರೆ ತಪ್ಪ

ಕಾರ್ಯಭಾಗವು ಸಾಧಿಸಬಹುದೆಂದು ತಿಳಿದು ಹಾಗೆ ಕಾರ್ಯಕ್ರಮವನ್ನು ಇವರು ಆರಂಭಿಸಿದ್ದಾರೆ ಆದರೆ ಮುದುಕಿಯು ಕೋಳೀ ಬಚ್ಚಿಟ್ಟಳೆಂದು ಅರುಣೋದಯವಾಗುವದೇನು ನಿಲ್ಲಬಹುದೇ? ಸಾರಾಂಶ ತಮ್ಮ ಜಗದ್ಗುರುತ್ವದ ಉಲ್ಲೇಖವು ಶಿವಶರಣರ ವಚನಗಳಲ್ಲಿಯೂ, ಕಾವ್ಯಗಳಲ್ಲಿಯೂ ಪುರಾಣಗಳಲ್ಲಿಯೂ, ಗ್ರಂಥಗಳಲ್ಲಿಯೂ ಇಲ್ಲದಿರುವುದರಿಂದ ಅವರ ದೂಷಣೆಯು ಪಂಚಾಚಾರ್ಯರಿಂದಲೂ ಮತ್ತು ಅವರ ಅನುಯಾಯಿಗಳಿಂದಲೂ ಪ್ರತಿದಿನವೂ ಸಂಭವಿಸುತ್ತಿದ್ದರೆ ಆಶ್ಚರ್ಯವೇನು?

ಇತ್ತೀಚೆಗೆ ಶಿವಶರಣರ ನಿಂದೆಯನ್ನು ನಾವು ಎಲ್ಲಿ ಮಾಡಿದ್ದೇವೆ ? ಮತ್ತು ಅವರ ನಿಂದೆಮಾಡುವುದರಿಂದ ನಮಗೇನು ಪ್ರಯೋಜನ? ಹೀಗೆ ಒಳ್ಳೇ ಸಂಭಾವಿತ ಮುದ್ರೆಯನ್ನು ಪಂಚಾಚಾರ್ಯರು ತರುತ್ತಿದ್ದಾರೆ. ಆದರೆ ಶಿವಶರಣರ ದೂಷಣೆಯನ್ನು ಮಾಡುವ ಚಿಕ್ಕಚಿಕ್ಕ ಪುಸ್ತಕಗಳು, ಜಾಹೀರಾತುಗಳು, ವೃತ್ತಪತ್ರಗಳು ಇನ್ನು ಹೊರಡಿಸಲ್ಪಟ್ಟಿರುತ್ತವಲ್ಲಾ ಎಷ್ಟೆಂದರೆ ನಿಂದಾ ಮಾಡುವವರ ಭಾರದಷ್ಟೇ ಅವುಗಳ ಭಾರವಾಗಬಹುದು. ಈ ಸೇಚಾಟಕ್ಕೆ ಉತ್ತರವೆಂದು ಅವರು ಹೇಳುತ್ತಿದ್ದಾರೆ, ನಿಂದೆಯನ್ನು ಕಾಶೀನಾಥ ಶಾಸ್ತ್ರಿ ಮಾಡುತ್ತಾನೆ. ಅವನನ್ನು ಕೇಳಿರಿ. ಅವನಲ್ಲಿ ನಮ್ಮದೇನು ಸಂಬಂಧ? ವಾಹವಾ! ಏನು ಯುಕ್ತಿವಾದವು! ಇಂತಹ ಕಣ್ಣುಕಟ್ಟಿನ ಯುಕ್ತಿಯಿಂದ ಬಾಸಿಯಂತಹ ಕನ್ನಡ. ಭಾಷೆಯ ಪೂರ್ಣಜ್ಞಾನವಿಲ್ಲದ ವೀರಶೈವರಿಗೆ ಮಂಕು ಬಿದ್ದೀತು. ಹಳ್ಳಿಪಳ್ಳಿಯೊಳಗಿನ ಅಜ್ಞ ಜನರು ಮೋಸಹೋದಾರು. ಆದರೆ ಈ ಸೊಲ್ಲಾಪುರದ ಶಹರದ ಜನರಿಗೆ ಸ್ವಲ್ಪವಾದರೂ ಧರ್ಮಜ್ಞಾನವಿದೆ. ಅವರಿಗೆ ಶಿವಶರಣರ ಮಹತ್ಕಾರ್ಯಗಳ ವಿಷಯವು ಚೆನ್ನಾಗಿ ಗೊತ್ತಿದೆ. ಮತ್ತು ಅವರು ಇದೇ ಪಂಚಾಚಾರ್ಯರ ದುಷ್ಕೃತ್ಯದ ವಿಷಯವಾಗಿ ೩-೪ ವರ್ಷಗಳ ಪೂರ್ವದಲ್ಲಿ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಜಾಹೀರ ಸಭೆ ಕೂಡಿಸಿ ಮನಃಪೂರ್ವಕ ನಿಷೇಧವನ್ನು ವ್ಯಕ್ತಪಡಿಸಿದ್ದಾರೆ. ಇಂಥ ಜನರು ಮೋಸ ಹೋದಾರೆಂಬುದು ಅಶಕ್ಯ ಕಾಣುತ್ತದೆ. ಇರಲಿ.

ಪಂಚಾಚಾರ್ಯರು ಅನ್ನುತ್ತಾರೆ—'ನಾವು ನಿಂದಾ ಮಾಡಿಲ್ಲ. ಕಾಶೀನಾಥನು ಮಾಡುತ್ತಾನೆ.' ಆದರೆ ಕಾಶೀನಾಥನು ಯಾವ ಪತ್ರದಲ್ಲಿ ನಿಂದೆಮಾಡುತ್ತಿರುವನೋ ಆ ಪತ್ರವು ಯಾವುದು? ಆ ಪತ್ರವೆಂದರೆ "ಪಂಚಾಚಾರ್ಯ ಪ್ರಭಾ? ಇದೇ ಅಲ್ಲವೇ? ಅಂದಮೇಲೆ ಯಾವ ಪತ್ರದಲ್ಲಿ ಸರ್ವ ಶಿವಶರಣರ ನಿಂದಾ ಮಾಡುತ್ತದೋ ಅಂಥ ಪತ್ರಕ್ಕೆ ಈ ಪಂಚಾಚಾರ್ಯರು ತಮ್ಮ ಹೆಸರನ್ನೇಕೆ ಕೊಡಬೇಕು? ಹಾಗೆಯೇ ಈ ಪತ್ರಕ್ಕೆ ಅವರು ಕೇವಲ ತಮ್ಮ ಹೆಸರನ್ನಷ್ಟೇ ಕೊಟ್ಟಿಲ್ಲ. ಆದರೆ ಅದಕ್ಕೆ ಸಾವಿರಾರು ರೂಪಾಯಿಗಳ ಸಹಾಯವನ್ನಾದರೂ ಮಾಡಿದ್ದಾರೆ. ಅವರಲ್ಲಿ ಹೆಚ್ಚಿಗೆ ಹಣ ಕೊಟ್ಟವರೆಂದರೆ ಉಜ್ಜನೀ ಸ್ವಾಮಿಗಳೇ. ಅಂದಮೇಲೆ ಈ ರೀತಿಯಿಂದ ಶರಣನಿಂದೆಗೆ ಪಂಚಾಚಾರ್ಯರ ಸಕ್ರಿಯ ಸಹಾನುಭೂತಿಯೂ, ಸಹಾಯವೂ ಮತ್ತು ಉತ್ತೇಜನವೂ ಇರುವದೆಂಬುದು ನಿಚ್ಚಳವಾಗಿದೆ. ಇದಲ್ಲದೆ ಯಾವ ಕಾಶೀನಾಥನು ಶರಣನಿಂದೆಯನ್ನು ಮಾಡುತ್ತಿರುವನೋ ಅವನು ಪಂಚಾಚಾರ್ಯರ ಕಟ್ಟಾ ಅನುಯಾಯಿಯು. ಇಷ್ಟೇ ಅಲ್ಲ. ಆದರೆ ಎಲ್ಲಿಎಲ್ಲಿ ಈ ಸ್ವಾಮಿಗಳು ಹೋಗುತ್ತಾರೆಯೋ ಅಲ್ಲಿಅಲ್ಲಿ ಅವನೂ ಹೋಗುತ್ತಾನೆ. ಮತ್ತು ವ್ಯಾಖ್ಯಾನ ಮೊದಲಾದ ರೂಪದಿಂದ ಪಂಚಾಚಾರ್ಯರ ಸ್ತುತಿ ಮಾಡಿ ನಿರಂಜನ ಮೂರ್ತಿಗಳ ನಿಂದೆಯನ್ನು ಮಾಡುತ್ತಾನೆ. ಅವನ ಕೃತ್ಯವು ಒಂದು ವೇಳೆ ಈ ಪಂಚಾಚಾರ್ಯರಿಗೆ ಸಮ್ಮತವಿಲ್ಲದಿದ್ದರೆ ಇವರು ಆ ಕಾಶೀನಾಥನನ್ನು ಹತ್ತಿರ ಏಕೆ ಇಟ್ಟುಕೊಳ್ಳುತ್ತಾರೆ? ಪ್ರತ್ಯಕ್ಷ ತಮ್ಮ ಮುಂದೆಯೇ ಅವನ ಬಾಯಿಯಿಂದಾಗುವ ಶರಣರ ಮತ್ತು ವಿರಕ್ತರ ನಿಂದೆಯನ್ನು ಯಾಕೆ ನಿಲ್ಲಿಸುವದಿಲ್ಲ? ಇಂಥ ಪ್ರಕಾರ ದೋಷಮುಖ ವರ್ತನವು ಜಗದ್ಗುರುವೆಂದೆನಿಸಿಕೊಳ್ಳುವವರಿಗೆ ಯೋಗ್ಯವೋ?

ಒಂದುವೇಳೆ ಈ ಶಿವಶರಣರ ನಿಂದೆಯು ಪಂಚಾಚಾರ್ಯರ ಸ್ವಲ್ಪವೂ ಸಂಬಂಧವಿಲ್ಲವೆಂದೂ, ಶರಣನಿಂದೆಯು ಆಗಬಾರದೆಂದು ಒಂದು ವೇಳೆ ಈ ಪಂಚಾಚಾರ್ಯರಿಗೆ ಮನಃಪೂರ್ವಕವಾಗಿ ಅನ್ನಿಸುತ್ತಿದ್ದರೆ ನಾವು ಶರಣರ ಮತ್ತು ವಿರಕ್ತರ ನಿಂದೆಯನ್ನು ಮಾಡುತ್ತಿರುವುದಿಲ್ಲ; ಮುಂದಾದರೂ ಮಾಡುವದಿಲ್ಲ ಯಾರು ನಿಂದಾ ಮಾಡುವರೋ ಅವರು ನಿಂದ್ಯರು, ಬಹಿಷ್ಕಾರಕ್ಕೆ ಪಾತ್ರರೆಂಬರ್ಥದ ಆಜ್ಞಾ ಪತ್ರವನ್ನೂ ಈ ಉಜ್ಜನೀ ಆಚಾರ್ಯರು ಪಂಚಾಚಾರ್ಯ ಪ್ರಭೆಯಲ್ಲಿಯೂ ಮತ್ತು ಬೇರೆ ಜಾಹೀರ ಕನ್ನಡ ಮರಾಠಿ ವೃತ್ತಪತ್ರಿಕೆಗಳಲ್ಲಿಯೂ ಪ್ರಸಿದ್ಧಪಡಿಸಬೇಕೆಂದು ನಾವು ಬೇರೆ ಸದ್ಗೃಹಸ್ಥರೂ ಪಂಚಾಚಾರ್ಯರಿಗೆ ಅನೇಕ ಸಾರಿ ಎಷ್ಟೋ ಸ್ಥಾನಗಳಲ್ಲಿ ಜಾಹೀರ ಆಹ್ವಾನ ಮಾಡಿದ್ದೇವೆ. ಆ ಆಹ್ವಾನ ಎಲ್ಲಿಯವರೆಗೆ ಮೇಲೆ ಬರೆದ ಪ್ರಕಾರ ಜಾಹೀರ ಉತ್ತರವು ಸ್ವಾಮಿಗಳ ಕಡೆಯಿಂದ ದೊರೆಯುವದಿಲ್ಲವೋ ಅಲ್ಲಿಯವರೆಗೆ ಅವರು ಶರಣ ನಿಂದಾ ಮಾಡುತ್ತಾರೆಂಬುದೂ ಮತ್ತು ಶರಣ ನಿಂದೆಗೆ ಇವರ ಸಕ್ರಿಯ ಸಹಾನುಭೂತಿಯಿರುವದೆಂದೂ ಆಗುವದಿಲ್ಲವೇ?

ಮೇಲಿನ ಎಲ್ಲ ವಿವೇಚನೆಗಳಿಂದ ಈ ಆಚಾರ್ಯರು ಜಗದ್ಗುರುಗಳಾಗಬಲ್ಲರೋ? ಸರ್ವ ವೀರಶೈವರಿಗೆ ಯಾರು ಗುರುಗಳಾಗಲು ಶಕ್ಯವಿಲ್ಲವೋ ಮತ್ತು ವೀರಶೈವರ ಒಂದು ಭಾಗದ ಮೇಲೆಯೆ ಯಾರ ಗುರುತ್ವವು ನಡೆಯುತ್ತದೋ ಅವರು ಜಗದ್ಗುರುಗಳು ಹೇಗೆ? ಅಂದಮೇಲೆ ಈಗ ಜಗದ್ಗುರುವೆಂದು ಯಾರಿಗೆ ಅನ್ನಬೇಕು ಈ ಪ್ರಶ್ನೆಯನ್ನು ಬಿಡಿಸಲು ನಾನು ಸೊಲ್ಲಾಪುರದ ವೀರಶೈವರಿಗೆ ಒಪ್ಪಿಸುತ್ತೇನೆ. ಇಲ್ಲಿ ಎಷ್ಟೋ ಜನ ವಿದ್ವಾಂಸರೂ, ಶಾಸ್ತ್ರಿಗಳೂ ಪಂಡಿತರೂ ಇದ್ದಾರೆ. ಅಂದಮೇಲೆ ಅವರು ಈ ಪ್ರಶ್ನೆಯನ್ನು ಹೇಗೆ ಬಿಡಿಸುತ್ತಾರೋ ನೋಡೋಣ.

ತಮ್ಮ ಒಬ್ಬ
ವೀರಶೈವ ಧರ್ಮಾಭಿಮಾನಿ.

—ಅಸ್ಪೃಶ್ಯಸೇವಕ ಸಮಾಜದ ಪುಣೆ ಶಾಖೆಯ ಕಾರ್ಯಕರ್ತರು 'ಹರಿಜನ' ಪತ್ರಿಕೆಯನ್ನು ಮುಂಬಯಿ ಇಲಾಖೆಯ ರಾಜಕೀಯ ಸೆರೆಯಾಳುಗಳಿಗೆ ಓದಲಿಕ್ಕೆ ಅಪ್ಪಣೆ ಕೊಡಬೇಕೆಂದು ಮುಂಬಯಿ ಸರಕಾರದವರಿಗೆ ವಿಜ್ಞಾಪನೆ ಮಾಡಿಕೊಂಡಿದ್ದರು. ಆದರೆ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯು ವಾದಗ್ರಸ್ತವಿದ್ದುದರಿಂದ ಹಾಗೆ ಅಪ್ಪಣೆ ಕೊಡಲು ಬರುವುದಿಲ್ಲವೆಂದು ಸರಕಾರದವರು ತಿಳಿಸಿದರು.

—ಅಸ್ಪೃಶ್ಯತಾನಿವಾರಣಾ ಕಾರ್ಯಕ್ಕಾಗಿ ಶ್ರೀ ಅಮೃತಲಾಲ ಠಕ್ಕರ ಇವರು ಪಂಜಾಬದಲ್ಲಿ ಪ್ರವಾಸಮಾಡುತ್ತಿದ್ದು ಅಲ್ಲಲ್ಲಿ ಅವರ ಭಾಷಣಗಳಾಗುತ್ತಿರುವವು. ಪಂಜಾಬದ ಅಸ್ಪೃಶ್ಯರಿಗೆ ಅವರ ಸೊತ್ತಿನ ಒಂದು ಇಂಚುಕೂಡಾ ಭೂಮಿಯಿರುವದಿಲ್ಲವೆಂದೂ ಮತ್ತು ಜಮೀನದಾರರೂ ಅವರನ್ನು ವೇತನವಿಲ್ಲದೆ ದುಡಿಸಿಕೊಳ್ಳುತ್ತಿರುವರೆಂದೂ ಅವರಿಗೆ ಕಂಡು ಬಂದಿತು.

—ಪ್ರೊ|| ರಂಗಾ ಇವರು ಒಂದು ಹರಿಜನ ಸೇವಾದಲವನ್ನೇರ್ಪಡಿಸಿ ಆ ಕಾರ್ಯಕರ್ತರೆಲ್ಲ ಗುಂಟೂರು ಜಿಲ್ಲೆಯ ೧೫ ಹಳ್ಳಿಗಳಲ್ಲಿ ಸಂಚಾರ ಮಾಡಿದರು. ಅಲ್ಲಿಯ ಉತ್ಸಾಹಿ ತರುಣರನ್ನು ಕೂಡಿಸಿ ಅವರಿಗೆ ಸ್ವಚ್ಛತೆ ಮತ್ತು ಆರೋಗ್ಯದಿಂದಿರುವಂತೆ ಬೋಧಿಸಿದುದಲ್ಲದೆ ಆ ತರುಣರು ಬೇರೆ ನೆರೆಯಲ್ಲಿಯ ೫ ಹಳ್ಳಿಗಳಿಗೆ ಹೋಗಿ ಸೇವಾ, ಸ್ವಚ್ಛತೆಯ ವಿಷಯದಲ್ಲಿ ಉಪದೇಶ ಮಾಡಿ ಪ್ರೊ. ರಂಗಾ ಇವರ ಕಡೆಗೆ ತಿಳಿಸಬೇ[illegible]

(೧೨ನೆಯ ಪುಟದ ಮುಂದಿನ ಸಂಗತಿ.)

ಕ್ಕಾಗಿಯೇ ಉದ್ಯೋಗ ಪ್ರಾರಂಭಿಸುವ ವಿಚಾರವು ಸಾವಕಾರರಲ್ಲಿದ್ದರೆ ಅಕಸ್ಮಾತ್ ಹಾನಿಯಾದರೆ, ಆ ಹಾನಿಯನ್ನೆಲ್ಲ ತಾವೇ ಸೋಸಲಿಕ್ಕೆ ಗಟ್ಟಿಯಾಗಬೇಕು. ಇದೇ ಬಡವರ ಕಲ್ಯಾಣದ ಧ್ಯೇಯವು! ಇಂಥ ಸಾವಕಾರರ ಬೆನ್ನುಬಿದ್ದ ಬಡವನೇ ಧನ್ಯನು!! ಇಂಥ ಸಾವಕಾರನೇ ಪುಣ್ಯಾತ್ಮನು!!!

ನಮ್ಮ ದೇಶದಲ್ಲಿ ವ್ಯಾಪಾರ ಉದ್ಯೋಗಗಳನ್ನು ಮಾಡಲಿಕ್ಕೂ ಹೊಸಹೊಸ ಕೈಗಾರಿಕೆಗಳನ್ನು ಕೈಕೊಳ್ಳಲಿಕ್ಕೂ ಸಮರ್ಥರಾದವರು ಎಷ್ಟೋ ಜನರು ಇರುವರು. ಆದರೆ ಅವರಿಗೆ ಹಣದ ಸಹಾಯ ಮಾಡುವಂಥ ಸಾವಕಾರರು ಸಿಗುವದಿಲ್ಲ. ಆದ್ದರಿಂದಲೇ ನಮ್ಮಲ್ಲಿ ಯಾವ ಉದ್ಯೋಗಗಳೂ ಊರ್ಜಿತಾವಸ್ಥೆಯನ್ನು ಹೊಂದುವದಿಲ್ಲ. ಒಂದು ವೇಳೆ ಹಣಕೊಟ್ಟರೆ ನೂರಕ್ಕೆ ವರುಷಕ್ಕೆ ೧೨ ರಂತೆ ಹೊಲೆಬಡ್ಡಿಯನ್ನು ಹೆಚ್ಚಾದ ಬಾಡಿಗೆಯನ್ನು ಹಾಕುವರು, ಇದರ ಮೇಲೆ ಲಾಭದಲ್ಲಿ ತಮ್ಮ ಅರ್ಧ ಪಾಲು ಇಡುವರು. ಈಗಿನ ಆರ್ಥಿಕ ಅವನತಾವಸ್ಥೆಯಲ್ಲಿ ಈ ಪ್ರಕಾರ ಬಡ್ಡಿ ಬಾಡಿಗೆಗಳನ್ನು ಕೊಟ್ಟರೆ ಎಂಥ ಉದ್ಯೋಗಗಳಲ್ಲಿ ಲಾಭಪಡೆಯಬಹುದು? ಅಕಸ್ಮಾತ್ ಒಂದು ವರುಷ ಲಾಭವಾದರೂ ಹಾನಿಯಾಗುವ ಸಂಭವವೇ ಬಹಳ ಇರುತ್ತದೆ. ಹಾನಿಯಾದ ವರ್ಷವಾದರೂ ಸಾವಕಾರರು ಬಡ್ಡಿಯನ್ನು ಸೂಟುಬಿಡುವದಿಲ್ಲ. ಹಾನಿಯಾದ ರಕಮಿಗೆ ಸಹ ಬಡ್ಡಿಯನ್ನು ಹಾಕುತ್ತಾರೆ. ಇದು ಯಾವ ನ್ಯಾಯ ನೀವೇ ವಿಚಾರಮಾಡಿರಿ. ಈ ಪ್ರಕಾರ ವರ್ಷವರ್ಷ ಚಕ್ರ ಬಡ್ಡಿಯನ್ನು ಹಾಕುತ್ತಾ ಹೋಗುವರು. ಬಡವನ ಸಾಲ ಮಾತ್ರ ಹನುಮಂತನ ಬಾಲದಂತೆ ಬೆಳೆಯುವದು. ಬಡವನಿಗಾದರೂ ಈ ಪ್ರಕಾರ ಹೆಚ್ಚಾದ ಸಾಲವನ್ನು ಕೊಡಲಿಕ್ಕೆ ಅಸಮರ್ಥವಾಗುವದು ಸ್ವಾಭಾವಿಕವು. ಮುಂದೆ ಸಾವಕಾರರು ದಾವೆ ಮುಂತಾದವುಗಳನ್ನು ಮಾಡಲಿಕ್ಕೆ ಕೋರ್ಟು ಕಚೇರಿಗಳನ್ನು ಹತ್ತಿ ನೂರಾರು ರೂಪಾಯಿಗಳನ್ನು ವ್ಯರ್ಥವಾಗಿ ಹಾಳುಮಾಡಿಕೊಳ್ಳುವರು. ಮತ್ತು ಪರಸ್ಪರರ ಪ್ರೇಮವಿಶ್ವಾಸಗಳು ಹಾರಿಹೋಗುವವು. ಆದುದರಿಂದ ಕೆಳಗೆ ಕೊಟ್ಟ ವಿಷಯಗಳ ಕಡೆಗೆ ಲಕ್ಷಕೊಟ್ಟು ಸಾವಕಾರರೂ ಬಡವರೂ ಪಾಲಿನಿಂದ ವ್ಯವಹಾರ ಮಾಡಿದರೆ ಅಷ್ಟೊಂದು ಹಾನಿಯಾಗಲಿಕ್ಕಿಲ್ಲವೆಂದು ಅನಿಸುತ್ತದೆ.

೧ ಎರಡನೆಯವರ ಕೂಡ ಪಾಲಿನಿಂದ ವ್ಯವಹಾರ ಮಾಡಬೇಕೆನ್ನುವ ಸಾವಕಾರರಿರಬೇಕು. ತಾವು ಹೊಲೆ ಬಡ್ಡಿಯಿಂದ ಸಾಲವನ್ನು ತಂದು ಎರಡನೆಯವರ ಕೈಯಲ್ಲಿ ಹಣಕೊಟ್ಟು ಯಾವದೊಂದು ಉದ್ಯೋಗವನ್ನು ಪಾಲಿನಿಂದ ನಡೆಯಿಸುವದು ಉಚಿತವಲ್ಲ. ಯಾಕಂದರೆ ಈಗಿನ ಕಾಲದಲ್ಲಿ ಕಡಿಮೆ ಬಡ್ಡಿಯ ದರದಷ್ಟು ಸಹ ಲಾಭವಾಗುವದಿಲ್ಲ.

೨ ಉದ್ಯೋಗದಲ್ಲಿಯ ಲಾಭ ಮತ್ತು ಕೊಟ್ಟ ಹಣಕ್ಕೆ ಬಡ್ಡಿ ಎರಡೂ ಸಿಗಬೇಕೆಂಬ ದುರಾಶೆಯನ್ನು ಸಾವಕಾರರು ಬಿಡಬೇಕು. ಎರಡರ ಪೈಕಿ ಒಂದನ್ನು ಮಾತ್ರ ಅವರು ಇಚ್ಛಿಸಬಹುದು. ಸಾವಕಾರರಿಗೆ ಬಡ್ಡಿಯನ್ನು ಕೊಡುವದಾದರೆ ನೂರಕ್ಕೆ ವರ್ಷಕ್ಕೆ ೬ ಮಾತ್ರ ಬಡ್ಡಿಯನ್ನು ಕೊಟ್ಟರೆ ಆ ಉದ್ಯೋಗವು ಊರ್ಜಿತಾವಸ್ಥೆಯನ್ನು ಹೊಂದಬಹುದು.

೩ ಸಾವಕಾರರ ಕೂಡ ಪಾಲಿನಿಂದ ಉದ್ಯೋಗಮಾಡಲಿಕ್ಕೆ ಇಚ್ಛಿಸುವ ಬಡವರು ಮೊದಲು ಕರಾರುಗಳನ್ನು ಸಂಪೂರ್ಣ ಮಾಡಿಕೊಳ್ಳಬೇಕು.

೪ ಸಾವಕಾರರಿಗೆ ಪಾಲು ಮತ್ತು ಬಡ್ಡಿ ಎರಡೂ ಕೊಡಲಿಕ್ಕೆ ಒಪ್ಪಿಕೊಂಡು ವ್ಯಾಪಾರ ಮಾಡಬಾರದು.

೫ ಕೇವಲ ಬಡ್ಡಿಯನ್ನು ಮಾತ್ರ ಸಾವಕಾರರಿಗೆ ಕೊಡುವವರಿದ್ದರೆ ನೂರಕ್ಕೆ ವರ್ಷಕ್ಕೆ ೬ಕ್ಕಿಂತ ಹೆಚ್ಚಿಗೆ ಬಡ್ಡಿಯನ್ನು ಕೊಡುವ ಕರಾರ ಮಾಡಿಕೊಳ್ಳಬಾರದು.

೬ ಇಷ್ಟು ಬಡ್ಡಿಯ ದರದಿಂದ ಉದ್ಯೋಗಕ್ಕೆ ಹಣಸಿಗದಿದ್ದರೆ ಎಲ್ಲಿಯಾದರೂ ನೌಕರಿಮಾಡುವದು ಯೋಗ್ಯವು.

೭ ಎಷ್ಟೇ ಸ್ವಲ್ಪ ಸ್ವಂತ ಹಣವಿದ್ದರೂ ಸಣ್ಣ ಉದ್ಯೋಗವನ್ನು ಸ್ವತಃ ಪ್ರಾರಂಭಿಸುವುದು ಯೋಗ್ಯವು.

೮ ಎಷ್ಟೋ ಅಂಗಡಿಗಳು ಬಡ್ಡಿಯನ್ನು ಕೊಟ್ಟುಕೊಟ್ಟೇ ಹಾಳಾಗಿರುತ್ತವೆಂಬುವದನ್ನು ಲಕ್ಷದಲ್ಲಿಡಬೇಕು.

೯ ಪಾಲಿನಿಂದ ವ್ಯಾಪಾರ ಮಾಡುವ ಕಾಲಕ್ಕೆ ಅಕಸ್ಮಾತ್ ಲುಕ್ಸಾನವಾದರೆ ಆ ವರ್ಷದ ಲುಕ್ಸಾನವನ್ನು ಸಹ ಸೂಟಬಿಡಲಿಕ್ಕೆ ಸಾವಕಾರರು ಸಮರ್ಥರಿರಬೇಕು.

ಶ್ರೀಮಂತರ ಸೇವಕ.

ಮಹಾ ಶಿವರಾತ್ರಿಯ ಸಮಾರಂಭ.

ಕಳೆದ ಮಾಘ ಕೃಷ್ಣ ೧೩ ಬುಧವಾರ ಪ್ರತಿವರ್ಷದ ಪದ್ಧತಿಯಂತೆ ಚಿಕ್ಕಮಗಳೂರ ಕಾಫಿ ಪ್ಲಾಂಟರ್. ಮ. ರಾ. ಬಿಚ್ಚಾಲಿ ಗುರುಸಿದ್ಧಪ್ಪ ಶೆಟ್ಟರವರು ಆ ದಿನ ಗುರುಮೂರ್ತಿಗಳನ್ನು ಬರಮಾಡಿಕೊಂಡು ತಮ್ಮ ಗೃಹದಲ್ಲಿ ಯಥಾವಿಧಿಯಾಗಿ ಶಿವಲಿಂಗ ಪೂಜಾ ಗುರು ಪೂಜಾದಿಗಳನ್ನು ನೆರವೇರಿಸಿ ರಾತ್ರಿ ೧೦|| ಗಂಟೆಯ ಮೇಲೆ ತಾವು ನೂತನವಾದ ೫೦೦ ರೂಪಾಯಿಗಳಿಂದ ತಯಾರುಮಾಡಿಸಿ ಮೊನ್ನೆ ಚಿಕ್ಕಮಗಳೂರಿನಲ್ಲಿ ಪ್ರದರ್ಶನಕ್ಕಿಟ್ಟಿದ್ದ ದಿವ್ಯವಾದ ಮಂಟಪವನ್ನು ಈಶ್ವರನ ಫೋಟೋಗಳಿಂದ ಅಲಂಕರಿಸಿ ಬ್ರಹ್ಮಶ್ರೀ ವೇ|| ಜಿ. ನಂಜುಂಡಾರಾಧ್ಯ ಶಾಸ್ತ್ರಿಗಳವರು ಶಿವಕಥಾ ಪಂಡಿತ ಇವರಿಂದ ಮನೋಹರವೂ ಅಮೋಘವೂ ಆದ ಶಿವಕೀರ್ತನೆಯನ್ನು ಮಾಡಿಸಿ ನಂತರ ಮಂಗಳಾರತಿ ಪ್ರಸಾದಗಳೊಂದಿಗೆ ಬಂದಿದ್ದ ಯಾವತ್ತೂ ಜನಗಳನ್ನು ಸತ್ಕರಿಸಿದರು.

ವೀರಣ್ಣಯ್ಯ ಅಯ್ಯನಹಳ್ಳಿಮಠ.

—೫ನೇ ತಾರೀಖಿನ ದಿವಸ ರಾತ್ರಿ ಧಾರವಾಡ ಕರ್ನಾಟಕ ಹಾಯಸ್ಕೂಲಿಗೆ ಯಾರೋ ಬೆಂಕಿ ಹಚ್ಚಿದರು. ಹೆಡ್‌ಮಾಸ್ತರರ ಕೋಣೆ ಕಾರಕೂನನ ಕೋಣೆಗೆ ಬೆಂಕಿ ಹತ್ತಿ ಎಲ್ಲ ಕಾಗದ ಪತ್ರಗಳು ಸುಟ್ಟು ಹೋಗಿವೆ. ಬೆಂಕಿ ಹಚ್ಚಿದ ಸಂಶಯದಿಂದ ಪ್ರಿಲಿಮ್ನರಿ ಪರೀಕ್ಷೆಗೆ ಕುಳಿತ ಕೆಲವು ವಿದ್ಯಾರ್ಥಿಗಳನ್ನು ಹಿಡಿದಿದ್ದಾರೆ. ಮ್ಯಾಟ್ರಿಕ್ ಫಾರ್ಮ ಕೊಡದಿದ್ದುದರಿಂದ ಅವರೇ ಹಚ್ಚಿರಬೇಕೆಂದು ಸಂಶಯವಿದೆ.

ಹಂಗರಿ ದೇಶದ ಇಬ್ಬರು ತರುಣಿಯರು ಒಂದು ಚಿತ್ರಪ್ರದರ್ಶನವನ್ನು ತಂದಿದ್ದಾರೆ. ಅವರು ಹಿಂದುಸ್ಥಾನದಲ್ಲಿ ಸಿಮ್ಲಾ, ಲಾಹೋರ ಮೊದಲಾದ ಕಡೆಯಲ್ಲಿ ತಮ್ಮ ಚಿತ್ರಗಳನ್ನು ತೋರಿಸಿದರು. ಅವರ ಚಿತ್ರಗಳು ಇಟಲಿ ಮತ್ತು ಹಿಂದುಸ್ಥಾನದವುಗಳಿದ್ದು ಅವುಗಳಲ್ಲಿ ಕೆಲವನ್ನು ವ್ಹಾಯಿಸರಾಯರು ಕೊಂಡುಕೊಂಡಿದ್ದಾರೆ. ಅವರು ದಕ್ಷಿಣ ಹೈದರಾಬಾದದಲ್ಲಿ ಈಗ ಬಂದಿದ್ದು ಅವರ ಚಿತ್ರಗಳನ್ನು ನೋಡಲು ಸರಕಾರೀ ಅಧಿಕಾರಸ್ಥರೆಲ್ಲರು ಬಂದಿದ್ದರು.

—ಬೆಳಗಾವಿಯ ಹತ್ತಿರಿರುವ ಶಹಪೂರದಲ್ಲಿ ಹಿಂದಕ್ಕೆ ಶಾಳೆಯ ಗ್ಯಾದರಿಂಗ ನಡೆದ ಕಾಲದಲ್ಲಿ ಬಾಂಬು ಸ್ಫೋಟವಾಗಿದ್ದಿತಷ್ಟೆ. ಆ ಪ್ರಕರಣದಲ್ಲಿ ವಿ. ಕಾಮತ ಮತ್ತು ವಿ. ಹೇರೆಕರ ಎಂಬ ಇಬ್ಬರು ದೋಷಿಗಳೆಂದು ನಿರ್ಣಯಿಸಲ್ಪಟ್ಟು ಸಾಂಗಲಿಯ ನ್ಯಾಯಾಧೀಶರು ಪ್ರತಿಯೊಬ್ಬರಿಗೆ ೭ ವರುಷದಶಿಕ್ಷೆ ವಿಧಿಸಿದರು.

ಜಾತಿಯ ಭ್ರಾಂತಿ.

ಅರ್ಥವನರ್ಥವಮಾಡಿ ಕೋಳಾಹಳಂಗೈಯುತ್ತಿರಲಿ| ಹುಟ್ಟಿದ ಮಕ್ಕಳ ನವಖಂಡ ಮಾಡಿ ಕಡಿವುತ್ತಿರಲಿ | ಮುಟ್ಟುವ ಸ್ತ್ರೀಯ ಕಣ್ಣಮುಂದೆ 'ಅಭಿಮಾನಂಗೊಂಡು ನೆರೆವುತ್ತಿರಲಿ | ಇಂತೀ ತ್ರಿವಿಧವು ಹೊರಗಣವು | ಇನ್ನೆನ್ನಂಗದ ಮೇಲೆ ಬರಲಿ | ಹಿಡಿಖಂಡವ ಕೊಯ್ಯಲಿ | ಇಕ್ಕುವ ಶೂಲವು ಪ್ರಾಪ್ತಿಸಲಿ | ದಾಕೊಂದೆಸೆ ಹನ್ನೊಂದೆಸೆಯಾಗಿ ವಾಡುತ್ತಿರಲಿ | ಮತ್ತೆಯೂ ಲಿಂಗಾರಾಧನೆಯ ಮಾಡುವೆ | ಜಂಗಮಾರಾಧನೆಯ ಮಾಡುವೆ | ಪ್ರಸಾದಕ್ಕೆ ತಪ್ಪೆನು| ಇಂತಪ್ಪ ಭಾಷೆಗೆ ಕಿಂಚಿತ್ತು ಹುಸಿಯಾದರೆ ನೀನಂದೇ ಮೂಗು ಕೊಯ್ಯಿ ಕೂಡಲ ಸಂಗಮದೇವಾ||

ಶಿವಶರಣರ ಮಾರ್ಗವು ಆನಂದಮಯವಲ್ಲ. ಕಷ್ಟಮಯವು. ಅಂತೆಯೇ ಅವರ ನಡೆನುಡಿಯಲ್ಲಿ ಅದ್ಭುತ ಶಕ್ತಿ ಇರುತ್ತದೆ. ಕಷ್ಟ ಬಂದ ಕಾಲದಲ್ಲಿ ಯಾವ ರೀತಿಯಿಂದ ನಡೆಯಬೇಕೆಂಬುದನ್ನು ಆ ಮಹಾತ್ಮರು ತಮ್ಮ ನಡೆನುಡಿಯಿಂದ ಬೋಧಿಸುತ್ತಾರೆ. ಅವರಿಲ್ಲದ ಪಕ್ಷದಲ್ಲಿಯೂ ಅವರ ನಡೆನುಡಿಗಳ ನೆನಹು ಮನುಷ್ಯರಿಗೆ ಅಪಾರವಾದ ಶಕ್ತಿಯನ್ನು ಕೊಡುತ್ತದೆ.

ಮಹಾತ್ಮಾ ಏಸುಕ್ರಿಸ್ತನನ್ನು ಶಿಲುಬೆಗೆ ಹಾಕಿದ ಭಾವಚಿತ್ರವನ್ನಾಗಲಿ ಪ್ರತಿಮೆಯನ್ನಾಗಲಿ ನೋಡಿರಿ. ಜೀವಗಳ್ಳನಿಗೆ ಅದೊಂದು ಭಯಂಕರ ದೃಶ್ಯವು ಬೇಡ. ಈತನ ಗತಿಯೇ ಹೀಗಾದ ಮೇಲೆ ಈತನನ್ನು ಹಿಂಬಾಲಿಸುವವರ ಗತಿಯೇನಾದೀತೆಂದು ಆ ಪೂರ್ವೋಕ್ತ ಜೀವಗಳ್ಳನು ಹಲುಬಬಹುದು. ಆದರೆ ನಿಜವಾದ ಆತ್ಮವೀರನಲ್ಲಿ ಆ ದೃಶ್ಯವು ಬಲಿದಾನಾಗ್ನಿಯನ್ನು ಸ್ಫುರಣಗೊಳಿಸಿ ಜಾಜ್ವಲ್ಯವನ್ನಾಗಿ ಮಾಡಲು ಝಂಝಾವಾತವಾಗಿ ಪರಿಣಮಿಸಲಿಕ್ಕಿಲ್ಲವೇ? ಪಾಪಿಯಿರಲಿ, ತಾಪಿಯಿರಲಿ, ಸುಖಿಯಿರಲಿ ದುಃಖಿಯಿರಲಿ, ಆಸಕ್ತನಿರಲಿ, ನಿರ್ಮುಕ್ತನಿರಲಿ, ಪ್ರತಿಯೊಬ್ಬನಿಗೂ ಆ ದೃಶ್ಯವು ಅವರವರ ಯೋಗ್ಯತೆಯಂತೆ ಗಂಭೀರತೆಯನ್ನೂ, ಸಹನಶೀಲತೆಯನ್ನೂ, ನಿಃಸ್ವಾರ್ಥಬಲಿದಾನವನ್ನೂ ಬೀರುತ್ತಿದೆ.

ಆತ್ಮವೀರರು ಎಂಥ ಸಂಕಟ ಪರಂಪರೆಯೊದಗಿದರೂ ತಮ್ಮ ನಿಷ್ಠೆಯನ್ನೂ, ತಮ್ಮ ಜೀವನದ ಗುರಿಯನ್ನೂ, ತಮಗೆ ಸತ್ಯವೆಂದು ಕಂಡುದನ್ನೂ ಎಂದಿಗೂ ತ್ಯಜಿಸರು. ಕರುಳಿಲ್ಲದ ಕಟುಕರಾದ ಕೊಲೆಗಡಗರು ಕುಣಿಕುಣಿದುಕೊಲ್ಲಲುಪಕ್ರಮಿಸಿದಾಗ ಮಹಾ ಕಲಿಯಾದ ಏಸುವು ನಿಶ್ಚಲತೆಯಿಂದ "ಹೇ, ಪರಮಾತ್ಮನೇ ಈ ಜನರ ಅಜ್ಞಾನವನ್ನು ಪರಿಹರಿಸು. ಇವರಲ್ಲಿ ಜ್ಞಾನವಿದ್ದುದಾದರೆ ಹೀಗೇಕೆ ಮಾಡ್ತಾರು ಇವರನ್ನು ಕ್ಷಮಿಸು" ಎಂದು ಮುಂತಾಗಿ ಹೇಳಲಿಲ್ಲವೇ?

ಆ ಮಹಾ ಮಹಿಮನ ಅತುಲವಾದ ನಿಶ್ಚಲತೆಯು ಕೋಟ್ಯಾವಧಿ ಜನರಿಗೆ ಅಭಯವನ್ನೂ ಶಾಂತಿಯನ್ನೂ ಈಗಲೂ ಅನುಗ್ರಹಿಸುತ್ತಿರುವದಲ್ಲವೇ?

ಇದೇ ಪ್ರಕಾರ ಮಹಾನುಭಾವರಾದ ಬಸವಣ್ಣನವರು ತಮ್ಮ ಜೀವಿತ ಧ್ಯೇಯಕ್ಕಾಗಿ ಅಪೂರ್ವ ತ್ಯಾಗವನ್ನು ಮಾಡಿರುವರು. "ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ ? ಲಿಂಗಸ್ಥಲವನರಿದವನೇ ಕುಲಜನು" ಎಂದುದು ಅವರ ಪ್ರಸಾದವಾಣಿ. ಇದನ್ನು ಅವರು ನುಡಿದುದಲ್ಲದೆ ನಡೆಯಿಂದಲೂ ತೋರಿಸಬೇಕಾಗಿದ್ದಿತು. ಮಹಾನುಭಾವರು ಈ ಪ್ರಸಂಗವನ್ನು ಮಾಡಿ ತೋರಿಸದಿದ್ದರೆ ಸರ್ವಾಂಗ ಸುಂದರವಾದ ನಮ್ಮ ವೀರಶೈವ ಸಮಾಜದ ಭವನಕ್ಕೆ ಹುಳಹತ್ತಿದಂತಾಗುತ್ತಿದ್ದಿತು. ವೀರಶೈವ ಮತವೆಂಬ ದೇವಾಲಯಕ್ಕೆ ಕಳಸವೇ ಇಲ್ಲದಂತಾಗುತ್ತಿದ್ದಿತು. ಆದುದರಿಂದಲೇ ಮಹಾನುಭಾವರು ಮಧುವಯ್ಯ ಹರಳಯ್ಯಗಳೆಂಬ ಮಹಾಶಿವಶರಣರಲ್ಲಿ ಶರೀರಸಂಬಂಧವನ್ನುಂಟುಮಾಡಿದರು.

ಕಚ್ಚಿಬಿಡುವನೇ ಶರಣನು? ಬಿಟ್ಟುಹಿಡಿವನೇ ಶರಣನು? ನಡೆದು ತಪ್ಪುವನೇ ಶರಣನು ? ನುಡಿದು ಹುಸಿವನೇ ಶರಣನು? ಭಕ್ತಿಯ ಬಿಡುವನೇ ಶರಣನು? ಸಹಜಸಜ್ಜನಿಕೆ ತಪ್ಪಿದರೆ ಕೂಡಲ ಸಂಗಯ್ಯ ಹಲ್ಲುದೋರಿ ಮೂಗು ಕೊಯ್ಯುವಾ||

ಎಂದು ಮಹಾನುಭಾವರು ಸತ್ಯಕ್ಕಾಗಿ ಸರ್ವಸ್ವವನ್ನು ಸೂರೆಗೈಯ್ಯಲು ಹಿಂಜರಿಯಲಿಲ್ಲ. ಈ ಪ್ರಸಂಗವುಂಟಾಗದಿದ್ದರೆ ಕಲ್ಯಾಣವು ಹಾಳಾಗುತ್ತಿರಲಿಲ್ಲವೆಂದು ಕೆಲವರ ಮತ. ಆದರೇನು ಈ ಪ್ರಸಂಗವೊಂದುಂಟಾಗದಿದ್ದರೆ, ಈ ಜಾತಿಯಭ್ರಾಂತಿಯು ನಿವಾರಣೆಯಾಗದಿದ್ದುದಾದರೆ ವೀರಶೈವ ಸಮಾಜಕ್ಕೆ ಕಲ್ಯಾಣವಾಗುತ್ತಿದ್ದಿತೇ? ಜಾತಿಯ ಬೇತಾಳದಿಂದ ಪೀಡಿತರಾದ ಬ್ರಾಹ್ಮಣ ಮೊದಲಾದ ಇತರ ಹಿಂದೂಗಳು ತಮ್ಮತಮ್ಮ ಒಳಪಂಗಡಗಳನ್ನು ಸಹಭೋಜನದಿಂದಲೂ ಶರೀರಸಂಬಂಧತೆಯಿಂದಲೂ ಏಕೀಕರಿಸುತ್ತಿರುವಾಗ ಮುನ್ನವೇ ಜಾತಿಯ ಬೇರನ್ನು ಕಡಿದುಹಾಕಿದ ನಮ್ಮವೀರಶೈವ ಸಮಾಜದಲ್ಲಿ ಜಾತಿಬೇತಾಳನಿಗೆ ಆಶ್ರಯಕೊಡುವದು ಅಧಃಪಾತದ ಪೂರ್ವಸಿದ್ಧತೆಯೇ ಸರಿ. ಮಹಾನುಭಾವನಾದ ಬಸವೇಶನೇ ಈ ಜಾತ್ಯಾಂಧರಿಗೆ ವೀರಶೈವ ಧರ್ಮವನ್ನರುಹಿ ದಾದಿಗೆ ಹಚ್ಚುವ ಕೃಪೆಮಾಡಬಾರದೇ?

ಪಾಟೀಲ ಲಿಂಗನಗೌಡರು.

ಶ್ರೀ. ಡಿ. ಎಸ್. ಮಲ್ಲಪ್ಪನವರು
ಎಂ.ಎಲ್. ಸಿ.

ಈ ಮಹಾಶಯರು

ತುಮಕೂರಲ್ಲಿ ಇದೇ ತಿಂಗಳು ೧೯ ನೆಯ ತಾರೀಖಿನ ದಿವಸ ಸೇರುವ ಮೈಸೂರು ಪ್ರಜಾಪಕ್ಷದ ೩ ನೆಯ ಪರಿಷತ್ತಿನ ಸ್ವಾಗತಾಧ್ಯಕ್ಷರು.

ಮೈಸೂರು ದೇಶದ ಪ್ರಜಾಹಿತಚಿಂತಕರು ಈ ಮಹಾಶಯರ ಮುಂದಾಳುತನದಲ್ಲಿ ದೇಶೋನ್ನತಿಯ ಎಲ್ಲ ಕಾರ್ಯಗಳನ್ನು ತೃಪ್ತಿಕರವಾಗಿ ಮಾಡಲಿ. ಈ ತರುಣ ಉತ್ಸಾಹಿ ದೇಶ ಸೇವಕರು ತನು ಮನ ಧನಗಳನ್ನು ದೇಶ ಸೇವೆಗೆ ಹೆಚ್ಚಾಗಿ ಸವಿಸಿ ಕೀರ್ತಿಭಾಜನರಾಗಲಿ.

ಹರಿಜನ ಪತ್ರಿಕೆಯ ಸಾರಾಂಶ.

ಅಖಿಲಭಾರತ ಹರಿಜನ ಸೇವಾ ಸಂಘ.

(ತಾ. ೨೦ನೆಯ ಫೆಬ್ರುವರಿ ವರೆಗೆ ಮುಗಿಯುವ ವಾರದ ವರದಿ.)

ದೇವಾಲಯ ಪ್ರವೇಶ.

೧ ಜಿಲ್ಲಾ ಗುಂಟೂರ ತಾಲೂಕ ರಾಜೇಲಾ ಕಸಬಾ ಮಂತಿ ನಾವಾದಿಯಾರಲೇನ ಗ್ರಾಮದ ಒಂದು ದೇವಾಲಯ.

೨ ಮದ್ರಾಸದಲ್ಲಿಯ ಪುಲಿಯಾಪೂಲದ ಒಂದು ಜೈನ ಮಂದಿರ.

೩ ಗುಜರಾಥದ ದೋಹದ ಗ್ರಾಮದಲ್ಲಿ ಫ್ರೀ ಲ್ಯಾಂಡಗೇಜ ಕೊಲೊನಿಯಲ್ಲಿಯ ಒಂದು ದೇವಾಲಯ.

೪ ಸಂಯುಕ್ತ ಪ್ರಾಂತದ ಬಾರಾಬಂಕಿ ಜಿಲ್ಲೆಯಲ್ಲಿಯ ಮೂರು ದೇವಾಲಯಗಳು,

೫ ರತ್ನಾಗಿರಿಯಲ್ಲಿಯ ಸೇಟ ಬಾಗೋಜಿ ಕೀರ ಇವರ ಸೊತ್ತಿನ ಭಾಗ್ಯಾ ಮಂದಿರ ಮತ್ತು ರಾಮಜಿ ಮಂದಿರ ಹೀಗೆ ಎರಡು ದೇವಾಲಯಗಳು. ಶಿವರಾತ್ರಿಯ ದಿವಸ ಆದಿಜನರ ಸಹಿತವಾಗಿ ಎಲ್ಲ ಜನರಿಗೆ ಶ್ರೀ. ಎಮ್. ಆರ್. ಜಯಕರ್ ಇವರ ಹಸ್ತದಿಂದ ತೆರೆಯಲ್ಪಟ್ಟವು.

ಶಾಲೆಗಳು

೧ ಮದ್ರಾಸದಲ್ಲಿ ಗಣಪತಿ ಮುದಾಲಿ ಸ್ಟ್ರೀಟದಲ್ಲಿಯ ಒಂದು ರಾತ್ರಿಯ ಶಾಲೆಯು.

೨ ಸಿಂಧದಲ್ಲಿ ಸಕ್ಕರಜಿಲ್ಲೆಯ ಗರೀಬಾಬಾದ ಗ್ರಾಮದ ಒಂದು ಪ್ರಾಥಮಿಕ ಶಾಲೆಯು.

೩ ಅಹಮದಾಬಾದ ಜಿಲ್ಹೆಯ ವಿಶಾಳಪೂರ, ಭಾಟ, ಪೋರ ಮತ್ತು ಪ್ರಾಂತಿಲ ಎಂಬ ನಾಲ್ಕು ಗ್ರಾಮಗಳ ಶಾಲೆಗಳು ಅವುಗಳಿಗೆ ಪ್ರತಿ ತಿಂಗಳಿಗೆ ೩೧ ರೂ. ಯಂತೆ ಗ್ರ್ಯಾಂಟು ಕೊಡಲ್ಪಡುತ್ತದೆ.

೪ ಖೇಡಾ ಜಿಲ್ಲೆಯ ರಾಧವನಾಜ, ಬೋರಸದ ಮತ್ತು ಕದಲಾಲ ಎಂಬ ಮೂರುಗ್ರಾಮಗಳಲ್ಲಿಯ ಶಾಲೆಗಳು. ಅವುಗಳಿಗೆ ತಿಂಗಳೊಂದಕ್ಕೆ ೩೦ ರೂ. ಗ್ರ್ಯಾಂಟ ದೊರೆಯುತ್ತದೆ.

ಶಿಷ್ಯ ವೃತ್ತಿಗಳು.

೧ ಗುಜರಾಥ ಪ್ರಾಂತಿಕ ಬೋರ್ಡಿನವರು ಒಬ್ಬ ಆದಿಜನ ವಿದ್ಯಾರ್ಥಿಗೆ ಪ್ರತಿತಿಂಗಳ ೧೦ ರೂ. ಯಂತೆ ಮತ್ತೊಬ್ಬನಿಗೆ ಪ್ರತಿತಿಂಗಳ ೫ ರೂಪಾಯಿಯಂತೆ ಶಿಷ್ಯವೃತ್ತಿಯನ್ನು ಕೊಟ್ಟಿದ್ದಾರೆ.

೨ ಆಂಧ್ರ ಪ್ರಾಂತಿಕ ಬೋರ್ಡಿನವರು ಹಾಯಸ್ಕೂಲಿನಲ್ಲಿ ಕಲಿಯುವ ಮೂವರು ವಿದ್ಯಾರ್ಥಿನಿಯರಿಗೆ ಪ್ರತಿಯೊಬ್ಬರಿಗೆ ೪ ರೂಪಾಯಿಯಂತೆ ಕೊಡಲು ನಿರ್ಣಯಿಸಿದ್ದಾರೆ.

ಅದೇ ಪ್ರಕಾರ ವಿದ್ವಾನ ಪರೀಕ್ಷೆಗೆ ಕುಳಿತುಕೊಳ್ಳತಕ್ಕ ಮೂವರು ವಿದ್ಯಾರ್ಥಿಗಳಿಗೆ ಬೋರ್ಡು ಶಿಷ್ಯವೃತ್ತಿಯನ್ನು ಕೊಡುವರು.

೩ ನಡಿಯಾದದಲ್ಲಿ ಸಾರ್ವಜನಿಕ ವ್ಯಾಯಾಮ ಶಾಲೆಯನ್ನು ಆದಿಜನರ ಮಕ್ಕಳಿಗಾಗಿ ಮುಕ್ತಮಾಡಿದ್ದಾರೆ.

ಬಾವಿಗಳ ಉಪಯೋಗ.

೧ ಖೇಡಾ ಜಿಲ್ಲೆಯ ಲೋಕಲಬೋರ್ಡಿನವರು ತೀರ್ಮಾನಿಸಿದ ಗೊತ್ತುವಳಿಯ ಪ್ರಕಾರ ಅಲ್ಲಿಯ ಮೂರು ತಾಲೂಕಿನವರು ತಮ್ಮ ಗಡಿಗಳಲ್ಲಿರುವ ಲೋಕಲಬೋರ್ಡಿನ ಎಲ್ಲ ಬಾವಿಗಳನ್ನು ಹರಿಜನರಿಗೂ ಉಪಯೋಗಿಸಲು ನಿರ್ಣಯಿಸಿದ್ದಾರೆ.

೨ ಬನಾರಸದಲ್ಲಿ ಪಂ ಪ್ರಮಥನಾಥ ತರ್ಕಭೂಷಣ ಇವರ ಅಧ್ಯಕ್ಷತೆಯಲ್ಲಿ ಆದಿಜನ ಸೇವಾಸಂಘದ ಶಾಖೆಯು ತೆರೆಯಲ್ಪಟ್ಟಿದೆ.

ಡಾ. ನಿ. ಜಿ. ವೈಶಂಪಾಯನ ಇವರು ಸೊಲ್ಲಾಪುರದಲ್ಲಿ ಒಂದು ಧರ್ಮಾರ್ಥ ವೈದ್ಯಾಲಯವನ್ನು ತೆರೆದಿದ್ದು ಅಲ್ಲಿ ಆದಿಜನರಿಗೆ ಔಷಧವನ್ನು ಉಚಿತವಾಗಿಕೊಡುವರು.

ಸಿಂಧದಲ್ಲಿ ನ್ಯೂಸಕ್ಕರದಲ್ಲಿಯ ಒಂದು ರಾತ್ರಿಶಾಲೆಯೂ ಮತ್ತು ಓಲ್ಡಸಕ್ಕರದಲ್ಲಿಯ ಒಂದು ಶಾಲೆಯೂ ಹರಿಜನರಿಗಾಗಿ ತೆರೆಯಲ್ಪಟ್ಟವು,

ಪಾಲಿನ ವ್ಯಾಪಾರೋದ್ಯೋಗ.

ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನು ಹಣ ಕೀರ್ತಿ ದೊಡ್ಡಿಸ್ತನ ಮುಂತಾದವುಗಳನ್ನು ದೊರಕಿಸಲಿಕ್ಕೆ ಪ್ರಯತ್ನಮಾಡುವುದು ಸ್ವಾಭಾವಿಕವು. ಇವುಗಳನ್ನು ದೊರಕಿಸುವ ಸದಿಚ್ಛೆಯಿಂದ ತನಗಿಂತ ಶ್ರೀಮಂತರಾದವರ ಆಶ್ರಯವನ್ನು ದೊರಕಿಸಲಿಕ್ಕೆ ಪ್ರಯತ್ನಿಸುವದು ನಮಗೆ ಕಂಡುಬರುವದು. ಶ್ರೀಮಂತರಾದವರು ತಮ್ಮ ಆಶ್ರಯದ ಕೆಳಗೆ ಬಂದವರ ಕಲ್ಯಾಣದ ಕಡೆಗೆ ಲಕ್ಷವಿಟ್ಟರೆ ಮಾತ್ರ ದೇವರು ತಮಗೆ ದಯಪಾಲಿಸಿದ ಶ್ರೀಮಂತತನಕ್ಕೆ ಸದುಪದೇಶವಾದಂತೆ ಆಗುವದು. ಅದನ್ನೆಲ್ಲ ಬಿಟ್ಟು ಆಶ್ರಯದ ಕೆಳಗೆ ಬಂದಂಥ ದೈನ್ಯಾವಸ್ಥೆಯಲ್ಲಿದ್ದಂಥ ಜನರನ್ನೇ ಹಿಂಡಿ ಹಿಪ್ಪೇಮಾಡಿ ಹೆಚ್ಚಾಗಿ ದ್ರವ್ಯವನ್ನು ಗಳಿಸುವ ಹವ್ಯಾಸಕ್ಕೆ ಬಿದ್ದರೆ ಅಂಥಾ ಶ್ರೀಮಂತರಿಗೆ ಏನು ಅನ್ನಬೇಕು? ಎಷ್ಟೋ ಜನರು ತಮ್ಮಲ್ಲಿ ಶಕ್ತಿಯಿಲ್ಲದಿದ್ದರೂ ಬಡವರಿಗೆ ಆಶ್ರಯಕೊಡಲಿಕ್ಕೆ ಮುಂದೆ ಬರುತ್ತಾರೆ. ಇದರ ಉದ್ದೇಶವಾದರೂ ಏನಿರಬಹುದು? ಬಡವರಿಗೆ ಆಶ್ರಯ ಕೊಡುವದರ ಸಲುವಾಗಿ ಈ ಉದ್ಯೋಗವನ್ನು ಕೈಕೊಂಡಿರುವೆನೆಂದು ಬಹಿರಂಗವಾಗಿ ಹೇಳುತ್ತಿದ್ದರೂ ಅಂತರಂಗದಲ್ಲ ಹೊಲಿ ಬಡ್ಡಿಯನ್ನು ಹೆಚ್ಚಾಗಿ ಬಾಡಿಗೆ ಮುಂತಾದವುಗಳನ್ನು ಹಾಕಿ ಆ ಬಡಜನರನ್ನು ಮತ್ತಿಷ್ಟು ದರಿದ್ರಾವಸ್ಥೆಯಲ್ಲಿ ತಂದು ಮುಂದೆ ಹೊಟ್ಟೆತುಂಬಿಕೊಳ್ಳಲಿಕ್ಕೆ ಸಹ ಅಸಮರ್ಥರನ್ನಾಗಿ ಮಾಡುವರು.

ಬಡವರಾದರೂ ಒಂದು ದೊಡ್ಡ ತಪ್ಪನ್ನು ಮಾಡುವರು. ಯಾವದಾದರೊಂದು ಉದ್ಯೋಗವನ್ನು ಕೈಕೊಳ್ಳುವ ಪೂರ್ವದಲ್ಲಿ ಆ ಉದ್ಯೋಗದಲ್ಲಿಯ ತಮ್ಮ ಪಾಲು, ಬಡ್ಡಿ, ಬಾಡಿಗೆ ಮುಂತಾದವುಗಳನ್ನು ಸವಿಸ್ತಾರವಾಗಿ ಮಾಡುವುದಿಲ್ಲ. ಶ್ರೀಮಂತರಂತೂ ಈ ವಿಷಯಗಳನ್ನು ಮೊದಲು ಪ್ರಸ್ತಾಪಿಸುವುದಿಲ್ಲ. ಯಾಕಂದರೆ ಮೊದಲು ಉದ್ಯೋಗವನ್ನು ಸುರುಮಾಡಿದ ನಂತರ ಹಿಂದಿನಿಂದ ತಾವು ಹಾಕಿದ ಕರಾರುಗಳಿಗೆಲ್ಲ ಆ ಬಡವನು ಒಪ್ಪಿಗೆಯನ್ನು ಕೊಡುತ್ತಾನೆಂದು ಸಾವಕಾರರಿಗೆ ಗೊತ್ತಿರುತ್ತದೆ. ಉದ್ಯೋಗವು ಪ್ರಾರಂಭವಾದ ನಂತರ ಆ ಬಡ ಪಾಲುಗಾರನಾದರೂ ಅಂತರಂಗದಲ್ಲಿ ಮನಸ್ಸಿಲ್ಲದಿದ್ದರೂ ಗತಿಗಾಣದೆ ತನ್ನ ಸಾವಕಾರನು ಹೇಳಿದ ಕರಾರುಗಳಿಗೆ ಒಪ್ಪಿಗೆಯನ್ನು ಕೊಡುತ್ತಾನೆ. ಕೆಲವರು ಸಾವಕಾರರ ಎಂಥ ಕರಾರುಗಳಿಗಾದರೂ ಒಪ್ಪಿಕೊಂಡು ಪಾಲಿನಿಂದ ಉದ್ಯೋಗ ಮಾಡುವರು. ಯಾಕಂದರೆ ಅವರಿಗೆ ಇದರ ಹೊರ್ತು ಗತ್ಯಂತರವಿರುವದಿಲ್ಲ. ಆ ಉದ್ಯೋಗದಲ್ಲಿ ಲಾಭವಾದರೆ ಹಂಚಿಕೊಳ್ಳುವರು ಹಾನಿಯಾದರೆ......? ಈ ಪ್ರಕಾರ ವ್ಯವಹಾರ ಮಾಡಿದರೆ ಶ್ರೀಮಂತರು ಮಾತ್ರ ವೃಥಾ ಗಂಡಾಂತರದಲ್ಲಿ ಬೀಳುವರು. ಇದನ್ನು ಲಕ್ಷದಲ್ಲಿಟ್ಟುಕೊಂಡು ಯಾವದಾದರೊಂದು ಉದ್ಯೋಗವನ್ನು ಆರಂಭಿಸಬೇಕು. ಒಂದು ವೇಳೆ ಬಡವರ ಕಲ್ಯಾಣ

(೧೦ ನೆಯ ಪುಟಕ್ಕೆ ಹಿಂತಿರುಗಿರಿ.)

೫॥ ರೂಪಾಯಿಗೆ ಐಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣಬೇಕಾಗಿದೆ. ಹೆಚ್ಚು ಬಂಡವಾಳ ಹಾಕಿ ಹೆಚ್ಚಾಗಿ ಗಳಿಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಅತಿಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

ತಿರುವಾಂಕೂರು ಅಲೈಯನ್ಸ್ ಬ್ಯಾಂಕಿನ

ರೂ. ೫॥ **ಬೋನಸ್ ಬಾಂಡ್.** ರೂ. ೫॥

ಈ ಒಂದು ಬಾಂಡಿನಿಂದ ರೂ. ೩೦೦೦, ೨೦೦೦, ೧೦೦೦, ಇತ್ಯಾದಿ ಇನಾಮುಗಳನ್ನು ಪಡೆಯಲು

೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧। ಆಣೆಯ ಸ್ಟಾಂಪು ಇಟ್ಟು ಬರೆಯಿರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ. ಎಸ್. ಕುರುವತ್ತಿ ದಾವಣಗೆರೆ.

ಭಾಸ್ಕರ ಪ್ರಕಾಶ—ಬಟ್ಟೆ ಸ್ವಚ್ಛವಾಗುವ ೧೨ ಚೀಟು ೮ ಆಣೆ.

ಮಾಸ್ಕಿಟೋರಿಯಲ್—ಗುಂಗಾಡ ನಾಶ ೧೨ ಚೀಟು ೮ ಆಣೆ.

ಚೇಳಿನ ನಾಶ—೧೨ ಚೀಟು ೬ ಆಣೆ.

ತಗಣಿಯ ಶತ್ರು—ಒಂದು ಬಾಟ್ಲಿ ೮ ಆಣೆ.

ಎಲ್ಲ ಮಾಲಿನ ನಮೂನೆ ೧ ರೂಪಾಯಿ ವ್ಹಿ. ಪಿ. ಯಿಂದ ೧೯೩೩ ಕ್ಯಾಲೆಂಡರ್ ಸಹ ಮನೆ ಸೇರುವದು.

ಭಾಸ್ಕರ ಪ್ರಕಾಶ ವರ್ಕ್ಸ್,
ಪ್ರೋ. ಹಂಚಲಿ.
ಜಿ. ವಿಜಾಪೂರ.

ಮೋಹಿನಿ ಹೇರ್ ಆಯಿಲ್
ಮತ್ತು
ಕಮಲಾ ಹೇರ್ ಆಯಿಲ್.

ಬಹು ಶ್ರೇಷ್ಠವಾದ ಸುಲಭ ಕ್ರಯದ ಅತಿ ಸುಗಂಧದ ಕೇಶ ತೈಲಗಳು ನಮ್ಮಲ್ಲಿ ತಯಾರಾಗುತ್ತವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮಿಶನ್ ದೊರೆಯುವುದು. ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಂಡು ವ್ಯಾಪಾರಿಗಳು ಹೆಚ್ಚಾದ ಲಾಭ ಹೊಂದಬಾರದೇ?

ಬಿ. ಎಚ್. ಹಾಗರಗಿಕರ್,
ಗುಲಬರ್ಗಾ.

ಬೀಜಗಳು.

೨೫ ಪ್ಯಾಕೆಟ್	ಇಂಡಿಯನ್ ತರಕಾರಿ ಬೀಜಗಳು	೪-೦-೦
೨೫ ,,	ಯುರೋಪ ,, ,,	೫-೦-೦
೨೫ ,,	ಹೂವಿನ ಬೀಜಗಳು	೫-೦-೦

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦-೦-೦

ಸಿಂಬೆ, ಕೊಡಗು ಕಿತ್ತಳೆ, ಚೇಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೇವು, ಪಿಚ್ಛೀಸ್, ಅಂಜೂರ, ದ್ರಾಕ್ಷಿ ಗಿಡಗಳು ಡಜನ್ ೧ಕ್ಕೆ ೯-೦-೦

ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾಸವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರ ಸಿಟಿ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಡ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯುಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ. ಇಂಥಾದಕ್ಕ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನುದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟ ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯು** ತಿಜೋರಿ **ಕೊಂಡಾರ** ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ **ಕೊಳ್ಳುವೆನು**. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! **ಜಾಗ್ರತೆ ತರಿಸಿಕೊಳ್ಳಿರಿ!**

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೨-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ**. ಪೋ. ಆಲಮಟ್ಟಿ ಜಿ. ವಿಜಾಪುರ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಮಾರ್ಚ ತಾರೀಖು ೨ನೆಯ ಸೋಮವಾರ | ಸಂಚಿಕೆ ೨೧.

ಶುಭ್ರ ಪತ್ರಿಕೆಯ ಮುಖ್ಯಾಂಶ.

SANGAM CLOTH STORES
Prop: M. S. Hunsi... & Sons,
P.O: TERDAL - 587 315
Bijapur, (Karnataka)

ವ್ಹಾಯಿಸ್‌ರಾಯರ ಕೈಯಲ್ಲಿ ಸರ್ವಸೂತ್ರ!

ಸ್ವರಾಜ್ಯವು ಕನ್ನಡಿಯಲ್ಲಿಯ ಗಂಟು!!

ಬಹು ದಿನದಿಂದ ನಿರೀಕ್ಷಿಸಲ್ಪಟ್ಟ ಶುಭ್ರ ಪತ್ರಿಕೆಯು ತಾ ೧೭ನೆಯ ದಿವಸ ಪ್ರಕಟವಾಯಿತು. ಚಕ್ರವರ್ತಿಗಳ ಪ್ರತಿನಿಧಿಗಳೆಂದು ಮಧ್ಯವರ್ತಿ ರಾಜ್ಯಕಾರಭಾರಕ್ಕೆ ವ್ಹಾಯಿಸರಾಯರನ್ನೇ ಮುಖ್ಯಾಧಿಕಾರಿಗಳನ್ನಾಗಿ ಗೊತ್ತುಮಾಡಿದ್ದಾರೆ. ಇವರ ಸಲಹೆಗೆ ಒಂದು ಮಂತ್ರಿಮಂಡಲವು ಏರ್ಪಡಿಸಲ್ಪಡುವುದು.

ವ್ಹಾಯಿಸ್‌ರಾಯರಿಗೆ ಈ ಕೆಳಗಿನ ಶಾಖೆಗಳಲ್ಲಿ ಪ್ರವೇಶಿಸಿ ತಮ್ಮ ಇಷ್ಟಾನುಸಾರ ವರ್ತಿಸಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಶಾಖೆಗಳು— ೧. ಸೈನ್ಯ ೨. ಪರರಾಷ್ಟ್ರಗಳ ಸಂಬಂಧ ೩. ಧಾರ್ಮಿಕ ವಿಷಯ ೪. ಅಖಿಲ ಹಿಂದುಸ್ಥಾನದ ಶಾಂತತಾ ರಕ್ಷಣೆಯ ವಿಷಯ ೫. ಆರ್ಥಿಕ ಸುಧಾರಣೆ ೬. ಅಲ್ಪಸಂಖ್ಯಾಕರ, ವರಿಷ್ಟ ಅಧಿಕಾರಿಗಳ, ಹಿಂದಿ ಸಂಸ್ಥಾನಿಕರ, ನ್ಯಾಯವಾದ ಅಧಿಕಾರಗಳ ಸಂರಕ್ಷಣೆ ೭. ವ್ಯಾಪಾರದ ಭೇದಾಭೇದಗಳನ್ನು ಕ್ರಮಗೊಳಿಸುವುದು ೮. ಕಾದಿಟ್ಟುಕೊಂಡ ಶಾಖೆಗಳ ಸುವ್ಯವಸ್ಥೆ.

ಈಗಿನ ೯ ಪ್ರಾಂತಗಳಲ್ಲದೆ ಸಿಂಧ ಮತ್ತು ಓರಿಸಾ ಎಂಬೆರಡು ಪ್ರಾಂತಗಳು ಹೆಚ್ಚಾಗುವವು. ಗವ್ಹರ್ನರ್ ಜನರಲ್ಲರವರಿಗೆ ಹೆಚ್ಚಿನ ಅಧಿಕಾರವಿರುವಂತೆಯೇ ಗವ್ಹರ್ನರರಿಗೂ ಇರುವುದು. ಆ ಅಧಿಕಾರವನ್ನು ಅವರು ತಮ್ಮ ಪ್ರಾಂತಗಳ ಶಾಂತತಾ ರಕ್ಷಣೆಗಾಗಿ ಮಾತ್ರ ವಿನಿಯೋಗಿಸುವರು. ಬ್ರಿಟಿಶ್ ಹಿಂದುಸ್ಥಾನದ ಜನಸಂಖ್ಯೆಯಲ್ಲಿ ೧೦೦ಕ್ಕೆ ೧೪ರ ಪ್ರಮಾಣದಷ್ಟು ಜನಗಳಿಗೆ ರಾಜ್ಯಭಾರದಲ್ಲಿ ತಮ್ಮ ಮತವನ್ನು ಕೊಡಲು ಅಧಿಕಾರ ದೊರೆಯುವುದು.

ವರ್ಹಾಡ ಪ್ರಾಂತದ ವಿಷಯವಾಗಿ ನಿಜಾಮ ಸಾಹೇಬರ ಸಂಗಡ ಇನ್ನೂ ಆಲೋಚನೆ ನಡೆದಿರುವುದರಿಂದ ಆ ಪ್ರಾಂತದ ಸುಧಾರಣೆಯನ್ನು ಕುರಿತು ವಿವೇಚಿಸಿಲ್ಲ.

ಶೀಖ, ಮುಸಲ್ಮಾನ, ಹಿಂದಿಕ್ರಿಶ್ಚಿಯನ್, ಆಂಗ್ಲೊ ಇಂಡಿಯನ್, ಯುರೋಪಿಯನ್ ಈ ಜಾತಿಯವರಿಗೆ ಜಾತಿ ವಿಶಿಷ್ಟವಾದ ಪ್ರತ್ಯೇಕ ಪ್ರಾತಿನಿಧ್ಯವು ಆದಿಜನರಿಗೆ ಪುಣೆಯ ಒಪ್ಪಂದದಂತೆ ಪ್ರಾತಿನಿಧ್ಯವು ದೊರೆಯುವುವು. ಸಂಯುಕ್ತ ಆಸಂಬ್ಲಿಯ ಮೂರನೆಯ ಒಂದು ಭಾಗದಷ್ಟು ಪ್ರತಿನಿಧಿಗಳು ಮುಸಲ್ಮಾನರಿರುವರು.

ಮುಂಬಯಿ ಪ್ರಾಂತಿಕ ಅಸೆಂಬ್ಲಿಯಲ್ಲಿ ೧೭೫ ಜನ ಪ್ರತಿನಿಧಿಗಳಿರುವರು. ಅವರಲ್ಲಿ ೧೫ ಜನರು ಆದಿಜನರಿರುವರು.

ಭೂಕಂದಾಯ, ಅಬಕಾರಿ, ಸ್ಟ್ಯಾಂಪ್ಸ, ಮತ್ತು ಫಾರೆಸ್ಟ ಈ ಶಾಖೆಗಳ ಆದಾಯ ಪ್ರಾಂತಿಕ ಸರಕಾರಕ್ಕು ಇನ್ನುಳಿದ ಆಯತನಿರ್ಗತ ಪದಾರ್ಥಗಳ ಮತ್ತು ಉಪ್ಪಿನ ಮೇಲಿನ ಸುಂಕ, ರೇಲ್ವೆ, ಮೊದಲಾದ ಶಾಖೆಗಳ ಆದಾಯ ಮಧ್ಯವರ್ತಿ ಸರಕಾರಕ್ಕು ಸೇರಿದ್ದಾಗಿದೆ.

ಸಂಯುಕ್ತ ಆಸೆಂಬ್ಲಿಯಲ್ಲಿ ೨೫೦ ಪ್ರತಿನಿಧಿಗಳಿರುವರು. ಅವರಲ್ಲಿ ೧೯ ಆದಿ ಜನರು ೬ ಶೀಖರು ೮೨ ಮುಸಲ್ಮಾನರು ೮ ಹಿಂದೀ ಕ್ರಿಶ್ಚಿಯನ್‌ರು, ಆಂಗ್ಲೋ ಇಂಡಿಯನ್ ೪ ಯುರೋಪಿಯನ್ ೮ ಸ್ತ್ರೀಯರು ೯ ಈ ಪ್ರಕಾರ ಬೇರೆಬೇರೆ ಜಾತಿಯವರಿರುವರು.

ಶುಭ್ರ ಪತ್ರಿಕೆಯ ನಿಷೇಧ.

ಸರ್. ಚಿಮಣಲಾಲ ಶೆಟಲವಾಡರವರು ಈ ಶುಭ್ರ ಪತ್ರಿಕೆಯು ತುಂಬಾ ಅಸಮಾಧಾನಕರವಾದುದಾಗಿದೆಯೆಂದು ಇದನ್ನು ನಿಷೇಧಿಸಿದ್ದಾರೆ. ನ್ಯಾಶನಲ್‌ಕಾಲ್ ಎಂಬ ಪತ್ರಿಕೆಯು ಈ ಶುಭ್ರ ಪತ್ರಿಕೆಯನ್ನು ನಿಷೇಧಿಸಿ ಇದು ಹಿಂದುಸ್ಥಾನದಲ್ಲ ಹೊಸ ಚಟುವಟಿಕೆಯನ್ನುಂಟು ಮಾಡುವುದೆಂದು ಸೂಚಿಸಿದೆ. ಲಂಡನ್ನಿನ ಮಾರ್ನಿಂಗ್ ಪೋಸ್ಟ ಪತ್ರಿಕೆಯು ಇದು ಬಿಳಿಯ ಪತ್ರಿಕೆಯಲ್ಲ, ಕರಿಯ ಪತ್ರಿಕೆಯೆಂದು ಇದನ್ನು ನಿಷೇಧಿಸಿದೆ.

ಮಲಬಾರದ ಅಸ್ಪೃಶ್ಯತೆ.

ಪುಣೆಯಲ್ಲಿ "ಮಲಬಾರದಲ್ಲಿ ಅಸ್ಪೃಶ್ಯತೆ" ಎಂಬ ವಿಷಯದ ೀಲೆ ಶ್ರೀ ಗೋಪಾಳರಾವ ದೇವಧರ, ಕಾಕಾ ಕಾಲೇಲಕರ, ತ್ತು ದೇವಿದಾಸ ಗಾಂಧಿ ಇವರ ಭಾಷಣಗಳಾದವು. ಅದರ ುಖ್ಯಾಂಶವನ್ನು ಕೆಳಗೆ ಕೊಟ್ಟಿದೆ

ಶ್ರೀ ಗೋಪಾಳರಾವ ದೇವಧರ— "ಮಲಬಾರದಲ್ಲಿ ೧೦ ಲಕ್ಷ ುಸಲ್ಮಾನರೂ ೨೦ ಲಕ್ಷ ಹಿಂದುಗಳೂ ಇದ್ದಾರೆ. ಅಲ್ಲಿಯ ಜನ ಲ್ಲಿ ಅಂಧ ಶ್ರದ್ಧೆಯು ಒಹಳ. ಅಸ್ಪೃಶ್ಯರಿಗೆ ದೇವಾಲಯದ ದರ್ಶ ವು ಸಹ ಆಗಬಾರದೆಂದು ಉಚ್ಚ ವರ್ಣೀಯ ಹಿಂದುಗಳು ಅಪೇ ಸುತ್ತಿದ್ದಾರೆ. ಮಾಪಿಳ್ಳಾ ಜನರು ಹಿಂದುಗಳನ್ನು ಧರ್ಮಾಂತರ ಾಡುವುದೇ ತಮ್ಮ ಜೀವಿತದ ಕರ್ತವ್ಯವೆಂದು ತಿಳಿದಿದ್ದಾರೆ. ೧೯೩೧ ಯ ಇಸವಿಯಲ್ಲಿ ತ್ರಾವಣಕೋರ ಸಂಸ್ಥಾನದಲ್ಲಿ ೬೫೦೦೦ ಸಾವಿರ ನ ಕ್ರಿಶ್ಚಿಯನ್ನರಿದ್ದರು. ಈಗ ೩೩೦೦೦ ಸಾವಿರ ಜನರಿದ್ದಾರೆ. ಸ್ಮೃ ಸ್ಮೃತಿ ಏನೇ ಇರಲಿ, ವ್ಯವಹಾರಿಕ ಸ್ಮೃತಿಯ ಪ್ರಕಾರ ೋಡಿದರೆ ವಯೋಮಾನದ ಪ್ರಕಾರ ಸ್ಥಿತ್ಯಂತರವಾಗುವಂತೆಯೇ ಲಾಂತರದಂತೆ ಸ್ಥಿತ್ಯಂತರವಾಗಬೇಕು

ಶ್ರೀ ಕಾಕಾ ಕಾಲೇಲಕರರು— ದಕ್ಷಿಣದ ದೇವಾಲಯಗಳು ಹು ದೊಡ್ಡವು. ಅವುಗಳ ನೆರಳುಕೂಡಾ ಭೂಮಿಯಮೇಲೆ ಳುವುದಿಲ್ಲ. ಆದರೆ ಅಲ್ಲಿಯ ಜನರು ಬುರಿಕೆಹಾಕಿಕೊಂಡು ಅನ್ನ ದಿಸಿ ಉಣ್ಣುತ್ತಾರೆ. ಎಲ್ಲರೂ ರಾಜರೇ ಇರಲಿ ಇಲ್ಲವೆ ಎಲ್ಲರೂ ಲಾಮರೇ ಇರಲಿ. ಸಮಾನತೆಯು ನಮಗೆ ಬೇಕು. ಉಚ್ಚ ಚ ಭಾವವನ್ನು ತೆಗೆದುಹಾಕಬೇಕು. ಎಲ್ಲ ಮತದ ಜನರೂ ದೇ ಮನೆಯವರಂತೆಯೇ ಇರಬೇಕು. ಅಸ್ಪೃಶ್ಯರು ಹೋಗಿ ದ ಮೇಲೆ ದೇವಾಲಯವನ್ನು ಹತ್ತುಸಾರೆ ತೊಳೆಯಲಿ, ಆದರೆ ರಿಗೆ ಪ್ರವೇಶ ಮಾಡಿಸಲಿ. ನಾನು ನೀನೆಂಬ ಅಹಂಕಾರವನ್ನು ಟ್ಟರೆ ಅತ್ಯಂತ ಲಾಭವಾಗುವದು."

ಭಯಂಕರ ಭೂಕಂಪ!

೪೦೦೦ ಜನರಿಗೆ ಗಾಯ!

ಅಮೇರಿಕೆಯಲ್ಲಿರುವ ಕ್ಯಾಲಿಫೋರ್ನಿಯಾ ಭಾಗವಲ್ಲಿ ೧೦ನೆಯ ರೀಖಿನ ದಿವಸ ಸಾಯಂಕಾಲ ೫ ಘಂಟೆಯಿಂದ ಮರುದಿವಸ ಂಜಾನೆ ೬ ಘಂಟೆಯವರೆಗೆ ಒಂದರ ಹಿಂದೆ ಒಂದರಂತೆ ೨೩ ರೆ ಭೂಕಂಪಗಳಾದವು. ಈ ಅನರ್ಥದಲ್ಲಿ ೧೩೯ ಜನರು ಮರ ಕ್ಕೆ ಬಲಿಯಾದರು. ಮತ್ತು ೪೦೦೦ ಜನರಿಗೆ ಗಾಯವಾಯಿತು. ಂಗಬೀಚದ ಮೇಲಿರುವ ಮನೆಗಳೆಲ್ಲ ನೆಲಸಮವಾಗಿ ಭಯಂಕರ ಮುದ್ರ ತೆರೆಗಳ ಹೊಡತದಿಂದ ಸರ್ವನಾಶವಾಗಿವೆ. ಒಟ್ಟಿನ ೀಲೆ ೨೫೦೦೦೦೦೦ ಡಾಲರ್ಸ ಅಂದರೆ ಸುಮಾರು ೭ ಕೋಟಿ ಾಪಾಯಿಗಳ ಹಾನಿಯಾಗಿದೆ ಭಯಸೂಚಕ ಘಂಟೆಯನ್ನು ಒಂದೇ ಸನೆ ಬಾರಿಸುತ್ತಿದ್ದರು. ಮೋಟಾರ ಗಾಡಿಗಳಲ್ಲಿ ಕುಳಿತು ಜನರು ರಾಗಬೇಕೆನ್ನುವಷ್ಟರಲ್ಲಿಯೇ ಎಷ್ಟೋ ಜನರು ಗಾಯಹೊಂದಿ ರು. ಅಮೇರಿಕೆಯ ಪೂರ್ವದ ಅಧ್ಯಕ್ಷರಾದ ಹೂವರ ಇವರ ತ್ನಿಯವರು ಈ ಗಂಡಾಂತರದಲ್ಲಿ ಸಿಕ್ಕಿದ್ದಾರೆ. ಸದ್ಯದ ಅಧ್ಯಕ್ಷ ರುಝುವೆಲ್ಟರವರು ಜನರನ್ನುಳಿಸುವದಕ್ಕಾಗಿ ಎಲ್ಲ ಸೌಕರ್ಯಗಳ ವಸ್ಥೆ ಮಾಡಿದ್ದಾರೆ. ಲಾಸ ಏಂಜಲ್ಸ ಎಂಬ ಶಹರಕ್ಕೆ ಬೆಂಕಿ ತ್ತಿ ಆ ಭಾಗದಲ್ಲೆಲ್ಲಾ ಗಾಡಿಗಳು ಓಡಾಡದಂತಾಗಿದೆ, ಸಾವಿರಾರು ರು ನಿರಾಶ್ರಿತರಾಗಿ ಬೈಲಿನಲ್ಲಿಯೇ ಗೇಣುಬಟ್ಟೆಯಿಲ್ಲದೆ ಬಿದ್ದು ಳ್ಳುತ್ತಿದ್ದಾರೆ, ವಿಮಾನದ ಮೇಲಿಂದ ಬೆಂಕಿ ಹತ್ತಿದ ಭಾಗದಲ್ಲಿ ೀಡಲಾಗಿ ಹೆಣಗಳ ರಾಶಿರಾಶಿಗಳು ಬಿದ್ದಿರುವದು ಕಂಡುಬರು ವೆ. ಜಪಾನದ ಮೇಲೆಯೂ ಅಮೇರಿಕೆಯ ಮೇಲೆಯೂ ಮಹಾ ತಗಳು ಅದೇಕೆ ಕೋಪಗೊಂಡಿರುವವೋ?

ಯೋಗ್ಯಕಾಲದಲ್ಲಿ ಎಚ್ಚರಿಕೆ

ಗೋಕಾಕದಲ್ಲಿ ಸ್ವಾರ್ಥಪರನಾದ ಸನಾತನಿಯು ಈಗ ಕೂಡಿದ ಅಸೆಂಬ್ಲಿಯಲ್ಲಿ ಮಂದಿರ ಪ್ರವೇಶದ ಗೊತ್ತುವಳಿ ಪಾಸಾಗ ಬಾರದೆಂಬ ಬಗ್ಗೆ ಅರ್ಜಿಯನ್ನು ತಯಾರಿಸಿ ಅದರ ಮೇಲೆ ಊರೊಳಗಿನ ನಾಗರಿಕರ ಸಹಿಮಾಡಿಸುತ್ತಿದ್ದನು. ಸಮಾಜಸೇವಾಸಂಘದವರು ಆ ಸನಾತನಿಯ ಕೃತಿಯನ್ನು ಕಂಡುಹಿಡಿದು ಅದರ ಪ್ರತಿಕಾರಾರ್ಥ ಸಮಾಜದ ಮುಖಂಡರಾದ ಶ್ರೀ ಎಂ. ಬಿ. ಬಾಗಿ ಇವರು ಜನರ ಮೇಲೆ ಪರಿಣಾಮವಾಗುವ ಹಾಗೆ ಒಂದು ವಿನಂತಿಪತ್ರಿಕೆಯನ್ನು ತೆಗೆದು ಮಂದಿರಪ್ರವೇಶದ ವಿರುದ್ಧ ಸಹಿಮಾಡದಂತೆ ಕಟ್ಟುಮಾಡಿದರು. ಸಮಾಜಸಂಘದವರು ಮಂದಿರಪ್ರವೇಶಕ್ಕೆ ಅನುಕೂಲವಾಗಿ ಜನರ ಸಮ್ಮತಿಯನ್ನು ಪಡಿಯಹತ್ತಿದ್ದಾರೆ. ಕೆಲಸವು ಉತ್ಸಾಹದಿಂದ ನಡೆದಿರುತ್ತದೆ.

ಸ್ತುತ್ಯ ದೇಣಗಿ.

ಇಲ್ಲಿಯ ಪ್ರಸಿದ್ಧ ಶ್ರೀಮಂತರಾದ ಅಡಿವೆಪ್ಪಣ್ಣಾ ನೇಗಿನಹಾಳ ಇವರ ಚಿರಂಜೀವರ ಲಗ್ನ ಸಮಾರಂಭದಲ್ಲಿ ಇಲ್ಲಿಯ ಪ್ರಸಿದ್ಧ ಸುಧಾರಕರಾದ ಯಂ. ಬಿ. ಬಾಗಿಯವರು ವಧುವರರಿಗೆ ಮಂಗಲ ಪ್ರಸಂಗದಲ್ಲಿ ಒಂದು ರಾಟಿಯನ್ನೂ ಮತ್ತು ಕೈನೂಲಿನ ಖಾದಿಯ ಬಟ್ಟೆಯನ್ನೂ ಆಯಾರವಾಗಿ ಕೊಟ್ಟರು.

Shantinath Patrawali Gokak.

—ಮಾಸ್ಕೋ ಪಟ್ಟಣದಲ್ಲಿ ಮೆಟ್ರೊಪೊಲಿಟನ ವ್ಹಿಕರ್ಸ ಕಂಪನಿಯ-ನೌಕರರಾದ ನಾಲ್ಕು ಜನ ಆಂಗ್ಲೇಯರನ್ನು ರಶಿಯಾ ಸರಕಾರದವರು ಬಂಧಿಸಿದ್ದಾರೆ.

—ಜರ್ಮನಿಯಲ್ಲಿ ಹಿಂಡೆನ್ ಬರ್ಗ ಇವರು ಸ್ಥಾಪಿಸಿದ ಪ್ರಜಾಸತ್ತಾಕ ನಿಶಾನೆಯನ್ನು ತೆಗೆದುಹಾಕಿ ಹೇರ ಹಿಟ್ಲರ ಇವರು ಬಾದಶಹರ ನಿಶಾನೆಯನ್ನು ಸ್ಥಾಪಿಸಿದ್ದಾರೆ ಮತ್ತು ಅದರ ಸಂಗಡ ನಾಝಿ ಪಕ್ಷದ ಸಮಾನ ಯೋಗ್ಯತೆಯ ನಿಶಾನೆಯೂ ಏರಿಸಲ್ಪಟ್ಟಿದ್ದಿತು.

ಗೋಕಾಕ—ಇಲ್ಲಿಯ ನದಿಯ ನೀರು ಒಂದೇ ಸ್ಥಳದಲ್ಲಿ ನಿಂತು ಜನೋಪಯೋಗಕ್ಕೆ ದೂಷಿತವಾಗಿದ್ದವು. ಆ ನೀರು ಮುಂದೆ ಹರಿದುಹೋಗುವ್ರದರ ದೆಶೆಯಿಂದ ನಗರ ಸಂಸ್ಥೆಯ ಪ್ರಮುಖರಾದ ಶ್ರೀ ಪಾರೀಸಪ್ಪ ಡೊಂಗ್ರಿ ಇವರ ನೇತೃತ್ವದಲ್ಲಿ ಕಾಲುವೆಯನ್ನು ತೆಗೆಯಿಸಿ ನೀರು ಹರಿದುಹೋಗುವ ವ್ಯವಸ್ಥೆ ಮಾಡುತ್ತಲಿದ್ದಾರೆ. ಸ್ತುತ್ಯ.

—ಕಾಂಗ್ರೆಸದ ತಾತ್ಪುರ್ತಿಕ ಅಧ್ಯಕ್ಷರಾದ ಮಾಧವರಾವ ಅಣೆ ಇವರು ಯರವಡಾ ಕಾರಾಗೃಹದಲ್ಲಿ ಮಹಾತ್ಮಾಜಿ ಶ್ರೀ ವಲ್ಲಭಭಾಯಿ ಪಟೇಲ ಮೊದಲಾದವರನ್ನು ಕಾಣಲು ಅಪ್ಪಣೆ ದೊರೆಯಬೇಕೆಂದು ಸರಕಾರದವರನ್ನು ಕೇಳಿಕೊಳ್ಳಲು ಸರಕಾರದವರು ಅವರಿಗೆ ಅಪ್ಪಣೆಕೊಡಲಿಲ್ಲ,

—ವಿಜಾಪುರ ಜಿಲ್ಹೆಯ ಬಾಗೇವಾಡಿ ತಾಲೂಕ ಲೋಕಲ್ ಬೋರ್ಡಿನ ವ್ಹಾಯಿಸ ಪ್ರೆಸಿಡೆಂಟ ಸ್ಥಾನಕ್ಕೆ ಈ ಸಾರೆ ಚನ್ನಪ್ಪ ಸಮಗಾರ ಈತನನ್ನು ನೇಮಿಸಬೇಕೆಂದು ಗೊಳಸಂಗಿ ಸಾಹೇಬ ಮುರಿಶಿದ ಫೀರ ಜಹಾಗಿರದಾರ ಇವರು ಸೂಚನೆ ತಂದರು. ಇದಕ್ಕೆ ಶಿದ್ಧನಗೌಡಾ ಪಾಟೀಲ ಇವರು ಅನುಮೋದಿಸಲು ಅದು ಸರ್ವಾನುಮತದಿಂದ ಪಾಸಾಯಿತು.

ಚತುರ್ಥ
ಅಖಿಲಕರ್ನಾಟಕ ಹಿಂದೀ ಸಮ್ಮೇಳನ, ಮಂಗಳೂರು.

೧೯೩೩ನೆಯ ಎಪ್ರಿಲ್ ತಾ. ೮ ಮತ್ತು ೯ಕ್ಕೆ

ಅಧ್ಯಕ್ಷರು:—

ಮೈಸೂರ ವಿಶ್ವವಿದ್ಯಾಲಯದ ತತ್ವ ಶಾಸ್ತ್ರಜ್ಞರಾದ

ಪ್ರೊಫೆಸರ್ ಎ. ಆರ್. ವಾಡಿಯಾ ಎಂ, ಎ.

ಬಾರ್-ಅಟ್-ಲಾರವರು.

ಕರಪತ್ರ ೬.

ಅಖಿಲಕರ್ನಾಟಕ ಹಿಂದೀ ಪ್ರಚಾರ ಸಮ್ಮೇಳನದ ಚತುರ್ಥಾಧಿವೇಶನವನ್ನು ಬರುವ ಎಪ್ರಿಲ್ ತಾ. ೮ ಮತ್ತು ೯ ಕ್ಕೆ ಮಂಗಳೂರಲ್ಲಿ ಜರುಗಿಸಬೇಕೆಂದು ಸ್ವಾಗತ ಸಮಿತಿಯವರು ನಿಶ್ಚಯಿಸಿರುವರು. ಈ ಪರಿಷತ್ತಿನ ಪ್ರಥಮ ಅಧಿವೇಶನವು ೧೯೨೭ನೇ ಇಸವಿಯಲ್ಲಿ ಬೆಂಗಳೂರಲ್ಲಿ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಜರಗಿರುವುದೆಂಬುವು ಉಲ್ಲೇಖನೀಯವಾದುದಾಗಿದೆ. ಮೈಸೂರು ವಿಶ್ವವಿದ್ಯಾಲಯದ ಪ್ರಸಿದ್ಧ ತತ್ವ ಶಾಸ್ತ್ರಜ್ಞರೂ, ಹಿಂದಿಯ ಅನನ್ಯ ಪ್ರೇಮಿಗಳೂ ಆದ ಪ್ರೊ. ಎ. ಆರ್. ವಾಡಿಯಾರವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಜರಗುವುದು ನಮ್ಮ ಭಾಗ್ಯವೆನ್ನಬೇಕು. ಇದೇ ಸಮಯದಲ್ಲಿ ಜರಗುವ ಹಿಂದೀ ಪದವೀದಾನ ಸಮಾರಂಭ ಭಾಷಣವನ್ನು ಇರಾನಿನ ನಿವಾಸಿಗಳೂ, ಭಾರತದ ಪರಮಭಕ್ತರು ಆದ ಪ್ರೊ. ಆಗಾಮೊಹಮ್ಮದ ಅಬ್ಬಾಸ ಶೂಸ್ತ್ರಿ ಸಾಹೇಬರು ಮಾಡಲು ಒಪ್ಪಿರುವುದು ಅತ್ಯಂತಸಂತೋಷಾಸ್ಪದ ಸಂಗತಿಯಾಗಿದೆ.

ಈ ಸಮ್ಮೇಳನವು ಭಾಷಾ ಪ್ರಚಾರ ಕಾರ್ಯದ ದೃಷ್ಟಿಯಿಂದ ಅತ್ಯಂತ ಮಹತ್ವವುಳ್ಳದ್ದಾಗಿದೆ. ರಾಷ್ಟ್ರಭಾಷೆಗೆ ಅನುಗುಣವಾಗಿ ಹಿಂದಿಯು ಸಾರ್ವತ್ರಿಕ ಪ್ರಚಾರಕ್ಕೆ ಸಾಧನೋಪಾಯಗಳನ್ನು ಕಂಡುಹಿಡಿಯುವುದು ಪ್ರಕೃತ ಸಮ್ಮೇಳನದ ಉದ್ದೇಶವಾಗಿರುತ್ತದೆ.

ಸಮ್ಮೇಳನವನ್ನು ಕಾಲೋಚಿತವಾಗಿ ಯಶಸ್ವಿಗೊಳಿಸಲಿಕ್ಕೆ ಈ ಕೆಳಗಣ ಕಾರ್ಯಕ್ರಮಗಳು ನಿಶ್ಚಯಿಸಲ್ಪಟ್ಟಿರುವವು.

೧ ಅಖಿಲಕರ್ನಾಟಕ ಹಿಂದೀ ವಿದ್ಯಾರ್ಥಿಗಳ ವಾಕ್‌ಸ್ಪರ್ಧೆ,

೨ ಹಿಂದೀ ಪ್ರಚಾರ ಮತ್ತು ಹಿಂದೀ ಸಾಹಿತ್ಯಸಂಬಂಧ ನಿಬಂಧ ವಾಚನ.

೩ ಹಿಂದೀ ಭಾಷಣ ಸ್ಪರ್ಧೆ.

೪ ಹಿಂದೀ ಪುಸ್ತಕ ಪತ್ರಿಕೆ ಮತ್ತು ಹಿಂದೀ ಪ್ರಚಾರ ಸಂಬಂಧವಾದ ಚಿತ್ರಪಟ, ನಕ್ಷೆ ಮುಂತಾದವುಗಳ ಪ್ರದರ್ಶನ.

೫ ಹಿಂದೀ ನಾಟಕ.

೬ ಹಿಂದೀ ಪದವೀದಾನ ಸಮಾರಂಭ.

ಈ ಸಂದರ್ಭದಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ, ಮದ್ರಾಸ್ ಇವರು ದಕ್ಷಿಣಕನ್ನಡದಲ್ಲಿ ಮಾಡಿದ ಹಿಂದೀ ಕಾರ್ಯದ ಸ್ಮರಣಾರ್ಥವಾಗಿ ಹಾಗು ಮುಂದೆ ಇನ್ನಷ್ಟು ಪ್ರಬಲವಾಗಿ ಪ್ರಚಾರ ಕಾರ್ಯವನ್ನು ನಡೆಸುವಂತೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಗೆ ಒಂದು ನಿಧಿಯನ್ನು ಕೂಡಿಸಿ ಕೊಡಬೇಕೆಂದು ನಿಶ್ಚಯಿಸಲಾಗಿದೆ.

ದಕ್ಷಿಣ ಕನ್ನಡಿಗರು ಸ್ವಾಗತ ಸಮಿತಿಯ ಸದಸ್ಯರಾಗಿಯೂ ದ್ರವ್ಯ ಸಹಾಯದ ಮೂಲಕವಾಗಿಯೂ ಮತ್ತು ಇತರ ಎಲ್ಲಾ ವಿಧಗಳಿಂದಲೂ ತಮ್ಮ ನೆರವಿತ್ತು ಈ ರಾಷ್ಟ್ರೀಯ ಮಹಾಕಾರ್ಯವನ್ನು ಸಫಲಗೊಳಿಸುವರಾಗಿ ಆಶಿಸುತ್ತೇವೆ.

ಸಹಾಯ ದ್ರವ್ಯವನ್ನು ಶ್ರೀಮತಿ ಎಸ್. ಆರ್. ಪ್ರೊಂಜ, ಬಿ. ಎ., ಕೋಶಾಧಿಕಾರಿ, ಕೊಡಿಯಾಲಬೈಲ್, ಇವರ ವಿಳಾಸಕ್ಕೆ ಕಳುಹಿಸುವುದು.

ಪೋಷಕರು:—ರೂ. ೨೫. ಯಾ ಇದಕ್ಕೆ ಮಿಕ್ಕಿ ದ್ರವ್ಯ ಸಹಾಯ ಮಾಡುವವರು

ಸ್ವಾಗತ ಸಮಿತಿಯ ಸದಸ್ಯರು,

೧ನೇ ತರಗತಿ ರೂ. ೧೦. ೨ನೇ ತರಗತಿ ರೂ. ೫. ೩ನೇ ತರಗತಿ ರೂ. ೨. ಪ್ರತಿನಿಧಿಪಾಸಲು ರೂ. ೧.

ಇದಕ್ಕೆ ಪೂರ್ವದಲ್ಲಿ ದ್ರವ್ಯ ಸಹಾಯ ಮಾಡಿದವರು ಹಾಗು ಟಿಕೇಟುಪಡಕೊಂಡವರು ಕಾರ್ಯದರ್ಶಿ, ಸ್ವಾಗತ ಮಂಡಳಿ ಕಚೇರಿ, ಹಿಂದೀ ಸಮ್ಮೇಳನ, ಕೊಡಿಯಾಲಬೈಲು, ಮಂಗಳೂರು, ಇವರಿಗೆ ಬರೆದುಕೊಂಡಲ್ಲಿ ಪ್ರವೇಶಪತ್ರ ಕಳುಹಿಸಲಾಗುವುದು.

ಸ್ವಾ. ಮಂ. ಕಚೇರಿ.
ಕೊಡಿಯಾಲಬೈಲ್, ಮಂಗಳೂರು.
ತಾ. ೮-೩-೧೯೩೩.

ಶಾಂಭವಿ ಆರ್. ಪ್ರೊಂಜ,
ಕೋಶಾಧಿಕಾರಿ.
ಎನ್. ಲಲಿತಾಬಾಯಿ ಸುಬ್ಬರಾವ್,
ಸ್ವಾಗತಾಧ್ಯಕ್ಷೆ.

ಸೀತಾಬಾಯಿ ರಮಾನಂದರಾವ್
ಬಿ. ಕೆ. ಭಂಡಾರಿ
ಯಂ. ರಾಮರಾವ್,
ಯಸ್. ಬಿ. ಪಿ, ರೆಬೆಲ್ಲೋ
ಕೆ. ರಾಘವಾಚಾರ್
} ಕಾರ್ಯದರ್ಶಿಗಳು.

ಕನ್ಯೆ ಬೇಕಾಗಿದೆ.

೧. ಕನ್ಯೆಯ ತಾಯಿತಂದೆಗಳು ಸತ್ಪ್ರವರ್ತಕರಾಗಿರಬೇಕು. ೨. ಕನ್ಯೆಯ ವಯಸ್ಸು ೧೪ ಅಥವಾ ೧೫ ಇದ್ದು ಶಾರೀರಿಕ ಸ್ಥಿತಿ ನೆಟ್ಟಗಿರಬೇಕು. ೩. ಕನ್ಯೆಯು ಶಿಕ್ಷಣ ಪಡೆಯದಿದ್ದರೂ ಚಿಂತೆಯಿಲ್ಲ. ಶರಣರ ವಚನಗಳನ್ನು ಸ್ವಲ್ಪಮಟ್ಟಿಗಾದರೂ ಕಲಿತಿರಬೇಕು. ೪. ವರನ ವಯಸ್ಸು ೨೮ ವಿದ್ಯಾವಂತನು, ವೀರಶೈವನು, ದೀಕ್ಷಾಬಳಿಕೆ, ವಾರ್ಷಿಕ ಉತ್ಪನ್ನ ಏಳುನೂರು ರೂಪಾಯಿಗಳು. ಮೊದಲನೇ ಲಗ್ನ. ೫. ವೀರಶೈವರ ಆವ ಪಂಗಡದವರಾದರೂ ಪ್ರಯತ್ನಿಸಬಹುದು. ೬. ಪಾಲಕರು ಕೆಳಗಿನ ಪತ್ತೆಗೆ ತಿಳಿಸಬೇಕು. ಶಕ್ಯವಿದ್ದರೆ ಕನ್ಯೆಯ ಫೋಟೋ ಕಳಿಸಬೇಕು.

ಪತ್ತೆ—**ಗಾಳಿ ಶಂಕ್ರಪ್ಪಾ ಉಪಾಧ್ಯಾಯ ಮಿಡ್ಲಸ್ಕೂಲ್**
ಪೋ. ನಾರಾಯಣಪೇಟೆ. ನಿಜಾಂ ಸಂಸ್ಥಾನ
ತಾ. ಮಕ್ತಲಿ ಜಿ. ಮಹಾಬೂಬನಗರ.

—ರಶಿಯಾ ದೇಶದಲ್ಲಿ ಸೋವ್ಹಿಯೆಟ ಒಕ್ಕಲತನದ ಪದ್ಧತಿಯ ವಿರುದ್ಧವಾಗಿಯೂ ಮತ್ತು ಸದ್ಯದ ರಾಜ್ಯಪದ್ಧತಿಯ ವಿರುದ್ಧವಾಗಿಯೂ ಚಟುವಟಿಕೆಯನ್ನು ಮಾಡುತ್ತಿರುವ ಜಮೀನದಾರರಲ್ಲಿ ೩೫ ಗೃಹಸ್ಥರನ್ನು ಗುಂಡುಹಾಕಿ ಕೊಂದುಹಾಕಿದರು. ಮತ್ತು ೨೨ ಜನರಿಗೆ ೧೦ ವರ್ಷದಂತೆ ಬೇರೆ ೧೮ ಜನರಿಗೆ ೮ ವರ್ಷದಂತೆ ಕಾರಾ

ಶರಣಸಂದೇಶ

ॐ

शिवयामृतमश्नुते

ಶಾ. ಶ. ೧೮೫೪ ನೆಯ ಫಾಲ್ಗುಣ ಬ. ೯ ಸೋಮವಾರ.

ವರ್ಣಗಳ ಯೋಜನೆ.

ಬ್ರಾಹ್ಮಣಾದಿ ಚಾತುರ್ವರ್ಣಗಳು ಹಿಂದು ಧರ್ಮದಲ್ಲಿ ಮಾತ್ರ ಇವೆಯಷ್ಟೆ. ಇವುಗಳ ಕಲ್ಪನೆಯು ಮೊದಲು ಆರ್ಯಜನಗಳಲ್ಲುಂಟಾಯಿತು. ಅವರು ವೇದಗಳಲ್ಲಿ ತಮ್ಮ ಈ ವರ್ಣವಿಚಾರಗಳನ್ನು ಈ ಪ್ರಕಾರ ತಿಳಿಸಿದರು.

"ಪರಮಾತ್ಮನ ಮುಖದಿಂದ ಬ್ರಾಹ್ಮಣರು ಬಾಹುಗಳಿಂದ ಕ್ಷತ್ರಿಯರು ತೊಡೆಗಳಿಂದ ವೈಶ್ಯರು ಮತ್ತು ಪಾದಗಳಿಂದ ಶೂದ್ರರು ಉಂಟಾದರು."

ಈ ವಿವೇಚನೆಯಿಂದ ದೇಹದಲ್ಲಿ ಮುಖವು ಹೇಗೆ ಹೆಚ್ಚಿನದಾಗಿದೆಯೋ ಹಾಗೆಯೇ ಜನಾಂಗದಲ್ಲಿ ಬ್ರಾಹ್ಮಣರು ಹೆಚ್ಚಿನವರೆಂತಲೂ ಪಾದಗಳು ಕೀಳಾದಂತೆ ಶೂದ್ರರು ಕಡಿಮೆಯವರೆಂತಲೂ ಅನೇಕರು ತಿಳಿದುಕೊಂಡರು. ಇದರಿಂದ ಜನಾಂಗದಲ್ಲಿ ಮೇಲುಕೀಳುಗಳೆಂಬ ಘಾತಕ ಕಲ್ಪನೆಯು ಪ್ರಸಾರವಾಯಿತು.

ಮತ್ತು ಈ ಚಾತುರ್ವರ್ಣಗಳು ಜನ್ಮದಿಂದಲೇ ಮನುಷ್ಯನಿಗೆ ಪ್ರಾಪ್ತವಾಗುತ್ತವೆಂತಲೂ ಬಹುಜನರು ತಿಳಿದುಕೊಂಡರು. ಆ ವರ್ಣಕಲ್ಪನೆಯೇ ಈಗಿನ ಹಿಂದು ಜನಾಂಗದ ಅಧೋಗತಿಗೆ ಮೂಲವಾಗಿದೆ.

ಆರ್ಯಜನಗಳ ಈ ವಿವೇಚನೆಯ ಅರ್ಥವೇ ಬೇರೆಯೆಂತಲೂ ಜನಾಂಗದಲ್ಲಿ ಸುಖಶಾಂತಿಗಳುಂಟಾಗಬೇಕಾದರೆ ಕೆಲವರು ಜ್ಞಾನಬೋಧಕರೂ ಕೆಲವರು ಶೂರರೂ ಕೆಲವರು-ಒಕ್ಕಲತನ ವ್ಯಾಪಾರಾದಿಗಳನ್ನು ಮಾಡುವವರೂ ಮತ್ತು ಕೆಲವರು ಈ ಎಲ್ಲ ಜನಗಳ ಸೇವೆ ಮಾಡುವವರೂ ಶ್ರಮವಿಭಾಗದ ತತ್ವವನ್ನನುಸರಿಸಿ ಇರಲೇಬೇಕಾಗಿರುವುದರಿಂದ ಈ ಚಾತುರ್ವರ್ಣಗಳೇರ್ಪಟ್ಟಿವೆಯೇ ವಿನಾ ಇವುಗಳಲ್ಲಿ ಒಂದು ಹೆಚ್ಚಾಗಲಿ ಇನ್ನೊಂದು ಕಡಿಮೆಯಾಗಲಿ ಇಲ್ಲವೆಂತಲೂ ಕೆಲವರು ಹೇಳಲಾರಂಭಿಸಿದರು.

ವ್ಯಕ್ತಿಯ ಗುಣಕರ್ಮ ಸ್ವಭಾವಗಳ ಮೇಲಿಂದ ಈ ವರ್ಣಗಳು ಪರಮಾತ್ಮನಿಂದಲೇ ಉಂಟಾಗಿವೆಯೆಂದು ಭಗವದ್ಗೀತಾದಿ ಗ್ರಂಥಗಳಲ್ಲಿ ವಿವೇಚನೆಯಾಯಿತು. ಇದೇ ಯುಕ್ತವೆಂದು ಇತ್ತೀಚಿಗೆ ಬಹು ಜನಗಳು ಹೇಳಲಾರಂಭಿಸಿದರು.

ಈ ಪ್ರಕಾರ ಭಿನ್ನ ಭಿನ್ನ ವಿವೇಚನೆಗಳಿಗೆ ವರ್ಣಗಳು ಅವಶ್ಯಕವೆಂಬ ತಪ್ಪು ತಿಳುವಳಿಕೆಯೇ ಕಾರಣವಾಗಿದೆ. ವರ್ಣಗಳು ನಿರುಪಯೋಗವಾಗಿವೆಯೆಂದು ಹೇಳಿದರೆ ತಾವು ವೇದಬಾಹ್ಯರಾಗುತ್ತೇವೆಂದೇ ಬಹುಜನರು ತಿಳಿದಿದ್ದಾರೆ. ಹಿಂದು ಧರ್ಮಕ್ಕೆ ಈ ವಿಧವಾದ ವರ್ಣಗಳೇ ಪ್ರಾಣಸ್ವರೂಪವಾಗಿವೆಯೆಂಬ ತಪ್ಪು ತಿಳುವಳಿಕೆಯು ಕೂಡಾ ಬಹುಜನಗಳಲ್ಲಿದೆ.

ಈ ಚಾತುರ್ವರ್ಣಗಳ ದುರುಪಯೋಗವಾಗುತ್ತದೆಂಬುದು ಬುದ್ಧ ದೇವನಿಗೆ ತೋರಿತು. ಆದುದರಿಂದಲೇ ಹಿಂದುಗಳ ದಶಾವತಾರಗಳಲ್ಲಿ ವಿಷ್ಣುವಿನ ನವನೆಯ ಅವತಾರವೆಂದು ತಿಳಿಯುವ ಬುದ್ಧ ಭಗವಾನನು ವರ್ಣಗಳನ್ನು ತೆಗೆದು ಹಾಕಿದನು

ಅನಂತರ ಶ್ರೀ ಶಂಕರಾಚಾರ್ಯರೇ ಮೊದಲಾದವರು ಬುದ್ಧ ಭಗವಾನನ ಆ ದಿವ್ಯ ಮಾರ್ಗವನ್ನೇ ಅನುಸರಿಸಿದ್ದರೆ ಹಿಂದು ಧರ್ಮಕ್ಕೆ ಈಗಿನ ಶೋಚನೀಯ ಸ್ಥಿತಿಯು ಬರುತ್ತಿರಲಿಲ್ಲ. ವರ್ಣಗಳ ತಪ್ಪು ತಿಳುವಳಿಕೆಯನ್ನು ಪುನಃ ಈ ಆಚಾರ್ಯರು ಉಂಟು ಮಾಡಿದುದರಿಂದ ಬಸವಮಹಾನುಭಾವನು ವರ್ಣಗಳನ್ನು ತೆಗೆದು ಹಾಕಿ ಹಿಂದು ಧರ್ಮವನ್ನು ಶುದ್ಧಗೊಳಿಸಲು ಪ್ರಯತ್ನಿಸಿದನು ಅನಂತರ ಕೂಡಾ ಹಿಂದು ಧರ್ಮ ಸುಧಾರಕರು ವರ್ಣಗಳ ಅನರ್ಥವನ್ನರಿತುಕೊಳ್ಳಲಿಲ್ಲ.

ಈಗ ಮಹಾತ್ಮಾ ಗಾಂಧಿಯವರು ವರ್ಣಗಳ ಸ್ವರೂಪವನ್ನೆ ಬೇರೆ ಮಾಡಿ ಹಿಂದು ಧರ್ಮಕ್ಕೆ ಶೀಲಬಲಗಳನ್ನುಂಟುಮಾಡಲು ಪ್ರಯತ್ನಿಸುತ್ತಿದ್ದಾರೆ.

ಒಂದು ವ್ಯಕ್ತಿಯು ಸಂಪೂರ್ಣವಾದ ಸುಸ್ಥಿತಿಯಲ್ಲಿರಬೇಕಾದರೆ ಈ ನಾಲ್ಕು ವರ್ಣಗಳೂ ಆತನಲ್ಲಿರಲೇಬೇಕು. ಪ್ರತಿಯೊಂದು ವ್ಯಕ್ತಿಯೂ ಚಾತುರ್ವರ್ಣ ವಿಶಿಷ್ಟನಾಗಬೇಕು. ಒಂದು ವ್ಯಕ್ತಿಗೆ ಮುಖ, ಬಾಹು, ತೊಡೆ, ಪಾದಗಳು ಹೇಗೆ ಅವಶ್ಯಕವಾದ ಮುಖ್ಯಾಂಗಗಳಾಗಿವೆಯೋ ಇಷ್ಟೇ ಅಲ್ಲ; ಇವುಗಳೆಲ್ಲಾ ಇದ್ದರೇನೆ ಆತನು ಹೇಗೆ ಸಂಪೂರ್ಣ ಮನುಷ್ಯನಾಗುತ್ತಾನೆಯೋ ಹಾಗೆಯೇ ಒಂದು ವ್ಯಕ್ತಿಯಲ್ಲಿ ಜ್ಞಾನ, ಶೂರತ್ವ, ದ್ರವ್ಯಾರ್ಜನೆಯ ಉದ್ಯೋಗ ಮತ್ತು ಸೇವಾ ಧರ್ಮ ಈ ನಾಲ್ಕು ಗುಣಗಳು ಇದ್ದೇ ಇರಬೇಕು.

ವೇದದಲ್ಲಿ ಹೇಳಿದ ಚಾತುರ್ವರ್ಣಗಳ ವಿವೇಚನೆಯು ಇದೆ ಪ್ರಕಾರವೆಂದು ನಾವು ತಿಳಿದುಕೊಳ್ಳಬೇಕು. ನಾವು ಅಜ್ಞರಾಗಿದ್ದು ಅನ್ಯರು ನಮಗೆ ಬುದ್ಧಿಯನ್ನು ಹೇಳಬೇಕೆಂದು ನಾವು ದುರ್ಬಲರಾಗಿದ್ದು ಅನ್ಯರು ನಮ್ಮನ್ನು ರಕ್ಷಿಸಬೇಕೆಂದು ನಾವು ನಿರುದ್ಯೋಗಿಗಳೂ ದರಿದ್ರರೂ ಆಗಿದ್ದು ಅನ್ಯರು ನಮ್ಮನ್ನು ಪೋಷಣೆ ಮಾಡಬೇಕೆಂದು ತಿಳಿಯುವುದು ಅಹಿತಕರವಲ್ಲವೇ?

ಈ ಶ್ರಮವಿಭಾಗಗಳಾಗಲಿ ಅಥವಾ ಗುಣಕರ್ಮಗಳಾಗಲಿ ಬೇರೆಬೇರೆ ಸಮೂಹಕ್ಕೆ ಅಥವಾ ವರ್ಗಕ್ಕೆ ಸಂಬಂಧಪಟ್ಟವುಗಳಲ್ಲ ಜಗತ್ತಿನಲ್ಲಿ ಬೇರೆ ಪ್ರಾಣಿಗಳು ಕೂಡಾ ಹೀಗೆ ವರ್ತಿಸುವುದಿಲ್ಲ. ಈ ಎಲ್ಲ ಗುಣಕರ್ಮಗಳಲ್ಲಿ ಪ್ರತಿಯೊಂದು ವ್ಯಕ್ತಿಯೂ ಪ್ರವೀಣವಾಗಿರಲೇ ಬೇಕು. ಈ ನಾಲ್ಕು ವಿಧಗಳಲ್ಲಿ ಯಾವ ವ್ಯಕ್ತಿಯಲ್ಲಿ ಎಷ್ಟು ಏಕೀಭವಿಸಿರುತ್ತವೆಯೋ ಅಷ್ಟು ಆ ವ್ಯಕ್ತಿಯ ಸುಖಶಾಂತಿಗಳು ಹೆಚ್ಚುತ್ತಲಿವೆ.

ಆದಕಾರಣ ಈಗಿರತಕ್ಕ ಚಾತುರ್ವರ್ಣಗಳ ಎಲ್ಲ ಘಾತಕ ಪದ್ಧತಿಗಳನ್ನು ತೆಗೆದುಹಾಕಿ ಪ್ರತಿಯೊಂದು ವ್ಯಕ್ತಿಯೂ ಬುದ್ಧಿಬಲ, ದೇಹಬಲ, ದ್ರವ್ಯಾರ್ಜನೆಯ ಶಕ್ತಿ ಸೇವಾಧರ್ಮಗಳನ್ನು ಹೊಂದಲು ಪ್ರಯತ್ನಿಸಬೇಕು. ಇದೇ ಚಾತುರ್ವರ್ಣಗಳ ಯೋಜನೆಯು. ಹೀಗಾದಾಗಲೇ ಹಿಂದು ಧರ್ಮಕ್ಕೆ ಜೀವಕಳೆ ಬರುತ್ತದೆ ಆಗಲೇ ಇದರ ಘನತೆಯುಳಿಯುವುದು. ಈಗ ಬಹು ಜನರು ತಿಳಿದಂತೆ ಜನ್ಮದಿಂದಾಗಲಿ ಅಥವಾ ಗುಣಕರ್ಮಗಳಿಂದಾಗಲಿ ವರ್ಣಗಳು ಒಂದೊಂದು ಬೇರೇಬೇರೆ ವರ್ಗಗಳನ್ನುಂಟುಮಾಡಿದರೆ ಮೇಲು ಕೀಳುಗಳ ವಿಷವು ಈ ಹಿಂದು ಧರ್ಮದಲ್ಲುಳಿದು ಇದು ದಿನೇದಿನೆ ಕ್ಷೀಣವಾಗಿ ನಾಮಶೇಷವಾಗುವುದರಲ್ಲಿ ಸಂದೇಹವಿಲ್ಲ.

ಆದಕಾರಣ ಪ್ರತಿಯೊಂದು ವ್ಯಕ್ತಿಯೂ ಚಾತುರ್ವರ್ಣ ವಿಶಿಷ್ಟವಾಗಲು ಈಗಲಾದರೂ ಪ್ರಯತ್ನಿಸಬಾರದೇ?

ಸ್ಫುಟ ಸೂಚನೆ.

ರಾಜಕೀಯ ಸುಧಾರಣಾ ಸಂಘ.

ಹಿಂದುಸ್ಥಾನದ ರಾಜಕೀಯ ಸುಧಾರಣೆಯನ್ನು ಗೊತ್ತುಪಡಿಸಲು ಏರ್ಪಡುವ ಜಾಯಿಂಟ್ ಸಿಲೆಕ್ಟ ಕಮೀಟಿಯ ಸಂಬಂಧವಾಗಿ ಈ ಪ್ರಕಾರ ಪ್ರಕಟವಾಗಿದೆ.

ಪಾರ್ಲಿಮೆಂಟಿನ ಜಾಯಿಂಟ್ ಸಿಲೆಕ್ಟ ಕಮೀಟಿಗೆ ಲಾರ್ಡ ಸಾಂಕಿಯವರು ಅಧ್ಯಕ್ಷರಾಗುವರು. ಈ ರಾಜಕೀಯ ಸುಧಾರಣಾ ಸಂಘದಲ್ಲಿ ಪಾರ್ಲಿಮೆಂಟಿನಿಂದ ೨೪ ಜನ ಸಭಾಸದರಿರುವರು. ಅದರಲ್ಲಿ ೧೨ ಜನರು ಕಾಮನ್ಸ ಸಭೆಯಿಂದಲೂ ೧೨ ಜನರು ಲಾರ್ಡ್ಸ ಸಭೆಯಿಂದಲೂ ಆರಿಸಲ್ಪಟ್ಟವರಿರುವರು.

ಈ ಸಂಘದಲ್ಲಿ ಹಿಂದುಸ್ಥಾನದ ೧೮ ಸಭಾಸದರಿರುವರು. ಅದರಲ್ಲಿ ೧೧ ಜನರು ಬ್ರಿಟಿಶ್ ಹಿಂದುಸ್ಥಾನದಿಂದಲೂ ೭ ಜನರು ಸಂಸ್ಥಾನಗಳಿಂದಲೂ ಸಭಾಸದರಿರುವರು.

ಈ ಸಂಘದ ಕಾರ್ಯ ತೃಪ್ತಿಕರವಾಗಿ ಜರುಗಬೇಕಾದರೆ ಮ. ಗಾಂಧಿಯವರನ್ನು ಬಿಡುವುದು ಅಗತ್ಯವೆಂದು ಡಾ. ಸಪ್ರೂರವರು ಬಹಳವಾಗಿ ಒತ್ತಾಯದಿಂದ ಸರಕಾರಕ್ಕೆ ಸೂಚಿಸುತ್ತಿದ್ದಾರೆ. ಸರಕಾರವು ತನ್ನ ಈಗಿನ ವಿಚಾರ ಸರಣಿಯನ್ನು ತಿದ್ದಿಕೊಳ್ಳದಿದ್ದರೆ ಈ ಸಂಘದಲ್ಲಿ ಇವರು ಸೇರಲಿಕ್ಕಿಲವೆಂತಲೂ ಕೆಲವರು ಸೂಚಿಸಿದ್ದಾರೆ

ಸರಕಾ[illegible] ಸಿಲೆಕ್ಟ ಕಮೀಟಿಯ ಕಾರ್ಯ ಮುಗಿಯುವವರೆಗೆ ಎಂದರೆ ಬರುವ ಅಗಸ್ಟ ತಿಂಗಳ ಕೊನೆಯವರೆಗೆ ಗಾಂಧೀಜಿಯವರನ್ನು ಬಿಡುವಂತೆ ಕಾಣುವುದಿಲ್ಲ.

ಸರಕಾರದವರು ರಾಷ್ಟ್ರೀಯ ಸಭೆಯ ಪ್ರಮುಖರ ಸಲಹೆ ಸಹಾಯಗಳಿಂದಲೇ ನೂತನ ಸುಧಾರಣೆಯನ್ನು ಮಾಡುವುದು ಕ್ಷೇಮಕರವಾಗಿದೆ.

ಬಂಗಾಲ ಸರಕಾರದ ಹೊಸ ಅಪ್ಪಣೆ.

ರಾಜಕೀಯ ಕ್ರಾಂತಿಕಾರಕರು ಬಂಗಾಲ ಪ್ರಾಂತದಲ್ಲಿ ವಿಶೇಷವಾದ ಅನರ್ಥವನ್ನುಂಟುಮಾಡುತ್ತಿದ್ದಾರಷ್ಟೆ. ಇವರ ಈ ಅನ್ಯಾಯವಾದ ಕ್ರೂರ ಕೃತ್ಯಗಳನ್ನು ನಿಲ್ಲಿಸಲು ಸರಕಾರವು ಕೂಡಾ ಬೆರೆ ಅಪ್ಪಣೆಗಳನ್ನು ಅನಿವಾರ್ಯದಿಂದ ಮಾಡುತ್ತಲಿದೆ.

ಕ್ರಾಂತಿಕಾರಕರು ಬೇರೆಬೇರೆ ಉಡುಪುಗಳನ್ನು ಹಾಕಿಕೊಂಡು ಜನಗಳಿಗೆ ಮೋಸಗೊಳಿಸಿ ಕೊಲೆಸುಲಿಗೆ ಮೊದಲಾದ ಕ್ರೂರ ಕೃತ್ಯಗಳನ್ನು ಮಾಡುತ್ತಿದ್ದಾರಷ್ಟೆ. ಇದನ್ನು ತಡೆಯಲು ಜನಗಳ ಉಡುಪನ್ನು ಕೂಡಾ ಕ್ರಮ ಪಡಿಸುವ ಅಪ್ಪಣೆಯನ್ನು ಸರಕಾರವು ಮಾಡಬೇಕಾಗುವ ಪ್ರಸಂಗ ಬಂದಿತು. ಆದುದರಿಂದ ಈ ಪ್ರಕಾರ ಅಪ್ಪಣೆಯಾಗಿದೆ.

“ಪ್ರತಿಯೊಂದು ಜಾತಿಯವರು ತಮ್ಮತಮ್ಮ ಜಾತಿಪದ್ಧತಿಗನುಸಾರವಾದ ಉಡುಪನ್ನೇ ಧರಿಸಬೇಕು. ಮತ್ತು ಸ್ತ್ರೀಯರು ಪುರುಷರು ತಮ್ಮತಮ್ಮ ಉಡುಪುಗಳನ್ನೇ ಹಾಕಿಕೊಳ್ಳಬೇಕಲ್ಲದೆ ಸ್ತ್ರೀಯರು ಪುರುಷರಂತೆಯೂ ಪುರುಷರು ಸ್ತ್ರೀಯರಂತೆಯೂ ಉಡುಪಗಳನ್ನು ಹಾಕಿಕೊಳ್ಳಬಾರದು. ಈ ಅಪ್ಪಣೆಯನ್ನು ಮೀರುವವರು ಆರು ತಿಂಗಳುಗಳ ಶಿಕ್ಷೆ ಅಥವಾ ಅರ್ಥ ದಂಡಕ್ಕೆ ಗುರಿಯಾಗುವರು.”

ಈ ಅಪ್ಪಣೆಯು ವ್ಯಕ್ತಿ ಸ್ವಾತಂತ್ರ್ಯಕ್ಕೆ ನ್ಯಾಯವಾದ ಪ್ರತಿಬಂಧವನ್ನೇನೋ ಉಂಟುಮಾಡುತ್ತದೆ. ಅನೇಕರಿಗೆ ವೃಥಾ ತೊಂದರೆಯು ಕೂಡಾ ಪೋಲೀಸರಿಂದ ಸಂಭವಿಸಬಹುದು. ಆದರೆ ಇವುಗಳನ್ನೆಲ್ಲಾ ಅಲ್ಲಿಯ ನಾಗರಿಕರು ಅನುಭವಿಸಲೇ ಬೇಕಾಗಿದೆ. ಈ ಅನ್ಯಾಯದ ಅಪ್ಪಣೆಗೆ ಸರಕಾರವು ಹೊಣೆಯಲ್ಲ. ಕ್ರಾಂತಿಕಾರಕರೇ ಹೊಣೆಗಾರರು. ಅವರ ಕ್ರೂರ ಕೃತ್ಯಗಳಿಂದಲೇ ಸರಕಾರವು ಈ ಪ್ರಕಾರ ಮಾಡಿದೆ. ಈಗಲಾದರೂ ಕ್ರಾಂತಿಕಾರಕರು ತಮ್ಮ ದೇಶಬಾಂಧವರಿಗಾಗುವ ತೊಂದರೆಗಳನ್ನು ಲಕ್ಷಿಸಿ ತಮ್ಮ ಅನ್ಯಾಯವಾದ ನಡತೆಗಳನ್ನು ಬಿಡುವುದು ರಾಷ್ಟ್ರಕ್ಕೆ ಕ್ಷೇಮಕರವಲ್ಲವೇ?

ವೀರಶೈವ ಮಹಾಸಭೆಯು ಕೂಡುವುದೇ?

ಧಾರವಾಡದ ವೀರಶೈವ ಮಹಾಸಭೆಯ ಸ್ವಾಗತ ಸಂಘದವರು ಈ ಮುಂಚೆ ಪ್ರಕಟಿಸಿದಂತೆ ಇದೇ ಎಪ್ರಿಲ್ ತಿಂಗಳ ಅಂತ್ಯದಲ್ಲಿ ಮಹಾಸಭೆಯನ್ನು ಕೂಡಿಸುವರೇ? ಎಂದು ನಮಗೆ ಅನೇಕರು ಕೇಳುತ್ತಿದ್ದಾರೆ. ಜನಗಳಲ್ಲಿ ಮಹಾಸಭೆಯ ವಿಷಯವಾಗಿ ಈ ವಿಧವಾದ ಪ್ರೇಮಾದರಗಳಿರುವುದು ಶ್ಲಾಘ್ಯವಾಗಿಯೂ ಇದೆ.

ಇನ್ನೊಂದು ತಿಂಗಳಲ್ಲಿ ಮಹಾಸಭೆಯು ಕೂಡಬೇಕಾಗಿರುವುದರಿಂದ ಈ ವರೆಗೆ ಅಧ್ಯಕ್ಷರ ಚುನಾವಣೆ ಮೊದಲಾದ ಮುಖ್ಯ ಕಾರ್ಯಗಳು ಕೂಡಾ ಆಗದಿದ್ದುದರಿಂದಲೇ ಈ ಸಾರೆಯೂ ಮಹಾಸಭೆ ಕೂಡುವುದಿಲ್ಲವೆಂದೇ ಬಹುಜನಗಳು ತಿಳಿದಿದ್ದಾರೆ. ಅವರು ಹಾಗೆ ಯೋಚಿಸುವುದು ಯುಕ್ತವಾಗಿಯೂ ಇದೆ. ಆದದರಿಂದ ಧಾರವಾಡದ ವೀರಶೈವಮಹಾಸಭೆಯ ಸ್ವಾಗತ ಸಂಘದವರು ಕೂಡಲೇ ತಮ್ಮ ಕಾರ್ಯವನ್ನು ಪ್ರಾರಂಭಿಸಿ ಆ ಮೂಲಕ ಮಹಾಸಭೆಯು ಇದೇ ಎಪ್ರಿಲ್ ತಿಂಗಳ ಅಂತ್ಯದಲ್ಲಿ ಕೂಡುವುದೆಂಬುದನ್ನು ಜನಗಳಿಗೆ ಗೊತ್ತುಪಡಿಸಬೇಕಾಗಿ ಆಗ್ರಹದ ಪುನಃ ಸೂಚನೆ.

ಭಂಗಿ ಜನರಿಗಾಗಿ ನಾವೇನು ಮಾಡಬೇಕು?

ಹರುಕು ಬಟ್ಟೆಯನ್ನು ಹಾಕಿಕೊಂಡು ಮಲದಿಂದ ತುಂಬಿದ ಪುಟ್ಟಿಯನ್ನು ಹೊತ್ತುಕೊಂಡು ಬೀಸುಗಟ್ಟಲೆ ತಿರುಗಾಡುವ ಆ ಭಂಗಿ ಜನಗಳ ತಲೆಯ ಮೇಲಿರುವ ಮೈಮೇಲೆಲ್ಲ ಸೋರುತ್ತಿರುವ ಮಲದ ಬುಟ್ಟಿಯು ನಮ್ಮ ಅಮಾನುಷ ಹೃದಯದ ನಿಶಾನೆಯಾಗಿದೆ.

ಎಲ್ಲ ಮುನಸಿಪಾಲಿಟಿಯವರು ಭಂಗಿ ಜನರಿಗೆ ಮಲವನ್ನು ತೆಗೆದುಕೊಂಡು ಹೋಗಲು ಮುಚ್ಚಳವಿರುವ ಒಳ್ಳೆಯ ಪುಟ್ಟಿಗಳನ್ನು ಕೊಟ್ಟು ಅಲ್ಲಲ್ಲಿಯೇ ಮಲವನ್ನು ಕೂಡಿಹಾಕುವ ಏರ್ಪಾಡುಗಳನ್ನು ಮಾಡಿ ಈ ಮಲಿನ ಕಾರ್ಯ ಪೂರೈಸಿದೊಡನೆ ಆ ಎಲ್ಲ ಭಂಗಿ ಜನರ ಸ್ನಾನಕ್ಕೆ ನೀರನ್ನು ಒದಗಿಸಿಕೊಟ್ಟು ಅವರು ಅನಂತರ ಬೇರೆ ಬಟ್ಟೆಗಳನ್ನು ಹಾಕಿಕೊಳ್ಳುವ ವ್ಯವಸ್ಥೆ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ.

ಈ ಸಂಬಂಧವಾಗಿ ಮಹಾತ್ಮಾ ಗಾಂಧಿಯವರು ತಾ. ೧೮ನೆಯ ‘ಹರಿಜನ’ ಪತ್ರಿಕೆಯಲ್ಲಿ ಅನೇಕ ಕಡೆಯ ಹೃದಯ ದ್ರಾವಕ ಸ್ಥಿತಿಗಳನ್ನು ವಿವರಿಸಿ ಮಹತ್ವದ ಸೂಚನೆಗಳನ್ನು ಮಾಡಿದ್ದಾರೆ.

ಪಟ್ಟಣದ ಮಲವನ್ನು ತೆಗೆದುಹಾಕಿ ನಿರ್ಮಲಗೊಳಿಸಿ ನಮ್ಮ ಆರೋಗ್ಯಭಾಗ್ಯಕ್ಕೆ ತಾಯಿಯೋಪಾದಿಯಲ್ಲಿ ಸೇವೆ ಮಾಡುವ ಈ ಭಂಗಿ ಜನಗಳ ಕಡೆಗೆ ಎಲ್ಲ ಮುನಸಿಪಾಲಿಟಿಯವರು ಕೂಡಲೆ ಲಕ್ಷಿಸಿ ಮನುಷ್ಯತ್ವಕ್ಕೆ ಸಲ್ಲತಕ್ಕ ಸುಧಾರಣೆಗಳನ್ನು ಮಾಡದಿದ್ದರೆ ಮುಂದೆ ಈ ಭಂಗಿಯ ಕೆಲಸವನ್ನು ನಾವೇ ಮಾಡಬೇಕಾಗುವ ಪ್ರಸಂಗ ಬರಬಹುದೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕಾಗಿದೆ.

ವೀರಶೈವ ಜಾತಿವಾದ ಸಭೆಯು

ಯಾರಿಂದ ನಿಂತಿದೆ ?

ಕರ್ನಾಟಕ ಟಾಯಿಮ್ಸ್ ಪತ್ರಿಕೆಯ ತಾ. ೧೦-೩-೩೩ನೆಯ ಸಂಚಿಕೆಯಲ್ಲಿ 'ವೀರಶೈವ ಜಾತಿವಾದ ವಿಮರ್ಶೆ' ಎಂಬ ಒಂದು ಲೇಖನ ಪ್ರಕಟವಾಗಿದೆ. ಇದು ಶ್ರೀ. ಪಗಡದಿನ್ನಿ ಚಂದ್ರಶೇಖರ ಶಾಸ್ತ್ರಿಗಳವರ ಸಂಗಡ ನಡೆದ ಸಂಭಾಷಣೆಯೆಂದು ತಿಳಿಸಿದ್ದಾಗಿದೆ. ಈ ಸಂಭಾಷಣೆಯಲ್ಲಿ ಶ್ರೀ. ಚಂದ್ರಶೇಖರ ಶಾಸ್ತ್ರಿಗಳು ನನ್ನಿಂದಲೇ ಜಾತಿ ವಾದವಿಮರ್ಶನೆಯ ಸಭೆಯ ಕಾರ್ಯವು ನಿಧಾನವಾಗಿದೆಯೆಂದು, ಮತ್ತು ವೀರಶೈವ ತತ್ವಪ್ರಚಾರಕ ಸಂಘದ ಸರ್ವ ಮೆಂಬರರು ಸಭೆಯಲ್ಲಾಗುವ ತೀರ್ಮಾನಕ್ಕೆ ಬದ್ಧರಾಗಿರುವರೆಂದು ನಾನು ಪ್ರಕಾಶಪಡಿಸಬೇಕೆಂದು ಸೂಚಿಸಿದ್ದಾರೆ.

ಈ ಸಂಭಾಷಣೆಯು ಯಾರ ಸಂಗಡ ನಡೆದಿದೆಯೆಂಬುದು ಅದರಲ್ಲಿ ತಿಳಿಸಿಲ್ಲ. ಶಾಸ್ತ್ರಿಗಳವರ ಹೆಸರಾದರೂ ಅದರಲ್ಲಿ ಪ್ರಕಟವಾಗಿಲ್ಲ. ಆದರೆ ಅದು ಯಾದಗಿರಿ ಗ್ರಾಮದವರೊಬ್ಬರು ಬರೆದಿದ್ದಾರೆಂದು ಸ್ಪಷ್ಟವಾಗುತ್ತದೆ.

ಶ್ರೀ. ಚಂದ್ರಶೇಖರ ಶಾಸ್ತ್ರಿಗಳವರಿಗೆ ನಾನು ಈ ಮುಂಚೆ ಬರೆದ ಪತ್ರವನ್ನು ಇದ್ದಕ್ಕಿದ್ದಂತೆಯೇ ಈ ಕೆಳಗೆ ಉದಾಹರಿಸಿದ್ದೇನೆ. ಇದರಿಂದ ಈ ಸಭೆಯ ಕಾರ್ಯಕ್ಕೆ ಶ್ರೀ. ಚಂದ್ರಶೇಖರ ಶಾಸ್ತ್ರಿಗಳಿಂದಲೇ ನಿಧಾನವಾಗಿದೆಯೆಂಬುದು ಯಾರಿಗಾದರೂ ಗೊತ್ತಾಗುವುದು.

ರಾಯಚೂರ ಕರಾರಿನಲ್ಲಾದ ನಿಯಮಗಳಲ್ಲಿ ೩ನೆಯ ನಿಯಮವು ಈ ಕೆಳಗೆ ಬರೆದಂತೆ ಇದೆ. ಆದುದರಿಂದ ಸಭೆಯಲ್ಲಾಗುವ ತೀರ್ಮಾನಕ್ಕೆ ವೀರಶೈವ ತತ್ವಪ್ರಚಾರಕ ಸಂಘದ ಸದಸ್ಯರು ಬದ್ಧರಲ್ಲವೆಂತಲೂ ಸ್ಪಷ್ಟವಾಗುತ್ತದೆ.

"ಈ ಸಭೆಯಲ್ಲಾದ ನಿರ್ಣಯದಂತೆ ನಾವಿಬ್ಬರೂ ವರ್ತಿಸುತ್ತೇವೆ. ಮತ್ತು ಪಂಚಾಚಾರ್ಯ ಪೀಠಸ್ಥರೂ ವರ್ತಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ."

ಈ ನಿಯಮದಲ್ಲಿ ವೀರಶೈವ ತತ್ವ ಪ್ರಚಾರಕ ಸಂಘದ ಹೆಸರೇ ಇಲ್ಲದಿರುವಾಗ ಅವರು ಸಭೆಯಲ್ಲಾಗುವ ನಿರ್ಣಯಕ್ಕೆ ಹೇಗೆ ಬದ್ಧರಾಗುವರು? ರಾಯಚೂರ ಕರಾರಿಗೆ ವೀರಶೈವ ತತ್ವಪ್ರಚಾರಕ ಸಂಘದವರು ಒಪ್ಪಿ ರುಜು ಮಾಡಿದ್ದಾರೆಯೇ? ಕರಾರಿನಲ್ಲಿಲ್ಲದ ಸಂಗತಿಗಳನ್ನು ಸೂಚಿಸಿ ನನ್ನಿಂದಲೇ ಸಭೆಯ ಕಾರ್ಯ ನಿಂತಿತೆಂದು ಜನಗಳಲ್ಲಿ ತಪ್ಪು ತಿಳುವಳಿಕೆಯನ್ನುಂಟು ಮಾಡುತ್ತಿರುವುದು ಅತ್ಯಂತ ಅನ್ಯಾಯವಾದುದಲ್ಲವೇ?

ನಾನು ತಾ. ೬ನೆಯ ದಿವಸ ಶಾಸ್ತ್ರಿಗಳಿಗೆ ರಜಿಸ್ಟರ್ ಮೂಲಕ ಬರೆದ ಪತ್ರಕ್ಕೆ ಶಾಸ್ತ್ರಿಗಳು ತಾ. ೮ನೆಯ ದಿವಸ ತಿಳುಹಿಸಿದ ಪತ್ರದಲ್ಲಿ ಈ ಕೆಳಗಿನ ಸಂಗತಿಯಿದೆ—

"ಮೊದಲು ಸಂಘದ ವತಿಯಿಂದಲೇ ಕರ್ತವ್ಯ ನಡೆದು ಆ ಮ್ಯಾಲೆ ನಿಮ್ಮ ಪತ್ರಿಕಾದಲ್ಲಿ ನಾನೊಬ್ಬನೇ ಜವಾಬದಾರನೆಂದು ಕಾಣಿಸಿದ್ರಿ. ಇದಲ್ಲವೆ ಚಾರುವಿಕೆ? ಹಾಗಾಗಬಾರದು. ನಿಮ್ಮೊಬ್ಬರ ವಿವಾದಕ್ಕೆ ಇಷ್ಟೆಲ್ಲಿ ಸಿದ್ಧವಾಗುತ್ತಿತ್ತು? ಯಾರೋ ಒಬ್ಬ ಸಾಲಿ ಅಯ್ಯನವರಿಂದ ಆ ಕಾರ್ಯ ನಡೆದು ಹೋಗುತ್ತಿತ್ತು. ಇದೆಲ್ಲಾ ವೃಥಾ ಗೋಷ್ಠಿ."

ಈ ಪ್ರಕಾರ ಶ್ರೀ. ಚಂದ್ರಶೇಖರ ಶಾಸ್ತ್ರಿಗಳು ಬರೆದುದನ್ನು ನೋಡಿದರೆ ಯಾರು ಜಾರಲಿಕ್ಕೆ ಪ್ರಯತ್ನಮಾಡಿದರೆಂಬುದು ತಿಳಿಯುವುದಿಲ್ಲವೇ?

ರಾಯಚೂರ ಕರಾರಿನಲ್ಲಿ ಮೊದಲೇ ನ... ...ಶ್ಯ... ಜಾತಿಗಳಿಲ್ಲವೆಂತಲೂ ಶ್ರೀ. ಶಾಸ್ತ್ರಿಗಳು ಜಾತಿಗಳಿವೆಯೆಂತಲೂ ತಿಳಿದಿದ್ದೇವಾಗಿ ಸ್ಪಷ್ಟ ಬರೆದಿದ್ದೇವೆ. ಅದಕ್ಕೆ ಶಾಸ್ತ್ರಿಗಳೇ ರುಜು ಮಾಡಿದ್ದಾರೆ ಅದರಲ್ಲಿ ವೀರಶೈವ ತತ್ವ ಪ್ರಚಾರಕ ಸಂಘದ ಹೆಸರಿದೆಯೇ?

ಈಗ ಶಾಸ್ತ್ರಿಗಳು ನಾನು ಅಧ್ಯಕ್ಷರಿಗೆ ಬರೆದುಕೊಳ್ಳಬೇಕಾದುದರಲ್ಲಿ "ನಮ್ಮ ಸಂಘದ" ಎಂಬ ಶಬ್ದವನ್ನು ಹಾಕಿ ಬರೆದುಕೊಳ್ಳಬೇಕೆಂದು ಈ ಪತ್ರದಲ್ಲಿ ಸೂಚಿಸಿದ್ದಾರೆ. ಈಗ ಈ ಹೊಸ ಮಾತೇಕೆ ಬಂದಿತು? ಇದು ಯಾರ ಚಿತ್ತ ಚಾಂಚಲ್ಯವೆಂಬುದನ್ನು ತೋರಿಸುತ್ತದೆ? ಜಾರಲಿಕ್ಕೆ ಯಾರು ಪ್ರಯತ್ನಿಸಿದರು? ಕರಾರನ್ನು ಬರೆಯುವ ಕಾಲದಲ್ಲಿದ್ದ ನಂಬಿಕೆ ಧೈರ್ಯಗಳೂ ಈಗೆಲ್ಲಿ ಹೋದವು? ನಾನು ವಾದಿಯೆಂದು ತಮಗೆ ಲೇಖನ ಬರೆದು ಕಳುಹಿಸಬೆಕಾಗಿ ಶಾಸ್ತ್ರಿಗಳು ನನಗೆ ಮೊದಲು ಬರೆದಿದ್ದಾರೆ.

ಆಗ ವೀರಶೈವ ತತ್ವ ಪ್ರಚಾರಕ ಸಂಘವು ವಾದಿಯಾಗಿದೆಯೆಂದು ಬರೆದು ಕಳುಹಿಸಲು ಅದೇಕೆ ತಿಳಿಸಲಿಲ್ಲ? ಈ ಎಲ್ಲ ಸಂಗತಿಗಳ ಮೇಲಿಂದ ಕೂಡಾ ವಾದವು ನಮ್ಮಿಬ್ಬರಿಗೇನೇ ನಡೆದದ್ದಾಗಿದ್ದಿತೆಂದು ಸ್ಪಷ್ಟವಾಗುವುದಿಲ್ಲವೇ?

ಆದಕಾರಣ ಶ್ರೀ. ಚಂದ್ರಶೇಖರ ಶಾಸ್ತ್ರಿಗಳವರು ಈಗಲಾದರೂ ರಾಯಚೂರ ಕರಾರನ್ನು ಚೆನ್ನಾಗಿ ಓದಿನೋಡಿ ಸಾಕ್ಷಿದಾರರ ಅಭಿಪ್ರಾಯಗಳನ್ನಾದರೂ ಕೇಳಿ ನ್ಯಾಯವಾದ ರೀತಿಯಲ್ಲಿ ವರ್ತಿಸಬೇಕಲ್ಲದೆ ಆ ಕರಾರನ್ನು ವೀರಶೈವ ತತ್ವ ಪ್ರಚಾರಕ ಸಂಘಕ್ಕೆ ತಗಲುಹಾಕಲಿಕ್ಕೆ ಹೋಗಿ ಕರಾರಿಗೆ ವಿರೋಧವಾಗಿ ವರ್ತಿಸಿದರೆಂಬ ಅಪವಾದಕ್ಕೆ ಗುರಿಯಾಗಬಾರದಾಗಿ ಪುನಃ ಪ್ರಾರ್ಥನೆ.

ಹರ್ಡೇಕರ್ ಮಂಜಪ್ಪ.

ಶ್ರೀ. ಚಂದ್ರಶೇಖರ ಶಾಸ್ತ್ರಿಗಳವರ ಸಂ. ಕ್ಕೆ-ವಿಜ್ಞಾಪನೆ.

ತಾವು ತಾ. ೩೦-೧೧-೩೨ನೆಯ ದಿವಸ ಯಾದಗಿರಿಯಿಂದ ಬರೆಸಿದ ಪತ್ರವು ಮತ್ತು ಕಂಪ್ಲಿ ಮುಕ್ಕಾಮಿನಿಂದ ಬರೆಸಿದ ಮತ್ತೊಂದು ಪತ್ರವು ಮುಟ್ಟಿದವು. ತಾವು ಯಾದಗಿರಿಯಿಂದ ಬರೆಸಿದ ಪತ್ರದಲ್ಲಿ ನನ್ನಮೇಲೆ ಮಾಡಿದ ದೋಷಾರೋಪಣೆಯನ್ನು ನಾನು ವಿನಯದಿಂದ ನಿರಾಕರಿಸುತ್ತೇನೆ. ರಾಯಚೂರ ಕರಾರಿನಲ್ಲಾದ ಪ್ರಕಾರ ನಡೆಯಲು ನಾನು ಯಾವಾಗಲೂ ಸಿದ್ಧನಾಗಿರುವಾಗ ತಾವು ಈ ಪ್ರಕಾರ ದೋಷಾರೋಪಣೆ ಮಾಡಿದುದು ದುಃಖದ ಸಂಗತಿಯು. ತಾವು ಕರಾರಿನಲ್ಲಿಲ್ಲದ ವಾದಿಪ್ರತಿವಾದಿಗಳೆಂಬುದನ್ನು ಮತ್ತು ಅಸೆಸರ್ಸ್ ಕೊಡಬೇಕೆಂಬುದನ್ನು ಸೂಚಿಸಿದ್ದರಿಂದ ನಾನೂ ನನ್ನ ಅಭಿಪ್ರಾಯಗಳನ್ನು ಸೂಚಿಸಬೇಕಾಯಿತು. ತಾವು ಈ ಹೊಸ ಸಂಗತಿಗಳನ್ನು ಪ್ರಸ್ತಾಪಿಸದಿದ್ದರೆ ಇಷ್ಟೆಲ್ಲಾ ಬರವಣಿಗೆಗೂ ಕಾಲವಿಲಂಬಕ್ಕೂ ಅವಕಾಶವಾಗುತ್ತಿರಲಿಲ್ಲ.

ರಾಯಚೂರ ಕರಾರಿನಲ್ಲಿರತಕ್ಕ ವಿಷಯಕ್ಕೂ ತಾರೀಖು ೨೧-೧೧-೩೨ರಲ್ಲಿ ನಾನು ಶರಣಸಂದೇಶದಲ್ಲಿ ಪಟ್ಟ ಅಭಿಪ್ರಾಯಕ್ಕೂ ತಿಲಾಂಶವಾದರೂ ವ್ಯತ್ಯಾಸವಿಲ್ಲ. ವಿಷಯವು ಸಾರ್ವಜನಿಕವು. ಆದರೆ ಅದನ್ನು ನಿರ್ಣಯಿಸಲಿಕ್ಕಾಗಿ ಮಾಡಿಕೊಂಡ ಕರಾರು ವ ಕ್ತಿ

ಗತವೆಂಬುದರಲ್ಲಿದ್ದ ಸಾರ್ವಜನಿಕ ಮತ್ತು ವ್ಯಕ್ತಿಗತವೆಂಬುದರ ಸ್ಪಷ್ಟ ಭೇದವು ತಮಗೆ ತಿಳಿಯದಿದ್ದುದು ದುಃಖದ ಸಂಗತಿಯು. ಇದೇ ಪ್ರಕಾರ ತಾವು ತಪ್ಪು ತಿಳಿದುಕೊಂಡು ನನ್ನನ್ನು ಆಕ್ಷೇಪಿಸಿರುವ ಉಭಯ ಪತ್ರಗಳ ವಿಮರ್ಶೆಯನ್ನು ಮಾಡಬಹುದಾಗಿದ್ದರೂ ಅದೇನೂ ಪ್ರಕೃತದ ವಿಷಯವಲ್ಲ. ಆದುದರಿಂದ ಆ ವಿಷಯವನ್ನು ಬಿಟ್ಟಿದ್ದೇನೆ.

ತಮಗೆ ಈ ಮುಂಚೆ ತಿಳಿಸಿದಂತೆ ನಾನು ಶ್ರೀ. ಪಾವಟೆ ಸಿದ್ಧರಾಮಪ್ಪನವರಲ್ಲಿ ಹೋಗಿ ವಾದಪದ್ಧತಿಯನ್ನು ಕುರಿತು ಮಾತನಾಡಿದ್ದಾಯಿತು. ಅವರೇ ಈ ಪ್ರಕಾರ ತಿಳಿಸಲು ನನಗೆ ಹೇಳಿದ್ದುದರಿಂದ ವಾದ ಪದ್ಧತಿಯನ್ನು ತಾವು ಒಪ್ಪಿ ಜಾಗ್ರತೆ ಕೆಲಸ ಪ್ರಾರಂಭಿಸಬೇಕಾಗಿ ಪ್ರಾರ್ಥನೆ. ವೃಥಾ ಪತ್ರವ್ಯವಹಾರಗಳಿಂದ ಪ್ರಯೋಜನವಿಲ್ಲ.

ವಾದಪದ್ಧತಿ.

೧ ನನ್ನ ಅಭಿಪ್ರಾಯವು ಏನಿದೆಯೆಂಬುದನ್ನು ರಾಯಚೂರಲ್ಲಾದ ಒಡಂಬಡಿಕೆಯಲ್ಲಿಯೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ನನ್ನ ಅಭಿಪ್ರಾಯಕ್ಕಿರುವ ಶಾಸ್ತ್ರದ ಶಿಷ್ಟಸಂಪ್ರದಾಯದ ಮತ್ತು ಇತಿಹಾಸದ ಪ್ರಮಾಣಗಳನ್ನು ನನ್ನ ಪಕ್ಷ ಪ್ರತಿಜ್ಞಾಪನೆಯ ಕಾಲಕ್ಕೆ ಉದಾಹರಿಸುವುದು ಆವಶ್ಯಕವಾದುದಲ್ಲ. ಮತ್ತು ಇಷ್ಟವಾದುದೂ ಅಲ್ಲ. ನನ್ನ ಅಭಿಪ್ರಾಯವೇನೆಂಬುದನ್ನು ರಾಯಚೂರ ಒಪ್ಪಂದದಲ್ಲಿದ್ದಂತೆ ಪ್ರತ್ಯೇಕವಾಗಿ ಬರೆದು ಕಳುಹಿಸಿದ್ದೇನೆ. ಇದನ್ನು ತಾವು ಅಧ್ಯಕ್ಷರ ಕಡೆಗೆ ಕಳುಹಿಸೋಣಾಗಬೇಕು.

೨ ನ್ಯಾಯ ಕೋರ್ಟುಗಳಲ್ಲಿ ವಾದಿಯಾಗಲಿ ಪ್ರತಿವಾದಿಯಾಗಲಿ ತಮ್ಮ ಪಕ್ಷವನ್ನು ನಿವೇದಿಸುತ್ತಾರಲ್ಲದೆ ಆ ಪಕ್ಷದ ಸಮರ್ಥನಕ್ಕಾಗಿರುವ ಪ್ರಮಾಣಗನ್ನು ಪ್ರತಿಜ್ಞಾಪನೆಯ ಕಾಲಕ್ಕೆ ಉದಾಹರಿಸುವುದಿಲ್ಲ.

೩ ತಮ್ಮ ಪಕ್ಷವನ್ನು ತಾವು ಪ್ರತಿಜ್ಞಾಪಿಸಿರುವಿರಿ. ನಾವು ನಮ್ಮ ನಮ್ಮ ಪಕ್ಷಗಳ ಪ್ರತಿಜ್ಞೆಯನ್ನು ಮಾಡಿದ ಬಳಿಕ ಅಧ್ಯಕ್ಷರು ವಿಚಾರಣೆಯ ದಿವಸ ನಮ್ಮನಮ್ಮ ಅಂಬೋಣಗಳನ್ನು ಕೇಳಿಕೊಂಡು ವಿವಾದಾಂಶಗಳನ್ನು ಅಂದರೆ ಯಾವಯಾವ ಮಾತುಗಳನ್ನು ಯಾರುಯಾರು ಸಾಧಿಸಬೇಕೆಂಬುದನ್ನು ನಿರ್ಣಯಮಾಡುವರು. ಇದಕ್ಕೆ ಕೋರ್ಟಿನ ವ್ಯವಹಾರ ಪದ್ಧತಿಯಿಂದ ''ಮುದ್ದೆ'' ತೆಗೆಯುವುದು ಎನ್ನಬಹುದು.

೪ ಹೀಗೆ ಮುದ್ದೆಯನ್ನು ತೆಗೆದ ಬಳಿಕ ನಮ್ಮನಮ್ಮ ಪಕ್ಷಗಳನ್ನು ನಾವು ಸಮರ್ಥಿಸಲಿಕ್ಕೆ ಹತ್ತಬೇಕು. ಆಗ ಕರಾರಿನಲ್ಲಿದ್ದಂತೆ ನಮಗೆ ಬೇಕಾದ ಪ್ರಮಾಣಗಳನ್ನು ಉದಾಹರಿಸಬೇಕಾಗುತ್ತದೆ.

೫ ಆದುದರಿಂದ ಈಗ ತಮ್ಮ ಕಡೆಗೆ ನಾನಾಗಲಿ ಅಥವಾ ನನ್ನ ಕಡೆಗೆ ತಾವಾಗಲಿ ನಮ್ಮನಮ್ಮ ಲೇಖನಗಳನ್ನು ಕಳುಹಿಸುವ ಅವಶ್ಯವಿಲ್ಲ.

೬ ವಾದ ಜರುಗುವ ಸ್ಥಳವು ರೇಲ್ವೆ ಸ್ಟೇಶನ್ ಉಳ್ಳದ್ದಾಗಿರಬೇಕು. ಬಹುಜನಗಳು ಬರತಕ್ಕವರಿರುವುದರಿಂದ ಎಲ್ಲರಿಗೂ ಅನುಕೂಲವಾಗುವಂತಿರಬೇಕು. ವಾದದ ಕಾಲ ಮತ್ತು ಸ್ಥಳಗಳನ್ನು ಸಾಧಾರಣ ಎರಡು ತಿಂಗಳು ಮುಂಚೆಯೇ ಅಧ್ಯಕ್ಷರು ಉಭಯ ಪಕ್ಷದವರಿಗೂ ತಿಳುಹಿಸಬೇಕು. ಉಭಯ ಪಕ್ಷಗಳಲ್ಲಿಯೂ ವಾದವನ್ನು ಮಾಡಲು ಒಬ್ಬರೇ ಮುಖ್ಯರಾಗಿರಬೇಕು. ಅವರಿಗೆ ಬೇಕಷ್ಟು ಜನಗಳು ಸಹಾಯಮಾಡಬಹುದೇ ವಿನಾ ಬೇರೆಯವರು ವಾದಿಸಲು ಬರಕೂಡದು.

ಆಲಮಟ್ಟಿ.
ವೀರಶೈವ ವಿದ್ಯಾಲಯ
ತಾ. ೪-೧೨-೩೩

ತಮ್ಮ ವಿಧೇಯ,
ಹರ್ಡೇಕರ್ ಮಂಜಪ್ಪ.

|| ಓಂ ||

ಶ್ರೀ ರಂಭಾಪುರಿ ಜಗದ್ಗುರು ಪೀಠದ ಮಹಾಸ್ವಾಮಿಗಳವರ ಸನ್ನಿಧಿಗೆ-

ಮಹಾಸ್ವಾಮಿ,

ತಾವು ನನಗೂ ಶ್ರೀ. ಪಗಡದಿನ್ನಿ ಚಂದ್ರಶೇಖರ ಶಾಸ್ತ್ರಿಗಳಿಗೂ ವೀರಶೈವರಲ್ಲಿ ಜಾತಿಗಳಿವೆಯೋ ಇಲ್ಲವೋ ಎಂಬ ಬಗ್ಗೆ ತಾ. ೧೫-೯-೩೩ನೆಯ ದಿವಸ ರಾಯಚೂರಲ್ಲಾದ ಒಡಂಬಡಿಕೆಯ ಪ್ರಕಾರ ಈ ವಾದವನ್ನು ನಿರ್ಣಯಿಸಲು ಅಧ್ಯಕ್ಷರಾಗಿರುವಿರಷ್ಟೆ. ಈ ವಾದದಲ್ಲಿ ನನ್ನ ಅಭಿಪ್ರಾಯವು ಈ ಪ್ರಕಾರ ಇದೆಯೆಂಬುದನ್ನು ಪುನಃ ವ್ಯಕ್ತಪಡಿಸಿದ್ದೇನೆ.

ಅಷ್ಟಾವರಣ ಪಂಚಾಚಾರಯುಕ್ತರಾದ ವೀರಶೈವರಲ್ಲಿ ಭಕ್ತ ಮಾಹೇಶ್ವರರೆಂತಾಗಲಿ, ಬಣಜಿಗರು, ಪಂಚಮಸಾಲಿಯವರು, ಚಿಂಪಿಗರು, ಗಾಣಿಗರು, ಎಂತಾಗಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂತಾಗಲಿ ಅರ್ಧ ವೀರಶೈವ, ಪೂರ್ಣ ವೀರಶೈವರು ಎಂತಾಗಲಿ ಜಾತಿಭೇದಗಳು ಇಲ್ಲ.

ಮಹಾಪೀಠದ ಸೇವಕ,
ಮಂಜಪ್ಪ ಹರ್ಡೇಕರ.

ವೀರಶೈವ ಜಾತಿನಿರ್ಣಯದ ವಿವಾದವು.
ರಾಯಚೂರ ಕರಾರು.

ಅಷ್ಟಾವರಣ ಪಂಚಾಚಾರಯುಕ್ತರಾದ ವೀರಶೈವರಲ್ಲಿ ಭಕ್ತಮಾಹೇಶ್ವರರೆಂತಾಗಲಿ, ಬಣಜಿಗರು, ಪಂಚಮಸಾಲಿಯವರು, ಚಿಂಪಿಗರು, ಗಾಣಿಗರು, ಎಂತಾಗಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂತಾಗಲಿ ಅರ್ಧವೀರಶೈವ, ಪೂರ್ಣ ವೀರಶೈವರು ಎಂತಾಗಲಿ ಜಾತಿಭೇದಗಳು ಇಲ್ಲ. ಇವು ವಂಧ್ಯಾಪುತ್ರನಂತೆ ಅಭಾವ ಮಾತ್ರವಾಗಿದ್ದಾವೆಂದು ಶ್ರೀ. ಹರ್ಡೇಕರ ಮಂಜಪ್ಪನವರ ತ್ರಿಕರಣ ಪೂರ್ವಕವಾದ ಅಭಿಪ್ರಾಯವಿದೆ.

ಇದು ತಪ್ಪು. ಅಷ್ಟಾವರಣ ಪಂಚಾಚಾರ ಯುಕ್ತವಾದ ವೀರಶೈವರಲ್ಲಿಯೂ ಜಾತಿಭೇದಗಳಿವೆ. ಎಂದರೆ ಮೇಲೆಕಾಣಿಸಿದ ಎಲ್ಲ ಭೇದಗಳಿವೆಯೆಂದು ಶ್ರೀ. ಪಂ. ಚಂದ್ರಶೇಖರ ಶಾಸ್ತ್ರಿಗಳವರ ಅಭಿಪ್ರಾಯವಿದೆ.

ಈ ಭಿನ್ನಾಭಿಪ್ರಾಯವನ್ನು ನಾವಿಬ್ಬರೂ ಪ್ರತಿಪಾದಿಸುತ್ತಿದ್ದರೂ ಇವು ನಮ್ಮ ಸಮಾಜದಲ್ಲಿ ಕೆಲಕೆಲವರಿಗೆ ಅವರವರ ರುಚ್ಯನುಸಾರವಾಗಿ ಮಾನ್ಯಾಮಾನ್ಯವಾಗಿವೆ.

ಹೀಗೆ ಸಮಾಜದಲ್ಲಿ ಭಿನ್ನಾಭಿಪ್ರಾಯಗಳಿರುವುದು ಯುಕ್ತ ಕಾಣುವುದಿಲ್ಲ. ಆದುದರಿಂದ ಯಾವುದಾದರೊಂದು ಅಭಿಪ್ರಾಯವು ಮಾನ್ಯವಾಗಿ ಸಾರ್ವತ್ರಿಕವಾಗುವುದು ಇಷ್ಟವಾಗಿದೆ. ಆದುದರಿಂದ ಕೆಳಗೆ ಬರೆದಂತೆ ಒಪ್ಪಿರುತ್ತೇವೆ.

(೧) ಈ ಉಭಯ ವಾದವನ್ನು ಪರೀಕ್ಷಿಸಿ ನಿರ್ಣಯಿಸಲಿಕ್ಕೆ ಈಗ ಪಂಚಾಚಾರ್ಯ ಪೀಠಸ್ಥರಾಗಿರುವಂಥ ಸ್ವಾಮಿಗಳಲ್ಲಿ ಯಾರೊಬ್ಬರನ್ನಾದರೂ ಆ ಪೀಠಸ್ಥರು ಆರಿಸಿಕೊಟ್ಟಲ್ಲಿ ಅವರು ಅಧ್ಯಕ್ಷರಾಗಲಿಕ್ಕೆ ನಾವು ಉಭಯರೂ ಒಪ್ಪಿಕೊಂಡು ಈ ದಿವಸ ಅವರನ್ನೇ ಅಧ್ಯಕ್ಷರನ್ನಾಗಿ ನಿಯಮಿಸಿಕೊಂಡಿದ್ದೇವೆ.

(೨) ಈ ವಿಷಯವು ಮೇಲೆ ಬರೆದಂತೆ ವ್ಯಕ್ತಿಮಾತ್ರಗತವಲ್ಲದ್ದರಿಂದ ಆ ಸ್ವಾಮಿಗಳಲ್ಲಿ ನಮ್ಮ ಬಿನ್ನಹವು ಏನೆಂದರೆ— ಅಧ್ಯಕ್ಷರು ನಿರ್ಣಯಿಸಿದಂತೆ ವ್ಯವಹರಣೆಯಲ್ಲಿ ತರಲಿಕ್ಕೆ ಒಪ್ಪುತ್ತಿದ್ದರೆ ಮಾತ್ರ ಅವರು ಅಧ್ಯಕ್ಷರನ್ನು ಆರಿಸಬೇಕು.

(೩) A ನಮ್ಮನಮ್ಮ ಪಕ್ಷಗಳನ್ನು ನಾವು ಉಪನಿಷತ್ತುಗಳಿಂದಲೂ, ವೇದಗಳಿಂದಲೂ, ಆಗಮಗಳಿಂದಲೂ, B ನಿರ್ವಿವಾದವಾಗಿ ಕ್ರಿ. ಶ. ೧೯೧೯ರ ವರೆಗೆ ನಡೆದ ವೀರಶೈವರ ಶಿಷ್ಟಾಚಾರದಿಂದಲೂ C ವಚನಗ್ರಂಥಗಳಿಂದಲೂ D ಅಷ್ಟಾವರಣ ತತ್ವ ವಿಚಾರದಿಂದಲೂ ಸಿದ್ಧಮಾಡಲು ಬದ್ಧರಾಗಿರುವೆವು.

(೪) ಈ ವಿವಾದವನ್ನು ಸಮರ್ಥಿಸಲಿಕ್ಕೆ ನಾವು ಉಭಯತರು ನಮ್ಮ ನಮ್ಮ ಪರವಾಗಿ ಬೇಕಾದವರನ್ನು (ವೀರಶೈವರನ್ನು) ತರಲಿಕ್ಕೆ ಅಧಿಕಾರವುಳ್ಳವರಾಗಿದ್ದೇವೆ.

(೫) ಈ ವಿಷಯವು ಮಹತ್ವದ್ದಾಗಿರುವುದರಿಂದ ಈ ವಾದವನ್ನು ನೋಡಲಿಕ್ಕೆ ಮತ್ತು ಕೇಳಲಿಕ್ಕೆ ಪರಮತಗಳ ವಿದ್ವಾಂಸರನ್ನು ಕರೆಯಿಸಲಿಕ್ಕೂ ಅಡ್ಡಿಯಿಲ್ಲ. ಹಾಗೆ ಕರೆಯಿಸುವುದೂ ಪ್ರಶಸ್ತವಾಗಿದೆ.

(೬) ಈ ಸಭೆಯು ಸಾಮಾಜಿಕ ವಿಷಯವನ್ನೊಳಕೊಂಡದ್ದರಿಂದ ಯಾವ ವೀರಶೈವ ಸಭ್ಯಗೃಹಸ್ಥರಿಗೂ ಬರಲಿಕ್ಕೆ ಅಡ್ಡಿಯಿಲ್ಲ.

(೭) ಈ ಸಭೆಯಲ್ಲಾದ ನಿರ್ಣಯದಂತೆ ನಾವಿಬ್ಬರೂ ವರ್ತಿಸುತ್ತೇವೆ. ಮತ್ತು ಪಂಚಾಚಾರ್ಯ ಪೀಠಸ್ಥರೂ ವರ್ತಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ.

(೮) ಮೇಲಿನ ಒಂದು ಮತ್ತು ಎರಡನೆಯ ನಿಯಮಗಳಂತೆ ಈ ಸಭೆಗೆ ಅಧ್ಯಕ್ಷರನ್ನು ಪೂರೈಸುವ ಭಾರವನ್ನು ಶ್ರೀ. ಪಗಡದಿನ್ನಿ ಚಂದ್ರಶೇಖರ ಶಾಸ್ತ್ರಿಗಳವರು ವಹಿಸಿಕೊಂಡಿದ್ದಾರೆ. ಈ ಕಾರ್ಯವನ್ನು ಇವರು ಇದೇ ನವ್ಹಂಬರ್ ತಿಂಗಳ ಹದಿನೈದನೆಯ ತಾರೀಖಿನೊಳಗಾಗಿ ಮಾಡಬೇಕು.

ಮುಕ್ಕಾಂ, ರಾಯಚೂರ. ತಾ ೧೫-೯-೩೨ } **ಚಂದ್ರಶೇಖರ ಶಾಸ್ತ್ರಿ.**
ಹರ್ಡೇಕರ ಮಂಜಪ್ಪ.

ಸಾಕ್ಷಿಗಳು.

ಪಾವಟೆ ಸಿದ್ಧರಾಮಪ್ಪ B. A. L L. B. Advocate Hubli
ಬಸವಪ್ಪ ಶಾಸ್ತ್ರಿ ಸಾಲಿಮಠ ಮುಸ್ಕಿ
ಗುರುಬಸಪ್ಪ ಶಾಸ್ತ್ರಿ ಗಲಗಲಿ
ಸಿದ್ಧಾಂತಿ ಅಯ್ಯಪ್ಪ ಶಾಸ್ತ್ರಿ ದೇವರಸೂಗೂರು
ಜಿ. ಅಮರಪ್ಪ ವಕೀಲ ಹೈಕೋರ್ಟ
ಶಂಕರಪ್ಪ ವಕೀಲ ಮಾನ್ವಿ
ಪೋತಾಪುರ ರಾಚೋಟಯ್ಯ
ರಸ್ತಾಪುರ ಮುನಿಯಪ್ಪ ರಾಯಚೂರ
ಎಸ್. ಸಿದ್ಧರಾಮಪ್ಪ ವಕೀಲ
ಮಲ್ಲನಗೌಡ ಪಾಟೀಲ ನಕ್ಕುಂದಿ
ಐಯ್ಯನಗೌಡ ಪಾಟೀಲ ತಡಕಲ್ಲ.

ಪ್ರಕಟನೆ.

ದಿ ಗಾಯಿಡ ರೇಲ ರೋಡ ಫೀಡರ್ ಲಾಯನ್ಸ ಕಂಪನಿ ಲಿಮಿಟೆಡ್ ಆಲಮಟ್ಟಿ,

(ಜಿ. ವಿಜಾಪುರ)

ಅಧಿಕೃತ ಭಾಂಡವಲ ೮,೦೦,೦೦೦ (ಎಂಟು ಲಕ್ಷ) ರೂಪಾಯಿ ೧೯೧೩ನೇ ಇಸವಿಯ ಇಂಡಿಯನ್ ಕಂಪನಿ ಆಕ್ಟ ನಂಬರ ೧೩ನೇಪ್ರಕಾರ ರಜಿಸ್ಟರ ಆಗಿರುತ್ತದೆ.

ಸದರ್ನ ಮರಾಠಾ ರೇಲ್ವೆಯ

(೧) ಆಲಮಟ್ಟಿ ಸ್ಟೇಶನದಿಂದ ಮುದ್ದೇಬಿಹಾಳ ಮೇಲಿಂದ ಹಾಯ್ದು ತಾಳೀಕೋಟಿ ವರೆಗೆ ಸುಮಾರು ೩೩ ಮೈಲು ಮತ್ತು (೨) ಬಾಗಲಕೋಟೆ ಸ್ಟೇಶನ್ನಿನಿಂದ ಕಮತಗಿ ಅಮೀನಗಡ ಮತ್ತು ಹುನಗುಂದ ವ್ಯಾಪಾರೀ ಸ್ಥಳಗಳ ಮೇಲಿಂದ ಹಾಯ್ದು ಇಲಕಲ್ಲದ ವರೆಗೆ ಸುಮಾರು ೪೦ ಮೈಲ

ಈ ಪ್ರಕಾರ ೨ ಶಾಖೆಗಳನ್ನು ಸುಲಭ ಮತ್ತು ಅಲ್ಪ ಖರ್ಚಿನಿಂದ ಗಾಯಿಡ್‌ರೇಲ್ ರೋಡುಗಳನ್ನು ಹಾಕಿ, ಇಂಥ ವ್ಯಾಪಾರ ಸ್ಥಳಗಳ ಮತ್ತು ರೇಲ್ವೆ ಸ್ಟೇಶನುಗಳಿಂದ ದೂರ ಇರುವ ದೊಡ್ಡ ಮತ್ತು ಮಹತ್ವವಾದ ಊರುಗಳಿಗೆ ಮತ್ತು ಆಯಾಯ ಊರುಗಳಿಂದ ತಿರುಗಿ ಪ್ರವಾಸಿಕರನ್ನೂ, ಮಾಲುಗಳನ್ನೂ ಅಲ್ಪ ಖರ್ಚಿನಲ್ಲಿ ಹಾಗೂ ಅಲ್ಪವೇಳೆಯಲ್ಲಿ ಒಯ್ಯುವ ಮತ್ತು ತರುವುದಕ್ಕಾಗಿ ಈ ಕಂಪನಿಯು (ಸಂಘವು) ಸ್ಥಾಪಿಸಲ್ಪಟ್ಟಿದೆ.

ಈ ರೀತಿಯಿಂದ ಗಾಯಿಡ ರೇಲ ರೋಡದಿಂದ ಪ್ರವಾಸಿಕರನ್ನೂ ಮತ್ತು ಸರಕುಗಳನ್ನೂ ರೇಲ್ವೆಯಿಂದ ಇಷ್ಟುದೂರ ಇರುವ ವ್ಯಾಪಾರೀ ಸ್ಥಳಗಳಿಗೆ ಒಯ್ಯುವದು ಮತ್ತು ತರುವದು ಆದಲ್ಲಿ ಅತ್ತಕಡೆಗೆ ವ್ಯಾಪಾರವು ಹೆಚ್ಚಾಗಿ ಹಿಂದುಳಿದ ಆ ಭಾಗಗಳಿಗೆ ದಿನೇದಿನೇ ಅಭ್ಯುದಯವು ಉಂಟಾಗುವದು.

ಈ ಕಂಪನಿಯ ಸೇರುಗಳನ್ನು ತಕ್ಕೊಂಡರೆ ಅವುಗಳಮೇಲಿನ ಲಾಭವು ದರ ಒಂದುನೂರಕ್ಕೆ ದರ ಒಂದು ವರ್ಷಕ್ಕೆ ೮ ರೂಪಾಯಿಕ್ಕಿಂತ ಕಡಿಮೆ ಬೀಳಲಿಕ್ಕಿಲ್ಲವೆಂದು ಅಂದಾಜ ಅದೆ. ಮಾತ್ರ ಈ ಗಾಯಿಡ ರೇಲ ರೋಡದ ಮೇಲೆ ಸಾರ್ವಜನಿಕ ಉಪಯೋಗದ ದೆಶೆಯಿಂದ ಗಾಡಿಗಳು ಸುರು ಆದ ತಾರೀಖಿನಿಂದ ಫಾಯಿದೆಯು ಆಕರಿಸುವದರಲ್ಲಿ ಬರುವದು.

ಒಂದು ನೂರು ರೂಪಾಯಿಯ ಸೇರುಗಳು ೬ (ಆರು) ಸಾವಿರ ತೆಗೆಯಲ್ಪಟ್ಟಿವೆ. ಮತ್ತು ಹತ್ತು ರೂಪಾಯಿಯ ೨೦ (ಇಪತ್ತು) ಸಾವಿರ ಶೇರುಗಳು ತೆಗೆಯಲಟ್ಟಿವೆ,

ಪ್ರತಿಯೊಂದು ನೂರು ರೂಪಾಯಿ ಶೇರಿನ ಬಗ್ಗೆ ಅರ್ಜಿ ಕೂಡ ೪೦ ರೂಪಾಯಿ, ಮುಂದೆ ೨ ತಿಂಗಳ ನಂತರ ೩೦ ರೂಪಾಯಿ, ಆ ಮೇಲೆ ಮತ್ತೂ ೨ ತಿಂಗಳ ನಂತರ ೨೦ ರೂಪಾಯಿ ಅನಂತರ ೨ ತಿಂಗಳಾದ ಮೇಲೆ ಉಳಿದ ೧೦ ರೂಪಾಯಿ ಕೊಡತಕ್ಕದ್ದು.

ಈಗಿನ ಕಾಲದಲ್ಲಿ ಎಲ್ಲತರದ ಹಳೇ ಧಂದೆಗಳೂ (ಗಿರಣಿಗಳೂ ಮೋಟರ ನಡೆಯಿಸುವದೂ, ವಗೈರೆ) ಬಹಳಾದ್ದರಿಂದ ಮತ್ತು ಒಬ್ಬರ ಮೇಲೊಬ್ಬರ ಮೇಲಾಟದಿಂದ ಲುಕ್ಸಾನದ ಮಾರ್ಗಕ್ಕೆ ಹತ್ತಿರುತ್ತವೆ. ಇಂಥ ವೇಳೆಯಲ್ಲಿ ಇಡೀ ಹಿಂದುಸ್ಥಾನಕ್ಕೆ ಉದಾಹರಣೆಯಾಗುವಂತೆ ದೊಡ್ಡದೊಡ್ಡ ರೇಲ್ವೆಗಳಿಗೆ ಈ ಗಾಯಿಡ ರೇಲ ರೋಡದ ಶಾಖೆಗಳನ್ನು ತಯಾರಮಾಡಿ ಅಗದಿ ಹೊಸದಾದಂಥ ಒಂದು ಧಂದೆಯನ್ನು ಜನರ ಮುಂದೆ ಇಡಬೇಕೆಂದು ಈ ಕಂಪನಿಯ ಉದ್ದೇಶವಿರುತ್ತದೆ. ಇಂಥ ರೇಲ್ವೆಗಳಲ್ಲಿ ಮಿತವ್ಯಯೀ ಜನರಿಗೆ ಮತ್ತು ಭಾಂಡವಲವಿದ್ದವರಿಗೆ ತಮ್ಮ ಭಾಂಡವಲವನ್ನು ಫಾಯಿದೇಶೀರ ರೀತಿಯಿಂದ ತೊಡಗಿಸಲಿಕ್ಕೆ ನಾಕಷ್ಟು ಆಸ್ಪದವಿರುತ್ತದೆ. ಮತ್ತು ಅನುದ್ಯೋಗಿ ಜನರಿಗೆ ಬೇಕಾದಷ್ಟು ಕೆಲಸ ಸಿಗಲಿಕ್ಕೆ ಸಮಯವಿರುತ್ತದೆ.

ಮೇಲಾಗಿ ಈ ಪ್ರಕಾರ ತಯಾರ ಮಾಡಿದ ಗಾಯಿಡ ರೇಲ ರೋಡದ ಎಲ್ಲ ಹಕ್ಕುಗಳು ರೇಲ್ವೆಗಳಂತೆ ಸಾರ್ವಜನಿಕವಾಗುವವು. ಹೊಸತರದ ಮತ್ತು ಅಲ ಖರ್ಚಿನಿಂದ ಆಗುವ ಈ ಗಾಯಿಡ ರೇಲ ರೋಡುಗಳ ಶಾಖೆಗಳನ್ನು ತಯಾರ ಮಾಡುವುದೂ ಅವುಗಳನ್ನು ನಡಿಸುವುದೂ ಮುಂತಾದ ಎಲ್ಲತರದ ವ್ಯವಸ್ಥೆಗಳು ಶೇರ ಹೋಲ್ಡರರ ಕೈಯಲ್ಲಿಯೇ ಇರುವವು.

ಆದ್ದರಿಂದ ಎಲ್ಲಜನರಿಗೆ ಈ ಕಂಪನಿಯ ಡಾಯರೆಕ್ಟರರ ಆಗ್ರಹದ ವಿನಂತಿ ಏನೆಂದರೆ—

ಎಲ್ಲರೂ ಏಕಮನಸ್ಸಿನಿಂದ ಈ ಲೋಕೋಪಯೋಗದ ಕೆಲಸಕ್ಕೆ ಸೇರುಗಳನ್ನು ಯಥಾಶಕ್ತಿ ತಕ್ಕೊಂಡು ಸಹಾಯಮಾಡಬೇಕು.

ಕಂಪನಿ 'ಪ್ರಾಸ್ಪೆಕ್ಟಸದ' ಶೇರುಗಳನ್ನು ತಕ್ಕೊಳ್ಳಬೇಕಾಗುವ ಅರ್ಜಿ ನಮೂನೆಗಳ ದೆಶೆಯಿಂದ ದಿ. ಮ್ಯಾನೇಜಿಂಗ ಡಾಯರೆಕ್ಟರ ಆಲಮಟ್ಟಿ ಜಿಲ್ಹಾ ವಿಜಾಪೂರ ಇವರಿಗೆ ಬರೆದು ತರಿಸಿಕೊಳ್ಳಬೇಕು.

ಆಲಮಟ್ಟಿ. (**ಸಿ. ಸ್ಕೆಲ್ಟನ್**
ತಾ, ೧೨-೧-೧೯೩೩, (**ಮ್ಯಾನೇಜಿಂಗ್ ಡಾಯರೆಕ್ಟರ್.**

ಶರಣಸಂ

The Sharana

ನಿಷ್ಠುರ! ದಾಕ್ಷಿಣ್ಯ ಸಲ್ಲ ನಾನಲ್ಲ! ತೋರ್ಪ
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನೆ ||

ಸಂಪಾದಕರು:-
ಗುಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇ

ಪ್ರತಿ ಸೋಮವಾರವೂ ಪ್ರಕಟವಾಗುವುದು

ಪಟ್ಟೆ- ಸೋಮವಾರ ತಾರೀಖು ೧ ನೆಯ ೧೯೩೩. | ಸಂಚಿಕೆ

ಮೌ. ಶೌಕತ ಅಲ್ಲಿಯವರ ಆಗಮನ.

ಮ. ಗಾಂಧಿ ಪಂ. ಜವಾಹರಲಾಲರನ್ನು ಕಾಣುವರು

ಹಿಂದುಸ್ಥಾನದಲ್ಲಿ ಶಾಂತತೆಯನ್ನು ಸ್ಥಾಪಿಸುವ ಪ್ರಯತ್ನ.

ಮೌ. ಶೌಕತ ಅಲ್ಲಿಯವರು ತಾ. ೨೬ ನೆಯ ದಿವಸ ತಮ್ಮ [illegible]ರಿಕೆಯ ಪ್ರವಾಸವನ್ನು ಮುಗಿಸಿಕೊಂಡು ಮುಂಬಯಿಗೆ ಬಂದರು.

ಮೌ. ಶೌಕತ ಅಲ್ಲಿಯವರು ಪತ್ರಿಕೆಯ ಪ್ರತಿನಿಧಿಗಳಿಗೆ ತಾವು ಮೊದಲು ವ್ಹಾಯಿಸ್‌ರಾಯರನ್ನು ಕಾಣುವೆವೆಂತಲೂ, ಅನಂತರ ಮ. ಗಾಂಧಿ ಮತ್ತು ಪಂ. ಜವಾಹರಲಾಲರನ್ನು ಸಂದರ್ಶಿಸುವ ಪ್ರಯತ್ನ ಮಾಡುವೆವೆಂತಲೂ ತಿಳುಹಿಸಿರುವರು.

ನಾನು ಆಶಾವಾದಿಯಿರುವುದರಿಂದ ಭರತಖಂಡದಲ್ಲಿ ಶಾಂತತೆಯ ಸ್ಥಾಪಿಸಲು ಮನಃಪೂರ್ವಕ ಪ್ರಯತ್ನಿಸುವೆನೆಂದು ಮತ್ತು ನನ್ನ ಕಾರ್ಯ ಯಶಸ್ಸು ದೊರೆಯುವ ವಿಶ್ವಾಸವಿದೆಯೆಂದು ತಿಳಿಸಿದರು.

ಬೆಂಕಿಯು ಕಾಟ

ಕನ್ನಾ ಕರಬಸಪ್ಪಾ ಶೆಟ್ಟರ

ಸೈ

ಪ್ರೂಫ್ ಬಾಕ್ಸ ಮೇಕರ

ಗದಗ ಮತ್ತು ಹುಬ್ಬಳ್ಳಿ

ಬ್ರಾಂಚ್ ಆಫೀಸ ಬೆಳಗಾವ ಖಡೆಬಜಾರ.

ತ್ರಿಜೂರಿಯಲ್ಲಿ ಸೋಟು ವ ಬಂಗಿನ ನಿಸ್ತ ಹಸ್ತಪತ್ರಿಕೆ ... ಸುಡುತ್ತಿರುವುದು



ಹುಬ್ಬಳ್ಳಿ ಸ್ವದೇಶಿ ವ ... ಕೆ. ಶೆಟ್ಟರ ಮತ್ತು ಗದ ರಿಯ ಸತ್ವ ಸರಿ ಡಿಸೆಂಬರ ೧೯೩೧ನೇ ಸದರ ಕಂಪನಿಯವರು ತವ ಹೊಂದಿದ ಫಾಯರ್‌ಪ್ರೂಫ್ ರಿಯಲ್ಲಿ ಬಂಗಾರದ ವಂಕಿ ಒ ಹಳೆ ಜತಿ ಒಂದು ಹತ್ತು ರೂ ದ ನೋಟು ಒಂದು ನಂ. K. 11 ... ಇವುಗಳನ್ನು ಅಧ್ಯಕ್ಷ ... ಸಿದ್ಧರಾಮಪ್ಪ ಪಾ ಪಟಿ ... ವ ಊರ ಪ್ರಮು ಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾ ನುಗಳನ್ನು ಇಟ್ಟು ೧|| ಬಗೆ— ...ಕಟ್ಟಿಗೆಯಲ್ಲಿ ೧|| ತಾಸಿನ ವರೆಗೆ (೨) ಸುಟ್ಟು ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ... ಹಾಗೇ ಇರುತ್ತವೆ.

ಚೆನ್ನಾಗಿ ಕೆಂಪಗೆ ಕಾಯ್ದುವಂತೆ ಸುಟ್ಟು ಅದರ ಸತ್ಯತೆ ಮತ್ತು ಭದ್ರತೆಗಳನ್ನು ತೋರಿಸಿದರು ... ಪ್ರದರ್ಶನದವರು ಶ್ರೀ ನಿವಾಸಿಗಳು ಶ್ರೀ. ಕೆ. ಶೆಟ್ಟರ ಇವರ ಕಾರ್ಯಾಲಯ ದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಇದಕ್ಕಿದೆ ಸಂಸ್ಥಾನಾಧಿಪತಿಗ ಳಿಂದ ಉತ್ತಮೋತ್ತಮಗತಿಯ ತ್ರಿಜೋರಿ ಯ ಕಾರ್ಖಾನೆ... ಎನಿಸಿಕೊಂಡು ಬಂಗಾರದ ಮೆಡಲು ಮತ್ತು ಸರ್ಟಿ ಫಿಕೇಟು ಹೊಂದಿದೆ ಮತ್ತು ತಿಜೋರಿ ಕೀಲಿಗ ವಗೈರೆ ... ಕೆಲಸ ಖಾನೆಯು

ಮಂದಿರದಲ್ಲಿ ಹರೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟಿತು.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಟ ೨. | ಆಲಮಟ್ಟಿ ಮೇ ತಾರೀಖು ೧ ನೆಯ ಸೋಮವಾ

ಅಖಿಲ ಭಾರತೀಯ

ಶ್ರೀಮದ್ವೀರಶೈವ ಮಹಾಸಭಾ ಧಾರ.

ಮೇ ತಿಂಗಳ ತಾರೀಖು ೧೮-೧೯ ರಲ್ಲಿ

ಮಹಾಸಭೆಯು ತಪ್ಪದೆ ಧಾರವಾಡದಲ್ಲಿ ಕೂಡು

ಅಧ್ಯಕ್ಷರು:-

ಸಾಹಿತ್ಯಭೂಷಣ ಶ್ರೀಮಾನ್ ಪಿ. ಜಿ. ಹಳಕಟ್ಟಿಯವರು.

ಈ ಸಾರೆಯು ಸಭೆಯು ಅತ್ಯಂತ ಮಹತ್ವದ್ದಾಗಿದೆ. ಈ ಸಾರೆಯು ಸಭೆಯಲ್ಲಿ ವೀರಶೈವ ಸಮಾಜದ ಶ್ರೇಯಸ್ಸಿಗೆ ಸಾಧನವಾದ ಮಹಾಸಭೆಯ ಸುಸಂಘಟನೆಯು ಸಿದ್ಧವಾಗುವದಿದೆ.

ಆದಕಾರಣ ಎಲ್ಲ ಭಾಗಗಳ ವೀರಶೈವ ಪ್ರಮುಖರೂ ಈ ಸಾರೆಯು ಸಭೆಗೆ ಅಗತ್ಯವಾಗಿ ಬರಬೇಕು. ಯಾವ ಭಾಗದವರು ಈ ಸಾರೆಯು ಸಭೆಯನ್ನು ನಿರ್ಲಕ್ಷಿಸುವರೋ ಅವರು ಮುಂದೆ ಬಹುಕಾಲ ಹಿಂದುಳಿಯಲೇಬೇಕಾಗುವುದು.

ನೈಝಾಮ ಭಾಗದಿಂದ ಈ ಸಾರೆ ಹೆಚ್ಚು ವೀರಶೈವ ಪ್ರಮುಖರು ಮಹಾಸಭೆಗೆ ತಪ್ಪದೆ ಬಂದು ತಮ್ಮ ಹಕ್ಕುಬಾಧ್ಯತೆಗಳನ್ನು ಕಾಯ್ದುಕೊಳ್ಳಬೇಕು.

ಅಖಿಲ ವೀರಶೈವ ಮಹಿಳಾ ಪರಿಷತ್ತು.

ನೀಲಗಿರಿಯ ನೆಲ್ಯಾಳ ಸಂಸ್ಥಾನದ

ಮಹಾರಾಣಿ ಶ್ರೀಮತಿ ಬೋರಮ್ಮಣ್ಣಿಯವರ ಅಧ್ಯಕ್ಷತೆಯಲ್ಲಿ ಮಹಿಳಾ ಪ. ಮಹಾಸಭೆಯ ಕಾಲಕ್ಕೇನೇ ಧಾರವಾಡದಲ್ಲಿ ಕೂಡುವುದರಿಂದ ಹೆಣ್ಣುಮಕ್ಕಳೂ ಸಭೆಗೆ ವಿಶೇಷವಾಗಿ ಬರಬೇಕು.

ಅಖಿಲವೀರಶೈವ ಶಿಕ್ಷಣ ಪರಿಷತ್ತು ಮೇ ತಿಂಗಳು ೧೭ನೆಯ ತಾರೀಖಿನಲ್ಲಿಯೇ ಕೂಡುವುದರಿಂದ ಶಿಕ್ಷಣಾಭಿಮಾನಿಗಳು ತಪ್ಪದೇ ಈ ಸಮ್ಮೇಲನಕ್ಕೆ ಆಗಮಿಸಬೇಕು.

ಬಸವೇಶನ ಆತ್ಮೀಯ ಆಕರ್ಷಣ ಶಕ್ತಿ.

(ಲೇಖಕ-ಮಲ್ಲಭಸ್ತ್ರ ಶ್ರೀಬಸವತತ್ವ ಸಮಾಜ ದಾವಣಗೆರೆ)
ಹಿಂದಿನ ಸಂಚಿಕೆಯಿಂದ ಮುಂದುವರಿದುದು.) —

ಶ್ರೀ ಬಸವಣ್ಣನವರ ಜೀವನವು ಹೇಗಿದ್ದಿತು? ಆಚರಣೆಯು ಹೇಗಿದ್ದಿತು? ವ್ಯವಹಾರವು ಹೇಗಿದ್ದಿತು? ಸರ್ವರೊಡನೆ ಒಡನಾಟವು ಹೇಗಿದ್ದಿತು? ಜನಸಾಮಾನ್ಯರನ್ನು ತಿದ್ದುವುದಕ್ಕೆ ಯಾವಯಾವ ಕಾರ್ಯಕಲಾಪಗಳನ್ನು ಮಾಡುತ್ತಿದ್ದರು? ಉಚ್ಚ ವರ್ಣದ ಹಿಂದು ಗಳನ್ನು ಯಾವ ರೀತಿ ತಿದ್ದುತ್ತಿದ್ದರು? ರಾಜಕಾರಣದಲ್ಲಿ ಹೇಗೆ ತೊಡಗಿದ್ದರು? ಧರ್ಮೋದ್ಧರಣೆಯನ್ನು ಯಾವ ರೀತಿಯಲ್ಲಿ ಮಾಡಿ ... ಸಾಧನೆಯನ್ನು ಮತ್ತು ತತ್ವ ಪ್ರಚಾರವನ್ನು ... ಹೇಗೆ ಮಾಡಿದರು? ಇವುಗಳಲ್ಲದೆ ... ತು? ಎಂಬ ವಿಷಯಗಳನ್ನು ಆ ... ನವರ ನಿಜವಾದ ಹೃದಯವನ್ನು

... ರ್ಮಪ್ರಚಾರಣೆಯನ್ನು ಮಾಡುವ ... ಮಾಡುವುದಕ್ಕೂ ಯಾವ ಯಾವ ... ಬ ವಿಚಾರವು ಯಾವ ಬೋಧಕ ... ರಲಾರದು. ಅವರು ಶಿವಾನುಭವ ... ನ್ನು ನಿರ್ಮಿಸಿ ಅದರಲ್ಲಿ ಪ್ರತಿದಿವ ... ಧಾರ್ಮಿಕ ಅನುಭವಗಳನ್ನು ಹೇಳುತ್ತ ... ಸಾಹಿತ್ಯಕ್ಕೆ ಜೀವಕಳೆಯನ್ನು ತುಂಬುತ್ತಿ ... ಟಪಕ್ಕೆ ಬಂದ ಶರಣರಲ್ಲಿ ಸ್ತ್ರೀಯರೂ ... ದು ವಚನಗಳನ್ನಾದರೂ ರಚಿಸಬೇಕೆಂಬ

... ನವರು ಐಶ್ವರ್ಯದಿಂದಾಗಲಿ ಅಧಿಕಾರದಿಂದಾ ... ಮರೆಯಲಿಲ್ಲ. ದೇಶಸೇವೆಯೇ ಈಶಸೇವೆಯೆಂದೂ ... ದೇಶದ ಹಿತವೇ ತಮ್ಮ ಹಿತವೆಂದೂ ಚೆನ್ನಾಗಿ ಅರಿತವರಾಗಿದ್ದರು. ಜನರ ಕಷ್ಟನಿಷ್ಠುರಗಳನ್ನು ತಿಳಿದವರಾಗಿದ್ದರು. ಆತ್ಮಸ್ತುತಿ ಪರ ನಿಂದೆಯನ್ನು ಕೇಳುತ್ತಿರಲಿಲ್ಲ. ತನ್ನೊಡನೆ ಯಾರಾದರೂ ಕೋಪ ಗೊಂಡರೆ ಅವರೊಡನೆ ಕೋಪಿಸುತ್ತಿರಲಿಲ್ಲ. ಪ್ರತಿದಿವಸದ ಕಾರ್ಯ ಕಲಾಪಗಳನ್ನು ಅಂದಂದೇ ಮುಗಿಯಿಸಿ ಬಿಡುತ್ತಿದ್ದರು. ಸ್ವಾಮಿ ಭೃತ್ಯ ಸಂಬಂಧವನ್ನು ಅರಿತು ಅದರಂತೆ ಆಚರಿಸಿ ಇತರರನ್ನು ಆಚಾರವಂತರಾಗಿ ಮಾಡುತ್ತಿದ್ದರು. ಗುರುಲಿಂಗಜಂಗಮಕ್ಕೆ ತನುಮನ ಧನಗಳನ್ನು ನಿರ್ವಂಚನೆಯಿಂದ ಸಮರ್ಪಿಸುತ್ತಿದ್ದರು. ವೇಷಭಾಷೆಗಳಿಗೆ ಸರಿಯಾದ ಆಚರಣೆಯನ್ನು ಕಾಣದಿದ್ದರೆ ನಿರ್ದಾಕ್ಷಿಣ್ಯವಾಗಿ ಖಂಡಿಸಿ ಬಿಡುತ್ತಿದ್ದರು. ನಿಷ್ಕಾಮಕರ್ಮಯೋಗಿಗ ಳೆಂದರೆ ಶ್ರೀ ಬಸವಣ್ಣನವರನ್ನು ಬಿಟ್ಟರೆ ಮತ್ತಾರೂ ಸಿಕ್ಕಲಿಕ್ಕಿಲ್ಲ. ಚಿನ್ನದಲ್ಲಿ ಒಂದು ಒರೆಯೇ ಆಗಲಿ, ಅನ್ನದೊಳು ಒಂದು ಅಗಳೇ ಆಗಲಿ, ಸೀರೆಯೊಳು ಒಂದು ಎಳೆಯೇ ಆಗಲೀ ನನಗೆ ಇರಲಿ, ನನ್ನ ಮನೆಯವರಿಗಿರಲಿ, ಬಂಧುಬಾಂಧವರಿಗಿರಲೆಂದು ಯಾವ ಕಾಲಕ್ಕೂ ಆಶಿಪಟ್ಟವರಲ್ಲ. ಯಾವ ಕಾರ್ಯಗಳನ್ನೇ ಮಾಡಲಿ ಶಿವಾರ್ಪಿತ ಬುದ್ಧಿಯಿಂದಲ್ಲದೆ ಎಂದಿಗೂ ಮಾಡುತ್ತಿರಲಿಲ್ಲ. ಜನ ಸಮೂಹಕ್ಕೆ ಆಗಲಿ ಶರಣ ಸಮೂಹಕ್ಕೆ ಆಗಲಿ ಹಿತವಾದರೆ ಎಲ್ಲವೂ ಇತರೇಯವರಿಂದ ಆಯಿತೆಂತಲೂ ಕಷ್ಟನಷ್ಟಗಳು ಸಂಭವಿಸಿದರೆ ತಮ್ಮಿಂದ ಒದಗಿತೆಂದು ಹೇಳುತ್ತಿದ್ದರು. ಗುರುವಿನಲ್ಲಿ ಸದಾಚಾರಿ ಯಾಗಿಯೂ, ಲಿಂಗದಲ್ಲಿ ಶಿವಾಚಾರಿಯಾಗಿಯೂ, ಜಂಗಮದಲ್ಲಿ ಸಮಯಾಚಾರಿಯಾಗಿಯೂ ಆಚಾರದಲ್ಲಿ ಸುವಿಚಾರಿಯಾಗಿಯೂ ನಡೆಯುತ್ತಿದ್ದರು. ಜಂಗಮಪ್ರಾಣಿಯಾಗಿ ದಾಸೋಹ ಭಾವನೆ ಯಿಂದ ಪ್ರತಿದಿನವೂ ವರ್ತಿಸುತ್ತಿದ್ದರು. ಅಜ್ಞಾನದಿಂದಲೇ ಭವ ಭಾಗಿಗಳಾಗಿ ಹೋಗಬಾರದೆಂದು ಸುಜ್ಞಾನವನ್ನು ಬೋಧಿಸುತ್ತಿದ್ದರು. ಜಾತಿ! ಜಾತಿ! ಎಂದು ಎಲ್ಲರೂ ಪ್ರಲಾಪಿಸುತ್ತಿದ್ದರೆ ಅಯ್ಯೋ! ಕಷ್ಟ! ಕಷ್ಟ! ಜಾತಿಜನ್ಮದಲ್ಲಿ ಏಕೆ ಜನಿಸಿದೆನೆಂದು ಅವರು ಅನುತಾಪವನ್ನು ಸೂಚಿಸುತ್ತಿದ್ದರು. ದ್ವೈತಾದ್ವೈತವನ್ನು ನುಡಿ ಯುತ್ತಿರಲಿಲ್ಲ. ಸಂಕಲ್ಪವನ್ನು ಮಾಡಿಕೊಂಡು ವಿಕಲ್ಪಕ್ಕೆ ಕೊಡುತ್ತಿರಲಿಲ್ಲ. ಅನ್ಯರ ಸಹಾಯವನ್ನು ಬೇಡು ಕಾಲೋಚಿತ ಬಲ್ಲವರಾಗಿ ಕ್ರಮಯುಕ್ತರಾಗಿ ನಡೆಯುತ್ತ ಅಜ್ಞಾ ಜನರ ಸುಧಾರಣೆಗಾಗಿಯೂ ಆತ್ಮೋದ್ಧರ ಕಳ್ಳತನವನ್ನು ಮಾಡಬೇಡಿರಿ, ಪ್ರಾಣವಧೆಯನ್ನು ನಿಲ್ಲಿಸಿಂ ಡದಿರಿ, ಶಾಂತಿಯುತರಾಗಿರಿ, ಬಾಳಿರಿ, ದುರ್ಮಾರ್ಗದಲ್ಲಿ ಬೇಡಿರಿ, ಸತ್ಪ್ರಜೆಗಳಾಗಿರಿ, ಸಕಲ ಜೀವರಾಶಿಗಳಿಗೆ ಯಾ ಒಳ್ಳೆಯದನ್ನೇ ಬಯಸುತ್ತ ಬನ್ನಿರಿ, ಶಿವಲೋಕವು ಬೇರೆ ಯಮಲೋಕವು ಬೇರೆ ಇಲ್ಲ, ಎಲ್ಲವೂ ನಿಮ್ಮಲ್ಲಿದೆ. ಸುಳ್ಳು ವುದೇ ಯಮಲೋಕ ಸತ್ಯವ ನುಡಿವುದೇ ಶಿವಲೋಕವೆ ಬೋಧಿಸುತ್ತಿದ್ದರು.

ಯಾವ ಧರ್ಮದಲ್ಲಿ ಪ್ರೇಮತತ್ವವಿರುವುದಿಲ್ಲವೋ ಅದನ್ನು ಧರ್ಮವೆಂದು ಭಾವಿಸುತ್ತಿರಲಿಲ್ಲ. ಸ್ತುತಿ ನಿಂದೆಗಳಿಗೆ ಹಿಗ್ಗಿ ಕುಗ್ಗು ತ್ತಿರಲಿಲ್ಲ. ಸರ್ವರನ್ನು ಸಮಾನ ಭಾವನೆಯಿಂದ ಕಾಣುತ್ತಿದ್ದರು. ಭಗವಂತನು ಪ್ರತಿಯೊಂದು ಜೀವಿಯ ಅಂತರಂಗದಲ್ಲಿ ವಾಸಿಸುತ್ತಿ ರುವನು, ಅವನ ದೃಷ್ಟಿಯಲ್ಲಿ ಎಲ್ಲರೂ ಒಂದೇ, ಶಿವಾಚಾರಯುಕ್ತ ನಾದರೆ ಸ್ವಪಚನಾದರೂ ಅವನಿಗೆ ಜಾತಿಯ ಬಂಧನವಿಲ್ಲ, ಯಾವ ಹೀನ ಕುಲದವನಾದರೂ ಸಹ ಅವನಿಗೆ ಸಮಾಜದಲ್ಲಿ ಒಂದು ಸ್ಥಾನ ಉಂಟು. ಇತರರಂತೆ ಸಮಾನವಾದ ಹಕ್ಕು ಬಾಧ್ಯ ತೆಗಳನ್ನು ಪಡೆಯಲು ಅಧಿಕಾರವುಳ್ಳವನಾಗಿರುತ್ತಾನೆ, ಆದರೆ ಅವನು ಆದರಣೀಯವಾದ ನೀತಿ ಮಾರ್ಗವನ್ನು ಅನುಸರಿಸಬೇ ಕೆಂದು ಬೋಧಿಸುತ್ತಿದ್ದರು.

ಶ್ರೀ ಬಸವಣ್ಣನವರ ಉದಾತ್ತ ತತ್ವಗಳನ್ನು ಆಚರಣೆಗೆ ತಂದ ಸರಸಕವಿ ಹರೀಶ್ವರನ ಅಳಿಯನಾದ ರಾಘವಾಂಕನು ಹರೀ ಶ್ವರನ ಕಾವ್ಯದಲ್ಲಿ ಅನ್ಯತವರಿಯದ ಹೊಲೆಯನಂನೆನೆಯೆ ಪುಣ್ಯ ವೆಂದು ನುಡಿದಿರುವನು. ಇನ್ನೂ ಅನೇಕ ವೀರಶೈವ ಕವಿಗಳೂ ಶಿವಶರಣರೂ ಇದುವರೆಗೂ ಅನೇಕ ತತ್ವಗಳನ್ನು ಆಚರಣೆಗೆ ತಂದವರಾಗಿರುತ್ತಾರೆ. ಈ ತತ್ವಗಳೇ ದೇಶದಲ್ಲೆಲ್ಲಾ ಪ್ರಸಾರ ವಾಗಲು ಅಲ್ಲಲ್ಲಿ ಸಂಘಗಳೂ, ಸಂಸ್ಥೆಗಳೂ, ವಿದ್ಯಾನಿಲಯಗಳೂ ತಲೆ ಎತ್ತುತ್ತಿರುವವು.

ವೈಷ್ಣವ ಅರಸನಾದ ಶಿಂಗೀ ರಾಜನು ವೀರಶೈವ ದೀಕ್ಷಾ ಸಂಸ್ಕಾರವನ್ನು ಹೊಂದಿ ಆ ಮಹಾತ್ಮನ ಪುರಾಣವನ್ನು ಶಿಂಗಿ ರಾಜ ಪುರಾಣವೆಂಬ ಪ್ರಸಿದ್ಧ ಕಾವ್ಯದಲ್ಲಿ ರಚಿಸಿರುವನು. ಪಾಲ್ಕುರಿಕೆ ಸೋಮನಾರಾಧ್ಯರೂ ಅತ್ತಲೂ ಪಾಪಕವಿ ಮುಂತಾದ ಆಂಧ್ರ ಕವಿಕುಲ ಲಲಾಮರೂ ಆಂಧ್ರ ಭಾಷೆಯಲ್ಲಿ ವೀರಶೈವ ಕವಿಗಳಿಗಿಂತ ಮೊದಲೇ ಉದ್ಗ್ರಂಥಗಳನ್ನು ಬರೆದು ಆಂಧ್ರ ನಾಡಿನಲ್ಲೆಲ್ಲಾ ಬಸವಣ್ಣನವರ ಕೀರ್ತಿಯನ್ನು ಪ್ರಚಾರಮಾಡಿದರು. ಪ್ರತಿ ಶತ ಮಾನದಲ್ಲಿ ಬೋಧಿಸಿದರೂ ಕರ್ನಾಟಕದಲ್ಲಿ ಬಸವಣ್ಣನವರ ವಿಷಯ ವಾಗಿ ರಗಳೆಗಳ ರೂಪದಲ್ಲಿಯಾಗಲೀ, ಷಟ್ಪದಿ, ತ್ರಿಪದಿ, ಅಥವಾ ವ ಚನರೂಪದಲ್ಲಿಯಾಗಲೀ ಕಾವ್ಯಗಳನ್ನು ರಚಿಸದೇ ಇರುವ ಕವಿಗಳೇ ಇಲ್ಲ. ಈ ವಿಚಾರ ಸ್ವತಂತ್ರ ಮತ್ತು ಕ್ರಾಂತಿ ಯುಗದ ಪೂರ್ವಾರ್ಧ ದಲ್ಲಿಯೇ ವೀರಶೈವರಲ್ಲದ ಅನ್ಯಮತದ ಎಷ್ಟೋ ತತ್ವಜ್ಞರು ಬಸ ವಣ್ಣನವರ ಹೃದಯವನ್ನು ಅರಿತವರು ಅತ್ಯುತ್ತಮ ಗ್ರಂಥಗಳನ್ನು ಪ್ರಕಟಿಸಿ ಬಸವಣ್ಣನವರಿಗೆ ಕಾಣಿಕೆಯನ್ನೊಪ್ಪಿಸುತ್ತಿರುವರು. ಮತ್ತೆ ಕೆಲವರು ಪಾಶ್ಚಾತ್ಯ ಭಾಷೆಗೆ ಅನೇಕ ಆ ಮಹಾನುಭಾವರ ವಚನ ಗಳನ್ನು ತರ್ಜುಮೆ ಮಾಡಿ ಇಂಗ್ಲೆಂಡ್; ಅಮೇರಿಕಾ; ಜರ್ಮನಿ ಮುಂತಾದ ದೇಶಾಂತರಗಳಿಗೆ ಕಳುಹಿಸಿರುವರು. ಇವೆಲ್ಲವನ್ನು

ನಿಝಾಮ ಸಂಸ್ಥಾನದ ವೀರಶೈವರೂ ಮತ್ತು ವೀರಶೈವ ಮಹಾಸಭೆಯೂ.

ಅಖಿಲಭಾರತ ೧೧ನೆಯ ಶ್ರೀಮದ್ವೀರಶೈವ ಮಹಾಸಭೆಯು ...ಂಗಳ ೧೮-೧೯ನೆಯ ತಾರೀಖಿಗೆ ಧಾರವಾಡದಲ್ಲಿ ರಾವಸಾ ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ನೆರವೇರುವದೆಂಬುದು ...ಕಾಶವಾಡಿದ್ದಾಗಿದೆಯಷ್ಟೇ? ಮಹಾಸಭೆಯ ದಿವಸಗಳು ಸತ್ತಿದ ಹಾಗೆಲ್ಲ ಎಲ್ಲ ಭಾಗಗಳ ವೀರಶೈವರಲ್ಲಿಯೂ ಜಾಗೃತಿಯೂ ಉತ್ಸಾಹವೂ ಉಂಟಾಗಹತ್ತಿರುವವು. ...ಂದರೆ ಹಿಂದಿನ ಎಲ್ಲ ಮಹಾಸಭೆಗಳಿಗಿಂತ ಈ ಮಹಾ... ಒಂದು ವಿಶೇಷ ರೂಪವಾಗಿ ಜರುಗತಕ್ಕದ್ದಿರುವದು. ಈ ...ಮದಲ್ಲಿ ನಿಝಾಮ ರಾಜ್ಯದವೀರಶೈವರಲ್ಲಿ ಇನ್ನೂ ಅಷ್ಟೊಂದು ...ೃತಿಯು ಕಾಣಿಸುವುದಿಲ್ಲವಲ್ಲ!

ನಿಝಾಮ ರಾಜ್ಯದಲ್ಲಿ ಅಜಮಾಸು ೮ ಲಕ್ಷ ವೀರಶೈವರಿರುವರು. ಅವರ ಸಾಂಪತ್ತಿಕ ಸ್ಥಿತಿಯಾದರೂ ಉಳಿದ ಭಾಗದ ವೀರಶೈವರಿಗಿಂತ ಚನ್ನಾಗಿದೆ. ಆದರೆ ಅವರು ಕನ್ನಡ, ಮರಾಠಿ, ಮತ್ತು ತೆಲುಗು ಭಾಷೆಗಳಿಂದ ವಿಭಾಗಿಸಲ್ಪಟ್ಟಿರುವುದರಿಂದಲೂ ಮತ್ತು ಶಿಕ್ಷಣ ಪ್ರಸಾರವು ಇನ್ನೂ ಅಷ್ಟೊಂದು ಹೆಚ್ಚಾಗಿಲ್ಲವಾದುದರಿಂದಲೂ ಅವರಿಗೆ ಬೇರೆ ಭಾಗಗಳ ವೀರಶೈವರ ಬಳಿಕೆಯು ವಿಶೇಷವಾಗಿರುವುದಿಲ್ಲ. ಆದರೂ ಚಿತಾಪುರ, ತಾಂಡೂರ, ರಾಯಚೂರು, ಲಾತೂರ, ಕಲ್ಲಬುರ್ಗಿ, ಯಾದಗಿರಿ, ಚಿಂಚೋಳಿ, ಹುಮನಾಬಾದ, ಮೋಮಿನಾಬಾದ, ಹೈದರಾಬಾದ ಮೊದಲಾದ ಪಟ್ಟಣಗಳಲ್ಲಿ ವೀರಶೈವರ ಜಾಗೃತಿಯು ಕಂಡುಬರುವುದು. ಆ ಪ್ರದೇಶದ ಮಹಾಶಯರು ಮಹಾಸಭೆಯ ಕಾರ್ಯಕಲಾಪಗಳನ್ನು ವಿಶೇಷವಾಗಿ ಈ ಸಾರಿಯ ಮಹಾಸಭೆಯ ಘಟನೆಯನ್ನು ಅವಲೋಕಿಸುವದೂ ಮತ್ತು ಮಹಾಸಭೆಯ ಸ್ವರೂಪವನ್ನು ತಮ್ಮತಮ್ಮ ಭಾಗಗಳ ಸಮಾಜಬಾಂಧವರಿಗೆ ತಿಳಿಸಿಕೊಡುವುದೂ ಅವರ ಕರ್ತವ್ಯವಾಗಿಲ್ಲವೆ?

ಮಹಾಸಭೆಯೆಂದರೆ ೩೫ ಲಕ್ಷ ವೀರಶೈವರ ಕೇಂದ್ರೀಕೃತವಾದ ಶಕ್ತಿಯ ಸಭೆ. ಈ ಸಾರೆ ಮಹಾಸಭೆಯ ಕಾರ್ಯಗಳಿಗೆ ಒಂದು ವ್ಯವಸ್ಥಿತ ಸ್ವರೂಪವನ್ನು ಕೊಟ್ಟು ಆಯಾ ಭಾಗಗಳ ವೀರಶೈವರ ಪ್ರಮಾಣದಂತೆ ಈ ಕಾರ್ಯಕಾರಿ ಮಂಡಳಗಳಲ್ಲಿ ಸದಸ್ಯರನ್ನು ಆರಿಸುವವರಿದ್ದಾರೆ ಈ ಸಾರೆ ಮಹಾಸಭೆಯು ಸುಸಂಘಟಿತವಾಯಿತೆಂದರೆ ಅದರಲ್ಲಿ ಪಾಸಾದ ಠರಾವುಗಳನ್ನು ಆಚರಣೆಯಲ್ಲಿ ತರುವದು ಆದಕ್ಕೆ ಅನುಕೂಲವಾಗುವದು.

ಮತ್ತು ವಸ್ತು ಸ್ಥಿತಿಯಂತೆ ಯಾವ ಭಾಗದ ವೀರಶೈವರು ಜಾಗ್ರೃತರಾಗಿರುವರೋ ಆವರು ಮಹಾಸಭೆಯ ಲಾಭಗಳನ್ನು ಹೆಚ್ಚಾಗಿ ಪಡೆಯುವರು.

ಮಹಾಸಭೆಯಿಂದಾಗುವ ಲಾಭಗಳೇನು? ಆ ಲಾಭಗಳನ್ನು ಯಾವಪ್ರಕಾರ ಪಡೆಯಬೇಕೆಂಬ ಪ್ರಶ್ನೆಗಳು ಕೆಲವರಿಗೆ ಮುಂದೆ ಬಂದು ನಿಲ್ಲುವವು. ಮಹಾಸಭೆಯೆಂದರೆ ೩೫ ಲಕ್ಷ ಸಮಾಜ ಬಾಂಧವರ ಏಕೀಕೃತಸಭೆ. ಮಹಾಸಭೆಯು ಸರ್ವ ವಿಧದಿಂದಲೂ ಜನರಲ್ಲಿ ಜಾಗೃತಿಯನ್ನುಂಟುಮಾಡುವದು. ಆಯಾ ಭಾಗದ ವೀರಶೈವರು ತಮ್ಮ ಪ್ರಾಂತಗಳಲ್ಲಿ ಉಪಸ್ಥಿತವಾಗಿರುವ ದುಸ್ಥಿತಿಗಳನ್ನು ಸಮಾಜಕ್ಕೆ ಸಾರಿ ಅವುಗಳನ್ನು ಹೋಗಲಾಡಿಸಿಕೊಳ್ಳಲು ಮಹಾಸಭೆಯಿಂದ ಸಹಾಯವನ್ನು ಹೊಂದುವರು.

ಸಮಾಜದ ಮುಂದಾಳುಗಳು ಒಂದುಗೂಡಿ ತಮ್ಮ ಸಮಾಜವು ಸರ್ವಾಂಗಸುಂದರವಾಗಬೇಕಾದರೆ ಯಾವಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬ ವಿಚಾರಗಳನ್ನು ಮಹಾಸಭೆಯಲ್ಲಿ ಮಾಡುವರು. ಈ ಪ್ರಕಾರವಾಗಿ ಮಹಾಸಭೆಯಲ್ಲಿ ಭಾಗವಹಿಸಿರುವ ಪ್ರತಿಯೊಬ್ಬ ವೀರಶೈವನಿಗೆ ತಾನು ಸಮಾಜಸೇವೆ ಮಾಡುವವದು ಅತ್ಯವಶ್ಯಕವೆಂದೂ ಮತ್ತು ಆ ಪ್ರಕಾರ ಟೊಂಕಕಟ್ಟಿ ನಿಂತರೆ ತನಗೆ ೩೫ ಲಕ್ಷ ವೀರಶೈವರ ಬೆಂಬಲವಿರುವದೆಂದೂ ಮನವರಿಕೆಯಾಗುವದು. ಇದೇನು ಸಾಮಾನ್ಯ ಲಾಭವೇ?

ನಿಝಾಮ ರಾಜ್ಯದ ವೀರಶೈವರ ವತಿಯಿಂದ ಅಧ್ಯಕ್ಷರನ್ನು ಆರಿಸಬೇಕೆಂಬ ವಿಷಯವು ಹಿಂದಕ್ಕೆ ಕೆಲವು ಲೇಖಗಳಲ್ಲಿ ಪ್ರಕಟಪಡಿಸಲ್ಪಟ್ಟಿದ್ದಿತು. ಮಹಾಸಭೆಯ ಕಾರ್ಯಗಳಲ್ಲಿ ಅಂಗವಹಿಸದೆ ಒಮ್ಮೆಲೇ ಅಧ್ಯಕ್ಷರನ್ನೇ ಆರಿಸಬೇಕೆಂದರೆ ಅದೆಂತು ಸಾಧ್ಯವು? ಅನೇಕ ಮಹಾಜನಗಳು ಅಧ್ಯಕ್ಷರಾಗಲು ಯೋಗ್ಯರಿರಬಹುದು. ಆದರೆ ಆ ಭಾಗದ ಸಮಾಜವು ಜಾಗ್ರೃತವಾಗಿ ಉಚ್ಚ ಧ್ವನಿಯಿಂದ ಬೇಡಿದರಲ್ಲವೇ ಅದು ಸಾಧ್ಯವಾಗುವದು? ಇನ್ನೂವರೆಗೂ ನಿಝಾಮ ರಾಜ್ಯದಲ್ಲಿ ಮಹಾಸಭೆಯು ಕೂಡಿರುವದಿಲ್ಲ. ನಿಝಾಮ ವೀರಶೈವರು ಜಾಗೃತರಾಗಿ ವೀರಶೈವ ಮಹಾಸ... ಕೊಟ್ಟು ಅದರ ಕಾರ್ಯಕಲಾಪಗಳನ್ನು ವಹಿಸಿ... ಸ್ಥಿತಿಯು ಪ್ರಾಪ್ತವಾಗುತ್ತಿರಲಿಲ್ಲ. ಆದುದರಿಂದ ... ಪ್ರಥಮ ಸೋಪಾನವೆಂದರೆ ನಿಝಾಮ ರಾಜ್ಯದಿಂದ ಅನೇಕ ಮಹಾಶಯರು ಮೊದಲು ಮಹಾಸಭೆಗೆ ಆಗಮಿಸಲಿ; ಅಲ್ಲಿಯ ಕಾರ್ಯಗಳನ್ನೆಲ್ಲ ಅವಲೋಕಿಸಿ ಅದರಲ್ಲಿ ಭಾಗಿಗಳಾಗಲಿ ಅಂದರೆ ಅವರು ತಮ್ಮ ಭಾಗದ ವೀರಶೈವರ ದುರವಸ್ಥೆಯನ್ನು ತಿಳಿದುಕೊಳ್ಳಲಿಕ್ಕೂ ಮತ್ತು ಅವುಗಳನ್ನು ಹೋಗಲಾಡಿಸುವದಕ್ಕೂ ಅನುಕೂಲವಾಗುವದು.

ಡಿಶಂಬರ ತಿಂಗಳಿನಲ್ಲಿ ಮಹಾಸಭೆಯು ಕೂಡುವದೆಂದು ಪ್ರಕಟಿಸಿ ಆ ಮೇಲೆ ಎಪ್ರಿಲ್ ತಿಂಗಳಿಗೆ ಮುಂದೆ ಹಾಕಲ್ಪಟ್ಟಿತೆಂದು ಪ್ರಕಟವಾದರೂ ಅಲ್ಲಿಯ ಎಷ್ಟೋ ಜನರು ಬಂದು ಹೋದರು. ಮುಂದೆಹಾಕಲ್ಪಟ್ಟಿದೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾದರು ಕೂಡಾ ಅವರು ಮಹಾಸಭೆಯಾಗುವದೆಂಬ ಕೇಳಿಕೆಯಿಂದ ಬಂದು ತಿರುಗಿ ಹೋಗಬೇಕಾಯಿತು. ಹೀಗಾಗುವುದಕ್ಕೆ ಕಾರಣವೇನೆಂದರೆ ಕನ್ನಡ ಪತ್ರಿಕೆಗಳನ್ನು ಆ ಜನರು ಓದುವದೇ ಕಡಿಮೆ. ಆದುದರಿಂದ ಈ ಸಾರಿಯ ಮಹಾಸಭೆಗೆ ನಿಝಾಮ ರಾಜ್ಯದಿಂದ ವಿಶೇಷವಾಗಿ ಜನರು ಬರಬೇಕಾದುದು ಅವಶ್ಯವಾಗಿದೆ. ಮತ್ತು ಆ ಪ್ರಕಾರ ಅವರನ್ನು ಜಾಗ್ರೃತಗೊಳಿಸಿ ಕರೆದುಕೊಂಡು ಬರುವದು ಆ ಭಾಗದ ವೀರಶೈವ ಪ್ರಮುಖರ ಕರ್ತವ್ಯವಲ್ಲವೇ?

ಪಾಟೀಲ ಲಿಂಗನಗೌಡ.

ನೋಡುತ್ತ ಹೋದರೆ ಪರಮತೀಯರಿಗೂ ಕೂಡಾ ಎಷ್ಟು ಆದರಬುದ್ಧಿಯನ್ನು ಶ್ರೀ ಬಸವಣ್ಣನವರ ತತ್ವಗಳು ಹುಟ್ಟಿಸುತ್ತಲಿವೆ. ಆಹಾ ಬಸವಣ್ಣನವರ ಆದರ್ಶಪ್ರಾಯವಾದ ಜೀವನದ ಮಹಾಶಕ್ತಿಯ ಆಕರ್ಷಣೆಯು ಎಂಟುನೂರು ವರುಷಗಳಾದರೂ ಕಡಿಮೆಯಾಗಿಲ್ಲ. ಸರ್ವಜನ ಸ್ವಾತಂತ್ರ್ಯಕ್ಕೆ ಸರಿಯಾದ ಧರ್ಮ ಸಂಸ್ಥಾಪನೆಯನ್ನು ಮಾಡಿ ದೇಶದ ಆರ್ಥಿಕ ಸಮಸ್ಯೆಯನ್ನು ಬಿಡಿಸಿ ಜಗದ್ವಂದ್ಯರಾಗಿ ಹೋಗಿರುವರು, ಇಂಥ ಪುಣ್ಯ ಪುರುಷರು ನಮ್ಮ ಸಮಾಜದಲ್ಲಿ ಅವತರಿಸದಿದ್ದರೆ ಏನೂ ಆಗುತ್ತಿರಲಿಲ್ಲ. ಸಾಹಿತ್ಯ ಸೇವಕರೇ ವಚನವಾಙ್ಮಯವನ್ನು ಪ್ರಚಾರ ಮಾಡಿರಿ. ಸಮಸ್ತ ಬಾಂಧವರೇ ತತ್ವವನ್ನನುಸರಿಸಿರಿ. ತರುಣರೇ ಲೋಕಕಲ್ಯಾಣಕ್ಕೆ ನಡುಗಟ್ಟಿ ನಿಲ್ಲಿರಿ. ಎಲೇ ತರುಣ ಲೇಖನಿಯೇ ವಿಶ್ರಾಂತಿಗೊಳ್ಳು.

—ಚಿತಗಾಂಗ ಶಸ್ತ್ರಾಗಾರವನ್ನು ಸುಲಿಗೆ ಮಾಡಿದ ಮೋದ್ದಮೆಯಲ್ಲಿ ತಪ್ಪಿಸಿಕೊಂಡು ಹೋದ ಸರೋಜಕಾಂತಿ ಮತ್ತು ಗುಹ ಇವರಿಗೆ ಆಶ್ರಯಕೊಟ್ಟದ್ದಕ್ಕಾಗಿ ಇಬ್ಬರು ಪಿತಾಪುತ್ರರಿಗೆ ಅನುಕ್ರಮವಾಗಿ ೬ ತಿಂಗಳು ಮತ್ತು ೩ ವರ್ಷ ಶಿಕ್ಷೆಯಾಯಿತು.

ಶರಣ ಸಂದೇಶ
ಓಂ
विषयामृतमश्नुते
ಶಾ. ಶ. ೧೮೫೫ ಸಂಗು ವೈಶಾಖ ಶು ೬ ಸೋಮವಾರ.

ಬಸವೇಶನ ಭಾಷೆ.

ವಿಪ್ರಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೊಂದೇ ಎಂಬೆ.

ಬಸವೇಶನ ಭಾಷೆ.

ಹೊಲೆ ಹೊಲೆಯರ ಮನೆಯ ಹೊಕ್ಕಾದರೆಯೂ ಸಲೆ ಕೈಕೂಲಿಯ ಮಾಡಿಯಾದರೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ ಎತ್ತ ಒಡಲವಸರಕ್ಕೆ ಕುದಿದರೆ ತಲೆದಂಡ.

ಮಹಾಸಭೆಯ ಕಡೆಗೆ ತಿರುಗಿರಿ.

ಶ್ರೀಮದ್ವೀರಶೈವ ಮಹಾಸಭೆಯು ಕ್ರಿ. ಶ. ೧೯೦೪ನೆಯ ಇಸವಿಯಲ್ಲಿ ಧಾರವಾಡದಲ್ಲಿಯೇ ಮೊದಲು ಸ್ಥಾಪನೆಯಾಯಿತು. ಈ ಸಾರೆ ಅದೇ ಧಾರವಾಡದಲ್ಲಿ ಅದೇ ... ಮಹಾಸಭೆಯ ಜೀರ್ಣೋದ್ಧಾರವಾಗುವುದು.

ವೀರಶೈವ ಸಮಾಜದ ... ಕಮಾತ್ಯವಿದ್ದಿದ್ದರೆ ವೀರಶೈವ ಬಹುಜನ ಸಮಾಜಕ್ಕೆ ಮಹಾಸಭೆಯ ಮಹತ್ವ ತಿಳಿದಿದ್ದರೆ ವೀರಶೈವ ಮುಂದಾಳುಗಳಲ್ಲದೂ ಸಮಾಜೋದ್ಧಾರವೇ ತಮ್ಮ ನಿಜವಾದ ಉನ್ನತಿಯೆಂದು ಭಾವಿಸಿದ್ದರೆ ಮಹಾಸಭೆಯು ಅಂದಿನಿಂದ ಈ ವರೆಗೆ ಅವಿಚ್ಛಿನ್ನವಾಗಿ ಸಾಗುತ್ತ ಬಂದು ಈ ಸಾರೆ ಧಾರವಾಡದಲ್ಲಿ ೧೯ನೆಯ ಸಭೆಯಾಗಿ ಪರಿಣಮಿಸದೆ ೨೯ನೆಯ ಸಭೆಯಾ...

...ಮಹಾಸಭೆಯ ೧೦ ಅಧಿವೇಶನಗಳು ಈ ವರೆಗೆ ಕೂಡ...ದ್ದುದರಿಂದ ಸಮಾಜಕ್ಕೆ ಮಹದನರ್ಥವಾಯಿತು. ಸಮಾಜ ಜಾಗೃತಿಗೂ, ಸುಧಾರಣೆಗೂ ಅನುಕೂಲವಾಗಿದ್ದ ದಿವ್ಯ ಕಾಲವನ್ನು ಕಳೆದುಕೊಂಡೆವು. ಈಗಲೂ ಕೂಡಾ ಮಹಾಸಭೆಯ ವಿಷಯದಲ್ಲಿ ಸಮಾಜದ ಮುಂದಾಳುಗಳೆಂದು ಹೇಳಿಸಿಕೊಳ್ಳುವ ಅನೇಕರಲ್ಲಿ ಇರಬೇಕಾದಷ್ಟು ಆದರಾಭಿಮಾನಗಳಿಲ್ಲದಿರುವುದು ವಿಷಾದದ ಸಂಗತಿಯಾಗಿದೆ.

ವೀರಶೈವ ಸಮಾಜವು ಸಕಲ ಸಂಗತಿಗಳಲ್ಲಿಯೂ ಉನ್ನತ ಸ್ಥಿತಿಯನ್ನು ಹೊಂದಬೇಕಾದರೆ ನಾವು ಮಹಾಸಭೆಯ ಮೂಲಕವಾಗಿಯೇ ಪ್ರಯತ್ನಿಸಬೇಕು. ಈ ಮಹಾಸಭೆಯೇ ಸಮಾಜಕ್ಕೆ ಜೀವಕಳೆಯನ್ನುಂಟುಮಾಡುವುದು. ಈ ಮಹಾಸಭೆಯೇ ಕಾಲಯುಕ್ತವಾದ ಶ್ರೇಯಸ್ಸಿನ ಸುಗಮಮಾರ್ಗವನ್ನು ತೋರಿಸುವುದು.

ಆದುದರಿಂದ ಮುನಸಿಪಾಲಿಟಿ, ಲೋಕಲ್‌ಬೋರ್ಡ್, ಕೌನ್ಸಿಲ್ಲುಗಳ ಕಡೆಗೇನೇ ತಿರುಗಿರುವ ಮಹಾಶಯರೇ, ಈ ಮಹಾಸಭೆಯ ಕಡೆಗೂ ತಿರುಗಿರಿ. ಇದೇ ನಿಮಗೂ ಸಮಾಜಕ್ಕೂ ನಿಜವಾದ ಉನ್ನತಿಯ ಮಾರ್ಗವನ್ನು ತೋರಿಸುವುದು. ಆಯಾಯ ಸಂಸ್ಥೆಗಳ ಚುನಾವಣೆಯ ಕಾಲಕ್ಕೆ ಬಹುಮತ ದೊರೆಯಲು ಮಾತ್ರ ನಾವು ವೀರಶೈವರೆಂದು ಹೇಳಿಕೊಂಡು ವೀರಶೈವರಿಗೆ ಪ್ರಾಣಸ್ವರೂಪವಾದ ಈ ಮಹಾಸಭೆಯ ಕಡೆಗೆ ಮಾತ್ರ ನಿರ್ಲಕ್ಷಿಸುವುದು ಯುಕ್ತವೇ? ಸಮಾಜದ ಪ್ರಮುಖರೂ ಈಗಿನ ಕಾಲದಲ್ಲಿ ಸುಶಿಕ್ಷಿತರೂ ಆದ ನೀವೇ ಮಹಾಸಭೆಯ ಕಡೆಗೆ ತಿರುಗದಿದ್ದರೆ ಅದನ್ನು ಮುಂದೆ ಪರಿಣಾಮಕಾರಿಯಾಗುವಂತೆ ನಡೆಸುವವರಾರು? ಮಹಾಸಭೆಯು ಜರುಗದಿದ್ದರೆ ಸಮಾಜದ ಜನಸಾಮಾನ್ಯರಲ್ಲಿ ಜಾಗೃತಿಯಾಗಿ ಅವರ ಅನೇಕ ದುಃಖಗಳು ನಿವಾರಣೆಯಾಗುವವೇ?

ಮಹಮ್ಮದೀಯರು ಸ್ಥಾನಿಕ ರಾಜಕಾರಣದಲ್ಲಿ ಸೇರಬೇಕು ಅವರು ತಮ್ಮ ಸಮಾಜವನ್ನು ನಿರ್ಲಕ್ಷಿಸಿದ್ದಾರೆಯೇ? ನೀವು ಸ್ವಸ್ವಗತ ಹಿತವನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಸಮಾಜವನ್ನು ಯಾವ ಪ್ರಕಾರ ನಿರ್ಲಕ್ಷಿಸುವುದು ಯುಕ್ತವೇ?

ಈ ಮುಂಚೆ ಮಾಡಿದಂತೆ ಇನ್ನು ಮೇಲಾದರೂ ಮಾಡದೆ ಮಹಾಸಭೆಯ ಕಡೆಗೆ ತಿರುಗುವುದು ನಿಮ್ಮ ಮುಖ್ಯ ಕರ್ತವ್ಯವಲ್ಲವೇ?

ರಾಷ್ಟ್ರೀಯ ಭಾವನೆಯಿಂದ ಸಮಾಜವನ್ನೇ ಮರೆತಿರುವ ಅನೇಕ ಮಹಾಶಯರಾದವರೂ ಮಹಾಸಭೆಯ ಕಡೆಗೆ ತಿರುಗುವುದೂ ಯುಕ್ತವಾಗಿಲ್ಲವೇ? ಅನೇಕರಿಗೆ ಮುನಸಿಪಾಲಿಟಿ, ಲೋಕಲ ಬೋರ್ಡ್, ಕೌನ್ಸಿಲ್ಲುಗಳೇ ತಮ್ಮ ಗುರಿಯಾಗಿದ್ದಂತೆ ನಿಮಗೆ ಕಾರಾಗೃಹವೇ ನಿಮ್ಮ ಗುರಿಯಾಗಿರಬಹುದು. ಹಾಗಿದ್ದರೂ ಮಹಾಸಭೆಯನ್ನು ಮರೆಯುವುದು ಯುಕ್ತವಲ್ಲ. ರಾಷ್ಟ್ರಕ್ಕೆ ಶ್ರೇಯಸ್ಕರವಾದ ಸಾಮಾಜಿಕ ಮತ್ತು ಸಾಂಪತ್ತಿಕ ವಿಷಯಗಳಲ್ಲಿ ಅನೇಕ ಸಂಗತಿಗಳನ್ನು ಈ ಮಹಾಸಭೆಯ ಮೂಲಕ ನಡೆಸಲು ನಿಮಗೆ ಬಹು ಅನುಕೂಲವಿದೆ. ವೀರಶೈವ ಸಮಾಜಸೇವೆಯು ಕರ್ನಾಟಕ ಮಾತೆಯ ಸೇವೆಯಲ್ಲವೇ? ರಾಷ್ಟ್ರೀಯ ಮುಸಲ್ಮಾನ್ ಮುಂದಾಳುಗಳು ತಮ್ಮ ಸಮಾಜವನ್ನು ನಿರ್ಲಕ್ಷಿಸಿದ್ದಾರೆಯೇ? ನಿಮ್ಮ ಉಜ್ವಲವಾದ ಸೇವೆಯು ಸಮಾಜಕ್ಕೂ ಆ ಮೂಲಕ ರಾಷ್ಟ್ರಕ್ಕೂ ಸಲ್ಲಬೇಕಾದರೆ ನೀವು ಮಹಾಸಭೆಯ ಕಡೆಗೆ ತಿರುಗುವುದು ಅಗತ್ಯವಾಗಿಲ್ಲವೇ?

ಶ್ರೀ ವಿರಕ್ತರ ಮತ್ತು ಶ್ರೀ ಪಂಚಾಚಾರ್ಯರ ವಾದದಲ್ಲಿ ಮಗ್ನರಾಗಿರುವ ಮಹಾಶಯರೂ ಮಹಾಸಭೆಯ ಕಡೆಗೆ ತಿರುಗುವುದು ಯುಕ್ತವಾಗಿಲ್ಲವೇ? ದಾವಣಗೆರೆಯ ಅಪೂರ್ವ ಮಹಾಸಭೆಯ ನಂತರ ಈವರೆಗೆ ಮಹಾಸಭೆಯು ಕಳೆಗುಂದಲು ಈ ವಾದವೇ ಮುಖ್ಯ ಕಾರಣವಾಗಿದೆ. ಸಮಾಜದ ಒಂದು ಮುಖ್ಯಾಂಗವೇ ಮಹಾಸಭೆಯಲ್ಲಿಲ್ಲದಂತಾಗಿದೆ. ಸಮಾಜದ ನಾನಾ ದುಃಖಗಳಿಗೆ ಈ ಕಲಹವೇ ಮುಖ್ಯ ಕಾರಣವಾಗಿದೆ.

ಉಭಯ ಪಂಗಡದವರೂ ತಮ್ಮತಮ್ಮಲ್ಲಿಯೇ ವಾದಿಸುವುದನ್ನು ಬಿಟ್ಟು ಮಹಾಸಭೆಯ ಕಡೆಗೆ ತಿರುಗಿ ಸಮಾಜದ ನಿರ್ಣಯವನ್ನು ಮಾನ್ಯ ಮಾಡುವುದು ವಿಹಿತವಲ್ಲವೇ?

ಸಮಾಜಕಾರ್ಯ ನಿರ್ವಹಿಸಲು ಸಮರ್ಥರಾದ ಈ ಮೂರು ತರಹಗಳ ಮಹಾಶಯರೂ ಮಹಾಸಭೆಯ ಕಡೆಗೆ ತಿರುಗಿ ಸಮಾಜದ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳನ್ನು ಮಾಡುವುದು ವಿಹಿತವೂ ಶ್ರೇಯಸ್ಕರವೂ ಭೂಷಣಪ್ರದವೂ ಆಗಿಲ್ಲವೆ? ಆದುದರಿಂದ ಈ ಸಾರೆಯ ಅತ್ಯಂತ ಮಹತ್ವದ ಮಹಾಸಭೆಯ ಕಡೆಗೆ ಈ ಎಲ್ಲ ಪಕ್ಷಭೇದದವರೂ ತಿರುಗಿ ಮಹಾಸಭೆಯಲ್ಲಿ ಸೇರಿ ಮಹಾಸಭೆಯ ಮೂಲಕ ಸಮಾಜಸೇವೆ ಮತ್ತು ರಾಷ್ಟ್ರಸೇವೆಗಳನ್ನು ಮಾಡುವರೆಂದು ತುಂಬಾ ನಂಬಿದ್ದೇವೆ.

ಸ್ಫುಟ ಸೂಚನೆ.

ಆದರ್ಶ ದೇವಾಲಯ.

ಮಹಾತ್ಮಾ ಗಾಂಧಿಯವರು 'ಹರಿಜನ' ಪತ್ರಿಕೆಯಲ್ಲಿ ಆದರ್ಶ ...ಾಲಯವು ಮತ್ತು ಆದರ್ಶ ಅರ್ಚಕನು ಈ ಪ್ರಕಾರವಾಗಿರ ...ು ಸೂಚಿಸಿದ್ದಾರೆ.

...ಲಯವು ಈಗಿನ ಕಾಲದಲ್ಲಿ ಶಿಲ್ಪಕಲಾಯುಕ್ತವಾದುದೇ ...ಂಬುವ ಅವಶ್ಯವಿಲ್ಲ. ಆದರೆ ಅದು ಸಾಕಷ್ಟು ವಿಸ್ತಾರ ...ೇಕು. ದೇವಾಲಯವು ಗ್ರಾಮದ ಇಲ್ಲವೆ ನಗರದ ಮಧ್ಯದಲ್ಲ ...ಷದು. ಅದು ಹರಿಜನರಿಗೆ ಮತ್ತು ಉಳಿದ ಬಡಜನರಿಗೆ ...ಷವಾಗಿರುವಂತೆ ಸ್ವಚ್ಛವಾದ ಪವಿತ್ರ ಪ್ರದೇಶದಲ್ಲಿರ ...ು. ಇದರ ಪಕ್ಕಗಳಲ್ಲಿ ಒಂದು ಶಾಲೆ, ಒಂದು ಧರ್ಮಶಾಲೆ, ...ು ವಾಚನಾಲಯವಿರಬೇಕು. ಶಾಲೆಯೇ ಸಭಾಗೃಹವು ಆಗು ...ದು. ಇವು ಭಿನ್ನಭಿನ್ನ ಸಂಸ್ಥೆಗಳಾದರೂ ದೇವಾಲಯಕ್ಕೆ ...ಂಬಂಧಪಟ್ಟಿರಬೇಕು. ಶಕ್ಯವಿದ್ದರೆ ಸ್ವಯಂಸ್ಫೂರ್ತಿಯಿಂದ ...ಣ್ಣು ಹುಲ್ಲುಗಳಿಂದ ದೇವಾಲಯವನ್ನು ಕಟ್ಟಬಹುದು. ಇಲ್ಲ ...ದ್ದರೆ ಭಾಗವತದಲ್ಲಿ ಹೇಳಿದಂತೆ—

ಯಾವ ಸ್ಥಾನದಲ್ಲಿ ಭಕ್ತರು ಕೂಡಿ ಪರಮಾತ್ಮನ ಪ್ರಾರ್ಥನೆ ...ಯನ್ನು ಮಾಡುವರೋ ಅಲ್ಲಿಯೇ ಪರಮಾತ್ಮನು ನೆಲಸಿರುವನು ಮತ್ತು ಅದೇ ದೇವಾಲಯವಾಗುವದು. ಆದುದರಿಂದ ವಿಸ್ತೀರ್ಣ ಸ್ಥಾನದಲ್ಲಿ ಪ್ರಾರ್ಥನೆಯು ಪ್ರಾರಂಭವಾದ ಕೂಡಲೆ ದೇವಾಲಯವು ಸ್ಥಾಪಿತವಾಯಿತೆಂದೂ ತಿಳಿಯಬೇಕು.

ಇನ್ನು ಅರ್ಚಕನು ದೇವಪುರುಷನು. ಅವನು ಜನತೆಯ ನಿಜವಾದ ಭಕ್ತನಿರಬೇಕು. ಅವನು ತನ್ನನ್ನು ಹಿಂಬಾಲಿಸಿದ ಜನರಿಗೆ ಮಾರ್ಗದರ್ಶಕನೂ ಮಿತ್ರನೂ ಮತ್ತು ತತ್ವಜ್ಞಾನಿಯೂ ಆಗಿರಬೇಕು. ಅವನು ಪ್ರಪಂಚಪೀಡೆಗೊಳಗಾಗದೆ ಸರ್ವಕಾಲವೂ ಸೇವೆ ಮಾಡತಕ್ಕದ್ದು.

ಜಾಯಿಂಟ ಸಿಲೆಕ್ಟ ಕಮಿಟಿಯ ಅಧಿವೇಶನ.

೨೭ನೆಯ ತಾರೀಖಿನ ದಿವಸ ಲಾರ್ಡ ಸಭೆಯಲ್ಲಿ ಜಾಯಿಂಟ ...ಲೆಕ್ಟ ಕಮಿಟಿಯ ಅಧಿವೇಶನವು ಕೂಡಿದ್ದಿತು. ಲಾರ್ಡಲಿನ್ ...ಲಿಥಗೊ ಇವರು ಅಧ್ಯಕ್ಷರಾಗಿದ್ದರು ಸಭೆಯ ಕಾರ್ಯವು ಸರಾಸರಿ ೨॥ ತಾಸು ನಡೆಯಿತು ಆ ವೇಳೆ ಸಭೆಯ ಅಧಿವೇಶನವು ಮೇ ೨ನೆಯ ತಾರೀಖಿನವರೆಗೆ ಮುಂದೆ ಹಾಕಲ್ಪಟ್ಟಿತು.

ಕಮಿಟಿಯ ಕೆಲಸವು ಜುಲೈ ತಿಂಗಳ ಕೊನೆಯಲ್ಲಾಗಲಿ ಇಲ್ಲವೆ ಆಗಸ್ಟ ತಿಂಗಳ ಆರಂಭಕ್ಕಾಗಲಿ ಮುಗಿಯುವದು. ಪಾರ್ಲಿಮೆಂಟಿನಹಕ್ಕಿಗೆ ಬಾಧೆ ತರದೆ ಹಿಂದೀ ಸಭಾಸದರು ಮತ್ತು ಬ್ರಿಟಿಶ ಸಭಾಸದರು ಇವರಲ್ಲಿ ಸಮ್ಮೇಲನ ಮಾಡಿ ಉತ್ತಮ ಕಾರ್ಯ ಪದ್ಧತಿಯನ್ನು ಮಾಡಬೇಕೆಂಬುದೇ ಈ ಕಮಿಟಿಯಲ್ಲಿಯ ಮಹತ್ವದ ಪ್ರಶ್ನೆಯಾಗಿದೆ. ಕಮಿಟಿಯ ಕೆಲಸಗಳಲ್ಲಿ ಎರಡುಭಾಗ ಮಾಡಿ ಅದರಲ್ಲಿ ಹಿಂದಿ ಸಭಾಸದರ ಸಂಗಡ ಚರ್ಚೆಮಾಡುವ ಕೆಲಸವು ಏಕಾಂತವಾಗಿ ನಡೆಯಬೇಕೆಂಬ ಸೂಚನೆಯು ಮಾಡಲ್ಪಟ್ಟಿದೆ. ಮತ್ತು ಹಿಂದೀ ಸಭಾಸದರನ್ನು ಸಲಹೆಗಾರರೆಂದು ತಿಳಿಯದೆ ಪ್ರತಿನಿಧಿಗಳೆಂದು ತಿಳಿಯಬೇಕೆಂದೂ ನಿರ್ಣಯವಾಗಿದೆ.

ಸಂಯುಕ್ತ ಕರ್ನಾಟಕ.

೧೯೩೩ನೆಯ ಇಸವಿಯಿಂದ ಮೂರು ವರುಷಗಳ ವರೆಗೆ ಸಂಯುಕ್ತ ಕರ್ನಾಟಕವು ಸಾಪ್ತಾಹಿಕವಾಗಿ ಕನ್ನಡಿಗರ ಸೇವೆಯನ್ನು ಮಾಡಿದುದು ಸರ್ವಶ್ರುತವಾಗಿದೆಯಷ್ಟೆ. ಕರ್ನಾಟಕ ಪ್ರಾಣಸ್ವರೂಪರೂ ವೀರಧರ್ಮ ಸಂಸ್ಥಾಪಕರೂ ಆದ ಆ ಮಹಾನುಭಾವ ಶ್ರೀ ಬಸವೇಶ್ವರರ ಜಯಂತಿಯ ಶುಭ ದಿವಸದಲ್ಲಿ ಹಾಗೆಯೇ ಮಹಾರಾಷ್ಟ್ರದ ಪ್ರಾಣಸ್ವರೂಪರೂ, ವೀರರಾಜ್ಯ ಸಂಸ್ಥಾಪಕರೂ ಆದ ಮಹಾವೀರರಾದ ಶ್ರೀ ಶಿವಾಜಿ ಮಹಾರಾಜರ ಜಯಂತಿಯ ಕಾಲದಲ್ಲಿಯೂ ಪುನಃ ಸಂಯುಕ್ತ ಕರ್ನಾಟಕವು ಕಟ್ಟಿ ಶೇಷಾಚಾರ್ಯರ ಸಂಪಾದಕತ್ವದಲ್ಲಿ ದಿನ ಪತ್ರಿಕೆಯಾಗಿ ಹೊರಟು ಒಳ್ಳೇ ಸಾಹಸವನ್ನು ಮಾಡಿದೆ. ಅದು ತನ್ನ ಅಭಿಧಾನದಂತೆ ಹರಿದು ಹಂಚಿಹೋದ ಕರ್ನಾಟಕವನ್ನು ಸಂಯುಕ್ತ ಕರ್ನಾಟಕವನ್ನಾಗಿ ಮಾಡಲಿ! ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಖ್ಯಾತ ವೀರರ ಜಯಂತಿಗಳ ಶುಭಸಮುದಾಯದಲ್ಲುದಯಿಸಿದ ಈ ದಿನ ಪತ್ರಿಕೆಯು ಕನ್ನಡಿಗರ ಮತ್ತು ಮರಾಠಿಗರ ಜಗಳಗಳನ್ನು ದೂರಮಾಡಿ ಅವರವರಿಗೆ ಯೋಗ್ಯ ಸ್ಥಾನಗಳು ದೊರಕುವಂತೆ ಹೆಣಗಾಡಲಿ! ಕನ್ನಡಿಗ ನವತರುಣರಲ್ಲಿ ಹೊಸ ಹುರುಪನ್ನುಂಟುಮಾಡುವ ಸೇವೆಯನ್ನು ಶ್ರೀ ಭುವನೇಶ್ವರೀ ಮಾತೆಯು ಇದಕ್ಕೆ ಅನುಗ್ರಹಿಸಲಿ!

ಡಾ. ಕುರ್ತಕೋಟಿಯವರು

ಅಮೇರಿಕಾ ಖಂಡದ ಚಿಕಾಗೋ ಪಟ್ಟಣದಲ್ಲಿ ನೆರೆಯುವ ಈ ಸಾರೆಯ ಸರ್ವಧರ್ಮ ಪರಿಷತ್ತಿಗೆ ಬರುವದಕ್ಕಾಗಿ ಡಾ. ಕುರ್ತಕೋಟಿಯವರಿಗೆ ಆಮಂತ್ರಣವು ಕೊಡಲ್ಪಟ್ಟಿದೆ. ಶ್ರೀ ಶಂಕರಾಚಾರ್ಯ (ಡಾ. ಕುರ್ತಕೋಟಿ) ಇವರನ್ನು ಅಮೇರಿಕೆಗೆ ಕಳಿಸಲು ಬಡೋದೆಯ ಗಾಯಕವಾಡ ಮಹಾರಾಜರೂ ಇಂದೂರು ಹೋಳ್ಕರರವರೂ ವ್ಯವಸ್ಥೆ ಮಾಡಿಸುವರು. ಹೋಳ್ಕರರವರೂ ಡಾ. ಕುರ್ತಕೋಟಿಯವರ ಸಂಗಡ ಅಮೇರಿಕೆಗೆ ಪ್ರಯಾಣ ಬೆಳೆಸುವರೆಂದು ಕಂಡುಬಂದಿದೆ. ಹಿಂದಕ್ಕೆ ಇದೇ ಸರ್ವಧರ್ಮ ಪರಿಷತ್ತಿನಲ್ಲಿ ಮಾಡಿದ ಉಜ್ವಲ ಭಾಷಣಗಳಿಂದ ಸ್ವಾಮಿ ವಿವೇಕಾನಂದರವರು ಹಿಂದೂ ಧರ್ಮಧ್ವಜವನ್ನು ಮೆರೆಯಿಸಿದರಲ್ಲದೆ ಎಷ್ಟೋ ಜನರು ಸನಾತನ ಧರ್ಮಾವಲಂಬಿಗಳಾಗುವಂತೆ ಮಾಡಿದರು. ಧರ್ಮ ಸುಧಾರಕರಾದ ಡಾ. ಕುರ್ತಕೋಟಿ ಇವರು ಶ್ರೀ ವಿವೇಕಾನಂದರಂತೆಯೇ ಹಿಂದೂ ಧರ್ಮದ ಕೀರ್ತಿ ಧ್ವಜವನ್ನು ಮೆರೆಯಿಸಿ ಬರಲೆಂಬುದೇ ನಮ್ಮ ಕೋರಿಕೆ.

—ಪ್ರಸಿದ್ಧ ದೇಶಭಕ್ತರಾದ ಸಯ್ಯದಹಸನ ಇಮಾಮ ಇವರು ೧೯ನೆಯ ತಾರೀಖಿನ ದಿವಸ ಪಾಟಣಾದಲ್ಲಿ ಮರಣ ಹೊಂದಿದರು.

—ಬೆಳಗಾವಿಯಲ್ಲಿ ಹೊಸದಾಗಿ ತಾರೀಖು ೧೭-೬-೩೩ಕ್ಕೆ ತೆರೆಯುವ ಲಿಂಗಾರಾಜ ಕಾಲೇಜಕ್ಕೆ ಪ್ರತಿಯೊಂದು ಟರ್ಮಿಗೆ ೫೦ ರೂ. ಮಾತ್ರ ಫೀಯನ್ನಿಟ್ಟಿರುವರು. ಹಾಗೂ ಕಾಲೇಜದ ಅಧ್ಯಾಪಕರು ಕೆಳಗಿನಂತೆ ಇರುವರು. ೧ ಸಂಸ್ಕೃತ ಡಾ॥ ನಂದಿಮಠ ಎಂ. ಎ. ಪಿ. ಎಚ್. ಡಿ. ಪ್ರಿನ್ಸಿಪಾಲ, ೨ ಗಣಿತ ಶ್ರೀ॥ ಟಿ. ಕೆ. ಪಾಟೀಲ, ೩ ಇಂಗ್ಲಿಷ್ ಅಸಿ. ಪ್ರೊ ಕೆ. ಆರ್. ಶ್ರೀನಿವಾಸ ಆಯ್ಯಂಗಾರ, ೪ ಇಂಗ್ಲೀಷು ಉಪನ್ಯಾಸಕಾರ ಶ್ರೀ. ಪಿ. ಎಸ್. ಬಾಗಿ, ೫ ಇತಿಹಾಸ ಶ್ರೀ. ಎಸ್. ಎಸ್. ಬಸವನಾಳ, ೬ ತತ್ವಜ್ಞಾನ ಶ್ರೀ॥ ಪಿ. ಎಸ್. ಶ್ರೀನಿವಾಸಾಚಾರಿ, ೭ ಫಿಜಿಕ್ಸ ಶ್ರೀ॥ ಬಿ. ಬಿ. ದೇಶಪಾಂಡೆ.

—ಬರುವ ಜನವರಿಯಿಂದ ಕೆ. ಲಿಂ. ಎ. ಸೊಸಾಯಿಟಿಯವರ ಪರವಾಗಿ ಪ್ರುಕ್ಕಟೆಯಾಗಿ ಆಯುರ್ವೇದ ಶಾಲೆಯು ಪ್ರಾರಂಭವಾಗುವದಿದ್ದು ಮ್ಯಾಟ್ರಿಕ್ ಪಾಸ್ ಇಲ್ಲವೆ ಅನ್‌ಪಾಸ ಆದ ವಿದ್ಯಾರ್ಥಿಗಳು ಬೇಕಾಗಿರುವುದರಿಂದ ಬರಲಿಚ್ಛಿಸುವ ವಿದ್ಯಾರ್ಥಿಗಳು ತಾ. ೧೫ ಮೇ ೧೯೩೩ ಇಸ್ವಿ ಒಳಗಾಗಿ ಸೊ. ಜ. ಸೆಕ್ರೆಟರಿ ಶ್ರೀ. ಎಮ್. ಆರ್. ಸಾಖರೆ ಎಂ. ಎ. ಇವರ ಕಡೆಗೆ ಅರ್ಜಿ ಮಾಡಬೇಕು.

ವೈದಿಕ ಸಮಾಜವೂ, ಮೂರ್ತಿ ಪೂಜೆಯೂ.

(ಲೇಖಕ—ಎಂ. ಎನ್. ನಂಜಪ್ಪ ಬೆಂಗಳೂರನಗರ.)

ಇಂದಿನ ಭಾರತವರ್ಷದ ವೈದಿಕ ಸಂಸ್ಕೃತಿಯನ್ನೂ ಅನ್ಯ ಸಂಸ್ಕೃತಿಯನ್ನೂ, ಪರದೇಶೀಯರು ಬಗೆಬಗೆಯ ಆರೋಪಗಳಿಂದ ನಿಂದಿಸುತ್ತಿರುವರಷ್ಟೆ. ಹೀಗೆ ನಿಂದಿಸುವುದರಲ್ಲಿ ಸತ್ಯಾಂಶವಿಲ್ಲವೆಂತಲ್ಲ, ಆದರೆ ಅವರು ನಿಂದಿಸುವಷ್ಟು ಹೇಯ ಸ್ಥಿತಿಗಿಳದಿಲ್ಲವೆಂದು ಮಾತ್ರ ಖಂಡಿತವಾಗಿ ಹೇಳಬಹುದು. ನಿಂದಕರ ಮುಖ್ಯ ಆರೋಪವು ಮೂರ್ತಿಪೂಜೆಯನ್ನು ಕುರಿತುದು, ಭರತಖಂಡದ ವೈದಿಕ ಸಮಾಜದವರು ಮಾತ್ರ ಮೂರ್ತಿಪೂಜಕರೆಂದೂ, ತಾವು ಮೂರ್ತಿಪೂಜಕರಲ್ಲವೆಂದೂ, ಭಾವಿಸಿಕೊಂಡಿರುವ ಕೆಲವು [illegible]ನಾಂಗದವರು ಆದೊಂದು ಬಗೆಯ ಬಡಾಯಿಕೊಚ್ಚುವುದುಂಟು. [illegible]ದರೆ ಇಂದು ಜಗತ್ತಿನ ಮೇಲಿರುವ ಪ್ರತಿಯೊಂದು ಜನಾಂಗದವರು ಒಂದಲ್ಲ ಒಂದು ವಿಧದಿಂದ ಮೂರ್ತಿಪೂಜಕರೇ ಆಗಿರುವರು. ಭಾರತೀಯ ವೈದಿಕ ಸಮಾಜದವರು ಮೂರ್ತಿ ಪೂಜೆ ಮಾಡುವುದರ ಉದ್ದಿಶ್ಯವೇ ಬೇರೆ. ಮೂರ್ತಿ ಪೂಜೆಯನ್ನೇ ದೇವರೆಂದು ಭಾವಿಸಿ ಯಾರೂ ಪೂಜಿಸುವುದಿಲ್ಲ. ಅಖಂಡ ಭೂಮಂಡಲವನ್ನು ವ್ಯಾಪಿಸಿರುವ ಜಗದೀಶ್ವರನು ತಾನು ಪೂಜಿಸುವ ಮೂರ್ತಿಯಲ್ಲಿಯೂ ಸನ್ನಿಹಿತನಾಗಿರುವನೆಂದೂ, ತಾನು ಗೈಯುತ್ತಿರುವ ಸೇವೆಯು ಆತನಿಗೆ ಸಲ್ಲುವದೆಂದೂ ಭಾವಿಸಿ ಮಾಡುವ ಪೂಜೆಯು ಮೂರ್ತಿಪೂಜೆಯೆಂದಾಗುವುದಿಲ್ಲ. ಮೂರ್ತಿಪೂಜೆಯೆಂಬ ಶಬ್ದದ ನಿಜವಾದ ಭಾವನೆಯು ಮೂರ್ತಿಯನ್ನೇ ದೇವನೆಂದು ನಂಬಿ ಪೂಜಿಸುವುದಾಗುತ್ತದೆ. ಆದರೆ ವೈದಿಕ ಸಮಾಜದವರಲ್ಲಿ ಯಾರೂ ಈ ಭಾವನೆಯಿಂದ ಪೂಜೆ ಮಾಡುವುದಾ[illegible]ದೀಶ್ವರನಿಗೆ ಆದಿ ಅಂತ್ಯಗಳಿವೆಯೆಂದಾಗುವುದು. [illegible]ರವನ್ನು ಸ್ಥಾಪಿಸಿದಾಗ ದೇವರಿಗೆ ಆದಿಯುಂಟಾಯಿ[illegible]ಎಂದೂ, ಅದು ಭಿನ್ನವಾದಾಗ ಅಂತ್ಯವಾಯಿತೆಂದೂ, ತಿಳಿಯಬೇಕಾಗುವುದು. ಈ ಭಾವನೆಯು ಅನಾಗರಿಕರಾದ ಅರಣ್ಯವಾಸಿಗಳ ಭಾವನೆಯು. ವೈದಿಕ ಸಮಾಜದವರಲ್ಲಿ ಯಾರೂ ಯಾವಾಗಲೂ ಈ ಭಾವನೆಯಿಂದ ಮೂರ್ತಿಪೂಜೆ ಮಾಡಿದಂತೆ ಕಾಣುವುದಿಲ್ಲ. ಮೂರ್ತಿಪೂಜೆಯು ವೈದಿಕ ಧರ್ಮದ ಮೂಲತತ್ವವಲ್ಲವೆಂಬು ತೋರುತ್ತದೆ. ಯಾಕೆಂದರೆ ವೈದಿಕ ಧರ್ಮದ ಪ್ರಾಚೀನ ಮಹರ್ಷಿಗಳು ಈಶ್ವರನ ಕೃಪಾಕಟಾಕ್ಷವನ್ನು ಪಡೆಯಬೇಕಾದಾಗ ಕೇವಲ ಮಾನಸಿಕ ಪೂಜೆಯಿಂದಲೇ ಅಂದರೆ ತಪಸ್ಸಿನಿಂದಲೇ ಪಡೆದಿರುವರೆಂಬುದು ಭಾರತೀಯ ಧಾರ್ಮಿಕ ಮತ್ತು ಐತಿಹಾಸಿಕ ಗ್ರಂಥಗಳಿಂದ ತಿಳಿದು ಬರುತ್ತದೆ. ಆದರೆ ಜನಾಂಗದಲ್ಲಿ ಭಾವನಾಶಕ್ತಿಯೂ, ಮನಸ್ಥೈರ್ಯವೂ ಕುಗ್ಗುತ್ತ ನಡೆದು ಚಿತ್ತವು ಚಂಚಲವಾದೊಡನೆಯೇ ವಿಗ್ರಹಾರಾಧನೆಗೆ ಪ್ರಾರಂಭವಾಯಿತೆನ್ನಬಹುದು. ಚಂಚಲವಾದೀ ಮನಸ್ಸನ್ನು ಶಾಂತಗೊಳಿಸಿ ಏಕಾಗ್ರವಾಗಿ ಮಾಡಿ ಒಂದೆಡೆಯಲ್ಲಿ ಸ್ಥಾಯಿಯಾಗಿ ನಿಲಿಸಬೇಕಾದರೆ ನೋಡಿದೊಡನೆಯೇ ಮನಸ್ಸನ್ನಾಂದಗೊಳಿಸುವಂತಹ ಭವ್ಯವೂ ಸುಂದರವೂ ಆದ ವಿಗ್ರಹವೊಂದು ಅತ್ಯಂತ ಅವಶ್ಯಕವೇ ಸರಿ. ಇದಕ್ಕಾಗಿಯೇ ಭರತಖಂಡದಲ್ಲಿ ಸೌಂದರ್ಯಯುಕ್ತವೂ ವೈಭವಯುಕ್ತವೂ ಆದ ದೇವಾಲಯಗಳನ್ನೂ ಪುಣ್ಯಕ್ಷೇತ್ರಗಳನ್ನೂ ನಿರ್ಮಿಸಿ ಅವುಗಳಲ್ಲಿ ಸುಂದರ ಮೂರ್ತಿಗಳನ್ನೂ ಪ್ರತಿಷ್ಠಿಸಿ ಅವುಗಳಿಗೆ ಕೋಟಿಗಟ್ಟಲೆ ಬೆಲೆಯ ಸುವರ್ಣ ಜವಾಹಿರಿಗಳನ್ನು ಧರಿಸಿ ಪೂಜಿಸುತ್ತಿರುವುದು ಇದರಿಂದಲೇ ಇಂದಿಗೂ ವೈದಿಕ ಧರ್ಮಾನುಯಾಯಿಯಾದ ಪ್ರತಿಯೊಬ್ಬ ಭಾರತೀಯನೂ ಕಡೆಗೆ ದೇಶಾಟನೆಯ ನೆವದಿಂದಲಾದರೂ ಒಮ್ಮೆ ಪುಣ್ಯಕ್ಷೇತ್ರದ ಸಂದರ್ಶನವನ್ನು ಮಾಡಿ ಮನಶ್ಶಾಂತಿಯನ್ನು ಪಡೆಯುತ್ತಿರುವನು.

ಆದ್ದರಿಂದ ಜನರಲ್ಲಿ ಈಶ್ವರಭಕ್ತಿಯು ಶಾಶ್ವತವಾಗಿ ನೆಲೆಸಿ[illegible]ಲೆಂತಲೇ ದೇವಾಲಯಗಳು ಸ್ಥಾಪಿಸಲ್ಪಟ್ಟವು. ಈಗಲೂ ಸ್ಥಾ[illegible]ಪ್ಪಡುತ್ತಿರುವವು. ಕ್ಷಣಕಾಲವಾದರೂ ಆ ದೇವಾಲಯಗಳನ್ನೂ [illegible]ದ ಮೂರ್ತಿಗಳನ್ನೂ ಸಂದರ್ಶಿಸಿದ ಮಾತ್ರಕ್ಕೆ ಇದೇ [illegible]ತಲೊ ವೈಕುಂಠವೆಂತಲೋ ಸ್ವರ್ಗವೆಂತಲೋ ಮನಸ್ಸಿನಲ್ಲಿ [illegible]ಯುಂಟಾಗಿ ಕ್ಷಣಕಾಲದವರೆಗಾದರೂ ಜನರ ಮನಸ್ಸು ಏ[illegible]ಗುತ್ತಿದ್ದಿತು. ಕ್ಷಣಿಕವೂ ಮನಸ್ಸಿನ ಚಂಚಲತ್ವಕ್ಕೆ ಅನ್ನ[illegible] ವಾತಾವರಣವುಳ್ಳುದೂ ಆದ ಈ ಕಾಲದಲ್ಲಿ ಜೀವ-ಪರಮರ [illegible]ಗಾಗಿ ನಿಯೋಜಿಸಿದ ಈ ಉಪಾಯವನ್ನು ದೂಷಣೀಯವೆಂ[illegible] ದೂರುವುದರಲ್ಲಿ ಅರ್ಥವಿಲ್ಲ. ಅಲ್ಲದೆ ಈ ಕಾಲದಲ್ಲಿ ಮೂ[illegible] ಪೂಜೆಯು ಅತ್ಯಂತ ಅಗತ್ಯವೆಂದೇ ಹೇಳಬಹುದು. ಯಾಕೆಂದರೆ[illegible] ಈಶ್ವರನನ್ನು ಮಾನಸಿಕವಾಗಿ ಪೂಜಿಸುವಷ್ಟು ಮನೋದಾರ್ಢ್ಯವು ಈ ಕಾಲದಲ್ಲಿ ಲೆಕ್ಕವಿಲ್ಲದಷ್ಟು ತಾಪತ್ರಯಗಳಲ್ಲಿ ಮುಳುಗಿರುವ, ಪಾರಮಾರ್ಥಿಕ ಭಾವನೆಯು ತಗ್ಗಿ ಲೌಕಿಕ ವಿಚಾರಗಳು ಹೆಚ್ಚಿರುವ ಯಾವದರಲ್ಲಿಯೂ ಇಲ್ಲವೆಂದ ಮೇಲೆ ಕಣ್ಣ ಮುಂದೆ ಒಂದು ವಿಗ್ರಹವನ್ನಿಟ್ಟುಕೊಂಡು ಆ ವಿಗ್ರಹದ ಕಡೆಗೆ ಮನಸ್ಸನ್ನು ನಿಲ್ಲಿಸಿ ಪೂಜಿಸುವುದರಲ್ಲಿ ಯಾವ ದೋಷವೂ ಇರದು. ಇನ್ನು ನಾವು ವಿಗ್ರಹಾರಾಧಕರಲ್ಲವೆಂದು ಹೇಳುವವರಲ್ಲಿಯೂ ಒಂದು ವಿಧವಾದ ವಿಗ್ರಹಾರಾಧನೆಯು ಇದ್ದೇ ಇರುವುದು. ಉದಾಹರಣೆಗೆ ಅವರಲ್ಲಿಯ ಪ್ರಸಿದ್ಧ ಪುರುಷರ ಜ್ಞಾಪಕಾರ್ಥವಾಗಿ ಶಿಲೆಯಿಂದಾಗಲೀ ಲೋಹದಿಂದಾಗಲೀ ವಿಗ್ರಹಗಳನ್ನು ಮಾಡಿಟ್ಟುಕೊಂಡು ಆ ವ್ಯಕ್ತಿಗಳಿಗೆ ಯಾವ ರೀತಿಯಿಂದ ಮರ್ಯಾದೆಯನ್ನು ಮಾಡುತ್ತಿದ್ದರೋ ಆ ವಿಗ್ರಹಗಳಿಗೆ ಅದೇ ರೀತಿ ಮರ್ಯಾದೆಯನ್ನು ಸಲ್ಲಿಸುತ್ತಿರುವರು. ಇದು ಪರ್ಯಾಯದಿಂದ ಮೂರ್ತಿಪೂಜೆ ಮಾಡಿದಂತಾಗಲಿಲ್ಲವೇ? ವೈದಿಕ ಧರ್ಮೀಯರ ಮೂರ್ತಿ ಪೂಜೆಯನ್ನು ಕನಿಷ್ಠವೆಂದೆಣಿಸುವುದಾದರೆ ಇದು ಅದಕ್ಕಿಂತಲೂ ಕನಿಷ್ಟವಲ್ಲವೇ? ಯಾಕೆಂದರೆ ವೈದಿಕ ಧರ್ಮೀಯರು ದೇವರು ಮೂರ್ತಿಯಲ್ಲಿಯೂ ಸನ್ನಿಹಿತನಾಗಿನಾಗಿರುವನೆಂದೆಣಿಸಿ ಪೂಜಿಸುವರು. ಆದರೆ ಈ ವಿಧವಾಗಿ ಪೂಜಿಸುವವರು ಆ ವಿಗ್ರಹವನ್ನೇ ಆ ಪುರುಷನೆಂದು ಭಾವಿಸಿ ಪೂಜಿಸುವರು. ಆದರೆ ಇದರಲ್ಲಿ ಇನ್ನೊಂದು ವಿಶೇಷವಿರುವುದು. ಮನುಷ್ಯನ ಜ್ಞಾಪಕಾರ್ಥವಾಗಿ ಮಾಡಿಟ್ಟ ಆ ಗೊಂಬೆಯು ಆ ಮನುಷ್ಯನನ್ನೇ ಹೋಲುವುದು. ಆದರೆ ದೇವರ ಪೂಜೆಗಾಗಿ ತಯಾರಿಸಿದ ವಿಗ್ರಹವು ದೇವರನ್ನೇ ಹೋಲುವುದೆ? ಎಂಬುದು ನಿಶ್ಚಯ. ಈಶ್ವರನು ನಿರಾಕಾರಿಯು. ತೇಜೋಮಯನು ಎಂಬುದಾಗಿ ಎಲ್ಲ ಮತ ತತ್ವಗಳೂ ಹೇಳುತ್ತಿವೆ. ಇಂಥ ನಿರಾಕಾರೀ ನಿರಾಮಯನಿಗೆ, ಮಾನವನು ಯಾವ ಆಕಾರವನ್ನು ಕೊಡುವುದೂ ಸಾಧ್ಯವಲ್ಲದ ಕೆಲಸ, ಆದುದರಿಂದ ಮನುಷ್ಯನು ತನಗೆ ಪ್ರಿಯವಾದ ಯಾವ ರೂಪನ್ನು ಕೊಟ್ಟು ವಿಗ್ರಹವನ್ನು ಕೆತ್ತಿದರೂ ಅದು ತೇಜೋಮಯನಾದ ಈಶ್ವರನಿಗೆ ಅವಮಾನ ಪಡಿಸಿದಂತಾಗಲಿಲ್ಲ. ಪೂಜೆಯ ಮೂರ್ತಿಯನ್ನು ತಯಾರಿಸುವಾಗ್ಗೆ ಅವನ ಉದ್ದೇಶವಿರುವುದೇನಂದರೆ ಓ ಜಗದೀಶ್ವರನೇ ನಾನು ನಿನ್ನ ಸ್ವರೂಪವನ್ನರಿಯೆನಾಗಿಕಾಗಣ ನನಗೆ ಪ್ರಿಯವಾದ ರೀತಿಯಲ್ಲಿ ಒಂದು ವಿಗ್ರಹವನ್ನು ಮಾಡಿಟ್ಟುಕೊಂಡು ಆ ಮೂಲಕ ನಿನ್ನನ್ನು ಪೂಜಿಸುವೆನು ಎಂಬುದಾಗಿ, ಆದುದರಿಂದ ಜಗದೀಶನ ಅವಗ್ರಹಕ್ಕೆ ಅವನೆಂದಿಗೂ ಪಾತ್ರನಾಗನು, ಇನ್ನೊಂದು ವಿಚಾರ ಹಲವರು ಕುತರ್ಕಿಗಳು ಕಳ್ಳರು ದೇವಾಲಯಗಳಿಗೆ ಕನ್ನವನು. ಕೊರೆದು ಅಲ್ಲಿಯ ದೇವರಿಗೆ ದರಿಸಿದ ಒಡವೆ ವಸುಗಳ

ನ್ನೆಲ್ಲಾ ಕದ್ದು, ಕೆಲವು ವೇಳೆ ವಿಗ್ರಹಗಳನ್ನೇ ಕದಿಯುತ್ತಲೂ ಇರು, ವಾಗ ವಿಗ್ರಹ ರೂಪಿಯು ದೇವರು ಕೈಯಿದ್ದೂ ಅವರನ್ನೇಕೆ ಓಡಿಸಲಿಲ್ಲ? ಬಾಯಿದ್ದೂ ಅವರನ್ನೇಕೆ ಗದ್ದರಿಸಲಿಲ್ಲ. ಇತ್ಯಾದಿಯಾಗಿ ಾತನಾಡುವರು. ಇದು ಆಧಿಕ ಪ್ರಸಂಗವೆಂದು ಅವರ ಮಾತನ್ನು ವ್ವಾಗಲೇ ತಿಳಿಯುವುದು. ಇಂತಹ ಕಳ್ಳತನಗಳು ಎಲ್ಲೆಲ್ಲಿಯೂ ಎಹುದು. ಕ್ರೈಸ್ತರ ಚರ್ಚಗಳಲ್ಲಿಯೂ, ಮುಸಲ್ಮಾನರ ್ದಿಯೂ, ಇನ್ನುಳಿದ ಅರಮನೆ ಗುರುಮನೆಗಳಲ್ಲಿಯೂ ್ತಲೇ ಇರುತ್ತವೆ. ಜಗದೀಶನು ಸರ್ವ ವ್ಯಾಪಿಯಾಗಿರು ನಾವು ಈ ಜಗತ್ತಿನಲ್ಲಿ ಎಲ್ಲಿ ಯಾವ ಮೂಲೆಯಲ್ಲಿ ಯಾವ ಾಡಿದರೂ ಅದು ಜಗದೀಶ್ವರನಿಗೆ ಕಂಡೇ ಕಾಣುತ್ತದೆ. ರಿಂದ ದೇವಾಲಯುಗಳಲ್ಲಿ ಕಳ್ಳತನ ಮಾಡಿದರೆ ಮಾತ್ರವೇ ಗೆ ತಿಳಿಯುವದೆಂದಲ್ಲ. ಎಲ್ಲಿ ಕಳವು ಮಾಡಿದರೂ ಈ ್ವಯ ಯಾವ ಮೂಲೆಯಲ್ಲಿಯೂ ಸತ್ಕರ್ಮ ದುಷ್ಕರ್ಮಗಳನ್ನು ಡಿದರೂ ದೇವರಿಗೆ ತಿಳಿದೇ ತಿಳಿಯುವುದು. ಆದರೆ ತಿಳಿದೊಡ ಯೇ ಅವನ ಕರ್ಮಕ್ಕೆ ತಕ್ಕ ಫಲವು ದೊರೆಯುವುದಿಲ್ಲ. ದೇವರ ನಿಯಮದಂತೆ ಪ್ರತಿಯೊಂದು ಕರ್ಮಕ್ಕೂ ತಕ್ಕ ಫಲ ದೊರೆಯ ತಕ್ಕ ಒಂದು ಕಾಲವು ಇದ್ದೇ ಇರುವುದು. ಆದರೆ ಆ ಕಾಲವನ್ನು ಮಾತ್ರ ಮಾನವನು ತಿಳಿಯಲಾರನು. ಆ ಕಾಲವು ಸನ್ನಿಹಿತವಾದ ಕೂಡಲೇ ಅವರವರ ಕರ್ಮಕ್ಕೆ ತಕ್ಕ ಫಲವು ದೊರೆತೇ ತೀರುವುದು. ಒಂದು ವೃಕ್ಷವು ಫಲಿಸುವುದಕ್ಕೆ ದೇವರು ಒಂದು ಕಾಲವನ್ನು ನಿಯಮಿಸಿರುವನು. ಆ ಕಾಲವು ಬಂದೊಡನೆಯೇ ಅದು ಫಲಿಸುವುದು. ಹಾಗೆಯೇ ಎಲ್ಲಾ ಕಾರ್ಯಗಳಿಗೂ ಫಲವು ದೊರೆಯುವ ಕಾಲ ಇದ್ದೇ ಇರುವುದು. ಮಾನವನು ಎಲ್ಲಿ ಯಾವ ಅಪರಾಧವನ್ನು ಮಾಡಿದ್ದರೂ, ದೇವರ ಮುಂದೆಯೇ ಮಾಡಿದಂತೆಯೇ ಆಗುವುದರಿಂದ ಅವನ ಕರ್ಮವು ಪಕ್ವಾವಸ್ಥೆಗೆ ಬರುವವರೆಗೂ ಅವನಿಗೆ ಅದರ ಫಲವು ದೊರೆಯಲಾರದು. ಮುಖ್ಯವಾಗಿ ವಿಗ್ರಹವನ್ನೇ ದೇವರೆಂದು ಯಾರೂ ಪೂಜಿಸದೆ ಅದರಲ್ಲಿ ಜಗದೀಶನು ಸನ್ನಿಹಿತನಾಗಿರುವನೆಂದು ಭಾವಿಸಿ ಆ ಮೂರ್ತಿಯನ್ನು ತನ್ನ ಮನಸ್ಸಿನ ಸ್ಥಿರಕ್ಕಾಗೂ, ಭಕ್ತ್ಯತಿಶಯಕ್ಕೂ ಇಟ್ಟುಕೊಳ್ಳುವುದರಿಂದ ಮೂರ್ತಿಪೂಜೆಯನ್ನು ದೂಷಿಸುವುದು ಬುದ್ಧಿವಂತರ ಲಕ್ಷಣವಲ್ಲ.

ಇನ್ನು ವೈದಿಕ ಧರ್ಮಾಂಗವಾಗಿ ಭರತಖಂಡದಲ್ಲಿ ವಿರಾಜಿಸುತ್ತಿರುವ ವೀರಶೈವ ಧರ್ಮದ ಲಿಂಗಪೂಜೆಯ ವಿಷಯ, ವೀರಶೈವ ಧರ್ಮದ ಇಷ್ಟಲಿಂಗ ಪೂಜೆಯ ಮುಖ್ಯೋದ್ದೇಶವು ಚಿತ್ತಶುದ್ಧಿ ಮನಶ್ಶಾಂತಿ ಆತ್ಮಾನುಭವ ಇವುಗಳೇ ಮುಖ್ಯವಾಗಿರುತ್ತವೆ ವೀರಶೈವರು ಜಗದೀಶನು ಸ್ವರ್ಗ, ಮರ್ತ್ಯ, ಕೈಲಾಸ, ವೈಕುಂಠ ಮುಂತಾದ ಯಾವುದಾದರೊಂದು ಸ್ಥಾನದಲ್ಲಿ ನೆಲೆಸಿರದೆ ಸರ್ವವ್ಯಾಪಿಯಾಗಿ ಸೃಷ್ಟಿಯ ಸಮಸ್ತ ಚರಾಚರ ವಸ್ತುಗಳಲ್ಲಿಯೂ ಅಂತರ್ಯಾಮಿಯಾಗಿರುವನೆಂದು ನಂಬುವರು. ಆದರೆ ಆ ದೇವನು ಅವ್ಯಕ್ತ ಸ್ವರೂಪನಾಗಿರುವುದರಿಂದ ಅವನನ್ನು ವ್ಯಕ್ತಪಡಿಸಿಕೊಳ್ಳುವುದೇ ಲಿಂಗಪೂಜೆಯ ಮುಖ್ಯೋದ್ದೇಶವು ಈ ಉದ್ದೇಶ ಕ್ಕೊಡನೆ ಸಹಕರಿಸುವ ಕರ್ಮವೇ ಲಿಂಗಪೂಜೆಯು. ದೇವರು ಪ್ರಪಂಚದಲ್ಲಿ ಭೇದಾಭೇದಗಳನ್ನೆಣಿಸದೆ ವಿಶ್ವ ವ್ಯಾಪಿಯಾಗಿ ವಿಶ್ವಬಾಂಧವ್ಯವನ್ನು ಬೆಳೆಯಿಸಿ ವಿಶ್ವಕುಟುಂಬದ ಯಜಮಾನ್ಯವನ್ನು ಹೇಗೆ ನಡೆಯಿಸುತ್ತಿರುವನೆಂಬುದನ್ನು ಶಿವಶರಣವರೇಣ್ಯರಾದ ವಚನಕಾರರು ಬಗೆಬಗೆಯಾಗಿ ಬಣ್ಣಿಸಿರುವರು. ಅವುಗಳಲ್ಲಿ ಕೆಲವನ್ನು ಲ್ಲಿ ಕಾಣಬಹುದು.

ಮರದೊಳಗಿನ ಮಂದಾಗ್ನಿಯು, ಉರಿಯದಂತಿರಿಸಿದೆ ನೊರೆಹಾಲೊಳಗೆ ತುಪ್ಪವ, ಕಂಪಿಲ್ಲದಂತಿರಿಸಿದೆ, ಶರೀರದೊಳಗಾತ್ಮನ ಕಾಣದಂತಿರಿಸಿದೆ, ನೀಬೆರಿಸುವ ಭೇದಕ್ಕೆ ಬೆರಗಾದೆನೈ ರಾಮನಾಥಾ.

ಶ್ರೀ. ದೇವರ ದಾಸಿಮಯ್ಯನವರು.

ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದೀತು, ಶಶಿಯೊಳಗಣ ರಸದ ರುಚಿಯಂತಿದ್ದೀತು, ನನೆಯೊಳಗಣ ಪರಿಮಳದಂತಿದ್ದೀತು, ಕೂಡಲ ಸಂಗಮದೇವ ನಿಮ್ಮ ನಿಲವು ಕನ್ಯೆಯ ಸ್ನೇಹದಂತಿದ್ದೀತು.

ಶ್ರೀ ಭಗವಾನ್ ಬಸವಣ್ಣನವರು.

ನೆಲದ ಮರೆಯ ನಿಧಾನದಂತೆ, ಫಲದಮರೆಯ ರುಚಿಯಂತೆ. ಶಿಲೆಯಮರೆಯ ಹೇಮದಂತೆ, ತಿಲದಮರೆಯ ತೈಲದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ, ನಿಲವನಾರು ಅರಿಯಬಾರದು,

ಶಿವಶರಣಿ ಶೀ ಮಹಾದೇವಿಯಕ್ಕನವರು.

ಈ ವಚನಗಳಲ್ಲಿ ಶಿವಶರಣರು ಜಗತ್ತಿನ ಜೀವಕೋಟಿಗಳಲ್ಲ ದೇವರು ಅವ್ಯಕ್ತರೂಪಿಯಾಗಿ ಹೇಗೆ ವ್ಯಾಪಿಸಿರುವನೆಂಬುದನ್ನು ಅತ್ಯಂತ ಸರಳ ಮತ್ತು ಸುಂದರ ರೀತಿಯಲ್ಲ ವರ್ಣಿಸಿರುವರು. ಹೀಗೆ ಅವ್ಯಕ್ತನಾಗಿರುವ ದೇವರನ್ನು ವ್ಯಕ್ತಪಡಿಸಿಕೊಳ್ಳುವುದು ಅರ್ಥಾತ್ ಮನಶ್ಶಾಂತಿಯನ್ನು ಹೊಂದುವುದೇ (ಮಾನವನ ಅಂತಃಕರಣದಲ್ಲಿ ಶಾಂತಿಯೂ ಸಂತೋಷವೂ ಸದಾಕಾಲ ಚಿರಜೀವಿಗಳಾಗಿ ನೆಲೆಸಿದ್ದರೆ ಅದೇ ಮೋಕ್ಷ ಸು ಖವು) ಲಿಂಗಪೂಜೆಯ ಮುಖ್ಯೋದ್ದೇಶವು. ಆಚಾರಕ್ಕೂ ಅತೀತವಾ ಪ ಭಕ್ತಿಯನ್ನು ವಶಪಡಿಸಿಕೊಂಡು ಆ ಭಕ್ತಿಯ ಮೂಲಕವೇ ಮು ಕ್ತಿಯನ್ನು ಪಡೆಯಬೇಕೆಂಬುದೇ ವೀರಶೈವ ಧರ್ಮದ ಕಟ್ಟಪ್ಪಣೆಯು. ಜಲವೆಂಬ ಒಂದು ವಸ್ತುವಿದ್ದ ಮೇಲೆ ಅದನ್ನು ಉಪಯೋಗಕ್ಕೆ ಗಿ ತುಂಬಿಕೊಳ್ಳಲು ಒಂದು ಪಾತ್ರೆಯು ಹೇಗೆ ಆವಶ್ಯಕವೋ ಹಾಗೆಯೇ ದೇವರು ಎಂಬ ಒಂದು ಅವ್ಯಕ್ತ ಸ್ವರೂಪವಿರುವುದಾದ ರೆ ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಮೂರ್ತಿ ಪೂಜೆ ಎಂಬುದೊಂದು ಪ್ರಾಮುಖ್ಯ ಸಾಧನವಲ್ಲವೆ? ದೈವ ಸಾಕ್ಷಾತ್ಕಾರಕ್ಕೆ ಮೂರ್ತಿ ಅಥವಾ ನಿರ್ವಿಕಾರವಾದ ಯಾವ ಬಗೆಯ ರೂಪು ಆಕಾರಗಳಿಗೂ ಒಳಪಡ ವಸ್ತುವನ್ನು ನಿರ್ದಿಷ್ಟಕ್ಕಾಗಿಟ್ಟುಕೊಂಡು ಪೂಜಿಸುವು ಮಾರ್ಗವೆಂಬುದನ್ನು ಪ್ರಮಥವರೇಣ್ಯರಾದ ಶ್ರೀ ಪ್ರಭುದೇವರಿಗೂ ಶ್ರೀ ಸಿದ್ಧರಾಮ ಶಿವಯೋಗಿಗಳಿಗೂ ನಡೆದ ಈ ಕೆಳಗಣ ಸಂಭಾಷಣೆಯಿಂದ ತಿಳಿಯಬಹುದು.

ಕೈಯಲ್ಲಿ ಹಿಡಿದು ಕಾಂಬುದು ಕರ್ಮದ ಪೂಜೆಯಲ್ಲವೇ? ಮನದಲ್ಲಿ ನೆನೆದುಮಾಡುವುದೆಲ್ಲವು ಕಾಯಕದ ಕರ್ಮವಲ್ಲವೇ? ಭಾವ ಶುದ್ಧವನರಿವ ಪರಿ ಇನ್ನಾವುದು ಕಪಿಲ ಸಿದ್ಧ ಮಲ್ಲಿಕಾರ್ಜುನ.

ಇದಕ್ಕೆ ಪ್ರಭುದೇವರ ಉತ್ತರ-

ಚಿನ್ನವನೊರೆಯಬಹುದಲ್ಲದೆ ಬಣ್ಣವನೊರೆಯಬಹುದೆ ? ಹೂವಮುಡಿಯಬಹುದಲ್ಲದೆ ಗಂಧವಮುಡಿಯಬಹುದೆ? ಕರ್ಮವ ಮಾಡಬಹುದಲ್ಲದೆ ವಸ್ತುವನರಿಯಬಹುದೆ? ಗುಹೇಶ್ವರನ ನೆನೆಯಬಹುದಲ್ಲದೆ ಲಿಂಗವು ತಾನಾಗಬಾರದು, ಸಿದ್ಧರಾಮಯ್ಯ.

ಈ ವಿಷಯವಾಗಿ ಹೆಚ್ಚಿಗೆ ಅಂದರೆ ಇಷ್ಟಲಿಂಗವೇಕೆಬೇಕು. ಲಿಂಗಪೂಜೆಯು ಎಷ್ಟು ಆವಶ್ಯಕವಾದುದು. ಶಿವಶರಣರ ವಚನಗಳು ಮಾನವರನ್ನು ಹೇಗೆ ಉದ್ಧಾರಮಾಡುವವು. ಮುಂತಾದ ಉದಾತ್ತ ವಿಚಾರಗಳನ್ನರಿಯಲಪೇಕ್ಷಿಸುವವರು ಶ್ರೀ ಶಿವಾನುಭವ ಕಾರ್ಯಾಲಯದಿಂದ ಪ್ರಕಟವಾಗಿರುವ ಶ್ರೀ ಶೂನ್ಯ ಸಂಪಾದನೆಯೆಂಬ ಸುಂದರ ಗ್ರಂಥದಲ್ಲಿ ನೋಡಿ ತಿಳಿದುಕೊಳ್ಳಬಹುದು.

ಮೇಲಣ ಸಂಭಾಷಣೆಯಿಂದ ಮಾನವನು ಸಜ್ಜನರ ಸಹವಾಸದಿಂದ ಉತ್ತಮನೂ ದುರ್ಜನರ ಸಹವಾಸದಿಂದ ತಾನೂ ದುರ್ಜನನಾಗುವುದಲ್ಲದೆ ಲೋಕಕ್ಕೂ ಹೇಗೆ ಕಂಟಕಪ್ರಾಯನಾಗುವನೋ ಹಾಗೆಯೇ ಮಾನವನೂ ಸಹ ದೈವ ಸಾಕ್ಷಾತ್ಕಾರವೆಂಬ ಉತ್ತಮ ಫಲವನ್ನು ಪಡೆಯಬೇಕಾದರೆ ತನ್ನ ಮನಸ್ಸಿನ ಮೇಲೆ ಪ್ರಶಾಂತ ಪ್ರಫುಲ್ಲ ಸದ್ಭಾವನಾಮಯ ವಾತಾವರಣವನ್ನು ಕಲ್ಪಿಸಿ

ವೈದಿಕ ಸಮಾಜವೂ, ಮೂರ್ತಿ ಪೂಜೆಯೂ.

(ಲೇಖಕ—ಎಂ. ಎನ್. ನಂಜಪ್ಪ ಬೆಂಗಳೂರನಗರ.)

ಇಂದಿನ ಭಾರತವರ್ಷದ ವೈದಿಕ ಸಂಸ್ಕೃತಿಯನ್ನೂ ಅನ್ಯ ಸಂಸ್ಕೃತಿಯನ್ನೂ, ಪರದೇಶೀಯರು ಬಗೆಬಗೆಯ ಆರೋಪಗಳಿಂದ ನಿಂದಿಸುತ್ತಿರುವರಷ್ಟೆ. ಹೀಗೆ ನಿಂದಿಸುವುದರಲ್ಲಿ ಸತ್ಯಾಂಶವಿಲ್ಲವೆಂತಲ್ಲ, ಆದರೆ ಅವರು ನಿಂದಿಸುವಷ್ಟು ಹೇಯ ಸ್ಥಿತಿಗಿಳಿದಿಲ್ಲವೆಂದು ಮಾತ್ರ ಖಂಡಿತವಾಗಿ ಹೇಳಬಹುದು ನಿಂದಕರ ಮುಖ್ಯ ಆರೋಪವು ಮೂರ್ತಿಪೂಜೆಯನ್ನು ಕುರಿತುದು, ಭರತಖಂಡದ ವೈದಿಕ ಸಮಾಜದವರು ಮಾತ್ರ ಮೂರ್ತಿಪೂಜಕರೆಂದೂ, ತಾವು ಮೂರ್ತಿಪೂಜಕರಲ್ಲವೆಂದೂ, ಭಾವಿಸಿಕೊಂಡಿರುವ ಕೆಲವು ಜನಾಂಗದವರು ಅದೊಂದು ಬಗೆಯ ಬಡಾಯಿಕೊಚ್ಚುವುದುಂಟು. ಆದರೆ ಇಂದು ಜಗತ್ತಿನ ಮೇಲಿರುವ ಪ್ರತಿಯೊಂದು ಜನಾಂಗದವರು ಒಂದಲ್ಲ ಒಂದು ವಿಧದಿಂದ ಮೂರ್ತಿಪೂಜಕರೇ ಆಗಿರುವರು. ಭಾರತೀಯ ವೈದಿಕ ಸಮಾಜದವರು ಮೂರ್ತಿ ಪೂಜೆ ಮಾಡುವುದರ ಉದ್ದಿಶ್ಯವೇ ಬೇರೆ. ಮೂರ್ತಿ ಪೂಜೆಯನ್ನೇ ದೇವರೆಂದು ಭಾವಿಸಿ ಯಾರೂ ಪೂಜಿಸುವುದಿಲ್ಲ. ಅಖಂಡ ಭೂಮಂಡಲವನ್ನು ವ್ಯಾಪಿಸಿರುವ ಜಗದೀಶ್ವರನು ತಾನು ಪೂಜಿಸುವ ಮೂರ್ತಿಯಲ್ಲಿಯೂ ಸನ್ನಿಹಿತನಾಗಿರುವನೆಂದೂ, ತಾನು ಗೈಯುತ್ತಿರುವ ಸೇವೆಯು ಆತನಿಗೆ ಸಲ್ಲುವದೆಂದೂ ಭಾವಿಸಿ ಮಾಡುವ ಪೂಜೆಯು ಮೂರ್ತಿಪೂಜೆಯೆಂದಾಗುವುದಿಲ್ಲ. ಮೂರ್ತಿಪೂಜೆಯೆಂಬ ಶಬ್ದದ ನಿಜವಾದ ಭಾವನೆಯು ಮೂರ್ತಿಯನ್ನೇ ದೇವನೆಂದು ನಂಬಿ ಪೂಜಿಸುವುದಾಗುತ್ತದೆ. ಆದರೆ ವೈದಿಕ ಸಮಾಜದವರಲ್ಲಿ ಯಾರೂ ಈ ಭಾವನೆಯಿಂದ ಪೂಜೆ ಮಾಡುವುದಿಲ್ಲ [illegible] ದೀಶ್ವರನಿಗೆ ಆದಿ ಅಂತ್ಯಗಳಿವೆಯೆಂದಾಗುವುದು [illegible] ವನ್ನು ಸ್ಥಾಪಿಸಿದಾಗ ದೇವರಿಗೆ ಆದಿಯುಂಟಾಯಿ[illegible]ತೆಂದೂ, ಅದು ಭಿನ್ನವಾದಾಗ ಅಂತ್ಯವಾಯಿತೆಂದೂ, ತಿಳಿಯಬೇಕಾಗುವುದು. ಈ ಭಾವನೆಯು ಅನಾಗರಿಕರಾದ ಅರಣ್ಯವಾಸಿಗಳ ಭಾವನೆಯು. ವೈದಿಕ ಸಮಾಜದವರಲ್ಲಿ ಯಾರೂ ಯಾವಾಗಲೂ ಈ ಭಾವನೆಯಿಂದ ಮೂರ್ತಿಪೂಜೆ ಮಾಡಿದಂತೆ ಕಾಣುವುದಿಲ್ಲ, ಮೂರ್ತಿಪೂಜೆಯು ವೈದಿಕ ಧರ್ಮದ ಮೂಲತತ್ವವಲ್ಲವೆಂದು ತೋರುತ್ತದೆ. ಯಾಕೆಂದರೆ ವೈದಿಕ ಧರ್ಮದ ಪ್ರಾಚೀನ ಮಹರ್ಷಿಗಳು ಈಶ್ವರನ ಕೃಪಾಕಟಾಕ್ಷವನ್ನು ಪಡೆಯಬೇಕಾದಾಗ ಕೇವಲ ಮಾನಸಿಕ ಪೂಜೆಯಿಂದಲೇ ಅಂದರೆ ತಪಸ್ಸಿನಿಂದಲೇ ಪಡೆದಿರುವರೆಂಬುದು ಭಾರತೀಯ ಧಾರ್ಮಿಕ ಮತ್ತು ಐತಿಹಾಸಿಕ ಗ್ರಂಥಗಳಿಂದ ತಿಳಿದು ಬರುತ್ತದೆ. ಆದರೆ ಜನಾಂಗದಲ್ಲಿ ಭಾವನಾಶಕ್ತಿಯೂ, ಮನಸ್ಥೈರ್ಯವೂ ಕುಗ್ಗುತ್ತ ನಡೆದು ಚಿತ್ತವು ಚಂಚಲವಾದೊಡನೆಯೇ ವಿಗ್ರಹಾರಾಧನೆಗೆ ಪ್ರಾರಂಭವಾಯಿತೆನ್ನಬಹುದು. ಚಂಚಲವಾದೀ ಮನಸ್ಸನ್ನು ಶಾಂತಗೊಳಿಸಿ ಏಕಾಗ್ರವಾಗಿ ಮಾಡಿ ಒಂದೆಡೆಯಲ್ಲಿ ಸ್ಥಾನಯಿಯಾಗಿ ನಿಲಿಸಬೇಕಾದರೆ ನೋಡಿದೊಡನೆಯೇ ಮನಸ್ಸನ್ನಾನಂದಗೊಳಿಸುವಂತಹ ಭವ್ಯವೂ ಸುಂದರವೂ ಆದ ವಿಗ್ರಹವೊಂದು ಅತ್ಯಂತ ಅವಶ್ಯಕವೇ ಸರಿ. ಇದಕ್ಕಾಗಿಯೇ ಭರತಖಂಡದಲ್ಲಿ ಸೌಂದರ್ಯಯುಕ್ತವೂ ವೈಭವಯುಕ್ತವೂ ಆದ ದೇವಾಲಯಗಳನ್ನೂ ಪುಣ್ಯ ಕ್ಷೇತ್ರಗಳನ್ನೂ ನಿರ್ಮಿಸಿ ಅವುಗಳಲ್ಲಿ ಸುಂದರ ಮೂರ್ತಿಗಳನ್ನೂ ಪ್ರತಿಷ್ಠಿಸಿ ಅವುಗಳಿಗೆ ಕೋಟಿಗಟ್ಟಲೆ ಬೆಲೆಯ ಸುವರ್ಣ ಜವಾಹಿರಿಗಳನ್ನು ಧರಿಸಿ ಪೂಜಿಸುತ್ತಿರುವುದು ಇದರಿಂದಲೇ ಇಂದಿಗೂ ವೈದಿಕ ಧರ್ಮಾನುಯಾಯಿಯಾದ ಪ್ರತಿಯೊಬ್ಬ ಭಾರತೀಯನೂ ಕಡೆಗೆ ದೇಶಾಟನೆಯ ನೆವದಿಂದಲಾದರೂ ಒಮ್ಮೆ ಪುಣ್ಯಕ್ಷೇತ್ರದ ಸಂದರ್ಶನವನ್ನು ಮಾಡಿ ಮನಶ್ಶಾಂತಿಯನ್ನು ಪಡೆಯುತ್ತಿರುವನು.

ಆದ್ದರಿಂದ ಜನರಲ್ಲಿ ಈಶ್ವರಭಕ್ತಿಯು ಶಾಶ್ವತವಾಗಿ ನೆಲೆಸಿರಲೆಂತಲೇ ದೇವಾಲಯಗಳು ಸ್ಥಾಪಿಸಲ್ಪಟ್ಟವು. ಈಗಲೂ ಸ್ಥಾಪಿಸಲ್ಪಡುತ್ತಿರುವವು ಕ್ಷಣಕಾಲವಾದರೂ ಆ ದೇವಾಲಯಗಳನ್ನೂ ದಿವ್ಯಮೂರ್ತಿಗಳನ್ನೂ ಸಂದರ್ಶಿಸಿದ ಮಾತ್ರಕ್ಕೆ ಇದೇ [illegible]ತಲೊ ವೈಕುಂಠವೆಂತಲೋ ಸ್ವರ್ಗವೆಂತಲೋ ಮನಸ್ಸಿನಲ್ಲಿ [illegible]ಯುಂಟಾಗಿ ಕ್ಷಣಕಾಲದವರೆಗಾದರೂ ಜನರ ಮನಸ್ಸು ಏಕಾಗ್ರವಾಗುತ್ತಿದ್ದಿತು. ಕ್ಷಣಿಕವೂ ಮನಸ್ಸಿನ ಚಂಚಲತ್ವಕ್ಕೆ [illegible] ವಾತಾವರಣವುಳ್ಳುದೂ ಆದ ಈ ಕಾಲದಲ್ಲಿ ಜೀವ ಪರಮರ [illegible]ಗಾಗಿ ನಿಯೋಜಿಸಿದ ಈ ಉಪಾಯವನ್ನು ದೂಷಣೀಯವೆಂ[illegible] ದೂರುವುದರಲ್ಲಿ ಅರ್ಥವಿಲ್ಲ. ಅಲ್ಲದೆ ಈ ಕಾಲದಲ್ಲಿ ಮೂರ್ತಿಪೂಜೆಯು ಅತ್ಯಂತ ಅಗತ್ಯವೆಂದೇ ಹೇಳಬಹುದು. ಯಾಕೆಂದರೆ ಈಶ್ವರನನ್ನು ಮಾನಸಿಕವಾಗಿ ಪೂಜಿಸುವಷ್ಟು ಮನೋ ದಾರ್ಢ್ಯವು ಈ ಕಾಲದಲ್ಲಿ ಲೆಕ್ಕವಿಲ್ಲದಷ್ಟು ತಾಪತ್ರಯಗಳಲ್ಲಿ ಮುಳುಗಿರುವ, ಪಾರಮಾರ್ಥಿಕ ಭಾವನೆಯು ತಗ್ಗಿ ಲೌಕಿಕ ವಿಚಾರಗಳು ಹೆಚ್ಚಿರುವ ಯಾವದರಲ್ಲಿಯೂ ಇಲ್ಲವೆಂದ ಮೇಲೆ ಕಣ್ಣ ಮುಂದೆ ಒಂದು ವಿಗ್ರಹವನ್ನಿಟ್ಟುಕೊಂಡು ಆ ವಿಗ್ರಹದ ಕಡೆಗೆ ಮನಸ್ಸನ್ನು ನಿಲ್ಲಿಸಿ ಪೂಜಿಸುವುದರಲ್ಲಿ ಯಾವ ದೋಷವೂ ಇರದು. ಇನ್ನು ನಾವು ವಿಗ್ರಹಾರಾಧಕರಲ್ಲವೆಂದು ಹೇಳುವವರಲ್ಲಿಯೂ ಒಂದು ವಿಧವಾದ ವಿಗ್ರಹಾರಾಧನೆಯು ಇದ್ದೇ ಇರುವುದು. ಉದಾಹರಣೆಗೆ ಅವರಲ್ಲಿಯ ಪ್ರಸಿದ್ಧ ಪುರುಷರ ಜ್ಞಾಪಕಾರ್ಥವಾಗಿ ಶಿಲೆಯಿಂದಾಗಲೀ ಲೋಹದಿಂದಾಗಲೀ ವಿಗ್ರಹಗಳನ್ನು ಮಾಡಿಟ್ಟುಕೊಂಡು ಆ ವ್ಯಕ್ತಿಗಳಿಗೆ ಯಾವ ರೀತಿಯಿಂದ ಮರ್ಯಾದೆಯನ್ನು ಮಾಡುತ್ತಿದ್ದರೋ ಆ ವಿಗ್ರಹಗಳಿಗೆ ಅದೇ ರೀತಿ ಮರ್ಯಾದೆಯನ್ನು ಸಲ್ಲಿಸುತ್ತಿರುವರು ಇದು ಪರ್ಯಾಯದಿಂದ ಮೂರ್ತಿಪೂಜೆ ಮಾಡಿದಂತಾಗಲಿಲ್ಲವೇ? ವೈದಿಕ ಧರ್ಮೀಯರ ಮೂರ್ತಿ ಪೂಜೆಯನ್ನು ಕನಿಷ್ಠವೆಂದೆಣಿಸುವುದಾದರೆ ಇದು ಅದಕ್ಕಿಂತಲೂ ಕನಿಷ್ಟವಲ್ಲವೇ? ಯಾಕೆಂದರೆ ವೈದಿಕ ಧರ್ಮೀಯರು ದೇವರು ಮೂರ್ತಿಯಲ್ಲಿಯೂ ಸನ್ನಿಹಿತನಾಗಿರುವನೆಂದೆಣಿಸಿ ಪೂಜಿಸುವರು. ಆದರೆ ಈ ವಿಧವಾಗಿ ಪೂಜಿಸುವವರು ಆ ವಿಗ್ರಹವನ್ನೇ ಆ ಪುರುಷನೆಂದು ಭಾವಿಸಿ ಪೂಜಿಸುವರು ಆದರೆ ಇದರಲ್ಲಿ ಇನ್ನೊಂದು ವಿಶೇಷವಿರುವುದು. ಮನುಷ್ಯನ ಜ್ಞಾಪಕಾರ್ಥವಾಗಿ ಮಾಡಿಟ್ಟ ಆ ಗೊಂಬೆಯು ಆ ಮನುಷ್ಯನನ್ನೇ ಹೋಲುವುದು. ಆದರೆ ದೇವರ ಪೂಜೆಗಾಗಿ ತಯಾರಿಸಿದ ವಿಗ್ರಹವು ದೇವರನ್ನೇ ಹೋಲುವುದೆ? ಎಂಬುದು ನಿಶ್ಚಯ. ಈಶ್ವರನು ನಿರಾಕಾರಿಯು. ತೇಜೋಮಯನು ಎಂಬುದಾಗಿ ಎಲ್ಲ ಮತ ತತ್ವಗಳೂ ಹೇಳುತ್ತಿವೆ. ಇಂಥ ನಿರಾಕಾರಿ ನಿರಾಮಯನಿಗೆ, ಮಾನವನು ಯಾವ ಆಕಾರವನ್ನು ಕೊಡುವುದೂ ಸಾಧ್ಯವಲ್ಲದ ಕೆಲಸ, ಆದುದರಿಂದ ಮನುಷ್ಯನು ತನಗೆ ಪ್ರಿಯವಾದ ಯಾವ ರೂಪನ್ನು ಕೊಟ್ಟು ವಿಗ್ರಹವನ್ನು ಕೆತ್ತಿದರೂ ಅದು ತೇಜೋಮಯನಾದ ಈಶ್ವರನಿಗೆ ಅವಮಾನ ಪಡಿಸಿದಂತಾಗಲಿಲ್ಲ, ಪೂಜೆಯ ಮೂರ್ತಿಯನ್ನು ತಯಾರಿಸುವಾಗ್ಗೆ ಅವನ ಉದ್ದೇಶವಿರುವುದೇನಂದರೆ ಓ ಜಗದೀಶ್ವರನೇ ನಾನು ನಿನ್ನ ಸ್ವರೂಪವನ್ನರಿಯೆನಾಗಿಕಾರಣ ನನಗೆ ಪ್ರಿಯವಾದ ರೀತಿಯಲ್ಲಿ ಒಂದು ವಿಗ್ರಹವನ್ನು ಮಾಡಿಟ್ಟುಕೊಂಡು ಆ ಮೂಲಕ ನಿನ್ನನ್ನು ಪೂಜಿಸುವೆನು ಎಂಬುದಾಗಿ, ಆದುದರಿಂದ ಜಗದೀಶನ ಅವಗ್ರಹಕ್ಕೆ ಅವನೆಂದಿಗೂ ಪಾತ್ರನಾಗನು, ಇನ್ನೊಂದು ವಿಚಾರ ಹಲವರು ಕುತರ್ಕಿಗಳು ಕಳ್ಳರು ದೇವಾಲಯಗಳಿಗೆ ಕನ್ನವನ್ನು ಕೊರೆದು ಅಲ್ಲಿಯ ದೇವರಿಗೆ ಧರಿಸಿದ ಒಡವೆ ವಸ್ತುಗಳ

ನ್ನೆಲ್ಲಾ ಕದ್ದು, ಕೆಲವು ವೇಳೆ ವಿಗ್ರಹಗಳನ್ನೇ ಕದಿಯುತ್ತಲೂ ಇರು: ವಾಗ ವಿಗ್ರಹ ರೂಪಿಯ ದೇವರು ಕೈಯಿದ್ದೂ ಅವರನ್ನೇಕೆ ಓಡಿ ಸಲಿಲ್ಲ? ಬಾಯಿದ್ದೂ ಅವರನ್ನೇಕೆ ಗದ್ದರಿಸಲಿಲ್ಲ. ಇತ್ಯಾದಿಯಾಗಿ ಮಾತನಾಡುವರು. ಇದು ಅಧಿಕ ಪ್ರಸಂಗವೆಂದು ಅವರ ಮಾತನ್ನು ...ವ್ವಾಗಲೇ ತಿಳಿಯುವುದು. ಇಂತಹ ಕಳ್ಳತನಗಳು ಎಲ್ಲೆಲ್ಲಿಯೂ ...ಎಹುದು. ಕ್ರೈಸ್ತರ ಚರ್ಚಗಳಲ್ಲಿಯೂ, ಮುಸಲ್ಮಾನರ ...ಲ್ಲಿಯೂ, ಇನ್ನುಳಿದ ಅರಮನೆ ಗುರುಮನೆಗಳಲ್ಲಿಯೂ ...ಲೇ ಇರುತ್ತವೆ. ಜಗದೀಶನು ಸರ್ವ ವ್ಯಾಪಿಯಾಗಿರು... ನಾವು ಈ ಜಗತ್ತಿನಲ್ಲಿ ಎಲ್ಲಿ ಯಾವ ಮೂಲೆಯಲ್ಲಿ ಯಾವ ...ಮಾಡಿದರೂ ಅದು ಜಗದೀಶ್ವರನಿಗೆ ಕಂಡೇ ಕಾಣುತ್ತದೆ. ...ರಿಂದ ದೇವಾಲಯಗಳಲ್ಲಿ ಕಳ್ಳತನ ಮಾಡಿದರೆ ಮಾತ್ರವೇ ...ಗೆ ತಿಳಿಯುವದೆಂದಲ್ಲ. ಎಲ್ಲಿ ಕಳವು ಮಾಡಿದರೂ ಈ ...ಯ ಯಾವ ಮೂಲೆಯಲ್ಲಿಯೂ ಸತ್ಕರ್ಮ ದುಷ್ಕರ್ಮಗಳನ್ನು ...ಡಿದರೂ ದೇವರಿಗೆ ತಿಳಿದೇ ತಿಳಿಯುವುದು. ಆದರೆ ತಿಳಿದೊಡ ...ಯೇ ಅವನ ಕರ್ಮಕ್ಕೆ ತಕ್ಕ ಫಲವು ದೊರೆಯುವುದಿಲ್ಲ. ದೇವರ ನಿಯಮದಂತೆ ಪ್ರತಿಯೊಂದು ಕರ್ಮಕ್ಕೂ ತಕ್ಕ ಫಲ ದೊರೆಯ ತಕ್ಕ ಒಂದು ಕಾಲವು ಇದ್ದೇ ಇರುವುದು. ಆದರೆ ಆ ಕಾಲವನ್ನು ಮಾತ್ರ ಮಾನವನು ತಿಳಿಯಲಾರನು. ಆ ಕಾಲವು ಸನ್ನಿಹಿತ ವಾದ ಕೂಡಲೇ ಅವರವರ ಕರ್ಮಕ್ಕೆ ತಕ್ಕ ಫಲವು ದೊರೆತೇ ತೀರು ವುದು. ಒಂದು ವೃಕ್ಷವು ಫಲಿಸುವುದಕ್ಕೆ ದೇವರು ಒಂದು ಕಾಲ ವನ್ನು ನಿಯಮಿಸಿರುವನು. ಆ ಕಾಲವು ಬಂದೊಡನೆಯೇ ಅದು ಫಲಿಸುವುದು. ಹಾಗೆಯೇ ಎಲ್ಲಾ ಕಾರ್ಯಗಳಿಗೂ ಫಲವು ದೊರೆ ಯುವ ಕಾಲ ಇದ್ದೇ ಇರುವುದು. ಮಾನವನು ಎಲ್ಲಿ ಯಾವ ಅಪ ರಾಧವನ್ನು ಮಾಡಿದರೂ, ದೇವರ ಮುಂದೆಯೇ ಮಾಡಿದಂತೆಯೇ ಆಗುವುದರಿಂದ ಅವನ ಕರ್ಮವು ಪಕ್ವಾವಸ್ಥೆಗೆ ಬರುವವರೆಗೂ ಅವ ನಿಗೆ ಅದರ ಫಲವು ದೊರೆಯಲಾರದು. ಮುಖ್ಯವಾಗಿ ವಿಗ್ರಹವನ್ನೇ ದೇವರೆಂದು ಯಾರೂ ಪೂಜಿಸದೆ ಅದರಲ್ಲಿ ಜಗದೀಶನು ಸನ್ನಿಹಿತನಾ ಗಿರುವನೆಂದು ಭಾವಿಸಿ ಆ ಮೂರ್ತಿಯನ್ನು ತನ್ನ ಮನಸ್ಸಿನ ಸ್ಥಿರ ತೆಗೂ, ಭಕ್ತ್ಯತಿಶಯಕ್ಕೂ ಇಟ್ಟುಕೊಳ್ಳುವುದರಿಂದ ಮೂರ್ತಿಪೂಜೆ ಯನ್ನು ದೂಷಿಸುವುದು ಬುದ್ಧಿವಂತರ ಲಕ್ಷಣವಲ್ಲ.

ಇನ್ನು ವೈದಿಕ ಧರ್ಮಾಂಗವಾಗಿ ಭರತಖಂಡದಲ್ಲಿ ವಿರಾಜಿ ಸುತ್ತಿರುವ ವೀರಶೈವ ಧರ್ಮದ ಲಿಂಗಪೂಜೆಯ ವಿಷಯ, ವೀರಶೈವ ಧರ್ಮದ ಇಷ್ಟಲಿಂಗ ಪೂಜೆಯ ಮುಖ್ಯೋದ್ದೇಶವು ಚಿತ್ತಶುದ್ಧಿ ಮನಶ್ಯಾಂತಿ ಆತ್ಮಾನುಭವ ಇವುಗಳೇ ಮುಖ್ಯವಾಗಿರುತ್ತವೆ ವೀರ ಶೈವರು ಜಗದೀಶನು ಸ್ವರ್ಗ, ಮರ್ತ್ಯ, ಕೈಲಾಸ, ವೈಕುಂಠ ಮುಂತಾದ ಯಾವುದಾದರೊಂದು ಸ್ಥಾನದಲ್ಲಿ ನೆಲೆಸಿರದೆ ಸರ್ವ ವ್ಯಾಪಿಯಾಗಿ ಸೃಷ್ಟಿಯ ಸಮಸ್ತ ಚರಾಚರ ವಸ್ತುಗಳಲ್ಲಿಯೂ ಅಂತ ರ್ಯಾಮಿಯಾಗಿರುವನೆಂದು ನಂಬುವರು. ಆದರೆ ಆ ದೇವನು ಅವ್ಯಕ್ತ ಸ್ವರೂಪನಾಗಿರುವುದರಿಂದ ಅವನನ್ನು ವ್ಯಕ್ತಪಡಿಸಿಕೊ ಳ್ಳುವುದೇ ಲಿಂಗಪೂಜೆಯ ಮುಖ್ಯೋದ್ದೇಶವು. ಈ ಉದ್ದೇಶ ದೊಡನೆ ಸಹಕರಿಸುವ ಕರ್ಮವೇ ಲಿಂಗಪೂಜೆಯು. ದೇವರು ಪ್ರಪಂಚದಲ್ಲಿ ಭೇದಾಭೇದಗಳನ್ನೆಣಿಸದೆ ವಿಶ್ವ ವ್ಯಾಪಿಯಾಗಿ ವಿಶ್ವ ಬಾಂಧವ್ಯವನ್ನು ಬೆಳೆಯಿಸಿ ವಿಶ್ವಕುಟುಂಬದ ಯಜಮಾನ್ಯವನ್ನು ಹೇಗೆ ನಡೆಯಿಸುತ್ತಿರುವನೆಂಬುದನ್ನು ಶಿವಶರಣವರೇಣ್ಯರಾದ ವಚನ ಕಾರರು ಬಗೆಬಗೆಯಾಗಿ ಬಣ್ಣಿಸಿರುವರು. ಅವುಗಳಲ್ಲಿ ಕೆಲವನ್ನು ಇಲ್ಲಿ ಕಾಣಬಹುದು.

ಮರದೊಳಗಿನ ಮಂದಾಗ್ನಿಯ, ಉರಿಯದಂತಿರಿಸಿದೆ ನೊರೆ ವಾಲೊಳಗೆ ತುಪ್ಪವ, ಕಂಪಿಲ್ಲದಂತಿರಿಸಿದೆ, ಶರೀರದೊಳಗಾತ್ಮನ ಕಾಣದಂತಿರಿಸಿದೆ, ನೀ ಬೆರಿಸುವ ಭೇದಕ್ಕೆ ಬೆರಗಾದೆನ್ನೈ ರಾಮನಾಥಾ.

ಶ್ರೀ. ದೇವರ ದಾಸಿಮಯ್ಯನವರು.

ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದೀತು, ಶಶಿಯೊಳಗಣ ರಸದ ರುಚಿಯಂತಿದ್ದೀತು, ನನೆಯೊಳಗಣ ಪರಿಮಳ ದಂತಿದ್ದೀತು, ಕೂಡಲ ಸಂಗಮದೇವ ನಿಮ್ಮ ನಿಲವು ಕನ್ನೆಯ ಸ್ನೇಹದಂತಿದ್ದೀತು.

ಶ್ರೀ ಭಗವಾನ್ ಬಸವಣ್ಣನವರು.

ನೆಲದ ಮರೆಯ ನಿಧಾನದಂತೆ, ಫಲದಮರೆಯ ರುಚಿಯಂತೆ. ಶಿಲೆಯಮರೆಯ ಹೇಮದಂತೆ, ತಿಲದಮರೆಯ ತೈಲದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚೆನ್ನಮಲ್ಲಿಕಾರ್ಜುನನ, ನಿಲವನಾರು ಅರಿಯಬಾರದು,

ಶಿವಶರಣೆ ಶೀ ಮಹಾದೇವಿಯಕ್ಕನವರು.

ಈ ವಚನಗಳಲ್ಲಿ ಶಿವಶರಣರು ಜಗತ್ತಿನ ಜೀವಕೋಟಿಗಳಲ್ಲಿ ದೇವರು ಅವ್ಯಕ್ತರೂಪಿಯಾಗಿ ಹೇಗೆ ವ್ಯಾಪಿಸಿರುವನೆಂಬುದನ್ನು ಅತ್ಯಂತ ಸರಳ ಮತ್ತು ಸುಂದರ ರೀತಿಯಲ್ಲಿ ವರ್ಣಿಸಿರುವರು. ಹೀಗೆ ಅವ್ಯಕ್ತನಾಗಿ...ವ ದೇವರನ್ನು ವ್ಯಕ್ತಪಡಿಸಿಕೊಳ್ಳುವುದು ಅರ್ಥಾತ್ ಮನಶ್ಯಾಂತಿಯ...ನ್ನು ಹೊಂದುವುದೇ (ಮಾನವನ ಅಂತಃ ಕರಣದಲ್ಲಿ ಶಾಂತಿಯೂ ಸ...ತೋಷವೂ ಸದಾಕಾಲ ಚಿರಜೀವಿಗಳಾಗಿ ನೆಲೆಸಿದ್ದರೆ ಅದೇ ಮೋಕ್ಷ ಸು...ಖವು) ಲಿಂಗಪೂಜೆಯ ಮುಖ್ಯೋ ದ್ದೇಶವು. ಆಚಾರಕ್ಕೂ ಅತೀತವಾ...ದ ಭಕ್ತಿಯನ್ನು ವಶಪಡಿಸಿಕೊಂಡು ಆ ಭಕ್ತಿಯ ಮೂಲಕವೇ ಮು...ಕ್ತಿಯನ್ನು ಪಡೆಯಬೇಕೆಂಬುದೇ ವೀರಶೈವ ಧರ್ಮದ ಕಟ್ಟಪ್ಪಣೆಯು. ...ಜಲವೆಂಬ ಒಂದು ವಸ್ತುವಿದ್ದ ಮೇಲೆ ಅದನ್ನು ಉಪಯೋಗಕ...ಗಿ ತುಂಬಿಕೊಳ್ಳಲು ಒಂದು ಪಾತ್ರೆಯು ಹೇಗೆ ಆವಶ್ಯಕವೋ ... ಹಾಗೆಯೇ ದೇವರು ಎಂಬ ಒಂದು ಅವ್ಯಕ್ತ ಸ್ವರೂಪವಿರುವುದಾದ... ಅದನ್ನು ಸಾಕ್ಷಾತ್ಕರಿಸಿ ಕೊಳ್ಳಲು ಮೂರ್ತಿ ಪೂಜೆ ಎಂಬುದೊಂದು ... ಪ್ರಾಮುಖ್ಯ ಸಾಧನ ವಲ್ಲವೆ? ದೈವ ಸಾಕ್ಷಾತ್ಕಾರಕ್ಕೆ ಮೂರ್ತಿ ಅಥ...ವಾ ನಿರ್ವಿಕಾರವಾದ ಯಾವ ಬಗೆಯ ರೂಪು ಆಕಾರಗಳಿಗೂ ಒಳಪಡ... ...ಒಂದು ಪ್ರತ್ಯಕ್ಷ ... ಶ್ರೇಷ್ಠ ವಸ್ತುವನ್ನು ನಿರ್ದಿಷ್ಟಕ್ಕಾಗಿಟ್ಟುಕೊಂಡು ಪೂಜಿಸುವು... ಮಾರ್ಗವೆಂಬುದನ್ನು ಪ್ರಮಥವರೇಣ್ಯರಾದ ಶ್ರೀ ಪ್ರಭುದೇವರಿಗೂ ಶ್ರೀ ಸಿದ್ಧರಾಮ ಶಿವಯೋಗಿಗಳಿಗೂ ನಡೆದ ಈ ಕೆಳಗಣ ಸಂಭಾ ಷಣೆಯಿಂದ ತಿಳಿಯಬಹುದು.

ಕೈಯಲ್ಲಿ ಹಿಡಿದು ಕಾಂಬುದು ಕರ್ಮದ ಪೂಜೆಯಲ್ಲವೇ? ಮನದಲ್ಲಿ ನೆನೆದುಮಾಡುವುದೆಲ್ಲವು ಕಾಯಕದ ಕರ್ಮವಲ್ಲವೇ? ಭಾವ ಶುದ್ಧವನರಿವ ಪರಿ ಇನ್ನಾವುದು ಕಪಿಲ ಸಿದ್ಧ ಮಲ್ಲಿ ಕಾರ್ಜುನ.

ಇವಕ್ಕೆ ಪ್ರಭುದೇವರ ಉತ್ತರ-

ಚಿನ್ನವನೊರೆಯಬಹುದಲ್ಲದೆ ಬಣ್ಣವನೊರೆಯಬಹುದೆ ? ಹೂವಮುಡಿಯಬಹುದಲ್ಲದೆ ಗಂಧವಮುಡಿಯಬಹುದೆ? ಕರ್ಮವ ಮಾಡಬಹುದಲ್ಲದೆ ವಸ್ತುವನರಿಯಬಹುದೆ? ಗುಹೇಶ್ವರನ ನೆನೆಯ ಬಹುದಲ್ಲದೆ ಲಿಂಗವು ತಾನಾಗಬಾರದು, ಸಿದ್ಧರಾಮಯ್ಯ.

ಈ ವಿಷಯವಾಗಿ ಹೆಚ್ಚಿಗೆ ಅಂದರೆ ಇಷ್ಟಲಿಂಗವೇಕೆಬೇಕು. ಲಿಂಗಪೂಜೆಯು ಎಷ್ಟು ಅವಶ್ಯಕವಾದುದು. ಶಿವಶರಣರ ವಚನಗಳು ಮಾನವರನ್ನು ಹೇಗೆ ಉದ್ಧಾರಮಾಡುವವು. ಮುಂತಾದ ಉದಾತ್ತ ವಿಚಾರಗಳನ್ನರಿಯಲಪೇಕ್ಷಿಸುವವರು ಶ್ರೀ ಶಿವಾನುಭವ ಕಾರ್ಯಾ ಲಯದಿಂದ ಪ್ರಕಟವಾಗಿರುವ ಶ್ರೀ ಶೂನ್ಯ ಸಂಪಾದನೆಯೆಂಬ ಸುಂದರ ಗ್ರಂಥದಲ್ಲಿ ನೋಡಿ ತಿಳಿದುಕೊಳ್ಳಬಹುದು.

ಮೇಲಣ ಸಂಭಾಷಣೆಯಿಂದ ಮಾನವನು ಸಜ್ಜನರ ಸಹ ವಾಸದಿಂದ ಉತ್ತಮನೂ ದುರ್ಜನರ ಸಹವಾಸದಿಂದ ತಾನೂ ದುರ್ಜನನಾಗುವುವಲ್ಲದೆ ಲೋಕಕ್ಕೂ ಹೇಗೆ ಕಂಟಕಪ್ರಾಯನಾಗು ವನೋ ಹಾಗೆಯೇ ಮಾನವನೂ ಸಹ ದೈವ ಸಾಕ್ಷಾತ್ಕಾರವೆಂಬ ಉತ್ತಮ ಫಲವನ್ನು ಪಡೆಯಬೇಕಾದರೆ ತನ್ನ ಮನಸ್ಸಿನ ಮೇಲೆ ಪ್ರಕಾಶಾಂತ ಪ್ರಫುಲ್ಲ ಸದ್ಭಾವನಾಮಯ ವಾತಾವರಣವನ್ನು ಕಲ್ಪಿಸಿ

ಕೊಳ್ಳುವದು ಅಗತ್ಯವಲ್ಲವೇ? ಅಂತಹ ಉತ್ತಮ ವಾತಾವರಣವನ್ನು ಕಲ್ಪಿಸಿಕೊಳ್ಳಲು ವೈದಿಕ ಧರ್ಮಾಚರಣೆಗಳಾದ ಸ್ನಾನಾದಿ ನಿಯಮಗಳಿಂದ ದೇಹಶುದ್ಧಿಮಾಡಿಕೊಳ್ಳುವುದೂ ಅದಕ್ಕಾಗಿ ನಿಯಮಿತವಾದ ಪ್ರಶಾಂತವಾದೊಂದು ಸ್ಥಳದಲ್ಲಿ ಕುಳಿತು ಶಾಂತಿ ಮತ್ತು ಸೃಷ್ಟಿಸೌಂದರ್ಯದ ವಸ್ತುಗಳಾದ ಪತ್ರ, ಪುಷ್ಪ, ಫಲಗಳಿಂದಲೂ ಸುಗಂಧಯುಕ್ತ ಧೂಪಧೂಮಂಗಳಿಂದಲೂ ನಿದರ್ಶನಕ್ಕಾಗಿಟ್ಟುಕೊಂಡ ಒಂದು ವಸ್ತುವಿನ ಮೂಲಕ ಮಾಡುವ ಈ ಈಶ್ವರಾರಾಧನೆಯೇ ಮುಖ್ಯ ಸಾಧನವಲ್ಲವೇ? ಆಸ್ತಿಕರಾದ ಭಗವದ್ಭಕ್ತರೆಲ್ಲರೂ ಇದನ್ನೇ ಹೇಳಿರುವರು. ಮಹಾನುಭಾವರಾದ ಶ್ರೀ ಬಸವಣ್ಣನವರೂ ಸಹ ಈ ಅಭಿಪ್ರಾಯವನ್ನೇ ಒಂದು ವಚನದ[illegible] ರೀತಿ ಹೇಳಿರುವರು.

ಅಂಗದಮೇಲೆ ಲಿಂಗವಿಲ್ಲದನ್ನ[illegible] ಅಂಗಸರಿ
ಣಾಮವನ್ನೈದುವ ಪರಿ ಎಂತಯ್ಯ, ಅಂಗ[illegible]ಯವುಳ್ಳವರು ಲಿಂಗ
ತ್ರಯಸಂಪನ್ನರಾಗಬೇಕು, ಒಂದಂಗ[illegible]ವಿರಹಿತವಾಗಿಪ್ಪವರುಂಟೆ?
ಒಂದಂಗವ ಬಿಟ್ಟು ಒಂದಂಗವ ತ[illegible]ರಿದರಾಗಿ ಸಂದುಭೇದವಿಲ್ಲ
ದಿಪ್ಪೆ ಮಡಿವಾಳನ ನಿಲವು ಕೂಡಲ ಸ[illegible]ಮನಲ್ಲಿ ನಿನಗೆಂತು ಸಾಧ್ಯ
ವಾಯಿತ್ತು ಹೇಳಾ?

ಮೇಲಿನ ವಚನವೂ ಸ[illegible] ದೈವಸಾಕ್ಷಾತ್ಕಾರಕ್ಕೆ ಮನಸ್ಸಿನ ಮೇಲೆ ಉತ್ತಮ ವಾತಾವರಣವ[illegible]ನ್ನುಂಟುಮಾಡಿ[illegible]ಕೊಳ್ಳುವುದು ಆವಶ್ಯಕವೆಂತಲೂ ಅಂತಹ ವಾತಾ[illegible]ವರಣವು ಸಿದ್ಧಿಸಬೇಕಾದರೆ, ಮೂರ್ತಿ ಅಥವಾ ಯಾವ ರೂಪೂ ಇಲ್ಲ[illegible]ದ ಶಿವಲಿಂಗ ಮೂರ್ತಿಯ ಮೂಲಕ ಮಾಡುವ ಪೂಜೆಯೇ ಸರ್ವ[illegible] ಶ್ರೇಷ್ಠವೆಂತಲೂ ಬೋಧಿಸುವುದಿಲ್ಲವೆ? ಮುಖ್ಯವಾಗಿ ಭಾರತೀಯ[illegible]ನವಾಗಿದ್ದು ಭಾರ[illegible]ಯರ ಉಪಾಸನಾಬುದ್ಧಿಯು ಭಾವನಾಮಯ ಕೊಟ್ಟವೆಂ[illegible] ಧರ್ಮಸೂತ್ರಗಳೂ ಭಾವನೆಗೆ ಪ್ರಾಧಾನ್ಯ [illegible]ನ್ನು[illegible]ದುದರಿಂದ ವಸ್ತುತಃ ದೇವರು ಸರ್ವಾಂತರ್ಯಾಮಿ ವ್ಯಾಪಿಯಾಗಿದ್ದಾಗ್ಯೂ ಭಕ್ತರ ಭಾವನೆಗಳಿಗನುಸಾರವಾಗಿ ಅವಂವರ ಮನೋಭಿಷ್ಟಗಳನ್ನು ಸಲ್ಲಿಸುವನು. ಹೊರ್ತು ಮನಸ್ಸಿನಲ್ಲಿ ಯಾವ ಬಗೆಯ ಭಾವನೆಯೂ ಮೂಡದೆ ನಿರಾಕಾರವನ್ನೇ ಪೂಜಿಸುವೆನೆಂದು ಗೋಡೆಯ ಬದಿಗೆ ನಿಂತು ಪ್ರಾರ್ಥಿಸುವುದು ಪಾರಮಾರ್ಥಿಕ ಭಾವನೆಯು ತಗ್ಗಿರುವ ಲೌಕಿಕ ವಿಷಯಲೋಲುಪ್ತಯು ಹೆಚ್ಚಿರುವ ಈ ಕಾಲದಲ್ಲಿ ದೈವಸಾಕ್ಷಾತ್ಕಾರಕ್ಕೆ ಸರಿಯಾದ ಸಾಧನವಲ್ಲ. ಇನ್ನು ವೈದಿಕ ಧರ್ಮದಲ್ಲೇನೂ ನಿರಾಕಾರವನ್ನರ್ಚಿಸುವ ಮಾನಸಪೂಜೆಗ ಅವಕಾಶವಿಲ್ಲವೆಂತಲ್ಲ, ಅವಕಾಶವುಂಟು. ಆದರೆ ಅದು ಲೌಕಿಕ ವಿಷಯಾಸಕ್ತರಿಗಲ್ಲ. ಗೃಹಸ್ಥಾಶ್ರಮದ ಸಂಪೂರ್ಣ ಸುಖವನ್ನನುಭವಿಸಿ ಲೌಕಿಕ ವಿಚಾರಗಳಿಗ ಜಿಗುಪ್ಸೆ ಹುಟ್ಟಿದ ಬಳಿಕ ಸರ್ವಸಂಗ ಪರಿತ್ಯಾಗಿಯಾಗಿ ಲೋಕಕಲ್ಯಾಣವನ್ನುಂಟುಮಾಡಿ ತಾನೂ ಕೃತಾರ್ಥನಾಗಬೇಕೆಂದಿಚ್ಛಿಸುವವನಿಗೆ ಮಾತ್ರ ಆರೂಢ, ಅವಧೂತ ಮುಂತಾದ ಮಾರ್ಗಗಳು ಮುಕ್ತದ್ವಾರವಾಗಿ ತೆರೆದಿಟ್ಟವೆ. ತನ್ನದೇ ಒಂದು ಪ್ರತ್ಯೇಕವಾದ ವೈಶಿಷ್ಟ್ಯತೆಯ ಸಂಸ್ಕೃತಿಯುಳ್ಳ ವೀರಶೈವ ಧರ್ಮದಲ್ಲಿಯಾದರೋ ಇನ್ನೂ ಶ್ರೇಷ್ಠ ತರದ ಮಾನಸಪೂಜೆಗವಕಾಶವುಂಟು. ಅದು ಮನಸ್ಸಿನ ಮೇಲೆ ದೈವಶಕ್ತಿಯನ್ನೂ ಆಸ್ತಿಕಬುದ್ಧಿಯನ್ನೂ ನೆಲೆಗೊಳಿಸಿ ಮಾನವನ ಮೇಲೆ ಸತ್ಪರಿಣಾಮವನ್ನುಂಟುಮಾಡಲು ಅವಶ್ಯಕ ಸಾಧನವಾದ ಲಿಂಗಪೂಜೆಯ ಮೂಲಕವೇ ಈಶ್ವರನಿಗೆ ತಮ್ಮ ಮಾನಸಪೂಜೆಯನ್ನರ್ಪಿಸಬೇಕು. ಮತ್ತು ಪತ್ನಿ ಪುತ್ರಾದಿ ಸಂಸಾರಿಕ ದುಃಖಗಳಿಂದ ದೂರಾದವರು ನಿರಪೇಕ್ಷೆ ಬುದ್ಧಿಯಿಂದ ಸಮಾಜದ, ಧರ್ಮದ ಸೇವೆಗಾಗಿ ನಿಲ್ಲಬೇಕು. ಇಂದಿನ ವೀರಶೈವ ಧರ್ಮದ ಅವನತಿ ಅಥವಾ ಉನ್ನತಿಯ ಮುಖ್ಯ ಸೂತ್ರಗಳು ಇಂತಹ ನಿರಪೇಕ್ಷ ಬುದ್ಧಿಯ ಧರ್ಮಸೇವಕರ ಕೈಯಲ್ಲೇ ಉಳಿದಿವೆ. ಮುಖ್ಯವಾಗಿ ಭಾರತೀಯರ[illegible] ವೇದಧರ್ಮವು ಸಾಕಾರನಿರಾಕಾರಗಳೆರಡಕ್ಕೂ ಅವಕಾಶ ಕಲ್ಪಿಸಿಕೊಟ್ಟಿರುವುದು. ಅವುಗಳಲ್ಲಿ ಅವರವರ ದರ್ಜೆಗನುಸಾ[ರ] ವಿಶೇಷವಾಗಿ ಲೌಕಿಕ ವಿಚಾರಗಳಲ್ಲಿಯೇ ಆಸಕ್ತಿಯುಳ್ಳವರು ಸಾಕಾ[ರ] ಪೂಜೆಯ ಮೂಲಕವೂ, ಹೆಚ್ಚಿಗೆ ಆಧ್ಯಾತ್ಮ ಬುದ್ಧಿಯುಳ್ಳವ[ರು] ನಿರಾಕಾರ ಪೂಜೆಯ ಮೂಲಕವೂ ತಮ್ಮ ಅಭಿಷ್ಟಗಳನ್ನು ಸಿದ್ಧಿಕೊಳ್ಳಬಹುದಾಗಿದೆ.

ವೇದ ಧರ್ಮದ ಈ ಹೆಚ್ಚಳವನ್ನರಿತೇ, ಜಗತ್ತಿ[ನ] ಧರ್ಮಪರಿಷತ್ತಿನಲ್ಲಿ ವಿಶ್ವಧರ್ಮವಾಗಲು ಭಾರತೀಯ ಧರ್ಮಕ್ಕೆ ಮಾತ್ರ ಸಾಧ್ಯವೆಂಬ ಸಿದ್ಧಾಂತವನ್ನು ಶ್ರೀ ಸ್ವಾ[illegible]ಕಾನಂದರು ಸಾರಿ ಹೇಳಿದುದು. ವೈದಿಕ ಧರ್ಮವು ಸಾ[illegible] ವರುಷಗಳಿಂದ ಅನ್ಯ ಧರ್ಮಗಳ ಸಂಘರ್ಷಕ್ಕೊಳಪಟ್ಟು [illegible]ಲ್ಮಾನ ಧರ್ಮದೊಂದಿಗಾದ ಹೋರಾಟ ಒಡನಾಟಗಳಿಂದ ಪ[illegible] ಧರ್ಮದಲ್ಲಿ ಹಲವು ಇಷ್ಟಾನಿಷ್ಟ ರೀತಿನೀತಿಗಳು ಹಬ್ಬಿಕೊಂ[illegible]. ಈ ಅನಿಷ್ಟ ರೀತಿಗಳೆಲ್ಲವೂ ತೊಲಗಿ ನಿರ್ಭಯನಿರ್ವೈರ ಪ್ರೇಮಪೂರ್ಣ ಪ್ರಫುಲ್ಲ ಜೀವನವು ನಡೆದು ವೈದಿಕ ಸಮಾಜವು ತನ್ನ ಗತವೈಭವವನ್ನು ಪಡೆದು ಲೋಕಾದರಣೀಯವಾಗಬೇಕಾದರೆ ನಿಜವಾದ ವೇ[ದ] ಧರ್ಮವನ್ನು ಶೀಘ್ರಗತಿಯಿಂದ ಪ್ರಚಾರಮಾಡಬೇಕು. ಇದಕ್ಕೆಲ್ಲಾ ಮುಖ್ಯವಾಗಿ ಭಾರತೀಯ ಗುರುಮಠಗಳೂ, ಧರ್ಮಪೀಠಗಳೂ ಧರ್ಮಬೋಧಕರೂ ವೈದಿಕ ಜನಾಂಗದೊಡನೆ ಜಾಗೃತ ಬುದ್ಧಿಯ ಸಜೀವ ಸಂಬಂಧವನ್ನಿಡಬೇಕು. ಹಾಗಲ್ಲದೆ ಗುರುಮಠಗಳೆಲ್ಲವೂ ಈಗಿನಂತೆ ಕೇವಲ ಬಿರುದು ಬಾವಲಿಗಳಿಗೂ, ನ್ಯಾಯಸ್ಥಾನಗಳಲ್ಲಿ ವಾದವಿವಾದಗಳಿಗೂ, ತಮ್ಮ ಅಮೌಲ್ಯ ಕಾಲವನ್ನು ವ್ಯಯಮಾಡುತ್ತಿದ್ದರೆ ವೈದಿಕ ಧರ್ಮವು ಗತವೈಭವವನ್ನು ಮರಳಿಪಡೆಯುವುದಕ್ಕೆ ಬದಲು ಶೀಘ್ರದಲ್ಲಿಯೇ ನಾಮಶೇಷವಾಗಬಹುದು. ಆದುದರಿಂದ ವೈದಿಕ ಧರ್ಮಪೀಠಗಳೆಲ್ಲವೂ, ಎಚ್ಚತ್ತು ವೈದಿಕ ಧರ್ಮದ ಗತ ಕೀರ್ತಿಯನ್ನು ಗಳಿಸಿ ವೈದಿಕ ಜನಾಂಗವು ಜಗತ್ತಿನ ಮುಂದೆ ತಲೆಯೆತ್ತಿ ಬಾಳುವಂತೆ ಜಗದೀಶನು ಕರುಣಿಸಲಿ.

—ಮುಂಬಯಿಯಲ್ಲಿ ಒಂದರಹಿಂದೊಂದು ಎರಡು ಮೋಟಾರಗಳು ಬರುತ್ತಿರುವಾಗ ಹಿಂದಿನ ಡ್ರಾಯವ್ಹರನು ತನ್ನ ಗಾಡಿಯನ್ನು ಮುಂದೆ ಹಾಕಬೇಕೆಂದು ಬಲಗಡೆಗೆ ತಿರುಗಿಸುವಾಗ ಎದುರಿಗೆ ಬರುವ ಒಂದು ಫಿಯಾಟ ಮೋಟಾರಿಗೆ ಧಕ್ಕೆ ಕೊಟ್ಟು ಅದನ್ನು ಮುಂದಿನಗಾಡಿಯ ಮುಂದೆ ಒಗೆಯಿತು. ಮುಂದಿನ ಗಾಡಿಯೂ ಆ ಫಿಯಾಟ ಗಾಡಿಗೆ ಪುನಃ ಧಕ್ಕೆ ಕೊಟ್ಟದ್ದರಿಂದ ಆ ಎರಡೂ ಗಾಡಿಗಳೂ ಚೂರುಚೂರಾದವು. ಮೂರೂ ಗಾಡಿಗಳ ಜನರಿಗೆ ಭಯಂಕರ ಗಾಯಗಳಾಗಿದ್ದು ಇಬ್ಬರು ಆಗಲೇ ಸತ್ತರು.

—ಪ್ರಸಿದ್ಧ ಕಮ್ಯುನಿಸ್ಟರಾದ ಮಾನವೇಂದ್ರನಾಥ ರಾಯ ಇವರ ಪುನರ್ವಿಚಾರಣೆಯು ಅಲಾಹಾಬಾದ ಹಾಯ.ಕೋರ್ಟಿನಲ್ಲಿ ನಡೆದಿರುವುದು, ಶ್ರೀ. ರಾಯರ ಬೇಡಿಗಳನ್ನು ತೆಗೆದು ಅವರಿಗೆ ಕೋರ್ಟಿನಲ್ಲಿ ಕೂಡ್ರಲಿಕ್ಕೆ ಒಂದು ಕುರ್ಚಿಕೊಟ್ಟಿರುತ್ತಾರೆ. ಅವರ ವತಿಯಿಂದ ಕೈಲಾಸನಾಥ ಕಾಟಜು ಎಂಬವರು ಕೆಲಸ ನಡೆಸುತ್ತಿದ್ದಾರೆ.

—ಚೀನೀ ತುರ್ಕಸ್ಥಾನದಲ್ಲಿ • ತುರ್ಕರುಬಂಡಾಯವೆಬ್ಬಿಸಿ ಪ್ರಾಂತಿಕ ರಾಜಧಾನಿಯಾದ ತಿಹು ಪಟ್ಟಣವನ್ನು ಕೈವಶಮಾಡಿದ್ದಾರೆ.

—ಶ್ರೀ. ವಿಠ್ಠಲಭಾಯಿ ಪಟೇಲರವರ ಪ್ರಕೃತಿಯು ಸುಧಾರಿಸುತ್ತ ನಡೆದಿದ್ದು ಅವರು ಲಂಡನ್ನಿನಿಂದ ವಿಯೆನ್ನಾಕ್ಕೆ ಪ್ರಯಾಣ ಬೆಳೆಸಿದರು. ನಾನು ನೆಟ್ಟಗಿರುವೆನೆಂದೂ ಏನೂ ಚಿಂತಿಸುವ ಕಾರಣವಿಲ್ಲವೆಂದೂ ತಿಳಿಸಿದ್ದಾರೆ.

೫|| ರೂಪಾಯಿಗೆ ಐಶ್ವರ್ಯ.

ಈಗಿನ ಕಷ್ಟಕಾಲದಲ್ಲಿ ಎಲ್ಲರಿಗೂ ಹಣ... ಹೆಚ್ಚು ಬಂಡವಾಳ ಹಾಕಿ ಹೆಚ್ಚಾಗಿ ...ಸುವ ಕಾಲ ಹಿಂದಾಯಿತು. ಈವಾಗ ಯಾರಲ್ಲಿ ಹೆಚ್ಚು ಬಂಡವಾಳವಿದೆ? ಆದ್ದರಿಂದ ಸ್ವಲ್ಪ ಬಂಡವಾಳದಿಂದ ಅಧಿಕ ಐಶ್ವರ್ಯವನ್ನು ಹೊಂದಲು ಇದೇ ಸುಸಮಯ.

ತಿರುವಾಂಕೂರು ಅಲೈಯನ್ಸ್ ಬ್ಯಾಂಕಿನ

ರೂ. ೫|| **ಬೋನಸ್ ಬಾಂ...ಡ್.** ರೂ. ೫||

ಈ ಒಂದು ಬಾಂಡಿನಿಂದ ರೂ. ೩೦೦೦, ೨೦೦೦, ೧೦೦೦, ಇತ್ಯಾ... ಇನಾಮುಗಳನ್ನು ಪಡೆಯಲು

೨೧ ಸಮಯಗಳು ಇರುವವು.

ಹೆಚ್ಚಿನ ಮಾಹಿತಿಗೆ ೧| ಆಣೆಯ ಸ್ಟಾಂಪು ಇಟ್ಟು ಬರೆ...ರಿ.

ಬೊಂಬಾಯಿ ಕರ್ನಾಟಕ ಜಿಲ್ಲೆಯ ಚೀಫ್ ಏಜಂಟ್:— ಬಿ. ಎಸ್. ಕುರುವತ್ತಿ ದಾ...ವಣಗೆರೆ.

ಎಲ್ಲ ಸಮೂನೆಗಳು ಬರೇ ೧ ರೂಪಾಯಿ

--೧೦೦೦--

ನೀಲೀ ಮಸಿಬೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾರ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು.

ಭಾಸ್ಕರ ಪ್ರಕಾಶ ವರ್ಕ್ಸ್,
ಪ್ರೊ. ಹಂಚಲಿ.
ಜಿ. ವಿಜಾಪೂರ.

ಮೋಹಿನಿ ಹೇರ್ ಆಯಿಲ್
ಮತ್ತು
ಕಮಲಾ ಹೇರ್ ಆಯಿಲ್.

ಬಹು ಶ್ರೇಷ್ಠವಾದ ಸುಲಭ ಕ್ರಯದ ಅತಿ ಸುಗಂಧದ ಕೇಶ ತೈಲಗಳು ನಮ್ಮಲ್ಲಿ ತಯಾರಾಗುತ್ತವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮೀಶನ್ ದೊರೆಯುವದು. ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಂಡು ವ್ಯಾಪಾರಿಗಳು ಹೆಚ್ಚಾದ ಲಾಭ ಹೊಂದಬಾರದೇ?

ಬಿ. ಎಚ್. ಹಾಗವಗಿಕರ್,
ಗುಲಬರ್ಗಾ.

ಬೀಜಗಳು.

೫	ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು		೪-೦-೦
೫	,, ಯುರೋಪ ,,	,,	೫-೦-೦
೫	,, ಹೂವಿನ ಬೀಜಗಳು		೫-೦-೦

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦-೦-೦

ನಿಂಬೆ, ಕೊಡಗು ಕಿತ್ತಳೆ, ಚಿಕ್ಕು, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೀವು, ಪಿಚ್ಚೀಸ್, ಅಂಜೂರ, ದ್ರಾಕ್ಷಿ ಗಿಡಗಳು ಡಜನ್ ೧ಕ್ಕೆ ೯-೦-೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾಶಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರ ಸಿಟಿ.

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್ ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟಿ ಬೆಳಗಾಂವ.

ಕಳವಾಗುವ ಮೊದಲು.
ಎಚ್ಚರಾಗಿರಿ!

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಶಿಗೆ ... ರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾ ...? ಹಣಿಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬ ... ಪ ...ಜಿ, ಏನು ಹೇಳಲಿ, ಈ ತ್ರಿಜೋರಿಯ ಹಣೆಯಬರಹ ನೋಡು ಕಳ್ಳರಿಂದ ಗಂಟಿಲ್ಲಾ ಹೋಗಿದೆ ...ಸುಡಗಾಡ ತ್ರಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ ... ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತ್ರಿಜೋರಿ ಏನುಮಾಡೀತು?

ಶೆಟ್ಟರು ... ಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತ್ರಿಜೋರಿ ಕೊಳ್ಳುವದಲ್ಲವೇ?

ರಾಮುಜಿ— ...ದರೆ ಹೀಗ್ಯಾಕಾಯಿತು?

ಶೆಟ್ಟರು— ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ಹೊರಬಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾ... ತ್ತಿ ಸಿಕ್ಕಂ... ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ... ...ದೆಪ್ಪಾ.

ರಾಮು... —ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾ... ಶ... ಪ್ಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊ... ಈಗ ಹತ್ತು ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ...ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಗದಗಿ... ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ ಪೋ. ಆಲಮಟ್ಟಿ ಜಿ. ವಿಜಾಪುರ

SANGAM CLOTH STORES
Prop: M. S. H...
P.O: TE...

REGISTERED No. B.2[illegible]

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!

ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ! ಮ. ೨೨೮ ॥ ಮಹಾನುಭಾವ ಬಸವಣ್ಣನವರು

ಸಂಪಾದಕರು:-
ಶ್ರೀ. ಚಂದ್ರಶೇಖರ ಮುಂಡಪ್ಪನವರು.

ಬಿಡಿಸಂಚಿಕೆಗೆ ೧ ಆಣೆ
ವಾರ್ಷಿಕ ಚಂದಾ: ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨. | ಆಲಮಟ್ಟಿ- ಸೋಮವಾರ ತಾರೀಖು ೧೯ ನೆಯ ಜೂನ್ ೧೯೩೩. | ಸಂಚಿಕೆ ೪೩

ಜನಸೇವೆಯೇ ದೇವರ ಸೇವೆ

ಜಗತ್ತಿನ ಆರ್ಥಿಕ ಪರಿಷತ್ತು.

ಪ್ರಪಂಚದ ಬಡತನವನ್ನು ನೀಗಿಸುವ ಯೋಚನೆ!

ಮಿ. ಮೆಕಡೊನೆಲ್ಡರ ಸ್ವಾಗತಪರ ಭಾಷಣ.

ಮಿ. ಮೆಕಡೊನೆಲ್ಡ

ಲಂಡನ್ನಿನಲ್ಲಿ ತಾ. ೧೨ನೆಯ ದಿವಸ ಜಗತ್ತಿನ ಆರ್ಥಿಕ ಪರಿಷತ್ತು ಪ್ರಾರಂಭವಾಯಿತು. ೬೭ ರಾಷ್ಟ್ರಗಳ ಪ್ರತಿನಿಧಿಗಳು ಆಗಮಿಸಿದ್ದರು. ಇವರನ್ನು ಸ್ವಾಗತ ಮಾಡುವಾಗ ಮಿ. ಮೆಕಡೋನೆಲ್ಡರು ಹೀಗೆ ಹೇಳಿದರು.

"ಈಗ ಪ್ರಪಂಚದಲ್ಲಿ ಪದಾರ್ಥಗಳ ಬೆಲೆ ಇಳಿದು ಹೋಗಿದೆ. ಆದಾಯಕ್ಕಿಂತ ವೆಚ್ಚ ಹೆಚ್ಚಾಗಿದೆ. ಎಲ್ಲ ರಾಷ್ಟ್ರಗಳೂ ಬಡತನಕ್ಕೊಳಗಾಗಹತ್ತಿವೆ. ೩ ಕೋಟಿ ೨೦ ಲಕ್ಷ ಜನಗಳು ನಿರುದ್ಯೋಗಿಗಳಾಗಿದ್ದಾರೆ. ಈ ದುರವಸ್ಥೆ ಕಳೆಯುಲು ನಾವು ಯೋಚಿಸಿದ್ದೇವೆ. ಎಲ್ಲರೂ ನೆರವಾಗಿರಿ."

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587315
Dt. Bijapur, (Karnataka)

ಕಳ್ಳರ ಭಯವಿಲ್ಲ !

ಬೆಂಕಿಯ ಕಾಟವಿಲ್ಲ !!

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ ಆ್ಯಂಡ ಸನ್ಸ

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ

ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ

ಬ್ರ್ಯಾಂಚ್ ಆಫಿಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ದಾಗೀನೆ ಮತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು



ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಸತ್ವ ಪರೀಕ್ಷೆಯು ತಾ. ೨೪ನೇ ಡಿಶೆಂಬರ ೧೯೩೨ನೇ ಇಸವಿ ದಿವಸ ಸದರ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ವಂಕಿ ಒಂದು ಸರ ಪಕ ಜತಿ ಒಂದು ಹತ್ತು ರೂಪಾಯದ ನೋಟು ಒಂದು ನಂ. K. 11, 970153 ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಶಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಕೋಲ್ಕೊಂಡ ಸಾಮಾನುಗಳನ್ನು ಇಟ್ಟು ೧॥ ಖಂಡಿ—ಕಟ್ಟಿಗೆಯಲ್ಲಿ ೧॥ ತಾಸಿನ ವರೆಗೆ ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅವರ ಸತ್ಯತೆ ಮತ್ತು ಭದ್ರತೆಗಳನ್ನು ತೋರಿಸಿದರು. ಅ. ಭಾ. ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

(೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.

ಇದಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮ ದರ್ಜೆಯ ತ್ರಿಜೋರಿಯ ಕಾರಖಾನೆಯವರೆಂದೆನಿಸಿಕೊಂಡು ಬಂಗಾರದ ಮೆಡಿಲು ಮತ್ತು ಸರ್ಟಿಫಿಕೇಟ ಹೊಂದಿದೆ. ಮತ್ತು ತ್ರಿಜೋರಿಗೆ ಹಾಕುವ ಯಾವತ್ತು ಕೀಲಿಗಳನ್ನು ವ ನಂಬರ್ ಲಾಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಪರ್ಣೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಪರ್ಣೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಜೂನ್ ತಾರೀಖು ೧೯ ನೆಯ ಸೋಮವಾರ | ಸಂಚಿಕೆ ೪೩

ಲಕ್ಷ್ಮೀ-ದೇವದಾಸರ ವಿವಾಹ ಸಮಾರಂಭ.

ಗಾಂಧೀಜಿಯವರ ದಿವ್ಯೋಪದೇಶ.

ಸೌ. ಲಕ್ಷ್ಮೀ ದೇವಿ

ಹಿಂದುಸ್ಥಾನದ ರಾಜಕೀಯ ಮುಂದಾಳುಗಳಲ್ಲಿ ಒಬ್ಬರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ತಮಿಳು ದೇಶದವರು. ಇವರು ಶ್ರೀ ವೈಷ್ಣವ ಮತದ ಬ್ರಾಹ್ಮಣರು. ಇವರ ಸುಪುತ್ರಿಯೇ ಸೌ. ಲಕ್ಷ್ಮೀ ದೇವಿಯು. ಇವರಿಗೆ ಈಗ ೨೦ ವರುಷಗಳಾಗಿವೆ. ಇಂಗ್ಲೀಷ ಭಾಷೆ ಚೆನ್ನಾಗಿ ಬರುತ್ತದೆ. ಹಿಂದಿ ಭಾಷೆಯಲ್ಲಿಯೂ ಪರಿಚಯವಿದೆ. ಕೆಲಸದ ಮಟ್ಟಿಗೆ ಗುಜರಾತಿ ಭಾಷೆಯನ್ನೂ ಕಲಿತಿದ್ದಾರೆ, ಇವರ ಮೈಕಟ್ಟು ತಂ ಯಂತೆ ತೆಳುವಾಗಿದೆ. ಬಣ್ಣ ಕೆಂಪು. ಸಲಕ್ಷಣ ಸುಶೀಲರು.

ಶ್ರೀ. ದೇವದಾಸ.

ಜಗದ್ವಂದ್ಯರಾದ ಮಹಾತ್ಮಾಜಿಯವರು ವೈಶ್ಯ ವರ್ಣದವರು. ಇವರು ವೈಷ್ಣವ ಮತದವರು. ಇವರ ನಾಲ್ಕನೆಯ ಚಿಕ್ಕ ಮಕ್ಕಳೇ ದೇವದಾಸರು ಇವರಿಗೆ ಈಗ ೩೩ ವರುಷ. ಇವರು ಈಗ ಹಿಂದುಸ್ಥಾನದ ರಾಜಕೀಯ ತರುಣ ಮುಂದಾಳುಗಳಲ್ಲಿ ಒಬ್ಬರಾಗಿದ್ದಾರೆ

ಇಂಗ್ಲೀಷ ಭಾಷೆಯಲ್ಲಿ ಚೆನ್ನಾಗಿ ಬಲ್ಲಿದರು. ಪಿತೃಭಕ್ತಿಯಲ್ಲಿ ಪ್ರಸಿದ್ಧರು. ದೇಶಸೇವಾ ನಿರತರು. ಈಗಾಗಲೇ ಮೂರಾವರ್ತಿ ಕಾರಾಗೃಹವಾಸಿಗಳಾಗಿದ್ದಾರೆ. ತಂದೆಯವರ ಸಹವಾಸದಲ್ಲಿಯೇ ಯಾವಾಗಲೂ ಇದ್ದು ದೇಶವಿದೇಶಗಳ ರಾಜಕಾರಣವನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ. ಕೀರ್ತಿಶೇಷರಾದ ಮೋತಿಲಾಲ ನೆಹರುರವರು ರಾಷ್ಟ್ರ ಕಾರ್ಯಕ್ಕೆ ಆರಿಸಿದ ತರುಣರಲ್ಲಿ ಇವರೊಬ್ಬರಾಗಿದ್ದರು. ಇವರು ಕೆಲವು ಕಾಲ ಪತ್ರಿಕಾ ಸಂಪಾದಕರೂ ಆಗಿದ್ದರು.

ವಿವಾಹ ಯೋಚನೆ.

ಕನ್ಯೆ ಬ್ರಾಹ್ಮಣ ವರ್ಣದವಳು ವರನಾದರೋ ವೈಶ್ಯ ವರ್ಣದವನು ಹೀಗಿರುವಾಗ ಈ ವಿವಾಹಕ್ಕೆ ರಾಜಶಾಸನದಿಂದೇನಾದರೂ ಪ್ರತಿಬಂಧವಿದೆಯೇ? ಹಿಂದು ಧರ್ಮಕ್ಕೆ ಇದು ಮಾನ್ಯವಿದೆಯೇ? ಎಂಬ ಅನೇಕ ಪ್ರಶ್ನೆಗಳುಂಟಾದವು. ಆಗ ರಾಜಶಾಸ್ತ್ರಜ್ಞರ ಸಲಹೆ ಮೇರೆಗೆ ಸ್ಪೆಶಲ್ ಮ್ಯಾರೇಜ್ ಆಕ್ಟ ಪ್ರಕಾರ ಈ ವಿವಾಹವನ್ನು ರಜಿಸ್ಟರ್ ಮಾಡಿಸಬೇಕೆಂದು ಗೊತ್ತಾಯಿತು.

ಈ ಶಾಸನದಂತೆ ಹಿಂದು ಧರ್ಮದ ಯಾವ ಭಿನ್ನ ಜಾತಿಯ ವಧೂವರರಿದ್ದರೂ ಅವರು ಧರ್ಮಾಂತರವಾಗದೆ ಹಿಂದೂ ಧರ್ಮದಲ್ಲಿದ್ದೇ ವಿವಾಹವಾಗಲು ಬರುತ್ತದೆ, ಆದರೆ ಇಂಥ ವಿವಾಹದ ರಜಿಸ್ಟರಿಗೆ ಯಾರಾದರೂ ವಿರೋಧಿಸುವವರಿದ್ದರೆ. ಆ ವಿಷಯದ ವಿಚಾರಣೆಗಾಗಿ ಕೆಲವು ದಿನಗಳ ನೋಟೀಸನ್ನು ಕೊಡಬೇಕಾಗುತ್ತದೆ. ಅನಂತರ ಆ ವಿವಾಹವು ರಜಿಸ್ಟರ್ ಮಾಡಿಸಬೇಕಾಗುವುದು.

ಶಾಸ್ತ್ರ ಸಮ್ಮತ.

ರಾಜಶಾಸನಕ್ಕಿಂತಲೂ ಗಾಂಧೀಜಿಯವರಿಗೆ ಧರ್ಮ ಶಾಸ್ತ್ರದ ವಿಷಯದಲ್ಲಿ ಹೆಚ್ಚು ಆದರವಷ್ಟೆ. ಅದಕ್ಕಾಗಿ ಈ ವಿವಾಹವು ಧರ್ಮಸಮ್ಮತವಾದುದೆಂಬ ಬಗ್ಗೆ ಪ್ರಸಿದ್ಧ ವಾಯಿ ಪ್ರಾಜ್ಞ ಪಾಠಶಾಲೆಯ ಆಚಾರ್ಯ ತರ್ಕತೀರ್ಥ ಲಕ್ಷ್ಮಣ ಶಾಸ್ತ್ರಿ ಜೋಶಿಯವರನ್ನು ಗಾಂಧೀಜಿಯವರು ವಿಚಾರಿಸಿದರು.

ಶ್ರೀ. ಲಕ್ಷ್ಮಣ ಶಾಸ್ತ್ರಿಗಳು ಶಾಸ್ತ್ರಾಧಾರಗಳನ್ನೆಲ್ಲಾ ತೆಗೆದು ನೋಡಿ ಕೆಲವು ವಿಧಿಗಳನ್ನು ತೋರಿಸಿದ ನಂತರ ಈ ಪ್ರಕಾರ ವೈಶ್ಯ ಬ್ರಾಹ್ಮಣರ ಪ್ರತಿಲೋಮ ವಿವಾಹವು ಧರ್ಮ ಸಮ್ಮತವಾಗುತ್ತದೆಂದು ಸಿದ್ಧ ಮಾಡಿಕೊಟ್ಟರು.

ವಧೂವರರು ಸಮಾನಸಂಸ್ಕೃತಿ ಮತ್ತು ಸಮಾನ ಯೋಗ್ಯತೆಯುಳ್ಳವರಿದ್ದರೆ ವೈಶ್ಯ ವರ್ಣದ ದ್ವಿಜನಿಗೆ ಬ್ರಾಹ್ಮಣ ದ್ವಿಜತ್ವದ ದೀಕ್ಷೆಯನ್ನು ಕೊಡಲಿಕ್ಕೆ ಶಾಸ್ತ್ರಾಧಾರವಿದೆಯೆಂತಲೂ ಹಾಗೆ ಮಾಡುವುದರಿಂದ ಸಂಕರ ವಿವಾಹದ ದೋಷ ಪ್ರಾಪ್ತವಾಗುವುದಿಲ್ಲವೆಂತಲೂ ಶ್ರೀ ಲಕ್ಷ್ಮಣ ಶಾಸ್ತ್ರಿಗಳು ಪ್ರತಿಪಾದಿಸಿದರು. ಆಗ ಆ ಪ್ರಕಾರ ದೀಕ್ಷೆಯಾಗಬೇಕೆಂದು ಗೊತ್ತಾಯಿತು.

(೭ ನೆಯ ಪುಟಕ್ಕೆ ಮುಂದರಿದಿದೆ.)

ಶ್ರಾವಣ ಮಾಸದಲ್ಲಿ

ಮಾಡಬೇಕಾದ ಶುಭಕಾರ್ಯಗಳಾವವು?

ಶ್ರಾವಣ ಮಾಸವು ಸಮೀಪಿಸಿತು. ವೀರಶೈವರು ಈ ಮಾಸದಲ್ಲಿ ಶಿವಭಜನೆ, ಕೀರ್ತನೆ, ಪುರಾಣಾದಿಗಳನ್ನು ನಡೆಯಿಸಿ ಧಾರ್ಮಿಕ ಜಾಗೃತಿಯನ್ನುಂಟುಮಾಡುತ್ತಿದ್ದಾರಷ್ಟೆ. ಇವೆಲ್ಲವೂ ಸ್ತುತ್ಯವಾದವುಗಳೇ ಸರಿ. ಈ ಕಾಲದಲ್ಲಿ ಇಷ್ಟೇ ಕಾರ್ಯಗಳನ್ನು ಮಾಡಿದರೆ ಸಾಲದು. ಧಾರ್ಮಿಕ ಜಾಗೃತಿಗೆ ಇನ್ನೂ ಕೆಲವು ಪರಿಣಾಮಕಾರಿಯಾದ ಕಾರ್ಯಗಳನ್ನು ಮಾಡಲು ಪ್ರಾರಂಭಿಸಬೇಕು. ಈ ಶುಭಕಾರ್ಯಗಳನ್ನು ಮಾಡಿದರೇನೇ ಶ್ರಾವಣ ಮಾಸದ ಬೇರೆ ಧಾರ್ಮಿಕ ಕಾರ್ಯಗಳಿಗೆ ವಿಶೇಷ ಶೋಭೆಯುಂಟಾಗುತ್ತದೆ.

ಲಿಂಗಧಾರಣ

ಲಿಂಗಧಾರಿಗಳಾಗಿ ಲಿಂಗಪೂಜೆ ಮಾಡಿ ಲಿಂಗಾನಂದ ಹೊಂದಬೇಕೆಂದಪೇಕ್ಷಿಸುವವರಿಗೆ ಲಿಂಗಧಾರಣೆಯನ್ನು ಮಾಡಿಸುವ ಶುಭಕಾರ್ಯವು ಬರುವ ಶ್ರಾವಣ ಮಾಸದಲ್ಲಿ ಜರುಗಬೇಕು. ಭೂಮಿಯ ಮೇಲೆ ಲಿಂಗಸ್ಥಾಪನೆ ಮಾಡಿಸಿದರ ಪ್ರಾಪ್ತವಾಗುವ ಪುಣ್ಯಕ್ಕಿಂತಲೂ ಮಾನವ ದೇಹದ ಮೇಲೆ ಲಿಂಗಸ್ಥಾಪನೆ ಮಾಡಿಸಿದರೆ ದೊರೆಯುವ ಪುಣ್ಯವು ಸಹಸ್ರಪಾಲು ಮಿಗಿಲಾಗಿರುತ್ತದೆ.

ಆದಕಾರಣ ಕಾಶಿ ಮೊದಲಾದ ಸ್ಥಳಗಳಿಗೆ ಹೋಗಿ ಲಿಂಗಸ್ಥಾಪನೆ ಮಾಡಿಸಿ ಕಾಡಿಬೇಡುವವರಿಗೆ ಕಾಸುಕೊಟ್ಟು ಕೃತಾರ್ಥರಾದೆವೆಂದು ತಿಳಿಯುವುದಕ್ಕಿಂತ ತಮ್ಮ ನೆರೆಹೊರೆಯಲ್ಲಿರತಕ್ಕ ಲಿಂಗಧಾರಣಾಪೇಕ್ಷಿಗಳಿಗೆ ಲಿಂಗಧಾರಣೆ ಮಾಡಿಸಬಾರದೇ? ಪ್ರತಿಯೊಬ್ಬ ಲಿಂಗಾಂಗಿಯೂ ತನ್ನ ಜೀವಿತದಲ್ಲಿ ಲಿಂಗಪೂಜಾಪೇಕ್ಷಿಯಾದ ಒಬ್ಬ ವ್ಯಕ್ತಿಗಾದರೂ ಲಿಂಗಧಾರಣೆ ಮಾಡಿಸಿದರೆ ಸಾವಿರಾರು ಕ್ಷೇತ್ರಗಳಲ್ಲಿ ಲಿಂಗಸ್ಥಾಪನೆ ಮಾಡಿಸಿದ ಪುಣ್ಯ ಪ್ರಾಪ್ತವಾಗುವುದಿಲ್ಲವೇ? ಆದುದರಿಂದ ಶ್ರಾವಣ ಮಾಸದಲ್ಲಿ ಈ ಶುಭಕಾರ್ಯವು ಎಲ್ಲ ಕಡೆಗೂ ಜರುಗಬೇಕಾದುದು ಆವಶ್ಯಕವಾಗಿದೆ.

ಶಿವದೀಕ್ಷೆ

ಲಿಂಗಧಾರಿಗಳಾಗಿ ಸದಾಚಾರ ಶೀಲರಾಗಿರತಕ್ಕ ಲಕ್ಷಾಂತರ ಜನರು ಶಿವದೀಕ್ಷೆಯನ್ನು ಹೊಂದಿ ವೀರಶೈವ ಧರ್ಮದ ಸಂಪೂರ್ಣ ಅಧಿಕಾರ ಪಡೆಯದೆ ಬೇರೆಯಾಗಿದ್ದು ನೊಂದುಕೊಳ್ಳುತ್ತಿದ್ದಾರೆ. ಅನೇಕ ಕಡೆಯ ಮಡಿವಳರು, ಹಡಪದವರು, ಕುಂಬಾರರು, ಗೌಳಿಗರು, ಹೂಗಾರರು, ಮೊದಲಾದ ಬೇರೆಬೇರೆ ಕಾಯಕದವರು ಶುದ್ಧಾಚಾರ ಶೀಲರಾಗಿ ಎಷ್ಟೋ ಕಾಲಗಳಿಂದ ನಡೆದುಕೊಳ್ಳುತ್ತ ಬಂದಿದ್ದಾರೆ. ಹೀಗಿದ್ದರೂ ಅವರಿಗೆ ಶಿವದೀಕ್ಷೆ ಮಾಡಿ ಅವರನ್ನು ಬಳಕೆಯಲ್ಲಿ ತೆಗೆದುಕೊಳ್ಳದೆ ಹೊರಗೇನೇ ಇಟ್ಟಿದ್ದಾರೆ. ಕೆಲವು ಕಡೆ ಅವರು ದೀಕ್ಷೆಯಾಗಬೇಕೆಂದಪೇಕ್ಷಿಸಿದರೆ ಅವರು ಕೊಡಲಾಗದಷ್ಟು ಹಣವಿನ ಭಾರ ಹೇಳಿ ಪಾರಾಗುತ್ತಿದ್ದಾರೆ.

ಈ ಪ್ರಕಾರ ಬಳಕೆಯಲ್ಲಿರದ ಲಕ್ಷಾಂತರ ವೀರಶೈವರಲ್ಲಿ ದಿನೇ ದಿನೇ ಶಿಕ್ಷಣಪ್ರಸಾರವಾಗಹತ್ತಿದೆ. ಬಳಕೆಯಲ್ಲಿರದಿದ್ದುದು ತಮಗೆ ಅವಮಾನಕರವೆಂದು ಅವರು ತಿಳಿಯುತ್ತಿದ್ದಾರೆ. ನಾವು ಹೀಗೆ ಹೊರಗಿದ್ದು ಅವಮಾನ ಹೊಂದುವುದಕ್ಕಿಂತ ಆರ್ಯಸಮಾಜಕ್ಕಾದರೂ ಸೇರೋಣವೆಂದು ಕೆಲವರು ಹೇಳಲಾರಂಭಿಸಿದ್ದಾರೆ. ಈ ಎಲ್ಲ ಸಂಗತಿಗಳನ್ನು ಈಗಲಾದರೂ ವೀರಶೈವ ಮತಾಭಿಮಾನಿಗಳು ಯೋಚಿಸುವುದು ವಿಹಿತವಾಗಿಲ್ಲವೇ? ಶುದ್ಧಾಚಾರ ಶೀಲರಾದ ಇಂತಹ ಬೇರೆಬೇರೆ ಕಾಯಕದ ಲಿಂಗಾಂಗಿಗಳಿಗೆ ಅವರ ಮೇಲೆ ಹಣವಿನ ಭಾರವನ್ನು ಹೇರದೆ ಶಿವದೀಕ್ಷೆ ಮಾಡಿ ಬಳಕೆಯಲ್ಲಿ ತೆಗೆದುಕೊಳ್ಳುವುದು ನ್ಯಾಯವೂ ಧರ್ಮವೂ ಕರ್ತವ್ಯವೂ ಆಗಿಲ್ಲವೇ? ಶ್ರಾವಣ ಮಾಸವು ಈ ಶಿವದೀಕ್ಷೆಯ ಶುಭಕಾರ್ಯಕ್ಕೆ ಬಹು ಅನುಕೂಲವಲ್ಲವೇ? ಆದಕಾರಣ ಈ ಮಹತ್ಕಾರ್ಯವೂ ಶ್ರಾವಣದಲ್ಲಿ ನಡೆಯಲಿ.

ಏಕೀಕರಣ

ಅಷ್ಟಾವರಣ ಪಂಚಾಚಾರಯುಕ್ತರಾದ ವೀರಶೈವರಲ್ಲಿ ಏಕೀಕರಣವು ಜಾಗ್ರುತಿ ಆಗಬೇಕೆಂದು ಧಾರವಾಡದ ವೀರಶೈವ ಮಹಾಸಭೆಯಲ್ಲಿ ಠರಾವಾಗಿದೆಯಷ್ಟೆ. ಈ ಗೊತ್ತುವಳಿಯನ್ನು ಆಚರಣೆಯಲ್ಲಿ ತರಲು ಶ್ರಾವಣ ಮಾಸವು ಬಹು ಅನುಕೂಲವಾಗಿಲ್ಲವೇ? ನಾವು ಹೆಚ್ಚಿನ ಕುಲದವರು ನೀವು ಕಡಿಮೆ ಕುಲದವರು ಆದಕಾರಣ ನಿಮ್ಮಲ್ಲಿ ನಾವು ಊಟ ಮಾಡುವದಿಲ್ಲ. ಹೊಸಬಳಕೆಯಾಗಬೇಕೆಂದು ಹೇಳುವ ತಪ್ಪು ನುಡಿಯು ಈ ಶ್ರಾವಣ ಮಾಸದಲ್ಲಿ ಅಡಗಿಹೋಗಲಿ.

ಹೇಗಾದರೂ ಶ್ರಾವಣ ಮಾಸ, ಊಟೋಪಚಾರಗಳ ಸೌಲಭ್ಯ ವಿಶೇಷ. ಆದಕಾರಣ ಯಾರು ಈ ವರೆಗೆ ತಾವು ಹೆಚ್ಚಿನ ಕುಲದವರೆಂದು ಹೇಳಿ ನಿಮ್ಮಲ್ಲಿ ಊಟಕ್ಕೆ ಬರುವುದಿಲ್ಲವೆಂದು ಯಾರಿಗೆ ತಿಳಿಸಿದ್ದರೋ ಅವರಿಗೆ ಈ ಶ್ರಾವಣ ಮಾಸದಲ್ಲಿ ತಾವು ನಿಮ್ಮ ಮನೆಯಲ್ಲಿ ಊಟಮಾಡಲು ಬರುತ್ತೇವೆಂದು ತಿಳಿಸಬೇಕು. ಕರೆದಾಗ ಹೋಗದಿದ್ದ ತಪ್ಪಿಗೆ ಈಗ ಕರೆಯದೆ ಬರುತ್ತೇವೆಂದು ಹೇಳಿಕಳುಹಿಸುವುದೇ ಪ್ರಾಯಶ್ಚಿತ್ತ. ಈವರೆಗೆ ಹೆಚ್ಚಿನವರೆಂದು ಹೇಳಿಕೊಂಡವರು ಈಗ ಈ ಪ್ರಕಾರ ಹೇಳುವುದೇ ವಿಹಿತವು. ಹೀಗಾದರೇನೆ ಆಗ ಹೆಚ್ಚಿನವರೆಂದು ಹೇಳಿಕೊಂಡದ್ದರಿಂದ ಬೇರೆಯವರಿಗಾದ ಅವಮಾನ ಅಸಮಾಧಾನ ಮೊದಲಾದವುಗಳು ನಿವಾರಣೆಯಾಗುವವು.

ಶ್ರೇಷ್ಠ ವರ್ಣದ ಅನೇಕ ಸಜ್ಜನರು ತಾವು ಈ ವರೆಗೆ ಅಂತ್ಯಜನರನ್ನು ಕೀಳಾಗಿ ಕಂಡು ಅವರನ್ನು ದೂರಿಟ್ಟ ಅಪರಾಧಕ್ಕೆ ಈಗ ಅವರ ಅಂಗಳವನ್ನು ಗುಡಿಸಿ ಅವರ ಸೇವೆ ಮಾಡುವುದೆ ಪ್ರಾಯಶ್ಚಿತ್ತವೆಂದು ತಿಳಿದು ಆ ಪ್ರಕಾರ ಈಗ ಆಚರಿಸುತ್ತಿದ್ದಾರಷ್ಟೆ. ಹಿಂದುಗಳು ಅಸ್ಪೃಶ್ಯತೆಯನ್ನಾಚರಿಸುವುದು ಎಷ್ಟು ಅಪರಾಧವುಳ್ಳದ್ದಾಗಿದೆಯೋ ಅದಕ್ಕಿಂತಲೂ ಬಣಜಿಗರು ಪಂಚಮಸಾಲಿಯವರಲ್ಲಾಗಲಿ, ಪಂಚಮಸಾಲಿಯವರು ಸಾದರಲ್ಲಾಗಲಿ, ಸಾದರು ಇನ್ನೊಂದು ಕಾಯಕದವರಲ್ಲಾಗಲಿ, ಊಟಕ್ಕೆ ಬರುವುದಿಲ್ಲವೆಂದು ಹೇಳುವುದು ಹೆಚ್ಚಿನ ಅಪರಾಧವಾಗಿದೆ. ಹಿಂದು ಸಮಾಜಕ್ಕೆ ಅಸ್ಪೃಶ್ಯತೆಯು ಎಷ್ಟು ಅನರ್ಥಕರವಾದುದಾಗಿದೆಯೋ ಅದಕ್ಕಿಂತಲೂ ವೀರಶೈವ ಸಮಾಜಕ್ಕೆ ಈ ಒಳಪಂಗಡಗಳ ಮೇಲುಕೀಳಿನ ವಾದಾಚರಣೆಯು ಹೆಚ್ಚು ಅನರ್ಥವನ್ನುಂಟುಮಾಡಿದೆ.

ಆದಕಾರಣ ಈ ವರೆಗೆ ಹೆಚ್ಚಿನ ಕುಲದವರೆಂದು ಹೇಳಿಕೊಂಡವರು ತಮ್ಮ ತಪ್ಪಿಗಾಗಿ ತಾವೇ ಕೀಳೆಂದು ತಿಳಿದವರಲ್ಲಿ ಊಟಕ್ಕೆ ಬರುವೆವೆಂದು ಹೇಳಿ ತಾವೇ ಮುಂದಾಳುಗಳಾದ ವಿನಾ ಈ ಏಕೀಕರಣದ ಕಾರ್ಯವು ತೃಪ್ತಿಕರವಾಗಿ ಜರುಗುವುದಿಲ್ಲ. ಈ ಊಟೋಪಚಾರಗಳ ಕಾರ್ಯಕ್ಕೆ ಶ್ರಾವಣ ಮಾಸವೇ ಬಹು ಅನುಕೂಲವಲ್ಲವೇ? ಆದುದರಿಂದ ವಿವೇಕಶಾಲಿಗಳಾದ ಸಕಲ ವೀರಶೈವ ಮತಾಭಿಮಾನಿಗಳೂ ಶ್ರಾವಣ ಮಾಸದಲ್ಲಿ ಈ ಏಕೀಕರಣದ ಮಹತ್ಕಾರ್ಯವನ್ನು ಮಾಡಲಿ.

ಪುಸ್ತಕ ಪ್ರಸಾರ.

ಯಾವುದಾದರೊಂದು ಸಂಗತಿಯು ಆಚರಣೆಯಲ್ಲಿ ಬರಬೇಕಾದರೆ ಮೊದಲು ಆ ಸಂಬಂಧವಾದ ವಿಚಾರವುಂಟಾಗಬೇಕಾಗುತ್ತದೆ. ಆ ವಿಚಾರವೇ ಇಲ್ಲದವರಲ್ಲಿ ಆಚಾರಣೆಯನ್ನು ನೋಡಿಪದರಿದೆಲ್ಲಿ ಕಾಣುವುದು? ಆದಕಾರಣ ಮೊದಲು ವಿಚಾರವನ್ನುಂಟು ಮಾಡಬೇಕು, ಇದಕ್ಕೆ ಪುಸ್ತಕ ಪ್ರಸಾರವು ಒಂದು ಮುಖ್ಯ ಸಾಧನವಾಗಿದೆ.

ವೀರಶೈವ ಏಕೀಕರಣದ ವಿಷಯವಾಗಿ ಮೊದಲು ಜನ ಜಾಗೃತಿಯನ್ನುಂಟುಮಾಡಬೇಕು. ಅನೇಕ ದಿವಸಗಳಿಂದ ಬಂದ ತಪ್ಪು ತಿಳುವಳಿಕೆಗಳನ್ನು ತೆಗೆದು ಹಾಕುವುದು ಸುಲಭವಲ್ಲ. ಅವುಗಳಿಗೆ ಬೇರೆ ಬೇರೆ ರೀತಿಗಳಿಂದ ನಿಜ ತತ್ವಗಳನ್ನು ತಿಳಿಸಬೇಕಾಗುತ್ತದೆ. ಅದಕ್ಕೋಸ್ಕರ "**ವೀರಶೈವ ಏಕೀಕರಣ**" ಎಂಬ ಚಿಕ್ಕಪುಸ್ತಕವನ್ನು ಶ್ರಾವಣಮಾಸದಲ್ಲಿ ಎಲ್ಲ ಕಡೆಗೂ ಪ್ರಸಾರಗೊಳಿಸಬೇಕು. ಈ ಪುಸ್ತಕದ ವಿಷಯವಾಗಿ ಈ ಪತ್ರಿಕೆಯು ಬೇರೆ ಕಡೆ ಪ್ರಕಟಿಸಿದ್ದಾಗಿದೆ.

ಬರುವ ಶ್ರಾವಣಮಾಸದಲ್ಲಿ ಮೇಲಣ ನಾಲ್ಕು ಶುಭಕಾರ್ಯಗಳಲ್ಲಿ ಯಾವದು ಯಾರಿಗೆ ಶಕ್ಯವೋ ಅವರದನ್ನು ಮಾಡಿ ವೀರಶೈವ ಧಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಿಗೆ ತುಂಬಾ ಪ್ರಯತ್ನಿಸುವರೆಂದು ನಂಬಿದ್ದೇವೆ.

ಸಂಪಾದಕ.

ಕರ್ನಾಟಕ ಚೇಂಬರ ಆಫ್ ಕಾಮರ್ಸ ಗದಗ

ಪ್ರಕಟನೆ ನಂ. ೨.

ಕರ್ನಾಟಕದಲ್ಲಿ ಸಕ್ಕರೆಯ ಉದ್ಯೋಗ.

(ಬರೆದವರು:— ಗೌ. ಕಾರ್ಯದರ್ಶಿಗಳಾದ ಶ್ರೀ. ಬಳ್ಳಾರಿ ವೀರಭದ್ರಪ್ಪನವರು ಗದಗ.)

ಹೊಸಪೇಟೆಯಲ್ಲಿ ಇದೀಗ ಸಕ್ಕರೆಯ ಗಿರಣಿಯೊಂದು ಸಂಯುಕ್ತ ಬಂಡವಾಳದ ಕಂಪನಿಯಾಗಿ ಹೊರಟಿದ್ದು ಅದರ ಪ್ರಾಸ್ಪೆಕ್ಟಸ್ಸು ೩-೬-೩೩ನೆಯ ದಿನ ಮದ್ರಾಸದ ರಜಿಸ್ಟ್ರಾರರ ಬಳಿಗೆ ಕಳುಹಿಸಲ್ಪಟ್ಟಿದೆ. ಈಗ ಹಿಂದುಸ್ಥಾನದಲ್ಲಿ ಬೇರೆಬೇರೆ ಕಡೆಗೆ ಸಕ್ಕರೆಯ ಕಾರಖಾನೆಗಳು ಉದಯಕ್ಕೆ ಬರುತ್ತಲಿವೆ. ಯಾಕಂದರೆ ೧೯೩೨ರಲ್ಲಿ ಸರಕಾರದವರು ಸಕ್ಕರೆಯ ಉದ್ಯೋಗ ಸಂರಕ್ಷಣೆಯ ಕಾಯಿದೆಯನ್ನು ಪಾಸುಮಾಡಿ ಪರದೇಶಗಳಿಂದ ಬರುವ ಸಕ್ಕರೆಗೆ ಪ್ರತಿಬಂಧವನ್ನುಂಟುಮಾಡಿದ್ದಾರೆ ಈ ಕಾಯಿದೆಯಿಂದ ೧೯೪೬ ಮಾರ್ಚ ೩೧ ರವರೆಗೆ ಹಿಂದುಸ್ಥಾನದ ಸಕ್ಕರೆಯು ಸಂರಕ್ಷಿಸಲ್ಪಟ್ಟಿದ್ದು, ಪರದೇಶದಿಂದ ಬರುವ ಸಕ್ಕರೆಗೆ ಎತ್ತರವಾದ ಸುಂಕದ ಗೋಡೆಯನ್ನು ಅಡ್ಡಕಟ್ಟಿದ್ದಾರೆ. ೧೯೩೮ ಮಾರ್ಚ ೩೧ರ ವರೆಗೆ ಹೊರಗಿನಿಂದ ಬರುವ ಒಂದು ಹಂಡ್ರೆಡ್ ವೇಟ್ ಸಕ್ಕರೆಗೆ ರೂ ೭-೪-೦ ಪ್ರಾರಂಭದ ಸುಂಕವೆಂದು ನಿಯಮಿಸಿದ್ದಾರೆ. ಮುಂದಿನ ೮ ವರ್ಷಗಳ ಸುಂಕದ ದರವನ್ನು ಸರಕಾರದವರು ಆ ಮೇಲೆ ವಿಚಾರಿಸುವರು. ಈಗ ಸದ್ಯಕ್ಕೆ ನಿಜವಾಗಿ ಒಂದು ಹಂಡ್ರೆಡ್ ವೇಟ್ ಸಕ್ಕರೆಗೆ ರೂ. ೯-೧-೦ (ರೂ. ೭-೪-೦ ಪ್ರಾರಂಭದ ಸುಂಕ + ೧೦೦ಕ್ಕೆ ೨೫ ರಂತೆ ಹೆಚ್ಚಿನ ಹಣ) ಸುಂಕವು ಬೀಳುತ್ತದೆ ಇದಲ್ಲದೆ ಈ ಕಾಯಿದೆಯಿಂದ ಸಿಗಬೇಕಾದ ಲಾಭವು ಹಿಂದುಸ್ಥಾನಕ್ಕೆ ಸಿಗದೆ ಇರುವ ಹೊತ್ತಿನಲ್ಲಿ ಪ್ರಾರಂಭದ ಸುಂಕ (Basic Duty)ವನ್ನು ಬೇಕಾದಾಗ ಹೆಚ್ಚಿಸಲು ಗವ್ಹರ್ನರ್ ಜನರಲ್ ಇನ್ ಕೌನ್ಸಿಲ್ ಇವರಿಗೆ ಅಧಿಕಾರವಿರುತ್ತದೆ.

೧೯೩೦ನೇ **ವರ್ಷವನ್ನು** ಸಾಧಾರಣ ವರ್ಷವೆಂದು ತಿಳಿದರೆ ಆ **ವರ್ಷ** ಹಿಂದುಸ್ಥಾನಕ್ಕೆ ಸುಮಾರು ೧೦,೦೦,೦೦೦ ಟನ್ ಸಕ್ಕರೆಯು **ಪರದೇಶದಿಂದ** ಬಂತು. ಇದಲ್ಲದೆ ೨೦,೦೦೦೦ ಟನ್ ಸಕ್ಕರೆಯು **ಆ** ವರುಷ **ಇಲ್ಲೇ ಹುಟ್ಟಿತು.** ಅದ್ದರಿಂದ ಹಿಂದುಸ್ಥಾನದಲ್ಲಿ ಸಕ್ಕರೆಯ ಉದ್ಯೋಗದ **ಬೆಳವಣಿಗೆಗೆ ಇನ್ನೂ** ಬೇಕಾದಷ್ಟು ಅವಕಾಶವಿದೆಯೆಂದು ಕಂಡುಬರುತ್ತದೆ. **ಈಗಿದ್ದದ್ದಕ್ಕಿಂತ ೧೫೦ ಹೊಸ ಗಿರಣಿಗಳು ಸ್ಥಾಪಿತವಾದರೂ ನಡೆಯುವಂತಿದೆ.** ಹಾಗಾದರೆ ಹಿಂದುಸ್ಥಾನವು ತನಗೆ ಬೇಕಾದಷ್ಟು ಸಕ್ಕರೆಯನ್ನು ತಾನೇ ಹುಟ್ಟಿಸಿಕೊಂಡಂತಾಗುತ್ತದೆ. ಇದರಿಂದ ದೇಶದಲ್ಲಿ ಅಂತಸ್ಪರ್ಧೆಯೂ ಆಗುವ ಸಂಭವನಿಲ್ಲ.

ಹಿಂದುಸ್ಥಾನ ಸರಕಾರದ ಸಕ್ಕರೆಯ ಉದ್ಯೋಗತಜ್ಞರಾದ **ಶ್ರೀ. ಆರ್. ಸಿ. ಶ್ರೀವಾಸ್ತವ** ಇವರು ಹೇಳುವದೇನಂದರೆ- "ಸಕ್ಕರೆಯ ಆಯತಗಳ ಮೇಲೆ ಬಲವಾದ ಸುಂಕವು ಬಿದ್ದಿದೆ. ಮತ್ತು ಇನ್ನೂ ಅನೇಕ ಅನುಕೂಲತೆಗಳು ಈ ಉದ್ಯೋಗಕ್ಕೆ ಈಗ ಸಿಗುತ್ತಿವೆ. ಒಟ್ಟಿನ ವ್ಯಾಪಾರ ಮುಂದಕೆಯ ಮೂಲಕ ಭೂಮಿಯ ಬೆಲೆಯೂ ಈಗ ಇಳಿದಿದೆ. ಕಾರಖಾನೆಗೆ ಬೇಕಾಗುವ ಸಾಮಾನುಗಳ ಬೆಲೆಯೂ ಈಗ ಇಳಿದಿದೆ. ಹಿಂದುಸ್ಥಾನದಲ್ಲಾದರೋ ಸಕ್ಕರೆಯ ಉತ್ಪತ್ತಿಗೆ ನಿರ್ಬಂಧವಿಲ್ಲ. ಆದರೆ ಉಳಿದ ದೇಶಗಳಲ್ಲೆಲ್ಲಾ ಸಕ್ಕರೆಯ ಉತ್ಪತ್ತಿಗೆ ನಿರ್ಬಂಧವನ್ನು ಹಾಕಿದ್ದಾರಾದ್ದರಿಂದ ಅಲ್ಲಿಯ ಯಂತ್ರಗಳ ಬೆಲೆಯೂ ಇಳಿದಿದೆ. ಮೇಲಾಗಿ ಕಬ್ಬಿನ ಬೆಲೆಯು ಇಳಿದದ್ದರ ಜೊತೆಗೆ ಕಬ್ಬು ಬಿತ್ತುವ ಕ್ಷೇತ್ರವು ವಿಸ್ತೃತವಾಗುತ್ತ ನಡೆದದ್ದರಿಂದ ಈಗಿನ ಒಕ್ಕಲತನದ ಪರಿಸ್ಥಿತಿಯಲ್ಲಿ ಕಬ್ಬೊಂದೇ ದುಡ್ಡು ತರುವ ಬೆಳೆಯಾಗಿದೆ. ಇಷ್ಟೊಂದು ಸೌಕರ್ಯಗಳೆಲ್ಲಾ ಒಮ್ಮೆಲೇ ಸಿಗುವದು ಅಪರೂಪವೇ ಸರಿ. **ಅದ್ದರಿಂದ ಈ ಹೊತ್ತನ್ನು ಸಾಧಿಸಿ ಇಂಡಿಯಾ ದೇಶದಲ್ಲಿ ಸಕ್ಕರೆಯ ಕಾರಖಾನೆಗಳು ಬೆಳೆದು ಉತ್ಪತ್ತಿಯು ಹೆಚ್ಚಾಗಬೇಕು.** ಮದ್ರಾಸ ಇಲಾಖೆಯ ಉದ್ಯೋಗ ಮಂತ್ರಿಗಳೂ ಈ ಮಾತನ್ನೇ ಪುಷ್ಟೀಕರಿಸಿ ಮದ್ರಾಸ ಇಲಾಖೆಯ ಭೂಮಿಯು ಕಬ್ಬಿಗೆ ಹದವಾಗಿರುವದರಿಂದ ಇಲ್ಲಿ ಈ ಉದ್ಯೋಗವು ಊರ್ಜಿತಾವಸ್ಥೆಯನ್ನು ಹೊಂದಿಯೇ ಹೊಂದುವದೆಂದೂ ಸರಕಾರದ ಒಕ್ಕಲತನದ ಖಾತೆಯವರೂ ಈ ವಿಷಯದಲ್ಲಿ ವಿಶೇಷ ಪರಿಶ್ರಮ ವಹಿಸುತ್ತಿರುವರೆಂದೂ ಹೇಳುತ್ತಾರೆ.

(ಆನೆಯ ಪುಟಕ್ಕೆ ಮುಂದುವರಿದಿದೆ.)

ಶರಣ ಸಂದೇಶ

ಶಾ. ಶ. ೧೮೫೫ ನೆಯ ಜ್ಯೇಷ್ಠ ಬ. ೧೨ ಸೋಮವಾರ.

ಇಪ್ಪತ್ತನೆಯ ಶತಮಾನದ

ಹರಳಯ್ಯ ಮಧುವಯ್ಯಗಳು !

ಶ್ರೀ ಬಸವಾದಿ ಪ್ರಮಥರು ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಮತೋದ್ಧಾರದ ಅದ್ಭುತ ಕಾರ್ಯವನ್ನು ಜರುಗಿಸಿದರಷ್ಟೆ. ಆಗ ಹರಳಯ್ಯನವರೆಂಬ ಒಬ್ಬ ಮಹಾ ಶಿವಶರಣರಿದ್ದರು. ಅವರು ಅಂತ್ಯಜದಲ್ಲಿ ಜನ್ಮಿಸಿದ್ದರೂ ತಮ್ಮ ಶಿವಭಕ್ತಿ ಶೀಲಾಚಾರಗಳಿಂದ ಮಹಾ ಶಿವಶರಣರಾಗಿದ್ದರು.

ಆ ಕಾಲದಲ್ಲಿ ಮಧುವಯ್ಯನವರೆಂಬ ಬ್ರಾಹ್ಮಣರು ವೀರಶೈವ ಮತ ದೀಕ್ಷೆಯನ್ನು ಹೊಂದಿ ತಮ್ಮ ಮಗಳನ್ನು ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಿದರು. ಈ ಮಹಾ ದಿವ್ಯ ವಿವಾಹಕ್ಕೆ ಶ್ರೀ ಬಸವಾದಿ ಪ್ರಮಥರ ಒಪ್ಪಿಗೆಯುದ್ದಿತು. ಈ ಹರಳಯ್ಯ ಮಧುವಯ್ಯಗಳು ಈ ಪ್ರಕಾರ ವಿವಾಹ ಜರುಗಿಸಿ ಜಾತಿ ಸಂಕರಮಾಡಿದರೆಂದು ಮಂಚಣ್ಣ ಮೊದಲಾದ ಬ್ರಾಹ್ಮಣರು ರಾಜನಾದ ಬಿಜ್ಜಳನಲ್ಲಿ ದೂರು ಹೇಳಿ ಆ ಹರಳಯ್ಯ ಮಧುವಯ್ಯಗಳನ್ನು ಕೊಲ್ಲಿಸಿದರು.

ಈ ಹನ್ನೆರಡನೆಯ ಶತಮಾನದ ವಿಷಯವನ್ನು ಈಗ ಪ್ರಸ್ತಾಪಿಸಲು ಕಳೆದ ೧೬ ನೆಯ ತಾರೀಖಿನ ದಿವಸ ಪುಣೆಯಲ್ಲಿ ಜರುಗಿದ ಶ್ರೀ ದೇವದಾಸರ ಲಗ್ನವೇ ಕಾರಣವಾಯಿತು. ಈ ವಿವಾಹವನ್ನು ಪುಣೆಯ ಸನಾತನಿ ಬ್ರಾಹ್ಮಣ ವೃಂದವು ತಾ. ೧೪ ನೆಯ ರಾತ್ರೆ ಸಭೆಸೇರಿ ನಿಷೇಧಿಸಿತು. ಇಷ್ಟೇ ಅಲ್ಲ; ಗಾಂಧೀಜಿಯವರು ವರ್ಣಸಂಕರದ ಘೋರ ಪಾಪ ಪ್ರಸಾರಕರಾಗಿದ್ದಾರೆಂತಲೂ ಮೋಸಗಾರರೂ ವಂಚಕರೂ ಅಧರ್ಮಿಗಳೂ ಆಗಿದ್ದಾರೆಂತಲೂ ಶ್ರೀ. ಭೋಪಟಕರ ಮೊದಲಾದವರು ಆ ಸಭೆಯಲ್ಲಿ ಭಾಷಣಮಾಡಿದರು.

ಗಾಂಧೀಜಿಯವರು ಅಂತ್ಯಜರಲ್ಲಿ ಜನ್ಮಿಸಿದ್ದ ಸೌ. ಲಕ್ಷ್ಮೀ ದೇವಿಯನ್ನು ತಮ್ಮ ಮಗಳನ್ನಾಗಿ ಮಾಡಿಕೊಂಡಿದ್ದಾರಷ್ಟೆ. ಮತ್ತು ಆದಿಜನಗಳಿಗಾಗಿಯೇ ಸರಸ್ವವನ್ನೂ ಸೂರೆ ಮಾಡಿ ಆದಿಜನಗಳ ಪ್ರಾಣವಾಗಿಲ್ಲವೇ ? ಆದ ಕಾರಣ ಇವರು ಹರಳಯ್ಯನವರೆಂದು ತಿಳಿದರೆ ತಪ್ಪೇನು?

ಶ್ರೀ ರಾಜಗೋಪಾಲಾಚಾರ್ಯರಂತೂ ಬ್ರಾಹ್ಮಣರು. ಇವರು ಮಧುವಯ್ಯನವರೆಂದು ತಿಳಿಯಲು ಅಭ್ಯಂತರವೇ ಇಲ್ಲ. ಇವರು ತಮ್ಮ ಮಗಳನ್ನು ಹರಳಯ್ಯನವರಂತಿರುವ ಗಾಂಧೀಜಿಯವರ ಮಕ್ಕಳಾದ ದೇವದಾಸರಿಗೆ ಕೊಟ್ಟು ವಿವಾಹಮಾಡಿದುದು ಆ ೧೨ ನೆಯ ಶತಮಾನದ ಐತಿಹಾಸಿಕ ಅದ್ಭುತ ಕಾರ್ಯವನ್ನು ಜ್ಞಾಪಕಕ್ಕೆ ತರುವುದಿಲ್ಲವೇ?

ಮಧುವಯ್ಯನವರು ಹರಳಯ್ಯನವರನ್ನು ಹೇಗೆ ಪೂಜ್ಯರೆಂದು ತಿಳಿದಿದ್ದರೋ ಹಾಗೆಯೇ ರಾಜಗೋಪಾಲಾಚಾರ್ಯರು ಈಗ ಗಾಂಧೀಜಿಯವರನ್ನು ತಿಳಿದಿದ್ದಾರೆ. ಆಗ ಹರಳಯ್ಯನವರು ಎಷ್ಟು ಶಿವಭಕ್ತರಿಗೆ ವಂದ್ಯರಾಗಿದ್ದರೋ ಅಷ್ಟು ಈಗ ಗಾಂಧೀಜಿಯವರು ರಾಷ್ಟ್ರಭಕ್ತರಿಗೆ ವಂದ್ಯರಾಗಿದ್ದಾರೆ. ಆಗ ಮಂಚಣ್ಣ ಮೊದಲಾದ ಸನಾತನಿಗಳು ಹೇಗೆ ಹರಳಯ್ಯ ಮಧುವಯ್ಯಗಳನ್ನು ದೂಷಿಸಿದರೋ ಹಾಗೆಯೇ ಈಗ ಶ್ರೀ ಭೋಪಟಕರ ಮೊದಲಾದ ಸನಾತನಿಗಳು ಗಾಂಧೀಜಿ ಮತ್ತು ಆಚಾರ್ಯರನ್ನು ಮನಬಂದಂತೆ ದೂಷಿಸುತ್ತಿದ್ದಾರೆ.

ಆಗ ಕಲ್ಯಾಣವು ಹೇಗೆ ವಿದ್ಯಾರ್ಥಿಗಳಿಗೆ ಕೇಂದ್ರಸ್ಥಾನವಾಗಿದ್ದಿತೋ ಹಾಗೆಯೇ ಈಗ ಪುಣೆ ಪಟ್ಟಣವಿದೆ. ಆದರೆ ಆಗ ಕಲ್ಯಾಣದಲ್ಲಿ ಸನಾತನಿಗಳ ರಾಜ್ಯವಿದ್ದಿತು. ಆದರೆ ಈಗ ಪುಣೆಯಲ್ಲಿ ಅವರ ರಾಜ್ಯವಿಲ್ಲ, ಹಾಗಿದ್ದಿದ್ದರೆ ಶ್ರೀ ಭೋಪಟಕರರಂಥ ಸನಾತನಿ ಮಂಚಣ್ಣನವರು ಖಂಡಿತವಾಗಿಯೂ ಗಾಂಧಿ-ಆಚಾರ್ಯರನ್ನು ಶೂಲಕ್ಕೇರಿಸುವ ಸೈತಾನಿ ಕಾರ್ಯವನ್ನು ಮಾಡಿಸುತ್ತಿರಲಿಲ್ಲವೇ ?

ಈ ಅಭಿನಂದನೀಯ ವಿವಾಹವನ್ನು ನಿಷೇಧಿಸುವಾಗ ಶ್ರೀ ಲಾಟೆಯವರು ಇಂಗ್ಲಿಷ ಶಿಕ್ಷಣ ಪ್ರಸಾರದಿಂದ ಈ ಸಂಕರ ವಿವಾಹ ಸಂಭವಿಸಿತೆಂದು ಹೇಳಿದ್ದಾರೆ. ಹನ್ನೆರಡನೆಯ ಶತಮಾನದ ಈ ಹರಳಯ್ಯ ಮಧುವಯ್ಯಗಳ ಸಂಗತಿಯು ಅವರಿಗೇನುಗೊತ್ತು? ಆಗ ಇಂಗ್ಲಿಷ ಶಿಕ್ಷಣವಿದ್ದಿತೆ? ವ್ಯಾಸಾದಿಗಳ ಕಾಲದಲ್ಲಿ ಇಂಗ್ಲಿಷ ಶಿಕ್ಷಣವಿದ್ದಿತೆ? ವಿವೇಕಶಾಲಿಗಳೂ ಸತ್ಯಪ್ರಿಯರೂ ಆದ ಧರ್ಮಾತ್ಮರು ಯಾವಕಾಲದಲ್ಲಿದ್ದರೂ ಅವರು ಇದೇ ಪ್ರಕಾರ ನ್ಯಾಯವಾದ ರೀತಿಯಲ್ಲಿಯೇ ನಡೆಯುತ್ತಾರೆ.

ಗಾಂಧೀಜಿಯವರು ಹಿಂದು ಧರ್ಮೋದ್ಧಾರಕರೆಂದೇ ಹಿಂದು ಧರ್ಮಾಭಿಮಾನಿಗಳಾದ ಸುಧಾರಕರಂತು ತಿಳಿಯುತ್ತಿದ್ದಾರಷ್ಟೆ. ಇವರು ಕೂಡಾ ಇನ್ನೂ ವರ್ಣಗಳ ತೊಡಕಿನಲ್ಲಿದ್ದಾರೆಂಬೇ ಸ್ಪಷ್ಟವಾಯಿತು. ಇಲ್ಲದಿದ್ದರೆ ಶ್ರೀ ದೇವದಾಸರಿಗೆ ಬ್ರಾಹ್ಮಣ ವರ್ಣದ ದೀಕ್ಷೆಯನ್ನೇಕೆ ಕೊಡಿಸಬೇಕಾಗಿದ್ದಿತು? ವಧೂವರರಿಬ್ಬರೂ ವೈಷ್ಣವ ಮತದವರೇ ಆಗಿಲ್ಲವೇ? ಹೀಗೆ ಒಂದೇ ಮತದವರಲ್ಲಿ ಸರಿಯಾದ ಶೀಲಾಚಾರಗಳುಳ್ಳವರಾಗಿರುವಾಗ ಶರೀರ ಸಂಬಂಧವಾಗಲು ಅಭ್ಯಂತರವೇನಿದ್ದಿತು? ವರ್ಣಾಂತರದ ದೀಕ್ಷೆಯೇಕೆ ಬೇಕಾಗಿದ್ದಿತು? ಇದರಿಂದ ದೇವದಾಸರು ಬೇರೇ ಗುಣಕರ್ಮಿಗಳಾದರೆ?

ಇದರಿಂದ ಆಗಿನ ಹರಳಯ್ಯನವರಿಗಿಂತಲೂ ಈಗಿನ ಹರಳಯ್ಯನವರು ಧಾರ್ಮಿಕ ಸುಧಾರಣೆಯ ವಿಷಯದಲ್ಲಿ ಹಿಂದಿದ್ದಾರೆಂದು ವ್ಯಕ್ತವಾಗುವುದಿಲ್ಲವೇ? ಈಗಿನ ನವನಾಗರಿಕ ಕಾಲದಲ್ಲಿ ಈ ವಿವಾಹವನ್ನೇ ಅಭಿನಂದಿಸುವವರು ಎಂಟು ನೂರು ವರುಷಗಳ ಹಿಂದೆ ಜರುಗಿದ ಇದಕ್ಕಿಂತ ಶ್ರೇಷ್ಠತರವಾದ ಆ ವಿವಾಹವನ್ನೆಷ್ಟು ಅಭಿನಂದಿಸಿವರೂ ಕಡಿಮೆಯಲ್ಲವೇ?

ಹಿಂದುಸ್ಥಾನದಲ್ಲಿ ಯಾರು ಸಾಮಾಜಿಕ ಸುಧಾರಣೆಯನ್ನು ಮಾಡಬೇಕಾದರೂ ಆ ಬಸವೇಶನ ನಡೆ ನುಡಿಗಳನ್ನೇ ಅನುಸರಿಸಬೇಕಾಗಿದೆಯೆಂದು ಪಾಶ್ಚಾತ್ಯ ಇತಿಹಾಸಕಾರರು ಹೇಳಿದುದು ಸುಳ್ಳಲ್ಲ. ಈಗಲಾದರೂ ವೀರಶೈವರು ಜಾಗ್ರತರಾಗಿ ತಮ್ಮ ಪ್ರಾಚೀನ ಶಿವಶರಣರ ಪವಿತ್ರಾಚರಣೆಯನ್ನಾಚರಿಸಲು ಪ್ರವೃತ್ತರಾಗಲಿ, ಶ್ರೀ. ಬಸವಾದಿ ಪ್ರಮಥರು ಮಾಡಿದ ಸುಧಾರಣೆಯನ್ನೇ ಜಗದ್ವಂದ್ಯರು ಕೂಡಾ ಅನುಸರಿಸಲು ಈಗ ಪ್ರಾರಂಭಿಸಿರುವುದನ್ನು ನೋಡಿಯಾದರೂ ನಾವು ನಮ್ಮ ಶ್ರೇಷ್ಠ ತತ್ವಗಳ ವಿಷಯದಲ್ಲಿ ಆದರಾಭಿಮಾನಗಳುಳ್ಳವರಾಗೋಣ.

ಈ ಇಪ್ಪತ್ತನೆಯ ಶತಮಾನದ ಹರಳಯ್ಯ ಮಧುವಯ್ಯಗಳನ್ನು ಹೆಚ್ಚಾಗಿ ಮಧುವಯ್ಯನವರನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ. ಮತ್ತು ಶ್ರೀ. ಲಕ್ಷ್ಮೀ ದೇವದಾಸರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಿ ಈ ದಿವ್ಯ ದಂಪತಿಗಳಿಂದ ವಿಶೇಷವಾದ ರಾಷ್ಟ್ರಕಾರ್ಯಗಳನ್ನು ಮಾಡಿಸಲೆಂದು ಪ್ರಾರ್ಥಿಸುತ್ತೇವೆ.

ಲಕ್ಷ್ಮೀ-ದೇವದಾಸರ ವಿವಾಹ.

(೩ ನೆಯ ಪುಟದಿಂದ ಬಂದಿದೆ.)

ಬ್ರಾಹ್ಮಣ ದೀಕ್ಷೆ.

ಕಳೆದ ೧೪ನೆಯ ತಾರೀಖಿನವರೆಗೆ ವೈಶ್ಯ ವರ್ಣದವರಾಗಿದ್ದ ದೇವದಾಸಜಿಯವರು ತಾ. ೧೫ನೆಯ ದಿವಸ ಬ್ರಾಹ್ಮಣ ವರ್ಣದವರಾದರು. ಗುರುವಾರ ಪ್ರಾತಃಕಾಲ ಹತ್ತು ಗಂಟೆ ಸಮಯದಲ್ಲಿ ಶ್ರೀ ದೇವದಾಸರಿಗೆ ಶ್ರೀ ಲಕ್ಷ್ಮಣಶಾಸ್ತ್ರಿಗಳು ವಾತ್ಸಸ್ತೋಮವಿಧಿ ಪ್ರಕಾರ ಬ್ರಾಹ್ಮಣ ವರ್ಣದ ದೀಕ್ಷೆಯನ್ನು ಕೊಟ್ಟರು.

ವಿವಾಹ ಸಮಾರಂಭ.

ತಾ ೧೬ನೆಯ ಶುಕ್ರವಾರ ಬೆಳಗಿನ ೫ ಗಂಟೆಯಿಂದಲೇ ಪರ್ಣಕುಟಿಯಲ್ಲಿ ವಿವಾಹ ಸಮಾರಂಭದ ಕಾರ್ಯಗಳು ಪ್ರಾರಂಭವಾದವು ಪ್ರಾತಃಕಾಲ ೭ ಗಂಟೆಯೊಳಗಾಗಿ ಆಮಂತ್ರಿತ ಪ್ರಮುಖರೆಲ್ಲರೂ ಆಗಮಿಸಿದ್ದರು.

ಪರ್ಣಕುಟಿಯ ವಾಯುವ್ಯ ದಿಕ್ಕಿನ ಭಾಗದಲ್ಲಿ ಬಾಳೆಯ ಕಂಬಗಳಿಂದ ಮಂಗಲಕರವಾದ ಒಂದು ವಿವಾಹ ಮಂಟಪ ಏರ್ಪಟ್ಟಿದ್ದಿತು. ಎಡಬಲಗಳಲ್ಲಿ ಸ್ತ್ರೀ ಪುರುಷರಿಗೆ ಪ್ರತ್ಯೇಕವಾಗಿ ಕುಳಿತುಕೊಳ್ಳಲು ಸ್ಥಳವನ್ನು ಏರ್ಪಡಿಸಿದ್ದರು. ಪೇಶ್ವೆ ಸರಕಾರದ ಪದ್ಧತಿಯಂತೆ ವ್ಯವಸ್ಥೆಯನ್ನಿಟ್ಟಿದ್ದರು ಲಗ್ನವು ದಕ್ಷಿಣೆ ಬ್ರಾಹ್ಮಣರ ಪದ್ಧತಿಯಂತೆಯೇ ನಡೆಯಿತು. ಪರ್ಣಕುಟಿಯ ಉತ್ತರ ದಿಕ್ಕಿನ ಪಲ್ಲಂಗದ ಮೇಲೆ ಗಾಂಧೀಜಿಯವರು ಕುಳಿತುಕೊಂಡು ವಿವಾಹ ವಿಧಿಗಳನ್ನೆಲ್ಲಾ ನೋಡುತ್ತಿದ್ದರು. ಶ್ರೀ. ಲಕ್ಷ್ಮಣ ಶಾಸ್ತ್ರಿಗಳು ತಮ್ಮ ಇಬ್ಬರು ಶಿಷ್ಯರನ್ನು ಕೂಡಿಕೊಂಡು ವಿವಾಹವನ್ನು ನಡೆಸುತ್ತಿದ್ದರು.

ವಧೂವರರ ಉಡುಪು.

ಶ್ರೀ. ದೇವದಾಸರು ನಿತ್ಯದಂತೆ ಖಾದಿ ಅಂಗಿ ಮತ್ತು ಖಾದಿ ಟೊಪ್ಪಿಗೆಯನ್ನು ಹಾಕಿಕೊಂಡಿದ್ದರು. ಸೌ. ಲಕ್ಷ್ಮೀ ದೇವಿಯವರು ಜಾಂಬಳಿ ಬಣ್ಣದ ದಕ್ಷಿಣಿ ಸೀರೆಯನ್ನು ಮದ್ರಾಸಿ ಪದ್ಧತಿಯಂತೆ ಉಟ್ಟುಕೊಂಡಿದ್ದರು.

ಆಗಮಿಸಿದ ಪ್ರಮುಖರು

ಸಾ. ಶ್ರೀನಿವಾಸ ಶಾಸ್ತ್ರಿ, ಸೌ. ಸರೋಜಿನಿದೇವಿ, ಪಂಡಿತ ಕುಂಜ್ರುರು, ಶ್ರೀ ನರಸಿಂಹ ಚಿಂತಾಮಣಿ ಕೇಳಕರ, ಶ್ರೀ. ಬಾಪೂಜಿ ಅಣೆ, ಶ್ರೀ. ಜಮನಾಲಾಲ ಬಜಾಜ, ಶ್ರೀ ಶಂಕರಲಾಲ ಬ್ಯಾಂಕರ ಸೌ. ಮಥುರಾಬಾಯಿ ದ್ರವಿಡ, ಶ್ರೀ ಅಮೃತಲಾಲ ಠಕ್ಕರ ಮೊದಲಾದ ನೂರಾರು ಪ್ರಮುಖ ಸ್ತ್ರೀ ಪುರುಷರು ಈ ವಿವಾಹಕ್ಕೆ ಆಗಮಿಸಿದ್ದರು.

ಕನ್ಯಾದಾನ ವಿಧಿಯು ಪೂರೈಸಿದ ನಂತರ ವಧೂವರರಿಗೆ ಸಕಲರೂ ಮಂತ್ರಾಕ್ಷತೆಗಳನ್ನು ಹಾಕಿದರು. 'ರಾಮಭಜನೆ' ಮತ್ತು 'ವೈಷ್ಣವ ಜನತೋ' ಎಂಬ ಪದ್ಯಗಳು ಈ ವಿವಾಹ ಕಾಲದಲ್ಲಿ ಜರುಗಿದವು.

ಗಾಂಧೀಜಿಯವರ ಉಡುಗರೆ.

ವಿವಾಹವಾದೊಡನೇ ದೇವದಾಸರು ಬಂದು ಗಾಂಧೀಜಿಯವರಿಗೆ ನಮಸ್ಕಾರ ಮಾಡಿದರು. ಆಗ ಗಾಂಧೀಜಿಯವರು ಬೆನ್ನ ಮೇಲೆ ಕೈಯಾಡಿಸಿ ಜಿನುಗಾದ ಕೈನೂಲಿನ ಹಾರವನ್ನು ಇವರ ಕೊರಳಲ್ಲಿ ಹಾಕಿ ಭಗವದ್ಗೀತೆ ಮತ್ತು ಸತ್ಯಾಗ್ರಹಾಶ್ರಮದ ಭಜನಾವಳಿ ಈ ಎರಡು ಪುಸ್ತಕಗಳನ್ನು ಕೊಟ್ಟರು.

ಅನಂತರ ಲಕ್ಷ್ಮೀ ದೇವಿಯವರೂ ಬಂದು ನಮಸ್ಕಾರ ಮಾಡಲು ಬೆನ್ನ ಮೇಲೆ ಶಾಬಾಸ್ ಎಂದು ಕೈಯಿಟ್ಟು ಇವರಿಗೂ ನೂಲಿನ ಹಾರವನ್ನು ಹಾಕಿ ಆ ಪುಸ್ತಕಗಳನ್ನು ಕೊಟ್ಟರು, ಅನಂತರ ವಧೂವರರು ತಮ್ಮ ಉಡುಪನ್ನು ಬೇರೆ ಮಾಡಿಕೊಂಡು ಲಗ್ನ ಮಂಟಪಕ್ಕೆ ಬಂದರು, ಆಗ ದೇವದಾಸರು ಮೈಮೇಲೆ ಒಂದು ಪಂಜಿಯನ್ನು ಹೊತ್ತುಕೊಂಡಿದ್ದರು. ಲಕ್ಷ್ಮೀ ದೇವಿಯವರು ಖಾದಿಯ ಅಚ್ಚಿನ ಸೀರೆಯನ್ನು ಉಟ್ಟುಕೊಂಡಿದ್ದರು. ಲಗ್ನವಿಧಿಯು ಪೂರೈಸಿದ ನಂತರ ವಧೂವರರು ಪುನಃ ಗಾಂಧೀಜಿಯವರಿಗೂ ಸೌ. ಕಸ್ತೂರಿ ದೇವಿಯವರಿಗೂ ವಂದಿಸಿ ಲಗ್ನಕ್ಕೆ ಬಂದಿದ್ದ ಅನೇಕ ಪೂಜ್ಯರಿಗೆ ನಮಸ್ಕರಿಸಿದರು. ಯಾರೂ ಉಡುಗರೆಯನ್ನು ಕೊಡಬಾರದೆಂದೇ ಗೊತ್ತುಮಾಡಿದ್ದರಿಂದ ಆ ಸಮಾರಂಭವೇನೂ ನಡೆಯಲಿಲ್ಲ.

ದಿವ್ಯೋಪದೇಶ.

ಅನಂತರ ಗಾಂಧೀಜಿಯವರು ಈ ನೂತನ ದಂಪತಿಗಳಿಗೆ ಹಿಂದಿ ಮತ್ತು ಮಧ್ಯಮಧ್ಯ ಗುಜರಾತಿ ಭಾಷೆಯಲ್ಲಿ ಉಪದೇಶ ಮಾಡಿದರು. ಇವರ ಸ್ವರವು ಬಹು ಕುಗ್ಗಿದ್ದಿತು. ಉಪೋಷಣದ ನಂತರ ಇಷ್ಟು ಹೊತ್ತು ಮಾತನಾಡಿದುದು ಇದೇ ಮೊದಲು ದೇವದಾಸರನ್ನು ಕುರಿತ.—

ವೈಷ್ಣವ ಜನತೋ ಎಂಬ ನರಸಿ ಮೇಥಾ ಸಾಧುಗಳ ಪದ್ಯವನ್ನು ಇದೇ ಈಗ ನೀನು ಕೇಳಿದೆಯಷ್ಟೆ. ನಿಜವಾದ ವೈಷ್ಣವನು ಹೇಗೆ ವರ್ತಿಸಬೇಕೆಂದು ಈ ಪದ್ಯದಲ್ಲಿ ಹೇಳಿದೆಯೋ ಹಾಗೆಯೇ ನೀವಿಬ್ಬರೂ ನಡೆಯುವಿರೆಂದು ನಾನು ನಂಬಿದ್ದೇನೆ.

ದೇವದಾಸ, ನಾನು ನಿನ್ನಿಂದ ಯಾವುದನ್ನು ಅಪೇಕ್ಷಿಸುತ್ತೇನೆಂಬುದು ನಿನಗೆ ಗೊತ್ತೇ ಇದೆ. ಆ ಪ್ರಕಾರ ನೀನು ನಡೆದದ್ದಾದರೆ ಈ ವಿವಾಹದ ವಿಷಯದಲ್ಲುಂಟಾದ ಆಕ್ಷೇಪಣೆಗಳು ಹಿಮಗಡ್ಡೆಯಂತೆ ತಾವೇ ಕರಗಿ ಹೋಗುತ್ತವೆ,

ನಾನು ಪ್ರಾಯಸ್ಥನಾದಂದಿನಿಂದಲೂ ಧರ್ಮದ ಅರ್ಥವನ್ನು ತಿಳಿದುಕೊಳ್ಳುತ್ತಾ ಬಂದಿದ್ದೇನೆ, ಮತ್ತು ಶಕ್ತ್ಯನುಸಾರ ಆಚರಿಸುತ್ತಲೂ ಬಂದಿದ್ದೇನೆ. ಈ ನಿಮ್ಮ ವಿವಾಹ ಸಮಾರಂಭವನ್ನು ನಡೆಯಿಸುವಾಗ ಯಾವ ಅಧರ್ಮವನ್ನೂ ಆಚರಿಸುವುದಿಲ್ಲವೆಂದೇ ನನ್ನ ದೃಢ ನಂಬಿಕೆಯು. ಈ ಲಗ್ನವು ಅಧರ್ಮವಾದುದೆಂದು ನನಗೆ ತೋರಿದ್ದರೆ ನಾನೆಂದಿಗೂ ನಿಮಗೆ ಆಶೀರ್ವದಿಸುತ್ತಿರಲಿಲ್ಲ.

ವಿವಾಹವು ಧಾರ್ಮಿಕ ಸಂಸ್ಕಾರವಾಗಿದೆ. ಆದುದರಿಂದ ಇದರ ಫಲವಾದರೂ ಧರ್ಮ ರೂಪವೇ ಇರಬೇಕು. ಧರ್ಮವೆಂದರೆ ಸತ್ಯ ಧರ್ಮ. ಇದನ್ನರಿತು ಆಚರಿಸಿದ್ದಾದರೆ ಈ ಧರ್ಮವೇ ನಿಮ್ಮನ್ನು ರಕ್ಷಿಸುವುದು.

ದೇವದಾಸ, ನೀನು ರಾಜಾಜಿಯ (ರಾಜಗೋಪಾಲಾಚಾರ್ಯರಿಗೆ ಗಾಂಧೀಜಿಯವರು ರಾಜಾಜಿಯವರೆಂದು ಹೇಳುತ್ತಾರೆ.) ಪ್ರಿಯ ರತ್ನವನ್ನೇ ಸೆಳೆದುಕೊಂಡಿರುವಿ. ಇದನ್ನು ಬಹು ಎಚ್ಚರಿಕೆಯಿಂದ ಸಂರಕ್ಷಿಸು, ಲಕ್ಷ್ಮಿಯು ನಿಜವಾಗಿಯೂ ಲಕ್ಷ್ಮಿಯಾಗಿದ್ದಾಳೆ. ಲಕ್ಷ್ಮಿಯು ಜಗತ್ತಿನ ಮಂಗಲ ಮತ್ತು ಸುಂದರ ವಸ್ತುಗಳ ದೇವತೆಯಾಗಿದ್ದಾಳೆ. ಇವಳನ್ನು ಲಕ್ಷ್ಮಿಯ ಹಾಗೆಯೇ ಸಂರಕ್ಷಿಸು, ಆ ಮೇಲೆ ಲಕ್ಷ್ಮೀ ದೇವಿಯನ್ನು ಕುರಿತು— ಹಿಂದಿಯಲ್ಲಿ

ನೀವಿಬ್ಬರೂ ಧರ್ಮದಂತೆಯೇ ಆಚರಿಸಿರಿ. ನೀವು ಧರ್ಮಕ್ಕಾಗಿಯೇ ಜೀವಿಸಿರಿ. ಪ್ರಸಂಗ ಬಂದಾಗ ಧರ್ಮಕ್ಕಾಗಿ ಪ್ರಾಣವನ್ನು ಕೂಡಾ ಅರ್ಪಿಸಲು ಹಿಂಜರಿಯಬೇಡಿರಿ. ಕ್ಷಣಿಕ ಸುಖವನ್ನು ಹಂಬಲಿಸದೆ ದೇಶಸೇವೆಗಾಗಿ ಆಯುಷ್ಯ ಕಳೆಯುವ ಬುದ್ಧಿಯನ್ನು ಪರಮಾತ್ಮನು ನಿಮಗೆ ಕೊಡಲಿ. ಇದೇ ನಿಮಗೆ ನನ್ನ ಆಶೀರ್ವಾದವು.

ದೇವದಾಸ, ನೀನು ರಾಜಾಜಿಯನ್ನು ಈ ವರೆಗೆ ಯಜಮಾನರೆಂದೇ ತಿಳಿದಾಚರಿಸುತ್ತಾ ಬಂದಿರುವಿ. ಈಗ ನಿಜವಾಗಿಯೂ ನಿನಗೆ ಯಜಮಾನರಾಗಿದ್ದಾರೆ. ನೀನು ಅವರಲ್ಲಿ ನನ್ನಲ್ಲಿಟ್ಟಿರುವ ಭಕ್ತಿ ವಿಶ್ವಾಸಗಳನ್ನೇ ಇಡು.

(ಪುರವಣಿ ನೋಡಿ.)

ಶರಣ ಸಂದೇಶ

ಶಾ. ಶ. ೧೮೫೫ ನೆಯ ಜ್ಯೇಷ್ಠ ಬ. ೧೨ ಸೋಮವಾರ.

ಇಪ್ಪತ್ತನೆಯ ಶತಮಾನದ ಹರಳಯ್ಯ ಮಧುವಯ್ಯಗಳು !

ಶ್ರೀ ಬಸವಾದಿ ಪ್ರಮಥರು ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಮತೋದ್ಧಾರದ ಅದ್ಭುತ ಕಾರ್ಯವನ್ನು ಜರುಗಿಸಿದರಷ್ಟೆ. ಆಗ ಹರಳಯ್ಯನವರೆಂಬ ಒಬ್ಬ ಮಹಾ ಶಿವಶರಣರಿದ್ದರು. ಅವರು ಅಂತ್ಯಜರಲ್ಲಿ ಜನ್ಮಿಸಿದ್ದರೂ ತಮ್ಮ ಶಿವಭಕ್ತಿ ಶೀಲಾಚಾರಗಳಿಂದ ಮಹಾ ಶಿವಶರಣರಾಗಿದ್ದರು.

ಆ ಕಾಲದಲ್ಲಿ ಮಧುವಯ್ಯನವರೆಂಬ ಬ್ರಾಹ್ಮಣರು ವೀರಶೈವ ಮತ ದೀಕ್ಷೆಯನ್ನು ಹೊಂದಿ ತಮ್ಮ ಮಗಳನ್ನು ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಿದರು. ಈ ಮಹಾ ದಿವ್ಯ ವಿವಾಹಕ್ಕೆ ಶ್ರೀ ಬಸವಾದಿ ಪ್ರಮಥರ ಒಪ್ಪಿಗೆಯಿದ್ದಿತು. ಈ ಹರಳಯ್ಯ ಮಧುವಯ್ಯಗಳು ಈ ಪ್ರಕಾರ ವಿವಾಹ ಜರುಗಿಸಿ ಜಾತಿ ಸಂಕರಮಾಡಿದರೆಂದು ಮಂಚಣ್ಣ ಮೊದಲಾದ ಬ್ರಾಹ್ಮಣರು ರಾಜನಾದ ಬಿಜ್ಜಳನಲ್ಲಿ ದೂರು ಹೇಳಿ ಆ ಹರಳಯ್ಯ ಮಧುವಯ್ಯಗಳನ್ನು ಕೊಲ್ಲಿಸಿದರು.

ಈ ಹನ್ನೆರಡನೆಯ ಶತಮಾನದ ವಿಷಯವನ್ನು ಈಗ ಪ್ರಸ್ತಾಪಿಸಲು ಕಳೆದ ೧೬ ನೆಯ ತಾರೀಖಿನ ದಿವಸ ಪುಣೆಯಲ್ಲಿ ಜರುಗಿದ ಶ್ರೀ ದೇವದಾಸರ ಲಗ್ನವೇ ಕಾರಣವಾಯಿತು. ಈ ವಿವಾಹವನ್ನು ಪುಣೆಯ ಸನಾತನಿ ಬ್ರಾಹ್ಮಣ ವೃಂದವು ತಾ. ೧೪ ನೆಯ ರಾತ್ರಿ ಸಭೆಸೇರಿ ನಿಷೇಧಿಸಿತು. ಇಷ್ಟೇ ಅಲ್ಲ; ಗಾಂಧೀಜಿಯವರು ವರ್ಣ ಸಂಕರದ ಘೋರ ಪಾಪ ಪ್ರಸಾರಕರಾಗಿದ್ದಾರೆಂತಲೂ ಮೋಸಗಾರರೂ ವಂಚಕರೂ ಅಧರ್ಮಿಗಳೂ ಆಗಿದ್ದಾರೆಂತಲೂ ಶ್ರೀ. ಭೋಪಟಕರ ಮೊದಲಾದವರು ಆ ಸಭೆಯಲ್ಲಿ ಭಾಷಣಮಾಡಿದರು.

ಗಾಂಧೀಜಿಯವರು ಅಂತ್ಯಜರಲ್ಲಿ ಜನ್ಮಿಸಿದ್ದ ಸೌ. ಲಕ್ಷ್ಮೀ ದೇವಿಯನ್ನು ತಮ್ಮ ಮಗಳನ್ನಾಗಿ ಮಾಡಿಕೊಂಡಿದ್ದಾರಷ್ಟೆ. ಮತ್ತು ಆದಿಜನಗಳಿಗಾಗಿಯೇ ಸರಸ್ವವನ್ನೂ ಸೂರೆ ಮಾಡಿ ಆದಿಜನಗಳ ಪ್ರಾಣವಾಗಿಲ್ಲವೇ ? ಆದ ಕಾರಣ ಇವರು ಹರಳಯ್ಯನವರೆಂದು ತಿಳಿದರೆ ತಪ್ಪೇನು?

ಶ್ರೀ ರಾಜಗೋಪಾಲಾಚಾರ್ಯರಂತೂ ಬ್ರಾಹ್ಮಣರು. ಇವರು ಮಧುವಯ್ಯನವರೆಂದು ತಿಳಿಯಲು ಅಭ್ಯಂತರವೇ ಇಲ್ಲ. ಇವರು ತಮ್ಮ ಮಗಳನ್ನು ಹರಳಯ್ಯನವರಂತಿರುವ ಗಾಂಧೀಜಿಯವರ ಮಕ್ಕಳಾದ ದೇವದಾಸರಿಗೆ ಕೊಟ್ಟು ವಿವಾಹಮಾಡಿದುದು ಆ ೧೨ ನೆಯ ಶತಮಾನದ ಐತಿಹಾಸಿಕ ಅದ್ಭುತ ಕಾರ್ಯವನ್ನು ಜ್ಞಾಪಕಕ್ಕೆ ತರುವುದಿಲ್ಲವೇ ?

ಮಧುವಯ್ಯನವರು ಹರಳಯ್ಯನವರನ್ನು ಹೇಗೆ ಪೂಜ್ಯರೆಂದು ತಿಳಿದಿದ್ದರೋ ಹಾಗೆಯೇ ರಾಜಗೋಪಾಲಾಚಾರ್ಯರು ಈಗ ಗಾಂಧೀಜಿಯವರನ್ನು ತಿಳಿದಿದ್ದಾರೆ. ಆಗ ಹರಳಯ್ಯನವರು ಎಷ್ಟು ಶಿವಭಕ್ತರಿಗೆ ವಂದ್ಯರಾಗಿದ್ದರೋ ಅಷ್ಟು ಈಗ ಗಾಂಧೀಜಿಯವರು ರಾಷ್ಟ್ರಭಕ್ತರಿಗೆ ವಂದ್ಯರಾಗಿದ್ದಾರೆ. ಆಗ ಮಂಚಣ್ಣ ಮೊದಲಾದ ಸನಾತನಿಗಳು ಹೇಗೆ ಹರಳಯ್ಯ ಮಧುವಯ್ಯಗಳನ್ನು ದೂಷಿಸಿದರೋ ಹಾಗೆಯೇ ಈಗ ಶ್ರೀ ಭೋಪಟಕರ ಮೊದಲಾದ ಸನಾತನಿಗಳು ಗಾಂಧೀಜಿ ಮತ್ತು ಆಚಾರ್ಯರನ್ನು ಮನಬಂದಂತೆ ದೂಷಿಸುತ್ತಿದಾರೆ.

ಆಗ ಕಲ್ಯಾಣವು ಹೇಗೆ ವಿದ್ಯಾರ್ಥಿಗಳಿಗೆ ಕೇಂದ್ರಸ್ಥಾನವಾಗಿದ್ದಿತೋ ಹಾಗೆಯೇ ಈಗ ಪುಣೆ ಪಟ್ಟಣವಿದೆ. ಆದರೆ ಆಗ ಕಲ್ಯಾಣದಲ್ಲ ಸನಾತನಿಗಳ ರಾಜ್ಯವಿದ್ದಿತು. ಆದರೆ ಈಗ ಪುಣೆಯಲ್ಲಿ ಅವರ ರಾಜ್ಯವಿಲ್ಲ. ಹಾಗಿದ್ದಿದ್ದರೆ ಶ್ರೀ ಭೋಪಟಕರರಂಥ ಸನಾತನಿ ಮಂಚಣ್ಣನವರು ಖಂಡಿತವಾಗಿಯೂ ಗಾಂಧಿ-ಆಚಾರ್ಯರನ್ನು ಶೂಲಕ್ಕೇರಿಸುವ ಸೈತಾನಿ ಕಾರ್ಯವನ್ನು ಮಾಡಿಸುತ್ತಿರಲಿಲ್ಲವೇ ?

ಈ ಅಭಿನಂದನೀಯ ವಿವಾಹವನ್ನು ನಿಷೇಧಿಸುವಾಗ ಶ್ರೀ ಲವಾಟೆಯವರು ಇಂಗ್ಲಿಷ ಶಿಕ್ಷಣ ಪ್ರಸಾರದಿಂದ ಈ ಸಂಕರ ವಿವಾಹ ಸಂಭವಿಸಿತೆಂದು ಹೇಳಿದ್ದಾರೆ. ಹನ್ನೆರಡನೆಯ ಶತಮಾನದ ಈ ಹರಳಯ್ಯ ಮಧುವಯ್ಯಗಳ ಸಂಗತಿಯು ಅವರಿಗೇನುಗೊತ್ತು? ಆಗ ಇಂಗ್ಲಿಷ ಶಿಕ್ಷಣವಿದ್ದಿತೆ ? ವ್ಯಾಸಾದಿಗಳ ಕಾಲದಲ್ಲಿ ಇಂಗ್ಲಿಷ ಶಿಕ್ಷಣವಿದ್ದಿತೆ ? ವಿವೇಕಶಾಲಿಗಳೂ ಸತ್ಯಪ್ರಿಯರೂ ಆದ ಧರ್ಮಾತ್ಮರು ಯಾವಕಾಲದಲ್ಲಿದ್ದರೂ ಅವರು ಇದೇ ಪ್ರಕಾರ ನ್ಯಾಯವಾದ ರೀತಿಯಲ್ಲಿಯೇ ನಡೆಯುತ್ತಾರೆ .

ಗಾಂಧೀಜಿಯವರು ಹಿಂದು ಧರ್ಮೋದ್ಧಾರಕರೆಂದೇ ಹಿಂದು ಧರ್ಮಾಭಿಮಾನಿಗಳಾದ ಸುಧಾರಕರಂತು ತಿಳಿಯುತ್ತಿದ್ದಾರಷ್ಟೆ. ಇವರು ಕೂಡಾ ಇನ್ನೂ ವರ್ಣಗಳ ತೊಡಕಿನಲ್ಲಿದ್ದಾರೆಂದೇ ಸ್ಪಷ್ಟವಾಯಿತು. ಇಲ್ಲದಿದ್ದರೆ ಶ್ರೀ ದೇವದಾಸರಿಗೆ ಬ್ರಾಹ್ಮಣ ವರ್ಣದ ದೀಕ್ಷೆಯನ್ನೇಕೆ ಕೊಡಿಸಬೇಕಾಗಿದ್ದಿತು? ವಧೂವರರಿಬ್ಬರೂ ವೈಷ್ಣವ ಮತದವರೇ ಆಗಿಲ್ಲವೇ? ಹೀಗೆ ಒಂದೇ ಮತದವರಲ್ಲ ಸರಿಯಾದ ಶೀಲಾಚಾರಗಳುಳ್ಳವರಾಗಿರುವಾಗ ಶರೀರ ಸಂಬಂಧವಾಗಲು ಅಭ್ಯಂತರವೇನಿದ್ದಿತು? ವರ್ಣಾಂತರದ ದೀಕ್ಷೆಯೇಕೆ ಬೇಕಾಗಿದ್ದಿತು? ಇದರಿಂದ ದೇವದಾಸರು ಬೇರೇ ಗುಣಕರ್ಮಿಗಳಾದರೆ?

ಇದರಿಂದ ಆಗಿನ ಹರಳಯ್ಯನವರಿಗಿಂತಲೂ ಈಗಿನ ಹರಳಯ್ಯನವರು ಧಾರ್ಮಿಕ ಸುಧಾರಣೆಯ ವಿಷಯದಲ್ಲಿ ಹಿಂದಿದ್ದಾರೆಂದು ವ್ಯಕ್ತವಾಗುವುದಿಲ್ಲವೇ? ಈಗಿನ ನವನಾಗರಿಕ ಕಾಲದಲ್ಲಿ ಈ ವಿವಾಹವನ್ನೇ ಅಭಿನಂದಿಸುವವರು ಎಂಟು ನೂರು ವರುಷಗಳ ಹಿಂದೆ ಜರುಗಿದ ಇದಕ್ಕಿಂತ ಶ್ರೇಷ್ಠತರವಾದ ಆ ವಿವಾಹವನ್ನೆಷ್ಟು ಅಭಿನಂದಿಸಿದರೂ ಕಡಿಮೆಯಲ್ಲವೇ?

ಹಿಂದುಸ್ಥಾನದಲ್ಲಿ ಯಾರು ಸಾಮಾಜಿಕ ಸುಧಾರಣೆಯನ್ನು ಮಾಡಬೇಕಾದರೂ ಆ ಬಸವೇಶನ ನಡೆ ನುಡಿಗಳನ್ನೇ ಅನುಸರಿಸಬೇಕಾಗಿದೆಯೆಂದು ಪಾಶ್ಚಾತ್ಯ ಇತಿಹಾಸಕಾರರು ಹೇಳಿದುದು ಸುಳ್ಳಲ್ಲ. ಈಗಲಾದರೂ ವೀರಶೈವರು ಜಾಗ್ರತರಾಗಿ ತಮ್ಮ ಪ್ರಾಚೀನ ಶಿವಶರಣರ ಪವಿತ್ರಾಚರಣೆಯನ್ನಾಚರಿಸಲು ಪ್ರವೃತ್ತರಾಗಲಿ, ಶ್ರೀ. ಬಸವಾದಿ ಪ್ರಮಥರು ಮಾಡಿದ ಸುಧಾರಣೆಯನ್ನೇ ಜಗದ್ವಂದ್ಯರು ಕೂಡಾ ಅನುಸರಿಸಲು ಈಗ ಪ್ರಾರಂಭಿಸಿರುವುದನ್ನು ನೋಡಿಯಾದರೂ ನಾವು ನಮ್ಮ ಶ್ರೇಷ್ಠ ತತ್ವಗಳ ವಿಷಯದಲ್ಲಿ ಆದರಾಭಿಮಾನಗಳುಳ್ಳವರಾಗೋಣ.

ಈ ಇಪ್ಪತ್ತನೆಯ ಶತಮಾನದ ಹರಳಯ್ಯ ಮಧುವಯ್ಯಗಳನ್ನು ಹೆಚ್ಚಾಗಿ ಮಧುವಯ್ಯನವರನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ. ಮತ್ತು ಶ್ರೀ. ಲಕ್ಷ್ಮೀ ದೇವದಾಸರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಿ ಈ ದಿವ್ಯ ದಂಪತಿಗಳಿಂದ ವಿಶೇಷವಾದ ರಾಷ್ಟ್ರಕಾರ್ಯಗಳನ್ನು ಮಾಡಿಸಲೆಂದು ಹಾರೈಸುತ್ತೇವೆ.

ಲಕ್ಷ್ಮೀ-ದೇವದಾಸರ ವಿವಾಹ.

ಗಾಂಧೀಜಿಯವರ ಉಪದೇಶ.

ಲಕ್ಷ್ಮೀ, ನಿನಗೆ ನಾನೇನು ಹೆಚ್ಚು ಹೇಳಲಿ? ನಿನ್ನನ್ನು ನಾನು ನೋಡುತ್ತ ಬಂದಾಗಿನಿಂದಲೂ ನಿನಗೆ ದೇವದಾಸನೇ ಯೋಗ್ಯ ವರನೆಂದು ನನಗೆ ತೋರುತ್ತ ಬಂದಿತು. ನೀನು ನಿನ್ನ ಹೆಸರಿನಂತೆ ಲಕ್ಷ್ಮಿಯಾಗಿರುತ್ತಿ. ಇದು ಧರ್ಮಸಮ್ಮತವಾದ ವಿವಾಹವಾಗಿದೆ, ನಿಮ್ಮಿಬ್ಬರ ಈವರೆಗಿನ ತಪಸ್ಸಿನ ಫಲವೇ ಈ ವಿವಾಹವಾಗಿದೆ. ನನಗೆ ಮಾತನಾಡಲು ಬಹು ಶ್ರಮವಾಗುತ್ತದೆ. ಆದರೂ ನಿಮ್ಮ ಕರ್ತವ್ಯ ಮತ್ತು ನಿಮ್ಮ ಮೇಲಿರುವ ಹೊಣೆಗಾರಿಕೆಯನ್ನು ತಿಳಿಸುವುದು ನನ್ನ ಕರ್ತವ್ಯವಾಗಿರುವುದರಿಂದ ಮಾತನಾಡಲೇಬೇಕಾಗಿದೆ.

ದೇವರು ನಿಮ್ಮನ್ನು ರಕ್ಷಿಸಲಿ. ಆತನೇ ಎಲ್ಲರ ಮಾತಾ, ಪಿತ ಮಿತ್ರ, ಸರ್ವವೂ ಆಗಿದ್ದಾನೆ. ಆತನನ್ನು ಸ್ಮರಿಸಿ ದೇಶಸೇವೆ ಮತ್ತು ಮಾನವ ಜಾತಿಯ ಸೇವೆಗಳಿಗಾಗಿ ನೀವು ನಿಮ್ಮ ದೇಹವನ್ನರ್ಪಿಸಿರಿ.

ಮಹಾತ್ಮರ ಈ ದಿವ್ಯೋಪದೇಶದನಂತರ ವಧೂವರರಿಗೆ ಕೆಲವರು ಪುಷ್ಪಹಾರಗಳನ್ನು ಹಾಕಿದರು. ಅನಂತರ ಸಕಲರಿಗೂ ಕೊಬ್ಬರಿ ಬೆಲ್ಲಗಳ ದೊನ್ನೆಯನ್ನು ಕೊಟ್ಟಮೇಲೆ ಈ ಸಮಾರಂಭ ಪೂರೈಸಿತು. ವಧೂವರರ ಅಭಿನಂದನಾರ್ಥ ಸಾಧಾರಣ ಒಂದು ನೂರು ತಂತಿಗಳು ಬಂದಿದ್ದವು. ಪೌರೋಹಿತ್ಯವನ್ನು ನಡೆಸಿದ ಶ್ರೀ ಲಕ್ಷ್ಮಣಶಾಸ್ತ್ರಿಗಳಿಗೆ ದಕ್ಷಿಣೆಯನ್ನು ಕೊಡಹೋಗಲು ಅವರು ಬೇಡವೆಂದು ಹೇಳಿದರು. ಅದನ್ನು ತೆಗೆದುಕೊಳ್ಳದೆ ಕಾರ್ಯ ಪೂರೈಸುವದಿಲ್ಲವೆಂದು ಹೇಳುವ ವಧೂವರರ ಕಡೆಯಿಂದ ಒಂದೊಂದು ರೂಪಾಯಿ ದಕ್ಷಿಣೆಯನ್ನು ಕೊಟ್ಟರು.

ಭೋಜನ ಸಮಾರಂಭ.

ಮಧ್ಯಾಹ್ನ ೧೧|| ಗಂಟೆಗೆ ಲಗ್ನದ ಭೋಜನ ಸಮಾರಂಭವೂ ಜರುಗಿತು. ಶಿರಾ, ಪುರಿ, ಪಲ್ಲೆ, ಅನ್ನ, ಸಾರು, ಚಟ್ನಿ, ಕೋಸಂಬರಿ, ಇಷ್ಟೇ ಪದಾರ್ಥಗಳನ್ನು ಮಾಡಿದ್ದರು. ಪತ್ರಾವಳಿಗಳಲ್ಲಿ ಭೋಜನವಾಯಿತು. ಶ್ರೀ ಘನಶ್ಯಾಮದಾಸ ಬಿರ್ಲಾ, ಬಜಾಜ, ಬ್ಯಾಂಕರ, ಶ್ರೀ ಲಕ್ಷ್ಮಣಶಾಸ್ತ್ರಿ; ಮಹಾದೇವಭಾಯಿ ಮೊದಲಾದವರು ಭೋಜನಕ್ಕೆ ಬಂದಿದ್ದರು.

ಶರಣ ಸಂದೇಶ

ಶಾ. ಶ. ೧೮೫೫ ನೆಯ ಜ್ಯೇಷ್ಠ ಬ. ೧೨ ಸೋಮವಾರ.

ಇಪ್ಪತ್ತನೆಯ ಶತಮಾನದ

ಹರಳಯ್ಯ ಮಧುವಯ್ಯಗಳು !

ಶ್ರೀ ಬಸವಾದಿ ಪ್ರಮಥರು ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಮತೋದ್ಧಾರದ ಅದ್ಭುತ ಕಾರ್ಯವನ್ನು ಜರುಗಿಸಿದರಷ್ಟೆ. ಆಗ ಹರಳಯ್ಯನವರೆಂಬ ಒಬ್ಬ ಮಹಾ ಶಿವಶರಣರಿದ್ದರು. ಅವರು ಅಂತ್ಯಜರಲ್ಲಿ ಜನ್ಮಿಸಿದ್ದರೂ ತಮ್ಮ ಶಿವಭಕ್ತಿ ಶೀಲಾಚಾರಗಳಿಂದ ಮಹಾ ಶಿವಶರಣರಾಗಿದ್ದರು.

ಆ ಕಾಲದಲ್ಲಿ ಮಧುವಯ್ಯನವರೆಂಬ ಬ್ರಾಹ್ಮಣರು ವೀರಶೈವ ಮತ ದೀಕ್ಷೆಯನ್ನು ಹೊಂದಿ ತಮ್ಮ ಮಗಳನ್ನು ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಿದರು. ಈ ಮಹಾ ದಿವ್ಯ ವಿವಾಹಕ್ಕೆ ಶ್ರೀ ಬಸವಾದಿ ಪ್ರಮಥರ ಒಪ್ಪಿಗೆಯಿದ್ದಿತು. ಈ ಹರಳಯ್ಯ ಮಧುವಯ್ಯಗಳು ಈ ಪ್ರಕಾರ ವಿವಾಹ ಜರುಗಿಸಿ ಜಾತಿ ಸಂಕರಮಾಡಿದರೆಂದು ಮಂಚಣ್ಣ ಮೊದಲಾದ ಬ್ರಾಹ್ಮಣರು ರಾಜನಾದ ಬಿಜ್ಜಳನಲ್ಲಿ ದೂರು ಹೇಳಿ ಆ ಹರಳಯ್ಯ ಮಧುವಯ್ಯಗಳನ್ನು ಕೊಲ್ಲಿಸಿದರು.

ಈ ಹನ್ನೆರಡನೆಯ ಶತಮಾನದ ವಿಷಯವನ್ನು ಈಗ ಪ್ರಸ್ತಾಪಿಸಲು ಕಳೆದ ೧೬ ನೆಯ ತಾರೀಖಿನ ದಿವಸ ಪುಣೆಯಲ್ಲಿ ಜರುಗಿದ ಶ್ರೀ ದೇವದಾಸರ ಲಗ್ನವೇ ಕಾರಣವಾಯಿತು. ಈ ವಿವಾಹವನ್ನು ಪುಣೆಯ ಸನಾತನಿ ಬ್ರಾಹ್ಮಣ ವೃಂದವು ತಾ. ೧೪ ನೆಯ ರಾತ್ರಿ ಸಭೆಸೇರಿ ನಿಷೇಧಿಸಿತು. ಇಷ್ಟೇ ಅಲ್ಲ; ಗಾಂಧೀಜಿಯವರು ವರ್ಣ ಸಂಕರದ ಘೋರ ಪಾಪ ಪ್ರಸಾರಕರಾಗಿದ್ದಾರೆಂತಲೂ ಮೋಸಗಾರರೂ ವಂಚಕರೂ ಅಧರ್ಮಿಗಳೂ ಆಗಿದ್ದಾರೆಂತಲೂ ಶ್ರೀ. ಭೋಪಟಕರ ಮೊದಲಾದವರು ಆ ಸಭೆಯಲ್ಲಿ ಭಾಷಣಮಾಡಿದರು.

ಗಾಂಧೀಜಿಯವರು ಅಂತ್ಯಜರಲ್ಲಿ ಜನ್ಮಿಸಿದ್ದ ಸೌ. ಲಕ್ಷ್ಮೀ ದೇವಿಯನ್ನು ತಮ್ಮ ಮಗಳನ್ನಾಗಿ ಮಾಡಿಕೊಂಡಿದ್ದಾರಷ್ಟೆ. ಮತ್ತು ಆದಿಜನಗಳಿಗಾಗಿಯೇ ಸರಸ್ವವನ್ನೂ ಸೂರೆ ಮಾಡಿ ಆದಿ ಜನಗಳ ಪ್ರಾಣವಾಗಿಲ್ಲವೇ ? ಆದ ಕಾರಣ ಇವರು ಹರಳಯ್ಯನವರೆಂದು ತಿಳಿದರೆ ತಪ್ಪೇನು?

ಶ್ರೀ ರಾಜಗೋಪಾಲಾಚಾರ್ಯರಂತೂ ಬ್ರಾಹ್ಮಣರು. ಇವರು ಮಧುವಯ್ಯನವರೆಂದು ತಿಳಿಯಲು ಅಭ್ಯಂತರವೇ ಇಲ್ಲ. ಇವರು ತಮ್ಮ ಮಗಳನ್ನು ಹರಳಯ್ಯನವರಂತಿರುವ ಗಾಂಧೀಜಿಯವರ ಮಕ್ಕಳಾದ ದೇವದಾಸರಿಗೆ ಕೊಟ್ಟು ವಿವಾಹಮಾಡಿದುದು ಆ ೧೨ ನೆಯ ಶತಮಾನದ ಐತಿಹಾಸಿಕ ಅದ್ಭುತ ಕಾರ್ಯವನ್ನು ಜ್ಞಾಪಕಕ್ಕೆ ತರುವುದಿಲ್ಲವೇ ?

ಮಧುವಯ್ಯನವರು ಹರಳಯ್ಯನವರನ್ನು ಹೇಗೆ ಪೂಜ್ಯರೆಂದು ತಿಳಿದಿದ್ದರೋ ಹಾಗೆಯೇ ರಾಜಗೋಪಾಲಾಚಾರ್ಯರು ಈಗ ಗಾಂಧೀಜಿಯವರನ್ನು ತಿಳಿದಿದ್ದಾರೆ. ಆಗ ಹರಳಯ್ಯನವರು ಎಷ್ಟು ಶಿವಭಕ್ತರಿಗೆ ವಂದ್ಯರಾಗಿದ್ದರೋ ಅಷ್ಟು ಈಗ ಗಾಂಧೀಜಿಯವರು ರಾಷ್ಟ್ರಭಕ್ತರಿಗೆ ವಂದ್ಯರಾಗಿದ್ದಾರೆ. ಆಗ ಮಂಚಣ್ಣ ಮೊದಲಾದ ಸನಾತನಿಗಳು ಹೇಗೆ ಹರಳಯ್ಯ ಮಧುವಯ್ಯಗಳನ್ನು ದೂಷಿಸಿದರೋ ಹಾಗೆಯೇ ಈಗ ಶ್ರೀ ಭೋಪಟಕರ ಮೊದಲಾದ ಸನಾತನಿಗಳು ಗಾಂಧೀಜಿ ಮತ್ತು ಆಚಾರ್ಯರನ್ನು ಮನಬಂದಂತೆ ದೂಷಿಸುತ್ತಿದ್ದಾರೆ.

ಆಗ ಕಲ್ಯಾಣವು ಹೇಗೆ ವಿದ್ಯಾರ್ಥಿಗಳಿಗೆ ಕೇಂದ್ರಸ್ಥಾನವಾಗಿದ್ದಿತೋ ಹಾಗೆಯೇ ಈಗ ಪುಣೆ ಪಟ್ಟಣವಿದೆ. ಆದರೆ ಆಗ ಕಲ್ಯಾಣದಲ್ಲಿ ಸನಾತನಿಗಳ ರಾಜ್ಯವಿದ್ದಿತು. ಆದರೆ ಈಗ ಪುಣೆಯಲ್ಲಿ ಅವರ ರಾಜ್ಯವಿಲ್ಲ. ಹಾಗಿದ್ದಿದ್ದರೆ ಶ್ರೀ ಭೋಪಟಕರರಂಥ ಸನಾತನಿ ಮಂಚಣ್ಣನವರು ಖಂಡಿತವಾಗಿಯೂ ಗಾಂಧಿ-ಆಚಾರ್ಯರನ್ನು ಶೂಲಕ್ಕೇರಿಸುವ ಸೈತಾನಿ ಕಾರ್ಯವನ್ನು ಮಾಡಿಸುತ್ತಿರಲಿಲ್ಲವೇ ?

ಈ ಅಭಿನಂದನೀಯ ವಿವಾಹವನ್ನು ನಿಷೇಧಿಸುವಾಗ ಶ್ರೀ ಲವಾಟೆಯವರು ಇಂಗ್ಲಿಷ ಶಿಕ್ಷಣ ಪ್ರಸಾರದಿಂದ ಈ ಸಂಕರ ವಿವಾಹ ಸಂಭವಿಸಿತೆಂದು ಹೇಳಿದ್ದಾರೆ. ಹನ್ನೆರಡನೆಯ ಶತಮಾನದ ಈ ಹರಳಯ್ಯ ಮಧುವಯ್ಯಗಳ ಸಂಗತಿಯು ಅವರಿಗೇನುಗೊತ್ತು? ಆಗ ಇಂಗ್ಲಿಷ ಶಿಕ್ಷಣವಿದ್ದಿತೆ ? ವ್ಯಾಸಾದಿಗಳ ಕಾಲದಲ್ಲಿ ಇಂಗ್ಲಿಷ ಶಿಕ್ಷಣವಿದ್ದಿತೆ ? ವಿವೇಕಶಾಲಿಗಳೂ ಸತ್ಯಪ್ರಿಯರೂ ಆದ ಧರ್ಮಾತ್ಮರು ಯಾವಕಾಲದಲ್ಲಿದ್ದರೂ ಅವರು ಇದೇ ಪ್ರಕಾರ ನ್ಯಾಯವಾದ ರೀತಿಯಲ್ಲಿಯೇ ನಡೆಯುತ್ತಾರೆ .

ಗಾಂಧೀಜಿಯವರು ಹಿಂದು ಧರ್ಮೋದ್ಧಾರಕರೆಂದೇ ಹಿಂದು ಧರ್ಮಾಭಿಮಾನಿಗಳಾದ ಸುಧಾರಕರಂತು ತಿಳಿಯುತ್ತಿದ್ದಾರಷ್ಟೆ. ಇವರು ಕೂಡಾ ಇನ್ನೂ ವರ್ಣಗಳ ತೊಡಕಿನಲ್ಲಿದ್ದಾರೆಂದೇ ಸ್ಪಷ್ಟವಾಯಿತು. ಇಲ್ಲದಿದ್ದರೆ ಶ್ರೀ ದೇವದಾಸರಿಗೆ ಬ್ರಾಹ್ಮಣ ವರ್ಣದ ದೀಕ್ಷೆಯನ್ನೇಕೆ ಕೊಡಿಸಬೇಕಾಗಿದ್ದಿತು? ವಧೂವರರಿಬ್ಬರೂ ವೈಷ್ಣವ ಮತದವರೇ ಆಗಿಲ್ಲವೇ? ಹೀಗೆ ಒಂದೇ ಮತದವರಲ್ಲಿ ಸರಿಯಾದ ಶೀಲಾಚಾರಗಳುಳ್ಳವರಾಗಿರುವಾಗ ಶರೀರ ಸಂಬಂಧವಾಗಲು ಅಭ್ಯಂತರವೇನಿದ್ದಿತು? ವರ್ಣಾಂತರದ ದೀಕ್ಷೆಯೇಕೆ ಬೇಕಾಗಿದ್ದಿತು? ಇದರಿಂದ ದೇವದಾಸರು ಬೇರೆ ಗುಣಕರ್ಮಿಗಳಾದರೆ ?

ಇದರಿಂದ ಆಗಿನ ಹರಳಯ್ಯನವರಿಗಿಂತಲೂ ಈಗಿನ ಹರಳಯ್ಯನವರು ಧಾರ್ಮಿಕ ಸುಧಾರಣೆಯ ವಿಷಯದಲ್ಲಿ ಹಿಂದಿದ್ದಾರೆಂದು ವ್ಯಕ್ತವಾಗುವುದಿಲ್ಲವೇ? ಈಗಿನ ನವನಾಗರಿಕ ಕಾಲದಲ್ಲ ಈ ವಿವಾಹವನ್ನೇ ಅಭಿನಂದಿಸುವವರು ಎಂಟು ನೂರು ವರುಷಗಳ ಹಿಂದೆ ಜರುಗಿದ ಇದಕ್ಕಿಂತ ಶ್ರೇಷ್ಠತರವಾದ ಆ ವಿವಾಹವನ್ನೆಷ್ಟು ಅಭಿನಂದಿಸಿದರೂ ಕಡಿಮೆಯಲ್ಲವೇ?

ಹಿಂದುಸ್ಥಾನದಲ್ಲಿ ಯಾರು ಸಾಮಾಜಿಕ ಸುಧಾರಣೆಯನ್ನು ಮಾಡಬೇಕಾದರೂ ಆ ಬಸವೇಶನ ನಡೆ ನುಡಿಗಳನ್ನೇ ಅನುಸರಿಸಬೇಕಾಗಿದೆಯೆಂದು ಪಾಶ್ಚಾತ್ಯ ಇತಿಹಾಸಕಾರರು ಹೇಳಿದುದು ಸುಳ್ಳಲ್ಲ. ಈಗಲಾದರೂ ವೀರಶೈವರು ಜಾಗ್ರತರಾಗಿ ತಮ್ಮ ಪ್ರಾಚೀನ ಶಿವಶರಣರ ಪವಿತ್ರಾಚರಣೆಯನ್ನಾಚರಿಸಲು ಪ್ರವೃತ್ತರಾಗಲಿ, ಶ್ರೀ. ಬಸವಾದಿ ಪ್ರಮಥರು ಮಾಡಿದ ಸುಧಾರಣೆಯನ್ನೇ ಜಗದ್ವಂದ್ಯರು ಕೂಡಾ ಅನುಸರಿಸಲು ಈಗ ಪ್ರಾರಂಭಿಸಿರುವುದನ್ನು ನೋಡಿಯಾದರೂ ನಾವು ನಮ್ಮ ಶ್ರೇಷ್ಠ ತತ್ವಗಳ ವಿಷಯದಲ್ಲಿ ಆದರಾಭಿಮಾನಗಳುಳ್ಳವರಾಗೋಣ.

ಈ ಇಪ್ಪತ್ತನೆಯ ಶತಮಾನದ ಹರಳಯ್ಯ ಮಧುವಯ್ಯಗಳನ್ನು ಹೆಚ್ಚಾಗಿ ಮಧುವಯ್ಯನವರನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ. ಮತ್ತು ಶ್ರೀ. ಲಕ್ಷ್ಮೀ ದೇವದಾಸರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಿ ಈ ದಿವ್ಯ ದಂಪತಿಗಳಿಂದ ವಿಶೇಷವಾದ ರಾಷ್ಟ್ರಕಾರ್ಯಗಳನ್ನು ಮಾಡಿಸಲೆಂದು ಹಾರೈಸುತ್ತೇವೆ.

ಲಕ್ಷ್ಮೀ-ದೇವದಾಸರ ವಿವಾಹ.

ಗಾಂಧೀಜಿಯವರ ಉಪದೇಶ.

ಲಕ್ಷ್ಮೀ, ನಿನಗೆ ನಾನೇನು ಹೆಚ್ಚು ಹೇಳಲಿ? ನಿನ್ನನ್ನು ನಾನು ನೋಡುತ್ತ ಬಂದಾಗಿನಿಂದಲೂ ನಿನಗೆ ದೇವದಾಸನೇ ಯೋಗ್ಯ ವರನೆಂದು ನನಗೆ ತೋರುತ್ತ ಬಂದಿತು. ನೀನು ನಿನ್ನ ಹೆಸರಿನಂತೆ ಲಕ್ಷ್ಮಿಯಾಗಿರುತ್ತಿ. ಇದು ಧರ್ಮ ಸಮ್ಮತವಾದ ವಿವಾಹವಾಗಿದೆ, ನಿಮ್ಮಿಬ್ಬರ ಈವರೆಗಿನ ತಪಸ್ಸಿನ ಫಲವೇ ಈ ವಿವಾಹವಾಗಿದೆ. ನನಗೆ ಮಾತನಾಡಲು ಬಹು ಶ್ರಮವಾಗುತ್ತದೆ. ಆದರೂ ನಿಮ್ಮ ಕರ್ತವ್ಯ ಮತ್ತು ನಿಮ್ಮ ಮೇಲಿರುವ ಹೊಣೆಗಾರಿಕೆಯನ್ನು ತಿಳಿಸುವುದು ನನ್ನ ಕರ್ತವ್ಯವಾಗಿರುವುದರಿಂದ ಮಾತನಾಡಲೇಬೇಕಾಗಿದೆ.

ದೇವರು ನಿಮ್ಮನ್ನು ರಕ್ಷಿಸಲಿ. ಆತನೇ ಎಲ್ಲರ ಮಾತಾ, ಪಿತ ಮಿತ್ರ, ಸರ್ವವೂ ಆಗಿದ್ದಾನೆ. ಆತನನ್ನು ಸ್ಮರಿಸಿ ದೇಶಸೇವೆ ಮತ್ತು ಮಾನವ ಜಾತಿಯ ಸೇವೆಗಳಿಗಾಗಿ ನೀವು ನಿಮ್ಮ ದೇಹವನ್ನರ್ಪಿಸಿರಿ.

ಮಹಾತ್ಮರ ಈ ದಿವ್ಯೋಪದೇಶದನಂತರ ವಧೂವರರಿಗೆ ಕೆಲವರು ಪುಷ್ಪಹಾರಗಳನ್ನು ಹಾಕಿದರು. ಅನಂತರ ಸಕಲರಿಗೂ ಕೊಬ್ಬರಿ ಬೆಲ್ಲಗಳ ದೊನ್ನೆಯನ್ನು ಕೊಟ್ಟಮೇಲೆ ಈ ಸಮಾರಂಭ ಪೂರೈಸಿತು. ವಧೂವರರ ಅಭಿನಂದನಾರ್ಥ ಸಾಧಾರಣ ಒಂದು ನೂರು ತಂತಿಗಳು ಬಂದಿದ್ದವು. ಪೌರೋಹಿತ್ಯವನ್ನು ನಡೆಸಿದ ಶ್ರೀ ಲಕ್ಷ್ಮಣಶಾಸ್ತ್ರಿಗಳಿಗೆ ದಕ್ಷಿಣೆಯನ್ನು ಕೊಡಹೋಗಲು ಅವರು ಬೇಡವೆಂದು ಹೇಳಿದರು. ಅದನ್ನು ತೆಗೆದುಕೊಳ್ಳದೆ ಕಾರ್ಯ ಪೂರೈಸುವದಿಲ್ಲವೆಂದು ಹೇಳುವ ವಧೂವರರ ಕಡೆಯಿಂದ ಒಂದೊಂದು ರೂಪಾಯಿ ದಕ್ಷಿಣೆಯನ್ನು ಕೊಟ್ಟರು.

ಭೋಜನ ಸಮಾರಂಭ.

ಮಧ್ಯಾಹ್ನ ೧೧॥ ಗಂಟೆಗೆ ಲಗ್ನದ ಭೋಜನ ಸಮಾರಂಭವೂ ಜರುಗಿತು. ಶಿರಾ, ಪುರಿ, ಪಲ್ಲೆ, ಅನ್ನ, ಸಾರು, ಚಟ್ನಿ, ಕೋಸಂಬರಿ, ಇಷ್ಟೇ ಪದಾರ್ಥಗಳನ್ನು ಮಾಡಿದ್ದರು. ಪತ್ರಾವಳಿಗಳಲ್ಲಿ ಭೋಜನವಾಯಿತು. ಶ್ರೀ ಘನಶ್ಯಾಮದಾಸ ಬಿರ್ಲಾ, ಬಜಾಜ, ಬ್ಯಾಂಕರ, ಶ್ರೀ ಲಕ್ಷ್ಮಣಶಾಸ್ತ್ರಿ; ಮಹಾದೇವಭಾಯಿ ಮೊದಲಾದವರು ಭೋಜನಕ್ಕೆ ಬಂದಿದ್ದರು.

(೫ನೆಯ ಪುಟದಿಂದ ಬಂದಿದೆ.)

ಈ ಮಾತುಗಳನ್ನೆಲ್ಲ ಲಕ್ಷಿಸಿ ಹೊಸಪೇಟೆಯಲ್ಲಿ ಹೊಸವಾಗಿ ಸಕ್ಕರೆಯ ಒಂದು ದೊಡ್ಡ ಮಿಲ್ಲು ಸ್ಥಾಪಿತವಾಗುವದರಲ್ಲಿದೆ, ಅದರ ಅಧಿಕೃತ ಬಂಡವಾಳವು ೩೦ ಲಕ್ಷ. ಈಗ ಚಲನಕ್ಕೆ ನಿರ್ದಿಷ್ಟವಾದ ಬಂಡವಾಳವು ೧೪ ಲಕ್ಷ. ಇದರ ಆಡಳಿತದ ಹೊಣೆಯನ್ನೆಲ್ಲ "ಮೆಸರ್ಸ ಜಾನ್‌ಸನ್ ಆಂಡ್ ಕೊ, ಬಳ್ಳಾರಿ, ದಂಡು" ಇವರು ವಹಿಸಿಕೊಂಡಿದ್ದು ಕಂಪನಿಯ ಲಾಭದಲ್ಲಿ ೧೦೦ರಲ್ಲಿ ೧೦ಕ್ಕೆ ಇವರು ಭಾಧ್ಯರು. ಮತ್ತು ತಿಂಗಳಿಗೆ ೧೦೦೦ ರೂ. ಸೌಕರ್ಯ ಧನ (Allowance)ವು ಇವರಿಗೆ ಕಂಪನಿಯಿಂದ ಸಿಗಬೇಕೆಂಬ ಕರಾರಿದೆ. ಕಂಪನಿಯ ಬ್ಯಾಂಕರರು, ಆಡಿಟರರು, ಕೆಮಿಸ್ಟರು, ಮೊದಲಾದವರೆಲ್ಲರೂ ಪರದೇಶಿಯರೇ. ಡೈರೆಕ್ಟರರ ಪಟ್ಟಿಯಲ್ಲಿದ್ದ ರಾ. ಸಾ. ಧರ್ಮಲಿಂಗಂ ಪಿಳ್ಳೆ, ರಾ. ಸಾ ವಿ. ಸುಬ್ಬಯ್ಯ, ಮತ್ತು ಶ್ರೀ. ಆರ್. ನರಸಿಂಗ ರಾವಗಾರು ಈ ಮೂವರನ್ನು ಬಿಟ್ಟರೆ ಈ ಕಂಪನಿಯಲ್ಲಿ ಬೇರೆ ಭಾರತೀಯರೂ ಇಲ್ಲ. ಇಂಥ ದೊಡ್ಡ ವ್ಯವಹಾರದಲ್ಲಿ ಕನ್ನಡಿಗರ ಹೆಸರಂತೂ ಇಲ್ಲವೇ ಇಲ್ಲ ಹೊಸಪೇಟೆಯಂಥ ಅಚ್ಚಗನ್ನಡ ದೇಶದಲ್ಲಾಗುವ ಕಬ್ಬಿನ ಸಂಪತ್ತಿನ ಉಪಯೋಗವು ಪರಕೀಯರಿಗೆ, ವಿಶೇಷವಾಗಿ ಪರದೇಶದವರಿಗೆ, ಆಗುವದಿದೆ. ಹೊಸಪೇಟೆಯಲ್ಲಿಯೂ ಬಳ್ಳಾರಿಯಲ್ಲಿಯೂ ಅನೇಕ ದೊಡ್ಡ ಕರ್ನಾಟಕ ಶ್ರೀಮಂತರಿದ್ದಾರೆ. ಹೊಸಪೇಟೆಯಲ್ಲಿ ಇದುವರೆಗೆ ಅಪರಿಮಿತವಾಗಿ ಬೆಲ್ಲವನ್ನು ಅಲ್ಲಿಯವರು ಮಾಡುತ್ತ ಬಂದಿದ್ದಾರೆ. ಹಾಗೂ ಬೆಲ್ಲಕ್ಕಿಂತ ಸಕ್ಕರೆಯ ಉಪಯೋಗವೇ ಹೆಚ್ಚಾಗುತ್ತ ನಡೆದ ಈಗಿನಕಾಲದಲ್ಲಿ ಬೆಲ್ಲದವರು ಸಕ್ಕರೆಯನ್ನು ಮಾಡುವ ಉದ್ಯೋಗಕ್ಕೆ ತೊಡಗಬೇಕಾಗಿದೆ. ನಮ್ಮ ಕನ್ನಡ ಮಹಾಜನಗಳಿಗೆ ಮಹಾತ್ವಾಕಾಂಕ್ಷೆಯೇ ಇಲ್ಲವಲ್ಲಾ ಎಂದು ವಿಷಾದವೆನಿಸುತ್ತದೆ. **ಈಗಾದರೂ ನಮ್ಮ ಕನ್ನಡ ವರ್ತಕರು ಸಕಾಲದಲ್ಲಿ ಎಚ್ಚತ್ತು ತಮ್ಮ ದುಡ್ಡನ್ನು ತಾವೇ ಉಳಿಸಿಕೊಂಡು ತಮಗೆ ಲಾಭವನ್ನೇಕೆ ಮಾಡಿಕೊಳ್ಳಬಾರದು?**

ಇನ್ನು ಎಲ್ಲರೂ ಇಷ್ಟೊಂದು ದೊಡ್ಡ ಬಂಡವಾಳದಿಂದಲೇ ಮಿಲ್ಲುಗಳನ್ನು ಹಾಕಬೇಕೆಂದು ನಾವು ಹೇಳುವುದಿಲ್ಲ. ೧೦-೧೫ ಸಾವಿರ ರೂಪಾಯಿ ಬಂಡವಾಳದಿಂದಲೇ ಚಿಕ್ಕಚಿಕ್ಕ ಕಾರಖಾನೆಗಳನ್ನು ಹೂಡಿಸಬಹುದು. ಇಂಥ ಕಾರಖಾನೆಗಳು ಬಿಹಾರ ಓರಿಸಾ ಮತ್ತು ಬಂಗಾಲ ಪ್ರಾಂತಗಳಲ್ಲಿ ಕೆಲವು ಹೊಂಟಿವೆ. ಇಂಥವುಗಳನ್ನೇ ಚೆನ್ನಾಗಿ ವ್ಯವಸ್ಥೆಯಿಂದ ಸಾಗಿಸಿಕೊಂಡು ಹೋದರೆ ದೊಡ್ಡ ಬಂಡವಾಳದ ಗಿರಣಿಯವರಿಗೂ ಇವುಗಳೊಡನೆ ಸ್ಪರ್ಧೆಯನ್ನು ಮಾಡುವುದು ಶಕ್ಯವಿಲ್ಲವೆಂದು ತಜ್ಞರ ಅಭಿಪ್ರಾಯವಿದೆ. ಕಬ್ಬು ಬೆಳೆಯುವ ಪ್ರದೇಶದಲ್ಲಿ ಇಂಥ ಚಿಕ್ಕಚಿಕ್ಕ ಸಕ್ಕರೆಯ ಕಾರಖಾನೆಗಳನ್ನಾದರೂ ನಮ್ಮ ಕನ್ನಡ ವರ್ತಕರು ಸ್ಥಾಪಿಸಬೇಕೆಂದು ನಾವು ಸೂಚಿಸುತ್ತೇವೆ. ಅತ್ತ ಬೆಳಗಾಂವಿ ಜಿಲ್ಲೆಯಲ್ಲಿ ಸಂಕೇಶ್ವರದ ಕಡೆಗೆ ಈ ಬಗೆಯ ಪ್ರಯತ್ನವು ನಡೆದಿದೆಯೆಂಬುದು ಸಂತೋಷದಾಯಕವೇ ಸರಿ. ಇಂಥ ಸಕ್ಕರೆಯ ಕಾರಖಾನೆಯ ವಿಷಯವಾಗಿ ಶೀಘ್ರದಲ್ಲಿಯೇ ಕೆಲವು ಸಚಿತ್ರ ಲೇಖಾಂಕಗಳನ್ನು ಕನ್ನಡ ಪತ್ರಿಕೆಗಳಲ್ಲಿ ಪ್ರಸಿದ್ಧಿಸಬೇಕೆಂದು ನಮ್ಮ ವಿಚಾರವಿದೆ. ಅಷ್ಟರಲ್ಲಿಯೇ ಕರ್ನಾಟಕ ವರ್ತಕರಿಗಾರಿಗಾದರೂ ಈ ಉದ್ಯೋಗದ ಬಗ್ಗೆ ಮಾಹಿತಿಯು ಬೇಕಾಗಿದ್ದರೆ **ಗೌರವ ಕಾರ್ಯದರ್ಶಿಗಳು ಕರ್ನಾಟಕ ಚೇಂಬರ ಆಫ್ ಕಾಮರ್ಸ (ವಣಿಕ ಸಂಘ) ಗದಗ,** ಈ ವಿಳಾಸಕ್ಕೆ ಕಾಗದ ಬರೆದರೆ ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸಲಾಗುವುದು.

ಸೊಲ್ಲಾಪುರಕ್ಕೆ
ಶ್ರೀ ಉಜ್ಜನಿ ಸ್ವಾಮಿಯವರ ಆಗಮನ.
ಬೇಕಿ ಬೀಜವನ್ನು ಬಿತ್ತಿದರು!

ಈಗ ನಾಲ್ಕಾರು ತಿಂಗಳುಗಳಿಂದ ಶ್ರೀ ಉಜ್ಜನಿ ಸ್ವಾಮಿಯವರು ಈ ಸೊಲ್ಲಾಪುರಕ್ಕೆ ಬರಬೇಕೆಂದು ಬಾಳಿಯಲ್ಲಿ ಕುಳಿತುಕೊಂಡು ಬಹಳ ಪ್ರಯತ್ನಪಟ್ಟರು. ಇಲ್ಲಿಯ ಕೆಲವು ಪ್ರತಿಷ್ಠಿತ ಜನರು ಈ ಸ್ವಾಮಿಯವರನ್ನು ಕರಿಸಬೇಕೆಂದು ಹಟಹಿಡಿದರು. ಕೆಲವು ಪ್ರಮುಖರು ಈ ಸ್ವಾಮಿಗಳು ಪ್ರಮಥನಿಂದಕರಿರುವುದರಿಂದ ಕರಿಸಬಾರದೆಂದು ಹೇಳಿದರು. ಅನೇಕ ವಾದವಿವಾದವಾದವು. ಕಡೆಯಾಗಿ ವಿರುದ್ಧಪಕ್ಷದವರಿಗೆ ಹೊಡತಸಹ ಬಿತ್ತು. ಕಡೆಗೆ ಫಿರ್ಯಾದಿಯಾಗಿ ರಾಜಿ ಆಯಿತು. ಇಷ್ಟೆಲ್ಲಾ ಈ ಸ್ವಾಮಿಗಳು ಇಲ್ಲಿಗೆ ಬರುವ ಮುಂಚೆ ಶುಭ ಕಾರ್ಯಗಳು ನಡೆದವು.

ಇವನ್ನು ನೋಡಿ ಬ್ಯಾರಿಸ್ಟರ್ ಸರದಾರರಂಥ ತಟಸ್ಥ ಪುಢಾರಿ ಜನರು ಇಂಥಾ ಸ್ಥಿತಿಯಲ್ಲಿ ಶ್ರೀ ಸ್ವಾಮಿಗಳನ್ನು ಕರಿಸುವದು ನಮಗೆ ಯೋಗ್ಯವಲ್ಲ ಸ್ವಾಮಿಗಳಿಗೂ ಬರುವದು ಭೂಷಣವಲ್ಲ. ಅದಕ್ಕಾಗಿ ಶ್ರೀ ಬಸವಾದಿ ಪ್ರಮಥರನ್ನು ನಾವು ನಿಂದಿಸುವದಿಲ್ಲ. ಎಂದು ಸ್ವಾಮಿಗಳಿಂದ ವರ್ತಮಾನ ಪತ್ರಗಳಲ್ಲಿ ಜಾಹೀರ ಮಾಡಿಸಿರಿ. ಎಲ್ಲರೂ ಕೂಡಿ ಸ್ವಾಮಿಗಳನ್ನು ಕರೆಯಿಸಿರಿ. ಎಂದು ಯೋಗ್ಯ ಸಲ್ಲಾ ಕೊಟ್ಟರು. ಇಲ್ಲಿ ಪ್ರತಿಷ್ಠಿತ ಜನರು ಕೇಳಲಿಲ್ಲ. ಸ್ವಾಮಿಗಳೂ ಹಾಗೆ ಮಾಡಲಿಲ್ಲ ವಿರುದ್ಧಪಕ್ಷದ ಜನರೂ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಈ ಮೂವರೂ ಸೊಲ್ಲಾಪುರ ವೀರಶೈವ ಸಮಾಜದಲ್ಲಿ ಕಡೆಗೆ ಬೇಕಿ (ಅನೈಕ್ಯದ) ಬೀಜವನ್ನು ಬಿತ್ತಿದರು. ಇದರ ದುಷ್ಫಲ ಮುಂದೆ ನಾವೇ ಅನುಭವಿಸಬೇಕಾಗುತ್ತದೆ.

ಶ್ರೀ ಸ್ವಾಮಿಗಳೇನೋ ಈ ದಿನ ಬಂದು ನಾಳೆ ಹೋಗುವರು. ನಾವು ಮಾತ್ರ ಮುಂದೆ ಸಮಾಜ ಕಾರ್ಯದಲ್ಲಿ ಒಬ್ಬರಿಗೊಬ್ಬರು ವಿರೋಧಿಸುತ್ತಾ ಇರಬೇಕಾಗುತ್ತದೆ. ಹುಣ್ಣು ಹೋದರು ಹುಣ್ಣಿನ ಕಲೆ ಹೋಗುವದಿಲ್ಲ. ಎಂಬಂತೆ ಈ ಸ್ವಾಮಿಗಳು ಹೋದರು ಇಲ್ಲಿ ಇವರಿಂದ ಉಂಟಾದ ಬೇಕಿ ಮಾತ್ರ ಹೋಗುವದಿಲ್ಲ.

(೧೦ ನೆಯ ಪುಟಕ್ಕೆ ಮುಂದರಿದಿದೆ.)

ಸಮಾಚಾರ ಸಂಗ್ರಹ.

೬೦೦೦ ಜನರಿಗೆ ಚಬಕದ ಶಿಕ್ಷೆ!

—೧೨ ನೆ ಯ ತಾರೀಖಿನ ದಿವಸ ಕಾಮನ್ಸ ಸಭೆಯಲ್ಲಿ ಮಿ. ಟಾಮ ವಿಲ್ಸನ್ ಇವರ ಪ್ರಶ್ನೆಗೆ ಉತ್ತರ ಕೊಡುತ್ತಿರುವಾಗ ಮಿ. ಆರ್. ಎ. ಬಟ್ಲರ ಇವರು ಹೇಳಿದ್ದೇನಂದರೆ— ೧೯೩೧ ನೆ ಯ ಇಸ್ವಿಯಲ್ಲಿ ಹಿಂದುಸ್ಥಾನದ ಬೇರೆಬೇರೆ ಭಾಗಗಳಲ್ಲಿಯು ೬೦೦೦ ಜನರಿಗೆ ಚಬಕದ ಶಿಕ್ಷೆಯು ಕೊಡಲ್ಪಟ್ಟಿತು.

ನಾಝಿ ಅತ್ಯಾಚಾರ

—ಆಸ್ಟ್ರಿಯಾದಲ್ಲಿ ಪೋಲೀಸರು ನಾಝಿ ಜನರ ಮುಖ್ಯ ಸ್ಥಳವನ್ನು ಕೈವಶಮಾಡಿಕೊಂಡು ಅವರ ೨೦ ಜನ ಮುಂದಾಳುಗಳನ್ನು ಸೆರೆ ಹಿಡಿದಿರುವರು. ನಾಝಿಜನರು ಖಡ್ಗ ಮತ್ತು ಸ್ಫೋಟಕ ದ್ರವ್ಯಗಳನ್ನು ಸಿದ್ಧಪಡಿಸುವ ಒಂದು ಕಾರಖಾನೆಯು ಸಿಕ್ಕಿದೆ. ನಾಝಿ ಜನರು ೧ನೆಯ ತಾರೀಖಿನ ದಿವಸ ಇಬ್ಬರು ಮಂತ್ರಿಗಳನ್ನು ಕೊಲೆಮಾಡಲು ಬಹಳೇ ಪ್ರಯತ್ನ ಮಾಡಿದರು. ಮತ್ತು ನಗರದಲ್ಲಿ ಎಷ್ಟೋ ಅತ್ಯಾಚಾರಗಳನ್ನು ನಡೆಸಿದರು. ಚಿನಿವಾಲ ಪೇಟೆಯಲ್ಲಿ ಒಂದು ಸಿಡಿ ಗುಂಡು ಸಿಕ್ಕಿದೆ. ಆಸ್ಟ್ರಿಯಾ ಸರಕಾರದವರು ನಾಝಿ ಸೈನ್ಯಖಾತೆಯನ್ನು ತೆಗೆದುಹಾಕಿದ್ದು ಅವರ ನಾಣ್ಯಗಳನ್ನೂ ನಿಲ್ಲಿಸಲು ನಿಶ್ಚೈಸಿದ್ದಾರೆ.

ರಾಷ್ಟ್ರೀಯ ಸಭೆಯ ಮುಂದಿನ ಧೋರಣವೇನು?

ಮಹಾತ್ಮಾ ಗಾಂಧಿಯವರ ಪ್ರಕೃತಿಯು ಈಗ ಸ್ವಲ್ಪಸ್ವಲ್ಪ ಸುಧಾರಿಸಹತ್ತಿದೆ. ಅವರು ಹಾಸಿಗೆ ಬಿಟ್ಟು ಎದ್ದು ಕೂಡ್ರಲು ಶಕ್ತಿಯುಳ್ಳವರಾಗಿರುತ್ತಾರೆ. ಆದರೂ ರಾಜಕಾರಣದಂಥ ಗಡಚಾದ ವಿಷಯದಲ್ಲಿ ಮನಸ್ಸು ಹಾಕುವಷ್ಟು ಶಕ್ತಿಯುಳ್ಳವರಾಗಿಲ್ಲ. ರಾಜಕಾರಣದಲ್ಲಿ ಇನ್ನೂ ವಿಚಾರಮಾಡಬಾರದೆಂದೇ ಡಾಕ್ಟರರ ಅಭಿಪ್ರಾಯವಿದೆ. ಆದುದರಿಂದ ರಾಷ್ಟ್ರೀಯ ಸಭೆಯ ಅಧ್ಯಕ್ಷರ ಸಂಗಡ ವಿಚಾರವಿನಿಮಯವಾಗದೆ ಕಾಯದೇಭಂಗ ಚಳವಳಿಯನ್ನು ನಿಲ್ಲಿಸುವ ಕಾಲವನ್ನು ಇನ್ನೂ ಸ್ವಲ್ಪ ಬೆಳೆಸುವರೆಂದು ಕಾಣಿಸುತ್ತಿದೆ.

ಹ್ಯಾರಿ ಹೇಗರ ಕಡೆಗೆ ಶಿಷ್ಟ ಮಂಡಳ

ಅಸೆಂಬ್ಲಿ ಸಭಾಸದರ ಒಂದು ಶಿಷ್ಟ ಮಂಡಲವು ೧೩ನೆಯ ತಾರೀಖಿನ ದಿವಸ ಹೋಗಿದ್ದಿತು. ಅವರು ತಮ್ಮ ಅಭಿಪ್ರಾಯವನ್ನು ಹೆಗ್ ಸಾಹೇಬರ ಮುಂದೆ ಮಂಡಿಸಿದರು, ಅಂದಮಾನದಲ್ಲಿ ಮೃತ್ಯು ಹೊಂದಿದ ಮೂವರ ಕಾರಾಗೃಹ ವಾಸಿಗಳ ವಿಷಯದಲ್ಲಿ ಸರಕಾರದವರು ಹೊರಡಿಸಿದ ಪತ್ರಗಳಿಂದ ಜನತೆಯು ಸಮಾಧಾನವಾಗಿಲ್ಲವೆಂದೇ ಅವರ ಅಭಿಪ್ರಾಯ. ರಾಜಕೀಯ ಕಾರಾಗೃಹವಾಸಿಗಳ ವಿಷಯದಲ್ಲಿ ಇನ್ನೂ ಒಂದು ಪತ್ರಕವನ್ನು ಸರಕಾರದವರು ಹೊರಡಿಸುವರೆಂದು ಹೇಗ ಸಾಹೇಬರು ಅವರಿಗೆ ಆಶ್ವಾಸನ ಕೊಟ್ಟರು.

ಮದ್ರಾಸದ ಹತ್ತಿರ ಅಗ್ನಿ ಪ್ರಲಯ

ಮದ್ರಾಸ ಪಟ್ಟಣದ ಹತ್ತಿರ ಗ್ರೆ ನಗರದಲ್ಲಿ ೧೨ನೆಯ ತಾರೀಖಿನ ದಿವಸ ರಾತ್ರಿ ಬೆಂಕಿ ಹತ್ತಿ ೩೦೦ ಗುಡಿಸಲುಗಳು ಸುಟ್ಟವು. ೧೦೦೦ ಜನ ಆದಿ ದ್ರಾವಿಡರು ನಿರಾಶ್ರಿತರಾದರು. ಅದೇ ಭಾಗದಲ್ಲಿಯೇ ಪುನಃ ಮರುದಿವಸ ಬೆಂಕಿ ಹತ್ತಿ ಸುಮಾರು ೬೦ ಗುಡಿಸಲುಗಳು ಸುಟ್ಟುಹೋದವು.

ಜಾಗತಿಕ ಆರ್ಥಿಕ ಪರಿಷತ್ತು

೧೩ನೆಯ ತಾರೀಖಿನ ದಿವಸ ಜಾಗತಿಕ ಆರ್ಥಿಕ ಪರಿಷತ್ತಿನ ಕಾರ್ಯವು ಮುಂದೆ ಸಾಗಿತು. ಫ್ರೆಂಚ, ಜಪಾನಿ, ಇಟಾಲಿಯನ್, ದಕ್ಷಿಣ ಆಫ್ರಿಕನ್ ಮತ್ತು ಜರ್ಮನ್ ಪ್ರತಿನಿಧಿಗಳ ಭಾಷಣಗಳಾದವು. ಸುವರ್ಣ ಪರಿಮಾಣವನ್ನು ಪುನಃ ಸ್ಥಾಪಿಸುವದು, ಹುಂಡಣಾವಳಿಯನ್ನು ಸ್ಥಿರಪಡಿಸುವುದು, ವ್ಯಾಪಾರದ ಮೇಲೆ ಕರವನ್ನು ಕಡಿಮೆ ಮಾಡುವದು. ಇವುಗಳ ಮೇಲೆಯೇ ಬಹುತರವಾಗಿ ಎಲ್ಲರೂ ಹೆಚ್ಚು ಮಹತ್ವ ಕೊಟ್ಟು ಮಾತನಾಡಿದರು. ಇದೇ ತಾರೀಖಿಗೆ ಅಮೇರಿಕೆಯ ಪ್ರತಿನಿಧಿ ಮಿ. ಕಾರ್ಡೆಲ್ ಹಲ್ ಇವರು ಭಾಷಣಮಾಡುವವರಿದ್ದರು. ಆದರೆ ಅಮೇರಿಕನ್ ಪ್ರತಿನಿಧಿಗಳಾರೂ ಇಲ್ಲದ್ದು ಕಂಡು ಸಭೆಯವರಿಗೆ ಆಶ್ಚರ್ಯವಾಯಿತು. ಪರಿಷತ್ತಿನ ಕಾರ್ಯಕ್ರಮದಲ್ಲಿಲ್ಲದ ಯುದ್ಧ ವೆಚ್ಚದ ವಿಷಯದಲ್ಲಿಯೇ ಎಲ್ಲರೂ ಮಹತ್ವ ಕೊಟ್ಟು ಮಾತಾಡಿದ್ದರಿಂದ ಅವರು ಬಂದಿರಲಿಕ್ಕಿಲ್ಲವೆಂದು ಅನುಮಾನಿಸಲಾಗಿದೆ.

ಬಂಗಾಲದಲ್ಲಿ ಆದಿಜನೋದ್ಧಾರ.

ಬಂಗಾಲದಲ್ಲಿ ಅಸ್ಪೃಶ್ಯ ಸೇವಕ ಸಮಾಜದವರ ಪ್ರಯತ್ನದಿಂದ ಆದಿಜನರಿಗಾಗಿ ಒಟ್ಟಿಗೆ ೩೪ ದೇವಾಲಯಗಳು ತೆರೆಯಲ್ಪಟ್ಟವೆ. ಕಾಲೀ ಘಾಟದಲ್ಲಿಯ ಪ್ರಸಿದ್ಧ ಕಾಲೀನಾತಾ ದೇವಾಲಯವೂ, ಕಲಕತ್ತೆಯ ಉತ್ತರ ಭಾಗದಲ್ಲಿಯ ಸಿದ್ಧೇಶ್ವರೀ ದೇವಾಲಯವೂ. ಡಾಕಾದಲ್ಲಿಯ ಢಾಕೇಶ್ವರೀ ದೇವಾಲಯವೂ ಮತ್ತು ಬಂಗಾಲೀ ವೈಷ್ಣವರು ಅತ್ಯಂತ ಪೂಜ್ಯವೆಂದು ತಿಳಿದ ಗೌರಿಯಾ ಮಠವು ಮೇಲ್ಕಾಣಿಸಿದ ದೇವಾಲಯಗಳಲ್ಲಿ ಇರುತ್ತವೆ. ಮತ್ತು ಹೊಸ ಹೊಸ ದೇವಾಲಯಗಳು ನಿರ್ಮಿಸಿ ಸರ್ವ ಹಿಂದುಗಳಿಗೂ ಮುಕ್ತವಾಗಿರುತ್ತವೆ. ಮತ್ತು ೩೧೮೩ ಬಾಲಕರು ೩೧೮ ಬಾಲಿಕೆಯರು ಫೀ ಇಲ್ಲದೆ ಉಚಿತವಾಗಿ ಶಿಕ್ಷಣ ಹೊಂದುತ್ತಿದ್ದಾರೆ.

ಶ್ರೀ. ಹರಕಾರೆ ಇವರ ಮೇಲೆ ನೋಟೀಸು

ಮ. ಗಾಂಧಿ, ಮದನಮೋಹನ ಮಾಲವೀಯ, ಭಾರತ ಮಂತ್ರಿ, ವ್ಹಾಯಿಸರಾವ ಇವರ ಮೇಲೆ ಫಿರ್ಯಾದು ಮಾಡಿದ ವಿಚಿತ್ರ ವ್ಯಕ್ತಿಯಾದ ಶ್ರೀ ಹರಕಾರೆ ಇವರ ಮೇಲೆ ಪುಣೆಯ ಫರ್ಸ್ಟ ಕ್ಲಾಸ ಸಬ್‌ಜಜ್ಜರು ಶುಭ್ರಪತ್ರದ ಪತ್ರವ್ಯವಹಾರವನ್ನು ಕೋರ್ಟಿಗೆ ತೋರಿಸಿ ಕೋರ್ಟಿನ ಅಸಮಾನ ಮಾಡಿದ್ದರಿಂದ ನಿಮ್ಮ ಮೇಲೆ ಮೊಕದ್ದಮೆಯನ್ನು ಯಾಕೆ ಮಾಡಬಾರದೆಂಬುವದಕ್ಕೆ ಕಾರಣಗಳನ್ನು ತೋರಿಸಬೇಕೆಂದು ಒಂದು ನೋಟೀಸು ತೆಗೆದಿರುವರು.

ಶ್ರೀ ಲಕ್ಷ್ಮೀದೇವಿಯವರ ಪರಿಚಯ.

ಕುಮಾರಿ ಲಕ್ಷ್ಮೀದೇವಿ ಇವರು ತಮ್ಮ ತಂದೆ ಶ್ರೀ. ರಾಜಗೋಪಾಲಾಚಾರಿ. ಬಂಧು ಶ್ರೀ ನರಸಿಂಹ ಮತ್ತು ಜ್ಯೇಷ್ಠ ಭಗಿನಿ ಸೌ. ನಾಮಗಿರಿ ಇವರ ಸಂಗಡ ೧೧ನೆಯ ತಾರೀಖಿನ ದಿವಸ ಪುಣೆ ಸ್ಟೇಶನಕ್ಕೆ ಬಂದರು. ಅವರ ಸ್ವಾಗತಕ್ಕಾಗಿ ಮಹಾತ್ಮಾಜಿಯವರ ಪರಮ ಶಿಷ್ಯರಾದ ಶ್ರೀ. ಮಹಾದೇವ ಭಾಯಿ ದೇಸಾಯಿ, ರಾಮದಾಸ ಗಾಂಧಿ. ಶ್ರೀ. ಮಥುರಾದಾಸ ತ್ರಿಕಮಜಿ ಮೊದಲಾದವರು ಬಂದಿದ್ದರು. ಲಕ್ಷ್ಮೀದೇವಿಯು ಗೌರವರ್ಣದವಳಿದ್ದು ಅವಳ ಮುಖಮುದ್ರೆಯು ತಂದೆಯ ಹಾಗೆಯೇ ಇರುತ್ತದೆ, ಅವಳ ಇಂಗ್ಲೀಷ ಶಿಕ್ಷಣವು ಮನೆಯಲ್ಲಿಯೇ ಆಗಿದ್ದರೂ ಉತ್ತಮವಾಗಿದೆ, ಮಾತೃಭಾಷೆಯು ತಮಿಳು, ಆದರೂ ಹಿಂದೀ ಭಾಷೆಯನ್ನು ಚನ್ನಾಗಿ ಆಡಬಲ್ಲಳು. ಮತ್ತು ವ್ಯವಹಾರಕ್ಕೆ ಬೇಕಾಗುವಷ್ಟು ಗುಜರಾಥಿಯನ್ನೂ ಸಹ ಮಾತಾಡುತ್ತಾಳೆ.

ಹಿಂದೀ ವೈಮಾನಿಕನ ಸಾಹಸ

ಸುಪ್ರಸಿದ್ಧ ಹಿಂದೀ ವೈಮಾನಿಕ ಮಿ. ಚಾವಲಾ ಇವರು ವಿಮಾನದಿಂದ ಪೃಥ್ವೀ ಪ್ರದಕ್ಷಿಣೆಯನ್ನು ಮಾಡುವ ಸಾಹಸ ನಡೆಸಿದ್ದಾರೆ. ಅದಕ್ಕೆ ೩೫ ಸಾವಿರ ರೂ. ವೆಚ್ಚ ಬರುವದು, ಅದಕ್ಕಾಗಿ ಮಿ. ಚಾವಲಾ ಇವರಿಗೆ ದ್ರವ್ಯ ಸಹಾಯ ಮಾಡುವದಕ್ಕಾಗಿ ಡಾ. ಮುಂಜೆ ಮತ್ತು ಶೇಠ ಘನಶ್ಯಾಮದಾಸ ಇವರು ಒಂದು ವಿನಂತಿ ಪತ್ರಕವನ್ನು ಹೊರಡಿಸಿದ್ದಾರೆ. ಮಿ. ಚಾವಲಾ ಇವರು ಇಲ್ಲಿಯವರೆಗೆ ೧೬೪೫೦ ರೂ. ಕೂಡಿಸಿದ್ದಾರೆ.

(ಆನೆಯ ಪುಟದಿಂದ ಬಂದಿದೆ.)

ಶ್ರೀ ಸ್ವಾಮಿಗಳ ಆಗಮನ.

ಶ್ರೀ ಉಜ್ಜನಿ ಸ್ವಾಮಿಗಳವರು ೧೨ ನೆಯ ತಾರೀಖು ಸೋಮವಾರ ಇಲ್ಲಿಗೆ ಆಗಮಿಸಿದರು. ಬೆಳಿಗ್ಗೆ ೯ ಗಂಟೆಗೆ ಶ್ರೀ ಸಿದ್ಧೇಶ್ವರ ಗುಡಿಯಿಂದ ಇವರ ಅಡ್ಡಪಲ್ಲಕ್ಕಿ ಉತ್ಸವ ಹೊರಟಿತು. ಶ್ರೀ ಬಾಬಾಸಾಹೇಬ ವಾರದ, ಶ್ರೀ ನಾಗಪ್ಪ ಅಬ್ದುಲಪುರಕರ, ಶ್ರೀ ಧುಮ್ಮಾ ವಕೀಲ, ಡಾ. ದೇಶಮುಖ ಮೊದಲಾದ ಪ್ರತಿಷ್ಠಿತ ಜನರು ಈ ಉತ್ಸವದಲ್ಲಿ ಭಾಗ ತೆಗೆದುಕೊಂಡಿದ್ದರು. ಮುಖ್ಯ ಬಾಜಾರಗಳಲ್ಲಿ ಉತ್ಸವ ಆಯಿತು. ಕೆಲವು ಕಡೆ ಕಮಾನ ವಗೈರೆ ಕಟ್ಟಿ ಶೃಂಗಾರ ಮಾಡಿದ್ದರು. ಸ್ವಾಮಿಯವರಿಗೆ ಅಲ್ಲಲ್ಲಿ ಜನರು ಹಾರ ಹಾಕಿದರು. ಇಲ್ಲಿಯ ಮುನಸಿಪಲ್ ಕೌನ್ಸಿಲರ್ ಮಿ. ದಾವುದ ಸಾಹೇಬ ಎಂಬ ಮುಸಲ್ಮಾನ ಗೃಹಸ್ಥರು ಸ್ವಾಮಿಯವರಿಗೆ ಹಾರ ಹಾಕಿದರು. ಕಡೆಗೆ ಸ್ವಾಮಿಯವರನ್ನು ಶ್ರೀ ಧೋಬಡೆಯವರ ಮನೆಯಲ್ಲಿ ಇಳಿಸಿದರು.

ಶ್ರೀ ಸ್ವಾಮಿಗಳ ನಿಷೇಧ.

ಈ ಪ್ರಕಾರ ಒಂದು ಪಕ್ಷದ ಜನರು ಶ್ರೀ ಸ್ವಾಮಿಗಳನ್ನು ಕರೆದುಕೊಂಡು ಬಂದರೆ ಇನ್ನೊಂದು ಪಕ್ಷದವರು ನಿಷೇಧ ಮಾಡಿದರು. ಶ್ರೀ ವಾರದ ಇವರ ಅಧ್ಯಕ್ಷತೆ ಕೆಳಗೆ ಸ್ವಾಮಿಗಳ ಸ್ವಾಗತ ಮಂಡಲ ಏರ್ಪಟ್ಟಿತ್ತು. ಶ್ರೀ ಕಲ್ಯಾಣಶೆಟ್ಟಿ ಇವರ ಅಧ್ಯಕ್ಷತೆ ಕೆಳಗೆ ಸ್ವಾಮಿಯವರ ಆಗಮನ ನಿಷೇಧಮಂಡಳ ಏರ್ಪಟ್ಟಿತ್ತು. ಈ ನಿಷೇಧ ಮಂಡಲಿಯವರು ಈ ಪ್ರಕಾರ ಜಾಹೀರಪತ್ರ ಹಂಚಿದ್ದರು.

ತಾ. ೬-೬-೩೩ನೇ ದಿನ ಶ್ರೀ. ಗಂಗಪ್ಪ ಜೀರಗೆ ಇವರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿ ಶ್ರೀ ಉಜ್ಜನಿ ಸ್ವಾಮಿ ಆಗಮನ ನಿಷೇಧ ಮಂಡಲಿ ಸ್ಥಾಪನವಾಯಿತು. ಈ ಮಂಡಲಿಯವರು ಮೂರು ಠರಾವು ಮಾಡಿದ್ದಾರೆ. ೧ ಉಜ್ಜನಿ ಸ್ವಾಮಿಗಳ ಸ್ವಾಗತ ಮಂಡಳ ಎಂದು ಇಲ್ಲಿ ಸ್ಥಾಪನೆ ಆದದ್ದು ಸೊಲ್ಲಾಪುರ ವೀರಶೈವ ಸಮಾಜದ ಕಡೆಯಿಂದ ಆಗಿಲ್ಲ. ಕೆಲವು ಜನರು ಕೂಡಿ ಮಾಡಿಕೊಂಡಿದ್ದಾರೆ. ಆದಕಾರಣ ಸೊಲ್ಲಾಪುರ ವೀರಶೈವ ಸಮಾಜ ಶ್ರೀ ಸ್ವಾಮಿಯವರನ್ನು ಸ್ವಾಗತ ಮಾಡಿಲ್ಲ. ಹಾಗೆ ಮಾಡಿದಂತೆ ಈ ಸ್ವಾಗತ ಮಂಡಳಿಯವರು ಶ್ರೀ ಸ್ವಾಮಿಗಳವರಿಗೆ ಆಮಂತ್ರಣ ಕೊಟ್ಟದ್ದನ್ನು ಈ ಮಂಡಳಿ ನಿಷೇಧಿಸುತ್ತದೆ. (೨) ಈ ಉಜ್ಜನಿ ಸ್ವಾಮಿಯವರು ಜಗದ್ಗುರುಗಳಲ್ಲ. ಹೀಗಿದ್ದು ಜಗದ್ಗುರುವೆಂದು ಅಡ್ಡ ಪಲ್ಲಕ್ಕಿಯಲ್ಲಿ ಬರುವದನ್ನು ಈ ಮಂಡಳಿಯು ನಿಷೇಧಿಸುತ್ತದೆ. (೩) ಅಖಿಲ ವೀರಶೈವ ಸಮಾಜಕ್ಕೆ ಪೂಜ್ಯರಾದ ಶ್ರೀ ಬಸವಾದಿ ಪ್ರಮಥರನ್ನು ಈ ಉಜ್ಜನಿ ಸ್ವಾಮಿಗಳು ನಿಂದಿಸುತ್ತ ಅಂಥ ನಿಂದಕರ ಚಳವಳಿಗೆ ಇವರು ಸಹಾಯ ಮಾಡುತ್ತಾ ಇದ್ದಾರೆ. ಇಂಥವರು ಈ ಪಟ್ಟಣಕ್ಕೆ ಬರುವುದು ಅಶುಭವೆಂದು ಇವರ ಆಗಮನದ ಯಾವ ಕಾರ್ಯಕ್ರಮದಲ್ಲಿಯೂ ನಾವು ಭಾಗ ತೆಗೆದುಕೊಳ್ಳದೆ ಆ ಎಲ್ಲಾ ಕಾರ್ಯಕ್ರಮಗಳ ಮೇಲೆ ಬಹಿಷ್ಕಾರ ಹಾಕುತ್ತೇವೆ.

ಈ ನಿಷೇಧ ಮಂಡಳಿಯ ಕೆಲವು ಹೆಸರು ಇಲ್ಲಿ ಸಮಾಚಾರ ಪತ್ರದಲ್ಲಿ ಪ್ರಕಟವಾಗಿವೆ. ಶ್ರೀ. ಬಸಲಿಂಗಪ್ಪ ಕಲ್ಯಾಣಶೆಟ್ಟಿ, ಶ್ರೀ. ನಿಂಬರಗಿ, ಶ್ರೀ. ಅಣ್ಣಾರಾವ ಥಂಗೆ, ಶ್ರೀ. ಸಿದ್ಧರಾಮಪ್ಪ ಹಿಂಗಮಿರೆ, ಶ್ರೀ. ಶಿವಶಂಕರಪ್ಪ ಜೀರಿಗೆ ಶ್ರೀ. ವಕೀಲ ಸಿದ್ಧಮಲ್ಲಪ್ಪ ಕಲ್ಯಾಣಶೆಟ್ಟಿ ಮೊದಲಾದ ನೂರಾರು ಪ್ರಮುಖ ಜನರು ಈ ನಿಷೇಧ ಮಂಡಳದಲ್ಲಿದ್ದಾರೆ.

ಬೇಕಾದರೆ ಆಧಾರ ತೆಗೆದುಕೊಳ್ಳಿರಿ.

ಈ ನಿಷೇಧ ಮಂಡಳದವರು ತಾ.೧೦-೬-೩೩ ನೇ ದಿನ ಒಂದು ಜಾಹೀರಾತು ತೆಗೆದು ಅದರಲ್ಲಿ ಈ ಉಜ್ಜನಿ ಸ್ವಾಮಿಗಳು ಶ್ರೀ ಬಸವಾದಿ ಪ್ರಮಥರ ನಿಂದಕರೆಂಬ ಬಗ್ಗೆ ಇವರ ಗುರುಗಳ ಹೇಳಿದ್ದನ್ನೇ ಆಧಾರ ಕೊಟ್ಟಿದ್ದಾರೆ ಅದು ಹೀಗಿದೆ —

"ಶ್ರೀ ಉಜ್ಜನಿ ಸದ್ಧರ್ಮಸಿಂಹಾಸನಾಧಿಪತಿ ಶ್ರೀ ಮರುಳಸಿದ್ಧ ರಾಜ ದೇಶಿಕೇಂದ್ರ ಮಹಾಸ್ವಾಮಿಯವರು ತಾ. ೨೦-೨-೨೪ನೇ ದಿನ ಒಂದು ಜಾಹೀರ ಪತ್ರ ತೆಗೆದು ಅದರಲ್ಲಿ ನಮ್ಮ ಶಿಷ್ಯ ಸಿದ್ಧ ಲಿಂಗ ಚರಮೂರ್ತಿ (ಈಗ ಬಾರ್ಶಿಯಲ್ಲಿದ್ದ ಸ್ವಾಮಿ) ಬಸವಾದಿ ಪ್ರಮಥರನ್ನು ನಿಂದಿಸುವವರ ಟೋಳಿಗೆ ಕೂಡಿ ಅವರಲ್ಲಿ ಅಗ್ರೇಸರ ಆಗಿದ್ದಾರೆ."

ಇಂಥ ಪ್ರಮಥ ನಿಂದಕರ ಆಗಮನದ ಕಾರ್ಯಕ್ರಮದಲ್ಲಿ ವೀರಶೈವ ಅಭಿಮಾನಿಯಾರೂ ಭಾಗತೆಗೆದುಕೊಳ್ಳಬಾರದು ಮತ್ತು ಇವರಿಗೆ ಭಿಕ್ಷಾ ಕೊಡಬಾರದು. ಎಂದು ಜಾಹೀರ ಮಾಡಿದ್ದಾರೆ.

ಶ್ರೀ ಸ್ವಾಮಿಗಳಿಗೆ ಆಹ್ವಾನ.

ಇಲ್ಲಿಯ ಶಿವಶರಣ ಸಂಘದ ಅಧ್ಯಕ್ಷ ಶ್ರೀ ರೇವಣಸಿದ್ಧ ಶಿವಶರಣ ಮಹಾಸ್ವಾಮಿ ಅಕ್ಕಲಕೋಟಕರ ಇವರು ತಾ.೧೧-೬-೩೩ನೇ ದಿನ ಶ್ರೀ ಉಜ್ಜನಿ ಸ್ವಾಮಿಗಳಿಗೆ ನಾಲ್ಕು ಪ್ರಶ್ನೆಗಳನ್ನು ಮಾಡಿದ ಜಾಹೀರ ಪತ್ರವನ್ನು ಹಂಚಿದ್ದಾರೆ. ಈ ಪ್ರಶ್ನೆಗಳನ್ನು ಇಲ್ಲಿಯ ಉಜ್ಜನಿ ಶ್ರೀ ಸ್ವಾಮಿ ಸ್ವಾಗತ ಮಂಡಲಿಕ್ಕೆ ಕಳಿಸಿ ಸ್ವಾಮಿಗಳಿಂದ ಉತ್ತರ ಕೊಡಿಸಿರಿ. ಇಲ್ಲವೆ ವಾದವಿವಾದಕ್ಕೆ ಬರುತ್ತಿದ್ದರೆ ನಾವು ೨ ಜನರನ್ನು ಕರೆದುಕೊಂಡು ಬರುತ್ತೇವೆ. ಎಂದು ತಿಳಿಸಿದ್ದಾರೆ. ಆ ಪ್ರಶ್ನೆ ಹೀಗೆ ಇವೆ.

(೧) ಅಖಿಲ ವೀರಶೈವರಿಗೆ ಪರಮಪೂಜ್ಯರಾಗಿರತಕ್ಕ ಶ್ರೀ ಬಸವೇಶ್ವರ, ಪ್ರಭುದೇವ, ಚನ್ನಬಸವೇಶ್ವರ ಮತ್ತು ಸೊಲ್ಲಾಪುರದ ಗ್ರಾಮ "ದೇವರಾದ ಶ್ರೀ ಸಿದ್ಧರಾಮೇಶ್ವರ ವಗೈರೆ ಪ್ರಮಥ ಸಮೂಹ ನಿಮಗೂ ಪರಮಪೂಜ್ಯ ಇದ್ದಾರೋ? ಇಲ್ಲವೋ? ಅವರು ಉಪದೇಶ ಮಾಡಿದ ತತ್ವ ನಿಮಗೆ ಮಾನ್ಯ ಮತ್ತು ಪ್ರಮಾಣ ಇರುತ್ತವೋ? ಇಲ್ಲವೋ?

(೨) ಪಂಚಮರ ಮಕ್ಕಳು ಪಟ್ಟಾಧಿಕಾರಿಗಳಾಗಿ ಪೂಜ್ಯರಾಗುತ್ತಾರೋ ಇಲ್ಲವೋ?

(೩) ಮಠಪತಿಯು ಮಠಾಧ್ಯಕ್ಷ ಮತ್ತು ಪಟ್ಟಾಧಿಕಾರಿ ಆಗುತ್ತಾನೋ ಇಲ್ಲವೋ?

(೪) ಹಿರೇಮಠಾಧಿಕಾರಿಯು ಪಂಚಾಚಾರ್ಯ ಸಿಂಹಾಸನಾಧಿಪತಿ ಆಗಲಿಕ್ಕೆ ಬರುತ್ತದೋ? ಇಲ್ಲವೋ?

ಬಸವ ಪ್ರತಾಪ.

ಈ ಉಜ್ಜನಿ ಶ್ರೀ ಸ್ವಾಮಿಗಳು ನಮ್ಮ ಮಹಾರಾಷ್ಟ್ರ ದೇಶಕ್ಕೆ ಬಂದಮೇಲೆ ಈ ಭಾಗದಲ್ಲಿ ಗುರುವರ್ಗ ವಿರಕ್ತವರ್ಗದ ಚಳವಳಿ ಹೆಚ್ಚಾಗಿರುತ್ತದೆ. ಬಸವಾದಿ ಪ್ರಮಥರ ನಿಂದೆ ನಡೆವದೆ. ವೀರಶೈವ ಕೇಸರಿ ವೀರಶೈವ ಗರ್ಜನಾ ಎಂಬ ಮರಾಠಿ ಪತ್ರಗಳು ಪಂಚಾಚಾರ್ಯ ಸಂಗಡದವಿದ್ದು ಜನರಲ್ಲಿ ಕೆಟ್ಟ ವಿಚಾರ ಹುಟ್ಟಿಸುತ್ತವೆ. ಆದಕಾರಣ ಈ ಪ್ರಮಥನಿಂದಕ ಪಕ್ಷದ ಚಳವಳಿಗೆ ಜನರು ಬಿದ್ದು ಕೆಡಬಾರದೆಂದು ಇಲ್ಲಿ ಬಸವ ಪ್ರತಾಪ ಎಂಬ ಮರಾಠಿ ಸಾಪ್ತಾಹಿಕ ಪತ್ರವನ್ನು ಪ್ರಮಥ ಪಕ್ಷದವರು ತೆಗೆಯುವವರಿದ್ದಾರೆ. ಈ ಪ್ರಕಾರ ಕರ್ನಾಟಕದಲ್ಲಿ ನಡೆದಿರುವ ಈ ದುಷ್ಟ ಚಳವಳಿ ಮಹಾರಾಷ್ಟ್ರ ದೇಶದಲ್ಲಿಯೂ ಬಂತು. ಇದರಿಂದ ಸಮಾಜದಲ್ಲಿ ಬೇಕಿ ಹೆಚ್ಚುವದು.

ಒಬ್ಬ ತಟಸ್ಥ.

—ಸಿಕಂದರಾಬಾದದ ಸಾರ್ವಜನಿಕ ದವಾಖಾನೆಗೆ ನಿಝಾಮ ಸಾಹೇಬರು ೮೧೦೦೦ ರೂಪಾಯಿಗಳನ್ನು ಕೊಟ್ಟಿರುವರು

ವೀರಶೈವ ಮಹಾಸಭೆಯು

ವೀರಶೈವರಲ್ಲಿ ಜಾತಿಗಳಿಲ್ಲವೆಂದೇ ನಿರ್ಣಯಿಸಿತು.

ಅಷ್ಟಾವರಣ ಪಂಚಾಚಾರ ಯುಕ್ತರಾದ ವೀರಶೈವರಲ್ಲಿ ಜಾತಿಗಳಿಲ್ಲವೆಂದು ಕಳೆದೊಂದು ವರುಷದಿಂದಲೂ ಶರಣಸಂದೇಶ ಪತ್ರಿಕೆಯಲ್ಲಿ ವಿಶೇಷವಾಗಿ ಪ್ರತಿಪಾದಿಸುತ್ತಾ ಬಂದಿದೆಯಷ್ಟೆ. ಮತ್ತು ಇಂತಹ ವೀರಶೈವರಲ್ಲಿ ಪರಸ್ಪರ ಊಟೋಪಚಾರಗಳಾದರೂ ಜರುಗಬೇಕೆಂದು ವೀರಶೈವ ತತ್ವ ಪ್ರಚಾರಕ ಸಂಘದವರು ಜನರಲ್ಲಿ ಜಾಗೃತಗೊಳಿಸಿ ಆ ಪ್ರಕಾರ ಆಚರಿಸಲು ಸಿದ್ಧರಾಗಿರುವವರ ಒಪ್ಪಿಗೆಯನ್ನು ತೆಗೆದುಕೊಳ್ಳುತ್ತಾ ಬಂದಿದ್ದಾರಷ್ಟೆ. ಈ ಉಭಯ ವಿಷಯಗಳ ಸತ್ಯತೆಯು ಧಾರವಾಡದಲ್ಲಿ ಕೂಡಿದ್ದ ೧೧ನೆಯ ವೀರಶೈವ ಮಹಾಸಭೆಯ ೧೬ನೆಯ ಗೊತ್ತುವಳಿಯಿಂದ ಸ್ಪಷ್ಟವಾಗುವಂತಿದೆ. ಆ ಗೊತ್ತುವಳಿಯು ಈ ಪ್ರಕಾರ ಇದೆ.

" ವೀರಶೈವ ಧರ್ಮವು ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಯಾವ ಬಗೆಯ ಜಾತಿಭೇದವನ್ನು ಅಂಗೀಕರಿಸುವುದಿಲ್ಲ. ಆದ್ದರಿಂದ ಅದರ ಉಪ ಪಂಗಡಗಳಲ್ಲಿ ಏಕೀಕರಣವು ಎಲ್ಲ ರೀತಿಯಿಂದ ತೀವ್ರವಾಗಿ ಆಗಲಿಕ್ಕೆ ಸಮಾಜದವರು ತಮ್ಮ ಶಕ್ತ್ಯನುಸಾರ ಪ್ರಯತ್ನಿಸಬೇಕೆಂದು ಈ ಮಹಾಸಭೆಯು ನಿರ್ಣಯಿಸುತ್ತದೆ. ,,

ಈ ನಿರ್ಣಯವು ಬಹು ಮಹತ್ವದ್ದಾಗಿದ್ದು ವಿಶೇಷಾರ್ಥಗಳನ್ನು ಒಳಕೊಂಡಿದೆ. ಇದರಲ್ಲಿ ಮೂರು ಮುಖ್ಯ ಸಂಗತಿಗಳು ಅಡಕವಾಗಿವೆ. ವೀರಶೈವ ಧರ್ಮವು ಧಾರ್ಮಿಕ ವಿಷಯದಲ್ಲಿ ಮಾತ್ರ ಜಾತಿಭೇದವನ್ನು ಅಂಗೀಕರಿಸುವುದಿಲ್ಲವೆಂದು ತಿಳಿಯಬಾರದು. ಇದು **ಸಾಮಾಜಿಕ ವಿಷಯದಲ್ಲಿಯೂ** ಜಾತಿಭೇದವನ್ನು ಅಂಗೀಕರಿಸುವುದಿಲ್ಲವೆಂದು ಮೇಲಣ ಗೊತ್ತುವಳಿಯಲ್ಲಿ ಸ್ಪಷ್ಟೀಕರಿಸಿದೆ. ಇದು ಈ ಗೊತ್ತುವಳಿಯಲ್ಲಿರತಕ್ಕ ಒಂದು ವಿಶೇಷಾರ್ಥವು. ಅದು ಹೇಗೆಂಬುದನ್ನು ನೋಡೋಣ,

ವೀರಶೈವರಲ್ಲಿ ಭಕ್ತರೇ ಇರಲಿ ಅಥವಾ ಮಾಹೇಶ್ವರರೇ ಇರಲಿ, ಬಣಜಿಗರೇ ಇರಲಿ ಅಥವಾ ಬಣಗಾರರೇ ಇರಲಿ ಯಾರಿದ್ದರೂ ಎಲ್ಲರಿಗೂ ಅಷ್ಟಾವರಣ ಪಂಚಾಚಾರ ಷಟ್‌ಸ್ಥಳಗಳಿವೆ, ಈ ಧಾರ್ಮಿಕ ತತ್ವಾಚಾರಗಳೇನೂ ಒಬ್ಬರಿಗೆ ಹೆಚ್ಚು ಇನ್ನೊಬ್ಬರಿಗೆ ಕಡಿಮೆಯಾಗಿಲ್ಲ. ಎಂದು ಹೇಳುವುದೇ ಧಾರ್ಮಿಕ ವಿಷಯದಲ್ಲಿ ಜಾತಿಭೇದವಿಲ್ಲವೆಂಬುದು. ಈ ಪ್ರಕಾರ ಧಾರ್ಮಿಕ ಜಾತಿಭೇದವಿಲ್ಲದಿದ್ದರೂ ಸಾಮಾಜಿಕ ಜಾತಿಭೇದವುಂಟೆಂದು ಕೆಲವರು ತಿಳಿದಿದ್ದಾರೆ. ಅದು ಹೇಗೆಂದರೆ ಭಕ್ತರ ಮಕ್ಕಳು ಭಕ್ತರಾಗಿಯೇ ಇರುತ್ತಾರೆ. ಮಾಹೇಶ್ವರರ ಮಕ್ಕಳು ಮಾಹೇಶ್ವರರಾಗಿಯೇ ಹುಟ್ಟುತ್ತಾರೆ. ಬಣಜಿಗರು ಭಕ್ತರಲ್ಲಿ ಹೆಚ್ಚಿನವರಾಗಿಯೇ ಇರುತ್ತಾರೆ. ಅವರಿಗಿಂತ ಬಣಗಾರರು ಹುಟ್ಟಿನಿಂದಲೇ ಕಡಿಮೆಯವರಾಗಿದ್ದಾರೆ. ಎಂದು ಹೇಳುವುದೇ ಸಾಮಾಜಿಕ ಜಾತಿಭೇದವು. ಈ ಪ್ರಕಾರ ಜನ್ಮದಿಂದ ಅಥವಾ ಕಾಯಕದಿಂದ ಹೇಳುವ ಸಾಮಾಜಿಕ ಜಾತಿಭೇದವು ಕೂಡಾ ವೀರಶೈವ ಧರ್ಮವು ಮಾನ್ಯ ಮಾಡುವುದಿಲ್ಲವೆಂದೇ ಮೇಲಣ ಗೊತ್ತುವಳಿಯಲ್ಲಿ ಸ್ಪಷ್ಟಗೊಳಿಸಿದೆ,

ಅಷ್ಟಾವರಣ ಪಂಚಾಚಾರಾದಿ ಧಾರ್ಮಿಕ ತತ್ವಾಚಾರಗಳು ಒಬ್ಬರಿಗೆ ಹೆಚ್ಚು ಇನ್ನೊಬ್ಬರಿಗೆ ಕಡಿಮೆಯಾಗಿ ಅವುಗಳಲ್ಲಿ ಜಾತಿಭೇದವು ಹೇಗೆ ಏರ್ಪಟ್ಟಿಲ್ಲವೋ ಹಾಗೆಯೇ ಜನ್ಮದಿಂದಲೇ ಮಾಹೇಶ್ವರರು ಪೂಜ್ಯರು ಭಕ್ತರು ಅಪೂಜ್ಯರೆಂದಾಗಲಿ ವ್ಯಾಪಾರ ಕಾಯಕವು ಹೆಚ್ಚಿನದು ಒಕ್ಕಲತನ, ನೇಯುವುದು, ಎಣ್ಣೆಕೊಡುವುದು ಮೊದಲಾದ ಕಾಯಕಗಳು ಕಡಿಮೆಯವುಗಳೆಂದಾಗಲಿ ಹೇಳುವ ಸಾಮಾಜಿಕ ಜಾತಿಭೇದವನ್ನೂ ವೀರಶೈವ ಧರ್ಮವು ಹೇಳುವುದಿಲ್ಲ ಈ ಪ್ರಕಾರ ಧಾರ್ಮಿಕ ಮತ್ತು ಸಾಮಾಜಿಕ ಉಭಯ ವಿಷಯಗಳಲ್ಲಿಯೂ ಜಾತಿಭೇದವಿಲ್ಲವೆಂದು ಮೇಲಣ ಗೊತ್ತುವಳಿಯಲ್ಲಿ ಸ್ಪಷ್ಟೀಕರಿಸಿರುವುದು ಅತ್ಯಂತ ಮಹತ್ವದ್ದಾಗಿದೆ. ಮತ್ತು ಯಾವ ಸಂದೇಹ ವಿಪರೀತಾರ್ಥಗಳಿಗೂ ಅವಕಾಶವಿಲ್ಲದಾಗಿದೆ.

ಈ ಗೊತ್ತುವಳಿಯಲ್ಲಿ ವೀರಶೈವ ಎಲ್ಲ ಒಳಪಂಗಡಗಳ ಏಕೀಕರಣ ಮಾಡಬೇಕೆಂದು ಹೇಳುವಾಗ **ಎಲ್ಲ ರೀತಿಯಿಂದ** ಎಂಬ ಶಬ್ದಗಳು ಉಪಯೋಗಿಸಲ್ಪಟ್ಟಿವೆ ಕೇವಲ ಪರಸ್ಪರ ಊಟೋಪಚಾರಗಳಿಂದಲೇ ಏಕೀಕರಣ ಮಾಡುವುದಲ್ಲ. ಪರಸ್ಪರ ಶರೀರ ಸಂಬಂಧವನ್ನೂ ಮಾಡಿ ವೀರಶೈವರಲ್ಲಿ ನಿಜವಾದ ಏಕೀಕರಣವನ್ನು ಮಾಡಬೇಕೆಂದೇ ಈ ಗೊತ್ತುವಳಿಯಲ್ಲಿದೆ, ಎಲ್ಲ **ರೀತಿಯಿಂದ** ಎಂಬುದು ಶರೀರ ಸಂಬಂಧವನ್ನು ಕೂಡಾ ಎಂಬುದನ್ನೇ ಸೂಚಿಸುತ್ತದೆ.

ಈ ಗೊತ್ತುವಳಿಯು ಜನರ ಆಚರಣೆಯಲ್ಲಿ ತೀವ್ರವಾಗಿ ಬರಬೇಕೆಂದು ಸೂಚಿಸಿದ್ದರೂ **ಶಕ್ತ್ಯನುಸಾರ** ಎಂಬ ಶಬ್ದಗಳನ್ನುಪಯೋಗಿಸಿರುವುದೂ ಸಮಂಜಸವಾಗಿದೆ ಯಾರಿಗೆ ಪರಸ್ಪರ ಊಟೋಪಚಾರಗಳನ್ನು ಮಾಡಲು ಮಾತ್ರ ಇಷ್ಟವಿದ್ದು ಅವರ ಮಾನಸಿಕ ಸಾಮರ್ಥ್ಯವು ಅಷ್ಟರ ಮಟ್ಟಿಗಿದೆಯೋ ಅವರು ಅಷ್ಟೇ ಮೊದಲು ಆಚರಿಸಲಿ ಯಾರಿಗೆ ಪರಸ್ಪರ ಶರೀರ ಸಂಬಂಧ ಮಾಡುವ ಇಷ್ಟವಿದೆಯೋ ಅವರು ಹಾಗೆಯೇ ಆಚರಿಸಲಿ, ಈ ಪ್ರಕಾರ ಅವರವರ ಮಾನಸಿಕ ಶಕ್ತ್ಯನುಸಾರ ವೀರಶೈವ ಏಕೀಕರಣವನ್ನು ಆಚರಣೆಯಲ್ಲಿ ಸಕಲ ವೀರಶೈವರೂ ತರಬೇಕೆಂದೇ ಈ ಗೊತ್ತುವಳಿಯಲ್ಲಿ ತಿಳಿಸಿದೆ.

ಈ ಪ್ರಕಾರ ವೀರಶೈವರಲ್ಲಿ ಜಾತಿಭೇದವಿಲ್ಲವೆಂತಲೂ ಎಲ್ಲರೂ ಪರಸ್ಪರ ಊಟೋಪಚಾರ ದೇಹಸಂಬಂಧಗಳಿಂದ ಏಕೀಕರಣವಾಗಬೇಕೆಂತಲೂ ಧಾರವಾಡ ವೀರಶೈವ ಮಹಾಸಭೆಯು ಗೊತ್ತುಮಾಡಿದುದನ್ನು ತಿಳಿದಾದರೂ ಇನ್ನು ಮೇಲೆ ಅನೇಕರು ತಮ್ಮ ತಪ್ಪು ತಿಳುವಳಿಕೆಯನ್ನು ತೆಗೆದುಹಾಕಿ ವೀರಶೈವ ಏಕೀಕರಣಕ್ಕೋಸ್ಕರ ಪ್ರಯತ್ನಿಸುವುದು ಯುಕ್ತವಾಗಿಲ್ಲವೇ? **ಸಂಪಾದಕ.**

—ಮದ್ರಾಸ ಸರಕಾರದವರು ನಂದ್ಯಾಲ ಮುನಸಿಪಾಲ್ಟಿಯು ತನ್ನ ಕೆಲಸವನ್ನು ಸರಿಯಾಗಿ ಮಾಡದಿದ್ದುದರಿಂದ ಅದನ್ನು ೬ ತಿಂಗಳುಗಳವರೆಗೆ ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ.

—ಹೈದರಾಬಾದಿನ ರೆಸಿಡೆನ್ಸಿ ಬಜಾರವನ್ನು ಇನ್ನು ಮುಂದೆ ಉಸ್ಮಾನಿಯಾ ರೋಡ ಎಂಬುದಾಗಿ ಕರೆಯ ಬೇಕೆಂದಾಗಿದೆ.

—ಚಿತ್ರದುರ್ಗದ ಡಿ. ಲಾಕಪ್ಪಿನಲ್ಲಿರುವ ಇಬ್ಬರು ಕೈದಿಗಳು ಕಿಟಿಕಿಯ ಬಲವಾದ ಕಬ್ಬಿಣದ ಸಲಾಕಿಯನ್ನು ಬಗ್ಗಿಸಿ ಬಾಗಿಲವನ್ನು ಒಡೆದು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುತ್ತಿದ್ದಾಗ ಕಾವಲುಗಾರರು ಕಂಡು ಹಿಡಿದು ಪುನಃ ಕೈದುಮಾಡಿರುತ್ತಾರೆ.

ಶ್ರಾವಣ ಮಾಸದಲ್ಲಿ ಅಗತ್ಯವಾಗಿ ಪ್ರಸಾರಗೊಳಿಸಬೇಕಾದ

ಮಹತ್ವದ ಪುಸ್ತಕ.

ಉಚಿತವಾಗಿ ಹಂಚಿರಿ! **ಧರ್ಮಜಾಗೃತಿ ಮಾಡಿರಿ.**

ವೀರಶೈವ ಏಕೀಕರಣ.

(ಲೇಖಕರು-**ಶ್ರೀ ಹರ್ಡೇಕರ್ ಮಂಜಪ್ಪನವರು**)

ವೀರಶೈವ ಒಳಪಂಗಡಗಳ ಏಕೀಕರಣವನ್ನು ತೀವ್ರವಾಗಿ ಸಮಾಜದವರು ಮಾಡಬೇಕೆಂದು ಧಾರವಾಡ ವೀರಶೈವ ಮಹಾ ಸಭೆಯಲ್ಲಿ ನಿರ್ಣಯವಾಯಿತು.

ಈ ಗೊತ್ತುವಳಿಯು ಜನರ ಆಚರಣೆಯಲ್ಲಿ ಬರಬೇಕಾದರೆ ಅವರಲ್ಲಿರುವ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಬೇಕಲ್ಲವೇ? ಹಾಗೆ ಮಾಡಬೇಕಾದರೆ ಅಂತಹ ಪುಸ್ತಕಗಳನ್ನು ಪ್ರಸಾರಗೊಳಿಸಬೇಕು.

ಶ್ರಾವಣ ಮಾಸವು ಧಾರ್ಮಿಕ ವಿಷಯಗಳ ಶ್ರವಣಕ್ಕಾಗಿ ಕಾದಿಟ್ಟ ಮಾಸವು. ಆದಕಾರಣ ಧಾರ್ಮಿಕ ಜಾಗೃತಿಗೊಳಿಸುವ ಈ ಮಾಸದಲ್ಲಿ ವೀರಶೈವ ಸಮಾಜಕ್ಕೆ ಈಗ ಅತ್ಯಾವಶ್ಯಕವಾಗಿರತಕ್ಕ ವೀರಶೈವ ಏಕೀಕರಣದ ವಿಷಯವು ಎಲ್ಲರಿಗೂ ಶ್ರವಣವಾಗುವಂತೆ ಮಾಡುವುದು ವಿಹಿತವಲ್ಲವೇ?

ಕಳೆದ ಬಸವ ಜಯಂತಿಯ ದಿವಸ ಪ್ರಕಟಿಸಿದ ಬಸವ ಸಂದೇಶ ಪುಸ್ತಕದಂತೆಯೇ ೩೨ ಪುಟಗಳ **ವೀರಶೈವ ಏಕೀಕರಣ** ಎಂಬ ಪುಸ್ತಕವು ಶ್ರಾವಣ ಶುದ್ಧ ಪ್ರತಿಪದೆಗೆ ಪ್ರಕಟವಾಗುತ್ತದೆ. ಸಕಲರೂ ಶಕ್ತ್ಯನುಸಾರ ಈ ಪುಸ್ತಕವನ್ನು ತರಿಸಿಕೊಂಡು ಉಚಿತವಾಗಿ ಹಂಚಿ ಧರ್ಮಜಾಗೃತಿಯನ್ನು ಮಾಡುವುದು ಯುಕ್ತವಲ್ಲವೇ?

ಈ ಪುಸ್ತಕವು ಸಂವಾದ ರೂಪದಲ್ಲಿ ಬರೆದದ್ದಾಗಿದೆ, ಬಹು ಸುಲಭ ಶೈಲಿ. ಅಲ್ಲಲ್ಲಿ ಶಾಸ್ತ್ರಾಧಾರಗಳನ್ನೂ ಕೊಟ್ಟಿದೆ. ೩೨ ಪುಟಗಳ ಈ ಪುಸ್ತಕಕ್ಕೆ ಮೂರೇ ಪೈ ಕ್ರಯ.

ಒಂದು ನೂರಕ್ಕೆ ೧-೦-೦ ರೂ. ಒಂದು ನೂರು ಪ್ರತಿಗಿಂತ ಕಡಿಮೆಯಾಗಿ ವ್ಹಿ. ಪಿ. ಮೂಲಕ ಕಳುಹಿಸಲಾಗುವುದಿಲ್ಲ, ಅಂಚೆಯ ವೆಚ್ಚ ಬೇರೆ.

೫೦೦ ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ಅವರ ಹೆಸರು ಹಾಕಿ ಅಚ್ಚುಮಾಡಿ ಕೊಡಲಾಗುವುದು. ೫೦೦ ಪ್ರತಿಗಳಿಗೆ ೫|| ರೂಪಾಯಿ. ೧ ಸಾವಿರಕ್ಕೆ ೮ ರೂ. ಗಳು. ತಮ್ಮ ಹೆಸರು ಹಾಕಿಸುವ ಮಹಾಶಯರು ಬರುವ ಆಷಾಢ ಬಹುಳ ಪ್ರತಿಪದೆಯೊಳಗಾಗಿ ಎಂದರೆ ಜುಲೈ ೮ನೆಯ ತಾರೀಖಿನೊಳಗಾಗಿ ತಿಳಿಸಬೇಕು.

ಮ್ಯಾನೇಜರ್-**ಶ್ರೀ ಬಸವಲಿಂಗ ಮುದ್ರಣ ಮಂದಿರ,**
ಪೋ. **ಆಲಮಟ್ಟಿ** ಜಿ. ವಿಜಾಪುರ.

ಜಾಗ್ರತೆ ತರಿಸಿರಿ! **ಮಕ್ಕಳಿಗೆ ಓದಿಸಿರಿ!**

ಅರವತ್ತುಮೂರು ಪುರಾತನರ ದಿವ್ಯ ಚರಿತ್ರೆ.

(ಲೇಖಕರು:— **ಶ್ರೀ. ಹರ್ಡೇಕರ ಮಂಜಪ್ಪನವರು.**)

ಈ ಚಿಕ್ಕ ಪುಸ್ತಕದಲ್ಲಿರುವ ಪುರಾತನರ ಚರಿತ್ರೆಯನ್ನು ಸಕಲರೂ ಓದಿ ಸ್ವಲ್ಪದರಲ್ಲಿಯೇ ಅವರ ಮಹತ್ವವನ್ನು ತಿಳಿದುಕೊಳ್ಳಬಹುದು. ಮನೆಯಲ್ಲಿ ಚಿಕ್ಕ ಮಕ್ಕಳಿಗೆ ಈ ಚರಿತ್ರೆಗಳನ್ನು ಹೇಳಿ ಅವರಲ್ಲಿ ಭಕ್ತಿಭಾವನೆಯನ್ನುಂಟುಮಾಡಬಹುದು.

ಕ್ರಯ ೨ ಆಣೆ ಮಾತ್ರ.

ಒಂದು ರೂಪಾಯಿಗೆ ೧೦ ಪುಸ್ತಕಗಳು. ಒಂದು ರೂಪಾಯಿಗಿಂತ ಕಡಿಮೆ ಕ್ರಯದ ಪುಸ್ತಕಗಳನ್ನು ವ್ಹಿ. ಪಿ. ಮೂಲಕ ಕಳುಹಿಸಲಾಗುವುದಿಲ್ಲ. ಅಂಚೆಯ ವೆಚ್ಚ ಬೇರೆ.

ಮ್ಯಾನೇಜರ್- **ಶ್ರೀ ಬಸವಲಿಂಗ ಮುದ್ರಣ ಮಂದಿರ,**
ಪೋ. **ಆಲಮಟ್ಟಿ** ಜಿ. ವಿಜಾಪುರ.

ಗೌರೀಶಂಕರ ನಿವಾಸ
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು!- ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ - ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ

ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ - ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦

೬೦ ,, ,, ,, ೧೬-೮-೦

೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖು ಕೊಟ್ಟಲ್ಲಿ ಮಾತ್ರ ಈ ಆಕ್ಕೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, ಗೌರೀಶಂಕರ ನಿವಾಸ ಹಿಂದೂ ಹೋಟೆಲ್

(೪೫) ದಪಣಾಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ

ಎಲ್ಲ ನಮೂನೆಗಳು ಬರೇ ೧ ರೂಪಾಯಿ

--೧೦೦೦--

ನೀಲೀ ಮಶಿಚೀಟು— ೪ ರೂಪಾಯಿ
ಭಾಸ್ಕರ ಪ್ರಕಾಶ— ೧೧ ,,
ಗುಂಗಾಡ ನಾಶಕ— ೧೧ ,,
ಚೇಳಿನ ನಾಶ— ೧೧ ,,
೧೨ ತಗಣಿ ಶತ್ರು ಬಾಟ್ಲ— ೭ ,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಬಾಸ್ಕರ ಪ್ರಕಾಶ ವರ್ಕ್ಸ್
ಪೋ. **ಹಂಚಲಿ.**
ಜಿ. ವಿಜಾಪೂ

ಮೋಹಿನಿ ಹೇರ್ ಆಯಿಲ್
ಮತ್ತು
ಕಮಲಾ ಹೇರ್ ಆಯಿಲ್.

ಬಹು ಶ್ರೇಷ್ಠವಾದ ಸುಲಭ ಕ್ರಯದ ಅತಿ ಸುಗಂಧದ ಕೇಶ ತೈಲಗಳು ನಮ್ಮಲ್ಲಿ ತಯಾರಾಗುತ್ತವೆ. ವ್ಯಾಪಾರಿಗಳಿಗೆ ಹೆಚ್ಚಾದ ಕಮಿಶನ್ ದೊರೆಯುತ್ತದು. ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಂಡು ವ್ಯಾಪಾರಿಗಳು ಹೆಚ್ಚಾದ ಲಾಭ ಹೊಂದಬಾರದೇ ?

ಬಿ. ಎಚ್. ಡಾಗಗಿಕರ್
ಗುಲಬರ್ಗಾ

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪-೦-೦
೨೫ ,, ಯುರೋಪ ,, ,, ೫-೦-೦
೨೫ ,, ಹೂವಿನ ಬೀಜಗಳು ೫-೦-೦

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦-೦-೦

ನಿಂಬೆ, ಕೊಡಗು ಕಿತ್ತಳೆ, ಚೇಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಪೇರು, ಸಿಚ್ಬೇಸ್, ಅಂಜೂರ, ದ್ರಾಕ್ಷೆ ಗಿಡಗಳು ಡಜನ್ ೧ಕ್ಕೆ ೯-೦-೦

ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨-೦-೦

ಪಾರಿಜಾತ, ನಂದಿವರ್ಧನ, ದಾಶಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬-೦-೦.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್ ನ್ಯಾಶನಲ್ ಸೀಡ್ ಕಂಪನಿ.
ಲಾಲ್‌ಬಾಗ್ ಫ್ರೋರ್ಟ್ ರೋಡ್
ಬೆಂಗಳೂ ಸಿಟಿ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟಿ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿವರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂ ದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ** ಸುಖದಿಂದ ಅದಾರ, ಇದನ್ನು ಕಣ್ಣಾರೆ ನೋಡಿ ನೋಡಿ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಅತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ **ಕೊಳ್ಳುವೆನು. ಮತ್ತು** ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗೃತೆ ತರಿಸಿಕೊಳ್ಳಿರಿ! **ಜಾಗೃತೆ ತರಿಸಿಕೊಳ್ಳಿರಿ!!**

ಹರ್ಡೇಕರ ಮುಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಬಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಅಲಮಟ್ಟಿ** ಪೋ. ಅಲಮಟ್ಟಿ ಜಿ. ವಿಜಾಪುರ

ಶ್ರೀ ...

REGISTERED No. B 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ಮ ೨೨೮ ॥ ಮಹಾನುಭಾವಿ ಬಸವಣ್ಣನವರು

ಸಂಪಾದಕರು:-
ಶ್ರೀ. ಸರ್ದೇಶಪಾಂಡೆ ನಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ ರು.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೨. | ಆಲಮಟ್ಟಿ- ಸೋಮವಾರ ತಾರೀಖು ೧೭ ನೆಯ ಜುಲೈ ೧೯೩೩. | ಸಂಚಿಕೆ ೪

ಜನಸೇವೆಯೇ ದೇವರ ಸೇವೆ

ಸಾಮುದಾಯಿಕ ಶಾಸನೋಲ್ಲಂಘನೆ ನಿಂತಿತು.

ಗಾಂಧೀಜಿಯವರು ಪುಣೆಯ ಆಲೋಚನಾ ಸಭೆಯಲ್ಲಿ ರಾಷ್ಟ್ರಕ್ಕೆ ಈ ಪ್ರಕಾರ ತಿಳಿಸಿದರು.

"ಯುದ್ಧ ಪ್ರಾರಂಭವಾದ ಮೇಲೆ ವಿಶ್ರಾಂತಿಯೆಲ್ಲಿ? ಸರಕಾರವು ಸನ್ಮಾನನೀಯ ಒಪ್ಪಂದಕ್ಕೆ ಒಪ್ಪುವ ವರೆಗೂ ಈಗಿನ ಚಳವಳಿ ಇದ್ದೇಇರುವುದು. ಇದನ್ನು ನಾನು ನಿಲ್ಲಿಸಲು ಒಪ್ಪುವುದಿಲ್ಲ. ವ್ಯಕ್ತಿವಿಷಯವಾದ ಶಾಸನೋಲ್ಲಂಘನೆಯು ಇದ್ದೇಇರಬೇಕು. ನಾನು ವ್ಹಾಯಿಸ್‌ರಾಯರಿಗೆ ಬರೆದು ಕೊಳ್ಳುತ್ತೇನೆ. ವ್ಹಾಯಿಸ್‌ರಾಯರು ನನ್ನ ಸಂಗಡ ಮಾತನಾಡಲು ಒಪ್ಪದಿದ್ದರೆ ಅದು ಅವರಿಗೇನೇ ಅವಮಾನವಲ್ಲದೆ ನನಗಾಗಲಿ, ರಾಷ್ಟ್ರಕ್ಕಾಗಲಿ ಅವಮಾನವಲ್ಲ."

ದೇಹವೇ ದೇಗುಲ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

ಕಳ್ಳರ ಭಯವಿಲ್ಲ ! **ಬೆಂಕಿಯ ಕಾಟವಿಲ್ಲ !!**

ವಿರೂಪಾಕ್ಷಪ್ಪಾ ಕರಬಸಪ್ಪಾ ಶೆಟ್ಟರ

ಅ್ಯಂಡ್ ಸನ್ಸ್

ತ್ರಿಜೋರಿ, ಸ್ಟೀಲ-ಕಪಾಟು, ವ ಕ್ಯಾಶ್ ಬಾಕ್ಸ ಮರ್ಚಂಟ್ಸ

ಫ್ಯಾಕ್ಟರಿ ಗದಗ ಮತ್ತು ಹುಬ್ಬಳ್ಳಿ

ಬ್ರ್ಯಾಂಚ್ ಅಫೀಸ್ ಬೆಳಗಾವ ಖಡೆಬಜಾರ.

(೧) ತ್ರಿಜೂರಿಯಲ್ಲಿ ನೋಟು ವ ದಾಗೀನೆ ಮತ್ತು ಹಸ್ತಪತ್ರಿಕೆ ಇಟ್ಟು ಸುಡುತ್ತಿರುವದು

ಹುಬ್ಬಳ್ಳಿಯ ಅಖಿಲ ಭಾರತೀಯ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ವ್ಹಿ. ಕೆ. ಶೆಟ್ಟರ ಎಂಡ ಸನ್ಸ ಹುಬ್ಬಳ್ಳಿ ಮತ್ತು ಗದಗ ಈ ಕಂಪನಿಯ ತ್ರಿಜೂರಿಯ ಸತ್ವ ಪರೀಕ್ಷೆಯು ತಾ. ೨೪ನೇ ಡಿಸೆಂಬರ ೧೯೩೨ನೇ ಇಸವಿ ದಿವಸ ಸದರ ಕಂಪನಿಯವರು ತಮ್ಮ ಹೆಸರು ಹೊಂದಿದ ಫಾಯರ್‌ಪ್ರೂಫ್ ತ್ರಿಜೂರಿಯಲ್ಲಿ ಬಂಗಾರದ ವಂಕಿ ಒಂದು ಸರ ವಳಿ ಜತಿ ಒಂದು ಹತ್ತು ರೂಪಾಯದ ನೋಟು ಒಂದು ನಂ. K. 11, 570153 ಇವುಗಳನ್ನು ಅಧ್ಯಕ್ಷರಾದ ಶ್ರೀಯುತ ಶಿದ್ಧರಾಮಪ್ಪ ಪಾವಟೆ ವಕೀಲರವರ ವ ಊರ ಪ್ರಮುಖ ಜನರ ಸಮ್ಮುಖದಲ್ಲಿ ಸದರಿ ತ್ರಿಜೂರಿಯಲ್ಲಿ ಮೇಲ್ಕಂಡ ಸಾಮಾನುಗಳನ್ನು ಇಟ್ಟು ೧|| ಖಂಡಿ—

—ಕಟ್ಟಿಗೆಯಲ್ಲಿ ೧|| ತಾಸಿನ ವರೆಗೆ **(೨) ಸುಟ್ಟ ನಂತರ ಬಾಗಿಲ ತೆಗೆಯಲಾಗಿ ಇಟ್ಟ ಸಾಮಾನುಗಳು ಹಾಗೇ ಇರುತ್ತವೆ.**

ಚೆನ್ನಾಗಿ ಕೆಂಪಗೆ ಕಾಯುವಂತೆ ಸುಟ್ಟು ಅದರ ಸತ್ವತೆ ಮತ್ತು ಭದ್ರತೆಗಳನ್ನು ತೋರಿಸಿದರು ಅ. ಭಾ. ಪ್ರದರ್ಶನದವರು ಪುರ ನಿವಾಸಿಗಳು ವ್ಹಿ. ಕೆ. ಶೆಟ್ಟರ ಇವರ ಕಾರ್ಯಾಲಯದವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಇದಲ್ಲದೆ ಸಂಸ್ಥಾನಾಧಿಪತಿಗಳಿಂದ ಉತ್ತಮತರಗತಿಯ ತ್ರಿಜೋರಿಯ ಕಾರ್ಖಾನೆಯವರೆಂದೆನಿಸಿಕೊಂಡು ಬಂಗಾರದ ಮೆಡಿಲು ಮತ್ತು ಸರ್ಟಿಫಿಕೇಟ ಹೊಂದಿದೆ. ಮತ್ತು ತಿಜೋರಿಗೆ ಹಾಕುವ ಯಾವತ್ತು ಕೀಲಿಗಳನ್ನು ವ ನಂಬರ್‌ಲಾಕ್ ವಗೈರೆ ಸಾಮಾನುಗಳನ್ನು ಉತ್ತಮ ಕೆಲಸಗಾರರಿಂದ ನಮ್ಮ ಕಾರಖಾನೆಯಲ್ಲಿಯೇ ತಯಾರಿಸುತ್ತೇವೆ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೨. | ಆಲಮಟ್ಟಿ ಜುಲೈ ತಾರೀಖು ೧೭ ನೆಯ ಸೋಮವಾರ | ಸಂಚಿಕೆ ೪೭

ರಾಷ್ಟ್ರ ಪ್ರಮುಖರ ಆಲೋಚನಾ ಸಭೆ.

ಗಾಂಧೀಜಿಯವರ ದರ್ಶನವನ್ನು ಹೊಂದಲು ಪ್ರಚಂಡ ಜನಸಮೂಹ!

ಶಾಸನೋಲ್ಲಂಘನೆಯ ಚರ್ಚೆ.

ಈ ವಂಜಿ ಗೊತ್ತಾದ ಪ್ರಕಾರ ಪುಣೆಯ ಟಿಳಕ ಸ್ಮಾರಕ ಮಂದಿರದಲ್ಲಿ ರಾಷ್ಟ್ರೀಯ ಸಭೆಯ ಪ್ರಮುಖರ ಆಲೋಚನಾ ಸಭೆಯು ಕಳೆದ ೧೨ನೆಯ ತಾರೀಖಿನ ಮಧ್ಯಾಹ್ನ ೨ ಗಂಟೆಗೆ ಪ್ರಾರಂಭವಾಯಿತು. ಈ ಆಲೋಚನಾ ಸಭೆಗೆ ಬರಲು ಸಾಧಾರಣ ನಾಲ್ಕು ನೂರು ಜನಗಳಿಗೆ ಆಮಂತ್ರಣವನ್ನು ಕೊಟ್ಟಿದ್ದರು. ಅವರಲ್ಲಿ ೧೫೦ ಪ್ರಮುಖರು ಈ ಸಭೆಗೆ ಆಗಮಿಸಿದ್ದರು. ಇವರಲ್ಲಿ ಎಲ್ಲ ಪ್ರಾಂತದವರೂ ಇದ್ದರು

ಮಹಾತ್ಮಾ ಗಾಂಧಿ, ಪಂಡಿತ ಮಾಲವೀಯ, ನಾವ-ದಾವ ಶಾಸ್ತ್ರಿ, ಸೌ. ಸರೋಜಿನಿದೇವಿ, ಶ್ರೀ. ಅಬ್ಬಾಸ ತಯ್ಯಬಜಿ, ಮೌ. ಅಬ್ದುಲ್‌ಕಲಮ್ ಆಜಾದ್, ಶ್ರೀ. ಸತ್ಯಮೂರ್ತಿ, ಶ್ರೀ. ರಾಜಗೋಪಾಲಾಚಾರ್ಯ, ಸೌ. ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀ. ದೇಶಪಾಂಡೆ ಗಂಗಾಧರರಾವ ಶ್ರೀ. ನರಸೋಪಂತ ಕೇಳಕರ ಮೊದಲಾದ ಪ್ರಮುಖರು ಬಂದ ನಂತರ ಸಭೆಯ ಕಾರ್ಯವು ಪ್ರಾರಂಭವಾಯಿತು. ತಾ. ೧೨ನೆಯ ಪ್ರಾತಃಕಾಲದಲ್ಲಿ ಕೆಲವು ಪ್ರಮುಖರು ಕೂಡಿ ಪರ್ಣಕುಟಿಯಲ್ಲಿ ಆಲೋಚಿಸಿದ್ದರು. ಆ ವಿಷಯವಾಗಿ ಗಾಂಧೀಜಿಯವರನ್ನು ಪತ್ರಿಕಾ ಪ್ರತಿನಿಧಿಗಳು ಎಷ್ಟು ರೀತಿಗಳಿಂದ ಕೇಳಿದರೂ ನನಗೆ ಆ ಸಂಗತಿ ಗೊತ್ತಿಲ್ಲವೆಂದೇ ಹೇಳಿದರು.

ಗಾಂಧೀಜಿಯವರ ದರ್ಶನ ಹೊಂದಬೇಕೆಂದು ೮-೧೦ ಸಾವಿರ ಜನರು ಟಿಳಕ ಸ್ಮಾರಕ ಮಂದಿರದ ಮಾರ್ಗದಲ್ಲಿ ಕಿಕ್ಕಿರಿದು ನಿಂತಿದ್ದರು. ಗಾಂಧೀಜಿಯವರು ಭವ್ಯವಾದ ಮೋಟಾರಿನಲ್ಲಿ ಕುಳಿತಿದ್ದರು. ಎಡಬಲಗಳಲ್ಲಿ ಸೌ. ಸರೋಜಿನಿ ದೇವಿಯವರು ಸೌ. ಕಸ್ತೂರಿ ದೇವಿ ಗಾಂಧೀಜಿಯವರು ಆ ಪ್ರಚಂಡ ಜನಸ್ತೋಮಕ್ಕೆ ದರ್ಶನಕೊಡುತ್ತ ಸಭಾಗೃಹಕ್ಕೆ ಆಗಮಿಸಿದರು.

ಆರಂಭದಲ್ಲಿ ಶ್ರೀ. ಅಣೆಯವರು ಶಾಸನೋಲ್ಲಂಘನೆಯ ಪ್ರಸಂಗವೇಕೆ ಬಂದಿತೆಂಬ ಹಿಂದಿನ ಸಂಗತಿಯನ್ನೂ ಈಗ ಆಲೋಚಿಸಬೇಕಾದ ಆವಶ್ಯಕತೆಯನ್ನೂ ಕುರಿತು ೧೫ ಮಿನಿಟು ಭಾಷಣ ಮಾಡಿದರು. ಆ ಮೇಲೆ ಗಾಂಧೀಜಿಯವರು ತಮ್ಮ ಉಪೋಷಣದ ಸಂಗತಿಯನ್ನೂ ಶಾಸನೋಲ್ಲಂಘನೆಯ ವಿವರವನ್ನೂ ತಿಳಿಸಿ ಈ ಪ್ರಕಾರ ಸಭಿಕರಿಗೆ ವಿಜ್ಞಾಪಿಸಿಕೊಂಡರು.

(೧) ಶಾಸನೋಲ್ಲಂಘನೆಯನ್ನು ನಿಲ್ಲಿಸಬೇಕೇ? ಸಾಗಿಸಬೇಕೇ? (೨) ನಿಲ್ಲಿಸುವುದಾದರೆ ಸಂಪೂರ್ಣ ನಿಲ್ಲಿಸಬೇಕೇ? ತಾತ್ಕಾಲಿಕವಾಗಿ ನಿಲ್ಲಿಸಬೇಕೇ? (೩) ನಿಲ್ಲಿಸುವುದಾದಲ್ಲಿ ಆ ಕಾಲದಲ್ಲಿ ಇನ್ನಾವ ಕಾರ್ಯಗಳನ್ನು ಕೈಕೊಳ್ಳಬೇಕು? ಈ ಸಂಗತಿಗಳಲ್ಲಿ ತಾವು ಸ್ಪಷ್ಟವಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು. ಈ ವಿಷಯಗಳಲ್ಲಿ ತಮ್ಮ ಸಲಹೆ ಬೇಕಾಗಿದೆ ಅನಂತರ ನಾನು ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ.

ಅನಂತರ ಶ್ರೀ. ಸತ್ಯಮೂರ್ತಿಯವರು ಬಹು ವಾಕ್ಪಟುತ್ವದ ಭಾಷಣವನ್ನು ಮಾಡಿದರು. ಶಾಸನೋಲ್ಲಂಘನೆಯನ್ನು ನಿಲ್ಲಿಸಿ ಹತ್ತು ವರುಷಗಳ ಕಾರ್ಯಕ್ರಮವನ್ನು ಗೊತ್ತುಪಡಿಸಬೇಕು ನಿಯಮನಿರ್ಮಾಣ ಸಭೆಗಳಲ್ಲಿ ಪ್ರವೇಶಿಸಿ ಅವುಗಳನ್ನು ಆಕ್ರಮಿಸಿಕೊಳ್ಳುವದು, ಖಾದಿ ಪ್ರಸಾರ, ಪರದೇಶಿ ಬಟ್ಟೆಯ ಬಹಿಷ್ಕಾರ ಗ್ರಾಮಸಂಘಟನೆ ಈ ಕಾರ್ಯಗಳನ್ನು ಮಾಡಬೇಕು. ಎಂಬದಾಗಿ ಹೇಳಿದರು.

ಸೌ. ಕಮಲಾದೇವಿ ಚಟ್ಟೋಪಾಧ್ಯಾಯರು ಕೂಡಾ ಶ್ರೀ ಸತ್ಯಮೂರ್ತಿಗಳವರ ಅಭಿಪ್ರಾಯವನ್ನೇ ಪುಷ್ಟೀಕರಿಸಿ ಬಹು ಪರಿಣಾಮಕಾರಿಯಾದ ಭಾಷಣ ಮಾಡಿದರು. ಎಲ್ಲ ಭಾಗಗಳ ಪ್ರಮುಖರೂ ಹೆಚ್ಚಾಗಿ ಈಗ ಶಾಸನೋಲ್ಲಂಘನೆಯನ್ನು ನಿಲ್ಲಿಸಬೇಕೆಂದೆ ಅಭಿಪ್ರಾಯಪಟ್ಟರು.

ಪರಮಪೂಜ್ಯ ವಿರಕ್ತವರ್ಗವನ್ನು ಮುಳುಗಿಸುವ

ಶ್ರೀ. ಉಜ್ಜನಿ ಸ್ವಾಮಿಗಳ ಪ್ರವಚನ.

ಸೊಲ್ಲಾಪುರದ ಶ್ರೀ. ಮಲ್ಲಿಕಾರ್ಜುನ ದೇವಾಲಯದಲ್ಲಿ ಶ್ರೀ ಉಜ್ಜನಿ ಸ್ವಾಮಿಗಳು ತಮ್ಮ ಪ್ರವಚನದಲ್ಲ ಈ ಪ್ರಕಾರ ಹೇಳಿದ್ದಾರೆ—

"ವಿರಕ್ತರು ಶ್ರೀವೀರಶೈವ ಸನ್ಯಾಸಾಶ್ರಮದವರಾದ ಕಾರಣ ಅವರು ಊರಲ್ಲಿರಬಾರದು. ದೀಕ್ಷಾದಿ ಸಂಸ್ಕಾರಗಳ ಸಮಯದಲ್ಲಿ ತೀರ್ಥ ಪ್ರಸಾದಗಳನ್ನು ಕೊಡಲು ಅವರು ಬರಬಾರದು. ಅಷ್ಟಾವರಣಗಳಿಗೂ ಅವರಿಗೂ ಯಾವ ಸಂಬಂಧವಿಲ್ಲ."

ಹೀಗೆ ಉಜ್ಜನಿ ಸ್ವಾಮಿಗಳು ಹೇಳುವದು ಎಷ್ಟು ಅಧರ್ಮ ಮತ್ತು ತಪ್ಪು ಆದಯೆಂಬುದು ಈ ಕೆಳಗೆ ಕೊಟ್ಟ ಸಂಗತಿಯಿಂದ ಎಲ್ಲ ಭಕ್ತಮಾಹೇಶ್ವರರಿಗೆ ತಿಳಿಯುವದು. ಸೊಲ್ಲಾಪುರದ ಶ್ರೀ. ಅಪ್ಪಾಸಾಹೇಬ ವಾರದ. ಇವರೇ ವಿರಕ್ತೋತ್ಪತ್ತಿ ಕ್ರಿಯಾ ಲಕ್ಷಣ ಎಂಬ ಪುಸ್ತಕವನ್ನು ಛಾಪಿಸಿದ್ದಾರೆ. ಅದರಲ್ಲಿ ಈ ಪ್ರಕಾರ ಅದೆ—

ಉತ್ತರ ವಾತುಲಾಗಮದಲ್ಲ ನಿರಂಜನ ಪ್ರಭುಸ್ವಾಮಿಯು ಶಿವನಶಿಖಾಚಕ್ರದಲ್ಲಿ ಉದಯವಾಗಿ ಭಕ್ತರ ಪಾಪಗಳನ್ನು ನಿವಾರಣೆ ಮಾಡಲು ಆ ಭಕ್ತರಿಗೆ ದೀಕ್ಷಾ ಮತ್ತು ಜ್ಞಾನೋಪದೇಶ ಮಾಡುತ್ತ ಲೋಕ ಸಂಚಾರ ಮಾಡಿ ನಾನಾ ಕಡೆ ಮಠಗಳನ್ನು ಸ್ಥಾಪಿಸಿ ದೀಕ್ಷಾದಿ ಸಂಸ್ಕಾರಗಳನ್ನು ಮಾಡುತ್ತ ಶಿವಮತವನ್ನು ಉದ್ಧಾರ ಮಾಡುವನು."

ಮತ್ತು ಸುಪ್ರಭೇದಾಗಮದಲ್ಲಿ ಈ ಪ್ರಕಾರ ಅದೆ. **ಮದೂರ್ಧ್ವಮುಖ ಸಂಜಾತೋ ನಿರಂಜನ ಗಣೇಶ್ವರಃ। ಶೂನ್ಯ ಪೀಠಾಧಿಕಾರೀಚ ಪಂಚಾಚಾರ್ಯ ಗುರುರ್ವರಃ ॥ ೮ ॥**

ಎಂದರೆ "ನನ್ನ ಊರ್ಧ್ವಮುಖದಿಂದ ಉದಯಿಸಿದ ನಿರಂಜನ ಗಣೇಶ್ವರನು ಶೂನ್ಯ ಪೀಠಾಧಿಕಾರಿಯಾಗಿ ಪಂಚಾಚಾರ್ಯರಿಗೂ ಗುರುವಾಗಿದ್ದಾನೆ."

ಈ ಪ್ರಕಾರ ಆಗಮದಲ್ಲಿರುವ ಅಭಿಪ್ರಾಯವು ನಿಜವೆ? ಉಜ್ಜನಿ ಸ್ವಾಮಿಗಳ ಅಭಿಪ್ರಾಯವು ನಿಜವೇ? ಆಗಮದಲ್ಲಿರುವಂತೆ ಈಗ ಚಿತ್ರದುರ್ಗದಲ್ಲಿ ಶ್ರೀ. ನಿರಂಜನ ಪೀಠವಿದೆ. ಅದರ ಶಾಖಾ ವಿರಕ್ತಮಠಗಳೂ ಬೇಕಾದಷ್ಟು ಅವೆ. ಅವರಿಂದ ದೀಕ್ಷೆ ಹೊಂದಿ ಪಾದೋದಕ ಪ್ರಸಾದ ತೆಗೆದುಕೊಳ್ಳುವ ಲಕ್ಷಾಂತರ ವೀರಶೈವ ಭಕ್ತ ಮಾಹೇಶ್ವರರೂ ಇದ್ದಾರೆ. ಈ ವರೆಗಿನ ಎಲ್ಲ ಪಂಚಾಚಾರ್ಯರೂ ಈಗ ಹೀಗೆ ಹೇಳುವ ಉಜ್ಜನಿ ಸ್ವಾಮಿಗಳೂ ವಿರಕ್ತರ ಪಾದೋದಕ ಪ್ರಸಾದ ಸೇವನೆ ಮಾಡಿದ್ದಾರೆ.

ಈಗ ಹೀಗೇಕೆ ಧರ್ಮಕ್ಕೂ ಪ್ರಾಚೀನ ರೂಢಿಗೂ ವಿರೋಧವಾಗಿ ಹೇಳುತ್ತಾರೆಂಬುದನ್ನು ಭಕ್ತ ಮಾಹೇಶ್ವರರು ಆಲೋಚನೆ ಮಾಡಬೇಕು. ಮತ್ತು ಇದರ ಕಾರಣವನ್ನು ಶ್ರೀ ಉಜ್ಜನಿ ಸ್ವಾಮಿಗಳು ಲೇಖಿ ಮೂಲಕ ಪ್ರಕಟಪಡಿಸಬೇಕು.

ರೇವಣಸಿದ್ಧ ಶಿವಶರಣ ಮಹಾಸ್ವಾಮಿ,
ಅಕ್ಕಲಕೋಟೆಕರ,
ಶಿವಶರಣಸಂಘ ಸೊಲ್ಲಾಪುರ.

ಅ. ಭಾ. ಅಸ್ಪೃಶ್ಯ ಸೇವಕ ಸಮಾಜ.

ಈ ಸಂಘದ ಮಧ್ಯವರ್ತಿ ಮಂಡಳದ ಸಭೆಯು ಪುಣೆಯಲ್ಲಿ ಕೂಡಿದ್ದಿತು. ಒಟ್ಟಿಗೆ ೨೭ ಜನ ಪ್ರತಿನಿಧಿಗಳು ಬಂದಿದ್ದರು. ಮೊದಲು ವರದಿಯನ್ನು ಓದಿ ಮಾನ್ಯ ಮಾಡಿದ್ದಾಯಿತು. ಆ ಮೇಲೆ ಇಲ್ಲಿಯವರೆಗೆ ಕೂಡಿಸಲ್ಪಟ್ಟ ಒಟ್ಟು ೨॥ ಲಕ್ಷ ರೂಪಾಯಿಗಳಲ್ಲಿ ನೂರಕ್ಕೆ ೨೦ರಂತೆ ಪ್ರಚಾರ ಕಾರ್ಯಕ್ಕಾಗಿಯೂ ನೂರಕ್ಕೆ ೬೦ ರಂತೆ ಮುಖ್ಯ ಆದಿಜನ ಕಾರ್ಯಕ್ಕಾಗಿಯೂ ವಿನಿಯೋಗಿಸಬೇಕೆಂದು ನಿರ್ಣಯವಾಯಿತು. ಮತ್ತು ಆದಿಜನ ಶಿಷ್ಯ ವೃತ್ತಿಗಾಗಿ ಕೂಡಿಸಿದ ೩೫೦೦೦ ರೂಪಾಯಿಗಳನ್ನು ಹಿಂದುಸ್ಥಾನದಲ್ಲಿ ಕಾಲೇಜ ಶಿಕ್ಷಣ ಪಡೆಯುವ ಆದಿಜನ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ನಿರ್ಣಯವಾಯಿತು.

ಒಣ ಪ್ರತಿಷ್ಠೆಯು ನಿಂದ್ಯ ಪ್ರಯತ್ನ.

ಸೊಲ್ಲಾಪುರ ಸಮಾಚಾರ ಪತ್ರದ ತಾ. ೧೬-೬-೩೩ನೇ ಅಂಕದಲ್ಲಿ ಶ್ರೀ. ಉಜ್ಜನಿ ಸ್ವಾಮಿಗಳಿಗೆ ಶ್ರೀ. ನಾಲತವಾಡ ಶರಣಮ್ಮನವರು ವಿರಕ್ತ ಸ್ವಾಮಿಗಳ ಹಸ್ತದಿಂದ ಹಾರವನ್ನು ಅರ್ಪಣ ಮಾಡಿಸಿ ಸ್ವಾಮಿಗಳ ಸತ್ಕಾರ ಮಾಡಿಸಿದರೆಂದು ಸುಳ್ಳು ಸಂಗತಿ ಬರೆದಿದ್ದಾರೆ. ನಾವು ಶ್ರೀ. ಶರಣಮ್ಮನವರನ್ನು ಕಂಡು ಅವರ ಅಭಿಪ್ರಾಯದ ಪ್ರಕಾರ ಹೀಗೆ 'ಪ್ರಕಟ ಮಾಡುತ್ತೇವಲ್ಲಾ— ಶ್ರೀ ಶರಣಮ್ಮನವರು ಸ್ವಾಮಿಗಳಿಗೆ ಹಾರ ಹಾಕಿಸಿಲ್ಲ. ಯಾವ ವಿರಕ್ತ ಸ್ವಾಮಿಗಳೂ ಹಾರ ಹಾಕಿಲ್ಲ. ಶ್ರೀ. ಗಂಗವ್ವ ಎಂಬವರು ಪಾಠಶಾಲೆಯ ಒಬ್ಬ ವಿದ್ಯಾರ್ಥಿಯಿಂದ ಹಾರ ಹಾಕಿಸಿದರು.

ಆ ವಿದ್ಯಾರ್ಥಿಯು ಮುಂದೆ ವಿರಕ್ತಸ್ವಾಮಿಯಾಗುತ್ತಾನೋ ಪಟ್ಟದ ಮೂರ್ತಿಯಾಗುತ್ತಾನೋ ಯಾರು ಬಲ್ಲರು? ಹುಟಗಿ ಪಟ್ಟಾಧಿಕಾರಿಗಳು ಮೊದಲು ಒಂದು ವಿರಕ್ತಮಠದ ಮರಿಯಾಗಿರಲಿಲ್ಲೇ? ಹಾಗಾದರೆ ಈಗ ಅವರು ವಿರಕ್ತ ಸ್ವಾಮಿಗಳೇ? ಕಾಶಿ ಪೀಠದ ಹಿಂದಿನ ಶ್ರೀ. ಶಿವಲಿಂಗ ಶಿವಾಚಾರ್ಯರೂ ವಿರಕ್ತಮಠದ ಮರಿಯಾಗಿದ್ದಿಲ್ಲೇ? ಅವರಿಗೂ ವಿರಕ್ತರೆನ್ನಬಹುದೇ? ಇಂಥ ಸುಳ್ಳು ಸಂಗತಿ ಬರೆದು ತಮ್ಮ ಒಣಪ್ರತಿಷ್ಠೆ ಹೆಚ್ಚಿಸಬೇಕೆಂದು ನಿಂದ್ಯ ಪ್ರಯತ್ನ ಮಾಡಬಾರದು.

ಸೊಲ್ಲಾಪುರಕ್ಕೆ ಶ್ರೀ. ಉಜ್ಜನಿ ಸ್ವಾಮಿಗಳು ಬಂದ ನಂತರ ಇದೊಂದು ಕೆಟ್ಟ ಸಂಗತಿ ಪ್ರಕಟವಾಗಿರುತ್ತದೆ. ಇದರಿಂದ ಶ್ರೀ. ಶರಣಮ್ಮನವರ ಬಗ್ಗೆ ತಪ್ಪು ತಿಳುವಳಿಕೆ ಹುಟ್ಟಿಸಿ ಊರಲ್ಲಿ ಪರಸ್ಪರ ವೈರ ವನ್ನು ಹುಟ್ಟುವಂತೆ ಮಾಡುತ್ತಿದ್ದಾರೆಂದು ಸಮಾಜಬಾಂಧವರಿಗೆ ಗೊತ್ತಾಗುವುದಕ್ಕಾಗಿ ಶ್ರೀ. ಕಲ್ಯಾಣಶೆಟ್ಟಿ ವಕೀಲ ಮೊದಲಾದ ಪುಢಾರಿ ಜನರು ಛಾಪಿಸಿ ಹಂಚಿದ್ದನ್ನು ಕನ್ನಡ ಮಾಡಿ ಕಳಿಸಿದ್ದೇನೆ.

ಜಿ. ಎಚ್. ಮಠ ಸೊಲ್ಲಾಪುರ.

ಶ್ರೀಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಯ

ಸಂಸ್ಕೃತ ಪರೀಕ್ಷೆಯ ಪರಿಣಾಮ.

ಈ ವರುಷ ಹೊಸದಾಗಿ ಕಲಕತ್ತೆ ಸಂಸ್ಕೃತ ಪರೀಕ್ಷೆಗೆ ಕುಳಿತ ಶ್ರೀ. ಮ. ಶಿ. ಸಂಸ್ಥೆಯ ೭ ಜನ ಶಿವಯೋಗ ಸಾಧಕರು ಕೆಳಗೆ ಬರೆದ ವಿಷಯದಲ್ಲಿ ಪಾಸಾಗಿದ್ದಾರೆ

ವ್ಯಾಕರಣಾದ್ಯ:—೧. ರೇಣುಕ ದೇಶಿಕರು ಅರಳಿಕಟ್ಟಿ, ೨. ಬಸವಲಿಂಗದೇಶಿಕರು ಗುತ್ತಲ, ೩. ನೀಲಕಂಠದೇವರು ಗುಳೇದಗುಡ್ಡ, ೪. ಗಂಗಾಧರ ದೇವರು ಹಾಳಕೇರಿ,

ಕಾವ್ಯಾದ್ಯ:— (೧ ನೇ ತರಗತಿ) ಚಂದ್ರಶೇಖರ ದೇವರು ಅಮೂರು, ೨ ಶಿವಬಸವಾರ್ಯ ಅಂದಲಗಿ. (೨ನೇ ತರಗತಿ) ರುದ್ರ ದೇಶಿಕರು ಎಡಿಹಳ್ಳಿ.

ಈ ಪ್ರಕಾರ ಕುಳಿತ ಏಳೂ ಜನರು ಉತ್ತೀರ್ಣರಾದರು.

ವ್ಯವಸ್ಥಾಪಕ.
ಶ್ರೀ ಶಿವಯೋಗ ಮಂದಿರ.

ರಾಷ್ಟ್ರೀಯ ಸಭೆಯ ಪ್ರಮುಖರ ಪರಿಷತ್ತು!

ಸಾ. ಶಾಸ್ತ್ರಿ.

ಮಹಾತ್ಮಾ ಗಾಂಧಿ.

ಪಂ. ಮಾಲವೀಜಿ.

ಸೌ. ಸರೋಜಿನಿದೇವಿ.

ಡಾ. ಅನ್ಸಾರಿ.

ಸೌ. ಕಮಲಾದೇವಿ ಚ.

ಕಾಂಗ್ರೆಸ್ ಮುಂದಾಳುಗಳ ನಿರ್ಣಯ.

೧. ಶಾಸನೋಲ್ಲಂಘನೆಯ ಚಳವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳಬಾರದೆಂದೂ ೨. ವ್ಯಕ್ತಿಗತವಾದ ಶಾಸನೋಲ್ಲಂಘನೆಯ ಚಳವಳಿಯನ್ನು ಸ್ವೀಕರಿಸಬಾರದೆಂತಲೂ ಮತ್ತು ೩. ಗಾಂಧೀಜಿಯವರು ಯೋಗ್ಯವಾದ ಒಪ್ಪಂದದ ಸಲುವಾಗಿ ವ್ಹಾಯಿಸ್‌ರಾಯರೊಡನೆ ಪತ್ರವ್ಯವಹಾರ ಮಾಡಬಹುದೆಂತಲೂ ಪುಣೆಯ ಅಖಿಲಭಾರತೀಯ ಕಾಂಗ್ರೆಸ್ ಮುಂದಾಳುಗಳ ಪರಿಷತ್ತಿನಲ್ಲಿ ಬಹುಮತದ ಪ್ರಕಾರ ತೀರ್ಮಾನಿಸಲ್ಪಟ್ಟಿತು.

ಶರಣ ಸಂದೇಶ

ಶಾ. ಶ. ೧೮೫೫ನೆಯ ಆಷಾಢ ಬಹುಳ ೧೦ ಸೋಮವಾರ.

ಶ್ರೀ. ಉಜ್ಜನಿ ಪೀಠಾಚಾರ್ಯರ ಅಭಿಪ್ರಾಯ ವಿಮರ್ಶೆ.

ಶ್ರೀ. ಉಜ್ಜನಿ ಪೀಠಾಚಾರ್ಯರು ಸೊಲ್ಲಾಪುರಕ್ಕೆ ಆಗಮಿಸಿ ಒಂದು ತಿಂಗಳಾಯಿತು. ಇವರ ಆಗಮನದ ವಿಷಯವಾಗಿ ಸೊಲ್ಲಾಪುರದಲ್ಲಿ ಎರಡು ಸಂಗಡಗಳಾದುವು ತುಂಬಾ ವಿಷಾದಕರವು. ಸೊಲ್ಲಾಪುರದ ವೀರಶೈವ ಪ್ರಮುಖರು ಏಕಾಭಿಪ್ರಾಯದಿಂದ ಶ್ರೀಗಳನ್ನು ಬರಮಾಡಿಕೊಂಡಿದ್ದರೆ ಆ ಸ್ಥಳದವರಿಗೆ ಭೂಷಣವಿದ್ದಂತೆ ಶ್ರೀಗಳಿಗೂ ವೀರಶೈವ ಸಮಾಜಕ್ಕೂ ಭೂಷಣವಾಗುತ್ತಿದ್ದಿತು. ಅಂತಹ ಸುಪ್ರಸಂಗವನ್ನುಂಟುಮಾಡುವುದು ಮುಖ್ಯವಾಗಿ ಶ್ರೀಗಳವರಿಗೆ ಶಕ್ಯವಿದ್ದಿದ್ದರೂ ಹಾಗೆ ಆಗಮನ ಮಾಡದಿದ್ದುದು ಅತ್ಯಂತ ಖೇದದ ಸಂಗತಿಯಾಗಿದೆ.

ಶ್ರೀಗಳು ಸೊಲ್ಲಾಪುರಕ್ಕೆ ಆಗಮಿಸಿದ ನಂತರ ಅಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಪ್ರವಚನವನ್ನು ಹೇಳಲುಪಕ್ರಮಿಸಿರುವುದು ವಿಹಿತವಾಗಿದೆ, ಆ ಪ್ರವಚನದಲ್ಲಿ ವೀರಶೈವ ಸಮಾಜದ ಬಹುಭಾಗದವರು ತಮ್ಮ ವಿಷಯವಾಗಿ ತಿಳಿದುಕೊಂಡಿರತಕ್ಕ ಸಂಗತಿಗಳ ಸಂಬಂಧವಾಗಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟೀಕರಿಸಿದುದು ಸ್ತುತ್ಯವಾದುದಾಗಿದೆ. ಈ ಪ್ರಕಾರ ತಮ್ಮ ಅಭಿಪ್ರಾಯಗಳನ್ನು ತಾವೇ ಸ್ಪಷ್ಟವಾಗಿ ತಿಳಿಸುವುದು ವಿಹಿತವೇ ವಿನಾ ಅನ್ಯರಿಂದ ಹೇಳಿಸುವುದಾಗಲಿ ಅಥವಾ ಬಣಗಾರಿಗಾಗಿ ಅತ್ಯುತ್ತ ಅಲೆದಾಡುವವರಿಂದ ವ್ಯಾಖ್ಯಾನ ಮಾಡಿಸಿ ಅವರ ಅಭಿಪ್ರಾಯಕ್ಕೆ ತಾವು ಹೊಣೆಗಾರರಾಗುವುದಾಗಲಿ ಅಂತಹ ಶ್ರೇಷ್ಠ ಸ್ಥಾನವನ್ನು ಸ್ವೀಕರಿಸಿರತಕ್ಕವರಿಗಂತೂ ಸರ್ವಥಾ ಅನುಚಿತವಾದುದಾಗಿದೆ. ಆದುದರಿಂದ ಶ್ರೀಗಳವರು ಈಗ ಸೊಲ್ಲಾಪುರದ ಪ್ರವಚನದಲ್ಲಿ ತಾವೇ ತಮ್ಮ ಅಭಿಪ್ರಾಯಗಳನ್ನು ಹೇಳಲುಪಕ್ರಮಿಸಿರುವ ಪದ್ಧತಿಯು ತುಂಬಾ ಅಭಿನಂದನೀಯವಾದುದಾಗಿದೆ.

ಶ್ರೀಗಳು ಒಂದು ದಿನದ ಪ್ರವಚನದಲ್ಲಿ ಶ್ರೀ ಬಸವೇಶ್ವರಾದಿ ಪ್ರಮಥರನ್ನು ನಾವು ನಿಂದಿಸಿಲ್ಲ; ನಿಂದಿಸುವುದೂ ಇಲ್ಲವೆಂತಲೂ ಅವರು ತಮಗೆ ಪೂಜ್ಯರಾಗಿದ್ದಾರೆಂತಲೂ ಅವರೇ ಏಕೆ? ಲಿಂಗಾಂಗಿಯಾದ ಪ್ರತಿಯೊಬ್ಬ ವ್ಯಕ್ತಿಯೂ ತಮಗೆ ಪೂಜ್ಯನೆಂತಲೂ ಹೇಳಿದರೆಂದು ಅಲ್ಲಿಯ ವಿಜಯ ಮಾಸಪತ್ರಿಕೆಯ ಈ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದೆ. ಶ್ರೀಗಳು ಈ ಪ್ರಕಾರ ಹೇಳಿದುದು ನಿಜವಾಗಿರುವ ಪಕ್ಷದಲ್ಲಿ ಇವರ ಈ ಅಭಿಪ್ರಾಯವನ್ನು ವಿಚಾರಪರರಾದ ಸಕಲರೂ ತುಂಬಾ ಶ್ಲಾಘಿಸದಿರಲಾರರು. ಹಿಂದೆ ನಿಂದಿಸಿಲ್ಲವೆಂಬುದು ಸತ್ಯವೇ? ಮಿಥ್ಯವೇ? ಎಂದು ಕೆಲವರು ಪ್ರಶ್ನೆ ಮಾಡಬಹುದು ? ಹಿಂದೆ ನಿಂದಿಸಿದ ವಿಷಯವಾಗಿ ಆಧಾರಗಳನ್ನು ತೋರಿಸುವೆವೆಂದೂ ಕೆಲವರು ಹೇಳಬಹುದು. ಆದರೆ ಆ ಹಿಂದಣ ಸಂಗತಿಗಳನ್ನು ಚರ್ಚಿಸಿ ಶ್ರೀಗಳ ಈಗಿನ ಅಭಿಪ್ರಾಯವನ್ನು ಉಪೇಕ್ಷಿಸುವುದು ಅಥವಾ ಗೌಣವೆಂದು ತಿಳಿಯುವುದು ವಿಹಿತವಲ್ಲ.

ಮಹಾತ್ಮಾ ಗಾಂಧಿಯವರಂತಹ ಸತ್ಯಪ್ರಿಯರು ತಪ್ಪಾದ ಒಂದು ಕ್ರಿಯೆಯನ್ನು ಆಚರಿಸಿದಾಗ ನಾನು ತಪ್ಪು ಮಾಡಿದ್ದೇನೆಂದು ಹೇಳಬಹುದು. ಅಂತಹ ಮನೋಧೈರ್ಯ ಅಥವಾ ಸತ್ಯಾಭಿಮಾನವಿಲ್ಲದವರು ನಾನು ಆ ತಪ್ಪನ್ನು ಮಾಡಿಲ್ಲವೆಂದು ಹೇಳಬಹುದು. ಹೇಗೆ ಹೇಳಿದರೂ ಆ ಕ್ರಿಯೆಯು ತಪ್ಪೆಂದೇ ಉಭಯರೂ ಒಪ್ಪಿಕೊಂಡಿದ್ದಾರೆಂದೇ ಸಿದ್ಧವಾಗುವುದಿಲ್ಲವೇ? ಆ ಕ್ರಿಯೆಯು ತಪ್ಪಾದುದೇ ಅಥವಾ ಒಪ್ಪಿಗೆಯಾದುದೇ ಎಂಬುದು ಮುಖ್ಯ ವಿಷಯವಾಗಿರುತ್ತದೇ ವಿನಾ ಅವುಗಳನ್ನಾಚರಿಸಿದ ವ್ಯಕ್ತಿಗಳ ಅಂತಸ್ತುಗಳನ್ನು ನಿರ್ಣಯಿಸುವುದೇನೂ ಆಗಿನ ವಿಷಯವಾಗಿರುವುದಿಲ್ಲ.

ಅದೇ ಪ್ರಕಾರ ಶ್ರೀ ಬಸವಾದಿ ಪ್ರಮಥರು ವೀರಶೈವ ಮತೋದ್ಧಾರಕರಲ್ಲ, ನಮಗೆ ಪೂಜ್ಯರಲ್ಲ, ಅವರು ವಾಮಮಾರ್ಗಿಗಳು ಎಂದು ಮನಬಂದಂತೆ ನಿಂದಿಸುವುದು ವೀರಶೈವರಿಗೆ ಯುಕ್ತವೇ ಅಯುಕ್ತವೇ ಎಂಬದು ಮುಖ್ಯ ವಿಷಯವೇ ವಿನಾ ಹಾಗೆ ನಿಂದಿಸುವ ವ್ಯಕ್ತಿಗಳ ಯೋಗ್ಯತೆಯನ್ನು ಕಂಡು ಹಿಡಿಯುವುದೇನೂ ಪ್ರಕೃತದ ವಿಷಯವಲ್ಲ. ಆದುದರಿಂದ ಶ್ರೀಗಳು ಬಸವಾದಿ ಪ್ರಮಥರನ್ನು ನಿಂದಿಸಿಲ್ಲ, ಮತ್ತು ನಿಂದಿಸುವುದೂ ಇಲ್ಲ. ಇಷ್ಟೇ ಅಲ್ಲ, ಅವರು ತಮಗೆ ಪೂಜ್ಯರಾಗಿದ್ದಾರೆಂದು ಹೇಳಿದ ನಂತರ ಹಿಂದಣ ಸಂಗತಿಗಳನ್ನು ಚರ್ಚಿಸುವುದು ಈ ಪ್ರಸಂಗದಲ್ಲಿ ಅನಾವಶ್ಯಕವು.

ಸೊಲ್ಲಾಪುರವು ಶ್ರೀ ಸಿದ್ಧರಾಮೇಶನ ವಿಷಯದಲ್ಲಿ ಅಪಾರ ಭಕ್ತಿಯುಳ್ಳ ಸ್ಥಳವಾದುದರಿಂದ ಪಾರಾಗಿಹೋಗಲು ಮತ್ತು ಭಕ್ತರನ್ನು ಅಧೀನಮಾಡಿಕೊಳ್ಳಲು ಈ ಪ್ರಕಾರ ಬಸವಾದಿ ಪ್ರಮಥರನ್ನು ನಿಂದಿಸುವುದಿಲ್ಲವಾಗಿ ಹೇಳಿದ್ದಾರೆ. ಈ ಸ್ಥಳ ಬಿಟ್ಟ ನಂತರ ಪುನಃ ತಮ್ಮ ಕಾಯಕ ನಡೆಸುತ್ತಾರೆಂದು ಕೆಲವರು ತರ್ಕಿಸಿದ್ದಾರೆ. ನಮ್ಮ ಮುಖ್ಯ ಧ್ಯೇಯವು ವಿರಕ್ತರನ್ನು ಮೂಲೆಗೊತ್ತುವುದಾಗಿದೆಯೇ ವಿನಾ ಬಸವಾದಿ ಪ್ರಮಥರ ವಿಷಯವಲ್ಲೇನೂ ಇಲ್ಲ. ಆ ಹಿಂದಣ ಪ್ರಮಥರನ್ನು ದೂಷಿಸಿದ್ದರಿಂದ ಸಮಾಜವು ನಮಗೆ ಪ್ರತಿಕೂಲವಾಯಿತು. ಆದಕಾರಣ ಇನ್ನು ಆ ಮಾರ್ಗವನ್ನು ಬಿಟ್ಟು ವಿರಕ್ತರನ್ನು ಮೂಲೆಗೊತ್ತುವ ಕಾರ್ಯವೊಂದನ್ನೇ ಕೈಕೊಳ್ಳಬೇಕೆಂದು ಯೋಚಿಸಿ ಪ್ರಮಥರ ವಿಷಯದಲ್ಲಿ ಆದರ ತೋರಿಸಿ ವಿರಕ್ತರನ್ನು ಸಮಾಜದಿಂದ ತಳ್ಳುವ ಪ್ರವಚನ ಮಾಡಿದರೆಂದು ಕೆಲವರು ತರ್ಕಿಸಿದ್ದಾರೆ. ಶ್ರೀಗಳು ಪ್ರಮಥರ ವಿಷಯದಲ್ಲಿ ಪ್ರಕಟಿಸಿದ ಸದಭಿಪ್ರಾಯವನ್ನು ಈ ಪ್ರಕಾರ ನಾನಾ ರೀತಿಯಾಗಿ ಈಗಲೇ ತರ್ಕಿಸಿ ಜನರಲ್ಲಿ ಅವಿಧವಾದ ಕಲ್ಪನೆಗಳನ್ನುಂಟುಮಾಡುವುದು ಯೋಗ್ಯವಲ್ಲ. ಒಂದು ಶ್ರೇಷ್ಠವಾದ ಗುರುಪೀಠವನ್ನು ವಹಿಸಿ ಗಣ್ಯರಾಗಿ ಬಹುಜನಗಳ ಮಧ್ಯದಲ್ಲಿ ಹೇಳಿದವರ ಅಭಿಪ್ರಾಯವು ಪ್ರಾಮಾಣಿಕವಾದುದೆಂದು ತಿಳಿಯುವುದೇ ವಿಹಿತವಲ್ಲದೆ ಆ ವಿಷಯದಲ್ಲಿ ಈಗಲೇ ನಾನಾ ತರ್ಕಗಳನ್ನು ಮಾಡಿ ಪ್ರಕೃತದ ಅಭಿಪ್ರಾಯವನ್ನು ಉಪೇಕ್ಷಿಸುವುದು ವಿಹಿತವಲ್ಲ.

ಶ್ರೀ ವಿರಕ್ತ ಸ್ವಾಮಿಗಳು ವೀರಶೈವ ಅಷ್ಟಾವರಣಗಳಿಗೆ ಸಂಬಂಧಪಟ್ಟವರಲ್ಲವೆಂತಲೂ ಇವರಿಗೆ ದೀಕ್ಷೆ ಪಾದೋದಕ ಪ್ರಸಾದಗಳನ್ನು ಅನುಗ್ರಹಿಸುವ ಅಧಿಕಾರವಿಲ್ಲವೆಂತಲೂ ಶ್ರೀಗಳು ತಮ್ಮ ಒಂದು ಪ್ರವಚನದಲ್ಲಿ ಹೇಳಿದರೆಂದು ಪ್ರಕಟವಾಗಿದೆ. ಆ ವಿಷಯವಾಗಿ ಶ್ರೀಗಳಿಗೆ ಅಲ್ಲಿಯ ಶಿವಶರಣ ಸಂಘದವರು ಪ್ರಶ್ನೆ ಮಾಡಿದ್ದಾರೆಂತಲೂ ಈ ಪತ್ರಿಕೆಯ ಬೇರೊಂದು ಕಡೆ ಪ್ರಕಟವಾದ ಸಂಗತಿಯಿಂದ ಗೊತ್ತಾಗುತ್ತದೆ. ಈ ವಿಷಯವು ನಿಜವಾಗಿರುವ ಪಕ್ಷದಲ್ಲಿ ಶ್ರೀಗಳ ಈ ಅಭಿಪ್ರಾಯವನ್ನು ನಾವು ತುಂಬಾ ವಿರೋಧಿಸುತ್ತೇವೆ. ವೀರಶೈವ ಅಷ್ಟಾವರಣಗಳಲ್ಲಿಯ ಜಂಗಮವೇ ವಿರಕ್ತವರ್ಗವು. ಈ ವಿರಕ್ತವರ್ಗವನ್ನು ಸಮಾಜದಿಂದ ತಳ್ಳಿಹಾಕಿ ಗುರು

ಜಂಗಮಾಧಿಕಾರಗಳೆರಡೂ ತಮಗೇ ಇವೆಯೆಂದು ಹೇಳುವುದು ಅನುಚಿತವೂ ಅಶಾಸ್ತ್ರೀಯವೂ ಆಗಿದೆ.

ಶ್ರೀಗಳು ಶಾಸ್ತ್ರಸಮ್ಮತವಾದ ಮತ್ತು ಈಗಲೂ ಆಚರಣೆಯಲ್ಲಿರುವ ಜಂಗಮಾಧಿಕ್ಯದ ವಿಷಯವನ್ನು ಈ ಪ್ರಕಾರ ನಿಃಶಂಕೆಯಿಂದ ಅನುಸರಿಸಿ ಬೋಧಿಸಿದ್ದಾದರೆ ಸಮಾಜದಲ್ಲುಂಟಾಗಿರುವ ಈಗಿನ ಕಲಹಾಗ್ನಿಯು ಶಾಂತವಾಗಿ ಸಮಾಜದ ಗುರುಜಂಗಮರೀರ್ವರೂ ಅವರವರ ಅಂತಸ್ತುಗಳಿಗನುಗುಣವಾದ ಮಾನಮನ್ನಣೆಗಳನ್ನು ಹೊಂದಿ ಸಮಾಜೋದ್ಧಾರದ ಕಾರ್ಯ ಮಾಡಲು ಅನುಕೂಲವಾಗುವುದು.

ಶ್ರೀಗಳವರಿಗೆ ಈ ವಿಧವಾದ ಅಭಿಪ್ರಾಯವು ಅಲ್ಲಿಯ ಪರಮಪೂಜ್ಯ ಶ್ರೀ ಸಿದ್ಧರಾಮೇಶನ ಕೃಪೆಯಿಂದುಂಟಾಗಿ ವೀರಶೈವ ಸಮಾಜವನ್ನು ದಹಿಸುತ್ತಿರುವ ಕಲಹಾಗ್ನಿಯನ್ನು ಶಾಂತಗೊಳಿಸಿದ ಘನತರವಾದ ಕೀರ್ತಿಯು ಶ್ರೀಗಳವರಿಗೆ ಪ್ರಾಪ್ತವಾಗಿ ಶ್ರೀಗಳವರನ್ನು ಕಳುಹಿಸುವಾಗಲಾದರೂ ಆ ಪಟ್ಟಣದ ಎರಡೂ ಸಂಗಡದವರು ಭಕ್ತಿವಿಶ್ವಾಸಗಳಿಂದ ಶ್ರೀಗಳವರ ದರ್ಶನಾಶೀರ್ವಾದಗಳಿಗೆ ಪಾತ್ರರಾಗುವಂತಹ ಸುಪ್ರಸಂಗ ಬರಲೆಂದು ಹಾರೈಸುತ್ತೇವೆ.

ಸ್ಫುಟ ಸೂಚನೆ.

ಕರ್ಣಾಟಕ ಏಕೀಕರಣವಾಗುವದೆಂದು?

ಕರ್ನಾಟಕದ ಏಕೀಕರಣವು ಅತ್ಯಾವಶ್ಯಕವು. ಇದು ಕರ್ನಾಟಕದ ಏಳಿಗೆಗೆ ಮೂಲವಾಗಿದೆ. ಇಂತಹ ಮಹತ್ವದ ವಿಷಯಕ್ಕೆ ಕನ್ನಡಿಗರು ತಮ್ಮ ಅಭಿಪ್ರಾಯ ತಿಳಿಸಲು ಇಂಗ್ಲೆಂಡಿಗೆ ಬರುವುದಾಗಿ ತಿಳಿಸಿದರೆ ನಿಮ್ಮ ಸಾಕ್ಷಿಯು ಆವಶ್ಯಕವಿಲ್ಲವೆಂದು ಸರಕಾರದವರು ಹೇಳಿದುದು ಅನ್ಯಾಯವೂ ವಿಷಾದಕರವೂ ಅಲ್ಲವೇ?

ಕನ್ನಡಿಗರಿಗೆ ಸರಕಾರದವರು ತಿಳಿಸಿದ ಸಂಗತಿಯು ದುಃಖಕರವಾದುದಾಗಿದ್ದರೂ ಆಶ್ಚರ್ಯಕರವಾದುದೇನೂ ಅಲ್ಲವೆಂದೇ ನಮಗೆ ತೋರುತ್ತದೆ ಏಕೆಂದರೆ ನಾವು ಈ ವಿಷಯದಲ್ಲಿ ಮಾಡಬೇಕಾದಷ್ಟು ಜನಜಾಗೃತಿಯನ್ನು ಮಾಡಿಲ್ಲ. ಕರ್ನಾಟಕ ಏಕೀಕರಣವು ನಮ್ಮ ಪ್ರಾಣಸ್ವರೂಪವಾದುದೆಂದು ನಾವು ನ್ಯಾಯವಾದ ಮಾರ್ಗದಲ್ಲಿ ಅದ್ಭುತವಾದ ಚಟುವಟಿಕೆಯನ್ನು ನಡಿಸದೆ ಸರಕಾರವು ಇತ್ತಕಡೆಗೆ ಲಕ್ಷಿಸುವುದು ಶಕ್ಯವಿಲ್ಲ. ಈಗ ಯಾವ ಸರಕಾರವು ನಮ್ಮ ಸಂಗತಿಗಳನ್ನು ತಿಳಿಸಲು ಬರುತ್ತೇವೆಂದು ನಾವೇ ಹೇಳಿದರೆ ಬೇಡವೆಂದಿದೆಯೋ ಅದೇ ಸರಕಾರವು ನಿಮ್ಮ ಸಂಗತಿಗಳೇನೆಂಬುದನ್ನು ತಾನೇ ಕೇಳಲು ಬರುವಂತೆ ಜನರಲ್ಲಿ ಜಾಗೃತಿಯನ್ನುಂಟುಮಾಡದೆ ಕರ್ನಾಟಕ ಏಕೀಕರಣವಾಗುವುದು ಶಕ್ಯವಿಲ್ಲ.

ಪ್ರತಿಯೊಂದು ತಾಲೂಕಿನಲ್ಲಿ ಕರ್ನಾಟಕ ಏಕೀಕರಣ ಸಂಘದ ಶಾಖೆಗಳು ಏರ್ಪಟ್ಟು ಮೊದಲು ಜನಸಾಮಾನ್ಯರಿಗು ಕೂಡಾ ಈ ವಿಷಯದ ಮಹತ್ವವನ್ನು ತಿಳಿಸಿಕೊಡಬೇಕು. ಈ ವಿಷಯದಲ್ಲಿ ಜನರು ಜಾಗೃತರಾದ ನಂತರ ಪರಿಣಾಮಕಾರಿಯಾದ ವಿಧಾಯಕ ಕಾರ್ಯಗಳನ್ನು ಕೈಕೊಳ್ಳಬೇಕು. ಆಗ ಸರಕಾರವು ಕನ್ನಡಿಗರ ಕಡೆಗೆ ತಿರುಗುವುದು. ಆದುದರಿಂದ ಸರಕಾರವು ಕನ್ನಡಿಗರಿಗೆ ಮಾಡಿದ ಈ ಅವಮಾನವನ್ನು ಲಕ್ಷಿಸಿ ಕರ್ನಾಟಕ ಏಕೀಕರಣದ ಜನಜಾಗೃತಿಯ ಕಾರ್ಯವನ್ನು ಈ ಸಂಘದವರು ತೀವ್ರತರವಾಗಿ ಮಾಡುವರೆಂದು ನಾವು ನಂಬಿದ್ದೇವೆ.

ಗಾಂಧೀಜಿಯವರ ಮುಂದಾಲೋಚನೆ.

ಹಿಂದುಸ್ಥಾನದ ರಾಜಕೀಯ ವಾತಾವರಣವನ್ನು ಶಾಂತಗೊಳಿಸಬೇಕೆಂದು ಮ. ಗಾಂಧೀಜಿಯವರು ತುಂಬಾ ಪ್ರಯತ್ನಿಸುತ್ತಿದ್ದಾರೆ. ಇವರ ಈ ಸೌಜನ್ಯವೃತ್ತಿಯು ದೌರ್ಬಲ್ಯದ ಲಕ್ಷಣವೆಂದು ಸರಕಾರವು ತಿಳಿಯುವುದು ಸರಿಯಲ್ಲ. ರಾಷ್ಟ್ರೀಯ ಸಭೆಯು ಈಗ ಮೆತ್ತಗಾಗಿದೆಯೆಂದು ತಿಳಿದು ಇದು ಸರಕಾರಕ್ಕೆ ಶರಣು ಬರಬೇಕೆಂದಪೇಕ್ಷಿಸುವುದು ಕ್ಷೇಮಕರವಲ್ಲ.

ರಾಷ್ಟ್ರಕ್ಕೆ ಗೌರವಯುಕ್ತವಾದ ಒಪ್ಪಂದಕ್ಕೆ ರಾಷ್ಟ್ರೀಯ ಸಭೆಯು ಸಿದ್ಧವಾಗಿದೆಯೆಂದು ಗಾಂಧೀಜಿಯವರು ವ್ಹಾಯಿಸ್‌ರಾಯರಿಗೆ ಬರೆದುಕೊಂಡು ಸಂಧಿಯವಿಷಯವಾಗಿ ಸಂಭಾಷಣೆ ಮಾಡಲು ಹೋಗುವ ಸಿದ್ಧತೆಯನ್ನು ಪುಣೆಯ ತಮ್ಮ ದಿವ್ಯ ಭಾಷಣದಲ್ಲಿ ತಿಳಿಸಿದ್ದಾರೆ. ವ್ಹಾಯಿಸ್‌ರಾಯರು ಈ ಸಂಭಾಷಣೆಗೆ ಒಪ್ಪಿ ರಾಷ್ಟ್ರವು ಸಂಧಿಗೆ ಕೈ ನೀಡಿದುದನ್ನು ಹಿಡಿಯುವುದೇ ಕ್ಷೇಮಕರವು. ಹಾಗೆ ಮಾಡದೆ ನಿರಾಕರಿಸಿದ್ದಾದರೆ ರಾಜಕೀಯ ವಾತಾವರಣವನ್ನು ಪ್ರಕ್ಷುಬ್ಧಗೊಳಿಸಿದ ದೋಷವು ಸರಕಾರಕ್ಕೇನೇ ಬರುವುದು.

ಸರಕಾರವು ಈ ಸುಸಮಯವನ್ನು ಕಳೆದುಕೊಳ್ಳದೆ ಹಿಂದುಸ್ಥಾನಕ್ಕೂ ಇಂಗ್ಲೆಂಡಿಗೂ ಹಿತಕರವಾದ ಶ್ರೇಷ್ಠಮಾರ್ಗವನ್ನೇ ಈಗಲಾದರೂ ಅನುಸರಿಸಿ ರಾಷ್ಟ್ರದ ರಾಜಕೀಯ ಅಸಂತೋಷವನ್ನು ನಿವಾರಣೆ ಮಾಡಲೆಂದೇ ನಾವು ಹಾರೈಸುತ್ತೇವೆ.

ವಿಧಾಯಕ ಕಾರ್ಯಗಳ ಆವಶ್ಯಕತೆ.

ರಾಷ್ಟ್ರದಲ್ಲಿ ನಿಜವಾದ ಚೈತನ್ಯವಿಲ್ಲದೆ ಯಾವ ಚಟವಟಿಕೆಗಳೂ ಫಲಕಾರಿಯಾಗುವುದಿಲ್ಲ. ತೋರಿಕೆಗಾಗಿ ಮಾಡುವ ಚಟುವಟಿಕೆಗಳಾಗಲಿ ಅಥವಾ ಆವೇಶಭರದಿಂದುಂಟಾಗುವ ಚಟವಟಿಕೆಗಳಾಗಲಿ ಸ್ವಲ್ಪಕಾಲದಲ್ಲಿಯೇ ನಿಂತುಹೋಗುತ್ತವೆ. ಆದ ಕಾರಣ ಒಂದು ಪ್ರಾಂತದ ಚಟುವಟಿಕೆಯಾಗಲಿ ಅಥವಾ ರಾಷ್ಟ್ರದ ಚಟುವಟಿಕೆಯಾಗಲಿ ಅದು ಫಲಕಾರಿಯಾಗಬೇಕಾದರೆ ವಿಧಾಯಕ ಕಾರ್ಯಗಳಿಂದ ಜನರಲ್ಲಿ ನಿಜವಾದ ತಿಳುವಳಿಕೆ ಮತ್ತು ಸಾಮರ್ಥ್ಯಗಳುಂಟಾಗುವಂತೆ ಮಾಡಬೇಕು.

ರಾಷ್ಟ್ರಕ್ಕೆ ಹಳ್ಳಿಗ್ರಾಮಗಳು ಮೂಲವಾಗಿವೆ. ಅವುಗಳಲ್ಲಿ ನಿಜವಾದ ಶಕ್ತಿಯು ಬರುವಂತೆ ಸಂಘಟಿತವಾದ ಚಟುವಟಿಕೆಗಳು ನಡೆಯಬೇಕು. ಜನರಲ್ಲಿ ಸಾಂಪತ್ತಿಕ ಸ್ವಾವಲಂಬನೆ, ಸಮಾನತೆಯಿಂದ ಏರ್ಪಟ್ಟ ನಿಜವಾದ ಐಕಮತ್ಯ ರಾಷ್ಟ್ರದ ಹಿತಾಹಿತಗಳ ನಿಜಜ್ಞಾನ ಇವು ಉಂಟಾದ ಹೊರತು ಯಾವ ಚಟುವಟಿಕೆಗಳಿಗೂ ಸ್ಥಿರವಾದ ಶಕ್ತಿಯುಂಟಾಗುವುದಿಲ್ಲ.

ಭರತಖಂಡವು ಘನವಾದ ರಾಷ್ಟ್ರವಾಗಿ ವಿಶೇಷ ಹಳ್ಳಿಗಳಿಂದಲೂ ಅಜ್ಞಜನರಿಂದಲೂ ದಾರಿದ್ರ್ಯದಿಂದಲೂ ನಾನಾತರದ ಮೇಲುಕೀಳುಗಳೆಂಬ ಸಾಮಾಜಿಕ ದೋಷಗಳಿಂದಲೂ ಕೂಡಿರುವ ಕಾರಣ ಈ ರಾಷ್ಟ್ರಕ್ಕೆ ಸ್ಥಿರವಾದ ನಿಜ ಸಾಮರ್ಥ್ಯವುಂಟಾಗಬೇಕಾದರೆ ಮೇಲಣ ದೋಷಗಳನ್ನು ಕಳೆಯಲು ವಿಶೇಷವಾದ ಪ್ರಯತ್ನವು ಸಂಘಟಿತವಾಗಿ ಜರುಗಬೇಕು. ಆದಕಾರಣ ಅಸ್ಪೃಶ್ಯತಾನಿವಾರಣೆ, ಖಾದಿ ಪ್ರಸಾರ, ಮೊದಲಾದ ವಿಧಾಯಕ ಕಾರ್ಯಗಳ ಕಡೆಗೆ ಲಕ್ಷಿಸುವುದು ವಿಹಿತವಲ್ಲವೇ?

ಪಂಚಾಚಾರ್ಯರೆಂದು ಹೇಳಿಕೊಳ್ಳುವವರ

ಅತಿ ನಿಂದ್ಯ ಮತ್ತು ಸಮಾಜಘಾತಕ ಪ್ರಯತ್ನ.

ಯಾವ ವೀರಶೈವ ಧರ್ಮವು ವಿಶಿಷ್ಟವಾದ ತತ್ವವನ್ನೂ ಆಚಾರ ವಿಚಾರಗಳನ್ನೂ ಅನುಸರಿಸುವವರಲ್ಲಿ ಜಾತಿ ಅಥವಾ ವರ್ಣಭೇದವಿಲ್ಲವೆಂದು ಸಾರುತ್ತದೆಯೋ ಅಂಥ ಶ್ರೇಷ್ಠವಾದ ಈ ವೀರಶೈವ ಧರ್ಮದಲ್ಲಿ ಪಂಚಾಚಾರ್ಯರೆಂದು ಹೇಳಿಕೊಳ್ಳುವ ಈಗಿನವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳನ್ನು ಏರ್ಪಡಿಸುತ್ತಿದ್ದಾರೆ. ಮತ್ತು ಈ ನಾಲ್ಕು ವರ್ಣದವರಿಗೆ ಅನುಕ್ರಮವಾಗಿ ಶರ್ಮ, ವರ್ಮ, ದಾಸ, ಗುಪ್ತ ಎಂಬ ಹೆಸರನ್ನು ಇಡಹತ್ತಿದ್ದಾರೆ.

ಇವರಲ್ಲಿ ಬ್ರಾಹ್ಮಣರು ತಾವೆಂನೂ ಬೇರೆಯವರು ಕ್ಷತ್ರಿಯ, ವೈಶ್ಯ, ಶೂದ್ರರೆಂದೂ ಹೇಳುತ್ತಾರೆ. ಪಾಟೀಲ, ದೇಸಾಯಿ, ದೇಶಮುಖ ಇವರು ಕ್ಷತ್ರಿಯರಂತೆ. ವ್ಯಾಪಾರ ಮಾಡುವ ಬಣಜಿಗರು ವೈಶ್ಯರಂತೆ. ಒಕ್ಕಲತನ ಮೊದಲಾದ ಬೇರೆ ಉದ್ಯೋಗ ಮಾಡುವ ವೀರಶೈವರು ಶೂದ್ರರಂತೆ! ಸಮಭಾವವನ್ನುಂಟುಮಾಡುವ ಈ ಯುಗದಲ್ಲಿ ಇವರು ಈ ಪ್ರಕಾರ ಅನ್ಯಾಯವಾಗಿ ಹೇಳುವದು ಭಕ್ತರಿಗೆ ಅತ್ಯಂತ ಸಂತಾಪವನ್ನುಂಟುಮಾಡುವದಿಲ್ಲವೇ?

ಬೇರೆ ಜಾತಿಯವರು ವೀರಶೈವರಿಗೆ ಶೂದ್ರರೆನ್ನುತ್ತಾರೆ. ಆದರೆ ವೀರಶೈವರ ಗುರುಗಳೆಂದು ಹೇಳಿಕೊಳ್ಳುವ ಇವರೇ ನಮಗೆ ಶೂದ್ರರೆಂದು ಹೇಳುವ ಅಕ್ಷಮ್ಯವಾದ ಅಪರಾಧವನ್ನು ಇವರು ಮಾಡುತ್ತಿರುವದನ್ನು ನೋಡಿ ಭಕ್ತರಿಗೆ ಸಂತಾಪ ಉಂಟಾಗದಿರುವುದು ನಾಚಿಕೆಗೇಡಿತನವಲ್ಲವೇ? ಇಂಥ ವಾಮ ಮಾರ್ಗವನ್ನು ನಮ್ಮ ಪಂಚಾಚಾರ್ಯರು ಈಗ ೧೦-೧೫ ವರುಷಗಳಿಂದ ಅನುಸರಿಸುತ್ತಿದ್ದರೂ ಇವರಿಗೆ ಜಗದ್ಗುರುವೆಂದು ಕರೆದುಕೊಂಡು ಬಂದು ಒಹುಮಾನಮಾಡಿ, ಇಂಥವರಿಗೆ ಪಾದಪೂಜೆ ಮಾಡಿ ಇವರಿಗೆ ಹಣವನ್ನು ಸೂರೆ ಮಾಡುವದು ಪುಣ್ಯವೇ ಪಾಪವೇ ಎಂಬದನ್ನು ಭಕ್ತರು ಯೋಚಿಸಬಾರದೇ? ಈ ಸಮಾಜಘಾತಕರಾದ ಗುರುಗಳಿಗೆ ಭಕ್ತಿಭಾವದಿಂದ ನಡೆದುಕೊಳ್ಳುವದಕ್ಕೆ ಕರೆದುಕೊಂಡು ಬರುವದೆಂದರೆ ಕುರಿಗಳು ಕೂಡಿ ತೋಳನನ್ನು ಕರೆದುಕೊಂಡು ಬಂದಂತೆಯೇ ಸರಿ.

ಬಾಳೆಹಳ್ಳಿಯ ಪ್ರಥಮ ಪೀಠಾಚಾರ್ಯರಾದ ಪರಮಪೂಜ್ಯ ಶ್ರೀ ರೇವಣಾರ್ಯರ ಉಪದೇಶವೆಂಬ ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ವೀರಶೈವರಲ್ಲಿ ಜಾತಿಗಳಿಲ್ಲವೆಂದು ಸಿದ್ಧಗೊಳಿಸಿದೆ. ಈ ವಿಚಾರವು ನಿಮಗೆ ಮಾನ್ಯ ಇದೆಯೋ ಇಲ್ಲವೇ? ಎಂದು ಈಗ ಆ ಪೀಠದ ಮೇಲಿರುವ ಸ್ವಾಮಿಗಳಿಗೆ ವೀರಶೈವ ತತ್ವ ಪ್ರಚಾರಕ ಸಂಘದವರು ಕೇಳಿ ಒಂದು ವರುಷವಾಗುತ್ತಾ ಬಂದರೂ ಇನ್ನೂ ಉತ್ತರವಿಲ್ಲ. ಇದರ ಮೇಲಿಂದ ಈ ಗುಂಪಿನವರು ಏನು ನಡೆಸಿದ್ದಾರೆಂಬುದನ್ನು ವಿಚಾರ ಮಾಡಿರಿ.

ಯಾವ ಶ್ರೀ ಬಸವೇಶ್ವರ, ಶ್ರೀ ಪ್ರಭುದೇವ ಶ್ರೀ ಸಿದ್ಧರಾಮೇಶ್ವರ, ಶ್ರೀ ರೇಣುಕಾಚಾರ್ಯ ಮೊದಲಾದ ಪೂಜ್ಯ ವಿಭೂತಿಗಳು ತಮ್ಮ ಆಚಾರವಿಚಾರಗಳಿಂದ ವೀರಶೈವರಲ್ಲಿ ಜಾತಿಭೇದವಿಲ್ಲವೆಂದು ಸಿದ್ಧಮಾಡಿ ಸಮಾಜಕ್ಕೆ ಪ್ರಬಲವಾದ ಶಕ್ತಿಯನ್ನುಂಟುಮಾಡಿ ಸಮಾಜವನ್ನು ಉದ್ಧಾರಮಾಡಿದ್ದಾರೆಯೋ ಅಂಥ ಪಂಥದವರೆಂದು ಹೇಳಿಕೊಳ್ಳುವ ಈಗಿನ ಪಂಚಾಚಾರ್ಯರು ವೀರಶೈವರಲ್ಲಿ ಮೇಲು ಕೀಳುಗಳೆಂಬ ಜಾತಿಯನ್ನು ಕಲ್ಪಿಸುವದು ಅತ್ಯಂತ ನಿಂದ್ಯವಾದುದಲ್ಲವೇ? ದೇಶದಲ್ಲೆಲ್ಲಾ ಐಕ್ಯಮತ್ಯವನ್ನುಂಟುಮಾಡಲು ರಾಷ್ಟ್ರದ ಮುಂದಾಳುಗಳು ಪ್ರಯತ್ನಿಸುತ್ತಿರುವಾಗ ವೀರಶೈವರ ಗುರುಗಳೆಂದು ಹೇಳಿಕೊಳ್ಳುವವರು ನಮ್ಮ ಸಮಾಜದಲ್ಲಿಯೇ ಒಡಕು ಹುಟ್ಟಿಸುವ ನಿಂದ್ಯ ಪ್ರಯತ್ನ ಮಾಡುತ್ತಿರುವದು ಯೋಗ್ಯವೇ ?

ಈಗಿನ ಪಂಚಾಚಾರ್ಯರು ಬಹು ಧೂರ್ತರಿದ್ದಾರೆ. ಇವರು ತಮ್ಮ ಕಾರ್ಯ ಸಾಧಿಸಿಕೊಳ್ಳಲು ಸಮಯಬಂದಂತೆ ಮುಗ್ಧ ಭಕ್ತರಿಗೆ ಏನನ್ನಾದರೂ ಹೇಳುತ್ತಿರುತ್ತಾರೆ. ಈ ಪ್ರಕಾರ ಮಾಡಿ ಭಕ್ತರನ್ನು ಸುಲಿಯುವದು ಇವರದೊಂದು ಉದ್ಯೋಗವೇ ಆಗಿದೆ. ಇವರ ಈ ಕೃಷ್ಣ ಕಾರಸ್ಥಾನಿಗೆ ಅನೇಕ ಕಡೆಯ ಮುಗ್ಧ ಭಕ್ತರು ಮೋಸ ಹೋಗಿ ಕಡೆಗೆ ಈ ಆಚಾರ್ಯರ ಮೇಲೆ ದಾವೆ ಮಾಡಿ ನ್ಯಾಯಸ್ಥಾನಕ್ಕೆ ಇವರನ್ನು ಎಳೆದ ದೃಷ್ಟಾಂತಗಳಿಲ್ಲವೆಂತಲ್ಲ. ಬಳ್ಳಾರಿಯಲ್ಲಿ ಇಂಥ ಒಂದು ದಾವಾ ನಡೆದಿದೆ. ಇದರಿಂದಲಾದರೂ ಭಕ್ತರು ಬುದ್ಧಿ ಕಲಿಯಬಾರದೇ?

ಇಂಥ ಗುರುಗಳ ಲೀಲೆಗಳಿಗೆ ಭಕ್ತರು ಬಲಿಬಿದ್ದುದರಿಂದಲೇ ಭಕ್ತವರ್ಗವು ನಾನಾ ಕಷ್ಟನಷ್ಟಗಳಿಗೀಡಾಗಿದೆ. ಈಗಲಾದರೂ ಹೀಗೆಯೇ ಮಾಡಿದರೆ ಇನ್ನೂ ಅಧೋಗತಿಗೆ ಹೋಗಲಿಕ್ಕಿಲ್ಲವೇ? ಆದುದರಿಂದ ನಾನು ಹೇಳುವದೇನಂದರೆ ಸಮಾಜದಲ್ಲಿ ಉಚ್ಚನೀಚ ಕಲ್ಪನೆಗಳನ್ನುಂಟುಮಾಡುವಂಥ ಮತ್ತು ಆ ಮೂಲಕ ಸಮಾಜದಲ್ಲಿ ಒಡಕು ಹುಟ್ಟಿಸಿ ಸಮಾಜಪುರುಷನ ಅಂತಃಕರಣದಲ್ಲುಂಟಾಗುವ ಬೆಂಕಿಯಿಂದ ತಮ್ಮ ದಕ್ಷಿಣೆಯೆಂಬ ರೊಟ್ಟಿಯನ್ನು ಬೇಯಿಸಿಕೊಳ್ಳುವಂಥವರಿಗೆ ಗುರುಗಳೆನ್ನಬಾರದು. ಯಾರಿಗೆ ಸಮಾಜದ ಬಗ್ಗೆ ತಳಮಳವಿಲ್ಲವೋ ಯಾರು ತನುಮನಧನಗಳನ್ನು ಸಮಾಜಸೇವೆಗೆ ಸೂರೆಮಾಡುವದಿಲ್ಲವೋ ಅವರಿಗೆ ಜಗದ್ಗುರುವೆನ್ನಬಾರದು. ಯಾರಿಗೆ ಆನೆ ಕುದುರೆ ಅಡ್ಡಪಾಲಕಿ ಉದ್ದಪಾಲಕಿಗಳ ಉತ್ಸವದ ಅಭಿಲಾಷೆಯಿದೆಯೋ ಯಾರು ಸಂಸಾರದ ನಾನಾ ಭೋಗ ವಿಲಾಸಗಳಲ್ಲಿ ಮಗ್ನರಾಗಿದ್ದಾರೆಯೋ ಅವರೇ ಗುರುಗಳೆಂದು ಅವರ ಪಾದಪೂಜೆಯನ್ನು ಮಾಡಬಾರದು.

ವೀರಶೈವ ಧರ್ಮವನ್ನು ಉದ್ಧಾರಮಾಡುವದು ಹಾಗಿರಲಿ. ಸಾವಿರಾರು ವೀರಶೈವರು ಪರಧರ್ಮಗಳಿಗೆ ಹೋಗುತ್ತಿದ್ದರೂ ಕಣ್ಣೆತ್ತಿ ನೋಡದಿರುವ ಸಮಾಜಘಾತಕರಾದ ಗುರುಗಳಿಗೆ ದಕ್ಷಿಣೆಯನ್ನು ಕೊಡಬಾರದು. ಕೊಡುವವರೂ ತೆಗೆದುಕೊಳ್ಳುವವರೂ ನರಕಕ್ಕೆ ಭಾಗಿಗಳೆಂಬ ತುಕಾರಾಮರ ಉಪದೇಶವು ಸತ್ಯವಾದುದಾಗಿದೆ.

ಶಂಕರಪ್ಪ ಗುರಪ್ಪ ಧನಶೆಟ್ಟಿ.

—ಶಿವಮೊಗ್ಗಾದ ಗಲಭೆಗಳ ಸಂಬಂಧವಾಗಿ ೨೨ ಜನ ಹಿಂದುಗಳ ಮೇಲೂ ಮತ್ತು ೬೧ ಜನ ಮುಸಲ್ಮಾನರ ಮೇಲೂ ಪೋಲೀಸರು ವ್ಯಾಜ್ಯ ಹೂಡಿದ್ದಾರೆ. ವಿಚಾರಣೆಯು ಇನ್ನೊಂದು ವಾರದಲ್ಲಿಯೇ ಪ್ರಾರಂಭವಾಗುವುದು.

ದೈವಜ್ಞ ವಿನೋದನ ವೀರಶೈವ ಮತ ಏಕೀಕರಣದ ತಿರುಳು.

ವೀರಶೈವ ಬಂಧುಗಳೇ!

ಜೂನ್ ೨೬ ನೇ ತಾರೀಖಿನ ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ 'ದೈವಜ್ಞ ವಿನೋದ' ಎಂಬ ಹೆಸರಿನ ಮಹಶಯರು ಬರೆದಿರುವ "ವೀರಶೈವ ಮತ ಏಕೀಕರಣ" ಎಂಬ ಶಿರೋನಾಮೆಯುಳ್ಳ ಲೇಖನವನ್ನು ಸರ್ವರೂ ಓದಿದ್ದೀರಿ. ಸದರಿಯವರು ವೀರಶೈವ ಮತ ಏಕೀಕರಣವೆಂಬ ಹೆಸರಿನಿಂದ ಈಗ ಸಮಾಜದಲ್ಲಿ ಹಬ್ಬಿರುವ ಒಡಕನ್ನು ಮುರಿದು ಹಾಕದೆ ಅದನ್ನೇ ಬೇರೂರುವಂತೆ ಮಾಡಿದ್ದಾರೆಂಬ ವಿಷಯವು ಪ್ರತಿಯೊಬ್ಬ ಆಮೂಲಾಗ್ರವಾಗಿ ಸದರಿ ಲೇಖನವನ್ನು ಓದಿದ ವ್ಯಕ್ತಿಗೂ ವ್ಯಕ್ತವಾಗದೆ ಇರದು. ಮೊದಮೊದಲು ಅವರ ಲೇಖನದಲ್ಲಿ ಏಕೀಕರಣಕ್ಕೆ ಸಲಹೆ ದೂರದಿಂದಾಗಲ್ಯೂ ಮುಂಸುವರಿಸಿದ ಹಾಗೆಲ್ಲಾ ಅವರ ಪಕ್ಷಪಾತ ಬುದ್ಧಿಯನ್ನು ಹೊರಗೆಡಹುತ್ತಾರೆ. ಇವರು ಪಂಚಪೀಠದವರನ್ನೆತ್ತಿ ಹಿಡಿಯುವ ಕೆಲಜನ ಸ್ವಾಮಿಗಳ ಕಿವಿಯಲ್ಲಿ ಕಾಸಿದ ಸೀಸದ ರಸವನ್ನು ಹೊಯ್ದಂತಾಗಿದೆ, ಮುಂತಾದ ಶಬ್ದಗಳನ್ನು ಉಪಯೋಗಿಸಿದ್ದಾರೆ, ಹಾಗೆ ಪಂಚ ಪೀಠದವರ ಹೆಸರು ಅಷ್ಟು ಕಠೋರವಾಗಿರಲು ಕಾರಣವೇನೋ ಲೇಖಕರಿಗೆ ಗೊತ್ತು. ಸದರಿ ಏಕೀಕರಣ ಮಾಡತಕ್ಕ ದೈವಜ್ಞ ವಿನೋದನು ಅದೇ ಪತ್ರಿಕೆಯಲ್ಲೇ ಗೂಗೆಗಳ ಫೂತ್ಕಾರ ಎಂಬ ಶಿರೋನಾಮೆಯಿಂದ ಪ್ರಕಟಿಸಿರುವ ಲೇಖನವನ್ನು ನೋಡಿದರೆ ಇವರು ಏಕೀಕರಣಕ್ಕೆ ಎಷ್ಟು ಪ್ರಯತ್ನಿಸುತ್ತಿದ್ದಾರೆಂಬುದು ವ್ಯಕ್ತವಾಗುತ್ತದೆ. ಎರಡು ಪಾರ್ಟಿಗಳಿರುವಾಗ ಎರಡೂ ಪಕ್ಷದವರನ್ನು ಒಂದೇ ಪಕ್ಷದವರಾಗಿ ಮಾಡಲಿಕ್ಕೆ ನಿಲ್ಲುವ ವ್ಯಕ್ತಿಯು ಅಸಾಧಾರಣ ಬುದ್ಧಿ ಕೌಶಲ್ಯಗಳನ್ನೂ ಮತ್ತು ಸಮತಾ ಬುದ್ಧಿಯನ್ನೂ ಹೊಂದಿರಬೇಕು. ಮತ್ತು ಎರಡು ಪಕ್ಷಗಳ ಅಭಿಪ್ರಾಯಗಳನ್ನು ತಿಳಿದು ಎರಡು ಪಕ್ಷಗಳಿಗೂ ಸಮಂಜಸವಾದ ಅಭಿಪ್ರಾಯಗಳನ್ನೇ ಹೊರಗೆಡವಬೇಕು. ಮೇಲ್ಕಂಡ ದೈವಜ್ಞ ವಿನೋದನ ಲೇಖನವನ್ನು ಓದಿದ ಪ್ರತಿಯೊಂದು ವ್ಯಕ್ತಿಗೂ ಸದರಿಯವರ ಪಕ್ಷಪಾತ ಬುದ್ಧಿಯು ವ್ಯಕ್ತವಾಗುತ್ತದೆ ಸದರಿಯವರು ಮಹಾತ್ಮ ಗಾಂಧೀಜಿಯವರ ತತ್ವ ಅಂದರೆ ಅಸ್ಪೃಶ್ಯತಾ ನಿವಾರಣಾ ಕಾರ್ಯವನ್ನು ಸಹ ಅಲ್ಲಗಳೆಯುವಂತೆ ವ್ಯಕ್ತವಾಗುತ್ತಿದೆ. ಯಾವ ಮಹಾತ್ಮನ ಆತ್ಮತೇಜೋಬಲದಿಂದ ಇಡೀ ಪ್ರಪಂಚದಲ್ಲಿ ನೆಲೆಗೊಂಡಿರುವ ಅಸ್ಪೃಶ್ಯತೆಯೆಂಬ ಕಗ್ಗತ್ತಲೆಯು ನಾಶವಾಗುತ್ತಿದೆಯೋ ಅಂಥ ನಾಶವಾಗುತ್ತಿರುವ ಭಯಂಕರ ಮತ್ತು ದೋಷಯುಕ್ತವಾದ ಅಸ್ಪೃಶ್ಯತೆಯನ್ನು ನಮ್ಮ ಲೇಖಕರು ಇನ್ನೂ ಅಪ್ಪಿಕೊಂಡ ಹಾಗೆ ಕಾಣುತ್ತದೆ. ಈಗಲಾದರೂ ಪ್ರಪಂಚದ ಕಡೆಗೆ ತಲೆಯೆತ್ತಿ ನೋಡಿ ಮುಂದಾದರೂ ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ತೊಡಗುವಂತೆ ಅನುಗ್ರಹಿಸಬೇಕಾಗಿ ಶ್ರೀ. ಗುರು ರೇಣುಕನನ್ನು ಪ್ರಾರ್ಥಿಸುತ್ತೇನೆ. ಇಂಥಾ ಸಂದರ್ಭದಲ್ಲಿ ಗುರುವರ್ಗವೆಂದು ಒಂದು ವರ್ಗವನ್ನೇರ್ಪಡಿಸಿಕೊಂಡು ಉಳಿದ ಭಕ್ತ ವರ್ಗವನ್ನು ತುಳಿಯಬೇಕೆಂದು ಎಣಿಸುತ್ತಿರುವ ಗುರುವರ್ಗದವರೇ, ಇನ್ನಾದರೂ ನಿಮ್ಮ ಮೌಢ್ಯವನ್ನು ಬಿಟ್ಟುಬಿಡಿ, ಈಗಿನ ಭಕ್ತ ವರ್ಗದವರು ಬಹಳ ಹುಷಾರಾಗಿದ್ದಾರೆ. ನಿಮ್ಮ ಮಂಕು ಬೂದಿಯು ಏನೂ ಕೆಲಸಕ್ಕೆ ಬರುವುದಿಲ್ಲ. ನಾವು (ಭಕ್ತರು) ನಿಮ್ಮನ್ನು ಗುರುಗಳೆಂದು ಭಾವಿಸಿದಾಗ ನೀವು ನಮ್ಮ ಗುರುಗಳಾಗುತ್ತೀರೇ ಹೊರತು ನಿಮ್ಮಷ್ಟಕ್ಕೆ ನೀವೇ ಗುರುಗಳೆಂದು ಹೇಳಿಕೊಂಡರೆ ನಾಚಿಕೆಗೇಡಾಗುತ್ತೆ. ಇನ್ನು ಮೇಲಾದರೂ ರೇಣುಕಾದಿ ಪಂಚಾಚಾರ್ಯರುಗಳು ಸಂಕುಚಿತ ಭಾವನೆಯುಳ್ಳ ಗುರುವರ್ಗವೆಂದು ಹೆಸರಿಟ್ಟುಕೊಂಡಿರತಕ್ಕವರಿಗೆ ಸದ್ಬುದ್ಧಿಯನ್ನೂ ಮತ್ತು ವಿಶಾಲ ಹೃದಯವನ್ನೂ ಸಹ ದಯಪಾಲಿಸಲಿ ಎಂದು ಹಾರೈಸುವ,

ವೀರಶೈವ ಶರಣರ ದಾಸಾನುದಾಸ
ಶರಣರ ತೊತ್ತಿನ ಮಗ
ಕೆ. ಬಸಪ್ಪ ಬೆಂಗಳೂರು.

ಚಾಂಡಾಲ ಪಕ್ಷಿಯು ಒದರುವಿಕೆ.

ದೈವಜ್ಞ ವಿನೋದ ಎಂಬ ಕಾಗೆಯು ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ ಮನಸ್ಸಿಗೆಬಂದಂತೆ ಒದರುತ್ತದೆ. ಈ ಕಾಗೆಗೆ ಒಂದೇ ಕಡೆ ಕಾಣುತ್ತದೇ ಹೊರತು ಮತ್ತೊಂದು ಕಡೆ ಕಾಣುವದಿಲ್ಲ ಸೋಲ್ಲಾಪುರದಲ್ಲಿ ಗೂಗಿಗಳು ಫೂತ್ಕಾರ ಮಾಡಿದರೆ ಕೇಳುವವರಾರು ಎಂದು ಒದರಿದೆ. ಇಲ್ಲಿಯ ಹೆಣ್ಣು ಮಕ್ಕಳು ಕೂಡ ನಿಷೇಧಮಾಡಿದ್ದರೂ ಅದು ತನ್ನ ಸ್ವಾಮಿಗೆ ಮರ್ಯಾದಿಯೆಂದೇ ತಿಳಿದು ತನ್ನ ಸ್ವಾಮಿಯ ಉತ್ಸವಕ್ಕೆ ೬೦-೭೦ ಸಾವಿರ ಜನರು ಕೂಡಿದ್ದರೆಂದು ಒದರಿದೆ. ೨೦ ಸಾವಿರ ವೀರಶೈವರಿದ್ದ ಊರಲ್ಲಿ ತನ್ನ ಸ್ವಾಮಿಗೆ ೬೦-೭೦ ಸಾವಿರ ಜನರೆಲ್ಲ ಬಂದರು? ಈ ಕಾಗಿ ತನ್ನ ಸ್ವಾಮಿಯನ್ನು ಹೊಗಳಿ ಹೊಟ್ಟೆ ಹೊರೆದುಕೊಳ್ಳಲಿಕ್ಕಾಗಿಯೇ ಹೀಗೆ ಒದರುತ್ತದೆಂದೇ ಎಲ್ಲರೂ ತಿಳಿಯಬೇಕು.

ಸೋಲಾಪುರ ತರುಣ

ಸೊಲ್ಲಾಪುರದಲ್ಲಿ ಅಪಘಾತ.

ಸೊಲ್ಲಾಪುರದಲ್ಲಿ ೧ನೆಯ ತಾರೀಖಿನ ದಿವಸ ಹೋಮ ಬೈಲಿನಲ್ಲಿ ಪುಂಡಲೀಕ ಗೌಳಿ ಎಂಬವನ ಪ್ರೇತವು ಬಿದ್ದಿರುವದು ಕಂಡು ಬಂದಿತು. ಪ್ರೇತದ ಕಿವಿಯೊಳಗಿನ ಬಂಗಾರದ ಬಾವಲಿಗಳು ಹೋಗಿರುವವೆಂದು ಕಂಡು ಬಂದಿತು. ಮತ್ತು ಪ್ರೇತದ ಮುಖದ ಮೇಲೆ ಕಲ್ಲಿನ ಹೊಡತಗಳ ಗಾಯಗಳೂ ಕಾಣಿಸಿದವು. ಆ ಪ್ರೇತವನ್ನು ದವಾಖಾನೆಗೆ ತೆಗೆದುಕೊಂಡು ಬರುತ್ತಿರುವಾಗ ಆ ಬಂಡಿಗೆ ಹೂಡಿದ ಎತ್ತು ಒಮ್ಮಿಂದೊಮ್ಮೆ ಹಾರಲು ಬಂಡಿಯು ಒಬ್ಬ ಕ್ರಿಶ್ಚನ್ ಸ್ತ್ರೀಯಳ ಮೇಲೆ ಹಾಯ್ದು ಹೋದುದರಿಂದ ಅವಳು ತತ್ಕಾಲ ಮರಣ ಹೊಂದಿದಳು. ಆ ಹೆಣವನ್ನೂ ದವಾಖಾನೆಗೆ ಒಯ್ದರು. ಮರಣಕ್ಕೆ ತಡೆಯುಂಟೆ?

ಎಲ್ಲ ನಮೂನೆಗಳು ಬರೇ ೧ ರೂಪಾಯಿ

--೧೦೦೦--

ನೀಲೀ ಮಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪ್ರೋ. **ಹಂಚಲಿ.**
ಜಿ. ವಿಜಾಪುರ

ಸಮಾಚಾರ ಸಂಗ್ರಹ.

—ಕಾರವಾರ ಜಿಲ್ಲೆಯಲ್ಲಿ ಎರಡು ವರುಷಗಳ ಕೆಳಗೆ ನಡೆದ ಕರ ನಿರಾಕರಣೆಯ ಚಳವಳಿಯಿಂದಲೂ ಪೋಲೀಸರು ಹಿಡಿಯಲು ಪ್ರಯತ್ನಿಸುತ್ತಿದ್ದ ಶ್ರೀ. ಕೆ. ಎ. ವೆಂಕಟರಾಮಯ್ಯ ಎಂಬುವವರನ್ನು ಕಳೆದ ೧೧ನೆಯ ತಾರೀಖಿನ ದಿವಸ ಪುಣೆ ಸ್ಟೇಶನ್ನಿನಲ್ಲಿ ಕಾರವಾರ ಜಿಲ್ಲೆಯ ಪೋಲೀಸರೇ ಸೆರೆಹಿಡಿದು ಶಿರ್ಸಿ ಕಡೆಗೆ ತೆಗೆದುಕೊಂಡು ಹೋಗಿದ್ದಾರೆ. ಶ್ರೀ. ವೆಂಕಟರಾಮಯ್ಯನವರು, ಪುಣೆಯಲ್ಲಿ ಕೂಡಿದ ಪ್ರಮುಖರ ಪರಿಷತ್ತಿಗಾಗಿ ಹೋಗುವವರಿದ್ದರು.

—ಕಳೆದ ೧೦ನೆಯ ತಾರೀಖಿನ ದಿವಸ ಹಿಂಡಲಗಿ ಕಾರಾಗೃಹದಿಂದ ಶ್ರೀ. ಕೆ. ಎಸ್. ಪಾಟೀಲರು ಬಿಡುಗಡೆ ಹೊಂದಿದರು.

—ಮುಂಬೈಯಲ್ಲಿ ವಿಧವಾವಿವಾಹ ಸಹಾಯಕ ಸಭೆಯ ಪರವಾಗಿ ತಾ. ೯ನೆಯ ದಿವಸ ವೈಶ್ಯ ಜಾತಿಯ ಶ್ರೀ ಮಾಧವದಾಸ ತುಳಸೀಭಾಯಿ ಎಂಬ ೩೨ ವರುಷದ ತರುಣನಿಗೂ ಶ್ರೀಮತಿ ಮಣಿಬೆನ್ ಎಂಬ ೨೭ ವರುಷ ವಯಸ್ಸಿನ ವಿಧವೆಗೂ ಪುನರ್ವಿವಾಹವಾಯಿತು, ಈ ಕಾರ್ಯದಲ್ಲಿ ಅನೇಕ ಪ್ರತಿಷ್ಠಿತ ಸ್ತ್ರೀಪುರುಷರು ಭಾಗವಹಿಸಿದ್ದರು.

—ಜಬಲಪುರದಲ್ಲಿಯ ವಿಶೇಷವಾದ ಉಷ್ಣತೆಯನ್ನು ತಡೆಯದೆ ತಾ. ೭ನೆಯ ದಿವಸ ಮಿ. ಜಾನ್‌ಸನ್ ಮತ್ತು ಮಿ ಆರ್. ಇಲನ್ನಗ್ರೋವ್ ಎಂಬ ಎರಡು ಜನ ಆಂಗ್ಲೋ ಇಂಡಿಯನ್‌ರು ಮರಣಹೊಂದಿದರು.

—ಪಾಟನಾ ಜಿಲ್ಲೆಯಲ್ಲಿಯ ಫತೂಹಾ ಎಂಬಲ್ಲಿ ರಜಪೂತ ಮತ್ತು ಮುಸಲ್ಮಾನ ಜನರಲ್ಲಿ ಹೊಡೆದಾಟವಾಗಿ ಅದರಲ್ಲಿ ಒಬ್ಬ ರಜಪೂತ ಗೃಹಸ್ಥನು ಮರಣ ಹೊಂದಿದನು, ಅನೇಕರಿಗೆ ಗಾಯಗಳಾಗಿವೆ,

—ಪುಣೆಯಲ್ಲಿ ವಯೋವೃದ್ಧ ನಾಗರಿಕರಾದ ಸರ್. ಮಾಧವರಾವ ಚೌಬಳ ಇವರು ೧೩ನೆಯ ತಾರೀಖಿನ ದಿವಸ ಪರಲೋಕವಾಸಿಗಳಾದರೆಂದು ತಿಳಿಸಲು ವಿಷಾದವಾಗುತ್ತದೆ.

—ಲಂಡನ್ನಿನಲ್ಲಿರುವ ಹಿಂದು ಮಹಾಸಭೆಯ ಮುಂದಾಳುಗಳ ಸಭೆಯು ಲಂಡನ್ನಿನಲ್ಲಿ ಸೇರಿ ಲಂಡನ್ನಿನಲ್ಲಿ ಹಿಂದು ಮಹಾಸಭೆಯ ಶಾಖೆಯೊಂದನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿದರು. ಶ್ರೀ. ಭಾಯಿ ಪರಮಾನಂದ ಮತ್ತು ಡಾ. ಮುಂಜೆ ಇವರ ನೇತೃತ್ವದಲ್ಲಿ ಇದರ ವ್ಯವಸ್ಥೆಗಾಗಿ ಪ್ರಯತ್ನ ನಡೆದಿದೆ.

—ಶಹಾಜಹಾನಪೂರ ಎಂಬಲ್ಲಿ ಮುಸಲ್ಮಾನ್ ಕವಿಗಳಾದ ಅಬ್ದುಲ್ ಹಕೀಮ ಇವರನ್ನು ಸ್ವಂತ ಮನೆಯಲ್ಲಿಯೇ ಕೊಲೆ ಮಾಡಿದ್ದಾರೆ.

—ವ್ಹಾಯಿಸ್‌ರಾಯ ಲಾರ್ಡ ವಿಲಿಂಗ್‌ಡನ್‌ರವರು ಇದೇ ತಿಂಗಳ ಕೊನೆಯ ವಾರದಲ್ಲಿ ಪುಣೆಗೆ ಬರುವರು. ಆಗ ಪುಣೆಯ ಮುನಿಸಿಪಾಲ್ಟಿಯವರು ವ್ಹಾಯಿಸ್‌ರಾಯ್ ಸಾಹೇಬರಿಗೆ ಮಾನಪತ್ರ ಕೊಡಬೇಕೆಂದು ಈ ಮೊದಲೇ ನಿರ್ಣಯಿಸಿದ್ದರು. ಆದರೆ ವ್ಹಾಯಿಸ್‌ರಾಯರೇ ಮಾನಪತ್ರವನ್ನು ಸ್ವೀಕರಿಸಲು ವೇಳೆಯಿಲ್ಲವೆಂದು ಕಲೆಕ್ಟರರ ಮೂಲಕ ಪುಣೆಯ ನಗರಾಧ್ಯಕ್ಷ ರಾ. ಬ. ಹಣಮಂತರಾವ ರಾಮನಾಥ ಇವರಿಗೆ ತಿಳಿಸಿದ್ದಾರೆ.

—ವರ್ಧಾದ ಶ್ರೀ. ವೆಂಕಟೇಶ ಶಂಕರ ಪಟೀಲ ಇವರ "ಸಂಜೀವನ" ಎಂಬ ಹೆಸರಿನ ಕವಿತೆಯು ಆಕ್ಷೇಪಾರ್ಹವಿದೆಯೆಂದು ನಾಗಪುರದ ಸಿಟಿ ಮ್ಯಾಜಿಸ್ಟ್ರೇಟರವರು ಅವರಿಗೆ ಎರಡು ವರುಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಮೇಲಿನ ಕವಿತೆಯು 'ವಾಗೀಶ್ವರೀ' ಎಂಬ ಮಾಸಪತ್ರಿಕೆಯ ಅಕ್ಟೋಬರ ತಿಂಗಳ ಅಂಕದಲ್ಲಿ ಪ್ರಕಟಿಸಲ್ಪಟ್ಟಿದ್ದಿತು. ಕ್ರಾಂತಿಕಾರಕ ಚಳವಳಿಯ ಸಲುವಾಗಿ ಶಿಕ್ಷೆಯಾದ ಭಗತಸಿಂಗ, ದಿನೇಶಗುಪ್ತ ಮೊದಲಾದವರ ಪ್ರಶಂಸವನ್ನು ಆ ಕವಿತೆಯಲ್ಲಿ ಮಾಡಿರುವುದಾಗಿ ಮ್ಯಾಜಿಸ್ಟ್ರೇಟರು ತಮ್ಮ ನಿರ್ಣಯದಲ್ಲಿ ಹೇಳಿದ್ದಾರೆ.

—ಪಂಢರಪುರದಲ್ಲಿ ಕಳೆದ ತಿಂಗಳ ೨೮ನೆಯ ತಾರೀಖಿನಿಂದ ಕಾಲರಾ ಪ್ರಾರಂಭವಾಗಿ ಇಲ್ಲಿಯವರೆಗೆ ೯೩ ಜನರು ಮರಣ ಹೊಂದಿದ್ದಾರೆ

—ಅಲವಾರದ ಮಹಾರಾಜರವರು ತಮ್ಮ ರಾಜ್ಯತ್ಯಾಗದ ರಹಸ್ಯವನ್ನು ಕುರಿತು ಲಂಡನಿನಲ್ಲಿ ಈ ಪ್ರಕಾರ ಹೇಳಿದ್ದಾರೆ—

"ಉತ್ತರ ಹಿಂದುಸ್ಥಾನದಲ್ಲಿಯ ಮುಸಲ್ಮಾನರ ಸಂಘಟಿತವಾದ ಪ್ರಯತ್ನದ ಇದು ಪರ್ಯವಸಾನವಾಗಿದೆ. ಅಫಗಾಣಿಸ್ಥಾನ. ಸರಹದ್ದ ಪ್ರಾಂತ ಮತ್ತು ಪಂಜಾಬ ಇವುಗಳೆಲ್ಲವನ್ನೂ ಇಸ್ಲಾಮಿ ಭಾಗವಮಾಡಬೇಕೆಂದು ಮುಸಲ್ಮಾನರ ಇಚ್ಛೆಯಾಗಿದೆ. ನನ್ನ ಸಂಸ್ಥಾನದಲ್ಲಿ ಮುಸಲ್ಮಾನರು ಗೊಂದಲಮಾಡುವರೆಂದು ನಾನು ಎರಡು ವರುಷಗಳ ಪೂರ್ವದಲ್ಲಿಯೇ ದಿಲ್ಲಿಗೆ ಸುದ್ದಿ ಮುಟ್ಟಿಸಿದ್ದೆನು. ಆದರೆ ಸರಕಾರದವರು ಆ ಕಡೆಗೆ ಲಕ್ಷಕೊಡಲಿಲ್ಲ. ಆದರೆ ಗೊಂದಲ ಪ್ರಾರಂಭವಾಗಿದೆಯೆಂದು ತಿಳಿಸಿದೊಡನೆಯೇ ಬ್ರಿಟಿಷ್ ಲಷ್ಕರ್ ಬರುವದೆಂದು ನನಗೆ ತಾರಿನಿಂದ ತಿಳಿಸಿದರು."

—ಮದ್ರಾಸ್ "ಹಿಂದೂ" ಪತ್ರಿಕೆಯ ಕಚೇರಿಯನ್ನು ಲಂಡನ್‌ನಲ್ಲಿಯ ಫ್ಲೀಟ್ ಸ್ಟ್ರೀಟಿನಲ್ಲಿ ಹೊಸದಾಗಿ ತೆರೆದಿದ್ದಾರೆ. ಹಿಂದುಸ್ಥಾನದಿಂದ ವಿಲಾಯತಿಗೆ ಹೋಗುವವರಿಗೆ ಸಹಾಯ ಮಾಡಲಾಗುವುದು. ಮತ್ತು ವಿಲಾಯತಿಯಲ್ಲಿಯ ಜನರಿಗೆ ಹಿಂದುಸ್ಥಾನ ವಿಷಯಕವಾದ ಸಂಗತಿಗಳನ್ನು ತಿಳಿಸಿಕೊಡುವರು.

—ಅಮೇರಿಕದ ಮಿ. ವಿಲಿಯಂ ಎಚ್. ಹಾರ್ಪರ್ ಎಂಬ ದೊಡ್ಡ ಸೀಮೆ ಎಣ್ಣೆ ಸಾಹುಕಾರನು ತಮ್ಮ ಮರಣ ಶಾಸನದಲ್ಲಿ ತಮ್ಮ ಗಿಳಿಯ ಆರೈಕೆಗಾಗಿ ೮೦೦ ಪೌಂಡುಗಳನ್ನು ಪ್ರತ್ಯೇಕಿಸಿರುವನು.

—ಅಫಗಾಣಿಸ್ಥಾನದಲ್ಲಿರುವ ಹಿಂದೀ ಜನಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಅಮೀರ್ ನಾದಿರ್‌ಶಾರವರನ್ನು ಕೇಳಿಕೊಂಡಿದ್ದಾರೆ.

—ಸರ್. ಮಿರ್ಜಾ ಇಸ್ಮಾಯಿಲ್‌ರು ಅಗಸ್ಟ ತಿಂಗಳ ಮಧ್ಯಭಾಗದಲ್ಲಿ ಬೆಂಗಳೂರಿಗೆ ತಿರುಗಿ ಬರುವರೆಂದು ತಿಳಿದುಬಂದಿದೆ.

ಶೋಚನೀಯವಾದ
ವಿಚಿತ್ರ ಮರಣ !

ಕೊಲ್ಹಾಪುರದ ನಗರಾಧ್ಯಕ್ಷರಾಗಿದ್ದ ಪ್ರೊ. ಸಾವಂತ ಎಂ. ಎ. ಎಲ್. ಎಲ್. ಬಿ. ಇವರು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿರುವಾಗ ನೂರಾಐವತ್ತು ಅಡಿ ದೂರದಲ್ಲಿ ಕಲ್ಲುಗಳನ್ನು ಒಡೆಯುತ್ತಿದ್ದ ಸುರಂಗದಿಂದ ಒಂದು ದೊಡ್ಡ ಕಲ್ಲು ಹಾರಿ ಬಂದು ಇವರ ತಲೆಯ ಮೇಲೆ ಬೀಳಲು ತಲೆ ಒಡೆದು ೧೦ ನಿಮಿಷಗಳಲ್ಲಿ ಮೃತಪಟ್ಟರು. ಇವರಿಗೆ ೩೨ ವರುಷಗಳು ಮಾತ್ರ ಆಗಿದ್ದವು.

—ಮುದ್ದೇಬಿಹಾಳ ತಾಲೂಕು ಬಸರಕೋಡ ಗ್ರಾಮದ ಶ್ರೀ. ಬಸವಂತರಾವ ದೇಸಾಯಿಗಳು ಕಳೆದ ಸೋಮವಾರ ಪ್ರಾತಃಕಾಲ ಶಿವಪೂಜೆಗೆ ಕುಳಿತಾಗಲೇ ದೇಹವನ್ನು ಬಿಟ್ಟರು. ಇವರು ಬಹು ಆಚಾರ ಶೀಲರಾಗಿದ್ದರು. ಇವರಿಗೆ ೬೨ ವರುಷಗಳಾಗಿದ್ದವು. ಯಾವ ಬೇನೆಬೇಸರಿಕೆಗಳೂ ಇರಲಿಲ್ಲ.

ವೀರಶೈವರ ಸೂತ್ರಗೋತ್ರಗಳ ವಿಚಾರ.

(ಲೇಖಕರು:— ಜಗದಾಚಾರ್ಯ ಶ್ರೀ. ಸ್ವಾಮಿ ವಿರೂಪಾಕ್ಷ ಒಡೆಯರು.)

ಬ್ರಾಹ್ಮಣರು ಸಪ್ತ ಗೋತ್ರಗಳೆಂದು ಹೇಳುವುದನ್ನು ಕೇಳಿ ಕೆಲವರು ಪಂಚಗೋತ್ರಗಳೆಂದು ಕಲ್ಪಿತ ಕಥೆಗಳನ್ನು ರಚಿಸಿಕೊಂಡು ಇತ್ತೀಚೆಗೆ ಸುಳ್ಳೇ ಶಾಸ್ತ್ರದ ತಿದ್ದುಪಡಿಗೆ ಹೊರಟಿರುವರು. ಬ್ರಾಹ್ಮಣರು ಹಿಂದಿನ ಋಷಿಗಳು ತಂತಮ್ಮ ಮನಸ್ಸಿಗೆ ಬಂದಂತೆ ಕರ್ಮಭೇದವನ್ನು ವಾದಿಸಿ ಆಶ್ವಲಾಯನ, ಆಪಸ್ತಂಭ, ಬೌಧಾಯನ, ಕಾತ್ಯಾಯನ, ಪಾರಸ್ಕರ ಮೊದಲಾದವರು ತಂತಮ್ಮ ಹೆಸರಿನಿಂದ ಭಿನ್ನ ಭಿನ್ನಗಳಾದ ಕಲ್ಪಸೂತ್ರ ಗೃಹ್ಯಸೂತ್ರಗಳೆಂಬ ಗ್ರಂಥಗಳನ್ನು ರಚಿಸಿ ತಮ್ಮ ತಮ್ಮ ಅನುಯಾಯಿಗಳಿಗೆ ಅದರಂತೆ ಕರ್ಮಭೇದದಿಂದ ಆಚರಿಸಲಿಕ್ಕೆ ಬೋಧಿಸಿದರು. ಆದರೆ ಇದ್ಯಾವದನ್ನು ತಿಳಿಯದೆ ಬಿಳಿನಾಯಿಯು ಕರಿನಾಯಿಯಾಗಲಿಕ್ಕೆ ಹೊರಟಂತೆ ಇವರು ಪೊಡ್ವಿಡಿ, ಮಡ್ವಿಡಿ, ಗಡ್ವಿಡಿ, ಮಳಿ, ಕಳಿ ಇಲ್ಲದ ಅಸಾಧ್ಯ, ಅಶಾಸ್ತ್ರೀಯ, ಅಬದ್ಧ. ಹಾಗೂ ಅರ್ಥವಿಲ್ಲದ ಹೊಲಸು ಶಬ್ದಗಳನ್ನು ಸೂತ್ರಗಳೆಂದು ಹೇಳುತ್ತ ಇತರ ಜನಾಂಗದ ಅಪಹಾಸ್ಯಕ್ಕೆ ಕಾರಣವಾಗುತ್ತ ಹೊರಟಿರುವರು. ನೋಡಿದಿರಾ? ಸತ್ಯವಾಗಿ ವಿಚಾರಿಸಿದರೆ, ವೀರಶೈವರಲ್ಲಿ ಕ್ರಿಯಾಕರ್ಮಗಳ ಭೇದವುಂಟೇ? ಅಷ್ಟಾವರಣಗಳನ್ನು ಬಿಟ್ಟು ಇವರಿಗೆ ಮತ್ತೊಂದು ಕರ್ಮವುಂಟೇ? ಅಷ್ಟಾವರಣದಲ್ಲಿ ಒಬ್ಬನಿಗೊಂದು, ಮತ್ತೊಬ್ಬನಿಗೊಂದು ಎಂಬುದು ಭೇದವೇನಾದರೂ ಉಂಟೇ? ಅಷ್ಟಾವರಣ ಸಂಪನ್ನನೇ ವೀರಶೈವನೆಂತಲೂ ಅವನು ಬಾಹ್ಯಕ್ರಿಯಾಡಂಬರದಿಂದ ದೂರಾಗಬೇಕೆಂತಲೂ ಈ ವೀರಶೈವ ಧರ್ಮದಲ್ಲಿ ಜಾತಿಭೇದ ಕರ್ಮ (ಕ್ರಿಯ) ಭೇದಗಳಿಲ್ಲವೆಂತಲೂ ಶಾಸ್ತ್ರವು ಘಂಟಾಘೋಷವಾಗಿ ಹೇಳುತ್ತಿದ್ದು ಅದನ್ನೆಲ್ಲಾ ಮರೆವಾಜಿ ಏನೋ ಒಂದು ಮನಬಂದಂತೆ ಕಲ್ಪಿಸುತ್ತ ಹೊರಟವರಾದಿವರಿಗೆನೆನ್ನಬೇಕು? ಎಲೈ ಹುಚ್ಚರೇ; ಆ ರೀತಿ ಕರ್ಮಭೇದವನ್ನು ಹೇಳುವ ಸೂತ್ರಗ್ರಂಥಗಳೇನಾದರು ನಿಮ್ಮಲ್ಲಿ ಉಂಟೋ? ಅಥವಾ ನಿಮ್ಮ ಒವರುವ ಬಾಯಿಯೇ ಗ್ರಂಥವೋ ? ಅವನು ಆಚಾರ್ಯನೇ ಆಗಲಿ. ಯಾವನೇ ಇರಲಿ, ಮಾನುಷ್ಯಮಾತ್ರದಿಂದ ರಚಿತವಾದ ಧರ್ಮವೆಂದರೆ ಅದನ್ನು ಯಾರಾದರೂ ಅಂಗೀಕರಿಸುವರೇ? ಮನುಷ್ಯ ರಚಿತವಾದದ್ದರಲ್ಲಿ ಸರ್ವಜ್ಞಶಕ್ತಿತ್ವವು ಹೊರಡುವದೇ? ಆದ್ದರಿಂದ ಇದೆಲ್ಲ ಬುಳ್ಳಾಟಿಕೆಯನ್ನು ಬಿಟ್ಟು ನ್ಯಾಯವಾದ ಮಾರ್ಗದಲ್ಲಿ ನಡೆಯಿರಿ. ಯಾಕಂದರೆ, ವೀರಶೈವರು ಶಿವಸೂತ್ರದವರೆಂದು ಕ್ರಿಯಾಭೇದವಿಲ್ಲದ ಶಿವಸೂತ್ರ ಒಂದನ್ನೇ ಸರ್ವಸಿದ್ಧಾಂತಕಾರರೂ ಹಾಗೂ ವಚನಶಾಸ್ತ್ರಕರ್ತರಾದ ಮಹನೀಯರೂ ಅಂಗೀಕರಿಸಿರುತ್ತಾರೆ. ಇಂಥ ಅಭೇದವಾದದ ವಜ್ರ ಸೂತ್ರವನ್ನು ಬಿಟ್ಟು ಮಳಿಬಗ್ಗಿ, ನೆಲಬಗಿ, ಕಬ್ಬಿಣಕಂತಿಬಗಿ ಎಂಬೋ ನಿಂದ್ಯ ನೀಚಸ್ಥಿತಿಯವರು ಹೇಳಿಕೊಳ್ಳುವಂಥಾ ಬಗೆ, ಬೆಡಗುಗಳನ್ನು ಹಚ್ಚಿಕೊಳ್ಳುತ್ತ ಹೊರಟಿರುವ ಮೂರ್ಖರಾದ ನಿಮಗೆ ಏನನ್ನಬೇಕೋ ತಿಳಿಯದಾಗಿದೆ.

ಇನ್ನು 'ಪ್ರವರ'ದ ವಿಷಯ ನೋಡಿದರೆ ಬ್ರಾಹ್ಮಣರಲ್ಲಿ ಭಿನ್ನಭಿನ್ನವಾದ ಅನಂತ ಜನಾಂಗವಾಗಿ ಅವರವರ ವೃತ್ತಿಯಂತೆ ಬೇರೆಬೇರೆ ಪ್ರವರವನ್ನು ಹೇಳಿಕೊಳ್ಳುತ್ತ ಹೋಗಿರುವರು. ಆದರೆ ಬ್ರಾಹ್ಮಣರು ಪ್ರವರ ಎಂಬುವ ಶಬ್ದವನ್ನು ಹಚ್ಚಿಕೊಂಡಿರುವದರಿಂದ ಮೇಲೆ ನಕಲಿಮಾಡುವವರಾದ ನೀವೂ ಪ್ರವರ ಹಚಿ.ಕೊಳ.ಬೇಕೆಂಬ ಲವಲವಿಕೆಯುಳ್ಳವರಾಗಿ ಪ್ರವರದ ಅರ್ಥವನ್ನು ವಿಚಾರ ಮಾಡದೆ ನೀವು ಯಾವ ಪ್ರವರದವರೆಂದಾಕ್ಷಣಕ್ಕೆ ನಾವು ವೀರಶೈವ ಪ್ರವರದವರು, ಅಂದರೆ ವೀರಶೈವರೆಲ್ಲರೂ ಒಂದೇ ಪ್ರವರದವರು. ಪ್ರವರನೆಂದರೆ 'ವಂಶ' ಅಂದಮೇಲೆ ವೀರಶೈವರೆಲ್ಲರೂ ಒಂದೇ ವಂಶದವರು. ಒಂದೇ ವಂಶದವರಲ್ಲಿ ಗೋತ್ರಸೂತ್ರನೆಂಬ ಭೇದವಾದವು ಹ್ಯಾಗೆ ಬರುತ್ತದೆ? ಪ್ರಾಜ್ಞರೆ ವಿಚಾರಮಾಡಿರಿ. ಇವರ ಕಲ್ಪಿತ ಕಥೆ ಹ್ಯಾಗೆ ಅದೆ ಎಂಬುದನ್ನು ಕಡೆಗೆ ಇವರು ನಿಜವಾದ ವೀರಶೈವ ಸಿದ್ಧಾಂತದ ಒಂದೇ ಎಂಬ ವಾದಕ್ಕೆ ಬಂದಿಳಿದರು. ತೊಟ್ಟಿಲು ಹ್ಯಾಗೆ ಅಡ್ಡ ತಿಡ್ಡ ತೂಗಿದರೂ ಮೊದಲಿನ ತಾನಿಂತ ಸ್ಥಳಕ್ಕೆ ಬರುವದು ಹ್ಯಾಗೆ ಲೋಕರೂಢಿಯೋ ಅದರಂತೆ ಇವರಾದರೂ ಇವರಿಂದ ಒಳಗೆ ತೋರಿಸಿದ ಅವಾಂತರಿಕಗಳಾದ ಗೋತ್ರ ಸೂತ್ರಗಳೆಂಬುವವೂ, ಪಂಚಾಚಾರ್ಯ ಎಂಬುವದೂ ವೀರಶೈವರಲ್ಲಿ ಅವಾಂತರ ಜಾತಿಭೇದವಿದೆ ಎಂಬುವದೂ ಎಲ್ಲವೂ ತನ್ನಷ್ಟಕ್ಕೆ ತಾನೇ ನಿರ್ನಾಮವೆಂದು ಹೇಳದಂತಾಗುವದು. ಇನ್ನು ಇವರಿಗೆ ಭಿನ್ನಭಿನ್ನವಾದ ವೇದಗಳಂತೆ, ಒಟ್ಟು ನಾಲ್ಕು ವೇದಗಳು. ಆದರೆ ಇವರ ರಚನೆಯೇ ಮೊದಲಿಂದ ತಪ್ಪಾಗಿರುವುದರಿಂದ ಇವರಿಗೆ ಐದನೇ ವೇದವು ಬೇಕಾಯಿತು. ಅದಕ್ಕೆ ಹ್ಯಾಗೆ ಮಾಡೋಣವೆಂದು ಯೋಚಿಸಿ ಯಾರೂ ಯಾವ ಋಷಿಗಳೂ ಯಾವ ಜ್ಞಾನಿಗಳೂ ಕೇಳದೆ ಹೇಳದೆ ನೋಡದೆ ಇದ್ದ ಒಂದು ವೇದವನ್ನು ಹೇಳಬೇಕೆಂತಾ ವಿಚಾರಮಾಡಿ ಅಜಪ.ವೇದವೆಂದು ಸುಳ್ಳೇ ಒಂದು ಹೆಸರನ್ನು ಒದರಲಿಕ್ಕೆ ಹತ್ತಿದರು. ಆದರೆ ವೇದವೆಂದರೇನು, ವೇದದಲ್ಲಿ ಏನು ಹೇಳಿದೆ, ವೇದಸಂಬಂಧವನ್ನು ಯಾಕೆ, ಯಾವ ರೀತಿ ಹಚ್ಚಿಕೊಳ್ಳಬೇಕು, ಎಂಬುದನ್ನು ಇವರು ಸ್ವಪ್ನದಲ್ಲಿಯೂ ಅರಿಯದವರಾಗಿ ತಿರುಕನು ತನ್ನ ಮಗನಿಗೆ ರಾಜೇಂದ್ರನೆಂದು ಹೆಸರಿಟ್ಟುಕೊಂಡಂತೆ ವೇದಗಳ ಹೆಸರಿನಿಂದ ಒದರಲಿಕ್ಕೆ ಹತ್ತಿದರು. ಅಜಪವೇದವೆಂಬುದು ಎಲ್ಲಿಯಾದರೂ ಇರುವದುಂಟೋ? ಮರುಳರೇ, ಇಂಥ ಸುಳ್ಳು ಕಪಟಮಾತುಗಳನ್ನು ಬಿಟ್ಟುಬಿಡರಿ. ಈ ಪಂಚಾಚಾರ್ಯಾದಿ ಹೊಲನಾಟವೆಲ್ಲ ಕೇವಲ ಸುಳ್ಳಿನ ಮನೆಯೆಂತಲೂ ಯಾವ ಶಾಸ್ತ್ರದಲ್ಲಿಯೂ ಹೇಳಿಲ್ಲವಷ್ಟೆ. ಅಲ್ಲದೆ ಮಹಾನ್ ಉದಾತ್ತ ತತ್ವವುಳ್ಳದ್ದೂ ಅನಾದಿ ಸಂಸಿದ್ಧವೂ ವೈದಿಕವೂ ಎನಿಸಿದ ವೀರಶೈವ ಧರ್ಮಕ್ಕೆ ಅಗೌರವವನ್ನುಂಟುಮಾಡುವದಲ್ಲದೆ ಸರ್ವಥಾ ಲಿಂಗಾಂಗಿ ಧರ್ಮ ಶಾಸ್ತ್ರಕ್ಕೆ ವಿರುದ್ಧವಾದ ಮಾತೆಂಬುದನ್ನು ನಾವು ಈ ಹಿಂದೆಯೇ ೮-೯ ನೇ ಲೇಖಗಳಲ್ಲಿ ಸವಿಸ್ತಾರವಾಗಿ ಬರೆದಿದ್ದು ಅದನ್ನೆಲ್ಲ ನೋಡಿ ಇನ್ನು ಮುಂದಾದರೂ ಮೂರ್ಖರಂತೆ ವರ್ತಿಸದೆ ಬರೆಯದೆ ವಿವೇಕತನದಿಂದ ವಿಚಾರಮಾಡುವಿರೆಂದು ಸೂಚಿಸುವೆನು.

ಮೈಸೂರು ಸ್ಟಾರ್ ತಾ. ೨೬-೬-೩೩.

—"ನವಾಕಾಳ" ಪತ್ರಿಕೆಯು ಮುದ್ರಿಸಲ್ಪಡುತ್ತಿರುವ ದತ್ತಾತ್ರೇಯ ಛಾಪಖಾನೆಯ ೬೦೦೦ ರೂ. ಜಾಮೀನು ೧೦ನೆಯ ತಾರೀಖಿನ ದಿವಸ ಮುಂಬಯಿ ಸರಕಾರದವರಿಂದ ಜಪ್ತಮಾಡಲ್ಪಟ್ಟಿತು. ಅಂದಮಾನದ ಕಾರಾಗೃಹವಾಸಿಗಳು ಅನ್ನತ್ಯಾಗ ಮಾಡಿದ ವಿಷಯಕ್ಕೆ ೬ನೆಯ ತಾರೀಖಿನ ದಿವಸ "ನವಾಕಾಳ" ಪತ್ರಿಕೆಯಲ್ಲಿ ಬರೆದ ಲೇಖನವೇ ಇದಕ್ಕೆ ಕಾರಣವಂತೆ.

ತರುಣರಿಗೆ ನಮ್ಮ ವೀರಶೈವ ವೃದ್ಧಪಿತಾಮಹರ ಸಂದೇಶ.

ಪ್ರಾತಃಕಾಲ ಸುಮಾರು ೭ ಘಂಟೆ ಸಮಯ. ಕೇವಲ ೨೫ ೨೬ ವರುಷದ ತರುಣನೋರ್ವನು ಬಡತನದ ದುರ್ಭಾಗ್ಯಿಯಲ್ಲಿ ಬೆಂದುಬೆಂಡಾಗಿ ಸಮಾಜದಲ್ಲಿ ನಿಲ್ಲಲು ನೆಲೆಕಾಣದೆ ನಮ್ಮ ವೃದ್ಧ ಪಿತಾಮಹರಾದ ಸರ್. ಕೆ. ಪಿ. ಪುಟ್ಟಣಶೆಟ್ಟರವರ ಭೇಟಿ ತೆಗೆದುಕೊಳ್ಳಲು ಹೋಗಿದ್ದನು. ಸಾಹೇಬರು ಪ್ರಾತಃಕಾಲ ಸ್ನಾನ ಶಿವ ಪೂಜಾದಿಗಳನ್ನು ತೀರಿಸಿಕೊಂಡು ತಮ್ಮ ಬಂಗಲೆಯ ಹೂದೋಟದ ಮುಂದೆ ತಿರುಗಾಡುತ್ತಿದ್ದರು. ಆ ವೇಳೆಗೆ ನಮ್ಮ ತರುಣನು ಹೋಗಿ ಸಾಹೇಬರಿಗೆ ತನ್ನ ವಂದನೆಗಳನ್ನು ಅರ್ಪಿಸಿದನು. ಪಸನ್ನಮುಖಿಗಳಾದ ದೀನಬಂಧು ಶೆಟ್ಟರು ಮುಖ ಬತ್ತಿದ ಯುವಕನನ್ನು ನೋಡಿ ಮಾತನಾಡಿಸಿದರು. ಬೇಸತ್ತ ಯುವಕನು ಈ ಪ್ರಕಾರ ವಿಜ್ಞಾಪಿಸಿಕೊಂಡನು. ಬಡವರಿಗೆ ಅದರಲ್ಲೂ ವಿದ್ಯಾರ್ಥಿಗಳಿಗೆ ಪ್ರಪಂಚದಲ್ಲಿ— ಸಮಾಜದಲ್ಲಿ ಆಶ್ರಯವಿಲ್ಲ ಸುಖವಿಲ್ಲ—ತಿರಸ್ಕಾರವೇ ಹೊರತು ಪುರಸ್ಕಾರವಿಲ್ಲ—ಇಂಥ ಪ್ರಪಂಚದ ಜೀವನ ಯಾತ್ರೆಯಲ್ಲಿ ಜುಗುಪ್ಸೆ ಹೊಂದಿದ ಒಂದೆರಡು ಮಾತುಗಳನ್ನು ಬಿನ್ನಯಿಸಿಕೊಂಡನು.

"ಶಾಂತಿ ನಿವಾಸದಲ್ಲಿ" ವಾಸಿಸುವ ಶಾಂತ ಮೂರ್ತಿಗಳಾದ ನಮ್ಮ ಸರ್. ಶೆಟ್ಟರು ತರುಣನನ್ನು ಕುರಿತು "ಈ ಕೇವಲ ತರುಣಾವಸ್ಥೆಯಲ್ಲೇ ಜುಗುಪ್ಸೆಪಡಬಾರದು. ಪಾಪ! ಬಡತನ ಕಷ್ಟ, ಅದಕ್ಕೆ ಅಲುಕಬಾರದು, ಅಂಜಬಾರದು, ಬಡತನವು ನಮಗೆ ಮುಂದೆ ಸ್ವರ್ಗದ ಹಾದಿಯು ಶಾಂತಿಸುಖದ ಸೋಪಾನಕ್ಕೆ ಕಳುಹಿಸುವ ಕೈಮರ. ಅಂತಹವರೇ ಪ್ರಪಂಚದ ಜೀವನಜ್ಯೋತಿಗಳಾಗಿರುತ್ತಾರೆ. (The world's great men) ಬಡತನವು ನಮ್ಮ ಮನೋಧೈರ್ಯವನ್ನು, ಸ್ಥೈರ್ಯವನ್ನು, ಶಾಂತಿಯ ಅಳವನ್ನೂ ಅಳತೆ ಮಾಡುತ್ತದೆ. ಅದಕ್ಕೆ ನಾವು ಅಳ್ಳಾಡಬಾರದು. (Don't Shake) ಆಧುನಿಕ ಅಮೇರಿಕ ದೇಶದ ಜನರಂತೆ ಪ್ರತಿದಿನವೂ ಅಭಿವೃದ್ಧಿಯ ಹಾದಿಯನ್ನೇ (Pushing to the front) ಎದುರು ನೋಡಬೇಕು. ಪ್ರಪಂಚದ ಚರಿತ್ರೆಯಲ್ಲಿ ಬಡತನದಿಂದ ಬೆಂದು ಬಳಲಿ ಬೇಸತ್ತು ಮುಂದೆ ಬಂದಿರುವ ಕೋಟ್ಯಾಧೀಶರೂ, ಪದವೀಧರರೂ, ದೇಶಸೇವಕರೂ, ಈಶಭಜಕರೂ ಆಗಿರುವ ಮಂದಿಗಳೇ ಜಾಸ್ತಿ. ಬಡತನವೂ, ಒಡೆತನವೂ ಭಗವಂತನ ಕೈಯಲ್ಲಿದೆ. ನಾವು ಅದನ್ನು ಜೈಸಬೇಕು. ಅದರಲ್ಲಿ ಸರ್ವ ಮಂಗಳವಿದೆ. ಇನ್ನು ಮುಂದೆ ಮಾತನಾಡುತ್ತ The world is very interesting to live" ಅಂದರೆ ಪ್ರಪಂಚವು ಬಹು ಪ್ರೇಮಮಯವಾದ ಒಂದು ಚೈತನ್ಯ ವಸ್ತು ಅದರಲ್ಲಿ ಬಹಳ ವಿಚಿತ್ರವಾದ ಸಂಗತಿಗಳಿವೆ. ತಿಳಿದುಕೊಳ್ಳತಕ್ಕ ಮಾಡತಕ್ಕ ಕರ್ತವ್ಯಗಳು ಬಹಳವವೆ, ಈ ಅಲ್ಪಪ್ರಾಯದಲ್ಲಿ ಜುಗುಪ್ಸೆ ಪಡಬಾರದು. "ಈಸಬೇಕು, ಎದ್ದು ಜೈಸಬೇಕು" ಎಂಬ ದಾಸರೋರ್ವರ ಆಣಿಯ ರಭಸದ ಮಾತುಗಳು ಶೆಟ್ಟರವರ ಬಾಯಿಯಿಂದ ಹೊರಟವು.

"ಆದುದರಿಂದ ಪ್ರಪಂಚದ ಮೇಲೆ ನಿರಾಶರಾಗಬಾರದು. ಅವರಲ್ಲೇ ಎದ್ದು, ಅವರಲ್ಲೇ ಬಿದ್ದು, ನವೆದು, ನುರಿದು ಮುಂದಿನ ಜೀವನ ಚರಿತ್ರೆಯ ಚಿತ್ರವನ್ನು ಬರೆಯಬೇಕು. (Paint a new life) ದೊಡ್ಡ ಶಾಸ್ತ್ರಿಮಹಾತ್ಮರ, ನಮ್ಮ ಕವಿಗಳ ಗ್ರಂಥಗಳನ್ನು ಕೆಲವು ದಿವ್ಯ ಪುರುಷರ— ಅಂದರೆ ಮಹಾತ್ಮಗಾಂಧಿ, ವಿವೇಕಾನಂದ, ರಾಮತೀರ್ಥ, ಸ್ವೀಟ್ ಮಾರ್ಡನ್, ಪ್ರೆಸಿಡೆಂಟ್ ಹೂವರ್, ರೂಸ್‌ವಾಲ್ಟ (Roosevelt) (Swett Marden) an American writer) ಇಂತಹ ಮಹಾಪುರುಷರ ಜೀವನ ಚರಿತ್ರೆಗಳನ್ನು ಆಗಾಗ್ಗೆ ಓದಬೇಕು. ಶಾಂತಚಿತ್ತರಾಗಬೇಕು. ದೀನರ ಸೇವೆಯನ್ನು ಮಾಡಬೇಕು; ಆದಿಜನರನ್ನು ಉದ್ಧಾರಮಾಡುವುದು ಉತ್ತಮವಾದುದು. ವಿಜಯಭೇರಿಯನ್ನು ಹೊಡೆಯಬೇಕು. ಜಯಲಕ್ಷ್ಮಿಯನ್ನು ಕೈಯಲ್ಲಿ ಹಿಡಿದು ಕಾರ್ಯತತ್ಪರರಾಗಿ ಶಾಂತಿಯಿಂದ ಕೆಲಸಗಳನ್ನು ಮಾಡುತ್ತ, ಈಶಸೇವೆಯಲ್ಲಿ ನಿರತರಾಗಿ ಸತ್ಯವನ್ನು ಕೈಯಲ್ಲಿ ಹಿಡಿದಲ್ಲಿ, ಸರ್ವ ಮಂಗಳವು ಶಿವನ ದಯದಿಂದ ಸರ್ವದಾ ದೊರೆಯುವುದೆಂದು "ಶೆಟ್ಟರು ತಮ್ಮ ಅಮೃತ ವಾಕ್ಯಗಳಿಂದ ಹೇಳಿ ಬೇಸತ್ತ ವಿದ್ಯಾರ್ಥಿಗೆ ಧೈರ್ಯ ಕೊಟ್ಟು ಕಳುಹಿಸಿದರು. ನಮ್ಮ ವೃದ್ಧಪಿತಾಮಹರ ವಾಕ್ಯಗಳು ಪ್ರತಿನಿಮಿಷದಲ್ಲೂ ನಮ್ಮೆಲ್ಲರಿಗೂ ಆಕಾಶವಾಣಿಯಿಂತಿವೆ" ಸರ್. ಶೆಟ್ಟರು ಹೀಗೆ ಆಗಿಂದಾಗ್ಗೆ ತಮ್ಮ ದಿವ್ಯ ಸಂದೇಶಗಳನ್ನು ವೀರಶೈವ ಸಮಾಜಕ್ಕೆ ಆಶೀರ್ವದಿಸಲು ಶ್ರೀ. ಜಗಜ್ಜನಕನು ಅವರಿಗೆ ಆಯುರಾರೋಗ್ಯ, ಐಶ್ವರ್ಯಾಭಿವೃದ್ಧಿಗಳನ್ನಿತ್ತು ಸದಾ ಕಾಪಾಡಲೆಂದು ಪ್ರಾರ್ಥಿಸುವ.

ಮೈಸೂರು ಸ್ಟಾರ್ — **ಬೇಸತ್ತ ವೀರಶೈವ ತರುಣ.**

ತಾ. ೨೬-೬-೩೩.

ಶ್ರೀಮನ್ಮಹಾರಾಜನಿರಂಜನ

ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿನಾಂ-

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ.

ಮಹಾ || || ಸಂಸ್ಥಾನದಿಂದ

ಮಹಾ|| ||ಸನ್ನಿಧಿ ಕೃಪಾಪಾತ್ರರಾದ ಸಮಸ್ತ ವೀರಶೈವರಿಗೂ ವೀರಶೈವ ಮತಾನುಯಾಯಿಗಳಾದ ಸಮಸ್ತ ಸದ್ಭಕ್ತಾದಿಗಳಿಗೆ—

ತ್ರಿಸಂಧ್ಯಾಸಮಯೇ ಕೃತಾನೇಕಾಶಿಷಃ ತದುಪರಿ.

ಈ ಜಾಹೀರಾತು ಮೂಲಕ ಶೃತಪಡಿಸುವದೇನಂದರೆ— ಶ್ರೀ ಮಹಾ ಸಂಸ್ಥಾನದ ಅಧಿಕಾರಕ್ಕೂ ಆಡಳಿತಕ್ಕೂ ಒಳಪಟ್ಟ ಶ್ರೀ ಮದುಳವೀ ಮಹಾ ಕ್ಷೇತ್ರದ ವ್ಯವಸ್ಥೆಯು ಸರಿಯಾಗಿ ಜರುಗುವುದಕ್ಕಾಗಿಯೂ ಸದರೀ ಶ್ರೀ ಕ್ಷೇತ್ರದ ಪುರೋಭಿವೃದ್ಧಿಗಾಗಿಯೂ ಒಬ್ಬ ಮೂರ್ತಿಗಳ ಅತ್ಯವಶ್ಯಕತೆಯಿರುತ್ತದೆ. ಪ್ರಯುಕ್ತ ಮಹಾಸನ್ನಿಧಾನದಿಂದ ಒಬ್ಬ ಮೂರ್ತಿಗಳನ್ನು ನೇಮಿಸಿಕೊಡಬೇಕೆಂದು ಗುರುಮಠಕಲ್ ಖಾಸಾಮಠದ ಶಾಂತವೀರ ದೇವರು ಸಮಸ್ತ ಸದ್ಭಕ್ತಾದಿಗಳು ಶ್ರೀ ಮಹಾ ಸನ್ನಿಧಿಗೆ ಪ್ರಾರ್ಥಿಸಿಕೊಂಡ ಮೇರೆಗೆ ಕೊಡಗು ಸೋಮವಾರ ಪೇಟೆ ಮಠದ ಶಾಂತ ದೇವರನ್ನು ಶ್ರೀ ಕ್ಷೇತ್ರದ ವ್ಯವಸ್ಥೆಯನ್ನು ಸರಿಯಾಗಿ ಮಾಡಲಿಕ್ಕೂ ದೇಶ ಮಧ್ಯದಲ್ಲಿ ಸಂಚರಿಸುತ್ತಾ ಭಕ್ತಾದಿಗಳು ಶ್ರೀ ಕ್ಷೇತ್ರಕ್ಕೆ ಒಪ್ಪಿಕೊಂಡಿರುವ ವರ್ಗಣಿ ವಗೈರೆ ವಸೂಲ್ಮಾಡಿ ಅಲ್ಲಿನ ಯಾವತ್ತೂ ಕಾರ್ಯಗಳನ್ನು ಭದ್ರಪಡಿಸುವದಕ್ಕೂ ಶ್ರೀ ಮಹಾ ಸಂಸ್ಥಾನದಿಂದ ಅಪ್ಪಣೆ ಕೊಡಿಸಿ ಸದರಿ ಶಾಂತದೇವರನ್ನು ನೇಮಿಸಲಾಗಿದೆ. ಮತ್ತು ಗುರುಮಠಕಲ್ಲ ಶಾಂತವೀರ ದೇವರು ಶ್ರೀ ಕ್ಷೇತ್ರದ ಯಾವತ್ತೂ ವಿದ್ಯಮಾನಗಳ ಮೇಲ್ವಿಚಾರಣೆಯನ್ನು ಮಾಡುತ್ತಾ ಶ್ರೀ ಕ್ಷೇತ್ರದ ಆಡಳಿತದಲ್ಲಿ ಕಂಡ ನ್ಯೂನತೆಗಳನ್ನು ಸರಿಪಡಿಸಿಕೊಡಲಿಕ್ಕೆ ಅಪ್ಪಣೆ ಮಾಡಿದೆ. ಪ್ರಯುಕ್ತ ಶ್ರೀ ಕ್ಷೇತ್ರದ ಅಭಿಮಾನಶಾಲಿಗಳಾದ ಸಮಸ್ತ ಸದ್ಭಕ್ತರು ಕೊಡಗು ಶಾಂತದೇವರ ವಶಕ್ಕೆ ಈ ಮೊದಲು ವರ್ಗಣಿಯನ್ನು ಕೊಡಲಿಕ್ಕೆ ಒಪ್ಪಿಕೊಂಡವರು ಇನ್ನು ಮುಂದಾದರೂ ಒಪ್ಪಿಕೊಂಡು ವರ್ಗಣಿ ಹಣವನ್ನು ಸದರಿ ಮೂರ್ತಿಗಳ ವಶಕ್ಕೆ ಪಾವತಿ ಮಾಡಿ ಆ ಭಾಗದ ಪುಣ್ಯ ಕೀರ್ತಿಗೆ ಭಾಜನರಾಗತಕ್ಕದ್ದು. ಈ ಮೇರೆ ಮೂರ್ತಿಗಳ ವಶಕ್ಕೆ ನಿರೂಪ ಸಾದರ ಮಾಡಿದೆಯೆಂಬ ಅಂಶವನ್ನು ಈ ಮೂಲಕ ಸಮಸ್ತ ಭಕ್ತಾದಿಗಳಿಗೆ ಅಪ್ಪಣೆ ಕೊಡಿಸೋಣಾಗಿದೆ

ಗೌರೀಶಂಕರ ನಿವಾಸ
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಧಕ್ಕ್ಯಾ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .. .. ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ . ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
(೪೫) ದಪಣಾಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ** ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಪ್ಟೋ ವರ್ಷಗಳ ಜ್ಞಾನ **ಸಂಶೋಧನದಿಂದ**
ಡಾ. ಎಂ. ಸಿ ತುಮ್ಮಿನಕಟ್ಟಿ, ಎಂ. ಎಸ್‌ಸಿ, ಪಿಎಚ್. ಡಿ ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಚ್ಯೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ **ಉಚಿತವಾಗಿ** ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು **ಹೆಚ್ಚಿನ ಮಾಹಿತಿ** ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸ್ಟೇಷನ ಶಹಾಪೂರ ಬೆಳಗಾಂವ
ಬಿ. ಎನ್. ಕುರಪತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜೂರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ.?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕನ್ನ ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾಲಿನ ಪತ್ರಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾವಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು** ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ **ಅನ್ರಿ** ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ **ಕಂಪನಿಯ** ತಿಜೋರಿ **ಕೊಂಡಾರ** ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುನಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೧-೨-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಗಣಿಕೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೨-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ**. ಪೋ. ಆಲಮಟ್ಟಿ ಜಿ. ವಿಜಾಪುರ

REGISTERED No. B-2891

ಶರಣ ಸಂದೇಶ

The
Sharana Sandesh.

[illegible]
ಕೂಡಲಸಂಗಮದೇವರ [illegible]ದಲ್ಲಿಪ್ಪನಾಗಿ ‖ [illegible] ಬಸವಣ್ಣನವರು

ಸಂಪಾದಕರು:- ಬಿಡಿ ಸಂಚಿಕೆಗೆ ೧ ಆಣೆ
ಶ್ರೀ. ಹರ್ಡೇಕರ ಮಂಜಪ್ಪನವರು. ವಾರ್ಷಿಕ ಚಂದಾ.-ಅಂಚೆಯ ವೆಚ್ಚ ಸೇರಿ [illegible] ರೂ

...ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩.	ಆಲಮಟ್ಟಿ- ಸೋಮವಾರ ತಾರೀಖು ೧೪ ನೆಯ ಅಗಷ್ಟ ೧೯೩೩.	ಸಂಚಿಕೆ ೨.

ಜನಸೇವೆಯೇ ದೇವರ ಸೇವೆ

೧೯೩೫ರಲ್ಲಿ ಹೊಸ ಸುಧಾರಣೆ.

ಸರ್. ಸಪ್ರುರವರ ಅಭಿಪ್ರಾಯ.

ಸರ್. ಸಪ್ರುರವರು

ಸರ್. ತೇಜ ಬಹದ್ದೂರ್ ಸಪ್ರುರವರು ಲಂಡನ್ನಿನಿಂದ ತಾರೀಖು ೧೦ ನೆಯ ದಿವಸ ಮುಂಬೈಗೆ ಬಂದರು. ಅದೇ ದಿನ ವ್ಹಾಯಿಸ್‌ರಾಯರ ಅಪೇಕ್ಷೆಯ ಪ್ರಕಾರ ಅವರನ್ನು ಕಂಡು ಜಾಯಿಂಟ ಪಾರ್ಲಮೆಂಟರಿ ಕಮೀಟಿಯ ವಿಷಯವಾಗಿ ಮಾತನಾಡಿದರು.

ಪತ್ರಿಕಾ ಪ್ರತಿನಿಧಿಗಳಲ್ಲಿ ಈ ಪ್ರಕಾರ ಹೇಳಿದರು. ಹೊಸ ರಾಜಕೀಯ ಸುಧಾರಣೆಯು ೧೯೩೪ ರಲ್ಲಿ ಶಾಸನವಾಗಿ ೧೯೩೫ ರಲ್ಲಿ ಆಚರಣೆಗೆ ಬರುವದು.

ದೇಹವೇ ದೇವಾಲಯ

SANGAM CLOTH STORES
Prop: M. S. Hunashikar & Sons,
P.O: TERDAL - 587 315

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಜಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ.?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಂಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕ್ಯಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೋದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡ**ದಾಗ, ಗದಗಿನಾಗ, **ಹುಬ್ಬಳ್ಳ್ಯಾಗ** ಒಟ್ಟ ನಮ್ಮ **ಕರ್ನಾಟಕ**ದಾಗ [illegible] ಶ್ರೀಮಂತ್ರ ಜನರ ಆಸ್ತಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ **ಕೊಂಡಾರ** ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ **ಕೊಳ್ಳುವೆನು**. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! **ಜಾಗ್ರತೆ ತರಿಸಿಕೊಳ್ಳಿರಿ!!**

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೨-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ** ಆಲಮಟ್ಟಿ ಪೋ. ಆಲಮಟ್ಟಿ ಜಿ. ವಿಜಾಪುರ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಅಗಸ್ಟ ತಾರೀಖು ೧೪ ನೆಯ ಸೋಮವಾರ | ಸಂಚಿಕೆ ೨.

ರಾಜಕೀಯ ಆಕಾಶದಲ್ಲಿ ಮತ್ತೆ ಮೋಡ ಕವಿಯಿತು!

ವೈಯಕ್ತಿಕ ಶಾಸನೋಲ್ಲಂಘನೆ.

ಕಾಂಗ್ರೆಸ್ಸಿನ ಕಾರ್ಯವು ವ್ಯತ್ಯಾಸವಾಗಬೇಕು.

ಭಾರತೀಯ ರಾಜಕಾರಣವು ಮತ್ತೆ ಪ್ರಕ್ಷುಬ್ಧವಾಯಿತು. ಅಲ್ಲಲ್ಲಿ ವೈಯಕ್ತಿಕ ಶಾಸನೋಲ್ಲಂಘನೆ ಪ್ರಾರಂಭವಾಯಿತು. ಗಾಂಧೀಜಿಯವರು ಶಾಸನೋಲ್ಲಂಘನೆ ಮಾಡುವುದಾಗಿ ತಿಳಿಸಿದ ನಂತರ ೧೫ ದಿವಸಗಳಲ್ಲಿ ರಾಜಕೀಯ ಆಕಾಶವು ಮತ್ತೆ ನಿರಾಶೆಯ ಮೋಡಗಳಿಂದ ಮುಸುಕಿತು.

ಗಾಂಧೀಜಿಯವರಿಗೂ ಅವರ ಸಹಕಾರಿಗಳಾದ ಶ್ರೀ. ಮಹದೇವ ಭಾಯಿಯವರಿಗೂ ಒಂದೊಂದು ವರುಷದ ಸಾದಾ ಶಿಕ್ಷೆಯಾಯಿತಷ್ಟೆ. ಶ್ರೀ ಸೌ. ಕಸ್ತೂರಿದೇವಿ ಗಾಂಧಿಯವರಿಗೂ ೬ ತಿಂಗಳ ಸಾದಾ ಶಿಕ್ಷೆಯೂ ಅವರ ಸಂಗಡ ಶಾಸನೋಲ್ಲಂಘನೆ ಮಾಡಿದ ದೇಶಸೇವಿಕೆಯರಿಗೂ ಶಿಕ್ಷೆಯಾಯಿತು.

ಶ್ರೀ. ದೇವದಾಸ ಗಾಂಧಿಯವರು ದಿಲ್ಲಿಗೆ ಹೋದೊಡನೆ ಪುರಪ್ರವೇಶ ಮಾಡಬಾರದಾಗಿ ಸರಕಾರದ ಅಪ್ಪಣೆಯಾಯಿತು. ಶಾಸನೋಲ್ಲಂಘನೆ ಮಾಡುವ ಉದ್ದೇಶವೇನೂ ತಮಗಿಲ್ಲವೆಂದು ತಿಳಿಸಿದರೂ ಅವರನ್ನು ಹಿಡಿದು ೬ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದರು. ಶಾಸನೋಲ್ಲಂಘನೆ ಮಾಡುವ ಉದ್ದೇಶವಿಲ್ಲದ ಇವರನ್ನು ಈ ಪ್ರಕಾರ ಶಿಕ್ಷೆಗೆ ಗುರಿಮಾಡಿದ್ದು ಅನ್ಯಾಯವೆಂದು ಸರಕಾರದ ಈ ಕೃತ್ಯವನ್ನು ಶಾಸನೋಲ್ಲಂಘನೆಗೆ ವಿರೋಧಾಭಿಪ್ರಾಯವುಳ್ಳವರೂ ನಿಷೇಧಿಸುತ್ತಿದ್ದಾರೆ.

ಶ್ರೀ. ರಾಜಗೋಪಾಲಾಚಾರ್ಯರು ಸರಕಾರಕ್ಕೆ ತಮ್ಮ ಮನೋಗತವನ್ನು ತಿಳಿಸಿ ಶಾಸನೋಲ್ಲಂಘನೆ ಮಾಡುವುದಾಗಿ ತಮ್ಮ ಸಹಕಾರಿಗಳೊಡನೆ ಸಿದ್ಧರಾದರು. ಶಾಂತತಾ ಪ್ರಿಯನಾದ ನಾಗರಿಕನಿಗೆ ಆತ್ಮಕ್ಲೇಶದ ಇದೊಂದೇ ಮಾರ್ಗ ಉಳಿದಿದೆಯೆಂದು ಇವರು ತಿಳಿಸಿ ೬ ತಿಂಗಳ ಶಿಕ್ಷೆ ಹೊಂದಿ ಕಾರಾಗೃಹವನ್ನು ಸೇರಿದರು.

ಶ್ರೀ. ಅಣೆಯವರು ಕೂಡಾ ತಾವು ಶಾಸನೋಲ್ಲಂಘನೆ ಮಾಡುವುದಾಗಿ ಸರಕಾರಕ್ಕೆ ತಿಳಿಸಿದ್ದಾರೆ. ಇವರು ಅರಣ್ಯ ಶಾಖೆಯ ಶಾಸನವನ್ನು ಉಲ್ಲಂಘಿಸುವಂತೆ ಕಾಣುತ್ತದೆ. ಇವರಾದರೂ ಕಾರಾಗೃಹವನ್ನು ಸೇರುವರು.

ಮುಂಬೈಯಲ್ಲಿ ಮತ್ತೆ ದೇಶಸೇವಿಕೆಯರು ಶಾಸನೋಲ್ಲಂಘನೆಯನ್ನು ಮಾಡಲುಪಕ್ರಮಿಸಿರುವರು. ಈ ಪ್ರಕಾರ ಅಲ್ಲಲ್ಲಿ ಮತ್ತೆ ಅಲ್ಪ ಪ್ರಮಾಣದಿಂದ ಶಾಸನೋಲ್ಲಂಘನೆ ಪ್ರಾರಂಭವಾಗಿದೆ. ಮಹಾತ್ಮಾ ಗಾಂಧೀಜಿಯವರು ರಾಷ್ಟ್ರೀಯ ಸಭೆಯನ್ನು ಬಿಟ್ಟು ಕಾರಾಗೃಹವನ್ನು ಸೇರಿದ್ದರಿಂದ ನಿರಾಶೆಯ ಮೋಡ ಕವಿದಿದೆಯೆಂದು ನಾಮದಾರ ಶಾಸ್ತ್ರಿಯವರು ಹೇಳಿದ್ದಾರೆ.

ರಾಷ್ಟ್ರೀಯ ಸಭೆಯಲ್ಲಿ ವಿಧಾಯಕ ಕಾರ್ಯ ಮಾಡುವುದೊಂದು ಕೌನ್ಸಿಲ್ ಸೇರುವುದೊಂದು ಈ ಪ್ರಕಾರ ಎರಡು ಪಂಗಡಗಳಾಗುವಂತೆ ತೋರುತ್ತದೆ.

ರಾಷ್ಟ್ರೀಯ ಸಭೆಯ ಜನರಲ್ ಸೆಕ್ರೆಟರಿಗಳಾದ ಜಯರಾಮದಾಸ ದೌಲತರಾಮ ಇವರು ತಾ. ೬ ನೆಯ ದಿವಸ ಮುಂಬೈ ಸರಕಾರಕ್ಕೆ ಪತ್ರ ಬರೆದು ತಾವು ೨೩ನೆಯ ದಿವಸ ತಮಗೆ ಕೊಟ್ಟ ನೋಟೀಸನ್ನು ಉಲ್ಲಂಘಿಸುವುದಾಗಿ ತಿಳಿಸಿದ್ದಾರೆ. ತಮ್ಮ ಸಹಕಾರಿಗಳಾದ ಪ್ರೊ. ಧನಶ್ಯಾಮರ ಸಮೇತ ತಾ. ೧೦ನೆಯ ದಿವಸ ಪ್ರಯಾಣ ಬೆಳೆಸುವೆವೆಂದು ಸರಕಾರಕ್ಕೆ ತಿಳಿಸಿದ್ದಾರೆ. ಶ್ರೀ ಧನಶ್ಯಾಮರಿಗೂ ಪ್ರತಿಬಂಧದ ನೋಟೀಸು ಆಗಿದೆ.

ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನು ವ್ಯತ್ಯಾಸಗೊಳಿಸಿ ದೇಶದಲ್ಲಿ ಶಾಂತತೆ ಸ್ಥಾಪನೆಮಾಡಲು ಪ್ರಯತ್ನಿಸಬೇಕೆಂದು ನಾ. ಶಾಸ್ತ್ರಿಗಳವರು ಸೂಚಿಸುತ್ತಿದ್ದಾರೆ.

ಹಿಂದಿನ ೫೦ ವರುಷಗಳ ವೀರಶೈವ ಸಮಾಜ ಸ್ಥಿತಿ.

ಇಂಗ್ಲಿಷ್ ಶಿಕ್ಷಣ ಪ್ರಸಾರ.

ವೀರಶೈವ ಸಮಾಜವು ಹಿಂದು ಧರ್ಮದ ಒಂದಂಗವಾಗಿದೆ. ಮತ್ತು ಕರ್ನಾಟಕ ದೇಶದ ಒಂದು ಮುಖ್ಯಾಂಗವಾಗಿದೆ. ಆದುದರಿಂದ ಈ ಸಮಾಜದ ಉನ್ನತಾವನತಿಗಳು ಹಿಂದು ರಾಷ್ಟ್ರದ ಹಿತಾಹಿತಗಳಿಗೆ ಎಷ್ಟೋ ಕಾರಣವಾಗಿವೆ ಈ ಹಿಂದಿನ ೫೦ ವರುಷಗಳಲ್ಲಿ ಎಂದರೆ ಕ್ರಿ. ಶ. ೧೮೮೪ ರಿಂದ ಈ ವರೆಗೆ ವೀರಶೈವ ಸಮಾಜವು ಯಾವ ಯಾವ ಸಂಗತಿಗಳಲ್ಲಿ ಯಾವ ಯಾವ ಪ್ರಕಾರ ಉನ್ನತಾವನತಿಗಳನ್ನು ಹೊಂದಿತೆಂದು ನೋಡಿದರೆ ಈ ಸಮಾಜವು ರಾಷ್ಟ್ರೋನ್ನತಿಗೆ ಎಷ್ಟರಮಟ್ಟಿಗೆ ನೆರವಾಯಿತೆಂಬುದು ಗೊತ್ತಾಗುವುದು.

ಸಮಾಜದ ಉನ್ನತಿಗೆ ಶಿಕ್ಷಣ ಪ್ರಸಾರವೂ ಒಂದು ಮುಖ್ಯಸಾಧನವಾಗಿದೆ. ಆದುದರಿಂದ ಕಳೆದ ೫೦ ವರುಷಗಳಲ್ಲಿ ಶಿಕ್ಷಣ ಪ್ರಸಾರವು ಎಷ್ಟರಮಟ್ಟಿಗಾಗಿದೆಯೆಂಬುದನ್ನು ಮೊದಲು ನೋಡೋಣ.

೫೦ ವರುಷಗಳ ಹಿಂದೆ ಇಂಗ್ಲಿಷ್ ಶಿಕ್ಷಣವಾಗಲಿ ಅಥವಾ ಸಂಸ್ಕೃತ ಶಿಕ್ಷಣವಾಗಲಿ ವೀರಶೈವ ಸಮಾಜದಲ್ಲಿ ಬಹು ಕಡಿಮೆಯಾಗಿದ್ದಿತು. ಆದುದರಿಂದ ಈ ಸಮಾಜವು ಅನೇಕ ವಿಷಯಗಳಲ್ಲಿ ತುಂಬಾ ತೊಂದರೆಯನ್ನೂ, ಅವಮಾನವನ್ನೂ ಹೊಂದಬೇಕಾಗುತ್ತಿದ್ದಿತು. ಆ ದುರವಸ್ಥೆಯನ್ನು ದೂರ ಮಾಡಲು ಕೈ. ಡೆಪ್ಯುಟಿ ಚೆನ್ನಬಸವಪ್ಪನವರು, ಕೈ. ಗಿಲಗಂಚಿ ಗುರುಸಿದ್ಧಪ್ಪನವರು, ಕೈ. ಅರಟಾಳ ರುದ್ರಗೌಡರು ವಿಶೇಷ ಪರಿಶ್ರಮಪಟ್ಟು ಇಂಗ್ಲಿಷ್ ಶಿಕ್ಷಣ ಪ್ರಸಾರಗೊಳಿಸಿದರು. ಈ ತ್ರಿಮೂರ್ತಿಗಳೇ ಆಧುನಿಕ ಶಿಕ್ಷಣ ಪ್ರಸಾರದ ಆದ್ಯಪ್ರವರ್ತಕರೆಂದು ಧಾರಾಳವಾಗಿ ಹೇಳಬಹುದು.

ಈ ಮಹಾಶಯರ ಪ್ರಯತ್ನದಿಂದ ಸಮಾಜದ ಅನೇಕ ಪ್ರಮುಖರು ಶಿಕ್ಷಣ ಪ್ರಸಾರದ ಕಡೆಗೆ ಲಕ್ಷಿಸಿ ಉದಾರವಾದ ಸಹಾಯವನ್ನು ಮಾಡಲುಪಕ್ರಮಿಸಿದರು. ಅಂತಹ ವಿದ್ಯಾಭಿಮಾನಿಗಳಲ್ಲಿ ತ್ಯಾಗವೀರ ಲಿಂಗರಾಜರು, ಕೈ. ಗುಬ್ಬಿ ತೋಟದಪ್ಪನವರು, ಶ್ರೀಮಂತ ವಂಟಮುರಿ ದೇಸಾಯರು ಅಗ್ರಗಣ್ಯರು. ಈ ತ್ರಿಮೂರ್ತಿಗಳ ಉದಾರವಾದ ಧನಸಹಾಯವು ವೀರಶೈವ ಸಮಾಜದಲ್ಲಿ ಇಂಗ್ಲಿಷ್ ಶಿಕ್ಷಣ ಪ್ರಸಾರವಾಗಲು ವಿಶೇಷ ಸಹಾಯವಾಯಿತು.

ಸುಶಿಕ್ಷಿತರು ಮತ್ತು ಶ್ರೀಮಂತರು ಇಂಗ್ಲಿಷ್ ಶಿಕ್ಷಣ ಪ್ರಸಾರದ ಕಡೆಗೆ ಲಕ್ಷಿಸಿದಂತೆಯೇ ವೀರಶೈವ ಸಮಾಜವು ಸಕಲ ಸಂಗತಿಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಲೆಂದು ಅವಿಶ್ರಾಂತ ಪರಿಶ್ರಮಪಡುತ್ತಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿಗಳೂ ವಿದ್ಯಾರ್ಥಿ ವೇತನವನ್ನೂ, ಬೋರ್ಡಿಂಗುಗಳನ್ನೂ ಏರ್ಪಡಿಸಿ ಇಂಗ್ಲಿಷ್ ಶಿಕ್ಷಣ ಪ್ರಸಾರಕ್ಕೆ ವಿಶೇಷವಾದ ಸಹಾಯವನ್ನು ಕಳೆದ ೨೫ ವರುಷಗಳಿಂದಲೂ ಮಾಡುತ್ತಬಂದಿದ್ದಾರೆ.

ಪರಮಪೂಜ್ಯ ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಕಳೆದ ೧೫ ವರುಷಗಳ ಅವಿಶ್ರಾಂತಶ್ರಮವು ಕೂಡಾ ವೀರಶೈವ ಸಮಾಜದ ಇಂಗ್ಲಿಷ್ ಶಿಕ್ಷಣ ಪ್ರಸಾರಕ್ಕೆ ವಿಶೇಷವಾದ ಸಹಾಯವನ್ನು ಮಾಡಿದೆ. ಈ ಪ್ರಕಾರ ಸಮಾಜದ ಪ್ರಮುಖ ಸ್ವಾಮಿಗಳೂ, ಶ್ರೀಮಂತರೂ, ಅಧಿಕಾರಿಗಳೂ ಇಂಗ್ಲಿಷ್ ಶಿಕ್ಷಣ ಪ್ರಸಾರಕ್ಕೇನೇ ಹೆಚ್ಚಿಗೆ ಲಕ್ಷಿಸಿದ್ದರಿಂದ ಅನೇಕ ಕಡೆಗಳಲ್ಲಿ ಇಂಗ್ಲಿಷ್ ಶಾಲೆಗಳೂ ಬಡವಿದ್ಯಾರ್ಥಿಗಳಿಗಾಗಿ ಬೋರ್ಡಿಂಗುಗಳೂ ಏರ್ಪಟ್ಟು ಶಿಕ್ಷಣ ಪ್ರಸಾರವು ದಿನೇ ದಿನೇ ತೀವ್ರತರವಾಗಿ ಜರುಗಿತು.

ಅನೇಕ ಪದವೀಧರರು ಸರಕಾರಿ ಕೆಲಸಗಳಲ್ಲಿ ಸೇರಿದರು. ಶ್ರೀಯುತ ಬಸವನಾಳ, ಶ್ರೀ ಸಾಖರೆ, ಶ್ರೀ ಕಟ್ಟಿಮನಿ ಮೊದಲಾದ ಸ್ವಾರ್ಥತ್ಯಾಗಿಗಳಾದ ವಿದ್ಯಾಭಿಮಾನಿಗಳು ಮುಂದೆ ಬಂದು ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿಯನ್ನು ಸ್ಥಾಪಿಸಿ ಆ ಮೂಲಕ ಹೈಸ್ಕೂಲಗಳನ್ನು ಏರ್ಪಡಿಸಿ ಕೊನೆಗೆ ಒಂದು ಕಾಲೇಜನ್ನು ಕೂಡಾ ಸ್ಥಾಪಿಸುವಷ್ಟು ಪರಿಶ್ರಮ ಪಟ್ಟುದು ಇಂಗ್ಲಿಷ್ ಶಿಕ್ಷಣ ಪ್ರಸಾರಕ್ಕೆ ತುಂಬಾ ಸಹಾಯವನ್ನೇ ಮಾಡಿತು. ಈ ಪ್ರಕಾರ ಮುಂಬೈ ಕರ್ನಾಟಕ ಮತ್ತು ಮೈಸೂರು ದೇಶದ ವೀರಶೈವರಲ್ಲಿ ಇಂಗ್ಲಿಷ್ ಶಿಕ್ಷಣ ಪ್ರಸಾರವು ಕಳೆದ ೫೦ ವರ್ಷಗಳಿಂದಲೂ ದಿನೇ ದಿನೇ ತೃಪ್ತಿಕರವಾಗಿಯೇ ಹೆಚ್ಚುತ್ತ ಬಂದಿದೆಯೆಂದು ಹೇಳಬಹುದು.

ಈ ಪ್ರಮಾಣದಂತೆ ಬಳ್ಳಾರಿ ಪ್ರಾಂತ ಮಹಾರಾಷ್ಟ್ರ ಭಾಗ ನೈಜಾಮ ರಾಜ್ಯಗಳ ವೀರಶೈವರಲ್ಲಿ ಮಾತ್ರ ಇಂಗ್ಲಿಷ್ ಶಿಕ್ಷಣ ಪ್ರಸಾರವಾಗಿಲ್ಲ. ಇದಕ್ಕೆ ಆಯಾಯ ಭಾಗಗಳ ಸ್ವಾಮಿಗಳು, ಧನಿಕರು, ಸುಶಿಕ್ಷಿತರು ಹೆಚ್ಚಾಗಿ ಲಕ್ಷಿಸಿ ವಿಶೇಷ ಪರಿಶ್ರಮಪಡದಿದ್ದುದೇ ಮುಖ್ಯ ಕಾರಣವು. ಈಗಲಾದರೂ ಆಯಾಯ ಭಾಗಗಳ ವೀರಶೈವ ಪ್ರಮುಖರು ಜಾಗೃತರಾಗಿ ತಮ್ಮ ಭಾಗವು ಕಳೆದ ೫೦ ವರುಷಗಳಿಂದಲೂ ಶಿಕ್ಷಣದಲ್ಲಿ ಎಷ್ಟು ಮಂದಗತಿಯುಳ್ಳದ್ದಾಗಿದೆಯೆಂಬುದನ್ನು ನೋಡಿ ಹೆಚ್ಚಾಗಿ ಪ್ರಯತ್ನಿಸಬೇಕು.

೫೦ ವರುಷಗಳ ಹಿಂದೆ ನಾಲ್ಕೈದು ಪದವಿಧರರಿಲ್ಲದಿದ್ದ ಈ ಸಮಾಜದಲ್ಲಿ ಈಗ ಸಾವಿರದವರೆಗೆ ಪದವಿಧರರು ದೊರೆಯುವಂತಾಗಿದೆ. ಆಗ ಒಬ್ಬಿಬ್ಬರು ಮೇಲಾಧಿಕಾರಿಗಳಿದ್ದರು. ಈಗ ನೂರಾರು ಪ್ರಮುಖಾಧಿಕಾರಿಗಳಾಗಿದ್ದಾರೆ. ಈ ಪ್ರಕಾರ ಒಟ್ಟನಲ್ಲಿ ಇಂಗ್ಲಿಷ್ ಶಿಕ್ಷಣ ಪ್ರಸಾರವು ಹೆಚ್ಚುತ್ತಲೇ ಬಂದಿದೆ.

[ಸಂಪಾದಕ.]

—ಮೈಸೂರು ಸಂಸ್ಥಾನದ ಚಾಮರಾಜ ನಗರ ತಾಲೂಕಿನ ಅಡವಿಗಳಲ್ಲಿ ೫ ವರುಷಗಳವರೆಗೆ ಯಾರೂ ಬೇಟೆಯಾಡಬಾರದೆಂದು ಪ್ರತಿಬಂಧಮಾಡಲಾಗಿದೆ.

ಗಾಂಧೀಜಿಯವರ ವಿಚಾರಣೆ.

ಆತ್ಮಕ್ಲೇಶದ ಮಾರ್ಗಾವಲಂಬನೆ.

ಮಹಾತ್ಮಾ ಗಾಂಧಿಯವರನ್ನು ಕಳೆದ ತಿಂಗಳ ೩೧ನೆಯ ತಾರೀಖಿನ ರಾತ್ರಿ ಅಹಮುದಾಬಾದಿನಲ್ಲಿ ಕೈಸೆರೆ ಮಾಡಿ ಯರವಡಾ ಕಾರಾಗೃಹಕ್ಕೆ ತೆಗೆದುಕೊಂಡುಬಂದಮೇಲೆ ಪುಣೆ ಪಟ್ಟಣದಲ್ಲಿಯೇ ಇರಬೇಕೆಂತಲೂ ಶಾಸನೋಲ್ಲಂಘನೆಯ ಚಟುವಟಿಕೆಯನ್ನು ನಡೆಯಿಸಕೂಡದೆಂತಲೂ ೧೨ ಜನಗಳಿಗಿಂತ ಹೆಚ್ಚು ನೇರಿದ ಜನರ ಗುಂಪಿನಲ್ಲಿ ಹೋಗಬಾರದೆಂತಲೂ ಸರಕಾರದವರು ಅಪ್ಪಣೆ ಮಾಡಿ ಬಿಡುಗಡೆ ಮಾಡಿದರು.

ಈ ಅಪ್ಪಣೆಯನ್ನು ತಾವು ಮಾನ್ಯಮಾಡುವುದಿಲ್ಲವೆಂದು ಹೇಳಿ ಅವನ್ನು ಉಲ್ಲಂಘಿಸಿದುದರಿಂದ ತಾ. ೪ನೆಯ ದಿನವೇ ಯರವಡಾ ಕಾರಾಗೃಹದಲ್ಲಿಯೇ ಕೋರ್ಟು ಏರ್ಪಟ್ಟು ವಿಚಾರಣೆಯಾಗಿ ಒಂದು ವರುಷದ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿತು ಮತ್ತು ಒಂದನೆಯ ತರಗತಿಯ ಅಪರಾಧಿಯಾಗಿ ಎಣಿಸಲ್ಪಡಬೇಕೆಂತಲೂ ನ್ಯಾಯಾಧೀಶರು ತಿಳಿಸಿದರು.

ಗಾಂಧೀಜಿಯವರು ದಕ್ಷಿಣಾಫ್ರಿಕೆಯಿಂದ ಈ ದೇಶಕ್ಕೆ ಬಂದು ೧೮ ವರುಷಗಳಾದವು. ರಾಜಕೀಯ ಚಟುವಟಿಕೆಯಲ್ಲಿ ಪ್ರತ್ಯಕ್ಷವಾಗಿ ಪ್ರವೇಶಿಸಿ ೧೩ ವರುಷಗಳಾದವು. ಈ ೧೩ ವರುಷಗಳಲ್ಲಿ ಗಾಂಧೀಜಿಯವರು ಅನೇಕ ಸಾರೆ ಕಾರಾಗೃಹವಾಸ ಮಾಡುವ ಪ್ರಸಂಗ ಬಂದಿದೆ. ಆ ಎಲ್ಲ ಪ್ರಸಂಗಗಳಿಗಿಂತಲೂ ಈ ಸಾರೆಯ ಪ್ರಸಂಗವು ಅತ್ಯಂತ ಮಹತ್ವವೂ ವಿಷಾದಕರವೂ ಆದುದೆಂದು ಚರಿತ್ರಕಾರರು ಬರೆಯದಿರಲಾರರು.

ಗಾಂಧೀಜಿಯವರಿಗೆ ವ್ಹಾಯಿಸರಾಯರು ಸಂಧಿಯ ವಿಷಯವಾಗಿ ತಮ್ಮ ಸಂಗಡ ಸಂಭಾಷಣೆ ಮಾಡಲು ಅವಕಾಶ ಕೊಡದಿರಲು ತಮ್ಮ ಕೊನೆಯ ಮಾರ್ಗವನ್ನು ಗಾಂಧೀಜಿಯವರು ಅನುಸರಿಸಿದರೆಂದು ತೋರುತ್ತದೆ. ಜನಸೇವೆಗೆ ಅಪರ್ಣವಾಗಿರಲು ಯಾವ ಆಶ್ರಮವನ್ನು ಸ್ಥಾಪಿಸಿ ೧೮ ವರುಷಗಳಿಂದ ತಮ್ಮ ಪ್ರಾಣದಂತೆ ಜೋಪಾನ ಮಾಡಿಕೊಂಡು ಬಂದಿದ್ದರೋ ಅದನ್ನೇ ತಮ್ಮ ಕೈಯಿಂದ ತಾವೇ ತೆಗೆದುಹಾಕಿಬಿಟ್ಟರು.

ಹಿಂದಿನ ಕಾಲದ ರಜಪೂತ ರಾಜರು ಯುದ್ಧದಲ್ಲಿ ಕೊನೆಗೆ ತಮ್ಮ ಸರ್ವಸ್ವವನ್ನೂ ಅಗ್ನಿಗರ್ಪಿಸಿ ಹೇಗ ಮುಂದಿನ ಆಶೆಯಿಲ್ಲದೆ ರಣದಲ್ಲಿ ಹೋರಾಡಿ ಆತ್ಮಾರ್ಪಣ ಮಾಡುತ್ತಿದ್ದರೋ ಅದೇಪ್ರಕಾರ ಈ ಸತ್ಯಾಗ್ರಹಿಗಳು ತಮ್ಮ ಶಾಂತಿಯುದ್ಧದಲ್ಲಿ ತಮ್ಮ ಸರ್ವಸ್ವವಾದ ಆಶ್ರಮವನ್ನು ತೆಗೆದುಹಾಕಿ ಕಾರಾಗೃಹವನ್ನು ಸೇರಿದರು. ಹೀಗೆ ಮಾಡಿ ಈ ಮುಂಚೆ ಎಲ್ಲಿಯೂ ಎಂದೂ ಕಾರಾಗೃಹವನ್ನು ಸೇರಿರಲಿಲ್ಲ. ಇದರಮೇಲಿಂದ ರಾಷ್ಟ್ರದ ಈಗಿನ ಸ್ಥಿತಿಯಲ್ಲಿ ಜನಮಧ್ಯದಲ್ಲಿದ್ದು ಇನ್ನುಮುಂದೆ ಕೆಲಸಮಾಡಲು ಇವರಿಗೆ ಇಷ್ಟವಿಲ್ಲವೆಂದೇ ತೋರುತ್ತದೆ. ಏಕೆಂದರೆ, ವಿಚಾರಣೆಯ ಕಾಲಕ್ಕೆ ಈ ಸಾರೆ ಈ ಪ್ರಕಾರ ಹೇಳಿದರು,

“ಮುಂಬೈ ಸರಕಾರದ ಅಪ್ಪಣೆಯನ್ನು ನಾನು ತಿಳಿದೂ ತಿಳಿದು ಬುದ್ಧಿಪೂರ್ವಕ ಉಲ್ಲಂಘನೆ ಮಾಡಿದ್ದೇನೆ. ಸಂಘಟಿತವಾದ ಸರಕಾರದ ಅಪ್ಪಣೆಯನ್ನು ನಾನು ಸುಮ್ಮಸುಮ್ಮನೇ ಉಲ್ಲಂಘಿಸುವುದು ಶಕ್ಯವಿಲ್ಲ. ಶಾಂತತೆಯೇ ನನ್ನ ಜೀವನವಾಗಿದೆ. ಯಾವ ಸರಕಾರದ ಅಧಿಕಾರಕ್ಕೊಳಪಟ್ಟವನಾಗಿ ನಾನಿದ್ದೇನೆಯೋ ಆ ಸರಕಾರದ ಅಧಿಕಾರವನ್ನು ಸ್ವಸಂತೋಷದಿಂದ ಅನುಸರಿಸಬೇಕಾದದು ಕರ್ತವ್ಯವೆಂದೇ ತಿಳಿಯುವ ನಾನೊಬ್ಬ ನಾಗರಿಕನು.

ಇಂಥ ನಾಗರಿಕನಿಗು ಕೂಡಾ ಕೆಲವು ಪ್ರಸಂಗಗಳಲ್ಲಿ ಸರಕಾರದ ಅಪ್ಪಣೆಯನ್ನು ಭಂಗಗೊಳಿಸುವುದೇ ಆತನ ಕರ್ತವ್ಯವಾಗಿ ಪರಿಣಮಿಸುತ್ತದೆ. ಇಂಥ ದುಃಖಕರವಾದ ಪ್ರಸಂಗವು ೧೯೧೯ರಲ್ಲಿಯೂ ನನಗೆ ಬಂದಿದ್ದಿತೆಂಬುದು ಸುಪ್ರಸಿದ್ಧವಷ್ಟೆ. ಅಂತಹ ಪ್ರಸಂಗಗಳಲ್ಲಿ ನಾನು ಶಾಸನವನ್ನು ಭಂಗಗೊಳಿಸುವುದಲ್ಲದೆ ಅನ್ಯರಿಗೂ ಭಂಗಗೊಳಿಸಲು ಹೇಳುವುದು ನನ್ನ ಕರ್ತವ್ಯವೆಂದೇ ನಾನು ತಿಳಿದಿದ್ದೇನೆ.

ಯಾವ ಶಾಸನವನ್ನನುಸರಿಸಿ ಈಗ ನನ್ನ ವಿಚಾರಣೆ ನಡೆದಿದೆಯೋ ಆ ಶಾಸನವು ಕೂಡಾ ನನ್ನ ಹೇಳಿಕೆಗೆ ಒಂದು ದೃಷ್ಟಾಂತವಾಗಿದೆ. ಹಿಂದುಸ್ಥಾನವು ನೈತಿಕ ಮತ್ತು ಸಾಂಪತ್ತಿಕ ವಿಷಯಗಳಲ್ಲಿ ಅಧೋಗತಿಗೀಡಾಗಹತ್ತಿದೆ. ನಾನು ಸ್ವಲ್ಪ ದಿವಸ ಕಾರಾಗೃಹದ ಹೊರಗಿದ್ದು ಅನೇಕರ ಸಂಗಡ ವಿಚಾರ ವಿನಿಮಯ ಮಾಡಿದ್ದರಿಂದ ನನಗೆ ಗೊತ್ತಾಗಿದೇನೆಂದರೆ ಅರಸನಿಂದ ಆಳಿನವರೆಗೆ ಎಲ್ಲರ ಸ್ವಾತಂತ್ರ್ಯವು ಹರಣವಾಗಿದೆ. ಮತ್ತು ಅವರು ಅಧೋಗತಿಗೀಡಾಗಹತ್ತಿದ್ದಾರೆ. ಇಂತಹ ವಾತಾವರಣದಲ್ಲಿರುವುದೇ ನನಗೆ ಶಿಕ್ಷೆಯೆಂದು ತೋರಿತು.

ಚಿಕ್ಕಂದಿನಿಂದಲೂ ನಾನು ಅಹಿಂಸೆಯ ವಿಷಯದಲ್ಲಿ ನಂಬಿಕೆಯುಳ್ಳವನಾಗಿದುದರಿಂದ ಆತ್ಮಕ್ಲೇಶದ ಮಾರ್ಗವನ್ನನುಸರಿಸಿ ನಾನು ಆ ವಾತಾವರಣದಿಂದ ಬೇರೆಯಾಗಿದ್ದೇನೆ. ಮತ್ತು ಇದೇ ಕಾರಣದಿಂದಲೇ ನಾನು ಈಗಿನ ರಾಜ್ಯಪದ್ಧತಿಗೆ ಪ್ರತಿಕಾರ ಮಾಡುತ್ತಿದ್ದೇನೆ.

ಎ. ಬಿ. ಸಿ. ಎಂಬ ಅಪರಾಧಿ ಸೆರೆಯಾಳುಗಳ ತರಗತಿಯು ನನಗೆ ಮಾನ್ಯವಿಲ್ಲವೆಂದು ನಿಮಗೂ ಸರಕಾರಕ್ಕೂ ನಾನು ತಿಳಿಸಬೇಕಾಗಿದೆ. ಆದುದರಿಂದ ಜೈಲಿನಲ್ಲಿ ನನಗೆ ಕನಿಷ್ಟವಾದ ವರ್ಗದಲ್ಲಿಡಬೇಕೆಂದೇ ನಾನು ಕೇಳಿಕೊಳ್ಳುತ್ತೇನೆ.”

—ಕಲಕತ್ತೆಯಲ್ಲಿ ಒಬ್ಬ ಕಾಲೇಜ ವಿದ್ಯಾರ್ಥಿನಿಯು ತನ್ನ ಹತ್ತಿರ ೨ ರಿವಾಲ್ವರಗಳನ್ನು ೨ ಪಿಸ್ತೂಲುಗಳನ್ನು ಇಟ್ಟುಕೊಂಡ ಬಗ್ಗೆ ಬಂಧಿಸಲ್ಪಟ್ಟಿದ್ದಾಳೆ. ಅವಳು ಕೋಮಿಲ್ಲಾ ಜಿಲ್ಲೆಯವಳು.

—ಬಾಗಲಕೋಟೆಯಲ್ಲಿ ಪ್ರಕಟವಾಗುತ್ತಿದ್ದ ‘ಕನ್ನಡಿಗ’ ದೈನಿಕ ಪತ್ರಿಕೆಯ ಕಾರ್ಯಾಲಯವು ೨೦-೮-೧೯೩೩ ನೆಯ ತಾರೀಖಿಗೆ ಧಾರವಾಡಕ್ಕೆ (ಜವಳೀಪೇಟೆಗೆ) ಹೋಗುವುದು.

—ಕಾರವಾರ ಜಿಲ್ಲೆಯಲ್ಲಿ ೧೩೧ ಇಂಚು ಮಳೆಯಾಗಿದೆ. ಅಂಕೋಲಾ ಕುಮಟಾ ತಾಲೂಕಿನ ಮಧ್ಯದಲ್ಲಿರುವ ನಿರ್ಜನ ಸೇತುವೆ ಹರಿದುಹೋಗಿರುವುದು. ಆದರೆ ಅಲ್ಲಿ ಈಗ ಒಂದು ತಾತ್ಕಾಲಿಕ ಸೇತುವೆಯನ್ನು ರಚಿಸಿದ್ದಾರೆ.

ಶ್ರೀ. ವಾರದ ಬಾಬಾಸಾಹೇಬ ಇವರ ಅನಾದರಣೀಯ ವಿಚಾರ.

ಸೊಲ್ಲಾಪುರದ ಚನಬಸಪ್ಪಾ ಮಲ್ಲಪ್ಪಾ ವಾರದ ಇವರು ತಮ್ಮ ವಿಷಯಕ್ಕೆ ಜನರಲ್ಲಿ ಆದ ವಿಪರೀತ ಕಲ್ಪನೆಯನ್ನು ದೂರ ಮಾಡುವ ಸಲುವಾಗಿ "ಶರಣಸಂದೇಶ" ತಾ. ೭ ಅಗಸ್ಟ ೩೩ ಮತ್ತು 'ನವಕರ್ನಾಟಕ' ತಾರೀಖು ೩೧ಗಸ್ಟ ೩೩ನೆಯ ಪತ್ರಿಕೆಗಳಲ್ಲಿ ಲೇಖವನ್ನು ಪ್ರಸಿದ್ಧಮಾಡಿರುತ್ತಾರೆ. ಇದನ್ನು ನೋಡಿ ಆಶ್ಚರ್ಯವುಂಟಾಗುತ್ತದೆ. ಪಂಚಾಚಾರ್ಯ ಮತ್ತು ವಿರಕ್ತ ಗುರು ಪೀಠಾಧಿಕಾರಿಗಳಲ್ಲಿ ಇತ್ತಿತ್ತಲಾಗಿ ಅನಿಷ್ಟವಾದವು, ಉತ್ಪನ್ನವಾಗಿ ಸಮಾಜದಲ್ಲಿ ಖೇದಕಾರಕ ಪರಿಣಾಮಗಳು ಜರುಗುತ್ತವೆ. ಅವುಗಳ ನಿರ್ಮೂಲ ನಾಶಕ್ಕಾಗಿ ವಿರಕ್ತ ಗುರುಸ್ಥಲದವರಲ್ಲಿ ಮತ್ತು ಸಮಾಜದಲ್ಲಿ ಐಕ್ಯ ಉಂಟುಮಾಡುವ ಸದ್ಬುದ್ಧಿಯಿಂದ ಸೊಲ್ಲಾಪುರಕ್ಕೆ ಶ್ರೀ. ಉಜ್ಜನೀ ಸ್ವಾಮಿಗಳನ್ನು ಕರೆಯಿಸಬೇಕೋ ಇಲ್ಲವೋ? ಈ ವಾದವು ಉತ್ಪನ್ನವಾಗಿತ್ತು. ಇದರ ವಿಷಯಕ್ಕೆ ಸಕಾರಣವಾದ ವೃತ್ತಗಳಾದರೂ ಪ್ರಸಿದ್ಧವಾಗಿರುತ್ತವೆ. ಪಂಚಾಚಾರ್ಯ ಪೀಠದ ಮತ್ತು ಅದರ ಪೂರ್ವಾಚಾರ್ಯರ ವಿಷಯಕ್ಕೆ ಸರ್ವರಲ್ಲಿಯೂ ಪ್ರೇಮಾದರ ಬುದ್ಧಿಯು ನಿಃಸಂಶಯವಾಗಿ ವಾಸಮಾಡಿದೆ. ಆದರೂ ಇತ್ತಿತ್ತಲಾಗಿ ಈಗಿನ ಪೀಠಾಧಿಕಾರಿಗಳು ಶೂನ್ಯಪೀಠಾಧಿಕಾರಿಗಳಾದ ಶ್ರೀ. ವಿರಕ್ತ ಸ್ವಾಮಿಗಳವರ ಉತ್ಕರ್ಷವನ್ನು ಸಹಿಸಲಾರದೆ ಸ್ವಪ್ರತಿಷ್ಠೆಯನ್ನು ಬೆಳೆಯಿಸುವ ಸಲುವಾಗಿ ನಮ್ಮ ಸಮಾಜಕ್ಕೆ ಅತ್ಯಂತ ವಂದನೀಯರಿದ್ದಂಥ ಶ್ರೀ ಬಸವೇಶ್ವರ, ಚೆನ್ನಬಸವೇಶ್ವರ, ಪ್ರಭುದೇವರ ವ ಸಿದ್ಧರಾಮೇಶ್ವರಾದಿ ಪ್ರಮಥರ ವಿಷಯಕ್ಕೆ ಅಶ್ರದ್ಧೆಯನ್ನುಂಟುಮಾಡುವಂಥ ತಿರಸ್ಕರಣೀಯ ಲೇಖನಗಳಿಂದ ಹಾಗೂ ಭಾಷಣಗಳಿಂದ ಸಮಾಜದಲ್ಲಿ ಅನೈಕ್ಯವನ್ನು ಉತ್ಪನ್ನ ಮಾಡಿ ವಿರಕ್ತ ಸ್ವಾಮಿಗಳವರ ವಿಷಯಕ್ಕೆ ನಡೆಯಿಸಿದ ನಿಂದ್ಯ ಪ್ರಕಾರದ ಉತ್ಪಾದಕರಲ್ಲಿ ಉಜ್ಜಯನೀ ಸ್ವಾಮಿಗಳವರು ಪ್ರಾಮುಖ್ಯರಿದ್ದ ಕಾರಣ ಇಂಥ ಸ್ವಾಮಿಗಳವರ ಆಗಮನವು ಸೊಲ್ಲಾಪುರಕ್ಕೆ ಆಗಿ ಈ ಅನಿಷ್ಟ (ವಿರಕ್ತ ಗುರುಸ್ಥಲದ) ವಾದಕ್ಕೆ ಉತ್ತೇಜನ ದೊರೆಯಬಾರದು. ಈ ವಾದದ ನಿರ್ಮೂಲ ನಾಶವಾಗಬೇಕು. ಈ ವಿಷಯಕ್ಕೆ ಉಜ್ಜಯನೀ ಸ್ವಾಮಿಗಳವರು ಸ್ಪಷ್ಟವಾಗಿ ಸಮ್ಮತಿಕೊಟ್ಟರೆ ಅವರಿಗೆ ಬರಮಾಡಿಕೊಳ್ಳಬೇಕು. ಹೀಗೆ ಪ್ರಮುಖ ನಾಗರಿಕರು ತಮ್ಮ ಸಹಿಯಿಂದ ಜಾಹೀರವನ್ನಾದರೂ ಮಾಡಿರುತ್ತಾರೆ. ಮತ್ತು ಈ ವಿಷಯಕ್ಕೆ ಸರ್ವರ ಏಕಮತ್ಯವಾದರೂ ಇತ್ತು. ಆ ಜಾಹೀರ ಪತ್ರಿಕೆಯಲ್ಲಿ ಸಹಿ ಬೇಡಿದರೆ ನಾನು ಅಲಿಪ್ತನಿರುತ್ತೇನೆ. ಈ ಸಮ್ಮಂಧಿ ಯಾವದರಲ್ಲಿಯೂ ಪ್ರವೇಶವಾಗುವದಿಲ್ಲ. ಹೀಗೆ ಹೇಳಿ ತಮ್ಮ ಸಹಾನುಭೂತಿ ತೋರಿಸಿದರು. ಆದರೆ ಅದು ಶಾಶ್ವತ ಉಳಿಯಲಿಲ್ಲ.

ವಿಘ್ನಸಂತೋಷಿ ಜನರ ಕಾರಸ್ಥಾನ.

ಕೆಲವು ಸ್ವಾರ್ಥ ಪ್ರೇರಿತ ಕಲಹ ಪ್ರಿಯರ ಪ್ರೇರಣೆಯಿಂದ ಸೊಲ್ಲಾಪುರದ ವೀರಶೈವರಲ್ಲಿದ್ದ ಅಬಾಧಿತ ಐಕ್ಯದಲ್ಲಿ ಅನೈಕ್ಯ ಉತ್ಪನ್ನವಾಗಿ ಪಂಗಡಗಳು ಉತ್ಪನ್ನವಾದವು. ಇದಕ್ಕೆ ಕಾರಣರಿದ್ದ ಗೃಹಸ್ಥರಲ್ಲಿ ಶ್ರೀ. ವಾರದ ಇವರು ಪ್ರಾಮುಖ್ಯರಿದ್ದಾರೆ. ಹೀಗಿದ್ದು ತಮ್ಮ ಮೇಲಿನ ದೋಷ ತಪ್ಪಿಸುವ ಸಲುವಾಗಿ ಅವರು ತಮ್ಮ ಮನೋವೃತ್ತಿ ಹಾಗೂ ಸಮಾಜದ ಐಕ್ಯತೆಯ ವಿಷಯಕ್ಕೆ ಕಳಕಳಿಯನ್ನು ಪತ್ರದಲ್ಲಿ ಪ್ರಕಟಮಾಡಿರುತ್ತಾರೆ. ಅದು ನಿಜವೆಂದು ನಂಬಬಹುದೇ?

ಅಸಂತಃಸಂಗದೋಷೇಣ । ವಿಭ್ರಮೋಜಾಯತೇಮತೀಃ॥

ಈ ಶ್ಲೋಕದ ಸಂಪೂರ್ಣ ಮಥಿತಾರ್ಥದ ಪ್ರಕಾರ ವಾರದ ಬಾಬಾ ಸಾಹೇಬರಿಗೆ ಲಭಿಸಿದ ಅಸತ್‌ಸಂಗತಿಯಿಂದ ಅವರ ಬುದ್ಧಿ ಭ್ರಮವಾಯಿತು. ಅವರ ಮೊದಲಿನ ನಿರ್ವಿಕಾರ ಬುದ್ಧಿ ಉಳಿಯಲಿಲ್ಲ. ಹೀಗೆ ಬಹು ಕಷ್ಟದಿಂದ ಅನ್ನಬೇಕಾಗುತ್ತದೆ. ಅವರು ತಮ್ಮ ಲೇಖದಲ್ಲಿ ಪ್ರಕಟಮಾಡಿದಂತೆ ಅವರ ಮನೋವೃತ್ತಿ ಇದ್ದರೆ ಅವರು ಈ ವಾದದಿಂದ ಅಲಿಪ್ತರಿರುತ್ತಿದ್ದರು. ಅಥವಾ ಅದರಲ್ಲಿ ಐಕ್ಯವುಂಟಾಗುವಂತೆ ಪ್ರಯತ್ನವನ್ನಾದರೂ ಮಾಡುತ್ತಿದ್ದರು. ಹಾಗೆ ಏನಾದರೂ ಮಾಡಿರುವರೋ ಹ್ಯಾಗೆ? ಮತ್ತು ಪ್ರಸಿದ್ಧವಾದ ಲೇಖಾವಲೋಕನಗಳ ಹಾಗೂ ಜಾಹೀರ ಸಭೆಯಲ್ಲಿ ಸೂಚಿಸಿದ ಐಕ್ಯವಾಗುವ ಮಾರ್ಗದ ಅವಲಂಬನೆಯನ್ನು ಮಾಡುತ್ತಿದ್ದರು. ಹಾಗೆ ಮಾಡದೆ ಶ್ರೀ ಜಗದ್ಗುರು ಚಿತ್ರಕಲ್ ಮಹಾಸ್ವಾಮಿ ಹಾಗೂ ಇತರ ವಿರಕ್ತವರ್ಗದ ವಿಷಯಕ್ಕೆ ಅತ್ಯಂತ ತಿರಸ್ಕಾರವುಳ್ಳಂಥ ಪ್ರಸಿದ್ಧವಾದ ಲೇಖಗಳನ್ನು ನೋಡಿ ಅದರ ಪ್ರತೀಕಾರವನ್ನು ಮಾಡದೆ ೩-೪ ಆವರ್ತಿ ಬಾರ್ಸಿಗೆ ಹೋಗಿ ಶ್ರೀ. ಉಜ್ಜಯನೀ ಸ್ವಾಮಿಗಳವರಿಗೆ ಆಮಂತ್ರಣ ಕೊಡುವದರಲ್ಲಿ ಪ್ರಾಮುಖ್ಯರಿದ್ದು ಮತ್ತು ಅವರ ಸ್ವಾಗತ ಮಂಡಳದ ಅಧ್ಯಕ್ಷರಾಗಿ ಸೊಲ್ಲಾಪುರದ ಐಕ್ಯ ಮತ್ತು ಶಾಂತತಾಭಂಗ ಮಾಡಲಿಕ್ಕೆ ಪ್ರವೃತ್ತರಾಗಿ ಈಗ ತನ್ನ ವಿಷಯಕ್ಕೆ ಜನರಲ್ಲಾದ ಗೈರ ಸಮಜೂತಿಯನ್ನು ದೂರಮಾಡುವ ಸಲುವಾಗಿ ಈ ತರಹದ ಲೇಖ ಪ್ರಸಿದ್ಧಮಾಡುವುದು ನಿಂದ್ಯವಲ್ಲವೇ? ಮತ್ತು ಉಜ್ಜಯನೀ ಸ್ವಾಮಿಗಳು ತಮ್ಮ ಪ್ರವಚನದಲ್ಲಿ ವಿರಕ್ತರು ಕೇವಲ ಅರಣ್ಯವಾಸಿಗಳಾಗಿರತಕ್ಕದ್ದೆಂದೂ, ಅವರಿಗೆ ಪಾದೋದಕ ಪ್ರಸಾದಗಳನ್ನು ಕೊಡುವ ಅಧಿಕಾರವಿಲ್ಲವೆಂದೂ ಹಾಗೂ ಅಷ್ಟಾವರಣಗಳಲ್ಲಿ ಅವರ ಸಂಬಂಧವಿಲ್ಲವೆಂದೂ ಅಶಾಸ್ತ್ರೀಯವಾಗಿ ಪ್ರತಿಪಾದಿಸಿದ್ದನ್ನು ಕೇಳಿ ಸಮಬುದ್ಧಿಯುಳ್ಳ ಶ್ರೀ. ವಾರದ ಬಾಬಾ ಸಾಹೇಬರು ಅದರ ನಿಷೇಧ ಮಾಡಿದರೊ ಹ್ಯಾಗೆ? ಅಥವಾ ವಿರಕ್ತಸ್ವಾಮಿಗಳವರಿಗೆ ಅತ್ಯಂತ ಅಪಮಾನಕಾರಕವಾದ ಶ್ರೀ. ಉಜ್ಜಯನೀ ಸ್ವಾಮಿಗಳವರ ಪ್ರವಚನವು ಇವರಿಗೆ ಸಮ್ಮತವಾಯಿತೆಂದು ತಿಳಿಯಬೇಕೆ? ಹೇಗೆ? ವಾರದ ಮನೆತನದ ಪೂರ್ವ ಉಜ್ವಲ ಪರಂಪರ ಮತ್ತು ಕೈ. ಅಪ್ಪಾಸಾಹೇಬ ವಾರದ ಇವರಲ್ಲಿ ಸಮಾಜದ ಐಕ್ಯತೆಯ ವಿಷಯಕ್ಕೆ ಇದ್ದ ಕಳಕಳಿ, ವ ಅಭಿಮಾನವನ್ನು ಜನರಲ್ಲಿ ತನ್ನ ಸತ್ಕೃತಿಯಿಂದ ಉತ್ಪನ್ನಮಾಡಬೇಕಲ್ಲದೇ ಈ ಪ್ರಕಾರದ ಲೇಖನಗಳನ್ನು ಬರೆಯುವುದರಿಂದ ಆಗಲಾರದು.

ಶ್ರೀ. ಕಾಡಾದಿ ಬಂಧುಗಳ ಅಭಿನಂದನೀಯ ಅನುಕರಣವು.

ಶ್ರೀ. ಕಾಡಾದಿ ಇವರು ಉಜ್ಜಯನೀ ಸಿಂಹಾಸನದ ಗೋತ್ರ ಸೂತ್ರದವರಿದ್ದು ಮತ್ತು ಸ್ವಂತ ಸಾಮರ್ಥ್ಯದ ಮೇಲೆ ಸ್ವಾಮಿಗಳವರ ಸತ್ಕಾರ ಸಮಾರಂಭವನ್ನು ಮಾಡುವಂತೆ ಸರ್ವ ಅನುಕೂಲತೆ

(೧೦ ನೆಯ ಪುಟಕ್ಕೆ ಮುಂದರಿದಿದೆ.)

ವಿವಿಧ ವಿಷಯ.

ಪೂಜಾರಿಗಳ ಸಾಹಸ.

ಬೆಳಗಾವಿಯ ಮಾರುತಿ ದೇವಾಲಯದಲ್ಲಿ ಬ್ಯಾ. ಸೇನಗುಪ್ತ ಇವರ ನಿಧನದ ಬಗ್ಗೆ ದುಃಖ ಪ್ರದರ್ಶಿತ ಮಾಡುವದಕ್ಕಾಗಿ ಸರ್ವ ನಾಗರಿಕರ ಸಭೆಸೇರಿದ್ದಿತು. ಪೂಜಾರಿಗಳು ತಮ್ಮ ದೇವಾಲಯದಲ್ಲಿ ಯಾರೂ ಭಾಷಣಾದಿಗಳನ್ನು ಮಾಡಕೂಡದೆಂದು ಒಂದು ಹಲಿಗೆಯ ಮೇಲೆ ಬರೆದು ಮೊದಲೇ ಹಚ್ಚಿದ್ದರಂತೆ. ಸಭೆಯ ವ್ಯವಸ್ಥಾಪಕರು ಸಭೆಯನ್ನು ನೆರವೇರಿಸಗೊಡಲಿಕ್ಕೆ ಪೂಜಾರಿಗಳಿಗೆ ವಿನಯಪೂರ್ವಕ ವಿನಂತಿಮಾಡಿಕೊಂಡು ೭ ಘಂಟೆಗೆ ಸಭೆ ಕೂಡಿಸಿದರು. ಭಾಷಣಕಾರರು ತಮ್ಮ ಭಾಷಣ ಪ್ರಾರಂಭಿಸಿದ ಕೂಡಲೆ ವಿರೋಧಕರು ತಾಳ, ಮದ್ದಲೆ, ಮೃದಂಗ ಮೊದಲಾದವುಗಳನ್ನು ಬಾರಿಸಿ ಭಾಷಣ ನಿಲ್ಲಿಸಲು ಪ್ರಯತ್ನಿಸಿದರು. ಸಾಲದುದಕ್ಕೆ ಒಮ್ಮೊಮ್ಮೆ ಶಂಖ ಧ್ವನಿಯನ್ನು ಮಾಡುತ್ತಿದ್ದರು. ಕಡೆಗೆ ಸಭಾ ವ್ಯವಸ್ಥಾಪಕರು ದೇವಾಲಯದಲ್ಲಿ ಬೇರೆಬೇರೆ ಸ್ಥಾನಗಳಲ್ಲಿ ಮೂರು ಕಡೆಗೆ ಸಭೆ ಕೂಡಿಸಿದರು. ಆದರೂ ವ್ಯಾಖ್ಯಾತರುಗಳು ಎದ್ದೊಡನೆಯೇ ಅವರ ಮುಂದೆ ತಾಳಹಾಕಿ ಧ್ವನಿಕೇಳದಂತೆ ಮಾಡುತ್ತಿದ್ದರು. ಹೀಗೆ ಅವರು ಬೇಕಾದಷ್ಟು ದುರಾಗ್ರಹವನ್ನು ತೊಟ್ಟರೂ ಕಡೆಗೆ ದುಃಖಪ್ರದರ್ಶಕ ಗೊತ್ತುವಳಿಯು ಮಾಡಲ್ಪಟ್ಟಿತು.

ಚಂದ್ರನ ನಿಜಸ್ಥಿತಿ ಏನು?

ಚಂದ್ರನಲ್ಲಿ ಪ್ರಾಣಿಗಳಿರಲು ಶಕ್ಯವೇ? ಎಂಬುದೊಂದು ಖಗೋಲ ಶಾಸ್ತ್ರಜ್ಞರಿಗೊಂದು ಗೂಢ. ದೂರದರ್ಶಕ ಯಂತ್ರದಿಂದ ನೋಡಲು ಚಂದ್ರನಲ್ಲಿ ಹವೆಯೇ ಕಾಣುವದಿಲ್ಲ, ಹವೆಯಿದ್ದುದಾದರೆ ಚಂದ್ರನ ಕ್ಷಿತಿಜದ ಮೇಲೆ ಕಾಣಿಸುವ ಚಿಕ್ಕೆಗಳು ಅಲ್ಲಾಡಬಹುದಾಗಿದ್ದಿತು. ಮತ್ತು ಅಲ್ಲಿ ಭಯಂಕರ ಛಳಿ. ಉಷ್ಣತೆಯು ಎಳ್ಳಷ್ಟೂ ಇಲ್ಲ, ನೀರುಗಡ್ಡೆಗಟ್ಟುವದಕ್ಕಿಂತಲೂ ೨೭೦ ಕೆಳಗೆ. ಇಂಥ ಛಳಿಯಲ್ಲಿ ಪ್ರಾಣಿಗಳು ಹೇಗೆ ಇರಬೇಕು? ಎಂದು ಕೆಲವರ ಊಹೆ. ಆದರೆ ಮಿ. ಪಿಕರಿಂಗ್ ಎಂಬುವವರು ಚಂದ್ರನಲ್ಲಿ ಪ್ರಾಣಿಗಳಿರುವವೆಂದು ಹೇಳುತ್ತಾರೆ. ಚಂದ್ರನ ಪೃಷ್ಠದಲ್ಲಿ ಒಂದು ಬಹುದೊಡ್ಡ ಭಾವಿಯ ಆಕಾರದ ಜ್ವಾಲಾಮುಖಿಯ ಮುಖವಿರುತ್ತದೆ. ಅದಕ್ಕೆ ಇರ್‍ಯಾಟೊಸ್ಥನೀಸ ಎಂಬ ಗ್ರೀಕ ಮನುಷ್ಯನ ಹೆಸರನ್ನಿಟ್ಟಿರುತ್ತಾರೆ. ಅದರ ವ್ಯಾಸವು ೧೯ ಮೈಲು ಮತ್ತು ಎತ್ತರವು ೭ ಸಾವಿರ ಫೂಟು ಇರುತ್ತದೆ. ಈ ಜ್ವಾಲಾಮುಖಿಯ ಬಾಯಿಯಲ್ಲಿಯೂ ಅದರ ಸುತ್ತಲೂ ಏನೋ ಒಂದು ಬೆಳೆಯುತ್ತದೆ. ಅದು ಬಹು ತೀವ್ರವಾಗಿ ಬೆಳೆಯುತ್ತದೆ. ಅದಕ್ಕೆ ಪ್ರಾಣಗತಿಯು ಇರಲಿಕ್ಕೇ ಬೇಕು. ಖಗೋಲ ಶಾಸ್ತ್ರಜ್ಞರು ಇದಕ್ಕೆ ಇರ್‍ಯಾಟೋಸ್ಥನೀಸದ ತೋಟವೆಂದೆನ್ನುತ್ತಾರೆ. ಮತ್ತು ಪರ್ವತದ ಶಿಖರದ ಮೇಲೆ ಹವೆಯಲ್ಲಿ ಕ್ರಿಮಿಗಳು ಹಾರಾಡುತ್ತಿರುವವೆಂದೂ ಕಂಡುಬಂದಿದೆ. ಅಂದಮೇಲೆ ಚಂದ್ರನಲ್ಲಿ ಒಂದಿಲ್ಲೊಂದು ಬಗೆಯ ಪ್ರಾಣಿಗಳ ವಸತಿಯು ಇರಲಿಕ್ಕೇಬೇಕು.

ಮೆಳ್ಳಗಣ್ಣುಗಳು ಸರಳವಾಗುವ ಯಂತ್ರ.

ನ್ಯೂಯಾರ್ಕದಲ್ಲಿ ಮೆಳ್ಳಗಣ್ಣುಗಳನ್ನು ಸರಿಪಡಿಸುವ ಒಂದು ಅತ್ಯಂತ ಸುಲಭವಾದ ಯಂತ್ರವನ್ನು ಒಬ್ಬ ಶಿಕ್ಷಕನು ಶೋಧಿಸಿದಾನೆ. ಆ ಯಂತ್ರದ ಹೆಸರು 'ಸ್ಟಿರಿಓ ಸ್ಕೋಪ' ಅದರಲ್ಲಿ ಎರಡು ಚಿತ್ರಗಳಿರುತ್ತವೆ. ಉದಾಹರಣಾರ್ಥವಾಗಿ ಒಂದರಲ್ಲಿ ಬಲೆಯ ಚಿತ್ರವೂ ಇನ್ನೊಂದರಲ್ಲಿ ಸಿಂಹದ ಚಿತ್ರವೂ ಇದ್ದರೆ ಸ್ಟಿರಿಓಸ್ಕೋಪದಲ್ಲಿ ಎರಡೂ ಕಾರ್ಡುಗಳನ್ನು ಹಿಡಿದು ನೋಡಲು ಒಂದು ಕಣ್ಣಿನಿಂದ ಸಿಂಹವೂ ಮತ್ತೊಂದು ಕಣ್ಣಿನಿಂದ ಬಲೆಯೂ ಕಾಣುತ್ತವೆ, ಎರಡೂ ಕಣ್ಣುಗಳ ದೃಷ್ಟಿಗಳು ಏಕರೂಪವಾದಾಗ್ಗೆ ಎರಡೂ ಚಿತ್ರಗಳು ಕೂಡಿ ಸಿಂಹವು ಬಲೆಯೊಳಗೆ ಇದ್ದಂತೆ ಕಾಣಿಸುತ್ತದೆ. ಈ ಸಾಧನದಿಂದ ಕಣ್ಣುಗಳು ತಾವೇ ಸರಳವಾಗುತ್ತವೆ. ಇನ್ನು ಮೇಲೆ ಶಸ್ತ್ರಕ್ರಿಯೆಯ ಅವಶ್ಯವೇ ಇಲ್ಲ.

ಹೇರ ಹಿಟ್ಲರ ಮತ್ತು ಜ್ಯು ಜನರು.

ಜರ್ಮನಿಯ ಸದ್ಯದ ಅಧ್ಯಕ್ಷರಾದ ಹೇರ ಹಿಟ್ಲರ್ ಇವರು ಒಬ್ಬ ಅಮೇರಿಕನ್ ಸೋಶಿಯಾಲಿಷ್ಟ ಪಕ್ಷದ ಪ್ರತಿನಿಧಿಗೆ ದರ್ಶನ ಕೊಟ್ಟರು. ಆ ಕಾಲಕ್ಕೆ ಆ ಪ್ರತಿನಿಧಿಯು ಹಿಟ್ಲರ್ ಇವರನ್ನು ಕುರಿತು "ನೀವು ಜರ್ಮನಿಯಲ್ಲಿಯ ಜ್ಯೂ ಜನರನ್ನಷ್ಟೇ ದ್ವೇಷಿಸುತ್ತಿರುವಿರೋ ಅಥವಾ ಜಗತ್ತಿನಲ್ಲಿಯ ಎಲ್ಲ ಜ್ಯೂ ಜನರನ್ನು ದ್ವೇಷಿಸುತ್ತಿರುವಿರೋ? ಎಂದು ಪ್ರಶ್ನೆಯನ್ನು ಮಾಡಲು ಹಿಟ್ಲರ್ ಇವರು "ನೀವು ಅಮೇರಿಕನ್‌ರು, ಹೊರಗಿನಿಂದ ಬಂದ ಪ್ರವಾಸಿಗಳ ಮೇಲೆ ನಿರ್ಬಂಧನೆಯನ್ನು ಹಾಕುವುದಿಲ್ಲವೇ? ಆ ನಿರ್ಬಂಧನೆಯನ್ನು ಅಮಾನ್ಯ ಮಾಡಿದಂಥವರನ್ನು ಬಂಧಿಸುತ್ತೀರಿ. ನಿಮ್ಮ ದೇಶದಲ್ಲಿ ನೆಲೆಗೊಂಡ ಪರದೇಶೀಯರು ಇಂತಿಷ್ಟೇ ಭೂಮಿಯನ್ನು ಕೊಳ್ಳಬೇಕು. ಇಂಥಿಂಥ ರಾಜಕೀಯ ಮತವುಳ್ಳವರೇ ಇರಬೇಕು. ಇತ್ಯಾದಿ ಎಷ್ಟೋ ನಿರ್ಬಂಧನೆಗಳನ್ನು ಹಾಕುತ್ತೀರಿ. ಹಾಗೆಯೇ ನಾವೂ ಮಾಡಿದರೆ ತಪ್ಪೇನು? ಜರ್ಮನಿಗೆ ವಿರುದ್ಧವಾಗಿರುವವರೆಲ್ಲರೂ ನಮ್ಮ ಶತ್ರುಗಳು. ಮತ್ತು ಜರ್ಮನ್ ಪ್ರಜೆಗಳ ಮನಸ್ಸನ್ನು ಕಲುಷಿತಗೊಳಿಸಲು ಈ ಜ್ಯೂ ಸಾಹುಕಾರರೇ ಕಾರಣರು. ಆದುದರಿಂದ ಅವರ ಯೋಗ್ಯ ವ್ಯವಸ್ಥೆ ಮಾಡುವದು ನಮ್ಮ ಮೊದಲನೆಯ ಕರ್ತವ್ಯವು" ಎಂದು ಹೇಳಿದರು.

ಸೆಂಟ್ರಲ್ ಹಿಂದೂ ಸೊಸಾಯಿಟಿ ಆಫ್ ಗ್ರೇಟಬ್ರಿಟನ್.

ಡಾ. ಮುಂಜೆ, ಭಾಯಿ ಪರಮಾನಂದಜಿ, ಮೊದಲಾದ ಮಹಾಶಯರು ಕೂಡಿ ಮೊನ್ನೆಮೊನ್ನೆ ಲಂಡನ್ ನಗರದಲ್ಲಿ ಒಂದು ಹಿಂದೂ ಸಂಸ್ಥೆಯನ್ನು ಸ್ಥಾಪಿಸಿರುವರು. ಇದರ ಮುಖ್ಯವಾದ ಮೂರು ಉದ್ದೇಶಗಳಿರುತ್ತವೆ. ೧. ಹಿಂದೂ ಸಂಸ್ಕೃತಿಯನ್ನು ಪ್ರಸಾರಗೊಳಿಸುವುದು. ೨. ಹಿಂದೂಗಳ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಯನ್ನು ಉತ್ತಮಗೊಳಿಸುವುದು. ೩. ಗ್ರೇಟ ಬ್ರಿಟನದಲ್ಲಿಯ ಹಿಂದೂಗಳೆಲ್ಲರನ್ನು ಒಂದೇ ಸೂತ್ರದಲ್ಲಿ ತರಲು ಪ್ರಯತ್ನಿಸುವದು. ಈ ಸಂಸ್ಥೆಗಾಗಿ ಈ ಪ್ರಕಾರ ಒಂದು ಕಮಿಟಿಯು ಏರ್ಪಟ್ಟಿತು. ಮಿ. ನಹರಾ ಪ್ರಧಾನ; ಡಾ. ಮೋಹನಲಾಲ ಕಾಲ್ಡ ಸೆಕ್ರೆಟರಿ, ಲಾಲಾ ಟೇಕಚಂದ ಟಂಡನ್ ವ್ಹಾ. ಪ್ರೆಸಿಡೆಂಟ ಮತ್ತು ಧರ್ಮೇಶದೇವ ಇವರು ಅಸಿ. ಸೆಕ್ರೆಟರಿಗಳಾಗಿರುತ್ತಾರೆ. ಈ ಸಂಸ್ಥೆಯು ಪ್ರಾರಂಭವಾದ ದಿವಸವೇ ಆ ಭವನದ ಮೇಲ್ಮಾಳಿಗೆಯಲ್ಲಿ ಒಬ್ಬ ಜರ್ಮನ್ ಲೇಡಿಯನ್ನು ಶುದ್ಧೀಕರಿಸಿ ಕು. ಸಾವಿತ್ರಿ ಎಂದು ಹೆಸರಿಟ್ಟರು. ಮತ್ತು ಹಿಂದೂ ಮುಂದಾಳುಗಳೆಲ್ಲ ಒಂದಾಗಿ ಕೂಡಿ ರಾಜಕಾರಣದ ತಮ್ಮ ಒಂದೇ ಅಭಿಪ್ರಾಯವನ್ನು ಪ್ರಕಟಪಡಿಸಿದರು. ಮತ್ತು ಜುಲೈ ೨೬ನೇ ತಾರೀಖಿನ ದಿವಸ ಒಂದು ದೊಡ್ಡ ಭೋಜನ ಸಮಾರಂಭವೂ ಮಾಡಲ್ಪಟ್ಟಿದ್ದಿತು.

ಮುಸೋಲಿನಿಯವರ ವಿಚಾರ.

ಎಮಿಲ್ ಉಡ್‌ವಿಗ್ ಎಂಬ ಗ್ರಂಥಕಾರನು "ಮುಸೋಲಿನಿಯ ಸಂಗಡ ಸಂವಾದ" ಎಂಬ ಗ್ರಂಥದಲ್ಲಿ ಈ ಪ್ರಕಾರ ಬರೆದಿರುತ್ತಾನೆ, "ಶ್ರದ್ಧೆಯ ಶಕ್ತಿಯಿಂದ ಜಗತ್ತನ್ನು ಅಲ್ಲಾಡಿಸುವುದು ಎಷ್ಟು ಸಾಧ್ಯವೋ ಅಷ್ಟು ಬುದ್ಧಿಶಕ್ತಿಯಿಂದಾಗದು. ಬುದ್ಧಿಯು ಒಂದು ಪ್ರಕಾರದ ಶಸ್ತ್ರವಾಗಿದೆ. ಆದರೆ ಜನಸಮೂಹದ ಹೃದಯವನ್ನು ಒಮ್ಮೆಲೆ ತನ್ನ ಕಡೆಗೆ ಸೆಳೆದುಕೊಳ್ಳುವ ಶಕ್ತಿಯು ಅದರಲ್ಲಿಲ್ಲ. ಶ್ರದ್ಧೆಯ ಕ್ಷೇತ್ರವು ಅಮರ್ಯಾದಿತವಾಗಿದೆ. ಶ್ರದ್ಧಾ ಬಲದಿಂದ ನಾನು ನನ್ನ ಪ್ರಜೆಗಳೆಲ್ಲರನ್ನು ಮೇಣದ ಗೊಂಬೆಯಂತೆ ಬೇಕಾದ ಕಡೆಗೆ ಹೊರಳಿಸಬಲ್ಲೆನು."

ನೀರಿನ ಗುಣಧರ್ಮ.

ನೀರು ಮೇಲಾದ ಔಷಧವು. ಮುಂಜಾನೆ ಮತ್ತು ಸಾಯಂಕಾಲದಲ್ಲಿ ಊಟ ಮಾಡುವ ಮುಂಚೆ ಇಲ್ಲವೆ ಊಟವಾದ ನಂತರ ಸಾಕಷ್ಟು ತಣ್ಣಗಿನ ನೀರು ಕುಡಿದರೆ ಮನುಷ್ಯನು ಆರೋಗ್ಯ ಸಂಪನ್ನನಾಗುತ್ತಾನೆ. ಅವನಲ್ಲಿ ಯಾವಾಗಲೂ ಉತ್ಸಾಹವು ಪುಟಿಯುತ್ತಿರುತ್ತದೆ. ನೀರು ಹೊಟ್ಟೆಯನ್ನು ಸರಿಯಾಗಿಡುವುದಲ್ಲದೆ ಅದನ್ನು ಯಾವಾಗಲೂ ಸ್ವಚ್ಛಮಾಡುವದು. ಒಂದು ಚಹಾ ಬಟ್ಟಲ ತುಂಬ ನೀರಿನಲ್ಲಿ ಒಂದೆರಡು ಲಿಂಬೀರಸದ ಹನಿಗಳನ್ನು ಹಾಕಿ ತೆಗೆದುಕೊಂಡರೆ ಹೆಚ್ಚು ಒಳ್ಳೇದು. ಈ ಪ್ರಕಾರ ನಿತ್ಯದಲ್ಲೂ ಮನುಷ್ಯನು ತಂಪು ನೀರನ್ನು ಸೇವಿಸಿದರೆ ಅವನಿಗೆ ಯಾವ ರೋಗದ ಭಯವೂ ಇಲ್ಲ.

ಘಾತುಕ ಪರ್ವತ.

ಜಪಾನದ ರಾಜಧಾನಿಯಾದ ಟೋಕಿಯೋ ಪಟ್ಟಣದಿಂದ ೫೦ ಮೈಲು ಅಂತರದಲ್ಲಿ ಓಶಿಯಾ ದ್ವೀಪದಲ್ಲಿ ಮಿಹರ ಎಂಬ ಪರ್ವತವಿದೆ. ಅದು ಜ್ವಾಲಾಮುಖಿ ಪರ್ವತವಿದ್ದು ತರುಣ ತರುಣಿಯರನ್ನು ಘಾತಮಾಡುವುದಂತೆ. ಫೆಬ್ರುವರಿ ತಿಂಗಳಿನಲ್ಲಿ ಒಬ್ಬ ವಿದ್ಯಾರ್ಥಿನಿಯು ಆ ಜ್ವಾಲಾಮುಖಿಯ ಬಾಯಿಯಲ್ಲಿ ಹಾರಿಕೊಂಡು ಸತ್ತಳು. ೩ ತಿಂಗಳುಗಳಲ್ಲಿ ಈ ಪ್ರಕಾರ ೫೫ ಜನರು ತಮ್ಮ ಪ್ರಾಣಕೊಟ್ಟರು. ಮತ್ತು ೧೫೦ ಜನರಿಗೆ ಬಲಾತ್ಕಾರವಾಗಿ ಪ್ರತಿಬಂಧ ಮಾಡಿದ್ದರಿಂದ ಉಳಿದರು. ಒಂದು ಆದಿತ್ಯವಾರ ೬ ಜನ ತರುಣರು ಸತ್ತರು. ಆ ದ್ವೀಪವು ಸುಂದರವಾದ ಹುಲ್ಲುಗದ್ದೆಗಳಿಂದ ಬಹು ಮನೋಹರವಾಗಿದೆಯಂತೆ. ಮತ್ತು ಅದು ತರುಣ ತರುಣಿಯರನ್ನು ತನ್ನ ಕಡೆಗೆ ಎಳೆದುಕೊಂಡು ಮೋಹಗೊಳಿಸಿ ಈ ಪ್ರಕಾರ ಘಾತಮಾಡುವದಂತೆ.

ಹುಚ್ಚು ಹಿಡಿದ ಮನುಷ್ಯ.

ಸಂಯುಕ್ತ ಪ್ರಾಂತದ ಬಾರಾಬಂಕಿ ಜಿಲ್ಹೆಯ ಒಂದು ಗ್ರಾಮದಲ್ಲಿ ಒಬ್ಬ ಮನುಷ್ಯನಿಗೆ ಹುಚ್ಚು ಹಿಡಿದಿದ್ದಿತು. ಅವನು ಕುರ್ಮಿ ಜಾತಿಯವನು. ಒಂದು ದಿವಸ ಅವನು ತೀಕ್ಷ್ಣವಾದ ಶಸ್ತ್ರವನ್ನು ತೆಗೆದುಕೊಂಡು ತನ್ನ ಹುಚ್ಚಿನ ಭ್ರಮೆಯಲ್ಲಿ ಇಬ್ಬರು ಸ್ತ್ರೀಯರಿಗೂ, ಒಬ್ಬ ಹುಡುಗನಿಗೂ ಮತ್ತು ಒಬ್ಬ ಬಡಿಗನಿಗೂ ಭಯಂಕರ ಗಾಯಗಳನ್ನು ಮಾಡಿದನು. ಊರೊಳಗಿನ ಜನರು ಅವನನ್ನು ಹಿಡಿಯಬೇಕೆಂದು ಬೆನ್ನುಹತ್ತಿದರು. ಒಬ್ಬ ಕ್ಷೌರಿಕನು ಅಡ್ಡ ಬಂದು ಅವನನ್ನು ತಡೆಯಲು ಆ ಹುಚ್ಚನು ತನ್ನ ಕೈ ಶಸ್ತ್ರದಿಂದ ಅವನನ್ನು ಅದೇ ಸ್ಥಾನದಲ್ಲಿಯೇ ಕೊಂದುಹಾಕಿದನು. ಕಡೆಗೆ ಪೋಲೀಸರು ಬಂದು ಅವನನ್ನು ಶೋಧಿಸುತ್ತಿರಲು ಅವನು ಒಂದು ಮನೆಯಲ್ಲಿ ಉರುಲುಹಾಕಿಕೊಂಡು ಸತ್ತುಹೋಗಿರುವುದು ಕಂಡುಬಂದಿತು. ಗಾಯಪಟ್ಟ ಜನರು ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾರೆ. ಅವರ ಪ್ರಕೃತಿಯು ಚಿಂತಾಜನಕವಾಗಿದೆ.

ಸಾಹಸಿ.

ಹಾಲಂಡದ ಲುಯಿ ಫ್ರೆಡರಿಕ್ ಕೈರಿಯರ ಎಂಬುವವನು ೨೭ ವರುಷದವನಿರುವನು. ಇನ್ನೂ ಅವಿವಾಹಿತನು. ಒಳ್ಳೇ ನಿಸರ್ಗ ಪ್ರೇಮಿಯು. ಅವನು ರೇಲ್ವೆಯ ಮೇಲಿಂದ ಒಮ್ಮೆ ಭೂಪ್ರದಕ್ಷಿಣೆ ಮಾಡಿರುವನು. ಮತ್ತೊಮ್ಮೆ ಅವನು ಪಾದಚಾರಿಯಾಗಿ ಭೂಪ್ರದಕ್ಷಿಣೆ ಮಾಡಲು ಹೊರಟನು. ಇಟಲಿ, ಫ್ರಾನ್ಸ್, ಇರಾಣ, ಅರಬಸ್ತಾನ ಮೊದಲಾದ ದೇಶಗಳಲ್ಲಿ ಸಂಚರಿಸಿದನು. ಪ್ರವಾಸದಲ್ಲಿ ಕಳ್ಳರು ಅವನು ತೊಟ್ಟುಕೊಂಡಿದ್ದ ಚಣ್ಣವೊಂದನ್ನು ಬಿಟ್ಟು ಎಲ್ಲವನ್ನು ಅಪಹರಿಸಿದರು. ಅವನು ಚಿತ್ರ ತೆಗೆಯುವ ಕೆಲಸಮಾಡುತ್ತ ಹಣ ಸಂಪಾದಿಸಿ ತನ್ನ ಪ್ರದೇಶಕ್ಕೆ ಹೋದನು. ಮೂರನೆಯ ಸಾರೆಯೂ ಪಾದಚಾರಿಯಾಗಿ ಸಂಚರಿಸಿ ಹಿಂದುಸ್ಥಾನಕ್ಕೆ ಬಂದು ಆರ್ಯಸಮಾಜದ ಗುರುಕುಲವನ್ನು ಕಂಡನು. ಅಲ್ಲಿ ಅವನು ಸಂಸ್ಕೃತ ಗ್ರಂಥಗಳ ಅಧ್ಯಯನ ಮಾಡಿದನು. ಮತ್ತು ಅವನಿಗೆ ಅಲ್ಲಿ ಉಪೇಂದ್ರನೆಂಬ ಹೆಸರನ್ನಿಡಲಾಯಿತು. ಅವನಿಗೆ ಡಚ್ಚ, ಫ್ರೆಂಚ, ಜರ್ಮನ್ ಇಂಗ್ಲೀಷ, ಲ್ಯಾಟಿನ್, ಡೇನಿಸ್, ನಾರ್ವೇಜಿಯನ್, ಸ್ಪಾನೀಷ್, ಇಟಾಲಿಯನ್, ಫಾರ್ಸಿ, ಉರ್ದು, ಅರಬಿ ಇಂತಿಷ್ಟು ಭಾಷೆಗಳು ಬರುತ್ತಿದ್ದವು. ಅವನ ಜೀವನವು ಸಾದಾ. ಒಮ್ಮೆ ಅವನು ವ್ಯಾಯಾಮ ಶಿಕ್ಷಕನೂ ಆಗಿದ್ದನು. ಸಾಹಸಿಗಳಲ್ಲಿ ಇವನು ಆದರ್ಶಿಯಾಗಲಿಕ್ಕಿಲ್ಲವೇ?

ಪ್ರೊ. ರೂಝುವೆಲ್ಟರ ಕಡೆಗೆ ಪುನಃ ಬಾಂಬು.

ನ್ಯೂಯಾರ್ಕದ ನಾಣ್ಯ ವಿನಿಮಯ ಭವನದಲ್ಲಿ ಒಂದು ಗೋಡೆಯೊಳಗಿಂದ ಹೊಗೆಯು ಹೊರಡುತ್ತಿತ್ತು. ಒಮ್ಮಿಂದೊಮ್ಮೆ ಹೊಗೆಯು ಭವನವನ್ನೆಲ್ಲ ವ್ಯಾಪಿಸಿದ್ದರಿಂದ ವ್ಯಾಪಾರಸ್ಥರೆಲ್ಲರು ಓಡಿಹೋದರು. ಆವಾಗ್ಗೆ ಜ್ವಾಲೆಯನ್ನು ನಂದಿಸುವ ಶಾಖೆಯವರು ಬಂದು ಪರೀಕ್ಷಿಸಲು ಹವೆಯಾಡುವ ಕಿಂಡಿಗಳಲ್ಲಿ ಎರಡು ಹೊಗೆಯ ಬಾಂಬುಗಳಿದ್ದುದು ಕಂಡುಬಂದಿತು. ಈ ಪ್ರಸಂಗದ ಆಪಾದನೆಯಿಂದ ನಾಲ್ವರು ತರುಣರನ್ನು ಬಂಧಿಸಿದ್ದಾರೆ. ಅವರನ್ನು ಶೋಧಿಸಲು ಅವರಲ್ಲಿ ಮೂರು ಸಿಡಿಗುಂಡುಗಳು ಚೆನ್ನಾಗಿ ಕಟ್ಟಿ ಒಂದನ್ನು ಪ್ರೆ. ರೂಝುವೆಲ್ಟರಿಗೂ, ಇನ್ನೊಂದು ಹಿಂದಿನ, ಪ್ರೆ. ಹೂವರ ಇವರಿಗೂ ಬೇರೊಂದು ಅಮೇರಿಕನ್ ಸೋಸಿಯಾಲಿಸ್ಟ ಲೀಡರ ಮಿ. ನಾರ್ಮನ್ ಥಾಮಸ್ ಇವರಿಗೂ ಕಳಿಸಲು ಅವರ ವಿಳಾಸ ಬರೆದಿದ್ದುದು ಕಂಡುಬಂದಿತು.

—ಆಸಾಮ ಸರಕಾರದವರು ಸರಕಾರೀ ನೌಕರರಿಗೆ ಅವರ ಆಪ್ತರು, ನೆಂಟರು ಬಹುದೂರದ ಸಂಬಂಧಿಕರು ಕೂಡಾ ಸರಕಾರಕ್ಕೆ ವಿರೋಧವಾದ ಚಟುವಟಿಕೆಯಲ್ಲಿ ಭಾಗ ತೆಗೆದುಕೊಳ್ಳದಂತೆ ಜಾಗೃತರಾಗಿರಬೇಕೆಂದು ಎಚ್ಚರಿಕೆ ಕೊಡಲು ಒಂದು ಆಜ್ಞಾ ಪತ್ರವನ್ನು ಹೊರಡಿಸಿದ್ದಾರೆ.

—ಆಸಾಮ ಪ್ರಾಂತದ ಶಿಕ್ಷಣ ಖಾತೆಯ ಡಾಯರೆಕ್ಟರರು ಆಸಾಮದ ಶಾಲೆಗಳಲ್ಲಿ ಬಂಗಾಲದಿಂದ ಬಂದ ೧೯ ವರ್ಷದ ಮೇಲ್ಪಟ್ಟ ಯಾವ ವಿದ್ಯಾರ್ಥಿಗಳನ್ನೂ ತೆಗೆದುಕೊಳ್ಳಕೂಡದೆಂದು ಆಜ್ಞೆ ಮಾಡಿದ್ದಾರೆ.

ಸಮಾಚಾರ ಸಂಗ್ರಹ.

—ಸರ್ ಪ್ರಫುಲ್ಲ ಚಂದ್ರರಾಯ ಇವರ ಅಧ್ಯಕ್ಷತೆಯಲ್ಲಿ ನಾಲ್ಕನೆಯ ತಾರೀಖಿನ ದಿವಸ ಕಲಕತ್ತೆಯಲ್ಲಿ ಒಂದು ಸಭೆಸೇರಿದ್ದಿತು. ಅಲ್ಲಿ ಡ್ಯಾ. ಸೇನಗುಪ್ತ ಇವರ ಸ್ಮಾರಕವನ್ನು ಮಾಡುವ ಕುರಿತು ವಿಚಾರಣೆಯಾಗಿ ಒಂದು ಕಮಿಟಿಯು ಏರ್ಪಟ್ಟಿತು.

—ಮದ್ರಾಸ ಪಟ್ಟಣದಲ್ಲಿ ಶಸ್ತ್ರಸಹಿತನಾಗಿ ಸುಲಿಗೆ ಮಾಡುವ ಒಳಸಂಚಿನ ಆಪಾದನೆಯ ಮೇರೆಗೆ ಭೂಪತಿ ರಾಜ ಎಂಬ ಕ್ರಾಂತಿಕಾರಕನನ್ನು ವಿಜಗಪಟ್ಟಣದಲ್ಲಿ ಹಿಡಿದು ವಿಚಾರಣೆಗಾಗಿ ಮದ್ರಾಸಕ್ಕೆ ತಂದಿದ್ದಾರೆ

—ಮೈಸೂರು ರಾಜಮನೆತನಕ್ಕೆ ಸಂಬಂಧಪಟ್ಟ ಶ್ರೀ. ಲಿಂಗರಾಜ ಅರಸ ಮತ್ತು ಡಿ. ಕೃಷ್ಣ ಅರಸ ಎಂಬ ಮಹಾಶಯರು ಹೋದವಾರ ಒಂದೇ ವಾರದಲ್ಲಿ ಸ್ವರ್ಗಸ್ಥರಾದರು.

—ತೇಹರಿ ಸಂಸ್ಥಾನದಲ್ಲಿ ಅಲಕನಂದಾ ನದಿಗೆ ಮಹಾಪೂರ ಬಂದುದರಿಂದ ಬದ್ರಿನಾಥ ದೇವಾಲಯದಲ್ಲಿಯೂ ಸ್ವಲ್ಪ ಹಾನಿಯಾಗಿದೆಯೆಂದು ತಿಳಿಯುತ್ತಿದೆ.

—ಶ್ರೀ. ಸಿ. ರಾಜಗೋಪಾಲಾಚಾರ್ಯರನ್ನು ತಿರುಚನಗೌಡಾ ಎಂಬಲ್ಲಿ ಬಂಧಿಸಿದ್ದಾರೆ. ಇವರು ೧೬ ಜನ ಸ್ವಯಂಸೇವಕರನ್ನು ಕರೆದುಕೊಂಡು ವೈಯಕ್ತಿಕ ಕಾಯದೆಭಂಗವನ್ನು ಮಾಡಲು ಹೊರಟಿದ್ದರು. ಈ ವಿಷಯವನ್ನು ಅವರು ಮೊದಲೇ ಸರಕಾರದವರಿಗೆ ತಿಳಿಸಿದ್ದರು.

—ಶ್ರೀ. ದೇವದಾಸ ಗಾಂಧಿಯವರು ತಮ್ಮ ಪತ್ನಿ ಲಕ್ಷ್ಮೀದೇವಿಯೊಡನೆ ದಿಲ್ಲಿ ಸ್ಟೇಶನದಲ್ಲಿಳಿಯಲು ದಿಲ್ಲಿಯೊಳಗೆ ಬರಕೂಡದೆಂದು ಕಮಿಶನರರ ಅಪ್ಪಣೆ ವಿಧಿಸಲಾಯಿತು. ಕಾಯಿದೆಭಂಗ ಮಾಡುವದು ತಮ್ಮ ಉದ್ದೇಶವಿಲ್ಲೆಂದು ಹೇಳಿದರೂ ಅವರೊಬ್ಬರನ್ನು ಮಾತ್ರ ಹಿಡಿದುಕೊಂಡು ಹೋದರು.

—ಸೌ. ಕಸ್ತೂರಿಬಾಯಿ ಗಾಂಧಿಯವರನ್ನು ಮಹಾತ್ಮಾಜಿಯವರ ಸಂಗಡ ಬಂಧಿಸಿದ್ದರಷ್ಟೇ. ಅಲ್ಲಿಂದ ಅವರನ್ನೂ ಅವರ ಸಂಗಡ ೧೬ ಜನ ಸ್ತ್ರೀಯರನ್ನೂ ಆಶ್ರಮದ ಹತ್ತಿರಿರುವ ಒಂದು ಹಳ್ಳಿಯಲ್ಲಿ ಇರಬೇಕೆಂದು ನಿರ್ಬಂಧಪಡಿಸಿ ಬಿಟ್ಟಿದ್ದರು. ಆದರೆ ಅವರು ಆ ನಿರ್ಬಂಧನೆಯನ್ನು ಪಾಲಿಸಲಿಲ್ಲವಾದಕಾರಣ ಪುನಃ ಅವರನ್ನು ಹಿಡಿದಿದ್ದಾರೆ.

—ಮಹಾತ್ಮಾಜಿಯವರ ಸಂಗಡ ಬಂಧಿಸಿದಂಥ ೧೬ ಜನ ಸತ್ಯಾಗ್ರಹಿಗಳನ್ನು ಮುಕ್ತಮಾಡಿದರು. ಮತ್ತು ಒಂದು ನಿರ್ಬಂಧನೆಯನ್ನು ವಿಧಿಸಿದರು. ಅದಕ್ಕೆ ಅವರು ಸಾಬರಮತಿ ಆಶ್ರಮಕ್ಕೆ ಹೋಗಿ ತಿಳಿಸುವೆವೆಂದು ಹೇಳಿಹೋದರು. ಈಗ ಅವರು ತಮ್ಮ ನಿರ್ಬಂಧನೆಯನ್ನು ಅಮಾನ್ಯ ಮಾಡಿರುತ್ತಾರೆ.

—ಪ್ರಭಾತ ಚಕ್ರವರ್ತಿ ಮೊದಲಾದ ೩೬ ಜನ ಬಂಗಾಲಿ ತರುಣರು ಬಾದಶಾಹಿ ಸರಕಾರದ ವಿರುದ್ಧವಾಗಿ ಒಳಸಂಚನ್ನು ನಡೆಸುತ್ತಿದ್ದರೆಂಬ ಅಪಾದನೆಯಿಂದ ಅವರ ವಿಚಾರಣೆಯನ್ನು ಮಾಡಲು ಅಲಿಪುರದ ಕೋರ್ಟಿನಲ್ಲಿ ಒಂದು ಸ್ಪೆಶಲ್ ಟ್ರಿಬ್ಯೂನಲ್ ನಿಯಮಿಸಿದ್ದಾರೆ.

—ರಾಮಘಾಟದಿಂದ ಫರಗಸಂಜದ ಕಡೆಗೆ ಬರುತ್ತಿದ್ದಂಥ ಒಂದು ನಾವೆಯು ತಿರುಗಣಿ ಮಡುವಿಗೆ ಬಿದ್ದು ಬುಡಮೇಲಾಯಿತು. ನಾವೆಯಲ್ಲಿ ೧೪೫ ಪ್ರವಾಸಿಗಳೂ ೨ ಪಶುಗಳೂ ಇದ್ದವು. ಇವರಲ್ಲಿ ೫೦ ಜನರು ಬದುಕಿ ಉಳಿದಿರುವರು. ಉಳಿದವರ ಸುದ್ದಿಯೇ ಇಲ್ಲ.

—ಪ್ರಕೃತಿ ಸ್ವಾಸ್ಥ್ಯದ ಸಲುವಾಗಿ ಡಾ. ಅನ್ಸಾರಿ ಇವರು ೭ನೆಯ ತಾರೀಖಿನ ದಿವಸ ಯುರೋಪಕ್ಕೆ ಪ್ರಯಾಣ ಬೆಳೆಸಿದರು. ಅದೇ ಹಡಗಕ್ಕೆ ಶ್ರೀ. ಬುಲಾಭಾಯಿದೇಸಾಯಿ ಇವರೂ ಇಂಗ್ಲಂಡಕ್ಕೆ ಹೋದರು.

—ನಿಝಾಮರವರ ದ್ವಿತೀಯ ಪುತ್ರ ಮೋಅಜ್ಜಮ್ ಶಹ ಇವರು ಆರೋಗ್ಯಭಾಗ್ಯಕ್ಕಾಗಿ ಯುರೋಪಕ್ಕೆ ಪ್ರಯಾಣ ಬೆಳೆಸಿರುವರು. ಅಲ್ಲಿ ಅವರು ೩ ತಿಂಗಳುಗಳವರೆಗೆ ಇರುವರು.

—ತನ್ನ ನಾಯಿಯನ್ನು ಒಳ್ಳೇ ಕೆಟ್ಟ ರೀತಿಯಿಂದ ನಡಿಸಿಕೊಂಡದ್ದರಿಂದ ಕರಾಚಿಯಲ್ಲಿಯ ಒಬ್ಬ ಸಿಂಪಿಗನಿಗೆ ೫೦ ರೂ. ದಂಡವಾಯಿತು.

—ಮೀರತ ಒಳಸಂಚಿನ ಮೊಕದ್ದಮೆಯಲ್ಲಿ ಬಿಡುಗಡೆ ಹೊಂದಿದ ಆಪಾದಿತರಿಗೆ ಅಲಾಹಾಬಾದದಲ್ಲಿ ಮಿಸೆಸ್ ಶಾಮಲಾಲ ನೆಹರು ಮತ್ತು ಮಿಸ್ ಶ್ಯಾಮಕುಮಾರಿ ನೆಹರು ಇವರು ಒಳ್ಳೇ ವಿಜೃಂಭಣೆಯ ಚಹಾಪಾರ್ಟಿಯನ್ನು ಮಾಡಿಸಿದರು.

—ಬೆಂಗಳೂರಿನಲ್ಲಿ ಒಂದು ಬಂದೂಕು ತೆಗೆದುಕೊಂಡು ತಲೆತಪ್ಪಿಸಿಕೊಂಡಿದ್ದ ಮಿ. ಹಚಿನ್ಸನ್ ಎಂಬ ಸಿಪಾಯಿಯು ರೇಸ್ ಕೋರ್ಸಿನಲ್ಲಿ ಮಲಗಿದಾಗ್ಗೆ ಹಿಡಿಯಲ್ಪಟ್ಟನು. ಅವನ ಹತ್ತಿರಿರುವ ಗುಂಡುಗಳಲ್ಲಿ ೬ ಗುಂಡುಗಳು ಕಡಿಮೆಯಾಗಿದ್ದವು.

—ಅಮೃತಸರದಲ್ಲಿ ಪಿಕೆಟಿಂಗ ಮಾಡಿದುದಕ್ಕಾಗಿ ಕೆಲವರಿಗೆ ಶಿಕ್ಷೆ ಕೊಟ್ಟರು. ಕೆಲವರನ್ನು ೫೦೦ ರೂ. ಜುಲ್ಮಾನೆಯ ಮೇಲೆ ಬಿಟ್ಟುಬಿಟ್ಟರು. ಒಂದು ಕೂಸಿಗೆ ೧ ದಿನದ ಶಿಕ್ಷೆ ಕೊಟ್ಟಿದ್ದರಂತೆ.

—ಅತಿವೃಷ್ಟಿ ಮತ್ತು ನೆರೆಹಾವಳಿಯಿಂದ ಕೆಟ್ಟು ಹೋದ ಧಾನ್ಯವನ್ನು ನಾಗರಿಕರು ತಿಂದು ತಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಾರೆಂದು ತಿಳಿದು ಕರಾಚಿಯಲ್ಲಿ ೪೦೦೦ ಗೋದಿಯ ಚೀಲಗಳನ್ನು ಧ್ವಂಸಮಾಡಿರುವರು.

—೧ನೆಯ ತಾರೀಖಿನ ದಿವಸ ದಿಲ್ಲಿಯಲ್ಲಿ ಬಂಧಿಸಲ್ಪಟ್ಟ ಶ್ರೀ. ಸಿ. ಕೃಷ್ಣನ್ ನಾಯರ್ ಎಂಬುವವನು ತನಗೆ ನೂಲಲಿಕ್ಕೆ ರಾಟಿಯನ್ನು ಒದಗಿಸಿ ಕೊಡುವವರೆಗೆ ಅನ್ನವನ್ನು ತೆಗೆದುಕೊಳ್ಳುವದಿಲ್ಲವೆಂದು ಬಿಟ್ಟಿರುವನು.

—ಶ್ರೀಮಾನ್ ಕೋಲ್ಹಟಕರ ಇವರ ಸ್ತುತ್ಯ ಪ್ರಯತ್ನದಿಂದ ಬಡೋದೆಯಲ್ಲಿ ಕ್ರಿಸ್ತೀ ಧರ್ಮಕ್ಕೆ ಸೇರಿದ ಒಂದು ಕುಟುಂಬವನ್ನು ಶುದ್ಧಮಾಡಿ ಪಂ. ಆನಂದ ಪ್ರಿಯಜಿ ಇವರು ಆರ್ಯಸಮಾಜಕ್ಕೆ ಸೇರಿಸಿಕೊಂಡರು.

—ಬೆಳಗಾಂವ ಜಿಲ್ಹಾ ಸೆಂಟ್ರಲ್ ಕೋಆಪರೇಟಿವ್ಹ ಬ್ಯಾಂಕಿನವರು ತಮ್ಮ ಜಿಲ್ಹೆಯಲ್ಲಿ ಯಾರಾದರೂ ಸಕ್ಕರೆ ಇಲ್ಲವೆ ಅಂತಹದೇ ಯಾವುದಾದರೊಂದು ದೇಶೀ ಕಾರಖಾನೆಯನ್ನು ಪ್ರಾರಂಭಿಸಿದರೆ ಅದಕ್ಕೆ ಆರ್ಥಿಕ ಸಹಾಯವನ್ನು ಮಾಡುವ ಕುರಿತು ಒಂದು ಗೊತ್ತುವಳಿಯನ್ನು ಮಾಡಿದ್ದಾರೆ.

—ವರ್ಹಾಡದಲ್ಲಿ ಸದ್ಯದ ವೈಯಕ್ತಿಕ ಮತ್ತು ಸಾಮುದಾಯಿಕ ಚಟುವಟಿಕೆಯನ್ನು ನಿಲ್ಲಿಸಿ ವಿಧಾಯಕ ಕಾರ್ಯ ಮಾಡಬೇಕೆಂದೂ ಮತ್ತು ಈ ಪ್ರಕಾರದ ಕಾರ್ಯಕ್ಕೆ ಸಮ್ಮತಿಸುವವರು ತಮಗೆ ತಿಳಿಸಬೇಕೆಂದೂ ವೀರ ವಾಮನರಾವ ಜೋಶಿ ಇವರು ಪ್ರಕಟಪಡಿಸಿದ್ದಾರೆ.

—ಬೆಳಗಾಂವ ಜಿಲ್ಹಾ ಪೈಕಿ ಮಾಂಜರಿ ಎಂಬ ಗ್ರಾಮದಲ್ಲಿ ಆದಿಜನರ ಸಲುವಾಗಿ ಒಂದು ಸ್ವತಂತ್ರ ಪ್ರಾಥಮಿಕ ಪಾಠಶಾಲೆಯನ್ನು ಪ್ರಾರಂಭಿಸಿರುವರು.

—ತ್ರಾವಣಕೋರ ಸಂಸ್ಥಾನದವರು ಕೊಬ್ಬರಿಯ ಕಾರಖಾನೆಯನ್ನು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸಬೇಕೆಂದು ೫|| ಲಕ್ಷ ಎಕರೆ ಭೂಮಿಯಲ್ಲಿ ತೆಂಗಿನ ಗಿಡಗಳನ್ನು ಹಚ್ಚುವ ಕೆಲಸವನ್ನು ಒಳ್ಳೇ ಭ್ರಷ್ಟೆಯಿಂದ ನಡೆಯಿಸಿದ್ದಾರೆ.

—ಜರ್ಮನಿಗೆ ಇಂಗ್ಲಂಡದಿಂದ ನೂಲು ಬಹಳ ಬರುತ್ತಿರುವದರಿಂದ ಜರ್ಮನಿಯಲ್ಲಿ ೩೦ ಸಾವಿರ ಜನರು ಕೂಲಿಗೇಡಿಗಳಾಗುತ್ತಿರುವರೆಂದು ಗ್ರಹಿಸಿ ಜರ್ಮನ್ ಸರಕಾರವು ಇಂಗ್ಲೀಷ ನೂಲಿನ ಮೇಲೆ ಅಗಸ್ಟ ೧ನೆಯ ತಾರೀಖಿನಿಂದ ಇಮ್ಮಡಿ ಸುಂಕವನ್ನು ಹೇರಿದೆ.

—ಕೃಷ್ಣಾ, ಮಲಪ್ರಭಾ, ಘಟಪ್ರಭಾ ಮೊದಲಾದ ನದಿಗಳಿಗೆ ಭಯಂಕರ ನೆರೆಬಂದುದರಿಂದ ಎಷ್ಟೋ ಕಡೆಗಳಲ್ಲಿ ಮಾರ್ಗಗಳು ಕಟ್ಟಾಗಿ ಟಪಾಲು ಹೋಗುವುದು ನಿಂತಿದ್ದಿತು.

—ಹುಬ್ಬಳ್ಳಿಯ ಸಿದ್ಧೇಶ್ವರ ಟ್ರಜರಿ ಕೆಲಸಗಳನ್ನು ನೋಡಿ ಸಂತೋಷಪಟ್ಟು ತಮ್ಮ ಬ್ಯಾಂಕಿನ ಹೆಬ್ಬಾಗಿಲಿಗೆಂದು ನೈಜಾಮ ಸರಕಾರದವರು ಒಂದು ಕಬ್ಬಿಣದ ಕದವನ್ನು ಆ ಕಂಪನಿಯಿಂದ ಮಾಡಿಸಿರುವರು. ಅದು ಈಗ ತಯಾರಾಗಿದ್ದು ಅದರ ಕುಶಲತೆಯನ್ನು ಜನರು ನೋಡಲೆಂದು ಸಿದ್ಧೇಶ್ವರ ಕಂಪನಿಯವರು ಪ್ರದರ್ಶನವನ್ನು ಏರ್ಪಡಿಸಿದ್ದರು.

—ಮೈಸೂರಿನಲ್ಲಿ ಶ್ರೀ. ಯಚ್. ಲಿಂಗರಾಜ ಅರಸಿಯವರ ಅಧ್ಯಕ್ಷತೆಯಲ್ಲಿ ಕಳೆದ ೨ನೆಯ ತಾರೀಖಿನ ದಿವಸ ಮೈಸೂರು ಆಸ್ಥಾನ ವಿದ್ವಾಂಸರ ಮತ್ತು ಬೆಂಗಳೂರ ವಿದ್ವಾಂಸರ ಸಭೆಸೇರಿದ್ದಿತು.

—ಬೆಂಗಳೂರು ವಿಶ್ವೇಶ್ವರಪುರದಲ್ಲಿಯ ನೀರಿನ ಅವ್ಯವಸ್ಥೆಯನ್ನು ಹೋಗಲಾಡಿಸಲು ಜೋಡು ನಳಗಳನ್ನು ಹಾಕುವ ವಿಚಾರಣೆ ನಡೆದಿದೆ.

—ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘಕ್ಕೆ ಶ್ರೀ. ಶಿವಲಿಂಗಪ್ಪನವರು ಸೆಕ್ರೆಟರಿಗಳಾಗಿ ಆರಿಸಲ್ಪಟ್ಟಿದ್ದಾರೆ.

—ನಿಝಾಮ ಸಂಸ್ಥಾನದ ಮುಧೋಳ ತಾಲೂಕಿನಲ್ಲಿಯ ಟೊಂಡಿ ಒಂಬ ಗ್ರಾಮದಲ್ಲಿ ಮಧ್ಯರಾತ್ರಿಗೆ ಹಳ್ಳಕ್ಕೆ ನೆರೆ ಬಂದದ್ದರಿಂದ ಊರೊಳಗಿನ ೧೫ ಗುಡಿಸಲುಗಳು ತೇಲಿ ಹೋದವು. ಒಳಗೆ ಮಲಗಿರುವ ೫೫ ಜನರಲ್ಲಿ ನಾಲ್ಕು ಜನರು ಮಾತ್ರ ಬದುಕಿದರು.

—ಹೈದರಾಬಾದ ರೆಸಿಡೆಂಟ ಮ್ಯಾಕೆಂಝಿ ಇವರಿಗೆ ನಿಝಾಮರು ಒಳ್ಳೇ ಆಡಂಬರದ ಮೇಜವಾನೀ ಮಾಡಿಸಿದರು. ಆ ಕಾಲಕ್ಕೆ ಪರಸ್ಪರರ ಸ್ನೇಹ ಸಂಬಂಧವು ದೃಢವಾಗಲೆಂದು ಉಭಯತರ ಭಾಷಣಗಳಾದವು.

—ಹೈದರಾಬಾದ ಸಂಸ್ಥಾನದಲ್ಲಿರುವ ಪಾಯಗಾ ಮತ್ತು ಕೆಲವು ಜಹಾಗೀರದಾರರು ಸ್ವತಂತ್ರವಾಗಿ ಪೋಲೀಸರನ್ನಿಟ್ಟಿದ್ದಾರೆ ಇನ್ನು ಮುಂದೆ ಇವರ ಪೋಲೀಸರನ್ನು ತೆಗೆದು ಸರಕಾರೀ ಪೋಲೀಸರನ್ನೇ ಜಹಾಗೀರದಾರರಿಗೆ ಕೊಡಬೇಕು. ಮತ್ತು ಅದರಮೇಲೆ ಡಾಯರೆಕ್ಟರ್ ಜನರಲ್ ಆಫ್ ಪೋಲೀಸ ಇವರ ಅಧಿಕಾರವಿರಬೇಕೆಂದು ಕೌನ್ಸಿಲಿನಲ್ಲಿ ವಿಚಾರಣೆ ನಡೆದಿದೆ.

ಇದರ ಲಾಭವನ್ನು ಸಂಸ್ಕೃತ ಕಲಿಯತಕ್ಕ ವಿದ್ಯಾರ್ಥಿಗಳು ಅವಶ್ಯವಾಗಿ ಹೊಂದತಕ್ಕದ್ದು. ಆಯುರ್ವೇದದ ಶಿಕ್ಷಣವನ್ನು ಹೊಂದಿದ ವಿದ್ಯಾರ್ಥಿಗಳು ಯಾರ ಹಂಗು ಇಲ್ಲದೆ ಸಣ್ಣ ಸಣ್ಣ ಹಳ್ಳಿಗಳಲ್ಲಿಯೂ ಕೂಡ ತಮ್ಮ ಪ್ರಪಂಚವನ್ನು ಸಾಗಿಸಲಿಕ್ಕೆ ಶಕ್ತರಾಗುತ್ತಾರೆಂಬುವದನ್ನು ಬರೆಯುವ ಕಾರಣವಿಲ್ಲವು.

ಶ್ರೀ ಜಗದ್ಗುರು ಗಂಗಾಧರ ಕಾಲೇಜೂ ಆಯುರ್ವೇದ ಶಿಕ್ಷಣವೂ.

(ಲೇಖಕರು—ಶ್ರೀ. ಚಂದ್ರಶೇಖರ ಶಾಸ್ತ್ರೀ 'ವ್ಯಾಕರಣತೀರ್ಥ ಪ್ರಿನ್ಸಿಪಾಲ್ ಗಂಗಾಧರ ಕಾಲೇಜು ಹುಬ್ಬಳ್ಳಿ.)

ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಮಹಾ ವಿದ್ಯಾಲಯವು ಪ್ರಾರಂಭವಾಗಿ ಒಂದುವರೆ ವರುಷವಾಯಿತಷ್ಟೆ. ಇಷ್ಟರೊಳಗಾಗಿ ಈ ಕಾಲೇಜಿನಲ್ಲಿ ೮೫ ವಿದ್ಯಾರ್ಥಿಗಳಿದ್ದು ಬೇರೆಬೇರೆ ಅಭ್ಯಾಸಗಳನ್ನು ಮಾಡುತ್ತಿರುವರು. ಈ ವರುಷ ಕಾವ್ಯತೀರ್ಥ, ವ್ಯಾಕರಣ ಮಧ್ಯಮ, ಮೊದಲಾದ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾದ ಸಂಗತಿಯು ವರ್ತಮಾನಪತ್ರಿಕೆಗಳಿಂದ ವಾಚಕರಿಗೆ ತಿಳಿದೇ ಇರುತ್ತದೆ. ಅಪಾರವಾದ ಸಂಸ್ಕೃತ ವಾಙ್ಮಯದಲ್ಲಿ ಅನೇಕ ಪ್ರಾಚೀನ ಮಹರ್ಷಿಗಳಿಂದಲೂ, ಪಂಡಿತರಿಂದಲೂ, ಗ್ರಂಥಗಳು ಹೇರಳವಾಗಿ ಜನರ ಉಪಯೋಗದ ಸಲುವಾಗಿ ರಚಿಸಲ್ಪಟ್ಟಿರುತ್ತವೆ. ಇವುಗಳಲ್ಲಿ ಆಯುರ್ವೇದವೂ ಒಂದಾಗಿರುತ್ತದೆ. ಪ್ರಾಚೀನ ಕಾಲದ ಭಾರತೀಯರಲ್ಲಿ ಆಯುರ್ವೇದವು ಒಳ್ಳೇ ಊರ್ಜಿತ ಸ್ಥಿತಿಯಲ್ಲಿತ್ತೆಂಬದರ ಬಗ್ಗೆ ಚರಕ, ಸುಶ್ರುತ, ವಾಗ್ಭಟ, ಮೊದಲಾದ ಉಜ್ವಲ ಗ್ರಂಥ ರತ್ನಗಳೇ ಉದಾಹರಣೆಗಳಾಗಿರುತ್ತವೆ. ಸಂಸ್ಕೃತದಲ್ಲಿರತಕ್ಕ ಆಯುರ್ವೇದದ ಗ್ರಂಥಗಳ ವಿಷಯಕ್ಕೆ ಪಾಶ್ಚಾತ್ಯ ಪಂಡಿತರನೇಕರು ಪ್ರಶಂಸಿಸಿರುತ್ತಾರೆ. ಇಂತಹ ಶ್ರೇಷ್ಠವಾದ ಆಯುರ್ವೇದದ ಪ್ರಚಾರವು ಭಾರತೀಯರಲ್ಲಿ ಇತ್ತಿತ್ತಲಾಗಿ ಪಾಶ್ಚಾತ್ಯ ವೈದ್ಯಕೀಯ ಪ್ರಭಾವದಿಂದ ಕಡಿಮೆಯಾಗುತ್ತಿರುವುದು ಒಂದು ದೊಡ್ಡ ಹಾನಿಯೆಂದೇ ಹೇಳಬಹುದು. ಉತ್ತರ ಹಿಂದುಸ್ಥಾನದಲ್ಲಿ ಆಯುರ್ವೇದದ ಪ್ರಚಾರವು ಈಗಲೂ ಸ್ವಲ್ಪ ಮಟ್ಟಿಗಾದರೂ ಇರುತ್ತದೆಂಬುದು ಇದ್ದದ್ದರಲ್ಲಿಯೇ ಸಮಾಧಾನ ಸಂಗತಿಯಾಗಿದೆ. ದಕ್ಷಿಣ ಹಿಂದುಸ್ಥಾನವಾದರೊ ವನಸ್ಪತಿಗಳಿಗೆ ತವರುಮನೆಯಾಗಿರುತ್ತದೆ. ಆದರೂ ಆಯುರ್ವೇದದ ದೊಡ್ಡದೊಡ್ಡ ಕಾರ್ಖಾನೆಗಳಿಲ್ಲದಿರುವದು ಒಂದು ಕುಂದೇ ಸರಿ. ವೀರಶೈವ ಸಮಾಜದಲ್ಲಿಯಾದರೂ ಇತ್ತಿತ್ತಲಾಗಿ ಅಲ್ಲಲ್ಲಿ ಆಯುರ್ವೇದದ ಶಿಕ್ಷಣಾಲಯಗಳು ಪ್ರಾರಂಭವಾಗಿರುತ್ತಿರುವವು. ಇದು ಸಂತೋಷದ ಸಂಗತಿಯಾಗಿರುತ್ತದೆ. ಈ ವಿಷಯವನ್ನು ನಾವು ನಮ್ಮ ಹೋದ ವರುಷದ ವರದಿಯಲ್ಲಿಯೇ ಪ್ರಕಟಿಸಿದ್ದೇವೆ. ಸಂಸ್ಕೃತವನ್ನು ಕಲಿಯತಕ್ಕವರ ನಿರುದ್ಯೋಗ ಸಮಸ್ಯವನ್ನು ಬಗೆಹರಿಸುವ ಅನೇಕ ಉಪಾಯಗಳಲ್ಲಿ ಆಯುರ್ವೇದ ಶಿಕ್ಷಣವೂ ಒಂದಾಗಿದೆ. ಅಂತೆಯೇ ಧಾರವಾಡದಲ್ಲಿ ಕೂಡಿದ್ದ ವೀರಶೈವ ಶಿಕ್ಷಣ ಪರಿಷತ್ತಿನಲ್ಲಿಯೂ ವೀರಶೈವ ಆಯುರ್ವೇದದ ವಿದ್ಯಾಲಯಗಳನ್ನು ಸ್ಥಾಪಿಸಬೇಕೆಂದು ಪಾಸು ಆಗಿರುತ್ತದೆ. ನಮ್ಮ ವಿದ್ಯಾಲಯದಲ್ಲಿಯೂ ಈ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬ ಉದ್ದೇಶದಿಂದ ಈಗ ಮೈಸೂರು ಆಯುರ್ವೇದಿಕ ಕಾಲೇಜಿನ ಅಂತಿಮ ಡಿಗ್ರಿಯನ್ನು ಪಡೆದಿರುವ ಶ್ರೀ ಫಾಲಾಕ್ಷಯ್ಯನವರನ್ನು ನೇಮಿಸಿಕೊಳ್ಳಲಾಗಿದೆ.

ಇವರು ಶ್ರೀ ಜಗದ್ಗುರು ಮೂರುಸಾವಿರ ಮಠದ ಸಹಾಯದಿಂದಲೇ ಶಿಕ್ಷಣವನ್ನು ಪಡೆದವರಾಗಿರುತ್ತಾರೆ. ಆಯುರ್ವೇದ ಶಿಕ್ಷಣವನ್ನು ಹೊಂದತಕ್ಕ ವಿದ್ಯಾರ್ಥಿಗಳು ಸಾಹಿತ್ಯ ಮಧ್ಯಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು. ಅಥವಾ ಆದ್ಯ ಪರೀಕ್ಷೆಯನ್ನು ಪಾಸಾಗಿ ಮಧ್ಯಮದ ಅಭ್ಯಾಸವನ್ನಾದರೂ ಮಾಡಿದವರಾಗಿರಬೇಕು. ಅಂಥವರನ್ನೇ ಸೇರಿಸಿಕೊಳ್ಳಲಾಗುವದು. ಕ್ರಮವಾಗಿ ಆಯುರ್ವೇದ ಪರೀಕ್ಷೆಯ ವ್ಯವಸ್ಥೆಯನ್ನೂ ಅನುಭವವನ್ನೂ ಮಾಡಿಕೊಡಲಿಕ್ಕೆ ಕಾರ್ಖಾನೆಯನ್ನು ಮಾಡಲಿಕ್ಕೆ ನಿಶ್ಚಯವಾಗಿದೆ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪ ವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಜ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
(೪೫) ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆ**ಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ,
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡುಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡುಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಚೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತ ವಾಗಿ **ನಮೂನೆಗಳನ್ನು** ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ವಲ್ಲಾಳಿ ದರದಿಂದ **ಮಾರುವದಕ್ಕೆ** ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ **ಮಾಹಿತಿ ಗೋಸ್ಕರ** ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಹೊಸ ಪುಸ್ತಕ ! ಜಾಗ್ರತೆ ತರಿಸಿರಿ!

ವಿಜಯ ವಾಣಿ.

ನೀವು ಕಾರ್ಯದಕ್ಷರಾಗಬೇಕೆಂದಿದ್ದರೆ;
ನೀವು ನಿಮ್ಮ ಕಾರ್ಯದಲ್ಲಿ ಜಯಶಾಲಿಗಳಾಗಬೇಕೆಂದಿದ್ದರೆ;
ನೀವು ಎಂತಹ ಕಷ್ಟಗಳಿಗೂ ಅಳುಕಬಾರದೆಂದಿದ್ದರೆ,

ವೀರಮಾತೆಯ ವಿಜಯ ವಾಣಿ

ಪುಸ್ತಕವನ್ನು ಪ್ರತಿನಿತ್ಯ ತಪ್ಪದೆ ಓದಿರಿ.

ಪ್ರತಿಯೊಂದು ಸಂಸ್ಕೃತ ಪಾಠಶಾಲೆಯು ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಲೇಬೇಕು.
ಕ್ರಯ ಒಂದಕ್ಕೆ ೧॥ ಆಣೆ.
೧ ರೂ ಗೆ ೧೨ ಪುಸ್ತಕಗಳು. ಅಂಚೆಯ ವೆಚ್ಚ ಬೇರೆ.
೧೨ ಪುಸ್ತಕಗಳಿಗಿಂತ ಕಡಿಮೆಯಾಗಿ ವ್ಹಿ. ಪಿ. ಮೂಲಕ ಕಳಿಸಲಾಗುವದಿಲ್ಲ.

ಮ್ಯಾನೇಜರ್—ಶ್ರೀ ಬಸವಲಿಂಗ ಮುದ್ರಣಮಂದಿರ
ಆಲಮಟ್ಟಿ.
ಪೋ. ಆಲಮಟ್ಟಿ. ಜಿ. ವಿಜಾಪುರ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ, ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗೆ ರೂ. ೪ ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ಸಮಾನೆಗಳು ಬರೇ ೧ ರೂಪಾಯಿ

--೧೦೦೦--

ನೀಲೀ ಮತಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾದ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ.
ಪೋ. ಹಂಚಲಿ.
ಜಿ. ವಿಜಾಪೂರ

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B.28[illegible]

ಶರಣ ಸಂದೇಶ

The
Sharana Sandesh.

ಕ್ಕಾಯ[illegible]ರ| [illegible]ಪರನಾನಲ್ಲ|| [illegible] ಶರಣ [illegible]ಡುವವನ
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೮ || ಮಹಾನುಭಾವ [illegible]

ಬಿಡಿಸಂಚಿಕೆಗೆ ೧ ಆಣೆ.

ರು:-

ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೬ ರೂ.

ಶ್ರೀ. ಹ[illegible]ಕರ ಮಂಜಪ್ಪನವರು.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೨೮ ನೆಯ ಅಗಷ್ಟ ೧೯೩೩. | ಸಂಚಿಕೆ

ಜನಸೇವೆಯೇ ದೇವರ ಸೇ[illegible]

ಗಾಂಧೀಜಿಯುವರ ಬಿಡುಗಡೆ.

ಅಪೂರ್ವ ವಿಜಯ.

ಸರಕಾರದ ಅಭಿನಂದನೀಯ ಮುಂದಾಲೋಚನೆ.

ಮಹಾತ್ಮಾ ಗಾಂಧೀಜಿಯುವರು ಕಳೆದ ೧೬ನೆಯ ತಾರೀಖಿನಿಂದ ಆದಿಜನಗಳ ಕಾರ್ಯಕ್ಕೋಸ್ಕರ ಪ್ರಾಣಾಂತ್ಯದ ವರೆಗಿನ ಉಪೋಷಣವನ್ನು ಪ್ರಾರಂಭಿಸಿದ್ದರಷ್ಟೆ.

ಸರಕಾರದವರು ಇವರ ನಿಷ್ಠೆ, ದೇಹಕ್ಷೀಣತೆಗಳನ್ನು ನೋಡಿ ಅನರ್ಥ ಸಂಭವಿಸಬಾರದೆಂಬ ಅಭಿನಂದನೀಯವಾದ ಮುಂದಾಲೋಚನೆಯಿಂದ ತಾ. ೨೩ನೆಯ ದಿನಸ ಯಾವ ಕಟ್ಟುಪಾಡುಗಳನ್ನು ಹಾಕದೆ ಇವರನ್ನು ಬಿಟ್ಟುಬಿಟ್ಟರು. ಈಗ ಇವರು ಪುಣೆಯ ಪರ್ಣಕುಟಿಯಲ್ಲಿ ಆರೋಗ್ಯವಾಗಿದ್ದಾರೆ.

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

ಕಳ್ಳರು ಕೃತಿ ಮಾಡಲು.

ಬಿಟ್ಟರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನ್ನಬಸವಪ್ಪಾ
ಬೆಲ್ಲದ ಬೆಳಗಾಂವ.

ಸಿದ್ಧೇಶ್ವರ ಸಾಫ್ರ ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಣಿಗೇರಿ

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು!

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕ್ಯಾಂಗ ತಿಜೋರಿ ಮಾಡಿಸಿ ಬೇಕಾದ [illegible] ಅಂಗಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ [illegible]ರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕು ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದೆನು ಕಡಾರೀ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿ ಗಲಿತೆನು ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೧
ವೀರಶೈವ ಮತಬೋಧ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕ.

ಸಂಪುಟ ೩. | ಆಲಮಟ್ಟಿ ಅಗಸ್ಟ ತಾರೀಖು ೨೮ ನೆಯ ಸೋಮವಾರ | ಸಂಚಿಕೆ ೮.

ಗಾಂಧೀಜಿಯವರ ಆತ್ಮಯಜ್ಞದ ವಿಜಯ !

ಅಭಿನಂದನೀಯವಾದ ಮುಂದಾಲೋಚನೆ.

ಮಹಾತ್ಮಾ ಗಾಂಧಿಯವರು ಅದ್ಭುತ ಆತ್ಮಶಕ್ತಿಯುಳ್ಳವರು. ಹೀನದೀನ ಸ್ಥಿತಿಯಲ್ಲಿರುವ ಕೋಟ್ಯಾಂತರ ಆದಿಜನಗಳ ವಿಷಯದಲ್ಲಿ ಅಪ್ರತಿಮ ಪ್ರೇಮವುಳ್ಳವರು. ದೀನರ ರಕ್ಷಣೆಗೆ ಪ್ರಾಣವನ್ನು ಕೂಡಾ ಸಮರ್ಪಿಸಲು ಇವರಿಗೆ ಅಪಾರವಾದ ಆನಂದೋತ್ಸಾಹಗಳುಂಟಾಗುತ್ತವೆ. ಆದುದರಿಂದಲೇ ಇವರು ಆದಿಜನಗಳ ವಿಷಯವಾಗಿ ಮಾಡುವ ಪ್ರತಿಯೊಂದು ಪ್ರತಿಜ್ಞೆಯಲ್ಲಿಯೂ ಪರಮಾತ್ಮನ ಕೃಪೆಯಿಂದ ವಿಜಯಶಾಲಿಗಳಾಗುತ್ತಿದ್ದಾರೆ.

ಈ ತಿಂಗಳ ಮೊದಲನೆಯ ತಾರೀಖಿನ ದಿನ ಶಾಸನ ಭಂಗದ ನಿಮಿತ್ತವಾಗಿ ಹಿಡಿಯಲ್ಪಟ್ಟು ೪ನೆಯ ತಾರೀಖಿಗೆ ಕಾರಾಗೃಹವನ್ನು ಸೇರಿದ್ದರಷ್ಟೆ. ಆದಿಜನರ ಸೇವೆಯ ಕಾರ್ಯಕ್ಕೆ ತಮಗೆ ಕಾರಾಗೃಹದಲ್ಲಿ ದೊರೆತಿದ್ದ ಎಲ್ಲ ಸೌಲಭ್ಯಗಳೂ ಪುನಃ ದೊರೆಯಬೇಕೆಂತಲೂ ಇಲ್ಲದಿದ್ದರೆ ಪ್ರಾಣಾಂತ್ಯದವರೆಗಿನ ಉಪವಾಸವನ್ನು ಪ್ರಾರಂಭಿಸುವೆವೆಂತಲೂ ಸರಕಾರಕ್ಕೆ ತಿಳಿಸಿದರು.

ಸರಕಾರವು ಸಂಪೂರ್ಣ ಅವಕಾಶವನ್ನು ಕೊಡದಿದ್ದುದರಿಂದ ತಾ. ೧೬ನೆಯ ದಿವಸ ಪ್ರಾಣಾಂತ್ಯದವರೆಗಿನ ಉಪವಾಸವನ್ನು ಪ್ರಾರಂಭಿಸಿದರು. ದಿನೇದಿನೇ ಪ್ರಕೃತಿಯು ಕ್ಷೀಣವಾಗಹತ್ತಿತು. ಮೂರು ತಿಂಗಳುಗಳ ಹಿಂದೆಯೇ ೨೧ ದಿನಗಳ ದೀರ್ಘಕಾಲದ ಉಪೋಷಣೆಯನ್ನು ಮಾಡಿದವರಾಗಿದ್ದುದರಿಂದ ಈ ಸಾರೆ ಪ್ರಕೃತಿಯು ಜಾಗ್ರತೆ ಕ್ಷೀಣವಾಗಹತ್ತಿತು. ದೀನಬಂಧು ಅಂಡ್ರೂಜ್‌ರವರು ಸರಕಾರಕ್ಕೂ ಇವರಿಗೂ ಮಧ್ಯವರ್ತಿಗಳಾಗಿ ಕ್ಷೇಮಕರವಾದ ತೀರ್ಮಾನ ಮಾಡಿಸಲು ತುಂಬಾ ಪ್ರಯತ್ನಿಸಿದರು.

ಗಾಂಧೀಜಿಯವರ ಉಪಚಾರವು ಕಾರಾಗೃಹದಲ್ಲಿ ಸರಿಯಾಗಿ ನಡೆಯುವದು ಶಕ್ಯವಿಲ್ಲವೆಂದು ಸರಕಾರದವರು ಸಸೂನ್ ವೈದ್ಯಾಲಯಕ್ಕೆ ಕರೆದುಕೊಂಡು ಬಂದು ಅಲ್ಲಿ ಇವರನ್ನಿಟ್ಟು ಸೌ. ಕಸ್ತೂರಿದೇವಿ ಗಾಂಧಿಯವರನ್ನು ಸಾಬರಮತಿ ಕಾರಾಗೃಹದಿಂದ ಬಿಟ್ಟು ಇವರ ಉಪಚಾರಕ್ಕೆ ಅವಕಾಶ ಕೊಟ್ಟರು.

ಭರತಖಂಡದ ಅನೇಕ ಪ್ರಸಿದ್ಧ ಸ್ಥಳಗಳಲ್ಲಿ ಸಭೆ ಸೇರಿ **ಗಾಂಧೀಜಿಯವರ** ಅಪೇಕ್ಷೆಯನ್ನು ಪೂರೈಸಿಕೊಡಬೇಕಾಗಿ ಸರಕಾರಕ್ಕೆ ತಿಳಿಸಿದರು. ಶಾಸನಭಂಗದ ಕಾರ್ಯಮಾಡುವುದಿಲ್ಲವಾಗಿ ಹೇಳಿದರೆ **ಗಾಂಧೀಜಿಯವರನ್ನು** ಬಿಡುವುದಾಗಿಯೂ ಸರಕಾರದವರು ತಿಳಿಸಿದರು. **ಗಾಂಧೀಜಿಯವರು** ಅದಕ್ಕೊಪ್ಪಲಿಲ್ಲ. ಇವರಿಗೇನೋ ಪ್ರಾಣದಾಸೆಯೇ ಇಲ್ಲವೆಂಬುದು ಜಗತ್ತಿಗೇನೇ ಗೊತ್ತು. ಆದುದರಿಂದ ಸರಕಾರದವರು ಮುಂದೆ ಅನರ್ಥ ಸಂಭವಿಸಬಾರದೆಂದು ಮುಂದಾಲೋಚನೆಯಿಂದ ಇವರನ್ನು ಬಿಟ್ಟುಬಿಡಬೇಕೆಂದೇ ಕೊನೆಗೆ ನಿರ್ಧರಿಸಿದಂತೆ ಕಾಣುತ್ತದೆ.

ತಾ. ೨೩ನೆಯ ಸಾಯಂಕಾಲ ೩ ಗಂಟೆಗೆ ದೀನಬಂಧು ಅಂಡ್ರೂಜ್‌ರವರು ವೈದ್ಯಾಲಯಕ್ಕೆ ಬಂದು ನಿಮ್ಮನ್ನು ಸರಕಾರದವರು ಯಾವ ಕಟ್ಟುಪಾಡುಗಳನ್ನೂ ಇಲ್ಲದೆ ಬಿಟ್ಟಿದ್ದಾರೆಂದು ತಿಳಿಸಿದರು. ಆಗ ಮೋಸಂಬಿ ಹಣ್ಣಿನ ರಸವನ್ನು ದಯಾಘನನಾದ ಆ ಪರಮಾತ್ಮನನ್ನು ಸ್ಮರಿಸಿ ಸೇವಿಸಿ ಉಪೋಷಣೆಯನ್ನು ನಿಲ್ಲಿಸಿದರು. ಆಗಲೇ ಸಿದ್ಧವಾಗಿದ್ದ ಮೋಟಾರಿನಿಂದ ಪರ್ಣಕುಟಿಗೆ ಇವರನ್ನು ಕರೆದುಕೊಂಡು ಹೋದರು.

ಗಾಂಧೀಜಿಯವರ ದೇಹಾರೋಗ್ಯ...

ಗಾಂಧೀಜಿಯವರು ಈಗ ಪುಣೆಯ ಪರ್ಣಕುಟಿಯಲ್ಲಿ ಕ್ಷೇಮವಾಗಿದ್ದಾರೆ. ತಾ ೨೪ನೆಯ ದಿವಸ ಇವರ ತೂಕ ೯೩|| ಪೌಂಡು ಇದ್ದಿತು. ಹಿಂದಿನ ಉಪವಾಸಕ್ಕಿಂತ ಈ ಸಾರೆ ಇವರ ದೇಹ ಹೆಚ್ಚು ಕ್ಷೀಣವಾಗಿದೆ. ಇನ್ನೊಂದು ತಿಂಗಳು ಸಂಪೂರ್ಣ ವಿಶ್ರಾಂತಿ ಹೊಂದಬೇಕೆಂದು ಡಾಕ್ಟರರು ಹೇಳಿದ್ದಾರೆ.

ಗಾಂಧೀಜಿಯವರ ಉಪದೇಶಾಮೃತ.

ಮ. ಗಾಂಧೀಜಿಯವರು ಈ ವರೆಗೆ ಬೋಧಿಸಿರುವ ಉಪದೇಶಗಳನ್ನು ಜನರು ಎಷ್ಟೇ ಪ್ರಮಾಣದಲ್ಲಿ ಆಚರಿಸಿರಲಿ, ಅಥವಾ ಉಪೇಕ್ಷಿಸಿರಲಿ, ಅವುಗಳಿಗಿರುವ ಮಹತ್ವವೇನೂ ಎಳ್ಳಷ್ಟಾದರೂ ಕಡಿಮೆಯಾಗುವುದಿಲ್ಲ. ಈ ವರೆಗೆ ಜಗತ್ತಿನಲ್ಲಿ ಆಗಿಹೋಗಿರುವ ಮಹಾ ವಿಭೂತಿಗಳಲ್ಲಿ ಮಹಾತ್ಮಾ ಗಾಂಧಿಯವರು ಜಗದ್ಗುರುವೆಂದು ಅತ್ಯಂತ ಶ್ರೇಷ್ಠ ಸ್ಥಾನದಲ್ಲಿಯೇ ನಿರಂತರ ಶೋಭಿಸುತ್ತಿರುವರು.

ಈ ಜಗದ್ವಂದ್ಯರ ತ್ರಿಕಾಲಾಬಾಧಿತವಾದ ಈ ಕೆಳಗಿನ ದಿವ್ಯೋಪದೇಶಗಳು ಮನುಷ್ಯ ಜಾತಿಗೆ ಯಾವಾಗಲೂ ಸುಖ ಶಾಂತಿಗಳ ಮಾರ್ಗವನ್ನೇ ತೋರಿಸುವವು. ಆದುದರಿಂದ ಇವು ಯಾವಾಗಲೂ ನಮ್ಮ ಕಣ್ಣ ಮುಂದಿರಲಿ.

೧. ಸತ್ಯ ಮತ್ತು ಅಹಿಂಸೆಗಳ ಬಲದಿಂದ ನೀವು ಈ ಜಗತ್ತನ್ನೇ ನಿಮ್ಮ ಪಾದದಲ್ಲಿ ತಂದಿರಿಸಿಕೊಳ್ಳಬಹುದು. (With Sothya combined with Ahimsa you can bring the world to your feet)

೨. ಕ್ಲೇಶ ಹೊಂದುವುದು ಎಷ್ಟು ಶುದ್ಧವಾದುದಾಗಿರುತ್ತದೆಯೋ ಅಷ್ಟು ಉನ್ನತಿಯು ಅಧಿಕವಾದುದಾಗುತ್ತದೆ. (The purer the suffering, the greater is the Progress.)

೩. ಹಿಂಸೆಯು ಹೇಗೆ ಪಶುಗಳ ಧರ್ಮವಾಗಿದೆಯೋ ಹಾಗೆಯೇ ಅಹಿಂಸೆಯು ಮನುಷ್ಯನ ಧರ್ಮವಾಗಿದೆ. (Nonviolence is the law of our species as violence is the law of the brute.

೪. ಗೌಪ್ಯತನವನ್ನು ನಾನು ಪಾಪದಷ್ಟೇ ದೂರೀಕರಿಸುತ್ತೇನೆ. (I detest secrecy as a sin.)

೫. ಅಹಿಂಸೆಯಿಂದ ನಡೆಯುವುದೇ ದೇವರ ಮೇಲೆ ಭಾರ ಹಾಕುವುದು. (Nonviolence means reliance on God.)

೬. ವಿನಯವೇ ಜಾಗ್ರತೆ ಜಯ ಹೊಂದಲು ಮುಖ್ಯೋಪಾಯವು, (Humility is the key to quick success.)

೭. ಪ್ರೇಮಾಗ್ನಿಯಲ್ಲಿ ಅತ್ಯಂತ ಕಠಿಣವಾದ ತಂತುವು ಕೂಡಾ ಕರಗಿ ಹೋಗುತ್ತದೆ. (The hardest fibre must melt in the fire of love.)

೮. ಸಂಪೂರ್ಣವಾದ ಪ್ರಯತ್ನವೇ ಪೂರ್ಣ ವಿಜಯವು. (Full effort is full victory.)

೯. ನಮ್ರತೆಯಿಲ್ಲದವನು ಅದೆಂತಹ ಅಸಹಕಾರಿಯು? (A Non-co-operator is nothing if not humble.)

೧೦. ಅಸ್ಪೃಶ್ಯತೆಗೆ ಧರ್ಮದ ಆಧಾರವಿಲ್ಲ, ಅದು ಸೈತಾನನ ಯುಕ್ತಿಯಾಗಿದೆ. (Untouchability is not a sanction of religion, it is a device of satan.)

೧೧. ಸಂತೋಷದಿಂದ ಸಹಿಸುವ ಕ್ಲೇಶವು ಕ್ಲೇಶವೇ ಅಲ್ಲ. ಅದರ ಪರ್ಯವಸಾನವು ಅತ್ಯಾನಂದವು. (Suffering cheerfully endured ceases to be suffering and is transmuted into an ineffable joy.)

೧೨. ಗುಂಡಿನ ಮಳೆ ಸುರಿಯುತ್ತಿದ್ದರೂ ನಾವು ಸತ್ಯವನ್ನೇ ನುಡಿಯಬೇಕು. (We must speak the truth under the shower of bullets.)

೧೩. ಪ್ರೇಮವು ದ್ವೇಷವನ್ನು ಗೆಲ್ಲುತ್ತದೆ. (Love conquers hate.)

೧೪. ಯಾರು ನಾಲಿಗೆಯನ್ನು ಬಿಗಿಹಿಡಿದಿಲ್ಲವೋ ಅವರು ವಿಷಯೋಪಭೋಗವನ್ನು ಗೆಲ್ಲಲಾರರು. (He who has not mastered his palate cannot master the carnal desire.)

೧೫. ನೀತಿ ವಿರಹಿತವಾದ ರಾಜಕಾರಣವು ತ್ಯಾಜ್ಯವಾದುದು. (Politics without morality is a thing to be avoided.)

೧೬. ಎಲ್ಲಿ ಮತ್ಸರವೋ ಅಲ್ಲಿ ಸ್ಪರ್ಧೆಯು. (Jealousy presupposes the posibility of rivalry.)

೧೭. ದಬ್ಬಾಳಿಕೆಗೆ ಯಾರು ಸಿದ್ಧಗೊಳಿಸುತ್ತಾರೆಯೋ ಅವರ ದಬ್ಬಾಳಿಕೆಯಿಂದಲೇ ಪ್ರಯೋಜನವಾಗುತ್ತದೆ. (Repression does good only to those who are prepared for it.)

೧೮. ಪ್ರೇಮದ ನ್ಯಾಯವೆಂದರೆ ಶರಣು ಹೋಗುವುದು. ಮತ್ತು ಶಾಸನದ ನ್ಯಾಯವೆಂದರೆ ದಂಡವನ್ನು ವಿಧಿಸುವುದು. (Justice that love gives is surrender, Justice that law gives is a punishment.)

೧೯. ಗುಲಾಮನು ಗುಲಾಮಗಿರಿಯನ್ನು ಒಪ್ಪುತ್ತಾನೆಂದೇ ಆತನು ಗುಲಾಮನು, (A slave is a slave because he consents to slavery.)

೨೦. ಪ್ರೇಮ ಶಕ್ತಿಯು ಈ ಜಗತ್ತಿನಲ್ಲಿ ಅತ್ಯಂತ ಬಲವಾದ ಶಕ್ತಿಯಾಗಿದೆ. ಮತ್ತು ಅದು ಕಲ್ಪನಾತೀತ ವಿನಯಶೀಲವಾದುದೂ ಆಗಿದೆ. (Love is the strongest force the world possesses and yet it is the humblest imaginable.)

೨೧. ಪ್ರೇಮವು ಅನ್ಯರನ್ನು ಸುಡುವುದಿಲ್ಲ. ಅದು ತನ್ನನ್ನೇ ತಾನು ಸುಟ್ಟುಕೊಳ್ಳುತ್ತದೆ. (Love does not burn others, it burns itself.)

—ಅಕೋಲಾದಲ್ಲಿ ಹೊರಡುವ ಪ್ರಜಾಪಕ್ಷ ಎಂಬ ಪತ್ರಿಕೆಯು ತಮ್ಮ ರಾಜ್ಯದಲ್ಲಿ ಬರಬಾರದೆಂದು ನಿಜಾಮ ಸರಕಾರದವರು ಅಪ್ಪಣೆ ಮಾಡಿದ್ದಾರೆ.

ಹಿಂದಣ ೫೦ ವರುಷಗಳ ವೀರಶೈವ ಸಮಾಜ ಸ್ಥಿತಿ.

ಗ್ರಂಥ ಪ್ರಸಾರ ಮತ್ತು ಸಾಹಿತ್ಯಸೇವೆ.

ವೀರಶೈವ ಸಮಾಜದಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಶಿಕ್ಷಣ ಪ್ರಸಾರವು ಕಳೆದ ೫೦ ವರುಷಗಳಿಂದಲೂ ದಿನೇದಿನೇ ಹೆಚ್ಚುತ್ತಾ ಬಂದಿದೆಯೆಂತಲೂ ಈ ಉಭಯ ಶಿಕ್ಷಿತ ವರ್ಗ ದಿಂದಲೂ ಈ ವರೆಗೆ ವೀರಶೈವ ಸಂಸ್ಕೃತಿಯ ಪೋಷಣೆಗೆ ಸಹಾಯ ವಾಗದೆ ಎಷ್ಟೋ ಪ್ರತಿಕೂಲವೇ ಸಂಭವಿಸಿತೆಂತಲೂ ಇನ್ನುಮುಂದೆ ಈ ದೋಷವು ನಿವಾರಣೆಯಾಗುವ ಲಕ್ಷಣ ತೋರಲಾರಂಭವಾಗಿದೆ ಯೆಂತಲೂ ಕಳೆದ ಲೇಖನಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾಗಿದೆ ಯಷ್ಟೆ.

ದೇಶದಲ್ಲಿಯೂ ಮತ್ತು ಈ ಸಮಾಜದಲ್ಲಿಯೂ ಶಿಕ್ಷಣ ಪ್ರಸಾರವಾಗುತ್ತ ಬಂದಂತೆ ಧರ್ಮಗ್ರಂಥಗಳ ಪ್ರಸಾರವೂ ಅನೇಕರಿಗೆ ಅಗತ್ಯವಾಗಿ ತೋರಿತು. ಮೈಸೂರಿನ ಕೈ. ವೈ. ವೀರಸಂಗಪ್ಪನವರು ಈ ವಿಷಯದಲ್ಲಿ ಮೊದಲು ಪ್ರಯತ್ನಿಸಿದರು. ಸ್ವಾರ ಪತ್ರಿಕೆಯು ಪ್ರಕಟವಾಗಲಾರಂಭಿಸಿ ಈಗ ೪೬ ವರುಷಗಳಾದವು. ಧಾರ್ಮಿಕ ತತ್ವ ಪ್ರಸಾರಣೆಗೂ ಚರ್ಚೆಗೂ ಅನುಕೂಲವಾಗಲೆಂದೇ ಈ ಪತ್ರಿಕೆಯು ಹೊರಟಿತು. ಆ ಮಹಾಶಯರು ತಮ್ಮ ಸರ್ವಸ್ವ ವನ್ನೂ ಈ ಮಹಾ ಕಾರ್ಯಕ್ಕೆ ಸಮರ್ಪಿಸಿ ಸಮಾಜದಲ್ಲಿ ಒಂದು ನೂತನ ಜಾಗೃತಿಯನ್ನುಂಟುಮಾಡಿದರು.

ಅನಂತರ ಕೈ. ನಾರದ ಮಲ್ಲಪ್ಪನವರು ಈ ಗ್ರಂಥಪ್ರಸಾರ ಣೆಯ ಮಹತ್ಕಾರ್ಯಕ್ಕೆ ವಿಶೇಷ ದ್ರವ್ಯವನ್ನು ವೆಚ್ಚಮಾಡಿ ಅನೇಕ ಸಂಸ್ಕೃತ, ಮರಾಠಿ ಧಾರ್ಮಿಕ ಪುಸ್ತಕಗಳನ್ನು ಮುದ್ರಣ ಮಾಡಿಸಿದರು. ಈ ಮಹನೀಯರ ಕೆಲವು ವಿಚಾರಗಳು ವೀರಶೈವ ಮತತತ್ವಗಳಿಗೆ ಕೆಲವಂಶದಲ್ಲಿ ಲೋಪವನ್ನುಂಟುಮಾ ಡತಕ್ಕವುಗಳಾಗಿದ್ದರೂ ಇವರ ಅದ್ವಿತೀಯವಾದ ಸಮಾಜಾಭಿಮಾ ನವು ತುಂಬಾ ಶ್ಲಾಘ್ಯವಾದುದೆಂಬುದರಲ್ಲಿ ಸಂದೇಹವಿಲ್ಲ.

ಈ ಉಭಯ ಮಹಾಶಯರ ನಂತರ ಶ್ರೀಮಾನ್ ಹಳಕಟ್ಟಿ ಯವರು ವೀರಶೈವ ಮತದ ತಿರುಳನ್ನು ಬೋಧಿಸುವ ಅದ್ವಿತೀಯ ವಚನ ಶಾಸ್ತ್ರವನ್ನು ಪ್ರಸಾರ ಮಾಡಲುಪಕ್ರಮಿಸಿದರು. ಈ ಸಾಹಿತ್ಯಭೂಷಣರ ಈ ಮಹತ್ಕಾರ್ಯವು ವೀರಶೈವ ತತ್ವ ಪ್ರಸಾ ರಣೆಗೂ ಕನ್ನಡ ಸಾಹಿತ್ಯದ ಬೆಳವಣಿಗೆಗೂ ತುಂಬಾ ಸಹಾಯ ವಾಯಿತು. ವಚನ ಗ್ರಂಥಗಳ ಪ್ರಸಾರದಿಂದ ಧಾರ್ಮಿಕ ನಿಜ ತತ್ವಗಳು ಜನಸಾಮಾನ್ಯರಲ್ಲಿಯೂ ಪ್ರಸಾರವಾಗಲುಪಕ್ರಮಿಸಿ ವೀರಶೈವರ ಸಾಹಿತ್ಯಸೇವೆಯ ವೈಭವವೂ ಬೆಳಕಿಗೆ ಬಂದಿತು.

ಈ ಪ್ರಕಾರ ವೀರಶೈವ ಧರ್ಮಗ್ರಂಥಗಳ ಪ್ರಸಾರಕರಲ್ಲಿ ಈ ಮೂರು ಮಹಾಶಯರ ಹೆಸರು ಚಿರಸ್ಮರಣೀಯವಾದುದಾಗಿದೆ. ಇಂಗ್ಲಿಷ್ ಮತ್ತು ಸಂಸ್ಕೃತ ಶಿಕ್ಷಣ ಪ್ರಸಾರಕ್ಕೆ ಕೆಲವು ಮಹಾ ಸ್ವಾಮಿಗಳು ಪ್ರಯತ್ನಿಸಿದಂತೆ ಈ ಮಹತ್ಕಾರ್ಯಕ್ಕೆ ಮಾತ್ರ ಯಾವ ಸ್ವಾಮಿಗಳೂ ವಿಶೇಷ ಸಹಾಯ ಮಾಡಲಿಲ್ಲ. ಹಾಗೆ ಮಾಡಿದ್ದರೆ ಹೆಚ್ಚು ಪ್ರಯೋಜನವಾಗುತ್ತಿದ್ದಿತು. ಇತ್ತೀಚೆಗೆ ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರ ಮಠದ ಮಹಾ ಸ್ವಾಮಿಗಳವರು ಗ್ರಂಥ ಪ್ರಸಾರಣೆಯ ಕಾರ್ಯವನ್ನು ಪ್ರಾರಂಭಿಸಿ ದ್ದಾರೆ. ವಿಚಾರಕ್ರಾಂತಿಯು ಈ ಕಾಲದಲ್ಲಿ ಬಹು ತೀವ್ರತರವಾಗಿ ನಡೆದಿರುವುದರಿಂದ ಗ್ರಂಥ ಪ್ರಸಾರವು ಅತ್ಯವಶ್ಯಕವಾಗಿದೆ. ಈ ವಿಷಯದ ಕಡೆಗೆ ಸಮಾಜೋದ್ಧಾರಕರಾದ ಮಹಾಸ್ವಾಮಿಗಳು ಹೆಚ್ಚು ಗಮನಿಸಿ ಮತಗ್ರಂಥಗಳನ್ನು ಪ್ರಸಾರಗೊಳಿಸುವುದು ವಿಶೇಷ ಫಲಕಾರಿಯಾಗಿದೆ.

ಸಮಾಜದ ವಿದ್ಯಾಭಿಮಾನಿಗಳೂ ಬುದ್ಧಿಶಾಲಿಗಳೂ ಇಂಗ್ಲಿಷ ಮತ್ತು ಸಂಸ್ಕೃತ ಶಿಕ್ಷಣಗಳ ಕಡೆಗೇನೇ ಹೆಚ್ಚು ಲಕ್ಷಿಸಿದ್ದರಿಂದ ಕನ್ನಡ ಸಾಹಿತ್ಯವು ನಮ್ಮಿಂದ ದೂರಾಗಹತ್ತಿದೆ. ಇತ್ತೀಚೆಗೆ ನಮ್ಮಲ್ಲಿ ಕನ್ನಡ ಪಂಡಿತರು ಬಹು ಕಡಿಮೆಯಾಗಹತ್ತಿದ್ದಾರೆ. ಇದೊಂದು ಸಮಾಜಕ್ಕೆ ಮಹತ್ತರವಾದ ನಷ್ಟವೆಂದೇ ತಿಳಿಯ ಬೇಕು.

ಕೈ. ಬಸವಪ್ಪ ಶಾಸ್ತ್ರಿಗಳ ನಂತರ ಈ ವರೆಗೆ ಹೆಸರುವಾಸಿ ಗಳಾದ ಯಾವ ವೀರಶೈವ ಕವಿಗಳೂ ಆಗಿಲ್ಲವೆಂದು ಹೇಳಬಹುದು. ಜನಾಂಗವೇ ಈಗ ಮೊದಲಿನ ಪದ್ಯ ಯುಗದಲ್ಲಿಲ್ಲವೆಂದು ಯೋಚಿಸಿ ದರೂ ಈಗಿನ ಗದ್ಯಯುಗದಲ್ಲಾದರೂ ವೀರಶೈವರು ಬೆಳಗುತ್ತಿ ದ್ದಾರೆಯೇ? ಈ ಕಾಲದ ಅನೇಕ ಶೈಲಿಗಳುಂಟಾಗಿವೆ. ಅವುಗಳಲ್ಲಿ ಮಹಾಮಹಾ ಪಂಡಿತರೂ ಅನ್ಯ ಸಮಾಜಗಳಲ್ಲಿದ್ದಾರೆ. ಅವರು ಕನ್ನಡ ನುಡಿಯ ಸೇವೆಯನ್ನು ಬಹು ತೃಪ್ತಿಕರವಾಗಿ ಮಾಡುತ್ತಿ ದ್ದಾರೆ.

ಹಿಂದಕ್ಕೆ ಕನ್ನಡ ಸಾಹಿತ್ಯದಲ್ಲಿ ವೀರಶೈವರಿಗಿದ್ದ ಸ್ಥಾನವು ಈಗ ಉಳಿದಿಲ್ಲ. ಆಧುನಿಕ ಶಿಕ್ಷಣಕ್ಕೆ ಬೆರಗಾಗಿ ತಾಯಿ ನುಡಿಯನ್ನು ಮರೆತುದುದೇ ಇದಕ್ಕೆ ಮುಖ್ಯ ಕಾರಣ. ಕೆಲವರಿಗೆ ಸಂಸ್ಕೃ ತದ ಮುಂದೆ ಕನ್ನಡವು ಕಡ್ಡಿಗಿಂತ ಕಡೆಯಾಗಿ ಕಾಣಲಾರಂಭಿ ಸಿತು. ಈ ದೋಷಗಳ ಕಡೆಗೆ ನಾವು ಈಗಲೇ ಲಕ್ಷಿಸಿ ಕನ್ನಡ ಸಾಹಿತ್ಯ ಸೇವಕರಿಗೆ ತುಂಬಾ ಪ್ರೋತ್ಸಾಹಿಸಬೇಕು. ಕನ್ನಡ ಸಾಹಿತ್ಯದಲ್ಲಿ ಕಳೆದುಕೊಳ್ಳುತ್ತಿರುವ ನಮ್ಮ ಸ್ಥಾನವನ್ನು ನಾವು ಆಕ್ರಮಿಸಿಕೊಳ್ಳಬೇಕು. ವಿದ್ಯಾಭಿಮಾನಿಗಳೂ ವಿದ್ಯಾರ್ಥಿಗಳೂ ಈ ವಿಷಯದ ಕಡೆಗೆ ತುಂಬಾ ಲಕ್ಷಿಸುವರೆಂದು ನಂಬಿದ್ದೇವೆ.

[ಸಂಪಾದಕ.]

—ಹುಬ್ಬಳ್ಳಿ ಕನ್ನಡ ಸಾಹಿತ್ಯ ಸಂಘದವರು ಶ್ರೀ. ಪಾವಟೆ ಸಿದ್ಧಪ್ಪಣ್ಣನವರ ಭಾಷಣವನ್ನು ಕಳೆದವಾರ ಮಾಡಿಸಿದರು. ಆಗ ಶ್ರೀ. ಉತ್ತಂಗಿ ಚೆನ್ನಪ್ಪನವರು ಅಧ್ಯಕ್ಷರಾಗಿದ್ದರು. ವ್ಯಾಖ್ಯಾ ತರು ರಾಘವಾಂಕ ಕವಿಯ ಕವಿತಾ ಸ್ವಾರಸ್ಯವನ್ನು ಬಹು ರಸ ವತ್ತಾಗಿ ವಿವರಿಸಿದರು.

ಬಸವೇಶ್ವರನೂ ಅಸ್ಪೃಶ್ಯರ ಉದ್ಧಾರವೂ.

(ಹರಳಯ್ಯ ಮಧುವಯ್ಯಗಳ ಕಥೆ.)

(ಲೇಖಕರು—ಶ್ರೀ ಉತ್ತಂಗಿ ಚೆನ್ನಪ್ಪನವರು. ಪ್ರಕಾಶಕರು—ಶ್ರೀ ಇಂಜನಿಯರ್ ಹಾಲಯ್ಯನವರು ಹುಬ್ಬಳ್ಳಿ.)

ಇದೊಂದು ಬಹು ಉತ್ತಮವಾದ ಪುಸ್ತಕ. ಇದು ೭೦ ಪುಟಗಳುಳ್ಳದ್ದಾಗಿದೆ. ಮುದ್ದಾಗಿ ಮುದ್ರಣವಾಗಿದೆ. ಕ್ರಯ ನಾಲ್ಕಾಣೆ ಮಾತ್ರ. ಶ್ರೀ ಬಸವೇಶ್ವರನ ಕಾಲದಲ್ಲಿ ಸಂಭವಿಸಿದ ಹರಳಯ್ಯ ಮಧುವಯ್ಯಗಳ ಅತ್ಯಂತ ಗಂಭೀರವಾದ ದೇಹ ಸಂಬಂಧದ ಐತಿಹಾಸಿಕ ಪ್ರಸಂಗವನ್ನು ಕರ್ನಾಟಕದ ಉತ್ತಮ ಲೇಖಕರೂ ವೀರಶೈವ ಮತ ತತ್ವಗಳನ್ನರಿತವರೂ ಆದ ಶ್ರೀ. ಉತ್ತಂಗಿ ಚೆನ್ನಪ್ಪನವರು ಈ ಪುಸ್ತಕದಲ್ಲಿ ಬಹು ಸರಸವಾಗಿ ಬರೆದಿದ್ದಾರೆ

ಅಸ್ಪೃಶ್ಯತಾ ನಿವಾರಣೆಯ ಈ ಮಂಗಲ ಸಮಯದಲ್ಲಿ ಇದನ್ನು ಹಿಂದುಗಳ-ವಿಶೇಷವಾಗಿ ವೀರಶೈವರ ಮುಂದಿಟ್ಟು ಅವರಿಗೆ ತಮ್ಮ ಕರ್ತವ್ಯದ ಎಚ್ಚರಿಕೆಯನ್ನು ಕೊಟ್ಟದಕ್ಕಾಗಿ ಗ್ರಂಥಕರ್ತರನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಈ ಪುಸ್ತಕವನ್ನು ಪ್ರಕಾಶಪಡಿಸಿದ ಶ್ರೀ. ಇಂಜನಿಯರ್ ಹಾಲಯ್ಯನವರು ಈ ಪುಸ್ತಕದ ಕೊನೆಯ ಭಾಗದಲ್ಲಿ ತಮ್ಮ ಮಹತ್ವದ ವಿಚಾರಗಳನ್ನು ಪ್ರಕಟಿಸಿ ಅಸ್ಪೃಶ್ಯತಾ ನಿವಾರಣೆ, ಜಾತಿಭೇದ ಮೊದಲಾದ ಸಮಾಜ ಸುಧಾರಣೆಯ ವಿಷಯಗಳಲ್ಲಿರುವ ಜನಸಾಮಾನ್ಯರ ಆಕ್ಷೇಪಣೆಗಳಿಗೆ ಬಹು ಸಮಂಜಸವಾದ ಉತ್ತರಗಳನ್ನು ಕೊಟ್ಟದ್ದಾರೆ. ಈ[illegible]ರ ಈ ಮಹಾಶಯರು ಬಹು ಪ್ರಯೋಜನಕಾರಿಯಾದ ಈ ಪುಸ್ತಕವನ್ನು ಪ್ರಕಾಶಪಡಿಸಿ ತಮ್ಮ ಉದಾತ್ತ ವಿಚಾರಗಳನ್ನು ಪ್ರಕಟಗೊಳಿಸಿದುದಕ್ಕಾಗಿ ಶ್ರೀ. ಹಾಲಯ್ಯನವರನ್ನೂ ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಗ್ರಂಥಕಾರರು ಈ ಪುಸ್ತಕವನ್ನು ಅಸ್ಪೃಶ್ಯತಾ ನಿವಾರಣೆಯ ಆದಿಪುರುಷರಾದ **ಮಹಾತ್ಮಾ ಗಾಂಧೀಜಿಯವರಿಗೆ** ಅರ್ಪಿಸಿದ್ದಾರೆ. ಈ ಪುಸ್ತಕದಲ್ಲಿ ವಿವರಿಸಿದ ಸಂಗತಿಯ ಮುಖ್ಯಾಂಶವನ್ನು ಶ್ರೀ. ಕೆ. ಪಾಟೀಲ ಎಂಬುವವರು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಈ ಪ್ರಕಾರ ಎಲ್ಲ ರೀತಿಗಳಿಂದಲೂ ಉಪಯುಕ್ತವಾದ ಈ ಪುಸ್ತಕವನ್ನು ಸಕಲರೂ ಆವಶ್ಯಕವಾಗಿ ಓದಿ ಪ್ರಯೋಜನ ಹೊಂದುವರೆಂದು ನಂಬಿದ್ದೇವೆ.

ಲೇಖಕರು ಮುನ್ನುಡಿಯಲ್ಲಿ ಈ ಪ್ರಕಾರ ಹೇಳಿದ್ದಾರೆ. "ಸದ್ಯದ ಹಿಂದೂ ಸಮಾಜವಾಗಲಿ ವೀರಶೈವರಾಗಲಿ ಸ್ವಸಮಾಜದಲ್ಲಿರುವ ಅಸ್ಪೃಶ್ಯರೊಂದಿಗೆ ಬಸವೇಶ್ವರನಂತೆ ಸಹಪಂಗ್ತಿ ಭೋಜನ ಮಾಡಿ ಅವರೊಡನೆ ಶರೀರ ಸಂಬಂಧವನ್ನು ಬೆಳೆಯಿಸುವುದಕ್ಕೆ ಸಿದ್ಧರಿಲ್ಲದಿದ್ದರೂ ಕೆರೆ, ಬಾವಿ, ಬೀದಿ, ಪೇಟೆ, ಸಭೆ, ಸಾಲೆ, ಮಠ, ದೇವಾಲಯ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿಯಾದರೂ ಅವರನ್ನು ಮನುಷ್ಯರೆಂದು ತಿಳಿದು ಮುಂದಕ್ಕೆ ಕರೆದರೆ ನಾವು ರಾಷ್ಟ್ರಕ್ಕೆ ಮಾಡಿದ ಅಪರಾಧದಲ್ಲಿ ಅರ್ಧ ಪಾಪವಾದರೂ ಕ್ಷಯವಾಗುವಂತಿರುವದು."

ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ಮತ್ತು ಬಸವೇಶ್ವರನ ಅಸ್ಪೃಶ್ಯರ ಉದ್ಧಾರ ಇವು ಭಿನ್ನವಾಗಿವೆ. ಎರಡನ್ನೂ ಲೇಖಕರು ಸಮಾನ ರೇಷೆಯಲ್ಲಿ ತೆಗೆದುಕೊಂಡು ಹೋಗಿ ಈ ಪ್ರಕಾರ ಒಂದು ಸಿದ್ಧಾಂತವನ್ನು ಮಾಡುವುದು ಸರಿಯಲ್ಲ. ಬಸವೇಶನು ಅಸ್ಪೃಶ್ಯರೊಂದಿಗೆ ಪಂಗ್ತಿ ಭೋಜನವನ್ನಾಗಲಿ ದೇಹ ಸಂಬಂಧವನ್ನಾಗಲಿ ನಡಸಿಲ್ಲ. **ತನಗೆ ಸಮಾನವಾದ ಶೀಲಾಚಾರ ವಿಚಾರಗಳುಳ್ಳವರು** ಅವರು ಯಾರಿದ್ದರೂ **ಶಿವಭಕ್ತರೆಂದೇ ತಿಳಿದು** ಅವರಲ್ಲಿ ಸಾಮರಸ್ಯವನ್ನು ನಡೆಸಿದ್ದಾನೆಯೇ ವಿನಾ ಗಾಂಧೀಜಿಯವರಂತೆ ತಮಗೆ ಭಿನ್ನವಾದ ಶೀಲಾಚಾರ ವಿಚಾರಗಳುಳ್ಳವರಲ್ಲಿ ಸಾಮರಸ್ಯವನ್ನು ನಡೆಸಿಲ್ಲ. ಗಾಂಧೀಜಿಯವರ ಧಾರ್ಮಿಕ ಭಾವನೆಯು ಬೇರೆ ಬಸವೇಶನ ಧಾರ್ಮಿಕ ಭಾವನೆ ಬೇರೆ. ಗಾಂಧೀಜಿಯವರ ಅಸ್ಪೃಶ್ಯತಾನಿವಾರಣೆಯು ಮನುಷ್ಯ ಜಾತಿಯ ಸ್ವಾತಂತ್ರ್ಯತ್ವವನ್ನನುಸರಿಸಿದೆ. ಮತಾಂತರವಾಗುವುದಾಗಲಿ ಸಮಾನ ಶೀಲಾಚಾರಗಳುಳ್ಳವರಾಗುವುದಾಗಲಿ ಇವರಿಗೆ ಅವಶ್ಯಕ ತೋರುವುದಿಲ್ಲ. ಬಸವೇಶನಿಗಾದರೋ ಮತಾಂತರ ಸಮಾನ ಶೀಲಾಚಾರವಿಚಾರಗಳು ಅತ್ಯಾವಶ್ಯವಾಗಿಯೇ ಇದ್ದವು. ಆದುದರಿಂದ ಈ ಮಹತ್ವದ ವ್ಯತ್ಯಾಸವನ್ನೂ ಇವುಗಳಿಂದಾಗುವ ಸಮಾಜದ ಮೇಲಣ ಭಿನ್ನ ಪರಿಣಾಮಗಳನ್ನೂ ಲೇಖಕರು ಈ ಪುಸ್ತಕದಲ್ಲಿ ವಿವರಿಸುವುದು ಅತ್ಯಾವಶ್ಯಕವಾಗಿತ್ತೆಂದು ನಮಗೆ ತೋರುತ್ತದೆ.

ಶ್ರೀ. ಹರಳಯ್ಯ ಮಧುವಯ್ಯಗಳ ಕಥೆಯು ಶರಣ ಲೀಲಾಮೃತ ಗ್ರಂಥದಲ್ಲಿಯೇ ಹೆಚ್ಚು ಪ್ರಸ್ತಾಪಿಸಲ್ಪಟ್ಟಿದೆ. ಇದಕ್ಕಿಂತಲೂ ಹೆಚ್ಚು ವಿಷಯಗಳುಳ್ಳ ಒಂದು ಓಲೆಯ ಗರಿಯ ಪುಸ್ತಕವು ತಮಗೆ ದೊರೆತಿದೆಯೆಂತಲೂ ಅದರ ಆಧಾರದಿಂದ ಇದನ್ನು ಬರೆದಿದ್ದೇವೆಂತಲೂ ಗ್ರಂಥಕಾರರು ಹೇಳಿದ್ದಾರೆ. ಆ ಪುಸ್ತಕದ ಹೆಸರನ್ನೂ ಅದನ್ನು ಬರೆದವರಾರೆಂಬುದನ್ನೂ ತಿಳಿಸಿದ್ದರೆ ಚೆನ್ನಾಗಿದ್ದಿತು. ಅದರ ಮೇಲಿಂದ ಆ ಸಂಗತಿಗಳನ್ನು ಎಷ್ಟರ ಮಟ್ಟಿಗೆ ನಂಬಬಹುದೆಂಬುದು ಗೊತ್ತಾಗುತ್ತಿದ್ದಿತು.

ಈ ಪುಸ್ತಕದ ೨೮ನೆಯ ಪುಟದಲ್ಲಿ ಈ ಪ್ರಕಾರ ಇದೆ "ಬಸವೇಶನು ಆ ಮೊಚ್ಚೆಗಾರನಾದ ಹರಳಯ್ಯನ ಸಮೀಪಕ್ಕೆ ಬಂದು ಅವನ ಕೊರಳಿಗೆ ಬಿದ್ದು ಅವನನ್ನು ಬಿಗಿದಪ್ಪಿ ಪರಿಪರಿಯಿಂದ ಮುದ್ದಾಡಿದನು. ಅದಕ್ಕೆ ಹರಳಯ್ಯನು ದೊರೆಯೇ ನಾನು ಕೆಟ್ಟ ಹೊಲೆಯ. ಸೃಷ್ಟಿಯೊಳಗೆ ನಮ್ಮಂಥವರನ್ನು ಯಾರೂ ಮುಟ್ಟರು. ಆದರಿಂದ ನಾನು ದೂರದಲ್ಲಿಯೇ ನಿಂತಿರುವೆನು. ದಮ್ಮಯ್ಯಾ ನಮ್ಮನ್ನು ಮುಟ್ಟದೆ ದೂರದಿಂದ ಮಾತನಾಡಿಸು."

ಇದರಿಂದ ಆಗ ಹರಳಯ್ಯನವರು ಶಿವಭಕ್ತರಾಗಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಹಾಗೆ ಶಿವಭಕ್ತರಾಗದವರನ್ನು ಬಸವೇಶನು ಮುಟ್ಟಿ ಮುದ್ದಾಡಿದನೆಂಬುದು ಶುದ್ಧ ಸುಳ್ಳೇ ಸರಿ. ಆದಕಾರಣ ಇವರಿಗೆ ದೊರೆತ ಪುಸ್ತಕದಲ್ಲಿಯ ಕಥಾ ಭಾಗವನ್ನು ವೀರಶೈವ ಮತತತ್ವಕ್ಕೂ ಈ ಸಂಬಂಧವಾದ ಬಸವ ಮಹಾನುಭಾವರ ವಚನಗಳಿಗೂ ಹೋಲಿಸಿ ನೋಡಿ ಅಸಂಗತವಾಗಿದ್ದ ಇಂಥ ಸಂಗತಿಗಳನ್ನು ಲೇಖಕರು ಬಿಟ್ಟು ಬಿಡಬೇಕಾಗಿದ್ದಿತು. ಇಲ್ಲವೇ ಅವುಗಳನ್ನೆಲ್ಲಾ ಪ್ರತ್ಯೇಕಿಸಿ ಒಂದು ಕಡೆ ಬೇರೆ ಕೊಡಬೇಕಾಗಿದ್ದಿತು ಹಾಗಿಲ್ಲದಿದ್ದುದರಿಂದ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ಬಸವೇಶನ ಅಸ್ಪೃಶ್ಯರ ಉದ್ಧಾರ ಇವೆರಡೂ ಇದರಲ್ಲಿ ಕಲೆತು ಹೋದಂತೆ ತೋರುತ್ತದೆ. ಈ ವಿಷಯದ ಕಡೆಗೆ ನಮ್ಮ ವಿದ್ವಾನ್ ಲೇಖಕರು ಲಕ್ಷಿಸುವರೆಂದು ನಂಬಿದ್ದೇವೆ. [ಸಂಪಾದಕ.

ವಿವಿಧ ವಿಷಯ.

ಹಿಂದೀ ಸ್ತ್ರೀಯರ ಜಾಗೃತಿ.

ಚಿಕಾಗೊ ಸ್ತ್ರೀ ಸಮ್ಮೇಳನದ ಕಾಲದಲ್ಲಿ "ನಾಗರಿಕತೆಯ ಉದ್ಭವ" ಈ ವಿಷಯದ ಮೇಲೆ ಡಾ. ಮಥು ಲಕ್ಷ್ಮಿ ರೆಡ್ಡಿ ಇವರು ಭಾಷಣ ಮಾಡಿದ ಸಾರಾಂಶ—

"ಸ್ತ್ರೀಯರು ಹಿಂದೂ ಜನರಿಗೆ ಪರಮ ಪೂಜ್ಯರು. ಸರಸ್ವತಿಯನ್ನು ವಿದ್ಯಾಧಿದೇವತೆಯೆಂದು ಅವರು ಪೂಜಿಸುವರು. ಹಿಂದಿನ ಕಾಲದಲ್ಲಿ ಎಷ್ಟೋ ಸ್ತ್ರೀಯರು ಘನಪಂಡಿತೆಯರಾಗಿದ್ದಾರೆ.

ಅರ್ವಾಚೀನ ಕಾಲದಲ್ಲಿ ಸ್ತ್ರೀ ಶಿಕ್ಷಣದ ಜಾಗೃತಿಯು ಪಾದ್ರಿಗಳಿಂದ ಆಯಿತು. ಆ ಮೇಲೆ ಸರಕಾರದವರೂ ಹಲಕೆಲವು ಸೇವಕ ಸಂಘದವರೂ ಈ ಪವಿತ್ರ ಕಾರ್ಯವನ್ನು ಕೈಕೊಂಡರು. ಬರಬರುತ್ತ ಸ್ತ್ರೀಯರ ಸಲುವಾಗಿ ಶಾಲೆಕಾಲೇಜುಗಳೂ, ಆಸ್ಪತ್ರಿಗಳೂ ಉಂಟಾದವು.

ಸ್ತ್ರೀಯರ ಸಾಂಘಿಕ ಚಟುವಟಿಕೆಗಳು ಕಳೆದ ೧೫ ವರ್ಷಗಳಿಂದ ಪ್ರಾರಂಭವಾಗಿವೆ. ಹಿಂದೀ ಸ್ತ್ರೀಯರ ಪ್ರಥಮ ಸಮ್ಮೇಲನವು ೧೯೧೭ನೆಯ ಇಸವಿಯಲ್ಲಿ ಡಾ. ಅನಿಬಿಝಂಟ ಇವರ ಉತ್ಸಾಹ ಛತ್ರದಲ್ಲಿ ಕೂಡಿದ್ದಿತು. ಸದ್ಯದಲ್ಲಿ ಈ ಸಂಘದ ಕೆಳಗೆ ೭೨ ಶಾಖಾ ಸಂಘಗಳೂ ೨೪ ಮಧ್ಯವರ್ತಿ ಸಂಘಗಳೂ ಮತ್ತು ಕಾಶ್ಮೀರದಿಂದ ಕುಮಾರಿ ಭೂಶಿರದ ವರೆಗೆ ಅನೇಕಾನೇಕ ಸಭಾಸದರೂ ಇರುವರು.

೧೯೨೬ನೆಯ ಇಸ್ವಿಯಲ್ಲಿ ಸ್ಥಾಪಿತವಾದ ಅಖಿಲಭಾರತ ಸ್ತ್ರೀ ಸಭೆಯು ೧೧೪ ಉಪಸಂಘಗಳುಳ್ಳದ್ದಾಗಿ ಇರುತ್ತದೆ.

ಸದ್ಯದಲ್ಲಿ ಸ್ತ್ರೀಯರೂ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿಯೂ, ಪ್ರಾಂತಿಕ ಶಾಸನ ಸಭೆಯ ಸಭಾಸದರಾಗಿಯೂ, ವಿಶ್ವವಿದ್ಯಾಲಯದ ಸಿನೇಟ ಮತ್ತು ಸಿಂಡಿಕೇಟುಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ.

ರಾಷ್ಟ್ರೀಯ ಕಾರ್ಯಗಳಲ್ಲಿಯೂ ನಮ್ಮ ಸ್ತ್ರೀಯರು ೨ ಸಾರೆ ಜನತೆಯ ಸಂಪೂರ್ಣ ಅನುಮತಿಯಿಂದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದಾರೆ. ಸೌ. ಸರೋಜಿನಿದೇವಿ ನಾಯಿಡು, ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಅ. ಭಾ. ಸ್ತ್ರೀ. ಸಮ್ಮೇಲನದ ಪೂರ್ವದ ಕಾರ್ಯದರ್ಶಿನಿಯೂ ಅಖಿಲಭಾರತ ಮತ್ತು ಅಖಿಲ ಏಶಿಯಾ ಸ್ತ್ರೀ ಸಭೆಗಳನ್ನು ಸ್ಥಾಪಿಸಿದವರಲ್ಲೊಬ್ಬಳೂ ಆದ ಸೌ. ಕಝಿನ್ಸ ಇವರೂ ರಾಷ್ಟ್ರೀಯ ಕೆಲಸಕ್ಕಾಗಿ ಕಾರಾಗೃಹವನ್ನು ಕಂಡಿದ್ದಾರೆ

ರಾಷ್ಟ್ರೀಯ ಚಟುವಟಿಕೆಗಾಗಿ ನಮ್ಮ ಸ್ತ್ರೀಯರಲ್ಲನೇಕರು ಕಾರಾಗೃಹವನ್ನು ಸೇರಿರುವರು. ಸ್ತ್ರೀಯರು ಮಹಾತ್ಮಾಜಿಯವರನ್ನು ಬಹು ಭಕ್ತಿಯಿಂದ ಕಾಣುತ್ತಾರೆ. ಗಾಂಧೀಜಿಯವರು ಸ್ತ್ರೀ ಸಮಾನತೆಯನ್ನು ಪುರಸ್ಕರಿಸುವವರಲ್ಲಿ ಅಗ್ರಗಣ್ಯರು. ಆದುದರಿಂದ ಅವರ ಚಟುವಟಿಕೆಗೆ ಸ್ತ್ರೀಯರ ಬೆಂಬಲವೂ ಇದೆ.

ಆದರೆ ಸರಕಾರದವರಿಂದ ಮಾತ್ರ ನಮ್ಮ ಭಗಿನಿಯರಲ್ಲಿ ಕೆಲವರಿಗೆ ತಡೆಯಾಗಿರುತ್ತದೆ. ಅವರ ಗಂಡಂದಿರು ಸರಕಾರದ ಸೇವೆಯಲ್ಲಿದ್ದರೆ ಅವರು ಕೂಡಾ ರಾಷ್ಟ್ರೀಯ ಚಟುವಟಿಕೆಯಲ್ಲಿ ಭಾಗತೆಗೆದುಕೊಳ್ಳಕೂಡದಂತೆ. ಆದುದರಿಂದ ಸ್ತ್ರೀಯರ ಶೈಕ್ಷಣಿಕ ಇತ್ಯಾದಿ ಉದ್ಧಾರವು ಸ್ವಾಯತ್ತ ಸರಕಾರದಿಂದಲೇ ದೊರಕುವದೆಂದು ಎಷ್ಟೋ ಸ್ತ್ರೀಯರು ರಾಷ್ಟ್ರೀಯ ಸಭೆಯನ್ನು ಸೇರಿದ್ದಾರೆ.

—ನಮ್ಮ ಭಗಿನಿಯರಲ್ಲಿ ಜಾತಿಯ ಜಗಳವಿಲ್ಲ. ಈಗೀಗ ಅವರು ಬಂಧನೆಗಳನ್ನು ನೀಗಿ ಮುಂದೆ ಬರಹತ್ತಿದ್ದಾರೆ ಅವರಿಗೆ ಈಗ ತಮ್ಮ ಮನೆಯನ್ನು ಚನ್ನಾಗಿ ನಡೆಯಿಸಿಕೊಂಡು ಹೋಗುವದು ಬೇಕಾಗಿದೆ. ಅಲ್ಲದೆ ಅವರಿಗೆ ಹಿಂಸೆಬೇಡ; ಯುದ್ಧ ಬೇಡ; ಅವರಿಗೆ ಸತ್ಯವಾದ ನ್ಯಾಯವು ಬೇಕು.

ಆದುದರಿಂದ ನಾನು ನಮ್ಮ ಜಗತ್ತಿನ ಭಗಿನೀ ಸಮಾಜಕ್ಕೆ ಬೇಡಿಕೊಳ್ಳುವದೇನಂದರೆ ಭರತಖಂಡ ೩೫ ಕೋಟಿ ಜನರ ಹಿತವನ್ನು ಪರ್ಯಾಲೋಚಿಸಿ ನಮ್ಮ ಮೇಲೆ ಮಾತೆಯ ಪ್ರೇಮವನ್ನಿಡಬೇಕು. ಜಗನ್ಮಾತೆಗೆ ಅನಂತ ನಮಸ್ಕಾರ!"

ಶಾಂತಿ ದೂತ ದೀನಬಂಧು.

ಧೀನಬಂಧು ಸಿ. ಎಫ್. ಆಂಡ್ರ್ಯೂಜ ಇವರು ಶಾಂತ್ಯುಪಾಸಕರು. ಇಂಗ್ಲಂಡ ಮತ್ತು ಭರತಖಂಡಗಳು ಇವರಿಗೆ ಅತ್ಯಂತ ಪ್ರಿಯವಾದವುಗಳು. ಇವೆರಡೂ ದೇಶಗಳಲ್ಲಿ ಮೈತ್ರಿ ಇರುವದಕ್ಕಾಗಿ ಇವರು ಇಂಗ್ಲೆಂಡಿನಲ್ಲಿ ಅದೆಷ್ಟೋ ಪ್ರಯತ್ನಿಸಿದ್ದಾರೆ. ಈಗ ಅದೇ ಶಾಂತಿಯ ಬೀಜವನ್ನು ಬೀರಲು ಹಿಂದುಸ್ಥಾನ ಸರಕಾರಕ್ಕೂ ಮತ್ತು ಮಹಾತ್ಮಾ ಗಾಂಧಿಯವರಿಗೂ ಮಧ್ಯವರ್ತಿಗಳಾಗಿ ಪ್ರಯತ್ನಿಸುತ್ತಿದ್ದಾರೆ.

ದೀನಬಂಧು ಆಂಡ್ರ್ಯೂಜರು ಭಕ್ತಿಲೋಲರು. ಮಹಾತ್ಮಾ ಗಾಂಧೀಜಿಯವರಲ್ಲಿ ಅತ್ಯಂತ ಶ್ರದ್ಧೆಯುಳ್ಳವರು. ಶಾಸನಭಂಗವನ್ನು ನಿಲ್ಲಿಸಿ ಸರಕಾರದ ಸಂಗಡ ಸನ್ಮಾನನೀಯ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಮಹಾತ್ಮಾಜಿಯವರಿಗಷ್ಟೇ ಅಲ್ಲದೆ ಹಿಂದುಸ್ಥಾನದಲ್ಲಿಯ ತಮ್ಮ ಮಿತ್ರರಿಗೆಲ್ಲರಿಗೂ ಅವರು ಬರೆದುಕೊಂಡಿದ್ದರು. ಹೀಗಾದರೆ ಹಿಂದುಸ್ಥಾನದ ಹಿತವನ್ನು ಬಹು ಮಟ್ಟಿಗೆ ಸಾಧಿಸಿದಂತಾಗುತ್ತಿದ್ದಿತೆಂದು ಅವರು ಭಾವಿಸಿದ್ದರು. ಆದರೆ ಅದೆಲ್ಲ ಮಿಂಚಿಹೋಯಿತು.

ಸದ್ಯಕ್ಕೆ ದೇಶದ ಸ್ಥಿತಿಯು ವಿಕೋಪಕ್ಕೆ ಹೋಗಿದ್ದರೂ, ರಾಷ್ಟ್ರೀಯ ಸಭೆ ಮತ್ತು ಸರಕಾರದ ನಡುವೆ ಒಂದು ಕೊಳವೇ ಉಂಟಾಗಿದ್ದರೂ ದೀನಬಂಧುಗಳು ಇವೆರಡನ್ನೂ ಬಂಧಿಸುವ ಆಶೆಯುಳ್ಳವರಾಗಿದ್ದಾರೆ.

ಅಕ್ಕಲಕೋಟೆಯಲ್ಲಿ ಕನ್ನಡದ ಅವನತಿ!

ಅಕ್ಕಲಕೋಟೆಯು ಒಂದು ಚಿಕ್ಕ ಸಂಸ್ಥಾನವು. ಈ ಸಂಸ್ಥಾನದ ಜನ ಸಂಖ್ಯೆ ಸಾಧಾರಣ ೯೨ ಸಾವಿರ ಇದೆ. ಈ ಜನರಲ್ಲಿ ನೂರಕ್ಕೆ ೬೦ ಜನರ ತಾಯ್ನುಡಿಯು ಕನ್ನಡ. ಇಲ್ಲಿ ಲಿಂಗಾಯತರೇ ೩೫ ಸಾವಿರದವರೆಗಿದ್ದಾರೆ. ಇವರ ಹುಟ್ಟು ಭಾಷೆಯಂತೂ ಕನ್ನಡ. ಹೀಗಿದ್ದರೂ ಇಲ್ಲಿ ಕನ್ನಡ ಶಿಕ್ಷಣದ ಗಾಳಿಯೇ ಇಲ್ಲದಿರುವುದು ಅತ್ಯಂತ ವಿಷಾದಕರವಾದುದಲ್ಲವೆ?

ವೀರಶೈವರಿಗಂತೂ ಧಾರ್ಮಿಕ ಜೀವನಕ್ಕೆ ಅತ್ಯಗತ್ಯವಾದ ಕನ್ನಡ ಭಾಷೆಯು ಬೇಕೇಬೇಕು. ಈ ಸಂಸ್ಥಾನದ ಬೊಕ್ಕಸವನ್ನು ಹೆಚ್ಚಾಗಿ ತುಂಬುವವರು ವೀರಶೈವರೇ ಸರಿ. ಏಕೆಂದರೆ ಇವರೇ ಈ ಸಂಸ್ಥಾನದ ವ್ಯಾಪಾರ ಒಕ್ಕಲತನಗಳಲ್ಲಿ ಪ್ರಮುಖರಾಗಿದ್ದಾರೆ. ಹೀಗಿದ್ದರೂ ಇವರ ಅನುಕೂಲಕ್ಕಾಗಿಯಾದರೂ ಕನ್ನಡ ಶಾಲೆಯನ್ನು ಏರ್ಪಡಿಸುವುದು ಅಗತ್ಯವಾಗಿಲ್ಲವೆ?

ಅಲ್ಲಿಯ ವೀರಶೈವರು ಈ ವಿಷಯವಾಗಿ ಪ್ರಯತ್ನಿಸಿರುವರೇನು? ಅವರಿಗೆ ತಮ್ಮ ತಾಯಿನುಡಿಯ ಮೇಲೆ ಅಭಿಮಾನವಿದೆಯೇನು? ತಮ್ಮ ಧರ್ಮ ತತ್ವಗಳ ಭಾಂಡಾರವಾದ ಕನ್ನಡವನ್ನು ಕಲಿಯುವ ಅಪೇಕ್ಷೆಯುಂಟೇನು? ಇದಕ್ಕಾಗಿ ಈ ವರೆಗೆ ಯಾವಯಾವ ಚಟುವಟಿಕೆಗಳನ್ನು ಮಾಡಿರುವರು? ಇಲ್ಲಿಯ ಶ್ರೀ. ಮಹಾರಾಣಿ ಸಾಹೇಬರವರು ಈ ವಿಷಯದ ಕಡೆಗೆ ಲಕ್ಷಿಸುವುದು ಯುಕ್ತವಲ್ಲವೆ?

ಜಗತ್ತಿನ ಸರ್ವ ಧರ್ಮಗಳ ಪರಿಷತ್ತು.

೧ ಅಮೇರಿಕಾ ಖಂಡದ ಚಿಕಾಗೊ ನಗರದಲ್ಲಿ ೧೮೯೩ನೆಯ ಇಸವಿಯಲ್ಲಿ ಪ್ರಪಂಚದ ಮಹಾ ಜಾತ್ರೆಯು ಕೂಡಿದ್ದಿತು. ಆಗ ಸರ್ವ ಧರ್ಮ ಪರಿಷತ್ತು ಕೂಡಿದ್ದಿತು. ಈ ಪರಿಷತ್ತಿನಿಂದ ಜಗತ್ತಿನ ನೈತಿಕ ಮತ್ತು ಧಾರ್ಮಿಕ ಸುಧಾರಣೆಯು ಶೀಘ್ರಗತಿಯಿಂದ ಸಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

೨ ಆಗಿನ ಜಾತ್ರೆಯಂತೆಯೇ ಈ ೧೯೩೩ನೆಯ ಇಸವಿಯಲ್ಲಿ "ಸಾಂವತ್ಸರಿಕ ಪ್ರಗತಿ ಪ್ರದರ್ಶನ"ವು ನಡೆದಿದೆ. ಇದರಲ್ಲಿ ಜಗತ್ತಿನ ವಿಜ್ಞಾನ ಶಾಸ್ತ್ರ, ಕಲೆ, ಉದ್ಯೋಗ, ವ್ಯಾಪಾರ ಮತ್ತು ಇನ್ನುಳಿದ ಮನುಷ್ಯೋಪಯುಕ್ತವಾದ ವಿಷಯಗಳಲ್ಲಿ ಜಗತ್ತಿನ ಪ್ರಗತಿಯು ಎಷ್ಟು ಭರದಿಂದ ಸಾಗಿದೆಯೆಂಬುದು ಕಂಡುಬರುತ್ತದೆ. ಹಿಂದಿನ ಸರ್ವಧರ್ಮ ಪರಿಷತ್ತಿನಂತೆಯೇ ಈ ಸಾರೆಯೂ ಸರ್ವ ನಿಷ್ಠೆಗಳ ಎಂದರೆ ಧರ್ಮಗಳ ಪರಿಷತ್ತು ಉಂಟಾಗಿದೆ.

೩ ನಿಷ್ಠೆಯೆಂಬ ಶಬ್ದವು ಧರ್ಮವೆಂಬ ಶಬ್ದಕ್ಕಿಂತಲೂ ವ್ಯಾಪಕವಾದದ್ದು. ಇದರಲ್ಲಿ ಸರ್ವ ಧರ್ಮಗಳಲ್ಲಿದೆ ಶಿಕ್ಷಣ ನಿಷ್ಠೆ, ಸಾಮಾಜಿಕ ನಿಷ್ಠೆ, ಹಾಗೆಯೇ ರಾಜಕೀಯ, ಸ್ವದೇಶಿಕ ಆರ್ಥಿಕ ಮೊದಲಾದ ನಿಷ್ಠೆಗಳೂ ಬರುತ್ತವೆ. ಇವುಗಳ ಉದ್ದೇಶವು ಮಾನವ ಜೀವಿತದಲ್ಲಿ ಜೀವಕಳೆಯನ್ನು ತುಂಬುವದಲ್ಲದೆ ಈ ಎಲ್ಲ ನಿಷ್ಠೆಗಳ ಏಕೀಕರಣವಾಗುವಂತೆ ಪ್ರಯತ್ನಿಸುವದೂ ಇರುತ್ತದೆ.

ಈ ಸರ್ವನಿಷ್ಠೆಗಳ ಪರಿಷತ್ತು ಜೂನ ಒಂಬತ್ನೇ ತಾರೀಖಿನಿಂದ ಅಕ್ಟೋಬರದ ಕೊನೆಯವರೆಗೆ ನಡೆಯುವದು. ಇದಕ್ಕೆ ಅಮೇರಿಕೆಯ ಹಿಂದಿನ ಅಧ್ಯಕ್ಷರಾದ ಶ್ರೀ ಹೂವರ ಮತ್ತು ಮಿಸ್. ಜೇನ ಆಡ್ಡಮ್ಸ ಇವರೂ ಇದ್ದಾರೆ. ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಈ ಪರಿಷತ್ತಿನ ಕಾರ್ಯಕಾರಿ ಮಂಡಳಿಗಳು ಸ್ಥಾಪಿತವಾಗಿವೆ. ಹಿಂದುಸ್ಥಾನದ ಮಂಡಳದಲ್ಲಿ ವಿದ್ಯಾವಿಭೂಷಣ ಪಂಡಿತ, ಮತ್ತು ಕಾಶಿಯ ಡಾ. ಶ್ಯಾಮಶಂಕರ ಎಂಬುವವರು ಇದ್ದಾರೆ

ಈಗಾಗಲೇ ಜರುಗಿದ ಸಭೆಗಳಲ್ಲಿ "ಸಹಕಾರ ಮಾರ್ಗ" "ಜನಾಂಗ ಶೀಲಕ್ಕೆ" 'ಜುಡಾಯಿ ಧರ್ಮಶಾಸ್ತ್ರದಲ್ಲಿ ಮಾರ್ಗವನ್ನಾಗಿ ತೋರಿಸುತ್ತದೆ' "ಶಾಶ್ವತ ಮೋಕ್ಷೋಪಾಯವು" "ತರುಣರು ಮತ್ತು ಧರ್ಮವು" "ತರುಣರು ಮತ್ತು ಪ್ರಜಾಪ್ರಭುತ್ವದ ನಾಗರಿಕತೆ' ಇತ್ಯಾದಿ ವಿಷಯಗಳಮೇಲೆ ಭಾಷಣಗಳಾಗಿವೆ.

ಹಿಂದೂ ಮುಸಲ್ಮಾನರ ಅನೈಕ್ಯ.

ಹೌಸ ಆಫ್ ಕಾಮನ್ಸ ಸಭೆಯಲ್ಲಿ ಡಾ. ಮುಂಜೆಯವರು ಜಾತಿವಿಶಿಷ್ಟ ಪ್ರಾತಿನಿಧ್ಯವನ್ನು ಕುರಿತು ಭಾಷಣ ಮಾಡುವ ಕಾಲಕ್ಕೆ ಹೇಳಿದುದರ ಮುಖ್ಯಾಂಶವೇನೆಂದರೆ— "ಜಾತಿಯ ಮತದಾನ ಪದ್ಧತಿಯಂತೆ ಮುಸಲ್ಮಾನರಿಗೆ ಅವರ ಹೆಚ್ಚು ಜನವಸತಿಯುಳ್ಳ ಪ್ರಾಂತಗಳಲ್ಲಿ ವಿಶೇಷತೆಯು ಬೇಕು. ಮತ್ತು ಕಡಿಮೆ ಜನವಸತಿಯುಳ್ಳ ಪ್ರಾಂತಗಳಲ್ಲಿ ಸಂರಕ್ಷಣೆಯು ಬೇಕು. ಹೀಗೆ ಎರಡೂ ಕಡೆಯಿಂದ ಲಾಭವನ್ನು ಪಡೆಯಬೇಕೆಂದು ಮುಸಲ್ಮಾನರ ಹವಣಿಕೆ.

ಈ ಹವಣಿಕೆಗೆ ಕಾರಣರಾರೆಂದರೆ ಇದೇನೂ ಬೇರೆ ಹೇಳಬೇಕಾಗಿಲ್ಲ. ಆಂಗ್ಲೋ ಇಂಡಿಯನ್ ಸರಕಾರಿ ಅಧಿಕಾರಿಗಳು ತಮ್ಮ ಪ್ರಭುತ್ವವು ನಿರಂತರವೂ ಇರಬೇಕೆಂದು ಇದೊಂದು ಹಿಂದುಸ್ಥಾನಕ್ಕೆ ಅತ್ಯಂತಾವಶ್ಯಕವಾದ ಹಿಂದೂ ಮುಸಲ್ಮಾನರ ಕಟ್ಟನ್ನು ಸಡಿಲಿಸಲು ಚುಚ್ಚಿಕೊಟ್ಟರು.

ಮುಸಲ್ಮಾನರಿಗಾದರೂ ಈ ಪದ್ಧತಿಯು ಲಾಭಕರವೆಂದು ಅನಿಸಿತು. ವಂಗಭಂಗದ ವಿಷಯಕ ಚಟುವಟಿಕೆಯನ್ನು ನೋಡಿ ಹಿಂದುಗಳ ಅದೇಕ ಹಿಂದೀಜನರ ಶಕ್ತಿಯನ್ನು ಕುಗ್ಗಿಸಲು ಮಾರ್ಲೆಮಿಂಟೊ ಸುಧಾರಣೆಯ ಸೋಗಿನಿಂದ ಹಿಂದುಸ್ಥಾನವನ್ನು ಜಾತಿಯ ಪದ್ಧತಿಯಿಂದ ಇಬ್ಬಾಗಿಸಿದರು.

ಈ ಸುಧಾರಣೆಯು ಬರುವ ಪೂರ್ವದಲ್ಲಿ ಹಿಂದೂಮುಸಲ್ಮಾನರಲ್ಲಿ ಐಕ್ಯವಿದ್ದಿತು. ಮಿಂಟೊ ದೊರೆಗಳ ಚರಿತ್ರಕಾರರು ಬರೆದಂತೆ ಅವರಲ್ಲಿ ಮುಸಲ್ಮಾನರ ವಿಷಯಕ್ಕೆ ಸಹಾನುಭೂತಿಯ ಪಕ್ಷವು ಇದ್ದದ್ದರಿಂದ ಮುಸಲ್ಮಾನರು ನಾ. ಆಗಾಖಾನರನ್ನು ಮುಂದೆ ಮಾಡಿಕೊಂಡು ಕೇವಲ ಕೆಲಕೆಲವು ಅಧಿಕಾರಿಗಳ ಚುಚ್ಚುವಿಕೆಯಿಂದ ತಮಗೆ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂದು ಕೇಳಿಕೊಂಡರು. ಮತ್ತು ಮಿಂಟೊ ದೊರೆಗಳು ಅದನ್ನು ಒದಗಿಸಿಕೊಟ್ಟರು. ಆದರೆ ಮಾರ್ಲೆ ಇವರು ಆ ಕಾಲಕ್ಕೆ ಈ ಪದ್ಧತಿಯನ್ನು ವಿರೋಧಿಸಿದರು. ಮುಸಲ್ಮಾನರ ಪಕ್ಷವನ್ನು ಹಿಡಿದು ಹಿಂದುಗಳನ್ನು ಮರೆಯಲಾಗದೆಂದು ಅವರು ಮಿಂಟೊ ದೊರೆಗಳಿಗೆ ಒಂದು ಪತ್ರವನ್ನೂ ಬರೆದರು. ಆದರೂ ಅಂದಿನಿಂದ ಇಂದಿನ ವರೆಗೆ ಮುಸಲ್ಮಾನರಲ್ಲಿ ಭಿನ್ನ ಪದ್ಧತಿಯೇ ನಡೆದು ಈಗೀಗ ತಮಗೆ ಭಿನ್ನ ಪದ್ಧತಿಯೇ ಬೇಕೆಂದು ಹೇಳುವಷ್ಟು ಸಡಿಲಾಗಿ ಹೋಯಿತು."

ಸರದಾರ್ ಶಾರ್ದೂಲಸಿಂಗರ ತೀರ್ಮಾನ.

ರಾಷ್ಟ್ರೀಯ ಸಭೆಯ ತಾತ್ಕಾಲಿಕ ಅಧ್ಯಕ್ಷರಾಗಿದ್ದ ಸರದಾರ ಶಾರ್ದೂಲಸಿಂಗರು ಲಾಹೋರಿನಲ್ಲಿ ೩ ಜನ ಸ್ವಯಂಸೇವಕರನ್ನು ಕರೆದುಕೊಂಡು ಪರದೇಶಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿದರು. ಇವರನ್ನು ಸರಕಾರದವರು ಕೈಸೆರೆ ಮಾಡಿದ್ದಾರೆ.

ಇವರು ಇನ್ನುಮುಂದೆ ತಾತ್ಕಾಲಿಕ ಅಧ್ಯಕ್ಷರಾರೂ ಇಲ್ಲವೇ ಇಲ್ಲವೆಂದು ತಿಳಿಯಬೇಕೆಂತಲೂ ಕರಾಚಿ ಸಭೆಯ ಅಧ್ಯಕ್ಷರಾಗಿದ್ದ ಶ್ರೀ. ವಲ್ಲಭಭಾಯಿ ಪಟೇಲರವರೇ ಅಧ್ಯಕ್ಷರಾಗಿದ್ದಾರೆಂತಲೂ ಪ್ರಕಟಿಸಿ ಪ್ರಾಂತಿಕ ಜಿಲ್ಲಾ ಮೊದಲಾದ ಎಲ್ಲ ರಾಷ್ಟ್ರೀಯ ಸಭೆಯ ಶಾಖೆಗಳೂ ಮುಚ್ಚಲ್ಪಡಬೇಕು. ಮತ್ತು ಯಾರಿಗೂ ಸರ್ವಾಧಿಕಾರಿಯನ್ನು ನಿಯಮಿಸುವ ಅಧಿಕಾರವಿಲ್ಲವೆಂದು ತಿಳಿಸಿದ್ದಾರೆ. ಇದರಿಂದ ಈಗ ರಾಷ್ಟ್ರೀಯ ಸಭೆಯ ಅಸ್ತಿತ್ವವೇ ಇಲ್ಲದಂತಾಯಿತು.

ಕಲ್ಲೆದೆಯ ಮುಳ್ಳಿನ ಸೂಚನೆ!

ಗಾಂಧೀಜಿಯವರು ಕಾರಾಗೃಹದಲ್ಲಿ ಉಪವಾಸ ವ್ರತವನ್ನು ಪ್ರಾರಂಭಿಸಿರುವುದು ಹುಡುಗರ ಹಟಮಾರಿತನದಂತಿದೆ. ಇವರಿಗೆ ಚೆನ್ನಾಗಿ ದೇಹದಂಡನೆ ಮಾಡಬೇಕೆಂದು ಕರಾಚಿಯ ಡೇಲಿ ಗೆಜೆಟ್ ಪತ್ರಿಕೆಯು ಸೂಚಿಸಿದೆ! ಇಂಥ ಕಲ್ಲೆದೆಯ ಮುಳ್ಳಿನ ಸೂಚನೆಗಳೇ ಮಾನವ ಜಾತಿಯ ಅಶಾಂತತೆಗೆ ಕಾರಣವಾಗಿವೆ.

ಬೇತಾಳನ ಕಾಟ!

ಮುಂಡರಿಗಿಯ ಒಬ್ಬ ಗೃಹಸ್ಥರ ಮನೆಯಲ್ಲಿ ಕಳೆದ ಮಂಗಳ ವಾರದಿಂದ ಬೇತಾಳನ ಚೇಷ್ಟೆ ಪ್ರಾರಂಭವಾಗಿದೆಯಂತೆ. ಮನೆಯಲ್ಲಿ ಒಮ್ಮೆಲೇ ಕಲ್ಲು ಬಂದು ಬೀಳುವುದು, ಇದ್ದ ಪದಾರ್ಥಗಳು ಇಲ್ಲದಂತಾಗುವುದು, ಇಲ್ಲದ ವಸ್ತುಗಳು ಬರುವುದು, ವಸ್ತ್ರಕ್ಕೆ ಬೆಂಕಿ ತಗಲಿ ಸುಟ್ಟುಹೋಗುವುದು ಮೊದಲಾದ ಚೇಷ್ಟೆಗಳಾಗುತ್ತವೆಯಂತೆ. ಕಣ್ಣಿಗೆ ಕಾಣುವವರ ಕಾಟ ತಾಳುವುದೇ ಕಷ್ಟ. ಹೀಗೆ ಕಾಣದ ಕಾಟ ತಾಳುವುದು ಹೇಗೆ? ಮರಣೋತ್ತರ ಜೀವವಿರುವುದಿಲ್ಲವೆಂಬುವವರು ಪದಾರ್ಥ ಶಾಸ್ತ್ರಜ್ಞರು ಇದನ್ನು ಶೋಧಿಸಬಾರದೇ? ಭಾನುಮತಿ ಮಾಡಿಸುತ್ತಾರೆಂಬುದು ವಾಡಿಕೆ. ಅದಾವ ವಿದ್ಯೆಯೋ ಅರಿತವರು ತಿಳಿಸಿ ಅದೃಶ್ಯ ಶಕ್ತಿಯ ಮಹತ್ವವನ್ನು ಈಗಿನ ಶಾಸ್ತ್ರೀಯ ಯುಗದಲ್ಲಿ ಮುಂದರಿಸಬಾರದೆ?

ಉಪೋಷಣೆಯ ವಿಜಯ!

ನಗ್ನ ಜೈನ ಮುನಿಗಳಾದ ಶ್ರೀ ಜಯಸಾಗರ ಮಹಾರಾಜರು ಹೈದರಾಬಾದಿನಲ್ಲಿ ಪ್ರಾಣಾಂತ್ಯದವರೆಗಿನ ಉಪವಾಸ ವ್ರತವನ್ನು ಪ್ರಾರಂಭಿಸಿದ್ದರಷ್ಟೆ. ನೈಜಾಮ ಸರಕಾರದವರು ಕೊನೆಗೆ ತಮ್ಮ ಅಪ್ಪಣೆಯನ್ನು ತಿರುಗಿ ತೆಗೆದುಕೊಂಡು ಆ ಮುನಿಗಳು ಬತ್ತಲೆ ಸಂಚರಿಸಬಹುದೆಂದು ಒಪ್ಪಿಗೆ ಕೊಟ್ಟರು. ಈ ಮುನಿಗಳು ೧೩ ದಿವಸಗಳವರೆಗೆ ಉಪೋಷಣೆ ಮಾಡಿದ ನಂತರ ಈ ಪ್ರಕಾರ ಅವರಿಗೆ ತಮ್ಮ ಧರ್ಮದಂತೆ ಸಂಚರಿಸಲು ಅವಕಾಶ ದೊರೆಯಿತು. ಉಪೋಷಣೆಯನ್ನು ಬಿಟ್ಟರು. ಇದೊಂದು ಉಪೋಷಣೆಯ ವಿಜಯವೇ ಸರಿ.

ಮುಂದಿನ ೫೦ ವರುಷಗಳ ಹಿಂದುಸ್ಥಾನ.

ಈ ದೇಶದಲ್ಲಿ ಅಸಿಸ್ಟಂಟ್ ಕಲೆಕ್ಟರ ಕೆಲಸದಿಂದ ಗವ್ಹರ್ನರ್ ಕೆಲಸದವರೆಗೆ ಅಧಿಕಾರಗಳನ್ನು ನಡೆಯಿಸಿ ಈಗ ಲಂಡನ್ನಿನಲ್ಲಿ ಮುಂದಣ ರಾಜಕೀಯ ಸುಧಾರಣೆಯ ಕಾರ್ಯಕ್ಕೆ ನೆರವಾಗಿರುವ ಸರ್. ಮಾಲಕಂ ಹೆಲೆ ಎಂಬುವವರು ಆಕ್ಸಫರ್ಡ ರಾಯಲ್ ಎಂಪಾಯರ್ ಸೊಸಾಯಟಿಯ ಶಾಲೆಯಲ್ಲಿ ರಾಜಕೀಯ ದೃಷ್ಟಿಯಿಂದ ಹಿಂದುಸ್ಥಾನವು ಮುಂದಣ ೫೦ ವರುಷಗಳಲ್ಲಿ ಹೇಗಿರುವುದೆಂಬುದನ್ನು ತಮ್ಮ ಭಾಷಣಚಿತ್ರದಿಂದ ಈ ಪ್ರಕಾರ ಚಿತ್ರಿಸಿದರು.

"ಬಹುಜನ ಬ್ರಿಟಿಶ್ ಅಧಿಕಾರಿಗಳು ಕಡಿಮೆಯಾಗುವರು. ಸೈನ್ಯ ಶಾಖೆಯಲ್ಲಿ ಹಿಂದಿ ಅಧಿಕಾರಿಗಳು ಹೆಚ್ಚುವರು. ನಿಜವಾದ ರಾಷ್ಟ್ರೀಯತ್ವವು ಹಿಂದು ಜನಗಳಲ್ಲುಂಟಾಗಿ ಅವರು ಸಮಾನತ್ವದಿಂದ ಆಗಲೂ ಇರಲಾರರು. ಹಿಂದುಸ್ಥಾನವು ಬಹು ವಿಶಾಲವಾದ ದೇಶವು. ನಾನಾ ಮತಪಂಥ ಜಾತಿಗಳ ತೊಡಕು ಹೆಚ್ಚು. ಕೆಲವು ಸುಶಿಕ್ಷಿತರು ಈ ಜಾತಿಯ ತೊಡಕಿನಿಂದ ಬೇರೆಯಾಗಿದ್ದರೂ ಬಹು ಸಂಖ್ಯಾಕರು ಜಾತಿಯ ತೊಡಕಿನಲ್ಲಿಯೇ ಇರುವರು. ಹಿಂದಿ ಭಾಷೆಯು ಆಗಲೂ ರಾಷ್ಟ್ರೀಯ ಭಾಷೆಯಾಗಲಾರದು. ಇಂಗ್ಲೀಷ ಕಲಿಯುವುದರ ಕಡೆಗಿರುವ ಪ್ರವೃತ್ತಿಯು ಕಡಿಮೆಯಾಗುವುದಿಲ್ಲ." ಇದೇ ಹೆಲೆ ಸಾಹೇಬರಿಗೆ ತೋರಿದ ಭಾರತೀಯರ ಮುಂದಣ ೫೦ ವರುಷಗಳ ರಾಜಕೀಯ ಅಭಿವೃದ್ಧಿ ದೃಶ್ಯ!

—ಕರಾಚಿಯಲ್ಲಿ ಶಾಸನಭಂಗದ ವ್ಯಾಖ್ಯಾನ ಮಾಡಿದುದಕ್ಕಾಗಿ ಸ್ವಾಮಿ ಕೃಷ್ಣಾನಂದ ಎಂಬುವವರಿಗೆ ಒಂದು ವರುಷದ ಕಠಿಣ ಶಿಕ್ಷೆಯಾಯಿತು.

ಸಮಾಚಾರ ಸಂಗ್ರಹ.

—ಪಂಡಿತ ಜವಾಹರಲಾಲ ನೆಹರುರವರು ತಾ. ೧೨ನೆಯ ಸೆಪ್ಟೆಂಬರ ದಿನ ಬಿಡುಗಡೆ ಹೊಂದುವರು. ಇವರು ಮೊದಲು ಅಲಹಾಬಾದಿಗೆ ಹೋಗಿ ಅನಂತರ ತಮ್ಮ ಕನ್ಯೆಯನ್ನು ಕಾಣಲು ಪುಣೆಗೆ ಬರುವರಂತೆ.

—ಪಂಜಾಬದ ರಾವಿ ನದಿಗೆ ಮಹಾ ನೆರೆ ಬಂದಿದ್ದಿತು, ಆದರೂ ತಾ' ೨೧ನೆಯ ಗ್ರಹಣದ ಕಾಲಕ್ಕೆ ೪೦ ಸಾವಿರ ಜನರು ಸ್ನಾನ ಮಾಡಿದರು. ಅವರಲ್ಲಿ ೬ ಜನರು ನದಿಯಲ್ಲಿ ಮುಳುಗಿ ಆ ದಿನ ಮೃತಪಟ್ಟರು.

—ಪಾಯೋನಿಯರ್ ಪತ್ರಿಕಾ ಕರ್ತರು ಹಿಂದುಸ್ಥಾನದ ಪತ್ರಿಕಾ ವ್ಯವಸಾಯವನ್ನು ಕುರಿತು ಭಾಷಣ ಮಾಡಿದಾಗ ಮುದ್ರಣದ ವಿಷಯದಲ್ಲಿರುವ ಅಶ್ರದ್ಧೆಯು ಈ ದೇಶದ ಪತ್ರಿಕೆಗಳಲ್ಲಿ ಒಂದು ಮುಖ್ಯವಾದ ದೋಷವೆಂದು ತಿಳಿಸಿದರು.

—ಭಾವನಗರದ ಬಾಲ ಮಂದಿರ, ಮಾಂಟೆಸರಿ ಅಧ್ಯಾಪನ ಮಂದಿರ ಈ ಸಂಸ್ಥೆಗಳ ವಿದ್ಯಾರ್ಥಿಗಳು ಶುದ್ಧ ಖಾದಿಯನ್ನೇ ಧರಿಸಬೇಕೆಂದು ಆಯಾಯ ಸಂಸ್ಥೆಗಳ ಯಜಮಾನರು ಅಪ್ಪಣೆ ಮಾಡಿದ್ದಾರೆ.

—ಭಾವನಗರದ ವಿನಯ ಮಂದಿರದಲ್ಲಿಯ ವಿದ್ಯಾರ್ಥಿಗಳು ತಾವು ಸ್ವತಃ ತೆಗೆದ ನೂಲಿನ ಬಟ್ಟೆಗಳನ್ನೇ ಉಪಯೋಗಿಸುತ್ತಿದ್ದಾರೆ.

—ಗಾಂಧೀಜಿಯವರ ಪರಮ ಶಿಷ್ಯರಲ್ಲಿ ಒಬ್ಬರಾದ ಮಿಸ್. ಮಿರಾಬೆನ್‌ರವರು ತಾ. ೨೨ನೆಯ ದಿವಸ ಸಾಬರಮತಿ ಕಾರಾಗೃಹದಿಂದ ಬಿಡುಗಡೆ ಹೊಂದಿದರು. ಕೂಡಲೇ ಇವರು ಗಾಂಧೀಜಿಯವರ ದರ್ಶನಕ್ಕಾಗಿ ಪುಣೆಗೆ ಹೊರಟರು.

—ಹೈದರಲ್ಲಿ ಮತ್ತು ಟೀಪು ಸುಲ್ತಾನರ ವಂಶಜರು ಏನೋ ಅರ್ಜಿ ಮಾಡಿಕೊಂಡಿದ್ದಾರೆ. ಅದರ ಆಲೋಚನೆ ಸರಕಾರದಲ್ಲಿ ನಡೆದಿದೆ.

—ಭೋರ ಸಂಸ್ಥಾನದಲ್ಲಿ ೫ ವರುಷಗಳ ಕೆಳಗಿನ ಬಾಲಕಿಯರು, ೧೬ ವರುಷಗಳ ಕೆಳಗಿನ ತರುಣರು ವಿವಾಹವಾಗುವುದು ಅಪರಾಧವೆಂದು ಒಂದು ಶಾಸನವು ಆಗುವುದಿದೆ.

—ಸರ್ದಾರ ಶಾರ್ದೂಲ ಸಿಂಗರಿಗೆ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೫೦೦ ರೂ. ದಂಡವನ್ನು ವಿಧಿಸಿದರು. ಇವರಿಗೆ ಅ ತರಗತಿಯನ್ನು ಕೊಟ್ಟಿದ್ದಾರೆ.

—ಬೆಳಗಾವಿ ಮತ್ತು ಸುತ್ತಲಿನ ಚಿತ್ಪಾವನ ಬ್ರಾಹ್ಮಣರ ಧಾರ್ಮಿಕ, ಸಾಮಾಜಿಕ ಮತ್ತು ಸಾಂಪತ್ತಿಕ ಸುಧಾರಣೆಗಳಿಗಾಗಿ ಪ್ರಯತ್ನಿಸಲು ಬೆಳಗಾವಿಯಲ್ಲಿ ಒಂದು ಚಿತ್ಪಾವನ ಸಂಘವು ಸ್ಥಾಪನೆಯಾಗಿದೆ.

—ಶ್ರೀ. ಪಿ. ಆರ್. ಚಿಕ್ಕೋಡಿಯವರಿಗೆ ದೇಹಾರೋಗ್ಯವಿಲ್ಲದಿದ್ದುದರಿಂದ ಬ್ರಾಹ್ಮಣೇತರ ಯುವಕ ಪರಿಷತ್ತು ಕಳೆದವಾರ ಮುಂಬಯಿಯಲ್ಲಿ ಕೂಡಲಿಲ್ಲ. ಮುಂದೆ ಸೆಪ್ಟೆಂಬರ್ ತಿಂಗಳಲ್ಲಿ ಕೂಡುವುದು.

—ಹೈದರಾಬಾದಿನಲ್ಲಿ ೭೦ ವರುಷಗಳ ಒಬ್ಬ ಮುದುಕಿಯು ಪಟಾಕಿಗಳನ್ನು ಮಾಡುತ್ತಿದ್ದಳು. ಈ ಮುದುಕಿಗೆ ಬೀಡಿ ಸೇದುವ ಚಟ ಹೆಚ್ಚು. ಬೀಡಿ ಸೇದುವಾಗ ಪಟಾಕಿ ಮದ್ದಿಗೆ ಬೆಂಕಿ ಹತ್ತಲು ಆ ಮುದುಕಿಯು ಅಲ್ಲಿಯೇ ಸುಟ್ಟು ಸತ್ತು ಹೋದಳು.

ಭಾರತೀಯ

ಧನ ಸಾಮ್ರಾಟರ ಮೆಚ್ಚಿಗೆ!

ಕರ್ನಾಟಕ ನೂತನ ಕಲಾವೈಭವ.

ಸಿದ್ಧೇಶ್ವರ ಕಂಪನಿಯ ಅಪೂರ್ವ ಪ್ರಾವಿಣ್ಯ.



ನಿಜಾಮು ಸರಕಾರದ ಸ್ಟೇಟ ಬ್ಯಾಂಕಿನ ಹೆಬ್ಬಾಗಿಲು.

ಭಾರತೀಯ ಧನಸಾಮ್ರಾಟರಾದ ಹೈದ್ರಾಬಾದ ನಿಜಾಂ ಸರಕಾರದವರು ಸಿದ್ಧೇಶ್ವರ ಕಂಪನಿಂ
ಅದ್ವಿತೀಯ ಕಲಾವೈಭವವನ್ನು ನೋಡಿ ಸಂತೋಷಪಟ್ಟು ಸಾವಿರಾರು ರೂ. ಬೆಲೆಬಾಳುವ
ಅನೇಕ ಟ್ರೆಜರಿಗಳನ್ನು ತೆಗೆದುಕೊಂಡದ್ದಲ್ಲದೆ ತಮ್ಮ ಸ್ಟೇಟ್ ಬ್ಯಾಂಕಿಗೆ
ಅಪೂರ್ವವಾದ, ಅತಿಸುಂದರವಾದ, ಎಲೆಕ್ಟ್ರಿಕ್ ಅಥವಾ ಆ್ಯಕ್ಸಿಜನ್ ಗ್ಯಾಸುಗಳಿಂ
ಸಹ ಅಪಾಯ ಹೊಂದದಂಥ ಬಹು ಭದ್ರವಾದ ಹೆಬ್ಬಾಗಿಲವನ್ನು ಮಾಡಿಸಿಕೊಂಡಿದ್ದಾರೆ.

ಇಂಥ ಸುಪ್ರಸಿದ್ಧ ಸಿದ್ಧೇಶ್ವರ ಕಂಪನಿಯಿಂದ ನಿಮಗೆ ಬೇಕಾದಂಥ ಟ್ರೆಜರಿ, ಕ್ಯಾಶ್‌ಬಾಕ್ಸ
ಮೊದಲಾದವುಗಳನ್ನು ಮಾಡಿಸಿಕೊಂಡು ನಿಮ್ಮ ಹಣವನ್ನು ಭದ್ರವಾಗಿಟ್ಟುಕೊಳ್ಳಬಾರದೇ?

ಸಿದ್ಧೇಶ್ವರ ಆ್ಯಂಡ್ ಕೋ. ಹುಬ್ಬಳ್ಳಿ.

ಹೆಡ್ ಆಫೀಸ್:— ಹುಬ್ಬಳ್ಳಿ. ಬ್ರ್ಯಾಂಚ್ ಆಫೀಸ್:—ಅಬಿಡ್ಸ ಬಿಲ್ಡಿಂಗ್ ಹೈದರಾಬಾ

ಗೌರೀಶಂಕರ ನಿವಾಸ.
ಮುಂಬಯಿ.

ಸೋದರರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಢಕ್ಕೆ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಫೀಸಿಗೂ, ಛಾಪದ ಕಾನಗಳಿಗೂ, ಸಿನೇಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪ ದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ನಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
(೪೫) ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಇಸುಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಧಿಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಚರ್ಬಿ (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದ ಕ್ರಿಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ ಜಾಯಿಕಾಯಿ**ಗುಳಿಸ** ಹೂವುಗಳ ಸತ್ವವು ಅಧಿಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ ಇವರಿಂದ ತಯಾರಿಸಲ್ಪಟ್ಟ

" ಕಚ್ಯೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಸೂಚನೆ—ಔಷಧಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಪಲ್ಲಾಳಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

|| ಶ್ರೀ ಸಂಗನೋಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಶ್ರೀರಾಮ ವೀವ್ಹಿಂಗ್ ಮಿಲ್ಸ್

ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ.

ಪತ್ತಲಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ ಥಳಥಳ ಹೊಳವು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಿದ ನುಣ್ಣನ ನೂಲು. ಬಹು ತಾಳಿಕೆ.

ಹೀಗಿದ್ದರೂ ಬಹು ಅಗ್ಗ.

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ?

ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
**ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.** } **ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಕಿಂಮತ್ತಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಸಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ.
ಪೋ. **ಹಂಚಲಿ.**
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ** ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B.2891

ಶರಣ ಸಂದೇಶ

The *Sharana Sandesh.*

ನ್ಯಾಯನಿಷ್ಠುರ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ ೨೨೮ || ಮಹಾನುಭಾವಿ ಬಸವಣ್ಣನವರು

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ
ವಾರ್ಷಿಕ ಚಂದಾ - ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪು | ಆಲಮಟ್ಟಿ- ಸೋಮವಾರ ತಾರೀಖು ೪ ನೆಯ ನವ್ಹೆಂಬರ ೧೯೩೩. | ಸಂಚಿಕೆ ೫.

ಅನಸೂಯೆ, ದೇವರ ಸೇವೆ

ಪಂ. ಜವಾಹರಲಾಲರ ಬಿಡುಗಡೆ.

ಮಾತೆಯ ಸಂದರ್ಶನ.

ತಾ. ೩೦-೮-೩೩ನೆಯ ದಿವಸ ರಾಷ್ಟ್ರವೀರ ಪಂ. ಜವಾಹರಲಾಲ ನೆಹರುರವರನ್ನು ಸರಕಾರದವರು ಕಾರಾಗೃಹದಿಂದ ಬಿಟ್ಟರು. ಈ ತಿಂಗಳು ೧೪ನೆಯ ತಾರೀಖಿಗೆ ಇವರ ಶಿಕ್ಷೆಯ ಅವಧಿಯು ಪೂರ್ತಿಯಾಗುತ್ತಿದ್ದಿತು.

ಪಂ. ನೆಹರುರವರು.

ರಾಷ್ಟ್ರವೀರರ ತಾಯಿಯವರಾದ ಶ್ರೀ. ಸ್ವರೂಪರಾಣಿಯವರು ತುಂಬಾ ಅಸ್ವಸ್ಥರಾಗಿದ್ದಾರೆ. ಇವರ ಸಂದರ್ಶನಕ್ಕಾಗಿಯೇ ಸರಕಾರದವರು ಮುಂಚೆಯೇ ಬಿಟ್ಟರು.

ತಾ. ೩೧ನೆಯ ದಿವಸ ಲಖನೌ ವೈದ್ಯಾಲಯದಲ್ಲಿ ಪಂಡಿತಜಿಯವರು ತಾಯಿಯವರನ್ನು ಕಂಡರು. ಅವರಿಗೆ ಪರಮಸಂತೋಷವಾಯಿತು.

SANGAM CLOTH STORES
Prop: M S Hundekar & Sons
P.C. TERDAL
... apur, (Karnataka)

ದೇಹವೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟ.
ರವಿವಾರಪೇಟಿ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೀ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೀ? ಕಳ್ಳರು ಕನ್ನ ಮಾಡಿಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮೂರುವರು ಬಾಳ ಆಗಿ ಅಗ್ಗ ಮಾರಾಟ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವ್ರ ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕಿನ್ನೂ ಮೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟ** ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ, ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ನಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಜಲಪುಟ್ಟಿ ಪೋ ಜಲಪುಟ್ಟಿ ಜಿ. ವಿಜಾಪುರ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಸಪ್ಟೆಂಬರ ತಾರೀಖು ೪ ನೆಯ ಸೋಮವಾರ | ಸಂಚಿಕೆ ೫.

ಪಂಡಿತಜಿಯುವರ ಮೊದಲನೆಯ ಭಾಷಣ.

ಪಂಡಿತ ಜವಾಹರಲಾಲ ನೆಹರುರವರು ತಾ. ೩ನೆಯ ದಿವಸ ಬಿಡುಗಡೆ ಹೊಂದಿದ ನಂತರ ಆ ದಿನ ರಾತ್ರಿ ಅಲಾಹಾಬಾದಿನಲ್ಲಿ ಸೇರಿದ ಕೆಲವು ಮಿತ್ರರ ಮಧ್ಯದಲ್ಲಿ ಪಂಡಿತಜಿಯುವರು ಒಂದು ಭಾಷಣವನ್ನು ಮಾಡಿದರು. ಕಾರಾಗೃಹದಿಂದ ಬಂದ ನಂತರ ಇದೇ ಇವರ ಮೊದಲನೆಯ ಭಾಷಣವು. ಈ ಭಾಷಣದಲ್ಲಿ ಈ ಪ್ರಕಾರ ಹೇಳಿದರು.

“ರಾಜಕೀಯ ನಾನಾ ಗಲಭೆಗಳಿಂದ ಈಗ ಪ್ರಪಂಚವೇ ಅಲ್ಲೋಲಕಲ್ಲೋಲವಾಗುತ್ತಲಿದೆ. ಫ್ರಾನ್ಸ ದೇಶವೊಂದರ ವಿನಾ ಪ್ರಪಂಚದ ಎಲ್ಲ ರಾಷ್ಟ್ರಗಳ ರಾಜಕೀಯ ಸೂತ್ರವೂ ಆಯಾಯ ರಾಷ್ಟ್ರಗಳ ಒಂದೇ ವ್ಯಕ್ತಿಯ ಅಧೀನವಾಗಿದೆಯೆಂದು ಹೇಳಬಹುದು. ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾದ ರೂಜವೆಲ್ಟರವರು ಕೂಡಾ ಆ ರಾಷ್ಟ್ರಕ್ಕೆ ವಿಶಾಲಹೃದಯದ ಒಬ್ಬ ಸರ್ವಾಧಿಕಾರಿಗಳಾಗಿಯೇ ಪರಿಣಮಿಸಿದ್ದಾರೆ.

ಈಗ ಪ್ರಪಂಚದ ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮಲ್ಲಿಯ ಉದ್ಯೋಗಾಭಿವೃದ್ಧಿಗಾಗಿ ಪರದೇಶಿ ಪದಾರ್ಥಗಳ ಮೇಲೆ ವಿಶೇಷವಾದ ಸುಂಕವನ್ನು ಹೇರಲಾರಂಭಿಸಿವೆ. ಇದರಿಂದ ಕೊನೆಗೆ ಎಲ್ಲ ರಾಷ್ಟ್ರಗಳೂ ತೊಂದರೆಗೀಡಾಗಿ ಬಹು ತೊಡಕಿನಲ್ಲಿ ಬೀಳುವವು. ಈಗ ಅಂತರ ರಾಷ್ಟ್ರೀಯ ಪರಿಷತ್ತುಗಳು ವಿಶೇಷವಾಗಿ ಅಲ್ಲಲ್ಲಿ ಸೇರುತ್ತಲಿವೆ. ಹಿಂದು ಮುಸಲ್ಮಾನರ ಐಕ್ಯದ ಪ್ರಯತ್ನವು ಹೇಗೆ ವಿ ಫ ಲ ವಾ ಯಿ ತೋ ಹಾಗೆಯೇ ಬೇರೆಬೇರೆ ರಾಷ್ಟ್ರಗಳ ಐಕ್ಯದ ಈ ಪ್ರಯತ್ನವೂ ನಿರರ್ಥಕವಾಗುವುದು.

ಈಗ ಜಗತ್ತಿಗೆ ಆವಶ್ಯಕವಿರುವದಕ್ಕಿಂತಲೂ ಹೆಚ್ಚಾದ ಪದಾರ್ಥಗಳುಂಟಾಗುತ್ತಲಿವೆ. ಆದರೆ ಗಿರಾಕಿಗಳೇ ಇಲ್ಲ. ಆದುದರಿಂದ ಪದಾರ್ಥವನ್ನು ನಾಶಮಾಡಬೇಕಾಗಿದೆ. ಬ್ರಾಝಿಲದಲ್ಲಿ ಹೆಚ್ಚಾಗಿ ಬೆಳೆದ ಕಾಫಿ ಮತ್ತು ಗೋದಿಗಳನ್ನು ಆ ದೇಶದವರು ನಾಶಮಾಡಿದರು.”

ವರ್ಣಾಶ್ರಮ ಸ್ವರಾಜ್ಯ ಸಂಘದ ವಿಚಿತ್ರ ಸಾಕ್ಷಿ !

ಜೆ. ಪಿ. ಕಮಿಟಿಯಲ್ಲಿ ಶ್ರೀ. ಎಂ. ಕೆ. ಆಚಾರ್ಯರ ಸಾಕ್ಷಿಯಾಯಿತು. ಆಗ ಪ್ರಶ್ನೋತ್ತರಗಳು ಈ ಪ್ರಕಾರ ನಡೆದವು—

ಮಾರ್ಕ್ವಿಸ್ ಆಫ್ ಝೆಟ್‌ಲ್ಯಾಂಡ—ಆಚಾರ್ಯರೆ, ವರ್ಣಾಶ್ರಮ ಸ್ವರಾಜ್ಯ ಸಂಘಕ್ಕೂ ಹಿಂದೂ ಮಹಾಸಭೆಗೂ ಅಂತರವೇನು? ಆಚಾರ್ಯ— ಹಿಂದೂ ಮಹಾ ಸಭೆಯು ಪಾಷಂಡರ ಸಭೆಯು. ವರ್ಣಾಶ್ರಮ ಸ್ವರಾಜ್ಯ ಸಂಘವು ೧೭ ಕೋಟಿ ಜನರ ಸಭೆಯಿರುತ್ತದೆ. ಬ್ರಿಟಿಶ್ ಹಿಂದುಸ್ಥಾನದಲ್ಲಿ ೧೭ ಕೋಟಿ ೭೦ಲಕ್ಷ ಹಿಂದುಗಳಿದ್ದಾರೆ. ಅವರಲ್ಲಿ ೧೭ ಕೋಟಿ ಜನರು ಪಾಷಂಡಿಗಳಲ್ಲ ಅಥವಾ ದೇಶಘಾತಕರೂ ಅಲ್ಲ. ಅವರಿಂದುಂಟಾದುದೇ ನಮ್ಮ ವರ್ಣಾಶ್ರಮ ಸ್ವರಾಜ್ಯ ಸಂಘವು. ಎಮ್. ಆರ್. ಜಯಕರ್—ಪಂ. ಮಾಲವೀಜಿಯವರು ದೇಶ ಘಾತಕರೂ, ಪಾಷಂಡಿಗಳೂ ಇರುವರೇ ? ಮಿ. ಆಚಾರ್ಯ— ಅವರು ಈಗ ಹಿಂದೂ ಮಹಾಸಭೆಯಲ್ಲಿಲ್ಲ. ಮಿ. ಜಯಕರ— ಅವರು ಹಿಂದಕ್ಕೆ ಇದ್ದಿಲ್ಲವೆ? ಆಚಾರ್ಯ— ಅವರು ಹಿಂದೂ ಸಭೆಯನ್ನು ಬಿಟ್ಟ ನಂತರ ನಮ್ಮ ಸಂಘವು ಸ್ಥಾಪನೆಯಾಯಿತು. ಮಿ. ಝೆಟಲ್ಯಾಂಡ— ಅಂದರೆ ಅವರು ನಿಮ್ಮ ಸಂಘಕ್ಕೆ ಸೇರಿದವರೋ? ಮಿ. ಆಚಾರ್ಯ—ಮಾಲವೀಯವರು ಒಳ್ಳೇ ಹಿಂದುಗಳು. ಆದರೆ ಅವರು ಪುಣೆಯ ಕರಾರಿನಲ್ಲಿ ಪ್ರಯತ್ನ ಮಾಡಿದ್ದೊಂದು ಬಹು ದೊಡ್ಡ ತಪ್ಪು (Blunder). ಮಿ. ಝೆಟಲ್ಯಾಂಡ—ಎಂದಮೇಲೆ ಅವರನ್ನು ನಿಮ್ಮ ಸಂಘದಿಂದತೆಗೆದು ಹಾಕಿದಿರಾ? ಮಿ. ಆಚಾರ್ಯ— ಹೌದು ಅದೇ ಅದರ ಅರ್ಥವು. ಆಚಾರ್ಯರ ಹೇಳಿಕೆಯನ್ನು ನೋಡಿರಿ. ಸುಳ್ಳು ಹೇಳುವದೂ ಒಂದು ಸನಾತನಿಗಳ ಲಕ್ಷಣವಿರಬಹುದೇನು?

ವೀರಶೈವ ಲೇಖ ಸಂಗ್ರಹ.

(ಲೇಖಕರು- ಶ್ರೀ ಬಂಡೆಪ್ಪ ರೇವಣಸಿದ್ದಪ್ಪ ಝುಂಜೆ ವಕೀಲ ಸೊಲ್ಲಾಪುರ.)

ಇದೊಂದು ಮರಾಠಿ ಪುಸ್ತಕವು. ವಿಮರ್ಶನೆಗಾಗಿ ಬಂದಿದೆ. ಇದನ್ನು ಶ್ರೀ ಝುಂಜೆ ವಕೀಲರು ಬರೆದಿದ್ದಾರೆ. ಕ್ರಯ ಆರು ಆಣೆ. ಆರಂಭದಲ್ಲಿ ಇವರ ಚಿತ್ರವೂ ಇದೆ. ಉರುಟು ಕಾಗದದಲ್ಲಿ ಸಾಧಾರಣವಾಗಿ ಅಚ್ಚಾಗಿದೆ. ಇದರಲ್ಲಿ ೬೬ ಪುಟಗಳಿವೆ.

ಲೇಖಕರು ತಮ್ಮ ಪ್ರವಾಸದ ಅನುಭವವನ್ನು ಈ ಪುಸ್ತಕದಲ್ಲಿ ಹೆಚ್ಚಾಗಿ ಬರೆದಿದ್ದಾರೆ. ವೀರಶೈವ ಸಮಾಜಕ್ಕೂ ಸೊಲ್ಲಾಪುರದ ವೀರಶೈವರಿಗೂ ಜಾಗ್ರತರಾಗಲು ಮೊದಲು ಎಚ್ಚರಿಸಿದ್ದಾರೆ. ಕೊನೆಯಲ್ಲಿ 'ವೀರಶೈವಾವನತಿ' ಎಂಬ ಒಂದು ಪ್ರಕರಣದಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟೀಕರಿಸಿದ್ದಾರೆ. ಮರಾಠಿಯಲ್ಲಿ ವೀರಶೈವ ಧಾರ್ಮಿಕ ಸಾಮಾಜಿಕ ಪುಸ್ತಕಗಳು ಬಹು ಕಡಿಮೆ. ಶ್ರೀ ಬಂಡಪ್ಪನವರ ಈ ಪ್ರಯತ್ನವು ಅತ್ಯಂತ ಸ್ತುತ್ಯವಾದುದಾಗಿದೆ.

ಇವರು ವೀರಶೈವಾವನತಿ ಎಂಬ ಪ್ರಕರಣದಲ್ಲಿ ವ್ಯಕ್ತಗೊಳಿಸಿದ ಕೆಲವು ವಿಚಾರಗಳು ವೀರಶೈವರ ಅವನತಿಯನ್ನು ನಿವಾರಣೆ ಮಾಡಲು ಕಾರಣವಾಗಿರದೆ ಅವನತಿಯನ್ನು ಹೆಚ್ಚಿಸಲು ಸಾಧನವಾಗಿವೆಯೆಂದು ತುಂಬಾ ವಿಷಾದದಿಂದ ಹೇಳಬೇಕಾಗಿದೆ. ವೀರಶೈವ ಮತತತ್ವಗಳನ್ನು ಇವರು ಚೆನ್ನಾಗಿ ಪರಿಶೀಲಿಸಿದ್ದರೆ ಈ ಪ್ರಕಾರ ಬರೆಯುತ್ತಿರಲಿಲ್ಲವೆಂದೇ ನಮಗೆ ತೋರುತ್ತದೆ. ಆ ಪ್ರಕರಣದಲ್ಲಿ ಈ ಪ್ರಕಾರ ಬರೆದಿದ್ದಾರೆ.

"ವೀರಶೈವರಲ್ಲಿ ನಿತ್ಯ ಬಳಕೆಯ ಪದಾರ್ಥಗಳೆಲ್ಲವೂ ವೀರಶೈವರಿಂದಲೇ ಎಂದರೆ ಶಿವಲಿಂಗಧಾರಿಗಳಿಂದಲೇ ದೊರೆಯಬೇಕೆಂದು ವೀರಶೈವರಲ್ಲಿ ನೇಯುವವರು, ಬಣ್ಣ ಕೊಡುವವರು, ಬಟ್ಟೆ ತೊಳೆಯುವವರು ಮುಂತಾದ ಒಳಪಂಗಡದವರುಂಟಾದರು. ಇದೇ ತತ್ವದಿಂದಲೇ ಮೊಚ್ಚಿಗಾರರ, ಡೋಹರರ ಮುಂತಾದ ಉಪಜಾತಿಗಳೂ ಉಂಟಾದವು.

ವೀರಶೈವ ಧರ್ಮವು ಪಂಚಾಚಾರ್ಯರಿಂದ ಉತ್ಪನ್ನವಾದ ಕಾರಣ ಸಕಲ ವೀರಶೈವರೂ ಮೊದಲು ಪಂಚಮರೇ ಸರಿ. ಉಪನಯನವಾಗದ ವಿನಾ ಬ್ರಾಹ್ಮಣರಲ್ಲಿ ಹೇಗೆ ಬ್ರಾಹ್ಮಣ್ಯವು ಬರುವುದಿಲ್ಲವೋ ಹಾಗೆಯೇ ವೀರಶೈವರು ದೀಕ್ಷೆಯನ್ನು ಹೊಂದದೆ ವೀರಶೈವತ್ವಕ್ಕೆ ಪಾತ್ರರಾಗುವುದಿಲ್ಲ. ಆದಕಾರಣ ವೀರಶೈವರಲ್ಲಿ ಯಾರು ದೀಕ್ಷೆಯನ್ನು ಹೊಂದಿದರೋ ಅವರು ದೀಕ್ಷಾವಂತರೆನ್ನುತ್ತಾರೆ. ದೀಕ್ಷೆಯಾದ ನಂತರ ಯಾರು ವಿಶಿಷ್ಟ ಆಚಾರವನ್ನು ನಡೆಯಿಸಲಾರಂಭಿಸಿದರೋ ಅವರಿಗೆ ಶೀಲವಂತರೆಂದು ಹೇಳುತ್ತಾರೆ.

ದೀಕ್ಷಾವಂತರು ದೀಕ್ಷಾವಂತರಲ್ಲಿ, ಶೀಲವಂತರು ಶೀಲವಂತರಲ್ಲಿ, ಪಂಚಮರು ಪಂಚಮರಲ್ಲಿ, ಚಟ್ಟೇರು ಚಟ್ಟೇರಲ್ಲಿ, ಹಟಗಾರರು ಹಟಗಾರರಲ್ಲಿ ಈ ಪ್ರಕಾರ ಆಯಾಯ ಒಳಪಂಗಡದವರು ತಮ್ಮ ತಮ್ಮ ಉದ್ಯೋಗದವರಲ್ಲಿಯೇ ಊಟೋಪಚಾರ ಮತ್ತು ದೇಹಸಂಬಂಧವನ್ನು ಮಾಡಬೇಕು.

ಬ್ರಾಹ್ಮಣಾದಿ ವರ್ಣದವರಲ್ಲಿ ಸನಾತನ ಧರ್ಮಾಭಿಮಾನಿಗಳೂ ಸುಧಾರಕರೂ ಎಂಬೆರಡು ಭೇದಗಳು ಹೇಗಿವೆಯೋ ಹಾಗೆಯೇ ವೀರಶೈವರಲ್ಲಿ ಒಳಭೇದಗಳಿವೆಯೆಂಬುವವರು ಮತ್ತು ಇಲ್ಲವೆಂಬುವವರು ಎಂಬ ಎರಡು ಪಂಗಡಗಳಿವೆ. ವೀರಶೈವರಲ್ಲಿ ಜಾತಿಭೇದಗಳಿಲ್ಲವೆನ್ನುವವರು ಬಸವೇಶ್ವರಾದಿ ಧರ್ಮ ಸಂಸ್ಥಾಪಕರ ವಾಕ್ಯಗಳನ್ನು ಆಧಾರವಾಗಿ ಕೊಡುತ್ತಿದ್ದಾರೆ.

ಬಸವೇಶನು ಜೀವ ಶಿವೈಕ್ಯ ಸ್ಥಿತಿಯಲ್ಲಿದ್ದನು. ಡೋಹರ ಮಾದರ ಜಾತಿಯ ಅನೇಕ ಸತ್ಪುರುಷರೂ ಜೀವ ಶಿವೈಕ್ಯ ಸ್ಥಿತಿಯಲ್ಲಿದ್ದರು. ಅವರಿಬ್ಬರೂ ಅಂತಹ ಸ್ಥಿತಿಯಲ್ಲಿ ಒಂದಾಗಿ ನಡೆದಿದ್ದರು. ಅವರ ಆಚರಣೆಯು ವ್ಯಾವಹಾರಿಕವಾದುದಲ್ಲ. ನಾವು ನಮ್ಮ ನಮ್ಮ ಉದ್ಯೋಗ ಆಚಾರದವರಲ್ಲಿಯೇ ಊಟೋಪಚಾರಾದಿಗಳನ್ನು ಮಾಡಬೇಕು. ಇವುಗಳನ್ನೆಲ್ಲಾ ತೆಗೆದುಹಾಕಿ ಎಲ್ಲಾ ಕೂಡಿಸುವ ವ್ಯರ್ಥ ಪ್ರಯತ್ನವನ್ನು ಯಾರೂ ಮಾಡಬಾರದು."

ಈ ಪ್ರಕಾರ ಶ್ರೀ. ಬಂಡೆಪ್ಪನವರು ವೀರಶೈವರಲ್ಲಿರತಕ್ಕ ಈಗಿನ ಒಳಪಂಗಡಗಳಿರಬೇಕೆಂದು ಪ್ರತಿಪಾದಿಸಿದ್ದಾರೆ. ಇವುಗಳನ್ನು ತೆಗೆದು ಹಾಕಲು ಪ್ರಯತ್ನಿಸುವುದು ಅವರಿಗೆ ಅವನತಿಯ ಮಾರ್ಗವಾಗಿದೆ! ಇವರ ಈ ಪ್ರತಿಪಾದನೆಯ ನಿಜಾಂಶವನ್ನು ನಿಷ್ಪಕ್ಷಪಾತವಾಗಿ ಯೋಚಿಸಿದ್ದಾದರೆ ಇವರ ವಿಚಾರವು ಎಷ್ಟು ತಪ್ಪಾದುದೂ ಅವನತಿಗೆ ಕಾರಣವಾದುದೂ ಇದೆಯೆಂಬುದು ಗೊತ್ತಾಗುತ್ತದೆ.

ಎಲ್ಲರೂ ಮೊದಲು ಪಂಚಮರೆಂದೇ ಇವರೂ ಒಪ್ಪಿದ್ದಾರೆ ಮತ್ತು ಉದ್ಯೋಗಶೀಲಾಚಾರಗಳಿಂದಲೇ ಒಳಪಂಗಡಗಳಾದವೆಂತಲೂ ಹೇಳುತ್ತಾರೆ. ಮತ್ತು ಆಯಾಯ ಒಳಪಂಗಡಗಳು ಭಿನ್ನವಾಗಿಯೇ ಇರಬೇಕೆಂದೂ ಪ್ರತಿಪಾದಿಸುತ್ತಾರೆ! ಇದು ಅಸಂಗತವಾಗಿ ಯಾರಿಗೆ ತಾನೆ ತೋರುವುದಿಲ್ಲ?

ಉದ್ಯೋಗವು ಒಂದು ಜಾತಿಯನ್ನೇ ನಿರ್ಮಿಸಿ ಅನ್ಯರಕ್ಷ ಸೇರದಂತೆ ಮಾಡುತ್ತದೆಯೆ? ಹಾಗಾದರೆ ಒಂದು ಮನೆಯಲ್ಲಿ ಒಬ್ಬರು ಒಕ್ಕಲತನವನ್ನು ಮಾಡುತ್ತಾರೆ. ಇನ್ನೊಬ್ಬರು ವ್ಯಾಪಾರ ಮಾಡುತ್ತಾರೆ. ಮತ್ತೊಬ್ಬರು ಡಾಕ್ಟರರಾಗಿರುತ್ತಾರೆ. ಇವರೆಲ್ಲರೂ ಬೇರೆಬೇರೆ ಜಾತಿಯವರೇ? ಇವರು ತಮ್ಮ ತಮ್ಮ ಉದ್ಯೋಗದವರ ಮನೆಗೆ ಹೋಗಿ ಊಟೋಪಚಾರಗಳನ್ನು ಮಾಡಬೇಕೆ? ಶೀಲವಂತರು ಒಕ್ಕಲತನ ಮಾಡಿದರೆ ಯಾವ ಜಾತಿಯವರಾದರು?

ದೀಕ್ಷೆ ಹೊಂದಿ ದೀಕ್ಷಾವಂತರಾದರೆಂದು ಹೇಳಿದ್ದಾರಷ್ಟೆ. ಈಗ ಒಬ್ಬ ನೇಕಾರರು ದೀಕ್ಷೆಯಾದರೆ ಅವರೂ ದೀಕ್ಷವಂತರಾಗುವುದಿಲ್ಲವೇನು? ಒಬ್ಬ ಶೀಲವಂತರಿಗಿಂತ ಇನ್ನೊಬ್ಬ ಹಟಗಾರರು ಹೆಚ್ಚು ಶೀಲಾಚಾರಗಳುಳ್ಳವರಿದ್ದರೆ ಅವರು ಶೀಲವಂತರಲ್ಲೇನು? ಒಬ್ಬರು ವಿಶಿಷ್ಟ ಆಚಾರವನ್ನು ನಡೆಯಿಸಿ ಶೀಲವಂತರಾದರೆ ಅಥವಾ ದೀಕ್ಷೆಯಾದರೆ ಅವರು ಮಾತ್ರ ಶೀಲವಂತರೆ? ದೀಕ್ಷವಂತರೆ? ಅವರ ಕುಟುಂಬ, ಬಂಧು, ಬಾಂಧವರು ಇಷ್ಟೇ ಅಲ್ಲ, ಒಂದು ಪಂಗಡದವರೇ ಶೀಲವಂತರೂ ದೀಕ್ಷವಂತರೂ ಆದರೇನು?

ಶ್ರೀ ಬಸವಾದಿ ಪ್ರಮಥರು ನಾವು ಮಾತ್ರ ಈ ಪ್ರಕಾರ ಆಚರಿಸುತ್ತೇವೆ; ನೀವೂ ನಮ್ಮಂತೆ ಆದಾಗ ಹೀಗೆ ಆಚರಿಸಿರೆಂದು ಎಲ್ಲೆಲ್ಲಿಯೂ ಹೇಳಿಲ್ಲ. ಆದರೆ ಶ್ರೀ. ಬಂಡೆಪ್ಪನವರಂತಹ ವ್ಯಾವಹಾರಿಕ ವಿಚಾರದವರು ಆಗಲೂ ಇದ್ದರು. ಅವರಿಗೆ ನೀವೂ ಒಳಪಂಗಡಗಳನ್ನು ಎಣಿಸಬೇಡಿರೆಂದೇ ಸಾರಿಸಾರಿ ಹೇಳಿದ್ದಾರೆ. ಆದಕಾರಣ ಇಂಥ ತಪ್ಪು ವಿಚಾರನ್ನು ಸಮಾಜದಲ್ಲಿ ಪ್ರಸಾರಗೊಳಿಸಿ ಸಮಾಜವನ್ನು ಛಿದ್ರಗೊಳಿಸುವುದೇ ಅವನತಿಯ ಮಾರ್ಗವು. ವೀರಶೈವ ಮತತತ್ವಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಅವಲೋಕಿಸಿ ಈ ವಿಘಾತಕವಾದ ತಪ್ಪು ವಿಚಾರಗಳನ್ನು ಬಿಡಬೇಕಾಗಿ ಪ್ರಾರ್ಥನೆ.

[ಸಂಪಾದಕ.]

—ಶ್ರೀ. ಜವಾಹರಲಾಲರ ಬಿಡುಗಡೆಯಾದಕೂಡಲೆ ತಮ್ಮ ಮಾತೋಶ್ರೀಯವರನ್ನು ಕಾಣಲು ಲಖನೌ ಕಡೆಗೆ ಪ್ರಯಾಣ ಬೆಳೆಸಿದರು.

ಹಿಂದಣ ೩೦ ವರುಷಗಳ
ವೀರಶೈವ ಸಮಾಜ ಸ್ಥಿತಿ.

ಸಾಂಪತ್ತಿಕ ಅವನತಿ.

ವೀರಶೈವ ಸಮಾಜವು ಕಳೆದ ೩೦ ವರುಷಗಳಲ್ಲಿ ಶಿಕ್ಷಣ ವಿಷಯಕವಾಗಿ ಹೇಗೆ ಮುಂದರಿದಿದೆಯೋ ಹಾಗೆ ಸಾಂಪತ್ತಿಕ ವಿಷಯದಲ್ಲಿ ಮಾತ್ರ ಮುಂದರಿದಿಲ್ಲ. ಇಷ್ಟೇ ಅಲ್ಲ; ಕಲ್ಪನಾತೀತವಾದ ಶೋಚನೀಯ ಸ್ಥಿತಿಗೆ ಬಂದಿದೆಯೆಂದೇ ಹೇಳಬಹುದು.

ಭರತಖಂಡವೇ ದಿನೇದಿನೇ ಸಾಂಪತ್ತಿಕ ಸ್ಥಿತಿಯಲ್ಲಿ ದುರವಸ್ಥೆಗೀಡಾಗುತ್ತಿರುವುದೇನೋ ನಿಜ. ಎಂದ ಮೇಲೆ ಈ ದೇಶದ ಎಲ್ಲ ಸಮಾಜಗಳೂ ಆರ್ಥಿಕ ಅವನತಿಗೊಳಗಾಗಲೇಬೇಕಾಯಿತು. ಆದರೆ ವೀರಶೈವ ಸಮಾಜವು ಈ ಸಾಂಪತ್ತಿಕ ವಿಷಯದಲ್ಲಿ ಹೆಚ್ಚು ಹಿಂದೆ ಬೀಳಲು ಕಾಲಕ್ಕೆ ತಕ್ಕ ಸುಧಾರಣೆಯು ಈ ಸಮಾಜದಲ್ಲಾಗದಿದ್ದುದೇ ಮುಖ್ಯ ಕಾರಣವು.

ವೀರಶೈವ ಸಮಾಜದ ಮುಖ್ಯ ಉದ್ಯೋಗವು ಒಕ್ಕಲತನ. ಎರಡನೆಯ ಉದ್ಯೋಗವೇ ವ್ಯಾಪಾರವು. ಕರ್ನಾಟಕದ ವ್ಯಾಪಾರವೆಲ್ಲಾ ೩೦ ವರುಷಗಳ ಹಿಂದೆ ಹೆಚ್ಚಾಗಿ ವೀರಶೈವರ ಆಧೀನದಲ್ಲಿಯೇ ಇದ್ದಿತು. ಅದು ದಿನೇ ದಿನೇ ವೀರಶೈವರ ಕೈಬಿಡುತ್ತಾ ಈಗ ವೀರಶೈವರ ವ್ಯಾಪಾರವೆಂದರೆ ದಲ್ಲಾಲಿಯೊಂದೇಯೆಂದು ಹೇಳಬಹುದು.

ಇಂತಹ ದುರವಸ್ಥೆಯೇಕೆ ಬಂದಿತೆಂದು ನೋಡಬಾರದೆ? ಮುಂದೆ ಹೇಗಾಗಬಹುದೆಂಬುದನ್ನು ಯೋಚಿಸಬಾರದೆ? ಈ ಕರ್ನಾಟಕದ ಹತ್ತಿ ಅರಳೆ ವ್ಯಾಪಾರವು ಗುಜರಾಥಿಗಳ, ಬಟ್ಟೆಯ ವ್ಯಾಪಾರವು ಮಾರವಾಡಿಗಳ, ಮತ್ತು ಕಿರಾಣಿ ವ್ಯಾಪಾರವು ಕಾಠೆವಾಡಿಗಳ ಸ್ವಾಧೀನವಾಗಿವೆಯೆಂದು ಹೇಳಿದರೆ ತಪ್ಪಾಗುವುದೇ?

ಆ ನಮ್ಮ ದೇಶಬಾಂಧವರ ಸಾಹಸ ಪ್ರಯತ್ನಗಳು ಅಭಿನಂದನೀಯವಾಗಿವೆ. ಈಗ ವ್ಯಾಪಾರವು ಕುಶಲ ಸಾಹಸಿಗಳ ಪಾಲಾಗುವುದು ಸ್ವಾಭಾವಿಕವಾಗಿದೆ. ಉಗಿಯ ಬಂಡಿ, ತಂತಿ, ಅಂಚೆ ಮೊದಲಾದ ವ್ಯಾಪಾರ ಬೆಳವಣಿಗೆಗೆ ಸಾಧನಗಳಾದ ಆಧುನಿಕ ಸುಧಾರಣೆಗಳು ದೇಶದಲ್ಲಿ ಪ್ರಸಾರವಾದುದರ ಉಪಯೋಗವನ್ನು ಆಯಾಯ ಭಾಗದವರು ಮಾಡಿಕೊಂಡಂತೆ ವೀರಶೈವರೇಕೆ ಮಾಡಿಕೊಳ್ಳಲಿಲ್ಲ?

ಗುಜರಾಥ, ಮಾರವಾಡ, ಕಾಠೆವಾಡ, ಬಂಗಾಲ ಮೊದಲಾದ ಈ ದೇಶದ ಬೇರೆಬೇರೆ ಭಾಗಗಳಲ್ಲಿ ವೀರಶೈವ ವರ್ತಕರು ಎಷ್ಟು ವ್ಯಾಪಿಸಿದ್ದಾರೆ? ಇವರೇಕೆ ಆ ಭಾಗಗಳಲ್ಲಿ ಹೋಗಿ ನೆಲೆಸಬಾರದಾಗಿದ್ದಿತು? ಅನ್ಯರು ಬಂದು ಆಕ್ರಮಿಸಿಕೊಂಡ ನಂತರ ಉಳಿಯುತ್ತ ಹೋಗುವ ವ್ಯಾಪಾರಗಳನ್ನೇ ಹೇಗಾದರೂ ಸ್ವಸ್ಥಳದಲ್ಲಿಯೇ ನಡೆಯಿಸಿಕೊಂಡು ಜೀವಿಸುವ ಹೀನದೀನ ಸ್ಥಿತಿಯೇಕೆ ಬಂದಿತು?

ಕರ್ನಾಟಕದ ಪ್ರತಿಯೊಂದು ಪ್ರಮುಖ ವ್ಯಾಪಾರ ಸ್ಥಳದ ೩೦ ವರುಷಗಳ ಹಿಂದಿನ ಪೇಟೆಗೂ ಈಗಿನ ಪೇಟೆಗೂ ಉಂಟಾದ ಮಹದಂತರವನ್ನು ನೋಡಿರಿ. ಆಗ ಪ್ರತಿಯೊಂದು ಸ್ಥಳದಲ್ಲಿ ಎಷ್ಟು ಧನಿಕರ ಮನೆತನಗಳಿದ್ದವು? ಈಗೆಷ್ಟು, ಹೆಸರಿಗೆ ಉಳಿದಿವೆ? ನಿಮ್ಮನಿಮ್ಮ ನೆರೆ ಹೊರೆಗಳ ಸ್ಥಿತಿಯನ್ನು ನೋಡಿದರೆ ವೀರಶೈವರ ಸಾಂಪತ್ತಿಕ ಅವನತಿಯು ಸ್ಪಷ್ಟವಾಗಿ ಕಾಣುವುದಿಲ್ಲವೆ?

ವೀರಶೈವರ ಎಷ್ಟು ಬಟ್ಟೆಯ ಗಿರಣಿಗಳಿವೆ? ಎಷ್ಟು ವೀರಶೈವರ ಬ್ಯಾಂಕುಗಳಿವೆ? ಸಕ್ಕರೆ, ಕಾಚು, ಕಾಗದ ಮೊದಲಾದ ಈ ಕಾಲದ ಅನೇಕ ಕಾರ್ಯಾಲಯಗಳಲ್ಲಿ ವೀರಶೈವರು ಯಾವಯಾವ ಕಾರ್ಯಾಲಯಗಳ ಯಜಮಾನರಾಗಿದ್ದಾರೆ? ವೀರಶೈವರಲ್ಲಿ ಕೋಟ್ಯಾಧೀಶರು ಎಷ್ಟು ಜನರಿದ್ದಾರೆ? ಇವೆಲ್ಲ ಈ ಕಾಲದ ಮುಖ್ಯೋದ್ಯೋಗಗಳಲ್ಲವೆ? ಕಳೆದ ೩೦ ವರುಷಗಳಲ್ಲಿ ಬೇರೆಬೇರೆ ಭಾಗಗಳಲ್ಲುಂಟಾದ ಉದ್ಯೋಗಗಳಲ್ಲವೆ? ಈ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ನಾಚಿಕೆ ಬರುವಂತಿಲ್ಲವೆ?

ಆದುದರಿಂದಲೇ ವೀರಶೈವ ಸಮಾಜವು ಕಲ್ಪನಾತೀತವಾದ ಆರ್ಥಿಕ ಅವನತಿಗಿಳಿದಿದೆಯೆಂದು ತಿಳಿಯಬೇಕು. ಕರ್ನಾಟಕದ ವ್ಯಾಪಾರ ಕೈಗಾರಿಕೆಗಳು ಯಾವ ಸಮಾಜದ ಕೈಯಲ್ಲಿದ್ದವೋ ಆ ಸಮಾಜವು ೩೦ ವರುಷಗಳಲ್ಲಿಯೇ ಈ ಸ್ಥಿತಿಗೀಡಾದುದು ಕಲ್ಪನಾತೀತವಲ್ಲವೇ? **ಕೈ. ವಾರದ ಅಪ್ಪಾ ಸಾಹೇಬರೊಬ್ಬರೇ** ಕಳೆದ ೩೦ ವರುಷಗಳಲ್ಲಿ ಕಾಲಕ್ಕೆ ತಕ್ಕ ನಿಜ ವ್ಯಾಪಾರಿಗಳು ಈ ಸಮಾಜದಲ್ಲಿ ಆಗಿ ಹೋದರೆಂದು ತಿಳಿಯಬೇಕು.

ಒಂದು ಮನೆಯವರು ವಿಭಾಗವಾದರೆ ಎಲ್ಲ ಸಹೋದರರೂ ಅದೇ ವ್ಯಾಪಾರವನ್ನು ನೆರೆಯಲ್ಲಿಯೇ ಹೂಡಿ ಪರಸ್ಪರ ಸ್ಪರ್ಧೆಯಿಂದ ತಾವೇ ನಷ್ಟಪಡುವುದೊಂದೇ ಬಲ್ಲರೇ ವಿನಾ ಸ್ವಸ್ಥಳ ಬಿಟ್ಟು ಬೇರೆ ಪ್ರಾಂತಕ್ಕೆ ಹೋಗುವುದನ್ನೇ ಅರಿಯರು. ಬೇರೆ ವ್ಯಾಪಾರ ಉದ್ಯೋಗಗಳಲ್ಲಿ ಪ್ರವೇಶಿಸುವ ಸಾಹಸವೇ ಇರುವುದಿಲ್ಲ. ಚಿಕ್ಕ ಪ್ರಮಾಣದಲ್ಲೇ ಏಕಾಗಲೊಲ್ಲದು; **ಹುಬ್ಬಳ್ಳಿಯ ಸಿದ್ಧೇಶ್ವರ ಕಂಪನಿಯೊಂದು** ಮಾತ್ರ ಕಾಲಮಾನಕ್ಕೆ ತಕ್ಕದಾದ ಹೊಸ ಕೈಗಾರಿಕೆಯ ಉದ್ಯೋಗದಿಂದ ಸಮಾಜದಲ್ಲಿ ತಲೆ ಎತ್ತಿದೆ. ಈ ಪ್ರಕಾರ ಅನೇಕ ಪದಾರ್ಥಗಳನ್ನು ಮಾಡುವ ನಾನಾ ಕೈಗಾರಿಕೆಯ ಕಾರ್ಯಾಲಯಗಳನ್ನು ವೀರಶೈವರೇಕೆ ಸ್ಥಾಪಿಸಿಲ್ಲ? ಅಂತಹ ಶಿಕ್ಷಣಗಳಿಗೇಕೆ ಹೋಗಿಲ್ಲ? ಈ ಕಾಲದ ವಕೀಲಿ ಉದ್ಯೋಗವೊಂದನ್ನೇ ಮಾಡಲು ಎಲ್ಲರೂ ಅದೇ ಶಿಕ್ಷಣವನ್ನು ಹೊಂದುವುದು ಯುಕ್ತವೇ?

ಮುನಸಿಪಾಲಿಟಿ, ಲೋಕಲ್ ಬೋರ್ಡುಗಳ ಮೆಂಬರರಾಗುವುದೂ ಈ ಕಾಲದ ಉದ್ಯೋಗವೆಂದೇ ಅನೇಕರಿಗೆ ತೋರಿದಂತೆ ಕಾಣುತ್ತದೆ. ತಮ್ಮ ತಮ್ಮ ವ್ಯಾಪಾರಗಳನ್ನೆಲ್ಲಾ ಬಿಟ್ಟು ಅನೇಕರು ಇವುಗಳ ಬೆನ್ನು ಹತ್ತಿ ಸಣ್ಣಾಗುತ್ತಿದ್ದಾರೆ. ಈ ಎಲ್ಲ ಸಂಗತಿಗಳನ್ನು ಯೋಚಿಸಿದರೆ ವೀರಶೈವ ಸಮಾಜವು ಆರ್ಥಿಕ ವಿಷಯದಲ್ಲಿ ಬಹು ಹೀನಾವಸ್ಥೆಗೆ ಬಂದಿದೆಯೆಂತಲೂ ಮುಂದೆ ವ್ಯಾಪಾರ ದೃಷ್ಟಿಯಿಂದ ಇವರ ಮಹತ್ವವೇ ಉಳಿಯುವಂತಿಲ್ಲವೆಂತಲೂ ಸ್ಪಷ್ಟ ತೋರುವುದಿಲ್ಲವೆ?

[ಸಂಪಾದಕ.]

ಮುಂಬೈವಿಶ್ವವಿದ್ಯಾಪೀಠವು ಮಾರ್ವಾಡಿಗಳ ಬ್ಯಾಂಕ್!

ಸಾರ್ವಜನಿಕವಾಗಿ ಮಹಾರಾಷ್ಟ್ರ ವಿದ್ಯಾಪೀಠವು ಸ್ಥಾಪನೆಯಾಗಬೇಕೆಂದು ಮಹಾರಾಷ್ಟ್ರದ ಅನೇಕ ಪ್ರಮುಖರು ಪ್ರಯತ್ನಿಸುತ್ತಿದ್ದಾರೆ. ಸರಕಾರಕ್ಕೂ ಇದು ಇಷ್ಟವಾದುದೇ ಇದೆ. ಆದರೆ ಹಣದ ಅನಾನುಕೂಲವೇ ಮುಂದಾಗಿದೆ, ಈ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಕಲಹವೂ ತಲೆಹಾಕಿದೆ. ವಿದ್ಯಾಪೀಠ ಪಕ್ಷದವರು ಸಾರ್ವಜನಿಕವಾಗಿ ಒಂದು ಲಕ್ಷ ರೂಪಾಯಿ ಕೂಡಿಸಬೇಕೆಂದು ಯೋಚಿಸಿ ೧೦ ರೂ. ಗಳಿಂದಲೂ ಚಂದಾಕೂಡಿಸಲುಪಕ್ರಮಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಇದೊಂದು ತುಂಬಾ ವಿವಾದದ ವಿಷಯವಾಗಿದೆ. ಬ್ರಾಹ್ಮಣೇತರರು ಈ ವಿದ್ಯಾಪೀಠಕ್ಕೆ ವಿರೋಧಿಗಳಾಗಿದ್ದಾರೆಂತಲೂ ಕರ್ನಾಟಕದವರೂ ವಿರೋಧಿಸುತ್ತಾರೆಂತಲೂ ಅನೇಕರು ತಿಳಿದುಕೊಂಡಿದ್ದಾರೆ. ಬ್ರಾಹ್ಮಣರು ತಮ್ಮ ಹಿತಕ್ಕಾಗಿ ಇದನ್ನು ಪ್ರಾರಂಭಿಸಿದ್ದಾರೆಂತಲೂ ಅನೇಕ ಬ್ರಾಹ್ಮಣೇತರರು ತಿಳಿದುಕೊಂಡಿದ್ದಾರೆ. ಈ ವಿದ್ಯಾ ಪೀಠದ ವಿಷಯವಾಗಿ ತಾ. ೨೦ನೆಯ ದಿವಸ ಪುಣೆಯಲ್ಲಿ ಗುರುವರ್ಯ ವಿ. ರಾ. ಶಿಂದೆಯವರು ದಿವಾನಬಹದ್ದೂರ ಡೊಂಗರಸಿಂಗ ಪಾಟೀಲರ ಅಧ್ಯಕ್ಷತೆಯಲ್ಲಿ ಒಂದು ಮಹತ್ವದ ವ್ಯಾಖ್ಯಾನವನ್ನು ಮಾಡಿದರು. ಅದರ ಮುಖ್ಯಾಂಶವು ಈ ಪ್ರಕಾರ ಇದೆ.

ಶ್ರೀ. ಶಿಂದೆಯವರ ವ್ಯಾಖ್ಯಾನ.

"ವಿದ್ಯೆಯು ವ್ಯವಹಾರ ದೃಷ್ಟಿಯಿಂದ ಉಪಯೋಗವಾಗಲಿ, ಅಥವಾ ಆಗದಿರಲಿ. ಅದರಿಂದ ಆತ್ಮ ವಿಕಾಸವು ಮಾತ್ರ ಆಗಲೇಬೇಕು. ಯಾವ ವಿದ್ಯಾಪೀಠದ ಶಿಕ್ಷಣದಿಂದ ವಿದ್ಯಾರ್ಥಿಗಳ ಆತ್ಮ ವಿಕಾಸವಾಗುವುದಿಲ್ಲವೋ ಅದಕ್ಕೆ ವಿದ್ಯಾಪೀಠವೆನ್ನಬಾರದು. ಈ ದೃಷ್ಟಿಯಿಂದ ನೋಡಿದರೆ ಮುಂಬೈ ವಿಶ್ವವಿದ್ಯಾಪೀಠವು ಕೇವಲ ನಿರುಪಯೋಗವಾದುದಾಗಿದೆ, ಇದು ವಿದ್ಯಾಪೀಠವಲ್ಲ. ವಿದ್ಯಾರ್ಥಿಗಳನ್ನು ಹಿಟ್ಟುಮಾಡುವ ಸ್ಥಳವೆಂದೇ ನಾನು ಪದವೀಧರನಾದಾಗಲೇ ತಿಳಿದುಕೊಂಡೆನು. ಪರದೇಶಗಳ ವಿದ್ಯಾಪೀಠಾನುಭವವು ನನಗಾದ ನಂತರ ನನ್ನ ಮೊದಲಿನ ತಿಳುವಳಿಕೆಯು ಸ್ಥಿರವಾಯಿತು.

ಮಾರವಾಡಿಗಳ ಬ್ಯಾಂಕ್.

ಮುಂಬೈ ವಿಶ್ವವಿದ್ಯಾಪೀಠವು ಮಾರವಾಡಿಗಳ ಬ್ಯಾಂಕಿನಂತಿದೆಯೆಂದು ನನಗೆ ತೋರುತ್ತದೆ. ಆದುದರಿಂದ ಹಾಗೆಯೇ ತಾವೂ ಒಂದು ವಿದ್ಯಾಪೀಠವನ್ನು ಸ್ಥಾಪಿಸಬೇಕೆಂದು ಅನೇಕರು ಯೋಚಿಸಿದ್ದಾರೋ ಏನೋ ನಾನರಿಯೆ. ತಿರುಪತಿ ಕ್ಷೇತ್ರದ ವಾರ್ಷಿಕ ಆದಾಯ ೧೮ ಲಕ್ಷ ರೂಪಾಯಿ ಇದೆ. ಈ ಹಣವು ಭಾವಿಕರಾದ ಜನಗಳಿಂದ ಕೂಡುತ್ತದೆ, ಮುಂಬೈ ವಿದ್ಯಾಪೀಠದ ತೀರ್ಥಕ್ಕೂ ಪ್ರತಿವರುಷ ಸಹಸ್ರಾವಧಿ ರೂ. ಗಳು ಕೂಡುತ್ತವೆ. ಪ್ರತಿವರುಷ ಸಾವಿರಾರು ತರುಣತರುಣಿಯರು ಹೋಗಿ ಆ ದೇವಿಯ ಮುಂದೆ ದಕ್ಷಿಣೆಯನ್ನಿಟ್ಟು 'ಬಿಡಿಸು' ಎಂದು ಬೇಡಿಕೊಂಡು ಬರುತ್ತಾರೆ.

ನೀವು ಈ ದುರವಸ್ಥೆಯನ್ನು ದೂರಮಾಡುವುದಕ್ಕಾಗಿ ವಿದ್ಯಾಪೀಠವನ್ನು ಸ್ಥಾಪಿಸುವುದಾದರೆ ಯಾವ ಪ್ರತಿಬಂಧವೂ ಇಲ್ಲ. ಅಲ್ಲಿ ಗದ್ದಲವಾಗುತ್ತದೆಂದು ಅದೇ ತರದ ವಿದ್ಯಾಪೀಠವನ್ನು ಸ್ಥಾಪಿಸುವುದಾದರೆ ಮಾತ್ರ ವ್ಯಾಪಾರಿ ದೃಷ್ಟಿಯಿಂದ ಸ್ಪರ್ಧೆಯುಂಟಾಗದಿರಲಾರದು. ಇದು ಪ್ರಾಂತಿಕ ವಿದ್ಯಾಪೀಠವು. ಆದುದರಿಂದ ಮರಾಠಿ ಭಾಷೆಗೇನೇ ಪ್ರಾಮುಖ್ಯತೆಯಿರಬೇಕಾದುದು ವಿಹಿತವಾಗಿದೆ. ಹೀಗೆ ಪ್ರಾಂತಿಕ ವಿದ್ಯಾಪೀಠಗಳಾಗುವುದೇ ಕ್ಷೇಮಕರವು. ಕರ್ನಾಟಕದವರೂ ತಮ್ಮದೊಂದು ವಿದ್ಯಾಪೀಠವನ್ನು ಸ್ಥಾಪಿಸಿಕೊಳ್ಳಲಿ. ಅವರಿಗಾಗಿ ನಮ್ಮನ್ನು ತಡೆಯುವುದೇಕೆ?

ಲೋಭಿ ಬ್ರಾಹ್ಮಣ-ಅಂಜುಬುರಕ ಬ್ರಾಹ್ಮಣೇತರ.

ಮಹಾರಾಷ್ಟ್ರ ವಿದ್ಯಾಪೀಠದ ವಿಷಯವಾಗಿ ಬ್ರಾಹ್ಮಣರಿಗೇನೇ ಹೆಚ್ಚು ಹಂಬಲವಿದೆ. ಇದೊಂದು ಜ್ಞಾನದ ಉದ್ಯೋಗವಾಗಿದೆ. ಈ ವಿದ್ಯಾಪೀಠದ ವಿಷಯವಾಗಿರುವ ಹಂಬಲವು ಕೇವಲ ನಿಷ್ಕಾಮವಾದುದೇನೂ ಅಲ್ಲ. ನಿಷ್ಕಾಮ ದೃಷ್ಟಿಯಿಂದ ಕೆಲಸ ಮಾಡುವವರು ಇಲ್ಲವೇ ಇಲ್ಲವೆಂದು ನನ್ನ ಅಭಿಪ್ರಾಯವಲ್ಲ. ಅಂತಹ ನನ್ನ ಮಿತ್ರರೂ ಇದ್ದಾರೆ. ಆದರೆ ಸ್ವಾರ್ಥಿ ಬ್ರಾಹ್ಮಣರಿಗೂ ಅಂಜುಬುರುಕರಾದ ಬ್ರಾಹ್ಮಣೇತರರಿಗೂ ಜತೆಯಾಗಿದೆ.

ಎಲ್ಲ ದೊಡ್ಡ ದೊಡ್ಡ ಸಂಸ್ಥೆಗಳು ಬ್ರಾಹ್ಮಣರ ಸ್ವಾಧೀನದಲ್ಲಿಯೇ ಇವೆ. ಮ್ಯಾಟ್ರಿಕ್ ಪರೀಕ್ಷೆಗೆ ಹಚ್ಚಿದ ಒಂದು ಪದ್ಯದ ಪುಸ್ತಕವನ್ನು ನಾನು ಮೊನ್ನೆ ನೋಡಿದೆನು. ಅದರಲ್ಲಿ ಒಬ್ಬರ ವಿನಾ ಎಲ್ಲಾ ಬ್ರಾಹ್ಮಣರ ಪದ್ಯಗಳೇ ಇವೆ. ತುಕಾರಾಮ, ನಾಮದೇವ ಇವರ ಅಭಂಗಗಳನ್ನು ತೆಗೆದುಕೊಳ್ಳಬಾರದಾಗಿದ್ದಿತೆ? ಉದ್ದೇಶಪೂರ್ವಕವಾಗಿ ಹೀಗೆ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಕಣ್ಣು ಮರೆಯಾಗಿರಬಹುದು. ಇದೇ ಮಹಾ ವಿಷಾದದ ಸಂಗತಿಯು. ಎಲ್ಲಾ ವರ್ತಮಾನ ಪತ್ರಿಕೆಗಳೂ ಬ್ರಾಹ್ಮಣರ ಕೈಯಲ್ಲಿಯೇ ಇವೆ.

ಆದುದರಿಂದ ಈ ವಿದ್ಯಾಪೀಠವೂ ಬ್ರಾಹ್ಮಣರ ಪಾಲಾಗಬಹುದೆಂದೇ ಬ್ರಾಹ್ಮಣೇತರರಿಗೆ ಅಂಜಿಕೆಯುಂಟಾಗಿದೆ. ಅದಕ್ಕಾಗಿ ಸಂರಕ್ಷಕ ಬಂಧನವಿರಬೇಕೆಂದು ಬ್ರಾಹ್ಮಣೇತರರಿಗೆ ತೋರಿದೆ. ವಿದ್ಯಾಪೀಠವನ್ನು ನಡೆಯಿಸುವಾಗ ಶ್ರೇಷ್ಠತರವಾದ ಆಚಾರವಿಚಾರಗಳಿರಬೇಕಾದುದು ಅಗತ್ಯವು.

ಬ್ರಾಹ್ಮಣರು ವಿದ್ಯಾವ್ಯಾಸಂಗಿಗಳು. ಬ್ರಾಹ್ಮಣೇತರರು ಈ ವಿಷಯದಲ್ಲಿ ಅಧೋಗತಿಯಲ್ಲಿದ್ದಾರೆ. ನೀವು ನಿಮ್ಮ ಉನ್ನತಿಯಾಗಿಲ್ಲವೆಂದು ಬ್ರಾಹ್ಮಣರ ಹೆಸರಿನಿಂದ ಕೂಗಿಕೊಳ್ಳಬೇಕಾದುದೇಕೆಂದು ನಾನು ಬ್ರಾಹ್ಮಣೇತರರನ್ನು ಕೇಳುತ್ತೇನೆ. ಇಂದಲ್ಲ ನಾಳೆಯಾದರೂ ಈ ವಿದ್ಯಾಪೀಠವು ಸ್ಥಾಪನೆಯಾಗುವುದು ನಿಶ್ಚಯ. ಸ್ವರಾಜ್ಯ ದೊರೆಯದಿರಬಹುದು. ಆದರೆ ವಿದ್ಯಾಪೀಠವಾಗದೆ ಇರುವುದಿಲ್ಲ. ಆದುದರಿಂದ ಉದಾಸೀನರಾಗಬೇಡಿರೆಂದೇ ನಾನು ಬ್ರಾಹ್ಮಣೇತರರಿಗೆ ಹೇಳುತ್ತೇನೆ. ನಾನು ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ಇದರಲ್ಲಿ ತಪ್ಪಿದ್ದರೂ ಇರಬಹುದು. ಆದರೆ ನನ್ನ ಸದುದ್ದೇಶದಲ್ಲೇನೂ ಲೋಪವಿಲ್ಲ"

—ಅಥಣಿ ಸುತ್ತಲೂ ತಾ. ೧೮ನೆಯ ದಿನ ವಿಶೇಷ ಮಳೆಯಾಯಿತು. ಆ ದಿನ ಅಥಣಿ ಹತ್ತಿರದ ಹಳ್ಳಕ್ಕೆ ಒಮ್ಮೆಲೇ ಹೆಚ್ಚು ನೀರು ಬಂದುದರಿಂದ ಮೂರು ಜನ ಹೆಣ್ಣುಮಕ್ಕಳು ಹಳ್ಳದಲ್ಲಿ ತೇಲಿ ಹೋಗಿ ಮುಳುಗಿ ಸತ್ತರು.

—ಪುಣೆಯಲ್ಲಿ ಪ್ಲೇಗಿನ ಹಾವಳಿಯು ವಿಶೇಷವಾಗಿ ನಡೆದಿದ್ದು ಒಂದೇ ವಾರದಲ್ಲಿ ನೂರು ಜನರಿಗೆ ರೋಗವಾಗಿ ೬೭ ಜನರು ಸತ್ತರು.

ವಿವಿಧ ವಿಷಯ.

ಸಂಚರಿಸುವ ಸರೋವರಗಳು!

ಲಂಡನದ ಕೆಲವು ಶೋಧಕರು ಮಧ್ಯ ಏಶಿಯಾದಲ್ಲಿ ಸಂಚರಿಸುತ್ತ ಹೊಸಹೊಸ ಶೋಧಗಳನ್ನು ನಡೆಯಿಸಿದ್ದಾರೆ. ಡಾ. ನೋರಿನ್ ಎಂಬುವವರು ತಿಬೇಟ ಮತ್ತು ಕಾರಾಕೋರಮ್ ಪರ್ವತಗಳಲ್ಲಿರುವ ಹಿಮ ಪ್ರವಾಹವನ್ನು (Glaciers) ಅಭ್ಯಾಸಿಸುತ್ತಿದ್ದಾರೆ. ಅವರು ಹೇಳುವದೇನಂದರೆ—

ಹಿಮ ಪ್ರವಾಹಗಳು ಸಾವಕಾಶವಾಗಿ ಕರಗಿ ಭೂಮಧ್ಯದಲ್ಲಿ ಸಮುದ್ರಗಳನ್ನುಂಟುಮಾಡುತ್ತವೆ. ಆ ಸಮುದ್ರವು ಪರ್ವತದ ಸ್ವರೂಪವು ವ್ಯಸ್ತವಾದಂತೆ ತನ್ನ ಸ್ಥಾನವನ್ನು ಬದಲಿಸುತ್ತದೆ. ಹೀಗಾಗಿ ಎಷ್ಟೋ ಸರೋವರಗಳು ತಮ್ಮ ಪೂರ್ವದ ಸ್ಥಾನವನ್ನು ಬಿಟ್ಟು ನೂರಾರು ಮೈಲು ಅಂತರದಲ್ಲಿರುತ್ತವೆ. ಲಾಫನಾರ್ ಎಂಬ ಸರೋವರವು ಈಗ ತನ್ನ ಸ್ಥಾನದಿಂದ ಎಷ್ಟೋ ಮೈಲುಗಳ ದೂರ ಹೋಗಿರುವುದರಿಂದ ಅದರ ದಂಡೆಯ ಮೇಲಿದ್ದ ಲೌಲಾನ ಎಂಬ ಪಟ್ಟಣವು ನೀರಿನ ಕೊರತೆಯಾಗಿ ಹಾಳಾಗಿ ಹೋಗಿದೆ.

ಇದೇ ಸ್ಥಾನದಲ್ಲಿದ್ದ ಡಾ. ಬೊಹಲಿನ್ ಎಂಬುವವರು ೨ ಕೋಟಿ ವರುಷಗಳ ಪೂರ್ವದ ಮೀನದ ಚಿಪ್ಪುಗಳನ್ನೂ, ಹುಳಗಳನ್ನು ಶೋಧಿಸಿದ್ದಾರೆ. ಇವುಗಳು ದೊಡ್ಡ ದೊಡ್ಡ ಬಂಡೆಗಲ್ಲುಗಳ ಗುಹೆಗಳಲ್ಲಿ ಇನ್ನೂ ಒಳ್ಳೇ ಸ್ಥಿತಿಯಲ್ಲಿಯೇ ಸಿಕ್ಕಿವೆ. ಇಲ್ಲಿ ಅಷ್ಟೇ ವರುಷ ಪೂರ್ವದ ಶಹಾ ಮೃಗಗಳ ಗರಿಗಳೂ ದೊರೆತಿವೆ.

ಡಾ. ನಿಲ್ಸ ಹೋಹನರ ಎಂಬ ಮೂರನೆಯ ಗೃಹಸ್ಥರು ಖಾರಾ ಖೊಟೋ ಎಂಬ ಹೆಸರಿನ ಪಟ್ಟಣವನ್ನು ಶೋಧಿಸಿದ್ದಾರೆ. ಪ್ರಸಿದ್ಧ ಪ್ರವಾಸಿಯಾದ ಮಾರ್ಕೊಪೋಲೋ ಎಂಬುವವನು ಹಿಂದಿನ ಕಾಲದಲ್ಲಿ ಆ ಪಟ್ಟಣವನ್ನು ಕಂಡಿದ್ದನು. ಅದರ ಹತ್ತಿರಿದ್ದ ಗಶರ್ಮನಾರ ಎಂಬ ಸರೋವರವು ಸ್ಥಾನಭ್ರಷ್ಟವಾದುದರಿಂದ ಈಗ ಆ ಪಟ್ಟಣವು ಪೂರಾ ಹಾಳಾಗಿದೆ. ಇಷ್ಟು ಪೂರ್ವದ ಸಂಗತಿಗಳು ಚನ್ನಾಗಿ ಶೋಧವಾದದ್ದಾದರೆ ಜಗತ್ತಿನ ಪ್ರಾಚೀನ ಇತಿಹಾಸವು ಹೆಚ್ಚು ವಿಶದವಾಗಲಿಕ್ಕಿಲ್ಲವೇ?

ಇದ್ದರೆ ಇಂಥ ಗಡ್ಡವಿರಬೇಕು!

ಮಿ. ಚಾರ್ಲಸ್ ಲೇವ್ವಿ ಎಂಬವನೊಬ್ಬ ನಟನು. ಅವನ ಗಡ್ಡ ಬೆಳೆಯುವದೆಂದರೆ ಅಳತೆಯಿಲ್ಲ. ನಾಟ್ಯದಲ್ಲಿ ಪಾತ್ರ ವಹಿಸುವದಕ್ಕಾಗಿ ಅವನು ದಿನಾಲು ೨ ಸಾರೆ ಗಡ್ಡ ಬೋಳಿಸಿಕೊಳ್ಳಬೇಕಾಗುತ್ತಿದ್ದಿತು.

'ಇದು ಅವನಿಗೆ ಬಹು ಬೇಸರ. ಒಂದು ದಿನ ಅವನು ತನ್ನ ಕ್ಷೌರದ ಕತ್ತಿಯನ್ನು ಬೀಸಾಟ ಬಿಟ್ಟನು. ಬಿಟ್ಟನು ಹಾಗೆ ೧೨ ವರುಷ ಗಡ್ಡವನ್ನು!

ಗಡ್ಡದಲ್ಲಿ ಇವನಿಗೆ ಸರಿಯಾದವರಾರೂ ಇರಲಿಲ್ಲ. ಇವನ ಗಡ್ಡಕ್ಕಾಗಿಯೇ ಇವನನ್ನು ನಾಟಕ ಕಂಪನಿಯವರು ಇಟ್ಟುಕೊಂಡರು. ಇವನು ನಾಟ್ಯವಾಡುವುದಕ್ಕೆ ಅಮೇರಿಕೆಗೆ ಸಹ ಹೋಗಿದ್ದನು.

ನಾಟಕದಲ್ಲಿ ತನ್ನ ಗಡ್ಡವನ್ನು ಆಯಾ ಪ್ರಕಾರ ಕತ್ತರಿಸಿಕೊಂಡು ಇವನು ನಾನಾ ತರದ ಸೋಗು ಹಾಕುವನು. ಒಮ್ಮೆ ಕುರುಬನಾದರೆ ಮತ್ತೊಮ್ಮೆ ಪಾದ್ರಿಯಾಗುವನು. ಒಮ್ಮೆ ಜಾಲಗಾರನಾದರೆ ಒಮ್ಮೆ ಒಕ್ಕಲಿಗನಾಗುವನು. ಗಡ್ಡವೂ ಸಹ ಹೊಟ್ಟೆಯನ್ನು ತುಂಬಿಸಬಹುದಲ್ಲವೇ?

ಗುಜರಾಥದಲ್ಲಿ ಸ್ವದೇಶೀ ಪ್ರದರ್ಶನ.

ಅಖಿಲಭಾರತ ಮಹಿಳಾ ಪರಿಷತ್ತಿನ ಗುಜರಾಥ ಶಾಖೆಯ ಸ್ತ್ರೀ ಸಭೆಯವರು ಸಪ್ಟೆಂಬರ ತಿಂಗಳಿನ ಎರಡನೆಯ ವಾರದಲ್ಲಿ ಮಹಾತ್ಮಾಜಿಯವರು ಹುಟ್ಟಿದ ದಿವಸವೇ ಒಂದು ಸ್ವದೇಶೀ ಪ್ರದರ್ಶನವನ್ನು ತೆರೆಯುವವರಿದ್ದಾರೆ.

ಪ್ರದರ್ಶನವನ್ನು ಉತ್ತಮ ರೀತಿಯಿಂದ ನೆರವೇರಿಸಲು ಒಳ್ಳೇ ಪ್ರಯತ್ನಗಳು ನಡೆದಿವೆ. ಅಲ್ಲಲ್ಲಿ ಸಂಚರಿಸಿ ಸ್ತ್ರೀಯರು ಪ್ರದರ್ಶನಕ್ಕೆ ಬೇಕಾಗುವ ನಯವಾದ ಬಟ್ಟೆಗಳನ್ನೂ ಕೈ ಕುಶಲತೆಯ ವಸ್ತುಗಳನ್ನೂ ಕೂಡಿಸಹತ್ತಿದ್ದಾರೆ. ಇಲ್ಲಿ ಕೇವಲ ಕೈನೂಲಿನ ಬಟ್ಟೆಗಳೇ ಸ್ವೀಕರಿಸಲ್ಪಡುವವು. ಗಿರಣಿ ಬಟ್ಟೆಗೆ ಇಲ್ಲಿ ಆಸ್ಪದವಿಲ್ಲ. ಇದನ್ನು ಪರೀಕ್ಷಿಸಲು ಚತುರರಾದ ಪರೀಕ್ಷಕರನ್ನೂ ನಿಯಮಿಸಿದ್ದಾರೆ. ಇವರೇ ನಿಜವಾದ ತಾಯಿಯರಲ್ಲವೆ ?

ರಾಕ್ಷಸನ ಕಣ್ಣು!

ಆಯಲಾಂಡದ ಸ್ಲಿಗೊ ಪರಗಣೆಯಲ್ಲಿ ಒಂದು ಸರೋವರವಿದೆ. ಅದು ೪೫ ಎಕರೆ ಭೂಮಿಯನ್ನು ವ್ಯಾಪಿಸಿದ್ದು ೩೦ ಫೂಟ ಆಳವಾಗಿರುತ್ತದೆ. ಇದು ಸ್ಲಿಗೋ ಪಟ್ಟಣದಿಂದ ೧೬ ಮೈಲ ಅಂತರದಲ್ಲಿ ಇರುತ್ತದೆ. ಇದರ ಹೆಸರು 'ಲೊನಾ ಸುಯಿಲ್.' ಈಗ ಕೆಲವು ದಿವಸಗಳ ಹಿಂದೆ ಈ ಸರೋವರದ ಇಷ್ಟು ಅಪಾರವಾದ ನೀರು ಒಂದು ರಾತ್ರಿ ಸ್ವಲ್ಪ ತಾಸುಗಳಲ್ಲಿಯೇ ಬತ್ತಿ ಹೋಯಿತು! ಮರುದಿವಸ ಮುಂಜಾನೆ ಒಕ್ಕಲಿಗರು ಬಂದು ನೋಡಿ ನೀರು ಒಮ್ಮೆಲೆ ಬತ್ತಿ ಹೋದುದನ್ನು ಕಂಡು ಭಯಚಕಿತರಾದರು. ಇದರ ವಿಷಯಕ್ಕೆ ಅವರಲ್ಲಿ ಪರಂಪರೆಯಾಗಿ ಒಂದು ಕಥೆಯು ಈ ಪ್ರಕಾರ ರೂಢವಾಗಿರುತ್ತದೆ.

ಬೇಲರನೆಂಬ ಒಬ್ಬ ರಾಕ್ಷಸನಿದ್ದನು. ಈಗ ಸರೋವರವಿರುವ ಸ್ಥಾನದಲ್ಲಿ ಬೇಲರನಿಗೂ ಮತ್ತು ರಾಕ್ಷಸ ರಾಜನಾದ ನೌಧನಿಗೂ ಭಯಂಕರ ಕಾಳಗವಾಯಿತು. ಕಾಳಗದ ಕಡಿತದಿಂದ ಬೇಲರನ ಕಣ್ಣು ಕಿತ್ತು ಭೂಮಿಯ ಮೇಲೆ ಬಿದ್ದು ಅಲ್ಲಿಯೆ ಒಂದು ಸರೋವರವಾಯಿತು. ಅದಕ್ಕೆ ಅವರು ಪಾಪಿಯ ಕಣ್ಣಿನ ಸರೋವರವೆಂದು ಕರೆಯುತ್ತಾರೆ. ಈ ಸರೋವರವು ೧೦೦ ವರ್ಷಗಳಿಗೊಮ್ಮೆ ಬತ್ತಿಹೋಗಿ ಪುನಃ ಕೆಲವು ದಿವಸಗಳಾದಮೇಲೆ ನೀರಿನಿಂದ ತುಂಬಲ್ಪಡುವದಂತೆ. ಈಗ ಈ ಸರೋವರದ ತುಂಬೆಲ್ಲ ಸತ್ತ ಮೀನುಗಳೇ ಇವೆ. ಈ ಸರೋವರದ ತಳದಲ್ಲಿ ೨೦ ಫೂಟ ಉದ್ದ ೧೮ ಫೂಟು ಆಳವಾದ ಕಣ್ಣಿನ ಆಕಾರದ ಒಂದು ದೊಡ್ಡ ತಗ್ಗು ಇರುತ್ತದೆ. ಇದಕ್ಕೇ ಜನರು ರಾಕ್ಷಸನ ಕಣ್ಣು ಎನ್ನುತ್ತಾರೆ. ನೀರು ತಿರುಗಿ ಎಂದು ಬರುವವೆಂದು ಜನರು ಎದುರು ನೋಡುತ್ತಿದ್ದಾರೆ. ಕಟ್ಟು ಕಥೆಯು ಏನೇ ಇರಲಿ; ನೀರು ಒಮ್ಮೆಲೇ ಬತ್ತಿ ಹೋಗುವುದು ಆಶ್ಚರ್ಯವಲ್ಲವೇ?

ಸೌಂದರ್ಯವನ್ನು ಅಳೆಯುವ ಯಂತ್ರ!

ಅರ್ವಾಚೀನ ಕಾಲದಲ್ಲಿ ಜಗತ್ತಿನ ಸುಂದರ ಸ್ತ್ರೀಯರ ಪ್ರದರ್ಶನವೊಂದನ್ನು ಕೂಡಿಸಿ ಅದರಲ್ಲಿ ಸೌಂದರ್ಯದೊಳಗೆ ಪ್ರಥಮ ಸ್ಥಾನವನ್ನು ಪಡೆದ ಸ್ತ್ರೀಯಳಿಗೆ ಪಾರಿತೋಷಕವನ್ನು ಕೊಡುವುದುಂಟು. ಅವರ ಸೌಂದರ್ಯವನ್ನು ಪರೀಕ್ಷಿಸಲು ತಜ್ಞರದೊಂದು ಸಂಘವೂ ಏರ್ಪಡಿಸಲ್ಪಟ್ಟಿರುತ್ತದೆ. ಅವರು ಸ್ತ್ರೀ ಸೌಂದರ್ಯವನ್ನು ತಮ್ಮ ದೃಷ್ಟಿಯಿಂದಲೇ ನಿರೀಕ್ಷಿಸಿ ನಿಷ್ಕರ್ಷಿಸುತ್ತಿರುವರು.

ಆದರೆ ಈಗ ಸೌಂದರ್ಯವನ್ನು ಅಳೆಯಲು ಒಬ್ಬ ಶಾಸ್ತ್ರಜ್ಞನು ಒಂದು ಯಂತ್ರವನ್ನು ಶೋಧಿಸಿದ್ದಾನೆ. ಆ ಯಂತ್ರದ್ವಾರದಿಂದ ಮುಖಮುದ್ರೆಯ ಮೇಲಿನ ಅತ್ಯಂತ ಸೂಕ್ಷ್ಮವಾದ ಮನೋವಿಕಾರಗಳೂ ಕಣ್ಣು ಮೂಗುಗಳ ಅಗಲ ಎತ್ತರಗಳೂ, ಭಾವನೆಗಳೂ. ರೇಷೆಗಳೂ ಸಹ ಒಡನೆ ಕಾಣಿಸುತ್ತವೆ.

ಈ ಶಾಸ್ತ್ರಜ್ಞನು ಚನ್ನಾಗಿ ಪರೀಕ್ಷಿಸಿ ಆದರ್ಶ ಸೌಂದರ್ಯವು ಹೇಗಿರಬೇಕೆಂಬುದನ್ನು ಶಾಸ್ತ್ರೀಯ ದೃಷ್ಟಿಯಿಂದ ನಿಷ್ಕರ್ಷಿಸಿದ್ದಾನೆ. ಹೇಗೆಂದರೆ ಮೂಗು ಗಲ್ಲವಷ್ಟೇ ಉದ್ದವಿರಬೇಕು ಮತ್ತು ಎರಡೂ ಕಣ್ಣಿನ ನಡುವಿನ ಅಂತರವು ಒಂದು ಕಣ್ಣಿನ ಉದ್ದಳತೆಯಷ್ಟಿರಬೇಕು. ಈ ತರದ ಸೌಂದರ್ಯ ಶಾಸ್ತ್ರವು ಬಹು ಜನರಿಗೆ ಎಷ್ಟರಮಟ್ಟಿಗೆ ಒಪ್ಪಿಗೆಯಾಗಬಹುದು?

ಕಂಕಣಾಕೃತಿಯ ಸೂರ್ಯಗ್ರಹಣ.

ಕಡೆಯ ಶ್ರಾವಣ ಸೋಮವಾರ ದಿವಸ ಉಂಟಾದ ಸೂರ್ಯಗ್ರಹಣವು ಅಮರೋಹಾ ಎಂಬಲ್ಲಿ ಕಂಕಣಾಕೃತಿಯಾಗಿದ್ದಿತು. ಸೂರ್ಯನ ಮಧ್ಯದಲ್ಲಿ ಚಂದ್ರನ ಬಿಂಬದಷ್ಟು ಕಪ್ಪು ಕಲೆಯು ಇದ್ದುದರಿಂದ ಎಲ್ಲ ಕಡೆಗೂ ಕತ್ತಲೆಯು ವ್ಯಾಪಿಸಿತು. ಮತ್ತು ಗುರು, ಶುಕ್ರ ನಕ್ಷತ್ರಗಳು ಸ್ಪಷ್ಟವಾಗಿ ಕಾಣಿಸಹತ್ತಿದವು. ಇದೇ ಪ್ರಕಾರದ ಗ್ರಹಣವನ್ನು ಈ ಊರ ಜನರು ೨೬ ವರುಷಗಳ ಹಿಂದೆ ಕಂಡಿದ್ದರು. ಈ ಗ್ರಹಣದ ಕಾಲದಲ್ಲಿ ಸುಪ್ರಸಿದ್ಧ ಖಗೋಲ ಶಾಸ್ತ್ರಜ್ಞರಾದ ನಾರ್ಮನ್ ಲಾಕಿಅರ್ ಇವರೂ ಇದ್ದರು ಮೇಲೆ ಹೇಳಿದ ಕಂಕಣಾಕೃತಿಯ ಗ್ರಹಣವು ಕೇವಲ ೨ ನಿಮಿಷಗಳವರೆಗಷ್ಟೇ ಕಾಣಿಸಿತು. ಇದು ಚಂದ್ರನ ನೆರಳೆಂಬುದು ಸ್ಪಷ್ಟವಲ್ಲವೆ ?

ಕಳವಿನ ಪರೀಕ್ಷೆ.

ತಾಜಮಹತಾಪ ಎಂಬ ಹಳ್ಳಿಯಲ್ಲಿ ತಬರಕ್ ಎಂಬ ಮುಸಲ್ಮಾನನಿಗೆ ಅಂಜುಬನ್ನೀಸಾ ಎಂಬ ಹೆಂಡತಿಯಿದ್ದಳು. ಅವಳು ೨೦ ರೂಪಾಯಿ ಕಳವು ಮಾಡಿದಳೆಂದು ತಬರಕನ ಮಾವನಾದ ಹಮೀದ ಅಲ್ಲಿಯು ಅಪರಾಧ ಹೊರಿಸಿದನು. ಇದನ್ನು ಸಿದ್ಧಮಾಡಲಿಕ್ಕೆ ಅವನು ಒಬ್ಬ ಯಾಂತ್ರಿಕನಲ್ಲಿಗೆ ಹೋಗಿ 'ಬಾಟಚಲಾನ' ಮಾಡಿದನು 'ಬಾಟ'ಯು ಹೋಗಿ ಅಂಜುಬನ್ನಿಸಾ ಇವಳ ಪಾದಗಳನ್ನು ಮುಟ್ಟಿತು. ಆದರೆ ಅವಳು ಒಪ್ಪಲಿಲ್ಲ ಹಮೀದ ಅಲ್ಲಿಯು ಪುನಃ ಪರೀಕ್ಷೆ ಮಾಡಬೇಕಾಯಿತು. ಆಗ ರಮಜಾನ ತಿಂಗಳವಿದ್ದದರಿಂದ ಹಮೀದ ಅಲ್ಲಿಯು ಬೆಳಗು ಮುಂಜಾನೆ ೨ ಗಂಟೆಯ ಊಟದ ಕಾಲಕ್ಕೆ ಅವಳ ಹತ್ತರ ಹೋಗಿ ನೀನು ನಿರ್ದೋಷಿಯಾಗಿದ್ದರೆ ನಾನು ಕೊಟ್ಟದ್ದನ್ನು ತಿನ್ನು ಎಂದು ಹೇಳಿದನು. ಅವಳೂ ಒಪ್ಪಿದಳು ಆದರೆ ಅವಳ ಗಂಡನು ಕೊಡುವದೇನೆಂದು ಕೇಳಲು ಹಮೀದ ಅಲ್ಲಿಯು 'ಚುನವಾರಾ' ಎಂದು ಹೇಳಿ ಅದನ್ನು ಅವಳ ಬಾಯಿಯಲ್ಲಿ ಹಾಕಿದನು. ಕೂಡಲೆ ಅವಳು ವಾಂತಿ ಮಾಡಿಕೊಳ್ಳಹತ್ತಿದಳು. ಆ ಬಿಳೀ ಗುಳಿಗೆಯು ಪಾಷಾಣವಿದ್ದಿತು. ಆದುದರಿಂದ ಅವಳು ನಾಲ್ಕು ದಿವಸ ಬೇನೆ ಬಿದ್ದು ಸತ್ತುಹೋದಳು. ಕೋರ್ಟಿನವರು ಹಮೀದ ಅಲ್ಲಿಗೆ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ದೇವರೇ ಇದೇ ನಿನ್ನ ನ್ಯಾಯವೇನು?

ಹೆಂಡತಿಯ ರಕ್ತವನ್ನು ಕುಡಿದನು!

ಸಿಂಹಲ ದ್ವೀಪದ ಕೋಲಂಬೊ ಪಟ್ಟಣದ ಹತ್ತರ ಕೇಗಲಾ ಎಂಬಲ್ಲಿ ಒಬ್ಬ ಹೆಣ್ಣುಮಗಳು ನ್ಯಾಯಾಧೀಶರ ಕಡೆಗೆ ಈ ಪ್ರಕಾರ ದೂರು ಹೇಳಿದ್ದಾಳೆ—"ನನ್ನ ಗಂಡನು ಮಿನ್ನೇರಿಯಾ ಗ್ರಾಮದಿಂದ ಬಂದಕೂಡಲೆ ನನ್ನ ಮೇಲೆ ಇಲ್ಲದ್ದೊಂದು ತಪ್ಪು ಹೊರಿಸಿ ನನ್ನ ರಕ್ತವನ್ನು ಕುಡಿಯಲಿಕ್ಕೆ ಕೊಡಬೇಕೆಂದು ಕೇಳಿದನು. ನಾನು ಹೆದರಿಕೊಂಡು ನಿರ್ವಾಹವಿಲ್ಲದೆ ನನ್ನ ಕಾಲುಗಳಲ್ಲಿಯೂ ಕೈಗಳಲ್ಲಿಯೂ ಗಾಯಮಾಡಿಕೊ... ೩ ಅರ್ಧ ಬಟ್ಟಲದಷ್ಟು ರಕ್ತ ಕೊಟ್ಟೆನು. ಅದನ್ನೆಲ್ಲ ಅವನು ಕುಡಿದು ಮತ್ತಷ್ಟು ಕುಡಿಯಲಿಕ್ಕೆ ಕೊಡಬೇಕೆಂದು ಕೇಳಹತ್ತಿದನು. ಆದೇ ಕಾಲಕ್ಕೆ ಪೋಲೀಸರು ಬಂದು ಅವನನ್ನು ಸೆರೆ ಹಿಡಿದರು." ಇವನೇನು ಕುಂಭಕರ್ಣನ ಶಿಷ್ಯನಾಗಿರಬಹುದೇ?

ಕಿಸೆಯಲ್ಲಿಯೇ ವಾರ್ತಾ ವಾಹಕ.

ರೋಮ ಪಟ್ಟಣದ ಪ್ರಸಿದ್ಧ ಶೋಧಕನಾದ ಸೀನೋರ ಮಾರ್ಕೋನಿಯು ಈಗ ಕಿಸೆಯಲ್ಲಿರಿಸಲು ಬರುವ ವಾರ್ತಾವಾಹಕ ಯಂತ್ರವನ್ನು (Wireless telephone) ಶೋಧಿಸಿದ್ದಾನೆ. ಅದನ್ನು ಸಿದ್ಧಮಾಡುವ ಎಲ್ಲ ತರದ ವಿಜ್ಞಾನ ಶಾಸ್ತ್ರೀಯ ಸಾಮಾನುಗಳೂ ಸಿದ್ಧವಾಗಿವೆ. ಇದನ್ನು ಕಿಸೆಯಲ್ಲಿಟ್ಟುಕೊಂಡು ಒಂದು ಪಟ್ಟಣದಿಂದ ಮತ್ತೊಂದು ಪಟ್ಟಣಕ್ಕೆ ಸುದ್ದಿ ಕಳಿಸಬಹುದು. ಸದ್ಯಕ್ಕೆ ಅದು ನೂರು ಮೈಲು ಅಂತರದ ವರೆಗೆ ಸುದ್ದಿ ಒಯ್ಯಬಲ್ಲದು. ಇವೇ ಸಾಧನಗಳನ್ನು ಬಲಪಡಿಸಿಕೊಂಡರೆ ೩೦೦ ಮೈಲುಗಳವರೆಗೂ ಸುದ್ದಿ ಕಳುಹಿಸಬಹುದೆಂದು ಮಾರ್ಕೋನಿಯು ಹೇಳುತ್ತಾನೆ. ಇದು ಹಳ್ಳಿ ಪಟ್ಟಣಗಳಲ್ಲೆಲ್ಲ ವ್ಯಾಪಿಸಿದರೆ ಅಂಚೇ ವ್ಯವಹಾರವು ಬಹು ಮಟ್ಟಿಗೆ ಕಡಿಮೆಯಾಗಬಹುದಲ್ಲವೇ?

ಪರಂಜ್ಯೋತಿ

ಆಸ್ಟ್ರಿಯಾ ಹಂಗರಿ ದೇಶದಲ್ಲಿ ಮೊಡಿಯಾಕ್ ಎಂಬ ಪಟ್ಟಣದ ಹತ್ತರಿರುವ ಒಂದು ಜ್ವಾಲಾಮುಖಿ ಪರ್ವತವು ಒಮ್ಮೆಲೇ ಸ್ಫೋಟವಾಗಿ ಜ್ವಾಲಾಮುಖಿಯ ಮುಖದಿಂದ ಒಂದು ತರದ ನೈಸರ್ಗಿಕ ವಾಯುವು ಹೊರಡಹತ್ತಿರುತ್ತದೆ. ಸುತ್ತು ಹತ್ತು ಮೈಲು ರಾತ್ರಿಯಲ್ಲೆಲ್ಲಾ ಅದರ ಜ್ಯೋತಿಯು ಬೆಳಗುತ್ತಿರುತ್ತದೆ. ಈ ಜ್ಯೋತಿಯ ಪರಿಣಾಮದಿಂದ ೧೦ ಮೈಲು ತ್ರಿಜ್ಯದ ಭೂಮಿಯ ಬೆಳೆಯಲ್ಲ ಹಚ್ಚಗೆ ಹಸುರು ಮುರಿಯುತ್ತಿರುತ್ತದೆ. ಮತ್ತು ಬೆಳೆಯು ಬೆಳೆಯುವದು. ಕಣ್ಣಿಗೆ ಕಾಣುವಷ್ಟು ಉತ್ತರದಿಂದ ಬೆಳೆಯುತ್ತದೆ. ಈ ವಾಯುವನ್ನು ಸಂಗ್ರಹಿಸಿ ಏನಾದರೊಂದು ವ್ಯಾಪಾರೀ ಲಾಭವನ್ನು ಮಾಡಿಕೊಳ್ಳಬೇಕೆಂದು ಎಷ್ಟು ಪ್ರಯತ್ನಿಸಿದರೂ ಅದೆಲ್ಲ ವ್ಯರ್ಥವಾಯಿತು. ಇದರ ಬೆಳಕಿನಿಂದ ಒಕ್ಕಲಿಗರು ರಾತ್ರಿಯಲ್ಲಿ ಸಹ ಹೊಲಗಳಲ್ಲಿ ತಮ್ಮ ಕೆಲಸಗಳನ್ನು ಮಾಡಬಲ್ಲರು.

ಈ ಅದ್ಭುತವನ್ನು ನೋಡಲಿಕ್ಕೆ ನಾನಾ ಭಾಗಗಳಿಂದ ಜನರು ಬರುತ್ತಿರುವರು. ಒಬ್ಬ ಪ್ರಸಿದ್ಧ ಗಣಿತಜ್ಞನು ಆ ವಾಯುವು ಚಳಿಗಾಲದೊಳಗೆಲ್ಲ ಬೆಳೆಯನ್ನು ಹಚ್ಚಗಿಂಸಬಲ್ಲದೆಂದು ಹೇಳುತ್ತಾನೆ. ಇದೇನು ದೇವರ ಅಗಾಧ ಮಹಿಮೆಯಿರಬಹುದೇನು?

೧೫ ಕೋಟಿ ರೂ. ಬೆಲೆಯ ಅರಮನೆ

ಜಾಗತಿಕ ರಾಷ್ಟ್ರ ಸಂಘದ ಸಲುವಾಗಿ ಜಿನೇವಾದಲ್ಲಿ ಕಟ್ಟಿಸಿದಂಥ ಅರಮನೆಯ ಹೊರಗಿನ ಭಾಗವು ಮುಗಿಯುತ್ತ ಬಂದಿದೆ. ೧೯೩೩ನೆಯ ಇಸವಿ ಅಗಸ್ಟ ತಿಂಗಳಿಗೆ ಸಂಪೂರ್ಣ ಸಿದ್ಧವಾಗುವದೆಂದು ಕಂಡುಬಂದಿದೆ. ಅದು ಒಂದು ಮೈಲು ಉದ್ದವಾಗಿದ್ದು ಒಂದೇ ಕಾಲಕ್ಕೆ ೩೦೦೦ ಜನರು ಕುಳಿತು ಕೊಳ್ಳಬಹುದು. ಇದರಲ್ಲಿ ೩೨೦ ಪ್ರತಿನಿಧಿಗಳಿಗೆ ೩೧೫ ಸೆಕ್ರೆಟರಿಗಳಿಗೆ ೩೧೯ ಭಿನ್ನ ಭಿನ್ನ ಪದವೀಧರರಿಗೆ ೪೯೬ ಪತ್ರಿಕಾ ಪ್ರತಿನಿಧಿಗಳಿಗೆ ಮತ್ತು ೪೧೦ ಜನತೆಯ ಸದಸ್ಯರುಗಳಿಗೆ ಕೋಣೆಗಳು ಕಟ್ಟಲ್ಪಟ್ಟವೆ. ಇದರಲ್ಲಿಯೇ ೬೦ ಲಕ್ಷ ರೂ. ಬೆಲೆಯ 'ರಾಕ್ ಫೆಲರ್ ಲಾಯಬ್ರರಿ'

ನೈಜಾಂ ಪ್ರಾಂತದ ವೀರಶೈವ ಬಡ ವಿದಾರ್ಥಿಗಳೂ ಶಿರಸಂಗಿ ಫಂಡೂ.

(ಲೇಖಕ- ಎನ್. ಎಸ್. ವಕೀಲ ರಾಯಚೂರ.)

ವೀರಶೈವ ಸಮಾಜದ ವಿದ್ಯಾಭಿವೃದ್ಧಿಯ ಸಲುವಾಗಿ ಶಿರಸಂಗಿಯ ತ್ಯಾಗವೀರ ಲಿಂಗರಾಜರು ತಮ್ಮ ಅಖಿಲ ಸಂಸ್ಥಾನವನ್ನೇ ಕೊಟ್ಟು ಕಲಿಯುಗದ ಕರ್ಣನೆನಿಸಿಕೊಂಡಿರುವದು ವೀರಶೈವರಿಗೆ ಹೊಸಮಾತಲ್ಲ. ಆ ಫಂಡಿನಿಂದ ವೀರಶೈವ ಸಮಾಜಕ್ಕೆ ಅಪಾರವಾದ ಉಪಕಾರವಾಗುತ್ತಲಿದೆ. ಏಕೆಂದರೆ ಪರದೇಶಗಳಿಗೆ ಹೋಗಿ ಡಿಗ್ರಿಗಳನ್ನು ಪಡೆದುಕೊಂಡು ಬರತಕ್ಕವರಿಗೂ ಮತ್ತು ಇಲ್ಲಿಯೇ ಕಾಲೇಜುಗಳಲ್ಲಿ ಅಭ್ಯಾಸಮಾಡತಕ್ಕವರಿಗೂ ಪ್ರತಿವರುಷ ಸಂಸ್ಥಾನದ ಖರ್ಚು ಹೋಗಿ ೩೦-೩೫ ಸಾವಿರ ರೂ.ಗಳನ್ನು ಹಂಚುವರೆಂದು ಆ ಫಂಡಿನ ವಾರ್ಷಿಕ ವರದಿಯಿಂದ ತಿಳಿದು ಬರುತ್ತದೆ. ಇಂತಹ ದೊಡ್ಡ ಫಂಡಿನಿಂದ ನೈಜಾಮ ಪ್ರಾಂತದ ವೀರಶೈವರಿಗೆ ಇದುವರೆಗೇನೂ ಸಹಾಯವಾಗಿಲ್ಲೆಂಬುವದು ಶೋಚನೀಯವಾದ ಸಂಗತಿಯೇ ಸರಿ. ಸರ್, ದೇಸಾಯಿಯವರು ಕೇವಲ ಬ್ರಿಟಿಷ ಪ್ರಾಂತದ ವೀರಶೈವ ವಿದ್ಯಾರ್ಥಿಗಳಿಗೆ ಫಂಡಿನ ಉಪಯೋಗವಾಗಬೇಕೆಂದು ದಾನ ಶಾಸನವನ್ನು ಮಾಡಿರುವದಿಲ್ಲ. ಇನ್ನಾದರೂ ಶಿರಸಂಗಿ ಫಂಡಿನ ಟ್ರಸ್ಟಿಗಳು ನೈಜಾಂ ಪ್ರಾಂತದ ವಿದ್ಯಾರ್ಥಿಗಳ ಸಲುವಾಗಿ ವಿಶ್ವವಿದ್ಯಾಲಯಗಳಲ್ಲಿ ತೇರ್ಗಡೆ ಹೊಂದತಕ್ಕವರಿಗೆ ಸಹಾಯವನ್ನು ಮಾಡಿದರೆ ಬಹಳೇ ಉಪಕಾರವಾಗುತ್ತದಲ್ಲದೆ, ನನ್ನ ಫಂಡಿನಲ್ಲಿ ಪಕ್ಷಪಾತವಾಗುವುದಿಲ್ಲವೆಂದು ಕೈಲಾಸದಲ್ಲಿ ಲಿಂಗರಾಜರ ಆತ್ಮಕ್ಕೆ ಶಾಂತಿಯಾಗುವದು. ಆದ್ದರಿಂದ ಎಲ್ಲ ನೈಜಾಮ ಸ್ಕೂಲ್ ಹೈಸ್ಕೂಲ್‌ಗಳ ಪ್ರೆಸಿಡೆಂಟರೂ, ಬಡ ವಿದ್ಯಾರ್ಥಿಗಳೂ ತಮ್ಮ ತಮ್ಮ ನಿರ್ಣಯವನ್ನು ಮಾಡಿ ಶಿರಸಂಗಿ ಟ್ರಸ್ಟ ಬೋರ್ಡ ಪ್ರೆಸಿಡೆಂಟ ಬೆಳಗಾಂವ ಇವರ ಕಡೆಗೆ ಕಳಿಸಬೇಕು.

ನೈಜಾಮ ಪ್ರಾಂತದ ಬಡವಿದ್ಯಾರ್ಥಿಗಳ ಕಷ್ಟ ಬರೆಯುವುದಕ್ಕೆ ಸಾಧ್ಯವಿಲ್ಲ. ಬ್ರಿಟಿಷ ಪ್ರಾಂತದಲ್ಲಿದ್ದ ವಿದ್ಯಾರ್ಥಿಗಳಿಗೆ ಲಿಂಗಾಯತ ಫಂಡ, ವಿದ್ಯಾವರ್ಧಕ ಫಂಡ ಹೀಗೆ ಒಂದಿಲ್ಲ ಒಂದು ಫಂಡು ಇರುತ್ತದೆ. ಪರಂತು ನಮ್ಮ ಪ್ರಾಂತದಲ್ಲಿ ಇದುವರೆಗೂ ಒಂದಾದರೂ ಫಂಡು ಇರುವದಿಲ್ಲ ಆದ್ದರಿಂದ ಬಹಳ ದಿವಸಗಳಿಂದಲೇ ಎಲ್ಲಾ ಪ್ರಾಂತದ ವೀರಶೈವರಿಗಿಂತ ಈ ಪ್ರಾಂತದ ವೀರಶೈವರು ವಿದ್ಯೆಯಲ್ಲಿ ತೀರ ಹಿಂದುಳಿದಿದ್ದಾರೆ. ಆದ್ದರಿಂದ ಇನ್ನಾದರೂ ಸಮತೋಲನ ಬುದ್ಧಿಯುಳ್ಳ ಸಮಾಜಾಭಿಮಾನಿಗಳು ಇತ್ತಕಡೆಗೆ ಪೂರ್ಣ ಲಕ್ಷಕೊಡುವರೆಂದು ನಂಬಿದ್ದೇವೆ.

ರಾಯಚೂರ, ಕಲಬುರ್ಗಿ, ಹೈದರಾಬಾದಿನಲ್ಲಿ ಅಭ್ಯಾಸಮಾಡತಕ್ಕ ಬಡವಿದ್ಯಾರ್ಥಿಗಳಾದರೂ ಅರ್ಜಿ ಫಾರ್ಮುಗಳನ್ನು ತರಿಸಿಕೊಂಡು ಅರ್ಜಿಯನ್ನು ಮಾಡತಕ್ಕದ್ದು.

ಎಂಬ ಮಹಾ ಪುಸ್ತಕಾಲಯವೂ ಇರಿಸಲ್ಪಡುವದು. ಸಭಾ ಮಂಟಪದ ನಾಲ್ಕೂ ಮೂಲೆಗಳಲ್ಲಿ ಶೇಕ್ಸಪೀಯರ, ಪ್ಯಾಸ್ಟರ, ಸ್ಟೀವನ್ ಹೋರ, ಮತ್ತು ಲಿವೊನಾರ್ಡೋ ಡಾ, ವ್ಹಿನ್ಸಿ ಇವರ ಪ್ರತಿಮೆಗಳು ಸ್ಥಾಪಿಸಲ್ಪಡುವವು. ಇಲ್ಲಿ ೫೦ ಟೆಲಿಫೋನ್ ಪೆಟ್ಟಿಗೆಗಳೂ, ಎರಡು ತಂತಿ ಆಫೀಸುಗಳೂ, ಒಂದು ತಂತೀ ರಹಿತ ಆಫೀಸು, ರೇಡಿಯೋ ಯಂತ್ರಗಳೂ ಇರಿಸಲ್ಪಟ್ಟವೆ.

ಸಮಾಚಾರ ಸಂಗ್ರಹ.

—ನಿಜಾಮ ಸರಕಾರದವರು ಒಂದು 'ಫರ್ಮಾನ' ಹೊರಡಿಸಿ ಇನ್ನು ಮುಂದೆ ತಮ್ಮ ಸಂಸ್ಥಾನದ ಹೊರತು ಬೇರೆ ಕಡೆಯವರಿಗೆ ಸರಕಾರಿ ಉದ್ಯೋಗಗಳನ್ನು ಕೊಡಲಾಗುವುದಿಲ್ಲವೆಂದು ಪ್ರಕಟಿಸಿದ್ದಾರೆ.

—ಅಮೇರಿಕೆಯಲ್ಲಿ ಜನರ ನಿರುದ್ಯೋಗತನವನ್ನು ಕಳೆದು ಅವರಿಗೆ ಜೀವನಮಾರ್ಗ ಮಾಡಿಕೊಡಲು ಕೆಲಸಗಾರರೆಲ್ಲ ಒಂದಾಗಬೇಕೆಂದು ಒಂದು ಗರುಡಪಕ್ಷಿಯ ಚಿತ್ರದ ಕರಾರು ಪತ್ರವನ್ನು ಹೊರಡಿಸಿದ್ದಾರೆ. ಅದಕ್ಕೆ ಈಗ ೧೫ ಲಕ್ಷ ಜನರು ಬೆಂಬಲವಾಗಿದ್ದಾರೆ.

—ಅಮೇರಿಕೆಯಲ್ಲಿ ಸದ್ಯಕ್ಕೆ ೨೦ ಲಕ್ಷ ಜನ ನಿರುದ್ಯೋಗಿಗಳಿಗೆ ಉದ್ಯೋಗ ಹಚ್ಚಿಕೊಟ್ಟಿರುವರೆಂದು ತಿಳಿದು ಬಂದಿದೆ.

—ಸಿಂಧ ಹೈದರಾಬಾದಿನಲ್ಲಿ ಒಬ್ಬ ಹಿಂದೂ ಬಾಲಿಕೆಯನ್ನು ಅಪಹರಿಸಿದ ವಿ ಷ ಯ ಕ ವಾ ದ ಮೊಕದ್ದಮೆಯ ವಿಚಾರಣೆಯ ಕಾಲಕ್ಕೆ ದೊಂಬಿಯ ಭೀತಿಯಿಂದ ಅಲ್ಲಲ್ಲಿಗೆ ಪೋಲೀಸ ಕಾವಲು ಇಡಲಾಗಿತ್ತು. ಮತ್ತು ಪಟ್ಟಣದಮೇಲೆ ವಿಮಾನಗಳನ್ನು ಹಾರಾಡಿಸುತ್ತಿದ್ದರು.

—ಕಾನಪುರದಲ್ಲಿ ಒಬ್ಬ ಸುಲಿಗೆಗಾರನ ವಿಚಾರಣೆಯು ನಡೆದ ಕಾಲಕ್ಕೆ ಕಾಮರಸಿಂಗ ಎಂಬ ಹೆಸರಿನ ಮನುಷ್ಯನು ನ್ಯಾಯಾಧೀಶರ ಮೇಲೆ ಜೋಡು ಒಗೆದ ಅಪರಾಧಕ್ಕಾಗಿ ಅವನಿಗೆ ೬ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

—ಬಂಗಾಲದಲ್ಲಿ ಪದ್ಮಾ ನದಿಗೆ ಮಹಾಪೂರ ಬಂದುದರಿಂದ ಎಷ್ಟೋ ಹಳ್ಳಿಗಳು ನೀರಿನಲ್ಲಿ ನಿಂತಿವೆ. ಜನರು ಬೀದಿಗಳಲ್ಲಿ ಬಿದರಿನ ಮಿಂಚಿಕೆ ಮಾಡಿಕೊಂಡು ಇರುತ್ತಾರೆ.

—ಬೆಂಗಳೂರಿನಲ್ಲಿ ಪ್ರಜಾಪಕ್ಷದ ಸಮಿತಿಯೊಂದು ಕೂಡಿ ಕೈ. ಶ್ರೀ ಬಸಯ್ಯನವರ ಸ್ಮರಣಾರ್ಥವಾಗಿ ೫೦ ಸಾವಿರ ರೂಪಾಯಿಗಳನ್ನು ಕೂಡಿಸಬೇಕೆಂದು ತೀರ್ಮಾನಿಸಿ ಅದರಂತೆ ೧೩ ಜನರ ಒಂದು ಮಂಡಲವೂ ಏರ್ಪಟ್ಟಿತು.

—ಮೈಸೂರಿನ ವೃದ್ಧ ಪಿತಾಮಹರಾದ ಶ್ರೀ. ವೆಂಕಟಕೃಷ್ಣಯ್ಯನವರ ೯೦ನೆಯ ವಾರ್ಷಿಕ ವರ್ಧಂತಿ ಮಹೋತ್ಸವವು ಮ. ಎಂ. ಸುಬ್ರಹ್ಮಣ್ಯಯ್ಯರ ಇವರ ಅಧ್ಯಕ್ಷತೆಯಲ್ಲಿ ನೆರೆಯಿತು.

—ಜರ್ಮನ್ ಸರಕಾರದವರು ತಮ್ಮ ದೇಶದಲ್ಲಿ ಅಂಗವಿಹೀನರ ಉತ್ಪತ್ತಿಯನ್ನು ನಿಲ್ಲಿಸುವದಕ್ಕಾಗಿ ಸದ್ಯದಲ್ಲಿರುವ ಅಂಗಹೀನರ ಸಂತತಿ ಪ್ರತಿಬಂಧವನ್ನುಂಟುಮಾಡಲು ಒಂದು ಶಾಸನ ಮಾಡುವವರಿದ್ದಾರಂತೆ.

—ಜಯಪುರದ ಹತ್ತಿರಿರುವ ಒಂದು ಗ್ರಾಮದಲ್ಲಿ ಒಂದು ಕುಟುಂಬದವರೆಲ್ಲ ಒಂದೇ ರಾತ್ರಿ ಸತ್ತು ಹೋದರು. ಕಾರಣವನ್ನು ಶೋಧಿಸಲು ಊಟಮಾಡುವ ಸಾರಿನಲ್ಲಿ ಒಂದು ಹಲ್ಲಿ ಬಿದ್ದಿತ್ತಂತೆ.

—ಬೆಂಗಳೂರು ಸೆಂಟ್ರಲ್ ಜೇಲಿನಲ್ಲಿ ಒಬ್ಬ ಸೆರೆಯಾಳು ಇನ್ನೊಬ್ಬ ಸೆರೆಯಾಳನ್ನು ಕಾರಾಗೃಹದಲ್ಲಿಯೇ ಕೊಲೆಮಾಡಿದನಂತೆ,

—ಸ್ಪೇನ ದೇಶದ ಒಬ್ಬ ಸಾಹುಕಾರನು ತನ್ನ ಜೊತೆಯ ೭ ಜನರ ಸಂಗಡ ಸಾಲಬೇಡಲು ಒಬ್ಬ ಮನುಷ್ಯನ ಮನೆಗೆ ಬರಲು ಅವನು ಇವರನ್ನು ಒಳಗೆ ಕೂಡ್ರಿಸಿ ಬಾಗಿಲು ಇಕ್ಕಿಕೊಂಡು ಜೇನು ಹುಟ್ಟು ಎಬ್ಬಿಸಿ ಓಡಿಹೋದನು. ಅವರು ಜೀವದಿಂದುಳಿಯುವದೇ ಸಾಕು ಬೇಕಾಯಿತು.

ಭಾರತೀಯ

ಧನ ಸಾಮ್ರಾಟರ ಮೆಚ್ಚಿಗೆ!

ಕರ್ನಾಟಕ ನೂತನ ಕಲಾವೈಭವ.

ಸಿದ್ಧೇಶ್ವರ ಕಂಪನಿಯ ಅಪೂರ್ವ ಪ್ರಾವಿಣ್ಯ.



ನಿಜಾಮ ಸರಕಾರದ ಸ್ಟೇಟ ಬ್ಯಾಂಕಿನ ಹೆಬ್ಬಾಗಿಲು.

ಭಾರತೀಯ ಧನಸಾಮ್ರಾಟರಾದ ಹೈದ್ರಾಬಾದ ನಿಜಾಂ ಸರಕಾರದವರು ಸಿದ್ಧೇಶ್ವರ ಕಂಪನಿಯ ಅದ್ವಿತೀಯ ಕಲಾವೈಭವವನ್ನು ನೋಡಿ ಸಂತೋಷಪಟ್ಟು ಸಾವಿರಾರು ರೂ. ಬೆಲೆಬಾಳುವ ಅನೇಕ ಟ್ರೆಜರಿಗಳನ್ನು ತೆಗೆದುಕೊಂಡದ್ದಲ್ಲದೆ ತಮ್ಮ ಸ್ಟೇಟ್ ಬ್ಯಾಂಕಿಗೆ ಅಪೂರ್ವವಾದ, ಅತಿಸುಂದರವಾದ, ಎಲೆಕ್ಟ್ರಿಕ್ ಅಥವಾ ಆಕ್ಸಿಜನ್ ಗ್ಯಾಸುಗಳಿಂದ ಸಹ ಅಪಾಯ ಹೊಂದದಂಥ ಬಹು ಭದ್ರವಾದ ಹೆಬ್ಬಾಗಿಲವನ್ನು ಮಾಡಿಸಿಕೊಂಡಿದ್ದಾರೆ.

ಇಂಥ ಸುಪ್ರಸಿದ್ಧ ಸಿದ್ಧೇಶ್ವರ ಕಂಪನಿಯಿಂದ ನಿಮಗೆ ಬೇಕಾದಂಥ ಟ್ರೆಜರಿ, ಕ್ಯಾಶ್‌ಬಾಕ್ಸ ಮೊದಲಾದವುಗಳನ್ನು ಮಾಡಿಸಿಕೊಂಡು ನಿಮ್ಮ ಹಣವನ್ನು ಭದ್ರವಾಗಿಟ್ಟುಕೊಳ್ಳಬಾರದೇ?

ಸಿದ್ಧೇಶ್ವರ ಆ್ಯಂಡ್ ಕೋ. ಹುಬ್ಬಳ್ಳಿ.

ಹೆಡ್ ಆಫೀಸ್:— **ಹುಬ್ಬಳ್ಳಿ.**

ಬ್ರ್ಯಾಂಚ್ ಆಫೀಸ್:— **ಅಬಿಡ್ಸ ಬಿಲ್ಡಿಂಗ್. ಹೈದರಾಬಾದ.**

ಗೌರೀಶಂಕರ ನಿವಾಸ.

ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲು ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದಂಗಡಿಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ಪಂಥಗಳಿಗೆ ಕೇಂದ್ರಸ್ಥಾನ ....

ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-**ಈ**ಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂ ಹೊತ್ತು ಭೋಜನ ೧೬-೮-೦ ತಿಂಗಳೊಂದಕ್ಕೆ

ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦

೬೦ ,, ,, ,, ೧೬-೮-೦

೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, ಗೌರೀಶಂಕರ **ನಿವಾಸ ಹಿಂದೂ ಹೋಟೆಲ್**

(೪೫) ದಪಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ,** ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಯೂರ್ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ **ಉಚಿತವಾಗಿ ನಮೂನೆಗಳನ್ನು** ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ವಲ್ಲಾಳಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ **ಮಾಹಿತಿಗೋಸ್ಕರ** ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಶ್ರೀರಾಮ ವೀವ್ಹಿಂಗ್ ಮಿಲ್ಸ್

ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಪತ್ತಲಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ.

ಹೀಗಿದ್ದರೂ ಬಹು ಅಗ್ಗ.

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ?

ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರಿಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು.
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ.
ಪೋ. **ಹಂಚಲಿ**
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೮ || ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಕರ್ದೇಕರ ಮಂಜ

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆ ವೆಚ್ಚ ಸೇರಿ ೩ ರೂ

ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ಆಲಮಟ್ಟಿ- ಸೋಮವಾರ ತಾರೀಖು ೨೫ ನೆಯ ಸಪ್ಟೆಂಬರ ೧೯೩೩. | ಸಂಚಿಕೆ ೮

ಜನಸೇವೆಯೇ ದೇವರಸೇವೆ.

ಡಾ. ಆ್ಯನಿಬೆಜಂಟರ ನಿಧನ.

ಮಹಾತ್ಮಾಜಿಯವರ ಹೇಳಿಕೆ.

“ಡಾ. ಬೆಜಂಟರವರನ್ನು ದೀರ್ಘ ಕಾಲದ ಬೇನೆಯೊಳಗಿಂದ ಬಿಡಿಸಿದುದಕ್ಕಾಗಿ ಜನರು ಪರಮೇಶ್ವರನ ಆಭಾರ ಮನ್ನಿಸುವರು; ಅಲ್ಲದೆ ಇವರ ನಿಧನಕ್ಕಾಗಿ ಸಾವಿರಾರು ಜನರು ದುಃಖವನ್ನು ಮಾಡುತ್ತಿರುವರು. ಎಲ್ಲಿಯವರೆಗೆ ಹಿಂದುಸ್ಥಾನವು ಜೀವಂತವಿರುವುದೋ ಅಲ್ಲಿಯವರೆಗೆ ಡಾ. ಬೆಜಂಟರವರು ಮಾಡಿದ ಕಾರ್ಯಕಲಾಪಗಳು ಚಿರಸ್ಥಾಯಿಯಾಗಿ ಉಳಿಯುವವು. ಹಿಂದುಸ್ಥಾನವೇ ಮಾತೃಭೂಮಿಯೆಂದು ತಿಳಿದು ತಮ್ಮ ಸರ್ವಸ್ವವನ್ನೆಲ್ಲಾ ಅದಕ್ಕಾಗಿ ಧಾರೆಯೆರೆದುದರಿಂದ ಹಿಂದೀ ಜನಗಳ ಅಂತಃಕರಣದಲ್ಲಿ ಅವರ ಬಗ್ಗೆ ಉತ್ಕಟ ಪ್ರೇಮವಿರುವುದು.”

SANGAM CLOTH STORES
Prop: M. S. Hundek... & ...s,
P.O: TERDAL - 537 315
Dt. Bijapur, (Karnataka)

ದೇಹವೇ ದೇವಾಲಯ

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
... ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ?

ಶೆಟ್ಟರು—ಏನಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೆ... ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡೆ.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ... ಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕ**ದಾಗ ಬ್ಯಾಂಕಿನವ... ಸಾಹುಕಾರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ **ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತಂಡಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಸಪ್ಟೆಂಬರ ತಾರೀಖು ೨೫ ನೆಯ ಸೋಮವಾರ | ಸಂಚಿಕೆ ೮.

ಡಾ. ಆ್ಯನಿಬೆಜಂಟ್‌ರವರು.

ಹಿಂದುಸ್ಥಾನದಲ್ಲಿಯ ಹೋಮ್‌ರೂಲ್ ಚಳವಳಿಯ ಉತ್ಪಾದಕರು ಮತ್ತು ಥಿಯಾಸಾಫಿಕಲ್ ಸೊಸಾಯಿಟಿಯ ಅಧ್ಯಕ್ಷರು ಆದ ಡಾ. ಆ್ಯನಿಬೆಜಂಟರವರು ಕಳೆದ ತಾ. ೨೦ನೆಯ ಬುಧವಾರ ಮಧ್ಯಾಹ್ನ ನಾಲ್ಕು ಗಂಟೆಯ ಸುಮಾರಕ್ಕೆ ಪರಲೋಕವಾಸಿಗಳಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರ ನಿಧನದಿಂದ ಕೇವಲ ಭರತಖಂಡದಲ್ಲಿಯೇ ಅಲ್ಲದೆ ಇಡೀಜಗತ್ತಿನ ಸುಖ, ಶಾಂತಿ, ವಿಶ್ವಬಂಧುತ್ವಗಳಿಗಾಗಿ ಅವಿಶ್ರಾಂತ ಶ್ರಮಪಡುವ ಒಂದು ಜಾಗತಿಕ ಪ್ರಚಂಡ ವ್ಯಕ್ತಿಯು ಇಲ್ಲದಂತಾಗದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ.

ಡಾ. ಆ್ಯನಿಬೆಜಂಟರವರು ೧೮೯೩ ನೆಯ ಇಸವಿಯಲ್ಲಿ ಈ ಪುಣ್ಯ ಭಾರತಭೂಮಿಗೆ ಮೊದಲು ಬಂದರು. ಅಲ್ಲಿಂದ ಈ ೪೦ ವರುಷಗಳಲ್ಲಿ ಇವರು ಮಾಡಿದ ಅಸಾಧಾರಣವಾದ ಸೇವೆಯನ್ನು ಅಭೂತಪೂರ್ವವಾದ ಕ್ರಾಂತಿಯನ್ನು ನೋಡಿದರೆ ಪ್ರತಿಯೊಬ್ಬ ಹಿಂದು ಪುತ್ರನು ಇವರ ಮುಂದೆ ತಲೆ ತಗ್ಗಿಸಲೇಬೇಕಾಗುವುದು. ಭಾರತ ಮಾತೆಯು ತಮಗೆ ಮಲತಾಯಿಯೆಂದು ತಿಳಿದು ಹಿಂದು ಧರ್ಮದ ದೀಕ್ಷೆಯನ್ನು ಹೊಂದಿ ವೇದಪ್ರಣೀತ ಧರ್ಮದ ಧ್ವಜವು ಥಿಯಾಸಾಫಿಕಲ್ ಸೊಸಾಯಿಟಿಯ ರೂಪದಿಂದ ಜಗತ್ತಿನಲ್ಲಿ ಯಾವಾಗಲೂ ಹಾರಾಡುವಂತೆ ಮಾಡಿದ್ದಾರೆ.

ಇವರು ಹಿಂದುಸ್ಥಾನದಲ್ಲಿ ಕಾಲಿಡುವ ಪೂರ್ವದಲ್ಲಿ ಹಿಂದು ಧರ್ಮದ ಮೇಲೆ ಪರಧರ್ಮಿಗಳು ಪ್ರಚಂಡವಾದ ಹಾವಳಿಯನ್ನೆಬ್ಬಿಸಿದ್ದರು. ಆಧುನಿಕ ಶಾಸ್ತ್ರೀಯ ಜ್ಞಾನ ಬಲದಿಂದ ಹಿಂದು ಧರ್ಮದ ಉಜ್ವಲ ತತ್ವವನ್ನು ಹೊರಗೆ ಹಾಕುವವರು ಯಾರೂ ಇರಲಿಲ್ಲ. ಇಂಥ ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಇವರು ಹಿಂದುಸ್ಥಾನದಲ್ಲಿ ಥಿಯಾಸಾಫಿಕಲ್ ಸೊಸಾಯಿಟಿಯನ್ನು ಸ್ಥಾಪಿಸಿ ಅದರ ಸರ್ವಸಮ್ಮತ ನ ಸ...ಜ್ವಲ ತತ್ವಗಳನ್ನು ಜಗತ್ತಿನಲ್ಲಿ ಹರಡಿದರು. ಹಿಂದುಸ್ಥಾನಕ್ಕೆ ಬಂದಕೂಡಲೆ ಇವರು ಹಿಂದೀ ರಾಷ್ಟ್ರದಲ್ಲಿಯ ಸುಶಿಕ್ಷಿತರಿಗೆ ಹಿಂದು ಧರ್ಮದ ಉಜ್ವಲ ತತ್ವಗಳನ್ನೂ, ದೈದೀಪ್ಯಮಾನ ಪ್ರಾಚೀನ ವೈಭವವನ್ನೂ, ಅತ್ಯಂತ ಶ್ರೇಷ್ಠವಾದ ಸಂಸ್ಕೃತಿಯನ್ನೂ ತಮ್ಮ ಸ್ಫೂರ್ತಿದಾಯಕ ಭಾಷಣಗಳಿಂದ ತಿಳಿಸಿಕೊಟ್ಟರು.

ಕಾಶಿಯಲ್ಲಿಯ ಹಿಂದು ವಿಶ್ವವಿದ್ಯಾಲಯದ ಸ್ಥಾಪನೆಯ ಶ್ರೇಯಸ್ಸು ಕೂಡಾ ಇವರಿಗೆ ಸಲ್ಲತಕ್ಕದ್ದಾಗಿದೆ. ಏಕೆಂದರೆ ಕಾಶಿಯಲ್ಲಿ ಇವರು ಸ್ಥಾಪಿಸಿದ ಸೆಂಟ್ರಲ್ ಕಾಲೇಜವೇ ಹಿಂದೂ ಯುನಿವ್ಹರ್ಸಿಟಿಯ ಪ್ರಮುಖ ಮಧ್ಯವರ್ತಿ ವಿದ್ಯಾಲಯವಾಗಿದೆ. ಹಿಂದು ಧರ್ಮದ ಶಿಕ್ಷಣವು ಯುನಿವ್ಹರ್ಸಿಟಿಯ ಶಿಕ್ಷಣಕ್ರಮದಲ್ಲಿಯ ಒಂದು ಅವಶ್ಯಕ ಭಾಗ ಮಾಡಿದ್ದರು. ಇವರು ಹಿಂದು ಧರ್ಮಾಭಿಮಾನಿಗಳಾಗಿದ್ದರೂ ಹಿಂದು ಧರ್ಮದಲ್ಲಿಯ ಅನಿಷ್ಟ ರೂಢಿಗೇನೂ ಬೆಂಬಲವಾಗಿರಲೇ ಇಲ್ಲ. ಅಸ್ಪೃಶ್ಯರೋದ್ಧಾರಕ್ಕಾಗಿ ಇವರು ಅನೇಕ ಶಾಲೆಗಳನ್ನು ಸ್ಥಾಪಿಸಿದರು.

ಶರಣಸಂದೇಶದ ವಿಶೇಷಾಂಕ.

ಮಹಾತ್ಮಾ ಗಾಂಧಿಯವರ ೬೫ನೆಯ ವರ್ಷದ ವರ್ಧಂತಿಯ ನಿಮಿತ್ತವಾಗಿ,

ತಾ. ೨-೧೦-೩೩ ನೆಯ ಸೋಮವಾರ ಶರಣಸಂದೇಶದ ವಿಶೇಷಾಂಕವು ಪ್ರಕಟವಾಗುವುದು.

ಗಾಂಧೀಜಿಯವರು ಜಗತ್ತಿಗೆ ಬೋಧಿಸಿದ ದಿವ್ಯತರವಾದ ತತ್ವಗಳನ್ನೂ ಗಾಂಧೀಜಿಯವರಿಂದಾದ ಕ್ರಾಂತಿಯನ್ನೂ ಕುರಿತು ಬರೆದ ಮಹತ್ವದ ಲೇಖನಗಳು ಆ ಸಂಚಿಕೆಯಲ್ಲಿ ಪ್ರಕಟವಾಗುವವು.

ಮ್ಯಾನೇಜರ.

ಶಿವಶರಣರು ಮಾಡಿದ ಧರ್ಮ ಜಾಗೃತಿ.

[ಬೆಂಗಳೂರು ನಗರದ ಶ್ರೀ. ಗೌ. ವೀರಭದ್ರಪ್ಪನವರ ವೇದ ವಿದ್ಯಾಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಶ್ರೀ ಸರ್ಪಭೂಷಣ ಮಠಾಧ್ಯಕ್ಷರಾದ ಶ್ರೀಮನ್ನಿರಂಜನ. ಪ್ರ. ಶ್ರೀ ಮಹಾದೇವ ಸ್ವಾಮಿಗಳವರ ಭಾಷಣದ ಸಾರಾಂಶ.]

(ಶನಿವಾರ ತಾ. ೨-೯-೧೯೩೩.)

"ಹಿಂದೂ ಸಮಾಜವು ಪ್ರಪಂಚದ ಎಲ್ಲ ಮುಂದುವರಿದ ಧರ್ಮಗಳಲ್ಲೊಂದಾಗಿದೆ. ಇದರ ಅಸ್ತಿತ್ವವು ವೇದೋಪನಿಷತ್ತುಗಳ ಮೇಲೆ ನಿಂತಿದೆ. ವೇದೋಪನಿಷತ್ತುಗಳ ತತ್ವಗಳೇ ಹಿಂದೂ ಧರ್ಮದ ತಿರುಳು. ವೀರಶೈವ ಧರ್ಮವೂ ಹಿಂದೂ ಧರ್ಮದ ಅಂಗವಾಗಿರುವುದರಿಂದ, ವೀರಶೈವ ಧರ್ಮತತ್ವಗಳೂ ಅವುಗಳಿಂದಲೇ ಜೀವಿಸಿರುವವು. ಆದುದರಿಂದ ವೀರಶೈವ ಮತಾವಲಂಬಿಗಳು ಅಂತಹ ಪವಿತ್ರವಾದ ವೇದೋಪನಿಷತ್ತುಗಳನ್ನು ಸಾಧ್ಯವಾದಷ್ಟು ಅಧ್ಯಯನ ಮಾಡಬೇಕು.

ಮನುಷ್ಯನ ಅಂತಿಮ ಧ್ಯೇಯವು ಆತ್ಮಸಾಕ್ಷಾತ್ಕಾರವನ್ನು ಹೊಂದುವುದು, ಆತ್ಮಸಾಕ್ಷಾತ್ಕಾರವನ್ನು ಹೊಂದುವುದೆಂದರೆ ಮಾನವನ ನೈತಿಕ, ಆಧ್ಯಾತ್ಮಿಕ, ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಗುರಿಯನ್ನು ದಾಟಿ ಪರಾಕಾಷ್ಠ ದೆಸೆಯನ್ನು ಹೊಂದುವುದು. ಆಧ್ಯಾತ್ಮಿಕ ಅಥವಾ [illegible] ವ್ಯವಸ್ಥೆಯು ನೈತಿಕ ಮತ್ತು ಸಾಮಾಜಿಕ ವ್ಯವಸ್ಥೆಗಳಿಂದಲೇ ರೂಪುಗೊಂಡಿರುವುದೆಂದು ಹೇಳಬಹುದು.

ಧರ್ಮದ ನಿಜವಾದ ರೂಪವನ್ನು ಪ್ರತಿ ವ್ಯಕ್ತಿಯೂ ತಿಳಿಯಬೇಕಾಗಿದೆ. ಧರ್ಮದ ಮೂಲ ಪ್ರವಾಹವೇ ಹೆಪ್ಪುಗಟ್ಟಿ ವೀರಶೈವ ಧರ್ಮವಾಗಿದೆ. ಈ ಧರ್ಮ ಬಹುಕಾಲದಿಂದ ಹಿಂದಿನದು. ಅದರ ಧರ್ಮ ತತ್ವಗಳು ಹಿಂದಿನ ಅಸಂಖ್ಯ ಮಹಿಮಾಪುರುಷರಿಂದ ಲೋಕದ ಜನಗಳಿಗೆ ಬೋಧೆಯಾಗಿವೆ. ಆ ಮಹಿಮಾಪುರುಷರ ಪವಿತ್ರ ಬೋಧನೆಗಳಿಂದಲೂ ಅವರ ಕೃತಿಗಳಿಂದಲೂ ಇಂದು ವೀರಶೈವ ಸಮಾಜವು ಬದುಕಿ ಬಂದಿರುತ್ತದೆ. ಅವುಗಳಿಂದಲೇ ವೀರಶೈವ ಧರ್ಮದ ಮೂಲ ಸ್ವರೂಪವು ನಮಗೆ ಕಾಣಬರುವುದು. ಆದುದರಿಂದ ವೀರಶೈವ ಧರ್ಮಗ್ರಂಥಗಳ ಯಥಾರ್ಥ ಜ್ಞಾನವನ್ನು ಹೊಂದಬೇಕಾದರೆ ಆ ಮಹಾಮಹಿಮರ ಇತಿಹಾಸವನ್ನೂ ಅವರ ಅನುಭವಪೂರ್ಣವಾದ, ಹೃದಯದಿಂದ ಹರಿದು ಪತಿತರನ್ನು ಪಾವನರನ್ನಾಗಿ ಮಾಡಿದ ಬೋಧನಾಪ್ರವಾಹವನ್ನೂ ನಾವು ತಿಳಿಯಬೇಕಾಗಿದೆ. ಅಂತಹ ಮಹಿಮಾಪುರುಷರಲ್ಲಿ ಬಸವೇಶನು ಪ್ರಖ್ಯಾತನು.

ಬಸವೇಶ್ವರನು ಮತ್ತು ವೇದವು

ಬಸವೇಶ್ವರನು ವೇದವನ್ನು ತಿರಸ್ಕರಿಸುವುದಿಲ್ಲ. ವೀರಶೈವ ಧರ್ಮಸಮ್ಬಂಧವಾದ ವೇದತತ್ವಗಳನ್ನೂ, ವೇದ ಮಂತ್ರಗಳನ್ನೂ ಅನೇಕ ವಚನಗಳಲ್ಲಿ ಆ ಮೂಲವಾಗಿ ಉದಾಹರಿಸಿರುವುದನ್ನು ನೋಡಬಹುದು. ವೇದಗಳನ್ನು ನಿರಾಕರಿಸಿದ್ದರೆ ಅವುಗಳ ತತ್ವಗಳಿಗೆಂದಿಗೂ ಮಹತ್ವ ಕೊಡುತ್ತಿರಲಿಲ್ಲ. ಆದರೆ "ಈಶ್ವರ ಸದ್ಭಾವೇ ಲಿಂಪ್ರಮಾಣಮೆಂಬ ಮೀಮಾಂಸಕನ ಮೂಗಿನ ಕೊನೆಯನು ವಿಶ್ವತೋಚಕ್ಷುರುತ, ವಿಶ್ವತೋಮುಖ, ವಿಶ್ವತೋ ಬಾಹುರುತ ವಿಶ್ವತಸ್ಪಾತ್, ಸಂಬಾಹುಭ್ಯಾಂ ಧಮತಿ ಸಂಪತತ್ರೈರ್ದ್ಯಾವಾ ಭೂಮೀಜನಯನ್ ದೇವ ಏಕ ಏವ ಎಂಬ ಸುರಿಗೆಯಲಿ ಅರಿದು ವೈಶೇಷಿಕವೆಂಬ ಇಟ್ಟಿಗೆಯ ಲೊರಸಿ, ಕೂಡಲ ಸಂಗಯ್ಯನೆಂಬ ಕನ್ನಡಿಯ ತೋರಿದೆನಷ್ಟೆ" ಮುಂತಾದ ವಚನಗಳಿಂದ ಯಜ್ಞ ಯಾಗಾದಿಗಳಲ್ಲಿ-ಪಶುವಧೆ ಮಾಡಬೇಕೆಂಬ ಪೂರ್ವ ಕರ್ಮಬೋಧಕ ವೇದಾರ್ಥವನ್ನು ನಿರಾಕರಿಸುವನಲ್ಲದೆ ಸಮಾಜ ಮತ್ತು ಲೋಕ ಸೇವೆಗಳನ್ನು ಮಾಡತಕ್ಕ ಸಮಯದಲ್ಲಿ ತೊಂದರೆಯನ್ನುಂಟುಮಾಡತಕ್ಕ ವೇದ, ಶಾಸ್ತ್ರ, ಪುರಾಣ ಮತ್ತು ತರ್ಕ ಇವೇ ಮೊದಲಾದವುಗಳ ನಿರ್ಬಂಧವಿದ್ದರೆ ಅವುಗಳನ್ನು ಕಿತ್ತೊಗೆಯುವ ಅಸಾಧಾರಣವಾದ ಸಾಮರ್ಥ್ಯವು ಅವರಲ್ಲಿರುವುದರಿಂದ "ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ ತರ್ಕದ ಬೆನ್ನ ಬಾರನೆತ್ತುವೆ ಆಗಮದ ಮೂಗ ಕೊಯ್ಯುವೆ ನೋಡಯ್ಯ, ಮಹಾದಾನಿ ಕೂಡಲಸಂಗಮದೇವ ಮಾದಾರ ಚೆನ್ನಯ್ಯನ ಮನೆಯ ಮಗ ಕಾರಣ" ಇತ್ಯಾದಿ ವಚನಗಳನ್ನು ಹೇಳಿರುತ್ತಾರೆ. ತಮ್ಮ ಸಮಾಜ ಸೇವಾ ಕಾರ್ಯದಲ್ಲಿ ಅಡ್ಡವಾಗಿ, ಶಾಸ್ತ್ರಾಧಾರಗಳಿವೆಯೆಂದು ಯಾರು ಬಂದರೂ ಅವರನ್ನು ಪ್ರತಿಭಟಿಸುವ ಶಕ್ತಿ ಅವರಿಗಿದ್ದಿತು. ಇದರಿಂದ ಅವರು ವೇದಬಾಹಿರರೆಂದು ಹೇಳಲಾಗುವದಿಲ್ಲ.

ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ಖಂಡಿಸುವ ಸಮಯದಲ್ಲಿ ಜಂಗಮವೇಷಧಾರಿಗಳಾಗಿ ಆಚಾರಶೂನ್ಯರಾದವರನ್ನು "ಅಪ್ಯಾಯನಕ್ಕೆ ಅನ್ನವ ನೀಡುವೆ ಲಾಂಛನಕ್ಕೆ ಶರಣೆಂಬೆ, ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ನೀ ಸಾಕ್ಷಿಯಾಗಿ ಛೀ ಎಂಬೆ" ಮುಂತಾಗಿ ಖಂಡಿಸುತ್ತಿದ್ದರು.

ಶರಣರು ಜನ್ಮವಿಶಿಷ್ಟ ಉಚ್ಚನೀಚತೆಗಳನ್ನು ನಿರಾಕರಿಸಿದರು

ಉಚ್ಚನೀಚತೆಯ ಭೂತವು ಸಮಾಜದಲ್ಲಿ ಬೇರೂರಿದ್ದಿತು, ಅದನ್ನು ನಿರ್ಮೂಲ ಮಾಡಲು ಶರಣರು ಸತತವೂ ಪ್ರಯತ್ನಪಡುತ್ತಿದ್ದರು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರನೆಲ್ಲರ ನೊಂದೇಯೆಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರ ನೊಂದೇ ಎಂಬೆ. ಶಿವಲಿಂಗವಿದ್ದವನೇ ಕುಲಜನು........ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ, ಕೂಡಲಸಂಗಮದೇವ ನಂಬುವೆ ನಿಮ್ಮ ಶರಣರನು" ಈ ಮುಂತಾದ ವಚನಗಳಿಂದ ಅವರು ಜನ್ಮವಿಶಿಷ್ಟ ಉಚ್ಚನೀಚತೆಗಳನ್ನೆಷ್ಟು ಖಂಡಿಸಿರುವರೆಂಬುದು ತಿಳಿಯುತ್ತದೆ."

ಖಾದಿಯೇ ಗಾಂಧಿಗೆ ಪ್ರಾಣದ ವಸ್ತು.

ಹಿಂದಣ ೫೦ ವರುಷಗಳ.

ವೀರಶೈವ ಸಮಾಜ ಸ್ಥಿತಿ.

ಧಾರ್ಮಿಕ ಜಾಗೃತಿ.

ವೀರಶೈವ ಸಮಾಜವು ಕಳೆದ ೫೦ ವರುಷಗಳಲ್ಲಿ ಶಿಕ್ಷಣ ಸಂಬಂಧವಾಗಿ ವಿಶೇಷ ಪರಿಶ್ರಮ ಪಟ್ಟಿತು. ಆದರೆ ಸಾಂಪತ್ತಿಕ ವಿಷಯದಲ್ಲಿ ತುಂಬಾ ನಿರ್ಲಕ್ಷಿಸಿದ್ದರಿಂದ ಶೋಚನೀಯ ಸ್ಥಿತಿಗೀಡಾಗಿರುವುದೆಂಬಂಶಗಳನ್ನು ಈ ಮುಂಚಿನ ಲೇಖನಗಳಲ್ಲಿ ವಿವರಿಸಿದ್ದಾಗಿದೆಯಷ್ಟೆ. ಸಮಾಜದ ಉನ್ನತಾವನತಿಗಳಿಗೆ ಶಿಕ್ಷಣ ಮತ್ತು ಸಾಂಪತ್ತಿಕ ಸ್ಥಿತಿಗಳು ಹೇಗೆ ಮುಖ್ಯ ಕಾರಣಗಳಾಗಿವೆಯೋ ಹಾಗೆಯೇ ಧಾರ್ಮಿಕ ಸ್ಥಿತಿಯೂ ಪ್ರಮುಖ ಕಾರಣವಾಗಿದೆ. ಆದಕಾರಣ ಕಳೆದ ೫೦ ವರುಷಗಳಿಂದ ಧಾರ್ಮಿಕ ಜಾಗ್ರತಿಯು ಯಾವ ಪ್ರಕಾರ ಸಂಭವಿಸಿತೆಂಬುದನ್ನು ನೋಡೋಣ.

ಧಾರ್ಮಿಕ ಜಾಗೃತಿಯನ್ನು ಧರ್ಮತತ್ವಗಳ ಪ್ರಸಾರದ ಮೇಲಿಂದಲೇ ಗೊತ್ತುಪಡಿಸಬೇಕಾಗಿದೆ. ಧರ್ಮ ತತ್ವಗಳಾದರೋ ಅವುಗಳನ್ನಾಚರಿಸುವ ಪೂಜ್ಯ ವಿಭೂತಿಗಳಿಂದಲೂ ಅವುಗಳ ಪ್ರಸಾರಣೆಗಾಗಿ ಪ್ರಯತ್ನಿಸುವ ಧರ್ಮಾಭಿಮಾನಿಗಳಿಂದಲೂ ಜನಾಂಗದ ಆಚರಣೆಯಲ್ಲಿ ಬರುತ್ತವೆ. ಮತತತ್ವಗಳು ಎಷ್ಟು ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚು ಜನಗಳಿಂದ ಆಚರಿಸಲ್ಪಡುತ್ತವೆಯೋ ಅಷ್ಟು ಆ ಮತೀಯರಲ್ಲಿ ಧಾರ್ಮಿಕ ಜಾಗ್ರತಿಯು ಹೆಚ್ಚಿನ ಪ್ರಮಾಣದಲ್ಲಿದೆಯೆಂದು ತಿಳಿಯಬೇಕು. ಕೇವಲ ಉದಾತ್ತ ತತ್ವಗಳಿದ್ದ ಮಾತ್ರದಿಂದ ಧಾರ್ಮಿಕ ಜಾಗೃತಿಯಾಗುವುದಿಲ್ಲ. ಆ ಪ್ರಕಾರ ಆಚರಿಸುವವರು ಅಧಿಕವಾದಾಗಲೇ ಆ ಧರ್ಮದ ಮಹತ್ವವು ಜನಸಾಮಾನ್ಯರಿಗೂ ಗೊತ್ತಾಗುತ್ತದೆ.

ಆದಕಾರಣ ಧರ್ಮಜಾಗೃತಿಗೆ ಧಾರ್ಮಿಕ ವಿಭೂತಿಗಳೂ ಧರ್ಮಾಭಿಮಾನಿಗಳ ಪ್ರಯತ್ನಗಳೂ ಅತ್ಯವಶ್ಯಕವೆಂದು ಸ್ಪಷ್ಟವಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಕಳೆದರ್ಧ ಶತಮಾನದಲ್ಲಿ ಧಾರ್ಮಿಕ ಪೂಜ್ಯ ವಿಭೂತಿಗಳು ಈ ಸಮಾಜದಲ್ಲಿ ಎಷ್ಟೋ ಧಾರ್ಮಿಕ ಜಾಗೃತಿಯನ್ನುಂಟುಮಾಡಿದರೆಂದು ಧಾರಾಳವಾಗಿ ಹೇಳಬಹುದು. ಇಂತಹ ಪರಮ ಪೂಜ್ಯರಲ್ಲಿ ಲಿಂಗೈಕ್ಯರಾದ **ಅಥಣಿ ಶ್ರೀ ಮಹಾ ಶಿವಯೋಗಿಗಳವರು, ಇಳಕಲ್ಲ ಶ್ರೀ ಮಹಾಂತಸ್ವಾಮಿಗಳವರು, ಮತ್ತು ಹಾಳಕೆರೆ ಶ್ರೀ ಅನ್ನದಾನ ಮಹಾಸ್ವಾಮಿಗಳವರು ಸೊಲ್ಲಾಪುರದ ಶ್ರೀ ವಾಲ್ಮೀಕಪಾದದ ಶರಣರು** ಮೊದಲಾದ ಶರಣ ಸ್ಥಳ ಮತ್ತು ಐಕ್ಯಸ್ಥಳಗಳನ್ನಳವಡಿಸಿಕೊಂಡ ವಿಭೂತಿಗಳು ಪರಮತೀಯರಿಗೂ ಪೂಜ್ಯರಾಗಿ ವೀರಶೈವ ಮತದ ಮಹತ್ವವನ್ನು ವಿಶೇಷವಾಗಿ ವ್ಯಕ್ತಗೊಳಿಸಿದರು.

ವೀರಶೈವ ಮತತತ್ವಗಳಂತೆ ಆಚರಿಸುವ ಭಕ್ತರು ಗುರುಗಳು ಜಂಗಮರು ಅರ್ಧ ಶತಮಾನಗಳ ಹಿಂದೆ ಎಷ್ಟು ಪ್ರಮಾಣದಲ್ಲಿದ್ದರೋ ಅಷ್ಟು ಪ್ರಮಾಣವು ಮುಂದುಳಿಯಲಿಲ್ಲ. ದಿನೇದಿನೇ ಇಂತಹ ಪೂಜ್ಯರ ಸಂಖ್ಯೆಯು ಕಡಿಮೆಯಾಗುತ್ತಾ ಬಂದಿತು. ಮೇಲಣ ವಿಭೂತಿಗಳೆಲ್ಲಾ ಗುರುಜಂಗಮರಾಚರಣೆಯು ಅಸ್ತವಾಗುತ್ತಿರುವ ಈ ಆಧುನಿಕ ಕಾರ್ಗತ್ತಲೆಯಲ್ಲಿ ಕೊನೆಗೆ ಹೊಳೆದ ದಿವ್ಯ ಜ್ಯೋತಿಗಳೆಂದೇ ಹೇಳಬಹುದು. ಈಗ ಆ ವಿಧವಾದ ಮುಂದೆ ಬೆಳಗಬಹುದಾದ ಮಿನುಗುವ ಗುರುಜಂಗಮ ಮೂರ್ತಿಗಳು ವಿರಳ.

ಕೇವಲ ಶಿವಾನುಭವಿಗಳಾಗಿದ್ದ ಆ ಪರಮಪೂಜ್ಯ ವಿಭೂತಿಗಳಂತೆಯೇ ವೀರಶೈವ ಸಮಾಜವೇ ಶಿವ ಸ್ವರೂಪವೆಂದು ತಿಳಿದು ಇದರ ಅನುಭವದಲ್ಲಿಯೇ ಹಗಲಿರುಳೂ ಚಿಂತಿಸುವ ಪರಮಪೂಜ್ಯರೂ ಕಳೆದರ್ಧ ಶತಮಾನದಲ್ಲಿ ಪ್ರಕಾಶಿಸಿದರು. **ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರು** ೨೫ ವರುಷ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಸಂಚರಿಸಿ ಅಭೂತಪೂರ್ವವಾದ ಸಮಾಜ ಜಾಗೃತಿಯನ್ನುಂಟುಮಾಡಿದರು. ವೀರಶೈವ ಸಮಾಜದ ಘನತೆ ಸುಧಾರಣೆಗಳ ಸಂಬಂಧವಾಗಿ ಮಹಾಪೂಜ್ಯರು ಮಾಡಿದ ಮಹತ್ಕಾರ್ಯಗಳು ವೀರಶೈವ ಸಮಾಜದ ಆಧುನಿಕ ಚರಿತ್ರೆಯಲ್ಲಿ ತುಂಬಾ ಪ್ರಕಾಶಿಸದಿರಲಾರವು.

ಈ ಮಹಾಪೂಜ್ಯರಂತೆಯೇ ಸಮಾಜೋನ್ನತಿಗಾಗಿ ಲಿಂಗೈಕ್ಯರಾದ ಶ್ರೀ ಹಾನಗಲ್ಲ ಮಹಾಸ್ವಾಮಿಗಳವರೂ ಕರ್ನಾಟಕದಲ್ಲಿ ಬಹು ಜಾಗೃತಿಯನ್ನುಂಟುಮಾಡಿದರು. ಗುರುಜಂಗಮರು ಮತಾಚಾರಗಳಂತೆ ಪವಿತ್ರಾಚರಣೆಯವರೂ ಲೋಕೋದ್ಧಾರಕರೂ ಆಗಬೇಕೆಂದು ಆ ಮಹಾಸ್ವಾಮಿಗಳವರು ವಿಶೇಷವಾಗಿ ಪ್ರಯತ್ನಿಸಿದರು. ವೀರಶೈವ ಸಮಾಜದ ಆಧುನಿಕ ಚರಿತ್ರೆಯಲ್ಲಿ ಈ ಮಹಾ ಸ್ವಾಮಿಗಳ ದಿವ್ಯ ಕಾರ್ಯಗಳೂ ಬಹು ಪ್ರಾಮುಖ್ಯವಾಗಿಯೇ ಪರಿಗಣಿಸಲ್ಪಡದಿರಲಾರವು.

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಮತ್ತು ಶ್ರೀಮನ್ನಿರಂಜನ ಶ್ರೀ ಹಾನಗಲ್ಲ ಮಹಾಸ್ವಾಮಿಗಳವರು ವೀರಶೈವ ಸಮಾಜೋನ್ನತಿಗಾಗಿಯೇ ಅವಿಶ್ರಾಂತ ಶ್ರಮ ಪಡುತ್ತಿದ್ದರೂ ಉಭಯ ಪೂಜ್ಯರ ಅಭಿಪ್ರಾಯಗಳು ಮಾತ್ರ ಅನೇಕ ಸಂಗತಿಗಳಲ್ಲಿ ಭಿನ್ನವಾಗಿದ್ದವು. ಆದುದರಿಂದ ಕಾರ್ಯಗಳೂ ಭಿನ್ನವಾಗಿಯೇ ಜರುಗುತ್ತಿದ್ದವು. ಎಷ್ಟೋ ವರ್ಷಗಳವರೆಗೆ ಈ ಭಿನ್ನಾಭಿಪ್ರಾಯಗಳಿಂದ ಎರಡು ಪಂಗಡಗಳಾಗಿಯೂ ಪರಿಣಮಿಸಿದ್ದವು. ಆದಕಾರಣ ಈ ಉಭಯ ಮಹಾಪೂಜ್ಯರಿಂದ ಸಮಾಜಕ್ಕಾಗಬಹುದಾಗಿದ್ದ ಇನ್ನೂ ಎಷ್ಟೋ ಸುಧಾರಣೆಗಳು ನಿಂತುಹೋದುದು ಸಮಾಜದ ದುರ್ದೈವವೇ ಸರಿ.

ಈ ಉಭಯ ಮಹಾಸ್ವಾಮಿಗಳ ಘನತೆ ಗೌರವಗಳು ಸಮಾಜದಲ್ಲಿ ವಿಶೇಷವಾಗಿ ಸ್ಥಾಪನೆಯಾದುದು ಅನೇಕ ಅಸೂಯಾಪರರಿಗೆ ತುಂಬಾ ವ್ಯಸನವನ್ನುಂಟುಮಾಡಿದ್ದಿತು. ಅವರು ಸಮಯವನ್ನೇ ನಿರೀಕ್ಷಿಸುತ್ತಿದ್ದರು. ಈ ಉಭಯ ಮಹಾಸ್ವಾಮಿಗಳ ಭಿನ್ನಾಭಿಪ್ರಾಯದಿಂದುಂಟಾಗಿದ್ದ ವಿಷಾದಕರ ಸ್ಥಿತಿಯು ತಮ್ಮ ಕಾರ್ಯ ಸಾಧನೆಗೆ ಅನುಕೂಲವೆಂದು ಯೋಚಿಸಿ ವ್ಯಕ್ತಿದ್ವೇಷದಿಂದ ಮತಕಲಹವನ್ನು ಪ್ರಾರಂಭಿಸಿದರು. ಅದು ದಿನೇ ದಿನೇ ಬೆಳೆಯುತ್ತ ಕೊನೆಗೆ ಅದೊಂದು ಪಂಥವಾಗಿಯೇ ಪರಿಣಮಿಸಿತು. ಈ ಪ್ರಕಾರ ಧಾರ್ಮಿಕ ಜಾಗೃತಿಯ ಪ್ರಯತ್ನವು ದಿನೇದಿನೇ ವ್ಯತ್ಯಸ್ತವಾಗುತ್ತ ಬಂದಿತು. [ಸಂಪಾದಕ.]

ಖಾದಿಯೇ ದೇಶದ ಕಾಮಧೇನು.

ಬಾಗಲಕೋಟಿ ಮುನಸಿಪಾಲಿಟಿ ಯಾರಿಗಾಗಿದೆ?

ಕರ್ನಾಟಕದಲ್ಲಿ ಬ್ರಾಹ್ಮಣರಿಗಿಂತಲೂ ಬ್ರಾಹ್ಮಣೇತರರ ಸಂಖ್ಯೆ ಹೆಚ್ಚಲ್ಲವೇ? ಬ್ರಾಹ್ಮಣೇತರರಲ್ಲಿ ವೀರಶೈವರು ಸಂಖ್ಯೆ, ವಿದ್ಯೆ, ಸಂಪತ್ತುಗಳಲ್ಲಿ ಮುಂದಿದ್ದಾರಷ್ಟೆ. ಹೀಗಿರುವಾಗ ಕರ್ನಾಟಕದ ಸಾರ್ವಜನಿಕ ಸಂಸ್ಥೆಗಳಾದ **ಲೋಕಲ್‌ಬೋರ್ಡು, ಮುನಶಿಪಾಲಿಟಿಗಳಲ್ಲಿ ಬ್ರಾಹ್ಮಣೇತರರೇ ಹೆಚ್ಚಾಗಿರುವುದು ಸ್ವಾಭಾವಿಕವು.** ಮತ್ತು ಹಾಗಿರಬೇಕಾದುದು ನ್ಯಾಯವಾಗಿಯೂ ಅದೆ.

ಈಗ ಅನೇಕ ಮುನಸಿಪಾಲಿಟಿ ಲೋಕಲ್‌ಬೋರ್ಡುಗಳಲ್ಲಿ ಬ್ರಾಹ್ಮಣೇತರರು ವಿಶೇಷವಾಗಿ ವೀರಶೈವ ಮೆಂಬರರ ಸಂಖ್ಯೆ ಹೆಚ್ಚಾದ ಮಾತ್ರದಲ್ಲಿ ಎಲ್ಲ ಮುನಸಿಪಾಲಿಟಿ ಲೋಕಲ್ ಬೋರ್ಡು ಲಿಂಗಾಯತರ ಪಾಲಾಗಿವೆಯೆಂದು ವೃಥಾ ದೋಷಾರೋಪಣೆ ಮಾಡುತ್ತಿದ್ದಾರೆ. ನಿಜವಾದ ಅಂತರ್ಯ ಸ್ಥಿತಿಯೇ ಬೇರೆ ಇರುತ್ತದೆ. ಇದಕ್ಕೆ ಈ ನಮ್ಮ ಬಾಗಲಕೋಟಿ ಮುನಸಿಪಾಲಿಟಿಯನ್ನೇ ದೃಷ್ಟಾಂತವಾಗಿ ತೆಗೆದುಕೊಳ್ಳಿರಿ.

ಮಿ. ದೇವೂರ ಇವರು ಇಲ್ಲಿ ಅಡ್ಮಿನಿಸ್ಟ್ರೇಟರ ಇದ್ದುದಕ್ಕೆ ಮಿ. ಗುರುಸಂಗಪ್ಪನವರು ಪ್ರೆಸಿಡೆಂಟರಿದ್ದಾಗ ಮುನಸಿಪಾಲಿಟಿಯು ಲಿಂಗಾಯತರ ಪಾಲಾಯಿತೆಂದು ಕಮಿಶನ್ ಸಾಹೇಬರವರಿಗೆ ಗೊಂದಲವೆಬ್ಬಿಸಿ ಮನಸಿಗೆ ಬಂದಂತೆ ಠರಾವು ಮಾಡಿಕೊಂಡಿದ್ದರು. ಮಿ. ದೇವೂರ ಇವರು ಒಬ್ಬರೇ ಮುನಸಿಪಾಲಿಟಿಯಲ್ಲಿ ಇದ್ದುದಕ್ಕೆ ಇಷ್ಟು ಗದ್ದಲ ಮಾಡಿದ್ದರಲ್ಲಾ! ಈಗಿನ ಸ್ಥಿತಿ ಹೇಗಿದೆ ನೋಡಿರಿ. ಈಗ ಬಾಗಲಕೋಟಿ ಮುನಸಿಪಾಲಿಟಿಯು ಯಾರಿಗಾಗಿದೆ?

ಮುನಸಿಪಾಲಿಟಿಯ ಉತ್ಪನ್ನ.

ಸನ್ ೧೯೩೨-೧೯೩೩ನೇ ವರ್ಷ,

ಜಕಾತಿ	೩೮೬೭೧
ಟೋಲ್	೬೮೪೬
ಮನಿಸಪಟ್ಟಿ	೧೭೧೮೫
ಕಸದಪಟ್ಟಿ	೨೬೪೨
ಮಾರ್ಕೆಟುಗಳ ಬಾಡಗಿ	೮೩೪೬
ಸಾಲಿಗಳಿಗೆ ಸರ್ಕಾರಿ ಗ್ರ್ಯಾ.	೧೫೯೪
ಬಾಕಿ ಕಿರಕಳ ಉತ್ಪನ್ನ	೧೧೮೬೪
ಬಾಕಿ ಉತ್ಪನ್ನ	೪೪೩೧೬

ಇದೇ ವರುಷದಲ್ಲಿ ಒಂದು ತಿಂಗಳಿಗೆ ೨೧೩೬ ರೂ. ಪ್ರಕಾರ ಒಟ್ಟು ೧೩. ಶಾಖೆಗಳಲ್ಲಿ ಮುನಸಿಪಾಲಿಟಿಯು ವೆಚ್ಚ ಮಾಡಿರುತ್ತದೆ. ಇದಲ್ಲದೆ ವರುಷಕ್ಕೆ ೨೫ ಸಾವಿರ ರೂ. ಜನರ ಆರೋಗ್ಯ ಮೊದಲಾದ ಸಂಗತಿಗಳಿಗಾಗಿ ವೆಚ್ಚವಾಗುತ್ತದೆ.

ಮುನಶಿಪಾಲಿಟಿ ನೌಕರರ ವಿವರ.

ಚೀಫ್ ಆಫೀಸರ ಮೊದಲುಗೊಂಡು ಮುನಸಿಪಾಲಿಟಿ ೧೦ ಜನ ನೌಕರರಲ್ಲಿ ಇಂಗ್ರೇಜಿ ಕಾರಕೂನ ಒಬ್ಬರು ಮಾತ್ರ ಮುಸಲ್ಮಾನರಿದ್ದಾರೆ. ಉಳಿದ ೯ ಜನರೂ ಬ್ರಾಹ್ಮಣರೇ ಇದ್ದಾರೆ! ಈ ಹತ್ತು ಜನ ನೌಕರರಿಗೆ ತಿಂಗಳಿಗೆ ೬೪೧ ರೂ. ಸಂಬಳ ಸಲ್ಲುತ್ತದೆ. ಇದರಲ್ಲಿ ಒಬ್ಬ ಬ್ರಾಹ್ಮಣೇತರರ ೪೦ ರೂ. ಸಂಬಳ ಹೋದರೆ ಬಾಕಿ ತಿಂಗಳಿಗೆ ೬೦೧ ರೂ. ಬ್ರಾಹ್ಮಣರಿಗೇನೇ ಸಲ್ಲುತ್ತದೆ. ಎಂದ ಮೇಲೆ ಈ ಮುನಸಿಪಾಲಿಟಿ ಯಾರಿಗಾಗಿ ಇದ್ದಂತಾಯಿತು?

ನಾಕಾ ಕಾರಕೂನರು ೬ ಜನರಿದ್ದು ಇವರಿಗೆ ತಿಂಗಳಿಗೆ ೧೨೬-೧೨-೦ ಸಂಬಳ ಸಲ್ಲುತ್ತದೆ. ಇವರಲ್ಲಿ ಎಲ್ಲಾ ಜಾತಿಯ ಧರ್ಮಗಳ ಬ್ರಾಹ್ಮಣೇತರರು ಕೂಡಿ ಮೂರು ಜನರಿದ್ದಾರೆ. ಬ್ರಾಹ್ಮಣರೇ ಮಾತ್ರ ಮೂರು ಜನರಿದ್ದಾರೆ. ಅಂದಮೇಲೆ ಚಿಲ್ಲರೆ ನೌಕರಿಗಳಲ್ಲಿಯೂ ಬ್ರಾಹ್ಮಣರೇ ಹೆಚ್ಚಿದ್ದಾರೆಂದು ಗೊತ್ತಾಗುವುದಿಲ್ಲವೇ?

ಶಾಲಾಮಾಸ್ತರರ ಸಂಖ್ಯೆಯು ಇದಕ್ಕೆ ಹೆಚ್ಚಿನ ಸಾಕ್ಷಿ. ಮುನಸಿಪಾಲಿಟಿ ಎ. ವ್ಹಿ. ಸ್ಕೂಲಿನಲ್ಲಿ ೧೧ ಜನ ಮಾಸ್ತರರಿದ್ದಾರೆ. ಈ ಹನ್ನೊಂದು ಜನರೂ ಬ್ರಾಹ್ಮಣರೇ. ಇವರಲ್ಲಿ ತಿಂಗಳಿಗೆ ೧೨೦ ರೂಪಾಯಿಂದ ೪೦ ರೂ. ಸಂಬಳದವರೆಗಿನವರಿದ್ದಾರೆ. ಇವರೆಲ್ಲರಿಗೆ ಕೂಡಿ ತಿಂಗಳಿಗೆ ೬೩೦ ರೂ. ಗಳು ಬ್ರಾಹ್ಮಣರಿಗೇನೇ ಸೇರುತ್ತಾವೆ ಅಂದಮೇಲೆ ಈ ಮುನಶಿಪಾಲಿಟಿಯು ಯಾರಿಗಾಗಿದೆ? ಮೊನ್ನೆ ಮಾತ್ರ ಒಬ್ಬ ಬ್ರಾಹ್ಮಣೇತರ ಶಿಕ್ಷಕರನ್ನು ನೇಮಿಸಿಕೊಂಡಿದ್ದಾರೆ.

ಮುನಸಿಪಾಲಿಟಿಯ ದುಂದುಗಾರಿಕೆ.

ಈ ಪ್ರಕಾರ ಶಿಕ್ಷಕರೆಲ್ಲ ಬ್ರಾಹ್ಮಣರೇ ಇದ್ದು ತಮಗೆ ಅನುಕೂಲವಾಗುವಂತೆ ಶಿಕ್ಷಕರ ಸ್ಥಳವನ್ನು ಹೆಚ್ಚುಮಾಡಿಕೊಂಡಿದ್ದಾರೆ. ಇದರಿಂದ ಮುನಸಿಪಾಲಿಟಿಗೆ ವೃಥಾ ನಷ್ಟವಾಗುತ್ತದೆ. ೧ರಿಂದ ೩ ಸ್ಟ್ಯಾಂಡರ್ಡುಗಳಲ್ಲಿ ಎ. ಬಿ. ಎಂಬ ಎರಡು ತರಗತಿ ಮಾಡಿ ಮೂರು ಜನ ಶಿಕ್ಷಕರನ್ನು ಸುಮ್ಮನೇ ಹೆಚ್ಚು ಮಾಡಿದ್ದಾರೆ. ೧ನೇ ಸ್ಟ್ಯಾಂಡರ್ಡಿನಲ್ಲಿ ೪೦ ಹುಡುಗರಿದ್ದಾರೆ. ೩೫ ಹುಡುಗರವರೆಗೆ ಒಬ್ಬರೇ ಶಿಕ್ಷಕರು ಸಾಕಾಗುತ್ತದೆ. ಕೇವಲ ೫ ಹುಡುಗರಿಗಾಗಿ ಒಬ್ಬ ಶಿಕ್ಷಕರೇಕೆ ಬೇಕು? ಎರಡನೇ ಸ್ಟ್ಯಾಂಡರ್ಡಿನಲ್ಲಿ ೩೮ ಹುಡುಗರಿದ್ದಾರೆ. ೩ ಹುಡುಗರಿಗಾಗಿ ಒಬ್ಬ ಶಿಕ್ಷಕರೇಕೆ ಹೆಚ್ಚು? ೩ನೇ ಸ್ಟ್ಯಾಂಡರ್ಡಿನಲ್ಲಿ ೩೯ ಹುಡುಗರಿದ್ದಾರೆ. ೪ ಹುಡುಗರಿಗಾಗಿಯೇ ಒಬ್ಬ ಶಿಕ್ಷಕರೇ?

ಹೆಚ್ಚಾಗುವ ಹುಡುಗರನ್ನು ತೆಗೆದು ಮೂರು ಜನ ಶಿಕ್ಷಕರನ್ನು ತೆಗೆಯುವುದು ಮುನಶಿಪಾಲಿಟಿಗೆ ಆದಾಯವಲ್ಲವೇ? ಊರಲ್ಲಿ ಬೇರೆ ಹಾಯಸ್ಕೂಲ ಇರುವದರಿಂದ ನಾಲ್ಕಾರು ವಿದ್ಯಾರ್ಥಿಗಳಿಗೇನೂ ತೊಂದರೆಯಾಗುವುದಿಲ್ಲ. ಅಲ್ಲದೆ ಮುನಶಿಪಾಲಿಟಿಯವರು ಬಸವೇಶ್ವರ ಹೈಸ್ಕೂಲಿಗೆ ವರುಷ ೨ ಸಾವಿರ ರೂ. ಗ್ರ್ಯಾಂಟು ಕೊಡುವದರಿಂದ ಅದರ ಉಪಯೋಗ ಮಾಡಿಕೊಳ್ಳಬಾರದೇ? ಹಿಂದಕ್ಕೆ ಖಾದ್ರಿ ಸಾಹೇಬರಿದ್ದಾಗ ಎರಡು ಶಿಕ್ಷಕರ ಸ್ಥಳ ಹೆಚ್ಚಾಗಿವೆಯೆಂದು ತೆಗೆದುಹಾಕಲು ಒತ್ತಾಯ ಪಡಿಸಿದ್ದರು.

ಈ ಎಲ್ಲಾ ಸ್ಥಿತಿಗಳನ್ನು ನೋಡಿದರೆ ಬಾಗಲಕೋಟಿ ಮುನಸಿಪಾಲಿಟಿ ಯಾರಿಗಾಗಿದೆ? ಬ್ರಾಹ್ಮಣರಿಗೇನೇ ಬ್ರಾಹ್ಮಣೇತರರಿಗೇನೆ? ಬ್ರಾಹ್ಮಣೇತರರ ಮತ್ತು ಲಿಂಗಾಯತರ ಪಾಲಾಗಿದೆಯೆಂದು ಸುಮ್ಮನೇ ಗದ್ದಲ ಮಾಡುವದು ದ್ವೇಷದ ಮತ್ತು ಸ್ವಾರ್ಥದ ಲಕ್ಷಣವಲ್ಲವೇ? ಇದರಿಂದ ಈಗಲಾದರೂ ಬ್ರಾಹ್ಮಣೇತರರು ಎಚ್ಚರಿಯಬಾರದೇ?

ಓರ್ವ ರೇಟಪೇಯರ್.

ಖಾದಿಯ ಕೊಂಡು ಬಡವರ ಬದುಕಿಸಿರಿ.

ಓರ್ವ ಕನ್ನಡತಿಯ ವಿಶೇಷ ಸಾಹಸ!

ಶ್ರೀಮತಿ ಸೀತಮ್ಮ ಅಣ್ಣಿಗೇರಿ ಇವರ ಅಮೇರಿಕೆಯಲ್ಲಿಯ ಅನುಭವ.

ಸಾಹಸದ ಪರಮಾವಧಿ:—"ನನ್ನಂತಹ ಮುಪ್ಪಿನ ವಯಸ್ಸಿನ ಹೆಂಗಸು ಅಮೇರಿಕೆಗೆ ಶಿಕ್ಷಣ ಸಂಪಾದಿಸಲು ಹೋಗುವುದನ್ನು ನೋಡಿ ಜನರಾದರೂ ನಗಲಿಕ್ಕಿಲ್ಲಿ? ಇದಲ್ಲದೆ ಇಳಿತರದ ವಯಸ್ಸಿನಲ್ಲಿ ಅಭ್ಯಾಸವಾದರೂ ಹೇಗೆ ಸರಿಬೀಳುವುದು? ದುಡ್ಡಿನ ಕೊರತೆಯಂತೂ ಮಾರ್ಗದ ಮುಂದೆಯೇ ನಿಂತುಕೊಂಡಿದೆ" ಈ ಪ್ರಕಾರದ ಅತ್ಯಂತ ನಿರಾಶಾಜನಕವಾದ ವಿಚಾರಗಳು, ಮೊನ್ನೆಯೆ ಅಮೇರಿಕೆಯಿಂದ ಶಿಕ್ಷಣವನ್ನು ಪೂರೈಸಿಕೊಂಡು ತಿರುಗಿ ಬಂದ ಕನ್ನಡತಿಯಾದ ಶ್ರೀಮತಿ ಸೀತಮ್ಮ ಅಣ್ಣಿಗೇರಿಯವರ ಮನಸ್ಸಿನಲ್ಲಿಯೂ ಅಮೇರಿಕೆಗೆ ಹೊರಡುವ ಪೂರ್ವದಲ್ಲಿ ಉತ್ಪನ್ನವಾಗಿದ್ದವು. ಆದರೂ ಆ ವಿಚಾರಗಳು ಬಹು ದಿವಸ ನಿಲ್ಲಲಿಲ್ಲ. ೧೨ನೆಯ ವರ್ಷದಲ್ಲಿಯೇ ಪ್ರಾಪ್ತವಾದ ವೈಧವ್ಯವನ್ನೂ, ಅನಂತರ ಅತ್ಯಂತ ಕಷ್ಟತರವಾದ ಮಾರ್ಗದಲ್ಲಿ ಪ್ರವಾಸಿಸಿ ಕೊನೆಗೆ ಮುಂಬಯಿಯ ನಾಥೀಬಾಯಿ ಕನ್ಯಾಶಾಲೆಯ ಸುಪರಿಂಟೆಂಡೆಂಟ್‌ರಾದುದನ್ನೂ, ಅಲ್ಲಿಯವರೆಗೆ ತಾವು ಅನುಭವಿಸಿದ ಅತ್ಯಂತ ಕಷ್ಟನಷ್ಟಗಳನ್ನೂ, ಅವುಗಳಲ್ಲಿ ಜಯಶೀಲರಾಗಿ ಕೊನೆಗಂಡುದುದನ್ನೂ ಇವೇ ಮೊದಲಾದ ವಿಚಾರಗಳಿಂದ ಅವರ ಮನಸ್ಸು ಪ್ರಫುಲ್ಲಿತವಾಯಿತು. ಆಗ ಶ್ರೀ. ಭಾಸ್ಕರರಾವ ಕರ್ವೇಯವರು ಅಮೇರಿಕೆಯಲ್ಲಿಯ "ಮಿಲ್ಸ ಕಾಲೇಜ್"ನಿಂದ ತಮ್ಮ ಆಶ್ರಮವಾಸಿಗಳಿಗೆ ಶಿಷ್ಯವೃತ್ತಿಯನ್ನು ದೊ ರ ಕಿ ಸಿ ಕೊ ಡ ಲು ಪ್ರ ಯ ತ್ನಿಸು ತ್ತಿ ದ್ದ ರು. ಆಗ ಶ್ರೀ. ಶೀತಮ್ಮನವರು "ಈ ಮುದುಕಿಯ ಒಂದು ವಿಜ್ಞಾಪನಾ ಪತ್ರವು ಕೂಡಾ ಅಮೇರಿಕೆಗೆ ಹೋಗಲಿ!" ಎಂದು ಹೇಳಿದರು. ಅದೇ ಪ್ರಕಾರ ವಿಜ್ಞಾಪನಾ ಪತ್ರವು ಹಾಕಲ್ಪಟ್ಟಿತು. ಅವುಗಳಲ್ಲಿ ಶ್ರೀಮತಿ ಸೀತಮ್ಮನವರ ಅರ್ಜಿಗೇನೇ ಮಾನ್ಯತೆ ದೊರಿತು ಮಿಲ್ಸ ಕಾಲೇಜಿನ ಅಧಿಕಾರಿಗಳಿಂದ ವಾರ್ಷಿಕ ಒಂದು ಸಾವಿರ ಡಾಲರ್ಸಿನ ಶಿಷ್ಯವೃತ್ತಿಯು ಇವರಿಗೆ ದೊರೆಯಿತು.

ಓಕಲಂಡ (ಕ್ಯಾಲಿಫೋರ್ನಿಯಾ) ಎಂಬಲ್ಲಿಯ ಈ ಮಿಲ್ಸ ಕಾಲೇಜವು ಸ್ತ್ರೀಯರ ಸಲುವಾಗಿ ಸ್ತ್ರೀಯರಿಂದಲೇ ನಡೆಯಿಸಲ್ಪಡುವದು. ಇಲ್ಲಿ ಸ್ತ್ರೀಯರಿಗೆ ಸರ್ವತೋಮುಖವಾದ ವಿವಿಧ ವಿಷಯಗಳ ಅತ್ಯುಪಯುಕ್ತವಾದ ಶಿಕ್ಷಣವನ್ನು ಕೊಡುವರು. ಶ್ರೀಮತಿ ಸೀತಮ್ಮನವರು "ಹೋಮ್ ಎಕನಾಮಿಕ್ಸ" ಈ ವಿಷಯವನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರು. ಆ ವಿಷಯವಾಗಿ ಸಂಪೂರ್ಣ ಶಿಕ್ಷಣ ಹೊಂದಬೇಕೆಂದು ಬಹು ದಿವಸಗಳಿಂದಲೂ ಬಯಸುತ್ತಿದ್ದರು. ಕೊನೆಗೆ ಅನುಕೂಲವಾದ ಪರಿಸ್ಥಿತಿಯನ್ನುಂಟುಮಾಡಿಕೊಂಡು ತಮ್ಮ ಇಚ್ಛೆಯನ್ನು ಕೊನೆಗಾಣಿಸಿದರು.

ಜನ್ಮ ಮತ್ತು ಶಿಕ್ಷಣ— ಶ್ರೀಮತಿ ಶೀತಮ್ಮನವರು ಅಣ್ಣಿಗೇರಿ ಇವರ ಜನ್ಮಸ್ಥಾನವು ಧಾರವಾಡವು. ೧೦ನೆಯ ವರ್ಷದಲ್ಲಿಯೇ ಲಗ್ನವಾಗಿ ೧೨ನೆಯ ವರುಷದಲ್ಲಿಯೇ ವೈಧವ್ಯವು ಪ್ರಾಪ್ತವಾಯಿತು. ಇಂತಹ ಅತ್ಯಂತ ವಿಷಮ ಪರಿಸ್ಥಿತಿಯಲ್ಲಿ ೧೩ನೆಯ ವರುಷದಲ್ಲಿ ಹಿಂಗಣೆ ಆಶ್ರಮದಲ್ಲಿ ಅಭ್ಯಾಸವನ್ನು ಪ್ರಾರಂಭಿಸಿ ವ್ಹರ್ನಾಕ್ಯುಲರ್ ಫಾಯಿನಲ್ ಮತ್ತು ಮ್ಯಾಟ್ರಿಕ್‌ಗಳಲ್ಲಿ ಉತ್ತೀರ್ಣರಾದರು. ಅನಂತರ ಸರ್. ವಿಠ್ಠಲದಾಸ ಠಾಕರಸಿಯವರೊಡನೆ ಪರದೇಶಗಳಲ್ಲಿ ಸಂಚರಿಸಿ ಬಂದರು. ಮುಂದೆ ೧೯೩೫ನೆಯ ಇಸವಿಯಲ್ಲಿ ಮುಂಬಯಿಯ ಶ್ರೀಮತಿ ನಾಥಿಬಾಯಿ ಕನ್ಯಾಶಾಲೆಯ ಸುಪರಿಂಟೆಂಡೆಂಟರಾದರು. ಇವೇ ಮೊದಲಾದವುಗಳು ಇಲ್ಲಿಯವರೆಗಿನ ಇವರ ಜೀವನಕ್ರಮಗಳಲ್ಲಿರುವ ಮುಖ್ಯ ಸಂಗತಿಗಳು. ೬-೭ ವರುಷ ಈ ಸಂಸ್ಥೆಯಲ್ಲಿ ಇವರು ವಿಶೇಷ ಶ್ರಮವಹಿಸಿ ಕೆಲಸಮಾಡಿ ಸಂಸ್ಥೆಯು ಸರ್ವರ ಆದರಕ್ಕೆ ಪಾತ್ರವಾಗುವಂತೆ ಮಾಡಿದರು.

ಅಮೇರಿಕೆಯಲ್ಲಿಯ ಅನುಭವ— ಶ್ರೀಮತಿ ಶೀತಮ್ಮನವರು ಅಣ್ಣಿಗೇರಿ ಇವರು ಅಮೇರಿಕೆಯಲ್ಲಿ ಎರಡು ವರುಷಗಳವರೆಗೆ ಸ್ತ್ರೀಯರಿಗೆ ಆದರ್ಶಪ್ರಾಯ ಸಂಸ್ಥೆಯಾಗಿರತಕ್ಕ ಮಿಲ್ಸ ಕಾಲೇಜಿನಲ್ಲಿ ತಮಗೆ ಅತ್ಯಂತ ಪ್ರಿಯವಾಗಿರತಕ್ಕ ಸ್ತ್ರೀಯರಿಗೆ ಅತ್ಯುಪಯುಕ್ತವಾದ "ಹೋಮ್ ಏಕನಾಮಿಕ್" ವಿಷಯವನ್ನು ಅಭ್ಯಾಸಿಸಿದರು. ಈ ವಿಷಯವನ್ನು ಅಭ್ಯಾಸಿಸಲು ಅಮೇರಿಕೆಗೆ ಹೋದವರಲ್ಲಿ ಇವರೇ ಮೊದಲನೆಯವರು. ಇಂತಹ ಶ್ರೇಯಸ್ಸು ಕರ್ನಾಟಕದ ಮಹಿಳೆಗೆ ದೊರೆತುದು ಅತ್ಯಂತ ಅಭಿಮಾನಾಸ್ಪದವಾದ ಸಂಗತಿಯಾಗಿದೆ. ಇವರು ತಮ್ಮ ಅಮೇರಿಕೆಯ ಅನುಭವವನ್ನು ಈ ಪ್ರಕಾರ ಹೇಳಿದ್ದಾರೆ—

"ಮಿಲ್ಸ ಕಾಲೇಜಿನಲ್ಲಿ ಸಾಧಾರಣ ೭೦೦ ಜನ ಸ್ತ್ರೀಯರು ತಮ್ಮತಮ್ಮ ಇಚ್ಛೆಯಂತೆ ವಿವಿಧ ವಿಷಯಗಳಲ್ಲಿ ಶಿಕ್ಷಣ ಹೊಂದುತ್ತಿದ್ದಾರೆ. ಕಾಲೇಜಿನಲ್ಲಿ ಅಮೇರಿಕೆಯ ಸ್ತ್ರೀಯರ ಸಂಖ್ಯೆಯೇ ಹೆಚ್ಚಾಗಿದ್ದರೂ, ಇಂಗ್ಲಂಡ, ರಶಿಯಾ, ಚೀನ, ಜಪಾನಗಳ ಸ್ತ್ರೀಯರ ಸಂಖ್ಯೆಯಾದರೂ ಕಡಿಮೆಯಿಲ್ಲ. ಹಿಂದುಸ್ಥಾನದಿಂದ ಬಂದು ಈ ಕಾಲೇಜನ್ನು ಪ್ರವೇಶಿಸಿದವರೆಂದರೆ ನಾನೊಬ್ಬಳೇ. ಈ ಕಾಲೇಜಿನಲ್ಲಿ ಗೃಹ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಜ್ಞಾನವನ್ನು ಸಂಪೂರ್ಣವಾಗಿ ಮಾಡಿಕೊಡುವರು. ಇದಲ್ಲದೆ, ಸಂಗೀತಕಲಾ, ಚಿತ್ರಕಲಾ, ನಾಟ್ಯಕಲಾ ಮೊದಲಾದ ಲಲಿತ ಕಲೆಗಳನ್ನಾದರೂ ಕಲಿಸುವ ವ್ಯವಸ್ಥೆಯಿರುತ್ತದೆ. ಇದರಂತೆಯೇ ವ್ಯಾಯಾಮಶಾಸ್ತ್ರ, ಆರೋಗ್ಯ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಭೌತಿಕ ಶಾಸ್ತ್ರಗಳಲ್ಲಿ ತಮ್ಮ ಮನಸ್ಸಿಗೆ ಬಂದ ವಿಷಯಗಳನ್ನು ಆರಿಸಿಕೊಂಡು ಅದರಲ್ಲಿ ಪೂರ್ಣತ್ವವನ್ನೂ ಹೊಂದಬಹುದು. ಒಟ್ಟಿನಮೇಲೆ ಸ್ತ್ರೀಯರನ್ನು ಆದರ್ಶ ನಾಗರಿಕರನ್ನಾಗಿ ಮಾಡುವುದೇ ಈ ಕಾಲೇಜಿನ ಉಚ್ಚ ಧ್ಯೇಯವಾಗಿದೆ.

ಅಮೇರಿಕೆಯ ಸ್ತ್ರೀಯರು ಹೊಸ ವಿಷಯವನ್ನು ಅತ್ಯಂತ ಉತ್ಸುಕತೆಯಿಂದ ನಿರೀಕ್ಷಿಸುತ್ತಾರೆ. ಆಲಸ್ಯರಾಗಿ ಕುಳಿತುಕೊಳ್ಳುವುದಂತೂ ಅವರಿಗೆ ಸೇರುವುದೇ ಇಲ್ಲ. ಅಮೇರಿಕನ್ ಗೃಹ ವ್ಯವಸ್ಥೆಯು ಅತ್ಯಂತ ವಿಚಿತ್ರವಾದದ್ದಾಗಿರುತ್ತದೆ. ಅತ್ಯಂತ ಬಡವರಾಗಿರತಕ್ಕ ಜನರ ಗುಡಿಸಲಿನಲ್ಲಾದರೂ ಹೋಗಿ ನೋಡಿದರೆ ಸುವ್ಯವಸ್ಥೆಯೇ ಮೊದಲು ಸ್ಪಷ್ಟವಾಗಿ ಕಂಡುಬರುತ್ತದೆ. ಆರೋಗ್ಯ ರಕ್ಷಣೆಯ ವಿಷಯದಲ್ಲಿ ಅವರು ಬಹು ದಕ್ಷರಾಗಿರುತ್ತಾರೆ. ಮೊದಲೇನೋ ಅಲ್ಲಿಯ ಜ ನ ರೆ ಲ್ಲ ರೂ ಮನೆಯ ಕಡೆಗೆ ಹೆಚ್ಚಾಗಿ ಲಕ್ಷಿಸದೆ ಊಟೋಪಚಾರಗಳನ್ನೆಲ್ಲಾ ಹೊಟೆಲ್‌ನಲ್ಲಿಯೇ ಮಾಡಿಬಿಡುತ್ತಿದ್ದರು. ಆದರೆ ಈಗ ಅಲ್ಲಿಯ ಸ್ತ್ರೀಯರು ಮನೆಯ ಸೌಂದರ್ಯವನ್ನು ಹೆಚ್ಚಿಸಲಿಕ್ಕೆ ವಿಶೇಷ ಪ್ರಯತ್ನಿಸುತ್ತಲಿದ್ದಾರೆ."

ಖಾದಿಯ ಕೊಂಡರೆ ಗಾಂಧಿಯ ಜಯಂತಿ.

ಶರಣಸಂದೇಶ

ಶಾ. ಶ. ೧೮೫೫ನೆಯ ಆಶ್ವಿಜ ಶುದ್ಧ ೬. ಸೋಮವಾರ.

ಗಾಂಧಿ ಜಯಂತಿಯ ರೀತಿ.

ಮಹಾತ್ಮಾ ಗಾಂಧಿಯವರ ೬೫ನೆಯ ವರ್ಷದ ವರ್ಧಂತಿಯು ಬರುವ ೨ನೆಯ ತಾರೀಖಿನ ದಿನ ಭರತಖಂಡದಲ್ಲೆಲ್ಲಾ ಅತ್ಯಂತ ವಿಜೃಂಭಣೆಯಿಂದ ಜರುಗುವ್ರದಷ್ಟೆ. ಈ ಜಯಂತಿಯ ಮಹೋತ್ಸವವನ್ನು ಹೇಗೆ ನೆರವೇರಿಸಬೇಕು? ಯಾವ ಪ್ರಕಾರ ಈ ಜಯಂತಿಯನ್ನಾಚರಿಸಿದರೆ ಆ ಮಹಾತ್ಮರಿಗೆ ಸಂತೋಷವಾಗುವುದು? ದೇಶಕ್ಕೂ ಪ್ರಿಯವಾಗುವುದು? ಪರಮಾತ್ಮನಿಗೂ ಪ್ರಿಯವಾಗುವುದು?

ಭಾವಚಿತ್ರದ ಮೆರವಣಿಗೆ, ಅನ್ನ ವಸ್ತ್ರಗಳ ದಾನ, ವ್ಯಾಖ್ಯಾನ ಪ್ರವಚನಗಳು ಜರುಗಿದ ಮಾತ್ರದಲ್ಲಿ ಈ ಜಯಂತಿಯ ಕಾರ್ಯವು ತೃಪ್ತಿಕರವಾಗಿ ಸಾಗಿತೆಂದು ಹೇಳಲಿಕ್ಕಾಗದು. ಇವುಗಳಲ್ಲದೆ ಮಹಾತ್ಮರ ಶ್ವಾಸಕೋಶಗಳಾಗಿರುವ ಖಾದಿ ಪ್ರಸಾರ ಮತ್ತು ಅಸ್ಪೃಶ್ಯತಾ ನಿವಾರಣೆಗಳೆಂಬ ಮಹತ್ಕಾರ್ಯಗಳು ಈ ಜಗದ್ವಂದ್ಯ ವಿಭೂತಿಯ ಜಯಂತಿಯಲ್ಲಿ ಅತ್ಯಾವಶ್ಯಕವಾಗಿ ಜರುಗಬೇಕು.

ಅಖಿಲಭಾರತ ರಾಟೆ ಸಂಘದವರು ಈಗಲೇ ಈ ಖಾದಿ ಪ್ರಸಾರ ಮೂಲಕ ಗಾಂಧಿ ಜಯಂತಿಯನ್ನು ಆಚರಿಸಲುಪಕ್ರಮಿಸಿದ್ದಾರೆ. ಈ ವಾರವು ಗಾಂಧೀ ಜಯಂತಿಯ ವಾರವೆಂದು ತಿಳಿದು ಖಾದಿ ಪ್ರಸಾರ ಮತ್ತು ಅಸ್ಪೃಶ್ಯತಾ ನಿವಾರಣೆಗಳಿಗಾಗಿ ಈ ವಾರದಲ್ಲಿ ವಿಶೇಷವಾದ ಪ್ರಯತ್ನಗಳು ಎಲ್ಲ ಕಡೆಗೂ ಜರುಗಬೇಕು.

ದೇಶಸೇವಕರೂ, ದಯಾಶೀಲರೂ ಖಾದಿಯನ್ನು ಹೊತ್ತು ಮನೆಮನೆಗೆ ಈ ವಾರದಲ್ಲಿ ಮಾರಿ ಬಡವರ ಭಾಗ್ಯವನ್ನು ಹೆಚ್ಚಿಸಬಾರದೆ? ಗಾಂಧೀಜಿಯವರ ಜೀವಿತವು ಬಡವರ ಉದ್ಧಾರಕ್ಕಾಗಿಯೇ ಇದೆಯಲ್ಲವೇ? ಹೊಟ್ಟೆಗೆ ಅನ್ನವಿಲ್ಲದೆ ಬಳಲುವ ಬಡವರಿಗೆ ತಮ್ಮ ಕೃತಿಯಿಂದ ನೆರವಾಗದೆ ಗಿರಣಿಯ ಬಟ್ಟೆಯನ್ನು ಹಾಕಿಕೊಂಡು ಗಾಂಧೀ ಜಯಂತಿಯನ್ನು ಮಾಡುವುದು ಗಾಂಧೀಜಿಯವರನ್ನು ಅಣಕಿಸಿದಂತಲ್ಲವೇ? ಇದೊಂದು ರಾಷ್ಟ್ರೀಯ ಪಾಪವಲ್ಲವೇ?

ಆದುದರಿಂದ ಈ ಪವಿತ್ರ ವಾರದಲ್ಲಾದರೂ ಈ ಪಾಪಕೃತ್ಯವು ನಿಲ್ಲಲಿ. ಎಲ್ಲೆಲ್ಲಿಯೂ ಶುದ್ಧ ಖಾದಿಯು ಪ್ರಸಾರವಾಗಿ ಪುಣ್ಯದ ಪ್ರಭೆಯು ತೋರಲಿ. ಬಡವರಿಗೆ ಒಂದು ತುತ್ತು ರೊಟ್ಟಿ ಹೆಚ್ಚು ದೊರೆಯಲಿ. ಒಂದು ಮೊಳ ಖಾದಿಯನ್ನು ಕೊಂಡರೆ ಇಂಥ ಮಹಾ ಪುಣ್ಯ ಲಭಿಸುವುದು. ಆದುದರಿಂದ ಗಾಂಧೀಜಿಯವರ ವಿಷಯದಲ್ಲಿ ಪ್ರೇಮಾದರಗಳುಳ್ಳವರೆಲ್ಲರೂ ಈ ವಾರದಲ್ಲಿ ಖಾದಿಯನ್ನು ಕೊಳ್ಳುವುದು ಧರ್ಮವಲ್ಲವೆ?

ಅಸ್ಪೃಶ್ಯತೆಯು ಹಿಂದು ಸಮಾಜಕ್ಕುಂಟಾದ ಕ್ಷಯರೋಗವು ಈ ರೋಗವಿರುವವರೆಗೂ ಹಿಂದು ಸಮಾಜವು ಕ್ಷೀಣವಾಗುತ್ತ ಕೊನೆಗೆ ನಾಮಶೇಷವಾಗುವುದು. ಅಸ್ಪೃಶ್ಯತೆಯೆಂಬ ಪಾಪವನ್ನು ತಮ್ಮಲ್ಲಿಟ್ಟುಕೊಂಡ ಹಿಂದುಗಳು ಗಾಂಧಿ ಜಯಂತಿಯನ್ನು ಮಾಡಲು ಅಪಾತ್ರರು. ಆದುದರಿಂದ ಈ ವಾರದಲ್ಲಿಯೇ ಈ ಪಾಪದಿಂದ ನಿವೃತ್ತರಾಗಿ ಆ ಮಹಾತ್ಮನ ಪ್ರಾಣಸ್ವರೂಪವಾದ ಆದಿಜನವರ್ಗದ ಸುಧಾರಣೆಗಾಗಿ ಸಕಲರೂ ವಿಶೇಷ ಪ್ರಯತ್ನಿಸಬೇಕು.

ಕಾರ್ಯಕ್ರಮ.

ಜಯಂತಿಯ ಉತ್ಸವದಲ್ಲಿ ಪ್ರಮುಖರನ್ನು ವ್ಯಾಖ್ಯಾನಕ್ಕೆ ಕರೆಯಿಸದೆ ಖಾದಿಯನ್ನು ಹೊತ್ತು ಮನೆಮನೆಗೆ ಮಾರುವುದಕ್ಕಾಗಿ ಅವರನ್ನು ಕರೆಯಿಸಬೇಕು. ಸೆಪ್ಟೆಂಬರ ೩೦ನೆಯ ತಾರೀಖಿನ ದಿನವಾದರೂ ಈ ಖಾದಿ ಮಾರುವ ಕಾರ್ಯ ಎಲ್ಲ ಕಡೆಗೂ ಜರುಗಬೇಕು. ಖಾದಿ ಮಾರುವವರೇ ವ್ಯಾಖ್ಯಾತರು! ಕೊಳ್ಳುವವರೇ ಶ್ರೋತೃಗಳು!

ಅಕ್ಟೋಬರ್ ೧ ನೆಯ ತಾರೀಖಿನ ದಿನ ಆದಿಜನಗಳ ಸುಧಾರಣೆಯ ಕಾರ್ಯ ಜರುಗಬೇಕು. ಅವರ ಕೇರಿಗಳಿಗೆ ಹೋಗಿ ಸ್ವಚ್ಛತೆ, ಶುದ್ಧಾಹಾರಗಳ ಸಂಬಂಧವಾಗಿ ತಿಳಿಹೇಳುವುದು ಅವರ ಉನ್ನತಿಗಾಗಿ ಹಣವನ್ನು ಕೂಡಿಸುವುದು, ಮೊದಲಾದ ಅವಶ್ಯಕ ತೋರಿದ ಕಾರ್ಯಗಳನ್ನು ಮಾಡಿ ಜಯಂತಿಯ ಉತ್ಸವಕ್ಕೆ ಆದಿಜನರು ಮರುದಿನ ಶುಚಿಯಾಗಿ ಬರಲು ತಿಳಿಸಬೇಕು.

ಅಕ್ಟೋಬರ್ ೨ನೆಯ ತಾರೀಖಿನ ಪ್ರಾತಃಕಾಲ ಗಾಂಧೀಜಿಯವರ ಭಾವಚಿತ್ರದ ಮೆರವಣಿಗೆಯು ಜರುಗಬೇಕು. ಅದರಲ್ಲಿ ಆದಿಜನರು ಆವಶ್ಯಕವಾಗಿ ಸೇರಿರಬೇಕು. ಮೆರವಣಿಗೆಯು ಮುಗಿದ ನಂತರ ಗಾಂಧೀಜಿಯವರ ದೀರ್ಘಾಯುರಾರೋಗ್ಯ ಚಿಂತನೆಗಾಗಿ ಪರಮಾತ್ಮನ ಪ್ರಾರ್ಥನೆ ಜರುಗಬೇಕು.

ಈ ಶುಭದಿನದಲ್ಲಿ ಆದಿಜನರಿಗೆ ಅನ್ನಸಂತರ್ಪಣೆ, ಬಟ್ಟೆಯ ದಾನಗಳೂ ಜರುಗಬೇಕು. ಇಷ್ಟರ ಮಟ್ಟಿಗಾದರೂ ಪ್ರತಿಯೊಂದು ಸ್ಥಳದಲ್ಲಿ ಗಾಂಧಿ ಜಯಂತಿಯು ನಡೆಯುವುದು ಅವಶ್ಯಕವಾಗಿಲ್ಲವೆ?

ಡಾ. ಬೆಜಂಟ್‌ರವರ ನಿಧನ.

ಡಾ. ಆನಿ ಬೆಜಂಟ್‌ರವರು ಮದ್ರಾಸಿನ ತಮ್ಮ ಅಡ್ಯಾರ್ ಆಶ್ರಮದಲ್ಲಿ ಕಳೆದ ೨೦ನೆಯ ತಾರೀಖಿನ ಸಾಯಂಕಾಲ ೪ ಗಂಟೆಯ ಸಮಯಕ್ಕೆ ಪರಲೋಕವಾಸಿಗಳಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರಿಗೆ ಈಗ ೮೬ ವರುಷಗಳಾಗಿದ್ದವು. ಇಂತಹ ಮುಪ್ಪಿನಲ್ಲಿ ಇವರು ಕಳೆದೆರಡು ವರುಷಗಳಿಂದಲೂ ವಾರ್ಧಕ್ಯದ ಮೂಲಕ ಹಾಸಿಗೆಯನ್ನೇ ಹಿಡಿದಿದ್ದರು. ಆದಕಾರಣ ಈ ಮುಪ್ಪಿನ ಹಿಂಸೆಯಿಂದ ಪರಮಾತ್ಮನು ಇವರನ್ನು ತೊಲಗಿಸಿದ್ದಕ್ಕೆ ಅನೇಕರು ಸಂತೋಷಿಸುವುದು ಸಹಜವಾಗಿದ್ದರೂ ಇವರ ಅದ್ವಿತೀಯ ಬುದ್ಧಿ ವೈಭವ ಹಿಂದುಸ್ಥಾನದ ಸೇವೆ ಹಿಂದಿ ರಾಜಕಾರಣದಲ್ಲಿ ಮಾಡಿದ ಜಾಗೃತಿಗಳನ್ನು ನೋಡಿದರೆ ಇಂತಹ ಮಹಾವ್ಯಕ್ತಿಯು ನಮ್ಮ ಕಣ್ಣು ಮರೆಯಾದುದಕ್ಕಾಗಿ ವಿಷಾದವುಂಟಾಗುವುದೂ ಯುಕ್ತವಾಗಿದೆ. ಗಾಂಧೀಜಿಯವರು ಹೇಳಿದಂತೆ ಹಿಂದಿ ರಾಷ್ಟ್ರವಿರುವವರೆಗೂ ಡಾ. ಬಿಜಂಟರವರ ಕಾರ್ಯ ಸ್ಮರಣೆಯು ಉಳಿವುದರಲ್ಲಿ ಸಂದೇಹವಿಲ್ಲ. ಇವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನುಂಟುಮಾಡಲಿ.

ಖಾದಿಯ ಮಾರಿ, ಮನ್ನಣೆ ಹೊಂದಿರಿ.

ಗುರುವಿನಗುರು ಜಂಗಮವಿಂತೆಂದುದು.

ಜಂಗಮನಿಂದೆಯ ಮಾಡಿ ಲಿಂಗವ ಪೂಜಿಸುವ ಭಕ್ತನ ಅಂಗವಣೆಯೆಂತೋ ಶಿವಶಿವ। ನಿಂದಿಸುವ ಪೂಜಿಸುವ ಪಾತಕವ ಕೇಳಲಾಗದು। ಗುರುವಿನಗುರು ಜಂಗಮವಿಂತೆಂದುದು ಕೂಡಲ ಸಂಗನ ವಚನ ॥

ಮಹಾನುಭಾವನಾದ ಆ ಬಸವೇಶನು ಈ ವಚನದಲ್ಲಿ ಗುರು ಜಂಗಮರ ತಾರತಮ್ಯವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ. ಈಗ ಸಮಾಜದಲ್ಲಿ ಭಯಂಕರವಾದ ಕೋಲಾಹಲವುಂಟಾಗಿದೆಯಷ್ಟೆ. ಗುರುವಿರಕ್ತರಲ್ಲಿ ಯಾರು ಹೆಚ್ಚಿನವರೆಂಬ ವಿಷಯವಾಗಿ ತುಂಬಾ ಚರ್ಚೆಯುಂಟಾಗಿ ಸಮಾಜವೇ ಇಬ್ಭಾಗವಾಗಿದೆಯಷ್ಟೆ. ಈ ಚಟುವಟಿಕೆಗೆ ಈ ವಚನವೇ ಸಮರ್ಪಕವಾದ ಉತ್ತರವಾಗಿದೆ.

ಲಿಂಗವನ್ನು ಪೂಜಿಸುತ್ತ ಜಂಗಮ ಮೂರ್ತಿಗಳನ್ನು ನಿಂದಿಸುವವರು ಈಗಲೂ ಉಂಟಾಗಿದ್ದಾರೆ. ಇಂತಹ ಪಾಪಾಚರಣೆಯ ಮಾತುಗಳನ್ನು ಕೇಳಲಾಗದೆಂದೇ ಆ ಬಸವ ಮಹಾತ್ಮನು ಸ್ಪಷ್ಟವಾಗಿ ಹೇಳಿದ್ದಾನೆ. ಏಕೆಂದರೆ ಗುರುವಿಗೂ ಗುರುವಾಗಿರುವಾತನೇ ಜಂಗಮನೆಂದು ಶಿವಾಗಮಗಳೇ ಸಾರಿ ಹೇಳುತ್ತಲಿವೆ. ಹೀಗಿರುವಾಗ ಜಂಗಮರೇ ತಮ್ಮ ಶಿಷ್ಯರೆಂದಾಗಲೀ ಅಥವಾ ವಿರಕ್ತರೇ ಬೇರೆ, ಜಂಗಮರೇ ಬೇರೆ ಎಂದಾಗಲಿ, ವಿರಕ್ತರು ವೀರಶೈವಕ್ಕೆ ಸಂಬಂಧವಿಲ್ಲವೆಂದು ಹೇಳುವುದು ತುಂಬಾ ಅನುಚಿತವಾಗಿದೆ. ಗುರುಗಳು ತಾವೇ ಹೆಚ್ಚೆಂಬ ಕಲ್ಪನೆಯು ಈಗಲೇ ಬಂದಿದೆಯೆಂಬಲ್ಲ. ಆ ಬಸವಮಹಾನುಭಾವನ ಕಾಲದಲ್ಲಿಯೂ ಅನೇಕರಿಗೆ ಈ ತಪ್ಪು ತಿಳುವಳಿಕೆಯಿದ್ದಿತೆಂತಲೂ ಅವರೂ ಜಂಗಮರನ್ನು ನಿಂದಿಸುತ್ತಿದ್ದರೆಂತಲೂ ಈ ವಚನದಿಂದಲೇ ವ್ಯಕ್ತವಾಗುತ್ತದೆ.

ಪ್ರಾಕೃತ ಮತಗಳ ಕಡೆಗೆ ಪ್ರವೃತ್ತಿಯಾಗಿ ಆ ಮತೀಯರನ್ನೇ ಮೇಲ್ಪಂಕ್ತಿಯಾಗಿಟ್ಟುಕೊಳ್ಳುವ ಕಲ್ಪನೆಯು ತಲೆದೋರಿದಾಗಲೆಲ್ಲಾ ಈ ಪ್ರಕಾರ ಗುರುವೇ ಅತ್ಯಧಿಕವೆಂಬ ತಪ್ಪು ತಿಳುವಳಿಕೆಯುಂಟಾಗುತ್ತದೆ. ಏಕೆಂದರೆ ಆ ಅನ್ಯಮತಗಳಲ್ಲಿ ಹಾಗೆಯೇ ಇದೆ. ಜಂಗಮನೆಂಬ ಬೇರೊಂದು ಮೂರ್ತಿಯ ಕಲ್ಪನೆಯೇ ಆ ಮತೀಯರಲ್ಲಿಲ್ಲ. ವೀರಶೈವದಲ್ಲಿರುವ ವೈಶಿಷ್ಟ್ಯದಲ್ಲಿ ಇದೇ ಮುಖ್ಯವಾದುದಾಗಿದೆ. ಇದನ್ನೊಂದು ತೆಗೆದುಹಾಕಿದರೆ ಉಳಿದ ಸಪ್ತಾವರಣಗಳು ಶೈವರಲ್ಲಿಯೂ ಇವೆ. ಎಂದಮೇಲೆ ವೀರಶೈವದ ಅವಶ್ಯಕವೇನು?

ಈ ದೇಶದಲ್ಲಿ ವರ್ಣವಿಶಿಷ್ಟವಾದ ಪ್ರಾಕೃತ ಧರ್ಮದ ಕಲ್ಪನೆಯು ಆಗಾಗ್ಗೆ ಜನಾಂಗದಲ್ಲಿ ಜಾಗೃತವಾಗುತ್ತಲೇ ಬಂದಿದೆ. ಆಯಾಯ ಕಾಲಗಳಲ್ಲಿ ಅದನ್ನು ನಿವಾರಣೆ ಮಾಡಲು ಆ ಪ್ರಾಕೃತ ಧರ್ಮ ಬೋಧಕರು ಈ ಪ್ರಕಾರ ಗುರುಜಂಗಮರಲ್ಲಿಯ ತಾರತಮ್ಯವನ್ನು ಬೋಧಿಸುತ್ತಲೇ ಬಂದಿದ್ದಾರೆ. ಈಗ ಉಂಟಾಗಿರತಕ್ಕ ಈ ಕಲಹವು ಕೂಡಾ ಭಕ್ತರಿಗೆ ನಿಜ ಜ್ಞಾನೋದಯವಾದಾಗಲೇ ಸಂಪೂರ್ಣ ನಿವಾರಣೆಯಾಗುತ್ತದೆ.

ಅನ್ಯ ಮತಗಳಲ್ಲಿಯ ಸನ್ಯಾಸಾಶ್ರಮವೇ ಈ ಮತದಲ್ಲಿ ತಲೆದೋರಿದ ವಿರಕ್ತಾಶ್ರಮವೆಂದು ಅನೇಕರು ಜನಗಳಿಗೆ ತಪ್ಪು ತಿಳುವಳಿಕೆಯನ್ನುಂಟುಮಾಡುತ್ತಿದ್ದಾರೆ. ವೀರಶೈವರಲ್ಲಿಯ ವಿರಕ್ತರು ಅಥವಾ ಜಂಗಮರು ವರ್ಣಾಶ್ರಮವಾದಿಗಳಾದ ಅನ್ಯ ಮತೀಯರಲ್ಲಿರತಕ್ಕ ಸನ್ಯಾಸಿಗಳಂತಲ್ಲ. ಇದು ತಪ್ಪಾದ ಹೋಲಿಕೆ. ಜನಗಳನ್ನು ತಪ್ಪು ದಾರಿಗೆ ತಿರುಗಿಸುವ ಹಂಚಿಕೆ. ಅನ್ಯಮತೀಯರಲ್ಲಿಯ ಸನ್ಯಾಸಿಯು ಗೃಹಸ್ಥಾಶ್ರಮಿಗೆ ಅನಾವಶ್ಯಕನು. ಆದರೆ ವೀರಶೈವರಿಗೆ ಜಂಗಮರು ಅನಾವಶ್ಯಕರಲ್ಲ. ಅತ್ಯಾವಶ್ಯಕರು. ಏಕೆಂದರೆ ಜಂಗಮವಿಲ್ಲದಿದ್ದರೆ ಲಿಂಗಪೂಜಾದಿ ನಿತ್ಯ ಕರ್ಮಗಳು ಕೂಡಾ ನಡೆಯುವಂತಿಲ್ಲ. ಎಂದಮೇಲೆ ದೀಕ್ಷೆ ಮೊದಲಾದ ವೀರಶೈವಕ್ಕೆ ಅತ್ಯಾವಶ್ಯಕವಾದ ಕಾರ್ಯಗಳನ್ನು ಹೇಗೆ ತಾನೆ ಜರುಗುವುವು? ಜಂಗಮ ಪಾದೋದಕ ಪ್ರಸಾದಗಳಿಲ್ಲದೆ ಯಾವ ಕಾರ್ಯವು ತಾನೆ ಪರಿಶುದ್ಧವಾಗುವುದು?

ಆದುದರಿಂದ ಜಂಗಮರು ವೀರಶೈವನಿಗೆ ಪ್ರತಿಯೊಂದು ಕಾರ್ಯದಲ್ಲಿ ಮುಖ್ಯವಾಗಿ ಬೇಕೇಬೇಕು. ಗುರುಗಳೇ ಕಾರ್ಯದ ಪೂರ್ತಿ ಜಂಗಮರಾಗುತ್ತಾರೆ. ಆ ಮೇಲೆ ಮತ್ತೆ ಅವರು ಗುರುಗಳಾಗುತ್ತಾರೆಂದು ಹೇಳುವವರ ಮಾತನ್ನು ಕೇಳಿ ಜಂಗಮರನ್ನು ಬಿಟ್ಟಿದ್ದಾದರೆ ಅದು ವೀರಶೈವವಲ್ಲ. ಆ ಮೇಲೆ ಲಿಂಗವೊಂದರಲ್ಲಿಯೇ ಹೇಗಾದರೂ ಗುರುಜಂಗಮಗಳ ಸಮಾವೇಶವು ಆಗೇ ಆಗುತ್ತದೆಂದು ಗುರುಗಳನ್ನೂ ಭಕ್ತರು ಬಿಡಬಹುದು. ಆಗ ಷಡಾವರಣವಾಗಲಿಕ್ಕಿಲ್ಲವೆ?

ಇಂಥ ಅನುಚಿತವಾದ ರೀತಿಗಳನ್ನು ಬಿಟ್ಟು ಪೂರ್ವದಂತೆ ಧರ್ಮಸಮ್ಮತವಾದ ಗುರುಜಂಗಮರ ಸಮ್ಮೇಲನದಿಂದಲೇ ಧರ್ಮ ಕಾರ್ಯಗಳು ನಡೆಯುವುದು ವಿಹಿತವಾಗಿದೆ. ಗುರುಗಳು ತಾವೇ ಜಂಗಮರಾಗುತ್ತೇವೆಂದರೆ ಜಂಗಮರು ತಾವೇ ಗುರುಗಳಾಗುತ್ತೇವೆಂದು ಹೇಳುವರು. ಆ ಮೇಲೆ ಭಕ್ತರು ತಾವೇ ಗುರುಜಂಗಮರಾಗುತ್ತೇವೆಂದು ಹೇಳದಿರಲಾರರು. ಇದರಿಂದ ಸಮಾಜದಲ್ಲಿ ಸುಸಂಘಟಿತವಾದ ಏರ್ಪಾಟು ಲೋಪವಾಗುವುದು.

ಭಕ್ತನೇ ಗುರುವಾಗಿ ಆತನೇ ಜಂಗಮನಾಗುತ್ತಾನೆಂಬುದರಲ್ಲಿ ಸಂದೇಹವಿಲ್ಲ. ಆದರೆ ಆ ಮೂರೂ ಅಂತಸ್ತುಗಳು ಬೇರೆಬೇರೆಯಾಗಿವೆ. ಒಂದಕ್ಕಿಂತ ಒಂದು ಪೂಜ್ಯವಾದುದು. ಸಾಮಾನ್ಯ ವಿಶೇಷ ನಿರಾಭಾರಿಗಳೆಂಬ ಮೂರು ವರ್ಗಗಳಾದರೂ ಇವೇ ಸರಿ. ಗುರು ಸ್ಥಳ ಮೀರಿದ ಸ್ಥಳವೆಂಬವು ಕೂಡಾ ಗುರುಜಂಗಮರು ಬೇರೆಬೇರೆಯೆಂಬುದನ್ನೇ ವ್ಯಕ್ತಪಡಿಸುತ್ತವೆ. ವಿರಕ್ತ ಮೂರ್ತಿಗಳಿಗೆ ನೀವು ಜಂಗಮರಲ್ಲವೆಂದರೆ ಆಚಾರ್ಯರಿಗೆ ನೀವು ಗುರುಗಳಲ್ಲವೆಂದು ಹೇಳಲಾರರೇ?

[ಸಂಪಾದಕ.]

ಖಾದಿಯೇ ಸೌಖ್ಯದ ಹಾದಿ.

ವಿವಿಧ ವಿಷಯ.

ಕಲಿಯುಗವೋ ಕಲಿಯುವ ಯುಗವೋ?

ಈಗ ಕಲಿಕಾಲ. ಕಲಿಯೇ ಅವತರಿಸಿದ್ದಾನೆ. ಜಾತಿಸಂಕರ ಮಾಡುತ್ತಿದ್ದಾನೆ. ದೇವಕಲೆ ತೀರ್ಥ ಕಲೆಗಳೆಲ್ಲವು ಲಯವಾದವು ಎಂದು ಕೆಲವರು ಬೊಬ್ಬಿ ಇಡುತ್ತಿದ್ದಾರೆ. ಕೆಲವರಾದರೋ ಇದು ಕಲಿಯುವಯುಗ ಕಾಣಿರಯ್ಯ. ಹಿಂದೆ ಅಜ್ಞಾನದಿಂದ ಮಾಡಿದ ಎಲ್ಲ ತಪ್ಪುಗಳನ್ನೂ ಬಿಟ್ಟು ಧರ್ಮ ಆಚಾರ ವಿಚಾರಗಳಾವುವೆಂಬುದನ್ನು ಇನ್ನುಮೇಲೆ ಕಲಿಯಬೇಕಾದುದರಿಂದ ಇದು ಕಲಿಯುವ ಯುಗವೆಂದು ಕೆಲವರು ಸಾರುತ್ತಿದ್ದಾರೆ. ಇವರ ಮಾತನ್ನು ನಂಬಿ ಅನೇಕರು ಅನೇಕ ಫ್ಯಾಶನ್, ಕಲಿಯುತ್ತಿದ್ದಾರೆ. ಫ್ರಾನ್ಸ ದೇಶದ ಫ್ಯಾಶನ್ ಕಲಿಯುವುದೇ ಈ ಕಲಿಯುವ ಯುಗದಲ್ಲಿ ಮುಖ್ಯವೆಂದು ಬಹುಜನ ತರುಣತರುಣಿಯರು ತಿಳಿದಿದ್ದಾರೆ. ಅದಕ್ಕಾಗಿ ಒಬ್ಬ ತರುಣನು ಫ್ರಾನ್ಸ ದೇಶಕ್ಕೆ ಹೋಗಿ ಹೆಣ್ಣುಮಕ್ಕಳು ಕೂದಲುಗಳನ್ನು ಹೇಗೆ ಬಿಡಬೇಕೆಂಬ ಫ್ಯಾಶನ್‌ಕಲೆಯಲ್ಲಿ ಪ್ರವೀಣನಾಗಿ ಈಗ ಈ ದೇಶಕ್ಕೆ ಬಂದಿದ್ದಾನೆ. ಇನ್ನು ಈ ಮಹಾಪುರುಷನು ಕಲಿಯುವ ಹವ್ಯಾಸದ ಕುವರಿಯರಿಗೆ ಕೂದಲು ಬಿಡುವ ಈ ಕಲೆಯನ್ನು ಕಲಿಸಿ ಕಲಿಯುವ ಯುಗದ ನಾಮ ಸಾರ್ಥಕ್ಯವನ್ನು ಮಾಡುವನೆಂದು ತೋರುತ್ತದೆ!

ವಿದ್ಯುಚ್ಛಕ್ತಿನ ಬಂಡಿಗಳು.

ಹಳಿಯ ಬಂಡಿಗಳನ್ನು ವಿದ್ಯುಚ್ಛಕ್ತಿನ ಸಹಾಯದಿಂದ ನಡೆಯಿಸಹತ್ತಿದಂದಿನಿಂದ ಅವುಗಳ ವೇಗವು ಬಹಳವಾಗಿ ಬೆಳೆದಿದೆ. ಪುಣೆ ಮುಂಬಯಿಗಳ ನಡುವೆ ಓಡಾಡುತ್ತಿರುವ 'ಡೆಕ್ಕನ್ ಕ್ವೀನ" ಎಂಬ ವಿದ್ಯುಚ್ಛಕ್ತಿನ ಬಂಡಿಯು ತಾಸಿಗೆ೫೦ ಮೈಲು ಹೋಗುತ್ತದೆ. ಆದರೆ ಜರ್ಮನಿ ಮತ್ತು ಅಮೇರಿಕಾ ದೇಶದಲ್ಲಿಯ ರೈಲು ಬಂಡಿಗಳು ತಾಸಿಗೆ ೬೦-೮೦ ಮೈಲು ಹೋಗುತ್ತವೆ. ಅಮೇರಿಕೆಯ ಒಂದು ವಿದ್ಯುಚ್ಛಕ್ತಿನ ಬಂಡಿಯು ತಾಸಿಗೆ ೯೦ ಮೈಲೂ ಹೋಗುತ್ತಿದೆ. ಜರ್ಮನಿಯಲ್ಲಿ ಈಗ ಒಂದು ತರದ ರೈಲು ಮೋಟಾರು ತಯಾರಿಸಿದ್ದಾರೆ. ಮೋಟಾರು ಹೊಡಿಯುವವನು ಮೋಟಾರಿನ ಛತ್ತಿನ ಮೇಲ್ಭಾಗದಲ್ಲಿ ಕುಳಿತುಕೊಳ್ಳುತ್ತಾನೆ. ಇಂಥ ಮೋಟಾರುಗಳು ಅಲ್ಲಿ ತಾಸಿಗೆ ೬೦ ಮೈಲು ಹೋಗುತ್ತವೆ. ವಿದ್ಯುಚ್ಛಕ್ತಿ ಪ್ರಪಂಚದ ಪ್ರಗತಿಯಲ್ಲಿ ವಿಚಿತ್ರವಾದ ಕ್ರಾಂತಿಯನ್ನುಂಟುಮಾಡಿರುವುದಿಲ್ಲವೆ?

ಶ್ರೀ. ವಾರದ ಪಾಠಶಾಲೆಯಲ್ಲಿಯ ಅನ್ಯಾಯ.

(ಲೇಖಕರು— ಶ್ರೀ. ರುದ್ರಾರಾಧ್ಯ ಶರ್ಮ ಬಿಜಾಪೂರ)

ಸದ್ಯಃ ವಾರದ ಪಾಠಶಾಲೆಯಲ್ಲಿ ೪೦-೫೦ ವಿದ್ಯಾರ್ಥಿಗಳಿದ್ದಾರೆ. ಅವರಲ್ಲಿ ಸಾಧಾರಣ ೩೫ಕ್ಕಿಂತಲೂ ಹೆಚ್ಚಾಗಿ ಗುರುಸ್ಥಲ ಮತದವರು. ಪಂಚಾಚಾರ್ಯರಿಗೆ ಪ್ರಿಯರು. ಶ್ರೀ ಬಸವಾದಿ ಪ್ರಮಥರ ಅನುಯಾಯಿಗಳು ಸಾಧಾರಣ ೧೫ ಜನಗಳಿದ್ದಾರೆ. ಮೊದಲೇನೋ ಈ ಪಾಠಶಾಲೆಯಲ್ಲಿ ಗುರುವಿರಕ್ತರ ವಾದವಿವಾದವು ಸ್ವಲ್ಪವೂ ಇರಲಿಲ್ಲ. ಆದರೆ ಉಜ್ಜನಿ ಮಹಾಸ್ವಾಮಿಗಳು ಬಾರ್ಸಿಗೆ ಬಂದ ಕೂಡಲೇ ಪಂಚಾಚಾರ್ಯ ವಿದ್ಯಾರ್ಥಿಗಳು ತಮ್ಮ ಚಳವಳಿಯನ್ನು ಪ್ರಾರಂಭಿಸಿದರು. ಸ್ವಾಮಿಗಳೇ ಸೊಲ್ಲಾಪುರಕ್ಕೆ ಬಂದಮೇಲಂತೂ ಕೇಳುವದೇನು?

ನನಗೆ ಚಿಕ್ಕಂದಿನಿಂದಲೂ ನಿರಂಜನ ಮೂರ್ತಿಗಳ ಬಗ್ಗೆ ಪೂಜ್ಯಬುದ್ಧಿಯಿದೆ. ಯಾವದೇ ಕಾರ್ಯವನ್ನು ಆರಂಭಿಸುವಾಗ ಮೊದಲು ಅವರಿಗೆ ನಮಸ್ಕಾರ ಮಾಡುತ್ತಿರುತ್ತೇನೆ. ತಾ. ೧೦-೯-೩೩ನೆಯ ದಿವಸ ನನ್ನ ಅಭಾಷ್ಯದ ಪುಸ್ತಕವನ್ನು ಶ್ರೀ. ಜಗದೀಶ ಶಾಸ್ತ್ರಿ ನಾಲ್ವಾರ ಪಾಠಶಾಲಾಧ್ಯಾಪಕರು ಇವರ ಕೈಯಲ್ಲಿ ನೋಡುವದಕ್ಕಾಗಿ ಕೊಟ್ಟೆ. ಪುಸ್ತಕದ ಮೇಲ್ಭಾಗದಲ್ಲಿ "ಶ್ರೀಮನ್ನಿರಂಜನ ಜಗದ್ಗುರು ಅಲ್ಲಮ ಪ್ರಭುವೇ ನಮಃ" ಎಂದು ಬರೆದಿದ್ದಿತು. ಅದನ್ನು ನೋಡಿದ ಕೂಡಲೆ ಶಾಸ್ತ್ರಿಗಳಿಗೆ ವಿಪರೀತ ಸಿಟ್ಟು ಬಂದು ನನಗೆ ಬಾಯಿಗೆ ಬಂದ ಅವಾಚ್ಯ ಶಬ್ದಗಳಿಂದ ಬೈದರು. ಅವುಗಳನ್ನು ನೆನಪು ಮಾಡಿಕೊಂಡರೆ ನನಗಾಗುವ ದುಃಖವನ್ನು ಬರೆಯಲು ಕೂಡಾ ಶಕ್ಯವಿಲ್ಲ! ಇತರ ವಿದ್ಯಾರ್ಥಿಗಳು ಪಂಚಾಚಾರ್ಯೇಭ್ಯೋ ನಮಃ ಎಂದು ಬರೆದಿರುವುದನ್ನು ನೋಡಿದರೆ ಶಾಸ್ತ್ರಿಗಳಿಗೆ ಬಹು ಆನಂದವು. ಅದೇ ದಿವಸ ಉಜ್ಜನಿ ಸ್ವಾಮಿಗಳ ಅಭಿನಂದನಾರ್ಥವಾಗಿ ಜರುಗಿದ ಸಭೆಗೆ ನಾನು ಹೋಗಿರಲಿಲ್ಲ. ನನ್ನಂತೆ ಬೇರೆ ಕೆಲವು ವಿದ್ಯಾರ್ಥಿಗಳು ಕೂಡಾ ಹೋಗಿರಲಿಲ್ಲ.

ಮರುದಿವಸ ಶಾಸ್ತ್ರಿಗಳು ನನಗೆ ವಿಶೇಷ ಸಿಟ್ಟಿನಿಂದ ನಿನ್ನನ್ನು ಪಾಠಶಾಲೆಯಿಂದ ತೆಗೆದುಹಾಕಿದೆ. ಸೆಕ್ರೆಟರಿಯವರಿಂದ ಪತ್ರವನ್ನು ತಂದರೆ ತಿರುಗಿ ತೆಗೆದುಕೊಳ್ಳಲಾಗುವುದೆಂದು ಹೇಳಿದರು. ಅದಕ್ಕಾಗಿ ನಾನು ಬಾಬಾಸಾಹೇಬ ಇವರ ಕಡೆಗೆ ಹೋಗಿ ವಿಚಾರಿಸಲು ನಾಟಕ ಸಿನೇಮಾಗಳಿಗೆ ಹೋಗುತ್ತಿರುವಿಯೆಂಬ ದೋಷವನ್ನು ಹೊರಿಸಿ 'ನಿನ್ನನ್ನು ನೋಡುವೆನು' ಎಂದು ಹೇಳಿಕಳಿಸಿದರು! ಮರುದಿವಸ ಪಾಠಶಾಲೆಗೆ ಹೋದಾಗ ಶಾಸ್ತ್ರಿಗಳು, ಸೆಕ್ರೆಟರಿಯವರು ೧ ರೂ. ದಂಡ ನಿನಗೆ ಹಚ್ಚಿದ್ದಾರೆ. ರೂ. ಕೊಟ್ಟು ಬರಬಹುದೆಂದು ಹೇಳಿದರು. ನಾನು ಪುನಃ ಶ್ರೀ ಬಾಬಾಸಾಹೇಬರ ಕಡೆಗೆ ಹೋಗಿ ದಂಡ ಏಕೆ ಹಚ್ಚಿರುವಿರೆಂದು ವಿಚಾರಿಸಲು ಕಾರಣವನ್ನು ಕೂಡಾ ಹೇಳದೆ ನನ್ನನ್ನು ಪಾಠಶಾಲೆಯಿಂದಲೇ ತೆಗೆದು ಹಾಕಿದರು!

ಇದರ ಮೇಲಿಂದ ಪಾಠಶಾಲೆಯೂ, ಬಾಬಾ ಸಾಹೇಬರೂ ಯಾವ ಪಂಗಡಕ್ಕೆ ಸೇರಿದವರೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ. ಪಾಠಶಾಲೆಯಿಂದಲೇ ತೆಗೆದುಹಾಕುವಂಥ ನಾನು ಮಾಡಿದ ತಪ್ಪಾದರೂ ಏನು? ವಾಚಕರೇ ಊಹಿಸಲಿ. ವಿರಕ್ತ ಮತ್ತು ಗುರುಸ್ಥಲದವರನ್ನು ಸಮನಾಗಿಯೇ ನೋಡುವೆನೆಂದು ಪತ್ರಿಕೆಗಳಲ್ಲಿ ಪ್ರಕಟಿಸಿದ ಈ ಬಾಬಾ ಸಾಹೇಬರ ನಡತೆಯನ್ನಾದರೂ ನೋಡಿರಿ! ಅಪ್ಪಾ ಸಾಹೇಬರು ದೊರಕಿಸಿದ ವಿಶೇಷವಾದ ಕೀರ್ತಿಗೆ ಭಂಗಬರದಂತೆ ನಡೆಯಲು ಇನ್ನಾದರೂ ಇವರಿಗೆ ಆ ಪ್ರಮಥವರೇಣ್ಯರು ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇನೆ.

—ಸಿಮುಲಾದಲ್ಲಿ ಕಳೆದ ೧೯ನೆಯ ತಾರೀಖಿನ ದಿವಸ ವಿಶೇಷ ಮಳೆಯಾದುದರಿಂದ ಮೋಟಾರ ಮತ್ತು ಉಗಿಬಂಡಿಗಳ ಓಡಾಟವು ಕೂಡಾ ನಿಂತಿದ್ದಿತು.

ಅಸ್ಪೃಶ್ಯತಾ ನಿವಾರಣೆಯೇ ಗಾಂಧಿ ಜಯಂತಿ.

ಮೈಸೂರ ದಸರಾ ಪ್ರದರ್ಶನ.

ದಸರೆಯ ಹಬ್ಬದ ಕಾಲಕ್ಕೆ ಮೈಸೂರಿನಲ್ಲಿ ಅಖಿಲಭಾರತ ಪ್ರದರ್ಶನವೊಂದು ಪ್ರತಿವರುಷವೂ ಏರ್ಪಡುತ್ತಿರುವುದಷ್ಟೆ. ಪದ್ಧತಿಯಂತೆ ಈ ವರುಷವೂ ಪ್ರದರ್ಶನ ಏರ್ಪಾಟಾಗಿರುವುದು. ಬೆಂಗಳೂರು ವಿಜ್ಞಾನ ಶಾಸ್ತ್ರೀಯ ಸಂಘದವರು ಮತ್ತು ಬೆಂಗಳೂರು ಕೆಮಿಕಲ್ ಕಾರ್ಯಾಲಯದವರು ತಮ್ಮಲ್ಲಿ ಸಿದ್ಧಪಡಿಸಿದ ವಸ್ತುಗಳನ್ನು ಇಟ್ಟಿದ್ದಾರೆ. ಇವುಗಳಲ್ಲಿ ಗ್ಯಾಸ್ ಮ್ಯಾಂಟಲ್‍ಗಳು ದಕ್ಷಿಣ ಹಿಂದುಸ್ಥಾನದಲ್ಲಿಯೇ ನೂತನವಾಗಿ ತಯಾರಾದವುಗಳಿರುತ್ತವೆ.

ಮೈಸೂರ ಸರಕಾರ ಕಾರ್ಯಾಲಯದವರು ತಯಾರಿಸಿದ ಕಲ್ಲುತಿಕ್ಕುವ ಸಂಗಮರವರಿ ಲೇಹ್ಯವೂ, (Iodo Cure) ಎಂಬ ಅಯೋಡಾಯಿನ್ ತೈಲವೂ, ರೇಶಿಮೆ ಕಾರ್ಯಾಲಯದವರು ತಯಾರಿಸಿದ ರೇಶಿಮೆ ವಸ್ತ್ರಗಳೂ ತೋರಿಸಲ್ಪಡುವವು. ಅರಣ್ಯಶಾಖೆಯವರು ಆಯುರ್ವೇದ ಮತ್ತು ಯುನಾನಿ ಔಷಧಗಳಲ್ಲಿ ಕೇಳಿದ ಪ್ರತಿನಿತ್ಯದಲ್ಲಿ ಬೇಕಾಗುವವೇಲಾದ ಗಿಡಮೂಲಿಕೆಗಳನ್ನೂ ಮತ್ತು ೭ ಅಡಿ ೨ ಇಂಚು ಉದ್ದವಾದ ಆನೆಯ ಕೋರೆಗಳನ್ನು ತೋರಿಸುವರು.

ಯಂತ್ರಶಾಖೆಯಲ್ಲಿ ಕರಾಚಿಯಲ್ಲಿ ತಯಾರಾದ ಕಾರ್ಬನ್ ಕಾಗದಗಳೂ ಮತ್ತು ಭಾರತೀಯ ಫೌಂಟನ್‍ಪೆನ್ನುಗಳೂ ಮತ್ತು ಬಂಗಾಲದ ವಿದ್ಯುದ್ದೀಪ ಕಾರ್ಯಾಲಯದವರು ತಯಾರಿಸಿದ ಮಿಂಚಿನ ದೀಪಗಳೂ, ಲಾಹೋರದ ಬಿ. ಶಂಕರದಾಸ ಇವರ ಕಣಿಯುವ ಯಂತ್ರಗಳೂ, ಬಂಗಾಲ ಕಬ್ಬಿಣ ಕಾರ್ಯಾಲಯದವರ ಕಬ್ಬಿಣ ಸಾಮಾನುಗಳೂ ಪ್ರದರ್ಶಿಸಲ್ಪಡುವವು.

ಇವಲ್ಲದೆ ಗೋದರೇಜ ಸರಕಾರ, ತೀರಕಸಂಬಿ ಮತ್ತು ಬದನವಾಳ ಖಾದಿವಸ್ತ್ರಗಳು, ಹಿಂದುಸ್ಥಾನದಲ್ಲೆಲ್ಲ ತಯಾರಿಸಲ್ಪಟ್ಟ ಸ್ತ್ರೀಯರ ಕೈಗಾರಿಕೆಯ ಕೆಲಸಗಳು ಮತ್ತು ಹಿಂದುಸ್ಥಾನದ ಚಿತ್ರಕಾರರಿಂದ ತೆಗೆಯಲ್ಪಟ್ಟ ಸುಂದರವಾದ ಚಿತ್ರಗಳು ಇವೆಲ್ಲವುಗಳನ್ನು ಪ್ರದರ್ಶನದಲ್ಲಿ ನೋಡಬಹುದು.

ಶಿಕ್ಷಣ ಪ್ರಭಾವ.

ನೂರು ವರುಷಗಳ ಹಿಂದೆ ನಿಗ್ರೋ ಜನರನ್ನು ಗುಲಾಮರನ್ನಾಗಿ ಮಾರಾಟ ಮಾಡುವ ಪದ್ಧತಿಯು ಪಾಶ್ಚಾತ್ಯ ರಾಷ್ಟ್ರಗಳಲ್ಲೆಲ್ಲ ಪ್ರಚಾರದಲ್ಲಿದ್ದಿತಷ್ಟೆ. ಅವರೀಗ ಯಾವ ಸ್ಥಿತಿಯಲ್ಲಿರುವರೆಂಬುದನ್ನಷ್ಟು ನೋಡಿರಿ,

ಅಮೇರಿಕೆಯಲ್ಲಿ ನಿಗ್ರೋ ಜನರು ಶಿಕ್ಷಣದಲ್ಲಿ ಬಹಳೇ ಮುಂದುವರಿದಿರುವರು. ನೂರಕ್ಕೆ ೬೦ರಂತೆ ಅವರಲ್ಲಿ ಸುಶಿಕ್ಷಿತರಿರುತ್ತಾರೆ. ಅವರಲ್ಲನೇಕರು ಎಷ್ಟೋ ಮುಖ್ಯ ಮುಖ್ಯ ಅಧಿಕಾರ ಸ್ಥಾನಗಳನ್ನೂ ಅಲಂಕರಿಸಿದ್ದಾರೆ. ಪಾಲ್‍ರೋಬಸನ್ ಎಂಬ ನಿಗ್ರೋ ಪ್ರಮುಖರು ನ್ಯೂಯಾರ್ಕ ಪಟ್ಟಣದಿಂದ ಮೊನ್ನೆ ತಾನೆ ಲಂಡನಕ್ಕೆ ಬಂದಿದ್ದಾರೆ. ಅವರು ಹೇಳುವದೇನಂದರೆ— "ಬಿಳಿ ವರ್ಣದ ಸಧ್ಯದ ಅಮೇರಿಕನ್ನರು ಸಾಧಾರಣೆಯ ಕೊನೆಯ ತರಗತಿಯವರೆಂದು ಹೇಳಬಹುದು. ನಿಗ್ರೋ ಜನರಲ್ಲಿ ಕೆಲವರು ಈ ಬಿಳಿಯರ ಅಂಧಾನುಕರಣ ಮಾಡಲು ಯತ್ನಿಸಿ ತಾವು ಬಿಳಿಯರೇ ಆಗಬೇಕೆಂದು ಯತ್ನಿಸುತ್ತಿದ್ದಾರೆ. ಮುಂದಿನ ಸಂತತಿ ಫಲವಾಗುವಷ್ಟರಲ್ಲಿ ಅವರು ಹೀಗೆ ಅನುಕರಣ ಮಾಡಿದ್ದಾದರೆ ನಿಜವಾಗಿಯೂ ಅವರು ತಮ್ಮಷ್ಟಕ್ಕೆ ತಾವೇ ನಾಶವಾಗುವರು.

ನಮ್ಮ ನಿಗ್ರೋ ಜನರ ಸಂಸ್ಕೃತಿಯು ಯುರೋಪಿಯನ್ನರಿಗಿಂತ ಮಹತ್ವವಾದದ್ದು. ಅಂದಮೇಲೆ ಅವರ ಅನುಕರಣವನ್ನು ನಾವೇಕೆ ಮಾಡಬೇಕು? ಹೈತಿ ದ್ವೀಪದಲ್ಲಿ ಒಬ್ಬ ನಿಗ್ರೋನು ಕರಿ ವರ್ಣದವರು ಬಿಳಿ ವರ್ಣದವರಾಗುವ ಗೂಢವನ್ನು ಕಂಡುಹಿಡಿದಿರುವನು. ಅದು ಉಳಿದ ನಿಗ್ರೋ ಜನರಿಗೆ ಗೊತ್ತಾದರೆ ಅವರೂ ಅವನ ಅನುಕರಣ ಮಾಡಬಹುದು. ಆದಕಾರಣ ಈ ತರದ ಅನುಕರಣ ಭಾವನೆಯನ್ನು ಎದುರಿಸುವದಕ್ಕಾಗಿಯೇ ನಾನು ೫ ವರುಷದ ಒಂದು ಯೋಜನೆಯನ್ನು ಮಾಡಿದ್ದೇನೆ. ನಮ್ಮ ಜನರಿಗೆ ಶಿಕ್ಷಣಾಭಿವೃದ್ಧಿಯಿಂದ ತಾವು ಒಂದು ಮಹತ್ವದ ಜನಾಂಗದ ಸಂತತಿಯವರೆಂಬ ಅರಿವನ್ನುಂಟುಮಾಡಬೇಕಾಗಿದೆ. ನಮ್ಮ ಸಂಸ್ಕೃತಿಯು ಪ್ರಾಚೀನಕಾಲದ ಫಾರ್ಸಿ, ಚೀನಿ ಮತ್ತು ಯಹೂದಿ ಜನರ ಸಂಸ್ಕೃತಿಯಷ್ಟೇ ಪುರಾತನದ್ದಿರುವದೆಂಬುದನ್ನು ತೋರಿಸಿಕೊಡಬೇಕಾಗಿದೆ. ವರ್ಣದಲ್ಲೇನೂ ಫಲವಿಲ್ಲ. ಇದೇ ನನ್ನ ಜೀವನದ ಗುರಿಯು." ಈತರದ ಅರಿವು ಆ ಜನರಲ್ಲುಂಟಾದುದು ಶಿಕ್ಷಣ ಪ್ರಭಾವದ ಫಲವಲ್ಲವೆ?

ಮುಸೋಲಿನಿಯವರ ಪ್ರತಿಮಾ ಸ್ಥಾಪನೆ.

ರೋಮ ಪಟ್ಟಣದಲ್ಲಿರುವ 'ಮೊಂಟೆ ಮೆರಿಯೋ' ಎಂಬ ಎಲ್ಲಕ್ಕೂ ಎತ್ತರವಾದ ದಿನ್ನೆಯ ಮೇಲೆ ಸಿನೋರ ಮುಸೊಲಿನಿಯವರ ಪ್ರತಿಮೆಯನ್ನು ಸ್ಥಾಪಿಸುವ ಯೋಜನೆಯು ಮಾಡಲ್ಪಟ್ಟಿದೆ. ಪ್ರತಿಮೆಯು ಮತ್ತು ಅದರ ಕೆಳಗಿನ ಕಟ್ಟೆಯು ಕೂಡಿ ೨೫೦ ಫೂಟು ಎತ್ತರವಾಗುವದು. ದಿನ್ನೆಯ ಮೇಲೆ ಯಂತ್ರ ಸಹಾಯದಿಂದ ಏರಿಹೋಗಬಹುದು. ಮತ್ತು ಅಲ್ಲಿಂದ ಪಟ್ಟಣದ ಸೌಂದರ್ಯವನ್ನು ನಿರೀಕ್ಷಿಸಬಹುದು. ಪ್ರತಿಮೆಯು ಪ್ರಾಚೀನ ರೋಮನ್ ಜನರ ನಡವಳಿಕೆಯಂತೆಯೇ ತಯಾರಿಸಲ್ಪಡುವದು. ಇದೇ ದಿನ್ನೆಯ ಮೇಲೆ ಕೆಲವು ವರ್ಷಗಳ ಹಿಂದೆ ಅಮೇರಿಕೆಯ ಮೆಥೊಡಿಸ್ಟ ಪಂಥದವರು ಒಂದು ಕ್ರೈಸ್ತ ದೇವಾಲಯವನ್ನು ಕಟ್ಟಬೇಕೆಂದಿದ್ದರು. ಆದರೆ ರೋಮನ್ ನಗರ ಸಭೆಯವರು ಅದಕ್ಕೆ ಇಂಬು ಕೊಡಲಿಲ್ಲ. ಸಿನೋರ ಮುಸೋಲಿನಿಯವರು ಒಕ್ಕಲಿಗರಿಗೆ ಕಲ್ಯಾಣವನ್ನುಂಟುಮಾಡಿದುದರಿಂದ ಅವರ ಪ್ರತಿಮೆಯು ಪೂರ್ವದಲ್ಲಾಗಿಹೋದ ಸೀಸರ ಡ್ಯೂಸ ಚಕ್ರವರ್ತಿಯ ಯೋಗ್ಯತೆಯ ಕುರುಹಾಗಿದೆಯೆಂದು ಹೇಳುತ್ತಾರೆ. ರಾಷ್ಟ್ರದ ಕಲ್ಯಾಣಕ್ಕಾಗಿ ಶ್ರಮಪಡುವವರಿಗೆ ರಾಷ್ಟ್ರವು ಸರಿಯಾದ ಮಾನವನ್ನು ಕೊಡದೆ ಬಿಟ್ಟೀತೆ?

ಧಾರ್ಮಿಕ ತೇಜವೇ? ಕ್ರೌರ್ಯವೇ?

ಮೌಲಾನಾ ಶೌಕತ್ ಅಲ್ಲಿಯವರು ಫ್ರೀಪ್ರೆಸ್ ಪತ್ರಿಕೆಯ ಮೇಲೆ ಹೂಡಿದ ವ್ಯಾಜ್ಯದಲ್ಲಿ ಮೌಲಾನಾ ಸಾಹೇಬರ ಸಾಕ್ಷಿಯಾಯಿತು. ಆಗ ಇವರು ಹಿಂದಕ್ಕೆ ತಾವು ಈ ಪ್ರಕಾರ ಹೇಳಿದುದು ನಿಜವೆಂದು ಒಪ್ಪಿದರು.

"ಮಹಮ್ಮದೀಯ ಧರ್ಮಕ್ಕೆ ಯಾರಾದರೂ ಅಲ್ಲಗಳೆದರೆ ನಾನು ಮುದುಕನಾಗಿದ್ದರೂ 'ಅಲ್ಲಾ' ನನಗೆ ಶಕ್ತಿಯನ್ನು ದಯಪಾಲಿಸಿದರೆ ಅವರ ಕಣ್ಣುಗಳನ್ನು ನನ್ನ ಬೆರಳುಗಳಿಂದಲೇ ಕಿತ್ತುಬಿಡುವೆನು." ಇಂಥ ಮನೋವೃತ್ತಿಯು ಧಾರ್ಮಿಕ ತೇಜವನ್ನು ತೋರಿಸುವದೇ? ಕ್ರೌರ್ಯವನ್ನು ವ್ಯಕ್ತಗೊಳಿಸುವುದೇ?

ಅಸ್ಪೃಶ್ಯತೆ ಅಳಿದರೆ ಹಿಂದು ಸಮಾಜ ಉಳಿವುದು.

ಪತ್ರಗಳ ಸಾರಾಂಶ.

ತರುಣ ಸಂಘದ ವಾರ್ಷಿಕೋತ್ಸವ.

ಕಾರ್ಯಕ್ರಮದಂತೆ ೨, ೩, ೪, ೫ ಆಗಸ್ಟಗಳಲ್ಲಿ ಗುಲ್ಬರ್ಗಾ ಶ್ರೀಮದ್ವೀರಶೈವ ತರುಣ ಸಂಘದ ದ್ವಿತೀಯ ವಾರ್ಷಿಕ ಮಹೋತ್ಸವವು ಶ್ರೀ. ಬಸವಪ್ಪ ಬಿ. ಎ. ಎಲ್ ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಸ್ವಾಗತ ಸಂಘಾಧ್ಯಕ್ಷರಾದ ಶ್ರೀ. ವೀರನಗೌಡರು ತರುಣ ಸಂಘಗಳ ಆವಶ್ಯಕತೆಯನ್ನೂ ಅವುಗಳಿಂದಾಗುವ ತರುಣರ ಏಳ್ಗೆಯನ್ನೂ ಗಾಂಧಿ ಜವಾಹರಲಾಲರ ಉದಾಹರಣೆಗಳಿಂದ ಬಹು ಸಮಂಜಸವಾಗಿ ಹೇಳಿದರು. ಸಂಘದ ಉದ್ದೇಶ, ಕಾರ್ಯಕಲಾಪಗಳನ್ನು ತಿಳಿಸಿ ಹೇಳಿದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ "ಗುಲ್ಬರ್ಗಾ ನಗರದಲ್ಲಿ ವೀರಶೈವರ ಜನಸಂಖ್ಯೆಯು ಅಧಿಕವಾಗಿದ್ದರೂ ಕಾಲೇಜಿನಲ್ಲಿ ಸ್ಥಳೀಯ ಒಬ್ಬ ವಿದ್ಯಾರ್ಥಿಯಾದರೂ ಓದದೆ ಇರುವುದು ಅತ್ಯಂತ ಶೋಚನೀಯವಾದ ಸಂಗತಿಯಾಗಿದೆ. ತಮ್ಮ ಧರ್ಮದ ವ್ಯಾಜ್ಯವನ್ನು ಕೂಡಾ ಅನ್ಯ ಧರ್ಮದ ವಕೀಲರಿಂದ ಮಾಡಿಸುವದೆಂದರೆ ಎಂಥ ನಾಚಿಕೆಗೇಡಿತನ! ಇನ್ನು ಮುಂದಾದರೂ ವೀರಶೈವರು ಎಚ್ಚತ್ತು ವಿದ್ಯಾರ್ಜನೆಯಲ್ಲಿ ಹೆಚ್ಚಾಗಿ ಲಕ್ಷಿಸಬೇಕೆಂದು" ತಿಳಿಸಿಕೊಟ್ಟರು. ಅನಂತರ ಕನ್ನಡ ವಾಙ್ಮಯದ ಮೇಲೆ ಶ್ರೀ ಕೃಷ್ಣರಾವ ವಕೀಲರ ಅತ್ಯಂತ ಹೃದಯದ್ರಾವಕವಾದ ಭಾಷಣವಾದ ನಂತರ ಈ ಕೆಳಗಿನ ಗೊತ್ತುವಳಿಗಳು ತೀರ್ಮಾನಿಸಲ್ಪಟ್ಟವು.

೧. ಈ ವರುಷ ಗುಲ್ಬರ್ಗಾದಲ್ಲಿ ವೀರಶೈವ ಮಹಾಸಭೆಯು ಆಗಲೇಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ. ಗುಲ್ಬರ್ಗಾದ ಜನರು ಇದಕ್ಕೆ ಪೂರ್ಣ ಲಕ್ಷ ಕೊಡಬೇಕೆಂದು ಬೇಡಿಕೊಳ್ಳುತ್ತದೆ.

೨. ಈ ತರುಣಸಂಘದ ವಾಚನಾಲಯಕ್ಕೆ ಸಾಧಾರಣ ೧೨೫ ರೂ. ಬೆಲೆಬಾಳುವ ಪುಸ್ತಕಗಳನ್ನು ದಾನಮಾಡಿದುದಕ್ಕಾಗಿ ಈ ಸಭೆಯು ಎಚ್. ರಾಚಪ್ಪ ತಾಂಡೂರ ಇವರನ್ನು ಅಭಿನಂದಿಸುತ್ತದೆ.

ಇವೇ ಮೊದಲಾದ ಗೊತ್ತುವಳಿಗಳಾಗಿ ಅಧ್ಯಕ್ಷರ ಸಮಾರೋಪದ ಭಾಷಣವಾದ ನಂತರ ಸಭೆಯು ವಿಸರ್ಜಿಸಲ್ಪಟ್ಟಿತೆಂದು ಕಾರ್ಯದರ್ಶಿಗಳಾದ ಶ್ರೀ ಎಸ್. ಬಿ. ಪಾಟೀಲರು ತಿಳಿಸುತ್ತಾರೆ.

ಶ್ರೀ ಬಸವೇಶ್ವರ ಭಜನಾಸಂಘ ಆಡೂರು.

ಅನಾಮಧಾರಿಯಾಗಿ ೭-೮ ವರುಷಗಳ ಹಿಂದೆ ಜನ್ಮವೆತ್ತಿದ ಈ ಸಂಘವು ಕಳೆದ ಮೂರು ವರುಷಗಳಿಂದ ಶ್ರೀ ಬಸವೇಶ್ವರ ಭಜನಾ ಸಂಘವೆಂದು ಕರೆಯಲ್ಪಡುತ್ತಾ ಇದೆ. ಅಲ್ಲಿಂದ ಪ್ರತಿ ವರುಷ ಪುಣ್ಯ ದಿವಸಗಳಲ್ಲಿ ಗ್ರಾಮಸಂಕೀರ್ತನೆ, ದೇವತೆಗಳ ಅಭಿಷೇಕ, ಮೊದಲಾದ ಕಾರ್ಯಗಳನ್ನು ಸುವ್ಯವಸ್ಥೆಯಿಂದ ಮಾಡುತ್ತಾ ಬಂದಿದೆ. ಈ ವರುಷ ಬಸವಜಯಂತಿಯ ಕಾಲಕ್ಕೆ ಬಸವಸಂದೇಶದ ೧ ಸಾವಿರ ಪ್ರತಿಗಳನ್ನೂ ಶ್ರಾವಣ ಮಾಸದಲ್ಲಿ ಸಾಧಾರಣ ೧೧೦೦ ಜನರಿಗೆ ಅನ್ನ ಸಂತರ್ಪಣೆ ಮಾಡಿಸಿ ವೀರಶೈವ ಏಕೀಕರಣದ ೫೦೦ ಪ್ರತಿಗಳನ್ನೂ ಹಂಚಿದ್ದಾಗಿದೆ. ಈ ಪ್ರಕಾರ ಕಾರ್ಯ ಮಾಡುತ್ತಿರುವುದು ಸಂಸ್ಥೆಯವರಿಗೆ ಭೂಷಣಪ್ರದವಾದುದಾಗಿದೆ. ಇಷ್ಟಕ್ಕೇನೇ ಸಂತುಷ್ಟರಾಗದೆ ಇನ್ನೂ ತಮ್ಮ ಕಾರ್ಯಕ್ರಮವನ್ನು ಹೆಚ್ಚಿಗೆ ಬೆಳೆಯಿಸಿ ಕರ್ನಾಟಕದಲ್ಲಿ ಒಂದು ಮಾದರಿಯ ಸಂಘವಾಗುವಂತೆ ಪ್ರಯತ್ನಿಸಬೇಕೆಂದು ಶ್ರೀ. ವಿ. ವಿ. ಶಿರೂರ ಆಡೂರ ಇವರು ತಿಳಿಸುತ್ತಾರೆ.

ಪುರಾಣ ಮಹೋತ್ಸವ ಅಥಣಿ.

ಪದ್ಧತಿಯಂತೆ ಶ್ರೀ. ಗಚ್ಚಿನಮಠದಲ್ಲಿ ಶ್ರಾ. ಶು. ೧ರಿಂದ ಬಿಲ್ವಾರ್ಚನ, ರುದ್ರಾಭಿಷೇಕ, ಭಜನೆ ಮತ್ತು ಶ್ರಾ. ಶು. ೫ರಿಂದ ಶ್ರೀ. ಪಂಡಿತ ಬಸವಲಿಂಗ ಶಾಸ್ತ್ರಿಗಳು ಗುಡಗೆರಿ ಇವರಿಂದ ಪಂಡಿತಾರಾಧ್ಯರ ಪುರಾಣವು ಶ್ರೋತೃವೃಂದಕ್ಕೆ ಪರಿಣಾಮವಾಗುವಂತೆ ಆಗಮ, ಉಪನಿಷತ್, ವಚನ ಮೊದಲಾದವುಗಳ ಉದಾಹರಣೆಗಳಿಂದ ಹೇಳಲ್ಪಡುತ್ತಾ ಇದ್ದಿತು. ಪುರಾಣವು ಪೂರೈಸಲು ಇನ್ನು ೮ ದಿವಸಗಳಿರುವಾಗ ಶ್ರೀ. ಮ ನಿ. ಮೃತ್ಯುಂಜಯ ಮಹಾಸ್ವಾಮಿಗಳವರು ಹುಬ್ಬಳ್ಳಿ ಕೀರ್ತನಕಾರರಾದ ರಾಮಚಂದ್ರಪ್ಪನವರನ್ನು ಮತ್ತು ಗವಾಯಿ ಬಸವಪ್ಪನವರನ್ನು ಕರೆದುಕೊಂಡು ಬಂದು ಪ್ರತಿ ದಿವಸ ಕೀರ್ತನ ಗಾಯನಗಳಿಂದ ಸಭಿಕರ ಮನಾನಂದಗೊಳಿಸುತ್ತಿದ್ದರು. ಕಳೆದ ತಾ. ೧೧-೯-೩೩ನೆಯ ಸೋಮವಾರ ೫-೬ ಸಾವಿರ ಜನಗಳ ಗಣಾರಾಧನೆಯು ಜರುಗಿ ಪುರಾಣವು ಅತ್ಯಂತ ವಿಜೃಂಭಣೆಯಿಂದ ಪೂರ್ತಿಗೊಳಿಸಲ್ಪಟ್ಟಿತೆಂದೂ ಮರು ದಿವಸ ಕೆಲವರಿಗೆ ಸುವರ್ಣ ಪದಕ ಮೊದಲಾದವುಗಳು ಕೊಡಲ್ಪಟ್ಟವೆಂದೂ ಅಥಣಿಯ ಓರ್ವ ಪ್ರೇಕ್ಷಕರು ತಿಳಿಸುತ್ತಾರೆ.

ಮಾನಪತ್ರ ಸಮರ್ಪಣೆ.

ಶ್ರೀ ಸ್ವಾಮಿ ಅಮರೇಶ್ವರಾಚಾರ್ಯ ಮಹಾರಾಜ ಶಹಾಜಹಾನ ಅವರಾದ ಇವರು ಇದುವರೆಗೂ ಕಾಶಿ, ಕಲ್ಕತ್ತಾ ಮೊದಲಾದ ನಗರಗಳಲ್ಲಿ ಉಚ್ಚ ಶಿಕ್ಷಣವನ್ನು ಹೊಂದಿ ನ್ಯಾಯ ತರ್ಕಾದಿ ಶಾಸ್ತ್ರಗಳಲ್ಲಿ ಈ ಮುಂಚೆಯೇ ಉತ್ತೀರ್ಣರಾಗಿರುವದಲ್ಲದೆ ಮೊನ್ನೆ ಮೊನ್ನೆ ವೇದಾಂತಾಚಾರ್ಯನೆಂಬ ದೊಡ್ಡ ಪದವಿಯನ್ನು ಹೊಂದಿದ್ದಾರೆ. ಈ ಗ್ರಾಮದ ಮುಸಲ್ಮಾನ್, ಮಾರವಾಡಿ, ಬ್ರಾಹ್ಮಣ, ಜೈನ, ವೀರಶೈವರೇ ಮೊದಲಾದ ಸರ್ವಸಾಂಪ್ರದಾಯಕರೂ ಸೇರಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸುವದಕ್ಕಾಗಿ ತಾ. ೯-೮-೩೩ನೆಯ ದಿವಸ ಶ್ರೀಗಳವರಿಗೆ ಮಾನಪತ್ರವನ್ನರ್ಪಿಸಿದರು. ನೈಜಾಮ ಪ್ರಾಂತದಲ್ಲಿ ಈ ಪದವಿಯನ್ನು ಧರಿಸಿದವರೆಂದರೆ ಇವರೇ ಮೊದಲನೆಯವರು. ಶ್ರೀಗಳವರು ಆಧುನಿಕ ತರುಣ ವಿಚಾರದವರಾಗಿದ್ದಾರೆ. ಗುರು ವಿರಕ್ತರಲ್ಲಿರುವ ಅತ್ಯಂತ ವಿಘಾತಕವಾದ ಚಳವಳಿಯು ಇವರಿಗೆ ಎಳ್ಳಷ್ಟಾದರೂ ಸೇರುವದೇ ಇಲ್ಲ. ರಾಷ್ಟ್ರೀಯ ತತ್ವಗಳಿಗೆ ಪೋಷಕವಾಗಿರದ ಯಾವ ಚಳವಳಿಯಾದರೂ ಅನರ್ಥಕಾರಿಯೆಂಬುದೇ ಇವರ ಮತವೆಂದು ಓರ್ವ ಮಹಾಶಯರು ತಿಳಿಸುತ್ತಾರೆ.

ಶೋಚನೀಯ ನಿಧನ.

ವಿಜಾಪುರದ ಸುಪ್ರಸಿದ್ಧ ಮುಂದಾಳುಗಳೂ ವೀರಶೈವಸಮಾಜ ಸೇವಕರೂ ಆದ ಶ್ರೀ. ಈಶ್ವರಗೌಡರು ಕಳೆದ ೨೦ನೆಯ ತಾರೀಖಿನ ದಿನ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಅಸ್ಪೃಶ್ಯತೆ ಉಳಿದರೆ ಹಿಂದು ಸಮಾಜ ಅಳಿವುದು.

ಸಮಾಚಾರ ಸಂಗ್ರಹ.

-ಭಿಕ್ಷುಕ ವೇಷದಿಂದ ಲಖನೌದಲ್ಲಿ ಯಾರೋ ಕೂಸುಗಳನ್ನು ಕದ್ದೊಯ್ಯುವರೆಂಬ ಸಂಶಯದಿಂದ ಜನರು ಬಹಳೇ ಗದ್ದಲವನ್ನೆಬ್ಬಿಸಿದರು. ಆ ಗಲಭೆಯಲ್ಲಿ ೪ ಜನ ಭಿಕ್ಷುಕರು ಸತ್ತರು.

—ಸೌ. ಕಸ್ತೂರಿಬಾಯಿ ಗಾಂಧಿ ಇವರು ತೀವ್ರವೇ ಲಖನೌದಿಂದ ಮುಲತಾನಕ್ಕೆ ಹೋಗಿ ಅಲ್ಲಿ ಶ್ರೀ ದೇವದಾಸ ಗಾಂಧಿಯವರನ್ನು ಕಾಣುವರು.

—ಬಡೋದೆಯ ಪೂರ್ವದ ನ್ಯಾಯಾಧೀಶರಾಗಿದ್ದ ಶ್ರೀ. ಅಬ್ಬಾಸ ತಯ್ಯಬ್ಜಿಯವರು ೭ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಮಹಾತ್ಮಾಜಿಯವರ ದರ್ಶನ ತೆಗೆದುಕೊಂಡರು.

—ಮದ್ರಾಸ ಇಲಾಖೆಯಲ್ಲಿ ರಾಮನದ ಜಿಲ್ಹೆಯ ಒಂದು ಗ್ರಾಮದಲ್ಲಿ ಪೋಲೀಸರ ವಸತಿಸ್ಥಾನದ ಮೇಲೆ ಒಂದು ಸಿಡಿಗುಂಡು ಒಗೆಯಲ್ಪಟ್ಟಿತು. ಅದರಿಂದ ಒಬ್ಬ ಸಿಪಾಯಿಗೆ ಗಾಯಗಳಾಗಿವೆ. ಮತ್ತು ಕಟ್ಟಡವೂ ಸ್ವಲ್ಪ ನಾಶವಾಗಿದೆ.

ಒಡಿಸಾ ಪ್ರಾಂತದಲ್ಲಿ ಮಹಾಪೂರದ ಅನರ್ಥದಿಂದ ೭೦ ಸಾವಿರ ಮನೆಗಳು ಬಿದ್ದು ಜನರು ಬಹಳೇ ಸಂಕಟಕ್ಕೊಳಗಾಗಿದ್ದಾರೆ. ಅವರಿಗೆ ಸಹಾಯ ಮಾಡುವದಕ್ಕಾಗಿ ದೀನಬಂಧು ಆ್ಯಂಡ್ರ್ಯೂಜರವರು ದುಡ್ಡು ಕೂಡಿಸಹತ್ತಿದ್ದಾರೆ.

—ಸಿಮ್ಲಾದ ಹತ್ತರ ಅತಿವೃಷ್ಟಿಯಾದುದರಿಂದ ರೇಲ್ವೆಗಾಡಿ, ಮೋಟಾರುಗಳು ಹೋಗದಂತಾಗಿವೆ. ರೇಲ್ವೆಹಳಿಗಳು ಹರಿದು ಹೋದುದರಿಂದ ಜಪಾನಿ ಶಿಷ್ಟಮಂಡಳದವರಿಗೆ ತಡೆಯುಂಟಾಯಿತು. ಅವರ ಸಂಗಡವಿದ್ದವರು ಮಳೆಯಲ್ಲಿ ತಾವೇ ಸಾಮಾನುಗಳನ್ನು ಹೊರಬೇಕಾಯಿತು.

—ಅಮೇರಿಕೆಯಲ್ಲಿ ಪುನಃ ೬೯ ಸಾವಿರ ಜನರು ಉದ್ಯೋಗರಹಿತರಾಗಿರುವರೆಂದು ತಿಳಿಯುತ್ತದೆ.

—ಮಿದ್ನಾಪುರದಲ್ಲಿ ಯಾರೂ ಸೂರ್ಯಾಸ್ತವಾದ ನಂತರ ಪುನಃ ಸೂರ್ಯೋದಯವಾಗುವವರೆಗೆ ಹೊರಗೆ ಹೋಗಕೂಡದೆಂದು ನಿರ್ಬಂಧನೆಯಾಗಿದೆ.

—ಕಲಕತ್ತೆಯಲ್ಲಿ ಒಬ್ಬನು ೧೦ ಸಾವಿರ ರೂ. ಇನ್ನೊಯ್ಯರನ್ನೊಯ್ಯುತ್ತಿರುವಾಗ ಅದನ್ನು ಅಪಹರಿಸಿದ ಕಾರಣದಿಂದ ೧೩ ಜನ ವಂಗ ಯುವಕರನ್ನು ಬಂಧಿಸಿದ್ದಾರೆ.

—ಮೃತಹೊಂದಿದ ಇರಾಕದ ರಾಜಾ ಫೈಜಲ್ ಇವರ ಶವವನ್ನು ಬಗದಾದ ಪಟ್ಟಣದಲ್ಲಿ ಒಳ್ಳೇ ಸನ್ಮಾನದಿಂದ ಹುಗಿದರು.

—ಮುಂಬಯಿಯ ದಾದರ ಭಾಗದಲ್ಲಿ ಒಬ್ಬ ಪಾರ್ಸಿ ಸ್ತ್ರೀಯಳ ಅಮಾನುಷ ಕೊಲೆಯಾಗಿದೆ. ಮತ್ತೊಂದು ಭಾಗದಲ್ಲಿ ಒಂದು ಶಿಸುವಿನ ರುಂಡವಷ್ಟೆ ಗಟಾರದಲ್ಲಿ ಬಿದ್ದಿದ್ದಿತು.

—ಮಹಾತ್ಮಾಜಿಯವರು ವರ್ಧಾ ಆಶ್ರಮದಲ್ಲಿ ಕೆಲವು ದಿವಸ ವಿಶ್ರಾಂತಿ ತೆಗೆದುಕೊಂಡು ಮುಂದೆ ಅಖಿಲಭಾರತ ಸಂಚಾರ ಮಾಡುವರು.

—ಹಾವೇರಿಯಲ್ಲಿ ತಿರಕಪ್ಪ ಕೊಲಿ ಎಂಬಾತನ ಮಗಳನ್ನು ಮತ್ತು ಮಗನನ್ನು ಹಗಲು ೪|| ಗಂಟೆಗೆ ಕೊಂದು ದುಷ್ಟರು ಸಾವಿರಾರು ರೂಪಾಯಿಗಳ ದಾಗೀನೆಗಳನ್ನು ಒಯ್ದಿದ್ದಾರೆ.

—ಶ್ರೀ. ಹಳ್ಳಿಕೇರಿ ಗುದ್ಲೆಪ್ಪನವರು ತಮಗೆ ಶೌಚಕೂಪ ತೊಳೆಯುವ ಕೆಲಸ ಕೊಡದ್ದರಿಂದ ೧೧ ನೆಯ ತಾರೀಖಿನಿಂದ ಪ್ರಾಣಾಂತಿಕ ಉಪವಾಸವನ್ನು ಪ್ರಾರಂಭ ಮಾಡಿರುವರಂತೆ.

—ಬೈಲಹೊಂಗಲದ ಗುರುಬಸಯ್ಯ ಹೊಸಮಠ ಮತ್ತು ವಿಠ್ಠಲ ಕೃಷ್ಣಯ್ಯ ಕಾಮಕರ ಇವರು ಪಿಕೆಟಿಂಗ್ ಮಾಡಿದುಕ್ಕಾಗಿ ಬಂಧಿಸಲ್ಪಟ್ಟರು.

—ಕಾನಪುರದಲ್ಲಿ ಹೇಯಮ್ಸ್ ಎಂಬ ಆಂಗ್ಲೋ ಇಂಡಿಯನ್ನನು ಸುಖು ಹೆಸರಿನ ಅಸ್ಪೃಶ್ಯ ಹುಡುಗನ ಜಂಡಿಕೆಯನು ಕೊಯ್ದುದಕ್ಕಾಗಿ ಅವನಿಗೆ ನ್ಯಾಯಾಧೀಶರು ೫೦ ರೂ. ದಂಡ ಕ... ಅದರಲ್ಲಿ ೩೦ ರೂ. ಆ ಹುಡುಗನಿಗೆ ಕೊಡಿಸಿದರು.

—ನೇಪಾಳ ಮಹಾರಾಜರ ಅಕ್ಕರಲ್ಲೊಬ್ಬಳು ಅಸ್ವಸ್ಥರಾ... ರುವುದರಿಂದ ಲಂಡನ್ನಿನಿಂದ ವೈದ್ಯರು ಶಸ್ತ್ರಕ್ರಿಯೆ ಮಾಡುವದಕ್ಕೆ ವಿಮಾನದಿಂದ ಕರೆಯಿಸಲ್ಪಟ್ಟಿದ್ದಾರೆ.

—ಸೊಂಡೂರ ಸಂಸ್ಥಾನಾಧಿಪತಿಗಳು ಕಾರ್ತಿಕಸ್ವಾಮಿ ದೇವಾಲಯದಲ್ಲಿ ಅಸ್ಪೃಶ್ಯರಿಗೆ ಪ್ರವೇಶ ಮಾಡಲು ಪ್ರೋತ್ಸಾಹ ಕೊಟ್ಟಿರುವರು. ಇದು ಜಿಲ್ಲೆಯ ಹಿಂದೂ ಬಾಂಧವರಿಗೆ ಭೂಷಣಪ್ರದವಾದುದಲ್ಲವೇ?

ಪುನರುತ್ತೇಜನ.

ಮುಂಬಯಿಯ ವರ್ತಕರಿಗೂ ಮತ್ತು ಬೇರೆಬೇರೆ ಸ್ಥಳಗಳ ವ್ಯಾಪಾರಿಗಳಿಗೂ ಸಂಪೂರ್ಣ ಪರಿಚಯವಿರುವ ಕೈ. ರಾ. ಬ. ಮಲ್ಲಪ್ಪ ಬಸಪ್ಪ ವಾರದ ಇವರ ಮುಂಬೈಯಲ್ಲಿಯ ಅಂಗಡಿಯು ಕಳೆದ ಕೆಲವು ವರ್ಷಗಳಿಂದಲೂ ಸುಪ್ತಾವಸ್ಥೆಯಲ್ಲಿದ್ದುದು ಸರಿಯಷ್ಟೆ. ಆದರೆ ಕೈ. ಅಪ್ಪಾಸಾಹೇಬರವರ ಚಿರಂಜೀವರಾದ ಚನಬಸಪ್ಪ ಮಲ್ಲಪ್ಪ ವಾರದ ಇವರು ಈಗ ಅತ್ಯಂತ ಉತ್ಸಾಹದಿಂದ ಪುನಃ ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ. ಸಾಧಾರಣವಾಗಿ ಪರಿಚಿತವಿರುವ ಎಲ್ಲ ವ್ಯಾಪಾರಸ್ಥರಿಗೂ ಈ ಸಂಬಂಧವಾಗಿ ಪತ್ರಗಳ ಮೂಲಕವೇ ತಿಳಿಸಿದ್ದಾಗಿದೆ. ಯಾರಿಗೆ ಮರೆತು ಆ ಸಂಬಂಧದ ಪತ್ರಗಳನ್ನು ಕಳಿಸಿಲ್ಲವೋ ಅವರಿಗೋಸ್ಕರ ಪ್ರಕಟನೆಯನ್ನು ಕೊಟ್ಟಿದ್ದಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಕೂಡಲೇ ವ್ಯಾಪಾರಸ್ಥರೂ ಗಿರಾಕಿಗಳೂ ಪತ್ರವ್ಯವಹಾರ ಮಾಡಬೇಕು.

ವಿಳಾಸ. ತಮ್ಮ ವಿಧೇಯ,

ಚನಬಸಪ್ಪ ಮಲ್ಲಪ್ಪ ವಾರದ, **ವಿರೂಪಾಕ್ಷಪ್ಪ ರಾವಜಿ ಅಪ್ಪಾ ಥೇಟೆ ಮುನೀಮ.**

ಖಡೆಬಜಾರ, ಮಾಂಡವಿ, ಮುಂಬಯಿ ನಂ. ೪.

ಗಾಂಧಿಗೆ ಪ್ರಿಯವಾವುದು? ಆದಿಜನರ ಸೇವೆ.

ಭಾರತೀಯ

ಧನ ಸಾಮ್ರಾಟರ ಮೆಚ್ಚಿಗೆ.

ಕರ್ನಾಟಕ ನೂತನ ಕಲಾವೈಭವ.

ಸಿದ್ಧೇಶ್ವರ ಕಂಪನಿಯ ಅಪೂರ್ವ ಪ್ರಾವಿಣ್ಯ.



ನಿಜಾಮ ಸರಕಾರದ ಸ್ಟೇಟ ಬ್ಯಾಂಕಿನ ಹೆಬ್ಬಾಗಿಲು.

ಭಾರತೀಯ ಧನಸಾಮ್ರಾಟರಾದ ಹೈದ್ರಾಬಾದ ನಿಜಾಂ ಸರಕಾರದವರು ಸಿದ್ಧೇಶ್ವರ ಕಂಪನಿಯ ಅದ್ವಿತೀಯ ಕಲಾವೈಭವವನ್ನು ನೋಡಿ ಸಂತೋಷಪಟ್ಟು ಸಾವಿರಾರು ರೂ. ಬೆಲೆಬಾಳುವ ಅನೇಕ ಟ್ರೆಜರಿಗಳನ್ನು ತೆಗೆದುಕೊಂಡದ್ದಲ್ಲದೆ ತಮ್ಮ ಸ್ಟೇಟ್ ಬ್ಯಾಂಕಿಗೆ ಅಪೂರ್ವವಾದ, ಅತಿಸುಂದರವಾದ, ಎಲೆಕ್ಟ್ರಿಕ್ ಅಥವಾ ಆಕ್ಸಿಜನ್ ಗ್ಯಾಸುಗಳಿಂದ ಸಹ ಅಪಾಯ ಹೊಂದದಂಥ ಬಹು ಭದ್ರವಾದ ಹೆಬ್ಬಾಗಿಲವನ್ನು ಮಾಡಿಸಿಕೊಂಡಿದ್ದಾರೆ.

ಇಂಥ ಸುಪ್ರಸಿದ್ಧ ಸಿದ್ಧೇಶ್ವರ ಕಂಪನಿಯಿಂದ ನಿಮಗೆ ಬೇಕಾದಂಥ ಟ್ರೆಜರಿ, ಕ್ಯಾಶ್‌ಬಾಕ್ಸ ಮೊದಲಾದವುಗಳನ್ನು ಮಾಡಿಸಿಕೊಂಡು ನಿಮ್ಮ ಹಣವನ್ನು ಭದ್ರವಾಗಿಟ್ಟುಕೊಳ್ಳಬಾರದೇ?

ಸಿದ್ಧೇಶ್ವರ ಆ್ಯಂಡ್ ಕೋ. ಹುಬ್ಬಳ್ಳಿ.

ಹೆಡ್ ಆಫೀಸ್:— ಹುಬ್ಬಳ್ಳಿ. ಬ್ರ್ಯಾಂಚ್ ಆಫೀಸ್:—ಅಬಿಡ್ಸ ಬಿಲ್ಡಿಂಗ್ ಹೈದರಾಬಾದ

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೦೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಚೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ವಲ್ಲಾಗಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ.

ಹೀಗಿದ್ದರೂ ಬಹು ಅಗ್ಗ.

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ?

ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ, ಬಾಗಲಕೋಟೆ. } **ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.**

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ.
ಪೋ. **ಹಂಚಲಿ.**
ಜಿ. ವಿಜಾಪೂರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ। ದಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾರಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೮ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩. | ಆಲಮಟ್ಟಿ- ಸೋಮವಾರ ತಾರೀಖು ೯ ನೆಯ ಅಕ್ಟೋಬರ ೧೯೩೩. | ಸಂಚಿಕೆ ೧೦.

ಜನಸೇವೆಯೇ ದೇವರಸೇವೆ.

ಸತ್ಯಾಗ್ರಹಾಶ್ರಮವು

ಆದಿಜನಗಳ ಉಪಯೋಗಕ್ಕಾಗಿ ಸಮರ್ಪಿಸಲ್ಪಟ್ಟಿತು.

ಗಾಂಧೀಜಿಯವರ ನಿಶ್ಚಯ.

ಮ. ಗಾಂಧೀಜಿಯವರು ಸತ್ಯಾಗ್ರಹಾಶ್ರಮದ ಟ್ರಸ್ಟಿಗಳ ಸಮ್ಮತಿಯಿಂದ ಸತ್ಯಾಗ್ರಹಾಶ್ರಮದ ಎಲ್ಲ ಕಟ್ಟಡಗಳನ್ನೂ ಆದಿಜನಗಳ ಉಪಯೋಗಕ್ಕಾಗಿ ಕೊಟ್ಟುಬಿಡಬೇಕೆಂದು ನಿಶ್ಚಯಿಸಿ ಅಸ್ಪೃಶ್ಯ ಸೇವಕ ಸಮಾಜದ ಅಧ್ಯಕ್ಷರಾದ ಶೇಟ್ ಬಿರ್ಲಾರವರಿಗೆ ಒಂದು ಪತ್ರವನ್ನು ಬರೆದು ಸತ್ಯಾಗ್ರಹಾಶ್ರಮವನ್ನು ತಮ್ಮ ಸಂಘದ ವಶಕ್ಕೆ ತೆಗೆದುಕೊಳ್ಳಬೇಕೆಂದು ವಿಜ್ಞಾಪಿಸಿಕೊಂಡಿದ್ದಾರೆ. ಮೊದಲು 'ಯಂಗ್ ಇಂಡಿಯಾ' ಮತ್ತು 'ನವಜೀವನ' ಪತ್ರಿಕೆಗಳು ಪ್ರಕಟವಾಗುತ್ತಿದ್ದ ನವಜೀವನ ಕಾರ್ಯಾಲಯದ ಸಾಧಾರಣ ೫೦ ಸಾವಿರ ರೂ. ಬೆಲೆಬಾಳುವ ಮುದ್ರಣ ಸಾಮಗ್ರಿಗಳನ್ನು ಕೂಡಾ ಮಾರಿ ಬಿಡಲಾಗುವುದೆಂದು ಮಹಾತ್ಮಾಜಿಯವರು ಪ್ರಕಟಿಸಿದ್ದಾರೆ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

ದೇಹವೇ ದೇವಾಲಯ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
೨ ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನ್ನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟಿ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯುಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕ್ಯಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೨-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೨-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ವಿಲಕಲಮ್ಮನ ಕಥೆ	೦-೧-೬	ಭಜನಾವಳಿ	೦-೧-೬
ಜಪಶಂಕರಯ್ಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಅಕ್ಟೋಬರ ತಾರೀಖು ೮ ನೆಯ ಸೋಮವಾರ | ಸಂಚಿಕೆ ೧೦.

ಶ್ರೀ. ಬಿರ್ಲಾ ಇವರಿಗೆ ಮಹಾತ್ಮಾಜಿಯವರು ಬರೆದ ಪತ್ರ.

ಬೆಲೆಯುಳ್ಳ ಕಟ್ಟಡ, ಗಿಡಪೈರುಗಳನ್ನು ಹಾಗೆಯೇ ಬಿಡುವುದು ತಪ್ಪಾದುದು.

ಪ್ರಿಯ ಘನಶ್ಯಾಮ ದಾಸ,

ಅಗಸ್ಟ ತಿಂಗಳ ಒಂದನೆಯ ತಾರೀಖಿನಿಂದ ಸಾಬರಮತಿ ಆಶ್ರಮವನ್ನು ಅಲ್ಲಿಯ ಆಶ್ರಮವಾಸಿಗಳು ಬಿಟ್ಟುಕೊಟ್ಟದು ತಮಗೆ ಗೊತ್ತೇ ಇದೆ. ತ್ಯಜಿಸಲ್ಪಟ್ಟ ಆಶ್ರಮವನ್ನು ಸರಕಾರವು ಸ್ವೀಕರಿಸುವದೆಂದು ನಾನು ಆಶಿಸಿದ್ದನು. ಆದರೆ ಅವರೇನೂ ಅದನ್ನು ಸ್ವಾಧೀನಪಡಿಸಿಕೊಳ್ಳಲಿಲ್ಲವಾದುದರಿಂದ ಅದಕ್ಕೆ ಮುಂದೇನುಮಾಡಬೇಕೆಂಬ ಪ್ರಶ್ನೆಯು ಮುಂದೆ ಬಂತು. ಬೆಲೆಯುಳ್ಳ ಕಟ್ಟಡಗಳನ್ನೂ, ತತ್ಸಮವೇ ಬೆಲೆಯುಳ್ಳ ಗಿಡಗಳನ್ನೂ, ಬೆಳೆಗಳನ್ನೂ ಹಾಗೆಯೇ ಹಾಳಾಗಬಿಡುವದು ತಪ್ಪಾದುದೆಂದು ನನಗೆ ಅನಿಸಿತು. ಆದುದರಿಂದ ನಾನು ನನ್ನ ಮಿತ್ರರನ್ನು ಮತ್ತು ಸಹೋದ್ಯೋಗಿಗಳನ್ನು ವಿಚಾರಿಸಿ ಆ ಆಶ್ರಮವನ್ನು ಕಡೆಗೊಮ್ಮೆ ಹರಿಜನಸೇವೆಗಾಗಿ ಅರ್ಪಿಸಿಬಿಡಬೇಕೆಂದು ನಿರ್ಧರಿಸಿದೆನು.

ನನ್ನ ಈ ನಿರ್ಧಾರದ ನಿರ್ಣಯವನ್ನು ನಾನು ಆಶ್ರಮದ ಟ್ರಸ್ಟಿಗಳಿಗೂ ಸದಸ್ಯರಿಗೂ ತಿಳಿಸಿದೆನು. ಅವರು ಕೂಡಾ ಅದನ್ನು ಹೃತ್ಪೂರ್ವಕವಾಗಿ ಅನುಮೋದಿಸಿದರೆಂದು ತಿಳಿಸಲು ನನಗೆ ಅತ್ಯಾನಂದವೆನಿಸುತ್ತಿದೆ.

ಆಶ್ರಮವು ಬಿಡಲ್ಪಟ್ಟಾಗ ಮಾನ್ಯವಾದ ಒಪ್ಪಂದವಾದರೆ ಇಲ್ಲವೆ ಹಿಂದುಸ್ಥಾನವು ಸ್ವಾಯತ್ತತೆಯನ್ನು ಪಡೆದರೆ ಆಶ್ರಮದ ಟ್ರಸ್ಟಿಗಳು ಪುನಃ ಅದನ್ನು ಅಧೀನದಲ್ಲಿಟ್ಟುಕೊಳ್ಳಬಹುದೆಂಬ ಆಶೆಯಿದ್ದಿತು. ಈ ಹೊಸ ನಿರ್ಣಯದ ಪ್ರಕಾರ ಟ್ರಸ್ಟಿಗಳೂ ಆ ಆಸ್ತಿಯನ್ನು ಸಂಪೂರ್ಣ ಬಿಟ್ಟುಕೊಡುತ್ತಾರೆ. ಮತ್ತು ಈ ನಿರ್ಣಯವು ಟ್ರಸ್ಟಿಗಳ ನಿಯಮಾವಲಿಗೆ ಅನುಕೂಲವಾದುದಾಗಿಯೇ ಇದೆ. ಯಾಕಂದರೆ ಅದರಲ್ಲಿಯ ನಿಯಮಗಳಲ್ಲಿ ಹರಿಜನಸೇವೆಯೂ ಒಂದು ನಿಯಮವಾಗಿದೆ. ಆದುದರಿಂದ ಈ ನೂತನ ನಿರ್ಣಯವು ಆಶ್ರಮದ ಮತ್ತು ಸ್ವಕೀನ ಸಂಘಟನೆಯ ಉದ್ದೇಶಾನುಸಾರವಾಗಿಯೇ ಇದೆ. ನಾನು ಮೇಲೆ ವಿವರಿಸಿದಂತಹ ವೈಶೇಷಿಕ ಉಪಯುಕ್ತತೆಯುಂಟಾಗಲಿಕ್ಕೆ ಈ ಆಶ್ರಮವನ್ನು ಯಾರಿಗೆ ಒಪ್ಪಿಸಬೇಕೆಂಬದಾಗಿ ನಾನು ಮತ್ತು ಉಳಿದ ಪಾರುಪತ್ಯೆಗಾರರು (Trustees) ವಿಚಾರ ಮಾಡುತ್ತಿದ್ದೆವು. ಕಡೆಗೆ ಇದನ್ನು ಅ. ಭಾ. ಅಸ್ಪೃಶ್ಯ ಸೇವಕ ಸಂಘಕ್ಕೆ ಸಕಲ ಭಾರತೀಯರ ಉಪಯೋಗಕ್ಕಾಗಿ ಅರ್ಪಿಸಿ ಬಿಡಬೇಕೆಂದು ಎಲ್ಲರೂ ಒಮ್ಮನಸ್ಸಿನಿಂದ ನಿರ್ಣಯ ಮಾಡಿದೆವು. ಪಾರುಪತ್ಯದ (Trust) ಉದ್ದೇಶಗಳಾವವೆಂದರೆ—೧. ನಿರ್ಧರಿಸಿದ ನಿಯಮಗಳಿಗನುಸರಿಸಿ ನಡೆಯುವಂಥ ಹರಿಜನ ಕುಟುಂಬಗಳು ಮನೆಮಾಡಿಕೊಂಡಿರಲು ಆಶ್ರಮದ ಭೂಮಿಯನ್ನು ಕೊಡುವದು. ೨. ಹರಿಜನೇತರರಿಗೂ ಮುಕ್ತ ಮಾಡಲ್ಪಟ್ಟ, ಹರಿಜನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನೀಯರಿಗಾಗಿ ಒಂದು ಅನ್ನಛತ್ರವನ್ನು (Hostel) ಪ್ರಾರಂಭಿಸುವದು. ೩. ಸತ್ತ ಪ್ರಾಣಿಗಳ ತೊಗಲನ್ನು ತೆಗೆಯುವ, ಆ ತೊಗಲನ್ನು ಹದಗೊಳಿಸುವ ಮತ್ತು ಅದರಿಂದ ಉತ್ತಮವಾದ ತೊಗಲನ್ನು ಸಿದ್ಧಗೊಳಿಸಿ ಜೋಡುಗಳನ್ನು ಸಿದ್ಧಪಡಿಸುವ ಇವೇ ಮೊದಲಾದ ದಿನಂಪ್ರತಿ ಬೇಕಾಗುವ ಕಲೆಗಳನ್ನು ಕಲಿಸುವ ಒಂದು ಕಲಾಶಾಸ್ತ್ರ ಶಿಕ್ಷಣಾಲಯವು ನಡೆಯಿಸಲ್ಪಡಬೇಕು. ಮತ್ತು ಇದರಲ್ಲಿರುವ ಕಟ್ಟಡಗಳನ್ನು ಮಧ್ಯವರ್ತಿ ಮಂಡಳಿ ಇಲ್ಲವೆ ಗುಜರಾಥ ಶಾಖಾ ಸಂಘ ಇಲ್ಲವೆ ಇವೆರಡರ ಆಫೀಸುಗಳಿಗಾಗಿ ಉಪಯೋಗಿಸಿಕೊಳ್ಳಬೇಕು.

ಇದರ ಪಾರು ಪತ್ಯೇಗಾರರ (Trustees) ವಿಷಯವಾಗಿ ಅಸ್ಪೃಶ್ಯತಾ ಸಂಘದವರು ಒಂದು ಮುಖ್ಯ ಮಂಡಲವನ್ನು ನಿರ್ಮಿಸಿ ಅದಕ್ಕೆ ನೀವು ಮತ್ತು ಕಾರ್ಯದರ್ಶಿಗಳು ಬಾಹ್ಯಸದಸ್ಯರೆಂದೂ ಉಳಿದ ೩ ಜನ ಅಹಮದಾಬಾದಿನ ನಾಗರಿಕರು ಸದಸ್ಯರೆಂದೂ ನಾನು ಸೂಚಿಸುತ್ತೇನೆ.

ಸತ್ಯಾಗ್ರಹಾಶ್ರಮ ವರ್ಧಾ } ಮೋ. ಕ. ಗಾಂಧಿ.

ವಾರದ ಸಂಸ್ಕೃತ ಕಾಲೇಜ ಸೊಲ್ಲಾಪುರ.

ಸೊಲ್ಲಾಪುರದಲ್ಲಿ ಕೈ. ರಾವಬಹದ್ದೂರ ಇವರಿಂದ ಸ್ಥಾಪಿಸಲ್ಪಟ್ಟ ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲೆಯು ಕಳೆದ ೫೪ ವರುಷಗಳಿಂದ ನಡೆಯುತ್ತಾ ಇದೆ. ಶ್ರೀ. ವಾರದ, ಅವರ ತರುವಾಯ ಶ್ರೀ. ವ್ಯಾಪಾರಿ ಕೈ. ಬಂಡಪ್ಪ ಕಾಡಾದಿ ಮತ್ತು ಕೈ. ರೇವಣಸಿದ್ಧಪ್ಪ ಉಮ್ಮರಜಿ ಇವರು ಆರ್ಥಿಕ ದೃಷ್ಟಿಯಿಂದ ವಿಶೇಷ ಸಹಾಯ ಮಾಡಿದ್ದಾರೆ. ಕಳೆದ ಕೆಲವು ವರುಷಗಳಿಂದಲೂ ಶ್ರೀ. ಮಲ್ಲಿಕಾರ್ಜುನಪ್ಪ ಅಪ್ಪಾರಾವ ಪಾಟೀಲ ಇವರು ಶಾಲೆಯ ವ್ಯವಸ್ಥಾಪಕರಾಗಿದ್ದು ಈ ಶಾಲೆಗೆ ಸರಕಾರ ಮತ್ತು ಮುನಸಿಪಾಲಿಟಿಗಳಿಂದ ಪ್ರತಿವರುಷ ಗ್ರ್ಯಾಂಟ್ ದೊರೆಯುತ್ತಾ ಇದೆ. ಈಗ ಶಾಲೆಯಲ್ಲಿ ಬೇರೆಬೇರೆ ವರ್ಗದಲ್ಲಿ ಬೇರೆಬೇರೆ ಜಾತಿಯ ೪೦ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಉಜ್ಜನಿಯ ಶ್ರೀ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಕೈ. ರಾ. ಬ, ವಾರದರವರ ಪುಣ್ಯ ಸ್ಮರಣಾರ್ಥವಾಗಿ ಪಾಠಶಾಲೆಯು ಚಿರಕಾಲ ಬಾಳಲೆಂಬ ಉದ್ದೇಶದಿಂದ ೫೦೦೦ ರೂ ದೇಣಗಿ ಕೊಡುವುದಾಗಿ ಪ್ರಕಟಿಸಿದ್ದಾರೆ. ಇದರಲ್ಲಿಯ ರೋಖ ಹಣವನ್ನು ಶ್ರೀ. ವಾರದರವರ ಕಡೆಗೆ ಕೊಟ್ಟಿದ್ದಾರೆ. ಆದುದರಿಂದ ಸಂಸ್ಥೆಯ ಖಾಸಗೀ ಸ್ವರೂಪವನ್ನು ತೆಗೆದು ಅದಕ್ಕೆ ಸಾರ್ವಜನಿಕ ಸ್ವರೂಪ ಕೊಡುವುದಕ್ಕಾಗಿಯೂ ಅದರ ಮೂಲ ಧನವನ್ನು ಬೆಳೆಯಿಸಿ ಮುಂದಿನ ವ್ಯವಸ್ಥೆಯನ್ನು ಸರಿಯಾಗಿ ಜರುಗಿಸುವುದಕ್ಕಾಗಿಯೂ ಶಾಲೆಯ ವ್ಯವಸ್ಥಾಪಕ ಶ್ರೀ ಪಾಟೀಲರು ೫೪ ವರುಷಗಳ ಶಾಲೆಯ ವರದಿಯಲ್ಲಿ ಪ್ರಕಟಿಸಿದ ಆಶ್ರಯದಾತರಲ್ಲಿ ಕಾರ್ಯಕಾರಿ ಮಂಡಳವನ್ನು ಏರ್ಪಡಿಸುವುದಕ್ಕಾಗಿ ಈ ಪಾಠಶಾಲೆಯಲ್ಲಿಯೇ ಕಳೆದ ೧೭-೯-೩೩ನೆಯ ದಿವಸ ಶ್ರೀ. ಧುಮ್ಮಾ ವಕೀಲರವರ ಅಧ್ಯಕ್ಷತೆಯ ಕೆಳಗೆ ಎಲ್ಲ ಆಶ್ರಯದಾತರ ಸಭೆಯನ್ನು ಕರೆದಿದ್ದರು.

ಈ ಕೆಳಗೆ ಬರೆದಂತೆ ಅಧ್ಯಕ್ಷ ಮೊದಲಾದವರು ಸರ್ವಾನುಮತದಿಂದ ಆರಿಸಲ್ಪಟ್ಟರು.

ಮ್ಯಾನೇಜಿಂಗ ಕಮಿಟಿಯ ಮೆಂಬರ್ಸ.

೧. ಚನಬಸಪ್ಪ ಮಲ್ಲಪ್ಪ ವಾರದ ಅಧ್ಯಕ್ಷರು.
೨. ನಾಗಪ್ಪ ಬಂಡೆಪ್ಪ ಕಾಡಾದಿ ಉಪಾಧ್ಯಕ್ಷರು.
೩. ಚನಮಲ್ಲಪ್ಪ ಮಲ್ಲಪ್ಪ ವಾರದ ಕೋಶಾಧ್ಯಕ್ಷರು.
೪. ಸಾತಪ್ಪ ಚವ್ಹಾಣ ಸೆಕ್ರೆಟರಿ
೫. ಶಿವಲಿಂಗಪ್ಪ ಮಾಳಗೆ ,,
೬. ನಾಗಪ್ಪ ಆರಳೆಪ್ಪ ಅಬ್ದುಲಪೂರಕರ್
೭. ಶಿವಬಾಳಪ್ಪ ದೇಶಮುಖ
೮. ಚನಮಲ್ಲಪ್ಪ ನಾಗಪ್ಪ ಲಿಗಾಡೆ
೯. ಪದಮಣ್ಣಾ ವರ್ಗೊ ಪಾಟೀಲ
೧೦. ಬಂಡೆಪ್ಪ ರೇವಣಸಿದ್ಧಪ್ಪ ಜುಂಜಿ.
೧೧. ಶಿದ್ರಾಮಪ್ಪ ಬಸಪ್ಪ ಧುಮ್ಮಾ ವಕೀಲ
೧೨. ಶಿದ್ರಾಮಪ್ಪ ಖಾನಾಪುರ.

ಸಾತಪ್ಪ ಚವ್ಹಾಣ.
ಸೆಕ್ರೆಟರಿ.

ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲೆಯ ಹೊಸ ಯೋಜನೆ.

ಈ ಪಾಠಶಾಲೆಗೆ ಶ್ರೀ ಉಜ್ಜನಿ ಸ್ವಾಮಿಗಳು ೫ ಸಾವಿರ ರೂ. ಕೊಟ್ಟದ್ದರಿಂದ ಸಾರ್ವಜನಿಕ ಸ್ವರೂಪವು ಪ್ರಾಪ್ತವಾಯಿತೆಂದು ಭಾವಿಸಿ ಕೆಲವರು ಸ್ವತಂತ್ರವಾಗಿ ಅದರ ವ್ಯವಸ್ಥೆಯನ್ನು ಮಾಡಲಿಕ್ಕೆ ಹತ್ತಿರುವರು. ಈ ಕೃಷ್ಣ ಕಾರಸ್ಥಾನದ ಮುಖ್ಯ ಉದ್ದೇಶವು ಈ ಶಾಲೆಯ ವ್ಯವಸ್ಥೆಯು ಇಲ್ಲಿಯ ಪ್ರಮುಖರಾದ ಶ್ರೀಮಾನ್ ಮಲ್ಲಿಕಾರ್ಜುನಪ್ಪಣ್ಣಾ ಪಾಟೀಲ ಇವರ ಸ್ವಾಧೀನದಲ್ಲಿದ್ದು ಒಳ್ಳೇ ಉತ್ತಮ ರೀತಿಯಿಂದ ನಡೆವುದನ್ನು ಕಂಡು ಸಹಿಸಲಾರದೇ ಕೇವಲ ಅವರ ದ್ವೇಷಿಗಳಾದ ಕೆಲಜನರು ಇದನ್ನು ತಮ್ಮ ಸ್ವಾಧೀನದಲ್ಲ ತೆಗೆದುಕೊಳ್ಳಬೇಕೆಂಬ ಪ್ರಯತ್ನಮೂಲಕವಾದದ್ದಿರುವದು.

ಸ್ವಾಮಿಗಳವರ ೫ ಸಾವಿರ ರೂಪಾಯಿಗಳ ಆಶ್ವಾಸನ ರೂಪದ ದೇಣಿಗೆಯಿಂದ ಆ ಜನರಿಗೆ ತಮ್ಮ ಕಾರಸ್ಥಾನವನ್ನು ಸಾಧಿಸುವದಕ್ಕೆ ಉತ್ತೇಜನ ದೊರೆತಂತಾಗಿದೆ. ಈ ಪಾಠಶಾಲೆಯನ್ನು ಮಧ್ಯದಲ್ಲಿ ಶ್ರೀ. ಅಬ್ದುಲ್‌ಪೂರ ಇವರು ಎಲ್ಲ ಹುಡುಗರನ್ನು ತೆಗೆದುಹಾಕಿ ಒಮ್ಮೆಲೇ ಶಾಲೆಯನ್ನು ಬಂದು ಮಾಡಿದರು. ಇಂಥ ಕಠಿಣ ಪ್ರಸಂಗದಲ್ಲಿ ಶ್ರೀ ಪಾಟೀಲರು ಒಳ್ಳೇ ಧೈರ್ಯದಿಂದ ಮುಂದುವರಿದು ಪಾಠಶಾಲೆಯನ್ನು ಒಳ್ಳೇ ಭರದಿಂದ ಸಾಗಿಸಿದ್ದಲ್ಲದೇ ಪಾಠಶಾಲೆಯ ಎಲ್ಲ ವ್ಯವಸ್ಥೆಯನ್ನು ಒಳ್ಳೇ ದಕ್ಷತೆಯಿಂದ ಮಾಡುತ್ತ ವಿದ್ಯಾರ್ಥಿಗಳ ಸಂಖ್ಯೆಯನ್ನು ೫೦-೬೦ ರವರೆಗೆ ಹೆಚ್ಚಿಸಿ ಅವರಿಂದ ಕಲಕತ್ತಾ ಸಂಸ್ಕೃತ ಪರೀಕ್ಷೆಯನ್ನು ಕೊಡಿಸುತ್ತ ಪಾಠಶಾಲೆಯ ಅಭಿನಂದನೀಯವಾದ ಉನ್ನತಿಯನ್ನು ಮಾಡಿದರು. ಸದರೀ ಶಾಲೆಯನ್ನು ರಜಿಸ್ಟರ ಮಾಡಿಸಿ ಸರಕಾರದಿಂದಲೂ ಮುನಸಿಪಾಲಿಟಿಯಿಂದಲೂ ಗ್ರ್ಯಾಂಟ್ ದೊರೆಯುವಂತೆ ಮಾಡಿದರು. ಇದು ಆ ಪಾಠಶಾಲೆಯ ೧೮೫೪ನೇ ಸಾಲಿನ ರಿಪೋರ್ಟಿನಿಂದ ಸರ್ವರಿಗೂ ಸ್ಪಷ್ಟವಾಗಿ ಕಂಡುಬರುವಂತಿದೆ. ಮತ್ತು ಅವರಾದರೂ ಈ ಶಾಲೆಗೆ ಸಾರ್ವಜನಿಕತ್ವವನ್ನು ತಂದುಕೊಟ್ಟೇ ಇರುತ್ತಾರೆ. ಈ ಪಾಠಶಾಲಾ ವಿಷಯದಲ್ಲಿ ತುಂಬಾ ಕಳಕಳಿಯುಳ್ಳಂಥ ಹಾಗೂ ಅದೇ ಪಾಠಶಾಲೆಯಲ್ಲಿಯೇ ಅಧ್ಯಯನ ಮಾಡಿದಂಥ ಕಿರೀಟಮಠಾಧ್ಯಕ್ಷರಾದ ಶ್ರೀ ನಿಜಗುಣ ಸ್ವಾಮಿಗಳೂ ಕುಂಟೋಜಿ ಮಠದ ಶ್ರೀ ಚನ್ನವೀರ ಸ್ವಾಮಿಗಳೂ ಕ್ರಮವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿದ್ದು ಶ್ರೀಮಂತ ಕಾಡಾದಿಯವರು, ಬ್ಯಾರಿಸ್ಟರ ಸರದಾರ ಇವರೇ ಮುಂತಾದ ಶ್ರೀಮಂತರೂ ವಿದ್ವಾಂಸರೂ ಶಾಲಾ ವಿಷಯದಲ್ಲಿ ಪೂರ್ಣ ಅಭಿಮಾನಿಗಳಾದಂಥವರೂ ಮೆಂಬರರಾಗಿರುತ್ತಾರೆ. ಇವರಲ್ಲಿ ವಾರದರವರಾದರೂ ಇರುತ್ತಾರೆ. ಹೀಗಿದ್ದೂ ಈಗ ನಡೆದಿರುವ ಹೊಸ ಯೋಜನೆಯಿಂದ ಪಾಠಶಾಲೆಗೆ ಸಾರ್ವಜನಿಕತ್ವ ಸ್ವರೂಪವನ್ನು ಕೊಡುತ್ತೇವೆಂಬುದು ಕಾರಸ್ಥಾನವಲ್ಲದೆ ಮತ್ತೇನು? ಇವರು ಈ ಪಾಠಶಾಲೆಯನ್ನು ಕೇವಲ ಗುರುವರ್ಗದ ವಿದ್ಯಾರ್ಥಿಗಳ ಸಲುವಾಗಿಯೇ ಕಾದಿಡಬೇಕೆಂಬ ಹೇತುವಿನಿಂದ ಪ್ರಯತ್ನ ಪಡುತ್ತಲಿರುವರೆಂಬ ಸಂಗತಿಯು 'ರುದ್ರಾರಾಧ್ಯ ಶರ್ಮ' ಎಂಬ ವಿದ್ಯಾರ್ಥಿಯು ಕೊಟ್ಟ ಹೊಸ ಲೇಖನದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಓರ್ವ ಸತ್ಯಾಭಿಮಾನಿ,
ಸೊಲ್ಲಾಪುರ.

—ತಿನ್ನೆವೆಲ್ಲ ಜಿಲ್ಹೆಯ ಕೋರ್ಟಲನ್ ಜಲಪಾತದ ಹತ್ತರ ಕೆಲವು ಜನರು ಸ್ನಾನಮಾಡುತ್ತಿರುವಾಗ ಪ್ರವಾಹವು ಒಮ್ಮಿಂದೊಮ್ಮೆ ಏರಿದುದರಿಂದ ೧೩ ಜನರು ಕೊಚ್ಚಿಕೊಂಡು ಹೋಗಿ ಜಲಪಾತದಲ್ಲಿ ಬಿದ್ದರು. ಪಾಪ ತಂದೆ ತಾಯಿಗಳಿಬ್ಬರು ತಮ್ಮ ಮಗುವೊಂದನ್ನು ಅಪ್ಪಿ ಕೊಂಡೇ ಸತ್ತಿದ್ದರಂತೆ.

—ಪಂ. ಜವಾಹರಲಾಲರು ತಮ್ಮ ಭಗಿನಿಯರಾದ ಮಿಸ್ ಕೃಷ್ಣಾ ನೆಹರು ಇವರನ್ನು ಮುಂಬಯಿಯ ಶ್ರೀ ಗುಣೋತ್ತಮ ಪುರುಷೋತ್ತಮ ಹಠಿಸಿಂಗ ಎಂಬ ಬ್ಯಾರಿಸ್ಟರರಿಗೆ ಲಗ್ನ ಮಾಡಿಕೊಡುವವರಿದ್ದಾರೆ.

ಲಿಂಗಾಯತರ ಜಾತಿವಾದದಲ್ಲಿ ನನ್ನ ಪರಿಶೀಲನವೂ ಅನುಭವವೂ.

(ಲೇಖಕರು:— ಶ್ರೀ. ಪಾವಟೆ ಸಿದ್ಧರಾಮಪ್ಪನವರು ಬಿ. ಎ. ಎಲ್. ಎಲ್. ಬಿ. ವಕೀಲ ಹುಬ್ಬಳ್ಳಿ.)

ಲಿಂಗಾಯತರಲ್ಲಿ ಜಾತಿಭೇದಗಳನ್ನು ಸಾಧಿಸಲು ಹಲವರು ಅನೇಕ ವಾದಗಳನ್ನು ಹೂಡುತ್ತ ಪೊಳ್ಳು ಶಾಸ್ತ್ರದ ಜೊಳ್ಳು ಆಧಾರಗಳನ್ನು ಕೊಡುತ್ತಿರುವರು. ವೀರಶೈವ ವರ್ಣಭೇದ ವಿದಾರಿಕಾ ಮೊದಲಾದ ಲೇಖನಗಳಲ್ಲಿ ಈ ಸೋಗಿನ ಶಾಸ್ತ್ರಗಳ ಸಂಭಾವನೆಯನ್ನು ನಾನು ಮಾಡುವುದರಲ್ಲಿ ಬಂದಿದೆ. ಈ ಜಾತಿಭೇದ ವಾದವು ಶಾಸ್ತ್ರದ ಅಜ್ಞಾನದಿಂದಾಗಿದೆಯೋ ಅಥವಾ ಹಲವು ಕುಲದವರು ಉಳಿದ ಲಿಂಗಾಯತರ ಮೇಲೆ ತಮ್ಮ ಪ್ರತಿಷ್ಠೆಯನ್ನು ನಡೆಯಿಸಬೇಕೆಂಬ ದುರಾಲೋಚನೆಯಿಂದಾಗಿದೆಯೋ ಅಥವಾ ಲಿಂಗಾಯತ ಧಾರ್ಮಿಕ ಸಾಮಾಜಿಕ ಇತಿಹಾಸ ತಿಳಿಯದೆ ಆಗಿದೆಯೋ ಎಂಬುದನ್ನು ಆ ಲೇಖದಲ್ಲಿ ವಿಮರ್ಶೆಯನ್ನು ಮಾಡಿಲ್ಲ. ಈ ವಿಷಯವು ಪರಾಮರ್ಶವಾಗದೆ ಕೇವಲ ಶಾಸ್ತ್ರೀಯ ವಾಕ್ಯಗಳಿಂದ ವಾದವು ಪೂರ್ಣವಾಗದು. ಅಂದರೆ ಅನೇಕರು ಶಾಸ್ತ್ರದ ಮಾತುಗಳು ನಮಗೆ ತಿಳಿಯದು, ರೂಢಿಗಳನ್ನು ಬಲ್ಲೆವು, ನಮಗೆ ತಿಳಿಯದ ಶಾಸ್ತ್ರ ಸಿದ್ಧಾಂತಗಳನ್ನು ಅವಲಂಬಿಸಿ ರೂಢಿಯನ್ನು ಬಿಡಲಾರೆವು ಎಂದು ಅಭಿಪ್ರಾಯಪಡಬಹುದು.

ಇಂತಹರು ಈ ಜಾತಿಭೇದ ವಾದದ ಮೂಲವು ಅದನ್ನು ಹೂಡುವವರ ಹೃದಯದಲ್ಲಿ ಯಾವ ಮನೋಭಾವನೆಗಳಿಂದ ಉಂಟಾಯಿತೆಂಬುದನ್ನು ತಿಳಿದರೆ ಶಾಸ್ತ್ರ ವಾಕ್ಯಗಳು ಅವರ ಹೃದಯದಲ್ಲಿ ಚೆನ್ನಾಗಿ ಮೂಡುವವು. ಎಂದು ಬಗೆದು ಈ ಲೇಖವನ್ನು ಬರೆಯುವುದರಲ್ಲಿ ಬಂದಿದೆ.

ನಾನು ಮೊದಲಿನಿಂದಲೂ ಆಧ್ಯಾತ್ಮಿಕ ದೃಷ್ಟಿಯಿಂದ ಲಿಂಗಾಯತ ಮತವನ್ನು ವಿಚಾರಿಸಿದವನು. ಮತಗಳು ಅವು ನಿಜವಾಗಿ ಮತಗಳಾಗಿದ್ದರೆ ಭಾವಪ್ರಧಾನವಾದವು. ಭೂತಪ್ರಧಾನವಾದವಲ್ಲ, ಎಂದು ನನ್ನ ಅಭಿಪ್ರಾಯವು. ಅಂದರೆ ವಿಜ್ಞಾನ ಶಾಸ್ತ್ರವು ಹೇಗೆ ಪಂಚಭೂತಗಳನ್ನೂ ಅವುಗಳ ಕಾರ್ಯಗಳನ್ನೂ ನಿರೀಕ್ಷಿಸಿ ಪರೀಕ್ಷಿಸಿ ಅಪೇಕ್ಷಿಸಿ ಅವುಗಳ ಯಥಾರ್ಥತೆಯನ್ನು ತಿಳಿದುಕೊಳ್ಳುತ್ತದೋ, ಮಾನಸ ಶಾಸ್ತ್ರವು ಮನಸ್ಸಿನ ಬಗೆಬಗೆಯ ಪ್ರೇಮ, ಕ್ರೋಧ, ದ್ವೇಷ, ಅಸೂಯೆ, ಮಾತ್ಸರ್ಯ ಮೊದಲಾದವುಗಳನ್ನೂ ಉದ್ದೇಶ ಯಾದೃಚ್ಛಿಕಗಳನ್ನೂ ಪರೀಕ್ಷಿಸಿ, ನಿರೀಕ್ಷಿಸಿ, ಅಪೇಕ್ಷಿಸಿ, ಪರಿಶೀಲಿಸಿ ತಿಳಿದುಕೊಳ್ಳುತ್ತದೋ ಅದರಂತೆಯೇ ನಿಜವಾದ ಧರ್ಮವು ದೇಹಸಂಬಂಧವಾದ ಭೂತಗಳ ಮನಸ್ಸಂಬಂಧವಾದ ಕಲ್ಪನೆಗಳ ಆಚೆಯಲ್ಲಿರುವ ಅವಕ್ಕೆಲ್ಲಕ್ಕೂ ಚೇತನಸ್ವರೂಪವಾದ ಆತ್ಮ ಅಥವಾ ಭಾವವನ್ನು ಕುರಿತು ಆ ಭಾವದ ಚಿಚ್ಛಕ್ತಿಯಿಂದಲೇ ಅರಿತು ಸ್ವಸ್ಥ ಶಾಂತಮಯವಾಗಿರುವುದರ ಬಗೆಯನ್ನು ಅರುಹುದು.

ಈ ದೃಷ್ಟಿಯಿಂದ ಪರಿಶೀಲಿಸುತ್ತಿರಲು ನಮ್ಮ ಭಾರತ ಧರ್ಮಗಳಿಗೆ ಉಗಮಸ್ಥಾನವಾದ ವೇದದಲ್ಲಿ ಅವ್ಯಕ್ತವಾಗಿ ಮೊದಲು ಮಾಡಿದ ಧರ್ಮವು ಬರಬರುತ್ತ ಸಾಂಖ್ಯ ಯೋಗ ಮತಗಳಲ್ಲಿ ವಿಕಾಸವನ್ನು ಹೊಂದಿ ಆ ಬಳಿಕ ಶೈವ ಮಾರ್ಗದಲ್ಲಿ ಪರಿಣಮಿಸಿ ಅದರೀಚೆಯಲ್ಲಿ ವೀರಶೈವವಾಗಿ ಮತ್ತೆ ಮುಂದು ಸಾಗುವಲ್ಲಿ ಲಿಂಗಾಯತವಾಗಿ ಪರಿಪಕ್ವವಾಗಿರುವುದನ್ನು ಕಾಣಬಹುದು.

ಧರ್ಮವು ಹೀಗೆ ವಿಕಾಸ ಪರಿಪಾಕಗಳನ್ನು ಹೊಂದುತ್ತ ನಡೆದಿರಲು ಅಲ್ಲಲ್ಲಿಗೆ ನಿಂತ ಮೆಟ್ಟುಗಳೇ ನದಿಯಲ್ಲಿಯ ಮಡುಗಳಂತೆ ನದಿಯ ವೇಗವನ್ನು ಮುಂದೆ ಬಿಟ್ಟು ಸಪ್ತವಿಧಶೈವ ವಾದವು. ಆ ನಿಂತ ಮೆಟ್ಟುಗಳು ಹೇಗೆ ಮಡುಗಳು ಪಾತ್ರದ ತಗ್ಗು ದಿನ್ನೆಗಳಿಂದುಂಟಾಗುತ್ತವೋ ಅದರಂತೆಯೇ ಆಯಾಯ ಮಾನವರ ಮಾನಸಿಕ ವಿಷಮ ಭಾವದಿಂದ ಉಂಟಾಗುತ್ತವೆ. ಆ ಮೆಟ್ಟಲುಗಳೇ ಮತಗಳು.

ಈ ಪ್ರಕಾರ ವೇದದಿಂದ ಉಗಮಿಸಿ ಶಿವಸಾಗರವನ್ನು ಹೊಂದಿದ ಧರ್ಮಪ್ರವಾಹವೇ ಬಸವನು. ಆ ಧರ್ಮ ಪ್ರವಾಹದಲ್ಲಿ ನದಿಗೆ ಶಿಲುಕದ ದಿನ್ನೆಗಳಂತೆ ಅಲ್ಲಲ್ಲಿ ನಿಂತು ಅನಾದಿ ಕಾಲದಿಂದ ಅನೇಕ ಮತಗಳನ್ನು ಮಾಡಿದ ಮಾನವರು ಇರುವದು ಸೋಜಿಗವಲ್ಲ. ಆದರೆ ಆ ಪ್ರವಾಹದ ಗುಂಟ ಹರಿದುಬಂದ ಮಣ್ಣಿನಂತಿರುವ ಕೆಲವು ಜೀವಗಳು ಶಿವಸಾಗರವನ್ನು ಸೇರಿದಂತೆ ಕಂಡರು ಅಲ್ಲಲ್ಲಿ ನಡುಗಡ್ಡೆಗಳಂತೆ ಬೆಳೆದು ಅಗಾಧ ಸಮುದ್ರದಲ್ಲಿ ಮುಸುರು ಮುಸುರೆಯಾಗಿ ತೋರುತ್ತಿರುವವು. ಇಂಥ ನಡುಗಡ್ಡೆಗಳಿಂದ ಆ ಸಮುದ್ರವೇ ಮುಚ್ಚಿ ಹೋಗುವುದೋ ಎಂಬ ಭಯವು ಅದರ ಅಗಾಧತೆಯನ್ನು ತಿಳಿಯದವರಿಗೆ ಆಗುವುದು ಸಹಜವು. ಇವರು ಕಾರ್ಯಕಾರಣ ಭಾವವನ್ನು ತಿಳಿಯದೆ ಸಂಕಟಪಡುತ್ತಿರಲು ತಿಳಿದ ಸಹೃದಯನು ಈ ಅನಾದಿ ಪ್ರವಾಹದಿಂದ ಶಿವಸಾಗರದಲ್ಲಿ ಮಗ್ನನಾಗಿ ತನ್ನಂತೆಯೇ ಭೇದವನ್ನಳಿದುಬಂದ ವಾರಿಕಣಗಳೊಡನೆ ಅಗಾಧ ಸಮುದ್ರದಲ್ಲಿ ಈ ವಿಶ್ವದ ತೊಡಕನ್ನು ಮರೆಯಬಹುದಾದರೂ ಎದೆಗುಂದಿದವರನ್ನು ಈ ನಡುಗಡ್ಡೆಗಳ ಯಥಾರ್ಥವೇನು? ಅವು ಸಮುದ್ರದ ಹೊಡತದಿಂದ ಕ್ಷಯಿಸಬಲ್ಲವಾದರು ಅವುಗಳ ಉತ್ಪತ್ತಿಯಲ್ಲಿ ಘಟಕಗಳಾವುವು ಎಂಬುದನ್ನು ತಿಳಿದು ಅವುಗಳ ವಿಘಟನೆಯಲ್ಲಿ ಪರಿಶ್ರಮಿಸಿ ತದ್ವಾರ ತಮ ಶಾಂತಿಯನ್ನು ಶಿವಸಾಗರ ಅಂದವನ್ನು ಉಂಟುಮಾಡಲೆಂದು ಜಾತಿಭೇದಕರವಾದ ಮನೋ ವಿಷಮತೆಗಳ ಚಿತ್ರವನ್ನು ಸ್ವಾನುಭವದಿಂದ ಬರೆಯಬೇಕಾಗಿದೆ. ಈ ಅನುಭವವು ೧೯೦೧ರಿಂದ ಇಲ್ಲಿಯವರೆಗೆ ಬಂದುದಾಗಿದೆ.

ಲಿಂಗಧಾರಣಾಂತರ್ಗತವಾದ ವೇಧಾ, ಮಂತ್ರ, ಕ್ರಿಯಾ ದೀಕ್ಷೆಗಳಿಂದ ತ್ರಿಮಲಗಳು ಅಳಿವವೆಂದು ಸರ್ವ ಶಿವಾಗಮಗಳು ಸಾರುತ್ತಿವೆ. ಈ ಮೂರು ಮಲಗಳಲ್ಲಿ ಕರ್ಮ ಮಲವು ಒಂದು. ಕರ್ಮ ಮಲದ ಕಾರ್ಯವೇ ಜಾತಿ. ಲಿಂಗಾಯತರಲ್ಲಿ ಜಾತಿಗಳನ್ನು ಕಾಣುತ್ತೇವೆ ಅಂದ ಬಳಿಕ ಈ ಶಾಸ್ತ್ರವು ಸಟೆಯೋ ಅಥವಾ ಈ ಜಾತಿಗಳೇ ಸಟೆಯೋ ಎಂಬ ವಿಚಾರವು ತಲೆದೋರುವದು. ಮೇಲೆ ವಿವರಿಸಿದ ಶಾಸ್ತ್ರ ಪರಿಚಯವನ್ನು ಹಿಂದಿನ ಲೇಖನಗಳಲ್ಲಿ ಮಾಡಿರುವೆನು. ಈಗ ಜಾತಿಗಳ ಸಟೆಯನ್ನು ಅವು ಅವು ಅಜ್ಞಾನ ಅಹಂಕಾರ ಮೂಲವಾಗಿವೆಯೆಂಬುದನ್ನು ಆ ಜಾತಿ ಘಟಕ ಮನೋಭಾವಗಳನ್ನು ಪರಿಶೀಲಿಸಿ ತೋರಿಸುವೆನು.

ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ ಅದರ ಗಂಜಳ ಬಿಡದಣ್ಣಾ ಎಂಬ ಶ್ರೀ ಬಸವೇಶ್ವರ ದೇವರ ಅಮೃತ ವಾಣಿ

ಮಾದರೀ ಸಂಸ್ಥಾನ ಸವಣೂರು.

ತಾ. ೨೦-೯-೩೩ನೇ ಸಾಯಂಕಾಲ ಮೈಸೂರು ಕೆ. ಸಿ. ಪಿ. ವಿ, ಹಾಸ್ಟೆಲ್ ಹಾಲಿನಲ್ಲಿ ಶ್ರೀ ಬಸವಣ್ಣಪ್ಪ ರಾಚಪ್ಪ ಹೊಂಡದಕಟ್ಟಿ ಬಿ. ಎ. ಎಲ್. ಎಲ್. ಬಿ. ಇವರು ಮಾದರೀ ಸಂಸ್ಥಾನ ಎಂಬ ವಿಷಯದ ಮೇಲೆ ಬಹು ಸ್ವಾರಸ್ಯವಾಗಿ ಭಾಷಣ ಮಾಡಿದರು. ಆಗ ದೊಡ್ಡ ದೊಡ್ಡ ಅಧಿಕಾರಸ್ಥರೂ, ವಕೀಲರೂ, ವರ್ತಕರೂ, ಕಾಲೇಜ ವಿದ್ಯಾರ್ಥಿಗಳೂ ವಗೈರೆ ಬಹು ಜನರು ಸೇರಿದ್ದರು. ಉಪನ್ಯಾಸಕರು ಮೊದಲು ಯಾವ ರಾಜ್ಯವೇ ಆಗಲಿ ಅದು ಉನ್ನತ ಸ್ಥಿತಿಗೆ ಬಂದು 'ಮಾದರೀ ರಾಜ್ಯ' (Model State) ವೆಂದೆನ್ನಿಸಿಕೊಳ್ಳಬೇಕಾದರೆ ಅದನ್ನಾಳುವ ಅರಸರಲ್ಲಿಯೂ ಮತ್ತು ಅವನ ಪ್ರಜೆಗಳಲ್ಲಿಯೂ ಯಾವ ಯಾವ ಗುಣಾತಿಶಯಗಳಿರಬೇಕಾಗುವುದೆಂಬ ಅಂಶವನ್ನು ಸಂಕ್ಷಿಪ್ತದಲ್ಲಿ ಹೇಳಿದರು. ನಂತರ ಈ ಭರತಖಂಡದಲ್ಲಿರುವ ಅನೇಕ ಸಣ್ಣ ದೊಡ್ಡ ದೇಶೀಯ ಸಂಸ್ಥಾನಗಳಲ್ಲಿ ನಡೆಯುತ್ತಿರುವ ರಾಜ್ಯ ಕಾರ್ಯ ಸ್ಥಿತಿಗತಿಯನ್ನು ಹೇಳುತ್ತ ಮೈಸೂರು ದೇಶವು ಈಗ ರಾಜರ್ಷಿಗಳೆಂದು ಪ್ರಖ್ಯಾತಗೊಂಡಿರುವ ನಮ್ಮ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರ ಕಾಲವಲ್ಲಿ ಅವರ ಸಚಿವರಾದ ಸರ್. ಎಂ. ವಿಶ್ವೇಶ್ವರಯ್ಯನವರೂ, ಸರ್. ಬ್ಯಾನರ್ಜಿಯವರೂ, ಸರ್. ಮಿರ್ಜಾ ಇಸ್ಮಾಯಿಲ್ಲರವರೂ ಮುಂತಾದ ರಾಜತಂತ್ರ ಪ್ರವೀಣರ ಅತುಲವಾದ ಬುದ್ಧಿ ಕುಶಲತೆಯ ಮುಖೇನ ಯಾವ ರೀತಿಯಲ್ಲಿ ದಿನೇ ದಿನೇ ಹೆಚ್ಚಾಗಿ ಅಭಿವೃದ್ಧಿಯನ್ನೈದುತ್ತಾ 'ಮಾದರಿಯ ಸಂಸ್ಥಾನ' ವೆಂದು ಬ್ರಿಟಿಶ್ ಪಾರ್ಲಿಮೆಂಟಿನಲ್ಲಿಯೂ ಸಹ ವರ್ಣಿಸಲ್ಪಡುವಷ್ಟು ಅರ್ಹತೆಯುಳ್ಳದ್ದಾಯಿತೆಂಬುದನ್ನು ಬಹು ಚೆನ್ನಾಗಿ ವರ್ಣಿಸಿದರು. ಅನಂತರ ಕೊನೆಯಲ್ಲಿ ಧಾರವಾಡ ಡಿಸ್ಟ್ರಿಕ್ಟಿನಲ್ಲಿರುವ ಸವಣೂರು ಎಂಬ ಸಂಸ್ಥಾನದ ವಿಷಯಕವಾಗಿ ಮಾತನಾಡುತ್ತಾ ಅದನ್ನಾಳುವ ಎಚ್. ಎಚ್. ನವಾಬ ಸಾಹೇಬ ಬಹದ್ದೂರರವರು ಹೇಗೆ ಪ್ರಜೆಗಳ ಸೌಖ್ಯವೇ ತಮ್ಮ ಸೌಖ್ಯವೆಂಬ ಧ್ಯೇಯವನ್ನಿಟ್ಟುಕೊಂಡು, ಹಿಂದೂ ಮುಸಲ್ಮಾನರೆಂಬ ಭೇದಭಾವವನ್ನು ಕನಸುಮನಸಿನಲ್ಲಿಯೂ ಎಣಿಸದೆ ಕೇವಲ ಸಮತಾಭಾವನೆಯಿಂದ ಪ್ರಜಾಪಾಲನೆ ಮಾಡುತ್ತಿರುವರೆಂಬುದನ್ನೂ, ಮತ್ತು ತಮ್ಮ ರಾಜ್ಯದಲ್ಲಿ ಕಳ್ಳರು, ಪುಂಡರು, ಪೋಲಿಗಳು ಹೆಚ್ಚದಂತೆ ನವಾಬ ಸಾಹೇಬರೇ ಆಗಾಗ್ಗೆ ಸ್ವತಃ ಖುದ್ದಾಗಿ ಪರಾಂಬರಿಸಿ ಎಷ್ಟರಮಟ್ಟಿಗೆ ಬಂದೋಬಸ್ತು ಇಟ್ಟಿರುವರೆಂಬುದನ್ನೂ, ಅಲ್ಲದೆ ತಮ್ಮ ಸಂಸ್ಥಾನದ ರಾಜಕೀಯ, ಸಾಂಪತ್ತಿಕ, ನೈತಿಕ ಸ್ಥಿತಿಗಳ ಅಭಿವೃದ್ಧಿಗೋಸ್ಕರ ಏನೇನು ಹೊಸ ಏರ್ಪಾಡುಗಳನ್ನು ಮಾಡಿಯೂ, ಮಾಡುತ್ತಲೂ ಇರುವರೆಂಬುದನ್ನೂ ವಗೈರೆ ಇನ್ನೂ ಅನೇಕ ಅಲ್ಲಿಯ ರಾಜ್ಯಾಡಳಿತ ಕ್ರಮದ ಸಂಗತಿಗಳನ್ನು ಉದಾಹರಣೆಗಳ ಮುಖೇನ ನೆರದಿದ್ದ ಜನಗಳ ಮನಸ್ಸಿನಮೇಲೆ ಒಳ್ಳೇ ಪರಿಣಾಮವಾಗುವ ರೀತಿಯಲ್ಲಿ ಉಪನ್ಯಾಸಕರು ಬಹು ಸ್ಪಷ್ಟವಾದ ಗಂಭೀರ ವಾಣಿಯಿಂದ ಮಾತನಾಡಿದರು.

ಅಂತು ಸವಣೂರು ಸಣ್ಣ ಸಂಸ್ಥಾನವಾಗಿದ್ದರೂ ಅದನ್ನಾಳುವ ಘನವಂತರಾದ ಎಚ್. ಎಚ್. ನವಾಬ ಸಾಹೇಬ ಬಹದ್ದೂರರವರು ದೊಡ್ಡ ದೊಡ್ಡ ಸಂಸ್ಥಾನಿಕರೂ ಸಹ ಇವರ ಮೇಲ್ಪಂಕ್ತಿಯನ್ನು ಅನುಸರಿಸುವ ಸ್ಥಿತಿಯಲ್ಲಿ ರಾಜ್ಯಭಾರ ಮಾಡುತ್ತಿರುವರೆಂಬ ಅರ್ಥಾತ್ ಅದು ಸಣ್ಣದಾದರೂ ಮಾದರೀ ಸಂಸ್ಥಾನವಾಗಿರುತ್ತದೆಂತಲೂ ಮತ್ತು ಒಂದು ಪಕ್ಷ ಅದು ಮೈಸೂರು ಅಥವಾ ಹೈದ್ರಾಬಾದಗಳಷ್ಟು ದೊಡ್ಡದಾಗಿದ್ದಿದ್ದರೆ ಅದರ ಹೆಸರು ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಇಷ್ಟೇ ಅಲ್ಲದೆ ಇತರೆ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಸಹ ಗೌರವಾರ್ಹತೆಯುಳ್ಳದಾಗಿರುತ್ತಿತ್ತೆಂತಲೂ ಸಹ ಹೇಳಿ ಉಪನ್ಯಾಸ ಮುಗಿಸಿದರು.

ಈ ಉಪನ್ಯಾಸವನ್ನು ಕೇಳಿದಾಗಿನಿಂದಲೂ ಸವಣೂರಿನ ಸಂಬಂಧವಾಗಿ ಬಹು ಜನಗಳ ದೃಷ್ಟಿ ಪಥಗಳು ಮಾರ್ಪಟ್ಟು ಅದನ್ನಾಳುವ ಎಚ್. ಎಚ್. ನವಾಬ್ ಸಾಹೇಬ ಬಹದ್ದೂರವರ ವಿಷಯದಲ್ಲಿ ಜನರೊಳಗೆ ಕೇವಲ ಗೌರವ ಬುದ್ಧಿಯು ಉತ್ಪನ್ನವಾಗಿರುತ್ತದೆಂಬ ಸಂಗತಿಯನ್ನು ತಿಳಿಸಲು ಬಹು ಸಂತೋಷಿಸುತ್ತೇನೆ. ಈ ಚಿಕ್ಕ ಸಂಸ್ಥಾನದ ಸಮಾಚಾರವನ್ನೇ ಹಿಂದೆ ಎಂದೂ ಅರಿಯದವರು, ಕೇಳದವರು ಈಗ ಅದರ ವಿಷಯಕವಾಗಿ ಹೆಚ್ಚು ಆಸಕ್ತರಾಗಿ ಅಲ್ಲಿಯ ಸುಧಾರಣೆಗಳನ್ನು ಕಣ್ಣು ಮುಟ್ಟ ನೋಡಬೇಕೆಂದು ಕುತೂಹಲ ಪಡುತ್ತಿರುವರೆಂದರೆ ಆಶ್ಚರ್ಯಪಡಲಾರದು! ಈ ಚಿಕ್ಕ ಸಂಸ್ಥಾನದ ಕೀರ್ತಿ ಧ್ವಜವು ದೊಡ್ಡ ದೊಡ್ಡ ಪರರಾಷ್ಟ್ರಗಳಲ್ಲಿಯೂ ಕೂಡಾ ಮೆರೆಯುತ್ತಿರುವದನ್ನು ನೋಡಿದರೆ ಅದನ್ನಾಳುವ ಅರಸರೇ ಧನ್ಯರು! ಅಂಥಾ ಅರಸರನ್ನು ಹೊಂದಿರುವ ಸವಣೂರಿನ ಪ್ರಜೆಗಳು ಇನ್ನೂ ಹೆಚ್ಚು ಧನ್ಯರು!

ಉಪನ್ಯಾಸಕರು ಮೈಸೂರು ದೇಶದ ವಾಸಸ್ಥರಾಗಿದ್ದರೂ, ಮೂಲತಃ ಸವಣೂರು ಸಂಸ್ಥಾನಕ್ಕೆ ಸೇರಿದವರಾದ ಕಾರಣ ಅವರ ಈ ಎರಡೂ ಸಂಸ್ಥಾನಗಳಲ್ಲಿ ನಡೆಯುತ್ತಿರುವ ವಿವಿಧ ಸಂಗತಿಗಳನ್ನೂ ಬಲ್ಲವರಾಗಿ ಎರಡನ್ನೂ ತುಲನಾರೂಪದಿಂದ ವಿಮರ್ಶಿಸಿ ಸವಣೂರು ಸಂಸ್ಥಾನವು ಇಷ್ಟರಮಟ್ಟಿಗೆ ಸುಧಾರಣೆ ಹೊಂದಿರುತ್ತದೆಂಬ ಅಂಶವನ್ನು ದೂರದೇಶಸ್ಥರಾದ ನಮ್ಮಗಳಿಗೆ ತಿಳಿಯಪಡಿಸಿದ್ದಕ್ಕಾಗಿ ಅವರನ್ನು ಬಹಳವಾಗಿ ಅಭಿನಂದಿಸಬೇಕಾಗಿದೆ.

ಪ್ರತ್ಯಕ್ಷದರ್ಶಿ.

ಯನ್ನು ಬದಿಗಿಟ್ಟು ಲಿಂಗಾಯತಾಚಾರ್ಯರು ದುಡ್ಡಿನಾಸೆಯಿಂದಲೋ ಪ್ರತಿಷ್ಠೆಯ ಹೆಮ್ಮೆಯಿಂದಲೋ ಬಹಳ ಮಂದಿ ಶಿಷ್ಯರನ್ನು ಗಳಿಸುವ ಹವಣಿಕೆಯಲ್ಲಿ ಶಿಷ್ಯರ ಮಲಕ್ಷಾಲನವನ್ನು ಸಂಪೂರ್ಣವಾಗಿ ಮಾಡದೆ ಶಿಷ್ಯಾರ್ಜನೆಯನ್ನು ಮಾಡಿದರು. ಅದರಿಂದ ಸಮಾಜದಲ್ಲಿ ಬೇರೆಬೇರೆ ತರದ ಆಚಾರವಿಚಾರ ಕಣಗಳೂ ತೋರಹತ್ತಿದವು. ಮೊದಲು ಸಮಾಜದಲ್ಲ ಧರ್ಮತತ್ವಗಳು ಹೇಗೋ ಓಜಸ್ವಿಯಾಗಿ ಇದ್ದುದರಿಂದ ಈ ಸಮಾಜಪ್ರವಾಹಕ್ಕೆ ಲಿಂಗಾಯತವೆಂಬ ಒಂದೇ ಶುದ್ಧವಾದ ಹೆಸರು ಇದ್ದಿತು. ಕಾಲಕ್ರಮದಲ್ಲಿ ಇವೆಲ್ಲ ಏಕಜೀವವಾಗುವವೆಂಬ ನಂಬುಗೆಯೂ ಇದ್ದಿತು. ಇದರ ನಿದರ್ಶನವನ್ನು ವೀರಶೈವಾಮೃತ ಪುರಾಣದಲ್ಲಿ ಕಾಣುವೆವು. ಶ್ರೀ ಗುಬ್ಬಿಯ ಮಲ್ಲಣಾರ್ಯ ಶಿವಯೋಗಿಯು ಶುದ್ಧ ಲಿಂಗಾಯತ ಸ್ವರೂಪವನ್ನು ಹೇಳಿ ತಮ್ಮ ಕುಲಮಾಯೆಗಳನ್ನು ಶ್ವಾನವೊಂದು ಸಂಪೂರ್ಣ ಪರಿತ್ಯಜಿಸದೆ ಲಿಂಗಾಯತಾಚಾರವನ್ನು ಕೈಕೊಂಡವರು ಮಾರ್ಗ ಲಿಂಗಾಯತರೆಂದು ಹೇಳುವನು. ಅಂದರೆ ಕುಲಗಳು ಬರಬರುತ್ತ ಇಲ್ಲವಾಗುವವು. ಅಥವಾ ನದಿಯು ಸಮುದ್ರವನ್ನು ಹೊಂದುವಾಗ ತಂದ ಮಣ್ಣು ಬರಬರುತ್ತ ಇಲ್ಲದಾಗಿ ಸಮುದ್ರದಲ್ಲಿ ಏಕರಸವಾಗುವಂತೆ ಆಗುವವು. ಮುಂದೆ ಬರುವ ಮಣ್ಣು ನವೀನ ಪ್ರವಾಹದ ಗುಂಟ ಬಂದು ತನ್ನ ಹಿಂದೆ ಬಂದ ಮಣ್ಣಿನಂತೆ ನಿರ್ಮಲ ಭಾವವನ್ನು ಹೊಂದುವದೆಂಬ ಭಾವವನ್ನು ಪ್ರಕಟಿಸಿರುವನು.

ಆದರೆ ಈ ಮಾರ್ಗ ಲಿಂಗಾಯತರೆಂಬ ಮಣ್ಣು ಅಲ್ಲಲ್ಲಿ ನಡುಗಡ್ಡೆಗಳಾಗಿ ಉಳಿದು ನೋಡುವವರ ದೃಷ್ಟಿಗೆ ಲಿಂಗಾಯತ ಶಿವಸಾಗರವನ್ನೇ ಮರೆಮಾಡಿವೆ. ಈ ಮಣ್ಣು ನಿರ್ಮಲವಾಗದೆ ಗಡ್ಡೆಯಾದ ಬಳಿಕ ಲಿಂಗಾಯಿತ ತತ್ವಗಳ ಓಜಸ್ಸು ಅಡಗಿ ಕುಲಾಭಿಮಾನವು ದೃಢಗೊಂಡು ಈ ವಾದವುಂಟಾಯಿತು. ಇವಾಗುತ್ತಲೆ ಸದಾಚಾರ ಸಂಗ್ರಹಾದಿ ಗ್ರಂಥಗಳು ಅಜ್ಞಾನದಿಂದುಂಟಾಗಿ ಅದನ್ನೇ ಪೋಷಿಸಿದವು.

ಸಶೇಷ.

ಆದಿಜನಗಳ ಕಷ್ಟದ ಕಥೆ.

(ರವೀಂದ್ರನಾಥ ಠಾಗೋರರಿಂದ.)

ಅಸ್ಪೃಶ್ಯತಾನಿವಾರಣ ಪ್ರಶ್ನೆಯು ನಮ್ಮ ದೇಶದಲ್ಲಿ ಹೊಸ ದೇನೂ ಅಲ್ಲ. ಬಹಳ ಹಿಂದಿನ ಕಾಲದ ಸಾಹಿತ್ಯವನ್ನು ಪರೀಕ್ಷಿಸಿದಲ್ಲಿ ಅಲ್ಲಿಯೂ ಸಹಾ ಇದೇ ಪ್ರಶ್ನೆಯು ತಲೆಹಾಕಿದೆ. ನೇಪಾಳ ದೇಶದ ಬೌದ್ಧರ ಸಂಸ್ಕೃತ ಸಾಹಿತ್ಯ (The Sanskrit Buddhist Literature of Nepal) ಎಂಬ ಡಾ. ರಾಜೇಂದ್ರ ಲಾಲ್ ಮಿತ್ರರವರ ಪುಸ್ತಕವೊಂದರಲ್ಲಿರುವ ಸ್ವಾರಸ್ಯವಾದ ಕಥೆಯೊಂದನ್ನು ಇದರಡಿ ವಾಚಕರ ಅವಗಾಹನೆಗೆ ತರುತ್ತೇನೆ.

ಗಂಗಾನದಿಯ ತೀರದಲ್ಲಿರುವ ಒಂದು ಕಾಡಿನಲ್ಲಿ ತ್ರಿಶಂಕು ಎಂಬ ಒಬ್ಬ ಚಂಡಾಲನು ತನ್ನ ಜಾತಿಯ ೧೦ ಸಾವಿರ ಜನಗಳಿಗೆ ಒಡೆಯನಾಗಿದ್ದನು. ಅವನು ತನ್ನ ಪೂರ್ವಜನ್ಮದಲ್ಲಿ ದೇಶ ಪುರಾಣ ಇತಿಹಾಸಗಳನ್ನೂ ಶಾಸ್ತ್ರಗಳನ್ನೂ ಅಭ್ಯಾಸ ಮಾಡಿದ್ದನಾದ್ದರಿಂದ ಈ ಜನ್ಮದಲ್ಲೂ ಅವೆಲ್ಲವನ್ನೂ ಕಂಠಪಾಠವಾಗಿ ತಿಳಿದಿದ್ದನು. ಇವನಿಗೆ ಶಾರ್ದೂಲಕರ್ಣನೆಂಬ ಮಗನಿದ್ದನು. ಮಗನಿಗೆ ತಾನು ಕಲಿತಿದ್ದೆಲ್ಲವನ್ನೂ ಕಲಿಸಿ, ಕಾಲಕ್ರಮದಲ್ಲಿ ಪ್ರೌಢನನ್ನಾಗಿ ಮಾಡಿದನು.

ಪುಷ್ಕರಸಾರಿ ಎಂಬ ಬ್ರಾಹ್ಮಣನಿಗೆ ಪ್ರೌಢಳೂ, ವಿದ್ಯಾವಂತೆಯೂ, ಎಲ್ಲಾ ವಿಧಗಳಲ್ಲೂ ತನ್ನ ಮಗನಿಗೆ ಅನುರೂಪಳೂ ಆದ ಮಗಳಿರುವಳೆಂದು ತ್ರಿಶಂಕುವಿಗೆ ನೆನಪಿಗೆ ಬಂದು, ಅವನ ಮಗಳನ್ನು ತನ್ನ ಮಗನಿಗೆ ಮದುವೆಮಾಡಿಕೊಳ್ಳುವ ಉದ್ದಿಶ್ಯ ಬ್ರಾಹ್ಮಣನ ಮನೆಗೆ ಹೊರಟನು. ಬ್ರಾಹ್ಮಣನೇನೋ ಇವನನ್ನು ಬಹಳ ಮರ್ಯಾದೆಯಿಂದ ಬರಮಾಡಿಕೊಂಡನು. ಆದರೆ ತ್ರಿಶಂಕುವು ತನ್ನ ಉದ್ದೇಶವನ್ನು ತಿಳಿಸಲು, ಬ್ರಾಹ್ಮಣನಿಗೆ ಈ ಚಂಡಾಲನ್ನು ನನ್ನ ಸಂಬಂಧವನ್ನು ಮಾಡಬಯಸಿದನಲ್ಲಾ, ಎಂದು ಕೋಪ ಹುಟ್ಟಿ ತ್ರಿಶಂಕುವನ್ನು ಬಯಿದನು.

ಅದಕ್ಕೆ ತ್ರಿಶಂಕುವು ಹೇಳಿದುದನ್ನು ಕೇಳಿ— "ಅಯ್ಯಾ ಬ್ರಾಹ್ಮಣ! ಪ್ರಪಂಚದಲ್ಲಿ ಬೂದಿಗೂ ಚಿನ್ನಕ್ಕೂ ವ್ಯತ್ಯಾಸವಿದೆಯೆಂದು ಹೇಳುವ ಮಾತು ಸಹಜ; ಆದರೆ ಬ್ರಾಹ್ಮಣನಿಗೂ ಬೇರೆ ಜಾತಿಯವನಿಗೂ ಭೇದವಿದೆಯೆಂಬುದು ಸಹಜವಲ್ಲ. ಬ್ರಾಹ್ಮಣನು ಬೆಂಕಿಯಂತೆ ಹತ್ತಿಕೊಳ್ಳಲಿಲ್ಲ, ಆಕಾಶದಿಂದ ಕೆಳಗೆ ಇಳಿಯಲಿಲ್ಲ. ಭೂಗರ್ಭದಿಂದ ಈಚೆಗೆ ಬರಲಿಲ್ಲ. ಚಂಡಾಲನು ಹುಟ್ಟಿದಂತೆಯೇ ಅದೇ ಯೋನಿಯಿಂದಲೇ ಜನಿಸಿದನಷ್ಟೆ, ಸಾಯುವಾಗ್ಗೆ ಕೂಡಾ ಚಂಡಾಲನಂತೆಯೇ ಸತ್ತಾನಷ್ಟೆ. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಜಾತಿಗಳು ಹೆಸರುಗಳಷ್ಟೇ. ಇದರಲ್ಲಿ ಸತ್ಯವಾಗಿ ಏನೂ ತಥ್ಯಾಂಶವಿರುವುದಿಲ್ಲ. ಮನುಷ್ಯಮಾತ್ರರಾದ ಪ್ರಾಣಿಗಳೆಲ್ಲರಿಗೂ, ಅಂಗಸೌಷ್ಠವವೆಲ್ಲಾ ಏಕರೀತಿಯಾಗಿರುವುದರಿಂದ ವ್ಯಕ್ತಿವ್ಯಕ್ತಿಗೂ ಖಂಡಿತ ವ್ಯತ್ಯಾಸವಿರಲಾರದು. ಹುಡುಗರು ಮಣ್ಣಿನಲ್ಲಿ ಆಡುವಾಗ್ಗೆ ಇದು ಹಾಲು, ಇದು ನೀರು, ಇದು ತಿಂಡಿ ಎಂದು ಹೇಳಿದರೂ, ಮಣ್ಣು ಮಣ್ಣೇ ಹೇಗೆ ಆಗಿರುತ್ತದೋ ಹಾಗೆಯೇ ಈ ಜಾತಿವರ್ಗಗಳೆಂಬುದು. ಪ್ರಾಣಿವರ್ಗದಲ್ಲೂ, ಸಸ್ಯ ವರ್ಗದಲ್ಲೂ, ಒಂದು ಪ್ರಾಣಿಯು ಮತ್ತೊಂದು ಪ್ರಾಣಿಯೂ, ಒಂದು ಸಸ್ಯವು ಮತ್ತೊಂದು ಸಸ್ಯವೂ ಆಗಲಾರದು. ಅಷ್ಟೇ ಹೊರತು ಮನುಷ್ಯರಲ್ಲಿ ಮಾತ್ರ ವ್ಯತ್ಯಾಸವಿರಬೇಕೆಂಬುದು ನಿರಾಧಾರವಾದದ್ದು. ಬ್ರಾಹ್ಮಣನ ಹೊಟ್ಟೆಯಲ್ಲಿ ಬ್ರಾಹ್ಮಣನೇ ಹುಟ್ಟುತ್ತಾನೆಂಬ ಕ್ಷತ್ರಿಯನಲ್ಲಿ ಕ್ಷತ್ರಿಯನೇ ಹುಟ್ಟುತ್ತಾನೆಂಬ ಶ್ರುತಿ ಚನವು ನಿಜವಾಗಿದ್ದಲ್ಲಿ ಕೆಲವು ಗುರ್ತಾದ ವ್ಯತ್ಯಾಸಗಳು ಕಾಣಬರುತ್ತಿದ್ದವು. ಆದರೆ ವಾಸ್ತವಾಂಶವು ಹಾಗಿಲ್ಲ. ನಾಲ್ಕು ವರ್ಣದ ಪ್ರತಿಯೊಬ್ಬ ವ್ಯಕ್ತಿಯೂ, ತನ್ನ ಕರ್ಮಾನುಸಾರ ಸ್ವರ್ಗ ನರಕ ಭೋಗಗಳನ್ನು ಅನುಭವ ಮಾಡುವವನೇ ವಿನಾ ಜಾತಿಗಳಿಂದ ಯಾವುದಕ್ಕೂ ತಡೆಯೂ ಅಲ್ಲ, ಸಾಧನವೂ ಅಲ್ಲ. ಒಟ್ಟಿನಲ್ಲಿ ವ್ಯಕ್ತಿಗಳ ಗುಣಕರ್ಮಗಳಿಂದಲೇ ವರ್ಣಗಳೇರ್ಪಡಬಲ್ಲುವೇ ಹೊರ್ತು ಇಂತಿಂಥವರನ್ನೇ ಸೇರಬೇಕೆಂದು ಯಾರೂ ವಿಧಾಯಕ ಮಾಡಲಾರರು." ಎಂದು ಹೇಳಿದನಂತೆ.

ಕಥೆಯ ತತ್ವವು ಅಂದೂ ಒಂದೇ, ಇಂದೂ ಒಂದೇ. ಆದುದರಿಂದ ನಾವು ಹೊರಗಿನ ಆಡಂಬರದಭೇದಗಳಿಗೆ ಮರುಳಾಗಿ ಅವಿಚಾರಿಗಳಾಗುವುದು ನ್ಯಾಯವಲ್ಲ.

ನೋಟೀಸು.

ನಿಜಾಂ ವೀರಶೈವ ವಿದ್ಯಾವರ್ಧಕ ಫಂಡಿನಿಂದ ವೇತನವನ್ನು ಹೊಂದ ತಕ್ಕ ವಿದ್ಯಾರ್ಥಿಗಳಿಗೆ ಇದರಿಂದ ತಿಳಿಸುವದೇನೆಂದರೆ—

ತಾ. ೧೦-೧೨-೪೨ ಫಸಲಿಯ ದಿವಸ ಯಾದಗಿರಿಯಲ್ಲಿ ಶ್ರೀ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರ ಅಧ್ಯಕ್ಷತೆಯಲ್ಲಿ ಕೂಡಿದ ಜನರಲ್ ಕಮಿಟಿಯಲ್ಲಿ ಮೇಲಣ ಫಂಡಿನ ಕಚೇರಿಯು ಇನ್ನುಮುಂದೆ ಸೇಡಂಪಟ್ಟಣಕ್ಕಿರತಕ್ಕದ್ದೆಂದು ಸರ್ವಾನುಮತದಿಂದ ಪಾಸಾಗಿ ಸೇಡಂಕ್ಕೆ ಬದಲಾಯಿಸಲಾಗಿದೆ. ಕೆಳಗೆ ತೋರಿಸಿದ ಪ್ರಕಾರ ಕೆಲವು ಅಧಿಕಾರಿಗಳ ಬದಲಾವಣೆಯೂ ಆಗಿದೆ. ಆದುದರಿಂದ ಇನ್ನು ಮೇಲೆ ಪತ್ರವ್ಯವಹಾರವನ್ನು ಮಾಡತಕ್ಕವರು ಹೊಸ ಕಚೇರಿಯ ಸೆಕ್ರೆಟರಿಗಳ ಹೆಸರಿನಿಂದ ಕನ್ನಡದಲ್ಲಿಯೇ ಮಾಡತಕ್ಕದ್ದು.

೧. ಪ್ರೆಸಿಡೆಂಟರು:—

ಶ್ರೀ. ಶಾಂತವೀರಸ್ವಾಮಿಗಳು ಗುರುಮಠಕಲ್ಲ.

೨. ವೈಸ್ ಪ್ರೆಸಿಡೆಂಟರು:—

ಶ್ರೀ. ಕಾನಾಗಡ್ಡಿ ಸಜ್ಜನಶೆಟ್ಟಿ ಪರಮಣ್ಣನವರು.

೩. ಸೆಕ್ರೆಟರಿಗಳು:—

ಶ್ರೀ. ಕೆ. ಶಿವಸಿದ್ಧಪ್ಪನವರು ಸೇಡಂ.

೪. ಅಂಡರ್ ಸೆಕ್ರೆಟರಿಗಳು:—

ಶ್ರೀ. ಕುಸುನೂರು ಶರಣಯ್ಯನವರು ಸೇಡಂ.

೫. ಟ್ರೆಝುರರ್:—

ಶ್ರೀ. ಖಾನಾಪೂರ ಮುರಿಗೆಪ್ಪನವರು ಸೇಡಂ.

ಸೇಡಂ.
ತಾ. ೧-೧-೧೩೪೩.

ಕೆ. ಶಿವಸಿದ್ಧಪ್ಪ
ಸೆಕ್ರೆಟರಿ,
ವಿದ್ಯಾವರ್ಧಕ ಫಂಡ ಸೇಡಂ.

—ಡಾ. ಅನಿಬೇಜಂಟರವರ ಇಚ್ಛೆಯಂತೆ ಅವರ ಅಸ್ಥಿಗಳನ್ನು ರೇಶಿಮೆ ವಸ್ತ್ರದಿಂದ ಸುತ್ತಿ ಬೆಳ್ಳಿಯ ಕರಡಿಗೆಯಲ್ಲಿಟ್ಟುಕೊಂಡು ಬಂದು ಶ್ರೀ. ತೇಲಂಗ ಇವರು ಗಂಗಾ ನದಿಯಲ್ಲಿ ವಿಸರ್ಜನ ಮಾಡಿದರು.

—ಶ್ರೀ ಸಿದ್ಧರಾಮಪ್ಪನವರು ಪಾವಟೆ ಇವರ ಅಧ್ಯಕ್ಷತೆಯಲ್ಲಿ ವಿಜಯ ನಗರ ಸ್ಮಾರಕ ಸಂಘದ ವತಿಯಿಂದ ಕೂಡಿದ ಸಭೆಯಲ್ಲಿ ಶ್ರೀ ಮೊಕಾಶಿಯವರು ಹಿಂದಿನ ವರದಿಯನ್ನೆಲ್ಲ ಓದಿದರು. ಇದರ ಮಧ್ಯವರ್ತಿ ಸಂಘವನ್ನು ಹುಬ್ಬಳ್ಳಿಯಲ್ಲಿಯೇ ಸ್ಥಾಪಿಸಬೇಕೆಂದು ನಿರ್ಣಯವಾಯಿತು.

ಶರಣಸಂದೇಶ

ಶಾ. ಶ. ೧೮೫೬ ನೆಯ ಆಶ್ವೀಜ ಬ. ೬ ಸೋಮವಾರ.

ನಿಜವಾದ ಮಾರ್ಗದರ್ಶಿ.

ಮಹಾತ್ಮಾ ಗಾಂಧೀಜಿಯವರು ತಾವು ಒಂದು ವರುಷದ ವರೆಗೆ ಶಾಸನೋಲ್ಲಂಘನೆಯ ಸನ್ಯಾಸ ವ್ರತವನ್ನು ಸ್ವೀಕರಿಸಿದಂದಿನಿಂದ ಈಗ ದೇಶದಲ್ಲಿ ಭಿನ್ನಭಿನ್ನ ವಿಚಾರಗಳು ತಲೆದೋರಹತ್ತಿವೆ. ಆಗದ ಕೆಲವರು ರಾಷ್ಟ್ರೀಯ ಸಭೆಯ ಧೋರಣವು ತಪ್ಪಾದುದೆಂದೂ ಅದನ್ನು ಹಿಂಬಾಲಿಸಿದರೆ ತಮ್ಮ ಪ್ರಗತಿಯು ಕುಂಠಿತವಾಗುವುದಲ್ಲದೆ ತಾವು ಎಂದೂ ಒಳ್ಳೆಯ ದಿನಗಳನ್ನು ಕಾಣೆವೆಂದೂ ಹೇಳುತ್ತಿದ್ದಾರೆ. ರಾಷ್ಟ್ರೀಯ ಕಾರ್ಯ ಸೇವಕರಲ್ಲಿ ದ್ವಿವಿಧವಾಗಿ ಕೆಲವರು ನಿಯಮನಿರ್ಮಾಣ ಸಭೆಗಳನ್ನೂ, ಕೇಂದ್ರ ಶಾಸನ ಸಭೆಯನ್ನೂ ಪ್ರವೇಶಿಸಬೇಕೆಂದು ಹೇಳುತ್ತಿದ್ದಾರೆ. ಇನ್ನು ಕೆಲವರು ಸ್ವರಾಜ್ಯ ಪಕ್ಷ ಎಂಬ ಹೊಸದೊಂದು ಪಕ್ಷವನ್ನು ಸ್ಥಾಪಿಸುವ ಹವಣಿಕೆಯಲ್ಲಿರುವರು.

ಆದುದರಿಂದ ಸಾಂಪ್ರತ ಕಾಲದಲ್ಲಿ ದಿಕ್ಕು ಕಾಣದೆ ಕ್ಷುಬ್ಧವಾಗಿರುವ ಭಾರತ ಭೂಮಿಗೆ ಶಾಂತ ಮಾರ್ಗವನ್ನು ತೋರಿಸಿ ಯೋಗ್ಯ ರೀತಿಯಿಂದ ನಡೆಯಿಸಿಕೊಂಡು ಹೋಗಲು ಸ್ಥಿತಪ್ರಜ್ಞರೂ, ಶಾಂತಿಸಾಗರರೂ ಆದ ಆ ಮಹಾತ್ಮಾ ಗಾಂಧೀಜಿಯವರೊಬ್ಬರೇ ಶಕ್ತರಲ್ಲದೆ ಅನ್ಯರಿಂದ ಈ ಘನಕಾರ್ಯವಾಗದು. ಮೈಸೂರಿನ ಸಚಿವರಾದ ಸರ್. ಮಿರ್ಝಾ ಇಸ್ಮಾಯಿಲ್ ಇವರು ಹೇಳುತ್ತಿರುವಂತೆ ಮಹಾತ್ಮಾಜಿಯವರೊಬ್ಬರೆ ಭಾರತ ವರ್ಷದ ಈ ದುಸ್ತರ ಸಮಯದಲ್ಲಿ ಮಾರ್ಗದರ್ಶಿಯಾಗಲು ಯೋಗ್ಯರು. ಅಜಾತ ಶತ್ರುವಾದ ಇವರು ಇಂಗ್ಲಂಡ್ ಮತ್ತು ಹಿಂದುಸ್ಥಾನಗಳಲ್ಲಿ ಉಭಯತರಿಗೂ ಅಸಾಯವಾಗದಂತೆ ಸನ್ಮಾನನೀಯ ಒಪ್ಪಂದವನ್ನು ಮಾಡಿಕೊಂಡು ದೇಶವನ್ನು ಸ್ವಾಯತ್ತ ಪ್ರಭುತ್ವದ ಕಡೆಗೆ ಹೊರಳಿಸಲು ಮಹಾತ್ಮಾಜಿಯವರೇ ಯೋಗ್ಯರು.

ಬ್ರಿಟಿಶ್ ಪಾರ್ಲಿಮೆಂಟಿನ ಸದಸ್ಯರು ಕೂಡಿ ಮಹಾತ್ಮಾ ಗಾಂಧೀಜಿಯವರಿಗೆ ಇದೇ ಆಶಯದ ಬಿನ್ನಹವನ್ನು ತಂತಿ ಮುಖದಿಂದ ತಿಳಿಸಿದ್ದಾರೆ. ಆದುದರಿಂದ ಮಹಾತ್ಮಾ ಗಾಂಧೀಜಿಯವರು ಪರಮಾತ್ಮನ ಕೃಪೆಯಿಂದ ಸಂಪೂರ್ಣವಾಗಿ ಆರೋಗ್ಯ ಭಾಗ್ಯವನ್ನು ಪಡೆದು ಶೀಘ್ರವೇ ದೇಶಕ್ಕೆ ಕಲ್ಯಾಣವಾಗುವಂಥ ಮಾರ್ಗವನ್ನು ಸೂಚಿಸುವರೆಂದು ನಾವು ಆಶಿಸುತ್ತೇವೆ.

ಸದ್ಯಕ್ಕೆ ಅವರ ಪ್ರಕೃತಿಯು ವ್ಯತ್ಯಸ್ತವಾಗಿರುವುದರಿಂದ ಅವರು ಕೆಲವು ವಾರಗಳವರೆಗಾದರೂ ವಿಶ್ರಾಂತಿಯನ್ನು ಹೊಂದುವದು ಅವಶ್ಯವಾಗಿದೆ.

ಸ್ಫುಟ ಸೂಚನೆ.

ಅಖಿಲ ಭಾರತ ಹಿಂದೂ ಮಹಾ ಸಭಾ.

ಅ. ಭಾ ಹಿಂದೂ ಮಹಾಸಭೆಯ ೧೫ನೆಯ ಅಧಿವೇಶನವು ಇದೇ ತಿಂಗಳ ೧೪ನೆಯ ತಾರೀಖಿನಿಂದ ೧೬ನೆಯ ತಾರೀಖಿನವರೆಗೆ ನಡೆಯುವದು. ಅಧ್ಯಕ್ಷಸ್ಥಾನವನ್ನು ಶ್ರೀ. ಭಾಯಿ ಪರಮಾನಂದಜಿಯವರು ಅಲಂಕರಿಸುವರು.

ಶ್ರೀ. ಭಾಯಿ ಪರಮಾನಂದಜಿಯವರು ಮಹಾಸಭೆಯನ್ನು ಆತ್ಮೀಯವನ್ನಾಗಿ ಮಾಡಿಕೊಂಡು ಮೊದಲಿನಿಂದಲೂ ಅದರ ತಕ್ಕ ಸೇವೆಯನ್ನು ಮಾಡುತ್ತ ಬಂದಿದ್ದಾರೆ. ಜಾಯಿಂಟ್ ಸಿಲೆಕ್ಟ ಕಮಿಟಿಯಲ್ಲಿ ಹಿಂದುಗಳ ಸಲುವಾಗಿ ಚೆನ್ನಾಗಿ ಹೋರಾಡಿದುದಲ್ಲದೆ ಇಂಗ್ಲಂಡದಲ್ಲಿಯೂ ಹಿಂದೂ ಮಹಾಸಭೆಯ ಶಾಖೆಯೊಂದನ್ನು ಸ್ಥಾಪಿಸಿರುವರು. ಹಿಂದುಗಳ ಉದ್ಧಾರಕ್ಕಾಗಿ ಇವರು ತಮ್ಮ ಸರ್ವಸ್ವವನ್ನೂ ಸಮರ್ಪಿಸಿರುವರು. ಆದುದರಿಂದಲೇ ೧೨ ಪ್ರಾಂತಗಳಲ್ಲಿ ೧೦ ಪ್ರಾಂತಗಳ ಸದಸ್ಯರು ಈ ಸಾರೆಯ ಅಧ್ಯಕ್ಷಪದಕ್ಕೆ ಭಾಯಿ ಪರಮಾನಂದಜಿಯವರನ್ನೇ ಆರಿಸಲು ಸಲಹೆ ಕೊಟ್ಟಿದ್ದು ಯುಕ್ತವೇ ಆಗಿದೆ.

ಈ ಸಾರೆಯ ಅಧಿವೇಶನಕ್ಕೊಂದು ಮಹತ್ವ ಬಂದಿದೆ. ಮುಂದೆ ಜರುಗಲಿರುವ ರಾಜ್ಯ ಘಟನೆಯು ಜಾತಿಯ ಮತಪದ್ಧತಿಯ ಮೇಲೆ ಅವಲಂಬಿತವಾಗಿರುತ್ತದೆ. ಈ ಪದ್ಧತಿಯಿಂದ ಕ್ರೈಸ್ತರಿಗೆ, ಮುಸಲ್ಮಾನರಿಗೆ ಹೆಚ್ಚು ಸ್ಥಾನಗಳು ದೊರೆತು ಹಿಂದುಗಳಿಗೆ ಅಹಿತವಾಗುವ ಸಂಭವವಿದೆ. ಆದುದರಿಂದ ಈ ಹಾನಿಕಾರಕ ಪದ್ಧತಿಯನ್ನು ಮಾರ್ಪಡಿಸಿಕೊಳ್ಳುವುದಕ್ಕಾಗಿ ಹಿಂದುಗಳು ಈಗ ಬಹು ಸಂಖ್ಯಾಕರಾಗಿ ಸೇರಿ ವಿಚಾರಣೆ ಮಾಡುವದು ಯುಕ್ತವಾಗಿಲ್ಲವೇ?

ಆಸ್ಟ್ರಿಯಾದಲ್ಲಿ ಅತ್ಯಾಚಾರ.

ಪಾಶ್ಚಾತ್ಯ ದೇಶಗಳಲ್ಲಿ ರಾಜಕೀಯ ಕ್ಷೋಭೆಗಳು ಹಿಂಸಾಮುಖೇನ ವಿಚಿತ್ರ ರೀತಿಯಿಂದ ಜರುಗುತ್ತಲಿವೆ. ಆವುದೊಂದು ರಾಜ್ಯಪದ್ಧತಿಯು ಇಲ್ಲವೆ ವರಿಷ್ಠ ಅಧಿಕಾರಿಯು ಮತ್ತೊಂದು ವ್ಯಕ್ತಿಗೆ ಇಲ್ಲವೆ ಮತ್ತೊಂದು ಪದ್ಧತಿಗೆ ಸರಿದೋರದಿದ್ದರೆ ಹಿಂಸಾರೂಪದಿಂದ ಅದನ್ನು ನಿವಾರಿಸುವ ಪ್ರಯತ್ನಗಳು ನಡೆಯುತ್ತಲಿವೆ. ವಾಮನ್ ನೆಪೋಲಿಯನ್ (Pocket Napoleon) ಎಂದು ಪ್ರಸಿದ್ಧರಾದ ಮಿ. ಡಾಲ್ಫಸ್ ಎಂಬ ಆಸ್ಟ್ರಿಯನ್ ಮುಖ್ಯ ಮಂತ್ರಿಗಳು ಫ್ಯಾಸಿಸ್ಟ ಮತದವರು. ಇವರಿಗೂ ಜರ್ಮನ್ ನಾಝಿಗಳಿಗೂ ಪರಸ್ಪರ ಹೋರಾಟವು ನಡೆದೇ ಇದೆ. ಈ ಮಂತ್ರಿಗಳ ಮೇಲೆ ಡರ್ಟಿಲ್ ಎಂಬ ಸೈನಿಕನು ಪಿಸ್ತೂಲಿನಿಂದ ಗುಂಡು ಹಾರಿಸಿದನು. ಸುದೈವದಿಂದ ಮಿ. ಡಾಲ್ಫಸ್ ಇವರಿಗೆ ಅತ್ಯಪಾಯವಾಗದೆ ಬದುಕಿಕೊಂಡರು. ಡರ್ಟಿಲನು ನಾಝಿಯೆಂದು ಕೆಲವರು ಸಂಶಯಪಡುತ್ತಿದ್ದರೂ ಅವನು ತಾನು ಯಾವ ಪಂಗಡಕ್ಕೂ ಸೇರಿಲ್ಲವೆಂದೂ ಆದರೆ ಮಿ. ಡಾಲ್ಫಸ್ ಇವರಿಗೆ ಸ್ವಾತ್ಮರಕ್ಷಣೆ ಮಾಡಿಕೊಳ್ಳಲು ಎಚ್ಚರಿಕೆ ಕೊಡುವುದಕ್ಕಾಗಿ ಈ ಕೃತ್ಯ ಮಾಡಿದೆನೆಂದೂ ಹೇಳುತ್ತಾನೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯಾವುದೊಂದು ಚಟುವಟಿಕೆಯು ಹಿಂಸೆಯಿಂದಲೇ ಪ್ರಾರಂಭವಾಗುತ್ತದೆ. ಆದುದರಿಂದ ಅಹಿಂಸಾ, ಶಾಂತಿ, ಇವುಗಳನ್ನು ಅವರು ನಮ್ಮ ಭಾರತ ಭೂಮಿಯಿಂದಲೇ ಕಲಿಯಬೇಕಾಗಿಲ್ಲವೇ?

ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ | ಜಲಬಿಂದುವಿನ ವ್ಯವಹಾರವೊಂದೆ | ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲವೊಂದೆ | ಏನನೋದಿ ಏನುಕೇಳಿ ಏನು ಫಲ? ಕುಲಜನೆಂಬುವದಕ್ಕೆ ಆವುದು ದೃಷ್ಟ? "ಸಪ್ತ ಧಾತು ಸಮುಂಪಿಂಡಂ | ಸಮಯೋನಿ ಸಮುದ್ಭವಂ| ಆತ್ಮಜೀವ ಸಮಾಯುಕ್ತಂ| ವರ್ಣಾನಾಂ ಕಿಂಪ್ರಯೋಜನಂ|" ಎಂಬುದಾಗಿ ಕಾಸಿ ಕಮ್ಮಾರನಾದ | ಬೀಸಿ ಮಡಿವಾಳನಾದ | ಹಾಸನಿಕ್ಕಿ ಸಾಲಿಗನಾದ | ವೇದವನೋದಿ ಹಾರುವನಾದ | ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಇದುಕಾರಣ ಕೂಡಲಸಂಗಮ ದೇವ ಲಿಂಗಸ್ಥಲವನರಿದವನೇ ಕುಲಜನು||

ತಾವು ಜನ್ಮದಿಂದಲೇ ಪುನೀತರೂ, ಮುಕ್ತರೂ, ಶ್ರೇಷ್ಠರೂ, ಆಗಿರುವೆವೆಂದು ತಿಳಿದು ಹಲಕೆಲವರು ಉಳಿದವರನ್ನು ಕಡಿಮೆ ಯವರೆಂದು ಕಾಣುತ್ತ ತಮ್ಮ ಕುಲಮದವನ್ನು ಪ್ರಕಟಪಡಿ ಸುತ್ತ ಅಧೋಗತಿಯನ್ನು ಹೊಂದುತ್ತಿದ್ದಾರಷ್ಟೆ. ಅಂಥವರ ಉದ್ಧಾರಕ್ಕಾಗಿ ಆ ಮಹಾನುಭಾವರಾದ ಬಸವಣ್ಣನವರು ತಮ್ಮ ಅಮೃತವಾಣಿಯ ಸ್ವರೂಪವಾದ ಮೇಲಿನ ವಚನವನ್ನು ಹೇಳಿ ದ್ದಾರೆ. ಎಲವೋ ನಿಮ್ಮನ್ಯಕ್ಕೆ ನೀವೇ ನಾವು ಶ್ರೇಷ್ಠರು, ನಾವು ಶ್ರೇಷ್ಠರು ಎಂದು ಮೆರೆದಾಡುತ್ತಿರುವಿರಿ. ನೀವು ಶ್ರೇಷ್ಠರಾದರೆ ಯಾತರಿಂದ? ಇನ್ನುಳಿದವರಕ್ಕಿಂತಲೂ ನಿಮ್ಮಲ್ಲಿ ಅಂಥ ವಿಶೇಷತ್ವವೇನಿದೆ?

ನೀವೇನು ಶುಕ್ಲ ಶೋಣಿತಗಳಿಂದ ಕೂಡಿ ಉಂಟಾದ ಪಿಂಡ ವನ್ನು ಧರಿಸಿ ತಾಯಿ ಗರ್ಭದಲ್ಲಿ ವಾಸವಾಗಿದ್ದು ಎಲ್ಲರಂತೆ ಯೋನಿ ಮೂಲಕವೇ ಹುಟ್ಟಿರುವಿರೋ ಅಥವಾ ನಿಮ್ಮ ಜನ್ಮವು ವಿಶೇಷ ಪ್ರಕಾರದಿಂದೇನಾದರೂ ಆಗಿದೆಯೋ? ನಿಮ್ಮ ಈ ಭೌತಿಕ ಶರೀ ರವು ಅನ್ಯರಂತೆಯೇ ಸಪ್ತ ಧಾತುಗಳಿಂದ ಕೂಡಿ ಉಂಟಾಗಿದೆಯೋ ಅಥವಾ ಭಿನ್ನವಾಗಿರುವದೊ? ಈ ಭೌತಿಕ ಶರೀರಗಳ ರಚನೆ ಯಲ್ಲಿ ಹೆಚ್ಚುಕಡಿಮೆಯೆಂಬುದೇನುಂಟು? ಆವಕಾರಣದಿಂದ ನೀವು ಹೆಚ್ಚಿನವರೆಂದು ಹೇಳಿಕೊಳ್ಳುತ್ತಿರುವಿರಿ? ಇರಲಿ.

ನಿಮ್ಮ ಮನೋವಿಕಾರಗಳಲ್ಲೇನಾದರೂ ವ್ಯತ್ಯಾಸವುಂಟೆ? ಹುಟ್ಟಿದ ಕೂಡಲೇ ನೀವು ಕಾಮ ಕ್ರೋಧಾದಿಗಳನ್ನು ಜಯಿಸಿರು ವಿರಾ? ನಿಮ್ಮಂತೆಯೇ ಇನ್ನುಳಿದವರಲ್ಲಿಯೂ ಆಶೆ, ರೋಷ, ಹರುಷ, ವಿಷಯಾದಿಗಳೆಲ್ಲವೂ ಸಮವಾಗಿಯೇ ಇಲ್ಲವೆ? ಅಂದಮೇಲೆ ನಿಮ್ಮ ಹೆಚ್ಚಳವೇನು? ಇರಲಿ.

ಶೃತಿ ಸ್ಮೃತ್ಯಾದಿ ಗ್ರಂಥಗಳನ್ನು ಓದಿರುವೆವೆಂದು ಹೆಮ್ಮೆ ಪಡುತ್ತಿರುವಿರಾ? ಆ ಕಾರಣದಿಂದ ನಾವು ಶ್ರೇಷ್ಠರೆಂದು ಹೇಳುತ್ತಿ ರುವಿರಾ? ಧರ್ಮಗ್ರಂಥಗಳನ್ನು ಓದುವ ಹೊಲಬಾದರೂ ಏನೆಂ ಬುದು ನಿಮಗೆ ಗೊತ್ತುಂಟೆ? ಸರ್ವವನ್ನು ಓದಿ ಸರ್ವ ಜ್ಞಾನಿ ಯೆಂದೆನಿಸಿಕೊಂಡು ಸರ್ವಪ್ರಾಣಿಗಳಲ್ಲಿ ಸಮಾನತೆಯ ಭಾವ ವನ್ನು ಸಾಧಿಸದಿದ್ದರೆ ನೀವು ಓದಿಯಾದರೂ ಏನು ಫಲ? ಸರ್ವ ಸಮಾನತೆಯೇ ಸಮಾಜ ಸಂಘಟನೆಯ ತಳಹದಿಯಲ್ಲವೆ? ಸಮತಾಭಾವವೇ ಅಸಮಾಕ್ಷನನ್ನು ಸಾಧಿಸುವ ಸರಲ ಸೋಪಾನ ಮಾರ್ಗವಲ್ಲವೆ? ಜಗತ್ತೆಲ್ಲ ಕಾಮಧೇನು ಸಮಾನವಾದ ಈ ಸಮಾನ ತೆಯನ್ನು ಬಯಸುತ್ತಿರಲು ಅವುದೂ ಸಾಧಿಸದಿದ್ದುದರಿಂದ ಇವನು ಕಮ್ಮಾರನು, ಅವನು ಮಡಿವಾಳನು, ಇವನು ಬಣಜಿಗನು, ಅವನು ಒಕ್ಕಲಿಗನು, ಇವನ ಉದ್ಯೋಗವು ಶ್ರೇಷ್ಠ. ಆದುದರಿಂದ ಇವನೇ ಶ್ರೇಷ್ಠ, ಅವನ ಉದ್ಯೋಗವು ಕನಿಷ್ಠ, ಆದುದರಿಂದ ಅವನು ಕನಿಷ್ಠ ಇತ್ಯಾದಿ ಭಕ್ತರ ಕಾಯಕಗಳಲ್ಲಿ ಭಿನ್ನತ್ವವನ್ನು ಕಲ್ಪಿಸಿ ನೀವು ಮಾತ್ರ ಪರಾವಲಂಬಿಗಳಾಗಿ, ಅನ್ಯರ ಶ್ರಮದಿಂದ ನಿಮ್ಮ ಹೊಟ್ಟೆಯನ್ನು ನಾಗಿಸುತ್ತ ಚೆಲ್ಲಾಟವಾಡುತ್ತಿರುವಿರಿ.

ಕಾಯಕದಲ್ಲಿ ಹೆಚ್ಚು ಕುಂದನ್ನು ಸಾಧಿಸುವ ನೀವು ಕಾಯ ಕವೆಂದರೇನೆಂಬುದನ್ನು ಅರಿಯುವಿರಾ? ಗುರು ಲಿಂಗ ಜಂಗಮ ಕ್ಕೆಂದು ತನುಮನಧನ ವಂಚನೆಯಿಲ್ಲದೆ ಭಿನ್ನ ಭಿನ್ನ ಕಾಯಕಗ ಳನ್ನು ಕೈಕೊಂಡ ವೀರಶೈವರು ಸರ್ವ ಸಮಾನರಲ್ಲವೆ ಮತ್ತೆ ಅವರಲ್ಲಿ ಹೆಚ್ಚುಕುಂದುಂಟೆ? ತಾವು ಮಾಡುವ ಕರ್ಮವನ್ನು ಪರಮಾತ್ಮಾರ್ಪಿತ ಬುದ್ಧಿಯಿಂದ ಮಾಡಿ ಆ ಕರ್ಮದ ಜಂಜಾಟ ವನ್ನು ನೀಗುವ ಕರ್ಮವೀರರು ಸರ್ವಸಮಾನರಲ್ಲವೆ ಮತ್ತೆ ಬೇರುಂಟೆ? ಎಲ್ಲ ಕಾಯಕಗಳೂ ಕರ್ಮದಿಂದುದ್ಭವಿಸಬಹುದಾದ ಸುಖದುಃಖಗಳೆಂಬ ಭ್ರಾಂತಿಗಳನ್ನು ಕಳೆಯಲು ಸಮವಾಗಿಯೇ ಸಹಕಾರಿಗಳಾಗಿಲ್ಲವೆ? ಅಂದಮೇಲೆ ಕಾಯಕ ಮಾಡುವವರಲ್ಲಿ ಹೆಚ್ಚು ಕಡಿಮೆಯೆಂಬುದೇನು? ನೀವು ಯಾವ ಕಾಯಕ ಮಾಡು ತ್ತಿರುವಿರೆಂದು ಶ್ರೇಷ್ಠರೆನ್ನಬೇಕು? ಹೆಸರುಗಳೇನು? ಆಯಾ ಕಾಯಕವನ್ನು ಮಾಡುವವನಿಗೆ ಆಯಾ ನಾಮವು ಪ್ರಾಪ್ತವಾಗು ತ್ತವೆ. ಶಿವಭಕ್ತನು ಕಬ್ಬಿಣ ಕಾಯಿಸುವ ಕಾಯಕ ಕೈಕೊಂಡಲ್ಲಿ ಕಮ್ಮಾರನಾದನು. ಇದರಿಂದ ಅವನ ಗುರುಲಿಂಗಜಂಗಮ ತೃಪ್ತಿಯು ನಡೆಯದೆ? ಬೀಸಿ, ಬೀಸಿ ಅರಿವೆಗಳನ್ನು ಒಗೆದು ಮಡಿವಾಳನೆಂದೆ ನಿಸಿಕೊಂಡ ಶಿವಭಕ್ತನು ತ್ರಿವಿಧ ದಾಸೋಹಗಳನ್ನು ಮಾಡಲಾ ರನೇ? ಅಥವಾ ಅವನು ವೇದವನೋದಿ ಹಾರುವನೆಂದೆನಿಸಿಕೊಂಡ ವನಕಿಂತಲೂ ಕಡಿಮೆಯವನಾದನೇ? ಛೆ ಎಂದಿಗೂ ಇಲ್ಲ.

ಯಾವ ಮಹಾತ್ಮನು ಯಾವ ಕರ್ಮ ಮಾಡಿದರೂ ಆ ಕ ರ್ಮದ ಸುಖ ದುಃಖಾದಿಗಳಿಗೆ ಮತ್ತು ಕುಲ ಛಲಗಳಿಗೆ ಒಳಗಾಗದೆ ಒಕ್ಕುದ ತ್ರಿವಿಧ ದಾಸೋಹಕ್ಕೆ ಮಿಕ್ಕುದ ಪ್ರಸಾದದಿಂದ ಪರಮಸುಖಿಯಾಗಿ ಆ ಪರಮಪ್ರಸಾದದಿಂದ ಸಮ್ಯಗ್ ಜ್ಞಾನಿಯಾಗಿ ಪರತರ ಲಿಂಗದಲ್ಲಿ ಸಾಮರಸ್ಯವನ್ನು ಹೊಂದುವನೋ ಅವನೇ ಕು ಲಜನು.

ಈ ಪ್ರಕಾರವಾಗಿ ಆ ಮಹಾನುಭಾವರಾದ ಬಸವಣ್ಣನವರು ಕುಲಮದದಿಂದ ಕೂಡಿದ ನಮ್ಮಗಳ ಉದ್ಧಾರಾರ್ಥವಾಗಿ ಬೋಧಿ ಸಿರುವರು.

ಪಾಟೀಲ ಲಿಂಗನಗೌಡ,

ವಿ ವಿ ಧ ವಿ ಷ ಯ .

ಪೃಥ್ವಿಯ ವಯಸ್ಸೆಷ್ಟು? ೨ ಅಬ್ಜ ವರುಷಗಳೇ?

ಸರ್. ಆರ್ಥರ ಎಡಿಂಗ್ಟನ್ ಎಂಬ ಖಗೋಲ ಶಾಸ್ತ್ರಜ್ಞರು ಲಂಡನದಲ್ಲಿ ಬ್ರಿಟಿಶ್ ಸಂಸ್ಥೆಯ ಮುಂದೆ ಭಾಷಣ ಮಾಡುತ್ತಿರುವಾಗ ಹೇಳಿದುದೇನಂದರೆ—" ನಾವು ಶೋಧ ಮಾಡಲಾಗಿ ನಮ್ಮ ಎಣಿಕೆಯ ಪ್ರಕಾರ ಪೃಥ್ವಿಯು ೨ ಅಬ್ಜ ವರುಷಗಳ ಹಿಂದೆ ಉದ್ಭವಿಸಿತೆಂದು ಕಂಡುಬರುತ್ತದೆ. ಕೆಲ ಕೆಲವು ನಕ್ಷತ್ರಗಳು ೧೫ ಕೋಟಿ ಪ್ರಕಾಶ ವರುಷಗಳ (Light-year) ದೂರದಲ್ಲಿರುತ್ತವೆ. ಅವು ಹೆಚ್ಚು ಹೆಚ್ಚು ದೂರದಲ್ಲಿದ್ದಂತೆ ಅವುಗಳ ಗತಿಯಾದರೂ ಶೀಘ್ರತರವಾಗಿರುತ್ತದೆ ಯಾವುದಕ್ಕೆ ನಾವು ತೇಜೋವೇಷ (Nebulae) ವೆಂದು ಕರೆಯುತ್ತೇವೆಯೋ ಅಲ್ಲಿಯ ನಕ್ಷತ್ರಗಳು ಸೆಕಂದಿಗೆ ೧೫೦೦೦ ಮೈಲು ವೇಗವುಳ್ಳವಾಗಿರುತ್ತವೆ. ಹಿಂದಿನ ಶಾಸ್ತ್ರಜ್ಞರ ಪ್ರಗತಿಗೆ ನಾವು ಈಗ ನಗುತ್ತಿದ್ದರೆ ನಮ್ಮ ಮುಂದೆ ಬರುವ ಶಾಸ್ತ್ರಜ್ಞರು ನಮ್ಮ ಪ್ರಗತಿಯನ್ನೂ ಹೀಯಾಳಿಸಬಹುದು.

ಖಗೋಲಕ್ಕೆ ಅಂತವೇ ಇಲ್ಲ. ಶಾಸ್ತ್ರೀಯಶೋಧವು ಅದನ್ನು ಮುಟ್ಟಬೇಕೆನ್ನುವಷ್ಟರಲ್ಲಿಯೇ ಅದು ಹಾಗೆಯೇ ಮುಂದೆ ಮುಂದೆ ಹೋಗುತ್ತಲೇ ಇದೆ.

ಆರ್ಯ ಜಾತ್ಯಭಿಮಾನ.

ಜರ್ಮನಿಯಲ್ಲಿ ನಾಝಿ ಸಂಗಡದವರು ತಾವು ಆರ್ಯವಂಶೀಯರೆಂದೂ ಯಹೂದಿಗಳು ಅನಾರ್ಯರೆಂದೂ ಅವರನ್ನು ಹೊರಗಟ್ಟುವ ಅನಾರ್ಯ ಕೃತ್ಯವನ್ನು ಮಾಡಿದ್ದಾರಷ್ಟೆ ಈಗ ಅವರು ಪುನಃ ತಮ್ಮ ಜಾತ್ಯಭಿಮಾನವನ್ನು ಪ್ರಕಟಪಡಿಸುತ್ತಿದ್ದಾರೆ. ನಾಝಿಗಳು ಅನಾರ್ಯರ ಸಂಗಡ ವಿವಾಹ ಬೆಳೆಸಿದರೆ ಅದು ಕಾಯಿದೆಗೆ ವಿರುದ್ಧವಾದದ್ದೆಂದು ತಿಳಿಯಬೇಕು. ಹಾಗೆ ಯಾರಾದರೂ ವಿವಾಹ ಮಾಡಿಕೊಂಡಲ್ಲಿ ಅವರಿಗೆ ಶಿಕ್ಷೆಯಾಗುವುದು. ಜರ್ಮನ್ ನರ್ತಕಿಯರು ಸಾರ್ವಜನಿಕ ಸ್ಥಳಗಳಲ್ಲ ನಿಗ್ರೋ ಮೊದಲಾದ ಅನಾರ್ಯರ ಸಂಗಡ ನರ್ತನ ಮಾಡಿದರೆ ಅದೊಂದು ಅಪರಾಧವಾಗಿ ತಿಳಿಯಲ್ಪಡುವದು ಎಂಬುದಾಗಿ ಜರ್ಮನಿಯ ನ್ಯಾಯಾಧೀಶರು ಸರ್ವರಿಗೂ ತಿಳಿಸಿದ್ದಾರೆ. ಇದೇನು ಜಾತಿಯ ದುರಭಿಮಾನವೊ? ಅಥವಾ ಪಾರತಂತ್ರ್ಯದ ಪುನರುಚ್ಚಾರಣೆಯೋ?

ಪ್ರಸಿದ್ಧ ಕಳ್ಳನು.

ಫಿರೋಜ ಎಂಬ ಹೆಸರಿನ ಪಂಜಾಬಿಗೆ ಕೊಲೆ ಮಾಡಿದ ಅಪರಾಧಕ್ಕಾಗಿ ದ್ವೀಪಾಂತರವಾಸದ ಶಿಕ್ಷೆಯು ವಿಧಿಸಲ್ಪಟ್ಟಿತ್ತು. ಅಂದಮಾನ ದ್ವೀಪದಲ್ಲಿ ಶಿಕ್ಷೆಭೋಗಿಸುತ್ತಿದ್ದಾಗ ಅವನು ಪೋಲಿಸರ ಕಣ್ಣು ತಪ್ಪಿಸಿ ಸಮುದ್ರದಲ್ಲಿ ಈಸುತ್ತ ಈಸುತ್ತ ಒಂದು ಹಡಗದಲ್ಲಿ ಹೋಗಿ ಅಡಗಿಕೊಂಡನು.

ಹಡಗವು ಮದ್ರಾಸವನ್ನು ಮುಟ್ಟುವವರೆಗೆ ಅವನು ಅಲ್ಲಿಯೇ ತಲೆತಪ್ಪಿಸಿಕೊಂಡಿದ್ದು ಮದ್ರಾಸ ಬಂದರದಲ್ಲಿ ಅಧಿಕಾರಿಗಳನ್ನು ವಂಚಿಸಿ ಪಟ್ಟಣವನ್ನು ಪ್ರವೇಶಿಸಿದನು. ಅಲ್ಲಿ ಕುಸ್ತೀ ಆಟದಲ್ಲಿ ಭಾಗವಹಿಸಿ ಒಂದು ಕುಸ್ತಿ ಒಗೆದು ಬಂದ ಪಾರಿತೋಷಕದಿಂದ ಲಾಹೋರಿಗೆ ಪ್ರಯಾಣ ಬೆಳೆಸಿದನು. ಅಲ್ಲಿ ತನಗೆ ಶಿಕ್ಷೆ ಕೊಟ್ಟ ನ್ಯಾಯಾಧೀಶನ ಮುಯ್ಯಿ ತೀರಿಸಬೇಕೆಂದು ಎಷ್ಟು ಹೊಂಚು ಹಾಕಿದರೂ ಸಾಧಿಸದ್ದರಿಂದ ಅದನ್ನು ಬಿಟ್ಟು ಅಮೃತಸರದಲ್ಲಿಯ ತನ್ನ ಒಬ್ಬ ಶತ್ರುವಿನ ಸಮಾಚಾರವನ್ನು ತೆಗೆದುಕೊಳ್ಳಬೇಕೆಂದು ಹೋಗಲು ರೋಶನಶಾ ಎಂಬ ಪೋಲೀಸ ಅಧಿಕಾರಿಯು ಆಕಸ್ಮಾತ್ತಾಗಿ ಹಿಡಿದನು. ಮುಂದೆ ಅವನ ಪುನರ್ವಿಚಾರಣೆಯು ಶೆಶನ್ಸ ಕೋರ್ಟಿನಲ್ಲಿಯಾಗತಕ್ಕದ್ದಿತ್ತು. ಅಷ್ಟರಲ್ಲಿ ೨೨-೯-೩೩ನೆಯ ತಾರೀಖಿನ ದಿವಸ ಬೆಳಗಿನ ನಾಲ್ಕು ಗಂಟೆಗೆ ಕಾರಾಗೃಹದಿಂದ ಪುನಃ ಕಾಲ್ದೆಗೆದಿದ್ದಾನೆ. ಇನ್ನೂವರೆಗೆ ಅವನ ಸುದ್ದಿಯೇ ಇಲ್ಲ. ಕಳ್ಳತನದಲ್ಲ ಇವನನ್ನು ಸರಿಗಟ್ಟುವವರಿರುವರೇ?

ಸುಧಾರಿಸಿದ ಕಳ್ಳನು.

ಕಳೆದ ಅಗಸ್ಟ ತಿಂಗಳಿನಲ್ಲಿ ವ್ಹಾಯಿಸ ರಾಯರನ್ನು ಭೆಟ್ಟಿಯಾಗುವದಕ್ಕಾಗಿ ನವಾನಗರದ ರಾಜರಾದ ಜಾಮುಸಾಹೇಬರು ಮುಂಬಯಿಗೆ ಬಂದು ತಾಜಮಹಾಲ ವಿಶ್ರಾಂತಿ ಗೃಹದಲ್ಲಿಳಿದ ಕಾಲದಲ್ಲಿ ಅವರ ಹೆಸರಿನಿಂದ ಒಂದು ಟೆಲಿಫೋನ ಸುದ್ದಿಯು ಬಂದಿತು. ಅದರಲ್ಲಿ ಮಾತಾಡುವವರು ವ್ಹಾಯಸರಾಯರ ಪ್ರಾಯವ್ಹೇಟ ಸೆಕ್ರೇಟರಿಯೆಂದೂ ಮತ್ತು ತಾವು ಕಳುಹಿಸುವ ಒಬ್ಬ ಆಂಗ್ಲೋ ಇಂಡಿಯನ್ ಹುಡುಗನಿಗೆ ಹಣದ ಸಹಾಯ ಮಾಡಬೇಕೆಂದೂ ಬಿನ್ನಹವಿದ್ದಿತು.

ಜಾಮುಸಾಹೇಬರು ಬಂದವನ ಕೈಯಲ್ಲಿ ೨೦೦ ರೂ. ಹುಂಡಿಯನ್ನು ಕೊಟ್ಟರು. ಮರುದಿವಸವೂ ಪ್ರಾಯವ್ಹೇಟ ಸೆಕ್ರೆಟರಿಯವರ ಕಡೆಯಿಂದ ಗಂಟೆಬಾರಿಸಿತು. ಆವಾಗ್ಗೆ ಆ ಧ್ವನಿಯು ಬೇರೆಯಾಗಿದ್ದಿತು. ಈ ಮೋಸವನ್ನು ಕಂಡುಹಿಡಿಯಲು ಜಾಮುಸಾಹೇಬರು ಪೋಲೀಸರಿಗೆ ತಿಳಿಸಿದರು. ಪೋಲೀಸರು ಟೆಲಿಫೋನ ನಡಯಿಸುವವನಿಗೆ ಯಾರಾದರು ದೊಡ್ಡ ಅಧಿಕಾರಸ್ಥರ ವಿಷಯಕ್ಕೆ ಪ್ರಶ್ನಿಸಿದರೆ ತಮಗೆ ಸೂಚನೆ ಕೊಡಬೇಕೆಂಬದಾಗಿ ತಿಳಿಸಿದರು.

೩ ದಿವಸಗಳಾದ ಮೇಲೆ ತಾಜಮಹಾಲ ಗೃಹದಲ್ಲಿ ಕೆ. ವ್ಹಿ. ರೆಡ್ಡಿವೆಂಬುವವರು ಇರುವರೆ? ಎಂದು ಟೆಲಿಫೋನ ಬಂದಿತು. ಟೆಲಿಫೋನ ಕಾರಕೂನನು ಮಾತಾಡುವವನು ತಾನೇ ಕೆ.ವ್ಹಿ ರೆಡ್ಡಿ ಎಂದು ಹೇಳಿದನು. ಆವಾಗ್ಗೆ ಆ ಇನ್ನೊಬ್ಬ ಮನುಷ್ಯನು ತಾನು ವ್ಹಾಯಿಸ ರಾಯರ ಪ್ರಾಯವ್ಹೇಟ್ ಸೆಕ್ರೇಟರಿಯೆಂದೂ ತಾವೇ ಕೆ.ವ್ಹಿ. ರೆಡ್ಡಿ ಆದರೆ ರಾತ್ರಿ ತಮ್ಮಲ್ಲಿ ಉಪಹಾರಕ್ಕೆ ಬರಬೇಕೆಂದೂ ಆದರೆ ಅಷ್ಟರೊಳಗೆ ನಾಲ್ಕು ಗಂಟೆಗೆ ತಾವು ಒಬ್ಬ ಹುಡುಗನಿಗೆ ಧನಸಹಾಯ ಮಾಡಬೇಕೆಂದೂ ತಿಳಿಸಿದರು.

ಈ ಸಂಗತಿಯನ್ನು ಆ ಟೆಲಿಫೋನ ಕಾರಕೂನನು ಪೋಲಿಸರಿಗೆ ತಿಳಿಸಿದನು. ಹೇಳಿದ ಪ್ರಕಾರ ಒಬ್ಬ ಆಂಗ್ಲೋ ಇಂಡಿಯನ್ನನು ಕೆ. ವ್ಹಿ. ರೆಡ್ಡಿ ಇವರನ್ನು ವಿಚಾರಿಸುತ್ತ ಬರಲು ಪೋಲಿಸ ಅಧಿಕಾರಿಯು ಅವನನ್ನು ಹಿಡಿದನು. ಅವನೇ ಪ್ರಾಯವ್ಹೇಟ ಸೆಕ್ರೇಟರಿಯ ಹೆಸರು ಹೇಳಿ ಜಾಮುಸಾಹೇಬರಿಂದ ೨೦೦ ರೂ. ಎಬ್ಬಿಸಿದವನಂತೆ ಇಂಥದೇ ಅಪರಾಧಕ್ಕಾಗಿ ಅವನಿಗೆ ಹಿಂದಕ್ಕೊಮ್ಮೆ ೧ ವರ್ಷ ಕಠಿಣಶ್ರಮ ಶಿಕ್ಷೆ ಯಾಗಿತ್ತಂತೆ. ನ್ಯಾಯಾಧೀಶರ ಮುಂದೆ ಅವನು ತನ್ನ ತಪ್ಪನ್ನು ಒಪ್ಪಿಕೊಂಡನು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಲ್ಲವೇ?

ನಮ್ಮ ಕಾರಖಾನೆಯನ್ನು ಬೆಳೆಸುವ ಸಲುವಾಗಿ ನಾವು ನಮ್ಮ ಮೊದಲಿನ ಸ್ಥಳ ಬಳ್ಳಾರಿಯನ್ನು ಬಿಟ್ಟು ಗದಗಿಗೆ ಬಂದಿರುವೆವು. ಇನ್ನು ಮುಂದೆ ಗದಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ಬಿನ್ನವಿಸುವೆವು.

ಕರ್ನಾಟಕ ಕೆಮಿಕಲ್ ವರ್ಕ್ಸ ಗದಗ

ರಾಜಗೃಹತೀರ್ಥ.

ಬಿಹಾರ ಪ್ರಾಂತದ ರಾಜಗೃಹದಲ್ಲಿ ಹಿಂದೂಗಳಿಗೆ ಬಹು ಪವಿತ್ರವಾದ ತೀರ್ಥಗಳಿವೆ. ಬೌದ್ಧಕಾಲದಲ್ಲಿ ಇವುಗಳಿಗೆ ಬಹು ಮನ್ನಣೆಯಿದ್ದಿತು. ಸದ್ಯಕ್ಕಾದರೂ ಈ ತೀರ್ಥಗಳ ಪಾವಿತ್ರ್ಯದ ಕುರುಹಿಂದು ಲಕ್ಷಾವಧಿ ಹಿಂದೂ ಜನರು ಪ್ರತಿ ವರ್ಷ ನೆರೆಯುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಪ್ರಾಂತದ ಎಲ್ಲ ಮುಸಲ್ಮಾನರು ಕೂಡಿ ಈ ತೀರ್ಥಗಳನ್ನು ಕಟ್ಟಲು ಮೊಗಲ ಬಾದಶಹರು ಸಹಾಯಮಾಡಿದರೆಂದೂ ಅವುಗಳಲ್ಲಿ ಪ್ರವೇಶಿಸಲು ಮತ್ತು ಅಲ್ಲಿ ಸ್ನಾನಮಾಡಲು ತಮಗೆ ಅನುಕೂಲವಿರಬೇಕೆಂದೂ ನ್ಯಾಯಸ್ಥಾನದಲ್ಲಿ ಕೇಳಿಕೊಂಡರು. ಆದರೆ ಅದು ಹಿಂದೂಗಳಂತೆಯೇ ಆಗಲು ಜಿಲ್ಲಾ ನ್ಯಾಯಾಲಯದಲ್ಲಿ ಮುಸಲ್ಮಾನರು ಪುನಃ ಕೆಲಸನಡೆಸಿದರು. ಇದು ಪ್ರಚಂಡವಾದ ಕಾರ್ಯವಾಗಿದ್ದಿತು. ಉಭಯ ಪಕ್ಷಗಳ ಕಡೆಯಿಂದ ನೂರಾರು ದೊಡ್ಡ ದೊಡ್ಡ ಗೃಹಸ್ಥರ ಸಾಕ್ಷಿಗಳಾದವು. ಕಡೆಗೆ ನಿರ್ಣಯವು ಹಿಂದುಗಳಂತೆಯೇ ಆದುದಲ್ಲದೆ ಮುಸಲ್ಮಾನರು ನ್ಯಾಯದ ವೆಚ್ಚಸಹಿತವಾಗಿ ಕೊಡಬೇಕಾಯಿತು.

ಇದೇ ಪ್ರಕಾರ ಕಾಶ್ಮೀರೀಮುಸಲ್ಮಾನರು ಕಾಶ್ಮೀರದ ಅನಂತನಾಗಕುಂಡದಲ್ಲಿ ಸ್ನಾನ ಮಾಡಲು ಮತ್ತು ನಮಾಜಮಾಡಲು ಅನುವು ದೊರೆಯಬೇಕೆಂದು ಮಾಡಿದರು. ಸಂಘಶಕ್ತಿಯಿಂದ ಬೇಕಾದ ಕಾರ್ಯವನ್ನು ಮಾಡಬಲ್ಲೆವೆಂದು ಮುಸಲ್ಮಾನರಿಗೆ ಅನಿಸುತ್ತದೆ. ಹಾಗೆಯೆ ಹಿಂದುಗಳು ಐಕ್ಯರಾದರೇನೇ ಜಯಹೊಂದುವರಲ್ಲದೆ ಅನೈಕ್ಯತೆಯಿಂದ ಬಲಹೀನರಾಗುವರೆಂಬುದು ಒಡೆದು ಕಾಣುವದಲ್ಲವೇ ?

ಆದರ್ಶ ಅಹಮುದಾಬಾದ

ಮಹಾತ್ಮಾಜಿಯವರು ಅಹಮುದಾಬಾದ ನಗರ ಸಭೆಯ ಗ್ರಂಥಾಲಯ ಕಟ್ಟಡದ ಶಂಕುಸ್ಥಾಪನೆಯ ಕಾಲದಲ್ಲಿ ಹೇಳಿದ್ದೇನಂದರೆ—

" ನೀವು ನನ್ನನ್ನು ವಿಶೇಷವಾಗಿ ಸ್ತುತಿಸಿರುವಿರಿ. ಆದರೆ ಈ ಗ್ರಂಥಗಳನ್ನು ನಿಜವಾಗಿ ಸಂಗ್ರಹಿಸಿದವರೆಂದರೆ ಸ. ವಲ್ಲಭಭಾಯಿ ಪಟೇಲರು ಮತ್ತು ಶ್ರೀ ಕಾಕಾಕಾಲೇಲಕರ ಇವರು. ಶ್ರೀ ವಲ್ಲಭಭಾಯಿಯವರಿಗೆ ಬಹು ದಿವಸಗಳಿಂದಲೂ ಅಹಮುದಾಬಾದ ಪಟ್ಟಣವನ್ನು ಒಂದು ಆದರ್ಶಪಟ್ಟಣವನ್ನಾಗಿ ಮಾಡಬೇಕೆಂಬ ಆಶೆಯಿದ್ದಿತು. ಅವರ ಅನುಮತಿಯಂತೆಯೇ ನಾನು ಈ ಗ್ರಂಥಗಳನ್ನು ಅರ್ಪಿಸಿದ್ದೇನೆ.,,

ಅಹಮುದಾಬಾದ ನಾಗರಿಕರು ಶ್ರೀ ವಲ್ಲಭಭಾಯಿಯವರ ಈ ಔದಾರ್ಯವನ್ನು ಎಷ್ಟು ಕೊಂಡಾಡಿದರೂ ತೀರದು,

ಸ್ವಾರ್ಥದ ಸುಲಿಗೆ

ಚೀನದಲ್ಲಿ ಕೆಲವು ದೊಂಬೆಗಾರರು ದೊಂಬೆಯನ್ನೆಬ್ಬಿಸಿ ತಮ್ಮ ಸಂರಕ್ಷಣಕ್ಕಾಗಿ ಹೊ ಆಂಗ ಹೊ ನದಿಯ ಕಾಲುವೆಯ ಒಡ್ಡನ್ನು ಒಡೆದರು. ಆದರಿಂದ ನೀರು ಸುತ್ತಲೆಲ್ಲ ವ್ಯಾಪಿಸಿ ಸಮೀಪದ ಹಳ್ಳಿಗಳನ್ನು ಜಲಮಯವನ್ನಾಗಿ ಮಾಡಿತು. ಆದಕಾರಣ ೫೦೦೦೦ ಜನರು ಮುಳುಗಿ ಹೋದರಲ್ಲದೆ ೧೦ ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಅವರು ಉಪವಾಸ ತಡೆಯಲಾರದೆ ತಮ್ಮ ಮಕ್ಕಳನ್ನು ಬೇಗೆ ಬಂದಂತೆ ಮಾರಿ ಹೊಟ್ಟೆ ಹೊರೆಯುತ್ತಿದ್ದಾರೆ.

ಸುಲಿಗೆ, ಜಲಪ್ರಲಯ, ಕ್ಷಾಮ, ಪರರಾಜರ ಆಕ್ರಮಣ, ಒಳದಾವೀ ಕಲಹ ಮೊದಲಾದವುಗಳಿಂದ ಅಹಿಸಾ ತತ್ವವನ್ನನುಸರಿಸುವ ಆ ದೇಶದಲ್ಲಿ ಹಿಂಸೆಯೇ ವಿಶೇಷವಾಗಿ ನಡೆದಿರುವದು.

ಶುದ್ಧ ಸ್ವದೇಶಿ ಪೇಟಿ,

ಮುಂಬಯಿಯಲ್ಲಿರುವ ಸೂರಜಿ ವಲ್ಲಭದಾಸರ ಶುದ್ಧ ಸ್ವದೇಶಿ ಪೇಟಿಗೆ ಶ್ರೀಮತಿ ಸರೋಜಿನಿ ನಾಯಡು ಇವರು ಹೋಗಿದ್ದರು. ಅಲ್ಲಿ ಗೃಹಕೃತ್ಯಕ್ಕೆ ಬೇಕಾಗುವ ಪ್ರತಿಯೊಂದು ವಸ್ತುವನ್ನು ಸ್ವದೇಶದಲ್ಲಿಯೇ ಸಿದ್ಧಪಡಿಸಿ ಅಂದವಾಗಿ ಇಟ್ಟಿದ್ದರು.

ಶ್ರೀ ಸರೋಜಿನಿ ದೇವಿಯವರು ಪ್ರತಿಯೊಂದು ವಸ್ತುವನ್ನು ಲಕ್ಷ ಪೂರ್ವಕವಾಗಿ ಪರೀಕ್ಷಿಸಿ ಅವು ಶುದ್ಧ ಸ್ವದೇಶಿಯೆಂದು ಅಭಿಪ್ರಾಯ ಪಟ್ಟರು. ಅವರು ಸ್ವದೇಶಿ ಪೇಟೆಯ ವಿಷಯವಾಗಿ ತಮಗೆ ಅನಿಸಿದುದನ್ನು ವಿವರಿಸುತ್ತ ಹೇಳಿದುದೇನಂದರೆ " ಸಂಸಾರೋಪಯುಕ್ತ ಸಾಮಾನುಗಳನ್ನು ಹಿಂದುಸ್ಥಾನವು ಎಷ್ಟರ ಮಟ್ಟಿಗೆ ಸಿದ್ಧಪಡಿಸಬಲ್ಲದೆಂಬುದನ್ನು ನಿದರ್ಶನಕ್ಕೆ ತಂದುಕೊಡಲು ಈ ಸ್ವದೇಶಿ ಪೇಟೆಯು ಬಲವಾದ ಸಾಧನವಾಗಿದೆ. ಈ ಪೇಟೇಯಲ್ಲಿ ಪ್ರತಿಯೊಂದು ಸ್ವದೇಶೀ ಪದಾರ್ಥವೇ ಇದ್ದರೂ ಅವುಗಳ ಬೆಲೆಯು ಮಾತ್ರ ಹಾಳತಾಗಿರುತ್ತದೆ ಯಾಕಂದರೆ ಇದನ್ನು ಬಹಳ ಲಾಭ ಮಾಡಿಕೊಳ್ಳುವದಕ್ಕಾಗಿ ಏರ್ಪಡಿಸಿಲ್ಲ. ಆದರೆ ಇದೊಂದು ಸ್ವದೇಶೀ ಪ್ರಸಾರಣೆಯನ್ನು ಬೋಧಿಸುವ ಪೇಟೆಯಾಗಿದೆ."

ಈ ಪ್ರಕಾರದ ಸ್ವದೇಶೀ ವಸ್ತುಗಳ ಅಂಗಡಿಗಳು ಮತ್ತು ಪೇಟೆಗಳು ಹೆಚ್ಚಿದಲ್ಲಿ ಜನರ ಸ್ವದೇಶಾಭಿಮಾನವೂ ವ್ಯಕ್ತವಾಗುವುದಲ್ಲದೆ ಸ್ವದೇಶಕ್ಕೂ ನಿಜವಾದ ಕಲ್ಯಾಣವಾಗುವದಲ್ಲವೆ?

ರಾಷ್ಟ್ರೀಯ ಸಭೆಯು ಇನ್ನೂ ಸತ್ತಿಲ್ಲ.

ಶ್ರೀಮತಿ ಸರೋಜನಿ ದೇವಿಯವರು ದಸರಾ ಮಹೋತ್ಸವದ ಕಾರಣದಿಂದ ಮುಂಬಯಿಯಲ್ಲಿ ತರುಣರಿಗೆ ಉಪದೇಶ ಮಾಡುತ್ತಿರುವಾಗ ಹೇಳಿದುದೇನಂದರೆ—

"ಮಹಾತ್ಮಾ ಗಾಂಧಿಯವರ ಮನಸ್ಸಿನಲ್ಲೇನಿದೆ? ಅವರು ಒಂದು ವರ್ಷದವರೆಗೆ ವಿಶ್ರಾಂತಿ ತೆಗೆದು ಕೊಳ್ಳುವರೋ ಅಥವಾ ಹರಿಜನ ಕಾರ್ಯವೆಂಬ ರಾಜಕೀಯ ಯುಕ್ತಿಯನ್ನು ಹೂಡಿರುವರೋ? ಎಂದು ಎಷ್ಟೋ ಜನರಿಗೆ ಸಂಶಯವಾಗಿದೆ. ಆದರೆ ಆ ಸರಳ ಸ್ವಭಾವದ ಮಹಾತ್ಮಾಜಿಯು ರಾಜಕೀಯ ಯುಕ್ತಿಗಳಲ್ಲಿ ಈ ದಕ್ಷಿಣ ಬ್ರಾಹ್ಮಣರಿಗೆ ಹೇಗೆ ಸರಿಯಾದಾನು? ನಿಜವಾದ ಸರಳ ಸ್ವಭಾವದಿಂದ ಅವರು ನಾನು ಒಂದು ವರುಷದವರೆಗೆ ಅಸ್ಪೃಶ್ಯೋದ್ಧಾರಕ ಕಾರ್ಯವನ್ನು ಮಾಡುತ್ತೇನೆಂದು ಹೇಳುತ್ತಾರೆ. ಈ ಒಂದು ವರುಷವು ಒತ್ತಾಯದ ವಿಶ್ರಾಂತಿಯಲ್ಲ, ಆದರೆ ಜಾಗೃತಿಯ ಮತ್ತು ಆತ್ಮೋನ್ನತಿಯ ವರ್ಷವಾಗಿದೆ. ಹರಿಜನರಿಗೆ ಕೊಟ್ಟ ಆಶ್ವಾಸನಕ್ಕಾಗಿಯೇ ಅವರು ಈ ಕಾರ್ಯವನ್ನು ಪ್ರಾರಂಭಿಸಿರುವರು. ಆದರೆ ತಮ್ಮ ಮಿದುಳು ದಣಿದಿದೆಯೆಂದಲ್ಲ ಮತ್ತು ರಾಷ್ಟ್ರೀಯ ಸಭೆಯು ಸತ್ತಿರುವುದಿಲ್ಲ. ಆದರೆ ಅದು ಪುನಃ ತನ್ನ ಕ್ಷಣಿಕ ನಿದ್ರಾವಸ್ಥೆಯಿಂದ ಜಾಗೃತವಾಗಿ ತಲೆ ಎತ್ತುವುದು.

ಮಹಾತ್ಮಾಜಿಯವರ ಕಾರ್ಯಕ್ರಮದ ವಿಷಯಕ್ಕೆ ಸಂಶಯಪಡುವಂಥವರು ಇನ್ನಾದರೂ ಸಂಶಯ ಪರಿಹಾರ ಮಾಡಿಕೊಳ್ಳುವರೋ?

ಹಸಿವೆಗಾಗಿ ಕಳವು

ಅಮೃತಸರದಲ್ಲಿ ಒಂದು ಹಿಟ್ಟಿನ ಗಿರಣಿಯಲ್ಲಿ ೧೦ ಹಿಟ್ಟಿನ ಚೀಲಗಳು ಮಾಯವಾದುದು ಕಂಡುಬಂತು. ಆ ಸ್ಥಳದಲ್ಲಿ ಬಿದ್ದ ಒಂದು ಕಾಗದದ ತುಂಡಿನಲ್ಲಿ ಕಳ್ಳರು ನಾವು ಹಸಿವೆಯನ್ನು ತಡೆಯಲಾರದೆ ಈ ಕಳ್ಳತನವನ್ನು ಮಾಡಿದೆವೆಂದು ಬರೆದಿದ್ದಾರೆ.

ಪತ್ರಗಳ ಸಾರಾಂಶ.

ಸ್ತುತ್ಯ ಉಪಕ್ರಮ.

ಈ ಸಾರೆಯ ಬಸವಜಯಂತಿಯ ಕಾಲದಲ್ಲಿ ಉಪನ್ಯಾಸ ಮಾಡಿದುದಕ್ಕೆ ರಾ. ಚನ್ನಮಲ್ಲಪ್ಪ ನಾಡಗೌಡ ಮಾನ್ವಿ ಇವರ ಮನೆಗೆ ಇಲ್ಲಿಯ ಮಠಾಧಿಪತಿಗಳು ಯಾವ ಕಾರ್ಯಕ್ಕೂ ಹೋಗ ಬಾರದೆಂದು ನಿಶ್ಚಯಿಸಿಕೊಂಡ ಸಂಗತಿಯು ಶರಣಸಂದೇಶದ ಕಳೆದ ೪೩ನೆಯ ಸಂಚಿಕೆಯಲ್ಲಿ ಪ್ರಕಟವಾಗಿದೆಯಷ್ಟೆ!

ಪ್ರತಿಯೊಬ್ಬ ಲಿಂಗಾಂಗಿಯು ಸಾಮಾನ್ಯ, ವಿಶೇಷ, ನಿರಾಭಾರಿ ಎಂಬ ಮೂರು ಉಚ್ಚ ತರಗತಿಯ ಸೋಪಾನಗಳನ್ನು ಸತ್ಕರ್ಮಗಳಿಂದ ಹತ್ತಬಹುದೆಂದು ನಮ್ಮ ವೀರಶೈವ ಧರ್ಮವು ಗಂಟಾಘೋಷವಾಗಿ ಬೋಧಿಸುತ್ತಿರುವಾಗ ನಾವು ಜನ್ಮಾಂತರವರೆಗೂ ಸಾಮಾನ್ಯ ವೀರಶೈವರಂತೆ ಕಾಲ ಕಳೆಯುವುದು ವಿಹಿತವೇ? ಎಂಬ ಯುಕ್ತಿಗನುಸರಿಸಿ ಪ್ರಸಾದಿಕರಾದ ಇಲ್ಲಿಯ ಶ್ರೀ ನಾಡಗೌಡ ಚನ್ನಮಲ್ಲಪ್ಪನವರು ತಮ್ಮ ಸುಪುತ್ರಿಯು ಪ್ರಸೂತಳಾದ ಮೇಲೆ ಇದೇ ಆಶ್ವೀಜ ಶುದ್ಧ ೪ ಶನಿವಾರ ದಿವಸ ವಿಧಿವತ್ತಾಗಿ ಶಿಶುವಿಗೆ ಲಿಂಗಧಾರಣೆಯನ್ನು ಸ್ವತಃ ಮಾಡಿದರು. ಇವರಂತೆ ನಮ್ಮಲ್ಲಿಯ ಅನೇಕರು ಸತ್ಕರ್ಮಗಳಿಂದ ಒಂದೊಂದು ಮೆಟ್ಟಲುಗಳನ್ನು ಹತ್ತಿ ಆ ಪ್ರಕಾರ ನಡೆಯುವುದು ಸ್ತುತ್ಯವಾದುದಾಗಿದೆ. ಈ ರೀತಿ ಎಲ್ಲರೂ ಆಚರಿಸಲು ಪ್ರಯತ್ನಿಸಿದಲ್ಲಿ ಆ ಬಸವ ಭಾನುವಿನ ಉದಯವು ಬೇಗನೆ ಆಗುವುದರಲ್ಲಿ ಸಂದೇಹವೇ? ಎಂದು ಮಾನ್ವಿಯ ಸಮಾಜಸೇವಕರಾದ ವಿ. ಬಿ. ಬಿದರ್‌ಕರ್‌ರವರು ತಿಳಿಸುತ್ತಾರೆ.

ಕಲ್ಲಬುರ್ಗಿ ವೀರಶೈವರ ಮನಃಕ್ಷೋಭೆ.

ಕಲ್ಲಬುರ್ಗಿಯಲ್ಲಿ ವೀರಶೈವರ ಜನಸಂಖ್ಯೆಯು ೧೧-೧೨ ಸಾವಿರಕ್ಕೆ ಮಿಕ್ಕಿದೆ. ವ್ಯಾಪಾರೋದ್ಯೋಗಗಳಲ್ಲಿಯೂ, ಧಾರ್ಮಿಕ ರಾಜಕೀಯ ವಿದ್ಯೆಗಳಲ್ಲಿಯೂ ಮುಂದರಿಯುತ್ತಲಿದ್ದಾರೆ. ಪ್ರತಿವರ್ಷ ಶ್ರಾವಣ ಮಾಸದಲ್ಲಿ ಎಲ್ಲ ಓಣಿಗಳಲ್ಲಿಯೂ ಪುರಾಣ ಪ್ರವಚನಗಳನ್ನು ಹೇಳಿಸಿ ಕೊನೆಗೆ ಪಲ್ಲಕ್ಕಿಯ ಮೆರವಣಿಗೆಯನ್ನು ಭಜನಾ, ಪೂರ್ವಾಂತ ಮೊದಲಾದ ವೈಭವಗಳಿಂದಲೂ ಛತ್ರ ಚಾಮರ ಚಿನ್ಹಗಳಿಂದಲೂ ಹೊರಡಿಸುವ ಸಾಂಪ್ರದಾಯವು ಬಹು ದಿವಸಗಳಿಂದ ಬಂದುದಾಗಿದೆ. ಅವ್ಯಾಹತವಾಗಿ ನಡೆದುಬಂದ ಈ ಸಾಂಪ್ರದಾಯಕ್ಕೆ ಹಿಂದುಗಳಲ್ಲಿಯೇ ಅನೈಕ್ಯವುಂಟಾಗಿ ತಡೆಯುಂಟಾಗಿರುವದು ಅತ್ಯಂತ ಶೋಚನೀಯ ಸಂಗತಿಯಾಗಿದೆ. ಇಲ್ಲಿಯ ಕೆಲವು ಜನ ಬ್ರಾಹ್ಮಣ ಮತ್ತು ಕ್ಷತ್ರಿಯರು ಲಿಂಗಾಯತರ ಹೆಚ್ಚಳವನ್ನು ಸಹಿಸದೆ ಅಸೂಯೆಯಿಂದ ಈ ಉತ್ಸವಗಳಿಗೆ ಆತಂಕವನ್ನುಂಟುಮಾಡಬೇಕೆಂದು ಪಲ್ಲಕ್ಕಿಯ ಮುಂದೆ ಪೂರ್ವಾಂತವನ್ನು ಮೆರೆಯಿಸಕೂಡದೆಂತಲೂ, ಒಂದು ವೇಳೆ ಮೆರೆಯಿಸಲೇ ಬೇಕೆಂದಿದ್ದರೆ ಪೂರ್ವಾಂತರು ಧರಿಸುವ ನೃಸಿಂಹನ ಮೂರ್ತಿಯನ್ನು ಕಟ್ಟಕೂಡದೆಂತಲೂ, ಧರಿಸುವದು ತಮಗೆ ಅತ್ಯಂತ ಅಪಮಾನಾಸ್ಪದವಾದ ಸಂಗತಿಯೆಂತಲೂ ಬಗೆದು ಇಲ್ಲಿಯ ಕಲೆಕ್ಟರರ ಮುಂದೆ ದೂರು ಹೇಳಿಕೊಂಡಿರುವರು. ಈ ವಿಚಾರವಾಗಿ ಯಾವುದನ್ನೂ ಅರಿಯದ ಕಲೆಕ್ಟರ್ ಸಾಹೇಬರು ಬ್ರಾಹ್ಮಣರ ಮಾತಿಗೆ ಮನಸೋತು ಮೊದಲು ಲಿಂಗಾಯತರು ಮಾಮಲೇದಾರರಿಂದ ಅಪ್ಪಣೆಯನ್ನು ಪಡೆದುಕೊಂಡಿದ್ದರೂ ಪ್ರತಿಬಂಧದ ಅಪ್ಪಣೆಯನ್ನು ವಿಧಿಸಿದರು. ಇದರಿಂದ ಹಿಂದು ಹಿಂದುಗಳಲ್ಲಿಯೇ ಮನಸ್ತಾಪವಾಗಿ ಕಲ್ಲಬುರ್ಗಿಯಲ್ಲಿ ಭಯಂಕರವಾದ ಧಾರ್ಮಿಕ ಗಲಭೆಯುಂಟಾಗಿದೆ.

ಸನಾತನ ಕಾಲದಿಂದಲೂ ನಡೆದುಬಂದ ನೃಸಿಂಹ ಮೂರ್ತಿಯ ಧಾರಣವು ಈಗೇಕೆ ಇವರಿಗೆ ಸರಿಬೀಳದೋ ತಿಳಿಯದಾಗಿದೆ. ಪರಧರ್ಮ ಸಹಿಷ್ಣುತೆಯು ಒಂದು ಶ್ರೇಷ್ಠ ಗುಣವಾಗಿದೆಯೆಂದು ಇನ್ನೂ ಇವರಿಗೆ ತಿಳಿದಿಲ್ಲೇ? ಹಿಂದುಹಿಂದುಗಳಲ್ಲಿಯೇ ವ್ಯರ್ಥವಾಗಿ ಮತವೈಷಮ್ಯವನ್ನು ಬೆಳೆಯಿಸಿ ಅನೈಕ್ಯತೆಯನ್ನು ಹಬ್ಬಿಸುವುದು ಯೋಗ್ಯವೇ? ವೀರಶೈವರು ನೃಸಿಂಹ ಮೂರ್ತಿ ಧರಿಸುವುದನ್ನು ಈಚೆಗೆ ಪ್ರಾರಂಭಿಸುವರೋ ಅಥವಾ ಪುರಾತನ ಕಾಲದಿಂದ ಬಂದಿದೆಯೆ? ಇವೇ ಮೊದಲಾದ ಸಂಗತಿಗಳನ್ನು ಬ್ರಾಹ್ಮಣ ಮತ್ತು ಕ್ಷತ್ರಿಯ ಬಂಧುಗಳು ಶಾಂತ ಚಿತ್ತದಿಂದ ವಿಚಾರಿಸಿ ಈ ಪ್ರಕಾರ ಧಾರ್ಮಿಕ ಗಲಭೆಯನ್ನೆಬ್ಬಿಸುವುದನ್ನು ಬಿಟ್ಟುಕೊಡಬೇಕೆಂದು ಕಲ್ಲಬುರ್ಗಿಯ ಓರ್ವ ನಿವಾಸಿಗಳು ತಿಳಿಸುತ್ತಾರೆ.

ಜೀವದಯಾ ಸಂಘದ ಕಾರ್ಯ.

ಗದಗಿನ ಜೀವದಯಾ ಸಂಘದ ಶ್ರೀ. ಗುರುಪಾದಪ್ಪ ಕಲ್ಯಾಣಶೆಟ್ಟಿ ಇವರು ತಮ್ಮ ಮಂಡಳಿಯವರೊಡನೆ ಹುಬ್ಬಳ್ಳಿಗೆ ಹೋಗಿ ಅಲ್ಲಿ ಹುಬ್ಬಳ್ಳಿ ಮತ್ತು ದಾವಣಗೆರೆ ಸಂಘದವರ ಜತೆಯಲ್ಲಿ ನಾಲ್ಕು ದಿವಸಗಳವರೆಗೆ ತಮ್ಮ ಪ್ರಚಾರಕಾರ್ಯವನ್ನು ಪೂರೈಸಿಕೊಂಡು ಗದಗಿಗೆ ಬಂದರು. ಇಲ್ಲಿಯ ಚಂದ್ರಶಾಲಿ ಕ್ಷತ್ರಿಯರವರ ಓಣಿಯಲ್ಲಿ ಎರಡು ದಿವಸ ಸಭೆಸೇರಿ ಬಂಕದಕಟ್ಟಿ ದಾಸಯ್ಯನವರ ಪದಗಳಿಂದಲೂ, ದಾವಣಗೇರೆಯ ಶ್ರೀ. ತಿಪ್ಪನವರ ಕೀರ್ತನೆಯಿಂದಲೂ, ಶ್ರೀ. ಗುರುಪಾದಪ್ಪನವರ ಭಾಷಣದಿಂದಲೂ ಜನರ ಮೇಲೆ ವಿಶೇಷ ಪರಿಣಾಮವಾಗಿ ನೆರೆದ ಜನರಲ್ಲಿಯ ಶ್ರೀ. ಪರಶುರಾಮ ಕಬಾಡಿ ಮತ್ತು ಶ್ರೀ. ತುಳಜಾರಾಮ ಕಬಾಡಿ ಎಂಬಿಬ್ಬರು ಸಭಾ ಮಧ್ಯದಲ್ಲಿ ಎದ್ದು ನಿಂತು ತಾವು ಇನ್ನು ಮುಂದೆ ಮಾಂಸ ಸೇವನೆ ಮಾಡುವುದಿಲ್ಲವಾಗಿ ಪ್ರತಿಜ್ಞೆ ಮಾಡಿದರು. ಇವರ ಅನುಕರಣವನ್ನು ಇತರ ಜನಗಳೂ ಮಾಡಬೇಕೆಂದು ಓರ್ವ ಮಹಾಶಯರು ತಿಳಿಸಿದ್ದಾರೆ.

ಕೊಂಡಗೂಳಿಯಲ್ಲಿ ಗಾಂಧೀ ಜಯಂತಿ.

ತಾ. ೧-೧೦-೩೦ನೇ ದಿವಸ ಸಂಜೆಗೆ ಶ್ರೀ. ಶಂಕರಯ್ಯ ಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಅಸ್ಪೃಶ್ಯರ ವಿಷಯವಾಗಿ ಸಭೆ ಕೂಡಿತ್ತು. ಸಭೆಗೆ ಮೂರು ನಾಲ್ಕು ನೂರು ಜನರು ಸೇರಿದ್ದರು, ಸಭೆಯಲ್ಲಿ ಎಲ್ಲರೂ ಸ್ಪೃಶ್ಯಾಸ್ಪೃಶ್ಯ ಭೇದವಿಲ್ಲದೆ ಕೂಡಿಯೇ ಕುಳಿತಿದ್ದರು. ಶ್ರೀ. ಶಂಕರಗೌಡಾ ಪಡಗಾನೂರ ಇವರು ಅಸ್ಪೃಶ್ಯರನ್ನು ಮುಸಲ್ಮಾನ ಮೊದಲಾದ ಉಳಿದ ಜನರಂತೆ ಮುಟ್ಟಿಸಿಕೊಳ್ಳಲು, ಸಾರ್ವಜನಿಕ ಭಾವಿಯಲ್ಲಿ ನೀರಿಗೆ ಬರಗೊಡಲು ಏನೂ ಅಭ್ಯಂತರವಿಲ್ಲೆಂದು ಸ್ಫೂರ್ತಿದಾಯಕ ಭಾಷಣ ಮಾಡಿದರು. ಮತ್ತು ನಿಜಲಿಂಗ ಎಂಬ ಮಾದರ ಹುಡುಗನು ವ್ಯಾಖ್ಯಾನ ಮಾಡಿದನು.

ಮರುದಿವಸ ಶೃಂಗಾರವಾದ ಮಂಟಪದಲ್ಲಿ ಗಾಂಧೀಜಿಯವರ ಫೋಟೋ ಕೂಡಿಸಿ ಪೂಜೆ ಮಾಡಲ್ಪಟ್ಟಿತು. ಸಂಜೆಗೆ ಸಭೆ ಸೇರಿ ಶ್ರೀ. ಶಂಕರಗೌಡಾ ಇವರು ಗಾಂಧಿಯವರ ಚರಿತ್ರವನ್ನು ಗಾಂಧಿ ಜಯಂತಿಯ ಆವಶ್ಯಕತೆಯನ್ನೂ ಹೇಳಿದರು. ಅನಂತರ ಸದರೀ ಶಂಕರಗೌಡ ಇವರು ಕೀರ್ತನೆ ಮಾಡಿದರು. ಈ ಜಯಂತಿ ಉತ್ಸವದಲ್ಲಿ ಬಲವಂತಪ್ಪನೆಂಬವರು ಸರ್ವ ಕಾರ್ಯವನ್ನು ವಹಿಸಿದ್ದರೆಂದು ಶ್ರೀ. ಅಯ್ಯನಗೌಡಾ ಪಾಟೀಲ ಇವರು ತಿಳಿಸುತ್ತಾರೆ.

ಶೋಚನೀಯ ನಿಧನ.

ಶ್ರೀಮನ್ನಿರಂಜನ ಶ್ರೀ ಬಸವಲಿಂಗ ಮಹಾಸ್ವಾಮಿ ನಾಗಣಸೂರ ಇವರು ಕಲಬುರ್ಗಿಯಲ್ಲಿ ತಮ್ಮ ವಯಸ್ಸಿನ ೩೫ನೆಯ ವರುಷದಲ್ಲಿಯೇ ತಾ. ೧-೧೦-೩೩ನೆಯ ರವಿವಾರ ರಾತ್ರಿ ೭-೪೫ಕ್ಕೆ ವಿಷಮಜ್ವರದಿಂದ ಲಿಂಗೈಕ್ಯರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಸಮಾಚಾರ ಸಂಗ್ರಹ.

—ಜಿನೆವಾದ ಅಂತರ ರಾಷ್ಟ್ರೀಯ ಸಭೆಯಲ್ಲಿ ಭಾರತೀಯ ಪ್ರತಿನಿಧಿಗಳಾದ ಸರ್. ಬಿ.ಎಲ್. ಮಿತ್ರ ಇವರು " ಮಹಾಯುದ್ಧದ ಅನಾಹುತವನ್ನು ಮರೆತು ಜಗತ್ತು ಪುನಃ ಶಾಂತತಾ ರಹಿತವಾಗಿದೆ. ಆದರೆ ಭಾರತ ದೇಶವೊಂದೇ ತನಗೇ ಅಲ್ಲದೆ ಪ್ರಪಂಚಕ್ಕೆ ಶಾಂತಿಯನ್ನು ಇಚ್ಛಿಸುತ್ತದೆ " ಎಂದು ಹೇಳಿದರು.

—ಇಂದೂರಿನಲ್ಲಿ ಕುರುಬರ ಜಾತಿಯ ಗಾವಡೆ ಎಂಬ ಚಿತ್ರಕಾರನು ತೆಗೆದ ಕಾಕರರ ಎಂಬ ಚಿತ್ರವನ್ನು ಹಾಲಂಡದಲ್ಲಿಯ ವಸ್ತು ಸಂಗ್ರಹಾಲಯದಲ್ಲಿಡಲು ತೆಗೆದುಕೊಂಡಿದ್ದಾರೆ.

—ಬ್ರಿಟಿಶ್ ಪಾರ್ಲಿಮೆಂಟದ ಸದಸ್ಯರಾದ ಮಿ. ಹೇನ್ಸ ಇವರು ಮಹಾತ್ಮಾಜಿಯವರ ವರ್ಧಂತಿಯ ದಿವಸ ಸರಕಾರದ ಸಂಗಡ ಸಹಕಾರ ಮಾಡಿ ಸರ್ವಜಾತಿಗಳಿಗೆ ಸಮ್ಮತವಾದ ಸ್ವರಾಜ್ಯವನ್ನು ಶೀಘ್ರವೇ ಸಂಪಾದಿಸಿರೆಂದು ಠಾರು ಮಾಡಿದ್ದಾರೆ.

—ಕಲಕತ್ತೆಯ ಪ್ರಫುಲ್ಲ ಕುಮಾರ ಬೋಸ ಎಂಬುವವರು ನೀರಿನಲ್ಲಿ ಈಸುತ್ತ ಒಟ್ಟಿಗೆ ೭೫ ತಾಸು ಮತ್ತು ೧೧ ಮಿನೀಟುಗಳವರೆಗೆ ಇದ್ದರು. ಜಗತ್ತಿನ ಈಸುವವರಲ್ಲ ಇವರೇ ಮೊದಲಿನವರಾದರು.

—ರೋಹಟಕ ಜಿಲ್ಹೆಯಲ್ಲಿ ಅತಿವೃಷ್ಟಿಯ ಅನರ್ಥದಿಂದ ಮುಕ್ಕಾಲುಪಾಲು ಮನೆಗಳೂ, ಕಟ್ಟಡಗಳೂ ಬಿದ್ದಿವೆ.

—ಚಿತಗಾಂಗದಲ್ಲಿ ತಲೆತಪ್ಪಿಸಿಕೊಂಡು ಹೋದ ಕೆಲ ಕ್ರಾಂತಿಕಾರರನ್ನು ಪೋಲೀಸರು ಕಾಮಿನಿ ಚೌಧರಿ ಇವರ ಮನೆಗೆ ಮುತ್ತಿಗೆ ಹಾಕಿ ಹಿಡಿದರು.

ಪುನರುತ್ತೇಜನೆ.

ಮುಂಬಯಿಯ ವರ್ತಕರಿಗೂ ಮತ್ತು ಬೇರೆಬೇರೆ ಸ್ಥಳಗಳ ವ್ಯಾಪಾರಿಗಳಿಗೂ ಸಂಪೂರ್ಣ ಪರಿಚಯವಿರುವ ಕೈ. ರಾ. ಬ. ಮಲ್ಲಪ್ಪ ಬಸಪ್ಪ ವಾರದ ಇವರ ಮುಂಬೈಯಲ್ಲಿಯ ಅಂಗಡಿಯು ಕಳೆದ ಕೆಲವು ವರ್ಷಗಳಿಂದಲೂ ಸುಪ್ತಾವಸ್ಥೆಯಲ್ಲಿದ್ದುದು ಸರಿಯಷ್ಟೇ. ಆದರೆ ಕೈ. ಅಪ್ಪಾಸಾಹೇಬರವರ ಚಿರಂಜೀವರಾದ ಚನಬಸಪ್ಪ ಮಲ್ಲಪ್ಪ ವಾರದ ಇವರು ಈಗ ಅತ್ಯಂತ ಉತ್ಸಾಹದಿಂದ ಪುನ: ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ. ಸಾಧಾರಣವಾಗಿ ಪರಿಚಿತವಿರುವ ಎಲ್ಲ ವ್ಯಾಪಾರಸ್ಥರಿಗೂ ಈ ಸಂಬಂಧವಾಗಿ ಪತ್ರಗಳ ಮೂಲಕವೇ ತಿಳಿಸಿದ್ದಾಗಿದೆ. ಯಾರಿಗೆ ಮರೆತು ಆ ಸಂಬಂಧದ ಪತ್ರಗಳನ್ನು ಕಳಿಸಿಲ್ಲವೋ ಅವರಿಗೋಸ್ಕರ ಪ್ರಕಟನೆಯನ್ನು ಕೊಟ್ಟಿದ್ದಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಕೂಡಲೇ ವ್ಯಾಪಾರಸ್ಥರೂ ಗಿರಾಕಿಗಳೂ ಪತ್ರ ವ್ಯವಹಾರ ಮಾಡಬೇಕು.

ವಿಳಾಸ	ತಮ್ಮ ವಿಧೇಯ
ಚನಬಸಪ್ಪ ಮಲ್ಲಪ್ಪ ವಾರದ,	**ವಿರೂಪಾಕ್ಷಪ್ಪ ರಾವಜಿ ಅಪ್ಪಾ ಥೇಪೆ ಮುನಿಮ.**
ಖಡೆಬಜಾರ, ಮಾಂಡವಿ, ಮುಂಬಯಿ ನಂ. ೩.	

—ದೀನಬಂಧು ಅಂಡ್ರ್ಯೂಜರವರು ಓರಿಸಾ ಅನಾಥ ಜನರ ಸಹಾಯಾರ್ಥವಾಗಿ ಕಟಕ ಪಟ್ಟಣಕ್ಕೆ ಹೋದರು. ಅಲ್ಲಿಯ ಜಲಗ್ರಸ್ತ ನಿರಾಶ್ರಿತ ಜನರನ್ನು ಕಂಡರು. ಮತ್ತು ಅವರಿಗೆ ಯೋಗ್ಯ ಸಹಾಯವು ದೊರೆಯುತ್ತಲಿದೆಯೆಂದು ಅಭಿಪ್ರಾಯಪಟ್ಟರು.

—ಶ್ರೀ. ವಿಠ್ಠಲಭಾಯಿ ಪಟೇಲ ಇವರ ಪ್ರಕೃತಿಯು ಸಾವಕಾಶವಾಗಿ ಗುಣಹೊಂದುತ್ತಲಿರುವದು.

—ಮೈಸೂರ ಮಹಾರಾಜರವರು ಮುಖ್ಯನ್ಯಾಯಾಧೀಶರಾದ ಶ್ರೀ ಪಿ. ಮಹಾದೇವಯ್ಯನವರಿಗೆ " ರಾಜಧರ್ಮಪ್ರವೀಣ " ಮತ್ತು ಶ್ರೀ ಎಸ್. ಹಿರಿಯಣ್ಣನವರಿಗೆ " ರಾಜಸೇವಾಸಕ್ತ " ಎಂದು ಬಿರುದುಗಳನ್ನು ದಯಪಾಲಿಸಿರುವರು.

—ಕೊಲ್ಹಾಪುರ ರಾಜಾರಾಮ ಕಾಲೇಜದ ಪ್ರಿನ್ಸಿಪಾಲರಾದ ಡಾ. ಬಾಲ ಕೃಷ್ಣ ಇವರು ಹಿಂದು ಧರ್ಮದ ವಿಷಯಕ್ಕೆ ವ್ಯಾಖ್ಯಾನ ಕೊಡಲು ಅಮೇರಿಕೆಗೆ ಹೋಗಿದ್ದಾರೆ.

—ವಿಜಾಪುರ ಜಿಲ್ಹೆಯಲ್ಲಿ ಪ್ರಸಿದ್ಧ ದೇಸಾಯಿಯವರಾದ ಶ್ರೀಮಂತ ಗುರುಸಿದ್ಧಪ್ಪ ದೇಸಾಯಿ ಕೊಲ್ಹಾರ ಇವರು ವಿಜಾಪುರದಲ್ಲ ಪ್ಲೇಗಿನಿಂದ ತೀರಿಕೊಂಡದ್ದಕ್ಕೆ ವಿಷಾದಿಸುತ್ತೇವೆ.

ವೀರಶೈವ ವಿದ್ಯಾಲಯ ಆಲಮಟ್ಟಿ

ಈ ವಿದ್ಯಾಲಯದ ವಿದ್ಯಾಭ್ಯಾಸಕ್ಕೆ ಪದ್ಧತಿಯ ಪ್ರಕಾರ ದೀಪಾವಳಿಯ ನಿಮಿತ್ತವಾಗಿ ಇದೇ ಆಶ್ವೀನ ಬಹುಳ ೧೧ (ತಾರೀಖು ೧೫-೧೦-೩೩) ರಿಂದ ಮೂರು ವಾರಗಳ ವಿಶ್ರಾಂತಿ ಕೊಡಲ್ಪಟ್ಟಿದೆ. ಆದುದರಿಂದ ವಿದ್ಯಾಲಯವನ್ನು ನೋಡಲಿಕ್ಕೆ ಬರುವ ಮಹಾಶಯರು ನವಂಬರ್ ತಿಂಗಳ ೭ ನೆಯ ತಾರೀಖಿನ ನಂತರ ಬರಬೇಕಾಗಿ ಕೋರಿಕೆ.

ಈ ವಿದ್ಯಾಲಯದ ವಿದ್ಯಾಭ್ಯಾಸಕ್ಕೋಸ್ಕರ ಹೊಸದಾಗಿ ವಿದ್ಯಾರ್ಥಿಗಳನ್ನು ಕಳುಹಿಸುವವರು ನವಂಬರ್ ತಿಂಗಳ ೭ ರಿಂದ ೧೫ ನೆಯ ತಾರೀಖಿನೊಳಗಾಗಿ ಕಳುಹಿಸಬೇಕು. ಅನಂತರ ತೆಗೆದುಕೊಳ್ಳಲಾಗುವದಿಲ್ಲ.

ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಮೊದಲು ೭೫ ರೂ. ಆರು ತಿಂಗಳ ನಂತರ ೫೦ ರೂ. ಈ ಪ್ರಕಾರ ೧೨೫ ರೂ. ಕೊಡಬೇಕಾಗುವುದು. ಆ ವಿದ್ಯಾರ್ಥಿಯ ಊಟ, ಬಟ್ಟೆ, ಪುಸ್ತಕಗಳ ವೆಚ್ಚಗಳು ಸಂಸ್ಥೆಯಿಂದ ಜರುಗುವವು. ವಿದ್ಯಾರ್ಥಿಯು ಕನ್ನಡ ನಾಲ್ಕನೆಯ ತರಗತಿಯ ವರೆಗೆ ಕಲಿತಿರಬೇಕು. ಇಂಗ್ಲಿಷ, ಹಿಂದಿ, ಮತ್ತು ಮರಾಠಿ ಈ ಮೂರು ಭಾಷೆಗಳನ್ನು ಕಲಿಸುವದಲ್ಲದೆ ವ್ಯಾವಹಾರಿಕ ಶಿಕ್ಷಣವನ್ನೂ ಕೊಡಲಾಗುವುದು.

ಆಲಮಟ್ಟಿ ತಾ. ೫-೧೦-೩೩.

ಹರ್ಡೇಕರ ಮಂಜಪ್ಪ
ಸಹಾಯಾಧಿಪತಿ
ವೀರಶೈವ ವಿದ್ಯಾಲಯ.

ಭಾರತೀಯ

ಧನ ಸಾಮ್ರಾಟರ ಮೆಚ್ಚಿಗೆ.

ಕರ್ನಾಟಕ ನೂತನ ಕಲಾವೈಭವ.

ಸಿದ್ಧೇಶ್ವರ ಕಂಪನಿಯ ಅಪೂರ್ವ ಪ್ರಾವಿಣ್ಯ



ನಿಜಾಮ ಸರಕಾರದ ಸ್ಟೇಟ ಬ್ಯಾಂಕಿನ ಹೆಬ್ಬಾಗಿಲು.

ಭಾರತೀಯ ಧನಸಾಮ್ರಾಟರಾದ ಹೈದ್ರಾಬಾದ ನಿಜಾಂ ಸರಕಾರದವರು ಸಿದ್ಧೇಶ್ವರ ಕಂಪನಿಯ ಅದ್ವಿತೀಯ ಕಲಾವೈಭವವನ್ನು ನೋಡಿ ಸಂತೋಷಪಟ್ಟು ಸಾವಿರಾರು ರೂ. ಬೆಲೆಬಾಳುವ ಅನೇಕ ಟ್ರಿಜರಿಗಳನ್ನು ತೆಗೆದುಕೊಂಡದ್ದಲ್ಲದೆ ತಮ್ಮ ಸ್ಟೇಟ್ ಬ್ಯಾಂಕಿಗೆ ಅಪೂರ್ವವಾದ, ಅತಿಸುಂದರವಾದ, ಎಲೆಕ್ಟ್ರಿಕ್ ಅಥವಾ ಆಕ್ಸಿಜನ್ ಗ್ಯಾಸುಗಳಿಂದ ಸಹ ಅಪಾಯ ಹೊಂದದಂಥ ಬಹು ಭದ್ರವಾದ ಹೆಬ್ಬಾಗಿಲವನ್ನು ಮಾಡಿಸಿಕೊಂಡಿದ್ದಾರೆ.

ಇಂಥ ಸುಪ್ರಸಿದ್ಧ ಸಿದ್ಧೇಶ್ವರ ಕಂಪನಿಯಿಂದ ನಿಮಗೆ ಬೇಕಾದಂಥ ಟ್ರಿಜರಿ, ಕ್ಯಾಶ್‌ಬಾಕ್ಸ ಮೊದಲಾದವುಗಳನ್ನು ಮಾಡಿಸಿಕೊಂಡು ನಿಮ್ಮ ಹಣವನ್ನು ಭದ್ರವಾಗಿಟ್ಟುಕೊಳ್ಳಬಾರದೇ?

ಸಿದ್ಧೇಶ್ವರ ಆ್ಯಂಡ್ ಕೋ. ಹುಬ್ಬಳ್ಳಿ.

ಹೆಡ್ ಆಫೀಸ್:— ಹುಬ್ಬಳ್ಳಿ. **ಬ್ರ್ಯಾಂಚ್ ಆಫೀಸ್:—ಅಬಿಡ್ಸ ಬಿಲ್ಡಿಂಗ್ ಹೈದರಾಬಾದ**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ನಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಚ್ಯೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕವನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ಸಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ.
ಪೋ. **ಹಂಚಲಿ.**
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣವದಿರದಲ್ಲಿ **ಶ್ರೀ ಹರ್ಡೇಕರ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರ! ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!

ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ ೨೨೮ || ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೩. | ಆಲಮಟ್ಟಿ- ಸೋಮವಾರ ತಾರೀಖು೧೬ನೆಯ ಅಕ್ಟೋಬರ ೧೯೩೩. | ಸಂಚಿಕೆ೧೧.

ಜನಸೇವೆಯೇ ದೇವರಸೇವೆ.

ಹಿಂದು ಮಹಾಸಭೆಯ ಅಧಿವೇಶನ.

ಅಧ್ಯಕ್ಷ ಶ್ರೀ. ಭಾಯಿ ಪರಮಾನಂದಜಿಯವರ ಪ್ರಚಂಡ ಸ್ವಾಗತ.

ಹಿಂದು ಮಹಾಸಭೆಯ ೧೫ನೆಯ ಅಧಿವೇಶನವು ಅಜಮೀರ ನಗರದಲ್ಲಿ ಇದೇ ಅಕ್ಟೋಬರ್ ೧೪ನೆಯ ತಾರೀಖಿನ ದಿನಸ ಶ್ರೀ. ಭಾಯಿ ಪರಮಾನಂದಜಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರಾದ ಭಾಯಿ ಪರಮಾನಂದಜಿಯವರು ಲಾಹೋರಿನಿಂದ ವಿಮಾನಮಾರ್ಗವಾಗಿ ತಾ. ೧೩ನೆಯ ದಿವಸ ಅಜಮೀರಕ್ಕೆ ಬಂದಿಳಿದರು. ಆಗ ಪಟ್ಟಣದಲ್ಲಿ ಅವರ ಪ್ರಚಂಡ ಮೆರವಣಿಗೆಯಾಯಿತು.

ಶ್ರೀಯುತ ಭಾಯಿ ಪರಮಾನಂದಜಿಯವರು ತಮ್ಮ ಭಾಷಣದಲ್ಲಿ ೧೮೫೭ನೆಯ ಇಸವಿಯಿಂದ ಇಲ್ಲಿಯವರೆಗಿನ ರಾಜಕೀಯ ಸ್ಥಿತ್ಯಂತರಗಳನ್ನೆಲ್ಲ ವಿವರಿಸಿ ಜಾತಿ ನಿರ್ಣಯದಿಂದ ಬಂಗಾಲ ಮತ್ತು ಪಂಜಾಬಗಳ ಹಿಂದುಗಳಿಗೆ ಅತ್ಯಂತ ಹಾನಿಯಾಗಿದೆಯೆಂದೂ, ಸುಶಿಕ್ಷಿತ ಹಿಂದುಗಳಿಗೆ ವಿರೋಧವಾಗಿರುವ ಧೋರಣವನ್ನು ಸರಕಾರದವರು ಸ್ವೀಕರಿಸಿದರೆ ಹಿಂದು ಜನಗಳು ಅನನುಭೂತವಾದ ಚಟುವಟಿಕೆಯನ್ನೆಬ್ಬಿಸುವರೆಂಬುವುದನ್ನು ಸರಕಾರದವರು ಚೆನ್ನಾಗಿ ಲಕ್ಷಿಸಬೇಕೆಂದೂ ಸ್ಪಷ್ಟವಾಗಿ ಹೇಳಿದರು.

ದೇಹವೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL - 587 [illegible]
Dt. Bijapur. (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಒಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯುಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿವೆ. ಈ ಸುಡಗಾಡ ತಿಜೋರಿಯನ್ನು ಕೊಂದು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಂಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರುತೆ ತರಿಸಿಕೊಳ್ಳಿರಿ! **ಜಾಗ್ರುತೆ ತರಿಸಿಕೊಳ್ಳಿರಿ!!**

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಗಳ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತಾರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಅಕ್ಟೋಬರ ತಾರೀಖು ೧೬ ನೆಯ ಸೋಮವಾರ | ಸಂಚಿಕೆ ೧೧.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಕೂಡಿಸುವ ಆವಶ್ಯಕತೆ.

ಧರ್ಮಾತ್ಮ ಮಾಲವೀಜಿಯವರು ಮಸೂರಿಯಿಂದ ಈ ಕೆಳಗಿನಂತಿರುವ ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ—

ಮಹಾತ್ಮ ಗಾಂಧೀಜಿಯವರು ತಮಗಾದ ಶಿಕ್ಷೆಯ ಅವಧಿಯು ಸಂಪೂರ್ತಿಸುವ ವರೆಗೂ ಚಳವಳಿಯಿಂದ ಅಲಿಪ್ತರಾಗಿರುವುದಾಗಿ ಪ್ರಕಟಿಸಿರುವುದನ್ನು ನೋಡಿ ಅನೇಕರು ಅವರ ಮೇಲೆ ದೋಷಾರೋಪಣೆ ಮಾಡುತ್ತಿರುವುದು ನನಗೇನೂ ಸರಿ ಬರುವುದಿಲ್ಲ. ಅವರ ಬಿಡುಗಡೆಯಾದ ಸಮಯವು ಎಂಥ ಬಿಕ್ಕಟ್ಟಿನದಾಗಿತ್ತೆಂಬುದನ್ನು ನೆನೆಸಿಕೊಂಡರೆ ಮ. ಗಾಂಧೀಜಿಯವರಂತಹ ಸತ್ಯಪ್ರಿಯ, ಸನ್ಮಾನ್ಯ ಮುಂದಾಳುಗಳಿಗೆ ಅಂತಹ ನಿರ್ಣಯದ ವಿನಾ ಗತ್ಯಂತರವೇ ಇರಲಿಲ್ಲ. ಈ ನಿರ್ಣಯ, ಪುಣೆಯ ಚರ್ಚೆಯ ನಂತರ ಹೊರಬಿದ್ದ ಪ್ರಕಟನೆ, ಸದ್ಯದ ರಾಜಕೀಯ ಪರಿಸ್ಥಿತಿ, ಇಂಗ್ಲೆಂಡಿನಲ್ಲಿ ನಡೆಯುತ್ತಿರುವ ವಿಷಯ, ದೇಶದಲ್ಲಿಯ ಆರ್ಥಿಕ ಕಷ್ಟ ಮೊದಲಾದವುಗಳನ್ನು ವಿಚಾರಿಸುವುದಕ್ಕಾಗಿ ಜಾಗ್ರತೆ ಅ. ಭಾ. ಕಾಂಗ್ರೆಸ್ ಕಮಿಟಿಯನ್ನು ಸೇರಿಸುವುದು ಆವಶ್ಯಕವೆಂದು ನನಗೆ ತೋರುತ್ತದೆ.

ಕಾಂಗ್ರೆಸ್ಸಿನವರು ಸ್ವೀಕರಿಸುವ ಕಾರ್ಯಕ್ರಮಗಳಲ್ಲಿ ಕೇವಲ ಮಹತ್ವದ ವಿಷಯಗಳಲ್ಲಿ ಕಾಂಗ್ರೆಸ್ ಮುಂದಾಳುಗಳ ಮತಭೇದವಿರುವುದನ್ನು ನೋಡಿ ಚಕಿತರಾಗುವ ಕಾರಣವಿಲ್ಲ. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ಕಾಂಗ್ರೆಸ್ ಮುಂದಾಳುಗಳೆಲ್ಲರೂ ದೇಶಾಭಿಮಾನದಿಂದ ಪ್ರೇರಿತರಾಗಿ ಸಮಾಧಾನಕರವಾದ ಒಪ್ಪಂದವನ್ನು ಮಾಡಿಕೊಳ್ಳುವರೆಂಬುವುದರಲ್ಲಿ ಸಂಶಯವಿಲ್ಲ. ಕಾಂಗ್ರೆಸ್ಸಿನಲ್ಲಿ ಎರಡು ಪಕ್ಷಗಳಿವೆಯೆಂದು ಹೊರಗೆ ಯಾವ ಗದ್ದಲವು ನಡೆದಿದೆಯೋ ಅದನ್ನು ನಾನು ನಿಷೇಧಿಸುತ್ತೇನೆ. ದೇಶದ ಹಿತ ದೃಷ್ಟಿಯಿಂದ ವಿಚಾರಿಸಿದರೆ ಕಾಂಗ್ರೆಸ್ಸಿನಲ್ಲಿ ಐಕ್ಯವಿರುವುದು ಈಗ ಆವಶ್ಯಕವಾಗಿದೆ. ಕಾಂಗ್ರೆಸ್ ದೇಶದಲ್ಲಿಯ ಎಲ್ಲಕ್ಕಿಂತಲೂ ಹಳೆಯದಾದ ಮತ್ತು ವರಿಷ್ಠ ಸಂಸ್ಥೆಯಿರುವುದರಿಂದ ಎಲ್ಲರೂ ಒಕ್ಕಟ್ಟಿನಿಂದಿದ್ದು ದೇಶದಲ್ಲಿಯ ಇತರ ರಾಜಕೀಯ ಸಂಗಡಗಳೊಡನೆಯೂ ಐಕ್ಯತೆಯನ್ನುಂಟುಮಾಡುವುದು ಕಾಂಗ್ರೆಸ್ ಕೆಲಸಗಾರರ ಪವಿತ್ರ ಕರ್ತವ್ಯವಾಗಿದೆ.

ದೇಶದಲ್ಲಿಯ ಲೋಕಮತ ವಿರುದ್ಧವಾಗಿ ರಾಜ್ಯ ಕಾರಭಾರವನ್ನು ನಡೆಯಿಸುವುದು ಶಕ್ಯವಿಲ್ಲವೆಂಬುದನ್ನು, ಸದ್ಯದ ರಾಜ್ಯ ಪದ್ಧತಿಯನ್ನು ವ್ಯತ್ಯಾಸ ಗೊಳಿಸುವದಕ್ಕಾಗಿಯೇ ನಡೆದಿರುವ ಅಸತ್ಯಾಚಾರ ಚಟುವಟಿಕೆಯು ತೋರಿಸಿಕೊಟ್ಟಿದೆ. ಆದರು ಕೂಡಾ ಸದ್ಯಕ್ಕಿಂತಲೂ ಕೆಡಕಾದ ರಾಜ್ಯಪದ್ಧತಿಯನ್ನು ತಮಗೆ ಶಕ್ಯವಿದ್ದಷ್ಟು ಕಾಲದವರೆಗೆ ನಡೆಯಿಸಬೇಕೆಂದು ಶುಭ್ರ ಪತ್ರಿಕೆಯಿಂದ ಪ್ರಯತ್ನಿಸುತ್ತಲಿದ್ದಾರೆ. ದೇಶದಲ್ಲಿಯ ೩೫ ಕೋಟಿ ಜನಗಳ ಭವಿತವ್ಯವನ್ನು ಲೋಕಮತ ಲಕ್ಷಿಸದೆ ಇಂಗ್ಲೆಂಡಿನಲ್ಲಿ ನಿಶ್ಚಯಿಸಹತ್ತಿದ್ದಾರೆ. ಇಂಗ್ಲೆಂಡಿನಲ್ಲಿ ಈಗ ಅಧಿಕಾರಾರೂಢರಾಗಿರುವ ಸಂಗಡದ ಪ್ರಾಬಲ್ಯವು ಎಲ್ಲಿಯವರೆಗಿರುವುದೋ ಅಲ್ಲಿಯವರೆಗೆ ಸಾಮಂತ ಸ್ವರಾಜ್ಯ ಇಲ್ಲವೆ ಜವಾಬ್ದಾರ ರಾಜ್ಯ ಪದ್ಧತಿಯು ದೊರೆಯುವುದು ಶಕ್ಯವೇ ಇಲ್ಲವೆಂದು ಅನೇಕ ಉದಾರ ಮತವಾದಿಗಳಿಗು ಕೂಡಾ ತೋರಹತ್ತಿದೆ.

ಇಂಥ ಪರಿಸ್ಥಿತಿಯಲ್ಲಿ ನಮ್ಮಲ್ಲಿಯ ಸರ್ವ ಮುಂದಾಳುಗಳು ಒಂದು ಕಡೆಗೆ ಸೇರಿ ಸರ್ವರಿಗೂ ಮಾನ್ಯವಾಗುವ ದೇಶದಲ್ಲಿಯ ಆರ್ಥಿಕ ಸ್ಥಿತಿಗೆ ಅನುಕೂಲವಾಗಿರುವ ಒಂದು ಕಾರ್ಯಕ್ರಮವನ್ನು ನಿರ್ಧರಿಸುವುದು ಕರ್ತವ್ಯವಾಗಿದೆ. ದೇಶದ ಮುಂದಿಡುವುದಕ್ಕಾಗಿ ನಾನು ಒಂದು ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮವನ್ನು ಸಿದ್ಧಗೊಳಿಸಿದ್ದೇನೆ. ಅದನ್ನು ಮೊದಲು ಅ. ಭಾ. ಕಾಂಗ್ರೆಸ್ ಕಮಿಟಿಯು ಮುಂದಿಡಬೇಕೆಂಬುದೇ ನನ್ನ ಇಚ್ಛೆ. ಅದನ್ನು ಯಾವದೇ ಎರಡನೆಯ ರಾಜಕೀಯ ಸಂಗಡದ ಮುಂದಿಡುವ ಪೂರ್ವದಲ್ಲಿ ಕಾಂಗ್ರೆಸ್ಸಿನ ಬೆಂಬಲ ದೊರೆಯುವುದು ಅತ್ಯಂತ ಮಹತ್ವದ್ದಾಗಿದೆಯೆಂದೇ ನನಗೆ ತೋರುತ್ತದೆ.

ಅ. ಭಾ. ಕಾಂಗ್ರೆಸ್ ಕಮಿಟಿಯನ್ನು ಕರೆಯುವುದಕ್ಕಾಗಿ ಮ. ಗಾಂಧಿ ಮತ್ತು ಪಂ. ಜವಾಹರಲಾಲರವರ ಕಡೆಗೆ ವಿಜ್ಞಾಪನಾ ಪತ್ರಿಕೆಗಳನ್ನು ಕಳುಹಿಸಿಕೊಡಬೇಕೆಂಬುದೇ ನನ್ನ ಇಚ್ಛೆ. ಮ. ಗಾಂಧಿಯವರಿಗೆ ಅನುಕೂಲವಾಗಿರುವ ಸ್ಥಳದಲ್ಲಿ ಜಾಗ್ರತೆಯಾಗಿಯೇ ಕಮಿಟಿಯನ್ನು ಕರೆಯುವರೆಂದೇ ನನ್ನ ನಂಬುಗೆ.

ವೀರಶೈವ ಮತವೂ ಅಸ್ಪೃಶ್ಯತೆಯೂ.

(ಬೆಂಗಳೂರು ನಗರದ ಶ್ರೀ ವೀರಶೈವ ಸಮಾಜೋತ್ಕರ್ಷ ಸಾಧಕ ಸಂಘದವರಿಂದ.)

ಪತಿತರನ್ನುದ್ಧರಿಸುವುದು, ಪಾಪಿಗಳನ್ನು ಪಾವನರನ್ನಾಗಿ ಮಾಡುವುದು, ಪಾಮರರನ್ನು ಪರಮತ್ವಕ್ಕೇರಿಸುವುದು ಇವೇ ಶಿವಶರಣರ ಮುಖ್ಯ ಧ್ಯೇಯಗಳು.

ಸಾವಿರಾರು ವರ್ಷಗಳಿಂದಲೂ, ಗೃಹಕಲಹದಂತೆ ಭರತ ಖಂಡದಲ್ಲೇ ಹೊಗೆಯಾಡುತ್ತಿದ್ದ ವರ್ಣಾಶ್ರಮಗಳ ವಿಚಾರದಲ್ಲಿದ್ದ ಕುಕಲ್ಪನೆಗಳ ಭೂತ ನಾಟ್ಯವೂ ಭರತಭೂಮಿಯ ತುಂಬಾ ಬೇರುಬಿಟ್ಟಿರುವ ಕೀಳುಮೇಲುಗಳ ವಿಷವೃಕ್ಷವೂ ಇವೆಲ್ಲಕ್ಕೂ ಹೆಚ್ಚಿನದಾದ ಅಸ್ಪೃಶ್ಯತೆಯೂ, ಇಂದು ಮಾನವಕೋಟಿಯ ಹಿತಚಿಂತಕರಾದ ಮಹಾತ್ಮ **ಗಾಂಧೀಜಿಯವರು** ಕೈಕೊಂಡ ವಿಜಯಿಗಳಾದ ಉಪವಾಸ ರೂಪೀ ಮಹಾಯಜ್ಞದ ಮೂಲಕ ತತ್ತೀ ವಿಧ್ವಸನ್ನೇ ಗಡಿಬಿಡಿಗೊಳಿಸಿ ಬಿಟ್ಟಿವೆಯಷ್ಟೆ? ಇದರ ಫಲವಾಗಿ ಇಂದು ಭರತಭೂಮಿಯಲ್ಲೇ ಏಕೆ ಅಖಿಲ ಭೂಮಂಡಲದಲ್ಲೇ ಕೀಳುಮೇಲುಗಳ ಸ್ಪೃಶ್ಯ, ಅಸ್ಪೃಶ್ಯತೆಗಳ ಹೇಯ ಪದ್ಧತಿಯನ್ನು ನಿರ್ಮೂಲಗೊಳಿಸಿ ಮಾನವರೆಲ್ಲರೂ ಸಮಾನಸ್ಕಂದರೆಂಬ ಸರ್ವಸಮತಾ ಭಾವನೆಯನ್ನು ನೆಲೆಗೊಳಿಸುವ ಕೆಲಸ ಕಾರ್ಯಗಳು ಅತ್ಯಂತ ರಭಸದಿಂದ ವಿಜಯಪ್ರದವಾಗಿ ನಡೆದಿವೆಯಷ್ಟೆ. ಈ ಹೇಯ ಪದ್ಧತಿಯ ನಿರ್ಮೂಲಕ್ಕಾಗಿ ಪ್ರಯತ್ನಿಸಿದ ಭಾರತೀಯ ಮಹಾಪುರುಷರಲ್ಲಿ ಭಗವಾನ್ ಬುದ್ಧದೇವನೇ ಮೊದಲನೆಯವನು. ಅವನ ತರುವಾಯ ಅವನಂತೆಯೇ ನಿಸ್ಪೃಹ ಬುದ್ಧಿಯಿಂದ ಅಸ್ಪೃಶ್ಯತಾ ನಿರ್ಮೂಲಕ್ಕಾಗಿ ಮನಃಪೂರ್ವಕವಾಗಿ ಪ್ರಯತ್ನಪಟ್ಟವರೆಂದರೆ ಪರಮಪೂಜ್ಯ ಶಿವಶರಣ ವೃಂದವು ಮಾತ್ರವೇ.

ಇನ್ನುಳಿದ ರಾಮಾನುಜಾಚಾರ್ಯರು ಅಂತ್ಯಜರಿಗೆ ತಮ್ಮ ತಮ್ಮ ಮತ ದೀಕ್ಷೆಗಳನ್ನು ಕೊಟ್ಟಿದ್ದರೂ ಸಮಾಜದಲ್ಲಿ ಮಾತ್ರ ತಮ್ಮ ಸಮಾನ ಹಕ್ಕುಬಾಧ್ಯತೆಗಳನ್ನವರಿಗೆ ಕಲ್ಪಿಸಲಿಲ್ಲ. ಆದರೆ ಶಿವಶರಣರು ಮಾತ್ರ ಅವರಿಗೆ ಸಮಾನ ಹಕ್ಕುಬಾಧ್ಯತೆಗಳನ್ನಷ್ಟೇ ಅಲ್ಲದೆ ಅವರಲ್ಲಿ ಸತ್ಯ ಸದಾಚಾರಗಳಿಂದ ವರ್ತಿಸುತ್ತಿದ್ದ ಜ್ಞಾನಿಗಳಿಗೆ ಪೂಜ್ಯ ಪದವಿಯನ್ನೂ ಸಹ ಕಲ್ಪಿಸಿಕೊಟ್ಟಿರುವರು.

ಡೋಹರ ಕಕ್ಕಯ್ಯ, ಚನ್ನಯ್ಯ, ಹರಳಯ್ಯನವರೊಡನೆ ಬ್ರಾಹ್ಮಣನಾಗಿದ್ದರೂ ಶರೀರ ಸಂಬಂಧವನ್ನು ಬೆಳೆಯಿಸಿದ ಮಧುವಯ್ಯ ಮುಂತಾದವರ ಹೆಸರುಗಳನ್ನು ಇಂದಿಗೂ ವೀರಶೈವರು ಶರಣರ ಮಾಲಿಕೆಯಲ್ಲಿ ಸೇರಿಸಿ ಗೌರವಿಸುತ್ತಿರುವರು. ಶಿವಶರಣರು ಅಸ್ಪೃಶ್ಯತೆಯು ದೈವ ನಿರ್ಮಿತವಲ್ಲೆಂತಲೂ ಹೊಲೆಯನೆಂದರೆ ಕೀಳು ಕುಲದಲ್ಲಿ ಹುಟ್ಟಿದವನಲ್ಲವೆಂತಲೂ, ಕೀಳು ಕೆಲಸ ಮಾಡುವವನು ಮಾತ್ರ ಹೊಲೆಯನೆಂತಲೂ ಹೊಲೆಯರ ಮನೆಯಲ್ಲಿ ಹುಟ್ಟಿದ್ದರೂ, ಸತ್ಯ ಸದಾಚಾರಿಯಾಗಿದ್ದರೆ ಅವನು ಉತ್ತಮ ಕುಲದವನೆಂತಲೂ ಮಾನವರಲ್ಲಿ ಶಿವಕುಲ, ಭವಿಕುಲ ಎಂದೆರಡು ವರ್ಗಗಳು ಮಾತ್ರ ಉಂಟೆಂತಲೂ ಸತ್ಯ, ಸದಾಚಾರ, ಸದ್ಗುಣಗಳುಳ್ಳವನೇ ಶಿವಕುಲದವನೆಂತಲೂ, ಅಸತ್ಯ, ಅನಾಚಾರ, ದುರ್ಗುಣಗಳುಳ್ಳವನೇ ಭವಿ ಕುಲದವನೆಂತಲೂ ಸಾರಿ ಹೇಳಿರುವರು. ವೀರಶೈವ ಧರ್ಮೋದ್ಧಾರಕರಾದ ಶ್ರೀ. ಭಗವಾನ್ ಬಸವಣ್ಣನವರೂ ಸಹ "ಕೊಲ್ಲುವನೇ ಮಾದಿಗ ಹೊಲಸು ತಿಂಬುವನೇ ಹೊಲೆಯ. ಕುಲವೇನೋ ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು" ಎಂದು ಹೇಳಿರುವರು. ಆ ಮಹಾನುಭಾವರು ಬಾಯಲ್ಲಿ ಮಾತ್ರ ಹೀಗೆ ಹೇಳಿ ಕೃತಿಯಲ್ಲಿ ಮಾತ್ರ ಕೈಕಟ್ಟಿಕೊಂಡು ಕುಳಿತಿರಲಿಲ್ಲ. ಆ ಅಂತ್ಯಜರ ಪಂಗಡದಲ್ಲಿ ಹರಡಿದ್ದ, ಕೊಲ್ಲುವಿಕೆ, ಹೊಲಸು ತಿಂಬುವಿಕೆ, ಮದ್ಯಪಾನ, ಮಾಂಸಾಹಾರಾದಿ ಹೇಯ ಪದ್ಧತಿಗಳನ್ನು ತಮ್ಮ ಕ್ರಾಂತಿಪೂರಿತ ಧಾರ್ಮಿಕ ಸಂಸ್ಕರಣೆಗಳಿಂದ ನಿರ್ಮೂಲಗೊಳಿಸಿ ಅವರನ್ನು ಸಾತ್ವಿಕರನ್ನಾಗಿ ಮಾಡಿ, ಅವರು ಪವಿತ್ರ ಹೃದಯಿಗಳೂ, ಸತ್ಯ, ಸದಾಚಾರಾದಿ ಸುಗುಣಿಗಳೂ, ಎಂದು ಕಂಡು ಬಂದರೆ ಮತ್ತು ಅವರು ಶಿವಶರಣರ ಶಾಂತಿಮತವನ್ನಪೇಕ್ಷಿಸಿದರೆ ಅಂತಹ ಪವಿತ್ರಾತ್ಮರನ್ನು ಮಾತ್ರ ಶಾಸ್ತ್ರೋಕ್ತವಾಗಿ ಶುದ್ಧಿಗೊಳಿಸಿ ವಿಧ್ಯುಕ್ತವಾಗಿರುವಷ್ಟು ಕಾಲ ಅವರನ್ನು ಪರೀಕ್ಷಿಸಿ ಆಮೇಲೆ ಅವರಿಗೆ ಶಿವದೀಕ್ಷೆಯನ್ನನುಗ್ರಹಿಸಿ ಸಮಾಜದಲ್ಲಿ ಸಮಾನ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿದ್ದರು. ಆ ಮಹಾನುಭಾವರ ಅವಿಶ್ರಾಂತ ಪರಿಶ್ರಮದಿಂದಲೇ ಹರಳಯ್ಯ ಕಕ್ಕಯ್ಯ, ಶಿವನಾಗಮಯ್ಯ, ಚನ್ನಯ್ಯ ಮುಂತಾದವರು ಅಸ್ಪೃಶ್ಯ ವರ್ಗದಲ್ಲಿಯೇ ಜನಿಸಿದ್ದರೂ ಸಹ ಉತ್ತಮಾಚರಣೆಯ ಮೂಲಕ ಮಹಾಜ್ಞಾನಿಗಳ ಮಾಲಿಕೆಯಲ್ಲಿ ವಿರಾಜಿಸುತ್ತಿರುವರು. ಶಿವಶರಣರ ಪರಮ ಪವಿತ್ರ ಮತವಾದ ವೀರಶೈವ ಧರ್ಮದಲ್ಲಿ ಸಮಸ್ತ ಕಾಯಕದವರೂ (ಕಸಬುದಾರರೂ) ಉಂಟು. ಇಂದಿಗೂ ವೀರಶೈವ ಧರ್ಮದಲ್ಲಿ ಎಲ್ಲಾ ಕಸಬುದಾರರೂ ಇರುವರು. ಈಚೆಗೆ ಇವರಲ್ಲಿ ಕೆಲವರು ಅಜ್ಞಾತನದಿಂದ ದುರ್ಮಾರ್ಗಾವಲಂಬಿಗಳಾಗಿರುವರು. ವೀರಶೈವ ಸಮಾಜ ಸುಧಾರಕರು ಇತ್ತ ಲಕ್ಷಿಸಬೇಕಾಗಿದೆ. ಶಿವಶರಣರು, ಕಾಯಕವು (ವೃತ್ತಿಯು) ಐಹಿಕ ಜೀವನೋಪಾಯಕ್ಕೆ ಮಾತ್ರವೆಂತಲೂ ಆದರೆ ಧರ್ಮವು ಮಾತ್ರ ಮಾನವ ಜನ್ಮದ ಅಂತಿಮ ಧ್ಯೇಯವಾದ ಮೋಕ್ಷ ಪ್ರಾಪ್ತಿಗೆ ಸಾಧಕವಾದುದೆಂದೂ, ಆದುದರಿಂದ ಯಾವ ಧರ್ಮೀಯನಾದರೂ ಲೋಕಕ್ಷೇಮಕರವಾದ, ಅಸತ್ಯ, ಅನಾಚಾರಗಳಿಗೆಡೆಗೊಡದ ಯಾವ ವೃತ್ತಿಯನ್ನಾದರೂ ಅವಲಂಬಿಸಬಹುದೆಂತಲೂ, ಮತಕ್ಕೂ, ವೃತ್ತಿಗೂ ಯಾವ ಸಂಬಂಧವೂ ಇಲ್ಲವೆಂತಲೂ ಸಾರಿ ಹೇಳಿರುವುದಲ್ಲದೆ ಕೃತಿಯ ಮೂಲಕ ಆಚರಿಸಿಯೂ ತೋರಿಸಿರುವರು. 'ಆಚಾರವೇ ಕುಲ, ಅನಾಚಾರವೇ ಹೊಲೆ, ಎಂಬುದಾಗಿ ಶಿವಶರಣರು ಹೇಳಿರುವುದರಿಂದ ಹೊಲೆಯರ ಅನಾಚಾರಗಳನ್ನು ನಿರ್ಮೂಲಗೊಳಿಸಿ ಅವರಿಗೆ ಸದಾಚಾರದ ಹಾದಿಯನ್ನು ತೋರಿಸಿ ಸನ್ಮಾರ್ಗಾವಲಂಬಿಗಳಾದವರನ್ನು ಶಿವಕುಲಕ್ಕೆ ಸೇರಿಸುತ್ತಿದ್ದರು. ಇಂದಿನ ಉತ್ತಮ ಕುಲಸ್ಥರೂ ಸಹ ಹಾಗೆಯೇ ಹೊಲೆಯರನ್ನು ಅನಾಚಾರದಿಂದ ದೂರಗೊಳಿಸಿ, ಆಚಾರಸ್ಥರನ್ನಾಗಿರಿಸಿ ಹೊಲೆತನದಿಂದಿಳಿಸಿ, ಕುಲತನಕ್ಕೇರಿಸಿ ಸಮಾಜದಲ್ಲಿ ಅವರನ್ನು ಸಮಾನ ಭಾವನೆಯಿಂದ ಕಾಣುವುದು ಇಂದಿನ ಉತ್ತಮ ಕುಲಜರೆನಿಸುವ ಆಚಾರಸ್ಥರ

(೧೩ನೆಯ ಪುಟದ ಮುಂದುವರಿದದ್ದು)

ಲಿಂಗಾಯತರ ಜಾತಿವಾದದಲ್ಲಿ ನನ್ನ ಪರಿಶೀಲನವೂ ಅನುಭವವೂ.

(ಲೇಖಕರು:— ಶ್ರೀ. ಪಾವಟೆ ಸಿದ್ಧರಾಮಪ್ಪನವರು ಬಿ. ಎ. ಎಲ್. ಎಲ್. ಬಿ. ವಕೀಲ ಹುಬ್ಬಳ್ಳಿ.)

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ವೀರಶೈವ ಧರ್ಮದ ಉದಾತ್ತ ತತ್ವಗಳು ಕುಂಠಿತವಾಗಲು ಜಾತ್ಯಭಿಮಾನವು ಹೇಗೆ ಕಾರಣವಾಯಿತೆಂಬುದನ್ನು ನೋಡಿದೆವು. ಇದಕ್ಕೆ ಅಂಕುಶವಾಗಿ ಧರ್ಮ ಗುರುಗಳ ಜ್ಞಾನೋಪದೇಶವೂ ಆಚಾರವೂ ಇರುವನ್ನಕ ಧರ್ಮದ ವಿಕಾಸಕ್ಕೆ ಅಷ್ಟೊಂದು ಬಾಧಕವಿರದು. ನಾಡಿನ ಒಕ್ಕಲತನವೂ ವ್ಯಾಪಾರೋದ್ಯಮವೂ ಕೈಯಲ್ಲಿದ್ದವರ ವರ್ಚಸ್ಸು ಧರ್ಮತತ್ವಗಳ ನಿಯಮಗಳನ್ನು ಮೀರಿ ನಡೆಯ ಹತ್ತಿತು. ಆ ವರ್ಚಸ್ಸಿಗೆ ಧರ್ಮ ಪೀಠಗಳು ತೀವ್ರವೆ ಒಳಗಾದವು. ಆವುದೊಂದು ಧರ್ಮವು ವಿಕಾಸದ ಪರಮಾವಧಿಯನ್ನು ಏರುವುದು ಧರ್ಮ ಪೀಠಗಳಿಂದಲೆ; ಮುಗ್ಗುವುದಾದರು ಧರ್ಮಪೀಠಗಳಿಂದಲೆ.

ಶ್ರೀಮದ್ವೀರಶೈವಾಗಮಗಳಲ್ಲಿ ಸದ್ಗುರು ಲಕ್ಷಣವನ್ನು ನೋಡಿದರೆ ಧರ್ಮಸ್ಥಾಪಕರು ಆವ ಉದಾತ್ತ ತತ್ವಗಳಿಂದ ಗುರುಗಳನ್ನು ಆರಿಸಬೇಕೆಂದು ವಿಧಿಸಿದರೆಂಬುದು ತಿಳಿಯುವುದು. ಶ್ರೀಮತ್ಸೂಕ್ಷ್ಮಾಗಮದ ಐದನೆಯ ಪುಟದಲ್ಲಿ ಗುರುವು ಲಿಂಗಕಲಾ ಬೋಧಕವಾದ ಮಂತ್ರವನ್ನು ಜಪಿಸುವವನು, ಶಾಂತನು, ಸತ್ಯವಚನನು, ನಿರಹಂಕಾರನು, ಮತ್ಸರವಿಲ್ಲದವನು, ಗರ್ವವಿಲ್ಲದವನು, ಕಾಮಾದಿಗಳಿಂದ ದೂರನು, ಸ್ತ್ರೀ ಸಂಗ ರಹಿತನು, ಅಥವಾ ತನ್ನ ಪತ್ನಿಯೋರ್ವಳಲ್ಲಿ ನಿರತನು, ಇಂದ್ರಿಯಗಳನ್ನು ನಿಗ್ರಹಿಸಿದವನು, ಸಮಸ್ತಾಗಮ ಸಾರಜ್ಞನು, ಶಿಷ್ಯನ ಸಂಶಯಗಳನ್ನು ದೂರೀಕರಿಸುವ ಮಾತಿನ ಜಾಣ್ಮೆಯುಳ್ಳವನು, ಗಂಭೀರನು, ಸಂತುಷ್ಟನು, ಪರಿಪಕ್ವ ವಿಚಾರವುಳ್ಳವನು, ಕರುಣಾಮಯನು. ವೇದವೇದಾಂಗಗಳನ್ನು ಅಂಗವಿಸಿದವನು; ಸರ್ವ ಸ್ಮೃತಿಗಳನ್ನು ಬಲ್ಲವನು; ಪುರಾಣ ಸಂಹಿತೆಗಳನ್ನರಿತು ಅವುಗಳನ್ನು ಪ್ರತಿಪಾದಿಸಲು ಸಮರ್ಥನು, ಮಂತ್ರಶಾಸ್ತ್ರದಲ್ಲಿ ನಿಪುಣನು; ಮಂತ್ರೋದ್ಧಾರವನ್ನು ತಿಳಿದವನು, ಶಿವಭಕ್ತನು ಶಿವಜ್ಞಾನಿಯು, ಗುರುಭಕ್ತನು ಗುರುಪ್ರಿಯನು, ಶಿವನಲ್ಲಿ ಮನಸ್ಸಮಾಧಾನವುಳ್ಳವನು, ಶಿವಲಿಂಗಾರ್ಚನಾಪರನು, ಸಂಪ್ರದಾಯ ವಿಶೇಷವನ್ನರಿತವನು, ಸಾಧುಗಳಾದ ಭಕ್ತರನ್ನು ಪ್ರೀತಿಸುವವನು. ಸದಾಚಾರದಲ್ಲಿಯೇ ನಿರತನು, ಎಲ್ಲೆಲ್ಲಿಯೂ ಸಮದರ್ಶನು ಎಂಬಿವೆ ಮೊದಲಾದ ಸದ್ಗುಣಮಂಡಿತನು. ಸಾಕ್ಷಾತ್ ಶಿವಸ್ವರೂಪನಾದ ಗುರುವೆಂದು ಹೇಳಿರುವರು. ಸದಾಚಾರ ಸಂಗ್ರಹದಲ್ಲಿ ಈ ಗುಣಗಳಿಗೆ ಅಪ್ರಾಧಾನ್ಯವಾಗಿ "ಪಂಚಮ ಸಂಜಾತಾನ್ ಗೃಹೀತ್ವಾ" ಪಂಚಮರನ್ನು ತೆಗೆದುಕೊಂಡು ಗುರುಗಳ ಪೀಠಕ್ಕೆ ನಿಯೋಜಿಸಬೇಕೆಂದು ಬರೆದರು. ಇದಕ್ಕೆ ವೀರಶೈವ ಪ್ರಕಾಶಿಕೆಯೂ ವೀರಶೈವ ಕೌಸ್ತುಭವೂ ಪ್ರಮಾಣವೆಂದು ಬರೆದಿದೆ. ಈ ಕೌಸ್ತುಭವನ್ನು ಲಿಂಗಪ್ಪ ಮಂತ್ರಿಗೆ ಮೌನಪ್ಪ ವಿದ್ವಾಂಸನು ಹೇಳಿರುವನು, ಇದು ಗುರುಶಿಷ್ಯರಲ್ಲಿ ಆದ ಸಂವಾದವಲ್ಲ. ಶಾಸ್ತ್ರತತ್ವ ನಿರ್ಣಯಕ್ಕೆ ಗುರು ಶಿಷ್ಯರು ಅಧಿಕಾರಿಗಳು. ಲಿಂಗಪ್ಪ ಮಂತ್ರಿಯು ತನ್ನ ನಾಡಿನಲ್ಲಿ ಪ್ರಚಾರಿಸಲು ಹಾಕಿದ ಪಂಕ್ತಿಗಳಿವು ಶ್ರೀಮದಾಗಮಗಳಲ್ಲಿ ಧರ್ಮ ತತ್ವಾನುರೋಧದಿಂದ ವಿಧಿಸಿದ ಲಕ್ಷಣಗಳೆತ್ತ! ಇಲ್ಲಿ ಜಾತಿಯನ್ನು ಮುಂದುಮಾಡಿ ಹಾಕಿದ ನಿರ್ಬಂಧಗಳೆತ್ತ!!

ಬಿಜ್ಜಳನು ಶ್ರೀ ಹರಳಯ್ಯ ಮಧುವಯ್ಯಗಳನ್ನು ಕೊಲೆಬಡಿಸಿದುದು ವೀರಶೈವದ ಉದಾತ್ತ ತತ್ವಗಳಿಗೆ ಮೊದಲನೆಯ ಆಘಾತವು. ಶರಣರು ಸ್ವತಂತ್ರ ಶೀಲರು. ಅವರು ರಾಜಾಶ್ರಯದಿಂದ ತಮ್ಮ ಧರ್ಮವನ್ನು ಹಬ್ಬಿಸಲೆಣಿಸಲಿಲ್ಲ, ಉಜ್ವಲವಾದ ತಪಃಸಾಮರ್ಥ್ಯದಿಂದ ಜನಜಾಗೃತಿಯನ್ನುಂಟುಮಾಡಿ "ಲೋಭಃ ಶೈವ ಮತ ಸ್ತ್ವೈಕೋ ವೀರಶೈವ ಪ್ರವರ್ತನಂ| ಭಕ್ತಿರ್ಭೂತ ದಯಾಚೇತಿ ಮುಕ್ಕೈವಲ್ಯಂ ಚತುರ್ವಿಧಂ|| ಎಂಬ ಶ್ರೀತಪ್ಪಾರಮೇಶ್ವರಾಗಮದ ಉಕ್ತಿಯಂತೆ ವೀರಶೈವ ಸಮಯವನ್ನು ಪ್ರವರ್ತಿಸಿ ಕೈವಲ್ಯ ಭಾನವಾದರು. "ಯಸ್ಯೈವಂ ಶಾಂಭವೀದೀಕ್ಷಾ ಸಂಜಾತಾ ಗುರು ಕೃಪಾವಶಾತ್ಪೂರ್ವಜಾತ್ಯಾದಿಕಂ ತಸ್ಯ ನಸ್ಮರೇತ್ ಪ್ರಾಕೃತಂ ಹಿ ತತ್" ಎಂಬ ಶ್ರೀಮತ್ಸೂಕ್ಷ್ಮಾಗಮಾದಿವಾಕ್ಯಗಳನ್ನು ಶಿರಸಾ ಪ್ರಮಾಣೀಕರಿಸಿದರು. ಆದರೆ ಲಿಂಗಪ್ಪ ಮಂತ್ರಿಯಂತಹರು ಮತ್ತು ಅವರಿಗು ಮಿಗಿಲಾಗಿ ಕ್ರಿಯಾಸಾರ ಗ್ರಂಥದ ನಿರ್ಮಾಪಕರಂತಹರು ರಾಜಾಶ್ರಯದ ಹಂಬಲದಿಂದ ವೀರಶೈವವನ್ನು ಸ್ಮಾರ್ತ ಧರ್ಮಕ್ಕೆ ಸಮಾನವಾಗಿಸುವ ಹಂಬಲದಿಂದ ತಮ್ಮತಮ್ಮ ಜಾತಿಗಳ ಗೌರವವು ಆಗುವಂತೆ ಧರ್ಮ ಶಾಸ್ತ್ರಗಳನ್ನು ರಚಿಸಿದರು. ಸೂಕ್ಷ್ಮಾಗಮ ಪಾರಮೇಶ್ವರಾಗಮ ವಾತುಲಾಗಮಗಳಲ್ಲಿಯ ಗುರು ಲಕ್ಷಣಕ್ಕೆ ಈ ಗ್ರಂಥಗಳಲ್ಲಿಯ ಜಾತಿವಿಶಿಷ್ಟ ಗುರುತ್ವವು ಹೋಲದರಿಂದ ಇವುಗಳ ಅಪ್ರಾಮಾಣ್ಯವು ಒಡೆದು ಕಾಣುವುದು.

ಮೈಸೂರ ಚಿಕ್ಕ ದೇವರಾಜನು ವೀರಶೈವ ಧರ್ಮವನ್ನು ನಿರಾಕರಿಸಿ ಶ್ರೀ ವೈಷ್ಣವ ಮತಾವಲಂಬಿಯಾಗಿ ದ್ವೈತಾದ್ವೈತ ವಿಶಿಷ್ಟಾದ್ವೈತಗಳ ಬೆಳಕು ಹೆಚ್ಚಾಗಲು ಇನ್ನುಳಿದ ಕೆಳದಿಯ ಮುಂತಾದ ವೀರಶೈವ ರಾಜರುಗಳು ಈ ಮತಕ್ಕೂ ವ್ಯಾಸ ಸೂತ್ರಗಳ ಆಧಾರವನ್ನು ಹುಡುಕ ಹೋದರು. ಶಿವಾಗಮಗಳ ಸ್ವತಂತ್ರ ಶಿಲಾಧಾರವನ್ನು ನಂಬದೆ ವ್ಯಾಸ ಸೂತ್ರದ ಮಳಲಲ್ಲಿ ಈ ಧರ್ಮದ ಭವ್ಯ ಮಂದಿರವನ್ನು ನಿಲ್ಲಿಸಲೆಣಿಸಿದರು. ವ್ಯಾಸಸೂತ್ರಾಧಾರವಿಲ್ಲದೆ ಧರ್ಮವಿಲ್ಲೆಂದು ಬಗೆದರು. ಆದಕ್ಕಾಗಿ ವರ್ಣಕಲ್ಪನೆಯನ್ನು ತಂದರು. ಅಳಿದ ವರ್ಣಗಳನ್ನು ಎತ್ತುವಲ್ಲಿ ಕಾಲಾನುಗುಣದಿಂದ ಅಂಕುರಿಸಿದ ಜಾತಿ ಕಲ್ಪನವು ಅವರಿಗೆ ನೆರವಾಯ್ತು. ಅವುಗಳಲ್ಲಿಯೆ ವರ್ಣವಿಭಾಗಗಳನ್ನು ಹೇಗೋ ಕಲ್ಪಿಸಿದರು. ರಾಜನು ವರ್ಣಾಶ್ರಮ ಧರ್ಮ ಪರಿಪಾಲಕನೆಂಬ ಮನ್ವಾದಿ ಸ್ಮೃತಿಗಳನ್ನನುಸರಿಸಿ ಸತ್ಯಧರ್ಮಕ್ಕೆ ಅಸತ್ಯ ಧರ್ಮದ ನೀರು ಎರಿಸಿದರು.

ಆಗಲೆ ಧರ್ಮ ಸಂಪ್ರದಾಯಗಳ ತತ್ವವು ಹಾಳಾಗಲಿಲ್ಲ. ಶರಣರ ತತ್ವಗಳು ನಮ್ಮ ಸಮಾಜದಲ್ಲಿ ಬೇರೂರಿದರಿಂದ

(೧೨ ನೆಯ ಪುಟದ ಮುಂದೆ ಸಾಗಿದೆ.)

||ಶ್ರೀ ಭುವನೇಶ್ವರೀ ಪ್ರಸನ್ನ ||

ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯ ಸ್ಮಾರಕೋತ್ಸವ.

[ಲೇಖಕರು:—ಶ್ರೀ. ಜಿ. ಎಸ್. ಮೊಖಾಸಿ, ಬಿ. ಎ. ಹುಬ್ಬಳ್ಳಿ]

'ವಿಜಯನಗರದ ಹೆಸರನ್ನು' ಕೇಳದ ಕನ್ನಡಿಗನು ಇಲ್ಲೇ ಇಲ್ಲ. ಕೇವಲ ಕರ್ನಾಟಕದಲ್ಲಿ ಮಾತ್ರವೇ ಅಲ್ಲ, ಅಖಿಲ ಹಿಂದುಸ್ಥಾನದಲ್ಲಿಯೂ ಕೂಡ ಈ ಹೆಸರು ಪ್ರಸಿದ್ಧವಿದೆ. ಪ್ರಾಥಮಿಕ ಶಾಲೆಗಳಲ್ಲಿ ಸಹ ಕಲಿಸುವ ಹಿಂದುಸ್ಥಾನ ಇತಿಹಾಸದಲ್ಲಿ ಎಷ್ಟೇ ಪ್ರಮಾಣದಿಂದಾದರೂ, ವಿಜಯ ನಗರದ ಸಾಮ್ರಾಜ್ಯದ ಇತಿಹಾಸವು ಬಂದೇ ಬರುತ್ತದೆ. ಒಂದು ಕಾಲದಲ್ಲಿ ವಿಜಯ ನಗರದ ವೈಭವದ ಕೀರ್ತಿಯು ಏಶಿಯಾ ಯುರೋಪ ಖಂಡಗಳಲ್ಲಿ ಸಹ ಬೆಳಗಿ ಅಲ್ಲಿಯ ಜನರನ್ನು ಬೆರಗುಗೊಳಿಸಿತು. ಎಷ್ಟೋ ಪ್ರವಾಸಿಕರು, ವ್ಯಾಪಾರಸ್ಥರು ವಿಜಯ ನಗರಕ್ಕೆ ಬಂದು ಕಿವಿಯಿಂದ ಕೇಳಿದ ವೈಭವವನ್ನು ಪ್ರತ್ಯಕ್ಷ ಕಣ್ಣಿನಿಂದ ಕಂಡು ಬಾಯಿ ಮೇಲೆ ಬೆರಳಿಟ್ಟುಕೊಂಡಿರುವರು. ಅದೇನು ಅಭಿಮಾನದ ಗೊಡ್ಡು ಮಾತಲ್ಲ. ಇದಕ್ಕೆ ಪರದೇಶದ ಪ್ರವಾಸಿಕರು ಬರೆದಿಟ್ಟ ಪತ್ರಗಳೇ ಸಾಕ್ಷಿಯಾಗಿವೆ. ಏರಿಳಿತಗಳು ಸೃಷ್ಟಿಯ ನಿಯಮವಲ್ಲವೇ? ಕಾಲಚಕ್ರದ ಗತಿಗೆ ಸಿಕ್ಕು ವೈಭವ ಶಿಖರವೇರಿದ ವಿಜಯನಗರದ ಸಾಮ್ರಾಜ್ಯವು ಹೇಳ ಹೆಸರಿಲ್ಲದಾಯಿತು. ಸದ್ಯದ ಪರಿಸ್ಥಿತಿಯನ್ನು ನೋಡಲು ಶ್ರೀ. ಸೆವೆಲ್ಲ ಸಾಹೇಬರು ಕೊಟ್ಟ "ಮರೆತು ಹೋದ ಸಾಮ್ರಾಜ್ಯ"ವೆಂಬ ಹೆಸರು ಯಥಾ ಯೋಗ್ಯವಾಗಿದೆ. ಆದರೆ ಈ ಸಾಮ್ರಾಜ್ಯದ ಇತಿಹಾಸವನ್ನಾದರೂ ತಕ್ಕಮಟ್ಟಿಗಾಗಾದರೂ ಅಭ್ಯಾಸ ಮಾಡಿದ ಮನುಷ್ಯನಿಗೆ ಶ್ರೀ. ಸೂರ್ಯನಾರಾಯಣರಾಯರು ಕೊಟ್ಟ "ಎಂದೂ ಮರೆಯದ ಸಾಮ್ರಾಜ್ಯ"ವೆಂಬ ಹೆಸರು ಎಷ್ಟು ನಿಜವಾಗಿರುವದೆಂದು ಹೊಳೆಯದಿರದು.

ಸಾಮ್ರಾಜ್ಯ ಶಿರೋಮಣಿಯಾದ ಈ ಕರ್ನಾಟಕ ಸಾಮ್ರಾಜ್ಯವು ೧೩೩೬ನೇ ಇಸವಿಯಲ್ಲಿ ಶ್ರೀ. ವಿದ್ಯಾರಣ್ಯ ಮುನಿಗಳ ತಪಶ್ಶಕ್ತಿಯ ನೆಲಗಟ್ಟಿನ ಮೇಲೆ ಸ್ಥಾಪಿತವಾಯಿತು. ನೆಲಗಟ್ಟಿಗೆ ತಕ್ಕಂತೆ ಕ್ಷಾತ್ರವರ್ಣ ವಿಭೂಷಣರಾದ ಹರಿಹರ ಬುಕ್ಕರು ಸಾಮ್ರಾಜ್ಯ ಕಟ್ಟಡವನ್ನೂ ಕಟ್ಟಿದರು. ಮುಂದೆ ಕೃಷ್ಣರಾಯನ ಕಾಲಕ್ಕೆ ಈ ಕಟ್ಟಡದ ಸುವರ್ಣ ಶಿಖರವು ಪ್ರತಿಸೂರ್ಯನಂತೆ ಪ್ರಕಾಶಿಸುತ್ತಿತ್ತು. ಪ್ರತಿದಿನಕ್ಕೂ ಸೂರ್ಯೋದಯ. ಮಧ್ಯಾಹ್ನ, ಸೂರ್ಯಾಸ್ತ, ರಾತ್ರಿಗಳು ಹೇಗೆ ನಿತ್ಯವೋ ಹಾಗೆಯೇ ಪ್ರತಿಯೊಂದು ಸಂಸ್ಥೆಯ, ರಾಷ್ಟ್ರದ, ರಾಜ್ಯದ ಆಯುಷ್ಯದಲ್ಲಿಯೂ ಈ ಕ್ರಮಗಳುಂಟು. ಈ ನಿಯಮಕ್ಕನುಸರಿಸಿ ಭಾರತ ಮಾತೆಯ ಮಣಿ ಮುಕುಟದಂತಿದ್ದ ಕರ್ನಾಟಕ ಸಾಮ್ರಾಜ್ಯದ ಮೇಲೂ ಸೂರ್ಯಾಸ್ತನಾದನು. ಸಾಮ್ರಾಜ್ಯದ ಪ್ರಳಯ ಕಾಲವಾದ ೧೫೬೫ರ ನೆಯ ಇಸ್ವಿಯು ಅದರ ಶಿಖರವನ್ನು ಕತ್ತರಿಸಿತು, ಕಟ್ಟಡವನ್ನು ನೆಲಸಮ ಮಾಡಿತು! ಆದರೇನು ಯಮನನ್ನು ಕೂಡಾ ಜಯಿಸುವಂಥ ಆಧ್ಯಾತ್ಮಿಕ ಶಕ್ತಿಯ ನೆಲಗಟ್ಟನ್ನು ಕಿತ್ತೊಗೆಯಲು ಯಾರಿಗೆ ಸಾಧ್ಯ. ಅಂತೆಯೇ ಗತವೈಭವದ ಗೋಳನ್ನು ಹಾಡಿ ದುರ್ಬಲರಿಗೆ ಬಲವನ್ನು, ನಿರ್ವೀರ್ಯರಿಗೆ ವೀರ್ಯವನ್ನು, ನಿರ್ಜೀವಿಗಳಾದವರಿಗೆ ಜೀವನವನ್ನೂ ಮನುಷ್ಯತ್ವವನ್ನು ಕಳೆಕೊಂಡವರಿಗೆ ಮನುಷ್ಯತ್ವವನ್ನೂ ದಯಪಾಲಿಸಲೆಂದು ಹಾಳಾದ ಗುಡಿಗೋಪುರಗಳೂ, ಅರಮನೆಗಳೂ, ಅರಸಿಯರ ಕ್ರೀಡಾಭವನ ಮುಂತಾದವುಗಳೂ ಬಿಸಲು ಮಳೆಗಾಳಿಗಳಿಗೆ ಹಣಿಯದೆ, ಹಗೆಗಳಿಗೆ ಹಣಿಯದ ರಣವೀರರಂತೆ ನಿಂತಿರುವವು. ರಾಯರ ರಾಜ್ಯ ಲಕ್ಷ್ಮಿಯ ಹೃದಯ ಭೇದಕ ದುಃಖವನ್ನು ನೋಡಿ ಕಲ್ಲುಗಳು ಸೀಳಾಗಿರುವವೋ ಎಂಬಂತೆ, ತುಂಗಭದ್ರೆಯು ಗುಡ್ಡವನ್ನು ಭೇದಿಸಿ ವಿಜಯನಗರದ ಮಗ್ಗಲಲ್ಲಿಯೇ ಹರಿಯುತ್ತಿರುವಳು. ಈ ಹಾಳು ದೃಶ್ಯವೇ ಹೃದಯವನ್ನು ಕರಗಿಸುವದು, ಅಲ್ಲ, ಉತ್ಸಾಹದ ಬೀಜವನ್ನು ಊರುವದು. "ನನ್ನದು ಈ ಕನ್ನಡ ನಾಡು" ಎಂಬ ಅಭಿಮಾನವನ್ನು ಉಕ್ಕೇರುವಂತೆ ಮಾಡುವದು. ಪ್ರತಿಯೊಂದು ಕಲ್ಲಿಗೂ ಒಂದೊಂದು ನಾಲಿಗೆ ಇದ್ದರೆ ಅದೇನು ಮಾತಾಡಬಹುದಾಗಿದ್ದಿತೋ!

ವಿಜಯನಗರದ ಸಾಮ್ರಾಜ್ಯವು ಸುಮಾರು ೨೩೦ ವರುಷಗಳವರೆಗೆ ಬಾಳಿ ಅಳಿದುಹೋಯಿತು. "ಅಳಿವುದು ಕಾಯ ಉಳಿವುದು ಕೀರ್ತಿ" ಎಂಬ ದೊಡ್ಡವರ ಮಾತಿನಂತೆ ಸಾಮ್ರಾಜ್ಯದ ಸ್ಥೂಲ ಶರೀರವು ನಾಶವಾದರೂ ಅದರ ಜೀವಿತದಲ್ಲಿ ಮಾಡಿದ ಮಹತ್ಕಾರ್ಯಗಳು ಆಚಂದ್ರಾರ್ಕವಾಗಿ ಉಳಿಯುವವು. ವಿಜಯನಗರವು ಕರ್ನಾಟಕಸ್ಥರಿಗೆ ಅಭಿಮಾನಾಸ್ಪದವಾದ ವಿಷಯವಿಷ್ಟೇ ಅಲ್ಲ. ಸಮಗ್ರ ಭಾರತದ ಇತಿಹಾಸದಲ್ಲಿ ಈ ಸಾಮ್ರಾಜ್ಯದ ಮಹತ್ವವೆಷ್ಟಿದೆಯೆಂಬುದು ಇತಿಹಾಸವನ್ನು ಅಭ್ಯಾಸ ಮಾಡುವವರಿಗೆ ಚೆನ್ನಾಗಿ ಗೊತ್ತುಂಟು. ರಾಜಕೀಯ, ಸಂಸ್ಕೃತಿ ಧಾರ್ಮಿಕ ಸಾಹಿತ್ಯ ಕಲಾ, ವ್ಯಾಪಾರೋದ್ಯೋಗ, ಆರ್ಥಿಕ ಮೊದಲಾದ ದೃಷ್ಟಿಯಿಂದ ನೋಡಿದರೆ ವಿಜಯನಗರದ ಸಾಮ್ರಾಜ್ಯವನ್ನು ಯಾರೂ ಎಂದೂ ಮರೆಯುವಂತಿಲ್ಲ. ಈ ಸಾಮ್ರಾಜ್ಯವು ಕರ್ನಾಟಕದ ಕಡೆಯ ಸಾಮ್ರಾಜ್ಯವಾಯಿತು. ಈ ಸಾಮ್ರಾಜ್ಯದ ಕೂಡ ಕನ್ನಡಿಗನ ಜೀವಾಳವೇ ಕತ್ತರಿಸಿ ಹೋಯಿತು. ಮುಂದೆ ಕನ್ನಡಿಗರ ದುರ್ದೈವದಿಂದ ಕರ್ನಾಟಕವು ಮುಂಬೈ, ಮದ್ರಾಸ, ಮೈಸೂರ, ನಿಜಾಂ ಸರಕಾರ, ಕೊಡಗು ಮುಂತಾದ ಸರಕಾರಗಳ ಆಧಿಪತ್ಯಕ್ಕೆ ಒಡೆದು ಹಂಚಲ್ಪಟ್ಟಿತು. ಹೀಗಾಗಿ ಕರ್ನಾಟಕದ ಅಸ್ತಿತ್ವಕ್ಕೆ ಕೊಡಲಿಯ ಪೆಟ್ಟು ಬಿತ್ತು. ಅಂದಮೇಲೆ ಕನ್ನಡಿಗನು ಮುಂದುವರಿಯುವುದು ಹೇಗೆ? ಈಗ ನಮ್ಮವರೇ ನಮಗೆ ಪರಕೀಯರಂತೆ ತೋರಹತ್ತಿರುವರು. ಆದ್ದರಿಂದ ಕರ್ನಾಟಕದ ಪ್ರತಿಯೊಂದು ವಿಷಯದಲ್ಲಿಯೂ ಪ್ರಗತಿಗೆ ಪ್ರತಿಕೂಲವಾಗಹತ್ತಿರುವರು. ಇಲ್ಲದಿದ್ದರೆ ಬ್ರಿಟಿಶ್ ಚಕ್ರಾಧಿಪತ್ಯದಲ್ಲಿ ಕರ್ನಾಟಕವು ಇತರ ಯಾವ ಪ್ರಾಂತಕ್ಕೂ ಹಿಂದೆ ಬೀಳುತ್ತಿರಲಿಲ್ಲ. ಇಷ್ಟೇ ಅಲ್ಲ. ಸರ್ವವಿಧದಲ್ಲೂ ಎಲ್ಲರಿಗೆ ಮೇಲೆಣಿಸಿಕೊಳ್ಳಬಹುದಾಗಿತ್ತು. ದೈವವೇ ಪ್ರತಿಕೂಲವಾಗಿದ್ದಮೇಲೆ ಯಾರೇನು ಮಾಡಬಲ್ಲರು? "ನನ್ನದು ಈ ಕನ್ನಡ ನಾಡೆಂಬ" ಅಭಿಮಾನ, ಕನ್ನಡ ಭಾಷೆ ಸಾಹಿತ್ಯಗಳ ಮೇಲಿನ ಮಮತೆ, ಕನ್ನಡಿಗರು ಎಲ್ಲಿಯೇ ಇರಲಿ ನಾವೆಲ್ಲ ಒಬ್ಬ ತಾಯಿಯ ಮಕ್ಕಳೆಂಬ ತಿಳುವಳಿಕೆ ಇವೇ ಮುಂತಾದವುಗಳು ಕರ್ನಾಟಕವು ಎಚ್ಚತ್ತಿದೆ ಎಂಬುವುದಕ್ಕೆ ಸಾಕ್ಷಿ. ಆದರೆ ಈ ಅವಧಿಯೊಳಗೆ ಕಾರ್ಯವು ಎಷ್ಟು ಮುಂದರಿಯಬೇಕೋ ಅಷ್ಟು ಮುಂದರಿದಿಲ್ಲ. ಅದಕ್ಕೆ ಅನೇಕ ಕಾರಣಗಳುಂಟು. ಆದರೆ ನಾವು ಈ ಎಲ್ಲ ಟೊಳ್ಳು ಕಾರಣಗಳನ್ನು ಮೂಲೆಗೊತ್ತಿ ಎಲ್ಲ ಕರ್ನಾಟಕಸ್ಥರು, ಜಾತಿ, ಧರ್ಮ, ರಾಜಕೀಯ ವಿಷಯದಲ್ಲಿಯ ಮತಭೇತ ಮುಂತಾದ ಭೇದಗಳನ್ನೆಲ್ಲ ಮರೆತು ಉಪ್ಪುಂಡ ಮನೆಗೆ ಎರಡೆಣಿಸದೆ, ಕರ್ನಾಟಕದ ಸರ್ವತೋಮುಖವಾದ ಏಳ್ಗೆಗೆ ಯತ್ನಿಸುವುದು ತಮ್ಮ ಆದ್ಯ ಕರ್ತವ್ಯವೆಂದು ಭಾವಿಸಬೇಕು.

ಈ ರೀತಿ ಈಗಾಗಲೇ ಪ್ರಯತ್ನಗಳು ನಡೆದೇ ಇವೆ. ಅಂತೆಯೇ ಇಷ್ಟಾದರೂ ಚೇತರಿಕೆ ಬಂದಿರುವದು. ಆದರೆ ನಮ್ಮ

ಡಾಯರಿಯನ್ನು ಏಕೆ ಬರೆದಿಡಬೇಕು?

(ಲೇಖಕರು:- ಶಂ, ಮದನಮೋಹನ ಮೂಲಕೀಯವರು.)

ಡಾಯರಿಯನ್ನು ಬರೆದಿಡುವುದರಿಂದ ಮನುಷ್ಯನ ಪ್ರಗತಿಗೆ ಒಳ್ಳೇ ಸಹಾಯವಾಗುವದು. ಜಗತ್ತಿನ ಎಲ್ಲ ಮಹಾಪುರುಷರ ಚರಿತ್ರೆಗಳನ್ನು ಪರಿಶೀಲಿಸಿದರೆ ಅವರು ತಮ್ಮ ತಮ್ಮ ತಪ್ಪುಗಳನ್ನೆಲ್ಲ ಡಾಯರಿಯಲ್ಲಿ ಬರೆದಿಡುತ್ತಿದ್ದರೆಂಬುವದು ಕಂಡು ಬರುವದು. ಮತ್ತು ಆ ತಪ್ಪುಗಳನ್ನು ನಿವಾರಿಸಿಕೊಳ್ಳುವದಕ್ಕಾಗಿ ಅವರು ಯಾವಾಗಲೂ ಪ್ರಯತ್ನಮಾಡುತ್ತಿದ್ದರು.

ಡಾಯರಿಯನ್ನು ನಿಮ್ಮ ಮನಬಿಚ್ಚಿ ಬರೆದಿಡಿರಿ. ಅದರಲ್ಲಿ ನಿಮ್ಮ ಅತ್ಯಂತ ಗೂಢವಾದ ತಪ್ಪುಗಳನ್ನೆಲ್ಲ ಬರೆದಿಟ್ಟು ಪರಮಾತ್ಮನ ಸನ್ನಿಧಿಯಲ್ಲಿ ಒಪ್ಪಿಕೊಳ್ಳುವಂತೆ ನಿಮ್ಮ ತಪ್ಪುಗಳನ್ನು ಒಪ್ಪಿಕೊಂಡು ಕ್ಷಮೆ ಬೇಡಿರಿ. ನಿಮ್ಮ ಜೀವನವು ಸುಖಮಯವೂ ಪವಿತ್ರವೂ ಆಗಲಿಕ್ಕೆ ಭಗವದ್ಗೀತೆಯಲ್ಲಿಯ ಈ ಕೆಳಗಿನ ಶ್ಲೋಕವನ್ನು ಮನನಮಾಡುತ್ತ ಹೋದರೆ ಒಳ್ಳೆಯ ಲಾಭವಾಗುವದು.

ಯುಕ್ತಾಹಾರ ವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು।
ಯುಕ್ತಸ್ವಪ್ನಾವಬೋಧಸ್ಯ ಯೋಗೋಭವತಿ ದುಃಖಹಾ ||

ಈ ಶರೀರವು ಪರಮಾತ್ಮನ ಆಲಯವಾಗಿದೆ. ಇದರಲ್ಲಿ ಈಶ್ವರನು ಯಾವಾಗಲೂ ವಾಸಿಸುತ್ತಾನೆ. ಯಾವಾಗಲೂ ಇದನ್ನು ದೇವಾಲಯವೆಂದು ಧ್ಯಾನಿಸುತ್ತಿರಬೇಕು. ಈ ದೇವಾಲಯವನ್ನು ಎಂದೂ ಮಲಿನವಾಗಗೊಡಬಾರದು. ದುಷ್ಟ ವಿಚಾರಗಳಿಂದ ಯಾವಾಗಲೂ ಇದನ್ನು ಕಾಪಾಡಿರಿ ಮರೆತಾದರೂ, ಕನಸಿನಲ್ಲಿಯೂ ಸಹ ಅಸತ್ಯವು ಮುಖದಿಂದ ಬರಕೂಡದು. ಇದಕ್ಕೆ ಸರಿಯಾಗಿಯೇ ಪ್ರಯತ್ನಮಾಡುತ್ತಿರಬೇಕು. ಒಂದು ವೇಳೆ ಎಲ್ಲಿಯಾದರೂ ಪ್ರಮಾದವಶಾತ್ ಸುಳ್ಳು ಹೇಳಿದರೆ ಅದನ್ನು ಡಾಯರಿಯಲ್ಲಿ ಬರೆದಿಡಿರಿ. ಈ ಅಸತ್ಯಕ್ಕಾಗಿ ಪರಮಾತ್ಮನನ್ನು ಕುರಿತು ಪ್ರಾರ್ಥನೆ ಮಾಡಿರಿ; ಕ್ಷಮೆ ಬೇಡಿರಿ; ನಿಜವಾದ ಪವಿತ್ರ ಮನಸ್ಸಿನಿಂದ ಅವನ ಶರಣಾಗತರಾಗಿರಿ; ಪುನಃ ಎಂದೂ ಸುಳ್ಳು ಹೇಳುವುದಿಲ್ಲವೆಂದು ಪ್ರತಿಜ್ಞೆಮಾಡಿರಿ.

ಈ ಪವಿತ್ರ ದೇವಾಲಯವನ್ನು ರಕ್ಷಣೆ ಮಾಡುವುದು ಬ್ರಹ್ಮಚರ್ಯವಾಗಿದೆ ಬ್ರಹ್ಮಚರ್ಯದ ಬಲದಿಂದ ನಾವು ಭೂಮಂಡಲವನ್ನು ಸಹ ಗೆದೆಯ ಬಲ್ಲೆವು. ರಾವಣನ ಮಗನಾದ ಅತುಲಬಲಶಾಲಿಯಾದ ಮೇಘನಾದನನ್ನು ಲಕ್ಷ್ಮಣನು ಕೊಂದುದು ಅವನ ಅಚ್ಛಳಿಯದ ಬ್ರಹ್ಮಚರ್ಯದ ಬಲದಿಂದಲ್ಲವೇ? ಬ್ರಹ್ಮಚರ್ಯದ ಬಲದಿಂದಲೇ ಅರ್ಜುನನಿಗೆ ಜಯದ್ರಥನನ್ನು ಎದುರಿಸುವ ಶಕ್ತಿಯುಂಟಾಯಿತು ಬ್ರಹ್ಮಚರ್ಯದಿಂದಲೇ ನಮ್ಮಲ್ಲಿ ಬಲವುಂಟಾಗುತ್ತದೆ.

ಈ ಬ್ರಹ್ಮಚರ್ಯವನ್ನು ಸಂಪಾದಿಸಲಿಕ್ಕೆ ಲಕ್ಷ್ಮಣ, ಅರ್ಜುನ ಮುಂತಾದವರನ್ನು ಯಾವಾಗಲೂ ಧ್ಯಾನಿಸಿರಿ ಅವರ ನೆನಪು ನಿಮಗೆ ಒಳ್ಳೇ ಹಿತವನ್ನುಂಟುಮಾಡುವದು. ನಮ್ಮ ಭಾರತವರ್ಷವನ್ನು ಅಂಥ ಜನರೇ ಉಚ್ಚಸ್ಥಿತಿಗೆ ಒಯ್ದಿದ್ದಾರೆ.

ಈಗ ಈ ಭಾರತ ಭೂಮಿಯನ್ನು ರಕ್ಷಿಸುವ ಭಾರವು ನಿಮ್ಮ ಮೇಲಿದೆ. ಮಹಾಪುರುಷರ ಭಾವಚಿತ್ರಗಳನ್ನು ನಿಮ್ಮ ವಾಸಸ್ಥಳಗಳಲ್ಲಿ ಹಚ್ಚಿರಿ. ಅವರ ಆದೇಶಗಳನ್ನು ನಿಮ್ಮ ಮನದಲ್ಲಿ ಅಂಟಿಸಿರಿ. ನಿಮ್ಮ ವಿಚಾರಗಳನ್ನು ಮಲಿನ ಮಾಡಬೇಡಿರಿ. ನೀವು ಧರ್ಮಸೇವಕರಿರುವಿರಿ. ಧರ್ಮರಕ್ಷಣೆಗಾಗಿ ಸರಸ್ವತಿಯ ಉಪಾಸನೆಯನ್ನು ಮಾಡಿರಿ. ಆದರ್ಶ ಧರ್ಮವೀರರನ್ನು ನಿಮ್ಮ ಕಣ್ಣು ಮುಂದೆ ಇಟ್ಟುಕೊಳ್ಳಿರಿ. ಬೆಳಗು ಮುಂಜಾನೆ ೫ ಗಂಟೆಗೆ ಏಳಿರಿ. ನಿಮ್ಮ ಪ್ರಾತರ್ವಿಧಿಗಳನ್ನು ತೀರಿಸಿ ಪರಮಾತ್ಮನ ಪ್ರಾರ್ಥನೆಮಾಡಿರಿ. ನಿಮ್ಮ ಮಾತು ಕಥೆಗಳಲ್ಲಿ ಶಾಂತಿಯಿರಲಿ. ಭೋಜನಕಾಲದಲ್ಲಿ ಶಾಂತತೆ ಇರಲಿ. ನೀವು ಕಾರ್ಯತತ್ಪರರಾದಾಗ್ಗೆ ನಿಮ್ಮ ಮನಸ್ಸು ತಲ್ಲೀನವಾಗಿರಲಿ. ಈ ಪ್ರಕಾರ ನೀವು ನಡೆದರೆ ಮನುಷ್ಯ ಶ್ರೇಷ್ಠರಾಗುವಿರಿ. (Manner maketh man) ಸತ್ಯದಿಂದ ನಡೆಯುವುದೇ ಮನುಷ್ಯನಿಗೆ ಉತ್ಕೃಷ್ಟವಾದ ಭೂಷಣವು. (Pure conduct is the best ornament) ಯಾವಾಗಲೂ ಕಠಿಣವಾದ ಕೆಲಸಗಳನ್ನೇ ಮಾಡುವ ರೂಢಿಯನ್ನಿಡಿರಿ. ಓದುವಾಗ್ಗೆ ಜಗತ್ತಿನ ಚಿಂತೆಯನ್ನೆಲ್ಲ ಬದಿಗಿರಿಸಿ ಪುಸ್ತಕಗಳನ್ನೋದುವುದರಲ್ಲಿ ಮಗ್ನರಾಗಿರಿ. ಇದೇ ನಿಮ್ಮ ಸಮಾಧಿಯು. ಇದೇ ನಿಮ್ಮ ಪೂಜೆಯು. (Work is worship) ಈ ಸಿದ್ಧಾಂತವನ್ನು ನಿಮ್ಮ ಕೋಣೆಗಳಲ್ಲಿ ಹಚ್ಚಿರಿ. ಬಲವಾಗಿ ಪ್ರಯತ್ನಮಾಡಲು ಕಲಿಯಿರಿ. ಮತ್ತು ಪರಿಶ್ರಮಪೂರ್ವಕವಾಗಿ ಅಭ್ಯಾಸಮಾಡಿರಿ.

'ಹಿಂದು' (ಉರ್ದು.)

ಮುಂದಿನ ಕಾರ್ಯವನ್ನು ನೋಡಿದರೆ ನಾವು ಇನ್ನೂ ಗಾಢ ನಿದ್ರೆಯಲ್ಲಿರುವೆವೆಂದು ಹೇಳಬೇಕಾಗುವದು. ಸಣ್ಣಪುಟ್ಟ ಪ್ರಮಾಣದ ಮೇಲಿನ ಪ್ರಯತ್ನಗಳಿಂದ ಅಗತ್ಯವಷ್ಟು ಕೆಲಸವೂ ಆಗುವದಿಲ್ಲ. ಮತ್ತು ಅದಕ್ಕೆ ಬಹು ದೀರ್ಘಕಾಲವೂ ಬೇಕಾಗುವದು. ಈಗ ಕಾಲ ವಿಲಂಬವು ಅಕ್ಷಮ್ಯವಾಗಿರುವದು ಆದ್ದರಿಂದ ಕರ್ನಾಟಕಸ್ಥರೆಲ್ಲರೂ ಒಂದೆಡೆಗೆ ಸೇರಿ ಪರಸ್ಪರ ಪರಿಚಯ ಮಾಡಿಕೊಂಡು, ಭ್ರಾತೃಭಾವವನ್ನು ತಳೆದು ದೂರಿದ್ದ ಕರ್ನಾಟಕವನ್ನು ಸಮೀಪ ಮಾಡಿಕೊಳ್ಳಬೇಕು. ಹರಿದು ಹಂಚಿಹೋದ ಕರ್ನಾಟಕವನ್ನು ಏಕೀಕರಿಸಿ ಕರ್ನಾಟಕದ ಪ್ರತ್ಯೇಕ ಪ್ರಾಂತವನ್ನು ಸಂಪಾದಿಸಬೇಕು ಉಪಯೋಗವಿಲ್ಲದೆ ಮಲೆತು ನಿಂತ ಮಡುವಿನಂತಿದ್ದ ಸಾಹಿತ್ಯಕ್ಕೆ ಮೋರಿಯನ್ನು ಮಾಡಿ, ಹುರುಪಿನಿಂದ ತುಂಬಿದ ಹೊಸ ಸಾಹಿತ್ಯದ ಕಾಲುವೆಗಳನ್ನು ಅದಕ್ಕೆ ಜೋಡಿಸಬೇಕು. ನಾವು ಕನ್ನಡಿಗರೆಂಬ ಭಾವನೆಗೆ ಮುಸುಕಿದ ಮುಸುಕನ್ನು ಹರಿದೊಗೆಯಬೇಕು. ಒಟ್ಟೇನೆಂದರೆ ರಕ್ತದ ಪ್ರತಿಯೊಂದು ಹನಿಯಲ್ಲಿಯೂ ನಾನು ಕನ್ನಡಿಗ, ನನ್ನ ಪ್ರಾಂತ ಕರ್ನಾಟಕ, ಕನ್ನಡವು ನನ್ನ ನಚ್ಚುಮೆಚ್ಚಿನ ನುಡಿಯು ಎಂಬ ಭಾವನೆಯು ಬೇಕು.

ಎಲ್ಲರೂ ಒಟ್ಟಾಗಿ ಸೇರಲು ಸರ್ವ ಸಾಮಾನ್ಯವಾದ ಮಹತ್ವದ ಪ್ರಸಂಗವೊಂದು ಬೇಕು. ಪರಿಷತ್ತು ಕರೆದರೆ ಸಾಹಿತ್ಯದಲ್ಲಿ ರುಚಿಯುಳ್ಳವರಷ್ಟೇ ಬರುವರು. ಏಕೀಕರಣ ಪರಿಷತ್ತು ಕರೆದರೆ ಹಲಕೆಲವು ಕಲಿತ ಜನರು ಮಾತ್ರ ಬರಬಹುದು. ಆದರೆ ಇಡೀ ಕರ್ನಾಟಕವು ಜಾಗೃತವಾದಂತಾಗಲಿಲ್ಲ. ಎಲ್ಲ ಪಂಥದವರೂ, ಮತದವರೂ, ಧರ್ಮದವರೂ, ಸಾಹಿತ್ಯಾಭಿಮಾನಿಗಳೂ, ಕಲಾಭಿಮಾನಿಗಳೂ, ಇತಿಹಾಸಕಾರರೂ, ನಾಟಕಕಾರರೂ, ಸಂಗೀತಕಾರರೂ, ಮೋಜುಗಾರರೂ ಸರ್ವರೂ ಒಟ್ಟಾಗಿ ಸೇರುವಂಥ ಸುಪ್ರಸಂಗವೀಗ ಬಂದಿದ್ದು ಅದನ್ನು ಯಾವ ಕನ್ನಡಿಗನೂ ಕಳಕೊಳ್ಳಬಾರದೆಂದು ಬೇಡುತ್ತೇನೆ.

(ಮುಂದೆ ಸಾಗುವದು.)

—ನಾಗಪುರ ವಿಶ್ವವಿದ್ಯಾಲಯದವರು ಆದಿಜನಗಳಿಗೆ ಮತ್ತು ಅರಣ್ಯವಾಸಿಗಳಾದ ಕಾಡುಜನ ವಿದ್ಯಾರ್ಥಿಗಳಿಗೆ ಇನ್ನು ೭ ವರುಷಗಳ ವರೆಗೆ ಫೀ. ಇಲ್ಲವೆಂದು ನಿರ್ಣಯಮಾಡಿರುವರು.

—ಬರುವ ಡಿಶೆಂಬರ ತಿಂಗಳ ಬಳ್ಳಾರಿಯಲ್ಲಿ ಸ್ವದೇಶಿ ವಸ್ತು ಪ್ರದರ್ಶನವು ಕೂಡುವುದಿದೆ. ಈಗಾಗಲೇ ಅನೇಕ ಸ್ವದೇಶಿ ಅಂಗಡಿಗಳೂ, ಕಾರ್ಯಾಲಯಗಳೂ ಬಂದು ನೆಲೆಸಿವೆ.

ಶರಣಸಂದೇಶ

ಶಾ. ಶ. ೧೮೫೫ ನೆಯ ಆಶ್ವೀಜ ಬ. ೧೨ ಸೋಮವಾರ.

ಹಿಂದು ಮಹಾಸಭೆಯ ಅಧಿವೇಶನವು.

ಸರಕಾರದವರ ಜಾತಿ ವಿಷಯಕ ನಿರ್ಣಯವು ಹಿಂದುಗಳಿಗೆ ಬಹಳೇ ಹಾನಿಯನ್ನುಂಟುಮಾಡುತ್ತಿರುವುದರಿಂದ ಹಿಂದು ಪ್ರತಿನಿಧಿಗಳು ತಮಗಿರಬೇಕಾದ ಸ್ಥಾನಗಳನ್ನು ಈ ಅಧಿವೇಶನದಲ್ಲಿ ವಿಚಾರಿಸಲು ಹಿಂದುಸ್ಥಾನದ ಆಯಾ ಭಾಗಗಳಿಂದಷ್ಟೇ ಅಲ್ಲದೆ ಆಫ್ರಿಕಾ, ಮಲಾಯಾ, ಚೀನ, ಜಪಾನ ಮೊದಲಾದ ಕಡೆಯಿಂದಲೂ ಪ್ರತಿನಿಧಿಗಳು ಬಹು ಸಂಖ್ಯಾಕರಾಗಿ ಬಂದಿರುವರು. ಆದುದರಿಂದ ಈ ಸಾರೆಯ ಮಹಾಸಭೆಗೆ ಒಂದು ವಿಶೇಷ ಮಹತ್ವವು ಪ್ರಾಪ್ತವಾಗಿರುವದು.

ಈ ಜಾತಿ ವಿಷಯಕ ರಾಜಕೀಯ ಘಟನೆಯು ಹೋದವರುಷದಿಂದ ಉಂಟಾಯಿತು. ಆವಾಗ್ಗೆ ಅದು ಹಿಂದುಗಳಿಗೆ ಅಸಮಾಧಾನಕಾರಕವಾಗಿದ್ದಿತು. ಮುಂದೆ ಬರಲಿರುವ ಶುಭ್ರ ಪತ್ರಿಕೆಯಲ್ಲಿಯೂ ಈ ನಿರ್ಣಯವು ಹಿಂದುಗಳಿಗೆ ಅಹಿತವನ್ನುಂಟುಮಾಡುವಂತಹದಿರುತ್ತದೆ. ಯಾಕಂದರೆ ಶುಭ್ರ ಪತ್ರಕದ ಪ್ರಕಾರ ಸಂಯುಕ್ತ ಶಾಸನದ ಸಭೆಯಲ್ಲಿ (Federal Legislative Assembly) ಮುಸಲ್ಮಾನರಿಗೆ ೮೨ ಸ್ಥಾನಗಳೂ ಹಿಂದುಗಳಿಗೆ ಕೇವಲ ೧೦೫ ಸ್ಥಾನಗಳೂ ಕೊಡಲ್ಪಡುವವು. ಅದರಲ್ಲಿಯೂ ೧೯ ಸ್ಥಾನಗಳು ಅಸ್ಪೃಶ್ಯರಿಗಾಗಿ ಕಾದಿಡಬೇಕು. ಆಯಾ ಜನಸಂಖ್ಯೆಯ ಪ್ರಮಾಣದಿಂದ ನೋಡಿದರೆ ಈ ವಿಭಜನೆಯು ಹಿಂದುಗಳಿಗೆ ಅಕಲ್ಯಾಣವನ್ನುಂಟುಮಾಡುವಂಥದಾಗಿರುತ್ತದೆಂದು ಹೇಳಬಹುದು. ಆದುದರಿಂದಲೇ ಸದ್ಯದ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಭಾಯಿ ಪರಮಾನಂದಜಿಯವರೇ ಮೊದಲಾದ, ೧೮ ಜನ ಮಧ್ಯವರ್ತಿ ಮಂಡಲದ ಸದಸ್ಯರು ಇದರ ವಿಷಯವಾಗಿ ಒಂದು ನಿಷೇಧ ಪ್ರದರ್ಶಕ ಪತ್ರಕವನ್ನು ಹೊರಡಿಸಿರುವರು.

ಶ್ರೀ. ಭಾಯಿ ಪರಮಾನಂದಜಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸರಕಾರದವರ ಈ ಜಾತಿ ವಿಷಯಕ ನಿರ್ಣಯದ ಧೋರಣವು ಸಾಯಮನ್ ಕಮಿಶನ್ನದವರ ನಿರ್ಣಯಕ್ಕಿಂತಲೂ ಕಡೆಯಾಗಿರುವದೆಂದು ಹೇಳಿದರು. ಇದರಿಂದ ಬಂಗಾಲ ಮತ್ತು ಪಂಜಾಬದ ಹಿಂದುಗಳಿಗೆ ಹಾನಿಯಾಗಿರುವದೆಂದೂ ಮತ್ತು ಇದು ಅಖಿಲ ಹಿಂದುಗಳ ಪ್ರಗತಿಯನ್ನು ಕುಂಠಿತಗೊಳಿಸುವದೆಂದೂ ಇವರು ಹೇಳಿದರು.

ಆದುದರಿಂದ ಹಿಂದುಸ್ಥಾನದ ಮುಖ್ಯ ಜನಾಂಗವಾದ ಹಿಂದು ಜನರ ಅಧಿವೇಶನದಲ್ಲಾದ ಸರ್ವಮಾನ್ಯವಾದ ಬೇಡಿಕೆಯನ್ನು ಮಾನ್ಯಮಾಡಲು ಸರಕಾರದವರು ತಮ್ಮ ಧೋರಣವನ್ನು ಸ್ವಲ್ಪ ವ್ಯತ್ಯಸ್ತ ಮಾಡುವುದು ವಿಹಿತವಾಗಿದೆ.

ಸ್ಫುಟ ಸೂಚನೆ.

ಮಹಾತ್ಮಾಜಿಯವರ ಮಹಾ ಯಾತ್ರೆ.

ಮಹಾತ್ಮಾಜಿಯವರು ಎಲ್ಲವೂ ಚನ್ನಾಗಿ ಸಂಧಿಸಿದರೆ ತಾವು ನವಂಬರ ೮ನೆಯ ತಾರೀಖಿಗೆ ತಮ್ಮ ದೀನ ಸೇವಾ ಯಾತ್ರೆಯನ್ನು ಪ್ರಾರಂಭಿಸುವರು. ಅವರು ಪ್ರವಾಸದಲ್ಲಿ ಕಾರ್ಯಕ್ರಮಗಳ ಸಮುಚ್ಚಯವನ್ನಿಡುವದಿಲ್ಲ. ಒಂದು ಬಿಟ್ಟೊಂದು ದಿವಸ ಪ್ರವಾಸ ಮಾಡುವರು. ಹೋದ ಹೋದಲ್ಲೆಲ್ಲ ಫಂಡು ಕೂಡಿಸುವರು ಮತ್ತು ಸನಾತನಿಗಳನ್ನು ಭೆಟ್ಟಿಯಾಗುವರು. "ಆಮಂತ್ರಣವನ್ನು ಕೊಡುವವರು ಠಕ್ಕರ ಬಾಪಾ ಇವರ ಕಡೆಗೆ ತಿಳಿಸಬೇಕು. ತಮ್ಮ ಸಂಸ್ಥೆಯ ಕಾರ್ಯಕ್ರಮಗಳ ಮುಖ್ಯಾಂಶವನ್ನು ಸ್ವಲ್ಪದರಲ್ಲಿ ಬರೆಯಬೇಕು. ಉದ್ದಿಶ್ಯ ಕಾರ್ಯವನ್ನು ಬಿಟ್ಟು ಬೇರೆ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬಾರದು. ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಗೆ ಪ್ರತಿಬಂಧವು ಮುಖ್ಯವಾಗಿ ತಪ್ಪು ತಿಳುವಳಿಕೆಯಿಂದಲೇ ಆಗಿರುವದು." ಈ ಪ್ರಕಾರವಾಗಿ ಪ್ರಕಟಿಸಿದ್ದಾರೆ—

ಮೊದಲಿನಂತೆ ಅವರ ದೇಹ ಸ್ಥಿತಿಯು ಸದೃಢವಾಗಿರುವುದಿಲ್ಲವಾದುದರಿಂದ ಅವರ ಸೇವೆಗೆ ಸಹಾಯ ಮಾಡುವಂಥವರು ಸೂಕ್ಷ್ಮವಾಗಿ ವರ್ತಿಸುವದು ಯುಕ್ತವಾದುದಾಗಿದೆ.

ವಿಜ್ಞಾಪನೆ.

ಪದ್ಧತಿಯ ಪ್ರಕಾರ ವೀರಶೈವ ವಿದ್ಯಾಲಯಕ್ಕೆ ೨೧ ದಿವಸಗಳ ಸೂಟಿ ಇರುವದರಿಂದ "ಶರಣ ಸಂದೇಶದ" ೧೨ನೆಯ ಸಂಚಿಕೆಯು ತಾ. ೨೩-೧೦-೩೩ನೆಯ ದಿವಸ ಪ್ರಕಟವಾಗದೆ ತಾ. ೩೦-೧೦-೩೩ನೆಯ ದಿವಸ ಪ್ರಕಟವಾಗುವುದು.

ಮ್ಯಾನೇಜರ್,
ಶರಣ ಸಂದೇಶ.

ಜಪಾನಿ ವ್ಯಾಪಾರ ಸಮಸ್ಯೆ.

ಹಿಂದುಸ್ಥಾನ ಮತ್ತು ಜಪಾನಗಳ ವ್ಯಾಪಾರ ಸಂಬಂಧವನ್ನು ಆಲೋಚಿಸುವುದಕ್ಕಾಗಿ ಬಂದಿರುವ ಜಪಾನಿ ಪ್ರತಿನಿಧಿಗಳು ಹಿಂದುಸ್ಥಾನದ ಪ್ರತಿನಿಧಿಗಳ ಸಂಗಡ ವಿಚಾರ ವಿನಿಮಯವನ್ನು ಮಂದಗತಿಯಿಂದ ನಡೆಯಿಸಿರುವರು. ಮುಖ್ಯವಾಗಿ ಜಪಾನಿಗಳು ಹಿಂದುಸ್ಥಾನದ ಹತ್ತಿಯನ್ನು ಕೊಂಡುಕೊಳ್ಳುವ ಪ್ರಮಾಣಕ್ಕೂ ಮತ್ತು ಹಿಂದುಸ್ಥಾನಕ್ಕೆ ಬರುವ ಜಪಾನಿ ಪದಾರ್ಥಗಳ ಪ್ರಮಾಣಕ್ಕೂ ಜೋಡಣೆಯನ್ನು ಮಾಡಬೇಕೋ ಅಥವಾ ಜಪಾನದಿಂದ ಬರುವ ಬಟ್ಟೆಗಷ್ಟೆ ಸಂಬಂಧಪಡಿಸಬೇಕೋ ಹೇಗೆಂಬುದಾಗಿ ವಿಚಾರ ನಡೆಯುತ್ತಲಿದೆ. ಇದಲ್ಲದೆ ಹಿಂದೀ ಜಪಾನಿ ಪೇಂಡಣಾವಳಿಗಳಲ್ಲಿ ವಿರಳಿತಗಳಾದರೆ ಈ ಬರಹೋಗುವ ಸರಕುಗಳ ಯೋಜನೆಯು ನಿಷ್ಪ್ರಯೋಜಕವಾಗುವುದರಿಂದ ಅದಕ್ಕೆ ಏನು ವ್ಯವಸ್ಥೆ ಮಾಡಬೇಕೆಂಬುದಾಗಿಯೂ ವಿಚಾರಿಸುತ್ತಲಿದ್ದಾರೆ. ಸದ್ಯಕ್ಕೆ ೨೧ನೆಯ ತಾರೀಖಿನವರೆಗೆ ಈ ವಿಚಾರ ವಿನಿಮಯವು ನಿಲ್ಲಿಸಲ್ಪಟ್ಟಿರುವುದು.

ಶ್ವಪಚನಾದರೇನು? ಲಿಂಗಭಕ್ತನೇ ಕುಲಜನು.

ಶ್ವಪಚನಾದರೇನು? ಲಿಂಗಭಕ್ತನೇ ಕುಲಜನು | ನಂಬಿ ನಂಬದಿದ್ದರೆ ಸಂದೇಹಿ ನೋಡೆ | ಕಟ್ಟಿದರೇನು, ಬಿಟ್ಟರೇನು? ಪೂಜಿಸಿದರೇನು ಮನಮುಟ್ಟದನ್ನಕ್ಕ? ಭಾವ ಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು | ಕೂಡಲ ಸಂಗಯ್ಯನೊಲಿದವಂಗಲ್ಲದೆ||

ಭಕ್ತ ಕೂಲಬನ್ನರಿತು ಭಕ್ತ ಸ್ಥಲವನ್ನು ಮೀರಿ ಆ ಭಕ್ತಿಯನ್ನೇ ಗಟ್ಟಿಗೊಳಿಸಿ ಮಾಹೇಶ ಸ್ಥಲವನ್ನೈದಿದೆವೆಂದು ಹೇಳಿಕೊಳ್ಳುವ ಕೆಲವರು ಭಕ್ತಿಯು ನೆಲೆಗಾಣದೆ ಭಕ್ತರಲ್ಲಿ ಇಲ್ಲದ ಕುಲಗಳನ್ನು ಕಲ್ಪಿಸಿ ಛಲದಿಂದ ಹೋಲಾಡುತ್ತಿರುವರಷ್ಟೆ. ಭಕ್ತಿ ಶೂನ್ಯರಾದವರಿಗೆ ತಮ್ಮಲ್ಲಿಯೇ ತಮಗೆ ವಿಶ್ವಾಸ ನೆಲೆಗೊಳ್ಳದು. ಶ್ರೀ ಗುರುವು ಶಿಷ್ಯನನುಗ್ರಹಿಸಿ ಅಂಗಪ್ರಾಣಿಯಾಗಿದ್ದವನನ್ನು ಲಿಂಗಪ್ರಾಣಿಯನ್ನಾಗಿ ಮಾಡಿ ಲಿಂಗಭಕ್ತಿಯನರುಹಿಕೊಟ್ಟ ಮೇಲೆ ಅಂಥ ಶಿವಭಕ್ತನ ಶಿವಭಕ್ತಿಯ ಮೇಲ್ಮೆಯನ್ನರಸಬೇಕಲ್ಲದೆ ಅವನ ಹಿಂದಿನ ಕುಲ, ಆಚಾರ ಇಲ್ಲವೆ ಕಸಬುಗಳನ್ನು ಎತ್ತಿ ಆಡುತ್ತ ಅವನನ್ನು ಕೀಳೆಂದು ಕಾಣುವಂಥವರು ತಾವು ಸ್ವತಃ ಎಷ್ಟರಮಟ್ಟಿಗೆ ಶಿವಭಕ್ತಿಯುಕ್ತರಾಗಿರುವರೆಂಬುದು ಒಡೆದು ಕಾಣಿಸುವದಿಲ್ಲವೇ? ಶ್ವಪಚನಾಗಿದ್ದರೇನು? ಲಿಂಗಧಾರಿಯಾಗಿ ಲಿಂಗಪಥವ ಹಿಡಿದಮೇಲೆ ಅವನಲ್ಲಿ ವ್ಯಂಗವುಂಟೆ? ಅಂಥವರು ಲಿಂಗ ಸಾಮರಸ್ಯವನ್ನು ಹೊಂದಲು ಶಕ್ತರಾಗರೇ? ಶಿವಭಕ್ತಿಯಿಂದ ಧೂತಪಾಪನಾದ ಶ್ವಪಚನು ಕೂಡಾ ದ್ವಿಜತ್ವವನ್ನು ಹೊಂದುವನು. ಆದರೆ ಶಿವಭಕ್ತಿವಿಹೀನನಾದವನು ಒಬ್ಬ ಶ್ವಪಚನಕಿಂತಲೂ ಕೀಳೆಂಬುದನ್ನು “ ಶ್ವಪಚೋಪಿ ಮುನಿಶ್ರೇಷ್ಠಃ ಶಿವಭಕ್ತ್ಯಾ ದ್ವಿಜಾಧಿಕಃ | ಶಿವಭಕ್ತಿ ವಿಹೀನಶ್ಚ ದ್ವಿಜೋಪಿ ಶ್ವಪಚಾಧಮಃ” ಎಂದು ವೀರಶೈವ ಸಾರಸಂಗ್ರಹ ಗ್ರಂಥದಲ್ಲಿ ಉದಾಹರಿಸಲ್ಪಟ್ಟಿರುವುದನ್ನು ನೋಡಬಹುದು.

ಈ ಪ್ರಕಾರ ಶಿವಭಕ್ತಿಯ ಶ್ರೇಷ್ಠತೆಯನ್ನು ನೋಡದೆ ಜಾತ್ಯಂಧತೆಯಿಂದ ಮೇಲುಕೀಳುಗಳೆಂದು ಕಲ್ಪಿಸುವ ಸಂದೇಹಿಗಳು ತಾವು ಕೂಡಾ ಲಿಂಗ ಧರಿಸಿದರೂ ಅಷ್ಟೆ, ಬಿಟ್ಟರೂ ಅಷ್ಟೆ, ಎಂದು ಆ ಮಹಾನುಭಾವರು ಹೇಳಿದ್ದಾರೆ. ಯಾಕಂದರೆ ಅಂಥವರಲ್ಲಿ ಭಾವ ಶುದ್ಧಿ ಇರುವುದಿಲ್ಲ. ಭಾವ ಶುದ್ಧವಿಲ್ಲದವರಿಗೆ ಭಕ್ತಿಯು ಹೇಗೆ ತಾನೇ ಲಭಿಸುವುದು? ಭಕ್ತಿ ಇಲ್ಲದ ಮೇಲೆ ಭಕ್ತನಾಗಲಿ ಮಹೇಶನಾಗಲಿ ಎಂತಾಗುವರು?

ಈ ಪ್ರಕಾರ ಭಕ್ತಿಯಿಲ್ಲದೆ ಶಿವಕೃಪೆಯು ಎಂದೂ ಸಾಧಿಸದು. ಚಾಂಡಾಲನೇ ಇರಲಿ ಶಿವಭಕ್ತಿಯುತನಾದರೆ ಶಿವ ಕೃಪೆಗೆ ಪಾತ್ರನಾಗುವನು. ಇಂಥ ಅನಂತ ಚರಿತ್ರೆಗಳನ್ನು ನಾವು ಅನೇಕ ವೀರಶೈವ ಧರ್ಮ ಗ್ರಂಥಗಳಲ್ಲಿ ಕಾಣಬಹುದು.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಕೂಡಾ “ಮಾಂಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿಸ್ಯುಃ ಪಾಪಯೋನಯಃ | ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂಗತಿಮ್”|| ಎಂದು ಹೇಳಿರುವನು.

ಅಸ್ಪೃಶ್ಯತಾ ನಿವಾರಣ ನಾಟಕ ಸ್ಪರ್ಧೆ.

ಈ ಸ್ಪರ್ಧೆಯ ಮಾಯಿದೆಯನ್ನು ಎರಡುಸಾರೆ ಮುಂದರಿಸಿದರೂ ಯೋಗ್ಯವಾದ ನಾಟಕಗಳು ಬರಲಿಲ್ಲವೆಂದು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ನಾವು ಪ್ರಕಟಿಸಿದ ಪಾರಿತೋಷಕವು ದೊಡ್ಡದಲ್ಲವೆಂದು ನಮಗೆ ತಿಳಿಯದಿಲ್ಲ. ಆದರೆ, ಕರ್ನಾಟಕದೊಳಗಣ ಸಾಹಿತ್ಯಭಕ್ತರೂ, ನಾಟಕ ಕರ್ತೃಗಳೂ ಸಾಂಪ್ರತ ಪರಿಸ್ಥಿತಿಯಲ್ಲಿ ಪ್ರಾಮುಖ್ಯ ವಿಷಯವಾದ ಹರಿಜನ ಸೇವೆಯಲ್ಲಿ ಭಾಗಿಗಳಾಗಿ ಹಾಗೂ ಆ ವಿಷಯದಲ್ಲಿ ನಾಟಕವನ್ನು ಬರೆದು ತನ್ಮೂಲಕ ಸಮಾಜಸೇವೆ ಮತ್ತು ಭಾಷಾ ಸೇವೆಯನ್ನು ಮಾಡಲು ಮುಂದೆ ಬರುವರೆಂದು ನಾವು ಆಶಿಸಿದ್ದೆವು. ಆದರೆ, ಬರೀ ಆರು ನಾಟಕಗಳು ಮಾತ್ರ ನಮ್ಮ ಕಡೆಗೆ ಬಂದವು. ಕರ್ನಾಟಕದಲ್ಲಿ ನಾಟಕ ಬರೆಯುವವರು ಇಲ್ಲವೆನ್ನಬೇಕೇ ಅಥವಾ ನಾಟಕ ಬರೆಯುವವರಿದ್ದರೆ ಹರಿಜನ ಸಮಸ್ಯೆಯ ವಿಷಯ ನಾಟಕ ಬರೆಯುವಷ್ಟು ವಿಶಾಲ ಬುದ್ಧಿಯು ಅವರಲ್ಲಿಲ್ಲವೆನ್ನಬೇಕೇ ನಮಗೆ ತಿಳಿಯುವುದಿಲ್ಲ. ಅಸ್ಪೃಶ್ಯತಾ ನಿವಾರಣೆಯ ಕುರಿತು ನಾಟಕ ಸ್ಪರ್ಧೆಯು ಏರ್ಪಟ್ಟು ನಾಡಿನ ಎಲ್ಲಾ ಪತ್ರಿಕೆಗಳಲ್ಲಿ ಆ ವರ್ತಮಾನವು ಜಾಹೀರಾದರೂ ಯೋಗ್ಯವಾದ ಒಂದು ನಾಟಕವೂ ಹೊರಟುಬಂದಿಲ್ಲವೆಂದರೆ, ಇಡೀ ಕರ್ನಾಟಕಕ್ಕೆ ದೊಡ್ಡ ಕಲಂಕವೆನ್ನಬೇಕು. ಕರ್ನಾಟಕ ಸಾಹಿತ್ಯ ಭಕ್ತರು ಸಾಹಿತ್ಯದ ಮೂಲಕ ಸಮಾಜದ ಸೇವೆಯನ್ನು ಮಾಡುವ ತತ್ವವನ್ನು ಕೈಕೊಳ್ಳದಿರುವದು ಸಮಾಜಸೇವೆಗೂ ಸಾಹಿತ್ಯ ಸೇವೆಗೂ ಎರಡಕ್ಕೂ ಹಾನಿಕರವು. ಕರ್ನಾಟಕದ ಈ ದೊಡ್ಡ ಕಳಂಕವನ್ನು ಅಳಿಸುವುದು ಕರ್ನಾಟಕದ ಪ್ರತಿಯೊಬ್ಬ ಸಾಹಿತ್ಯ ಭಕ್ತನ ಕರ್ತವ್ಯವು. ಇದಕ್ಕೆ ಕಾರಣವು ಅಶಕ್ತಿಯೋ, ಅನಾದರವೋ, ಆಲಸ್ಯವೋ, ನಮಗೆ ತಿಳಿಯುವುದಿಲ್ಲ. ಸಾಹಿತ್ಯ ಪ್ರೇಮಿಗಳೇ ಇದಕ್ಕೆ ಉತ್ತರವೀಯಬೇಕು.

ನಮ್ಮ ಕಡೆಗೆ ಆರು ನಾಟಕಗಳು ಬಂದಿದ್ದವು. ದುಃಖದಲ್ಲಿ ಸಂತೋಷದ ವಿಷಯವೆಂದರೆ ಅವರಲ್ಲಿ ಮೂರು ಜನ ವಿದ್ಯಾರ್ಥಿಗಳು.

ಮೇಲೆ ಹೇಳಿದಂತೆ ಯಾವುದೂ ಸುವರ್ಣ ಪದಕವನ್ನು ಪಡೆಯಲು ಯೋಗ್ಯವಿಲ್ಲವೆಂದು ಪರೀಕ್ಷಕರ ತೀರ್ಮಾನ. ಸಮಾಧಾನ ಪಾರಿತೋಷಕವಾಗಿ ಬೆಳ್ಳಿಯ ಪದಕವು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿ ಕೆ. ಎ. ಅಪ್ಪಣ್ಣನವರಿಗೆ ಕೊಡಲಾಗುವದು.

ರಂಗರಾವ ತಲಚೇರಿಕರ,
ಕಾರ್ಯದರ್ಶಿ,
ಹರಿಜನ ಸೇವಾಸಂಘ, ಮಂಗಳೂರು.

ವಿ ವಿ ಧ ವಿ ಷ ಯ .

ಸುಸಂತತಿಯು ಬೇಕು.

ಜರ್ಮನಿ ದೇಶವು ಈಗಿನ ಕಾಲದಲ್ಲಿ ಒಳ್ಳೇ ಚರ್ಚಾಸ್ಪದವಾದ ದೇಶವಾಗಿದೆ. ಆ ದೇಶದ ವಿಷಯಕ್ಕೆ ವಿಚಿತ್ರವಾದ ಹೊಸ ಹೊಸ ಸಂಗತಿಗಳು ಹೊರಬೀಳುತ್ತಲಿವೆ ಇವುಗಳಲ್ಲಿ ಹೆಚ್ಚು ವಿಚಿತ್ರವಾದ ಸಂಗತಿಯೆಂದರೆ ಸಂತತಿ ಶುದ್ಧಿ ಶಾಸನವು. ಇದು ಮುಂದಿನ ವರುಷ ಕಾರ್ಯರೂಪದಲ್ಲಿ ಬರುವವಂತೆ. ಈ ಕಾಯಿದೆಯ ಪ್ರಕಾರ ನಾಝಿ ಸರಕಾರದ ಪ್ರಜೆಗಳಲ್ಲಿ ಸ್ತ್ರೀ ಪುರುಷರು ಯಾರಾದರೂ ಅನುವಂಶಕ ಕುರುಡರು, ಕಿವುಡರು, ಕುರೂಪಿಗಳು, ಮದಿರಾಸಕ್ತರು, ದುರ್ಬಲರು, ವಕ್ರಾಂಗರು ಮೊದಲಾದ ನಿರುಪಯೋಗಿ ಜನಗಳ ಪ್ರಜೋತ್ಪಾದನ ಬಲವನ್ನು ಶಸ್ತ್ರಕ್ರಿಯೆಯಿಂದ ಕಟ್ಟುಮಾಡಲಾಗುವದು. ಇಂತಹ ಜನರು ಪ್ರಜೋತ್ಪಾದನ ಮಾಡದೆ ಬಿಟ್ಟರೆ ಅಲ್ಲಿಯ ಮುಂದಿನ ಸಂತತಿಯು ದೃಢಕಾಯವೂ, ನಿರೋಗಿಯೂ, ಬಲಿಷ್ಠವೂ, ಆಗುವದೆಂದು ಅಲ್ಲಿಯ ತಜ್ಞರ ಮತವಿದೆ. ಈ ಕಾರ್ಯವು ಆ ಜನರ ಸ್ವಯಂ ಒಪ್ಪಿಗೆಯಿಂದ ಇಲ್ಲವೆ ಸರಕಾರಿ ಕೋರ್ಟುಗಳ ಮುಖಾಂತರವಾಗಿ ಮಾಡಲಾಗುವದು.

ಅಮೇರಿಕೆಯ ಸುಪ್ರಜಾಜನನ ಶಾಸ್ತ್ರಜ್ಞರಾದ ಮಿ. ಲಿಆನ ಪ್ಹಿಟನೆ ಇವರು ಜರ್ಮನಿಯಲ್ಲಿ ಇದೊಂದೇ ಒಳ್ಳೇ ಸಂಗತಿ ಎಂದು ಅನಂದಪಟ್ಟರಂತೆ. ನೋಡಬೇಕು. ಕಾಲಾಂತರದಲ್ಲಿ ಇದು ಎಷ್ಟರ ಮಟ್ಟಿಗೆ ಸಿದ್ಧಿಸುವದೋ!

ಕ್ರಾಂತಿಕಾರಕ ಅತ್ಯಾಚಾರ.

ಮದ್ರಾಸದಲ್ಲಿ ರಾಯಪುರಮ್ ಮೆಡಿಕಲ್ ಸ್ಕೂಲ ಸುಪರಿಂಟೆಂಡೆಂಟರ ಆಫೀಸಿನಲ್ಲಿ ೬ ನೆಯ ತಾರೀಖಿನ ದಿವಸ ೬ ಜನ ಕ್ರಾಂತಿಕಾರರು ಸುಲಿಗೆ ನಡೆಯಿಸಿದರು. ಅವರಲ್ಲಿ ೫ ಜನರು ಯುರೋಪಿಯನ್ ವೇಷವನ್ನು ದರಿಸಿದ್ದರು. ಮೊದಲು ದ್ವಾರದಲ್ಲಿರುವ ಭಯ್ಯಾನ ಮೇಲೆ ಕ್ಲೋರೋಫಾರ್ಮಿನ ಅಂಗವಸ್ತ್ರವನ್ನು ಹಾಕಿ ಅವನನ್ನು ಮೂರ್ಛೆಗೊಳಿಸಿದರು. ಆಮೇಲೆ ಅವನ ಕೈಕಾಲುಗಳನ್ನು ಕಟ್ಟಿದರು, ಸುಲಿಗೆಗಾರರಲ್ಲೊಬ್ಬನು ಆ ಮೂರ್ಛೆ ಹೊಂದಿದ ಭೈಯ್ಯಾನನ್ನು ಕಾಯಲಿಕ್ಕೆ ನಿಂತನು. ಉಳಿದವರು ಒಳಗೆ ಹೋಗಿ ತಿಜೋರಿ ಒಡೆದರು. ಒಳಗೆ ೮೦೦ ರೂ. ಗಳೂ ಬೇರೆ ಸಾಮಾನುಗಳೂ ಇದ್ದವು.

ಈ ಮಧ್ಯದಲ್ಲಿ ಭಯ್ಯಾನು ಚೇತರಿಸಿಕೊಳ್ಳಲು ಅವನಿಗೆ ಚೂರಿ ತೋರಿಸಿ ಬಾಯಿ ಮುಚ್ಚಿಸಿದರು. ಇಷ್ಟರಲ್ಲಿ ಏನಾಯಿತೋ ಏನೋ ಎಲ್ಲ ಸಾಮಾನುಗಳನ್ನು ಅಲ್ಲಿಯೇ ಬಿಟ್ಟು ಓಡಿಹೋದರು. ಕಟ್ಟಡದ ಒಳಗೆ ಅನೇಕ ಕ್ರಾಂತಿಕಾರಕ ಪತ್ರಗಳನ್ನು ಅಂಟಿಸಿದ್ದಾರಂತೆ.

ಇಲ್ಲಿಯ ವರೆಗೆ ಉತ್ತರ ಭಾಗದಲ್ಲಿದ್ದ ಈ ಪೀಡೆಯು ಈಗೀಗ ದಕ್ಷಿಣದಲ್ಲಿಯೂ ಉಂಟಾಯಿತೇ!

ಪರದೇಶ ಪ್ರಯಾಣ.

ಶ್ರೀ. ಎಸ್. ಎನ್ ಶೀಲವಂತ ಬಿ. ಎ. ಇವರು ಪರದೇಶದಲ್ಲಿ ಐ. ಸಿ. ಎಸ್. ಪರೀಕ್ಷೆಯ ಅಭ್ಯಾಸ ಮಾಡುವದಕ್ಕಾಗಿ "ವ್ಹಾಯಿಸ್‌ರಾಯ ಆಫ್ ಇಂಡಿಯಾ" ಎಂಬ ಹೆಸರಿನ ಹಡಗದಲ್ಲಿ ಕುಳಿತು ಪರದೇಶಕ್ಕೆ ಪ್ರಯಾಣ ಬೆಳೆಸಿದರು. ಇವರಿಗೆ ಮಹಾಜನ ಸಭಾ, ಶಿರಸಂಗಿ ಟ್ರಸ್ಟ ಈ ಸಂಸ್ಥೆಗಳಿಂದ ಆರ್ಥಿಕ ಸಹಾಯವು ದೊರೆತಿದೆ.

ಕೆಲವು ದಿವಸಗಳ ಹಿಂದೆಯೇ ಶ್ರೀ. ಚಂದ್ರಶೇಖರ ಹಳಕಟ್ಟಿಯವರು ಸಹ ನೇಯ್ಗೆಯ ಕಲೆಯನ್ನು ಮುಂದೆ ಅಭ್ಯಸಿಸಲು ಹೋಗಿರುವರಷ್ಟೆ. ಇದೇ ಪ್ರಕಾರವಾಗಿ ವೀರಶೈವ ತರುಣರು ಪರಿಶ್ರಮಪೂರ್ವಕವಾಗಿ ಅಭ್ಯಾಸಮಾಡಿ ಜಯಶಾಲಿಗಳಾಗಿ ತಾವೂ ಕೀರ್ತಿವಂತರಾಗುವದಲ್ಲದೆ ತಮ್ಮ ಸಮಾಜಕ್ಕೂ ಕೀರ್ತಿ ತರುವದು ಅವರ ಕರ್ತವ್ಯವಲ್ಲವೇ?

ನಿಜಾಮ ಸಾಹೇಬರ ಪ್ರಕಟನೆ. (ಫರ್ಮಾನ)

೫ ನೆಯ ತಾರೀಖಿನ ದಿವಸ ನಿಜಾಮಸಾಹೇಬರು ಈ ಪ್ರಕಾರವಾಗಿ ಫರ್ಮಾನ ಹೊರಡಿಸಿದ್ದಾರೆ. "ನನ್ನ ಕೆಲವು ಸ್ವಂತ ಕೃತಿಗಳ (Personal acts) ಅಥವಾ ವಿಚಾರಗಳ (Observances) ತಪ್ಪು ತಿಳುವಳಿಕೆಯು ಆಗಬಾರದೆಂದು ಅಥವಾ ಕೆಲ ಅಜ್ಞಾನಿ ಮತ್ತು ಅವಿಚಾರಿ (Unseruplons) ಜನರು ಪರಿಸ್ಥಿತಿಗೆ ವಿಕೃತ ಸ್ವರೂಪವನ್ನು ಕೊಟ್ಟು ನಿಜವಾದ ಸಂಗತಿಯನ್ನು ವಿಪರ್ಯಾಸ ಮಾಡಬಾರದೆಂದು ನಾನು ಈಗ ಸ್ಪಷ್ಟ ಮಾಡಬೇಕಾದುದೇನೆಂದರೆ ನನ್ನ ಮನೆತನದ ಧರ್ಮವು ಯಾವುದಾದರೂ ಇರಲಿ, ಅಥವಾ ನನ್ನ ತಿಳುವಳಿಕೆಗಳು ಏನೇ ಇರಲಿ, ಅವು ನಿಜ್ಜಿಳವಾಗಿವೆ. ಆದರೆ ನಾನು ರಾಜನಾದುದರಿಂದ ನನಗೆ ಬೇರೇ ಒಂದು ಧರ್ಮವೂ ಇದೆ. ಅದಾವುದೆಂದರೆ ಸಾರ್ವತ್ರಿಕ ಶಾಂತಿಯು. (Universal peace) ನನ್ನ ಆರಸೊತ್ತಿಗೆಯಲ್ಲಿ ಭಿನ್ನ ಧರ್ಮಗಳ ಮತ್ತು ಪಂಥಗಳ ಪ್ರಜೆಗಳಿದ್ದಾರೆ. ಮತ್ತು ಅವರ ಧಾರ್ಮಿಕ ಪವಿತ್ರ ಸ್ಥಾನಗಳ ಸಂರಕ್ಷಣೆಮಾಡುವದು ಮೊದಲಿನಿಂದಲೂ ನಮ್ಮ ವಂಶಜರ ತತ್ವವೇ ಆಗಿದೆ. (Principle) ಅರ್ಥಾತ್ ತಪ್ಪು ತಿಳುವಳಿಕೆಯಿಂದ ಯಾರ ಧಾರ್ಮಿಕ ಭಾವನೆಯನ್ನೂ ನೋಯಿಸಬೇಕೆಂದು ನನ್ನ ಇಚ್ಛೆ ಇಲ್ಲ. ಜಗತ್ತಿನ ಎಲ್ಲ ಧರ್ಮಗಳನ್ನೂ ಒಂದೇ ರೀತಿಯಿಂದ ನೋಡಬೇಕು. ಯಾವುದರಲ್ಲಿ ಏನೂ ವ್ಯತ್ಯಾಸ ಮಾಡಕೂಡದು. ಅಥವಾ ಬೇರೆ ಧರ್ಮದಲ್ಲಿ ಕೈಹಾಕಿ ತಮ್ಮ ಅಧಿಕಾರದ ದುರುಪಯೋಗ ಮಾಡಕೂಡದು. ಹೀಗೆ ನಮ್ಮ ಹಿರಿಯರ ನಿಯಮವೇ ಆಗಿದೆ. ಹೀಗಿದ್ದೂ ಅಕುಂಚಿತ ದೃಷ್ಟಿಯ ಜನರು ನನ್ನ ವರ್ತನವನ್ನು ವಿಪರ್ಯಾಸಮಾಡಿದರೆ ಅದು ಅವರ ದೃಷ್ಟಿಯದೇ ದೋಷವಾಗಿದೆ.

ಒಟ್ಟಿನ ಮೇಲೆ ಎಲ್ಲ ಮಥಿತಾರ್ಥವನ್ನು ಒಂದೇ ವಾಕ್ಯದಲ್ಲಿ ಹೇಳುವದೆಂದರೆ— ಪರಪಕ್ಷದಲ್ಲಿಯ ವಿಷಯವಾಗಿ ನನಗೆ ಧರ್ಮವೇ ಇಲ್ಲ. (Without Religion) ಅದರ ಅರ್ಥವು

ಶ್ರೀ. ಮದ್ವೀರಶೈವ ಮಹಾಸಭೆಯ, ಮಧ್ಯವರ್ತಿ ಕಮೀಟಿ.

ವೀರಶೈವ ಮಹಾಸಭೆಯ ಮಧ್ಯವರ್ತಿ ಕಮೀಟಿಯು ಇದೇ ತಿಂಗಳ ೨೩ ನೆಯ ತಾರೀಖಿನ ದಿವಸ ಧಾರವಾಡಿನ ಹಾವೇರಿ ಪೇಟೆಯಲ್ಲಿರುವ, ಶ್ರೀ. ಶಿವಯೋಗೀಶ್ವರ ಸಂಸ್ಕೃತ ಮಂದಿರದಲ್ಲಿ ಕೂಡುವುದಿದೆ. ಇದೇ ಕಾಲಕ್ಕೆ ತರುಣ ಸಂಘ ಮತ್ತು ಶಿಕ್ಷಣ ಪರಿಷತ್ತಿನ ಮಧ್ಯವರ್ತಿ ಸಂಘಗಳ ಸಭಾಸದರನ್ನೂ ಬರಮಾಡಿಕೊಳ್ಳಲಾಗುವುದು. ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ೨೦-೧೦-೩೩ ನೆಯ ತಾರೀಖಿನೊಳಗಾಗಿ ಮುಟ್ಟುವಂತೆ ಕಳಿಸಬೇಕು ಎಂದು ಮಹಾಸಭೆಯ ಅಧ್ಯಕ್ಷರು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ.

ದೇವರೇ ಇಲ್ಲವೆಂದಲ್ಲ. (No God) ಈಶ್ವರನು ಇದ್ದಾನೆ. ಮತ್ತು ಮಹಮ್ಮದನು ಅವನ ಅಂಶವಾಗಿದ್ದಾನೆ. ಇದೇ ತತ್ವದ ಅಭಿಮಾನವು ನಮಗಿದೆ. ನನ್ನ ಮುಂದಿನ ವಂಶಜರೂ ಇದೇ ತತ್ವವನ್ನನುಸರಿಸುವರೆಂದು ಈಶ್ವರನ ಮೇಲೆ ನಂಬುಗೆಯನ್ನಿಟ್ಟು ನಾನು ಹೇಳುತ್ತೇನೆ.

ನಾಯಿಯ ಸ್ಮಾರಕ.

ಮಹಾರಾಷ್ಟ್ರೀಯರು ಒಳ್ಳೇ ಪ್ರಗತಿಯನ್ನು ಪಡೆದಿದ್ದಾರೆಂದು ಹೇಳಬಹುದು. ಛತ್ರಪತಿ ಶಿವಾಜಿ ಮಹಾರಾಜರ ಸ್ಮಾರಕವೆಂದು ಚೈತ್ರ ಶುದ್ಧ ೧೫ಕ್ಕೆ ರಾಯಗಡ ಸ್ಮಾರಕ ಮಂಡಲದ ಪರವಾಗಿ ಒಂದು ಉತ್ಸವವು ಮಾಡಲ್ಪಟ್ಟಿತು. ಆ ಕಾಲಕ್ಕೆ ಶಿವಾಜಿ ಮಹಾರಾಜರಿಗೆ ಅತ್ಯಂತ ಪ್ರಿಯವಾದ ಒಂದು ನಾಯಿಯ ಸ್ಮಾರಕವನ್ನೂ ಸಹ ಮಾಡುವವರಿದ್ದಾರೆ. ಆ ನಾಯಿಯು ಒಂದು ಕಟ್ಟೆಯ ಮೇಲೆ ಕುಳಿತುಕೊಂಡು ಶಿವಾಜಿ ಮಹಾರಾಜರ ಕಡೆಗೆ ಮುಖ ಮಾಡಿ ಪ್ರೇಮ ದೃಷ್ಟಿಯಿಂದ ನೋಡುತ್ತಿರುವಂತೆ ಮಾಡಬೇಕೆಂದು ಸ್ಮಾರಕ ನಕಾಶವೂ ಸಹ ಉಂಟಾಗಿದೆ. ಇದರ ವೆಚ್ಚಕ್ಕಾಗಿ ಎಷ್ಟೋ ಜನರು ಧನವನ್ನೂ ಪಯಾಪಾಲಿಸಿದ್ದಾರೆ

ಮಹಾರಾಷ್ಟ್ರೀಯರು ತಮಗೆ ಬೋಧಕವಾಗುವಂಥ ಸಣ್ಣ ಸಣ್ಣ ಸಂಗತಿಗಳನ್ನು ಕೂಡಾ ಮರೆಯದೆ ಅವುಗಳ ಸ್ಮಾರಕವನ್ನು ಮಾಡುತ್ತಿರುವಂತೆ ನಮ್ಮ ಕನ್ನಡಿಗರು ಪೂರ್ವ ಕಾಲದ ಪ್ರಖ್ಯಾತ ವೀರರ ಸ್ಮಾರಕಗಳಾದರೂ ಅಲ್ಲಲ್ಲಿ ಉಂಟಾಗುವಂತೆ ಮಾಡಬಾರದೇ?

ಮಲೇರಿಯಾ ರೋಗಕ್ಕೆ ಹೊಸ ಚಿಕಿತ್ಸೆ

ಮಲೇರಿಯಾ ರೋಗವುಂಟಾದರೆ ಕ್ವಿನಿನ ತೆಗೆದುಕೊಳ್ಳಬೇಕೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಈ ರೋಗವು ಪ್ರಸಾರವಾಗಬೇಕಾದರೆ ಗುಂಗಾಡು, ಸೊಳ್ಳೆಗಳು ಮಲೇರಿಯಾ ಗ್ರಸ್ತ ಮನುಷ್ಯನನ್ನು ಕಚ್ಚಿ ರಕ್ತದಲ್ಲಿರುವ ಮಲೇರಿಯಾ ಜಂತುಗಳನ್ನು ಹೀರಿಕೊಳ್ಳುತ್ತವೆ. ಮತ್ತು ಹಾಗೆಯೇ ಅವು ನಿರೋಗಿ ಮನುಷ್ಯನನ್ನು ಕಚ್ಚಿ ಅವನಲ್ಲಿ ಮಲೇರಿಯಾ ಜಂತುಗಳನ್ನು ಹಾಕುತ್ತವೆ. ಈ ಪ್ರಕಾರ ಈ ರೋಗವು ಎಲ್ಲರಲ್ಲಿಯೂ ಹಬ್ಬುತ್ತದೆ. ಆದುದರಿಂದ ಈ ಗುಂಗಾಡುಗಳುಂಟಾಗದಂತೆ ಮಾಡುವದೇ ಉತ್ತಮವೆಂದು ಈಗ ಪ್ರಯತ್ನಗಳು ನಡೆದಿವೆ.

ಈಗೊಂದು ಹೊಸ ಶೋಧವಾಗಿದೆ. ಕ್ವಿನಿನ ತೆಗೆದುಕೊಂಡರೆ ರೋಗವಷ್ಟೆ ವಾಸಿಯಾಗುತ್ತದೆ. ಆದರೆ ರೋಗದ ಜಂತುಗಳು ಸಾಯದೆ ಪುನಃ ಅವು ಮತ್ತೊಂದು ಕಾಲದಲ್ಲಿ ಮಲೇರಿಯಾವನ್ನು ತರಬಹುದು. ಆದುದರಿಂದ ಈ ಜಂತುಗಳನ್ನು ಕೊಲ್ಲಲು ಪ್ಲಾಸ್ಮೊಕ್ವಿನ (Plasmoquin) ಎಂಬ ಔಷಧವನ್ನು ಕ್ವಿನಿನದ ಸಂಗಡ ೩ ದಿವಸ ಕೊಡುತ್ತಾರೆ. ಇದರಿಂದ ಮಲೇರಿಯಾ ರೋಗವು ಹಬ್ಬದೆ ನಷ್ಟವಾಗಿ ಹೋಗುತ್ತದೆ.

ಈ ಪ್ರಯೋಗವು ಮೊದಲು ಬಂಗಾಲ ಇಲಾಖೆಯಲ್ಲಿ ನಡೆಯುವದಿದೆ. ಈ ಔಷಧವು ಜನರಲ್ಲಿ ತೀವ್ರ ಪ್ರಸಾರವಾದರೆ ಒಂದು ದೊಡ್ಡ ರೋಗದ ಅಂಜಿಕೆಯೇ ಇಲ್ಲದಂತಾಗುವುದಿಲ್ಲವೇ?

ಜಗತ್ತಿನಲ್ಲಿಲ್ಲ ದೊಡ್ಡದಾದ ಹಿಮನದಿ.

ಹಿಮನದಿಗಳೆಂಬ ಪರ್ವತಾಗ್ರದಲ್ಲಿರುವ ಬರ್ಫದ ತುಂಡುಗಳು ಕೆಳಗೆ ಜಾರುತ್ತ ಜಾರುತ್ತ ಮೆಲ್ಲಗೆ ಬೈಲು ಪ್ರದೇಶವನ್ನು ಸೇರುತ್ತವೆ. ಅವುಗಳ ಮೇಲೆ ಅಡ್ಡಾಡುವ ಜನರಿಗೆ ಅವು ಚಲಿಸದಂತೆ ಕಂಡರೂ ಮೆಲ್ಲಗೇ ಅವು ಮುಂದಕ್ಕೆ ಸಾಗುತ್ತಿರುತ್ತವೆ. ಪೃಥ್ವಿಯಲ್ಲಿ ಅತ್ಯುನ್ನತ ಪರ್ವತವೆಂದು ಹೆಸರಾದ ಹಿಮಾಲಯ ಪರ್ವತದಲ್ಲಿ ಹಿಮವು ಹೆಚ್ಚು ಹಾಗೆಯೇ ಯುರೋಪ ಖಂಡದ ಆಲ್ಪ್ಸ ಪರ್ವತವೂ ಹಿಮಾಚ್ಛಾದಿತವಾದದ್ದು. ಇವುಗಳ ಮೇಲಿಂದ ಎಷ್ಟೋ ಹಿಮನದಿಗಳು ಚಲಿಸುತ್ತವೆ ಇವು ಒಮ್ಮೊಮ್ಮೆ ೧೬ ಮೈಲು ಅಗಲವಿರುತ್ತವೆ. ಆದರೆ ಕಾರಾಕೋರಮ ಪರ್ವತಗಳಲ್ಲಿ ಪ್ರವಾಸ ಮಾಡಿ ಬಂದ ನೇದರ್ಲಂಡ್ ದೇಶದ ಪ್ರಸಿದ್ಧ ವಕೀಲರಾದ ಮಿಾನಹೀರ ಮತ್ತು ಪಿ ಸಿ. ವ್ಹಿಸರ ಎಂಬುವವರು ಕಲಕತ್ತೆಯಲ್ಲಿ ಭಾಷಣ ಮಾಡುವಾಗ ತಾವು ೪೨ ಮೈಲು ಅಗಲವಾದ ಒಂದು ಹಿಮನದಿಯನ್ನು ಕಂಡೆವೆಂದು ಹೇಳಿದರು.

ಜಗತ್ತಿನಲ್ಲಿ ಇಲ್ಲಿಯವರೆಗೆ ಹಿಮಾಲಯದ ಹಿಮನದಿಗಳೇ ಅಗಲವೆಂಬ ತಿಳುವಳಿಕೆಯಿದ್ದಿತು. ಜಗತ್ತಿನಲ್ಲಿ ಒಂದಕ್ಕಿಂತ ಒಂದು ಹೆಚ್ಚು ಇದ್ದೇ ಇದೆಯಲ್ಲವೇ?

ಬಾಯಿಸಿಕಲ್ ಮಾರಿಬಿಡಿರಿ

ಮಿದನಾಪುರದಲ್ಲಾದ ಅತ್ಯಾಚಾರದ ವಿಷಯವಾಗಿ ಈಗ ಅಲ್ಲಿಯ ಜಿಲ್ಲಾ ಮ್ಯಾಜಿಸ್ಟ್ರೇಟರು ಇದೇ ೧೧ನೆಯ ತಾರೀಖಿನಿಂದ ಅಲ್ಲಿಯ ತರುಣರು ಸೂರ್ಯಾಸ್ತದಿಂದ ಸೂರ್ಯೋದಯದ ವರೆಗೆ ಮನೆಯ ಹೊರಗೆ ಬರಬಾರದೆಂದೂ ಮತ್ತು ಸಾರ್ವಜನಿಕ ಬೀದಿಗಳಲ್ಲಿ ತರುಣರು ಸಾಯಕಲ್ ಉಪಯೋಗಿಸಬಾರದೆಂದೂ ಶಾಸನ ವಿಧಿಸಿದ್ದಾರೆ. ಸಾಯಕಲ್ ಉಳ್ಳವರು ೧೫ ದಿವಸಗಳಲ್ಲಿ ಮಾರಿಬಿಡಬಹುದು. ಇಲ್ಲವೆ ಪೋಲೀಸರ ಸ್ಥಾನಕ್ಕೆ ತಂದಿಡಬೇಕು. ವಿವಕ್ಷಿತ ಕಾಲಗಳಲ್ಲಿ ಅವಶ್ಯ ಕಂಡವರಿಗೆ ಪೋಲೀಸ ಪಾಸು ಕೊಡಲಾಗುವದು. ಇದಲ್ಲದೆ ಸ್ಫೋಟಕ ದ್ರವ್ಯಗಳನ್ನು ಮಾರುವವರು ತಮ್ಮ ಪದಾರ್ಥಗಳನ್ನು ಭದ್ರವಾಗಿಡಬೇಕೆಂದೂ, ಹಿಂದು ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ೩ ಮೈಲು ಅಂತರದ ಮೇಲಿರುವ ಶಾಲೆಕಾಲೇಜುಗಳಿಗೆ ಅಭ್ಯಾಸಮಾಡಲು ಹೋಗಬಾರದೆಂದೂ ವಿಧಿಸಲಾಗಿದೆ. ಕ್ರಾಂತಿಕಾರರ ದುಷ್ಟ ಅತ್ಯಾಚಾರದಿಂದ ಎಲ್ಲರೂ ದುಃಖವನ್ನು ಅನುಭವಿಸ ಬೇಕಾಯಿತು.

ಜಗತ್ತಿನಲ್ಲಿ ಅತಿ ಧನಾಢ್ಯರು.

ಒಬ್ಬ ಫ್ರೆಂಚ ವೃತ್ತಪತ್ರದ ಸುದ್ದಿಗಾರನು ಜಗತ್ತಿನಲ್ಲಿ ಅತಿ ಶ್ರೀಮಂತರಾದ ೧೭ ಕೋಟ್ಯಾಧಿಪತಿಗಳ ಹೆಸರನ್ನು ಕೊಟ್ಟಿದ್ದಾನೆ. ಅವರಲ್ಲಿ ೩ ಜನ ಗೃಹಸ್ಥರು ಹಿಂದೀಯರಿರುವರು. ಅವರ ಹೆಸರುಗಳು ಕೆಳಗೆ ಬರೆದಂತೆ ಇವೆ.

೧. ಎಡಸೇಲ ಫೋರ್ಡ ಅಮೇರಿಕನ್, ೨ ಹೆನ್ರಿ ಫೋರ್ಡ ಅಮೇರಿಕನ್, ೩. ಎಡ್ವರ್ಡ ಡಿರಾಥಶಾಯಿಲ್ಡ ಫ್ರೆಂಚ, ೪. ಡ್ಯೂಕ ಆಫ್ ವೆಸ್ಟ ಮಿನಿಸ್ಟರ ಬ್ರಿಟಿಶ್, ೫. ವಿಲ್ಯಮ್ ಆಫ ಹೋಹೇನ ಝೋಲರ್ನ ಜರ್ಮನ್, ೬. ಬಡೋದಾ ಸಂಸ್ಥಾನಾಧಿಪತಿ ಗಾಯಕವಾಡ ಮಹಾರಾಜ ಹಿಂದು, ೭. ಸರ್. ಬೆಸೀಲ ಜಾಹರೋಫ ಗ್ರೀಕ ೮. ಶಾಯಮನ್ ಪೆಟನೊ ಬೋಲೀವ್ಹಿಯನ್ ೯. ಲಾರ್ಡ ಇವ್ಹೆಗ್ ಬ್ರಿಟಿಶ, ೧೦. ನಾಮದಾರ ಆಗಾಖಾನ ಮುಸಲ್ಮಾನ್, ೧೧. ಹೈದರಾಬಾದ ಸಂಸ್ಥಾನಾಧಿಪತಿ ನಿಜಾಮ ಮುಸಲ್ಮಾನ್, ೧೨. ಜೆ. ಡಿ. ವೆಂಡೆಲ್ ಫ್ರೆಂಚ್, ೧೩. ಜಾನ್ ಡಿ. ರಾಕಫೆಲರ್ (ಜ್ಯೂ) ಅಮೇರಿಕನ್, ೧೪. ಜಾನ್ ಡಿ. ರಾಕಫೆಲರ್ (ಸಿ) ಅಮೇರಿಕನ್, ೧೫ ಲುಯಿ ಲುಯಿಸ ಡೆಫ್ಸ ಫ್ರೆಂಚ, ೧೬. ಅಂಡ್ರ್ಯು ಡಬ್ಲ್ಯು ಮೆಲನ್ ಅಮೇರಿಕನ್. ೧೭. ಫ್ರಿಟ್ಝ ಥಾಯಸೇನ ಜರ್ಮನ್.

ಲಿಂಗಾಯತರ ಜಾತಿವಾದದಲ್ಲಿ ನನ್ನ ಪರಿಶೀಲನವೂ, ಅನುಭವವೂ.

(೫ ನೆಯ ಪುಟದಿಂದ ಮುಂದುವರಿದುದು.)

ಈ ಗ್ರಂಥಗಳಿಂದ ಮಠದ ಪೀಠಾಧಿಕಾರದ ಹೊರತು ಒಮ್ಮೆಗೆ ಧರ್ಮತತ್ವಗಳು ಹಿಂದೆ ಬೀಳಲಿಲ್ಲ. ಕೆಲವು ವಿಶಿಷ್ಟ ಜಾತಿಗಳಲ್ಲಿ ಆಗಲಿ ಭಕ್ತರು ಗುರುಗಳು ಎಂಬ ಎರಡು ಜಾತಿಗಳಿರಲಿಲ್ಲ. ಪಂಚಮರು ಬಣಜಿಗರು, ಅನ್ನುವವರಲ್ಲಿ ಭಕ್ತರೂ ಗುರುಗಳೂ ಎಂಬುದು ಜಾತಿಭೇದವೆನಿಸುತ್ತಿರಲಿಲ್ಲ. ಗುರುಪೀಠಾಧಿಕಾರಿಗಳು ತಮ್ಮ ಶಿಷ್ಯರನ್ನು ಒಂದೇ ಬಗೆಯಿಂದ ಕೆಲವು ಕಾಲ ಕಂಡರು.

ಆದರೆ ತೀವ್ರದಲ್ಲಿಯೆ ಧರ್ಮವು ಅವನತಿಯನ್ನೈದಿತು. ಜಾತಿಭೇದವೆಂಬುದು ಸಮಾಜಕ್ಕೆ ವಿಷದಂತಿಹುದು. ಮೆಲ್ಲಮೆಲ್ಲನೆ ಏರುತ್ತ ಹರಣವನ್ನು ಸೆಳೆವುದು. ಗುರುಪೀಠಗಳು ಜಾತಿತತ್ವದ ಮೇಲೆ ನಿಲ್ಲಲು ವೀರಶೈವರಲ್ಲಿ ಕೆಲವು ಕಾಯಕಗಳನ್ನು ಮಾಡುವವರು ಲಿಂಗಿಗಳೂ ಅಷ್ಟಾವರಣರಹಿತರೂ ಆದರು ಶ್ರೀಮದ್ಬಸವಾದಿ ಪ್ರಮಥರ ಕಾಲದಲ್ಲಿ ಶ್ರೀ. ಕೇತಯ್ಯ ಶ್ರೀ ಕಕ್ಕಯ್ಯ ಮೊದಲಾದ ಶರಣರು ಲಿಂಗಾಯತ ಧರ್ಮದ ಮೇಲಿನ ಮೆಟ್ಟುಗಳನ್ನು ಏರಿದ್ದರು. ಜಾತಿಕಲ್ಪನೆಯ ಗುರುಗಳು ಈ ಕಾಯಕಗಳವರಲ್ಲಿ ಬಳಕೆಯನ್ನು ಬಿಟ್ಟರು. ಗುರುಗಳ ಬಳಕೆಯಿಲ್ಲದರಿಂದ ಅವರ ಆಚಾರವು ತಪ್ಪಿ ಭವಿಗಳ ನಡೆನುಡಿಗಳು ನೆಲೆಗೊಂಡು ಲಿಂಗಹೀನರಾದರು. ಮಡಿವಳರು ಹಡಪಿಗರು ಮುಂತಾದವರು ಲಿಂಗವನ್ನು ಧರಿಸಿದವರಾದರು. ಅಷ್ಟಾವರಣಕ್ಕೆ ಹೊರತಾದರು.

ಉಳಿದ ಸಮಾಜದಲ್ಲಿಯೂ ಹೀನೋತ್ತಮತೆಯುಂಟಾಯಿತು. ಅಯ್ಯಗಳು ಬಳಸುವ ಜಾತಿಗಳಲ್ಲಿ ಅಷ್ಟಾವರಣವು ಕಾಣಲಿಕ್ಕೆ ಉಳಿದುದಾದರು ನಿಜವಾಗಿ ನಷ್ಟವಾಯಿತು. ಜಾತಿಭೇದದಿಂದ ಒಬ್ಬರಿಗೊಬ್ಬರ ಪ್ರಸಾದದ ಬಳಕೆಯು ನಿಂತಿತು. ಪ್ರಸಾದ ಪಾದೋದಕಗಳಲ್ಲಿ ಜಾತಿ ಭೇದ ಸೂತಕವು ಬಂದಿತು. ಗುರುಜಂಗಮರು ಭಕ್ತರಲ್ಲಿ ಪಾದೋದಕ ಪ್ರಸಾದಗಳನ್ನು ವ್ಯವಹರಿಸುತ್ತಿದ್ದರಾದರು. ಅವುಗಳಲ್ಲಿ ಜಾತಿ ಸೂತಕವು ಎಣಿಸಲ್ಪಡುತ್ತಿದುದರಿಂದ ಅಂದರೆ ಅನ್ಯಜಾತಿಯವರು ಅವರ ಮನೆಯಲ್ಲಿ ಗುರುಪಂಕ್ತಿಗೂ ಬಾರದರಿಂದ, ಅವು ಲಿಂಗಾಯತರ ಪಾದೋದಕ ಪ್ರಸಾದವೆನಿಸಲಾರವು. ಗುರು ಜಂಗಮ ಭಕ್ತರಿಗೆ ಬೇಕಾದ ಜಾತಿ ಸೂತಕದ ಅಭಾವವು ನಷ್ಟವಾದುದರಿಂದ ಪಾದೋದಕ ಪ್ರಸಾದಗಳು ಲಭಿಸಲಾರವು.

ಪಶೇಷ.

—ಶ್ರೀ. ವಿಠ್ಠಲಭಾಯಿ ಪಟೇಲ ಇವರ ಹೃದಯವಿಕಾರವು ನಿಶ್ಚಲವಾಗಿರುವದು. ಆದರೆ ಅಂಜುವ ಕಾರಣವಿಲ್ಲೆಂದು ಶ್ರೀ. ಸುಭಾಷ ಬಾಬುಗಳು ತಿಳಿಸಿದ್ದಾರೆ.

—ನಾಗಪುರದಲ್ಲಿ ರಾಷ್ಟ್ರೀಯ ಮಹಿಳೆಯರು ಸೌ. ಕಸ್ತೂರಿಬಾಯಿ ಗಾಂಧಿ ಇವರಿಗೆ ಮಾನಪತ್ರವನ್ನರ್ಪಿಸಿದರು.

—ಬೆಂಗಳೂರಿನ ಶ್ರೀ. ರಾಜಗೋಪಾಲಾಚಾರ್ಯರು ಒಂದು ಘಂಟೆಗೆ ೧೨ ನಂಬರಿನ ೧೦೦೦ ಮಾರು ನೂಲನ್ನು ತೆಗೆಯಲಿಕ್ಕೆ ಬರುವ ಒಂದು ಹೊಸ ಮಾದರಿಯ ರಾಟೆಯ ಪ್ರಯೋಗವನ್ನು ಮುಂಬಯಿಯಲ್ಲಿ ಪ್ರದರ್ಶಿಸಿದರು.

—ವಿದರ್ಭ ಯುವಕ ಪರಿಷತ್ತು ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಸಮಾಚಾರ ಸಂಗ್ರಹ.

—ಪಂ. ಜವಾಹರಲಾಲರು ತಮ್ಮ ಮಾತೋಶ್ರೀಯವರನ್ನು ಕರೆದುಕೊಂಡು ಅಲಾಹಾಬಾದಕ್ಕೆ ತೆರಳಿದರು. ಅವರ ಪ್ರಕೃತಿಯು ಇನ್ನೂ ಅಷ್ಟು ಸುಧಾರಿಸದಿದ್ದರೂ ಶ್ರೀ. ಕೃಷ್ಣಾ ನೆಹರು ಇವರ ವಿವಾಹದ ಸಲುವಾಗಿ ಹೋಗಿರುವರು.

—ಸೌ. ಗೌರಮ್ಮನವರು (ವೆಂಕಟರಾಮಯ್ಯನವರ ಪತ್ನಿ) ಬೆಂಗಳೂರಿನ ಕೋರ್ಟಿನಲ್ಲಾದ ತಮ್ಮ ಸಾಕ್ಷಿಯಲ್ಲಿ ಸಿದ್ದಾಪುರದ ಪೋಲೀಸರು ತಮಗೆ ಮಾಡಿದ ವಿಚಿತ್ರ ಹಿಂಸೆಗಳನ್ನು ಅಸಾಧ್ಯ ಅಪಮಾನವನ್ನು ಹೇಳಿದರು.

—ಗುರುವಾಯೂರ ದೇವಾಲಯ ಪ್ರವೇಶದ ವಿಷಯವಾಗಿ ಉಪೋಷಣೆಯ ವ್ರತವನ್ನು ಕೈಕೊಂಡಿದ್ದ ಶ್ರೀ. ಕೇಲಪ್ಪನ್ ಇವರು ಒಬ್ಬ ರಾಷ್ಟ್ರೀಯ ಚಟುವಟಿಕೆಯಲ್ಲಿ ಭಾಗವಹಿಸಿದ್ದ ಮಾಟಲ್ಡಾ ಕಾಲನ್ ಎಂಬ ಕ್ರಿಶ್ಚನ್ ಕುಮಾರಿಕೆಯನ್ನು ಲಗ್ನವಾಗಿದ್ದಾರೆ.

—ವ್ಹಾಯಿಸರಾಯ ಲಾರ್ಡ ಐರ್ವಿನ್ನರ ಉಗಿ ಬಂಡಿಯನ್ನು ಹಾರಿಸಿಬಿಡುವದಕ್ಕಾಗಿ ಒಳಸಂಚು ನಡೆಯಿಸಿದ ಅಪರಾಧದಿಂದ ಹಿಡಿಯಲ್ಪಟ್ಟ ೨೪ ಜನರ ಮೇಲಿನ ನ್ಯಾಯ ವಿಚಾರಣೆಯು ಈಗೆರಡು ವರುಷಗಳಿಂದ ನಡೆದಿದ್ದು ೬೦೦ ಸಾಕ್ಷಿಗಳಾಗಿವೆ.

—ಜೋಧಪುರ ಸಂಸ್ಥಾನಾಧಿಪತಿಗಳು ತಮ್ಮ ಸಂಸ್ಥಾನದ ಸೀಮೆಯ ಯಾವ ಭಾಗದಲ್ಲಿಯೂ ಸಂಸ್ಥಾನದ ಪ್ರಜಾಪರಿಷತ್ತು ನೆರೆಯಿಸಕೂಡದೆಂದು ನಿಲ್ಲಿಸಿದ್ದಾರೆ.

—ರಾಜ್ಯತ್ಯಾಗ ಮಾಡಿದ ಅಲ್ವಾರ ಮಹಾರಾಜರು ಸಂಸ್ಥಾನಕ್ಕೆ ತಿರುಗಿ ಬಾರದೆ ಇದ್ದರೆ ತಾವು ತೆರಿಗೆ ಕೊಡುವದಿಲ್ಲವಾಗಿ ಈಗ ಅಲ್ಲಿಯ ಬ್ರಿಟಿಶ್ ಅಧಿಕಾರಿಗಳಿಗೆ ಮೇಯೋ ಜನರು ತಿಳಿಸಿದ್ದಾರೆ. ಆದುದರಿಂದ ಮಹಾರಾಜರು ಸ್ವದೇಶಕ್ಕೆ ಮರಳಿ ಬರುವರಂತೆ!

—ಅಜಮೀರದಲ್ಲಿ ನೆರೆಯುವ ಅಖಿಲ ಭಾರತ ಹಿಂದೂಮಹಾಸಭೆಯ ಕಾಲಕ್ಕೆ ಒಂದು ದೊಡ್ಡ ಸ್ವದೇಶೀ ವಸ್ತುಪ್ರದರ್ಶನವನ್ನು ತೆರೆಯುವವರಿದ್ದಾರೆ.

—ಹೈದರಾಬಾದದಲ್ಲಿ ಹಿಂದೂಮಹಾಸಭೆಯ ಶಾಖೆಯ ಕಾರ್ಯಕಾರಿ ಕಮಿಟಿಯವರು ಸಿದ್ಧಪಡಿಸಿದ ಹಿಂದು ಜನರ ಸರಕಾರಿ ಅಧಿಕಾರಗಳು, ಶೈಕ್ಷಣಿಕ ಮತ್ತು ಧಾರ್ಮಿಕ ಸ್ಥಿತಿಗಳ ವಿಷಯವಾಗಿ ಬರೆದಿಟ್ಟದ್ದೆಲ್ಲ ಸರಕಾರದಿಂದ ಜಪ್ತಾಗಿದೆ.

—ಹೈದರಾಬಾದದ ಯುವರಾಜರಿಗೆ ಪುತ್ರಲಾಭವಾಗಿದ್ದು ಆ ರಾಜಪುತ್ರನಿಗೆ ಅಮೀರ ಬರಕತ ಅಲ್ಲಿ ಎಂದು ಹೆಸರನ್ನಿಟ್ಟಿದ್ದಾರೆ.

—ಅಮೇರಿಕೆಯ ಮದ್ಯಪಾನನಿರೋಧಕ ಶಾಸನದ ಅವಧಿಯು ಡಿಸೆಂಬರ ತಿಂಗಳಿಗೆ ಪೂರೈಸುತ್ತಿರುವುದರಿಂದ ಇನ್ನು ಮುಂದೆ ಎಲ್ಲ ಕಡೆಯಲ್ಲಿ ಮದ್ಯಪಾನ ಪ್ರಾರಂಭವಾಗುವ ಲಕ್ಷಣಗಳು ಕಾಣುತ್ತಲಿವೆ.

—ಅಮೃತಸರ ಜಿಲ್ಲೆಯ ಮೋದಿ ಎಂಬ ಗ್ರಾಮದಲ್ಲಿ ಒಂದು ಲಗ್ನದ ಊಟವು ನಡೆದಾಗ್ಗೆ ಊಟ ಮಾಡಿದ ಕೂಡಲೆ ೨೩ ಜನರು ಒಮ್ಮೆಲೇ ಪಟಾಪಟಾ ಬಿದ್ದು ಸತ್ತರು. ಇದನ್ನು ಶೋಧಮಾಡಲಿಕ್ಕೆ ಡಾಕ್ಟರರೂ ಪೋಲೀಸರೂ ಹೋಗಿದ್ದಾರೆ.

(೪ ನೆಯ ಪುಟದಿಂದ ಬಂದುದು)

ಪ್ರಥಮ ಕರ್ತವ್ಯವಾಗಿದೆ. ಆದುದರಿಂದ ಈ ಅಸ್ಪೃಶ್ಯತೆಯನ್ನು ಪರಮಪೂಜ್ಯ ಶಿವಶರಣರು ವಿಧವಿಧವಾಗಿ ಖಂಡಿಸಿರುವರು. ಅಸ್ಪೃಶ್ಯತೆಯು ದೈವನಿರ್ಮಿತವಲ್ಲವೆಂತಲೂ, ಮಾನವರ ಕೊಳಕುತನವೇ ಅಸ್ಪೃಶ್ಯತೆಯೆಂತಲೂ ಕೊಳಕುತನದ ನಿವಾರಣೆಯೇ ಅಸ್ಪೃಶ್ಯರೆಂಬುವವರ ಉದ್ಧಾರಕ್ಕೆ ಅತ್ಯಂತ ಸುಲಭಮಾರ್ಗವೆಂತಲೂ ಅಸ್ಪೃಶ್ಯತೆಯೆಂಬ ಕೊಳಕುತನವನ್ನು ಭೂಲೋಕದಿಂದ ಓಡಿಸಿಬಿಟ್ಟು, ಮಾನವರೆಲ್ಲರೂ ಸತ್ಯ ಸದಾಚಾರಿಗಳಾಗಿ ಸರ್ವರೂ ಸಮಾನ ಭಾವನೆಯಿಂದ ಜೀವಿಸಬೇಕೆಂಬುದೂ ಶ್ರೀ ಶಿವಶರಣರು ಸಾರಿಸಾರಿ ಹೇಳಿರುವ ವಿಚಾರಗಳಾಗಿವೆ. ಈ ಅಸ್ಪೃಶ್ಯತೆಯೆಂಬ ಕೊಳಕುತನದ ನಿವಾರಣೆಯು ಇಂದಿನ ಸಮಾಜ ಸುಧಾರಕರೆಲ್ಲರ ಪ್ರಥಮ ಕರ್ತವ್ಯವಾಗಿದೆ. ಅದರಲ್ಲಿಯೂ ವೀರಶೈವ ಧರ್ಮೀಯರಿಗಂತೂ ಮುಖ್ಯ ಕರ್ತವ್ಯವಾಗಿದೆ. ಯಾಕೆಂದರೆ ಶ್ರೀ ಜಗದ್ಗುರು ರೇಣುಕ ಗಣಾಧೀಶ್ವರರೂ ಸಹ ಮಾನವನು ಯಾವ ವರ್ಣ ಯಾವ ಜಾತಿಯಲ್ಲಿ ಜನಿಸಿದ್ದರೂ ಅವನಲ್ಲಿ ಸತ್ಯ, ಸದಾಚಾರ, ಶಿವಭಕ್ತಿಗಳು ನೆಲೆಗೊಂಡಿದ್ದರೆ ಅವನಲ್ಲಿ ಭೇದ ಭಾವವನ್ನೆಣಿಸದೆ, ಶಿವಸ್ವರೂಪಿಯಾಗಿಯೇ ಪರಿಗಣಿಸಬೇಕೆಂಬುದನ್ನು ಈ ರೀತಿಯಾಗಿ ಹೇಳಿರುವರು.

> ಬ್ರಾಹ್ಮಣಃಕ್ಷತ್ರಿಯೋ ವಾಪಿ ವೈಶ್ಯೋವಾ ಶೂದ್ರ ಏವ ವಾ|
> ಅಂತ್ಯಜೋ ವಾ ಶಿವೇಭಕ್ತ ಶಿವಾನ್ಮಾನ್ಯ ಏವ ಸಃ ||
> ಶಿವಭಕ್ತಿ ಸಮಾವೇಶೇ ಕ್ವಜಾತಿ ಪರಿಕಲ್ಪನಾ | ಇಂಧನೇ
> ಷ್ವಗ್ನಿದಗ್ಧೇಷು ಕೋವಾ ಭೇದ ಪ್ರಕೀರ್ತ್ಯತೇ||

ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳಲ್ಲದೆ ಇವರೆಲ್ಲರಿಂದಲೂ ಕೀಳ್ದರ್ಜೆಯವನೆಂದು ಪರಿಗಣಿಸಲ್ಪಡುವ ಅಂತ್ಯಜ ವರ್ಗದವನಾಗಿದ್ದರೂ ಸಹ ಆ ಮಾನವನಲ್ಲಿ ಶಿವಭಕ್ತಿಯು ನೆಲೆಗೊಂಡಿದ್ದರೆ ಅವನಲ್ಲಿ ಭೇದಭಾವವನ್ನು ತೋರದೆ ಗೌರವಿಸಬೇಕೆಂತಲೂ ನಾನಾ ಜಾತಿಯ ಕಟ್ಟಿಗೆಗಳ ಗುಂಪಿಗೆ ಬೆಂಕಿಯನ್ನಿಟ್ಟು ಸುಟ್ಟ ಬಳಿಕ ಆ ಕಟ್ಟಿಗೆಗಳ ಜಾತಿಯನ್ನೆಣಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಶಿವಭಕ್ತಿ, ಸದಾಚಾರಗಳು ನೆಲೆಗೊಂಡಿರುವ ಮಾನವನಲ್ಲಿ ಹಿಂದೆ ಅವನಲ್ಲಿದ್ದ ಅಸ್ಪೃಶ್ಯತೆಯೆಂಬ ಕೊಳಕತನವನ್ನಾರೋಪಿಸುವುದೂ ಸಹ ಅಸಮಂಜಸವೆಂದು ಹೇಳಿರುವುದಲ್ಲದೆ ಮೇಲಣ ಉಪದೇಶದಲ್ಲಿ ಉದ್ದೇಶಪೂರ್ವಕವಾಗಿ ಅಂತ್ಯಜ ಶಬ್ದಗಳನ್ನು ಉಪಯೋಗಿಸಿರುವುದನ್ನು ನೋಡಿದರೆ ಪರಮಪೂಜ್ಯರಾದ ಆ ಶ್ರೀ ಜಗದ್ಗುರುವರೇಣ್ಯರಿಗೆ, ಮಾನವ ಜನಾಂಗದಿಂದ ಈ ಅಸ್ಪೃಶ್ಯತೆಯೆಂಬ ಕೊಳಕತನದ ನಿವಾರಣೆಯಾಗಿ, ಸಮಸ್ತರೂ ಸತ್ಯ ಸದಾಚಾರಿಗಳಾಗಿ ಪರಸ್ಪರರು ಸಪ್ರೇಮ ಸಮಾನ ಭಾವನೆಯಿಂದ ಜೀವಿಸಲೆಂಬ ಉತ್ಕಟೇಚ್ಛೆಯು ಅವರಿಗಿದ್ದಿತಲ್ಲವೆ? ಇನ್ನು ಶರಣರಲ್ಲಿ ಅತ್ಯಂತ ಉಗ್ರಪಕ್ಷದವರೂ, ನಿರ್ದಾಕ್ಷಿಣ್ಯರೂ ಆದ ಶ್ರೀ ಅಂಬಿಗರ ಚೌಡಯ್ಯನವರೆಂಬ ಮಹಾ ಶಿವಶರಣರು ಈ ಅಸ್ಪೃಶ್ಯತೆಯ ವಿಷಯವಾಗಿ ಹೇಳಿರುವ ವಚನವೊಂದನ್ನಿಲ್ಲಿ ಉದಾಹರಿಸುವೆನು.

“ಹೊಲೆಯ ಹೊಲೆಯ ಎಂದೊಡೆ ಹೊಲೆಯರೆಂತಪ್ಪರಯ್ಯಾ? ಹೊರಕೇರಿಯಲ್ಲಿರುವವರು ಹೊಲೆಯರೇ? ಊರೊಳಗಿಲ್ಲವೇನಯ್ಯಾ ಹೊಲೆಯರು? ತಾಯಿತಂದೆಗಳಿಗ ಬಯಿದವನೇ ಹೊಲೆಯ, ಪರಸತಿಯ ಬಯಸಿದವನೇ ಹೊಲೆಯ, ಕೊಡುವ ಹಣಕ್ಕೆ ಅಡ್ಡ ಬಂದವನೇ ಹೊಲೆಯ, ಪರರ ಕುತ್ತಿಗೆ ಕೊಯ್ವವನೇ ಹೊಲೆಯ, ಹೊಲೆಯನು ಮಾಡಿದ ಚರ್ಮ ಹರಗೋಲಾಯಿತ್ತು, ಚಮ್ಮಾವುಗೆಯಾಯಿತ್ತು. ವೀಣೆಯಾಗಿತ್ತು, ಬಾರಕೋಲಾಯಿತ್ತು, ಮೃದಂಗವಾಯಿತ್ತು, ಎಣ್ಣೆ, ತುಪ್ಪ, ತುಂಬುವ ಸಿದ್ಧಲಿಕೆ, ಬುದ್ಧಲಿಕೆಯಾಯಿತ್ತು. ಇಂಥ ಸಿದ್ಧಲಿಕೆ ಬುದ್ಧಲಿಕೆಗಳ ಎಣ್ಣೆ ತುಪ್ಪಗಳನ್ನು ಕೂಡಿಕೊಂಡು ತಿಂದು, ನಾ ಶೀಲವಂತ, ನೀ ಶೀಲವಂತ, ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆಯೆಂದು ಬಡಿದಾಡುವ ಕುನ್ನಿಗಳ.. ನಮ್ಮ ದಿಟ್ಟ ಧೀರ ಅಂಬಿಗರ ಚೌಡಯ್ಯನು ,, ಮೇಲಣ ಶಿವಶರಣರ ಮಹಾವಾಣಿಯಿಂದ ಉತ್ತಮ ಕುಲಜರೆನ್ನಿಸಿಕೊಳ್ಳುವವರು ಈಗ ಅಸ್ಪೃಶ್ಯರೆಂದು ಕೆಳಗೆ ತುಳಿಯಲ್ಪಟ್ಟಿರುವ ಜನಾಂಗದಿಂದ ತಮ್ಮ ಸ್ವಾರ್ಥವನ್ನೆಷ್ಟು ಕುಟಿಲ ಬುದ್ಧಿಯಿಂದ ಸಾಧಿಸಿಕೊಳ್ಳುತ್ತಿರುವರೆಂಬುದನ್ನೂ, ಯಾರನ್ನು ಅಸ್ಪೃಶ್ಯರೆಂದು ಕರೆಯಬೇಕೆಂಬುದನ್ನೂ, ಅಸ್ಪೃಶ್ಯ ಗುಣವುಳ್ಳವನ ಕುಟುಂಬದಲ್ಲಿಯೇ ಹುಟ್ಟಿದ್ದರೂ, ಸದಾಚಾರ, ಸದ್ಗುಣಗಳುಳ್ಳವನನ್ನು ಕೆಳಕ್ಕೆ ತಳ್ಳುವುದು ಮಹಾ ಪಾತಕವೆಂಬುದನ್ನೂ ಈಗ ಅಸ್ಪೃಶ್ಯರೆಂಬ ನೆವದಿಂದ ಕೆಳಗೆ ತುಳಿಯಲ್ಪಟ್ಟಿರುವ ಜನಾಂಗವನ್ನು ಅವರಲ್ಲಿ ನೆಲೆಸಿರುವ ಅನೀತಿ ಅನಾಚಾರವೆಂಬ ಅಸ್ಪೃಶ್ಯತೆಯ ಹೇಯವಾದ ಕೊಳಕು ಪದ್ಧತಿಗಳನ್ನು ನಿರ್ಮೂಲಗೊಳಿಸಿ ಅವರನ್ನು ಉತ್ತಮ ಸಹವಾಸಕ್ಕೆ ಸೇರಿಸಿಕೊಂಡು, ಸದಾಚಾರ, ಸದ್ಭಕ್ತಿಗಳನ್ನು ತೋರಿಸುವುದರ ಮೂಲಕ ಅಸ್ಪೃಶ್ಯತೆಯ ಹೆಸರೇ ನಿರ್ನಾಮವಾಗುವಂತೆ ಮಾಡುವುದು ಪ್ರತಿಯೊಬ್ಬ ಮಾನವನ ಮುಖ್ಯ ಕರ್ತವ್ಯವೆಂತಲೂ ನಿರ್ಧಾರವಾಗುವುದಿಲ್ಲವೆ? ಆದುದರಿಂದ ಇಂದಿನ ಅಸ್ಪೃಶ್ಯತಾ ನಿವಾರಣೆಗಾಗಿ ಶ್ರಮಿಸುತ್ತಿರುವವರೂ ಸಮಾಜ ಸುಧಾರಕರೂ ಆದ ಸಮಸ್ತ ಮಾನವ ಹಿತೈಷಿಗಳೆಲ್ಲರೂ ಆ ಪರಮ ಪೂಜ್ಯ ಶಿವಶರಣವರೇಣ್ಯರ ಮೇಲ್ಪಂಕ್ತಿಯನ್ನನುಸರಿಸಿ ಅಸ್ಪೃಶ್ಯರೆಂಬ ಜನಾಂಗದಲ್ಲಿರುವ ಕೊಳಕತನದ ಹೇಯ ಪದ್ಧತಿಗಳನ್ನು ನಿರ್ಮೂಲಗೊಳಿಸಿ ಆ ಜನಾಂಗವನ್ನು ಮೇಲಕ್ಕೆತ್ತುವುದರ ಮೂಲಕ ಭಾರತೀಯ ವೈದಿಕ ಧರ್ಮದ ನಿಜತತ್ವ ಪ್ರಸಾರ ಮಾಡಿದ ಮತ್ತು ಭಾರತದ ರಾಷ್ಟ್ರೀಯತೆಗೆ ನವಚೈತನ್ಯವನ್ನುಂಟುಮಾಡಿದ ಪುಣ್ಯಕ್ಕೆ ಭಾಗಿಗಳಾಗುವರೇ?

ಮಿ. ಹೇಲ್ಸರ ಪತ್ರಗಳು.

ಬ್ರಿಟಿಶ್ ಟೋರಿಪಕ್ಷದ ಪಾರ್ಲಿಮೆಂಟ ಮೆಂಬರರಾದ ಮಿ. ಎಚ್ ಕೆ. ಹೇಲ್ಸ ಇವರು ಮಹಾತ್ಮಾಜಿಯವರಿಗೆ, ಜವಾಹರಲಾಲರಿಗೆ ಮತ್ತು ಶೌಕತ ಅಲ್ಲಿ ಇವರಿಗೆ ಈ ಪ್ರಕಾರ ಪತ್ರಗಳನ್ನು ಬರೆದಿದ್ದಾರೆ.

ಮಹಾತ್ಮಾಜಿಯವರಿಗೆ— “ನೀವು ಮಿದನಾಪುರಕ್ಕೆ ಒಮ್ಮೆ ಬಂದು ದರ್ಶನ ಕೊಟ್ಟರೆ ಇಲ್ಲಿ ಶಾಂತವಾತಾವರಣವುತ್ಪನ್ನವಾಗುವುದು. ರಾಷ್ಟ್ರೀಯಸಭೆಗಷ್ಟೇ ಅಲ್ಲದೆ ನಮ್ಮೆಲ್ಲರಿಗುಂಟಾಗಿರುವ ಕಠಿಣ ಸಮಸ್ಯೆಗಳಲ್ಲಿ ನಿಮ್ಮ ಮಾರ್ಗದರ್ಶಿತ್ವವು ಅವಶ್ಯವಾಗಿದೆ.”

ಮೌ. ಶೌಕತ ಅಲ್ಲಿಯವರಿಗೆ— “ಆವನೊಬ್ಬ ಮಹಿಮಾಪುರುಷನ ಅವತಾರವಾಗಬೇಕೆಂದು ನಿರೀಕ್ಷಿಸುತ್ತ ಕುಳಿತುಕೊಳ್ಳುವ ಕಾಲವು ಇದಲ್ಲವೆಂದು ನಾನು ತಮಗೆ ವಿನಯಪೂರ್ವಕವಾಗಿ ಸೂಚಿಸಬಹುದೇ?”

ಪಂ. ಜವಾಹರಲಾಲರಿಗೆ— “ನಿಮ್ಮ ಗುರಿಯು ವಿಧಾಯಕವಾಗಿರಬೇಕು. ಭೇದಕವಾಗಿರಬಾರದು. ಸದ್ಯದಲ್ಲಿ ನಿಮ್ಮ ಮುತ್ಸದ್ದಿತನವನ್ನು ತೋರಿಸುವ ಮತ್ತು ರಾಷ್ಟ್ರೀಯ ಇತಿಹಾಸದಲ್ಲಿ ಶಾಶ್ವತವಾದ ನೆನಪನ್ನುಂಟುಮಾಡುವ ಸುಪ್ರಸಂಗವು ಈಗ ನಿಮ್ಮ ಮುಂದಿದೆ.”

ಟೋರಿಪಕ್ಷದವರು ತಾವೂ ಇದರಂತೆಯೇ ಆಚರಿಸುವರೋ?

ಪತ್ರಗಳ ಸಾರಾಂಶ.

ಪುರಾಣ ಮಹೋತ್ಸವ.

ಅಡೂರು. ಪದ್ಧತಿಯಂತೆ ಇಲ್ಲಿಯ ಶ್ರೀ ವೀರಭದ್ರ ದೇವಾಲಯದಲ್ಲಿ ಆಶ್ವೀಜ ಶು. ೧ ರಿಂದ ಮಹಾದೇವೀ ಪುರಾಣ ಪ್ರವಚನವು ವಿಶೇಷ ಸೌಲಭ್ಯಗಳಿಂದ ಜರುಗಿ ಶ್ರೀ ಕಲ್ಲಯ್ಯ ಸ್ವಾಮಿ ಕೊಂಡಸಕಟ್ಟಿ ಹಿರೇಮಠ ಮತ್ತು ಸಿದ್ಧಪ್ಪ ಶಾಸ್ತ್ರಿ ವಿಶ್ವಜ್ಞಾಚಾರಿ ಇವರೀರ್ವರಿಂದ ಆಧ್ಯಾತ್ಮ ಸಿದ್ಧಾಂತಗಳಿಂದ ಬೋಧಿಸಲ್ಪಟ್ಟು ಶ್ರೋತೃವೃಂದಕ್ಕೆ ಒಳ್ಳೇ ಪರಿಣಾಮಕಾರಿಯಾಗಿರುವದು. ಸಮಾರಂಭೋತ್ಸವವು ಕಾರ್ತಿಕ ಶುದ್ಧ ೫ಕ್ಕೆ ಜರುಗುವುದು. ಅದೇ ಕಾಲಕ್ಕೆ ಅಯ್ಯಾಚಾರ ದೀಕ್ಷಾ ಲಿಂಗಧಾರಣಮುಂತಾದ ಧಾರ್ಮಿಕ ಕಾರ್ಯಗಳು ನೆರವೇರಿಸಲ್ಪಡುವವು.

ವೀರಭದ್ರಪ್ಪ ಶಿರೂರ ಸಾ. ಅಡೂರ,

ತಾ. ೮-೧೦-೩೩.

ವೀರಶೈವ ವಿದ್ಯಾಲಯ ಆಲಮಟ್ಟಿ

ಈ ವಿದ್ಯಾಲಯದ ವಿದ್ಯಾಭ್ಯಾಸಕ್ಕೆ ಪದ್ಧತಿಯ ಪ್ರಕಾರ ದೀಪಾವಳಿಯ ನಿಮಿತ್ತವಾಗಿ ಇದೇ ಆಶ್ವೀನ ಬಹುಳ ೧೧ (ತಾರೀಖು ೧೫-೧೦-೩೩) ರಿಂದ ಮೂರು ವಾರಗಳ ವಿಶ್ರಾಂತಿ ಕೊಡಲ್ಪಟ್ಟದೆ. ಆದುದರಿಂದ ವಿದ್ಯಾಲಯವನ್ನು ನೋಡಲಿಕ್ಕೆ ಬರುವ ಮಹಾಶಯರು ನವಂಬರ್ ತಿಂಗಳ ೭ ನೆಯ ತಾರೀಖಿನ ನಂತರ ಬರಬೇಕಾಗಿ ಕೋರಿಕೆ.

ಈ ವಿದ್ಯಾಲಯದ ವಿದ್ಯಾಭ್ಯಾಸಕ್ಕೋಸ್ಕರ ಹೊಸದಾಗಿ ವಿದ್ಯಾರ್ಥಿಗಳನ್ನು ಕಳುಹಿಸುವವರು ನವಂಬರ್ ತಿಂಗಳ ೭ ರಿಂದ ೧೫ ನೆಯ ತಾರೀಖಿನೊಳಗಾಗಿ ಕಳುಹಿಸಬೇಕು. ಆನಂತರ ತೆಗೆದುಕೊಳ್ಳಲಾಗುವುದಿಲ್ಲ.

ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಮೊದಲು ೭೫ ರೂ. ಆರು ತಿಂಗಳ ನಂತರ ೫೦ ರೂ. ಈ ಪ್ರಕಾರ ೧೨೫ ರೂ. ಕೊಡಬೇಕಾಗುವುದು. ಆ ವಿದ್ಯಾರ್ಥಿಯ ಊಟ, ಬಟ್ಟೆ, ಪುಸ್ತಕಗಳ ವೆಚ್ಚಗಳು ಸಂಸ್ಥೆಯಿಂದ ಜರುಗುವವು. ವಿದ್ಯಾರ್ಥಿಯು ಕನ್ನಡ ನಾಲ್ಕನೆಯ ತರಗತಿಯ ವರೆಗೆ ಕಲಿತಿರಬೇಕು. ಇಂಗ್ಲಿಷ, ಹಿಂದಿ, ಮತ್ತು ಮರಾಠಿ ಈ ಮೂರು ಭಾಷೆಗಳನ್ನು ಕಲಿಸುವದಲ್ಲದೆ ವ್ಯಾವಹಾರಿಕ ಶಿಕ್ಷಣವನ್ನೂ ಕೊಡಲಾಗುವುದು.

ಆಲಮಟ್ಟಿ
ತಾ. ೫-೧೦-೩೩.

ಹರ್ಡೇಕರ ಮಂಜಪ್ಪ
ಸಹಾಯಾಧಿಪತಿ
ವೀರಶೈವ ವಿದ್ಯಾಲಯ.

ಚೊಳಚಗುಡ್ಡ.

ಬದಾಮಿ ತಾಲೂಕಿನ ಚೊಳಚಗುಡ್ಡ ಗ್ರಾಮದ ವೀರಶೈವ ತರುಣ ಸಂಘದವರು ಈ ವರುಷ ಹೊಸದಾಗಿ ತಮ್ಮಲ್ಲಿ ನಾಡಹಬ್ಬವನ್ನು ಬಹು ಉತ್ಸಾಹಪೂರ್ವಕವಾಗಿ ತಾ. ೨೪-೯-೩೩ರಿಂದ ತಾ. ೨೮-೯-೩೩ ರ ವರೆಗೆ ಜರುಗಿಸಿದರು.

ಪ್ರತಿದಿವಸವೂ ವ್ಯಾಖ್ಯಾನಗಳು ಜರುಗುತ್ತಿದ್ದವು. ತಾ. ೨೪ನೆಯ ದಿವಸ ಶ್ರೀ. ಮಾಳವಾಡ ಸಿದ್ಧಪ್ಪನವರು ನಾಡಹಬ್ಬದ ಆವಶ್ಯಕತೆ ತಾ. ೨೫ನೆಯ ದಿವಸ ಶ್ರೀ. ಶ್ರೀನಿವಾಸ ಮಾಸ್ತರರು 'ಆಧುನಿಕ ತರುಣರ ಕರ್ತವ್ಯ' ಮರುದಿವಸ, ಶ್ರೀ. ಶೆಟ್ಟಿ ಶಿವಯೋಗಪ್ಪನವರು 'ಕರ್ನಾಟಕದ ಸಂಸ್ಕೃತಿ' ಕೊನೆಯ ದಿವಸ ಶ್ರೀ. ಮಳಿ ಗೋವರ್ಧನರಾಯರ 'ಕರ್ನಾಟಕ ಏಕೀಕರಣ'ದ ವಿಷಯವಾಗಿ ಭಾಷಣಗಳಾದವು. ತಾ. ೨೮ನೆಯ ದಿವಸ ಶ್ರೀ. ಸಂಗಮನಾಥ ಶಾಸ್ತ್ರಿಗಳು ನಾಡಹಬ್ಬದ ಮೇಲೆ ಕೀರ್ತನೆ ಮಾಡಿದರು.

ಮಹಾರುದ್ರಪ್ಪ ಪಟ್ಟಣ ಶೆಟ್ಟಿ.
ಚೇರಮನ್, ವೀರಶೈವ ತರುಣ ಸಂಘ,

—ಪ್ರೇಮಪ್ರಕಾಶ ಮತ್ತು ಬಂಟಾಸಿಂಗ ಎಂಬ ಇಬ್ಬರು ಕ್ರಾಂತಿಕಾರರು ಬಳ್ಳಾರಿ ಕಾರಾಗೃಹದಿಂದ ಓಡಿ ಹೋದವರು ಪುನಃ ಹಿಡಿಯಲ್ಪಟ್ಟರು.

ಪುನರುತ್ತೇಜನ.

ಮುಂಬಯಿಯ ವರ್ತಕರಿಗೂ ಮತ್ತು ಬೇರೆಬೇರೆ ಸ್ಥಳಗಳ ವ್ಯಾಪಾರಿಗಳಿಗೂ ಸಂಪೂರ್ಣ ಪರಿಚಯವಿರುವ ಕೈ. ರಾ. ಬ. ಮಲ್ಲಪ್ಪ ಬಸಪ್ಪ ವಾರದ ಇವರ ಮುಂಬೈಯಲ್ಲಿಯ ಅಂಗಡಿಯು ಕಳೆದ ಕೆಲವು ವರ್ಷಗಳಿಂದಲೂ ಸುಪ್ತಾವಸ್ಥೆಯಲ್ಲಿದ್ದುದು ಸರಿಯಷ್ಟೆ. ಆದರೆ ಕೈ. . ಅಪ್ಪಾಸಾಹೇಬರವರ ಚಿರಂಜೀವರಾದ ಚನಬಸಪ್ಪ ಮಲ್ಲಪ್ಪ ವಾರದ ಇವರು ಈಗ ಅತ್ಯಂತ ಉತ್ಸಾಹದಿಂದ ಪುನ: ಪ್ರಾರಂಭಿಸಬೇಕೆಂದು ನಿಶ್ಚಯಿಸಿದ್ದಾರೆ. ಸಾಧಾರಣವಾಗಿ ಪರಿಚಿತವಿರುವ ಎಲ್ಲ ವ್ಯಾಪಾರಸ್ಥರಿಗೂ ಈ ಸಂಬಂಧವಾಗಿ ಪತ್ರಗಳ ಮೂಲಕವೇ ತಿಳಿಸಿದ್ದಾಗಿದೆ. ಯಾರಿಗೆ ಮರೆತು ಆ ಸಂಬಂಧದ ಪತ್ರಗಳನ್ನು ಕಳಿಸಿಲ್ಲವೋ ಅವರಿಗೋಸ್ಕರ ಪ್ರಕಟನೆಯನ್ನು ಕೊಟ್ಟಿದ್ದಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಕೂಡಲೇ ವ್ಯಾಪಾರಸ್ಥರೂ ಗಿರಾಕಿಗಳೂ ಪತ್ರ ವ್ಯವಹಾರ ಮಾಡಬೇಕು.

ವಿಳಾಸ
ಚನಬಸಪ್ಪ ಮಲ್ಲಪ್ಪ ವಾರದ,
ಖಡೆಬಜಾರ, ಮಾಂಡವಿ,
ಮುಂಬಯಿ ನಂ. ೩.

ತಮ್ಮ ವಿಧೇಯ
ವಿರೂಪಾಕ್ಷಪ್ಪ ರಾವಜಿ
ಅಪ್ಪಾ ಢೇಪೆ
ಮುನಿಮ.

ಗೌರೀಶಂಕರ ನಿವಾಸ.
ಮುಂಬಯಿ.

ನೋಡಿದರೆ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕು ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನಿಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ನೋಯಿ ದರಗಳು-

ಭೋಜನ ಮತ್ತು ವಸತಿ ೩೦ ೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೮-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖು ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ, ಗೌರೀಶಂಕರ **ನಿವಾಸ ಹಿಂದೂ ಹೋಟಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ** ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ **ಸಂಶೋಧನದಿಂದ ಡಾ** ಎಂ. ಸಿ. **ತುಮ್ಮಿನಕಟ್ಟಿ**, ಎಂ. ಎಸ್‌ಸಿ, ಪಿಎಚ್. ಡಿ ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ **ಮಿಶ್ರವಾಗಿಲ್ಲ.**

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡುಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡುಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ ಡಾ. ಎಂ. ಸಿ. **ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಛ್ಯ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ **ಉಚಿತವಾಗಿ ನಮೂನೆಗಳನ್ನು** ಪಡೆದು ಖಾತ್ರಿಯನ್ನು ಮಾಡಿಕೊಳ್ಳಿರಿ ' ನಮ್ಮಲ್ಲಿ ತಯಾರಾಗುವ ಮಾಲುಗಳನ್ನು **ದಲ್ಲಾಲಿ** ದರದಿಂದ ಮಾರುವದಕ್ಕೆ ಕರ್ನಾಟಕದಲ್ಲ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು **ಹೆಚ್ಚಿನ ಮಾಹಿತಿ ಗೋಸ್ಕರ** ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕವನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಎಲ್ಲ ನಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಸಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಶತ್ರು ಬಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. **ಹಂಚಲಿ.**
ಜಿ. ವಿಜಾಪುರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟ ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ತೇರದಾಳ
Po. Terdal
Belgaum

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ‖ ವ. ೨೨೮ ‖ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:-ಅಂಚೆಯ ವೆಚ್ಚ ಸೇರಿ ೩ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೩.	ಆಲಮಟ್ಟಿ- ಸೋಮವಾರ ತಾರೀಖು ೩೦ನೆಯ ಅಕ್ಟೋಬರ ೧೯೩೩.	ಸಂಚಿಕೆ ೧೨

ಜನಸೇವೆಯೇ ದೇವರಸೇವೆ

ರಾಜಕಾರಣ ಪ್ರವೀಣ

ಶ್ರೀ. ವಿಠ್ಠಲಭಾಯಿ ಪಟೇಲರವರ

ಶೋಚನೀಯ ನಿಧನ.

ಸ್ವಾತಂತ್ರ್ಯದ ಪ್ರಾರ್ಥನೆ!

ರಾಜಕಾರಣ ಪ್ರವೀಣ ಶ್ರೀ. ವಿಠ್ಠಲ ಭಾಯಿ ಪಟೇಲ ಇವರು ಕಳೆದ ತಾ. ೨೨ನೆಯ ರವಿವಾರ ಸ್ವಿತ್ಸರ್‌ಲಂಡಿನ ನಿಯೂನ್ ನಗರದಲ್ಲಿ ಮಧ್ಯಾಹ್ನ ೧ ಗಂಟೆಯ ಸಮಯಕ್ಕೆ ಕಾಲವಶರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಶ್ರೀ. ಪಟೇಲರು ಮರಣದ ಪೂರ್ವದಲ್ಲಿ ತಮ್ಮ ದೇಶವಿದೇಶಗಳಲ್ಲಿಯ ಮಿತ್ರರನ್ನು ಸ್ಮರಿಸಿ ಭರತಖಂಡಕ್ಕೆ ಶೀಘ್ರವೇ ಸ್ವಾತಂತ್ರ್ಯ ದೊರೆಯಲೆಂದು ಪರಮಾತ್ಮನನ್ನು ಪ್ರಾರ್ಥಿಸಿದರು.

ದೇಶಸೇವೆ ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur. (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜಾಗ್ರತೆ ತರಿಸಿಕೊಳ್ಳಿರಿ! ಜಾಗ್ರತೆ ತರಿಸಿಕೊಳ್ಳಿರಿ!!

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಬಸವ ಬೋಧಾಮೃತ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಲಕಲವ್ಯನ ಕಥೆ	೦-೧-೬	ಭಜನಾವಳಿ	೦-೧-೬
ಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಕ್ಕಮಹಾದೇವಿಯ ಚರಿತ್ರೆ	೦-೧-೬	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ, ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೩. | ಆಲಮಟ್ಟಿ ಅಕ್ಟೋಬರ ತಾರೀಖು ೩೦ ನೆಯ ಸೋಮವಾರ | ಸಂಚಿಕೆ ೧೨.

ದಿವಂಗತ ಶ್ರೀ. ಪಟೇಲರ ಪ್ರಶಂಸೆ.

ದೇಶಾಗ್ರಣಿಗಳ ದುಃಖೋದ್ಗಾರ.

ಸರ್ವ ದೇಶವಿದೇಶೀಯ ರಾಷ್ಟ್ರ ಪ್ರಮುಖರೂ, ಶಾಸನ ಸಭೆಗಳ ಸದಸ್ಯರೂ, ಸಾರ್ವಜನಿಕ ಸಂಸ್ಥೆಗಳ ಸಂಚಾಲಕರೂ, ಪತ್ರಿಕಾ ಸಂಪಾದಕರೂ ಮೊದಲಾದವರು ರಾಜ್ಯ ತತ್ವವೇತ್ತರೂ, ಪ್ರಾಗತಿಕ ಪ್ರಬಲೇಚ್ಛೆಯುಳ್ಳವರೂ, ವಿಧಾಯಕ ಸುಧಾರಕರೂ ಆದ **ಶ್ರೀಮಾನ್ ವಿಠ್ಠಲಭಾಯಿ ಪಟೇಲರು** ಕಾಲವಶರಾದುದನ್ನು ಕೇಳಿ ಅವರ ಗುಣಗಾನಪೂರಿತ ದುಃಖಪ್ರದರ್ಶನವನ್ನು ಮಾಡಿರುವರು—

ಮಹಾತ್ಮಾಜಿಯವರು— "ಶ್ರೀ ವಿಠ್ಠಲಭಾಯಿ ಪಟೇಲರವರ ನಿಧನದಿಂದ ನಮ್ಮಲ್ಲಿ ದೀರ್ಘ ಪ್ರಯತ್ನಶಾಲಿಗಳೂ, ಉತ್ತಮ ಕಾರ್ಯದಕ್ಷರೂ ಆದ ಒಬ್ಬ ರಾಜ್ಯಕಾರ್ಯ ಧುರೀಣರು ಇಲ್ಲದಂತಾಗಿದೆ.

ಅವರ ಅತುಲ ಸ್ವಾರ್ಥತ್ಯಾಗವೂ ಮತ್ತು ಅಂಗೀಕೃತ ಕಾರ್ಯವನ್ನು ಹಿಂಜರಿಯದೆ ಮನಃಪೂರ್ವಕವಾಗಿ ಮಾಡುವ ಪ್ರವೃತ್ತಿಯೂ ಪ್ರಶಂಸನೀಯವಾಗಿವೆ. ಮುಂಬಯಿ ಕಾರ್ಪೋರೇಶನದ ಮತ್ತು ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾಗಿರುವಾಗ ತಾವು ಮಾಡಬೇಕಾದ ಕೆಲಸಗಳನ್ನು ಎಂದೂ ಉಳಿಯಗೊಡುತ್ತಿರಲಿಲ್ಲ. ಇದೊಂದು ಅವರ ನಿಯಮವೇ ಆಗಿದ್ದಿತು. ಇಂಥ ಕಠಿಣ ಸಮಯದಲ್ಲಿ ಅವರು ಮೃತ್ಯುವಶರಾದುದರಿಂದ ದೇಶಕ್ಕೆ ಅಪರಿಮಿತ ಹಾನಿಯುಂಟಾಗಿದೆ; ಮತ್ತು ತಮ್ಮ ಪ್ರಕೃತಿಯನ್ನು ಲಕ್ಷಿಸದೆ ಶ್ರೀ ವಿಠ್ಠಲಭಾಯಿಯವರನ್ನು ಭಕ್ತಿಪೂರ್ವಕವಾಗಿ ಶುಶ್ರೂಷೆ ಮಾಡಿದಂಥ ಶ್ರೀ ಸುಭಾಸ ಬಾಬುಗಳನ್ನು ನಾನು ಮನಃಪೂರ್ವಕ ಅಭಿನಂದಿಸುತ್ತೇನೆ"

ರಿಝರ್ವ ಬ್ಯಾಂಕ ಶಾಸನದ ಸಂಯುಕ್ತ ಸಭೆಯ ಸಭಾಸದರಲ್ಲೊಬ್ಬರು—'ಶ್ರೀ ಪಟೇಲರು ಜೀವಿಸಿದ್ದರೆ ನಿಃಸಂಶಯವಾಗಿ ಸಂಯುಕ್ತ ಶಾಸನ ಸಭೆಯ ಅಧ್ಯಕ್ಷರಾಗುತ್ತಿದ್ದರು, ಎಂದು ಉದ್ಗಾರ ತೆಗೆದರು.

ಮಿ. ಅಸಫ ಆಲ್ಲಿ— „ಪ್ರಾಣಾಂತ್ಯದ ವರೆಗೆ ದೇಶಹಿತೈಕ ದೃಷ್ಟಿಯಿಂದ ಸೇವೆಗೈದ ಹಿರಿಯರಲ್ಲಿ ಶ್ರೀ ಪಟೇಲರು ಒಬ್ಬರು. ಅತ್ಯಂತ ಕಠಿಣ ಪ್ರಸಂಗಗಳಲ್ಲಿಯೂ ಸಹ ಕಾರ್ಯರೂಪ ಸ್ವದೇಶಾಭಿಮಾನವೇ ನಿಜವಾದ ಸೇವೆಯ ಪ್ರಸಂಗವನ್ನು ತಂದುಕೊಡುವದೆಂಬುದನ್ನು ಅವರು ಆಚರಿಸಿ ತೋರಿಸಿದರು.,

'ನ್ಯಾಶನಲ್ ಕಾಲ' ಪತ್ರಿಕಾ ಸಂಪಾದಕರು ತಮ್ಮ ಸಂಪಾದಕೀಯ ಲೇಖನದಲ್ಲಿ ಈ ಪ್ರಕಾರ ಹೇಳಿರುವರು— "ಪಟೇಲರಂಥ ಪ್ರಾಮಾಣಿಕ ನಿಷ್ಠೆಯುಳ್ಳವರೂ, ಕರ್ತವ್ಯ ತತ್ಪರರೂ ಆದವರು ಕೇವಲ ಭಾರತಭೂಮಿಯಲ್ಲಿಯೇ ಏಕೆ ಪೃಥ್ವಿಯಲ್ಲೆಲ್ಲೂ ದೊರೆಯಲಾರರು. ಶ್ರೀ ಪಟೇಲರು ತೀರಿಕೊಂಡರೂ ಅವರ ಬೂದಿಯೊಳಗಿಂದುದ್ಭವಿಸಿದ ಪ್ರಭೆಯು ಅಂಧಕಾರದಲ್ಲಿ ಹೆಣಗುತ್ತಿರುವ ಅವರ ಅನುಯಾಯಿಗಳಿಗೆ ಮಾರ್ಗದರ್ಶಕವಾಗುವದು.,,

ಸರ್ದಾರ ಸಂತಸಿಂಗ ಎಂ. ಎಲ್. ಎ. —"ಶ್ರೀ. ಪಟೇಲರ ನಿಧನದಿಂದ ಭಾರತಮಾತೆಯು ತನ್ನ ಅಮೂಲ್ಯ ರತ್ನವನ್ನು ಕಳೆದುಕೊಂಡಳು. ಅವರು ಗಂಡಾಂತರ ಪ್ರಸಂಗದಲ್ಲಿಯು ಸಹ ವರಿಷ್ಠರಿಗೆ ಅಂಜದೆ ಮತ್ತು ಏನೊಂದು ಉಪಕಾರವನ್ನು ಇಚ್ಛಿಸದೆ ತಮ್ಮ ಕರ್ತವ್ಯವನ್ನು ಮಾಡಿದರು.

ಮರಾಠಿ ಸಂಸ್ಥಾನಗಳಲ್ಲಿಯ ವೀರಶೈವರು.

ಕಳೆದ ತಿಂಗಳು ೨ನೆಯ ವಾರದಲ್ಲಿ ಮಿರ್ಜಿ, ಸಾಂಗಲಿ, ಕೊಲ್ಹಾಪುರ ಈ ಮರಾಠಿ ಸಂಸ್ಥಾನಗಳಲ್ಲಿ ಸಂಚರಿಸಿದ್ದರಿಂದ ಆ ಭಾಗಗಳ ವೀರಶೈವ ಸಮಾಜದ ಸಂಬಂಧವಾಗಿ ನನಗಾದ ಅನುಭವವನ್ನು ಪ್ರಕಟಿಸುವುದು ಪ್ರಯೋಜನವೆಂದು ಯೋಚಿಸಿ ಈ ಲೇಖನವನ್ನು ಬರೆದದ್ದಾಗಿದೆ.

ಈ ಸಂಸ್ಥಾನಗಳ ಬಹು ಭಾಗವೆಲ್ಲಾ ಕರ್ನಾಟಕದ ಉತ್ತರ ಭಾಗವೇ ಆಗಿರುವುದರಿಂದ ಕರ್ನಾಟಕದಂತೆಯೇ ಅಲ್ಲಿಯೂ ವೀರಶೈವರ ಸಂಖ್ಯೆಯು ಹೆಚ್ಚಾಗಿಯೇ ಇದೆ. ಆದರೆ ಕರ್ನಾಟಕದ ವೀರಶೈವರಿಗಿಂತ ಅವರು ಧಾರ್ಮಿಕ, ಸಾಮಾಜಿಕ, ಶಿಕ್ಷಣ ವಿಷಯಗಳಲ್ಲಿ ಬಹು ಹಿಂದುಳಿದಿದ್ದಾರೆ. ಇವುಗಳ ಸುಧಾರಣೆಗಾಗಿ ಆಯಾಯ ಭಾಗಗಳ ಸ್ಥಳೀಯ ವೀರಶೈವ ಪ್ರಮುಖರೇ ಪ್ರಯತ್ನಿಸಬೇಕಾದುದು ಯುಕ್ತವಾಗಿದ್ದರೂ ಕರ್ನಾಟಕದ ಪ್ರಮುಖರು ಆ ಭಾಗಗಳಲ್ಲಿ ಸಂಚರಿಸಿ ಸಮಾಜ ಜಾಗೃತಿಯನ್ನು ಮಾಡುವುದು ಅತ್ಯಗತ್ಯವಾಗಿದೆ.

ಸ್ವಮತೀಯರ ಉನ್ನತಿಗಾಗಿ ಅನೇಕ ಸಮಾಜದವರು ಬೇರೆ ದೇಶಗಳಿಗೆ ಕೂಡಾ ಹೋಗಿ ಪ್ರಯತ್ನಿಸುತ್ತಿರುವಾಗ ನಾವು ನಮ್ಮ ನೆರೆಯ ಸ್ವಮತ ಬಾಂಧವರ ಜಾಗೃತಿಗಾಗಿ ಪ್ರಯತ್ನಿಸುವುದು ಆವಶ್ಯಕವಲ್ಲವೆ? ಆ ಭಾಗಗಳಲ್ಲಿಯ ವೀರಶೈವ ಧಾರ್ಮಿಕ ಅವನತಿಯು ಅತ್ಯಂತ ಶೋಚನೀಯವಾದುದು. ವೀರಶೈವ ಆಚಾರ ವಿಚಾರಗಳ ತಿಳುವಳಿಕೆಯು ಜನ ಸಾಮಾನ್ಯರಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು.

ಸುಶಿಕ್ಷಿತರಾದರೋ ಬ್ರಾಹ್ಮಣೀ ಆಚಾರ ವಿಚಾರಗಳನ್ನನುಸರಿಸುವುದೇ ಹೆಚ್ಚು. ವೀರಶೈವದ ವೈಶಿಷ್ಟ್ಯವೇ ಅವರಿಗೆ ತಿಳಿಯದು. ಆದುದರಿಂದ ಆ ಭಾಗಗಳ ವೀರಶೈವ ಸಮಾಜದ ಬಹು ಭಾಗವು ಧಾರ್ಮಿಕ ಆಚಾರ ವಿಚಾರಗಳಲ್ಲಿ ಕರ್ನಾಟಕದ ವೀರಶೈವರಿಗಿಂತ ಬಹು ಹಿಂದುಳಿದು ಅನೇಕ ತಪ್ಪು ನಡತೆಗಳನ್ನಾಚರಿಸುತ್ತಲಿದೆ. ಆದುದರಿಂದ ಧಾರ್ಮಿಕ ಅಧಿಕಾರಿಗಳು ಆ ಭಾಗಗಳಲ್ಲಿ ಸಂಚರಿಸಿ ಜನರಲ್ಲಿ ಸ್ವಧರ್ಮದ ಆಚಾರವಿಚಾರಗಳುಂಟಾಗುವಂತೆ ಪ್ರಯತ್ನಿಸುವುದು ಅತ್ಯಾವಶ್ಯಕವು. ಇಲ್ಲದಿದ್ದರೆ ಕುಲಕೆಡಿಸುವ ಅನ್ಯ ಧರ್ಮದವರ ಈಗಿನ ದುಷ್ಟ ಸಾಹಸಾಗ್ನಿಗೆ ನಮ್ಮ ಸಮಾಜದ ಅಜ್ಞ ಬಾಂಧವರೇ ಹೆಚ್ಚು ಆಹುತಿಯಾಗದಿರಲಾರರು.

ಮತದ ನಿಜತತ್ವಗಳ ಜ್ಞಾನವಿಲ್ಲದ್ದರಿಂದ ಸಮಾಜದಲ್ಲಿ ಅನೇಕ ಭೇದ, ದ್ವೇಷಾಸೂಯೆಗಳುಂಟಾಗಿ ಒಂದೇ ಸಮಾಜದವರೆಂಬ ತಿಳುವಳಿಕೆಯು ಕೂಡಾ ಇಲ್ಲದಂತಾಗಹತ್ತಿದೆ. ತೇಲಿ, ಮಾಳಿ, ಗಳೆಂಬ ಅನೇಕ ಒಳಪಂಗಡದವರು ತಾವು ಸ್ವತಂತ್ರ ಮತದವರಂತೆಯೇ ನಡೆಯಹತ್ತಿದ್ದಾರೆ. ಇದರಿಂದ ಸಮಾಜವು ಛಿನ್ನವಿಚ್ಛಿನ್ನವಾಗಿ ಏಕರೂಪತೆಯ ಭಾವನೆಯೇ ಇಲ್ಲದಂತಾಗಿದೆ. ಆದುದರಿಂದ ಸಮಾಜೋನ್ನತಿಯ ಯಾವ ಮಹತ್ಕಾರ್ಯವೂ ಐಕಮತ್ಯ, ಬಲಸಾಹಸಗಳಿಂದ ನಡೆಯದಂತಾಗಿದೆ.

ಶಿಕ್ಷಣದಲ್ಲಂತೂ ಬಹು ಹಿಂದುಳಿದಿದ್ದಾರೆ. ಪ್ರಾಥಮಿಕ ಶಿಕ್ಷಣದ ಕಡೆಗೇನೇ ಈ ಜನರು ಇನ್ನೂ ಲಕ್ಷಿಸಿಲ್ಲ. ಎಂದಮೇಲೆ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣಗಳ ಸುದ್ದಿಯೇನು ಇವರಿಗೆ ಗೊತ್ತು? ಆದುದರಿಂದ ಶಿಕ್ಷಣ ಪ್ರಸಾರದ ವಿಷಯದಲ್ಲಿ ವಿಶೇಷ ಜಾಗೃತಿಯನ್ನುಂಟುಮಾಡಬೇಕಾದುದು ಅತ್ಯಾಗತ್ಯವು. ಕೊಲ್ಹಾಪುರವು ಶಿಕ್ಷಣ ಸಂಸ್ಥೆಗಳ ಕೇಂದ್ರ ಸ್ಥಾನವಾಗಿದೆ. ಅಲ್ಲಿಗೆ ಪ್ರೌಢ ಶಿಕ್ಷಣ ಹೊಂದಲು ಬರುವ ವೀರಶೈವ ವಿದ್ಯಾರ್ಥಿಗಳಲ್ಲಿ ಕರ್ನಾಟಕದವರೇ ಅತ್ಯಧಿಕ. ಆ ಭಾಗಗಳ ವಿದ್ಯಾರ್ಥಿಗಳು ಬಹು ಕಡಿಮೆ.

ಈ ಮರಾಠಿ ಸಂಸ್ಥಾನಗಳಲ್ಲಿರುವ ಲಿಂಗಾಯತ ಮತ್ತು ಜೈನರಿಗೆ ಕನ್ನಡ ಮಾತನಾಡಲು ಬರುತ್ತದೆ. ಆದರೆ ಓದು ಬರಹಗಳು ಮಾತ್ರ ಬರುವುದಿಲ್ಲ. ಕರ್ನಾಟಕದ ವೀರಶೈವ ಸಮಾಜದಲ್ಲಾದ ಶಿಕ್ಷಣ ಜಾಗೃತಿಯ ಸಮಾಚಾರವೇ ಅವರಿಗೆ ತಿಳಿಯದು. ಆ ಭಾಗದಲ್ಲಿರುವ ಸುಶಿಕ್ಷಿತರು ಕನ್ನಡವನ್ನು ಓದುವ ಮಟ್ಟಿಗಾದರೂ ಕಲಿತರೆ ವಿಶೇಷ ಪ್ರಯೋಜನವಾಗುವಂತಿದೆ. ಕರ್ನಾಟಕದ ವರ್ತಮಾನ ಪತ್ರಗಳನ್ನು ಕನ್ನಡ ಭಾಷೆಯಲ್ಲಿಯ ಧಾರ್ಮಿಕ ಗ್ರಂಥಗಳನ್ನು ಓದುವುದು ಅವರಿಗೆ ಸುಲಭ ಸಾಧ್ಯವಾದುದು.

ಕನ್ನಡ ಅಭಿವೃದ್ಧಿಗಾಗಿ ಪ್ರಯತ್ನಿಸುವವರು ಕರ್ನಾಟಕದ ಈ ಗಡಿನಾಡಿನಲ್ಲಿ ಕನ್ನಡ ಪ್ರಸಾರವಾಗುವಂತೆ ಪ್ರಯತ್ನಿಸಬೇಕು. ಇದರಿಂದ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಪ್ರಾಂತ ದೊರೆತಂತಾಗುವುದು. ಹಿಂದಿ ಮಾತನ್ನೇ ಕೇಳದ ಮದ್ರಾಸದಂತಹ ಭಾಗದಲ್ಲಿ ಹಿಂದಿ ಪ್ರಚಾರಕ ಸಂಘದವರು ಪ್ರಯತ್ನಿಸಿ ಹಿಂದಿಯನ್ನು ಪ್ರಚಾರಗೊಳಿಸುತ್ತಿರುವಾಗ ಕನ್ನಡ ಮಾತನಾಡುತ್ತಿರುವ ಈ ಜನರಲ್ಲಿ ಕನ್ನಡ ವಾಚನಾಭಿರುಚಿಯನ್ನುಂಟುಮಾಡುವುದು ಶಕ್ಯವಿಲ್ಲವೆ?

ಅನೇಕ ಸುಶಿಕ್ಷಿತ ಜನರು ನಿರುದ್ಯೋಗಿಗಳಾಗಿ ಅತ್ತಿತ್ತ ಅಲೆದಾಡುತ್ತಿದ್ದಾರಷ್ಟೆ. ಇವರು ಮಿರ್ಜಿ, ಸಾಂಗಲಿ, ಕೊಲ್ಹಾಪುರ ಮೊದಲಾದ ವೀರಶೈವರಿರತಕ್ಕ ಮುಖ್ಯ ಸ್ಥಳಗಳಿಗೆ ಹೋಗಿ ಸುಶಿಕ್ಷಿತರಿಗೆ ಕನ್ನಡ ಓದು ಬರಹಗಳನ್ನು ಅವರ ಬಿಡುವಿನ ಕಾಲದಲ್ಲಿ ಕಲಿಸುವ ಕಾರ್ಯವನ್ನು ಕೈಕೊಂಡರೆ ಕನ್ನಡ ಪ್ರಸಾರವೂ ಅವರ ಜೀವನ ಕಾರ್ಯವೂ ನಡೆಯುವುವು.

ಈ ಪ್ರಕಾರ ಆ ಭಾಗಗಳ ವೀರಶೈವರ ಧಾರ್ಮಿಕ ಸಾಮಾಜಿಕ ಮತ್ತು ಶೈಕ್ಷಣಿಕ ಸುಧಾರಣೆಗಾಗಿ ಕರ್ನಾಟಕದ ಸಾಹಸಿಗಳು ಪ್ರಯತ್ನಿಸುವುದು ಆವಶ್ಯಕವಾಗಿದೆ. ಈ ವಿಷಯಗಳಲ್ಲಿ ಉಪೇಕ್ಷಿಸಿದ್ದಾದರೆ ದಿನೇ ದಿನೇ ಆ ಭಾಗಗಳ ವೀರಶೈವರು ಅನ್ಯ ಸಮಾಜಗಳ ಸ್ಪರ್ಧೆಯಲ್ಲಿ ನಾಮಶೇಷವಾಗದಿರಲಾರರು. ಹಾಗಾದರೆ ಅದು ಸಮಾಜಕ್ಕೊಂದು ಮಹಾ ಅನರ್ಥವೇ ಸರಿ. ಈ ತಪ್ಪಿನ ಹೊಣೆಗಾರಿಕೆಯಾದರೂ ಕರ್ನಾಟಕದ ವೀರಶೈವರ ಮೇಲೆಯೇ ಬೀಳದೆ ಇರಲಾರದು.

ಕೊಲ್ಹಾಪುರದಲ್ಲಿ ಆರ್ಯಸಮಾಜದವರು ಒಂದು ಹೈಸ್ಕೂಲನ್ನು ಏರ್ಪಡಿಸಿ ಬಹು ತೃಪ್ತಿಕರವಾಗಿ ನಡೆಸುತ್ತಿದ್ದಾರೆ. ಈ ಸಂಸ್ಥೆಯವರು ೨೦ ಅನಾಥ ವಿದ್ಯಾರ್ಥಿಗಳಿಗೆ ಅಶನವಸನಗಳನ್ನು ಕೊಟ್ಟು ವಿದ್ಯಾಭ್ಯಾಸ ಮಾಡಿಸಿ ತಮ್ಮ ಸಮಾಜವನ್ನು ಬೆಳೆಸುತ್ತಿದ್ದಾರೆ. ಈ ಸಂಸ್ಥೆಯು ವರುಷಕ್ಕೆ ೧೦-೧೨ ಸಾವಿರ ರೂ. ಗಳನ್ನು ವೆಚ್ಚಮಾಡಿ ಈ ಪ್ರಕಾರ ಧಾರ್ಮಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿರುವುದು ಅತ್ಯಂತ ಸ್ತುತ್ಯವಾದುದಾಗಿದೆ.

ಬೇರೆ ಭಾಗಗಳಿಂದ ಬಂದು ಇವರು ಮಾಡುತ್ತಿರುವ ಸಾಹಸವನ್ನು ನೋಡಿಯಾದರೂ ವೀರಶೈವರು ಜಾಗೃತರಾಗಬಾರದೆ? ಧರ್ಮಾಧಿಕಾರಿಗಳೂ, ಪಂಡಿತರೂ, ಸುಶಿಕ್ಷಿತರೂ, ಇತ್ತ ಲಕ್ಷಿಸಬೇಕಾಗಿ ಪ್ರಾರ್ಥನೆ.

ಸಂಪಾದಕರು.

ಲಿಂಗಾಯತರ ಜಾತಿವಾದದಲ್ಲಿ ನನ್ನ ಪರಿಶೀಲನವೂ ಅನುಭವವೂ.

(ಲೇಖಕರು:— ಶ್ರೀ. ಪಾವಟೆ ಸಿದ್ಧರಾಮಪ್ಪನವರು ಬಿ. ಎ, ಎಲ್, ಎಲ್. ಬಿ. ವಕೀಲ ಹುಬ್ಬಳ್ಳಿ,)

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಕೆಲವು ಕಾಲದವರ ಸ್ವಪ್ರತಿಷ್ಠಾಲಾಲಸೆಯಿಂದಲೂ ವೈದಿಕತ್ವದ ಅಸಮಂಜಸ ಕಲ್ಪನೆಗಳಿಂದಲೂ ಸದಾಚಾರ ಸಂಗ್ರಹ ಕ್ರಿಯಾಸಾರ ಮೊದಲಾದ ಗ್ರಂಥಗಳು ಹೇಗೆ ಪ್ರಚಾರಗೊಂಡುವೆಂಬುವನ್ನು ಕಂಡೆವು.

ಸಾದರೂ ನೊಣಬರೂ ಕುರುಹಿನವರೂ ತಮ್ಮ ಕುಲಗಳ ಮಹೋದಯಕ್ಕಾಗಿ ಹೋರಿದರು. ಆದರೆ ಸಮಗ್ರ ಲಿಂಗಾಯತ ಸಮಾಜದ ಮತ್ತು ಒಬ್ಬೊಬ್ಬ ಲಿಂಗಾಯತನ ಧಾರ್ಮಿಕ ಉನ್ನತಿಗಾಗಿಯೂ ಮಹೋದಯಕ್ಕಾಗಿಯೂ ಅದು ಹೋರಲಿಲ್ಲ. ಒಂದೊಂದು ಕುಲದವರಿಗಾಗಿ ಆದ ಹೋರಾಟದಲ್ಲಿ ಉದ್ದೇಶವು ಸಾಧಿಸದೆ ಆಯಾ ಕುಲದವರಲ್ಲಿ ಇಬ್ಬಣಗಳಾದವು. ಕೆಲವರು ತಮ್ಮ ಕುಲದ ಜಂಗಮರನ್ನು ಮತ್ತು ಗುರುಗಳನ್ನು ಮನ್ನಿಸುವರು. ಇನ್ನು ಕೆಲವರು ಮೊದಲಿನಂತೆ ಆಚರಿಸುವರು. ಇದರಿಂದ ಸಮಾಜಕ್ಕೂ ಆಯಾ ಕುಲಗಳವರಿಗೂ ಹಾನಿಯುಂಟಾಯಿತು.

ಆ ಕಾಲದಲ್ಲಿ ವಿರಕ್ತ ಪೀಠಗಳೂ ಅವರು ಎಂದೆಂದಿಗೂ ಅನುರೋಧಿಸುತ್ತಿರುವ ಬಣಜಿಗರೂ ಉದಾರ ಮತವಾದಿಗಳಾಗಿದ್ದರೆ ಈ ಅನಿಷ್ಟವು ಒದಗುತ್ತಿರಲಿಲ್ಲ. ನೊಣಬರ ನ್ಯಾಯವು ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳ ಮಠದಲ್ಲಿ ನೊಣಬರ ವಿರುದ್ಧ ತೀರಿತೆಂದು ನಾನು ಶ್ರೀ. ಶಿವಯೋಗ ಮಂದಿರ ಸ್ಥಾಪಕರಾದ ಶ್ರೀ ಕುಮಾರ ಸ್ವಾಮಿಗಳಿಂದಲೆ ಕೇಳಿರುವೆನು. ಗುರುಪೀಠಗಳು ಆಗ ಜಂಗಮ ಪೀಠಗಳಿಗೆ ಯಥಾಶಾಸ್ತ್ರ ವಿಧೇಯರಾಗಿದ್ದರೆಂಬುದು ಆ ಕಾಲದ ಪತ್ರವ್ಯವಹಾರದಿಂದ ತಿಳಿಯಬಹುದಾದ ಸಂಗತಿಯು. ಶ್ರೀ. ಚಿತ್ರಕಲ್ಲದುರ್ಗದ ಪೀಠದಿಂದ ಪ್ರಸಿದ್ಧವಾದ ಪತ್ರವ್ಯವಹಾರವನ್ನು ನೋಡಿರಿ. ಬೇರೆ ಪೀಠಗಳಲ್ಲಿಯ ಪತ್ರವ್ಯವಹಾರದಿಂದಲು ಇದು ಸ್ಪಷ್ಟವಿದೆ.

ಈ ಸಮಾಜಭೇದಕ್ಕೆ ಸಮಯಭೇದವು ಅತಿ ಮಾತ್ರವಾಗಿಯೂ ನೆರವಾಯ್ತು. ಸಮಯವೆಂದರೆ ಮತವೆಂಬ ಅರ್ಥ. ಮುರುಗ ಮತ್ತು ಚೀಲಾಳ ಸಮಯಗಳ ಭೇದದಲ್ಲಿ ಕೆಲವು ಧಾರ್ಮಿಕ ಮತಭೇದವು ಕಂಡು ಬರುವುದು. ಆದರೆ ಆ ಮತಭೇದದೊಡನೆ ತೀವ್ರವಾಗಿ ಅಸೂಯೆಯು ಬೆರೆತು ಹೋಯಿತು. ಕ್ರಿಯಾಚಾರ ಮತಭೇದದಿಂದ ಸಮಾಜವಿಘಾತವಾಗಬಾರದೆಂಬ ಉದ್ದೇಶದಿಂದಲೇ 'ಜಂಗಮೋ ಜಂಗಮಂ ದೃಷ್ಟ್ವಾ ನ ಪ್ರಣಾಮಂ ಕರೋತಿಯಃ| ಸ ಏವ ಜಂಗಮ ದ್ರೋಹೀ ಮದ್ರೋಹೀ ಚ ನ ಸಂಶಯಃ' ೭-೯೦ ಶ್ರೀ ಸೂಕ್ಷ್ಮಾಗಮದಲ್ಲಿ ಶಿವಾಜ್ಞೆಯುಂಟು. ಅದನ್ನು ಲಂಘಿಸಿ ವಿರಕ್ತ ಪೀಠಗಳು ಒಂದೊಂದು ಹೋರಾಡಹತ್ತಿದವು. ಆ ಬಳಿಕ ಆಚಾರ ಭೇದದ ಗಂಧವಿಲ್ಲದೆ ಕುಮಾರ ಸಮಯವು ಒಡೆದು ನಿಂತಿತು. ಒಂದು ಪಟ್ಟಣದ ಪೇಟೆ ಶೆಟ್ಟಿಯು ಕುಮಾರ ಸಮಯದ ಅಭಿಮಾನಿಯಾದರೆ ಮತ್ತೊಂದು ಪಟ್ಟಣದವನು ಮುರುಘ ಸಮಯದ ಕಡು ಹೇವಿಗನು. ಶಿರಸಿ ನಾಡಿನ ಅಡಿಕೆಯನ್ನು ಹಾಕೆನೆಂಬ, ಅಕ್ಕಿಪೋಣಿ ಮಾಡಿ ಮೂತ್ರಿಸನೆಂಬ, ಸೆಟ್ಟಿಯ ಕಡುನುಡಿಯನ್ನು ಅನೇಕರು ಕೇಳಿರುವರು, ಸಮಯಭೇದದಿಂದ ಶೆಟ್ಟರ ಪ್ರತಿಷ್ಠೆಯು ಮಿಗಿಲಾಯಿತು. ಒಂದೆ ಪೀಠವಿದ್ದರೆ ಪೀಠದ ಅಧಿಕಾರವು ಸಮಾಜ ಬಲದಿಂದ ಗಟ್ಟಿಯಾಗಿರುತ್ತಿದ್ದಿತು. ಶೆಟ್ಟಿಯು ಕೈಬಿಡುವನೆಂಬ ಭಯದಿಂದ ಪೀಠವು ಅವನ ಬಳಿಗೊಂಡು ಹೋಗುತ್ತಿರಲಿಲ್ಲ. ಈ ವಿಘಟಿತ ಸ್ಥಿತಿಯಲ್ಲಿ ಕುಲವಾದಿಗಳ ಅಭಿಪ್ರಾಯವು ಬಲವಾಗುತ್ತ ನೊಣಬರು ಸಾದರು ಕುರುಹಿನವರು ಸೋತು ಹಿಂಗಡವಾದರು.

ಶ್ರೀ. ಹಾನಗಲ್ಲ ಕುಮಾರಸ್ವಾಮಿಗಳದು ಮತ್ತು ನನ್ನದು ಕುಲಭೇದದ ವಿಷಯದಲ್ಲಿ ಅನೇಕಾವರ್ತಿ ಚರ್ಚೆಯಾಗುತ್ತಿತ್ತು. ಶ್ರೀಗಳು ಅಯ್ಯಗಳ ಕುಲಾಭಿಮಾನದಿಂದ ತುಂಬಿದವರು. ಬಳ್ಳಾರಿಯಲ್ಲಿ ಭಕ್ತರ ಆಧ್ಯಾತ್ಮಿಕ ಅವನತಿಗೆ ಕಾರಣವಾದ ಒಂದು ನಿರ್ಣಯವಾಯಿತು. ಅಂದರೆ ಗುರುಪೀಠಗಳಿಗೂ ಜಂಗಮಪೀಠಗಳಿಗೂ ಅಯ್ಯಗಳ ಕುಲದವರೆ ಅರ್ಹರು ಉಳಿದವರು ಅಲ್ಲವೆಂಬ ನಿರ್ಣಯವು ಶ್ರೀಗಳವರ ಪ್ರಸಾದದಿಂದಲೆ ಸ್ವೀಕಾರದಲ್ಲಿ ಬಂದಿತು. ಅದನ್ನವರು ಸಮಾಜದ ಒಕ್ಕಟ್ಟಿನ ನೆವದ ಮೇಲಿಡುವರು. ಆದರೆ ಅದು ಸಮಂಜಸವಲ್ಲೆಂದು ನಾನು ಎದುರಿಸಲು ಶ್ರೀಗಳು ಬಣಜಿಗರು ಇತರರನ್ನು ಬರಗೊಡುವುದಿಲ್ಲವೆಂದು ನನ್ನ ಕುಲಾಭಿಮಾನವೇರುವಂತೆ ಮಾತನಾಡಿದರು. ನಾನು ನನಗೆ ಭಕ್ತಜನಾಭಿಮಾನವಲ್ಲದೆ ಕುಲಾಭಿಮಾನವಿಲ್ಲೆಂದು ಸ್ಪಷ್ಟವಾಗಿ ಹೇಳಿದೆನು. ಆ ಬಳಿಕ ಅವರು ಅಯ್ಯಗಳಲ್ಲಿ ಉಡಿಕೆ ಇಲ್ಲ. ಭಕ್ತರಲ್ಲಿ ಉಡಿಕೆಯುಂಟು ಎಂದು ಶುದ್ಧ ವಂಶದ ನೆವವನ್ನು ಮುಂದೆಮಾಡಿದರು. ನಾನು ಅಯ್ಯಗಳಲ್ಲಿ ಉಡಿಕೆಗಿಂತ ಹೀನವಾದ ದುರಾಚಾರವಿದೆ ಅಂದರೆ ಅಯ್ಯಗಳು ಉಡಿಕೆಯಿಂದ ಪೂಜೆಯು ಹೋಗುತ್ತದೆಂದು ಕಾಗದ ಮಾಡಿ ವಿಧವೆಯರನ್ನು ಕೂಡಿ ಬಾಳ್ವೆ ಮಾಡುವರು ಆದರೆ ಮುಂದೆ ಅಯ್ಯತನವನ್ನು ಪಡೆದು ಪೂಜೆಗೊಂಬರು. ಕಾಗದವನ್ನು ಬರೆದುಕೊಂಡಿಟ್ಟ ಅಯ್ಯನು ಯಥಾಪೂರ್ವವಾಗಿ ಪೂಜೆಗೊಳ್ಳುತ್ತಿರುವನು. ಇದೆಷ್ಟು ದುರಾಚಾರವೆಂದು ಕೇಳಿದೆನು. ಅದಕ್ಕೆ ಸ್ವಾಮಿಗಳವರ ಉತ್ತರವಿಲ್ಲ.

ಜಂಗಮವೆಂಬುದೊಂದು ಜಾತಿಯನ್ನು ಕಲ್ಪಿಸಿದರೆ ಜಾತಿ ಸೂತಕವೆಂಬ ಸೂತಕವು ತಟ್ಟುತ್ತದೆಂಬುದನ್ನು ಸ್ವಾಮಿಗಳವರೂ ಒಂದು ಯುಕ್ತಿ ವಾದದಿಂದ ದೂರಮಾಡಲೆಣಿಸುವರು ಅಷ್ಟಾವರಣ ಸಾಮರಸ್ಯ ಕಾಲದಲ್ಲಿ ಭಕ್ತ ಜಂಗಮರು ಬೆರೆತು ನಡೆವುದರಿಂದ ಸೂತಕ ಬಾಧೆಯು ಇಲ್ಲೆಂದು ಹೇಳುವರು. ಇದು ಮಧ್ಯಾಹ್ನ ಬ್ರಾಹ್ಮಣ್ಯದಂತೆ ಎಂಬುದನ್ನು ಲಿಂಗವಂತರಲ್ಲಿ ಒಂದು ವಿಶಿಷ್ಟ ಸಮಯವಷ್ಟಕ್ಕೆ ಅಲ್ಲದೆ ಎಂದಿಗೂ ಜಾತಿಸೂತಕವಿರಬಾರದೆಂಬುವನ್ನು ಅವರು ಲಕ್ಷಿಸುತ್ತಿರಲಿಲ್ಲ. (ಸಶೇಷ.)

ರಾಜಕಾರಣ ಪ್ರವೀಣ

ಶ್ರೀ ವಿಠ್ಠಲಭಾಯಿ ಪಟೇಲರು.

ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಹಿಂದಿನ ಲೋಕನಿಯುಕ್ತ ಪ್ರಥಮಾಧ್ಯಕ್ಷರೂ ಕಾಂಗ್ರೆಸ್ಸಿನ ವಿಖ್ಯಾತ ಮುಂಧಾಳುಗಳೂ ಆದ ಶ್ರೀ. ವಿಠ್ಠಲಭಾಯಿ ಪಟೇಲರವರು ಕಳೆದ ತಾ. ೨೨ನೆಯ ರವಿವಾರ ಸ್ವಿತ್ಸರ್‌ಲಂಡಿನ ನಿಯಾನ ನಗರದಲ್ಲಿ ಹೃದಯವಿಕಾರದ ಭಯಂಕರ ಬೇನೆಯಿಂದ ದೈವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಶ್ರೀ. ಪಟೇಲರು ಖೇಡಾ ಜಿಲ್ಲೆಯಲ್ಲಿ ಕ್ರಿ. ಶ. ೧೮೭೩ನೆಯ ಇಸವಿಯಲ್ಲಿ ಜನ್ಮವೆತ್ತಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ನಡಿಯಾದ ಎಂಬಲ್ಲಿ ಮುಗಿಯಿಸಿ ಮುಂದೆ ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕೆಲವು ವರ್ಷಗಳವರೆಗೆ ನಡಿಯಾದ ಮತ್ತು ಬೋರಸದ ಎಂಬಲ್ಲಿ ವಕೀಲ ಉದ್ಯೋಗವನ್ನು ನಡೆಯಿಸಿ ಬ್ಯಾರಿಸ್ಟರ ಶಿಕ್ಷಣ ಹೊಂದುವದಕ್ಕಾಗಿ ೧೯೦೫ನೆಯ ಇಸವಿಯಲ್ಲಿ ವಿಲಾಯತಿಗೆ ತೆರಳಿದರು ಇವರು ಮೊದಲಿನಿಂದಲೂ ಸ್ವತಂತ್ರ ವೃತ್ತಿಯ ಪುರುಷರಾಗಿದ್ದುದರಿಂದ ಮನೆತನದ ವಿಷಯಗಳನ್ನು ಹೆಚ್ಚಾಗಿ ಲಕ್ಷಿಸುತ್ತಿರಲಿಲ್ಲ. ಸಮಾಜ ಸುಧಾರಣೆಯ ವಿಷಯವೇ ಇವರಿಗೆ ಬಹು ಪ್ರಿಯವಾಗಿದ್ದಿತು. ವಿಲಾಯತಿಯಲ್ಲಿ ದ್ದಾಗ ಪ. ವಾ. ಪಿತಾಮಹ ದಾದಾಭಾಯಿ ನವರೋಜಿ ಮೊದಲಾದ ಸುಪ್ರಸಿದ್ಧ ಕಾಂಗ್ರೆಸ್ ಭಕ್ತರ ಅನುಯಾಯಿಗಳಾಗಿ ಇವರು ಹಿಂದುಸ್ಥಾನ ವಿಷಯಕವಾದ ಅನೇಕ ಚಟುವಟಿಕೆಗಳಲ್ಲಿ ಭಾಗ ವಹಿಸುತ್ತಿದ್ದರು. ಇತ್ತೀಚಿತ್ತಲಾಗಿ ರಾಜಕಾರಣದಲ್ಲಿ ಉಗ್ರ ಮತಾವಲಂಬಿಗಳಾಗಿ ಇವರ ಸಾಮಾಜಿಕ ಸುಧಾರಣೆಯ ವಿಷಯಗಳು ಹೆಚ್ಚಾಗಿ ಬೆಳಕಿಗೆ ಬಾರದಿದ್ದರೂ ಸೂಕ್ಷ್ಮ ರೀತಿಯಿಂದ ಇವರ ಜೀವನ ಚರಿತ್ರೆಯನ್ನು ಪರಿಶೀಲಿಸಿದರೆ ಇವರು ಸಮಾಜ ಸುಧಾರಣಾ ಪ್ರಮುಖರಲ್ಲೊಬ್ಬರೆಂದು ಧಾರಾಳವಾಗಿ ಹೇಳಬಹುದಾಗಿದೆ. ಏಕೆಂದರೆ ಈಶ್ವರಚಂದ್ರ ವಿದ್ಯಾಸಾಗರ ಇವರು ಯಾವ ಪ್ರಕಾರ ವಿಧವಾ ವಿವಾಹದಿಂದ, ಭೂಪೇಂದ್ರನಾಥ ಬಸು ರವರು ಯಾವ ಪ್ರಕಾರ ಮಿಶ್ರವಿವಾಹದ ಚಳವಳಿಯಿಂದ ಹಿಂದು ಸಮಾಜದಲ್ಲಿ ಪ್ರಚಂಡವಾದ ಕ್ರಾಂತಿಯನ್ನುಂಟುಮಾಡಿದರೋ ಅದೇ ಪ್ರಕಾರ ಒಂದು ಕಾಲದಲ್ಲಿ ಶ್ರೀ ಪಟೇಲರವರು ವಿಜಾತೀಯ ವಿವಾಹ ಶಾಸನದಿಂದ ಹಿಂದು ಸಮಾಜದ ಬುಡವನ್ನೇ ಅಲ್ಲಾಡಿಸಿ ಬಿಟ್ಟಿರುವರು.

ವಿಲಾಯತಿಯಿಂದ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇವರು ಭಾರತ ಭೂಮಿಗೆ ಮರಳಿ ಬಂದ ನಂತರ ಕೆಲವು ದಿವಸಗಳ ವರೆಗೆ ಗುಜರಾತಿನಲ್ಲಿ ವಕೀಲಿ ಉದ್ಯೋಗವನ್ನು ಮಾಡಿ ಅನಂತರ ಮುಂಬಯಿಯ ವಾಂದ್ರಾ ಭಾಗದಲ್ಲಿ ವಾಸವಾಗಿರಹತ್ತಿದರು. ವಕೀಲರಲ್ಲಿ ಅವಶ್ಯಕವಾಗಿ ಇರಬೇಕಾದ ಸರ್ವ ಗುಣ ಜ್ಞಾನಗಳೂ ಇವರಲ್ಲಿ ಮನೆಮಾಡಿಕೊಂಡಿದ್ದುದರಿಂದ ಅಲ್ಪಾವಧಿಯಲ್ಲಿಯೇ ಇವರು ನಿಷ್ಣಾತ ಶಾಸನ ಪಂಡಿತರೆಂದು ಪ್ರಕಾಶಿಸಹತ್ತಿದರು. ಆದರೂ ಇವರು ಹೆಚ್ಚಾಗಿ ದುಡ್ಡನ್ನು ಕೂಡಿಸುವುದರಲ್ಲಿ ಆಸಕ್ತರಾಗಿರಲಿಲ್ಲ. ಸಾಂಪತ್ತಿಕ ಸ್ಥಿತಿಯು ಚೆನ್ನಾಗಿದ್ದುದರಿಂದಲೊ ಅಥವಾ ಪತ್ನಿ ಸಹವಾಸದ ಸುಖವು ಲಭಿಸದಿದ್ದುದರಿಂದಲೊ ಏನೋ ಇವರು ಅತ್ಯಂತ ಉದಾಸೀನರಾಗಿ ೧೯೧೮ರವರೆಗೂ ಒಬ್ಬ ಸಾಧು ಪುರುಷರಂತೆ ಕಾಲಕ್ರಮಣ ಮಾಡಿದರು ಅಂತೆಯೇ ವಾಂದ್ರಾ ಭಾಗದಲ್ಲಿ ವಾಸವಾಗಿರುವಾಗ ಇವರಿಗೆ ವಾಂದ್ರೆಯಲ್ಲಿಯ ಮಹರ್ಷಿ ಎಂದು ಜನರು ಕರೆಯುತ್ತಿದ್ದರು.

ಮೋರ್ಲೆಮಿಂಟೊ ಸುಧಾರಣೆಯು ನಡವಳಿಕೆಯಲ್ಲಿ ಬರುವ ವರೆಗೂ ಎಂದರೆ ೧೯೧೦ನೆಯ ಇಸವಿಯವರೆಗೂ ಸಾರ್ವಜನಿಕ ಮುಂದಾಳುಗಳೆಂದು ಬ್ಯಾ. ಪಟೇಲರವರ ಪರಿಚಯವು ಕೆಲವರಿಗೆ ಮಾತ್ರವೇ ಇದ್ದಿತು. ಆದರೆ ೧೯೧೦ನೆಯ ಇಸವಿಯಲ್ಲಿ ಸ್ಥಳೀಯ ಸಂಸ್ಥೆಗಳ ಪರವಾಗಿ ಲೋಕನಿಯುಕ್ತ ಪ್ರತಿನಿಧಿಗಳೆಂದು ಇವರು ಮುಂಬಯಿ ಶಾಸನಮಂಡಲದಲ್ಲಿ ಬಹುಮತದಿಂದ ಆರಿಸಿಬಂದ ನಂತರ ಬಹು ಪ್ರಸಿದ್ಧರಾದರು. ಅಲ್ಲಿಂದ ಈ ಇಪ್ಪತ್ತು ವರುಷಗಳ ವರೆಗೂ ಶ್ರೀ ಪಟೇಲರು ರಾಜಕಾರಣದಲ್ಲಿ ಅತ್ಯಂತ ಪ್ರಕಾಶಮಾನರಾಗಿ ವಿರಾಜಿಸುತ್ತಿದ್ದರೆಂದು ಹೇಳಿದರೆ ಸ್ವಲ್ಪಾದರೂ ಅತಿಶಯೋಕ್ತಿಯಾಗಲಾರದು.

ಮುಂಬೈಯ ಶಾಸನ ಮಂಡಲದಲ್ಲಿ ಶ್ರೀ ಪಟೇಲರು ಅತ್ಯಂತ ಶ್ರದ್ಧೆ ವಹಿಸಿ ಕೆಲಸಮಾಡಿ ಅನೇಕ ಮಹತ್ವದ ನಿರ್ಣಯಗಳನ್ನು ಕಾರ್ಯರೂಪದಲ್ಲಿ ತಂದರು. ಮ್ಯಾಂಟೆಗ್ಯೂ ಚೇಮ್ಸಫರ್ಡ ಸುಧಾರಣೆಯ ಪ್ರಕಟಣೆಯ ಕಾಲಕ್ಕೆ ಶ್ರೀ ಪಟೇಲರ ಹೆಸರು ಮುಂಬೈ ಸೌಮ್ಯ ಪಂಗಡದ ಮುಂದಾಳುಗಳಲ್ಲೊಂದಾಗಿದ್ದಿತು. ಮಾಂಟೆಗ್ಯೂ ಯೋಜನೆಯು ಸಂಬಂಧವಾಗಿ ಸರ್. ದಿನೇಶಾ ವಾಚ್ಛಾ ಮೊದಲಾದ ೯ ಜನ ಸೌಮ್ಯ ಪಂಗಡದ ಮುಂದಾಳುಗಳು ಪ್ರಕಟಿಸಿದ ಪ್ರಕಟನೆಯಲ್ಲಿ ಶ್ರೀ. ಪಟೇಲರ ಹೆಸರೂ ಇದ್ದಿತು. ಆದರೆ ಬರಬರುತ್ತಾ ಇವರು ಉಗ್ರ ಪಂಗಡದಲ್ಲಿ ಸೇರ ತೊಡಗಿದರು. ೧೯೧೮ನೆಯ ಇಸವಿಯಲ್ಲಿ ಪ. ವಾ ಮಿ ಹಸನ ಇಮಾಮರವರ ಅಧ್ಯಕ್ಷತೆಯ ಕೆಳಗೆ ಮುಂಬಯಿಯಲ್ಲಿ ಜರುಗಿದ ಕಾಂಗ್ರೆಸ್ ಹೊಸ ಅಧಿವೇಶನ್ನಿನ ಸ್ವಾಗತಾಧ್ಯಕ್ಷರಾಗುವ ಮಾನವು ಇವರಿಗೇನೇ ಲಭಿಸಿದ್ದಿತು. ಮುಂದೆ ಒಂದೇ ವರುಷದಲ್ಲಿಯೇ ಇವರಿಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗುವ ಸುಯೋಗವು ದೊರೆಯಿತು. ಆಗ ಇವರು ಜಾಯಿಂಟ ಕಮಿಟಿಯ ಮುಂದೆ ಸಾಕ್ಷಿ ಕೊಡಲು ವಿಲಾಯತಿಗೆ ಹೋಗಿದ್ದರು. ೧೫ ವರುಷಗಳೊಳಗಾಗಿ ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆಯಬೇಕೆಂಬುದೇ ಇವರ ಬೇಡಿಕೆಯಾಗಿದ್ದಿತು.

೧೯೨೩ರಲ್ಲಿ ಮುಂಬಯಿ ಮುನಿಸಿಪಲ್ ಕಾರ್ಪೋರೇಶನ್ನಿನಲ್ಲಿ ಆರಿಸಿಬಂದರು. ಅಲ್ಲಿ ಕಾಂಗ್ರೆಸ್ ಪಕ್ಷವನ್ನು ನಿರ್ಮಿಸಿ ೧೯೨೫ರಲ್ಲಿ ಕಾರ್ಪೋರೇಶನ್ನಿನ ಅಧ್ಯಕ್ಷ ಪದವಿಯನ್ನು ಕೂಡಾ ಸಂಪಾದಿಸಿದರು. ಕಾಂಗ್ರೆಸ್ ಅನುಯಾಯಿಯೆಂದು ತಿಳಿದು ಲಾರ್ಡ ರೀಡಿಂಗರವರ ಸನ್ಮಾನ ಸಮಾರಂಭವನ್ನು ಇವರು ವಿರೋಧಿಸಿದರು. ಇಷ್ಟೇ ಅಲ್ಲದೆ ತಮ್ಮ ಕಾರ್ಪೋರೇಶನ್ನಿನ ಸಭಾಸದತ್ವಕ್ಕೆ ಕೂಡಾ ನೀರೆರೆಯಲು ಇವರು ಹಿಂದೆ ಮುಂದೆ ನೋಡಲಿಲ್ಲ. ೧೯೨೫ರಲ್ಲಿ ಅಸೆಂಬ್ಲಿಯ ಪ್ರೆಸಿಡೆಂಟರಾಗುವ ಸನ್ಮಾನವು ಮೊದಲಿಗೆ ಇವರಿಗೆ ದೊರೆಯಿತು. ಇಲ್ಲಿಂದ ೫ ವರುಷಗಳವರೆಗೆ ಮಾಡಿದ ಇವರ ಅದ್ಭುತ ಕಾರ್ಯಗಳು ಸ್ವಾತಂತ್ರ್ಯ ಸಂಪಾದನೆಯ ಭಾವೀ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲು ಯೋಗ್ಯವಾದವುಗಳಾಗಿವೆ.

(೧೪ ನೆಯ ಪುಟದ ಮುಂದರಿದಿ.

ಪಂಚಾಚಾರ್ಯ ಪ್ರಭಾ ಸಂಪಾದಕರಿಗೆ ಅನಾವೃತ ಪತ್ರವು.

ತಾ. ೧೧-೯-೧೯೩೩ ನೆಯ "ಪಂಚಾಚಾರ್ಯ ಪ್ರಭೆ" ಯಲ್ಲಿ "ಒಡೆಯರ ಬಗ್ಗೆ ವಿಚಿತ್ರ ಲೇಖಗಳು" ಎಂಬ ತಲೆಪಟ್ಟಿಯ ಕೆಳಗೆ ಪ್ರಭಾ ಸಂಪಾದಕರಿಂದ ಒಂದು ಲೇಖನವು ಪ್ರಕಟವಾಗಿದೆ. ಅದರಲ್ಲಿ ಸಂಪಾದಕರು ಆತ್ಮ ಸಮರ್ಥನೆಯನ್ನೂ, ಒಡೆಯರರಿಗೆ ಶಿಷ್ಟಾಚಾರವನ್ನೂ, ಗುರುಭಕ್ತಿ ಪಾಠವನ್ನೂ ಕಲಿಸ ಹೋಗಿರುವರು. ನೆಟ್ಟಗಿದೆ. ಅದೇನೋ ಹೇಳುತ್ತಾರಲ್ಲ, ಯಾರೋ ಯಾರಿಗೆ ಬುದ್ಧಿ ಹೇಳಿದ ಲೆಕ್ಕ.

ಸಿರಸಿ ಗುರುಶಾಂತಯ್ಯನವರ ಗುರುಭಕ್ತಿಯು ಸರ್ವಶೃತವಿದೆ. ಮೊದಲಿಗೆ ಈ ಅಯ್ಯನವರಿಗೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘಾರಾಜೇಂದ್ರ ಮಹಾ ಸ್ವಾಮಿಗಳು ಗುರುಗಳಾಗಿದ್ದರು. ಆಗ್ಗೆ ಅವರನ್ನು ಅನನ್ಯ ಭಕ್ತಿಯಿಂದ ಕೊಂಡಾಡಿದರು. ಆ ಮೇಲೆ ಅವರು ಬೇಡಾಗಿ ಮತ್ತೆ ಬೇರೆ ಗುರುಗಳನ್ನು ಮಾಡಿಕೊಂಡಿರುವರು. ಈಗ ಇವರನ್ನು ಹೊಗಳ ಹತ್ತಿರುವರು. ಇದು ಇವರ ಗುರುಭಕ್ತಿ. ಇದೆ ಏನು ಇವರು ಕಲಿಸುವ ಗುರುಭಕ್ತಿ ಪಾಠ? ಮೊದಲಿಗೆ ಇವರು ಯಾರನ್ನು ಯಾವ ಪಕ್ಷವನ್ನು ಅತಿ ತುಚ್ಛವಾಗಿ ಕಂಡು ಅಶಾಸ್ತ್ರೀಯವಾದದ್ದೆಂದು ತೀವ್ರತರವಾಗಿ ನಿಷೇಧಿಸಿದರೋ, ಈಗ ಅವರನ್ನೇ ಅದೇ ಪಕ್ಷವನ್ನೇ ಎತ್ತಿ ಹಿಡಿದು ಮುದ್ದಾಡಿ ಶಾಸ್ತ್ರ ಸಮ್ಮತವಾದದ್ದೆಂದು ಸಮರ್ಥಿಸಲಿಕ್ಕೆ ಹತ್ತಿರುವರು. ಪಂಡಿತರು ಬದಲಾಯಿಸಿದ ಮೇಲೆ ಶಾಸ್ತ್ರಗಳು ಬದಲಾಯಿಸಬೇಡವೆ? ಇದೆಂಥ ಮಾತು? "ಶಾಸ್ತ್ರಿಗಳ ಸಲುವಾಗಿ ಶಾಸ್ತ್ರಗಳಲ್ಲದೆ ಶಾಸ್ತ್ರಗಳ ಸಲುವಾಗಿ ಶಾಸ್ತ್ರಿಗಳಲ್ಲ." ಹೌದಲ್ಲವೇ ಶಾಸ್ತ್ರಿಗಳೇ? ಇದರಮೇಲೆ ಇನ್ನೊಂದಿದೆಯಲ್ಲ ಆಧಾರ. "ಮಹಾಜನೋ ಯೇನ ಗತಃ ಸ ಪಂಥಾಃ" ಅಂಥ ದೊಡ್ಡವರು ಹೋದ ಹಾದೀಲೆ ಇತರರು ಹೋಗಬೇಕೆಂಬೋದು. ನಂಬಿದರೆ ನಂಬಿ, ಬಿಟ್ಟರೆ ಬಿಡಿ. ನಿಮ್ಮಿಷ್ಟ.

ಒಡೆಯರವರು ಅಶ್ಲೀಲ ವಾಕ್ಯಗಳಿಂದೊಡಗೂಡಿದ ಲೇಖನಗಳನ್ನು ಬರೆಯುವರಂತೆ! ಅದಕ್ಕಾಗಿ ಅವರಿಗೆ ಇವರ ಉಪದೇಶ. ಪಂಡಿತರೇ, ತಮ್ಮ ಪ್ರಭೆಯಲ್ಲಿ ಬಂದ ಮತ್ತು ಬರುವ ಲೇಖನಗಳನ್ನಷ್ಟು ನೋಡಿರಿ. ತಾವು ಅಶ್ಲೀಲಗಳೆಂದು ಅರಿಸಿದ ಲೇಖಗಳನ್ನೂ ತಮ್ಮ ಪ್ರಭೆಯಲ್ಲಿ ಬಂದ ಲೇಖಗಳನ್ನೂ ತಾವೇ ನ್ಯಾಯಾಧೀಶರಾಗಿ ಸ್ವಲ್ಪ ತೂಗಿ ನೋಡಿರಿ, ಯಾವು ತೂಕದಲ್ಲಿ ಮಿಗಿಲಾಗಿರುವವೆಂಬುದನ್ನು ದೇವರ ಸ್ಮರಿಸಿ ನೀವೇ ನಿರ್ಣಯ ಕೊಡಿರಿಸ್ವಾಮಿ! ತಮ್ಮ ಮೇಲಾದಖಟ್ಲೆಯೂ ತಮ್ಮ ಪತ್ರಿಕೆಯಲ್ಲಿ ಬಂದ ಸೌಜನ್ಯಯುಕ್ತ ಲೇಖಗಳಿಗಾಗಿಯೇ ಇರಬಹುದಲ್ಲವೇ?

'ತನಗೆ ತಾನೆ ಹಗೆ, ತನಗೆ ತಾನೆ ಕೆಳೆ, ನೋಡಾ" ಎಂಬಂತೆ ಪ್ರಭೆಗೆ ವೀರಶೈವ ಸಮಾಜದಲ್ಲಿ ಎಂತಹ ಸ್ಥಾನವಿದೆ ಎಂಬುದು ವೀರಶೈವ ಸಮಾಜಕ್ಕೇ ಗೊತ್ತು.

ಪಾಪ! ಸಿರಸಿ ಗುರುಶಾಂತಯ್ಯನವರಿಗೆ ಗದಗಿನ ಖಟ್ಲೆದ ಸುದ್ದಿ ಎತ್ತಿದರೆ ಹೇಗೆ ಹೇಗೋ ಆಗುತ್ತಾ ಇರಬೇಕು. "ಪ್ರಭಾ ಸಂಪಾದಕರು ಧಾರವಾಡ ಡಿಸ್ಟ್ರಿಕ್ಟಿಗೆ ಕಾಲಿಡದಂತಾಗಿದೆಯೆಂದ ಬರೆಯಲ್ಪಟ್ಟಿದೆ. ಈ ಲೇಖಕರಿಗೆ ಈ ಅಸಂಬದ್ಧಾಭಿಪ್ರಾಯವನ್ನು ಯಾವ ದೀಡ ಪಂಡಿತನು ಹೇಳಿದನೋ ತಿಳಿಯದಾಗಿದೆ' ಎಂದು ಲೇಖಕರ ಮೇಲೆ ಹರಿ ಹಾಯ್ದಿರುವರು. ಆರೋಪಿ ಗುರುಶಾಂತಯ್ಯನವರ ವಕೀಲರು ಆರೋಪಿತನು ಸಂಸ್ಥಾನದ ಹದ್ದಿನಲ್ಲಿರುವದರಿಂದ ಈ ಖಟ್ಲೆಯನ್ನು ವಿಚಾರಿಸಲು ಈ ಕೋರ್ಟಿಗೆ ಅಧಿಕಾರವಿಲ್ಲವೆಂದು ವಾದಿಸಿದ್ದರ ಮೇಲೆ ವಿಚಾರಣೆಯಾ[ಗಿ] ಮ್ಯಾಜಿಸ್ಟ್ರೇಟರು ಈ ಖಟ್ಲೆಯನ್ನು ವಿಚಾರಿಸಲು ಈ ಕೋರ್ಟಿ[ಗೆ] ಅಧಿಕಾರ ಉಂಟೆಂದು ತೀರ್ಪು ಕೊಟ್ಟರು. ಅದರ ಮೇಲೆ ಈ ಅಯ್ಯನವರು ಹಾಯಕೋರ್ಟಿಗೆ ಅಪೀಲ ಅರ್ಜಿ ಮಾಡಲು ಅ[ದು] ಅದು ತಿರಸ್ಕೃತವಾಯಿತು. ಹೀಗಿದ್ದು ಈ ಮಹಾ ಪಂಡಿತರಿ[ಗೆ] ತಮ್ಮ ಮೇಲಾದ ಕೇಸನ್ನು ಫೈಲಿನಿಂದ ತೆಗೆದು ಹಾಕಿದ್ದಾರೆಂದ ಹೇಳಿದ ಪಂಡಿತನು ಇವರಿಗಿಂತಲೂ ಹೆಚ್ಚಿನ ಪಂಡಿತನಿರಬೇಕು. ತಮ್ಮ ಮೇಲಾದ ಕೇಸನ್ನು ತೆಗೆದುಹಾಕಿದ್ದಾರೆಂದು ಕೇಳಿ ಈ ಅಯ್ಯನವರು ಹಿಗ್ಗಿರಬಹುದಲ್ಲವೇ? ಗಣಂಗಳೇ! ಅದು ಲೇಖಕರ ಭ್ರಮೆಯಲ್ಲ, ತಮ್ಮ ಭ್ರಮೆಯು. ಇದಕ್ಕೆ ಬೇರೆ ಪುರಾವೆಯೇ ಬೇಡ. ತಾವು ಕೊಟ್ಟ ಇಂಗ್ಲೀಷ ಆರ್ಡರಿನ ನಕಲಿನಲ್ಲಿಯೇ The Papers are therefore filed ಅಂತ ಅದೆ. filed ಅಂದರೆ ಫೈಲಿಗೆ ದಾಖಲ ಮಾಡು ಎಂದು ಅರ್ಥವಾಗುವದಲ್ಲದೆ ಫೈಲಿನಿಂದ ತೆಗೆದುಹಾಕು ಅಂತ ಅರ್ಥವಾಗುವುದಿಲ್ಲ. ಇದರಿಂದ ತಮಗೆ ಆಂಗ್ಲ ಭಾಷಾ ಪರಿಚಯವಿದ್ದಂತೆ ಕಾಣಲಿಲ್ಲ. ಒಂದು ವೇಳೆ ತಾವು ಬರೇ ಕನ್ನಡದಲ್ಲಷ್ಟೇ ಇದರಂತೆ ಬರೆದುಕೊಂಡಿದ್ದರೆ ಕೆಲವರು ಕೆಲಕಾಲ ನಿಜವೆಂದು ನಂಬಿಯಾದರೂ ನಂಬಬಹುದಾಗಿತ್ತು. ಇಂಗ್ಲೀಷಿನಲ್ಲಿ ಅದರ ನಕಲು ಕೊಟ್ಟು ನಿಮ್ಮ ಜಾಣ್ಮೆಯನ್ನು ನೀವೇ ಹೊರಗೆಡವಿಕೊಂಡಿರುವಿರಿ ಪಂಡಿತರೇ! ನಿಮ್ಮ ಬರಹದ ಮೇಲೆ ನಿಮ್ಮ ನಂಬುಗೆ ಮತ್ತು ಧೈರ್ಯವಿದ್ದದ್ದಾದರೆ ಬಹಿರಂಗವಾಗಿ ಧಾರವಾಡ ಹುಬ್ಬಳ್ಳಿ ಗದಗ ಮೊದಲಾದ ಪಟ್ಟಣಗಳಿಗೆ ಎಂದು ದಯಮಾಡಿಸುವಿರಿ? ಅದರಲ್ಲಿ ಗದಗಿಗೆ ತಾವು ಪ್ರಸಿದ್ಧ ರೀತಿಯಿಂದ ದಯಮಾಡಿಸಿದಲ್ಲಿ ತಮ್ಮ ದಾರಿಯ ವೆಚ್ಚವನ್ನು ಕೊಡುವೆವು. ಯಾಕೆ! ಅದರಂತೆ ಪ್ರಸಿದ್ಧಿಸಿ ದಯಮಾಡಿಸಲು ಸಿದ್ಧರಿರುವಿರಾ?

ಟಿ ವೀರಪ್ಪ ಗದಗ.

—ಜರ್ಮನಿಯು ರಾಷ್ಟ್ರ ಸಂಘವನ್ನು ಬಿಟ್ಟುಕೊಟ್ಟ ಕೂಡಲೆ ಹಿಂದಿನ ಬಾದಶಹರಾದ ಕೈಸರರು ಅದಕ್ಕೆ ತಾವು ಸಮ್ಮತಿಸಿದುದಲ್ಲದೆ ಜರ್ಮನಿಯು ಇಲ್ಲಿಯವರೆಗೆ ರಾಷ್ಟ್ರ ಸಂಘದಲ್ಲಿದ್ದುದೇ ಆಶ್ಚರ್ಯವೆಂದು ಹೇಳಿದರು.

—ನೀಲಗಿರಿ ಪರ್ವತದಲ್ಲಿ ಸಂಧಿವಾತವನ್ನು ಗುಣಪಡಿಸುವ ಔಷಧವಿರುವದೆಂದೂ ಅದು ಅಲ್ಲಿಯ ನಿವಾಸಿಗಳಲ್ಲಿ ಕೆಲವರಿಗೆ ಮಾತ್ರ ಗೊತ್ತಿರುವುದೆಂದು ತಿಳಿದು ಲಂಡನ್ನಿನಿಂದ ಕೆಲವರು ನೀಲಗಿರಿಗೆ ಹೊರಟಿದ್ದಾರೆ.

ಶರಣಸಂದೇಶ

ಶಾ. ಶ. ೧೮೫೫ ನೆಯ ಕಾರ್ತಿಕ ಶು. ೧೨ ಸೋಮವಾರ.

ಭಾರತೀಯ ಮುತ್ಸದ್ದಿಯ ಶೋಚನೀಯ ನಿಧನ.

ಭರತಖಂಡವು ಈಗ ಬಹು ಶೋಚನೀಯ ಸ್ಥಿತಿಯಲ್ಲಿದೆಯಷ್ಟೆ. ಆದುದರಿಂದ ಭಾರತೀಯ ರಾಜಕಾರಣವು ಬಹು ಬಿಕ್ಕಟ್ಟಿನದಾಗಿದೆ. ಇಂತಹ ಕಠಿಣ ಪ್ರಸಂಗದಲ್ಲಿ ಭಾರತೀಯ ರಾಜಕಾರಣ ಪ್ರವೀಣರಾದ **ಶ್ರೀ. ವಿಠ್ಠಲಭಾಯಿ ಪಟೇಲರು** ಪರಲೋಕವಾಸಿಗಳಾದುದನ್ನು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಈಗ ರಾಷ್ಟ್ರಕ್ಕೆ ಇವರ ಆವಶ್ಯಕತೆಯು ವಿಶೇಷವಾಗಿದ್ದಿತು. ಏಕೆಂದರೆ ರಾಜಕಾರಣ ಪ್ರವೀಣರೇ ಈಗ ರಾಷ್ಟ್ರಕ್ಕೆ ಮಾರ್ಗದರ್ಶಿಗಳಾಗಿದ್ದಾರೆ. ಶ್ರೀ. ಪಟೇಲರಾದರೋ ಭಾರತೀಯ ರಾಜಕಾರಣ ಪ್ರವೀಣರಲ್ಲಿ ಅಗ್ರಗಣ್ಯರಾಗಿದ್ದರು. ಇಂತಹ ಭಾರತೀಯ ಮುತ್ಸದ್ದಿಗಳು ಭರತಖಂಡದಲ್ಲಿ ಇವರೊಬ್ಬರೇ ಸರಿಯೆಂದರೆ ಅತ್ಯುಕ್ತಿಯಲ್ಲ. ಹಿಂದೀ ಪಾರ್ಲಿಮೆಂಟಿನಲ್ಲಿ ಮುಖ್ಯ ಮಂತ್ರಿಗಳಾಗಲು ಈ ಅದ್ವಿತೀಯ ರಾಜಕಾರಣ ಪಟುಗಳೇ ಅರ್ಹರಾಗಿದ್ದರು.

ಇಂತಹ ಅಸಾಧಾರಣ ಮುತ್ಸದ್ದಿಗಳನ್ನು ಈ ಕಠಿಣ ಕಾಲದಲ್ಲಿ ಕಳೆದುಕೊಂಡ ಭಾರತೀಯರೇ ದುರ್ದೈವಿಗಳಲ್ಲವೆ? ಅಸೆಂಬ್ಲಿಯ ಅಧ್ಯಕ್ಷರಾಗಿ ಈ ಮಹಾಶಯರು ನಿರ್ವಹಿಸಿದ ಬ್ರಿಟಿಶ್ ರಾಜಕಾರಣದ ಜಾಣ್ಮೆಯು ಪ್ರಪಂಚವನ್ನೇ ಆಶ್ಚರ್ಯಗೊಳಿಸಿರಲಿಲ್ಲವೆ? ಇವರ ಅದ್ವಿತೀಯವಾದ ಧೈರ್ಯ ಸಾಹಸಗಳು ಅಳರಸರಿಗೆ ಭಯೋತ್ಪಾದಕಗಳಾಗಿರಲಿಲ್ಲವೆ? ಸರಕಾರಕ್ಕೆ ಇವರೊಬ್ಬರು ಬಹು ಭಾರವಾದ ಮುತ್ಸದ್ದಿಗಳಾಗಿದ್ದುದರಿಂದ ಮುಂಬೈ ಶಾಸನ ಸಭೆಯಿಂದ ದಿಲ್ಲಿ ಶಾಸನ ಸಭೆಗೆ ಇವರನ್ನು ಅಧಿಕಾರಿಗಳು ಕಳುಹಿಸಿ ತಮ್ಮ ಕಾಟವನ್ನು ತಪ್ಪಿಸಿಕೊಂಡಿರಲಿಲ್ಲವೆ?

ದಿಲ್ಲಿ ಅಸೆಂಬ್ಲಿಯಲ್ಲಿ ಹೋದ ನಂತರ ಶ್ರೀ. ಪಟೇಲರು ಅಲ್ಲಿಯ ಅಧಿಕಾರಿಗಳಿಗೆ ಮತ್ತೂ ಹೆಚ್ಚು ಭಾರವಾದರು. ಇವರ ಅದ್ವಿತೀಯ ರಾಜಕಾರಣ ಪ್ರವೀಣತೆ, ಅಸಾಧಾರಣ ಧೈರ್ಯ, ಸ್ಪಷ್ಟೋಕ್ತಿಗಳಿಂದ ಅಧಿಕಾರಿಗಳಿಗೆ ಇವರು ವಿಘ್ನಕಾರಿಗಳಾಗಿಯೇ (A Difficult man) ಪರಿಣಮಿಸಿದರು. ಆದುದರಿಂದಲೇ ಸರ್. ಮಾಲ್ಕಮ್ ಸಾಹೇಬರು ಪಂಜಾಬಪ್ರಾಂತದ ಗವ್ಹರ್ನರರಾಗಿ ಹೋಗುವಾಗ ಸಿಮುಲಾ ಭಾಷಣದಲ್ಲಿ ಈ ಪ್ರಕಾರ ಹೇಳಿದ್ದರು—

"ಎಲ್ಲಿ ಪಟೇಲ ಮತ್ತು ನೆಹರುರವರು ನನ್ನ ಕಣ್ಣಿನ ಮುಂದಿರುವದಿಲ್ಲವೋ ಅಂತಹ ಪ್ರಾಂತಕ್ಕೆ ನಾನು ಹೋಗುತ್ತಿದ್ದೇನೆ." ಈ ವಾಕ್ಯವು ಶ್ರೀ. ಪಟೇಲರ ಅದ್ವಿತೀಯವಾದ ರಾಜಕಾರಣ ಪ್ರವೀಣತೆಯನ್ನೂ ಧೈರ್ಯ ಸಾಹಸಗಳನ್ನೂ ವ್ಯಕ್ತಗೊಳಿಸುವದಿಲ್ಲವೆ? ಶ್ರೀ. ಪಟೇಲರನ್ನು ಸರ್. ಮಾಲ್ಕಮ್ ಸಾಹೇಬರು ಯಥಾರ್ಥವಾಗಿಯೇ ಈ ವಾಕ್ಯದಿಂದ ಗೌರವಿಸಿದ್ದರೆಂದು ಸ್ಪಷ್ಟವಾಗುವುದಿಲ್ಲವೆ? ಈಗ ಲಂಡನ್ ಟಾಯಿಮ್ಸ ಕಾರರೂ ಕೂಡ ಶ್ರೀ. ಪಟೇಲರು ರಾಜಕಾರಣದಲ್ಲಿ ಬಹು ತೊಡಕನ್ನುಂಟುಮಾಡಿದ್ದರೆಂದು ಹೇಳಿದುದು ಪಟೇಲರ ಕಾರ್ಯವನ್ನು ಅಭಿನಂದಿಸಿದಂತಲ್ಲವೆ?

ಶ್ರೀ. ಪಟೇಲರು ಭಾರತೀಯ ರಾಜ್ಯಸೂತ್ರವನ್ನು ಹಿಡಿದು ರಾಜಕಾರಣ ಪುರುಷರಲ್ಲಿ ಹೇಗೆ ಅದ್ವಿತೀಯ ಜಾಗೃತಿಯನ್ನುಂಟುಮಾಡಿದರೋ ಹಾಗೆಯೇ ಐರ್ಲಂಡ್ ಅಮೇರಿಕೆಗಳಲ್ಲಿ ಸಂಚರಿಸಿ ಹಿಂದುಸ್ಥಾನದ ವಿಷಯವಾಗಿ ವಿಶೇಷ ಪ್ರೇಮಾದರಗಳನ್ನುಂಟುಮಾಡಿ ಪರರಾಷ್ಟ್ರಗಳಲ್ಲಿ ಪ್ರಯತ್ನಿಸಬೇಕಾದ ರೀತಿಯನ್ನೂ ತೋರಿಸಿಕೊಟ್ಟರು. ಹಿಂದುಸ್ಥಾನದ ವಿಷಯವಾಗಿ ಡಿ. ವ್ಹೆಲೆರಾ ಮೊದಲಾದ ಐರ್ಲಂಡಿನ ಮುತ್ಸದ್ದಿಗಳು ವಿಶೇಷ ಪ್ರೇಮಾದರಗಳುಳ್ಳವರಾದುದರ ಶ್ರೇಯಸ್ಸು ಶ್ರೀ. ಪಟೇಲರಿಗೇನೇ ಸೇರಿದ್ದಾಗಿದೆ. ಈ ಪ್ರಕಾರ ದೇಶವಿದೇಶಗಳಲ್ಲಿ ಭಾರತೀಯ ರಾಜಕಾರಣದ ಜಾಗೃತಿಯನ್ನುಂಟುಮಾಡಿದ ಪಟೇಲರು ಭಾರತೀಯರಿಗೆ ಚಿರಸ್ಮರಣೀಯರಾಗಿದ್ದಾರೆ.

ಆಂಗ್ಲ ರಾಜಕಾರಣದ ಮೂರ್ತಿಗಳೇ ಆದ ಪಟೇಲರು ತಮ್ಮ ಸ್ವಭಾವಕ್ಕೆ ಪಥ್ಯಕರವಲ್ಲದ ಶಾಸನಭಂಗದ ತೀಕ್ಷ್ಣಮಾರ್ಗದಲ್ಲಿ ಪ್ರವೇಶಿಸದೆ ಇದ್ದಿದ್ದರೆ ಈ ಶೋಚನೀಯವಾದ ಅಕಾಲ ನಿಧನವು ಸಂಭವಿಸುತ್ತಲೇ ಇರಲಿಲ್ಲವೆಂದು ಹೇಳಬಹುದು. ಆದರೆ ದೈವಯೋಗವೇ ಬೇರೆಯಾಗಿದ್ದಿತು. ಇವರಲ್ಲಿದ್ದ ಅದ್ವಿತೀಯವಾದ ದೇಶಭಕ್ತಿ ಸ್ವಾಭಿಮಾನಗಳು ಆ ಅಸಹಕಾರದ ಆಂದೋಲನದ ಕಾಲದಲ್ಲಿ ಇವರು ಅಸೆಂಬ್ಲಿಯ ಸಿಂಹಾಸನದ ಮೇಲೆ ಕುಳಿತಿರಲು ಅವಕಾಶಕೊಡದೆ ತಳ್ಳಿಬಿಟ್ಟವು. ಆದುದರಿಂದಲೇ ಶ್ರೀ ಪಟೇಲರು ದೇಶಬಂಧು ದಾಸ, ಲಾಲಾ ಲಜಪತರಾಯ, ಮೋತಿಲಾಲ ನೆಹರು, ಡ್ಯಾ. ಸೇನಗುಪ್ತರಂತೆ ಹಿಂದುಸ್ಥಾನದ ಸ್ವರಾಜ್ಯಪ್ರಾಪ್ತಿಯ ಮಹಾಯಜ್ಞದಲ್ಲಿ ಆತ್ಮಾಹುತಿಕೊಟ್ಟ ವೀರಾಗ್ರಣಿಗಳೆಂದೇ ಚರಿತ್ರಕಾರರು ಹೇಳದಿರಲಾರರು.

ಶ್ರೀ. ಪಟೇಲರು ತಮ್ಮ ಜಡದೇಹವನ್ನು ಬಿಡುವಾಗ ಭಾರತೀಯ ಪಾರತಂತ್ರ್ಯ ಬಿಡುಗಡೆಗಾಗಿ ಪರಮಾತ್ಮನಲ್ಲಿ ಮೊರೆಯಿಟ್ಟುದನ್ನು ನೋಡಿದರೆ ಅವರ ದಿವ್ಯಾತ್ಮವು ಭಾರತೀಯ ನಭೋಮಂಡಲದಲ್ಲಿ ಭಾರತೀಯರಿಗೆ ಪ್ರೇರಣೆಯನ್ನುಂಟುಮಾಡಲು ಸಂಚರಿಸುತ್ತಲಿದೆಯೆಂದೇ ಹೇಳಬಹುದು.

ಶ್ರೀ. ಪಟೇಲರ ತೇಜೋಮಯವಾದ ದೇಶಭಕ್ತಿ, ಸ್ವಾರ್ಥತ್ಯಾಗ, ಧೈರ್ಯ, ಸಾಹಸಗಳನ್ನು ನಾವು ನಮ್ಮ ಕಣ್ಣು ಮುಂದಿಟ್ಟುಕೊಂಡು ದೇಶಸೇವಕರಾಗಿ ಸ್ವರಾಜ್ಯವನ್ನು ಸಂಪಾದಿಸಿದಾಗಲೇ ಪಟೇಲರ ಆತ್ಮಕ್ಕೆ ಶಾಂತಿ ದೊರೆಯುವುದು. ಅಂತಹ ಪುಣ್ಯ ಕಾಲವು ಜಾಗ್ರತೆ ಪ್ರಾಪ್ತವಾಗಲಿ. ಶ್ರೀ. ಪಟೇಲರ ದಿವ್ಯಾತ್ಮವು ಶಾಂತಿ ಹೊಂದಲಿ.

—ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರು ಮಛಲಿ ಪಟ್ಟಣದ ಗಾಂಧಿ ಚೌಕಿನಲ್ಲಿ ಭಾಷಣ ಮಾಡುತ್ತಿರುವಾಗ ಇನ್ನಿಬ್ಬರೊಡನೆ ಬಂಧಿಸಲ್ಪಟ್ಟರು.

—ಶ್ರೀ. ವಿಠ್ಠಲಭಾಯಿ ಪಟೇಲರವರ ಶವವು ನವ್ಹಂಬರ ೯ನೆಯ ತಾರೀಖಿನ ದಿವಸ ಮುಂಬೈಗೆ ಬರುವದು. ಅದನ್ನು ಜನರು ನೋಡಲಿಕ್ಕೆ ಅಪೋಲೋ ಬಂದರದಲ್ಲಿ ಕೆಲವು ತಾಸು ಇಡುವರು. ಮೆರವಣಿಗೆಗೆ ೧ ಸಾವಿರ ಸ್ವಯಂಸೇವಕರು ಕೂಡಿರುವರು.

ಶರಣರೊಡನೆ ಸರಸವಾಡಿದರೆ ಮಡುವ ಬಿದ್ದಂತೆ.

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ | ಉರಿಯುಕೊಳ್ಳಿಯುಕೊಂಡು ಮಂಡೆಯು ಸಿಕ್ಕ ಬಿಡಿಸುವಂತೆ | ಹುಲಿಯ ಮೀಸೆಯ ಪಿಡಿದುಕೊಂಡು ಒಲದುಯ್ಯಲೆನಾಡುವಂತೆ | ಕೂಡಲ ಸಂಗನ ಶರಣರೊಡನೆ ಮರೆದು ಸರಸವಾಡಿದರೆ | ಸುಣ್ಣದಕಲ್ಲ ಮಡಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ||

"ವಜ್ರಾದಪಿ ಕಠೋರಾಣಿ | ಮೃದೂನಿ ಕುಸುಮಾದಪಿ | ಲೋಕೋತ್ತರಾಣಾಂ ಚೇತಾಂಸಿ | ಕೋಹಿ ವಿಜ್ಞಾತುಮರ್ಹತಿ|| ಎಂಬೋಕ್ತಿಯಂತೆ ಶಿವಶರಣರು ಪುಣ್ಯ ಜೀವಿಗಳಿಗೆ ಶಾಂತ ಚಿತ್ತರೂ, ದಯಾರ್ದ್ರ ಹೃದಯರೂ, ಅಗಾಧ ಸೈರಣೆಯುಳ್ಳವರೂ ಆಗಿರುತ್ತಾರೆ. ಆದರೆ ಪಾಪಜೀವಿಗಳು ಅವರ ಈ ಇರುವಿಕೆಯನ್ನು ಕಂಡು ಸ್ವಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಬೇಕೆಂಬಾಸೆಯಿಂದಲೋ ಅಥವಾ ಅಂಥ ಶರಣರಿಗೆ ಸಲ್ಲುತ್ತಿದ್ದ ಗೌರವಾದಿಗಳು ತಮಗೆ ಸಲ್ಲಬೇಕೆಂಬ ದುರುದ್ದೇಶದಿಂದಲೋ ಅವರನ್ನು ಹೀಯಾಳಿಸಿ, ಅವರ ಸೌಮ್ಯತನದ ಲಾಭವನ್ನು ತಾವು ಅಪಹರಿಸಬೇಕೆಂದಲ್ಲಿ ಆ ಶರಣರು ಇಂಥ ದುಷ್ಕರ್ಮ ಜೀವಿಗಳನ್ನು ರಸಾತಳಕ್ಕೆ ತುಳಿಯದೆ ಎಂದಿಗೂ ಬಿಡರು.

ಜಗತ್ತಿನಲ್ಲಿ ಅಂಜಿಕೆಯೆಂಬುದು ಪಾಪಿಷ್ಠರಲ್ಲಿಯೇ ಇರುವುದಲ್ಲದೆ ಸತ್ಯವ್ರತಿಗಳಾದ ಶಿವಶರಣರಲ್ಲಿರುವುದೇ? ಅವರು ದಾಸೋಹಿಗಳಾದುದರಿಂದ ಶರಣಸೌಮ್ಯರಾಗಿದ್ದರೂ ಪ್ರಸಂಗ ಬಂದಲ್ಲಿ ಮಹಾದೇವನನ್ನೇ ತ್ರಾಹಿ ತ್ರಾಹಿ ಎಂದೆನ್ನುವಂತೆ ಮಾಡಬಲ್ಲ ನಮ್ಮ ಶರಣರು ಈ ಕುಚೇಷ್ಟಾಪೂರಿತ ಕಃಪದಾರ್ಥಗಳನ್ನು ಕಡೆಗಾಣಿಸದೆ ಬಿಟ್ಟಾರೆ? ಇಂಥ ತಿಳುವಳಿಕೆಯು ಈ ಭೂತಗ್ರಸ್ತರಿಗೆ ಉಂಟಾಗಬೇಡವೇ?

ಮಡುವಿನ ನೀರು ಅಗಾಧವಾಗಿರುವುದರಿಂದ ಸ್ಥಿರವೂ, (ಕೋಲಾಹಲ ರಹಿತವೂ) ನೈಸರ್ಗಿಕ ಗುಣವಾಗಿರುವುದರಿಂದ ಶೀತವೂ, (ಶಾಂತವೂ) ಆಗಿರುವುದು ನಿಜ. ಆದರೆ ಅದರಲ್ಲಿ ಧುಮುಕ (ಕೆಣಕ) ಬೇಕೆನ್ನುವ ಪೋಕರಿಗಳಿಗೆ ತಮ್ಮ ಮಡಲಲ್ಲಿ ಕಟ್ಟಿಕೊಂಡಿರುವದೇನೆಂಬುದು ಗೊತ್ತಾದರಲ್ಲವೇ? ತಾವು ಗರ್ಭದಲ್ಲಿಟ್ಟುಕೊಂಡಿರುವದು ಕಲ್ಲು. ಜಡವಾದ ಕಲ್ಲು. ಚಲ್ಲಾಟವಾಡಬೇಕೆಂದು ಮಡುವಿನಲ್ಲಿ ಬಿದ್ದರೆ ತಳಕ್ಕೆ ಎಳೆಯುವ ಕಲ್ಲು. ಅದರಲ್ಲಿಯೂ ಸುಣ್ಣದ ಕಲ್ಲು. ಅಬ್ಬಬ್ಬಾ!! ದಹನವೂ ಸಮಾಧಿಯೂ ಒಮ್ಮೆಯೇ ಆಗುವದಿಲ್ಲವೆ!! ಇಂಥ ಜಡಮತಿಯನ್ನೂ ಮಾತ್ಸರ್ಯ ಕಿಚ್ಚನ್ನು ಹೊಟ್ಟೆಯಲ್ಲಿಟ್ಟುಕೊಂಡು ಶಿವಶರಣರನ್ನು ಕೆಣಕಿದರೆ ತನ್ನಲ್ಲಿ ಹೊತ್ತಿದ ಕಿಚ್ಚು ತನ್ನನ್ನೇ ಸುಡುವದಲ್ಲದೆ ಅವರು ಬೇಯುವರೆ? ಇಷ್ಟೇ ಅಲ್ಲ. ಇಂಥ ಕಾಲದಲ್ಲಿ ಶಿವಶರಣರ ಶಾಂತವರ್ತನದಿಂದ ಮತ್ಸರಿಗಳ ಮತ್ಸರವೂ ಜಡತ್ವವೂ ಮತ್ತಷ್ಟು ಹೆಚ್ಚಿ ಆ ಜಡತ್ವದಿಂದ ಅಧೋಗತಿಗೀಡಾಗಬೇಕಾಗುವದಲ್ಲದೆ ಮಾತ್ಸರ್ಯದ ಕಿಚ್ಚಿನಿಂದಲೂ ಬೆಂದು ಹೋಗಬೇಕಾಗುವದು.

ಮಹಾನುಭಾವರ ಈ ದಿವ್ಯೋಪದೇಶವು ಗುಣಗ್ರಾಹಿಗಳಿಗೆ ಅಮೃತಪ್ರಾಯವಾಗುವುದಿಲ್ಲವೆ? ಅವರ ರಸಾಲವಾಣಿಯು ಕರುಣಾರಸವನ್ನೆರಚಿ ನಮ್ಮನ್ನು ದಹಿಸುತ್ತಿರುವ ಮಾತ್ಸರ್ಯಾಗ್ನಿಯನ್ನು ನೊಂದಿಸಲು ಎಷ್ಟು ಸಹಕಾರಿಯಾಗಿರುವುದು ನೋಡಿರಿ. ಶಿವಶರಣರಿಗೆ ವಿರುದ್ಧವಾಗಿ ವರ್ತಿಸಿದಲ್ಲಿ ಯಾವ ಪರಿಣಾಮವನ್ನು ಪಡೆಯಬೇಕಾಗುವುದೆಂಬುದನ್ನು ನಾವೆಲ್ಲ ತಿಳಿದುಕೊಂಡರೆ ಸಾಕು.

ಪಾಟೀಲ ಲಿಂಗನಗೌಡ.

ಮಿದನಾಪುರದ ಶೋಚನೀಯ ಸ್ಥಿತಿ.

ಕ್ರಾಂತಿಕಾರಕರ ನಿಂದ್ಯ ಪ್ರಯತ್ನಗಳಿಗೆ ಮಿದನಾಪುರವು ಕೇಂದ್ರ ಸ್ಥಾನವಾಗಿದೆಯಷ್ಟೆ. ಅಲ್ಲಿ ಜರುಗುವ ಘೋರ ಕೃತ್ಯಗಳ ನಿವಾರಣಾರ್ಥವಾಗಿ ವಿಲಾಯತಿಯ "ಮಾರ್ನಿಂಗ್ ಪೋಸ್ಟ" ಎಂಬ ಪತ್ರಿಕೆಯಲ್ಲಿ ಮಿದನಾಪುರದ ಯುರೋಪಿಯನ್ಸ ಎಂಬ ಹೆಸರಿನಿಂದ ಒಂದು ಹೃದಯದ್ರಾವಕ ಲೇಖನ ಪ್ರಕಟವಾಗಿದೆ. ಅದರಿಂದ ಕ್ರಾಂತಿಕಾರಕರ ಅತ್ಯಂತ ಘೋರಕೃತ್ಯವು ಎಷ್ಟು ಘಾತಕವಾದುದೆಂಬುದು ಸ್ಪಷ್ಟವಾಗುತ್ತದೆ.

"ಮಿದನಾಪುರವು ೩೦ ಸಾವಿರ ಜನಸಂಖ್ಯೆಯುಳ್ಳದ್ದಾಗಿದೆ. ಇಲ್ಲಿ ಹಿಂದುಗಳೇ ವಿಶೇಷವಾಗಿದ್ದಾರೆ. ಇಲ್ಲಿ ೧೦೦ಕ್ಕೆ ೭೦ ಜನರಂತೆ ಕ್ರಾಂತಿಕಾರಕರಿಗೆ ಸಹಾನುಭೂತಿಯುಳ್ಳವರಿದ್ದಾರೆ. ಕಳೆದ ೨೭ ತಿಂಗಳುಗಳಲ್ಲಿ ೩ ಯುರೋಪಿಯನ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರನ್ನು ಕೊಲೆಮಾಡಿದರು. ಇದರಿಂದ ಅಲ್ಲಿಯ ಯುರೋಪಿಯನ್ ಅಧಿಕಾರಿಗಳು ಎಂಥ ಗಂಡಾಂತರದಲ್ಲಿ ಕೆಲಸ ವಹಿಸಬೇಕಾಗಿದೆಯೆಂಬುದು ಗೊತ್ತಾಗುವುದಿಲ್ಲವೇ?

ಇಲ್ಲಿಯ ಪ್ರತಿಯೊಬ್ಬ ಅಧಿಕಾರಿಯ ಪ್ರಾಣರಕ್ಷಣೆಗಾಗಿ ಇಬ್ಬರಿಂದ ೧೨ ಜನ ಶಿಪಾಯಿಗಳವರೆಗೆ ನಿಯಮಿಸಿದ್ದಾರೆ. ಒಬ್ಬ ಸಶಸ್ತ್ರ ಅಂಗರಕ್ಷಕನಂತೂ ಪಿಸ್ತೂಲನ್ನು ತುಂಬಿ ಅಧಿಕಾರಿಗಳ ಸಂಗಡ ಅವರು ಊಟಮಾಡುವಾಗ, ಮಲಗುವಾಗ, ಕೆಲಸ ಮಾಡುವಾಗ ಈ ಪ್ರಕಾರ ೨೪ ತಾಸು ಹತ್ತಿರವೇ ಇರುವಂತೆ ಮಾಡಿದ್ದಾರೆ. ಮಲಗುವಾಗ ಕಿಡಿಕಿಗಳನ್ನು ಮುಚ್ಚಬೇಕೆಂತಲೂ ಮೂರು ದಿವಸಗಳಿಗೊಮ್ಮೆ ಮಲಗುವ ಸ್ಥಳವನ್ನು ಕೂಡಾ ವ್ಯತ್ಯಸ್ತ ಮಾಡಬೇಕೆಂತಲೂ ನಿಯಮವಿದೆ. ಎಂದಮೇಲೆ ಅಲ್ಲಿಯ ಅಧಿಕಾರಿಗಳಿಗೆ ಎಷ್ಟು ತೊಂದರೆಯಾಗುತ್ತಲಿದೆಯೆಂಬುದು ಗೊತ್ತಾಗುವುದಿಲ್ಲವೆ?

ಈ ಶೋಚನೀಯ ಸ್ಥಿತಿ ನಿವಾರಣೆಯಾಗಲು ಅಪ್ಪಣೆಯಿಲ್ಲದೆ ಶಸ್ತ್ರವನ್ನಿಟ್ಟುಕೊಂಡವರಿಗೆ ೪೮ ತಾಸುಗಳಲ್ಲಿ ಪ್ರಾಣದಂಡನೆಯ ಶಿಕ್ಷೆಯನ್ನು ವಿಧಿಸುವ, ಕೊಲೆಮಾಡಿದ ಅಥವಾ ಪ್ರಯತ್ನಿಸಿದವರ ಮನೆತನದವರನ್ನು ದ್ವೀಪಾಂತರಗೊಳಿಸುವ ಮತ್ತು ಮಿದನಾಪುರದ ಮೇಲೆ ಹಾಕಿದ ದಂಡದ ಹಣವನ್ನು ದುಪ್ಪಟ್ಟುಮಾಡಿ ಆ ಹಣವನ್ನು ಕ್ರಾಂತಿಕಾರಕರ ಶೋಧಕರಿಗೆ ಬಹುಮಾನ ಕೊಡುವ ಶಾಸನ ಮಾಡಬೇಕು."

ವಿ ವಿ ಧ ವಿ ಷ ಯ

ಮಿ. ಸಾಯರಸ್ ಕರ್ಟಿಸ್.

ಮಿ. ಸಾಯರಸ್ ಕರ್ಟಿಸ್ ಎಂಬುವವರು ಕೆಲವು ದಿವಸಗಳ ಹಿಂದೆ ಪರಲೋಕವಾಸಿಗಳಾದರು. ಇವರು ಚಿಕ್ಕಂದಿನಲ್ಲಿ ಅಮೇರಿಕೆಯಲ್ಲಿ ವರ್ತಮಾನ ಪತ್ರವನ್ನು ಮಾರುತ್ತಿದ್ದರು. ಆವಾಗ್ಗೆ ಇವರು ಚಾಣಾಕ್ಷ ಬುದ್ಧಿಯಿಂದ ಯಾವ ಸಂಪಾದಕನ ಪತ್ರಿಕೆಗಳು ಶ್ರೇಷ್ಠವೆಂಬುದನ್ನು ತಾವು ನೋಡಿ ಅವರ ಪತ್ರಿಕೆಗಳನ್ನು ಮಾರುತ್ತಿದ್ದರು. ತಮ್ಮ ೧೫ನೆಯ ವರುಷದಲ್ಲಿಯೇ 'ಯಂಗ್ ಅಮೇರಿಕಾ' ಎಂಬ ವಾರಪತ್ರಿಕೆಯನ್ನು ಪ್ರಕಟಿಸಹತ್ತಿದರು. ಬರಬರುತ್ತ ಪತ್ರಿಕಾ ವ್ಯವಸಾಯಗಳಲ್ಲಿ ಬಹಳ ಮುಂದೆ ಬಂದರು. ಪತ್ರಿಕಾ ಆಡಳಿತೆಗಾರರನ್ನೂ ಸಂಪಾದಕರನ್ನೂ ಜನರಿಗೆ ಬೇಕಾಗುವಂಥವರನ್ನೇ ಆರಿಸುತ್ತಿದ್ದುದರಿಂದ ಇವರ The Saturday Evening Post ಎಂಬ ಪತ್ರಿಕೆಯು ೩೦ ಲಕ್ಷ ಪ್ರತಿಗಳು ಖರ್ಚಾಗುತ್ತಿರುವವು. ಈಗ ಇವರ ಹೆಸರಿನಿಂದ ಇಂಥ ೭ ಪತ್ರಿಕೆಗಳು ಹೊರಡುತ್ತಿವೆ. ಉದ್ಯಮ ಸಾರ್ವಭೌಮರೆನಿಸಿದ ಅಮೇರಿಕೆಯ ಸಪ್ತ ಮಹಾ ಪುರುಷರಲ್ಲಿ ಇವರೂ ಒಬ್ಬರಾಗಿದ್ದಾರೆ. ತಮ್ಮ ಕೋಟ್ಯವಧಿ ದ್ರವ್ಯವನ್ನು ಆಗಿಂದಾಗ್ಗೆ ದಾನ ಕೊಡುತ್ತ ವಿನಿಯೋಗಿಸಿದ್ದಾರೆ.' ಪತ್ರಿಕಾ ಮಾರುವ ಹುಡುಗನೆಲ್ಲಿ! ಪತ್ರಿಕಾ ವ್ಯವಸಾಯ ಸಾರ್ವಭೌಮನೆಲ್ಲಿ!

ಈಸುವವರಲ್ಲಿ ಅದ್ವಿತೀಯನು.

ಮಿ. ಝುಮಿ ಎಂಬ ಅಮೇರಿಕೆಯ ಈಜುಗಾರನು ೧೦೦ ಗಂಟೆಗಳವರೆಗೆ ಈಜಬಲ್ಲನು. ಇದಲ್ಲದೆ ನೀರಿನೊಳಗೆ ೪ ಮಿನಿಟು ೧೭ ಸೇಕಂದುಗಳವರೆಗೆ ಇರಬಲ್ಲನು. ಇವನು ಹೇಳುವದೇನಂದರೆ ನನ್ನ ಎರಡೂ ಕಾಲುಗಳಿಲ್ಲ. ಕಾಲುಗಳೇ ದೇಹದ ಭಾರವಾದ ಅವಯವಗಳು. ಆದುದರಿಂದಲೇ ನೀರಿನಲ್ಲಿ ಈಜಲು ನನಗೆ ಶ್ರಮವಾಗುವುದಿಲ್ಲ. ಕಾಲಿದ್ದವರು ಈಜುವದರಿಂದ ಹೃದಯಕ್ರಿಯೆಯು ತಂಪಾಗಿ ಶ್ರಮವಾಗುತ್ತದೆ. ಈ ಕಷ್ಟವೂ ನನಗಿಲ್ಲ. ಆದುದರಿಂದಲೇ ಈ ಕಲೆಯಲ್ಲಿ ನಾನು ಅದ್ವಿತೀಯನಾಗಿದ್ದೇನೆ. ನಾನು ೧೫೭ ಫೂಟು ಎತ್ತರದ ಮೇಲಿಂದ ನೀರಿನಲ್ಲಿ ಹಾರಬಲ್ಲೆನು.

ಈಜುವಂಥ ವ್ಯಾಯಾಮವು ಮತ್ತೊಂದಿಲ್ಲ. ಅಗ್ನಿಮಾಂದ್ಯ, ಅಜೀರ್ಣ, ಹೃದಯವಿಕಾರ, ಸಂಧಿವಾತ ಮೊದಲಾದ ರೋಗಗಳು ಈಸುವುದರಿಂದ ದೂರಾಗುತ್ತವೆ. ಬೇರೆ ವ್ಯಾಯಾಮಗಳನ್ನು ಮಾಡುವುದರಿಂದ ರಕ್ತದ ಉಷ್ಣತಾಮಾನವು ಹೆಚ್ಚಿ ಹೃದಯಕ್ಕೆ ಅಪಾಯವನ್ನು ಮಾಡುವಂತೆ ಈಜುವುದರಿಂದ ಅಪಾಯವಾಗುವುದಿಲ್ಲ. ಸ್ತ್ರೀಯರೂ ಸಹ ಈಜು ಕಲಿತರೆ ಅವರ ಗರ್ಭದ ಸ್ನಾಯುಗಳು ಬಲಪಟ್ಟು ಹಡೆಯುವ ಕಾಲಕ್ಕೆ ಅವರಿಗೆ ಕಷ್ಟವಾಗುವುದಿಲ್ಲ. ಸೊಟ್ಟ ಕಾಲುಗಳುಳ್ಳ ಸಣ್ಣ ಮಕ್ಕಳನ್ನು ಒಂದು ಟಬ್ಬಿನಲ್ಲಿ ಈಸಹಚ್ಚಿದರೆ ಅವರ ಕಾಲುಗಳ ನರಗಳು ಸಡಿಲಾಗಿ ನೆಟ್ಟಗಾಗುವವು. ನೀರಿನೊಳಗೆ ಈಸುವದರಿಂದ ಪುಪ್ಪುಸಗಳು ಬಲವಾಗಿ ಪ್ರಾಣಬಲವು ವೃದ್ಧಿಯಾಗುತ್ತದೆ. ಆದರೆ ಊಟ ಮಾಡಿದ ೪ ತಾಸಿನೊಳಗೆ ಈಸಬಾರದು.

ಈಸಲಿಕ್ಕೆ ಅನುಕೂಲ ಸಾಧನವುಳ್ಳಂಥವರು ಈಸುಕಲಿತು ತಮ್ಮ ಲಾಭವನ್ನು ಮಾಡಿಕೊಳ್ಳುವರೋ?

ಕಾಲಕೂಟದ ಕಾಲನು.

ಸಾಸವಡ ಎಂಬ ಗ್ರಾಮದಲ್ಲಿ ಒಬ್ಬ ಮಹಾರೋಗಗ್ರಸ್ತ ಮುಸಲ್ಮಾನನಿಗೆ ಯಾರೋ ಕಾಲಕೂಟ ಸರ್ಪದಂಶವಾದರೆ ರೋಗಮುಕ್ತನಾಗುವಿಯೆಂದು ಹೇಳಿದ್ದರು. ಆ ಕಾರಣ ಅವನು ಬಹು ದಿವಸಗಳಿಂದಲೂ ಕಾಲಕೂಟ ಸರ್ಪವನ್ನೇ ಹುಡುಕುತ್ತಿದ್ದನು. ಒಂದು ದಿನ ಅವನಿಗೆ ಬೇಕಾದಂಥ ಒಂದು ಭಯಂಕರ ವಿಷವುಳ್ಳ ನಾಗರಾಜನನ್ನು ಕಂಡು ಆನಂದದಿಂದ ಅವನು ಓಡಿ ಹೋಗಿ ಅದನ್ನು ಹಿಡಿದನು. ಇವನಿಂದ ತಪ್ಪಿಸಿಕೊಳ್ಳಲು ಅದು ಬಲವಾಗಿ ಪ್ರಯತ್ನ ಮಾಡಿತು. ಅದು ಕಡಿಯಬೇಕೆಂದು ಅವನೆಷ್ಟೋ ಪ್ರಯತ್ನ ಮಾಡಿದನು. ಇದನ್ನು ನೋಡಲಿಕ್ಕೆ ಊರೊಳಗಿನ ಜನರೆಲ್ಲ ನೆರೆದರು. ಕಡೆಗೆ ಅವನು ಅದನ್ನು ಸಿಟ್ಟಿಗೆಬ್ಬಿಸಲಿಕ್ಕೆ ಅದರ ಬಾಲವನ್ನು ಚಿವುಟಿದನು. ಅದೂ ವ್ಯರ್ಥ. ಹೀಗೆ ೨ ತಾಸು ಅದರ ಸಂಗಡ ಹೋರಾಡಿ ಕಡೆಗೆ ಅದರ ಹೆಡೆಯ ಮೇಲೆ ಕೈಯಿಂದ ಹೊಡೆಯಹತ್ತಿದನು. ಕಡೆಗೆ ಅದು ತನ್ನ ಜೀವಕ್ಕೆ ಬೇಸತ್ತು ಸಿಟ್ಟಿನಿಂದ ಆ ಮನುಷ್ಯನನ್ನು ಕಡಿಯಿತು. ಮತ್ತು ಆ ಕ್ಷಣವೇ ಸತ್ತು ಹೋಯಿತು. ಆದರೆ ಆ ಮಹಾರೋಗಿಯು ಕೂಡಾ ಮುಂದೆ ೧೫-೨೦ ನಿಮಿಷಗಳಲ್ಲಿ ಸತ್ತನು.

ವಿಷಸರ್ಪವನ್ನೂ ಸಹ ಕೊಲ್ಲುವಂಥ ಆ ಮನುಷ್ಯನ ರೋಗವೆಂತಹದಿರಬೇಕು?

ಜರ್ಮನಿಯಲ್ಲಿ ಸ್ತ್ರೀ ಸ್ವಾತಂತ್ರ್ಯ.

ನಾಝಿ ಆಳಿಕೆಯಲ್ಲಿ ವಿವಾಹಿತ ಸ್ತ್ರೀಯರು ಸರಕಾರೀ ಉದ್ಯೋಗಗಳನ್ನಾಗಲಿ ಕಾರ್ಯಾಲಯದ ಕೆಲಸಗಳನ್ನಾಗಲಿ ಮಾಡಕೂಡದೆಂದು ನಿರ್ಬಂಧನೆಯಾಗಿದೆ. ಇನ್ನು ಮೇಲೆ ಸ್ತ್ರೀಯರು ಕೇವಲ ಅಡಿಗೆಯ ಕೆಲಸವನ್ನೂ, ಮಕ್ಕಳ ಸಂರಕ್ಷಣೆಯನ್ನೂ, ಒಕ್ಕಲತನವನ್ನೂ ಮಾಡಿಕೊಂಡಿರತಕ್ಕದ್ದು. ವಿದ್ಯಾವಿಭೂಷಿತೆಯರಾಗಿ ಉಚ್ಚ ಅಧಿಕಾರಗಳಲ್ಲಿ ಕೆಲಸಮಾಡುತ್ತಿದ್ದ ಸಭ್ಯ ಸ್ತ್ರೀಯರು ತಮ್ಮ ಉದ್ಯೋಗಗಳಿಗೆ ಶರಣು ಹೊಡೆದು ಹೊಲಗಳಲ್ಲಿಯೋ, ಅಡಿಗೆಮನೆಗಳಲ್ಲಿಯೋ ಇಲ್ಲವೆ ನೆಲವನ್ನು ಅಗಿಯುವದರಲ್ಲಿಯೋ ಕೆಲಸಮಾಡಬೇಕಾಗಿದೆ. ಸ್ತ್ರೀಯರು ರಾಜಕೀಯ ವಿಷಯಗಳಲ್ಲಿ ಭಾಗವಹಿಸಕೂಡದು. ಮತ್ತು ಸೈನಿಕರ ಉತ್ಸವಾದಿಗಳು ಹೊರಟಾಗ್ಗೆ ಹೊರಗೆ ಹೋಗದೆ ಒಳಗೇ ನಿಂತು ನೋಡತಕ್ಕದ್ದು. ಅಡಿಗೆಯನ್ನು ಮಾಡಲಿಕ್ಕೆ ಮತ್ತು ಒಕ್ಕಲತನ ಮಾಡಲಿಕ್ಕೆ ತಮ್ಮಲ್ಲಿ ಕೆಲಸವಿಲ್ಲದಿದ್ದರೆ ಬೇರೆ ಕಡೆಗೆ ಹೋಗಿ ಮಾಡಬಹುದು. ಜರ್ಮನಿಯಲ್ಲಿ ೬೦ ಲಕ್ಷ ಜನ ಪುರುಷರು ನಿರುದ್ಯೋಗಿಗಳಾಗಿರುವುದರಿಂದ ಅವರಿಗೆ ಉದ್ಯೋಗ ಕೊಡಿಸಲು ಹೀಗೆ ಮಾಡಿರುವರಂತೆ.

ಅಂತು ಜರ್ಮನಿಯಲ್ಲಿ ಇತಿಹಾಸದ ಪುನರಾವೃತ್ತಿಯಾಗುತ್ತಿರುವುದೋ ಅಥವಾ ಪೌರ್ವಾತ್ಯದ ಆರ್ಯರ ಹುಚ್ಚು ಹತ್ತಿರುವುದೋ ನೋಡಬೇಕು.

ಅತಿವೃಷ್ಟಿಯ ಅನರ್ಥ.

ದಿಲ್ಲಿ ನಗರಿಯ ಸುತ್ತಲಿನ ಭಾಗವೆಲ್ಲ ಅತಿವೃಷ್ಟಿಯಿಂದ ಜಲಮಯವಾಗಿ ಹೋಗಿದೆ. ಕೆಲಕೆಲವು ಹಳ್ಳಿಗಳಲ್ಲಿ ಕುದುರೆಗಳು ಮುಳುಗುವಷ್ಟು ನೀರು ಸಂಚಯವಾಗಿದೆ. ಗಿಡವೇರಿ ಕುಳಿತವರಿಗೆ ಸಹಾಯಮಾಡಲು ಹೋದ ೩-೪ ಜನ ಕುದುರೆ ಸವಾರರ

ಕುದುರೆಗಳು ಕೆಸರಿನಲ್ಲಿ ಸಿಕ್ಕಿದ್ದರಿಂದ ಕುದುರೆಗಳೂ ಸವಾರರೂ ಸತ್ತು ಹೋದರು. ಸುತ್ತಲಿನ ಹಳ್ಳಿಗಳಲ್ಲಿ ಮಲೇರಿಯಾ ರೋಗವು ಒಂದು ಮನೆಯನ್ನೂ ಸಹ ಬಿಡದೆ ಹಬ್ಬಿರುವುದರಿಂದ ಶಾಲೆಯ ಹುಡುಗರು ಕ್ವಿನಿನ್ ಹಂಚುತ್ತಿದ್ದಾರೆ. ೩೦ ಸಾವಿರ ಜನರು ಅನ್ನ ಗಾಣದೆ ನಿರಾಶ್ರಿತರಾಗಿದ್ದಾರೆ.

ಇದೇ ಪ್ರಕಾರವಾಗಿ ಓಡಿಸಾ ಪ್ರಾಂತದಲ್ಲಿ ಪುನಃ ಮಹಾಪೂರ ಬಂದುದರಿಂದ ರೈತರು ಬಹಳೇ ಗೋಳಿಗೀಡಾಗಿದ್ದಾರೆ. ಸಂಕಟದಲ್ಲಿ ಸಿಕ್ಕವರಿಗೆ ಸಹಾಯ ಮಾಡಬೇಕೆಂದು ಅಲ್ಲಿಯ ಸಹಾಯಕ ಮಂಡಲದವರು ದೇಶಬಾಂಧವರನ್ನು ಬಿನ್ನೈಸಿಕೊಂಡಿದ್ದಾರೆ. ದೇಶದಲ್ಲೆಲ್ಲ ಇದೇ ರೀತಿ ಅತಿವೃಷ್ಟಿಯಿಂದ ಹಾನಿಯಾಗಿದೆ.

ಭಾರತೀಯರು ಸತ್ಪಾತ್ರ ದಾನ ಮಾಡದೆ ಅಪಾತ್ರ ದಾನ ಮಾಡುವರೆಂದು ಪ್ರಸಿದ್ಧಿಯುಂಟು. ಇಂಥ ಸುಪ್ರಸಂಗದಲ್ಲಿಯಾದರೂ ಇವರು ತಮ್ಮ ಕಲಂಕವನ್ನು ಕಳೆದುಕೊಳ್ಳುವರೊ?

ಜೇನು ಹುಳಗಳನ್ನು ಸಾಕುವದು.

ನಮ್ಮ ದೇಶದಲ್ಲಿ ಜೇನು ಬಿಡಿಸಬೇಕಾದರೆ ಜೇನ್ನೊಣಗಳನ್ನು ಹೊಗೆಹಾಕಿ ಓಡಿಸಿ ಬಿಡಿಸುತ್ತಾರೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಈ ಪದ್ಧತಿಯಿರದೆ ಜೇನ್ನೊಣಗಳನ್ನು ಸಾಕಿ ಜೇನುತುಪ್ಪವನ್ನು ತೆಗೆಯುತ್ತಾರೆ. ಈ ಪದ್ಧತಿಯು ನಮ್ಮ ದೇಶದ ತ್ರಾವಣಕೂರ ಸಂಸ್ಥಾನದಲ್ಲಿ ಮಾತ್ರ ಈಗ ೧೫-೨೦ ವರುಷಗಳಿಂದಲೂ ಪ್ರಾರಂಭವಾಗಿದೆ. ಅಲ್ಲಿಯ ಆವನಾದರೊಬ್ಬ ಮನುಷ್ಯನು ಜೇನ್ನೊಣಗಳನ್ನು ಸಾಕಿ ತಿಂಗಳಿಗೆ ೬-೭ ರೂಪಾಯಿಗಳಿಸುತ್ತಾನೆ. ಈ ವ್ಯವಸಾಯವು ಅಲ್ಲಿಯ ೩೨ ತಾಲೂಕುಗಳಲ್ಲಿಯ ೨೦ ತಾಲೂಕುಗಳಲ್ಲಿ ನಡೆದಿದೆ. ಇದನ್ನು ಪ್ರಚಾರ ಪಡಿಸಲು ಅಲ್ಲಿಯ ಸರಕಾರವೂ ಪ್ರಯತ್ನ ಮಾಡುತ್ತಲಿದೆ. ಬೇರೆ ಪ್ರಾಂತದವರು ಇಲ್ಲಿಗೆ ಕಲಿಯಲಿಕ್ಕೆ ಬಂದರೆ ಕಲಿಸುತ್ತಾರೆ. ಉಳಿದ ಕಡೆಯಲ್ಲಿ ಜೇನು ತುಪ್ಪಕ್ಕಾಗಿ ಎಷ್ಟೋ ಜೇನು ಹುಳಗಳ ಸಂಹಾರವಾಗುತ್ತಿದೆ. ಮತ್ತೆ ಜೇನು ತುಪ್ಪವೂ ಸರಿಯಾಗಿ ದೊರೆಯುವುದಿಲ್ಲ. ಆದುದರಿಂದ ನಿರುದ್ಯೋಗಿಗಳು ಈ ವ್ಯವಸಾಯವನ್ನು ಕಲಿತು ಬಂದು ಉದ್ಯೋಗ ನಡೆಯಿಸಿದರೆ ತಮ್ಮ ಉಪಜೀವನವಾಗುವುದಲ್ಲದೆ ಈ ಮಹತ್ವದ ತುಪ್ಪವೂ ಅಗ್ಗವಾಗಬಹುದು.

ಮಹತ್ವದ ವಿವಾಹಗಳು.

ಪಂ. ಜವಾಹರಲಾಲ ನೆಹರು ಇವರ ಭಗಿನಿ ಶ್ರೀಮತಿ ಕೃಷ್ಣಾ ನೆಹರು ಇವರ ವಿವಾಹವು ಶ್ರೀ. ಗುಣೋತ್ತಮ ಹಥಿಸಿಂಗ ಇವರೊಡನೆ ಒಳ್ಳೇ ಉತ್ಸಾಹದಿಂದ ನೆರವೇರಿತು. ಮುಖ್ಯವಾಗಿ ತೇಜಬಹದ್ದೂರ ಸಪ್ರು, ಶ್ರೀಮತಿ ಸರೋಜಿನಿ ದೇವಿ ನಾಯಿಡು ಬಾಬು ಪುರುಷೋತ್ತಮದಾಸ ಟಂಡನ್ ಇವರು ಉಪಸ್ಥಿತರಾಗಿದ್ದರು. ಇದು ಮಿಶ್ರ ವಿವಾಹವಾದುದರಿಂದ ರಜಿಸ್ಟ್ರೇಶನ್ ಪದ್ಧತಿಯಂತಾಯಿತು.

ಇನ್ನೊಂದು ವಿವಾಹವೆಂದರೆ ಮಹಾತ್ಮಾಜಿಯವರ ಅಣ್ಣನವರ ಮೊಮ್ಮಗನಾದ ಪ್ರಭುದಾಸ ಗಾಂಧಿ ಮತ್ತು ಆರ್ಯಸಮಾಜದ ಶ್ರೀಮತಿ ಅಂಬಾದೇವಿ ಇವರಿಬ್ಬರದು. ಈ ವಿವಾಹವು ವರ್ಧಾದಲ್ಲಿ ಮಹಾತ್ಮಾಜಿಯವರ ಸಮಕ್ಷಮವೇ ಆಯಿತು. ಆ ಕಾಲಕ್ಕೆ ಮಹಾತ್ಮಾಜಿಯವರು "ನಿಜವಾಗಿ ನನ್ನ ಕಲ್ಪನೆಯಂತೆ ವರ್ಣಗಳೇ ಇಲ್ಲ. ನನಗೂ ಆರ್ಯಸಮಾಜಿಗಳಿಗೂ ಕೆಲವಂಶದಲ್ಲಿ ಮತಭೇದವಿದ್ದರೂ ಆವರನ್ನು ಸಂಪೂರ್ಣ ಬಲ್ಲೆನು. ಈ ನಿಮ್ಮ ವಿವಾಹವು ಆರ್ಯಸಮಾಜಿಗಳ ಮತ್ತು ನನ್ನ ಪ್ರೇಮವನ್ನು ಬೆಳೆಯಿಸಲು ಕಾರಣವಾಗಲಿ." ಎಂದು ಆಶೀರ್ವದಿಸಿದರು. ಪ್ರಾಕೃತರು ಈ ರೀತಿ ಸಂಘಟನೆಯನ್ನು ಮಾಡುತ್ತಿರಲು ಅಪ್ರಾಕೃತರು ಜಾತಿಸೂತಕ ಅತೀತರು ಎನ್ನುವ ವೀರಶೈವರು ಇನ್ನೂ ನಿದ್ರೆಯಲ್ಲಿರುವಂತೆ ತೋರುತ್ತದೆ

ಹಿಂದುಗಳೋ ಮುಸಲ್ಮಾನರೋ?

ನಮ್ಮ ಹಿಂದುಸ್ಥಾನದಲ್ಲಿಯ ಕೆಲಕೆಲವು ಜಾತಿಗಳು ಮನುಷ್ಯ ಪರಿಗಣನೆಯಲ್ಲಿ ಯಾವ ಧರ್ಮಕ್ಕೆ ಸೇರಿಸಲ್ಪಡಬೇಕೆಂಬುದು ತಿಳಿಯದಷ್ಟು ವಿಚಿತ್ರವಾದವುಗಳಾಗಿವೆ. ಪಂಜಾಬದ ಚೇತರಾಮಿ ಜಾತಿಯವರು ಅಲ್ಲಾನನ್ನು ಮತ್ತು ಪರಮೇಶ್ವರನನ್ನೂ ಪೂಜಿಸುತ್ತಾರೆ. ಗುಜರಾಥದ ಸಥಪಂಥಿ ಜನರು ರಮಜಾನ ನೆರವೇರಿಸುತ್ತಾರೆ. ಕಲಮಾ ಓದುತ್ತಾರೆ. ಆದರೆ ತಮ್ಮ ಹೆಣಗಳನ್ನು ಹುಗಿಯುವಾಗ್ಗೆ ಹಿಂದು ಮಂತ್ರಗಳನ್ನು ಹೇಳುತ್ತಾರೆ. ಇವರ ಲಗ್ನಗಳು ಹಿಂದು ಪದ್ಧತಿಯಂತೆ ಇವರ ಪುರೋಹಿತರು ಬ್ರಾಹ್ಮಣರು. ದೀಪಾವಳಿ ಮತ್ತು ಹೋಳೀ ಹಬ್ಬಗಳನ್ನು ಮಾಡುತ್ತಾರೆ. ಮಾಳವಾದ ನಾಪಿತರು ಗಣೇಶನನ್ನು ಅಲ್ಲಾಹನನ್ನು ಪೂಜಿಸುತ್ತಾರೆ. ಮದುರೆಯ ದೇವಾಲಯದ ಸಂರಕ್ಷಕರು ಕೆಲವರು ಪೂರ್ವದಿಂದಲೂ ಮುಸಲ್ಮಾನರೇ ಇರುತ್ತಾರೆ. ನಿಜವಾಗಿ ನೋಡಿದರೆ ಈ ಜನರೆಲ್ಲ ಹಿಂದುಗಳು ಮುಸಲ್ಮಾನರ ಸಂಸರ್ಗದಿಂದ ಈ ಪ್ರಕಾರವಾಗಿರುವರು. ಹಿಂದು ಮಹಾ ಸಭೆಯವರು ಇತ್ತಕಡೆಗೆ ಗಮನಿಸುವುದು ಉಚಿತವಲ್ಲವೇ?

ಹಿಂದು ಸೇವಾ ಸಂಘ.

ಹಿಂದು ಮಹಾಸಭೆಯ ಅಧಿವೇಶನದ ಕಾಲಕ್ಕೆ ಅಧ್ಯಕ್ಷ ಮಹೋದಯ ಶ್ರೀ. ಭಾಯಿ ಪರಮಾನಂದಜಿಯವರು ಹೊಸದಿಲ್ಲಿಯಲ್ಲಿ ಹಿಂದು ಸೇವಾ ಸಂಘವೆಂಬ ಒಂದು ಆಶ್ರಮವನ್ನು ಸ್ಥಾಪಿಸಲು ಧನ ಸಂಚಯ ಮಾಡಿರುವರು. ಇದಕ್ಕಾಗಿ ಸ್ವತಃ ಅಧ್ಯಕ್ಷರು ತಮ್ಮ ಸರ್ವಸ್ವವಾದ ೩೫ ಸಾವಿರ ರೂಗಳನ್ನೂ, ಶ್ರೀ ಜುಗಲ ಕಿಶೋರ ಬಿರ್ಲಾ ಇವರು ೧೦ ಸಾವಿರ ರೂಪಾಯಿಗಳನ್ನೂ ಇನ್ನೂ ಬೇರೆ ಕೆಲವು ಮಹಾಶಯರು ೮ ಸಾವಿರ ರೂ. ಗಳನ್ನು ಕೊಟ್ಟಿರುವರು. ಈ ಆಶ್ರಮವು ಮಹಾತ್ಮಾಜಿಯವರ ಸಾಬರಮತಿ ಆಶ್ರಮದ ಪದ್ಧತಿಯ ಪ್ರಕಾರ ನಡೆಯಿಸಲಾಗುವುದು. ಆದರೆ ಇದರಲ್ಲಿ ಸ್ತ್ರೀಯರಿಗೆ ಪ್ರವೇಶವಿಲ್ಲ.

ಶ್ರೀ. ಪರಮಾನಂದಜಿಯವರು ಹಿಂದುಸ್ಥಾನದ ಮುಖ್ಯ ಮುಖ್ಯ ಪಟ್ಟಣಗಳಲ್ಲೆಲ್ಲ ಸಂಚರಿಸಿ ಜಪಾನದ ಬೌದ್ಧ ಭಿಕ್ಷುಗಳ ಆಮಂತ್ರಣದ ಮೇರೆಗೆ ಜಪಾನಕ್ಕೆ ಹೋಗುವವರಿರುವರು. ಶ್ರೀ. ಭಾಯಿ ಪರಮಾನಂದಜಿಯವರಂತೆ ಸಂಸ್ಥೆಯ ಅಧ್ಯಕ್ಷರಾಗುವವರು ತಮ್ಮ ತನುಮನ ಧನಗಳನ್ನು ಅರ್ಪಿಸುವುದು ವಿರಲವಲ್ಲವೇ?

—ಲಂಡನ್ನಿನಲ್ಲಿ ಒಬ್ಬ ಮನುಷ್ಯನ ಕುತ್ತಿಗೆಯು ೩೬ ವರುಷಗಳಿಂದಲೂ ಬಲಗಡೆಗೆ ಹೊರಳಿದ್ದಿತು. ಆದನ್ನು ಘಿಟ್ಸ ಜೇರಾಲ್ಡ ಎಂಬ ಶಸ್ತ್ರ ಕ್ರಿಯಾ ಚಿಕಿತ್ಸಕನು ಸತ್ತ ನರಗಳನ್ನು ಕೊಯ್ದು ಹೊಸ ಚೈತನ್ಯವನ್ನು ತುಂಬಿದ್ದರಿಂದ ಕುತ್ತಿಗೆಯು ನೆಟ್ಟಗಾಯಿತು.

ವೀರಶೈವ ಮಹಾಸಭೆಯ

ಮಧ್ಯವರ್ತಿ ಮಂಡಲದ ಕಾರ್ಯಾರಂಭ.

ಈ ಮುಂಚೆ ಪ್ರಕಟವಾದ ಪ್ರಕಾರ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ಮಧ್ಯವರ್ತಿ ಮಂಡಲವು ಧಾರವಾಡದ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿನ ಕಟ್ಟಡದಲ್ಲಿ ಈ ತಿಂಗಳ ೨೫ನೆಯ ತಾರೀಖಿನ ಸಾಯಂಕಾಲ ೪ ಗಂಟೆಗೆ ಮಹಾಸಭೆಯ ಅಧ್ಯಕ್ಷರಾದ ಸಾಹಿತ್ಯಭೂಷಣ ಶ್ರೀ. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು.

ಈ ಮಂಡಲದ ಅಧ್ಯಕ್ಷರಾದ ಶ್ರೀ. ಹಳಕಟ್ಟಿಯವರು, ಉಪಾಧ್ಯಕ್ಷರಾದ ಶ್ರೀ. ನಲವಡಿಯವರು, ಸಭಾಸದರಾದ ಶ್ರೀ. ಉರುವಕೊಂಡೆ ಚೆನ್ನಬಸಪ್ಪನವರು, ಶ್ರೀ. ಟಿ. ಚೆನ್ನಪ್ಪನವರು (ಮೈಸೂರು ಪ್ರಾಂತ) ಶ್ರೀ. ಕುಲಕರ್ಣಿ ಕಲವೀರಪ್ಪನವರು (ಧಾರವಾಡ ಜಿಲ್ಲಾ,) ಶ್ರೀ. ಚಿಕ್ಕೋಡಿ ಪಂಡಿತಪ್ಪನವರು, ಡಾ. ನಂದಿಮಠ (ಬೆಳಗಾಂವ ಜಿಲ್ಲಾ.) ಶ್ರೀ. ಜಂಗಿನ ಮುರಿಗಯ್ಯನವರು, ಶ್ರೀ. ಹರ್ಡೇಕರ ಮಂಜಪ್ಪನವರು (ವಿಜಾಪುರ ಜಿಲ್ಲಾ) ಶ್ರೀ. ಶ್ರೇಷ್ಠಿ ವಕೀಲರು ಕೊಲ್ಲಾಪುರ, ಶ್ರೀ. ಮುರಿಗೆಯ್ಯನವರು ರಬಕವಿ (ಮಹಾರಾಷ್ಟ್ರ ಸಂಸ್ಥಾನ) ಶ್ರೀ. ಮೊಕಾಶಿ ವಕೀಲರು (ಮುಂಬಯಿ) ಈ ಪ್ರಕಾರ ಬೇರೆಬೇರೆ ಭಾಗಗಳಿಂದ ಆಗಮಿಸಿದ್ದರು. ನೈಜಾಮ ಮತ್ತು ಬಳ್ಳಾರಿ ಪ್ರಾಂತಗಳಿಂದ ಮಾತ್ರ ಸಭಾಸದರು ಬಂದಿರಲಿಲ್ಲ.

ಈ ಸಭಾಸದರ ವಿನಾ ಶ್ರೀ. ಹಾಲಭಾವಿ ವೀರಭದ್ರಪ್ಪನವರು, ಶ್ರೀ. ಕಟ್ಟಿಮನಿ ಮಾಸ್ತರರು, ಶ್ರೀ. ಹೊಳಲು ಚಂದ್ರಶೇಖರ ಶಾಸ್ತ್ರಿಗಳು, ಶ್ರೀ. ವ್ಹಿ. ಬಿ. ಪುರಾಣಿಕರು, ಶ್ರೀ. ಕೋಟೂರು, ಶ್ರೀ. ಪುರಾಣಿಕ ಮಾಸ್ತರ, ಶ್ರೀ. ಇನಾಮತಿ ಮೊದಲಾದ ಅನೇಕ ಪ್ರಮುಖರೂ ಆಗಮಿಸಿದ್ದರು. ಅಧ್ಯಕ್ಷರು ಆರಂಭದಲ್ಲಿ ಸಹಾನುಭೂತಿಪರವಾಗಿ ಬಂದ ಪತ್ರಗಳನ್ನೂ ಅನೇಕ ಮಹಾಶಯರು ತಿಳಿಸಿದ ಸೂಚನೆಗಳನ್ನೂ ಓದಿ ಹೇಳಿ ಮಂಡಲದ ಕಾರ್ಯವನ್ನು ಪ್ರಾರಂಭಿಸಿದರು.

ಮೊದಲು ರಾ| ಸಾ| ಚೌಗುಲೆ ಕೊಲ್ಲಾಪುರ ಇವರ ಶೋಚನೀಯ ನಿಧನದ ವಿಷಯವಾಗಿ ದುಃಖ ಪ್ರದರ್ಶನದ ಮತ್ತು ಶ್ರೀ. ಪಿ. ಮಹದೇವಯ್ಯನವರು ಮುಖ್ಯ ನ್ಯಾಯಾಧೀಶರಾಗಿ ನಿಯಾಮಕವಾದುದರಿಂದ ಸಂತೋಷ ಪ್ರದರ್ಶನದ ನಿರ್ಣಯಗಳಾದವು. ಆ ಮೇಲೆ ಮಂಡಲದವರು ಪ್ರಾರಂಭಿಸಬೇಕಾದ ಕಾರ್ಯಗಳನ್ನು ಕುರಿತು ಚರ್ಚಿಸಿ ತಾ. ೨೬ನೆಯ ದಿನ ಈ ಕೆಳಗಿನ ನಿರ್ಣಯಗಳನ್ನು ಮಾಡಿದರು.

ನಿರ್ಣಯಗಳು.

(೧) ಮಹಾಸಭೆಯ ನಿರ್ಣಯಗಳನ್ನು ಪ್ರಸಾರಗೊಳಿಸಿ ಆಚರಣೆಯಲ್ಲಿ ತರುವುದಕ್ಕೋಸ್ಕರ ಪ್ರಾಂತಿಕ ಮತ್ತು ಜಿಲ್ಲಾ ಮಂಡಲವನ್ನು ಎಲ್ಲ ಭಾಗದವರೂ ಇದೇ ಡಿಶಂಬರ ತಿಂಗಳ ಕೊನೆಯೊಳಗಾಗಿ ಏರ್ಪಡಿಸಬೇಕು. ಪ್ರತಿಯೊಬ್ಬ ಮಧ್ಯವರ್ತಿ ಮಂಡಲದ ಸಭಾಸದರು ೨೫ ಜನರಿಗೆ ಕಡಿಮೆಯಿಲ್ಲದಷ್ಟು ಸದಸ್ಯರನ್ನು ಕೂಡಿಸಬೇಕು.

(೨) ಮಧ್ಯವರ್ತಿ ಮಂಡಲದ ಕಾರ್ಯ ನಡೆಯಿಸಲು ೧೧ ಜನರ ಒಂದು ಕಾರ್ಯಕಾರಿ ಮಂಡಲ (ವರ್ಕಿಂಗ್ ಕಮಿಟಿ) ವನ್ನು ಏರ್ಪಡಿಸಬೇಕು.

(೩) ಗ್ರಾಮಸುಧಾರಣೆಯ ಕಾರ್ಯ ಪದ್ಧತಿಯನ್ನು ಗೊತ್ತುಪಡಿಸಲು ಡಾ. ನಂದಿಮಠರ ಅಧ್ಯಕ್ಷತೆಯಲ್ಲಿ ಒಂದು ಉಪಮಂಡಲವು ಗೊತ್ತಾಯಿತು. ಈ ಮಂಡಲದವರು ಡಿಶಂಬರ ಕೊನೆಯೊಳಗಾಗಿ ತಮ್ಮ ವರದಿಯನ್ನು ಸಿದ್ಧಪಡಿಸಬೇಕು.

(೪). ಈಗಿರತಕ್ಕ ಸಂಸ್ಕೃತ ವಿದ್ಯಾಲಯಗಳ ವಿದ್ಯಾಭ್ಯಾಸವು ಏಕರೂಪವಾಗಿ ಒಂದು ಸ್ವತಂತ್ರ ವೀರಶೈವ ಸಂಸ್ಕೃತ ವಿಶ್ವವಿದ್ಯಾಪೀಠವಾಗುವ ವಿಷಯದಲ್ಲಿ ಯೋಚಿಸಲು ಶ್ರೀ ಹಾಲಭಾವಿಯವರ ಅಧ್ಯಕ್ಷತೆಯಲ್ಲಿ ಒಂದು ಉಪಮಂಡಲವು ಏರ್ಪಟ್ಟಿತು. ಈ ಮಂಡಲದವರು ಡಿಶಂಬರ ತಿಂಗಳ ಕೊನೆಯೊಳಗಾಗಿ ತಮ್ಮ ವರದಿಯನ್ನು ಸಿದ್ಧಗೊಳಿಸಬೇಕು.

(೫) ವೀರಶೈವ ಮಹಾಸಭೆಯು ತಪ್ಪದೆ ಕೂಡಲು ಧನಸಹಾಯ ಮಾಡುವದಕ್ಕಾಗಿಯೇ ಏರ್ಪಟ್ಟ ಚಿರಸ್ಥಾಯಿ ಫಂಡಿನ ನಿಯಮಗಳಲ್ಲಿ ತಿದ್ದುಪಡಿ ಮಾಡಲು ಒಂದು ಉಪಮಂಡಲವು ಏರ್ಪಟ್ಟಿತು. ಆ ಮಂಡಳದವರು ತಮ್ಮ ಅಭಿಪ್ರಾಯವನ್ನು ಅದೇ ದಿನವೇ ಚರ್ಚಿಸಿ ತಿಳಿಸಿದರು.

(೬) ಹಿಂದಿನ ಸ್ಟ್ಯಾಂಡಿಂಗ್ ಕಮಿಟಿಯ ವಶದಲ್ಲಿದ್ದ ಹಣವನ್ನು ಈ ಮಧ್ಯವರ್ತಿ ಮಂಡಲದ ಕಡೆಗೆ ವಹಿಸಬೇಕು. ಅಧ್ಯಕ್ಷರೇ ಕೋಶಾಧ್ಯಕ್ಷರಾಗಿರಬೇಕು. ಶ್ರೀ. ಹರ್ಡೇಕರ ಮಂಜಪ್ಪನವರು ಮಹಾಸಭೆಯ ಮಧ್ಯವರ್ತಿ ಮಂಡಲದ ಜನರಲ್ ಸೆಕ್ರೆಟರಿಗಳಾಗಿಯೂ ಶ್ರೀ. ಕುಲಕರ್ಣಿ ಕರವೀರಪ್ಪನವರು ಸಹಾಯಕ ಸೆಕ್ರೆಟರಿಗಳಾಗಿಯೂ ಇರಬೇಕು.

ವೀರಶೈವ ಪ್ರಾಂತಿಕ ಸಭೆ ಕವಿತಾಳ.

ಶ್ರೀಮನ್ನಿರಂಜನ ಶ್ರೀ ಸಿದ್ಧಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳವರ ಕೃಪಾಛತ್ರದಲ್ಲಿ ರಾಯಚೂರ ಜಿಲ್ಲಾ ಕವಿತಾಳ ಪ್ರಾಂತದ ವೀರಶೈವ ಧಾರ್ಮಿಕ ಸಭೆಯು ಇದೇ ಕಾರ್ತಿಕ ಬಹುಳ ೧೩ (ತಾ. ೧೫-೧೧-೩೩) ಬುಧವಾರ ಜರುಗುವುದು.

ಈ ಧಾರ್ಮಿಕ ಸಭೆಯಲ್ಲಿ ವ್ಯಾಖ್ಯಾನ ಕೊಟ್ಟು ಈ ಭಾಗದ ವೀರಶೈವರಲ್ಲಿ ಧಾರ್ಮಿಕ ಮತ್ತು ವಿದ್ಯಾವಿಷಯಕವಾದ ಜಾಗೃತಿಯನ್ನುಂಟುಮಾಡಲು ಆಲಮಟ್ಟಿಯಿಂದ ಶ್ರೀ. ಹರ್ಡೇಕರ್ ಮಂಜಪ್ಪನವರು ಬರುವವರಿದ್ದಾರೆ ಆದಕಾರಣ ಈ ಭಾಗದ ಎಲ್ಲ ವೀರಶೈವರೂ ಕವಿತಾಳದ ಧಾರ್ಮಿಕ ಸಭೆಗೆ ಅಗತ್ಯವಾಗಿ ಬರಬೇಕೆಂದು ಪ್ರಾರ್ಥನೆ.

ವ್ಯವಸ್ಥಾಪಕ.

ಆಸ್ಟ್ರಿಯಾದ ರಾಜಪುತ್ರನು ನಾಝಿ ಪತ್ರಿಕೆಗಳನ್ನು ಹತ್ತರವಿಟ್ಟುಕೊಂಡದ್ದರಿಂದ ಅವನನ್ನೂ ಅವನ ಪತ್ನಿಯನ್ನೂ ಡಾಲ್ಫಸ ಸರಕಾರದವರು ಬಂಧಿಸಿದ್ದಾರೆ.

ಸಮಾಚಾರ ಸಂಗ್ರಹ.

—ಅಹಮದಾಬಾದಿನಲ್ಲಿ ಒಬ್ಬ ಹುಡುಗಿಯು ಮದ್ದಿನ ಬಾಣವನ್ನು ಬಿಡುವಾಗ್ಗೆ ಬೆಂಕಿ ತಗಲಿದ್ದರಿಂದ ಸುಟ್ಟುಕೊಂಡು ಸತ್ತಳು.

—ಕೊಲ್ಲಾಪುರದಲ್ಲಿ ಒಂದು ಮದ್ದಿನ ಬಾಣವು ಒಂದು ಮನೆಯೊಳಗೆ ಹೋಗಿ ಬೀಳಲು ಆ ಮನೆಗೇ ಬೆಂಕಿ ಹತ್ತಿತು.

—ಛಿಂದವಾಡಾ ಎಂಬಲ್ಲಿ ಒಂದು ಮದ್ದಿನ ಮನೆಗೆ ಬೆಂಕಿ ಹತ್ತಿ ಒಬ್ಬನು ಸತ್ತನು. ಇನ್ನೊಬ್ಬನಿಗೆ ಬಹಳೇ ಗಾಯಗಳಾಗಿವೆ.

—ಮುಂಬಯಿಯಲ್ಲಿ ಎಷ್ಟೋ ಅಂಗಡಿಗಳಲ್ಲಿ ಮಹಾತ್ಮಾಜಿಯವರು ರಾಟಿಯಿಂದ ನೂಲು ತೆಗೆಯುತ್ತಿರುವಂತೆ ವಿದ್ಯುತ್ತಿನ ಸಹಾಯದಿಂದ ರಾಟಿಯನ್ನು ತಿರುಗಿಸುವಂಥ ಅವರ ಪ್ರತಿಮೆಗಳನ್ನಿಟ್ಟಿದ್ದರು.

—ಗೋವೆಯ ಹಿಂದುಗಳ ದುಸ್ಥಿತಿಯನ್ನು ತಿಳಿಸಲು ಡಾ. ಮುಂಜೆಯವರು ಪೋರ್ತುಗಾಲದ ಪ್ರಧಾನರನ್ನು ಭೆಟ್ಟಿಯಾಗಲು ತಮ್ಮ ಗವ್ಹರ್ನರರ ಮುಖಾಂತರವಾಗಿ ಯೋಗ್ಯ ವಿಚಾರ ಮಾಡುವೆವೆಂದು ಅವರು ತಿಳಿಸಿದರು.

—ಕ್ರಿಕೆಟ್ ಆಟವನ್ನಾಡಲು ಇಂಗ್ಲಂಡದಿಂದ ಬಂದ ಎಂ. ಸಿ. ಸಿ. ಟೀಮಿನವರು ಸಿಂಧ ೧೧ ಜನರ ಸಂಗಡ ಆಡಿ ವಿಜಯವನ್ನು ಸಂಪಾದಿಸಿದರು.

—ಮುಂಬಯಿಯಲ್ಲಿ ಟಂಕಸಾಲೆಯಲ್ಲಿಯ ೨೨೪ ತೊಲಿ ಬೆಳ್ಳಿಯಪುಡಿಯನ್ನು ಅಲ್ಲಿಯ ಇಲೆಕ್ಟ್ರಿಕ್ ಅಧಿಕಾರಿಯೂ, ಇನ್ನೊಬ್ಬನೂ ಕೂಡಿ ಕಳವು ಮಾಡಿದ ಅಪರಾಧದಿಂದ ಅವರಿಬ್ಬರೂ ಬಂಧಿಸಲ್ಪಟ್ಟರು.

—ಶಾಸನೋಲ್ಲಂಘನೆಯಲ್ಲಿ ಭಾಗವಹಿಸಿದ ಮಿಸೆಸ್ ಕಝಿನ್ಸ ಎಂಬ ಇಂಗ್ಲೀಷ ವಿದುಷಿಯು ೬ ತಿಂಗಳ ಶಿಕ್ಷೆಯನ್ನು ಭೋಗಿಸಿ ಎಲ್ಲೂರು ಕಾರಾಗೃಹದಿಂದ ಬಿಡುಗಡೆ ಹೊಂದಿದಳು.

—ಅಖಿಲಭಾರತೀಯ ಚರಖಾ ಸಂಘದವರು ಒಂದು ಪತ್ರಿಕವನ್ನು ಪ್ರಕಟಿಸಿದ್ದು ಅದರಲ್ಲಿ ಮಹಾತ್ಮಾಜಿಯವರು ನವ್ಹಂಬರ ತಿಂಗಳ ಮೊದಲನೆಯ ವಾರದಲ್ಲಿ ತಮ್ಮ ಪ್ರವಾಸವನ್ನು ಪ್ರಾರಂಭಿಸುವರೆಂದು ತಿಳಿಸಿದ್ದಾರೆ.

—ಅಸ್ಪೃಶ್ಯ ಸೇವಕ ಸಮಾಜದ ಕರ್ನಾಟಕ ಶಾಖೆಯ ಸಭೆಯು ಬೆಳಗಾವಿಯಲ್ಲಿ ಕೂಡಿದ್ದಿತು. ಆ ಕಾಲಕ್ಕೆ ಮಹಾತ್ಮಾಜಿಯವರು ಕರ್ನಾಟಕದಲ್ಲಿ ಸಂಚರಿಸಬೇಕೆಂದು ವಿನಂತಿ ಮಾಡಿಕೊಳ್ಳುವ ಗೊತ್ತುವಳಿಯು ಮಾಡಲ್ಪಟ್ಟಿತು.

—ಮಹಾತ್ಮಾಜಿಯವರ ಶಿಷ್ಯಳಾಗಿದ್ದ ನೀಲ ನಾಗಿಣಿಯು ದಿಲ್ಲಿಯಿಂದ ಮಥುರೆಗೆ ಹೋಗಿದ್ದಳು. ಅಲ್ಲಿಯ ಪುಣ್ಯ ಕ್ಷೇತ್ರಗಳನ್ನೆಲ್ಲ ನೋಡಿದಮೇಲೆ ಅಲ್ಲಿಯ ಅಮೇರಿಕನ್ ಮಿಶ್ಯನ್ನಿನಲ್ಲಿದ್ದು ಪುನಃ ಪಾರಾಗಿ ಹೋಗಿರುವಳು.

—ಬಡೋದಾ ಮಹಾರಾಜರು ಅಮೇರಿಕೆಯಿಂದ ಕೋಲೊಂಬೋ ಮಾರ್ಗವಾಗಿ ಮುಂಬಯಿಗೆ ೨೩ನೆಯ ತಾರೀಖಿನ ದಿವಸ ಮುಟ್ಟಿದರು.

—ಮಹಾತ್ಮಾಜಿಯವರ ಪ್ರಕೃತಿಯು ಈಗ ಸರಿಯಾಗಿದ್ದು ಅವರ ತೂಕದಲ್ಲಿ ೩ ಪೌಂಡು ಹೆಚ್ಚಿದೆ.

—ಶ್ರೀ. ಪಟೇಲರ ಶವವು ಮುಂಬಯಿಗೆ ಬಂದ ಕೂಡಲೆ ಪ್ರಚಂಡ ಮೆರವಣಿಗೆಯನ್ನು ಹೊರಡಿಸಲಿಕ್ಕೆ ೫ ಸಾವಿರ ಸ್ವಯಂ ಸೇವಕರ ಯೋಜನೆ ಮಾಡಲಾಗಿದೆ.

—ಕೊಳ್ಳೆಗಾಲ ತಾಲೂಕಿನ ಮ. ಜಿ. ಎಸ್. ಸಿದ್ದಪ್ಪ ಎಂ. ಎ. (ಆನರ್ಸ) ಇವರು ಉಚ್ಚ ವಿದ್ಯಾಭ್ಯಾಸಂಗ ಮಾಡಲು ಇಂಗ್ಲಂಡಿಗೆ ಪ್ರಯಾಣ ಬೆಳೆಸುವರು.

—ಹಾವೇರಿಯ "ಸದ್ಧರ್ಮ ಪ್ರದೀಪಿಕೆ"ಯ ಸಂಪಾದಕರು ವೀರಶೈವ ಮತವನ್ನು ಕುರಿತು ಬರೆದ ಒಂದು ಲೇಖನವನ್ನು ಚಿಕಾಗೋ ಧರ್ಮ ಪರಿಷತ್ತಿಗೆ ಕಳುಹಿಸಿರುವರು.

—ಮೈಸೂರಿನ ಒಕ್ಕಲಿಗರ ಸಮಾಜದ ಮುಂದಾಳುವಾದ ಕೈ. ಶ್ರೀ. ರಾಮಯ್ಯನವರ ಸ್ಮಾರಕಕ್ಕಾಗಿ ವಿದ್ಯಾರ್ಥಿ ವೇತನವನ್ನು ಕೊಡಲು ಒಂದು ಲಕ್ಷ ರೂಪಾಯಿಗಳನ್ನು ಆ ಸಮಾಜ ಮಂಡಲದವರು ಕೂಡಿಸಬೇಕೆಂದಿರುವರು.

—ಸಿಂಹಲ ದ್ವೀಪದಿಂದ ಬ್ರಹ್ಮ ದೇಶಕ್ಕೆ ಹೋಗುವ ಒಂದು ನಾವೆಯು ಬಿರುಗಾಳಿಯ ಹೊಡತಕ್ಕೆ ಸಿಕ್ಕು ೫೦೦ ಮೈಲು ಅಡ್ಡ ದಾರಿ ಹೋಗಿ ಒಡೆಯಿತು. ಆದರೆ ಅದರಲ್ಲಿಯ ಅಂಬಿಗರು ಮಾತ್ರ ಮತ್ತೊಂದು ನಾವೆಯಿಂದ ರಕ್ಷಿಸಲ್ಪಟ್ಟರು.

—ಬ್ರಿಟಿಶ್ ಗ್ಯಾಯನಾ ದೇಶದಲ್ಲಿಯ ಜಾರ್ಜತಾನ ಎಂಬಲ್ಲಿ ಒಬ್ಬ ಸ್ತ್ರೀಯು ಒಂದೇ ಕಾಲಕ್ಕೆ ೭ ಮಕ್ಕಳನ್ನು ಹಡೆದಿದ್ದು ಎಲ್ಲರೂ ಸುಖವಾಗಿದ್ದಾರೆ.

—ಅಮರಾವತಿಯ ಕಾರಾಗೃಹದಲ್ಲಿ ಶ್ರೀ. ಹೀರಾಲಾಲ ಚಂದಕ ಎಂಬವನು ತನಗೆ ಶೌಚಕೂಪ ತೊಳೆಯುವ ಕೆಲಸ ಕೊಡದ್ದರಿಂದ ಉಪವಾಸ ಮಾಡುತ್ತಿರುವನು.

—ಮುಂಬಯಿಯಲ್ಲಿ ದಿವಾಳಿ ತೆಗೆದ ಕರೀಮ ಭಾಯಿ ಇಬ್ರಾಹಿಮ ಇವರ ಬಣ್ಣ ತಯಾರಿಸುವ ಯಂತ್ರಾಲಯವನ್ನು ಸೂರಜಿ ವಲ್ಲಭದಾಸ ಇವರು ಕೊಂಡುಕೊಳ್ಳುವರು.

—ಬೆಳಗಾವಿಯಲ್ಲಿ ರಾಷ್ಟ್ರೀಯ ಪ್ರಮುಖರು ಸೇರಿ ರಾಷ್ಟ್ರೀಯ ಸಭೆಯ ಆಜ್ಞೆಯನ್ನೇ ಮಾನಿಸಬೇಕೆಂದೂ ವೈಯಕ್ತಿಕ ಶಾಸನೋಲ್ಲಂಘನೆ ಮಾಡಲು ಶಕ್ಯವಿಲ್ಲದವರು ವಿಧಾಯಕ ಕಾರ್ಯವನ್ನು ಕೈಕೊಳ್ಳಬೇಕೆಂದೂ ನಿರ್ಧರಿಸಿದರು.

—ಫ್ರಾನ್ಸ ದೇಶದಲ್ಲಿ ಒಂದು ಉಗಿಬಂಡಿಯು ನದಿಯ ಸೇತುವೆಯ ಮೇಲೆ ವೇಗದಿಂದ ಹೋಗುತ್ತಿರಲು ಜಾರಿದ್ದರಿಂದ ಎಂಜಿನ, ಗಾರ್ಡನ ಡಬ್ಬಿ ಮತ್ತು ಮೂರು ಬೇರೆ ಡಬ್ಬಿಗಳು ನದಿಯಲ್ಲಿ ಧುಮುಕಿದವು. ಇದರಲ್ಲಿ ೨೧ ಜನರು ಸತ್ತದ್ದಲ್ಲದೆ ೩೪ ಜನರು ಗಾಯ ಹೊಂದಿರುವರು.

—ಸಂಯುಕ್ತ ಪ್ರಾಂತದ ಘುರುರಾಮು ಎಂಬ ಗ್ರಾಮದಲ್ಲಿ ಮುಸಲ್ಮಾನರು ಮುನಿಸಿಪಾಲಿಟಿಯ ಅಪ್ಪಣೆ ಇಲ್ಲದೆ ಮತ್ತು ಭೂಮಿಯ ಒಡೆಯರನ್ನು ಸಹ ಕೇಳದೆ ೧೦ ದೇವಾಲಯಗಳ ಬಳಿಯಲ್ಲಿ ಒಂದು ಮಸೀದೆಯನ್ನು ಕಟ್ಟುತ್ತಿರುವರಂತೆ. ಇದರಿಂದ ಅಲ್ಲಿಯ ಹಿಂದುಗಳಲ್ಲಿ ಗದ್ದಲವೆದ್ದಿದೆ.

—ಮದ್ರಾಸ ಪ್ರಾಂತದಲ್ಲಿ ಎಲೆರು ನದಿಗೆ ಮಹಾಪೂರ ಬಂದುದರಿಂದ ಕೊಕೋನಾಡ ತಾಲೂಕಿನ ಅರ್ಧಕ್ಕಿಂತ ಹೆಚ್ಚು ಹಳ್ಳಿಗಳು ಮುಳುಗಿ ಹೋಗಿವೆ.

—ಪುಣೆಯಲ್ಲಿ ಬೀದಿಗಳಲ್ಲಿ ಮೂತ್ರಕ್ಕೆ ಕೂಡ್ರುವವರನ್ನು ಕೋರ್ಟಿಗೆ ಒಯ್ದು ೨-೩ ರೂ. ದಂಡ ಮಾಡುತ್ತಿರುವರು, ಕೆಲವು ಪ್ರತಿಷ್ಠಿತ ಗೃಹಸ್ಥರಿಗೂ ಸಹ ದಂಡವಾಗಿದೆಯಂತೆ.

ರಾಜಕಾರಣ ಪ್ರವೀಣ,
ಶ್ರೀ ವಿಠ್ಠಲಭಾಯಿ ಪಟೇಲರವರು

(೬ ನೆಯ ಪುಟದಿಂದ ಮುಂದರಿದುದು.)

ಸಾಯಮನ್ ಕಮಿಶನ್ ಕಾಲದಲ್ಲಿ ಸರ್, ಜಾನ್ ಸಾಯಮನ್ನರು ದಿಲ್ಲಿಗೆ ಹೋಗಿದ್ದರು. ಆಗ ಶ್ರೀ ಪಟೇಲರು ಅವರನ್ನು ಕಾಣಬೇಕೆಂದು ಸರಕಾರದವರ ಇಚ್ಛೆಯಿದ್ದಿತು. ಆದರೆ ಅಸೆಂಬ್ಲಿಯ ಅಧ್ಯಕ್ಷರ ವರ್ಚಸ್ಸು ಬಾದಶಾಹೀ ಕಮಿಶನ್ನಿನ ಅಧ್ಯಕ್ಷರಿಗಿಂತಲೂ ಉನ್ನತವಾಗಿದೆಯೆಂದು ಶ್ರೀ ಪಟೇಲರು ಸ್ಪಷ್ಟ ಹೇಳಿ ಹಾಗೆ ಮಾಡಲು ನಿರಾಕರಿಸಿದರು. ಕೊನೆಗೆ ಸರ್ ಜಾನ್ ಸಾಯಮನ್ನರೇ ಸ್ವತಃ ಹೋಗಿ ಶ್ರೀ ಪಟೇಲರನ್ನು ಕಂಡರು. ಅಸೆಂಬ್ಲಿಯ ಅಧ್ಯಕ್ಷರಿದ್ದಾಗ ಶ್ರೀ ಪಟೇಲರಿಗೆ ಪ್ರತಿ ತಿಂಗಳ ನಾಲ್ಕು ಸಾವಿರ ರೂ. ವೇತನ ದೊರೆಯುತ್ತಿದ್ದಿತು. ಅದರಲ್ಲಿ ಒಂದು ಸಾವಿರ ರೂ. ಗಳನ್ನು ತಮ್ಮ ವೆಚ್ಚಕ್ಕಾಗಿ ಇಟ್ಟುಕೊಂಡು ಉಳಿದ ೩ ಸಾವಿರ ರೂ. ಗಳನ್ನು ದೇಶಕಾರ್ಯದ ಸಲುವಾಗಿ ವಿನಿಯೋಗಿಸುವುದಕ್ಕಾಗಿ ಮ. ಗಾಂಧೀಜಿಯವರ ಕಡೆಗೆ ಕೊಡುತ್ತಿದ್ದರು.

೧೯೩೦ನೆಯ ಇಸವಿಯಲ್ಲಿ ಮಹಾತ್ಮಾಜಿಯವರು ಶಾಸನೋಲ್ಲಂಘನೆಯ ಚಳವಳಿಯನ್ನು ಪ್ರಾರಂಭ ಮಾಡಿದ ಮೇಲೆ ಶ್ರೀ ವಿಠ್ಠಲಭಾಯಿ ಪಟೇಲರವರು ಅಸೆಂಬ್ಲಿಯ ಅಧ್ಯಕ್ಷಪದವನ್ನು ನಿರಾಕರಿಸಿದರು. ಇವರಿಗೆ ಶಾಸನೋಲ್ಲಂಘನೆಯ ಮೇಲೆ ಹೆಚ್ಚಾಗಿ ವಿಶ್ವಾಸವಿರದಿದ್ದರೂ ಚಳವಳಿಯಲ್ಲಿ ಧುಮುಕಿ ೧೯೩೦ ಮತ್ತು ೧೯೩೨ನೆಯ ಈ ಎರಡೂ ಯುದ್ಧಗಳಲ್ಲಿ ಕಾರಾಗೃಹ ವಾಸವನ್ನು ಹೊಂದಿದರು. ಅಸೆಂಬ್ಲಿಯ ಅಧ್ಯಕ್ಷರು ಕಾರಾಗೃಹವನ್ನು ಸೇರಿದುದು ಜಗತ್ತಿನ ಇತಿಹಾಸದಲ್ಲಿ ದೊರೆಯುವುದು ಅತ್ಯಂತ ವಿರಳ! ಕಾರಾಗೃಹವಾಸದಿಂದ ಶ್ರೀ ಪಟೇಲರ ಪ್ರಕೃತಿಯು ಕೆಟ್ಟದ್ದರಿಂದ ಸರಕಾರದವರು ಇವರನ್ನು ಬಿಡಲೇ ಬೇಕಾಯಿತು. ತಮ್ಮ ಪ್ರಕೃತಿಯ ಸ್ವಾಸ್ಥ್ಯಕ್ಕೋಸ್ಕರವಾಗಿಯೇ ಇವರು ಪರದೇಶಕ್ಕೆ ಹೋಗಿದ್ದರು. ಆದರೆ ಇವರ ಹೃದಯ ವಿಕಾರವು ಕ್ರಮೇಣ ಬಲ ಹೊಂದಿ ಕೊನೆಗೆ ಪರದೇಶದಲ್ಲಿಯೇ ತಮ್ಮ ಜಡದೇಹವನ್ನು ಬಿಡುವ ಪ್ರಸಂಗವು ಈ ತೇಜಸ್ವಿ ದೇಶಭಕ್ತರಿಗೆ ಒಂದುದು ವಿಷಾದದ ಸಂಗತಿಯಾಗಿದೆ. ಶ್ರೀಯುತ ಪಟೇಲರವರು ಕ್ಷಣಿಕವಾದ ತಮ್ಮ ಜಡ ದೇಹವನ್ನು ಬಿಟ್ಟು ಹೋಗಿದ್ದರೂ ಸ್ವರಾಜ್ಯದ ಸಲುವಾಗಿ ಯಾವಾಗಲೂ ತಳಮಳಿಸುವ ಅವರ ಆತ್ಮವು ಭಾರತ ಭೂಮಿಯ ರಾಜಕೀಯ ರಣಾಂಗಣದಲ್ಲಿಯೇ ಯಾವಾಗಲೂ ಸಂಚರಿಸುತ್ತಲಿರುವದು. ಭಾರತವರ್ಷಕ್ಕೂ ಪೂರ್ಣ ಸ್ವರಾಜ್ಯ ದೊರೆತು ಜಗತ್ತಿನಲ್ಲಿಯ ಸ್ವತಂತ್ರ ರಾಷ್ಟ್ರಗಳ ಮಾಲಿಕೆಯಲ್ಲಿ ಅದಕ್ಕೆ ಸಮಾನವಾದ ಪ್ರವೇಶ ದೊರೆಯದ ವಿನಾ ಶ್ರೀ ಪಟೇಲರ ಆತ್ಮಕ್ಕೆ ಶಾಂತಿಯಿಲ್ಲವೆಂದೇ ಸಕಲ ತರುಣರೂ ತಿಳಿಯಬೇಕು. ಶ್ರೀ ಪಟೇಲರವರ ಸ್ಫೂರ್ತಿದಾಯಕ ಉದಾಹರಣೆಯು ಸಕಲರಿಗೂ ಅನುಕರಣೀಯವಾಗಲಿ ಇಂಥ ವಿಖ್ಯಾತ ವಿಭೂತಿಯನ್ನು ಕಳೆದುಕೊಂಡುದು ಭಾರತ ಮಾತೆಯ ದುರ್ದೈವವಲ್ಲದೆ ಮತ್ತೇನು?

ಬರೂ ದಯಮಾಡಿಸಿದ್ದರು. ಪುರಾರಾ ಸಮಾಜದವರೂ ಸ್ವಾಮಿಗಳವರನ್ನು ಭಕ್ತಿಪೂರ್ವಕವಾಗಿ ಬರಮಾಡಿಕೊಂಡು ಅವರ ವ್ಯಾಖ್ಯಾನವನ್ನು ಕೇಳಿದರು.

ಮೈಸೂರ ಸ್ಟಾರ್.

ಪತ್ರಗಳ ಸಾರಾಂಶ

ಪುರಾಣ ಪ್ರವಚನ ಪರಿಸಮಾಪ್ತಿ.

ನರಗುಂದ ಪೇಟಾಪೈಕಿ ಶಿರೋಳ ಶ್ರೀ ವಿರಕ್ತ ಮಹಾ ಮಠದಲ್ಲಿ ಪ್ರತಿವರುಷದ ಪದ್ಧತಿಯಂತೆ ಇದೇ ಶ್ರೀಮುಖ ನಾಮ ಸಂವತ್ಸರದ ಶ್ರಾವಣಾರಂಭದಿಂದ ಬಾದರಾಯಣ ಕೃತ ಶ್ರೀಮದ್ಭಗವಾನ್ ಬಸವೇಶ್ವರ ಪುರಾಣ ಪ್ರವಚನವು ಪ್ರಾರಂಭವಾಗಿದ್ದು ಇದೇ ಆಶ್ವೀನ ಬಹುಳ ೮ ಗುರುವಾರ ಮಹಾಗಣಾರಾಧನೆಗೆ ನಂದಿಧ್ವಜೋತ್ಸವ ಮುಂತಾದ ವೈಭವಗಳಿಂದ ಮಹಾಸ್ವಾಮಿಗಳವರ ಆಜ್ಞಾನುಸಾರವಾಗಿ ಎಲ್ಲ ಭಕ್ತ ಮಂಡಲಿಯವರು ಮಿಲಿತರಾಗಿ ಒಳ್ಳೇ ಭಕ್ತಿ ಭಾವದಿಂದ ಪರಿಸಮಾಪ್ತಿ ಮಾಡಲ್ಪಟ್ಟಿತು. ಪುರಾಣ ಪ್ರವಚನವು ಪ್ರತಿನಿತ್ಯದಲ್ಲಿಯೂ ಸದರಿ ವಿರಕ್ತ ಮಹಾಮಠಾಧಿಕಾರಿಗಳಾದ ಶ್ರೀಮನ್ನಿರಂಜನ ಶಿವಾನುಭವ ಚರವರ್ಯ, ತೋಂಟದಾರ್ಯ ದೇಶಿಕೇಂದ್ರ ಮಹಾಸ್ವಾಮಿಗಳವರು ಬಸವಾದಿ ಪ್ರಮಥರ ವಚನ ಹಾಗೂ ಸುಶ್ರಾವ್ಯವಾದ ಸಂಗೀತಾದಿ ಕಲೆಗಳಿಂದ ವ್ಯಕ್ತವಾದ ತಮ್ಮ ಅಧಿಕಾರ ವಾಣಿಯಿಂದ ಸರ್ವ ಮತೀಯ ಭಕ್ತಮಂಡಲಿಗೂ ಸುಗಮವಾಗಿ ತಿಳಿಯುವಂತೆ ಉಪದೇಶಿಸಿದ್ದರಿಂದಲೂ ಮಧ್ಯದಲ್ಲಿ ಒಂದೊಂದು ದಿವಸ ವ್ಯಾಖ್ಯಾನ ನಿಷ್ಣಾತರಾದ ಮ. ಹರ್ಡೇಕರ ಮಂಜಪ್ಪನವರೇ ಮುಂತಾದವರ ವ್ಯಾಖ್ಯಾನ ಶ್ರವಣದಿಂದಲೂ ಸರ್ವರೂ ಸಂತೋಷ ಚಿತ್ತರಾಗಿ ಪುರಾತನ ಪ್ರಮಥ ಪುಂಗವನೆನಿಸಿದ ವೀರಶೈವ ಮತೋದ್ಧಾರಕ ಶ್ರೀ ಮಹಾತ್ಮಾ ಬಸವೇಶ್ವರರ ಭಜನಾ ನಾಮಸ್ಮರಣಾದಿಗಳನ್ನು ಸರ್ವರೂ ಭಕ್ತಿಭಾವದಿಂದ ಆಚರಿಸುತ್ತಿದ್ದು ಆತನ ಹಲಕೆಲವು ತತ್ವಗಳನ್ನು ಅನುಸರಿಸಿದ್ದಾರೆಂಬ ವಿಷಯವನ್ನು ಪ್ರಕಟಪಡಿಸಲು ನನಗೆ ಆನಂದವೆನಿಸುತ್ತದೆ.

ಓರ್ವ ಪುರಾಣ ಶ್ರವಣ ಭಾಗಿ ಶಿರೋಳ.

ಲಿಂಗಧಾರಣೆ.

ಶ್ರೀ. ಸ್ವಾಮಿ ವಿರೂಪಾಕ್ಷ ಒಡೆಯರು ಮಹಾರಾಷ್ಟ್ರದಲ್ಲಿರುವ ಧುಳೆ ಪಟ್ಟಣದಲ್ಲಿ ಲಿಂಗಧಾರಣವನ್ನು ಮಾಡುವ ಕಾರ್ಯವನ್ನು ಬಲವಾಗಿ ನಡೆಸಿದ್ದಾರೆ. ಇವರು ಚೆನ್ನಪ್ಪ ತಿಗಾಳೆ ಎಂಬ ಬಿ. ಎ. ಪಾಸಾದ ಕ್ರಿಶ್ಚಿಯನ್ನನಾದ ರೇಲ್ವೆ ಇನ್‌ಸ್ಪೆಕ್ಟರನಿಗೆ ಲಿಂಗಧಾರಣೆಯನ್ನು ಮಾಡಿದರು. ಅವರು ತಮ್ಮ ಓಜಸ್ವಿಯಾದ ಭಾಷಣವನ್ನು ಕೇಳಿ ಸಂತುಷ್ಟರಾದ ಅಹಮ್ಮದ ನಗರ, ನಾಸಿಕ, ಅಕೋಲಾ ಪಟ್ಟಣಗಳ ವ್ಯಾದರ ಜಾತಿಯ ೨೫೦ ಜನರಿಗೆ ಲಿಂಗಧಾರಣೆಯನ್ನು ಮಾಡಿದರು. ಇದಕ್ಕಾಗಿ ಲಿಂಗಗಳನ್ನೂ ಭಸ್ಮಗಳನ್ನೂ ಹುಬ್ಬಳ್ಳಿ ರಾಣೆಬೆನ್ನೂರಗಳಿಂದ ಪಾರ್ಸಲ ಮೂಲಕವಾಗಿ ತರಿಸಿದ್ದರು. ಈ ಪ್ರಾಂತದಲ್ಲಿ ಎಲವಾರ ರಡ್ಡಿ, ಜಾತಿಯ ೪ ಸಾವಿರ ಜನಾಂಗವಿದ್ದು ಶ್ರೀ. ಸ್ವಾಮಿಗಳವರ ನಿತ್ಯ ಪ್ರವಚನಗಳನ್ನು ಕೇಳಿ ತಾವೂ ಲಿಂಗಧಾರಿಗಳಾಗುವ ಬಗ್ಗೆ ಶ್ರೀಗಳವರಿಗೆ ಅರಿಕೆಮಾಡಿಕೊಂಡಿದ್ದಾರೆ. ಧುಳೆಯಲ್ಲಿ ಶ್ರೀಗಳವರ ವ್ಯಾಖ್ಯಾನ ಕೇಳಲು ಎಲ್ಲ ಮತೀಯರೂ ಕಿಕ್ಕಿರಿದು ನೆರೆಯುತ್ತಿದ್ದು ಒಂದು ಸಭೆಗೆ ಅಲ್ಲಿಯ ಜಿಲ್ಲಾ ಜಡ್ಜರಾದ ಶ್ರೀಮಾನ್ ಗುಗ್ಗುಳೆ ಸಾಹೇ

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ **ಒಂದಕ್ಕೆ** ಊಟ **ಒಂದಕ್ಕೆ** ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ
ಕಷ್ಟಪಡುತ್ತಿರುವಿರೋ?
ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ. ಎಂ. ಸಿ. **ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ.
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು
ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಶ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಚೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ವಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕವನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ.

ಈ ವಸ್ತ್ರಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ವಸ್ತ್ರಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ

ಏಜಂಟ-
**ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟಿ.**

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆವು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇವಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
**ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.**

ಎಲ್ಲ ಸಮೂನೆಗಳು ಬರೇ ೧ ರೂಪಾಯಿ!

--೧೦೦೦--

ನೀಲೀ ಮಶಿಚೀಟು—	೪	ರೂಪಾಯಿ
ಭಾಸ್ಕರ ಪ್ರಕಾಶ—	೧೧	,,
ಗುಂಗಾಡ ನಾಶಕ—	೧೧	,,
ಚೇಳಿನ ನಾಶ—	೧೧	,,
೧೨ ತಗಣಿ ಪತ್ರ ಚಾಟ್ಲಿ—	೭	,,

೧೦೦ ಚೀಟುಗಳಾದರೂ ವ್ಹಿ. ಪಿ. ಯಿಂದ ಕಳಿಸುವೆವು

ಭಾಸ್ಕರ ಪ್ರಕಾಶ ವರ್ಕ್ಸ್.
ಪೋ. **ಹಂಚಲಿ.**
ಜಿ. ವಿಜಾಪೂರ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.